# ಭಾಗ 1

## ಕನಸು, ನನ್ನ ಕನಸು

**ಮರುಳ ಕಂಡ ಕನಸಿನಂತೆ, ಆಕಾಶದಲ್ಲಿ ತೋರುವ ಲಿಪಿಯಂತೆ, ಕಂಡುದಕ್ಕೆ ರೂಪಾಗಿ,**

**ಹಿಡಿವುದಕ್ಕೆ ಒಡಲಿಲ್ಲದೆ ನಿಂದ ಭಾವ ನಿರಂತರ ಸುಖಿಯೆಂದನಂಬಿಗ ಚೌಡಯ್ಯ.**/215

---ಅಂಬಿಗರ ಚೌಡಯ್ಯ.

(https://lingayatreligion.com/K/Vachanagalu/Ambigara-Chowadayya-Vachana.htm}

ಗಮನಿಸಿ: ಇಲ್ಲಿ ಉಪಯೋಗಿಸಿರುವ ವಚನಗಳನ್ನು ನಾನು lingayatreligion.com ದಿಂದ ತೆಗೆದುಕೊಂಡು ಅಲ್ಲಿ ಕೊಟ್ಟಿರುವ ವಚನ ಸಂಖ್ಯೆಯನ್ನು ಎಲ್ಲಕಡೆ ಉಪಯೋಗಿಸಿರುವೆ.

ಇದು ನಮ್ಮ ನಿಮ್ಮ ನಡುವಿನ ಸಂವಾದ. ಅಲ್ಲಲ್ಲಿ ಕೆಲವೊಮ್ಮೆ ನನ್ನ ಜೀವನದಲ್ಲಿ ನಡೆದ ಘಟನೆಗಳ ವಿವರಗಳು ಮತ್ತು ಮನದಲ್ಲಿ ನಡೆದ ವಿಚಾರಗಳ ತಾಕಲಾಟ ಅನಿವಾರ್ಯವಾಗಿ ಸನ್ನಿವೇಶಕ್ಕನುಗುಣವಾಗಿ ಬರುತ್ತವೆ. ಆ ಸಂದರ್ಭಕ್ಕೆ ಹೊಂದಿಕೆಯಾಗದಿದ್ದರೂ ಆ ಸಂದರ್ಭದಲ್ಲಿ ನನಗೆ ನೆನಪಾದ ವಚನಗಳನ್ನು ಅಲ್ಲಲ್ಲಿ ಉದಾಹರಿಸುತ್ತಿರುವೆ ಕ್ಷಮಿಸಿ. ಇಲ್ಲಿ ಉದಾಹರಿಸಿರುವ ವಚನಗಳು ನನ್ನ ವಿಚಾರಗಳಿಗೆ ದಾರಿದೀಪಗಳಾಗಿರುವದಂತೂ ನಿಜ, ಅವನ್ನು ಓದಿದಾಗ ನಿಮಗೂ ಕೆಲ ಹೊಸ ವಿಚಾರಗಳು ಅಥವಾ ವಿಚಾರಿಸಲು ಹೊಸ ದಾರಿ ಸಿಕ್ಕರೂ ಸಿಗಬಹುದೆನ್ನುವದು ನನ್ನ ಅನಿಸಿಕೆ

ವಚನ ಸಾಹಿತ್ಯ ಮತ್ತು ಶರಣರ ಜೀವನ ಚರಿತ್ರೆಗಳನ್ನು ಓದಿದ ಮೇಲೆ ಮನದಲ್ಲಿ ಮೂಡಿದ ಪ್ರಶ್ನೆ.

**ಕಲ್ಯಾಣಕ್ಕೆ ಬಂದ ಅಲ್ಪ ಸಮಯದಲ್ಲಿ ಒಬ್ಬ ಸಾಮಾನ್ಯ ಮಾನವ ಶರಣನಾಗಿ ಪರಿವರ್ತನೆಯಾಗುತ್ತಿದ್ದದ್ದು ಹೇಗೆ?**

ಉತ್ತರ ಹೊಳೆಯಲಿಲ್ಲ, ಹೊಳೆದ ಉತ್ತರಗಳಲ್ಲಿ ಅನೇಕ ನ್ಯೂನತೆಗಳು ಕಾಣಹತ್ತಿದವು.

ಇನ್ನು ಶರಣರೊಬ್ಬರನ್ನು ಆರಿಸಿಕೊಂಡು ಅವರ ಜೀವನ ಚರಿತ್ರೆ ಬರೆಯಬೇಕೆಂದರೆ ಅವರಾರು ತಮ್ಮ ಬಗ್ಗೆ ವಚನಗಳಲ್ಲಿ ಹೇಳಿಕೊಂಡಿಲ್ಲ ಮತ್ತು ಅವರ ಸಮಕಾಲೀನ ವಚನಕಾರರರು ಅವರ ಬಗ್ಗೆ ತಮ್ಮ ವಚನಗಳಲ್ಲಿ ಉಲ್ಲೇಖಿಸಿಲ್ಲ. ಐತಿಹಾಸಿಕ ವಿವರಗಳು ಅಲಭ್ಯ. ಅಪರೂಪವಾಗಿ ಅಲ್ಲಲ್ಲಿ ಸಿಗುವ ದಾಖಲೆಗಳು ಮತ್ತು ಶಿಲಾಶಾನಗಳನ್ನು ಅಧ್ಯಯನ ನಾನು ಮಾಡಿಲ್ಲ. ಏನೇ ಬರೆದರೂ ಅದು ಸಮಾಧಾನ ತರಲಿಲ್ಲ.

ಆಗ ನೆನಪಾದದ್ದು ಮುಪ್ಪಿನ ಷಡಕ್ಷರಿ ಅವರ "ತಿರುಕನ ಕನಸು" ಕವನ.

**ಮುಪ್ಪಿನ ಷಡಕ್ಷರಿ:** ಕ್ರಿ.ಶ. ೧೫೦೦ರ ಸುಮಾರಿಗೆ ಜೀವಿಸಿದ್ದರು. ಕಾವೇರಿ ತೀರದ ಶಂಭುಲಿಂಗ ಬೆಟ್ಟದಲ್ಲಿ ಇವರು ತಪಸ್ಸು ಮಾಡಿದ್ದಾಗಿ ಹೇಳಲಾಗುತ್ತದೆ. ಇವರು

ಅನೇಕ ತತ್ವಪದಗಳನ್ನು ರಚಿಸಿದ್ದು. "ಸುಬೋಧಸಾರ" ಕೃತಿಯಲ್ಲಿ ಅನೇಕ ಹಾಡುಗಳಿವೆ. ಕನ್ನಡ ಸಾಹಿತ್ಯಲೋಕದಲ್ಲಿ ಮುಪ್ಪಿನ ಷಡಕ್ಷರಿಯ ಹಾಸ್ಯಭರಿತ 'ತಿರುಕನ ಕನಸು" ಜನಪ್ರಿಯವಾಗಿದೆ

## ತಿರುಕನ ಕನಸು

**ತಿರುಕನೋರ್ವನೂರ ಮುಂದೆ ಮುರುಕು ಧರ್ಮಶಾಲೆಯಲ್ಲಿ ಒರಗಿರುತ್ತಲೊಂದು**

**ಕನಸ ಕಂಡನೆಂತೆನೆ |**

**ಪುರದ ರಾಜ ಸತ್ತರವಗೆ ವರಕುಮಾರರಿಲ್ಲದಿರಲು ಕರಿಯ ಕೈಗೆ**

**ಕುಸುಮ ಮಾಲೆಯಿತ್ತು ಪುರದೊಳು || 1 ||**

**ನಡೆದು ಯಾರ ಕೊರಳಿನಲ್ಲಿ ತೊಡರಿಸುವದೊ ಅವರ ಪಟ್ಟ ಕೊಡೆಯರನ್ನು**

**ಮಾಳ್ಪವೆಂದು ಬಿಟ್ಟರಲ್ಲಿಯೆ |**

**ಒಡನೆ ತನ್ನ ಕೊರಳಿನಲ್ಲಿ ತೊಡರಿಸಲ್ಕೆ ಕಂಡು ತಿರುಕ**

**ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು || 2 ||**

**ಪಟ್ಟವನ್ನು ಕಟ್ಟಿ ನೃಪರುಕೊಟ್ಟರವಗೆ ಕನ್ಯೆಯರನು ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೇ**

**ಭಟ್ಟನಿಗಳ ಕೂಡಿ ನಲ್ಲ ನಿಷ್ಟ ಸುಖದೊಳಿರಲವನ್ಗೆ ಹುಟ್ಟಿ**

**ಹೆಣ್ಣು ಗಂಡು ಮಕ್ಕಳಾದುವಾಗಲೇ || 3 ||**

**ಮೆರೆಯುತಿದ್ದ ರಾಜ್ಯವೆಲ್ಲ ಹರಿದು ಹೋಯಿತೆನುತ ತಿರುಕ ಮರಳಿ ನಾಚಿ ಬೇಡುತಿದ್ದ**

**ಹಿಂದಿನಂತೆಯೇ** || 4 || --- ಮುಪ್ಪಿನ ಷಡಕ್ಷರಿ

ನನಗನಿಸಿದ್ದು ನಾನೇ ಕಲ್ಯಾಣದ ಪರಿಸರದಲ್ಲಿದ್ದು ಆ ಘಟನೆಗಳನ್ನು ಕಣ್ಣಾರೆ ಕಂಡು ಅನುಭವವನ್ನು ಕಲ್ಪಿಸಿ ವಿವರಿಸಿದರೆ ಹೇಗೆ ಎನ್ನುವ ಭಾವನೆ ಮನದಲ್ಲಿ ಮೂಡಿತು.

ಇದು ನನ್ನ ಕಲ್ಪನೆ. ಇಲ್ಲಿರುವ ಪಾತ್ರಗಳು ಮತ್ತು ಘಟನೆಗಳೆಲ್ಲ ಕಾಲ್ಪನಿಕವಾಗಿವೆ. ಆದರೂ ಅವುಗಳಲ್ಲಿ ಶರಣರ ವಚನಗಳಲ್ಲಿರುವ ಭಾವ ಅಳವಟ್ಟಿವೆ. ಶರಣರ ಜೀವನ ಚರಿತ್ರೆಗಳಿಗಾಗಲೀ ಅಥವಾ ಅವರ ವಿಚಾರಗಳಿಗಾಗಲೀ ಚ್ಯುತಿ ತರುವ ಭಾವನೆ ಮನದಲ್ಲಿಲ್ಲ. ಯಾವುದು ನನ್ನ ಅಳವಿಗೆ ಮೀರಿದ್ದೋ ಅದನ್ನು ಕನಸಿನಲ್ಲಿ ಕಾಣುವದು ಸಹಜ. ಹಾಗೆ ಇದು ನನ್ನ ಕನಸು. ಹಾಗಾಗಿ ನನ್ನ ಕಲ್ಪನೆಗಳನ್ನೆಲ್ಲ ಕನಸಿನ ರೂಪದಲ್ಲಿ ಬರೆದು ನಿಮ್ಮ ಮುಂದೆ ಇಟ್ಟಿರುವೆ. ಕನಸುಗಳು ಮನದ ಭಾವನೆಗಳ ಮತ್ತು ಅನುಭವಗಳ ಕಲಸುಮೇಲೋಗರ ಎನ್ನುವದು ಪರಿಣಿತರ ಅಭಿಪ್ರಾಯ.

ಹನ್ನೆರಡನೆಯ ಶತಮಾನದ ಪರಿಸರವನ್ನು ಕಲ್ಪಿಸಿಕೊಂಡು ಮೂಡಿದ ಕನಸಿನ ವಿವರಣೆಯಲ್ಲಿ ಅನೇಕ ನ್ಯೂನತೆಗಳು ನುಸಳಿರಬಹುದು ಆದರೆ ಇಲ್ಲಿ ಯಾವುದೇ

ವ್ಯಕ್ತಿಗಳಿಗಳನ್ನಾಗಲೀ ಅಥವಾ ತತ್ವಗಳನ್ನು ಸಮರ್ಥಿಸುವ ಅಥವಾ ವಿಮರ್ಶಿಸುವ ಪ್ರಯತ್ನ ಇಲ್ಲಿಲ್ಲ.
ಒಂದು ದಿನ ನಿದ್ರೆಯಲ್ಲಿ ಕನಸೊಂದ ಕಂಡೆ.
ಕನಸಿನಲ್ಲೇನು ಕಂಡೆ? ಎಂದು ವಿಚಾರಿಸುತ್ತ ಕುಳಿತೆ ಆಗ ನೆನಪಾದ ಕೆಲವು ಅರ್ಥಂಬರ್ಥ ವಿವರಗಳನ್ನು ಜೋಡಿಸಿ ನಿಮ್ಮ ಮುಂದೆ ಪ್ರಸ್ತುತ ಪಡಿಸುತ್ತಿರುವೆ. ಇದು ನನ್ನ ಕನಸು, ಸತ್ಯಾಸತ್ಯೆಗಿಂತ ಮುಖ್ಯವಾಗಿ ನನ್ನ ಸುಪ್ತಮನದಲ್ಲಿ ಮೂಡಿದ ಭಾವನೆಗಳು ಇಲ್ಲಿವೆ. ಅವು ನಿಮ್ಮ ಮನಕ್ಕೆ ತಲುಪಿದರೆ ಸಾಕು. ನನ್ನ ಅಂತರಂಗದಲ್ಲಿ ನಡೆದ ತೊಳಲಾಟ ಕನಸಿನಲ್ಲಿ ಮೂಡಿದೆ ಅಷ್ಟೆ.
ಧಾರ್ಮಿಕ, ತಾತ್ವಿಕ ಅಥವಾ ಆಧ್ಯಾತ್ಮಿಕ ವಿಚಾರಗಳನ್ನು ಸಮರ್ಥಿಸುವ ಅಥವಾ ವಿಮರ್ಶಿಸುವ ಪ್ರಯತ್ನ ಇಲ್ಲಿಲ್ಲ.

**ನನಗೀ ತರಹದ ಕನಸು ಅದು ಯಾಕೆ ಬಿತ್ತು?**

ಎನ್ನುವ ಪ್ರಶ್ನೆಗೆ ನೀವು ಕೇಳುವ ಮೊದಲೇ ಉತ್ತರ ಕೊಡುತ್ತಿರುವೆ.
ನಾನು ಗಣಿತ ಅಧ್ಯಾಪಕನಾಗಿ ಕಲಬುರ್ಗಿಯ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕೆಲಸ ಪ್ರಾರಂಭಿಸಿದ್ದು 1970 ರಲ್ಲಿ. ಮುಂಜಾನೆ ಅಡ್ಡಾಡುತ್ತ ಕೆರೆಯ ದಂಡೆಯ ಮೇಲಿನ ಶರಣಬಸವೇಶ್ವರ ಮಂದಿರಕ್ಕೆ ಹೋಗಿ ಕುಳಿತಾಗ ಸಿಗುತ್ತಿದ್ದ ಮಾನಸಿಕ ನೆಮ್ಮದಿ ಮತ್ತು ಆನಂದ ಅಪಾರ.
ಆ ಕೊರೆಯುವ ಚಳಿಯಲ್ಲಿ ಬರುವ ಭಕ್ತರು ತಾವು ಬೆಳೆದ ಬೆಳೆಯ ಮೊದಲ ಭಾಗ ಶರಣಬಸವೇಶ್ವರರಿಗೆ ಅರ್ಪಿಸುವದು ವಾಡಿಕೆ ಅದು ಈಗಲೂ ಮುಂದುವರೆದಿದೆ. ಅದರಲ್ಲೂ ಜೋಳದ ಮದನ (ಜೋಳ ತೂರುವದಕ್ಕಿಂತಲೂ ಮೊದಲ ರಾಶಿಯ ಭಾಗ) ಪುಟ್ಟಿಯ ತುಂಬ, ಬಂಡಿಯ ಅಥವಾ ಟ್ರ್ಯಾಕ್ಟರ ತುಂಬ ತಂದು ಸಮರ್ಪಿಸುವಾಗ ಆ ಭಕ್ತರ ಮುಖದಲ್ಲಿನ ಸಂತೃಪ್ತ ಭಾವ ನೋಡುವದೇ ಆನಂದ.
1971 – 1973 ರಲ್ಲಿನ ಕಲಬುರ್ಗಿ ವಿಭಾಗದಲ್ಲಿ ಬಿದ್ದ ಬರಗಾಲದ ಭೀಕರ ಚಿತ್ರಣ ಇನ್ನೂ ನನ್ನ ಮನದಲ್ಲಿ ಹಸಿರಾಗಿದೆ. ನೀರಿನ ಅಭಾವ ಕಾಲೇಜಿಗೆ ರಜೆ ಕೊಡುವ ಪರಿಸ್ಥಿತಿ ನಿರ್ಮಾಣ ಮಾಡಿತ್ತು. ಆ ರಜೆಯ ದಿನಗಳಲ್ಲಿ ಕಂಡ ಜನರ, ದನಕರುಗಳ ಮನಮಿಡಿಯುವ ಕಷ್ಟದ ದೃಶ್ಯಗಳು ಮನದಲ್ಲಿನ್ನೂ ಹಸಿರಾಗಿವೆ. ಹಾಗಾಗಿಯೇ ನನ್ನ ಕನಸಿನಲ್ಲಿ ಬರಗಾಲದ ಚಿತ್ರ ಬಿಂಬಿತವಾಗಿದೆ.
ಬರಗಾಲ ಮುಗಿಯುತ್ತ ಬಂದ ಹಾಗೆ ಬಿತ್ತನೆ ಬೀಜದ ಅಭಾವ ಆದಾಗ ಶರಣಬಸವೇಶ್ವರ ದಾಸೋಹಕ್ಕೆ ಬಂದ ಮದನ (ಉತ್ತಮ ಬೀಜ) ವನ್ನೆಲ್ಲ ರೈತರಿಗೆ ಹಂಚಲು ಮಂದಿರದ ಪರಿಸರದಲ್ಲೆಲ್ಲಾ ಒಣಗಲು ಹಾಕಿಸುತ್ತಿದ್ದ ಪೂಜ್ಯಶ್ರೀ ದೊಡ್ಡಪ್ಪ ಅಪ್ಪಾ ಅವರ ಭವ್ಯ ಚಿತ್ರ ಮನದಲ್ಲಿನ್ನೂ ಅಚ್ಚಳಿಯದೇ ಇದೆ. ಬಡವರು ಮತ್ತು ವಿದ್ಯಾರ್ಥಿಗಳಿಗಾಗಿ ನಡೆದ ದಾಸೊಹದ ಚಿತ್ರಣ ಮರೆಯಲು ಸಾಧ್ಯವೇ? ಇವೆಲ್ಲ ಘಟನೆಗಳ ಪ್ರಭಾವ ನನ್ನ ಕನಸಿನಲ್ಲಿದೆ. ಆ ಕಷ್ಟದ ಪರಸ್ಥಿತಿಯಲ್ಲಿಯೂ ಶ್ರೀ ಶರಣಬಸವೇಶವರ ದಾಸೋಹದಲ್ಲಿ ವಿದ್ಯಾರ್ಥಿಗಳು ಪ್ರಸಾದ ಮಾಡಿ ತಮ್ಮ ಭವಿಷ್ಯ ರೂಪಿಸಿಕೊಂಡರು.




ನನ್ನ ಭವಿಷ್ಯ ರೂಪಿತವಾದದ್ದೇ ಹುನಗುಂದದ ಶ್ರೀ ವಿಜಯಮಹಾಂತೇಶ ದಾಸೋಹ ಮತ್ತು ಧಾರವಾಡದ ಮುರುಘಾಮಠ ದಾಸೋಹದಲ್ಲಿ. ಈ ಪರಂಪರೆ ಎಂದಿನಿಂದ ಮತ್ತು ಹೇಗೆ ಪ್ರಾರಂಭವಾಯಿತು ಎಂದು ಮನದಲ್ಲಿ ಮೂಡಿದ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವೂ ಇಲ್ಲಿದೆ.

**ಕಲ್ಯಾಣ ಪ್ರವೇಶ**:

"ನಾಳೆ ನೀವು ಜೋಳ ತರದಿದ್ರೆ ಉಪವಾಸವೇ ಗತಿ"
(ಆಕೆ ದುಃಖದಿಂದ ಬಿಕ್ಕುತ್ತ ಹೇಳಿದ ಮಾತು)
"ಏನ ಮಾಡಲಿ ಬರಗಾಲ, ರೊಟ್ಟಿಗೇ ಗತಿ ಇಲ್ಲದ ಮೇಲೆ ನನ್ನ ಹತ್ತಿರ ಕುಸುಬಿ ಎಣ್ಣಿ ಯಾರ ತೊಗೋತಾರ?" ನಾನು ಸಮರ್ಥನೆ ಕೊಟ್ಟೆ.
"ಹೌದು ಹೌದು ಹುಡುಗರ ಒಣರೊಟ್ಟಿಮ್ಯಾಗ ಮನ್ಯಾಗಿನ ಹುಂಚಿಟಕ್ಕು ಸವರಿ ಕುಸಬಿ ಎಣ್ಣಿ ಹಾಕಿ ಬಂದದ್ದು ನನಗೂ ಗೊತ್ತೈತಿ ಬಿಡ್ರಿ, ನಮ್ಮನ್ನು ಈಗ ಸಂಗನಬಸವಣ್ಣನೇ ಕಾಯಬೇಕು"
ಎಂದು ಹೇಳಿ ಸೆರೆಗಿನಿಂದ ಮುಖ ಮುಚ್ಚಿಕೊಂಡಳು. ಬಹಳಮಾಡಿ ಸೆರಗ ತುದಿಯಿಂದ ಕಣ್ಣೀರು ಒರೆಸಿಕೊಂಡಿರಬೇಕು.
ನನಗೇನೋ ಮನದಲ್ಲಿ ಮಿಂಚು ಹೊಡೆದಂತಾಯಿತು ಉತ್ಸಾಹದಿಂದ ಹೇಳಿದೆ "ಕಲ್ಯಾಣಕ್ಕೆ ಹೋಗಿಬಿಡೋಣ ಅಲ್ಲಿ ಏನಾದರೂ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಂಡರಾಯಿತು".
ಆಕೆ ಮರುಮಾತನಾಡದೇ ಎದ್ದು ಅಡಿಗೆ ಮನೆಗೆ ಹೋದಳು. ಯಾಕೆ "ಏನಾಯಿತು" ಎಂದೆ ಆತಂಕದಿಂದ.
ಆಕೆ ಅಲ್ಲಿಂದಲೇ ಹೇಳಿದಳು "ಹುಳಿ ಹಾಕಾಕಹತ್ತೀನಿ ಕಲ್ಯಾಣಕ್ಕೆ ಹೋಗಲಾಕ ಬಾನ ಮತ್ತ ಹುಳ್ಳಾನುಚ್ಚು ಮಾಡಬೇಕಲ್ಲಾ ಹೇಗೂ ಮನೆಯಲ್ಲಿ ಮಜ್ಜಿಗೆ ಮತ್ತ ಸ್ವಲ್ಪ ನುಚ್ಚು ಐತಿ"
ಆವಾಕ್ಕಾಗುವ ಸರದಿ ನನ್ನದು.

ಮರುದಿನ ಎಣ್ಣೆಮಾರಿ ಸ್ವಲ್ಪಜೋಳ ಬಂತು ಅದರಿಂದ ನುಚ್ಚು ಬೀಸಿ ಬುತ್ತಿ ತಯಾರಿಸಲು ಆಕೆ ತೊಡಗಿದಳು. ಬಂಡಿಯಲ್ಲಿ ಉಳಿದ ಎಣ್ಣೆ, ಡಬ್ಬಿ, ಅಳತೆ ಡಬ್ಬಗಳು, ಎಣ್ಣೆಪುಟ್ಟಿ ಮತ್ತು ಮೇವು ಹೇರಿದೆ. ಪೆಟ್ಟಿಗೆಯಲ್ಲಿ ಬಟ್ಟೆ, ಅಡಗಿಮಾಡಲು ಪಾತ್ರೆ ಪಗಡ ಹಾಕಿ ತಯಾರುಮಾಡಿದೆ.



ಸಾಯಂಕಾಲ ನಾವಿಬ್ಬರೂ ಜೊತೆಯಾಗಿ ಬಂಧುಗಳು ಮತ್ತು ಗೆಳೆಯರಿಗೆ ಊರು ಬಿಟ್ಟು ಹೋಗುವ ವಿಚಾರ ತಿಳಿಸಿ ಬಂದೆವು. ಅವರಾರಿಗೂ ಆಶ್ಚರ್ಯವಾಗಲಿಲ್ಲ. ಈ ಭೀಕರ ಬರಗಾಲದಲ್ಲಿ ಊರು ತೊರೆಯುವದು ಸಹಜ ಅವರೂ ಅದೇ ವಿಚಾರದಲ್ಲಿದ್ದರು.
ನಮ್ಮ ಕಾಕಾ ಇಂತಹ ಬರಗಾಲ ನಾನು ಜೀವಮಾನದಲ್ಲೇ ನೋಡಿಲ್ಲ ಮತ್ತು ಕೇಳಿಲ್ಲ ಎಲ್ಲಿಯಾದರೂ ಆರಾಮವಾಗಿ ಬದಕು ಕಟ್ಟಿಕೊಳ್ಳಿ, “ಅಣ್ಣಾ ಬಸವಣ್ಣಾ ಕಾಯತಾನ ಅವರನ್ನ ನಂಬಿ ಜೀವನ ಮಾಡ್ರಿ ” ಎಂದು ಹರಸಿದ.
ಸೂರ್ಯ ಹುಟ್ಟುವಷ್ಟರಲ್ಲಿ ಕೂಡಲಸಂಗಮದಲ್ಲಿದ್ದೆವು. ಕೃಷ್ಣಾ ನದಿಯಲ್ಲಿ ಸ್ನಾನಮಾಡಿ ಸಂಗಮನಾಥನ ದರ್ಶನ ಪಡೆದೆವು.
ಅಲ್ಲಿದ್ದವರೊಬ್ಬರನ್ನು ಕಲ್ಯಾಣದ ದಾರಿ ಕೇಳಿದೆ.
ಅವರು, ತಾಳಿಕೋಟಿ, ಗಾಣಗಾಪೂರ, ನಿಂಬರ್ಗಾ ಮತ್ತು ಗುಂಡೂರ ಮಾರ್ಗವಾಗಿ ಹೋಗಿ ದಾರಿಯಲ್ಲಿ ಬರುವ ದೊಡ್ಡ ಊರುಗಳಲ್ಲಿ ನಿಮ್ಮ ವ್ಯಾಪಾರವೂ ಆಗುತ್ತದೆ ಮತ್ತು ನಿಮಗೆ ತಂಗಲೂ ಅವಕಾಶ ಸಿಗುತ್ತದೆ. ಹೋಗಿ ಬನ್ನಿ “ಅಣ್ಣಾ ಬಸವಣ್ಣಾ ನಿಮ್ಮನ್ನು ಕಾಯತಾನ” ಅಂದರು.
ಎಲ್ಲರಿಗೂ ಅಣ್ಣಾ ಬಸವಣ್ಣಾನ ಮೇಲಿರುವ ಭರವಸೆ ನನ್ನ ನಂಬಿಕೆಯನ್ನು ಇಮ್ಮಡಿಸಿತು ನನ್ನ ನಿರ್ಧಾರ ಸರಿ ಎನಿಸಿತು.
ಗಮನಿಸಿ:

ಕೂಡಲಸಂಗಮ ಕೆಲವು ವರ್ಷಗಳಲ್ಲಿ ಬದಲಾವಣೆ ಕಂಡುಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿ ಅದು ಹೇಗಿರಬಹುದು ಎನ್ನುವದು ಊಹಿಸಲು ಅಸಾಧ್ಯ. ಸಂಗಮ ಊರು ಸ್ಥಳಾಂತರಗೊಂಡಿದೆ ಹಾಗಾಗಿ ಅದು ಅಂದು ಹೇಗಿರಬಹುದು ಗೊತ್ತಾಗುವದಿಲ್ಲ. ಆದರೆ ಆ ಊರಲ್ಲಿ ವಿಶಾಲವಾದ ಮನೆಗಳಿರುವದನ್ನು ನಾನು ನೋಡಿದ್ದೇನೆ.



ಅವರ ಮಾರ್ಗದರ್ಶನದಂತೆ ವ್ಯಾಪಾರ ಮಾಡುತ್ತ ಸಾಗಿ ಒಂದು ದಿನ ಸಾಯಂಕಾಲದ ಹೊತ್ತಿಗೆ ಭವ್ಯವಾದ ಅಗಸಿ ಬಾಗಿಲ ಮುಂದೆ ಸಾಲಾಗಿ ನಿಂತ ಬಂಡಿ ಸಾಲು ಸೇರಿಕೊಂಡೆ.
ಎಲ್ಲರಂತೆ ನಾನು ಅಲ್ಲಿದ್ದ ಡಬ್ಬಿಗೆ ಉಳಿದಿದ್ದ ಜೊಳ ಹಾಕಿ (ಯಾಕಂತ ಗೊತ್ತಿರಲಿಲ್ಲ) ಆ ಭವ್ಯವಾದ ಬಾಗಿಲು ದಾಟಿ ಒಳಗೆ ಬಂದೆ.
ಮುಂದಿನ ಬಂಡಿಯಲ್ಲಿ ಕುಳಿತಿದ್ದ ಮುದುಕಪ್ಪ ಬಹಳ ಚಂದಾಗಿ ಜೋರಾಗಿ ಹಾಡುತ್ತಿದ್ದ ಕೇಳುತ್ತ ಕೇಳುತ್ತ ಮುಂದೆ ಸಾಗಿದೆ.

**ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು ? ಹೊಗಬಾರದು ಅಸಾಧ್ಯವಯ್ಯಾ.**

**ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು.**

**ಒಳಹೊರಗು ಶುದ್ಧನಾದಂಗಲ್ಲದೆ ಕಲ್ಯಾಣವ ಹೊಗಬಾರದು.**

**ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು.**

**ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ**

**ಕಲ್ಯಾಣವಂ ಕಂಡು ನಮೋ ನಮೋ ಎನುತಿದ್ದೆನು**/150 ---- ಅಕ್ಕ ಮಹಾದೇವಿ

ಎಲ್ಲಿಗೆ ಹೋಗಬೇಕು ಗೊತ್ತಿಲ್ಲ, ಆ ದೊಡ್ಡ ರಸ್ತೆಯಲ್ಲಿ ಸಾಗಿದೆ ಮಂದ ಬೆಳಕಿನಲ್ಲಿ. ಅಲ್ಲಿದ್ದ ಸುಂದರವಾದ ಮನೆಗಳು, ಅಗಲವಾದ ರಸ್ತೆ ನೋಡಿ ನಾನು ಕಥೆಯಲ್ಲಿ ಕೇಳಿದ ಸ್ವರ್ಗದಲ್ಲಿ ಇದ್ದೇನೆ ಎನಿಸಿತು.
ಮಗ್ಗಲು ಕುಳಿತಿದ್ದ ನನ್ನವಳು ಕಣ್ಣರಳಿಸಿ ಆ ನಗರವನ್ನು ನೋಡುತ್ತಿದ್ದವಳು

"ಇಂತಹ ದೊಡ್ಡ ಊರಾಗ ಬದುಕು ಕಟ್ಟಿಕೊಳ್ಳೂದು ಹ್ಯಾಂಗ?" ಎಂದಳು ಗಾಬರಿಯಿಂದ.
ನನ್ನ ಗಾಬರಿ ತೋರಿಸಿಕೊಳ್ಳದೇ ಹೇಳಿದೆ, "ಅಣ್ಣ ದಾರಿತೋರಿಸತಾನ ಚಿಂತಿ ಮಾಡಬ್ಯಾಡ" ಎಂದೆ.
ಮಂತ್ರಮುಗ್ಧನಾಗಿ ಸುತ್ತಮುತ್ತ ನೋಡುತ್ತಾ ಸಾಗಿದೆ ಎಷ್ಟುಹೊತ್ತು ಪ್ರಯಾಣ ಮಾಡಿದೆ ಗೊತ್ತಿಲ್ಲ.
ಆಗ ಕೆರೆಯ ದಂಡೆಗುಂಟ ಸಾಲಾಗಿ ನಿಲ್ಲಿಸಿದ ಬಂಡಿಗಳು ಕಂಡವು ಅದರಲ್ಲಾಗಲೇ ಜನ ನಿದ್ರಾವಶರಾಗಿದ್ದರು. ನನಗೂ ಅಲ್ಲಿಯೇ ಇದ್ದರಾಯಿತು ಎನಿಸಿತು. ಅಂತೂ ಇಂತೂ ಗಾಡಿಬಿಡಲು ಜಾಗ ಸಿಕ್ಕಿತು. ಅಲ್ಲಿ ಬಂಡಿ ನಿಲ್ಲಿಸಿ, ಎತ್ತುಗಳಿಗೆ ಉಳಿದಿದ್ದ ನೀರು ಕುಡಿಸಿ ಉಳಿದಿದ್ದ ಅಲ್ಪಸ್ವಲ್ಪ ಒಣದಂಟು ಹಾಕಿದೆ. ಉಳಿದ ಬಾನ ಹಂಚಿಕೊಂಡು ತಿಂದು ನೀರು ಕುಡಿದು ಗಾಡಿಯಲ್ಲಿ ಇದ್ದ ಜಾಗದಲ್ಲೇ ಕುಳಿತುಕೊಂಡೆವು. ಎಲ್ಲ ಖಾಲಿ ನಾಳೆಗೇನು?

ಎನ್ನುವ ಭಾವ ಮನದಲ್ಲಿ ಮೂಡಿದರೂ, ಬಸವಣ್ಣ ಕಾಯುತ್ತಾನೆ ಎನ್ನುವ ಭರವಸೆ ಮೂಡಿ ಸುಂದರವಾದ ಪರಿಸರ, ಕೆರೆಯ ಮೇಲಿಂದ ಬೀಸುವ ತಂಗಾಳಿಯಲ್ಲಿ ಯಾವಾಗ ನಿದ್ದೆಗೆ ಜಾರಿದೆವು ಗೊತ್ತಾಗಲಿಲ್ಲ




ಗಮನಿಸಿ:

ಸುಮಾರು 24 ಶರಣರು ತಮ್ಮ 76 ವಚನಗಳಲ್ಲಿ "ಕಲ್ಯಾಣ" ಶಬ್ದ ಪ್ರಯೋಗವನ್ನು 120 ಕಡೆಗಳಲ್ಲಿ ಮಾಡಿದ್ದಾರೆ. ಚನ್ನಬಸವಣ್ಣನವರು ಕಲ್ಯಾಣವನ್ನು ವರ್ಣಿಸಿದ ಪರಿಯೇ ಅಪೂರ್ವ. ಆದರೆ ಈಗ ಅಲ್ಲಿ ಯಾವ ಕುರುಹುಗಳೂ ಸಿಕ್ಕುವದಿಲ್ಲ. ಇಲ್ಲೊಂದು ಪಟ್ಟಣವಿತ್ತು ಎಂದು ಹೇಳಲು ಸಾಧ್ಯವಿಲ್ಲ. ಕೋಟೆ ಮತ್ತು ಕೆಲವು ಗವಿಗಳ ಆಧಾರದ ಮೇಲೆ ಇಲ್ಲಿ ಒಂದು ಪಟ್ಟಣವಿತ್ತು ಎಂದು ಊಹಿಸಬೇಕು ಅಷ್ಟೆ. ಅವುಗಳನ್ನಾದರೂ ಕಾಪಾಡಿಕೊಳ್ಳುವ ಪ್ರಯತ್ನ ಈಗ ನಡೆದಿದೆ ಎನ್ನುವದು ಸಮಾಧಾನದ ವಿಷಯ.

ಕಲ್ಯಾಣ ಪಟ್ಟಣವನ್ನು ವರ್ಣಿಸುವ ಕೆಲವು ವಚನಗಳು ಇಲ್ಲಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಶರಣರು ಕಲ್ಯಾಣ ಪಟ್ಟಣದ ವರ್ಣನೆಗಿಂತ ಅಲ್ಲಿ ನೆಲೆಸಿದ್ದ ಶರಣರ ವರ್ಣನೆ ಮಾಡಿರುವದು.

1. ಅಯ್ಯ, ವರಕುಮಾರದೇಶಿಕೇಂದ್ರನೆ ಕೇಳಾ,
   ಚಿದ್ಘನಶರಣ ಪ್ರಸಾದಲಿಂಗವಾಗಿ ನಿಂದ ನಿಜಾಚರಣೆಯ ನಿಲುಕಡೆಯ,
   ಕಲ್ಯಾಣಪಟ್ಟಣದ ಅನುಭಾವ ಮಂಟಪದ ಶೂನ್ಯಸಿಂಹಾಸನದಲ್ಲಿ,
   ಬಸವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ
   ಮೊದಲಾದ ಸಕಲ ಮಹಾಪ್ರಮಥಗಣಂಗಳೆಲ್ಲ/46 ----- ಗುರುಸಿದ್ದದೇವರು
2. ಕಲ್ಯಾಣವೆಂಬ ಪಟ್ಟಣದೊಳಗೆ ಛತ್ತೀಸಪುರದ ಮಹಾಗಣಂಗಳು.
   ಒಂದು ಪುರದವರು ಅಗ್ಘಣಿಯ ತಹರು.
   ಎರಡು ಪುರುದವರು ಸಮ್ಮಾರ್ಜನೆ ರಂಗವಾಲಿಯ ಮಾಡುವರು.
   ಮೂರು ಪುರದವರು ಲಿಂಗಾರ್ಚನೆಗೆ ನೀಡುವರು.
   ನಾಲ್ಕು ಪುರದವರು ಲಿಂಗಕ್ಕೆ ಬೋನವ ಮಾಡುವರು.
   ಐದು ಪುರದವರು ಅರ್ಪಿತಕ್ಕೆ ನೀಡುವರು.
   ಆರು ಪುರದವರು ಪ್ರಸಾದದಲ್ಲಿ ತದ್ಗತರಾಗಿಹರು.
   ಏಳು ಪುರದವರು ಧ್ಯಾನಾರೂಢರಾಗಿಹರು.
   ಮುಂದಣ ಪುರದವರು ನಿಶ್ಚಿಂತನಿವಾಸಿಗಳಾಗಿಹರು.
   ಈ ಪುರದ ಗಣಂಗಳು ಓಲೈಸುವ ಬಸವನ ಮಹಾಮನೆಯ
   ಮಡಿವಾಳ ನಾನು ಕಾಣಾ, ಕಲಿದೇವರದೇವಾ/118 --- ಮಡಿವಾಳ ಮಾಚಿದೇವರು
3. ಕಲ್ಯಾಣಪುರದೊಳಗೆ ಬಿಜ್ಜಳಾಂಕನೆಂಬ ರಾಜನು
   ಅಷ್ಟವಿಧಪ್ರಧಾನರ ಸಮೂಹದಲ್ಲಿಶಿವಭಕ್ತಿ ಇಲ್ಲದೆ ರಾಜ್ಯವನಾಳುತಿರ್ಪನು.
   ಇಂಗಳೇಶ್ವರನೆಂಬ ಪುರದ ವಿಪ್ರರ ಸಂದಣಿಯಲ್ಲಿ ಬಸವೇಶ್ವರನುದ್ಭವಿಸಿ ಕಲ್ಯಾಣಕ್ಕೆ ಬಂದು
   ಬಿಜ್ಜಳನ ಅಷ್ಟವಿಧಪ್ರಧಾನರ ನಷ್ಟವಮಾಡಿ, ನವಮಪ್ರಧಾನನಾಗಿ,
   ಬಿಜ್ಜಳನ ರಾಜ್ಯವನ್ನಾಳುತ್ತ ನಿತ್ಯದಲ್ಲಿ ಹಲವು ಜಂಗಮಕ್ಕೆ ಭೋಜನವ ಮಾಡುತ್ತ
   ಬಸವಣ್ಣ ಇರ್ಪನು ಕಲ್ಯಾಣಪುರದಲ್ಲಿ ನೋಡೆಂದ ಕಾಡನೊಳಗಾದ ಶಂಕರಪ್ರಿಯ
   ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. /167---- ಕಾಡಸಿದ್ದೇಶ್ವರ.

## ಅನುಭವ ಮಂಟಪ ದರ್ಶನ:

ಎಂದಿನಂತೆ ಬೆಳ್ಳಿಚಿಕ್ಕಿ ಮೂಡುವ ಹೊತ್ತಿಗೆ ರೂಢಿಯಂತೆ ಎಚ್ಚರವಾಯಿತು. ಬಹಳ ದಿನಗಳ ಮೇಲೆ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದ ನನ್ನಾಕೆಯನ್ನು ನೋಡಿ ಸಮಾಧಾನವಾಯಿತು.

ನಾನು ಕೆಳಗಿಳಿದು ತತ್ರಾಣಿಯಲ್ಲಿಯ ನೀರಿನಿಂದ ಮುಖ ತೊಳೆದು ಅಲ್ಲಿರುವ ದೃಶ್ಯ ನೋಡಿ ದಂಗಾದೆ.

ಅಲ್ಲಿ ಒಬ್ಬರು ನನ್ನ ಎತ್ತುಗಳಿಗೆ ಹಸಿರು ಮೇವು ಹಾಕುವದು ಕಾಣಿಸಿತು. (ಅವರು ತಪ್ಪಾಗಿ ನನ್ನ ಎತ್ತುಗಳನ್ನು ಕತ್ತಲೆಯಲ್ಲಿ ತಮ್ಮದೆಂದು ತಿಳಿದಿರಬೇಕೆನಿಸಿ)

ನಾನು "ನಮಸ್ಕಾರ ಅಣ್ಣಾ ನೀವು ತಪ್ಪಾಗಿ ನನ್ನ ಎತ್ತುಗಳಿಗೆ ಮೇವು ಹಾಕುತ್ತಿರುವಿರಿ" ಎಂದೆ.

ಅವರು "ಶರಣು ಅಣ್ಣಾ, ಗೊತ್ತಿದ್ದೇ ನಿಮ್ಮ ಎತ್ತಿಗೆ ನಿಮ್ಮನ್ನು ಕೇಳದೇ ಮೇವು ಹಾಕುತ್ತಿರುವೆ ಕ್ಷಮಿಸಿ. ಎದ್ದು ನನ್ನ ಎತ್ತುಗಳಿಗೆ ಮೇವು ಹಾಕಿದೆ, ನಿಮ್ಮ ಎತ್ತುಗಳು ಬಹಳ ಸುಸ್ತಾಗಿ ಹಸಿದಿರುವಂತೆ ಕಾಣಿಸಿದವು. ಅದಕ್ಕಾಗಿ ನನ್ನ ಹತ್ತಿರವಿದ್ದ ಹೆಚ್ಚಿನ ಹಸಿರು ಮೇವು ಹಾಕಿದೆ" ಎಂದರು.

ಅವರ ಮಾತು ಕೇಳಿ ಇಂತವರೂ ಜಗತ್ತಿನಲ್ಲಿ ಇರುತ್ತಾರಾ? ಎನಿಸಿ ಮೂಕನಾದೆ. ಆಗ ಅವರೇ ಹೇಳಿದರು

" ನನ್ನ ಹೆಸರು ಮೋನಪ್ಪ ಅಂತ, ನೀವು ಕಲ್ಯಾಣಕ್ಕೆ ಹೊಸಬರು ಅಂತ ಕಾಣುತ್ತದೆ. ಬನ್ನಿ ಎತ್ತಿಗೆ ಮೈತೊಳೆದು ನೀರು ಕುಡಿಸಿಕೊಂಡು ಸ್ನಾನ ಮಾಡಿ ಬರುವಾ" ಎಂದರು.

" ಅಣ್ಣಾ ನನ್ನ ಹೆಸರು ಗುರುವಾ, ಕೂಡಲಸಂಗಮದ ಸಮೀಪದ ಗಂಜೀಹಾಳದಿಂದ ಬದುಕು ಕಟ್ಟಿಕೊಳ್ಳಾಕ ಇಲ್ಲಿಗೆ ಬಂದೀವಿ. ಸರಿ ಹೊರಡೋಣ" ಎಂದು ನನ್ನ ಧೋತರ ಕೈಯಲ್ಲಿ ಹಿಡಿದು ಎತ್ತುಗಳೊಡನೆ ಅವರನ್ನು ಹಿಂಬಾಲಿಸಿದೆ.

"ಗುರಣ್ಣ ನಾವು ನಿನ್ನ ಹಾಗೆಯೇ ಇಲ್ಲಿಗೆ ಬಂದವರು" ಎಂದ ಆತ್ಮೀಯತೆಯಿಂದ. ಅಣ್ಣನೇ ನನ್ನ ಸಹಾಯಕ್ಕಾಗಿ ಒಬ್ಬರನ್ನು ಕಳಿಸಿದ್ದಾನೆ ಎಂದು ಮನದಲ್ಲೇ ಅಣ್ಣನಿಗೆ ವಂದಿಸಿದೆ.

ನಾನು ಮತ್ತು ಎತ್ತುಗಳು ಶುಭ್ರವಾಗಿ ಮರಳಿ ಬರುವಷ್ಟರಲ್ಲಿ ನನ್ನಾಕೆ “ಗಂಗಾ” ಅಲ್ಲಿದ್ದ ಆಕೆಯ ಸಮವಯಸ್ಕ ಯುವತಿಯೊಂದಿಗೆ ಹಲವು ವರ್ಷ ಪರಿಚಯವಿರುವ ಗೆಳತಿಯೇನೋ ಎಂಬಂತೆ ಹರಟುತ್ತಿದ್ದಳು.

ನಮ್ಮನ್ನು ಕಂಡೊಡನೆ ನನ್ನಾಕೆ "ಅಕ್ಕಾ ಇವರು ನಮ್ಮೆಜಮಾನರು" ಎಂದು ಪರಿಚಯಿಸಿದಳು.

ಆಗ ಮೋನಪ್ಪ "ಈಕೆ ನನ್ನಾಕೆ ಶಂಕರಿ. ಮಾತನಾಡುವವರು ಸಿಕ್ಕರೆ ಸಾಕು ಎಲ್ಲ ಮರೆತುಬಿಡುತ್ತಾಳೆ.”

"ಹಾಗೇನಿಲ್ಲ ನಾವಿಬ್ಬರು ಜಳಕ ಮಾಡಿ ತಯಾರಾಗಿದ್ದೇವೆ ನಡೀರಿ ಪೂಜೆಗೆ ಹೋಗೋಣ" ಎಂದಳು ಶಂಕರಮ್ಮ.
ನನಗೆ ಆಶ್ಚರ್ಯ ಅಲ್ಪಾವಧಿಯಲ್ಲಿಯೇ ನಾವೆಲ್ಲ ಹಲವು ಕಾಲ ಚಿರಪರಿಚಿತರಾದ ಗೆಳೆಯರಂತಾಗಿದ್ದೆವು.
ಅವರೊಡನೆ ನಡೆಯುತ್ತ ನಡೆದಾಗ ನಾನು "ಪೂಜೆಗೆ ಏನೂ ತಂದಿಲ್ಲ" ಎಂದೆ.
**ಮೋನಪ್ಪ** : ಇಲ್ಲಿ ಪೂಜೆಗೆ ಹೋಗಲು ಏನು ಬೇಕಾಗಿಲ್ಲ ಶುದ್ದವಾಗಿ ಹೋದರೆ ಸಾಕು
**ಗಂಗಾ** : ನಾನೀವಾಗಲೇ ಕೆರೆಯಲ್ಲಿ ಸ್ನಾನಮಾಡಿ ಶುದ್ದವಾಗಿ ಬಂದೀವಿ
**ಶಂಕರಮ್ಮ** : ಅದು ಬಹಿರಂಗ ಶುದ್ದಿ ಅದು ಬೇಕೇ ಬೇಕು, ಅಣ್ಣ ಬಸವಣ್ಣ ಹೇಳಿದ್ದು ಅಂತರಂಗ ಶುದ್ದಿಯ ಬಗ್ಗೆ

**ಕಳಬೇಡ**

**ಕೊಲಬೇಡ**

**ಹುಸಿಯ ನುಡಿಯಲು ಬೇಡ**

**ಮುನಿಯಬೇಡ**

**ಅನ್ಯರಿಗೆ ಅಸಹ್ಯಪಡಬೇಡ**

**ತನ್ನ ಬಣ್ಣಿಸಬೇಡ**

**ಇದಿರ ಹಳಿಯಲು ಬೇಡ.**

**ಇದೇ ಅಂತರಂಗಶುದ್ಧಿಇದೇ ಬಹಿರಂಗಶುದ್ಧಿ ಇದೇ ನಮ್ಮ**

**ಕೂಡಲಸಂಗಮದೇವರನೊಲಿಸುವ ಪರಿ**/493----- ಅಣ್ಣ ಬಸವಣ್ಣ

ಎಂದು ಹೇಳಿದರು. ನನ್ನವಳು ಆ ವಚನವನ್ನು ಗುಣಗುಣಿಸುತ್ತ ಸಾಗಿದಳು.
ಮುಂದೆ ಹೋದಾಗ ಬಯಲೋ ಬಯಲು, ಅಲ್ಲಿ ಸಾಲಾಗಿ ಕುಳಿತ ಜನವೋ ಜನ ನಾವು ಅಲ್ಲಿ ಹೋಗಿ ಎಲ್ಲರಂತೆ ಕಣ್ಣು ಮುಚ್ಚಿ ಕುಳಿತುಕೊಂಡೆವು.
ನನ್ನ ಮನವೆಲ್ಲ ಆಕ್ರಮಿಸಿತ್ತು ಶಂಕರಕ್ಕ ಹೇಳಿದ ಅಣ್ಣನ ವಚನ ನಾನೆಲ್ಲಿದ್ದೆ ಮರೆತಿದ್ದೆ. ಆಗಲೇ "ಶರಣು, ಶರಣಾರ್ಥಿ" ಎಂಬ ಎಲ್ಲರ ಉಧ್ಗಾರ ಕೇಳಿದಾಗಲೇ ಕಣ್ಣು ತೆರೆದದ್ದು. ಕಣ್ಣು ತೆರೆದಾಗ ಎದುರಿನ ಕಟ್ಟೆಯ ಮೇಲೆ ಕುಳಿತಿದ್ದ ಹಸನ್ಮುಖಿ ಸುಂದರ ವ್ಯಕ್ತಿ ಅವರನ್ನೇ ನೋಡುತ್ತ ಮೈಮರೆತೆ. ನನಗೆ ಗೊತ್ತಿಲ್ಲದಂತೆ ನನ್ನ ಮೈತುಂಬ ಯಾವುದೇ ಶಕ್ತಿ ಆವರಿಸಿದಂತಾಯ್ತು ನನಗರಿವಿಲ್ಲದಂತೆ ಬಂದ ಉಧ್ಗಾರ "ಅಣ್ಣ ಬಸವಣ್ಣ".
ಕಣ್ಣು ಪಿಳುಕಿಸದೆ ಬಾಯಿ ತೆರೆದು ನೋಡುತ್ತಿದ್ದುದಷ್ಟೇ ನೆನಪು. ನಾನು ಮೈಮರೆತು ಕುಳಿತುಬಿಟ್ಟೆ, ಮುಂದೇನಾಯಿತು ಗೊತ್ತಿಲ್ಲ

"ರೀ ಗುರಣ್ಣ ಇಷ್ಟಲಿಂಗಪೂಜೆ ಮುಗಿಯಿತು ಬನ್ನಿ ಹೋಗೋಣ" ಎಂದು ಮೋನಪ್ಪ ಕರೆದಾಗಲೇ ನನಗೆ ಎಚ್ಚರವಾದದ್ದು.
ಮಗ್ಗಲು ಕುಳಿತಿದ್ದ ನನ್ನಾಕೆಯನ್ನು ನೋಡಿದೆ ಆಕೆಯ ಮುಖದಲ್ಲಿ ಶಾಂತ ಭಾವ ತುಂಬಿತ್ತು,
ಆಕೆಯೂ ಎದ್ದು ನಮ್ಮೊಡನೆ ಹೆಜ್ಜೆ ಹಾಕತೊಡಗಿದಳು.
ಎಲ್ಲಿಗೆ ಎಂದು ನನಗೂ ಗೊತ್ತಿಲ್ಲ. ಮೋನಪ್ಪ ಮತ್ತು ಶಂಕರಮ್ಮರ ಹಿಂದೆ ಮಕ್ಕಳಂತೆ ಹಿಂಬಾಲಿಸಿದೆವು. ಮುಂದೆ ನಡೆದಾಗ ಅಲ್ಲಿ ಅನೇಕಾನೇಕ ಗಿಡಗಳು, ಗಿಡಗಳ ಕೆಳಗೆ ಅನೇಕ ಜನರ ಸರತಿ ಸಾಲುಗಳಿದ್ದವು. ನಾವೂ ಒಂದು ಸಾಲಿನಲ್ಲಿ ಸೇರಿಕೊಂಡೆವು. ನನ್ನ ಸರತಿ ಬಂದಾಗ ಒಬ್ಬ ನನ್ನ ಕೈಯಲ್ಲಿ ಎಲೆಯಿಂದ ಮಾಡಿದ ಡೊಣ್ಣಿ ಕೊಟ್ಟ ಇನ್ನೊಬ್ಬ ಒಂದು ಕುಡಕೆಯಿಂದ ಡೊಣ್ಣೆ ತುಂಬ ಹರವಿಲ್ಲಿದ್ದ ಅಂಬಲಿ ಹಾಕಿದ.
(ಹರವಿಯಲ್ಲಿರುವದು ಅಂಬಲಿ ಎನ್ನುವದು ಅದರ ಸುವಾಸನೆಯಿಂದ ಮೊದಲೇ ನನಗೆ ಗೊತ್ತಾಗಿತ್ತು. ಅದು ನಮ್ಮನ್ನೆಲ್ಲ ಬದುಕಿಸಿದ ಅಮೃತವಾಗಿತ್ತು).
ನಾನು ಮುಂದೆ ಬರುವಷ್ಟರಲ್ಲಿ "ಅಣ್ಣ ಬಸವಣ್ಣ ಈ ಸಾಲಿನಲ್ಲಿ ಬಂದು ನನ್ನ ಕೈಯಿಂದ ಪ್ರಸಾದ ತೆಗೆದುಕೊಂಡು ಅರಮನೆಗೆ ಹೋದರು" ಎಂದು ಅತೀ ಹೆಮ್ಮೆಯಿಂದ ಒಬ್ಬ ಹೇಳಿದ ಮಾತು ನನ್ನ ಕಿವಿಗೆ ಬಿತ್ತು.
ನಾವೆಲ್ಲ ಕೆರೆಯ ದಂಡೆಯ ಮೇಲೆ ಕುಳಿತು ಪ್ರಸಾದ ಸೇವಿಸಿ ಡೊಣ್ಣೆಯನ್ನು ಗೊಬ್ಬರ ಗುಂಡಿಗೆ ಹಾಕಿ ಕೆರೆಯಲ್ಲಿ ನೀರು ಕುಡಿದೆವು. ನಾನೆಲ್ಲಿದ್ದೆ ಏನಾಗುತ್ತಿದೆ ಎಂಬ ಅರಿವೇ ನನಗಿರಲಿಲ್ಲ.
ನನ್ನಾಕೆ ಮೈದೊಡವಿ ಮೋನಣ್ಣ ಏನೋ ಹೇಳುತ್ತಿದ್ದಾರೆ ನೋಡ್ರಿ ಎಂದಾಗಲೇ ಮತ್ತೆ ವಾಸ್ತವಕ್ಕೆ ಬಂದೆ.
ಗಮನಿಸಿ:

ಈಗ ನೀವು ಬಸವಕಲ್ಯಾಣಕ್ಕೆ ಹೋದರೆ ತ್ರಿಪುರಾಂತಕ ಕೆರೆ, ಅಕ್ಕನಾಗಮ್ಮ ಗವಿ ಹಾಗೂ ಬಸವೇಶ್ವರ ಅರಿವಿನ ಮನೆಯ ಅವಶೇಷಗಳು ಇದ್ದ ಸ್ಥಳ ನೋಡಲು ಸಿಕ್ಕುತ್ತವೆ. ಅರವಿನ ಮನೆಯ ಮುಂಭಾಗ ದೊಡ್ಡ ಬಯಲಿದ್ದು ಅಲ್ಲಿ ಅನೇಕ ಗಿಡಗಳಿದ್ದು ಅಲ್ಲಿಯೇ ದಾಸೋಹ ಹಾಗೂ ಅನುಭವ ಮಂಟಪದ ಕಾರ್ಯಕ್ರಮಗಳು ನಡೆಯುತ್ತಿರಬಹುದು ಎಂದು ನನ್ನ ಊಹೆ. ಈಗ ಅಲ್ಲಿ ಕುರುಹುಗಳಾವವು ಇಲ್ಲ. ಬಯಲಿದೆ ಮತ್ತು ಬದುವಿನಲ್ಲಿ ಸಾಲು ಮರಗಳಿವೆ ಮತ್ತು ಮಹಾಮನೆ ಎಂದು ಕರೆಯಲಾಗುವ ಒಂದು ಕಟ್ಟಡವಿದೆ ಅಷ್ಟೆ. ಪಾರಂಪರಿಕ ಸ್ಮಾರಕಗಳನ್ನು ರಕ್ಷಿಸುವದರಲ್ಲಿ ನಾವು ವಿಫಲರಾಗಿದ್ದೇವೆ.

ರಾಜನಿಗೆ ದೊಡ್ಡ ದೊಡ್ಡ ಸ್ಮಾರಕ ರಚಿಸಲು ಹಲವು ದಶಕಗಳು ಬೇಕಾಗಿತ್ತು. ಇನ್ನು ಮಹಾಮಂತ್ರಿಗಳಾದ ಬಸವಣ್ಣನವರು ಮತ್ತು ಶರಣರು ಲಕ್ಷಾಂತರ ಜನರು ಪ್ರಸಾದ ಸೇವಿಸುವ

ಮತ್ತು ಪ್ರವಚನ ಮಾಡಬಹುದಾದ ಭವ್ಯ ಕಟ್ಟಡ ನಿರ್ಮಾಣ ಮಾಡಿರುವ ಸಾಧ್ಯತೆ ಇಲ್ಲ. ಆದರೆ ಅಲ್ಲಿ ಲಭ್ಯವಿರುವ ಕಟ್ಟಿಗೆ ಮತ್ತು ಸೊಪ್ಪು ಸದೆ ಉಪಯೋಗಿಸಿ ನೆರಳಿಗಾಗಿ ಮಂಟಪ ನಿರ್ಮಿಸಿಕೊಂಡಿರುವ ಸಾಧ್ಯತೆ ಇದೆ. ಈಗಲೂ ಕೆಲವು ಭಾಗಗಳಲ್ಲಿ ಆ ರೀತಿಯ ಮಂಟಪ ನಿರ್ಮಾಣ ಮಾಡಿರುವದನ್ನು ಕಾಣಬಹುದು. ಕಾಡಿನ ಸಮೀಪದಲ್ಲಿರುವ ಪ್ರದೇಶಗಳಲ್ಲಿ ಈ ತರಹ ಮಂಟಪ ನಿರ್ಮಿಸುವದು ಸುಲಭ.

## ಕಲ್ಯಾಣ ಮಾರುಕಟ್ಟೆ ದರ್ಶನ:

"ಅವರಿಬ್ಬರು ಮಹಾಮನೆಗೆ ಹೋಗುತ್ತಾರೆ ನಾವಿಬ್ಬರೂ ಇಲ್ಲೇ ಸಮೀಪದಲ್ಲಿರುವ ಸಂತೆಗೆ ಹೋಗೋಣ ನೀವು ನಿಮ್ಮ ಎಣ್ಣಿ ಡಬ್ಬಿ ತಗೊಳ್ಳಿ ಮಾರಲಾಕ ಬರತೈತಿ" ಎಂದರು ಮೋನಣ್ಣ

ಎಂದೂ ದೊಡ್ಡ ಮಾರುಕಟ್ಟೆ ನೋಡದಿದ್ದ ನನಗೆ ಕಲ್ಯಾಣದ ಮಾರುಕಟ್ಟೆ ನೋಡುವ ಕುತೂಹಲ.

**ಗುರಣ್ಣ:** ಮೋನಣ್ಣ ಬಸವಕಲ್ಯಾಣದ ಮಾರುಕಟ್ಟೆ ಹೇಗಿರುತ್ತೆ?

**ಮೋನಣ್ಣ:** ಅದನ್ನ ಕಣ್ಣಾರೆ ನೋಡೋಣ ಬನ್ನಿ. ನೀವು ಎಣ್ಣಿ ತಗೊಳ್ಳಿ ಮಾರಲಾಕ ಬರತೈತಿ.

**ಗುರಣ್ಣ:** ಮೋನಣ್ಣ ಇವತ್ತು ನಾನು ನಿಮ್ಮ ಜೊತೆ ಸಂತಿ ನೋಡತೀನಿ ವ್ಯಾಪಾರ ಮಾಡಲ್ಲ, ನನಗೂ ನಿಮ್ಮ ಒಂದು ಪುಟ್ಟಿ ಕೊಡಿ ಎಂದು ಅವನ ತಲೆಯ ಮೇಲಿನ ಪುಟ್ಟಿ ತೆಗೆದುಕೊಂಡೆ. ಮೋನಪ್ಪ ಹೆಗಲ ಮೇಲೆ ಒಂದೆರಡು ಗೋಣಿಚೀಲ, ತಲೆಯಮೇಲೆ ಒಂದು ಪುಟ್ಟಿ ತೆಗೆದುಕೊಂಡು ಹೊರಟ.

ಮಾರುಕಟ್ಟೆ ನೋಡಲು ಹೇಗಿತ್ತು ಎನ್ನುವದಕ್ಕಿಂತ ವ್ಯವಹಾರ ನಡೆಯುವ ಪದ್ಧತಿಯ ವಿವರಣೆ ಇಲ್ಲಿದೆ.

ಗಮನಿಸಿ:

ನನಗೆ ನಮ್ಮೂರಲ್ಲಿ ಮತ್ತು ಸಮೀಪದ ಸಂಗಮ ಸಂತೆಯಲ್ಲಿ ವ್ಯಾಪಾರ ಮಾಡಿದ ಅನುಭವ. ಬಾಲ್ಯದಲ್ಲಿ ಹತ್ತಿ ಬಿಡಿಸುವ ವೇಳೆ ಬಂದರೆ ನಮಗೆಲ್ಲ ಹಬ್ಬ. ಹತ್ತಿ ಕೊಟ್ಟು ಕರ ದಂಟು, ಖರ್ಜೂರ, ಸೂಸಲ, ಭಜಿ ಇತ್ಯಾದಿ ತಿಂಡಿ ತಿನಿಸು ತಿನ್ನವ ಮಜಾ ನನ್ನಂತೆ ನೀವೂ ಅನುಭಸಿರಬಹುದು. ಅಲ್ಲಿ ಹಣ ಕೇಳಿ ಬೈಯಿಸಿಕೊಳ್ಳುವ ಪ್ರಮೇಯವೇ ಇಲ್ಲ. ಹತ್ತಿ ಒಯ್ಯುವದು ಬದಲಿಗೆ ತಿಂಡಿ ಪಡೆದು ತಿನ್ನುವದು. ಬಾರಿಹಣ್ಣು ಜೋಳಕೊಟ್ಟು ತೆಗೆದುಕೊಳ್ಳುವದನ್ನು ಈಗಲೂ ಕಾಣಬಹುದು. ಈಗಲೂ ಹಳ್ಳಿಯ ಅಂಗಡಿಗಳಲ್ಲಿ ಜೋಳ ಕೊಟ್ಟು ಸಾಮಾನು ಕೊಳ್ಳುವ ಪದ್ಧತಿ ಇದೆ.

ನಾನೂ ಸಹ ಹಲವು ಸಲ ನಮ್ಮೂರ ಮಲ್ಲಪ್ಪ ಶೆಟ್ಟರ ಅಂಗಡಿಗೆ ಹೋಗಿ ಜೋಳ ಕೊಟ್ಟು ಕಿರಾಣಿ ಸಾಮಾನು ತಂದ ನೆನಪು. ನಾನು ಮಲ್ಲಪ್ಪಶೆಟ್ಟರು ಇದ್ದಾಗಲೇ ಅಲ್ಲಿಗೆ ಹೋಗುತ್ತಿದ್ದೆ. ಅವರು

ಸಾಮಾನು ಸರಿಯಾಗಿ ಕೊಡುತ್ತಿದ್ದರಲ್ಲದೆ ನನಗೆ ಲಿಂಬು ಹುಳಿ ಪೇಪರಮಡ್ಡಿ ಕೊಡುತ್ತಿದ್ದರು. ಅವರು ತುಂಬಾ ಧಾರಾಳಿ. ಅದೇ ಅವರ ತಮ್ಮ ಸಿದ್ದಪ್ಪಶೆಟ್ಟರಿದ್ದಾಗ ಹೋದರೆ ಕಿರಾಣಿಯೂ ಕಡಿಮೆ ಜೊತೆಗೆ ಎಷ್ಟು ಕಾಯ್ದರೂ ಬೆಲ್ಲದ ಚೂರು ಸಿಗುತ್ತಿರಲಿಲ್ಲ. ಈ ರೀತಿಯ ವ್ಯವಹಾರ ಮಾಡುವಾಗ ಕೊಡುವವನ ಮತ್ತು ಕೊಳ್ಳುವವನ ಮನಸ್ಸಿನ ವಿಶಾಲತೆ ಅವಶ್ಯಕತೆ ಇರುತ್ತದೆ.

ಇನ್ನು ನಾನು ಎಣ್ಣೆ ವ್ಯಾಪಾರ ಸಹ ನಡೆಸುವದು ಹಾಗೇಯೇ. ಜೋಳ, ಗೋದಿ, ಸಕ್ಕರೆ ಇತರ ವಸ್ತುಗಳ ಬದಲಿಗೆ ಎಣ್ಣೆ ಕೊಡುವದು. ಕೆಲವರು ಕುಸುಬಿ, ಶೇಂಗಾ ಬದಲಿಗೆ ಎಣ್ಣೆ ಒಯ್ಯುತ್ತಿದ್ದರು. ಒಮ್ಮೊಮ್ಮೆ ಉದ್ದರಿ ಹೇಳುತ್ತಿದ್ದರು. ಒಮ್ಮೊಮ್ಮೆ ಮಗಳಿಗೆ ಕಳಸಾಕ ಕರಚಿಕಾಯಿ ಮಾಡೀನಿ ಒಯ್ದು ಗಂಗಕ್ಕಗ ಕೊಡು ಎಂದು ಕೊಡುತ್ತಿದ್ದರು.

ಅಚ್ಚುಕಟ್ಟಿನಿಂದ ಕೂಡಿದ ಅಂಗಡಿಗಳ ಸಾಲು ಇರುವ ದೊಡ್ಡ ಮೈದಾನಕ್ಕೆ ಬಂದೆವು. ಅಲ್ಲಿ ಜನವೋ ಜನ ಕುತೂಹಲದಿಂದ ಮುಂದೆ ನಡೆದೆ.

ಅಲ್ಲೊಂದು ದೊಡ್ಡ ಗೊಂಬೆಗಳ ಅಂಗಡಿಮುಂದೆ ಮೋನಪ್ಪ ಪುಟ್ಟಿ ಇಳಿಸಿದ ನಾನೂ ಹಾಗೆ ಮಾಡಿದೆ. ಮೋನಪ್ಪ ಪುಟ್ಟಿಗಳ ಮೇಲಿನ ಬಟ್ಟೆ ತೆಗೆದ, ಪುಟ್ಟಿಗಳ ತುಂಬ ಸುಂದರವಾದ ಮಕ್ಕಳಾಟಿಕೆ ಗೊಂಬೆಗಳು. ಅವುಗಳನ್ನು ನೋಡಿ ನಾನಷ್ಟೆ ಅಲ್ಲ ಅಂಗಡಿಯವನು ಮಾರುಹೋದ.ಅಂಗಡಿಯವ ಎಲ್ಲ ಗೊಂಬೆ ಕೊಟ್ಟುಬಿಡಿ ನಿಮಗೇನು ಬೇಕು ತೆಗೆದುಕೊಳ್ಳಿ ಎಂದ.ಒಳಗೆ ಹೋಗಿ ನಮ್ಮಿಬ್ಬರಿಗೂ ಮಜ್ಜಿಗೆ ತಂದುಕೊಟ್ಟ. ಮೋನಪ್ಪ ಚೀಲದಿಂದ ಎರಡು ಧೊತರ ಹೊರತೆಗೆದು ಅಲ್ಲಿದ್ದ ಕಾಳು ಕಡಿ ಸಾಮಾನುಗಳನ್ನು ಕೇಳಿ ಪಡೆದು ಧೋತರದಲ್ಲಿ ಕಟ್ಟಿಕೊಂಡು ಇಷ್ಟೇ ಸಾಕು ಎಂದ. ಅಂಗಡಿಯವ ನಿಮ್ಮ ಸಾಮಾನಿನ ಬೆಲೆ ನೀವು ತೆಗೆದುಕೊಂಡ ಸಾಮಾನಿಗಿಂತ ಹೆಚ್ಚಾಗಿದೆ ಇನ್ನೂ ಏನಾದರೂ ತೆಗೆದುಕೊಳ್ಳಿ ಎಂದ. ಮೋನಪ್ಪ ಇಷ್ಟೇ ಸಾಕಣ್ಣ ನನಗೆ ಬೇಕಾದದ್ದು ಇಷ್ಟೇನೆ ಮತ್ತೇನೂ ಬೇಡ ಎಂದ.

ಅಂಗಡಿಯವ ಒಳಗೆ ಹೋಗಿ ಒಂದು ಚೀಲ ತಂದ "ನನ್ನ ಮಾವ ಬರುವಾಗ ಕಾಶ್ಮೀರದಿಂದ ಕಟ್ಟಿಗೆ ತುಂಡುಗಳನ್ನು ತಂದಿದ್ದ ಇವು ನಿಮ್ಮ ಗೊಂಬೆ ತಯಾರಿಕೆಗೆ ಬೇಕಾಗಬಹುದು ತೆಗೆದುಕೊಳ್ಳಿ" ಎಂದು ಕೊಟ್ಟ. ಸಾಕು ಸಾಕು ಎನ್ನುವ ಮೋನಣ್ಣ ಇನ್ನಷ್ಟು ಸಾಮಾನು ತೆಗೆದುಕೊಳ್ಳಿ ಎನ್ನುವ ಶೆಟ್ಟಿ ನನಗೆ ನಂಬಲಾಗಲಿಲ್ಲ.

ಇದು ಕಲ್ಯಾಣ ಪಟ್ಟಣದಲ್ಲಿ ಮಾತ್ರ ಸಾಧ್ಯ ಎನ್ನುವ ಭಾವ ಮನದಲ್ಲಿ ಮೂಡಿತು. ಅಂಗಡಿಯವನಿಗೆ ಧನ್ಯವಾದ ಹೇಳಿ ಮುಂದೆ ನಡೆದೆವು. ಅಲ್ಲೊಂದು ಚೌಕಿ ಮುಂದೆ ಅನೇಕ ಡಬ್ಬಿಗಳಿದ್ದವು. ಮೋನಪ್ಪ ಪುಟ್ಟಿ ಇಳಿಸಿ ಅದರಲ್ಲಿ ತನ್ನ ಪುಟ್ಟಿಯಲ್ಲಿದ್ದ ಜೋಳ ಸುರಿದು ಮುಂದೆ ನಡೆದ. ನಾನು ಏನು ಎಂದು ಸನ್ನೆಯಿಂದ ಕೇಳಿದೆ.

"ಇಂದು ನಾನು ಮಾಡಿದ ವ್ಯಾಪಾರದಿಂದ ಬಂದ ಲಾಭಕ್ಕೆ ನಾನು ರಾಜನಿಗೆ ಕೊಟ್ಟ ತೆರಿಗೆ" ಎಂದ ಮೋನಪ್ಪ. ಸಂತೆಯಲ್ಲಿ ತೆರಿಗೆಯನ್ನು ಭಟರು ಬಂದು

ಬಲವಂತದಿಂದ ಕಸಿದುಕೊಳ್ಳುವದನ್ನು ಕಂಡಿದ್ದ ನನಗೆ ಇಲ್ಲಿ ಸ್ವ ಇಚ್ಛೆಯಿಂದ ಪ್ರಾಮಾಣಿಕವಾಗಿ ತೆರಿಗೆ ಕಟ್ಟುವ ಜನರ ಕಂಡು ಆಶ್ಚರ್ಯ ಆಯಿತು.
ಈ ರೀತಿಯ ಮಾನಸಿಕತೆ ಅದು ಹೇಗೆ ಬಂತು ಅರ್ಥವಾಗಲಿಲ್ಲ. ಮೌನವಾಗಿ ಮುನ್ನಡೆದೆ. ಮೋನಪ್ಪ ಒಂದು ಎಣ್ಣೆಯಂಗಡಿಗೆ ಕರೆದುಕೊಂಡು ಬಂದು ಅಲ್ಲಿಯ ಯಜಮಾನನಿಗೆ ನನ್ನನ್ನು ಪರಿಚಯಿಸಿದ.
ಅವನೊಂದು ಶೇಂಗಾಬೀಜ ತುಂಬಿದ ಚೀಲ ತೆಗೆದುಕೊಂಡು ಹೋಗಲು ಹೇಳಿದ. ನಾನು ಏನೋ ಮಾತನಾಡಬೇಕು ಎನ್ನುವಷ್ಟರಲ್ಲಿ ಮೋನಪ್ಪ ಚೀಲ ತೊಗೊಂಡು ಹೊರಟ ನಾನು ಅಂಗಡಿಯವನಿಗೆ ನಮಸ್ಕರಿಸಿ ಅವನ ಹಿಂದೆ ಉಳಿದ ಸಾಮಾನು ತೆಗೆದುಕೊಂಡು ಹೊರಟೆ. ಹಣಕೊಡದೆ ಪರಿಚಯವಿಲ್ಲದ ನನಗೆ ಶೆಂಗಾಚೀಲ ಕೊಟ್ಟ ಆ ವ್ಯಾಪಾರಿ.
ದಾರಿಯಲ್ಲಿ ನಾನು ಕೇಳಿದೆ "ಮೋನಣ್ಣಾ ಪಟ್ಟಣದ ವ್ಯಾಪಾರ ಅಲ್ಲಿ ನಡೆಯುವ ವ್ಯವಹಾರದ ಬಗ್ಗೆ ಕೇಳಿದ್ದೆ. ಆದರೆ ಕಲ್ಯಾಣಪಟ್ಟಣದಲ್ಲಿ ಇರುವ ಜನರೇ ವಿಚಿತ್ರ, ವ್ಯವಹಾರವೂ ವಿಚಿತ್ರ. ನನಗೆ ಆಶ್ಚರ್ಯ ಆಗಲಾಕ ಹತ್ತ್ಯೆತಿ. ನಾನು ಹಗಲ ಕನಸ ಕಾಣಲಾಕ ಹತ್ತೀನಿ ಅನಿಸಲಾಕ ಹತ್ತ್ಯೆತಿ" ಎಂದೆ.
ಮೋನಣ್ಣಾ. ಇಲ್ಲಿಯ ವ್ಯವಹಾರವೇ ಹೀಗೆ. ನಂಬಿಕೆ ಇಲ್ಲಿಯ ಬಂಡವಾಳ, ನಂಬಿಕೆಯೇ ವ್ಯವಹಾರದ ಆಧಾರ.

**ನಂಬರು ನಚ್ಚರು ಬರಿದೆ ಕರೆವರು**

**ನಂಬಲರಿಯರೀ ಲೋಕದ ಮನುಜರು**

**ನಂಬಿ ಕರೆದಡೋ ಎನ್ನನೆ ಶಿವನು ನಂಬದೆ ನಚ್ಚದೆ ಬರಿದೆ ಕರೆವರ**

**ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ**/771--- ಅಣ್ಣಾ ಬಸವಣ್ಣಾ.

ಎಂದು ಅಣ್ಣಾ ಹೇಳ್ಯಾರ.
ಅದನ ನಂಬಿ ನಾವು ಸುಖವಾಗಿ ಅದೀವಿ. ನಮಗೆಲ್ಲ ಆಯ್ದಕ್ಕಿ ಲಕ್ಕಮ್ಮ ತಮ್ಮ ವಚನದಾಗ ದಾರಿ ತೋರಿಶ್ಯಾಳ ಆ ವಚನ ಗಿಡದ ನೆರಳಲ್ಲಿ ಕುಂತು ಹೇಳತೇನಿ ಕೇಳು ಅಂದ.
ಬಂಡಿಗೆ ಶೇಂಗಾ ಚೀಲ ಹೇರಿದೆವು, ಎತ್ತುಗಳಿಗೆ ಮೇವು ಹಾಕಿ ನೀರು ಕುಡಿಸಿ ಗಿಡದ ನೆರಳಲ್ಲಿ ಕುಳಿತುಕೊಂಡೆವು. ಸ್ವಲ್ಪ ಸುಧಾರಿಸಿಕೊಂಡ ಮೇಲೆ
ಈಗ ಆಯ್ದಕ್ಕಿ ಲಕ್ಕಮ್ಮ ಅವರ ವಚನ ಹೇಳತೇನಿ ಕೇಳು ಅಂದ.

1. **ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೊ,**

   **ಬಸವಣ್ಣನ ಅನುಮಾನದ ಚಿತ್ತವೊ ?**

   **ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲದಬೋನ.**

   **ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ.**/8------ ಆಯ್ದಕ್ಕಿ ಲಕ್ಕಮ್ಮ

2. **ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ**

**ಕಾಯಕವ ಮಾಡುವಲ್ಲಿಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ**

**ತಾನಾಗಿಪ್ಪಳು ಮಾರಯ್ಯಪ್ರಿಯ ಅಮರೇಶ್ವರ ಲಿಂಗದಸೇವೆಯುಳ್ಳನ್ನಕ್ಕರ**"/21

----- ಆಯ್ದಕ್ಕಿ ಲಕ್ಕಮ್ಮ

ಅವನು ರಾಗಬದ್ಧವಾಗಿ ಹೇಳುತ್ತಿದ್ದ ನಾನು ಕಣ್ಮುಚ್ಚಿ ಕೇಳುತ್ತಿದ್ದೆ. ಅವನು ಹೇಳುವದನ್ನು ಮುಗಿಸುವಷ್ಟರಲ್ಲಿ ಅಲ್ಲಿ ಕೇಳಿದ ಚಪ್ಪಾಳೆ ಶಬ್ದ ನನ್ನನ್ನು ವಾಸ್ತವ ಲೋಕಕ್ಕೆ ಕರೆದುಕೊಂಡು ಬಂದಿತ್ತು. ಅಲ್ಲಿ ನೆರೆದಿದ್ದ ಜನವೆಲ್ಲ ಶರಣು ಶರಣು ಎಂದು ಚದುರಿದರು.

ಕಲ್ಯಾಣ ಹೊಕ್ಕ ನಂತರ ಏನೇನು ನಡೆಯುತ್ತಿದೆ ಗೊತ್ತಾಗುತ್ತಿಲ್ಲ ಮಾಯಾನಗರಿಯಲ್ಲಿ ಇದ್ದೇನೆ ಎನಿಸತೊಡಗಿತು. ನನಗೆ ಮನದಲ್ಲಿ ಆ ವಚನದ ಸಾಲುಗಳು ಸುತ್ತಿ ಸುಳಿದಾಡತೊಡಗಿದವು. ಶರಣರು ನಡೆದಾಡುತ್ತಿರುವ ಈ ಭೂಮಿ ಪುಣ್ಯಭೂಮಿ. ಶರಣರನ್ನು ಒಮ್ಮೆ ನೋಡಿ ಪಾವನನಾಗಬೇಕು ಎಂಬ ಭಾವನೆ ಮನದಲ್ಲಿ ಮೂಡಿತು.




ದೇಶಿಕೇಂದ್ರ ಸಂಗನಬಸವಯ್ಯ ನವರು ಕಲ್ಯಾಣದ ಮಾರುಕಟ್ಟೆಯನ್ನು ಕಲ್ಪಿಸಿಕೊಂಡು ಅದರ ಬಗ್ಗೆಯೇ ಈ ವಚನ ವಚನ ಬರೆದಿದ್ದಾರೆಯೇ ಎನಿಸುತ್ತದೆ.

## ದೇಶಿಕೇಂದ್ರ ಸಂಗನಬಸವಯ್ಯ ವಚನ

**ಪಂಚವಣ್ಣಿಗೆ ಪಟ್ಟಣ ಪಂಚಮಾಲುಪೂರ್ಣ ಪೇಟೆಯಲ್ಲಿ ಹರದರನಂತರ**

**ಕೊಳುಕೊಡೆ ಕಡೆ ಮೊದಲಿಲ್ಲ ನೋಡುವ ಬನ್ನಿರೆ.**

**ಅರಿಷಿಣ, ಬೆಳ್ಳೊಳ್ಳಿ, ಗುಗ್ಗಳ, ಚಂದನ, ವೀಳ್ಯೆದೆಲೆ, ಲವಂಗ, ಪತ್ರಿ, ಜಾಜಿಕಾಯಿ, ಖಾರೀಕ**

**ಮಾರುವದೊಂದು ಮಳಿಗೆಸಾಲು ಕೊರತೆಯಾಗದೆ ತಿಳಿಯಿರೆಯಮ್ಮ.**

**ಕಲ್ಲುಸಕ್ಕರೆ, ಜೇನುತುಪ್ಪ, ನೆಲ್ಲಿಯಕಾಯಿ, ಬೆಟ್ಟಡಕೆ, ಮೆಣಸು, ಶುಂಠಿ,**

**ಸೋಲು ಹುಣಸೆಫಳ, ಕಾಚುಗರಳ ಮಾರುವದೊಂದು ಮಳಿಗೆಸಾಲು**

**ಮನವೊಪ್ಪಿ ಅರಿಯಿರೆಯಮ್ಮ.**

**ಹೊನ್ನು, ಬಂಗಾರ, ಬೆಳ್ಳಿ, ಮುತ್ತು, ಪವಳ, ನಾರಂಜಿ, ಪಚ್ಚ, ಪಸುರುಂಬರ, ನೀಲ, ಕಸ್ತೂರಿಗಳೊಪ್ಪಿ**

**ಮಾರುವದೊಂದು ಮಳಿಗೆಸಾಲು ಇರ್ದಂತೆ**

**ನೋಡಿರೆಯಮ್ಮ.**

**ತಟ್ಟು ಕಂಬಳಿ ಕುಸುಮಸುಪ್ಪತ್ತಿಗೆ ಸೂರ್ಯಚಂದ್ರ ಬಿಸಿಲು ಉರಿ ಬೆಳಗು ಇರುಳು ಬೆಳದಿಂಗಳವಿಡಿದು**

**ಕಾಜುಕಪ್ಪೆ ಮುಟ್ಟಿ ಮಾರುವದೊಂದು ಮಳಿಗೆಸಾಲು ಕಾಣಿರೆಯಮ್ಮ.**

**ಕಂಚುಗಳು ಕಾರ್ಬೊನ್ನದೆಳೆದೊಗಲು ಕಾಷ* ಗೂಡಿ ಕೊಂಬು, ಶಂಖ,**

**ಮಾತುಮಾತಿನಿಂದೆ ಮಾರುವದೊಂದು ಮಳಿಗೆಸಾಲು ಕೇಳಿರೆಯಮ್ಮ.**

**ತರುಮೂಲ ಹಣ್ಣು, ಬೆಲ್ಲಾದಿ, ಹಾಗಲಫಲಗಸೆ, ತಾಳಾದಿ ವಚನಗಳಿನಿತು**

**ಪರಿಣಾಮಗೊಂಡು ಮಾರುವದೊಂದು ಮಳಿಗೆಸಾಲು ಸಂತೋಷ ಕಾಣಿರಮ್ಮ.**

**ಇಂತಪ್ಪ ಪುರದ ಬಾಜಾರ ನೆರವಿಯೊಳಿಪ್ಪ ಶೆಟ್ಟಿ ಎಮ್ಮ ಕೈಪಿಡಿದರೆ ಚೌಕ ಚಾವಡಿಯಲ್ಲಿ ನಮ್ಮ ನಮ್ಮ ಗಂಡರ ನಂಟು ಬಲಿಸಿದರೆ ಕಂಟಕವಿಲ್ಲದೆ ಕಾಣಿಸಬಹುದು ಗುರುನಿರಂಜನ ಚನ್ನಬಸವಲಿಂಗ ಪ್ರಸಾದಸುಖಪದವ.**/787

**ಗಮನಿಸಿ:**

ಇತಿಹಾಸದ ಪುಟಗಳಲ್ಲಿ ವಿಜಯನಗರದ ಮಾರುಕಟ್ಟೆಯ ವರ್ಣನೆ ಸಿಗುತ್ತದೆ. ಹಂಪಿ ಬಜಾರ್ ರಸ್ತೆಯ ಎರಡೂ ಬದಿಗಳಲ್ಲಿ ಹಳೆಯ ಮಂಟಪಗಳನ್ನು ಹೊಂದಿವೆ.ವಿಜಯನಗರ ಆಳ್ವಿಕೆಯಲ್ಲಿ ವ್ಯಾಪಾರಿಗಳು ಅಮೂಲ್ಯವಾದ ಕಲ್ಲುಗಳು, ಆಭರಣಗಳು, ರೇಷ್ಮೆ ಬಟ್ಟೆಗಳು ಇತ್ಯಾದಿಗಳನ್ನು ಮಾರಾಟ ಮಾಡುತ್ತಿದ್ದ ಸ್ಥಳವಾಗಿತ್ತು. ಆದರೆ ಬಸವಕಲ್ಯಾಣದ ಮಾರುಕಟ್ಟೆಯ ವಿವರಣೆ ಎಲ್ಲಿಯೂ ಲಭ್ಯವಿಲ್ಲ.

ಬಸವಕಲ್ಯಾಣದ ಮಾರುಕಟ್ಟೆಯಲ್ಲಿ ಮಾರುವವರು ಮತ್ತು ಕೊಳ್ಳುವವರಿಬ್ಬರು ವಿಶಾಲ ಮನೋಭಾವದವರು. ಹಾಗಾಗಿ ಅಲ್ಲಿ ನಡೆಯುವ ವ್ಯಾಪಾರ ಹೇಗಿತ್ತು ಎನ್ನುವದು ಕನಸಿನಲ್ಲಿದೆ. ಇನ್ನು ಹನ್ನೆರಡನೆಯ ಶತಮಾನದಲ್ಲಿ ಜನಸಾಮಾನ್ಯರು ಆಗ ಚಲಾವಣೆಯಲ್ಲಿದ್ದ ಬಂಗಾರ ನಾಣ್ಯ ಪಣ, ಗದ್ಯಾಣ ಇತ್ಯಾದಿ ನೋಡುವ ಸಾಧ್ಯತೆ ಇರಲಿಲ್ಲ. ಹಾಗಾಗಿ ಆಗ ಜಾರಿಯಲ್ಲಿ ಇದ್ದುದು ಸರಳ ವ್ಯವಹಾರ ಪದ್ದತಿ. ತಾವು ಬೆಳೆದ ಅಥವಾ ತಯಾರಿಸಿದ ಸಾಮಾನುಗಳನ್ನು ಕೊಟ್ಟು ಬದಲಿಗೆ

ತಮಗೆ ಬೇಕಾದ ಸಾಮಾನು ತರುವದು ಜಾರಿಯಲ್ಲಿರಬಹುದು. ಆಗ ಕಲ್ಯಾಣಕ್ಕೆ ಬಂದು ಹೋದ ಪ್ರವಾಸಿಗರು ಮರಳಿ ಹೋಗಿ ಬರೆದಿರುವ ಕೃತಿಗಳನ್ನು ಅಧ್ಯಯನ ಮಾಡಿದರೆ ನಮಗೆ ಮಾಹಿತಿ ದೊರೆಯುತ್ತದೆ ಎನಿಸುತ್ತದೆ.

### ವಿಶ್ವಕ್ಕೆ ಶರಣರು ಕೊಟ್ಟ ಅಪೂರ್ವ ತತ್ವ "ಕಾಯಕ":

ಶರಣರು ವಿಶ್ವಕ್ಕೆ ಕೊಟ್ಟ ಅತ್ಯುತ್ತಮ ತತ್ವ "ಕಾಯಕ". ಈ ತತ್ವ ವಿವರಿಸುವ ಕೆಲವು ವಚನಗಳು

1. **ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ ?**
   **ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ ಇಮ್ಮನವಾಗದ ಮುನ್ನವೆ**
   **ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲಬೇಕು ಮಾರಯ್ಯಾ** /20
   --- ಆಯ್ದಕ್ಕಿ ಲಕ್ಕಮ್ಮ
2. **ಭಕ್ತ [ತಾ] ಮಾಡುವ ಕಾಯಕ, ತನಗೆಂದಡೆ ಗುರುವಿಂಗೆ ದೂರ,**
   **ತನ್ನ ಸತಿಗೆಂದಡೆ ಲಿಂಗಕ್ಕೆ ದೂರ, ತನ್ನ ಸುತರಿಗೆಂದಡೆ ಜಂಗಮಕ್ಕೆ ದೂರ.**
   **ತನ್ನ ಬಂಧುಗಳಿಗೆಂದಡೆ ಸಂಗನಬಸವಣ್ಣ ಮೊದಲಾದ ಶರಣ ಸಂಕುಳಕ್ಕೆಲ್ಲಕ್ಕೂ ದೂರ.**
   **ನನಗೂ ದೂರ,**
   **ಎನ್ನೊಳಗಾದ ನಿಃಕಳಂಕ ಮಲ್ಲಿಕಾರ್ಜುನ ನಿನಗೂ ದೂರ**/556
   ---- ಮೋಳಿಗೆ ಮಾರಯ್ಯನವರು
3. **ಸತ್ಯಕಾಯಕದಿಂದುಲಿದು ಬಂದ ಧನವನು, ಮಿಥ್ಯವರಿಯದೆ ಚಿತ್ತಾದಿಕರಣಗೊತ್ತಿನೊಳು**
   **ನಿಲಿಸಿ, ಗುರುಲಿಂಗಜಂಗಮವನರಿದು,**
   **ಸ್ವಯ ಪರವಳಿದುಳಿದಿತ್ತು ಮರೆದಿರಬಲ್ಲ**
   **ಪರಮನಿಷ್ಠಾಂಗವಾದ ಭಕ್ತನಲ್ಲಿನಿರಂತರ**
   **ಗುರುನಿರಂಜನ ಚನ್ನಬಸವಲಿಂಗ.**/1136
   --- ದೇಶಿಕೇಂದ್ರ ಸಂಗನಬಸವಯ್ಯನವರ ವಚನ
4. **ಅವಾವ ಕಾಯಕದಲ್ಲಿ ಬಂದಡೂ ಭಾವಶುದ್ಧವಾಗಿ ಗುರು-ಲಿಂಗ-ಜಂಗಮಕ್ಕೆ ಮಾಡುವುದೇ ಶಿವಪೂಜೆ.**
   **ಮಾಡುವ ಮಾಟವಿಲ್ಲದೆ ಮಾತಿಂಗೆ ಮಾತಾಡುವುದುಅದೇತರ ಪೂಜೆ?**
   **ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ, ಮಡಿವಾಳಯ್ಯಾ.**/2
   --- ನುಲಿಯ ಚಂದಯ್ಯನವರು




**ಶರಣರು ಸ್ಥಾಪಿಸಿದ ಶಿಕ್ಷಣ ಮತ್ತು ಕಾಯಕ ತರಬೇತಿ ಕೇಂದ್ರ**
**"ದಾಸೋಹ ಮಠ"**

ಮೇಲೆ ಉದಾಹರಿಸಿದ ವಚನಗಳು ಶರಣರು ಕಾಯಕಕ್ಕೆ ಕೊಟ್ಟ ಮಹತ್ವವನ್ನು ತಿಳಿಸುತ್ತವೆ.
"ಸತ್ಯ ಶುದ್ಧ ಕಾಯಕವೇ ಪೂಜೆ" ಎನ್ನುವದು ಶರಣರ ಅನಿಸಿಕೆ.
ಅಣ್ಣ ಬಸವಣ್ಣನವರು ಕಾಯಕಯೋಗಿಗಳಿಗೆ ಕೊಟ್ಟ ಮಹತ್ವ ಮತ್ತು ಅವರಿಗೆ ಕೊಟ್ಟ ಸವಲತ್ತುಗಳ ಫಲವಾಗಿ ಕಲ್ಯಾಣ ಪ್ರಗತಿ ಪಥದಲ್ಲಿ ಸಾಗಿತ್ತು.
ಕಾಯಕಯೋಗಿಗಳ ಪ್ರತಿ ಕ್ಷಣವು ಮಹತ್ವದ್ದು ಅವರಿಗೆ ಬೇಕಾದ ಅನುಕೂಲತೆಗಳು ಅವರು ಬಯಸದೇ ಸಿಗುವಂತಹ ವ್ಯವಸ್ಥೆ ಕಲ್ಯಾಣದಲ್ಲಿತ್ತು ಎನ್ನುವದು ನನ್ನ ಕನಸಿನಲ್ಲಿ ಬಿಂಬಿತವಾಗಿದೆ.
ಪ್ರತಿಯೊಬ್ಬ ಕಾಯಕಯೋಗಿಗೂ ತರಬೇತಿ, ಶಿಕ್ಷಣ ಹಾಗೂ ಅವರಿಗೆ ಅನುಕೂಲತೆಗಳನ್ನು ಒದಗಿಸುವ ಪರಿಪೂರ್ಣ ವ್ಯವಸ್ಥೆ ಕಲ್ಪಿಸಲು ಮಾಡಿದ ವ್ಯವಸ್ಥೆಯೇ ದಾಸೊಹ ಮಠ.
ಅಣ್ಣ ಬಸವಣ್ಣನವರು ಜನಸಾಮಾನ್ಯರಿಗೆ ಕಾಯಕದಲ್ಲಿ ಪರಿಪೂರ್ಣತೆ ಪಡೆಯಲು ಮತ್ತು ವಿವಿಧ ಕಾಯಕಗಳ ತರಬೇತಿ ಮತ್ತು ಶಿಕ್ಷಣ ಪಡೆಯಲು ದಾಸೊಹ ಮಠ ಸ್ಥಾಪಿಸಿದರು.
(ಈಗಿನ ವಸತಿ ಸಹಿತ ವೃತ್ತಿ ತರಬೇತಿ ಶಿಕ್ಷಣ ಕೇಂದ್ರಗಳನ್ನು ದಾಸೋಹ ಮಠಗಳಿಗೆ ಹೋಲಿಸಬಹುದು).
ಪ್ರತಿಯೊಬ್ಬ ಕಾಯಕಯೋಗಿ ತನ್ನ ಸತ್ಯ ಶುದ್ಧ ಕಾಯಕದಿಂದ ಬಂದ ಆದಾಯದ ಸ್ವಲ್ಪ ಭಾಗವನ್ನು ದಾಸೋಹಕ್ಕಾಗಿ ವಿನಿಯೋಗಿಸುತ್ತಿದ್ದರು, ಹಾಗಾಗಿ ದಾಸೋಹಮಠಗಳು ಸ್ವತಂತ್ರವಾಗಿ ವಿದ್ಯಾಕೇಂದ್ರಗಳಾಗಿ ಬೆಳೆದವು. ಶರಣರೆಲ್ಲ

ವಿದ್ಯಾವಂತರಾಗಿ ವಚನಗಳನ್ನು ಅರ್ಥಮಾಡಿ ಕೊಂಡು ವಚನ ರಚಿಸಿ ತಮ್ಮ ತಮ್ಮ ಅನುಭಾವಗಳನ್ನು ಬರೆದಿಡುವಂತಾಯಿತು.
ಕಲ್ಯಾಣ ಪಟ್ಟಣ ಮತ್ತು ಅಲ್ಲಿರುವ ದಾಸೋಹ ಮಠಗಳ ವಿವರಗಳನ್ನು ಚನ್ನಬಸವಣ್ಣನವರು ತಮ್ಮದೊಂದು ವಚನದಲ್ಲಿ ವಿವರವಾಗಿ ವರ್ಣಿಸಿದ್ದಾರೆ.

## ಚನ್ನಬಸವಣ್ಣನವರ ವಚನ

ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮತ್ ಕಲ್ಯಾಣಪುರದ ಮಹಾತ್ಮ್ಯ ಎಂತೆಂದಡೆ:

ವಿಸ್ತರಿಸಿ ಪೇಳುವೆನು; ಎಲ್ಲಾ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ.

ಹದಿನಾಲ್ಕು ಭುವನಕ್ಕೆ ಕಳಸವೆಂದೆನಿಸುವ ರುದ್ರಲೋಕವೆ ಮರ್ತ್ಯಕ್ಕಿಳಿತಂದು, ಕಲ್ಯಾಣವೆಂಬ ಪುರವಾಗಿ ಹುಟ್ಟಿತ್ತು ನೋಡಿರಯ್ಯಾ ! -------------------

ಇನ್ನು ಬಸವರಾಜದೇವರು ಮುಖ್ಯವಾದ ಅಸಂಖ್ಯಾತರ ಮಠಂಗಳು ಆ ಕಲ್ಯಾಣದೊಳಗೆ ಎಷ್ಟು ಎಂದಡೆ:

ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು12,000

ಇಪ್ಪತ್ತೆಂಟು ಸಾವಿರ ಮಹಾಮನೆಗಳು; 28,000

ಹತ್ತು ಸಾವಿರ ನಿತ್ಯನೇಮಿಗಳ ಮಠಂಗಳು; 10,000

ಹದಿನೈದು ಸಾವಿರ ಚಿಲುಮೆಯಗ್ಗವಣಿಯ ವ್ರತಸ್ಥರ ಮಠಂಗಳು; 15,000

ಐದು ಸಾವಿರ ವೀರವ್ರತನೇಮಿಗಳ ಕಟ್ಟಳೆಯ ಮಠಂಗಳು; 5,000

ಹನ್ನೆರಡು ಸಾವಿರ ಅಚ್ಚಪ್ರಸಾದಿಗಳ ಮಠಂಗಳು, 12,000

ಒಂದು ಸಾವಿರ ಅರವತ್ತು ನಾಲ್ಕು ಶೀಲಸಂಪನ್ನರ ಮಠಂಗಳು;

(ಇವನ್ನು ಪರಿಗಣಿಸಿಲ್ಲ ) 1064??

(ಕಾಯಕ ತರಬೇತಿ ಮತ್ತು ಶಿಕ್ಷಣಕ್ಕೆ ಮೀಸಲಾದ ಮಠಗಳು)

ನಿತ್ಯ ಸಾವಿರ ಜಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹಿಗಳ ಮಠಂಗಳು ಮೂವತ್ತೆರಡು ಸಾವಿರ; 32,000

ನಿತ್ಯ ಐನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ಸತ್ಯಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ; 58,000

ನಿತ್ಯ ಸಾವಿರದೈನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋಹಿಗಳ ಮಠಂಗಳು ಹನ್ನೊಂದು ಸಾವಿರ; 11,000

ನಿತ್ಯ ಅವಾರಿಯಿಂದ ಮಾಡುವ ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ; 1,00,000

**ಜಂಗಮಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ ಜಂಗಮಭಕ್ತರ ಮಠಂಗಳು ಎರಡು ಸಾವಿರದೇಳ್ನೂರೆಪ್ಪತ್ತು;** 2,770

**(ಒಟ್ಟು 2,85,770)**

**ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂರೆಪ್ಪತ್ತು. ----------------**

**ಲೋಕದೊಳಗೆ ಕಲ್ಯಾಣವೆ ಕೈಲಾಸವೆನಿಸಿತ್ತು. ಇಂತಪ್ಪ ಕಲ್ಯಾಣದ ದರುಶನವ ಮಾಡಿದಡೆ ಭವಂ ನಾಸ್ತಿ, ಇಂತಪ್ಪ ಕಲ್ಯಾಣವ ನೆನೆದಡೆ ಪಾಪಕ್ಷಯ, ಇಂತಪ್ಪ ಕಲ್ಯಾಣದ ಮಹಾತ್ಮೆಯಂ ಕೇಳಿದಡೆ ಕರ್ಮಕ್ಷಯವಹುದು, ಮೋಕ್ಷ ಸಾಧ್ಯವಹುದು, ಇದು ಕಾರಣ, ಕೂಡಲಚೆನ್ನಸಂಗಮದೇವಾ, ನಿಮ್ಮ ಭಕ್ತ ಬಸವಣ್ಣನಿದ್ದಠಾವೆ ಮಹಾಕಲ್ಯಾಣವೆಂದರಿದು ದಿವ್ಯಶಾಸನವ ಬರೆದು ಪರಿಸಿದ ಕಾರಣ, ಎನ್ನ ಭವಂ ನಾಸ್ತಿಯಾಯಿತ್ತಯ್ಯಾ.**/1666

ಇಷ್ಟೊಂದು ವ್ಯವಸ್ಥಿತವಾದ ಶಿಕ್ಷಣ ವ್ಯವಸ್ಥೆ ಇರುವ ದೇಶ ಮತ್ತೆಲ್ಲಿಯೂ ಇದ್ದ ಬಗ್ಗೆ ಮಾಹಿತಿ ಇಲ್ಲ. ಕಲ್ಯಾಣಕ್ಕೆ ಬಂದ ಅನಕ್ಷರಸ್ಥ ಕಾಯಕಯೋಗಿಗಳು ಅಲ್ಪ ಸಮಯದಲ್ಲಿ ಅಕ್ಷರಜ್ಞಾನ ಪಡೆದು ವಚನ ರಚಿಸಲು ಸಾಧ್ಯವಾದದ್ದು ಕಾರಣವೇ ಈ ಶಿಕ್ಷಣ ಪದ್ಧತಿ. ಹೆಣ್ಣುಮಕ್ಕಳಿಗೆ ಸಮಾನ ಅಧಿಕಾರ ನೀಡಿ ಅವರರಿಗೆ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟಿದ್ದು ಈ ದಾಸೋಹ ಮಠಗಳು.

12 ನೇಯ ಶತಮಾನದಲ್ಲಿ ಅಣ್ಣ ಬಸವಣ್ಣನವರು ಸ್ಥಾಪನೆ ಮಾಡಿದ “ದಾಸೋಹ ಮಠ” ಗಳು ಇಂದಿಗೂ ಕಾರ್ಯನಿರ್ವಹಿಸಿ ಸಮಾಜದ ಏಳಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆ.

ಅನೇಕ ಪರಿವರ್ತನೆಯನ್ನು ಕಂಡ ದಾಸೋಹ ಮಠಗಳು ಶರಣ ಸಾಹಿತ್ಯ ಜನಮನದಲ್ಲಿ ಉಳಿದು ಜಗತ್ತಿನಾದ್ಯಂತ ಪ್ರಚಲಿತವಾಗಲು ಕಾರಣವಾಗಿವೆ.

ಕಾಲಕ್ರಮೇಣ “ದಾಸೋಹ ಮಠಗಳು” ಧಾರ್ಮಿಕ ಕೇಂದ್ರಗಳಾಗಿ ವಚನ ಸಾಹಿತ್ಯ ಉಳಿಸುವಲ್ಲಿ ಮತ್ತು ಬೆಳೆಸುವದರಲ್ಲಿ ಮಹತ್ವದ ಪಾತ್ರ ವಹಿಸಿದವು, ಅವುಗಳಿಗೆ ಆರ್ಥಿಕ ಸಹಾಯ ಸಿಕ್ಕಿದ್ದು

ಕಾಯಕಯೋಗಿಗ ಳಿಂದ. ಕಾಯಕಯೋಗಿಗಳ ಮತ್ತು ಮಠಗಳ ಸಂಬಂಧ ಇನ್ನೂ ಉಳಿದುಕೊಂಡು ಬಂದಿದೆ. ಪ್ರತಿದಿನ ಅಥವಾ ಹಬ್ಬದ ದಿನ ಮಠಗಳಿಗೆ ಎಡೆ ಕೊಡುವ ಸಂಪ್ರದಾಯ ಇನ್ನೂ ಹಳ್ಳಿಗಳಲ್ಲಿದೆ.

ಇಪ್ಪತ್ತನೇಯ ಶತಮಾನದಲ್ಲಿ ಮಠಗಳು ವಿದ್ಯಾರ್ಥಿಗಳಿಗಾಗಿ ಪ್ರಸಾದ ವ್ಯವಸ್ಥೆ ಮಾಡಿ ಬಡ ಮಕ್ಕಳು ತಮ್ಮ ಜೀವನ ರೂಪಿಸಿಕೊಳ್ಳಲು ನೆರವಾದರು.

ಆದರೆ ಕಾಯಕ, ಶಿಕ್ಷಣ ಮತ್ತು ಜೀವನ ಮಾರ್ಗ ಒಟ್ಟಾರೆಯಾಗಿ ರೂಪಿಸಬಲ್ಲ ವ್ಯವಸ್ಥೆ ಇನ್ನೂ ಪ್ರಾರಂಭ ಆಗಬೇಕಾಗಿದೆ.

ಈ ಕನಸಿನ ಭಾಗದಲ್ಲಿ ಕಲ್ಯಾಣಕ್ಕೆ ಜೀವನ ಸಾಗಿಸಲು ಬಂದವರಿಗೆ “ದಾಸೋಹ ಮಠ” ಗಳು ನೆರವಾಗುವ ಬಗೆ ವಿವರಿಸಲಾಗಿದೆ.

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು.
ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು.
ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯಾ.
ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು.
ನನಗೆ ನಮ್ಮ ಜಂಗಮದ ಪ್ರಸಾದದಾಗೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯಾ/44
--- ನುಲಿಯ ಚಂದಯ್ಯ

## ಕಾಯಕದ ಆರಂಭ:

ಮೋನಣ್ಣನ ಗಾಡಿ ಮುಂದೆ ಅದರ ಹಿಂದೆ ನನ್ನ ಗಾಡಿ ಸಾಗಿತ್ತು.
ನಿನ್ನೆ ಬೆಳದಿಂಗಳಲ್ಲಿ ಕಂಡ ಕಲ್ಯಾಣಕ್ಕೂ ಇಂದು ಕಾಣುತ್ತಿರುವ ಕಲ್ಯಾಣಕ್ಕೂ ಅಜಗಜಾಂತರ.
ಈಗ ರಸ್ತೆಯ ತುಂಬ ರಥಗಳು, ಬಂಡಿಗಳು, ಕುದುರೆಗಳು. ವಿಶಾಲವಾದ ರಸ್ತೆಯ ಮಧ್ಯದಲ್ಲಿ ಹೂಗಿಡಗಳು, ರಸ್ತೆಯ ಎರಡೂ ಆಕ್ಕಪಕ್ಕದಲ್ಲಿ ಕಾಲುದಾರಿ, ಕಾಲುದಾರಿಯ ಮಗ್ಗಲು ಗಿಡಗಳಿದ್ದವು.
ಕೆಂಪುಮಣ್ಣಿನ ರಸ್ತೆ ಬಿಸಿಲಿನಲ್ಲಿ ಬಂಗಾರದಿಂದ ನಿರ್ಮಾಣವಾಗಿದೆಯೇನೋ ಎನಿಸುತ್ತಿತ್ತು.ನಾವು ಕಾಡಿನಲ್ಲಿದ್ದೇವೆಯೋ? ಸುಂದರವಾದ ತೋಟದಲ್ಲಿದ್ದೇವೆಯೋ? ಗೊತ್ತಾಗುತ್ತಿಲ್ಲ.ಅಂತ್ಯವಿಲ್ಲದ ಈ ರಸ್ತೆಯಲ್ಲಿ ಸ್ವಲ್ಪ ಹೊತ್ತು ಸಾಗಿದ ಮೇಲೆ ಬಲಕ್ಕಿರುವ ರಸ್ತೆಯಲ್ಲಿ ನಾವು ಸಾಗಿದೆವು.
ಈ ರಸ್ತೆಯೂ ವಿಶಾಲವಾಗಿತ್ತು ಆದರೆ ಎರಡು ಭಾಗವಾಗಿರಲಿಲ್ಲ ಅಷ್ಟೆ.
ಅಲ್ಲಿ ಬಲಗಡೆಯ ಮೈದಾನದಲ್ಲಿದ್ದ ಗಿಡಗಳ ನೆರಳಲ್ಲಿ ಮೋನಣ್ಣ ಬಂಡಿನಿಲ್ಲಿಸಿ ಕೊಳ್ಳು ಹರಿದ, ನಾನೂ ಹಾಗೆ ಮಾಡಿದೆ. ಎತ್ತುಗಳಿಗೆ ಮೇವು ಹಾಕಿ ನಡೆದ ಅವನ ಹಿಂದೆ ನಾನು ನಡೆದೆ.
ಮೋನಣ್ಣ "ನಾನೀಗ ಇರುವದು ದಾಸೊಹ ಮಠದ ಮುಂದೆ. ಈ ಮಠದಲ್ಲಿ ದಿನಾಲೂ ಸಾವಿರದ್ಯೆನೂರು ಜಂಗಮರಿಗೆ ದಾಸೋಹವಿರುತ್ತದೆ. ಇಂತಹ ಹನ್ನೊಂದು ಸಾವಿರ ಮಠಗಳು ಕಲ್ಯಾಣದಲ್ಲಿವೆ." ಎಂದ.
ನನಗೇನು ಅರ್ಥವಾಗಲಿಲ್ಲ. ತಲೆಯಾಡಿಸಿ ಅವನನ್ನು ಹಿಂಬಾಲಿಸಿದೆ.
ಅಲ್ಲೊಂದು ದೊಡ್ಡ ಕಟ್ಟೆ. ಕಟ್ಟೆಯ ಮಗ್ಗಲು ಒಂದು ಸಣ್ಣ ಮನೆ ಇತ್ತು. ಅಲ್ಲಿ ನಿಂತು ಮೋನಣ್ಣ ಅಪ್ಪಣ್ಣ, ಅಪ್ಪಣ್ಣ ಎಂದ. ಆ ಮನೆಯಿಂದ ಇಳಿವಯಸ್ಸಿನ ಕಟ್ಟುಮಸ್ತಾದ ಒಬ್ಬರು ಶರಣು ಶರಣು ಎನ್ನುತ್ತ ಹೊರಬಂದರು. ನಾವಿಬ್ಬರೂ ಕೈಮುಗಿದು "ಶರಣು ಶರಣಣಾರ್ಥಿ" ಎಂದೆವು.

ನನ್ನ ಕೈ ಮುಗಿದ ಭಂಗಿಯಲ್ಲಿಯೇ ಇತ್ತು. ಮೋನಣ್ಣ ಇವರು ಗುರಣ್ಣ ಗಂಜೀಹಾಳದಿಂದ ಎಣ್ಣೆ ಕಾಯಕ ಮಾಡಲು ಬಂದಿದ್ದಾರೆ ಎಂದು ಹೇಳಿದ. ಆ ವ್ಯಕ್ತಿ ಬಂದು ನನ್ನ ಕೈಹಿಡಿದು "ಗುರೂ, ನಡೆ ಹೋಗೋಣ" ಎಂದರು.
ನನ್ನ ಬೆನ್ನಮೇಲೆ ಗೆಳೆಯನಂತೆ ಕೈಹಾಕಿ ನಡೆಯುತ್ತ ನನ್ನ ವಿವರ ತಿಳಿದುಕೊಳ್ಳುತ್ತ ನನ್ನ ಬಂಡಿಯೇರಿದರು. ಮೋನಣ್ಣ ಆಮೇಲೆ ಸಿಗುತ್ತೇನೆ ಶರಣು ಎಂದು ಹೇಳಿ ತನ್ನ ಬಂಡಿಯೊಡನೆ ಹೊರಟ.
ಸ್ವಲ್ಪ ದೂರ ಸಾಗಿದ ಮೇಲೆ ಒಂದು ಕಡೆ ಬಂಡಿ ನಿಲ್ಲಿಸಲು ಹೇಳಿದರು ಅಪ್ಪಣ್ಣ. ಅಲ್ಲಿರುವ ಬಯಲಲ್ಲಿ ಹಾಕಿದ ಹಂದರದ ಕೆಳಗೆ ಒಂದು ಗಾಣ, ಮಗ್ಗುಲಲ್ಲಿ ಒಂದು ಮನೆ ಇತ್ತು. ಮನೆಯ ಕೊಂಡಿ ತೆಗೆದು ಒಳಗೆ ಹೋಗಿ ನೋಡಿದರೆ ಅದು ಅಚ್ಚುಕಟ್ಟಾದ ಸುಸಜ್ಜಿತವಾದ ಚಿಕ್ಕ ಚೊಕ್ಕದಾದ ಮನೆಯಾಗಿತ್ತು.
ಹೊರಗೆ ಬಂದ ಮೇಲೆ "ಈ ಮನೆಯಾತ ಮದುವೆಯಾಗಲು ಊರಿಗೆ ಹೋಗಿದ್ದಾನೆ ಬರಲು ಕೆಲದಿನ ಬೇಕು ಅಲ್ಲಿಯವರೆಗೆ ನೀವು ಇಲ್ಲೇ ಇರಿ. ನೀನು ನಿನ್ನ ಕಾಯಕದಲ್ಲಿ ನಿರತನಾಗು, ಶರಣು" ಎನ್ನುತ್ತ ಹೊರಟೇ ಬಿಟ್ಟರು ಅಪ್ಪಣ್ಣ.
"ಶರಣು" ಎನ್ನುತ್ತ ಕೈಮುಗಿದು ಮೂಕನಾಗಿ ನಿಂತಿದ್ದೆ.
ಅಪರಿಚನಾದ ನನಗೆ ಈ ಎಲ್ಲ ಸಹಾಯ ಒದಗಿದ್ದು ಬಸವಣ್ಣನ ಕೃಪೆಯಲ್ಲದೆ ಮತ್ತೇನು?
ದೇಶದ ನಾನಾಕಡೆಗಳಿಂದ ಬಂದ ಕಾಯಕಯೋಗಿಗಳು ಬಂದ ಕೆಲವು ದಿನಗಳಲ್ಲಿ ಕಾಯಕ ಆರಂಭಿಸುತ್ತಿದ್ದ ಅನುಭವ ನನಗಾಯಿತು.
(ಅಲ್ಪ ಸಮಯದಲ್ಲಿ ಜಪಾನ ದೇಶ ಈ ಕ್ರಮದಿಂದಲೇ ಪ್ರಗತಿಸಾಧಿಸಿದ್ದು ನಮಗೆಲ್ಲ ಗೊತ್ತು.)
ಸ್ವಲ್ಪ ಹೊತ್ತಾದಮೇಲೆ ಬಂಡಿ ಒಳಗೆ ಹೊಡೆದುಕೊಂಡುಬಂದು ಕೊಳ್ಳ ಹರಿದು, ತಡಮಾಡದೇ ನನ್ನ ಕೆಲಸದಲ್ಲಿ ನಿರತನಾದೆ.
ಗಾಣ ಸ್ವಚ್ಛಮಾಡಿ, ಶೇಂಗಾಬೀಜ ಹಾಕಿ ಗಾಣಕ್ಕೆ ಎತ್ತು ಕಟ್ಟಿ "ಬಸವಾ, ಬಸವಾ" ಎಂದೆ. ಗಾಣ ತಿರುಗುವಾಗ ಬರುವ ಚಿಂವ ಚಿಂವ ಶಬ್ದದ ಜೊತೆಯಾಗಿ ನಾನು ಗಾಣದ ಸುತ್ತ ತಿರುಗುತ್ತ
"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ ......" ಎಂದು ಹಾಡುತ್ತ ನನ್ನ ಕೆಲಸದಲ್ಲಿ ನಿರತನಾದೆ
ಎಣ್ಣೆಯನ್ನು ಶುದ್ಧಗೊಳಿಸಿ ಡಬ್ಬಿಯಲ್ಲಿ ಹಾಕಿ ಹಿಂಡಿ ತೆಗೆದು ಸ್ವಲ್ಪ ಭಾಗ ನನ್ನ ಎತ್ತುಗಳಿಗೆ ತಿನಿಸಿ ಒಳಗೆ ಬಂದಾಗಲೇ ನೆನಪಾದದ್ದು ನನ್ನ ಹೆಂಡತಿ ದಾಸೋಹದಲ್ಲಿಯೇ ಇದ್ದಾಳೆ ಎಂದು.
ಮೋನಣ್ಣ ಹೊರಟು ಹೋಗಿದ್ದ ಅವನೆಲ್ಲಿರುತ್ತಾನೆ ಗೊತ್ತಿಲ್ಲ.
ಏನು ಮಾಡುವದು ತಿಳಿಯದೇ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತುಕೊಂಡೆ.

ಒಂದೂ ಕೆಲಸವನ್ನು ನನ್ನಾಕೆಯಿಲ್ಲದೆ ಮಾಡದೆ ಇರುವ ನಾನು ಆಕೆಯ ನೆನಪಿಲ್ಲದೇ ಇಷ್ಟೊಂದು ಕೆಲಸ ಮಾಡಿದ್ದು ಹೇಗೆ? ಇದುವೇ ಕಲ್ಯಾಣದ ಮಾಯೆ, ಇದು ಹೇಗಾಯಿತು? ಇಂದು ಏನೇನೆಲ್ಲ ನಡೆಯಿತು? ಎಂದು ವಿಚಾರಿಸುತ್ತ ಕುಳಿತುಕೊಂಡೆ.

ಸ್ವಲ್ಪ ಸಮಯವಾಗಿರಬೇಕು "ಅಣ್ಣಾ" ಎಂದು ಶಂಕರಮ್ಮನ ದನಿ ಕೇಳಿದಾಗಲೇ ನಾನು ನಿಜ ಲೋಕಕ್ಕೆ ಮರಳಿದ್ದು.

"ಇವರು ಯಾವಾಗಲೂ ಹೀಗೆ ವಿಚಾರಿಸುತ್ತ ಕುಳಿತರೆ ಎಲ್ಲವನ್ನು ಮರೆತು ಬಿಡುತ್ತಾರೆ" ಎಂಬ ನನ್ನವಳ ಮಾತು ಕೇಳಿ ಪೆಚ್ಚಾದೆ. ಆದರೆ ನಾನು ಸಾವರಿಸಿಕೊಂಡು ಹೇಳಿದೆ

" ಹೌದು, ನಿನ್ನನ್ನು ಕೆಲಸ ಮಾಡುತ್ತ ಮಾಡುತ್ತ ಮರೆತೇ ಬಿಟ್ಟಿದ್ದೆ". ನನಗೇ ಆಶ್ಚರ್ಯ, ಸತ್ಯವನ್ನೇ ಹೇಳಿಬಿಟ್ಟಿದ್ದೆ. ಆಕೆಗೆ ಸಿಟ್ಟು ಬರಲಿಲ್ಲ ಅವಳ ಮುಖದಲ್ಲಿ ಮುಗಳ್ನಗೆ ಇತ್ತು.

ಆಗ ಶಂಕರಮ್ಮ ಹೇಳಿದಳು

ಅಣ್ಣ ನೀವು ಇಂದು ಆಯ್ದಕ್ಕಿ ಲಕ್ಕಮ್ಮ ಹೇಳಿದಂತೆ ಮಾಡಿದ್ದೀರಿ. ಅವರು ಹೇಳಿದ್ದು

**ಕಾಯಕದಲ್ಲಿ ನಿರತನಾದಡೆ**

**ಗುರುದರ್ಶನವಾದಡೂ ಮರೆಯಬೇಕು**

**ಲಿಂಗಪೂಜೆಯಾದಡೂ ಮರೆಯಬೇಕು**

**ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು**

**ಕಾಯಕವೆ ಕೈಲಾಸವಾದ ಕಾರಣ**

**ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.**/7

----- ಆಯ್ದಕ್ಕಿ ಮಾರಯ್ಯ

ನನ್ನಾಕೆ ಅವರ ದನಿಗೆ ದನಿಗೂಡಿಸಿ

**"ಕಾಯಕದಲ್ಲಿ ನಿರತನಾದಡೆ ಮಡದಿಯ ಮರೆಯಬೇಕು"**

ಎಂದು ಇನ್ನೊಂದು ಸಾಲು ಸೇರಿಸಿ ಅಕ್ಕ ಎಂದಳು ನಗುತ್ತ.

ಆಕೆ ಇಷ್ಟೊಂದು ಸಂತೋಷದಿಂದ ಇದ್ದದ್ದು ನಾನೆಂದೂ ನೋಡಿರಲಿಲ್ಲ.

ನಾನೇನೊ ಹೇಳಬೆಕೆಂದಾಗ ಏನಾಯಿತೆಂಬುದು ನನಗೆಲ್ಲ ಗೊತ್ತು ಅಪ್ಪಣ್ಣ ಎಲ್ಲ ಹೇಳಿದ್ದಾರೆ.

ಅವರು ದಾಸೋಹಕ್ಕೆ ಬರಲು ಹೇಳಿದ್ದಾರೆ ತಯಾರಾಗಿ ಎಂದಳು.

ಮನೆಯ ಹಿಂದಿನ ಭಾವಿ ದಂಡೆಯ ಮೇಲೆ ಸ್ನಾನಮಾಡಿ, ತಯಾರಾಗಿ ಕುಡಿಯಲು ಒಂದು ಕೊಡ ನೀರು ತೆಗೆದುಕೊಂಡು ಬಂದೆ. ಆಕೆ ಕುಡುಕೆಯಲ್ಲಿ ನೀರು ಕೊಟ್ಟಳು ಕುಡಿದೆ ಆ ನೀರು ಎಳನೀರಿಗಿಂತಲೂ ರುಚಿಯಾಗಿತ್ತು. ಆ ರುಚಿ ಭೂಮಿಯ

ಗುಣದಿಂದ ಬಂದಿತ್ತೋ ಅಥವಾ ದುಡಿದು ದಣಿವಾದದ್ದರಿಂದ ಬಂದಿತ್ತೋ ಗೊತ್ತಾಗಲಿಲ್ಲ.
(ಬಸವಕಲ್ಯಾಣದ ನೀರು ಎಳೆನೀರಿಗಿಂತಲೂ ರುಚಿ. ಒಮ್ಮೆ ಆ ರುಚಿ ನೋಡಿ)

**ಕಾಯಕ ದಾಸೋಹ:**

ಬಂಡಿ ಹೂಡಿ ಅವರಿಬ್ಬರನ್ನೂ ಕೂಡಿಸಿಕೊಂಡು ಹೊರಟೆ ಜತೆಗೆ ಅಂದು ತೆಗೆದ ಎಂಣೆಯನ್ನು ತೆಗೆದುಕೊಂಡು ಹೋಗಲು ಮರೆಯಲಿಲ್ಲ ದಾರಿಯಲ್ಲಿ ಶಂಕರಮ್ಮ ರಾಗಬದ್ದವಾಗಿ ಹಾಡಿದ ವಚನ

**ಹಾಗದ ಕಾಯಕವ ಮಾಡಿ, ಹಣವಡ್ಡವ ತಾ ಎಂಬಲ್ಲಿ ಸತ್ಯದ ಕಾಯಕ ಉಂಟೆ ?**

**ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು**

**ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ.**/32---- ಆಯ್ದಕ್ಕಿ ಮಾರಯ್ಯ

ಇನ್ನೂ ಸ್ವಲ್ಪ ಬೆಳಕಿರುವಷ್ಟರಲ್ಲಿ ಮಠ ಬಂದಿತು. ಆದರೆ ಅಲ್ಲಿ ಬಂಡಿ ಬಿಡಲೂ ಜಾಗವಿಲ್ಲ. ಅಂತೂ ಹುಡುಕಿ ಒಂದು ಕಡೆ ಗಾಡಿ ಬಿಟ್ಟು ಕೆಳಗಿಳಿದು ಎತ್ತಿನ ಕೊಳ್ಳು ಹರಿದು ಎತ್ತುಗಳಿಗೆ ಮೇವು ಹಾಕಿದೆ.
ಅಲ್ಲಿ ಜನವೋ ಜನ, ಅಲ್ಲಲ್ಲಿ ಗುಂಪು ಗುಂಪಾಗಿ ಕುಳಿತುಕೊಂಡಿದ್ದರು.
ಕುತೂಹಲ ತಾಳಲಾರದೆ ಶಂಕರಮ್ಮನನ್ನು ಕೇಳಿದೆ ಇಲ್ಲಿ ಏನು ನಡೆದಿದೆ?
"ಇಲ್ಲಿ ಅನುಭವ ದಾಸೋಹ ನಡೆದಿದೆ" ನನಗೇನು ಅರ್ಥವಾಗಲಿಲ್ಲ.
ಶಂಕರಮ್ಮ "ನಿಮಗೆ ಓದಲು ಬರೆಯಲು ಬರುತ್ತೇನು?" ಎಂದು ಕೇಳಿದಳು.
ನನ್ನವಳು "ಹೆಸರು ಬರೆಯಲು ಬರುತ್ತದೆ ಅಷ್ಟೇ" ಅಂದಳು.
ಬನ್ನಿ ಎಂದು ಕರೆದುಕೊಂಡು ಹೋಗಿ ಉಸುಕಿನಲ್ಲಿ ದುಂಡಗೆ ಕುಳಿತ ಜನರ ಗುಂಪಿನಲ್ಲಿ ಕುಳ್ಳಿರಿಸಿ ಹೋದಳು. ಅಲ್ಲಿ ಸುಮಾರು ಹತ್ತುವರ್ಷದ ಹುಡುಗಿಯೊಬ್ಬಳು ಕೈಯಲ್ಲಿ ಒಂದು ಕೋಲು ಹಿಡಿದು ನಿಂತಿದ್ದಳು ಸುತ್ತಲೂ ಕುಳಿತಿದ್ದವರೆಲ್ಲ ನನ್ನಂತವರು.
ಉಸುಕಿನಲ್ಲಿ ಕೋಲ ತುದಿಯಲ್ಲಿ "ಬ ಸ ವ" ಎಂದು ಬರೆದು ನಮಗೆಲ್ಲ ಬೆರಳ ತುದಿಯಿಂದ ಉಸುಕಿನಲ್ಲಿ ಬರೆಯಲು ಹೇಳಿದಳು. ತಪ್ಪು ಬರೆದವರ ಕೈಹಿಡಿದು ತಿದ್ದಿದಳು. ನನ್ನ ಹತ್ತಿರ ಬಂದಾಗ ಕೇಳಿದಳು ನಿಮ್ಮ ಹೆಸರೇನು?.
ನಾನು "ಗುರುಲಿಂಗಪ್ಪ" ಎಂದು ಹೇಳಿದೆ.
ಆಕೆ ಉಸುಕಿನಲ್ಲಿ "ಗುರು" ಎಂದು ಬರೆದಳು. ನಾವೆಲ್ಲ ಬರೆದೆವು. ಆಮೇಲೆ "ಲಿಂಗ" ಎಂದು ಬರೆದಳು. ನಾವೆಲ್ಲ ಅದರಂತೆ ಬರೆದೆವು.
ಆಗ ಅಲ್ಲಿ "ಜಂಗಮ" ಎನ್ನುವ ಶಬ್ದ ಕೇಳಿಸಿತು.
ಕಣ್ಣೆತ್ತಿ ನೋಡಿದೆ. ಅಪ್ಪಣ್ಣ ಅಲ್ಲಿಗೆ ಬಂದು ನಿಂತು "ಜಂಗಮ" ಎಂದಿದ್ದು.
ಆ ಮಗು ಕೋಲತುದಿಯಿಂದ "ಜಂಗಮ" ಶಬ್ದ ಬರೆದಳು. ನಾವೆಲ್ಲ ಅದರಂತೆ ಬರೆದೆವು.

ಆಗ ಅಪ್ಪಣ್ಣ "ಮನುಷ್ಯನಿಗೆ ಅಹಾರ ಎಷ್ಟು ಅವಶ್ಯವೋ ಅಷ್ಟೇ ಅಕ್ಷರಾಭ್ಯಾಸ ಮುಖ್ಯ. ದಿನಾಲೂ ಇಲ್ಲಿಗೆ ಬಂದು ಅಭ್ಯಾಸ ಮಾಡಿ" ಎಂದು ಹೇಳಿದರು.
ಅಷ್ಟರಲ್ಲಿ ಮಬ್ಬುಗತ್ತಲಾಗುತ್ತಿತ್ತು. ನಡೆಯಿರಿ ಹೋಗೋಣ ಎಂದರು.
ಎಲ್ಲರಂತೆ ನಾನೂ ಕೈ ಕಾಲು ತೊಳೆದುಕೊಂಡು ಬಂಡಿಯಲ್ಲಿಯ ಎಣ್ಣಿ ಡಬ್ಬಿ ತೆಗೆದುಕೊಂಡು ಅಪ್ಪಣ್ಣನವರು ಕುಳಿತ ಕಟ್ಟೆ ಏರಿ ಹೋದೆ.
ಅಪ್ಪಣ್ಣ ಕಟ್ಟೆಯ ಮೇಲಿರುವ ದೀಪಗಳಿಗೆಲ್ಲ ಎಣ್ಣಿ ಹಾಕು ಎಂದರು. ನಾನು ಅಲ್ಲಿದ್ದ ಪಣತಿಗಳಿಗೆ ಎಣ್ಣಿ ಹಾಕಿದೆ ಆಗಲೇ ಪಣತಿಗೆ ಬತ್ತಿಹಾಕಿದ್ದ ನನ್ನವಳು ದೀಪ ಹಚ್ಚಲಾರಂಭಿಸಿದಳು. ಅಲ್ಲಲ್ಲ ಮಂದವಾದ ಬೆಳಕು ಪಸರಿಸಿತು.
ಅಪ್ಪಣ್ಣ ನಮ್ಮಿಬ್ಬರಿಗೂ ಅಲ್ಲಿಯೇ ಕುಳಿತುಕೊಳ್ಳಲು ಹೇಳಿದರು ನಾವಲ್ಲದೇ ಅಲ್ಲಿ ಅನೇಕ ಹಿರಿಯರಿದ್ದರು.
ನನಗೆ ಕಟ್ಟೆಯ ಮುಂದೆ ಶಾಂತವಾಗಿ ಕಣ್ಣುಮುಚ್ಚಿ ಕುಳಿತ ಸಾವಿರಾರು ಜನ ಕಂಡು ನಡುಕ ಪ್ರಾರಂಭವಾಯಿತು. ಆಗ ಅಪ್ಪಣ್ಣ ಮೆಲುದನಿಯಲ್ಲಿ ಈಗ ಇಷ್ಟಲಿಂಗ ಪೂಜೆ ಪ್ರಾರಂಭಿಸೋಣ ಎಂದರು.
ನಾನು ಮೆಲುವಾಗಿ ಹೇಳಿದೆ ನನ್ನ ಹತ್ತಿರ "ಲಿಂಗಪ್ಪ" ಇಲ್ಲ.
ನಸುನಕ್ಕು ಹೊರಗಿನ ಲಿಂಗಪ್ಪನಿಗಿಂತ ಕಣ್ಣುಮುಚ್ಚಿ ನಿನ್ನೊಳಗಿನ ಲಿಂಗಪ್ಪನ ನೋಡು ಎಂದರು.
ಕಣ್ಣುಮುಚ್ಚಿ ನನ್ನೊಳಗೆ ನಾನು ಲೀನವಾದೆ.
"ಗುರಣ್ಣಾ" ಎಂದು ಅಪ್ಪಣ್ಣ ಕರೆದಾಗಲೇ ಎಚ್ಚರ.
ಇದುವರೆಗೆ ನಿದ್ದೆ ಮಾಡುತ್ತಿದ್ದೆನಾ? ಎಚ್ಚರವಾಗಿದ್ದೆನಾ? ಎಲ್ಲವನ್ನು ಮರೆತು ಏನು ಕಾಣುತ್ತಿದ್ದೆ? ಇದೊಂದು ರೀತಿಯ ಮರವೆಯ ಜಡ್ಡಾ?
ಗೊಂದಲಕ್ಕೊಳಗಾಗಿದ್ದೆ.
ಆಗ ಅಪ್ಪಣ್ಣ ಮಾತನಾಡಲು ಪ್ರಾರಂಭಿಸಿದರು.
ಅವರ ಮಾತಿನಲ್ಲಿ ಗುರು, ಲಿಂಗ ಮತ್ತು ಜಂಗಮದ ವಿವರಣೆ ಕೊಟ್ಟರು ಎನ್ನುವದು ಗೊತ್ತಾಯಿತು ಅಷ್ಟೇ.
ತಮ್ಮ ಮಾತಿನ ಕೊನೆಗೆ ನಮ್ಮಿಬ್ಬರನ್ನು ತೋರಿಸಿ ಇವನು "ಗುರಣ್ಣ" ಈಕೆ "ಗಂಗಕ್ಕ" ಇವರು ಕೂಡಲಸಂಗಮದ ಸಮೀಪದ "ಗಂಜೀಹಾಳ" ದಿಂದ ಇಂದು ಬಂದಿದ್ದಾರೆ ಇಂದಿನ ದೀಪ ದಾಸೋಹ ಇವರ ಕಾಯಕದ ಫಲ ಎಂದರು.
ನಾವಿಬ್ಬರು ಎದ್ದು ನಿಂತು "ಶರಣು ಶರಣಾರ್ಥಿ" ಎಂದೆವು ನಮಗರಿವಿಲ್ಲದೆ.
ಅಲ್ಲಿದ್ದವರೆಲ್ಲ "ಶರಣು ಶರಣಾರ್ಥಿ" ಎಂದರು. ನನ್ನನ್ನು ಚಪ್ಪಾಳೆ ಬಡಿದು ಅಭಿನಂದಿಸಿದರು. ಯಾಕೆ ಗೊತ್ತಾಗಲಿಲ್ಲ.
ಹೊರಡುವಾಗ ಅಪ್ಪಣ್ಣ ಹೇಳಿದರು ನೀವು ಮಾಡಿದ್ದು “ಕಾಯಕ ದಾಸೋಹ ಸೇವೆ” ಕೇಳಿ ಸಂತೋಷವಾಯಿತು.
ಉಳಿದ ಎಣ್ಣೆ ತೆಗೆದುಕೊಂಡು ಹೋಗು ಎಂದು ಹೇಳಿದ ಅಪ್ಪಣ್ಣನಿಗೆ ಶರಣು ಹೇಳಿ ಕಟ್ಟೆ ಇಳಿದು ಬಂದೆವು.

ಸಾಲಾಗಿ ನಿಂತ ಜನರ ಒಂದು ಸಾಲು ಸೇರಿಕೊಂಡೆವು. ನನ್ನ ಸರದಿ ಬಂದಾಗ ಅಲ್ಲಿದ್ದ ಮಗು ನನ್ನ ಕೈಗೊಂದು ಎಲೆ ಕೊಟ್ಟಿತು, ಅವಳ ತಾಯಿ ಗಂಡನ ಕೈಯಲ್ಲಿದ್ದ ಬಾನದ ಗಡಿಗೆಯಿಂದ ಬಾನ ಹಾಕಿ ಇನ್ನಷ್ಟು ಬೇಕೇ ಅಣ್ಣಾ ಅಂದಳು. (ಅದು ಆ ಕುಟುಂಬದ ಕಾಯಕ ದಾಸೋಹ ಎಂದು ನನಗರ್ಥವಾಯಿತು).
ಸಾಕಕ್ಕ ಎಂದು ಮುಂದೆ ಸಾಗಿದೆ.
ನಾವಿಬ್ಬರೂ ಪ್ರಸಾದ ಸೇವಿಸಲು ಜಾಗ ಹುಡುಕುತ್ತಿರುವಾಗ ಅಲ್ಲಿಯೇ ಸನಿಹದಲ್ಲಿದ್ದ ಮೋನಣ್ಣಾ, ಶಂಕರಮ್ಮ ಕಂಡರು. ಅವರು ಬೇರೆ ಗುಂಪಿನಲ್ಲಿ ವಚನ ಅಭ್ಯಾಸ ಮಾಡಿರುವದಾಗಿ ಹೇಳಿದರು.
ನಾವಿಬ್ಬರೂ ಅವರ ಸನಿಹ ಕುಳಿತುಕೊಂಡು ಪ್ರಸಾದ ಸೇವಿಸಿದೆವು.
ಆ ಪ್ರಸಾದದ ರುಚಿ ಎಂದೆಂದೂ ಮರೆಯಲು ಸಾಧ್ಯವಿಲ್ಲ. ಮೌನವಾಗಿ ಪ್ರಸಾದ ಸೇವಿಸಿ ಎದ್ದು ಎಲೆಯನ್ನು ತೊಟ್ಟಿಯಲ್ಲಿ ಹಾಕಿ ಕೈ ತೊಳೆದು ನೀರು ಕುಡಿದು ಒಂದು ಕಡೆ ನಿಂತೆವು.
ಅಲ್ಲಿಯ ಶಿಸ್ತು ಸಂಯಮ ನೋಡುವಂತಿತ್ತು. ಆಗ ನಾನು ಮೋನಣ್ಣನಿಗೆ "ಅಣ್ಣಾ, ಸ್ವಲ್ಪ ಚಿವುಟು. ನಾನು ಕನಸಿನಲ್ಲಿದ್ದೇನೆಯೇ? ತಿಳಿಯಬೇಕಾಗಿದೆ" ಎಂದು ಹೇಳಿದೆ.
ಅವ ನಗುತ್ತ ಹೇಳಿದ ಇದು ನಿಜ, ನಾಳೆ ಬೆಳ್ಳಿಚಿಕ್ಕಿ ಮೂಡುವಷ್ಟರಲ್ಲಿ ತಯಾರಾಗಿರಿ ನಾನು ಬರುತ್ತೇನೆ ನಾಲ್ಕೈದು ದಿನ ಊರಿಗೆ ಹೋಗಬೇಕು.
" ಸರಿ ಅಣ್ಣ" ಎಂದು ಹೇಳಿದೆ ಏಕೆ ಎಂದು ಕೇಳಲಿಲ್ಲ ಅವನ ಮಾತು ನನಗೆ ದೇವವಾಣಿ ಎನಿಸಿತ್ತು.
ಶಂಕರಮ್ಮ " ನಿಮಗೆ ನಿಮ್ಮ ಮನೆ ಸಿಗುತ್ತಾ?" ಎಂದಳು.
"ಹೂಂ" ಎಂದೆ. ಕಲ್ಯಾಣದಲ್ಲಿ ನಮ್ಮ ಒಂದು ಮನೆ ಇದೆ ಎನ್ನುವದಾಗ ನೆನಪಾಯಿತು.
ನನ್ನ ಬಂಡಿಯ ಸಮೀಪ ಬಂದಾಗ ಅಲ್ಲಿದ್ದ ಎಲ್ಲ ಎತ್ತುಗಳಿಗೆ ಹಸಿಮೇವು ಹಾಕಿದ್ದರು. ಬಂಡಿಯಲ್ಲೂ ಒಂದು ಹೊರೆ ಮೇವಿತ್ತು. ನನಗಾಗ ಗೊತ್ತಾಯಿತು ಪಶು ಪಕ್ಷಿಗಳನ್ನು ಇಲ್ಲಿಯವರು ಪ್ರೀತಿಸುತ್ತಾರೆ, ಕಾಳಜಿಮಾಡುತ್ತಾರೆ ಮತ್ತು ದಾಸೋಹ ಮಾಡುತ್ತಾರೆ ಎಂದು. ಮನೆಯ ಖಾಲಿಜಾಗದಲ್ಲಿ ಹುಲ್ಲುಬೆಳೆದು ತಂದು ದಾಸೋಹ ಮಾಡುತ್ತಾರೆಂದು ಆಮೇಲೆ ಗೊತ್ತಾಯಿತು.
ಬಂಡಿ ಏರಿ ಮನೆಗೆ ಬಂದು ಮುಟ್ಟಿದೆವು.
ಬೇಗ ಏಳಬೇಕಾಗಿದ್ದರಿಂದ ಏನು ಮಾತನಾಡದೇ ಮಲಗಿಕೊಂಡೆವು. ಮೌನವೇ ಹಿತವೆನಿಸಿತು.
ನಿದ್ದೆ ಯಾವಾಗ ಬಂತು ಗೊತ್ತಾಗಲಿಲ್ಲ.




## ನನ್ನಾಕೆಗೆ ಸಿಕ್ಕ ಮಹಾತವರುಮನೆ:

ಎಂದಿನಂತೆ ಬೇಗ ಎದ್ದು ತಯಾರಾಗಿ ಹೊರಗೆ ಬಂದು ಮನೆಯ ಕೊಂಡಿ ಹಾಕಿದೆ. ಅಂಗಳದಲ್ಲಿ ಬಂಡಿ ಹೂಡಿ ಅದರಲ್ಲಿ ನಿನ್ನೆ ಬಂದ ಶೇಂಗಾ ಹಿಂಡಿ ಮತ್ತು ಮೇವು ಹೇರಿಕೊಂಡು ಬಂದೆ.
ಆಕೆ ತನ್ನ ಕೈಯಲ್ಲಿಯ ಎರಡು ಚೀಲಗಳನ್ನು ಬಂಡಿಯಲ್ಲಿಟ್ಟಳು. ಕಟ್ಟೆಯ ಮೇಲೆ ಕುಳಿತು ಮೋನಣ್ಣನಿಗಾಗಿ ಕಾಯತೊಡಗಿದೆವು.
ಸ್ವಲ್ಪ ಹೊತ್ತಿನಲ್ಲಿ ಮೋನಣ್ಣನ ಬಂಡಿ ಅಲ್ಲಿಗೆ ಬಂತು ಅವನು "ಶರಣು, ನನ್ನ ಬಂಡಿ ಹಿಂದೆ ಬನ್ನಿ" ಎಂದು ಮುಂದೆ ಸಾಗಿದ. ನಾನು "ಶರಣೆಂದು" ಗಾಡಿ ಹೂಡಿ ಅವನ ಬಂಡಿ ಹಿಂದೆ ಸಾಗಿದೆ.
ಮುಂದೆ ಹೋಗುವಷ್ಟರಲ್ಲಿ ಆಕಾಶ ನಸು ಕೆಂಪಾಗಿ ಸೂರ್ಯ ಮೂಡುವ ಲಕ್ಷಣ ಕಾಣತೊಡಗಿತ್ತು. ಅಷ್ಟರಲ್ಲಿ ಮೋನಣ್ಣ ಬಂಡಿ ವೇಗ ಹೆಚ್ಚಿಸಿ ಅಲ್ಲಿದ್ದ ಬಂಡಿಗಳ ಸಾಲನ್ನು ಸೇರಿಕೊಂಡ ನಾನು ಅವನ ಹಿಂದೆಯೇ ಸಾಲು ಸೇರಿಕೊಂಡೆ.
ಹೆಂಡತಿ ಪಕ್ಕದಲ್ಲಿದ್ದಾಳೆಂಬುದು ಆಗ ನೆನಪಾಯಿತು.
ಚೀಲಗಳಲ್ಲೇನಿದೆ? ಕೇಳಿದೆ.
"ಈಗ ನಾನೂ ಬಂಡ್ಯಾಗ ಅದೀನಿ ಅಂತ ನೆನಪಾಯಿತು ರಾಯರಿಗೆ. ಒಂದರಲ್ಲಿ ನಮ್ಮಿಬ್ಬರ ಬಟ್ಟೆ ಇನ್ನೊಂದರಲ್ಲಿ ಹುಣಸಿಟಕ್ಕಿನ ಗಡಗಿ" ಎಂದು ಹೇಳಿದಾಗ ನನಗೆ ಅಚ್ಚರಿ. "ಏನ ಹುಂಚಿಹಣ್ಣು ತಿನಬೇಕು ಅನಿಸ್ಯೆತೇನು?" ಎಂದು ಗೇಲಿಮಾಡಿದೆ. "ಇಲ್ಲಾರೀ, ಅದರದೊಂದು ದೊಡ್ಡ ಕಥೆ" ಎಂದಳು.
ನಿನ್ನೆ ನಡೆದ ಘಟನೆ ವಿವರಿಸಿದಳು. ಅದನ್ನು ಅವಳ ಮಾತಲ್ಲೇ ಕೇಳಿ.

### ನನ್ನ ಹೆಂಡತಿ ಮಹಾಮನೆಯಲ್ಲಿ ಕಳೆದ ದಿನ (ಅವಳ ಮಾತಿನಲ್ಲಿ)

ನಾನು ಮತ್ತು ಶಂಕರಕ್ಕ ದಾಸೋಹಕ್ಕೆ ಹೋಗುವಾಗ ಆಕೆ ಹೇಳಿದಳು.
"ಇಂದು ನನಗೆ ಯಾವ ಕೆಲಸ ಇಲ್ಲ ಅದಕ್ಕ ದಾಸೋಹದ ಕೆಲಸ ಮಾಡಲಾಕ ಹೊಂಟೇನಿ. ನಿನಗ ಇಷ್ಟ ಆಗುತ್ತಲ್ಲ?."
ನಾನು " ಇದಕ್ಕಿಂತ ದೊಡ್ಡ ಭಾಗ್ಯ ಏನ್ಯೆತಿ ಅಕ್ಕ" ಎಂದೆ.

ನಾವಿಬ್ಬರೂ ಹೋದಾಗ ಅಲ್ಲಿದ್ದದ್ದು ಒಂದು ದೊಡ್ಡ ಹಂದರ ಹಾಕಿದ ಬಯಲು ಮನೆ. ಅಲ್ಲಿ ಅನೇಕ ಸಣ್ಣ ದೊಡ್ಡ ಬೀಸುಕಲ್ಲುಗಳಿದ್ದವು. ಎಲ್ಲ ಕಲ್ಲುಗಳಲ್ಲಿ ಹೆಣ್ಣುಮಕ್ಕಳು ಜೋಳ ಬೀಸಿ ಹಿಟ್ಟು ಮಾಡುತ್ತಿದ್ದರು. ಅಲ್ಲಿ ಒಂದೇ ಒಂದು ದೊಡ್ಡ ಬೀಸುಕಲ್ಲು ಖಾಲಿ ಇತ್ತು. ಇಲ್ಲಿಯೇ ಬೀಸೋಣ ಇಬ್ಬರಿಗೆ ಕಲ್ಲು ತಿರಗತ್ತೈತೆ ಇಲ್ಲ ನೋಡೋಣ ಎಂದು ಬೀಸಲು ಕುಳಿತೆವು. ಅಲ್ಲಿ ಮಗ್ಗುಲಲ್ಲಿ ಒಂದು ಪುಟ್ಟಿ ತುಂಬ ಜೋಳ ಇತ್ತು.



ಅಂತೂ ಇಂತೂ ಬೀಸಲು ಪ್ರಾರಂಭಿಸಿದ ಸ್ವಲ್ಪ ಹೊತ್ತಾಗಿತ್ತು ಅಷ್ಟರಲ್ಲಿ ನನ್ನ ದೊಡ್ಡಮ್ಮನ ವಯಸ್ಸಿನ ಹೆಣ್ಣುಮಗಳು ಅಲ್ಲಿಗೆ ಬಂದಳು. ಆಕೆಯನ್ನು ನೋಡಿದ ಕೂಡಲೇ ನನಗೆ ಎದ್ದು ಕಾಲ್ಮುಗಿಯಬೇಕೆನಿಸಿತು.
ಅಲ್ಲಿದ್ದವರ ಜೊತೆ ನಾವೂ ಶರಣು ಶರಣಾರ್ಥಿ ಎಂದೆವು. ಆಕೆ ಮುಂದೆ ಹೋಗದೆ ನಮ್ಮ ಬೀಸುಕಲ್ಲಿನ ಮುಂದೆ ಕುಳಿತು ನಮ್ಮ ಜೊತೆ ಬೀಸಲು ಕೈಜೋಡಿಸಿದರು
ಶಂಕರಕ್ಕ ನನ್ನ ಕಿವಿಯಲ್ಲಿ ಉಸಿರಿದಳು "ಇವರು ಅಕ್ಕನಾಗಮ್ಮ, ಅಣ್ಣಾ ಬಸವಣ್ಣನವರ ಅಕ್ಕ" ಎಂದು.
"ಇಬ್ಬರ ಇಂಥಾ ದೊಡ್ಡ ಕಲ್ಲ ಹ್ಯಾಂಗ ತಿರುಗುಸುತ್ತಿದ್ದಿರಿ ಶಂಕರವ್ವ" ಎಂದು ಮಾತಿಗೆ ಪ್ರಾರಂಭಿಸಿದರು.
"ಏನ ಅಂಥಾ ಕಷ್ಟ ಆಗಲಿಲ್ಲ ಅಕ್ಕಾ. ಈಕಿ ಗಂಗವ್ವ ಅಂತ ಕೂಡಲಸಂಗಮದ ಹತ್ತಿರದ ಗಂಜೀಹಾಳದಿಂದ ಇವತ್ತೇ ಬಂದಾರ" ಅಕ್ಕನಾಗಮ್ಮನಿಗೆ ನನ್ನ ಪರಿಚಯಿಸಿದಳು ಶಂಕರಕ್ಕ.
ಬೀಸುವದು ನಡೆದಿತ್ತು. ಅಕ್ಕ ಮುಗುಳ್ನಕ್ಕು ಏನೋ ಯೋಚಿಸಹತ್ತಿದಳು. ಅಷ್ಟರಲ್ಲಿ ಅಲ್ಲಿಗೆ ಇನ್ನೊಬ್ಬ ಹೆಣ್ಣುಮಗಳು ಬಂದಳು. ಆಕೆ ದಂತದ ಗೊಂಬೆಯಂತಿದ್ದಳು. ಅಲ್ಲಿದ್ದ ಎಲ್ಲರೂ "ಶರಣು ಶರಣಾರ್ಥಿ" ಎಂದರು ನಾವೂ ದನಿಗೂಡಿಸಿದೆವು. ಆಕೆ ಶರಣು ಶರಣಾರ್ಥಿ ಎನ್ನುತ್ತ ಬಂದು ಕುಳಿತು ನಮ್ಮ ಬೀಸುಕಲ್ಲಿಗೆ ಕೈಗೂಡಿಸಿದರು.
ಅಕ್ಕನಾಗಮ್ಮ ಹೇಳಿದಳು "ನೋಡು ಗಂಗಾಂಬಿಕೆ ಈ ತಂಗಿಯ ಹೆಸರೂ ಗಂಗವ್ವ. ಸಂಗಮದ ಹತ್ತಿರದ ಗಂಜೀಹಾಳದಿಂದ ಬಂದಿದ್ದಾಳೆ" ಎಂದರು ನನ್ನ ತೋರಿಸುತ್ತ.
"ನಿಮ್ಮೂರಿಗೆ "ಗಂಜೀಹಾಲು" ಅಂತಿದ್ದರೆ ಎಷ್ಟ ಚನ್ನಾಗಿರುತ್ತಿತ್ತು ತಂಗಿ" ಎಂದರು ನನ್ನನ್ನು ನೋಡುತ್ತ.

"ಮೊದಲ ಹಾಂಗ ಇರಬೇಕು, ಬರಗಾಲ ಬಿದ್ದು ಊರು ಹಾಳಾದ ಮೇಲೆ ಗಂಜೀಹಾಳ ಆಗಿರಬೇಕು" ಎಂದರು ಅಕ್ಕನಾಗಮ್ಮ.
"ಗಂಜೀಗೆ ಹಾಲು ಹಾಕಿಕೊಂಡು ಕುಡದರೆ ತುಂಬಾ ರುಚಿ ಇರುತ್ತದೆ" ಎಂದರು ಗಂಗಾಂಬಿಕೆ.
"ಬಸವನ ಕೇಳುನ ಹೂಂ ಅಂದರ ಇನ್ನ ಮುಂದೆ ಪ್ರಸಾದದಾಗ ಗಂಜಿ ಜೊತೆ ಮಜ್ಜಿಗಿ ಬದಲು ಹಾಲು ಕೊಡಲಾಕ ಹತ್ತೂನ" ಎಂದರು ಅಕ್ಕನಾಗಮ್ಮ.
ಅಷ್ಟರಲ್ಲಿ ಅಕ್ಕನಾಗಮ್ಮನಿಗೆ ಏನೋ ನೆನಪಾಗಿ ಹೇಳಿದರು
"ನಾವು ಸಣ್ಣವರಿದ್ದಾಗ ನಿಮ್ಮೂರಿನ ಒಬ್ಬ ಹೆಣ್ಣುಮಗಳು ಪುಟ್ಟಿ ಹೊತಗೊಂಡು ಎಣ್ಣೆ ಮಾರಲಾಕ ಬರತಿದ್ದಳು. ಆಕೆ ಬಂದಾಗ ನಾನು, ಬಸವ ಮತ್ತು ಶಿವಣ್ಣ ಆಕೆ ಮುಂದ ಕೈಚಾಚತಿದ್ದೀವಿ ಆಕೆ ಅಂಗೈಯ್ಯಾಗ ಹುಣಸಿಟಕ್ಕು ಹಾಕುತ್ತಿದ್ದಳು ನಾವೆಲ್ಲ ಅದನ್ನ ನೆಕ್ಕತಿದ್ದೀವಿ ತುಂಬಾ ರುಚಿಯಾಗಿರುತ್ತಿತ್ತು. ಒಮ್ಮೆ ಬಿಸಿರೊಟ್ಟಿ ತಿನಲಾಕ ಚಾಲೂಮಾಡಬೇಕು ಅನ್ನುವಷ್ಟರಲ್ಲಿ ಆಕೆ ಬಂದಳು, ಆಕಿ ಹೆಸರು ನೆನಪಾತ ನೋಡು "ಗರುಬಸವ್ವ", ಆಕಿ ಬಿಸಿರೊಟ್ಟಿಮ್ಯಾಗ ಹುಣಶಿಟಕ್ಕು ಮತ್ತು ಕುಸಬಿಎಣ್ಣೆ ಹಾಕ್ಕೊಂಡು ತಿನ್ನರಿ ಅಂತ ಒಂದು ಕುಡಕಿ ತುಂಬ ಟಕ್ಕು ಮತ್ತು ಒಂದು ಕುಡಕಿ ತುಂಬ ಕುಸುಬಿ ಎಂಣೆ ಕೊಟ್ಟಳು. ಅದು ಎಷ್ಟು ರುಚಿಯಾಗಿತ್ತು ಗೊತ್ತ ಏನ ಈಗ ನೆನಸಿಕೊಂಡರೂ ಬಾಯಾಗ ನೀರು ಬರತೈತಿ" ಎಂದರು ಎಲ್ಲ ಬಾಲ್ಯದ ಸವಿ ನೆನಪುಗಳನ್ನು ನೆನಪಿಸುತ್ತ.
"ಆಕಿ ಹೆಸರು ಎಷ್ಟ ಚಂದ ಅದರಾಗ ಗುರು, ಬಸವಾ ಮತ್ತ ಅವ್ವ ಅಂತ ಮೂರು ಶಬ್ದ ಅದಾವ" ಅಂದರು ಗಂಗಾಂಬಿಕೆ. ಬಸವಾ ಎನ್ನುವಾಗ ನಸುನಾಚಿಕೆ ಇತ್ತು ಆಕೆಯ ಮುಖದಲ್ಲಿ.
"ಆಕಿ ನಮ್ಮಜ್ಜಿ ನಮ್ಮವ್ವನ ಅವ್ವ ಮತ್ತು ನಮ್ಮವರ ಅಪ್ಪನ ಅವ್ವ" ಎಂದೆ ಸಂಕೋಚದಿಂದ.
ಶಂಕರಮ್ಮ ದನಿಗೂಡಿಸಿದಳು
"ಅಕ್ಕ ಇವಳ ಮನೆಯವರ ಹೆಸರು ಗುರುಲಿಂಗಪ್ಪ ಅದರಾಗ ಗುರು, ಲಿಂಗ ಮತ್ತು ಅಪ್ಪ ಅಂತ ಮೂರು ಶಬ್ದ ಅದಾವ"
ಅಕ್ಕನಾಗಮ್ಮ ಕೇಳಿದರು "ನಿಮ್ಮ ತವರಮನಿ ಹೆಸರೇನು" ಎಂದರು.
ಸಂಕೋಚದಿಂದ ಹೇಳಿದೆ "ಅಮ್ಮಕ್ಕನವರ".
"ಇಲ್ಲಿ ಮೂರು ಶಬ್ದ ಅಮ್ಮ, ಅಕ್ಕ ಮತ್ತು ಅವರು.
"ಆದರ ಅವರು ಅಂದರೇನು ಗೊತ್ತಾಗಲಿಲ್ಲ" ಎಂದರು ಗಂಗಾಂಬಿಕೆ.
" ಅವರು ಅಂದರ ಅವರು" ಎಂದು ಮೇಲಕ್ಕೆ ಕೈಮಾಡಿ ತೋರಿದರು ಅಕ್ಕನಾಗಮ್ಮ.
ಇವರ ಮನಿಮಂದಿ ಹೆಸರಿನ್ಯಾಗ

"ಗುರು, ಲಿಂಗ, ಜಂಗಮ(ಅವರು), ಅವ್ವ, ಅಪ್ಪ, ಅಮ್ಮ, ಅಕ್ಕ" ಎಲ್ಲಾ ಆದಾರ ಅಂದಳು ಗಂಗಾಂಬಿಕೆ. ಅಕ್ಕನಾಗಮ್ಮ ನಗುತ್ತ ಅಂದರು "ಬಸವ" ಅನ್ನುವ ಒಂದ ಹೆಸರು ಮರೆತೆ"
ಶಂಕರಕ್ಕ ದನಿಗೂಡಿಸಿದಳು " ಅಕ್ಕ ಮತ್ತು ಗಂಗವ್ವ ಎರಡೂ ಹೆಸರೂ ಆದಾವ."
ಅಕ್ಕನಾಗಮ್ಮ, ಗಂಗಾಂಬಿಕೆ ಮತ್ತ ಶಂಕರಕ್ಕ ನಕ್ಕರು.
"ಆ ಮನೆಯಿಂದ ಈ ಮಹಾಮನೆಗೆ ಬಂದು ನಿಮ್ಮೆಲ್ಲರ ದರ್ಶನ ಆದದ್ದು ನನ್ನ ಭಾಗ್ಯ" ಎಂದೆ ನಾನು ತಲೆಬಾಗಿ. ಮಾತನಾಡುತ್ತ ಮಾತನಾಡುತ್ತ ಪುಟ್ಟಿ ಖಾಲಿಯಾದದ್ದು ಗೊತ್ತಾಗಲಿಲ್ಲ. ಎಲ್ಲರೂ ಎದ್ದು ಕೈತೊಳೆದುಕೊಂಡು ಬಂದೆವು. ಎಲ್ಲರೂ ಕೆಲಸ ಮುಗಿಸಿ ಅಲ್ಲಿ ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯವರಿಗಾಗಿ ಕಾಯುತ್ತಿದ್ದರು. ಅವರೆಲ್ಲರ ಮಧ್ಯೆ ಬಂದು ಕುಳಿತಕೊಂಡ ಅವರಿಬ್ಬರೂ ಅಲ್ಲಿದ್ದವರ ಯೋಗಕ್ಷೇಮ ವಿಚಾರಿಸಿದರು.
ನಾನು ತವರುಮನೆಗೆ ಹೋದಾಗ ನಮ್ಮವ್ವ ನನ್ನ ಯೋಗಕ್ಷೇಮ ವಿಚಾರಮಾಡುತ್ತಿದ್ದ ದೃಶ್ಯ ನೆನಪಾಯಿತು.
ಆಗ ಅಲ್ಲಿದ್ದವರೊಬ್ಬರು ಅಕ್ಕಾ ಒಂದು ವಚನ ಹೇಳಿ ಎಂದರು. ಅಕ್ಕ ನಾಗಮ್ಮನವರುತಾವೇ ರಚಿಸಿ ಹಾಡಿದ ವಚನ:

**ಶ್ರೀಗುರುವೆ ತಾಯಿತಂದೆಯಾಗಿ, ಲಿಂಗವೆ ಪತಿಯಾಗಿ,**

**ಜಂಗಮವೆ ಅತ್ತೆಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ,**

**ಸತ್ಯಸದಾಚಾರವೆಂಬ ಮನೆಗೆ ಕಳುಹಿದರಾಗಿ, ಶರಣಸತಿ ಎಂಬ ನಾಮ ನಿಜವಾಯಿತ್ತು.**

**ಆದಂತೆ ಇರುವೆ, ಹಿಂದುಮುಂದರಿಯದೆ ನಡೆವೆ.**

**ಮನಕ್ಕೆ ಮನಸಾಕ್ಷಿಯಾಗಿ ಮಾಡುವೆ, ಬಸವಣ್ಣಪ್ರಿಯ ಚೆನ್ನಸಂಗಯ್ಯಾ ನಿಮ್ಮಡಿಗಳಿಗೆ** /14

------ ಅಕ್ಕನಾಗಮ್ಮ

ನಾವೆಲ್ಲ ಅವರ ಜೊತೆ ದನಿಗೂಡಿಸಿದೆವು.
ಆಮೇಲೆ ನಾವೆಲ್ಲ ಜೊತೆಯಾಗಿ ಆ ವಚನ ಹಾಡಿದೆವು. ವೇಳೆಯಾಗುತ್ತ ಬಂದಿತು ಹೋಗಿ ಬನ್ನಿ ಎಂದರು. ನಾವಿಬ್ಬರು ಎದ್ದು ಹೊಗಿ ಅವರಿಗೆ ಶರಣು ಶರಣಾರ್ಥಿ ಎಂದೆವು. ಹೊರಡುವಾಗ ನನಗರಿವಿಲ್ಲದಂತೆ ಹೇಳಿದೆ
"ಅಕ್ಕ ನಾನು ಬರುವಾಗ ಒಂದು ಗಡಿಗೆ ಹುಂಚಿಟಕ್ಕು ತಂದೀನಿ. ತಂದುಕೊಡತೀನಿ ನೀವೆಲ್ಲ ರುಚಿನೋಡಿ"
"ಅವರು ಭಕ್ತರ ಬಿಟ್ಟು ಏನೇನೂ ತಿನ್ನೂದಿಲ್ಲ, ಏನು ಮಾಡುವದು" ಎಂದರು ಗಂಗಾಂಬಿಕೆ.
"ನಾಳೆ ನಾವು ಬಸವನ ಕೂಡ ಅವನ ಗೆಳೆಯನ ಊರಿಗೆ ಹೊಂಟೇವಿ ನೀವು ನಾಲ್ಕೂ ಜನ ನಮ್ಮ ಜೊತೆಗೆ ಬನ್ನಿ. ಅಲ್ಲಿ ಕಮ್ಮಿ ಜನ ಇರ್ತೇವಿ ಒಮ್ಮೆ ಊಟಾ ಮಾಡುವಾಗ ನೀನೇ ಬಸವನಿಗೆ ಬಡಿಸು ಆನಂದ ಪಡತಾನ" ಎಂದರು ಅಕ್ಕನಾಗಮ್ಮ. ನಾನು ಹಿಂದ ಮುಂದ ನೋಡದೆ "ಆಗಲಿ ಅಕ್ಕ" ಎಂದೆ.

ಹೊರಗೆ ಬಂದಮೇಲೆ ಶಂಕರಕ್ಕನಿಗೆ ಹೇಳಿದೆ
"ಅಕ್ಕ ನಿಮ್ಮನ್ನು ಕೇಳದೆ ಒಪ್ಪಿಬಿಟ್ಟೆ ಕ್ಷಮಿಸಿಬಿಡು ಎಂದೆ"
ಶಂಕರಕ್ಕ "ಅಣ್ಣ ಬಸವಣ್ಣನವರನ್ನೊಮ್ಮೆ ನೋಡಿದರೆ ಜೀವನ ಪಾವನ. ನೀನು ಅವರೆಲ್ಲರೊಡನೆ ಕಾಲ ಕಳೆಯುವ ಭಾಗ್ಯ ಒದಗಿಸಿದೆ. ಅದು ನಮ್ಮ ಪುಣ್ಯ" ಎಂದಳು. ಸಮಾಧಾನವಾಯಿತು.
ಈ ಕಡೆ ಬರುವ ಶಂಕರಕ್ಕನವರ ಪರಿಚಿತರ ಬಂಡಿಯಲ್ಲಿ ಮನೆಗೆ ಹೊರಟೆವು.
ಇಷ್ಟು ಹೇಳುವಷ್ಟರಲ್ಲಿ ಆಕೆಯ ಕಣ್ಣು ತುಂಬಿ ಬಂದಿತ್ತು.
ನಾಳೆಗೇನು? ಎಂಬುದನ್ನು ನೆನೆದು ಆಕೆಯ ಕಣ್ಣು ತುಂಬಿ ಬಂದಿತ್ತು ಅಂದು ಗಂಜೀಹಾಳದಲ್ಲಿ, ಮನದ ಸಂತೋಷ ತಡೆಯಲಾರದೆ ಆಕೆಯ ಕಣ್ಣು ತುಂಬಿಬಂದಿತ್ತು ಇಂದು ಕಲ್ಯಾಣದಲ್ಲಿ.ಇದುವೇ ಬಸವ ಕೃಪೆ.

**ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ**

ಬಂಡಿ ಕಲ್ಯಾಣ ದಾಟಿ ದೂರ ಬಂದಿತ್ತು. ನಮ್ಮೂರಿಗೆ ಮರಳಿ ಬಂದೆವೇನೋ ಎನಿಸಿತು. ಎಲ್ಲ ಕಡೆ ಬಿರುಕು ಬಿಟ್ಟಿದ್ದ ಭೂಮಿ, ಅಲ್ಲಲ್ಲಿ ಕಾಣುತ್ತಿದ್ದ ಪ್ರಾಣಿ ಪಕ್ಷಿಗಳ ಮೃತದೇಹಗಳು ಅಲ್ಲಿಯ ಭೀಕರ ಬರಗಾಲದ ವಿವರ ನೀಡುತ್ತಿದ್ದವು. ನೆತ್ತಿಯ ಮೇಲೆ ಸುಡುಬಿಸಿಲು. ಬಿಸಿಲಿನ ತಾಪ ದಿಂದ ಎತ್ತುಗಳು ಭುಸಗುಡಹತ್ತಿದವು.
ಆಗ ಮೋನಪ್ಪನ ಬಂಡಿ ಎಡಗಡೆ ತಿರುಗಿತು ಒಂದು ಕಡೆ ಗಿಡದ ನೆರಳಿನಲ್ಲಿ ನಿಂತಿತು. ನಾನು ಅವನ ಹಿಂದೆ ಹೋಗಿ ಅವನ ಬಂಡಿಯ ಮಗ್ಗಲ ಬಂಡಿ ಕೊಳ್ಳು ಹರಿದೆ. ಆಗಲೇ ಅಲ್ಲಿ ಅನೇಕ ಬಂಡಿಗಳಿದ್ದವು. ಮೊದಲೇ ಬಂದಿದ್ದ ಬಂಡಿ ಹೊಡೆದುಕೊಂಡ ಬಂದವರಲ್ಲೊಬ್ಬ ನೀರು ತಂದು ಎತ್ತಿಗೆ ಕುಡಿಸಹತ್ತಿದ."ನಾನು ಮೇವು ಹಾಕತೀನಿ, ನೀವ ಹೋಗಿ" ಎಂದ. ಅಲ್ಲೊಂದು ದೊಡ್ಡ ಆಲದ ಮರದ ಕೆಳಗಿನ ವಿಶಾಲವಾದ ಕಟ್ಟೆಯ ಮೇಲೆ ಮುಂದಿನ ಬಂಡಿಯಲ್ಲಿ ಬಂದವರು ನೆರಳಿನಲ್ಲಿ ಕುಳಿತಿದ್ದರು.
ನಾವು ಅಲ್ಲಿದ್ದ ಬಾವಿಯಲ್ಲಿ ನೀರು ಸೇದಿ ಕೈಕಾಲು ಮುಖ ತೊಳೆದುಕೊಂಡು ಕಟ್ಟೆಯ ಕಡೆಗೆ ಹೊರಟೆವು.
ಅಷ್ಟರಲ್ಲಿ ಅಲ್ಲಿಂದ ನಾಲ್ಕಾರು ಮಾರು ದೂರದಲ್ಲಿ ಮನೆಯಿಂದ ಮಗು ಮತ್ತು ತಾಯಿ ಬಿಕ್ಕಳಿಸಿ ಅಳುವದು ಕ್ಷೀಣವಾಗಿ ಕೇಳಿಸಿತು.
ಕಟ್ಟೆಯಮೇಲೆ ಕುಳಿತಿದ್ದ ಹೆಣ್ಣುಮಗಳೊಬ್ಬಳು ಎದ್ದು ಆ ಮನೆಯ ಕಡೆ ನಡೆಯತೊಡಗಿದಳು. ನನ್ನಾಕೆ "ಅಕ್ಕನಾಗಮ್ಮ ಹೊರಟಿದ್ದಾರೆ" ನಡೆಯಿರಿ ಎಂದಳು. ಅಕ್ಕನಾಗಮ್ಮ ಆ ಮನೆ ತಲುಪುವಷ್ಟರಲ್ಲಿ ನಾವು ಅಲ್ಲಿದ್ದೆವು.
ಅದೊಂದು ಸಣ್ಣ ಹಳೆಯಕಾಲದ ಮುರುಕಲು ಮನೆ, ಮನೆಯ ಪಕ್ಕ ಚರ್ಮ ಹದಮಾಡುವ ಕಾಯಕ ಮಾಡಲು ಚಪ್ಪರವಿತ್ತು.
ಆ ಮುರುಕಲು ಮನೆಯ ಒಳಹೋದಾಗ ಅಲ್ಲಿ ತಾಯಿ ಜೊತೆ ಮಗುವೊಂದು ಅಳುತ್ತಿತ್ತು. ಅಕ್ಕನಾಗಮ್ಮ ಮಗುವನ್ನೆತ್ತಿಕೊಳ್ಳಲು ಹೋದರು. “ಅಮ್ಮ

ನಮ್ಮನ್ನಾರೂ ಮುಟ್ಟಿಸಿಕೊಳ್ಳುವದಿಲ್ಲ" ಎಂಬ ಆ ತಾಯಿಯ ಕ್ಷೀಣ ದನಿ ಕೇಳಿಸಿತು.
ಆ ಮಾತಿಗೆ ಲಕ್ಷಕೊಡದೇ ಅಕ್ಕನಾಗಮ್ಮ ಮಗುವನ್ನೆತ್ತಿಕೊಂಡು ಹೊರಬಂದರು. ಜೊತೆಗೆ ಶಂಕರಮ್ಮ ಮತ್ತು ನನ್ನಾಕೆ ಆ ತಾಯಿಯ ಕೈಹಿಡಿದು ಹೊರಗೆ ಕರೆದುಕೊಂಡು ಬಂದರು. ಆ ಮಗು ಮತ್ತು ತಾಯಿ ನೋಡಿದರೆ ಗೊತ್ತಾಗುತ್ತಿತ್ತು ಅವರುಂಡು ಕೆಲವು ದಿನವಾಗಿವೆ ಎಂದು.
ಅಕ್ಕನಾಗಮ್ಮ ಮಗುವಿನೊಂದಿಗೆ ಬಾವಿಕಟ್ಟೆಯ ಕಡೆ ನಡೆದರು ನಾನು ಸೇದಿ ಹಾಕಿದ ನೀರಿಂದ ಮಗುವಿನ ಕೈಕಾಲು ಮುಖ ತೊಳೆದು ಸೆರಗಿನಿಂದ ಒರೆಸಿ ಕಟ್ಟೆಯ ನೆರಳಿಗೆ ಕರೆದುಕೊಂಡು ಹೋದರು.
ನಾನು ಬಾಲಕನಾಗಿದ್ದಾಗ ನಮ್ಮಮ್ಮ ಬಿಸಿಲಿನಲ್ಲಿ ಆಡುತ್ತಿದ್ದ ನನ್ನನ್ನು ಮನೆಗೆ ಕರೆದುಕೊಂಡು ಬಂದು ಕೈಕಾಲು ಮುಖ ತೊಳೆದು ಸೆರೆಗಿನಿಂದ ಒರೆಸಿ ಕೈತುತ್ತು ಉಣಿಸುತ್ತಿದ್ದ ದೃಶ್ಯ ನೆನಪಾಯಿತು.
ನನ್ನಾಕೆ ನೀವು ನೀರು ಸೇದಿಟ್ಟು ಹೋಗಿ ಎಂದಳು. ನೀರು ಸೇದಿಟ್ಟು ನಾನು ಕಟ್ಟೆಯ ಕಡೆಗೆ ನಡೆದೆ. ಅಷ್ಟರಲ್ಲಿ ಮೋನಪ್ಪ ಬಂಡಿಯಲ್ಲಿದ್ದ ಬುತ್ತಿಯ ಪುಟ್ಟಿ ಎತ್ತಿಕೊಂಡು ಬಂದಿದ್ದ.
ಆಗ ಅಲ್ಲಿ ಕುಳಿತಿದ್ದ ಹೆಣ್ಣುಮಗಳು (ಗಂಗಾಂಬಿಕೆ ಎಂದು ಆಮೇಲೆ ಗೊತ್ತಾಯಿತು) ಆ ಮಗುವನ್ನು ತೊಡೆಯಮೇಲೆ ಎತ್ತಿಕೊಂಡು ಕುಳಿತುಕೊಂಡರು ಅಕ್ಕನಾಗಮ್ಮ ಕುಡಕೆಯಲ್ಲಿದ್ದ ಗಂಜಿಯನ್ನು ಮಗುವಿನ ಬಾಯಲ್ಲಿ ಹನಿಹನಿಯಾಗಿ ಕುಡಿಸಹತ್ತಿದರು.
ನನ್ನಾಕೆ ಮತ್ತು ಶಂಕರಮ್ಮ ಮಗುವಿನ ತಾಯಿಯ ಕೈ ಕಾಲು ಮುಖ ತೊಳೆದು ಕಟ್ಟೆಯ ಮೇಲೆ ಕೈಹಿಡಿದುಕೊಂಡು ಬಂದು ಕೂಡ್ರಿಸಿದರು.
ಶಂಕರಮ್ಮ ಆ ತಾಯಿಗೆ ತುತ್ತು ಮಾಡಿ ಬಾನ ಉಣ್ಣಿಸಲು ಪ್ರಯತ್ನಿಸಿದರು ಆಕೆ ಬಿಕ್ಕಳಿಸ ಹತ್ತಿದಳು. ನನ್ನಾಕೆ ಬೆನ್ನುಸವರಿ ನೆತ್ತಿಗೆ ಬಡಿದು ಕುಡಿಕೆಯಲ್ಲಿದ್ದ ನೀರನ್ನು ಸ್ವಲ್ಪ ಕುಡಿಸಿದಳು. ಶಂಕರಮ್ಮ ನಿಧಾನವಾಗಿ ತುತ್ತು ಮಾಡಿ ಉಣಿಸ ಹತ್ತಿದರು.
ಆಕೆ ಕೈಮಾಡಿ ಸಾಕು ಎನ್ನುವಷ್ಟರಲ್ಲಿ ಅಕ್ಕನಾಗಮ್ಮ ಅಲ್ಲಿಗೆ ಮಗುವಿನ ಜೊತೆ ಬಂದರು. ಚೇತರಿಸಿಕೊಂಡಿದ್ದ ಮಗು ತನ್ನ ತಾಯಿಯ ತೊಡೆ ಏರಿತು. ಮಗುವಿನ ಮುಖದಲ್ಲಿ ಮುಗಳ್ನಗು ಇತ್ತು.
ಆ ಹೆಣ್ಣುಮಗಳ ಕಣ್ಣು ತುಂಬಿತು ಅಕ್ಕನಾಗಮ್ಮನ ಕಾಲಿಗೆ ಬಿದ್ದು "ದೇವರಂತೆ ಬಂದು ನನ್ನ ಮತ್ತು ಮಗನ ಜೀವ ಉಳಿಸಿದಿರಿ" ಎಂದಳು.
ಅಕ್ಕನಾಗಮ್ಮ ಆಕೆಯನ್ನು ಎಬ್ಬಿಸಿ ಬೆನ್ನಮೇಲೆ ಕೈ ಆಡಿಸುತ್ತ ಎಲ್ಲ ಚನ್ನಸಂಗಯ್ಯನ ಕೃಪೆ, ಅವನಾಟ ಎಂದು ಸಂತೈಸಿದರು.

ತಮ್ಮನ್ನು ಕೀಳಾಗಿ ಕಂಡ ಜನರಿರುವಾಗ ಇಷ್ಟು ಪ್ರೀತಿಸುವ ಇವರು ಮನುಷ್ಯರಲ್ಲ ದೇವರು ಎಂದಾಕೆಗೆ ಮತ್ತು ಅಲ್ಲಿ ನೆರೆದಿದ್ದವರಿಗೂ ಅನಿಸಿದ್ದರಲ್ಲಿ ಅತಿಶಯೋಕ್ತಿಯಿಲ್ಲ.

ಅಷ್ಟರಲ್ಲಿ ಅನೇಕ ಜನ ಇಲ್ಲೇನಾಗುತ್ತದೆ ಎಂದು ನೋಡಲು ನೆರೆದಿದ್ದರು. ಅವರಿಗೆ ಅಲ್ಲಿ ಕಂಡ ದೃಶ್ಯ ನಂಬಲಾಗಲಿಲ್ಲ. ಜಗತ್ತಿನಲ್ಲಿ ಇಂತಹ ಜನ ಇರುತ್ತಾರೆಯೇ? ಬೆರಗಿನಿಂದ ನೋಡುತ್ತಿದ್ದರು.

ಅಲ್ಲಿದ್ದವರೊಡನೆ ಆಗಲೇ ಆತ್ಮೀಯತೆಯಿಂದ ಬೆರೆತು ಅವರ ಸುಖ ದುಃಖ ವಿಚಾರಿಸಹತ್ತಿದ್ದ ಅಣ್ಣ ಬಸವಣ್ಣನವರು ಕಟ್ಟೆ ಹತ್ತಿ ಬಂದರು. ನಾವೆಲ್ಲ ಎದ್ದು ನಿಂತು ಕೈಮುಗಿದೆವು. ಆ ಮಗುವನ್ನು ಎತ್ತಿಕೊಂಡು ಮುದ್ದುಮಾಡಿ ಮಗುವಿನ ತಾಯಿಗೆ "ಚಿಂತೆ ಮಾಡಬೇಡ ತಾಯಿ ಕೂಡಲ ಸಂಗಮದೇವ ನಮ್ಮೆಲ್ಲರನ್ನು ಕಾಯುತ್ತಾನೆ" ಎಂದು ಹೇಳಿ ಮಗುವನ್ನು ಮರಳಿ ಗಂಗಾಂಬಿಕೆಗೆ ಕೊಟ್ಟು ಕೆಳಗಿಳಿದು ಬಂದರು. ಇದೆಲ್ಲವನ್ನು ಬೆರಗಿನಿಂದ ನೋಡುತ್ತಿದ್ದರು ನೆರೆದವರೆಲ್ಲ.

**ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.**

**ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ.**

**ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ**/268

-- – ಅಣ್ಣ ಬಸವಣ್ಣ.

ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯವರು ಯಾವ ಉಪದೇಶ ಮಾಡದೇ ತಮ್ಮ ಕೃತಿಯ ಮೂಲಕ ಸಮಾಜದ ಎಲ್ಲರನ್ನೂ ಒಂದು ಮಾಡಿದ ಘಟನೆ ಇದು. ಕಟ್ಟೆಯ ಸುತ್ತಲೂ ನೆರೆದ ಜನರಲ್ಲಿ ಅನೇಕ ಮಕ್ಕಳು ಇದ್ದರು. ಮಗು ಮತ್ತು ತಾಯಿ ಊಟ ಮಾಡುವದನ್ನು ಆಶೆಗಣ್ಣಲ್ಲಿ ನೋಡುತ್ತ ನಿಂತಿದ್ದರು. ಗಂಗಾಂಬಿಕೆ ಅವರಿಗೆ ಬನ್ನಿ ಮಕ್ಕಳೇ ಪ್ರಸಾದ ಸೇವಿಸಿ ಎಂದದ್ದೇ ಸಾಕು ಅವರೆಲ್ಲ ಓಡಿಬಂದರು. ಕೆಲವು ಮಕ್ಕಳು ಅವರ ತಾಯಂದಿರು ಬೇಡ ಬೇಡ ಎಂದು ಕೈಹಿಡಿದರೂ ಕೊಸರಿಕೊಂಡು ಓಡಿ ಬಂದರು.

ಅವರನ್ನೆಲ್ಲ ಬಾವಿಕಟ್ಟೆಗೆ ಕರೆದುಕೊಂಡು ಹೋಗಿ ಶಂಕರಮ್ಮ ಅವರ ಕೈಕಾಲು ಮುಖ ತೊಳೆಯಹತ್ತಿದ್ದರು. ನನ್ನಾಕೆ ಬಂಡಿಯಲ್ಲಿದ್ದ ಬಟ್ಟೆಚೀಲ ತಂದು ಅದರಲ್ಲಿಂದ ನಮ್ಮ ಉಡುವ ಬಟ್ಟೆಗಳನ್ನು ತೊಗೊಂಡು ಅವರ ಕೈ ಕಾಲು ಒರೆಸಿ ಅವರೆಲ್ಲರನ್ನು ಕಟ್ಟೆಯ ಕಡೆ ಕಳಿಸಿದಳು.

ಅವರೆಲ್ಲ ಕಟ್ಟೆಯ ಮೇಲೆ ಸಾಲಾಗಿ ಕುಳಿತರು. ಅಕ್ಕನಾಗಮ್ಮ ಎಲೆ ಅವರ ಮುಂದಿಟ್ಟರು. ಗಂಗಾಂಬಿಕೆಯವರು ಎಲೆಯಲ್ಲಿ ಬಾನ ಬಡಿಸಿದರು. ಆಗ ಅಲ್ಲಿಗೆ ಬಂದ ನನ್ನಾಕೆ ಬಸವಣ್ಣನವರಿಗಾಗಿಯೇ ಹುಂಚಿಟಕ್ಕು ತಂದಿರುವದನ್ನು ಮರೆತು ಆ ಎಲೆಗಳಲ್ಲಿ ಹುಂಚಿಟಕ್ಕು ಬಡಿಸಿದಳು. ಮಕ್ಕಳೆಲ್ಲ ತಮಗರಿವಿಲ್ಲದಂತೆ ಕೈಮುಗಿದು ಕುಳಿತರು. ಬಾಲಕನೊಬ್ಬ

**ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು.**
**ನೀನಲ್ಲದೆ ಮತ್ತಾರೂ ಇಲ್ಲಯ್ಯಾ ಕೂಡಲಸಂಗಮದೇವಾ**
**ಹಾಲಲದ್ದು ನೀರಲದ್ದು** /673 --- ಅಣ್ಣ ಬಸವಣ್ಣ

ರಾಗವಾಗಿ ಹಾಡಿದ ಉಳಿದವರೆಲ್ಲ ದನಿಗೂಡಿಸಿದರು. ಆಮೇಲೆ ಊಟ ಮಾಡಲಾರಂಭಿಸಿದರು.
ಅವರ ಕಾತರ ಮತ್ತು ಅವರು ಅವಸರ ಅವಸರವಾಗಿ ಉಣ್ಣುವ ಪರಿ ಅವರೆಷ್ಟು ಹಸಿದಿದ್ದರು ಎಂದು ಸೂಚಿಸುತ್ತಿತ್ತು. ನನಗೆ ಅಲ್ಲಿ ದೇವರೇ ಮಕ್ಕಳ ರೂಪದಲ್ಲಿ ಬಂದು ಪ್ರಸಾದ ಸೇವಿಸುತ್ತಿದ್ದಾರೆ ಎನಿಸಿತು.
ಅಕ್ಕನಾಗಮ್ಮ ಮೋನಣ್ಣನನ್ನು ಕರೆದು ನೀನು ಪ್ರಸಾದ ತಯಾರಿಸುವ ವ್ಯವಸ್ಥೆ ಮಾಡು ಎಂದು ಹೇಳಿದರು.
ಮೋನಣ್ಣ ಬಂಡಿಗಳ ಕಡೆಗೆ ನಡೆದ. ಅವನ ಜೊತೆ ನಾನೂ ನಡೆದೆ.
ಅಲ್ಲಿದ್ದವರಲ್ಲಿ ಇಬ್ಬರಿಗೆ ಗಿಡದ ಸಮೀಪದ ನೆರಳಲ್ಲಿ ನಾಲ್ಕು ಗುಂಡಿನೊಲೆ ಹೂಡಲು, ಇನ್ನಿಬ್ಬರಿಗೆ ಕಟ್ಟಿಗೆ ತಂದು ಹಾಕಲು ಹೇಳಿ ತಾನು ಬಂಡಿಯಲ್ಲಿದ್ದ ಚೀಲ ಹೊತ್ತುಕೊಂಡು ಉಳಿದವರಿಗೆ ಅಲ್ಲಿದ್ದ ಹರವೆ ಮುಂತಾದ ಸಾಮಾನುಗಳನ್ನು ತರಲು ಹೇಳಿದ. ನಾನೊಂದು ಹರವಿ ಹೊತ್ತುಕೊಂಡು ನಡೆದೆ.
ಅಷ್ಟರಲ್ಲಾಗಲೇ ತಯಾರಾಗಿದ್ದ ಒಲೆಯಮೇಲೆ ತೊಳೆದ ಹರವಿಯನ್ನಿಟ್ಟೆವು ಇಬ್ಬರು ನೀರು ಹಾಕಿ ತುಂಬಿಸಿ ಒಲೆ ಹಚ್ಚಿದರು. ಅಕ್ಕನಾಗಮ್ಮ ಬಂದು ಅಳತೆಮಾಡಿ ಜೋಳದ ನುಚ್ಚು ಹಾಕಿದರು. ಒಬ್ಬ ಆಗಲೇ ಒಂದು ಹರವೆಯಲ್ಲಿ ಮಜ್ಜಿಗೆ ಮಾಡತೊಡಗಿದ್ದ. ಪ್ರಸಾದ ತಯಾರಾಗುವಷ್ಟರಲ್ಲಿ ಮಕ್ಕಳು ಪ್ರಸಾದ ಮುಗಿಸಿ ಗಿಡದ ನೆರಳಲ್ಲಿ ಉತ್ಸಾಹದಿಂದ ಆಡತೊಡಗಿದ್ದರು. ಅಣ್ಣ ಬಸವಣ್ಣನವರು ಅವರೊಂದಿಗೆ ಮಕ್ಕಳಾಗಿ ಮಾತನಾಡತೊಡಗಿದ್ದರು.
ಅಕ್ಕನಾಗಮ್ಮ ಎಲ್ಲ ಪ್ರಸಾದ ತಯಾರಾದ ಮೇಲೆ ಅಲ್ಲಿ ನೆರೆದಿದ್ದ ಹೆಣ್ಣುಮಕ್ಕಳಿಗೆ ಬನ್ನಿ ಪ್ರಸಾದ ಸೇವಿಸಿ ಎಂದರು. ಅವರು ಒಬ್ಬರ ಮುಖ ಒಬ್ಬರು ನೋಡುತ್ತ ಮೌನವಾಗಿ ನಿಂತರು. ಒಬ್ಬರೂ ಮುಂದೆ ಬರಲಿಲ್ಲ. ಅವರ ಮನದಲ್ಲಿ ಯಾವುದೋ ಸಂಕೋಚ ಮುಖದಲ್ಲಿ ಗಾಬರಿ ಎದ್ದು ಕಾಣಿಸುತ್ತಿತ್ತು.
ಅಷ್ಟರಲ್ಲಿ ಇದನ್ನೆಲ್ಲ ನೋಡುತ್ತ ನಿಂತಿದ್ದ ಒಬ್ಬ ಮುದುಕಿ
"ನನಗ ಹೊಟ್ಟೆ ಹಸಿದು ಸಾಯುಹಂಗ ಆಗ್ಯೆತಿ. ನೀವ ಬರದಿದ್ದರೆ ಬಿಡ್ರಿ, ಜಾತಿ ಪಾತಿ ಅಂತ ಅನಕೊಂತ ಸಾಯಿರಿ." ಎಂದು ಗೊಣಗುತ್ತ ಮುಖ ತೊಳೆಯಲು ಬಾವಿಕಟ್ಟೆ ಕಡೆಗೆ ನಡದೇಬಿಟ್ಟಳು.
ಅಲ್ಲಿ ವಿದ್ಯುತ್ ಸಂಚಾರವಾದಂತಾಯಿತು.
ಅಲ್ಲಿದ್ದ ಮುದುಕಿಯರು ಒಬ್ಬೊಬ್ಬರಾಗಿ ಮುಖ ತೊಳೆದು ಕಟ್ಟೆಯ ಮೇಲೆ ಬಂದು ಕುಳಿತುಕೊಂಡರು. ಅದನ್ನು ನೋಡಿ ಕೆಲ ಯುವತಿಯರು ಮುಂದೆ ಬಂದು ಗಂಗಾಂಬಿಕೆವರೊಡನೆ ಪ್ರಸಾದ ಬಡಿಸತೊಡಗಿದರು.

ಅಲ್ಲಿಗೆ ಊರಿನೊಳಗಿನಿಂದ ಒಬ್ಬ ಮುದುಕ ಅಣ್ಣನವರನ್ನು ನೋಡಿದೊಡನೆ ಅವಸರವಾಗಿ ಬಂದವನೇ "ಶರಣು ಶರಣು" ಎನ್ನುತ್ತ ಅಣ್ಣನವರ ಕಾಲಿಗೆರಗಲು ಹೋದ, ಅಣ್ಣನವರು ಅವನನ್ನು ಮೇಲೆತ್ತಿ ಅಪ್ಪಿಕೊಂಡು
"ಶರಣು ಶಿದ್ದಣ್ಣ ಆರಾಮ ಇದ್ದೀಯಾ?" ಎಂದರು.
ಶಿದ್ದಣ್ಣ "ಹೂಂ ಆಂದರ ತಪ್ಪಾಗತೈತಿ ಎಲ್ಲರೂ ಕಷ್ಟದಲ್ಲಿ ಅದವೀ ಆಣ್ಣ ಬಸವಣ್ಣ, ನಮ್ಮನ್ನೆಲ್ಲ ನೀವೇ ಕಾಯಬೇಕು" ಎಂದು ಕಣ್ಣೀರು ಹಾಕುತ್ತ ಕೈಮುಗಿದು ನಿಂತ.
ಅಣ್ಣ ಅವನ ಕೈಹಿಡಿದು "ಕೂಡಲಸಂಗಮದೇವ ನಂಬಿದವರ ಕಾಪಾಡುತ್ತಾನೆ. ಅವನನ್ನ ನಂಬಿ ಕೆಟ್ಟವರಿಲ್ಲ" ಎಂದರು.
ಆಗ ಅಲ್ಲಿದ್ದವರಿಗೆ ಗೊತ್ತಾಯಿತು ಇದುವರೆಗೆ ತಾವು ಹರಟುತ್ತಿದ್ದುದು ಮಹಾಮಂತ್ರಿ ಅಣ್ಣ ಬಸವಣ್ಣನವರ ಜೊತೆಗೆಂದು. ಅವರೆಲ್ಲ ಗಾಬರಿಯಿಂದ ದೂರ ಸರಿದು ಕೈಮುಗಿದು ನಿಂತುಬಿಟ್ಟರು.
ಅಣ್ಣನವರೇ ಅವರ ಸನಿಹಕ್ಕೆ ಹೋಗಿ ಅದೇ ಸ್ನೇಹಭಾವದಿಂದ ಕೈಹಿಡಿದು "ನಡೆಯಿರಿ ಪ್ರಸಾದ ಮಾಡಿ" ಎಂದರು.
ಅವರೆಲ್ಲರಿಗೆ ಸ್ವರ್ಗ ಕೈಗೆಟಕಿದ ಅನುಭವ ಮೌನವಾಗಿ ಕೈತೊಳೆಯಲು ಹೊರಟೇ ಬಿಟ್ಟರು.
ಪ್ರಸಾದ ಮುಗಿಸಿದ್ದ ಹೆಣ್ಣುಮಕ್ಕಳಿಗೆ ಅಲ್ಲಿರುವವರು ಅಣ್ಣ ಬಸವಣ್ಣನವರು, ಅಕ್ಕನಾಗಮ್ಮ ಮತ್ತು ಗಂಗಾಂಬಿಕೆ ಎಂಬುದು ಅರಿವಾಗುತ್ತಲೇ ಎಲ್ಲರೂ ಕೈಮುಗಿದು ನಿಂತರು. ಯುವತಿಯೊಬ್ಬಳು

**ಎನ್ನ ಕುಲಸೂತಕವ ಕಳೆದಾತ ಬಸವಣ್ಣ.**

**ಎನ್ನ ಛಲಸೂತಕವ ಕಳೆದಾತ ಬಸವಣ್ಣ.**

**ಎನ್ನ ತನುಸೂತಕವ ಕಳೆದಾತ ಬಸವಣ್ಣ.**

**ಎನ್ನ ಮನಸೂತಕವ ಕಳೆದಾತ ಬಸವಣ್ಣ.**

**ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ.**

**ಎನ್ನ ಭಾವಸೂತಕವ ಕಳೆದಾತ ಬಸವಣ್ಣ.**

**ಎನ್ನ ಅರುಹುಮರಹಿನ ಸಂದುಸಂಶಯವಬಿಡಿಸಿದಾತ ಬಸವಣ್ಣ.**

**ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ.**

**ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ.**

**ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ.**

**ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ**

ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು/5

------ ಅಕ್ಕನಾಗಮ್ಮ

ಎಂದು ರಾಗಬದ್ಧವಾಗಿ ಹಾಡತೊಡಗಿದಳು ಉಳಿದವರೆಲ್ಲ ದನಿಗೂಡಿಸಿದರು.

**ಶರಣರ ಮಹಾತತ್ತ್ವ ದಾಸೋಹ:**

ಬಸವಣ್ಣನವರನ್ನು ಮತ್ತು ವಚನ ರಚಿಸಿದ ಅಕ್ಕನಾಗಮ್ಮನವರನ್ನು ಗುರುತಿಸದ ಅಲ್ಲಿಯ ಜನರ ಮನದಲ್ಲಿ ಮನೆಮಾಡಿ ವಚನಗಳು ಅವರಿಗೆ ಕಂಟಸ್ಥವಾಗಿದ್ದವು. ಅಣ್ಣ ಬಸವಣ್ಣ, ಅಕ್ಕನಾಗಮ್ಮ ಮತ್ತು ಗಂಗಾಂಬಿಕೆ ಅವರ ಮುಂದೆಯೇ ವಚನ ಹಾಡುವ ಭಾಗ್ಯ ಸಿಕ್ಕ ಹರ್ಷ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅಲ್ಲಿ ನೆರೆದಿದ್ದವರೆಲ್ಲ ಧ್ವನಿಗೂಡಿಸಿದ್ದರಿಂದ ಅಲ್ಲಿಯ ವಾತಾವರಣವೇ ಬದಲಾಗಿ ದಾಸೋಹ ಅಲ್ಲಿ ನಿರ್ಮಾಣವಾದ ಅನುಭವ ಎಲ್ಲರಿಗಾಯಿತು.

ಈ ಸುದ್ದಿ ಆ ಚಿಕ್ಕ ಊರಲ್ಲೆಲ್ಲ ಹರಡಿತು. ಊರವರೆಲ್ಲರೂ ಅಲ್ಲಿ ಜಮಾಯಿಸಿದರು.

ಅವರೆಲ್ಲ ಕಟ್ಟೆಯಮೇಲೆ ಕುಳಿತುಕೊಳ್ಳುತ್ತಿದ್ದರು, ಯುವಕರು ಉತ್ಸಾಹದಿಂದ ಬಡಿಸುತ್ತಿದ್ದರು. ಅದುವರೆಗೆ ಹಸಿವು ನೀಗಿಸುವ ಸಾಧನವಾಗಿದ್ದ ನುಚ್ಚುಮಜ್ಜಿಗೆ ಈಗ ಪ್ರಸಾದವಾಗಿತ್ತು. ಅವರೆಲ್ಲರಲ್ಲಿ ಧನ್ಯತಾ ಭಾವ ಕಾಣುತ್ತಿತ್ತು

"ದಾಸೋಹ" ಶರಣರು ವಿಶ್ವಕ್ಕೆ ಕೊಟ್ಟ ಅಪರೂಪದ ತತ್ತ್ವ. ಅದರ ಧಾರ್ಮಿಕ, ತಾತ್ವಿಕ ವಿವರಣೆಯನ್ನು ಶರಣರು ತಮ್ಮ ವಚನಗಳಲ್ಲಿ ವಿವರವಾಗಿ ಕೊಟ್ಟಿದ್ದಾರೆ.

46 ಶರಣರು ತಮ್ಮ 247 ವಚನಗಳಲ್ಲಿ 315 ಕಡೆಗಳಲ್ಲಿ ಉಪಯೋಗಿಸಿದ್ದು ಶರಣರು ಈ ತತ್ತ್ವ ವಿವರಿಸಲು ಕೊಟ್ಟ ಪ್ರಯತ್ನವನ್ನು ನಿರೂಪಿಸುತ್ತದೆ.

ಈ ತರಹದ ತತ್ತ್ವ ಅರ್ಥವಾಗದಿದ್ದರೂ ಸಾಮಾನ್ಯ ಜನರು ಅದನ್ನು ತಮ್ಮ ನಿತ್ಯ ಜಿವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡಿದ್ದು ಬಸವಣ್ಣನವರು.

ದಾಸೋಹಗಳನ್ನು ಎಲ್ಲೆಡೆ ಸ್ಥಾಪಿಸಿ ಬರಗಾಲದ ಬವಣೆಯಿಂದ ಅಂದು ಬಸವಣ್ಣನವರು ಪಾರು ಮಾಡಿದರೆ ಇಂದು ಲಕ್ಷಾಂತರ ಬಡವರ ಮಕ್ಕಳ ವಿಧ್ಯಾಭ್ಯಾಸಕ್ಕೆ ಮಠಗಳಲ್ಲಿ ಪ್ರಾರಂಭವಾದ ದಾಸೋಹಗಳು ಸಹಕಾರಿಯಾದವು.

ಕೆಳಗಿನ ಕೆಲವು ವಚನಗಳು ಈ ತತ್ತ್ವ ವಿವರಿಸುತ್ತವೆ.

1. **ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು ಜಂಗಮಕ್ಕೆ ಮಾಡಿದೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ.**

   **ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವ ಮಾಡುವುದೆ ಮಾಟ.**

   **ಕಾಶಿಯಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ.**

   **ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು.** /9 --- ನುಲಿಯ ಚಂದಯ್ಯ

2. **ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ.**

**ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ.**

**ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದ ಬಸವಣ್ಣ.**

**ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ ಸದ್ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಸ್ವಯಪ್ರಸಾದಿಯಾದನಯ್ಯಾ ಬಸವಣ್ಣ.**/952 --- ಸಿದ್ಧರಾಮೇಶ್ವರ

ಈಗ ಅಲ್ಲಿಯ ವಾತಾವರಣವೇ ಬದಲಾಗಿತ್ತು. ಎಲ್ಲರ ಮನದಲ್ಲಿ ಉತ್ಸಾಹ ಮನೆಮಾಡಿತ್ತು. ಬಸವ, ಬಸವ ಮಂತ್ರ ಎಲ್ಲರ ಬಾಯಲ್ಲಿ. "ಸ್ವರ್ಗವೇ ಧರೆಗಿಳಿದು ಬಂತು' ಎನ್ನುವದು ಇದಕ್ಕೇ ಅಲ್ಲವೇ?
ಅಲ್ಲಿಯ ಯುವಕರು ಉತ್ಸಾಹದಿಂದ ಎಲ್ಲ ಕೆಲಸಗಳಲ್ಲಿ ಭಾಗವಹಿಸಹತ್ತಿದ್ದರಿಂದ ನಾವೆಲ್ಲ ನೆರಳಲ್ಲಿ ವಿಶ್ರಾಂತಿ ಪಡೆಯಹತ್ತಿದೆವು. ಬರಗಾಲದ ಬೇಗೆಯಿಂದ ಜನಸಾಮಾನ್ಯರನ್ನು ಬಿಜ್ಜಳನ ಸಹಾಯವಿಲ್ಲದೇ, ಜನಸಾಮಾನ್ಯರ ಸ್ವಾಭಿಮಾನಕ್ಕೆ ಧಕ್ಕೆ ತಾರದೇ ಪರಿಹಾರ ಕಂಡುಹಿಡಿದ ಅಣ್ಣ ಬಸವಣ್ಣವರ ಪ್ರತಿಭೆಯ ಪರಿಚಯ ಈ ಕನಸಿನ ಭಾಗದಲ್ಲಿದೆ.

ಗಮನಿಸಿ:

ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನರಿಗೆ ದಾಸೋಹ ಕಲ್ಯಾಣದಲ್ಲಿ ನಡೆಯುತ್ತಿತ್ತು ಎನ್ನುವದನ್ನು ಅನೇಕ ವಚನಕಾರರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

**ಆದಿಯಾಧಾರವಿಲ್ಲದಂದು, ಕಳೆಮೊಳೆದೋರದಂದು, ಕಾಮನಿಃಕಾಮವಿಲ್ಲದಂದು,**

**ವೀರವಿತರಣವಿಲ್ಲದಂದು,**

**ಯುಗಜುಗವಿಲ್ಲದಂದು, ಪಿಂಡಾಂಡ ಬ್ರಹ್ಮಾಂಡವಿಲ್ಲದಂದು, ಏನೂ ಏನೂ ಇಲ್ಲದಂದು, ಎಲ್ಲಾ ಮೂರ್ತಿಗಳು ನೆಲೆಗೊಳ್ಳದಂದು,**

**--------------**

**ಜಗದಾದಿ ಸೃಷ್ಟಿಯನನುಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು.**

**ಆ ಸೃಷ್ಟಿಯ ಮುಖವ ಕಂಡು ಸೃಜಿಸಲು ಪುಟ್ಟಿದರು ಪಂಚಶಕ್ತಿಯರು.**

**ಆ ಪಂಚಶಕ್ತಿಯರಿಗೆ ಪಂಚಮೂರ್ತಿಯರ ಕೈಗೊಳಿಸಿದಾತ ನಮ್ಮ ಬಸವಯ್ಯನು.**

**ಆ ಪಂಚಮೂರ್ತಿಗಳಿಂದುತ್ಪತ್ಯವಾದ ಲೋಕವ ನೋಡಲೆಂದು, ಕೈಲಾಸವನೆ ಕಲ್ಯಾಣವ ಮಾಡಿದಾತ ನಮ್ಮ ಬಸವಯ್ಯನು.**

**---------------**

ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ ಇಚ್ಛೆಯನರಿದು ಅರ್ಪಿತವ ಮಾಡಿದಾತ ನಮ್ಮ ಬಸವಯ್ಯನು.

------------------

ಎಂಬತ್ತೆಂಟುಪವಾಡಮಂ ಗೆದ್ದು ಮುನ್ನೂರರುವತ್ತು ಸತ್ತ ಪ್ರಾಣವನೆತ್ತಿ ಮೆರೆದು ಪರಸಮಯವನಳಿದಾತ ನಮ್ಮ ಬಸವಯ್ಯನು.

-----------------.

ಚೆನ್ನಬಸವನೆಂಬ ಪ್ರಸಾದಿಯ ಪಡೆದು, ಅನುಭವಮಂಟಪವನನುಮಾಡಿ, ಅನುಭವಮೂರ್ತಿಯಾದ ನಮ್ಮ ಬಸವಯ್ಯನು.

ಅರಿವ ಸಂಪಾದಿಸಿ ಆಚಾರವನಂಗಂಗೊಳಿಸಿ, ಏಳುನೂರೆಪ್ಪತ್ತು ಅಮರಗಣಂಗಳ ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು.

ಆ ಅನುಭವದಲ್ಲಿ ಐಕ್ಯಪ್ರಸಾದವನಂಗಂಗೊಂಡು, ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು.

ಭಕ್ತಿಸ್ಥಲವನಳಿದು ಭಾವವಡಗಿ ಬಟ್ಟಬಯಲ ಕೂಡಿ, ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು./44 -------ನೀಲಾಂಬಿಕೆ

## ಅನುಭವ ಮಂಟಪ:

ರಾಜರುಗಳ ದರ್ಬಾರ (ಒಡ್ಡೋಲಗ) ಅಂದು ರಾಜನ ವೈಭವದ ಸಂಕೇತ. ರಾಜನ ಯಶೊಗಾಥೆಗಳನ್ನು ಹೊಗಳುವ ರಜಭಟರು, ಠೀವಿಯಿಂದ ಆಶೀನರಾಗುವ ಮಂತ್ರಿಗಳು. ಅವರನ್ನೆಲ್ಲ ರಂಜಿಸಲು ಕುಣಿದು ಪಾನೀಯ ನೀಡುವ ಸುಂದರಿಯರು. ಅಲ್ಲಿ ಚರ್ಚೆ ಯಂತು ಇರುವದಿಲ್ಲಾ ರಾಜನನ್ನು ಹೊಗಳುವ ಮತ್ತು ಅವನು ಹೇಳಿದ ಮಾತುಗಳನ್ನು ವೈಭವೀಕರಿಸಲು ಮಂತ್ರಿಗಳ ಪೈಪೋಟಿ. ಇದು ನಮ್ಮ ಮನದಲ್ಲಿ ಬರುವ ವಿಚಾರ. ಆದರೆ ಬಯಲಿನಲ್ಲಿ ಮರದ ನೆರಳಿನಲ್ಲಿ ಇಂತಹ ದರ್ಬಾರ ರಾಜನ ಅನುಪಮಸ್ಥಿತಿಯಲ್ಲಿ ಅವನ ನೆನಹಿನಲ್ಲಿ ನಡೆಸುವ ಪ್ರಯೋಗ ನಡೆದ ಪ್ರಸಂಗ ಈ ಕನಸಿನ ಭಾಗದಲ್ಲಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಗಲ್ಲು ಹಾಕಿದ ಪ್ರಸಂಗ.ಕೆಲವು ವಚನಗಳು ಈ ವಿಷಯ ವಿವರಿಸುತ್ತವೆ.

1. **ಒಂದು ಮರವ ಕೊರೆದು ನೂರೆಂಟು ಬೊಂಬೆಯ ಮಾಡಿ ಮರವೇ ಬೊಂಬೆಯಲ್ಲದೆ ಮರ ಬ್ಯಾರೆ ತಾನಿಲ್ಲಾ. ಇದರಂತೆ ತಾನೇ ಹಲವು ಆಗಲು ತಾನೇ ಹಲವಲ್ಲದೆ ತಾ ಬ್ಯಾರೆಲ್ಲಿಹನೋ ಇದೇ ಅನುಭವ ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ**/25

---- ಮಡಿವಾಳಪ್ಪ / ಕಡಕೋಳ ಮಡಿವಾಳಪ್ಪ

2. ಆಚಾರವೆಂಬ ಭಿತ್ತಿಯ ಮೇಲೆ, ವಿಚಾರವೆಂಬ ಚಿತ್ರವ ಚಿತ್ರಿಸಿ, ಜ್ಞಾನವೆಂಬ ಕಳೆಯ ನೆಲೆಗೊಳಿಸಿ, ಅನುಭಾವವೆಂಬ ಮಂಟಪದಲ್ಲಿ ಶರಣ ಕುಳ್ಳಿರ್ದು, ನೆತ್ತಿಯ ನಯನವ ತೆರೆದು ನೋಡಲು, ಆಚಾರ ವಿಚಾರದೊಳಗಡಗಿತ್ತು. ವಿಚಾರ ಸುವಿಚಾರದೊಳಗಡಗಿತ್ತು. ಸುವಿಚಾರ ಸುಜ್ಞಾನದೊಳಗಡಗಿತ್ತು. ಮಹಾನುಭಾವ ಶರಣನೊಳಗಡಗಿತ್ತು.

ಶರಣನಿರ್ದ ತನ್ನ ತಾ ಆಚಾರವನುಂಗಿ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ./57

--- ಸ್ವತಂತ್ರ ಸಿದ್ಧಲಿಂಗ

3. ಮಣ್ಣ ಹೂಟೆ ಮಳೆಗೆ ಮುಚ್ಚುವುದಲ್ಲದೆ ಕಲ್ಲ ಹೂಟೆ ಮುಚ್ಚುವುದೆ?

ಬಲ್ಲವನಲ್ಲಿ ಸೋಂಕು ಸುಳಿದಡೆ ಅಲ್ಲ ಅಹುದೆಂದು ತಿಳಿಯಬಲ್ಲವ ಎಲ್ಲವನು ಬಲ್ಲ, ಮಣ್ಣಿನ ಬಿರಯ ತೆರದಂತೆ.

ಬಲ್ಲತನವಿಲ್ಲದವನ ಅನುಭಾವಕೂಟ ಕಲ್ಲಿನ ಹೋಟೆಯಂತೆ,ನಾರಾಯಣಪ್ರಿಯ ರಾಮನಾಥಾ./79

--- ಗುಪ್ತ ಮಂಚಣ್ಣ

4. ಅನುಭಾವವಿಲ್ಲದ ಕ್ರಿಯೆ ಆಚಾರಕ್ಕೆ ದೂರ. ಅನುಭಾವವಿಲ್ಲದ ಜ್ಞಾನ ವಿಚಾರಕ್ಕೆ ದೂರ. ಅನುಭಾವವಿಲ್ಲದ ಭಕ್ತಿ ಅರುವಿಂಗೆ ದೂರ. ಅನುಭಾವವಿಲ್ಲದ ವೈರಾಗ್ಯ ಅಗಮ್ಯಕ್ಕೆ ದೂರ. ಗುರುನಿರಂಜನ ಚನ್ನಬಸವಲಿಂಗವನರಿವರೆ ಅನುಭಾವವೇ ಬೀಜ ಕಾಣಾ./88

---- ದೇಶಿಕೇಂದ್ರ ಸಂಗನಬಸವಯ್ಯ

5. ತನು ತನ್ನದಾದಡೆ, ದಾಸೋಹಕ್ಕೆ ಕೊರತೆಯಿಲ್ಲ, ದಾಸೋಹ ಸಂಪೂರ್ಣ, ದಾಸೋಹವೇ ಮುಕ್ತಿ.

ಮನ ತನ್ನದಾದಡೆ, ಜ್ಞಾನಕ್ಕೆ ಕೊರತೆಯಿಲ್ಲ ಜ್ಞಾನ ಸಂಪೂರ್ಣ, ಆ ಜ್ಞಾನವೇ ಮುಕ್ತಿ.

ಧನ ತನ್ನದಾದಡೆ, ಭಕ್ತಿಗೆ ಕೊರತೆಯಿಲ್ಲ. ಭಕ್ತಿ ಸಂಪೂರ್ಣ, ಭಕ್ತಿಯಲ್ಲಿ ಮುಕ್ತಿ.

ತನುಮನಧನವೊಂದಾಗಿ ತನ್ನದಾದಡೆ ಗುರುಲಿಂಗಜಂಗಮವೊಂದೆಯಾಗಿ ತಾನಿಪ್ಪನುಬೇರೆ ಮುಕ್ತಿ ಎಂತಪ್ಪುದಯ್ಯಾ?

ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ /134

--- ಉರಿಲಿಂಗಪೆದ್ದಿ

# ಹಳ್ಳಿಕಟ್ಟೆಯ ಮೇಲೆ ಸಂಸತ್ತು



ಇಂದಿನ ಸಂವೈಧಾನಿಕ ಕಾನೂನಿನ ಆಳ್ವಿಕೆಗೆ ಮ್ಯಾಗ್ನಾಕಾರ್ಟಾ ಮೂಲ ಸೆಲೆಯಾಗಿದೆ. ರಾಜನ ಹಕ್ಕುಗಳಿಗೆ ಸಂಬಂಧಿಸಿದಂತೆ ಪೋಪ್, ದೊರೆ ಜಾನ್ ಮತ್ತು ಇಂಗ್ಲೆಂಡ್‌ನ ಕೆಳಹಂತದ ಜಹಗೀರದಾರರ ಮಧ್ಯೆ ಭಿನ್ನಾಭಿಪ್ರಾಯ ಉಂಟಾದಾಗ ೧೨೧೫ರಲ್ಲಿ ಒಂದು ಒಪ್ಪಂದಕ್ಕೆ ಬರಲಾಯಿತು. ಅದುವೆ ಮ್ಯಾಗ್ನಾಕಾರ್ಟಾ. ಅಂದರೆ ಮಹಾ ಒಪ್ಪಂದ. ಈ ಒಪ್ಪಂದದಿಂದಾಗಿ ದೊರೆ ಜಾನ್ ಕೆಲವೊಂದು ಹಕ್ಕುಗಳನ್ನು ಬಿಟ್ಟುಕೊಡಬೇಕಾಯಿತು. ರಾಜನ ಬಯಕೆಗಳು ಕಾನೂನಿನ ಚೌಕಟ್ಟಿನೊಳಗೆ ಇರಬೇಕು ಮುಂತಾದ ಪ್ರಜಾಪ್ರಭುತ್ವವಾದಿ ಅಂಶಗಳು ಮಾಗ್ನಾಕಾರ್ಟಾ ಒಪ್ಪಂದದಲ್ಲಿವೆ. ಹೀಗೆ ಕಾನೂನಿನ ಮೂಲಕ ರಾಜನ ಅಧಿಕಾರವನ್ನು ಮೊಟಕುಗೊಳಿಸಿದ ಕೀರ್ತಿ ಮ್ಯಾಗ್ನಾಕಾರ್ಟಾಗೆ ಸಲ್ಲುತ್ತದೆ. ಜಗತ್ತಿನ ಪ್ರತಿಯೊಂದು ದೇಶದ ಸಂವಿಧಾನದ ಮೇಲೆ ಮ್ಯಾಗ್ನಾಕಾರ್ಟಾದ ಪ್ರಭಾವವಿದೆ.

ಮ್ಯಾಗ್ನಾಕಾರ್ಟಾ ಒಪ್ಪಂದಕ್ಕಿಂತ ಅರ್ಧ ಶತಮಾನ ಹಿಂದೆಯೆ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು.

ಅಸ್ಪೃಶ್ಯರು ಮೊದಲು ಮಾಡಿ ವಿವಿಧ ಜಾತಿಗಳ ಜನ ಅನುಭವ ಮಂಟಪದಲ್ಲಿದ್ದರು.

ಅಮರಗಣಂಗಳಲ್ಲಿ ಬಹುಪಾಲು ಮಂದಿ ವಿವಿಧ ಕಾಯಕಜೀವಿಗಳೇ ಆಗಿದ್ದರು. ಲೋಕವೇ ತಾನಾದವನು ಅಂದರೆ ಸಕಲಜೀವಾತ್ಮರಿಗೆ ಲೇಸನೇ ಬಯಸುವವನು ಮಾತ್ರ ಶರಣ ಎಂದು ಕರೆಯಿಸಿಕೊಳ್ಳುತ್ತಾನೆ.

ಹೀಗೆ ಶರಣರು ಎಲ್ಲ ರೀತಿಯ ಅಸಮಾನತೆಗಳಿಗೆ ವಿರುದ್ಧವಾಗಿದ್ದರು. ಬಸವಣ್ಣನವರ ಅಂದಿನ ಆ ಮಾತು ಮತ್ತು ಆ ಕೊಡುಗೆ ಅರ್ಥ ಮಾಡಿಕೊಳ್ಳುವ ಪ್ರಯತ್ನ ಈಗ ಆರಂಭವಾಗಿದೆ. ಎಂಟುನೂರು ವರ್ಷಗಳ ಅನಂತರ ಶರಣರು ಹೇಳಿದ ಮಾತಿನ ಅರ್ಥ ಈಗಿನ ಜನರಿಗೆ ಅರ್ಥ ಆಗಹತ್ತಿದೆ. ಜಗತ್ತಿನಲ್ಲಿಯ ಅನೇಕ

ದೇಶಗಳು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡು “ಜನರಿಂದ ಜನರಿಗಾಗಿ” ಎನ್ನುವ ತತ್ವ ಪಾಲನೆ ಮಾಡುತ್ತಿದ್ದಾರೆ.
“ಬರುವ ದಿನಗಳಲ್ಲಿ ಅಣ್ಣನವರ ಮತ್ತು ಶರಣರ ತತ್ವಗಳು ಎಲ್ಲರಿಗೂ ಮಾರ್ಗದರ್ಶಕ ತತ್ವಗಳು”
ಎನ್ನುವ ಮಾತನ್ನು ಎಲ್ಲರೂ ಒಪ್ಪಿ ಪಾಲಿಸಲು ಬಯಸುತ್ತಿದ್ದಾರೆ ಎನ್ನುವದನ್ನು ಲಂಡನ್ನಿನಲ್ಲಿ ಬಸವಣ್ಣನವರ ಪ್ರತಿಮೆ ಸೂಚಿಸುತ್ತದೆ



**ಆಡಳಿತಗಾರರು ಹಳ್ಳಿಯ ಕಡೆಗೆ:**

ಹೆಚ್ಚು ಕಡಿಮೆ ಊರವರೆಲ್ಲ ತೃಪ್ತಿಯಿಂದ ಪ್ರಸಾದ ಸೇವಿಸಿದ್ದಾಗಿತ್ತು.
ಅಣ್ಣನವರನ್ನು ಕಣ್ತುಂಬ ನೋಡಿದ ಅವರಲ್ಲಿ ಧನ್ಯತಾಭಾವ ಎದ್ದುಕಾಣುತ್ತಿತ್ತು.
ಅಷ್ಟರಲ್ಲಿ ಅಲ್ಲಿಗೆ ನಾನು ಕಥೆಯಲ್ಲಿ ಕೇಳಿದ ರಾಜನ ಮೆರವಣಿಗೆಯಂತೆ ಅನೇಕ ಕುದುರೆಗಳು ಬಂದವು. ಕುದುರೆ ಸವಾರರೆಲ್ಲ ಕೆಳಗಿಳಿದರು.
ಅವರೆಲ್ಲ ಅಣ್ಣನವರಿಗೆ "ಶರಣು ಶರಣಾರ್ಥಿ" ಎನ್ನುವಷ್ಟರಲ್ಲಿ ಅಣ್ಣ ಬಸವಣ್ಣ ಕಟ್ಟೆಯಿಂದಿಳಿದು "ಶರಣು ಶರಣಾರ್ಥಿ ಎಂದರು.
ಅದರಲ್ಲೊಬ್ಬ ಅಣ್ಣನ ಸಮವಯಸ್ಕ ಅಣ್ಣನವರನ್ನು ಅಪ್ಪಿಕೊಂಡು "ನಿಮ್ಮನ್ನ ನೋಡಿ ತುಂಬಾ ಸಂತೋಷವಾಯಿತು. ನಾವೆಲ್ಲ ನಮ್ಮೂರಲ್ಲಿ ನಿಮಗಾಗಿ ದಾರಿಕಾಯುತ್ತಿದ್ದೆವು ನೀನಿಲ್ಲಿರುವದಾಗಿ ಅಕ್ಕ ಹೇಳಿಕಳಿಸಿದರು" ಎಂದ.
ಕೈಕಾಲು ತೊಳೆದುಕೊಂಡು ಕಟ್ಟೆಹತ್ತಿ ಬಂದು ಅಕ್ಕನಾಗಮ್ಮ ಹಾಗೂ ಗಂಗಾಂಬಿಕೆಯರಿಗೆ ಶರಣು ಶರಣೆಂದು ಅಲ್ಲಿಯೇ ಕುಳಿತುಕೊಂಡು ಕುಶಲೋಪರಿಯ ಮಾತುಕತೆಯಲ್ಲಿ ಮುಳುಗಿದರು.
ನಾನು ಅಲ್ಲಿ ಹೋಗಿ ಅವರಿಗೆ ನೀರು ಕೊಟ್ಟೆ. ಅಕ್ಕನಾಗಮ್ಮನವರು "ಗುರು, ಇವನು ಬಸವನ ಆತ್ಮೀಯ ಗೆಳೆಯ, ನನ್ನ ಇನ್ನೊಬ್ಬ ತಮ್ಮ ಶಿವಣ್ಣ, ಇಲ್ಲಿ ಸುತ್ತಮುತ್ತಲ ನೂರು ಹಳ್ಳಿಯ ಆಡಳಿತಾಧಿಕಾರಿ" ಎಂದು ಹೇಳಿದರು ಹೆಮ್ಮೆಯಿಂದ.

ನಾನು "ಶರಣು ಶರಣಾರ್ಥಿ" ಎಂದೆ ಅವರೂ ಅಷ್ಟೇ ಆದರದಿಂದ "ಶರಣು ಶರಣಾರ್ಥಿ ಗುರು" ಹೇಳಿದರು.
**ಶಿವಣ್ಣ:** ಅಕ್ಕ ನೀಲಾಂಬಿಕೆದೇವಿ ಮತ್ತು ಚನ್ನಬಸವಣ್ಣನನ್ನು ಕರೆದುಕೊಂಡು ಬರಬೇಕಾಗಿತ್ತು"
**ಅಕ್ಕ** : ಅಲ್ಲಿಯ ಪ್ರಸಾದ ಮತ್ತು ಅನುಭವ ಮಂಟಪ ವ್ಯವಸ್ಥೆ ನೋಡಿಕೊಳ್ಳಲು ಅವರು ಅಲ್ಲಿಯೇ ಉಳಿದರು.
ಅಕ್ಕನಾಗಮ್ಮ ಎಲ್ಲರನ್ನು ಪ್ರಸಾದಕ್ಕೆ ಬರಲು ಹೇಳಿದರು. ಅಲ್ಲಿಗೆ ಬಂದ ಆಡಳಿತಗಾರರು, ಬಸವಣ್ಣ ಮತ್ತಿತರೆಲ್ಲ ಕೈಕಾಲು ತೊಳೆದು ಕೊಂಡು ಕುಳಿತುಕೊಂಡ ಮೇಲೆ ನಾವು ನೀಡಲಿಕ್ಕೆ ಹೊರಟಾಗ ಗಂಗಾಂಬಿಕೆಯವರು "ಮನೆಮಂದಿಯೆಲ್ಲಾ ಕುಳಿತುಕೊಳ್ಳೋಣ ಇಲ್ಲಿಯ ಯುವಕರು ಪ್ರಸಾದ ವಿನಿಯೋಗಿಸುತ್ತಾರೆ" ಎಂದರು.
ನಾವೆಲ್ಲ (ಬಂಡಿಹೊಡೆದುಕೊಂಡು ಬಂದವರು) ಎಲ್ಲರ ಜತೆ ಕುಳಿತುಕೊಂಡಾಗ ಬಂದ ಕಣ್ಣೀರನ್ನು ಯಾರಿಗೂ ಕಾಣದಂತೆ ಒರೆಸಿಕೊಂಡೆ.
ಎಲ್ಲರ ಎಲೆಯಲ್ಲಿ ನುಚ್ಚು ಮಜ್ಜಿಗೆ ಬಡಿಸುವಷ್ಟರಲ್ಲಿ ಅಕ್ಕನಾಗಮ್ಮ ಎಲ್ಲರ ಎಲೆಯಲ್ಲಿ ಹುಣಸಿಟಕ್ಕು ಬಡಿಸಿದರು. ( ನನಗೆ ಆಶ್ಚರ್ಯ ಅಷ್ಟೆಲ್ಲ ಜನರಿಗೆ ಅದು ಹೇಗೆ ಸಾಕಾಯಿತು? ಆ ಗಡಿಗೆ ಅಕ್ಷಯಪಾತ್ರೆಯೇ? ಎನಿಸಿತು) ಅಣ್ಣ ಬಸವಣ್ಣನಿಗೂ ಸ್ವಲ್ಪ ಟಕ್ಕು ಸಿಕ್ಕು ನನ್ನವಳ ಮನದಿಚ್ಛೆ ಪೂರ್ತಿಯಾಯಿತಲ್ಲ ಎಂದು ಸಂತೋಷವಾಯಿತು.
ಅಣ್ಣನವರು ಅದರ ರುಚಿ ನೋಡಿ ಮಗ್ಗಲು ಕುಳಿತ ಅಕ್ಕನಾಗಮ್ಮನಿಗೆ ಹೇಳಿದರು "ಅಕ್ಕ ಚಿಕ್ಕವರಿದ್ದಾಗ ಇದರ ರುಚಿ ನೋಡಿದ್ದು, ಚನ್ನಾಗಿದೆ".
ಅಕ್ಕನಾಗಮ್ಮ ನಗುತ್ತ ಹೇಳಿದರು
"ಅಂದು ರುಚಿತೋರಿಸಿದ ಅಜ್ಜಿಯ ಮೊಮ್ಮಕ್ಕಳಾದ ಗುರು ಮತ್ತು ಗಂಗಕ್ಕ ಇಲ್ಲಿಯೇ ಇದ್ದಾರೆ. ಅಲ್ಲಿಂದ ನಿನಗಾಗಿ ತಗೊಂಡು ಬಂದಾರ" .
"ತುಂಬಾ ಸಂತೋಷ" ಎಂದರವರು ನನ್ನನ್ನು ನೋಡುತ್ತಾ. ನನ್ನ ಜೀವನ ಸಾರ್ಥಕವಾಯಿತು ಎನಿಸಿತು.
ನನ್ನವಳ ಮುಖದಲ್ಲಿ ಅಂದು ಕಂಡ ಸಂತೃಪ್ತಿ ಎಂದೆಂದಿಗೂ ಮರೆಯಲಾಗಲ್ಲ.
ಎಲ್ಲರೂ ಪ್ರಸಾದ ಮುಗಿಸಿ ಗಿಡದ ನೆರಳಲ್ಲಿ ಕುಳಿತರು.
ಅವರನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದ ಊರವರೆಲ್ಲ ಕಟ್ಟೆಯ ಸುತ್ತಮುತ್ತಲೂ ನಿಂತಿದ್ದರು.
ಅಣ್ಣನವರು ಮತ್ತು ಶಿವಣ್ಣನವರ ಮುಂದೆ ನೂರಾರು ಹಳ್ಳಿಯ ಆಡಳಿತಗಾರರು ಕುಳಿತಿದ್ದರು.
**ಶಿವಣ್ಣ:** ಬಸವಣ್ಣನವರೇ ನಾವೆಲ್ಲ ನಮ್ಮೂರಿಗೆ ಹೋಗೋಣ. ಅಲ್ಲಿಯೇ ವಿಚಾರ ವಿನಿಮಯ ಮಾಡೋಣ.
**ಅಣ್ಣ ಬಸವಣ್ಣ:** ಇಲ್ಲೇ ಎಲ್ಲ ಚನ್ನಾಗಿದೆ. ಇಲ್ಲಿಯೇ ಮಾತನಾಡಬಹುದು.

**ಶಿವಣ್ಣನವರು:** ಇಲ್ಲಿ ಸಾಕಷ್ಟು ಜನರಿದ್ದಾರೆ
**ಅಣ್ಣಾ ಬಸವಣ್ಣ:** ನಾವು ಮತ್ತು ಅಧಿಕಾರಿಗಳಿರುವದೇ ಅವರಿಗಾಗಿ. ಅವರಿಂದ ಮುಚ್ಚಿಡಬೇಕಾದುದೇನು ಇಲ್ಲ. ಎಲ್ಲರೂ ಮುಕ್ತವಾಗಿ ಚರ್ಚಿಸೋಣ.
ನಾವೆಲ್ಲ ಬಂಡಿಯ ಬಳಿ ಹೊರಡಲು ತಯಾರಾದೆವು.
"ಮಜ್ಜಿಗೆ ಕೊಡಬೇಕು ಇಲ್ಲಿಯೇ ಕುಳಿತುಕೊಳ್ಳಿ" ಎಂದರು ಅಕ್ಕನಾಗಮ್ಮ.
ನಾವೆಲ್ಲ ಅಲ್ಲಿಯೇ ಕುಳಿತುಕೊಂಡೆವು. ಅಲ್ಲಿ ನಡೆಯುವ ದರ್ಬಾರ ನೋಡುವ ಕುತೂಹಲ ಅಲ್ಲಿ ಜನರ ಮನದಲ್ಲಿ ಮನೆಮಾಡಿತ್ತು. ರಾಜನೇ
ದೇವರು ಎಂದು ನಂಬಿದ್ದ ಅವರಿಗೆ **"ನಾವೆಲ್ಲ ಇರುವದು ಜನರಿಗಾಗಿ"** ಎಂಬ ಬಸವಣ್ಣನವರ ಮಾತು ವಿಚಿತ್ರವೆನಿಸಿ ಅದರ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಹತ್ತಿದರು. ಆಡಳಿತಗಾರರ ಮಾತು ದೇವರ ವಾಖ್ಯ ಎಂದು ನಂಬಿ ನಡೆಯುತ್ತಿದ್ದ ಅಲ್ಲಿ ನೆರೆದ ಜನರಿಗೆ ಈ ಮಾತು ಅರ್ಥವಾಗಲಿಲ್ಲ. ಅವರೆಲ್ಲ ಕುತೂಹಲದಿಂದ ಮುಂದೇನಾಗುವದಿದೆ ಎನ್ನುವದನ್ನು ಎದುರು ನೋಡತೊಡಗಿದರು.

## **ಊರಿಗೊಂದು ದಾಸೋಹ** :

ಅಂದು ನಡೆದ ವಿಚಾರ ವಿನಿಮಯವನ್ನು ನಾನಿಲ್ಲಿ ನನ್ನ ಮಾತಿನಲ್ಲಿ ಸಂಕ್ಷಿಪ್ತವಾಗಿ ವಿವರಿಸುವೆ.
**ಅಣ್ಣಾ ಬಸವಣ್ಣ**: ನಾನು ಒಂದೊಂದೇ ವಿಚಾರ ಪ್ರಸ್ತಾಪಿಸುತ್ತೇನೆ. ನಿಮ್ಮ ನಿಮ್ಮ ಅಭಿಪ್ರಾಯ ಸಂಕೋಚವಿಲ್ಲದೆ ಮಂಡಿಸಿ.
ಎಲ್ಲರೂ ತಲೆಯಾಡಿಸಿದರು.
**ಅಣ್ಣಾ ಬಸವಣ್ಣ:** ಎಲ್ಲೆಲ್ಲಿಯೂ ಬರಗಾಲ ತಾಂಡವವಾಡುತ್ತಿದೆ. ಎಲ್ಲ ನಾಗರಿಕರ ಮತ್ತು ಪ್ರಾಣಿ ಪಕ್ಷಿಗಳ ಹೊಟ್ಟೆ ತುಂಬಿಸುವದು ನಮ್ಮ ಜವಾಬ್ದಾರಿ. ಅದನ್ನು ನಾವು ನಿರ್ವಹಿಸಬೇಕು.
**ಆಡಳಿತಗಾರರಲ್ಲೊಬ್ಬ:** ಅದು ಹೇಗೆ ಸಾಧ್ಯ ಅಣ್ಣಾ ಅವರೇ ಅಷ್ಟೊಂದು ಖರ್ಚು ಭರಿಸುವಷ್ಟು ಶಕ್ತಿ ನಮ್ಮಲ್ಲಿಲ್ಲ.
**ಅಣ್ಣಾ ಬಸವಣ್ಣ:** ಅದು ನಿಜ. ಪ್ರತಿಯೊಂದು ಊರಲ್ಲಿ ಕೆಲವರಾದರೂ ಹಗೆಯಲ್ಲಿ ಧಾನ್ಯ ಸಂಗ್ರಹಿಸಿರುತ್ತಾರೆ ಅವರಿಂದ ಧಾನ್ಯ ಸಂಗ್ರಹಿಸಿ ದಾಸೋಹ ಪ್ರಾರಂಭಿಸಿ. ಅದು ಆ ಊರಿನ ಜನರ ಹೊಟ್ಟೆಯನ್ನು ಮುಂದಿನ ಬೆಳೆ ಬರುವವರೆಗೆ ತುಂಬಿಸಬಹುದು ಅಲ್ಲವೇ?
**ಆಡಳಿತಗಾರರಲ್ಲೊಬ್ಬ:** ಅವರು ದಾನವಾಗಿಕೊಡಲು ಒಪ್ಪಬೇಕು. ಅದನ್ನು ಖರೀದಿಸುವಷ್ಟು ಹಣ ನಮ್ಮಲ್ಲಿಲ್ಲ ಇಲ್ಲಂದರ ಅದನ್ನು ರಾಜಸ್ವದಿಂದ ಭರಿಸಬೇಕಾಗುತ್ತದೆ.
ಅಷ್ಟರಲ್ಲಿ ಅಲ್ಲಿದ್ದವರೆಲ್ಲ ಮುಕ್ತವಾಗಿ ತಮ್ಮೊಳಗೆ ಅಭಿಪ್ರಾಯ ವಿನಿಮಯ ಆರಂಭಿಸಿದ್ದರು.

**ಅಣ್ಣ ಬಸವಣ್ಣ:** ಅವರು ಅದನ್ನು ದಾನವಾಗಿ ಕೊಡುವದೂ ಬೇಡ, ಮಾರುವದೂ ಬೇಡ ಮತ್ತು ರಾಜಶ್ವ ದಿಂದ ಭರಿಸಬೇಕಾಗಿಲ್ಲ.
ಅವಾಕ್ಕಾದರು ಕೇಳಿದವರೆಲ್ಲ
**ಆಡಳಿತಗಾರರಲ್ಲೊಬ್ಬ:** ಅದು ಹೇಗೆ ಅಣ್ಣ.
**ಅಣ್ಣ ಬಸವಣ್ಣ:** ಒಂದು ಸುಲಭ ದಾರಿ ಇದೆ "ಹತ್ತಕ್ಕೊಂದು ಸೂತ್ರ" .
(ಎಲ್ಲರೂ ಬೆರಗಿನಿಂದ ನೋಡತೊಡಗಿದರು)
ಅವರು ಹಗೆಯಲ್ಲಿಯ ಹತ್ತು ಚೀಲ ಧಾನ್ಯ ಕೊಟ್ಟರೆ ಈ ರಾಶಿಯಾದ ಕೂಡಲೇ ಹತ್ತು ಹೊಸರಾಶಿಯ ಧಾನ್ಯದ ಜೊತೆಗೊಂದು ಹೆಚ್ಚಿನ ಧಾನ್ಯದ ಚೀಲ ಮರಳಿ ಕೊಡುವದು. ನಮ್ಮ ಜನರು ಸ್ವಾಭಿಮಾನಿಗಳು  ಕಷ್ಟ ಕಾಲದಲ್ಲಿ ಕೊಟ್ಟ ಒಂದು ಕಾಸಿಗೆ ಬದಲಾಗಿ ಹತ್ತು ಕಾಸು ಮರಳಿಸಿ ಋಣ ಸಂದಾಯ ಮಾಡುವ ಸಂಪ್ರದಾಯ ಪಾಲಿಸುತ್ತಾರೆ. ಅವರು ದಾಸೊಹಕ್ಕೆ ದಾನಮಾಡಿ ಎಲ್ಲ ಧಾನ್ಯ ಮರಳಿಸಲು ನೆರವಾಗುತ್ತಾರೆ.
ಇದನ್ನು ಮರಳಿ ಕೊಡುವ ಜವಾಬ್ದಾರಿ ರಾಜರ ಪರವಾಗಿ ನಾನು ತೆಗೆದುಕೊಳ್ಳುವೆ.
ಅಲ್ಲಿದ್ದವರೆಲ್ಲ ವಿಚಾರ ವಿನಿಮಯ ಮಾಡಹತ್ತಿದರು.
**ಶಿವಣ್ಣನವರು:** ಇದು ಧಾನ್ಯ ಕೊಟ್ಟವರಿಗೆ ಲಾಭದಾಯಕ ಯೋಜನೆ

1. ಹಗೆಯಲ್ಲಿಯೇ ಧಾನ್ಯ ಹಾಳಾಗುವ ಬದಲು ಹೊಸಧಾನ್ಯ ಸಿಗುತ್ತದೆ.
2. ಜೊತೆಗೆ ಹಸಿದವರ ಹೊಟ್ಟೆತುಂಬಿಸಿದ ತೃಪ್ತಿಯು ಸಿಗುತ್ತದೆ.
3. ನಮ್ಮ ಜನರಿಗೆ ನಾವೇ ಸಹಾಯ ಮಾಡಿದ ಹಾಗಾಗುತ್ತದೆ.
4. ಈಗ ಎರಡುವರ್ಷದ ಹಿಂದಿನ ಬರಗಾಲದಲ್ಲಿ ರಾತ್ರಿ ಹಗೆವು ತೆಗೆದು ಧಾನ್ಯ ಲೂಟಿ ಆದಂತಹ ಘಟನೆಗಳು ಮರುಕಳಿಸುವದಿಲ್ಲ. ಹಗೆವುಗಳನ್ನು ಕಾಯಲು ಹಣ ವ್ಯಯಿಸುವದು ತಪ್ಪುತ್ತದೆ.
5. ಅನಿವಾರ್ಯವಾಗಿ ರಾಜಭಟರು ಬಂದು ಬಲವಂತವಾಗಿ ಧಾನ್ಯ ಕಸಿದುಕೊಂಡು ಹಂಚುವ ಕಹಿ ಪ್ರಸಂಗಗಳು ನಡೆಯುವದಿಲ್ಲ.

"ಹೌದು", "ಹೌದು" ಏಂದರು ಎಲ್ಲರೂ ಒಮ್ಮತದಿಂದ.
**ಅಣ್ಣ ಬಸವಣ್ಣ:** ಬಲವಂತ ಬೇಡ, ಮನವೊಲಿಸಿ ಧಾನ್ಯ ಸಂಗ್ರಹಿಸಿ.
ಅಡವಿಯಿಂದ ಒಣಕಟ್ಟಿಗೆ ತೆಗೆದುಕೊಳ್ಳಲು ಪರವಾನಿಗೆ ಕೊಡಿಸುತ್ತೇನೆ. ಅರಣ್ಯ ನಾಶವಾಗಬಾರದು ಎಚ್ಚರಿಕೆ ಇರಲಿ.
ನಾಳೆಯಿಂದ ಎಲ್ಲ ಊರಲ್ಲಿ ದಾಸೋಹ ಪ್ರಾರಂಭಿಸಿ.
**ಆಡಳಿತಗಾರರಲ್ಲೊಬ್ಬ:** ತುಂಬಾ ಒಳ್ಳೆಯ ವಿಚಾರ ಅಣ್ಣನವರೇ. ನಾಳೆಯಿಂದ ನಾವು ನಮ್ಮೂರಲ್ಲಿ ದಾಸೋಹ ಆರಂಭಮಾಡುವೆವು.
ಒಕ್ಕೊರಲಿನಿಂದ ಎಲ್ಲರೂ ಹಾಗೆ ಆಗಲಿ ಎಂದರು.
**ಅಣ್ಣ ಬಸವಣ್ಣ:** ಜನರಷ್ಟೇ ಮುಖ್ಯ ಪ್ರಾಣಿ ಪಶುಗಳು. ಅವುಗಳಿಗೆಲ್ಲ ಕೊಟ್ಟಿಗೆ ತಗೆಯಿರಿ. ಮೇವು ಅದೇ ಸೂತ್ರದ ಪ್ರಕಾರ ಪಡೆಯಿರಿ. ಎಲ್ಲ ಪ್ರಾಣಿ ಪಕ್ಷಿಗಳಿಗೆ

ನೀರು ನೆರಳು ಸಿಗುವಂತೆ ಮಾಡಿ. ಎಲ್ಲ ಕೆಲಸಗಳಿಗೆ ರಾಜ ಬಿಜ್ಜಳದೇವನ ಸಹಾಯಹಸ್ತವಿರುತ್ತದೆ. ಆದರೂ ಸ್ವಾವಲಂಬಿಗಳಾಗಿ ಯೋಜನೆ ಪೂರ್ಣಗೊಳಿಸಿ. ಒಬ್ಬ ಕಾಯಕಯೋಗಿ ಹಿರಿಯಜ್ಜ ಕಟ್ಟೆ ಏರಿ ಅಣ್ಣನವರ ಬಳಿಹೋಗಿ ಕೈಮುಗಿದು ನಿಂತ. ಅಣ್ಣನವರು ಎದ್ದು ಅವನ ಕೈಹಿಡಿದು ಮಗ್ಗಲು ಕೂಡ್ರಿಸಿಕೊಂಡು ಕೇಳಿದರು.

**ಅಣ್ಣ ಬಸವಣ್ಣ:** ನಿಮ್ಮ ತೊಂದರೆಯನ್ನು ಧೈರ್ಯವಾಗಿ ಹೇಳಿ ಅಜ್ಜ. ಅದನ್ನ ನಾವೆಲ್ಲ ಜೊತೆಯಾಗಿ ಬಗೆಹರಿಸುತ್ತೇವೆ.

**ಕಾಯಕಯೋಗಿ:** ಅಣ್ಣಾ ಅವರೇ ನಾನೊಬ್ಬ ಕಂಬಾರ. ನನಗೆ ಆ ಉದ್ಯೋಗವಲ್ಲದೇ ಮತ್ತೇನೂ ಬರುವದಿಲ್ಲ. ಅದನ್ನು ಮುಂದುವರಿಸಿಕೊಂಡು ಹೋಗುವ ಉತ್ಸಾಹವಿದೆ. ಆದರೆ ಕೆಲಸ ಮಾಡಿಸುವವರು ಇಲ್ಲ ಮತ್ತು ಕಬ್ಬಿಣವೂ ಇಲ್ಲ.

**ಅಣ್ಣ ಬಸವಣ್ಣ:** ನಮ್ಮ ರಾಜ್ಯದ ಬೆನ್ನೆಲುಬು ಕಾಯಕಯೋಗಿಗಳು. ನಮ್ಮ ರಾಜ್ಯದ ಪ್ರಗತಿ ನಿಮ್ಮಂತಹ ಕಾಯಕಯೋಗಿಗಳ ಮೇಲಿದೆ.ನಾವೆಲ್ಲ ನಿಮ್ಮ ಸಹಾಯಕ್ಕಿದ್ದೀವಿ ಚಿಂತೆಬೇಡ.

ಕಾಯಕಯೋಗಿ ಶರಣೆಂದು ಕಟ್ಟೆಯ ಕೆಳಗಿಳಿದು ಬಂದು ಜನಸಮೂಹ ಸೇರಿಕೊಂಡ.

**ಅಣ್ಣ ಬಸವಣ್ಣ:** ಒಂದು ಮುಖ್ಯವಾದ ರಾಜಾಜ್ಞೆ ಇದೆ ಕೇಳಿ ಎಂದರು.

ಎಲ್ಲರೂ ಶಾಂತವಾಗಿ ರಾಜಾಜ್ಞೆ ಏನೆಂದರಿಯಲು ಕಾತರರಾದರು.

ರಾಜಾಜ್ಞೆಯ ಸಾರಾಂಶ:

**"ರಾಜನಿಗೆ ಈಗಿರುವ ಸೈನ್ಯ ಬಲವನ್ನು ದ್ವಿಗುಣ ಮಾಡುವ ವಿಚಾರವಿದೆ. ಒಂದು ವರ್ಷದ ಅವಧಿಯಲ್ಲಿ ಸುಸಜ್ಜಿತ ಸೈನ್ಯಪಡೆ ತಯಾರುಮಾಡುವ ಜವಾಬ್ದಾರಿ ಆಡಳಿತಗಾರರದ್ದು. ಅವರಿಗೆ ತರಬೇತಿ ಕೊಡುವ ಮತ್ತು ಆಯುಧ, ಸಮವಸ್ತ್ರ, ರಥ ಮತ್ತಿತರ ವಸ್ತುಗಳಿಗೆ ಬೇಕಾದ ಖರ್ಚು ಮೊದಲು ನಿರ್ಣಯಿಸಿದ ಬೆಲೆಯಲ್ಲಿ ರಾಜಕೋಶದಿಂದ ಸಿಗುತ್ತದೆ"**

ಎಲ್ಲರೂ ಗಂಭೀರರಾದರು ಮತ್ತು ಚಿಂತಾಕ್ರಾಂತರಾಗಿ ಯೋಚಿಸತೊಡಗಿದರು. ಈಗ ಪ್ರತಿಯೊಂದು ಊರಿನಿಂದ ಅವರ ಜನಸಂಖ್ಯೆಗೆ ಅನುಗುಣವಾಗಿ ಸೈನಿಕರನ್ನು ಒದಗಿಸಿ ಅವರ ಖರ್ಚನ್ನು ಬರುವ ತೆರಿಗೆ ಮತ್ತು ಭೂಕಂದಾಯದಿಂದ ಭರಿಸಲಾಗುತ್ತಿತ್ತು.

ಈಗ ಬರಗಾಲ ತೆರಗೆಯೂ ಇಲ್ಲ, ಭೂಕಂದಾಯವೂ ಇಲ್ಲ. ರಾಜಾಜ್ಞೆಯನ್ನು ಪಾಲಿಸಲೇಬೇಕು. ಏನು ಮಾಡುವದು? ಎಷ್ಟೇ ವಿಚಾರಿಸಿದರೂ ದಾರಿಕಾಣಲಿಲ್ಲ. ಎಲ್ಲರ ಮುಖದಲ್ಲಿ ಚಿಂತೆ ಎದ್ದು ಕಾಣಹತ್ತಿತು.

**ಶಿವಣ್ಣನವರು:**

ಅಣ್ಣಾ, ಇದು ನಮ್ಮ ಸಾಮರ್ಥ್ಯಕ್ಕೆ ಮೀರಿದ ಕೆಲಸ. ರಾಜಾಜ್ಞೆ ನೆರವೇರಿಸುವ ಉಪಾಯ ಹೇಳಿ ಅಣ್ಣ. ನಮ್ಮನ್ನು ಈ ಸಂಕಟದಿಂದ ಪಾರುಮಾಡಿ.

**ಅಣ್ಣ ಬಸವಣ್ಣನವರು**:
ನಾನು ನನ್ನ ವಿಚಾರ ತಿಳಿಸುವೆ ವಿಚಾರಿಸಿ ನಿಮ್ಮ ಅಭಿಪ್ರಾಯ ಸಂಕೋಚವಿಲ್ಲದೇ ತಿಳಿಸಿ.

01. ಕೆಲವು ದಿನ ನೀವು ಊರವರ ಸಹಕಾರದಿಂದ ದಾಸೋಹ ನಡೆಸಿರಿ.
02. ಕೆಲವು ದಿನಗಳೊಳಗೆ ನಿಮಗೆ ನಿರ್ಧಿಷ್ಟಪಡೆಸಿದ ಸಂಖ್ಯೆಯಷ್ಟು ಆರೋಗ್ಯವಂತ ಬಲಶಾಲಿಗಳಾದ ನಿಯಮಾನುಸಾರ ನಿಮ್ಮೂರಿನ ಸುಚರಿತ್ರ, ಸುವಿಚಾರವುಳ್ಳ ಇಚ್ಛೆಯುಳ್ಳ ಸಶಕ್ತ ಯುವಕರನ್ನು ಯೋಧರಾಗಲು ಆಯ್ಕೆಮಾಡಿ. ನಿಯಮಾನುಸಾರ ಅವರ ಸಂಬಳ ಕೊಡುವದಾಗಿ ತಿಳಿಸಿ. ತರಬೇತಿ ಅವಧಿಯಲ್ಲಿ ಅರ್ಧಸಂಬಳ ಅವರಿಗೆ ಕೊಡಿ "ಹತ್ತರಮೇಲೊಂದು" ನೀತಿಯಿಂದ ನೀವು ಅಥವಾ ನಿಮ್ಮೂರಿನ ಧನಿಕರಿಂದ ಕೊಡಿಸಿ.
03. A. ತರಬೇತಿ ಅವಧಿಯ 6 ತಿಂಗಳು ಅವರುನಿಮ್ಮೂರಲ್ಲಿಯೇ ಇರಬೇಕು.
    B. ಮುಂಜಾನೆ ಮತ್ತು ಸಾಯಂಕಾಲ ದಾಸೋಹದ ಎಲ್ಲ ಕೆಲಸಗಳನ್ನು ನಿರ್ವಹಿಸಿ ಅಲ್ಲಿಯೇ ಪ್ರಸಾದ ಮಾಡಬೇಕು
    C. ನಸುಕಿನಲ್ಲಿ ಮತ್ತು ಅನುಕೂಲವಾದ ವೇಳೆಯಲ್ಲಿ ಕಲ್ಯಾಣದಿಂದ ಕಳುಹಿಸಿದ ಯೋಧರು ಅವರಿಗೆ ಸೈನಿಕ ತರಬೇತಿ ನೀಡುವರು
04. ನಿಮ್ಮೂರಿನಲ್ಲಿರುವ ಕಾಯಕಯೋಗಿಗಳೆಲ್ಲ ದಾಸೊಹದಲ್ಲಿ ಪ್ರಸಾದ ಸೇವಿಸಿ ತಮ್ಮ ಅ ಕೆಲಸಗಳ ಜೊತೆಗೆ ಯೋಧರಿಗೆ ಬೇಕಾದ ಬಟ್ಟೆ, ಆಯುಧ ಮತ್ತಿತರ ವಸ್ತುಗಳನ್ನ ಸೈನ್ಯದ ನಿಯಮದಂತೆ ತಯಾರಿಸಬೇಕು ನಿಯಮದಂತೆ. ಅವರಿಗೆ ತರಬೇತಿ ಕೊಡಲು ರಾಜಧಾನಿಯಿಂದ ನುರಿತ ಕೆಲಸಗಾರರನ್ನ ಕಳಿಸಲಾಗುವದು. ಅವರಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಆಡಳಿತಗಾರರು ಕೊಡಬೇಕು ಮತ್ತು ಅವರಿಗೆ ನಿಮಾನುಸಾರ ವೇತನ ಕೊಡಬೇಕು.
05. ಅವರು ತಯಾರಿಸಿದ ಎಲ್ಲ ವಸ್ತುಗಳನ್ನು ರಾಜಕೋಶದ ಹಣದಿಂದ ಖರೀದಿಸಲಾಗುವದು. ಬಂದ ಲಾಭದಲ್ಲಿ ಅರ್ಧ ಕಾಯಕಯೋಗಿಗಳಿಗೆ ಕೊಡಬೇಕು ಇನ್ನರ್ದ ಲಾಭದಲ್ಲಿ ನೀವು ಕಚ್ಚಾವಸ್ತುಗಳಿಗೆ ಮಾಡಿದ ಖರ್ಚುಮತ್ತು ನೀವು ಕೊಟ್ಟ ವೇತನಕ್ಕೆ ಹೊಂದಿಸಿಕೊಂಡು ಉಳಿದ ಹಣ ಅವರ ಭವಿಷ್ಯಕ್ಕಾಗಿ ಮೀಸಲಿಡಿ. ನಿಮಗಾವ ಹಾನಿಯೂ ಆಗುವದಿಲ್ಲ.
06. ಮುಂದಿನ ಸಲ ನಿಯಮಾನುಸಾರ ತೆರಿಗೆ ಮತ್ತು ಕಂದಾಯ ಹೆಚ್ಚಿಸಿ ಅದರಲ್ಲಿ ಸೈನಿಕರ ವೆಚ್ಚಭರಿಸಲು ಸಾಧ್ಯ.
07. ಸಾಯಂಕಾಲ ಎಲ್ಲರೂ ಅಕ್ಷರಾಭ್ಯಾಸ ಮಾಡಿಯೇ ದಾಸೋಹದಲ್ಲಿ ಪ್ರಸಾದ ಸೇವಿಸಬೇಕು. ಅದ ನಿಜವಾದಪೂಜೆ.

08. ಕಾಯಕಕ್ಕೆ ಅವರು ಹೋದಾಗ ಎಲ್ಲಮಕ್ಕಳ ಅಕ್ಷರಾಭ್ಯಾಸ ಇಲ್ಲಿರುವ ವಯೋವೃದ್ದರು ಮತ್ತು ನೀವು ನೋಡಿಕೊಳ್ಳಿ. ಅವರ ಆರೋಗ್ಯ ನೋಡಿಕೊಳ್ಳಲು ಪಂಡಿತರಿಗೆ ವಹಿಸಿ.

09. ಯಾವುದೇ ಕೆಲಸ ಮಾಡದೇ ಇರುವದು ಅಪರಾಧ ಎಂದು ಘೋಸಿಸಿ. ಅವರಿಂದಾಗುವ ಕೆಲಸ ಅವರಿಗೊಪ್ಪಿಸಿ.

10. ಎಲ್ಲ ಪ್ರಾಣಿಪಕ್ಷಿಗಳ ರಕ್ಷಣೆ ಬಹಳ ಮುಖ್ಯ. ಅದನ್ನು ನೀವು ಮಾಡಿ, ಖರ್ಚನ್ನು ರಾಜಸ್ವದಿಂದ ಭರಿಸಲಾಗುವದು. ಮೇವನ್ನ "ಹತ್ತರಮೇಲೊಂದು"ನಿಯಮಾನುಸಾರ ಸಂಗ್ರಹಿಸಿ ಬೆಳೆಬಂದ ಮೇಲೆ ಅವರಿಗೆ ಮರಳಿಸಿ"

ಈ ಎಲ್ಲ ವಿಷಯಗಳನ್ನು ಎಳೆಯಳೆಯಾಗಿ ಅಣ್ಣ ಬಸವಣ್ಣ ಹೇಳುವಾಗ ಅವರ ಮಾತುಗಾರಿಕೆ ಎಲ್ಲರನ್ನೂ ಮಂತ್ರಮುಗ್ದಗೊಳಿಸಿತ್ತು. ಎಲ್ಲರೂ ತಲೆಯಾಡಿಸಿದರು ಪ್ರತಿಯೊಂದು ಮಾತಿನಲ್ಲಿ ಪ್ರಜೆಗಳ ಬಗ್ಗೆ ಕಳಕಳಿಯಿತ್ತು ಮತ್ತು ಆಡಳಿತಗಾರರ ಬಗ್ಗೆ ಕಾಳಜಿ ಇತ್ತು. ರಾಜನ ಆಜ್ಞೆ ಪಾಲನೆಯಾಗುವ ಕಾಳಜಿಯೂ ಅಲ್ಲಿತ್ತು. ಮಾತು ಹೃದಯಕ್ಕೆ ತಲುಪಿತ್ತು. ಅವರಲ್ಲಿರುವ ಜನಪರ ಕಾಳಜಿ ಎಲ್ಲರ ಮನಮುಟ್ಟಿತ್ತು. ಅವರಿಗರಿವಿಲ್ಲದಂತೆ ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿ ರಾಜನ ಪರ ಮತ್ತು ಅಣ್ಣ ಬಸವಣ್ಣನವರ ಪರ ಜೈಕಾರ ಹೇಳಿದರು. ಯಾವಾಗಲೂ ರಾಜನ ಜೈಘೋಷವಾಗುವದು ವಾಡಿಕೆ ಮತ್ತು ಸಂಪ್ರದಾಯ. ಅವರಿಗರಿವಿಲ್ಲದಂತೆ ಬಸವ ಜಯಘೋಷಮಾಡಿ ಹೊಸ ಸಂಪ್ರದಾಯಕ್ಕೆ ನಾಂದಿಹಾಡಿದ್ದರು.

ಆ ಜಯಘೋಷವೇ ಮುಂದೆ ಅಪಾಯವನ್ನು ತರುವದು ಎನ್ನುವದು ಯಾರ ಗಮನಕ್ಕೂ ಬರಲಿಲ್ಲ. ಸಂಪ್ರದಾಯವಾದಿಗಳಿಗೆ ಅಣ್ಣ ಬಸವಣ್ಣನಿಗೆ ಅಧಿಕಾರದ ಆಶೆ ಇದೆ ಎನ್ನುವ ಸುದ್ದಿ ಹಬ್ಬಿಸಿದರು..

ಅಣ್ಣನವರ ಮಾತು ಮುಗಿದ ಮೇಲೆ ಎಲ್ಲ ಆಡಳಿತಗಾರರು ವಿಚಾರದಲ್ಲಿ ಮುಳಗಿದರು.

ಅವರಿಗೆ ಇದಕ್ಕಿಂತ ಒಳ್ಳೆಯ ಉಪಾಯ ಹೊಳೆಯಲಿಲ್ಲ.

ಎಲ್ಲವನ್ನೂ ಕೇಳುತ್ತ ಕುಳಿತ ಮೊದಲು ಪ್ರಸಾದಕ್ಕೆ ಮುಂದಾಗಿದ್ದ ಮುದುಕಿ ಎದ್ದು ಕಟ್ಟೆ ಹತ್ತಿ ಬಂದು ಎಲೆಯಡಿಕೆ ಚೀಲದಿಂದ ಕೆಲವು ನಾಣ್ಯ ತಮ್ಮೂರ ಆಡಳಿತಗಾರನ ಮುಂದೆ ಇಟ್ಟು

"ಯಪ್ಪಾ ನಾಳೆಯ ಕಷ್ಟಕಾಲಕ್ಕೆ ಬರಬಹುದೆಂದು ಈ ನಾಣ್ಯ ಉಳಿಸಿಟ್ಟಿದ್ದೆ. ಇದನ್ನು ಬಳಸಿಕೋ, ದಾಸೋಹದಲ್ಲಿ ಪ್ರಸಾದಮಾಡಿ ಅಲ್ಲಿಯ ಕಸ ಹುಡುಗುವ ಕೆಲಸ ಕೊಡು. ಈಗ ನಾಳೆಯ ಚಿಂತೆ ನನಗಿಲ್ಲ, ನನ್ನ ಅಣ್ಣ ಬಸವಣ್ಣ ನನ್ನ ಕಾಯತಾನ ಮತ್ತ ಸಲುಹತಾನ."

ಎಂದು ಅಲ್ಲಿಂದಲೇ ಅಣ್ಣನವರ ಕಾಲಿಗೆರಗಿದಳು. ಅಣ್ಣನವರ ಮೇಲೆ ಆಕೆಗೆ ಇದ್ದ ಅಭಿಮಾನ ಮತ್ತು ವಿಶ್ವಾಸ ಕಂಡು ಎಲ್ಲರೂ ಆವಾಕ್ಕಾದರು. ಬಸವ ಜೈಕಾರ

ಅವರಿಗರಿವಿಲ್ಲದಂತೆ ಹೊರಟು ಮುಗಿಲು ಮುಟ್ಟಿತು. ಆ ಊರ ಆಡಳಿತಗಾರ ಆಕೆಯನ್ನು ಹಿಡಿದೆತ್ತಿ ಹೇಳಿದ ಆಜ್ಜಿ

“ನಿನ್ನದಷ್ಟೇ ಅಲ್ಲ, ಈ ಊರಿನಲ್ಲಿರುವರೆಲ್ಲರ ಜವಾಬ್ದಾರಿ ನನ್ನದು. ನಿನ್ನ ಆಶೀರ್ವಾದ ಸಾಕು ಈ ಹಣ ಬೇಡ" ಎಂದು ಹಣ ಮರಳಿ ಕೊಟ್ಟ.

ಅಣ್ಣ ಬಸವಣ್ಣನವರು ಅಲ್ಲಿಗೆ ಬಂದು ಆಕೆಯ ಕೈಹಿಡಿದು “ಎಲ್ಲರನ್ನು ಕಾಯುವ ಕೆಲಸ ಕೂಡಲಸಂಗಯ್ಯ ಮಾಡತಾನ, ನಂಬಿಕೆಯಿಡು ಅವನನ್ನು ನಂಬಿ ಕೆಟ್ಟವರಿಲ್ಲ” ಎಂದರು.

ಅಲ್ಲಿದ್ದವರಿಗೆಲ್ಲ ಮಾತನಾಡುವದೇನು ಉಳಿದಿರಲಿಲ್ಲ.

ಎಲ್ಲರೂ ಒಕ್ಕೊರಳಿನಿಂದ ಹೇಳಿದರು "ಅಣ್ಣನವರೆ ನಿಮ್ಮ ಸೂಚನೆಯಂತೆ ಎಲ್ಲಾ ನಡೆಯುತ್ತದೆ" ಎಂದರು.

ಅದರಲ್ಲೊಬ್ಬ "ನಮ್ಮೂರಲ್ಲಿ ಪ್ರತಿಯೊಬ್ಬನ ಪ್ರಸಾದ ಆಗುವವರೆಗೆ ನಾನೊಂದು ಅಗುಳ ಸೇವಿಸುವದಿಲ್ಲ" ಎಂದ.

ಅಂತೂ ಎಲ್ಲರಿಗೂ ಸಮಾಧಾನವಾಗಿತ್ತು ಇಂದು ರಾತ್ರಿಯೇ ನಮ್ಮೂರಲ್ಲಿ ದಾಸೋಹ ಪ್ರಾಂಭಿಸುವೆವು ಎಂದು ಅವಸರದಿಂದ ಶರಣೆಂದು ಹೇಳಿ ಹೊರಟು ಬಿಟ್ಟರು. ಅವರಲ್ಲಿ ಮೂಡಿದ್ದ ಆತ್ಮವಿಶ್ವಾಸ ಅವರ ನಡಿಗೆಯಲ್ಲಿ ಎದ್ದುಕಾಣುತ್ತಿತ್ತು.

"ಅಣ್ಣಾ ನಡೆ ನಮ್ಮಲ್ಲಿಗೆ ಹೋಗೋಣ ಪಾರ್ವತಿ ನಮ್ಮೆಲ್ಲರ ದಾರಿಕಾಯುತ್ತಿರುತ್ತಾಳೆ" ಎಂದರು ಶಿವಣ್ಣನವರು.

"ಸರಿ" ಎಂದ ಅಣ್ಣನ ಮಾತು ಕೇಳಿ ನಾವೆಲ್ಲ ಬಂಡಿ ಏರಿ ಹೊರಟೆವು.

ಶಿವಣ್ಣನವರು ಕುದುರೆ ಬೇರೆಯವರಿಗೆ ತರಲು ಹೇಳಿ ಅಕ್ಕನಾಗಮ್ಮ, ಗಂಗಾಂಬಿಕೆ ಮತ್ತು ಆಣ್ಣನ ಜೊತೆ ಬಂಡಿ ಏರಿದರು. ಅಲ್ಲಿ ನೆರೆದಿದ್ದ ಜನರೆಲ್ಲ ದೂರದವರೆಗೆ ಬಸವಣ್ಣನವರನ್ನು ಮಹಾಮಂತ್ರಿಯಾಗಿ ಅಲ್ಲ ತಮ್ಮ ಅಣ್ಣನನ್ನು ಆತ್ಮೀಯತೆಯಿಂದ ಕಳಿಸಲು ಬಂದು “ಶರಣು ಶರಣಾರ್ಥಿ ಎಂದು ಬೀಳ್ಕೊಟ್ಟರು ಭಾರವಾದ ಮನದಿಂದ.

ನನಗೆ ಮಗಳನ್ನು ಕಳಿಸಲು ಬಂಡಿಯ ಹಿಂದೆ ಬಂದ ನನ್ನ ಅತ್ತೆ ಮತ್ತು ಬೀಗರ ಕಣ್ಣೀರು ನೆನಪಾಯಿತು.

ಗಮನಿಸಿ:

ನಮ್ಮ ದೇಶದಲ್ಲಿ ಆಳಿದ ಅನೇಕ ರಾಜರುಗಳು ನೆನಪು ಇತಿಹಾಸದ ಕಾಲಗರ್ಭದಲ್ಲಿ ಮರೆಯಾಗಿ ಹೋಗಿದೆ ಆದರೂ ಕೆಲವರ ನೆನಪು ಇನ್ನೂ ಹಚ್ಚಹಸಿರಾಗಿದೆ. ಅದರೆ ಅವರಿಗೆಲ್ಲ ನೆರವು ನೀಡಿದ ಮಂತ್ರಿಗಳಲ್ಲಿ ಮೂರ್ನಾಲ್ಕು ಜನರ ಹೊರ್ತಾಗಿ ಯಾರೂ ಜನರ ನೆನಪಿನಲ್ಲಿಲ್ಲ. ಹಾಗೆ ಜನಮನದಲ್ಲಿ ನೆಲೆಯಾಗಿರುವ ಮಂತ್ರಿಗಳಲ್ಲಿ ಚಾಣಕ್ಯ ಮತ್ತು ಬಸವಣ್ಣ ಪ್ರಮುಖರು.

ಕೌಟಿಲ್ಯ ಎಂದೇ ಪ್ರಸಿದ್ಧನಾದ ಚಾಣಕ್ಯ ಸುಮಾರು 2300 ವರ್ಷಗಳ ಹಿಂದೆ ಪ್ರಾಚೀನ ಭಾರತದ ಅದ್ವಿತೀಯ ಅರ್ಥಶಾಸ್ತ್ರಜ್ಞ. ಮೌರ್ಯ ಸಾಮ್ರಾಜ್ಯ ಸ್ಥಾಪನೆಯಲ್ಲಿ ಚಾಣಕ್ಯನ ಪಾತ್ರ ಮಹತ್ವದ್ದು. ಸಣ್ಣ ಸಣ್ಣ ರಾಜ್ಯಗಳನ್ನೆಲ್ಲ ಒಗ್ಗೂಡಿಸಿ ಚಂದ್ರಗುಪ್ತನನ್ನು ಒಂದು ಸಾಮ್ರಜ್ಯದ ಅಧಿಪತಿಯನ್ನಾಗಿ ಮಾಡಿದ ಚಾಣಕ್ಯ ರಾಜ್ಯಶಾಸ್ತ್ರ ನಿಪುಣ, ವಿವೇಕಿ; ತಂತ್ರಗಾರಿಕೆ, ಬುದ್ಧಿವಂತಿಕೆ, ಛಲ ಸಾಹಸಗಳಿಗೆ ಮತ್ತೊಂದು ಹೆಸರು ಚಾಣಕ್ಯ. ಅಧಿಕಾರ ಏಕತ್ರಗೊಳಿಸಿ ಬಲಿಷ್ಟ ರಾಷ್ಟ್ರ ನಿರ್ಮಾಣ ಹಾಗೂ ಪೂರ್ಣ ಅಧಿಕಾರವಿರುವ ರಾಜಾಡಳಿತಕ್ಕೆ ಅಡಿಪಾಯ ಹಾಕಿದ ಆಡಳಿತಗಾರ. ಕೆಲವು ಕಾಲದ ನಂತರ ಅಧಿಕಾರ ಕೇಂದ್ರೀಕರಣದಿಂದ ರಾಜರುಗಳು ನಿರಂಕುಶರಾಗಿ ಪ್ರಜೆಗಳ ಹಿತಾಸಕ್ತಿ ಮರೆತು ಸುಭದ್ರ ರಾಷ್ಟ್ರ ನಿರ್ಮಾಣದ ಅವರ ಪ್ರಯತ್ನ ವಿಫಲವಾಗಿ ರಾಷ್ಟ್ರ ಒಡೆದು ಛಿದ್ರ ಛಿದ್ರವಾಗಿ ಅವರ ಕನಸು ನುಚ್ಚು ನೂರಾಯಿತು. ಪರಕೀಯರ ಆಡಳಿತಕ್ಕೆ ಒಳಪಡುವಂತೆ ಆದದ್ದು ದುರಂತ. ಆದರೂ ಭಾರತ ಸ್ವತಂತ್ರವಾದ ಬಲಿಷ್ಟ ರಾಷ್ಟ್ರವಾಗಿ ಅವರ ಕನಸು ನನಸಾಯಿತು.
ಅಣ್ಣ ಬಸವಣ್ಣ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳುವದು ರಾಜನ ಕೆಲಸ ಎಂದು ಸಾರಿದ ಮಹಾಮಂತ್ರಿ. ಅಧಿಕಾರ ವಿಕೇಂದ್ರೀಕರಣ ಮತ್ತು ಪ್ರಜಪ್ರಭುತ್ವ ಪದ್ಧತಿಗೆ ಅಡಿಪಾಯ ಹಾಕಿದ ಶರಣ. ಹಕ್ಕುಗಳ ಜೊತೆಗೆ ಕರ್ತ್ಯವ್ಯಗಳ ಪಾಲನೆ ಬಗ್ಗೆ ಜನರಿಗೆ ತಿಳಿಹೇಳಿದ ರಾಜಕಾರಣಿ.
ಅನುಭವ ಮಂಟಪ ಸ್ಥಾಪಿಸಿ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಪಾಯ ಹಾಕಿದ ಮತ್ತು ಸಂಸತ್ತು ಹೇಗಿರಬೇಕು ಎಂದು ತೋರಿಸಿಕೊಟ್ಟ ಮೇಧಾವಿ. ಸಂತನೊಬ್ಬ ಉತ್ತಮ ರಾಜಕಾರಣಿಯಾಗಬಲ್ಲ ಎನ್ನುವದನ್ನು ನಿರೂಪಿಸಿದ ಮಹಾಮಂತ್ರಿ. ಅಧಿಕಾರ ವಿಕೇಂದ್ರಿಕರಣದ ಅವರ ತತ್ವಗಳು ಬಲಿದು ಜಗತ್ತಿನ ಬಹುತೇಕ ದೇಶಗಳು ಪ್ರಜಾಪ್ರಭುತ್ವ ಆಡಳಿತ ಪದ್ಧತಿ ಒಪ್ಪಿಕೊಂಡಿದ್ದು ಅವರ ವಿಚಾರಗಳು ಕಾರ್ಯಗತಗೊಳ್ಳುತ್ತಿರುವದು ಅವರ ದೂರದೃಷ್ಟಿಗೆ ಸಾಕ್ಷಿ. ಬಲಿಷ್ಟ ರಾಷ್ಟ್ರ ನಿರ್ಮಾಣವಾದರಷ್ಟೆ ಸಾಕಾಗುವದಿಲ್ಲ ಅದರಲ್ಲಿರುವ ಪ್ರತಿಯೊಬ್ಬ ನಾಗರಿಕರು ಬಸವಣ್ಣ ಹೇಳಿದ ದಾರಿಯಲ್ಲಿ ನಡೆದು ಶರಣರಾಗಿ ತಮ್ಮ ಕರ್ತವ್ಯ ನಿರ್ವಹಣೆ ಮಾಡುವಂತಾಗಬೇಕಾಗಿದೆ. ಬಸವಣ್ಣನವರ ವಿಚಾರಗಳು ಪರಿಪೂರ್ಣವಾಗಿ ಜಾರಿಯಾದರೆ ಜಗವೆಲ್ಲ ಅವರ ಕಲ್ಪನೆಯ “ಕೈಲಾಸ” ಆಗುವದು.
ಅತೀ ಕಠಿಣವಾದ ರಾಜಾಜ್ಞೆ ಆಡಳಿತಗಾರರಿಗೆ ತೊಂದರೆಯಾಗದೆ ಕಾರ್ಯಗತವಾಗಿ ಕಾಯಕಯೋಗಿಗಳ ಹಿತ ಕಾಯ್ದ ಹಾಗೂ ನಿರುದ್ಯೋಗಿಗಳಿಗೆ ಆಶ್ರಯ ಒದಗಿಸಿಕೊಟ್ಟ ವಿವರ ಈ ಕನಸಿನ ಭಾಗದಲ್ಲಿದೆ.
ಗಮನಿಸಿ:

ಜೋಳ ಸಂಗ್ರಹಿಸಲು ನೆಲದಲ್ಲಿ ದೊಡ್ಡ ಗುಂಡಿ ಮಾಡಿ ಅದರ ಒಳಗೆ ಸುತ್ತಲೂ ಮೇವು ಹಾಕಿ ಮಧ್ಯದಲ್ಲಿ ಜೋಳಹಾಕಿ ಬಾಯಿಯನ್ನು ಕಲ್ಲು ಚಪ್ಪಡಿಹಾಕಿ ಸಂಗ್ರಹ ಮಾಡುತ್ತಾರೆ. ಅವಕ್ಕ ಹಗೆವು ಎನ್ನುತ್ತಾರೆ. ಇಲ್ಲಿ ಧಾನ್ಯವನ್ನು ಹಲವು ವರ್ಷ ಕೆಡದಂತೆ ಕಾಪಾಡಬಹುದು. ಕ್ರಿಮಿಕೀಟಗಳಿಂದ ಮತ್ತು ಇಲಿಗಳಿಂದ ಧಾನ್ಯ ಕಾಪಾಡುವ ಸುಲಭ ವಿಧಾನವಿದು.

ನಮ್ಮೂರಲ್ಲಿ ಸಣ್ಣವರಿದ್ದಾಗ ನೋಡಿದ್ದು ಹಣ್ಣು ಅಥವಾ ಇತರ ವಸ್ತುಗಳನ್ನು ಕೊಡುವಾಗ ಒಂದರಿಂದ ಹತ್ತು ಎಣಿಸಿಯಾದ ಮೇಲೆ ಹನ್ನೊಂದು ಎನ್ನದೇ ಇನ್ನೊಂದು ಹಣ್ಣು ಹಾಕಿ ಬಸವಾ, ಶುಭ, ಲಾಭ ಅಥವಾ ಮೇಲೊಂದು ಅನ್ನುವದು ಸಂಪ್ರದಾಯ. ಅವರು ಕೊಡದಿದ್ದರೂ ಮೇಲೊಂದು ಕೊಡು ಎಂದು ಕೇಳಿ ನಾವು ಪಡೆಯುತ್ತಿದ್ದೆವು.

ಈಗ ಹೇಗೋ ಗೊತ್ತಿಲ್ಲ ಆದರೆ ಆ ಸಂಪ್ರದಾಯ ಅಣ್ಣನ ಕಾಲದಿಂದ ನಡೆದು ಬಂದಿರಬಹುದೇ? ಅಣ್ಣನವರ ಮಾತು "ನಮ್ಮ ಜನರು ಸ್ವಾಭಿಮಾನಿಗಳು   ಕಷ್ಟ ಕಾಲದಲ್ಲಿ ಕೊಟ್ಟ ಒಂದು ಕಾಸಿಗೆ ಬದಲಾಗಿ ಹತ್ತು ಕಾಸು ಮರಳಿಸಿ ಋಣ ಸಂದಾಯ ಮಾಡುವ ಸಂಪ್ರದಾಯ ಪಾಲಿಸುತ್ತಾರೆ" ಎನ್ನುವ ಅವರ ನಂಬಿಕೆ ಸುಳ್ಳಾಗಲಿಲ್ಲ.ಈಗಲೂ ಆ ಸಂಪ್ರಾದಾಯ ಮುಂದುವರಿದಿದೆ.

ಈಗಲೂ ಪ್ರತಿಯೊಂದು ಊರಲ್ಲಿ ದಾಸೋಹ ಹಲವು ವಿಧದಲ್ಲಿ ನಡೆದುಕೊಂಡು ಬಂದಿದೆ.

ನಾನು ನೋಡಿರುವ ಕೆಲವು ಉದಾಹರಣೆಗಳು ಇಲ್ಲಿವೆ.

**1. ನಮ್ಮೂರಿನಲ್ಲಿ ನೋಡಿದ ರೊಟ್ಟಿ ಭರಮಣ್ಣ.**

ಪ್ರತಿಮನೆಯ ಮುಂದೆ ಒಂದು ದೊಡ್ಡ ಪುಟ್ಟಿಯನ್ನು ಹೆಗಲ ಮೇಲೆ ಹೊತ್ತು ಬರುತ್ತಿದ್ದ.

ಒಂದು ಎರಡೋ ರೊಟ್ಟಿ ಪಲ್ಲೆ ಆ ಪುಟ್ಟಿಗೆ ಮನೆಯವರು ಹಾಕುತ್ತಿದ್ದರು.

ಅವ ಹೊಳೆದಂಡೆಯ ಕಟ್ಟೆಯ ಮೇಲೆ ರೊಟ್ಟಿಪುಟ್ಟಿ ಮತ್ತು ನೀರು ಇಟ್ಟುಕೊಂಡು ಕೂತುಕೊಳ್ಳುತ್ತಿದ್ದ. ಅಲ್ಲಿಗೆ ಬಂದ ದಾರಿಹೋಕರು, ಬಡವರು, ಕಾರ್ಮಿಕರು ಅಲ್ಲಿ ರೊಟ್ಟಿ ತಿಂದು ನೀರು ಕುಡಿದು ಹೋಗುತ್ತಿದ್ದರು.

ಅವನು ಆಮೇಲೆ ಹೈಸ್ಕೂಲ ಆರಂಭವಾದಾಗ ಅಲ್ಲಿ ಓದಲು ಬಂದ ಪರ ಊರಿನ ವಿಧ್ಯಾರ್ಥಿಗಳಿಗೆ ಅನ್ನದಾತನಾದ. ಅವನಿಗೆ ಶರಣು ಶರಣಾರ್ಥಿ.

**2. ನನ್ನ ಭವಿಷ್ಯ ನಿರ್ಮಿಸಿದ ಪ್ರಸಾದ ಮಠಗಳು:**

ಕನ್ನಡ ಶಾಲೆಯ ಬಸಪ್ಪ ಮಾಸ್ತರರ ಮಗನಾದ ನಾನು ಓದಿ ಪ್ರಧ್ಯಾಪಕನಾಗಿ ಸೇವೆ ಸಲ್ಲಿಸುವಂತಾದದ್ದು ನನಗೆ ಅಶ್ರಯ ಕೊಟ್ಟ ಹುನಗುಂದದ ವಿಜಯಮಹಾಂತೇಶ ದಾಸೋಹ ಮತ್ತು

ಧಾರವಾಡದ ಮುರುಘಾಮಠದ ದಾಸೋಹದಲ್ಲಿ ಸಿಕ್ಕ ಪ್ರಸಾದದ ಫಲ ಎನ್ನುವದರಲ್ಲಿ ಎರಡು ಮಾತಿಲ್ಲ. ನನ್ನಂತಹ ಸಾವಿರಾರು ಜನರ ಜೀವನಕ್ಕೆ ದಾರಿ ಮಾಡಿಕೊಟ್ಟ ಸ್ವರ್ಗಧಾಮಗಳು ಅವು.

3. **ಕೊಪ್ಪಳ ಗವಿಸಿದ್ಧೇಶ್ವರ ಜಾತ್ರೆಯಲ್ಲಿ ನಡೆಯುವ ಮಹಾದಾಸೋಹ:**

ಈ ಮಹಾದಾಸೋಹದಲ್ಲಿ ಸುಮಾರು 15 ಲಕ್ಷ ಕ್ಕಿಂತಲೂ ಹೆಚ್ಚು ಭಕ್ತರು ಪ್ರಸಾದ ಸ್ವೀಕರಿಸುತ್ತಾರೆ. ನಾನಾ ಗ್ರಾಮದ ಜನರು ಕ್ವಿಂಟಲ್‌ಗಟ್ಟಲೇ ಅಕ್ಕಿ, ಬೇಳೆ, ತರಕಾರಿ, ತುಪ್ಪ, ಉಪ್ಪಿನಕಾಯಿ, ಹಾಲು, ಮೊಸರು, ಬೂಂದಿ, ಮಾದಲಿ ಸೇರಿದಂತೆ ನಾನಾ ಆಹಾರ ಧಾನ್ಯ ಹಾಗೂ ಪದಾರ್ಥಗಳನ್ನು ಸಮರ್ಪಿಸುತ್ತಾರೆ. ಇತ್ತೀಚೆಗೆ




ತಮಗೆ ಸಂಕಷ್ಟವಿದ್ದರೂ ಅವರು ತೋರುವ ಪ್ರೀತಿ, ಉತ್ಸಾಹ ಎಂಥವರನ್ನೂ ಬೆರಗಾಗುವಂತೆ ಮಾಡುತ್ತದೆ. ಇದೆಲ್ಲ ಗವಿಸಿದ್ಧನ ಮಹಿಮೆ ಎನ್ನುವುದು ಈಗಿನ ಶ್ರೀಗಳ ವಿಶ್ಲೇಷಣೆ.

ಗ್ರಾಮೀಣ ಪ್ರದೇಶದ ಜನ ತಮ್ಮ ಎತ್ತಿನ ಬಂಡಿಗಳನ್ನು ಸಿಂಗರಿಸಿಕೊಂಡು ದವಸ-ಧಾನ್ಯ ಹಾಗೂ ರೊಟ್ಟಿಗಳನ್ನು ತರುವ ದೃಶ್ಯ ಅಸಾಮಾನ್ಯ. ಲಕ್ಷ ಲಕ್ಷ ಭಕ್ತರಿಗೆ ಪ್ರಸಾದ ವಿತರಿಸಲು ಮಹಾದಾಸೋಹ ಮಂಟಪ ಸಿದ್ಧವಾಗುತ್ತದೆ. ಭವ್ಯ ಪೆಂಡಾಲ್‌ನಲ್ಲಿ ಪ್ರಸಾದ ತಯಾರಿಸಲು ಬೃಹದಾಕಾರದ ಒಲೆಗಳನ್ನು ಸಿದ್ಧ ಮಾಡಲಾಗುತ್ತದೆ. ಏಕಕಾಲಕ್ಕೆ ಸುಮಾರು 40-50 ಕೌಂಟರ್ ತೆರೆಯುವ ಮೂಲಕ ಒಂದೇ ವೇಳೆಗೆ 20 ಸಾವಿರ ಭಕ್ತರು ಪ್ರಸಾದ ಸ್ವೀಕರಿಸಲು ಅನುಕೂಲವಾಗುವಂತೆ ದಾಸೋಹ ಮಂಟಪ ಸಿದ್ಧ ಮಾಡಲಾಗುತ್ತದೆ.

**4. ತುಮಕೂರ ಸಿದ್ಧಗಂಗಾ ಮಠ:**

ನಾನು ನಿವೃತ್ತನಾದಮೇಲೆ ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ ಇಲ್ಲಿಯ ಜೀವನ ಬೇಸರ ತರಿಸಿತು.

2006 ದ ಒಂದು ದಿನ ತುಮಕೂರಿಗೆ ಹೋಗಿ ಮಠದಲ್ಲಿ ಸ್ವಲ್ಪ ಸಮಯ ಕಳೆದು ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಜಿಯವರ ದರ್ಶನ ಪಡೆಯಬೇಕೆನಿಸಿತು.

ನಾನು ಮುಂಜಾನೆ ಮಠದಲ್ಲಿಯ ದಾಸೋಹ ಮಂದಿರದಲ್ಲಿದ್ದೆ. ಆವಾಗ ಅಲ್ಲಿ ಯಾರೂ ಇರಲಿಲ್ಲ ಮೌನವಾಗಿ ಕಣ್ಣುಮುಚ್ಚಿಕೊಂಡು ಕುಳಿತುಕೊಂಡೆ. ನಾನೆಲ್ಲಿ ಕಳೆದು ಹೋದೆ ಗೊತ್ತಿಲ್ಲ.

ಒಬ್ಬರು ಬಂದು ಚಾಪೆ ಹಾಸಬೇಕು ಜಾಗಕೊಡಿ ಎಂದಾಗಲೇ ಎಚ್ಚರವಾದದ್ದು. ಬೇಗ ಎದ್ದುದಕ್ಕೆ ನಿದ್ದೆ ಆವರಿಸಿತ್ತೋ ಗೊತ್ತಾಗಲಿಲ್ಲ. ಮನ ತುಂಬಾ ಉಲ್ಲಸಿತವಾಗಿತ್ತು. ಎದ್ದು ಅಲ್ಲಿದ್ದ ಹುಡುಗರು ಬೇಡವೆಂದರೂ ಚಾಪೆ ಹಾಸುವ ಕೆಲಸ ಮಾಡಿದೆ. ಭಕ್ತರು ಬರಲಾರಂಭಿಸಿದರು. ಅವರು ಪ್ರಸಾದ ಸ್ವೀಕರಿಸಿ ಹೋಗುವಾಗ ಅವರ ಮುಖದಲ್ಲಿ ಮೂಡಿದ ತೃಪ್ತಿ ಮತ್ತು ಆನಂದ ಭಾವ ಎಂದೆಂದಿಗೂ ಮರೆಯಲಾಗಲ್ಲ. ಮರಳಿ ಬರುವಾಗ ಶ್ರೀಗಳಿಂದ ಸಿಗುತ್ತಿದ್ದ ಆಶಿರ್ವಾದ ಮನಕ್ಕೆ ನೆಮ್ಮದಿ ನೀಡಿತು. ಹೀಗೆ ದಿನಾಲೂ ಮಠಕ್ಕೆ ಹೋಗಿ ಬರುವದನ್ನು ಮಾಡಹತ್ತಿದೆ.

ಒಂದು ದಿನ ಪ್ರಸಾದ ಮಂದಿರಕ್ಕೆ ಬಂದ ಒಬ್ಬ ಮಹಿಳೆ ಅಣ್ಣ ಇಂದು ಒಪ್ಪತ್ತು, ರಾತ್ರಿಯೇ ಊಟ ಈಗ ಏನು ತೆಗೆದುಕೊಳ್ಳುವದಿಲ್ಲ. ದಯಮಾಡಿ ಪ್ರಸಾದ (ರಾಗಿಮುದ್ದಿ) ಕೊಡಿ ಎಂದರು. ಸರಿ ಎಂದು ರಾಗಿಮುದ್ದಿ ಕೊಡಲು ಹೋದೆ. ಆಗ ಅವರು ತಮ್ಮ ರೇಶ್ಮೆ ಸೀರೆಯ ಸೆರಗಿನ ತುದಿಯಲ್ಲಿ ಅದನ್ನು ಹಾಕಲು ಹೇಳಿದರು. ನನಗೇ ಮುಜುಗರ ಅಂತಹ ಕಿಮ್ಮತ್ತಿನ ಸೀರೆಯಲ್ಲಿ ಅಂಚಿನಲ್ಲಿ ರಾಗಿ ಮುದ್ದೆ ಹೇಗೆ ಹಾಕುವದು ಎಂದು, ಅಷ್ಟರಲ್ಲಿ ಒಬ್ಬ ಹುಡುಗ ಒಂದು ಮುತ್ತುಗದ ಎಲೆ ತಂದ ಅದರಲ್ಲಿ ಹಾಕಿದ ರಾಗಿಮುದ್ದೆಯನ್ನು ಅವರು ತಮ್ಮ ಸೆರೆಗಿನಲ್ಲಿ ಕಟ್ಟಿಕೊಂಡು ಹಣೆಗೊತ್ತಿ ಕೊಂಡರು. ಅದು ಶ್ರದ್ಧೆ. ಅವರ ಮನದಲ್ಲಿ ಅಷ್ಟು ಆಳವಾಗಿ ಪ್ರಸಾದದ ಬಗ್ಗೆ ಗೌರವ ಮೂಡಿದ ಬಗೆ ಹೇಗೆ? ಆ ದೃಶ್ಯ ನನ್ನ ಮನದಲ್ಲಿ ಅಚ್ಚಳಿಯದೇ ನಿಂತಿದೆ. ಹೀಗೆ ಸುಮಾರು ದಿನ ಮಠಕ್ಕೆ ಹೋಗಿ ಬರುವದನ್ನು ಮಾಡುತ್ತಿರುವಾಗ ಒಂದು ಕಾಲೇಜಿನಲ್ಲಿ ಪ್ರಾಚಾರ್ಯನಾಗಿ ಕೆಲಸ ಮಾಡಲು ಕರೆ ಬಂತು, ಆ ಕೆಲಸದಲ್ಲಿ ನಿರತನಾಗಿಬಿಟ್ಟೆ. ಪೂಜ್ಯರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಠಕ್ಕೆ ಹೋದೆ. ಅಲ್ಲಿಯ ಸಂಭ್ರಮ ವರ್ಣಿಸಲು ಸಾಧ್ಯವೇ ಇಲ್ಲ. ಕೆಲವು ಸಮಯ ಅಲ್ಲಿ ಪ್ರಸಾದ ವಿತರಣೆಮಾಡುವ ಕಾಯಕ ಮಾಡಿದರಾಯಿತು ಒಂದು ಪೆಂಡಾಲ ಹತ್ತಿರ ಹೋಗಿ ಅಲ್ಲಿದ್ದವರೊಬ್ಬರನ್ನು ನನಗೆ ಪ್ರಸಾದ ವಿತರಣೆಯ ಕೆಲಸ ಕೊಡಿ ಎಂದೆ. ಅವರು ಬನ್ನಿ ಸರ್ ಅಲ್ಲಿ ನಿಂತಿರುವ ನೂರಾರು ಯುವಕರು ಸೇವೆ ಮಾಡಲು ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ ತಾವು ಹಿರಿಯರು ಪ್ರಸಾದ ಸೇವಿಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಂದು ಪೆಂಡಾಲದೊಳಗೆ ಕರೆದೊಯ್ದರು.

ನಾನು ಯಾವುದೋ ಅದ್ದೂರಿ ಮದುವೆಯ ಊಟಕ್ಕೆ ಬಂದಿರುವ ದೃಶ್ಯ ಅಲ್ಲಿತ್ತು. ವಿವಿಧ ತಿಂಡಿ ತಿನಿಸುಗಳನ್ನು ಸೇವಿಸಿ ಹೊರಬಂದೆ. ಇದಕ್ಕೆ ಹಿರಿಯರು ಅಮೃತ ಎಂದಿರಬಹುದೇ?

ಇಷ್ಟು ಜನರಿಗೆ ಪ್ರಸಾದ ತಯಾರಿಸುವ ಸ್ಥಳ ನೋಡುವ ಎಂದು ಅಲ್ಲಿಗೆ ಹೋದೆ. ಅಲ್ಲಿಯ ನೂರಾರು ಅಡಿಗೆ ಮಾಡುವವರು ಮತ್ತು ಅಷ್ಟೆ ಸಹಾಯಕರು ಅಲ್ಲಿದ್ದರು.




ಅಂದು ಬಸವಕಲ್ಯಾಣದಲ್ಲಿ ಒಂದು ಲಕ್ಷ ತೊಂಬತ್ತು ಸಾವಿರ ಶರಣರಿಗೆ ದಾಸೋಹ ವ್ಯವಸ್ಥೆ ಹೀಗೆ ಇರಬಹುದಾ? ಎಂದೆನಿಸಿತು ಒಂದು ಕ್ಷಣ.

ಅಲ್ಲಿಯೇ ಬಯಲಿನಲ್ಲಿ ಅನೇಕ ಟ್ರಕ್ಕುಗಳು ಸಾಲುಗಟ್ಟಿ ನಿಂತಿದ್ದವು . ಅಲ್ಲಿದ್ದವರಲ್ಲಿ ಒಬ್ಬ "
ದಾನ ಬಂದ ಧಾನ್ಯ ಇಳಿಸಿಕೊಳ್ಳಲಾಗುತ್ತಿಲ್ಲ, ಧಾನ್ಯ ಎಲ್ಲಿ ಇಡಬೇಕು ಗೊತ್ತಾಗುತ್ತಿಲ್ಲ, ಬೇಗ ಬೇಗ ಇಳಿಸಿಕೊಳ್ಳಿ."

ನನಗೆ ಅಣ್ಣನವರ ಈ ವಚನ ನೆನಪಾಯಿತು.

**ನಿಮ್ಮ ಶರಣರ ದಾಸೋಹಕ್ಕೆ ತನುಮನಧನವಲಸದಂತೆ ಮಾಡಯ್ಯಾ**
**ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ ಮನ ದಾಸೋಹಕ್ಕೆ ಲೀಯವಹಂತೆ ಮಾಡು**
**ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ, ಹಾಡಿ, ನೋಡಿ,**
**ಕೂಡಿ, ಭಾವಿಸಿ ಸುಖಿಸಿ ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ**/459

------- ಅಣ್ಣ ಬಸವಣ್ಣ

ಅಣ್ಣಾ ಬಸವಣ್ಣಾನವರು ಅಂದು ಹಾಕಿದ ಬೀಜ ಮೊಳಕೆವೊಡೆದು ಬೆಳೆದು ಮರವಾಗಿ ಅನಂತ ಜನರಿಗೆ ನೆರಳಾಗಿದೆ. ಅಂತಹ ನೆರಳಲ್ಲಿ ಆಶ್ರಯ ಪಡೆದು ನಾನೂ ನನ್ನ ಜೀವನ ರೂಪಿಸಿಕೊಂಡೆ ಎನ್ನುವದು ಹೆಮ್ಮೆಯ ವಿಷಯ. ಅಲ್ಲಲ್ಲಿ ಅಷ್ಟು ಮಹತ್ವವಲ್ಲದ ನನ್ನ ಅನುಭವಗಳು ಇಣುಕುತ್ತಿವೆ ಕ್ಷಮಿಸಿ.

**ಕಂಡುದ ಕಾಣೆನೆಂಬುದ ಎರಡನೂ ಅರಿಯದೆ ತವಕ ತಲ್ಲಣಕ್ಕೆ ಎಡೆಯಾದೆನು:**

**ಕಂಡ ಕನಸು ದಿಟವಾಗಿ ಕಂಡೆನೆಂಬೆ ಕಂಡೆನೆಂಬುದು ಬೆನ್ನ ಬಿಡದು ನೋಡಾ.**

**ಕಂಡುದ ಕಾಣೆನೆಂಬುದ ಎರಡನೂ ಅರಿಯದೆ ತವಕ ತಲ್ಲಣಕ್ಕೆ ಎಡೆಯಾದೆನು.**

**ತವಕದ ಕೂಟ ನಿಮ್ಮಲ್ಲಿ ತದುಗತವಾದೆನು ಕಪಿಲಸಿದ್ಧಮಲ್ಲಿನಾಥಯ್ಯಾ,**

**ನಿಮ್ಮ ಕರುಣವೆನಗೆ ಸಾಧ್ಯವಾಯಿತ್ತು**/242 ------ ಸಿದ್ದರಾಮೇಶ್ವರ

ಗಮನಿಸಿ:
ಕನಸು ಎಂದರೆ ಒಬ್ಬ ವ್ಯಕ್ತಿ ನಿದ್ರೆಯಲ್ಲಿ ಅನುಭವಿಸುವ 'ಕಥೆ'. ಇದು ಕಾಲ್ಪನಿಕವಾಗಿರುತ್ತದೆಯಾದರೂ ನಿಜ ಜೀವನಕ್ಕೆ ಸಂಬಂಧಿಸಿರುತ್ತದೆ. ಕನಸು ನಮಗೆ ೨ ಕಾರಣಗಳಿಂದ ಬೀಳಬಹುದು.
೧. ನಾವು ಯಾವ ವಿಷಯದ ಬಗ್ಗೆ ಹೆಚ್ಚು ಆಲೋಚಿಸುತ್ತೇವೆಯೋ ಅಥವಾ ಚಿಂತೆ ಮಾಡುತ್ತೇವೆಯೋ ಆ ವಿಷಯ ನಮಗೇ ತಿಳಿಯದಂತೆ ನಮ್ಮ ಮನಸ್ಸಿನ ಆಳದವರೆಗೆ ತಲುಪಿರುತ್ತದೆ ಹಾಗಾಗಿ ಅದು ಕನಸಿನಲ್ಲಿ ಕಾಣಬಹುದು.
೨. ಕನಸು ವ್ಯಕ್ತಿಯ ಜೀವನದಲ್ಲಿ ಮುಂದೆ ನಡೆಯುವ ಕಾರ್ಯದ ಮುನ್ಸೂಚನೆಯೂ ಆಗಿರಬಹುದು. ನನ್ನ ಕನಸಿಗೆ ಮೊದಲ ಕಾರಣ ಕಾರಣವಾಗಿರಬಹುದು. ನನ್ನನ್ನು ಹೆಚ್ಚು ಆಲೋಚಿಸುವಂತೆ ಮಾಡುವ ಕಾರಣಗಳು ಎರಡು ಮೊದಲನೆಯದು ನಾನು ಓದುವ ವಚನಗಳು ಎರಡನೆಯದು ನನ್ನ ಅನುಭವಕ್ಕೆ ಬರುವ ಘಟನೆಗಳು. ಅದಕ್ಕಾಗಿ ನನ್ನ ಅನುಭವಗಳನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತಿರುವೆ ಹಾಗಾಗಿ ಕನಸಿನ ದಿಶೆಗಳು ಮತ್ತು ನನ ಮನದಲ್ಲಿ ನಡೆದ ಕೋಲಾಹಲ ನಿಮಗೆ ಗೊತ್ತಾಗಬಹುದು. ಅವುಗಳು ನಿಮಗೆ ಬಾಲಿಶ ಎನಿಸಿದರೆ ಕ್ಷಮಿಸಿಬಿಡಿ.

## ನನಗೆ ಸಿಕ್ಕ ವಜ್ರಕವಚ ಅಣ್ಣನವರ ಆಶೀರ್ವಾದ:

ಶಿವಣ್ಣನವರ ಮನೆ ತಲುಪುವಾಗುವಾಗ ಸಾಯಂಕಾಲವಾಗಹತ್ತಿತ್ತು. ಬಂಡಿಗಳೆಲ್ಲ ಬಂದು ನಿಂತದ್ದು ಒಂದು ಭವ್ಯವಾದ ಕೋಟೆಯಂತಹ ಮನೆಯ ಮುಂದೆ. ವಿಶಾಲವಾದ ಬಾಗಿಲ ದಾಟಿ ಒಳಹೋಗಿ ಅಲ್ಲಿದ್ದ ವಿಶಾಲವಾದ ಬಯಲಲ್ಲಿ ಬಂಡಿ ನಿಂತವು. ಅಕ್ಕನಾಗಮ್ಮ ಸಾಮಾನುಗಳನ್ನು ಒಳಗೆ ತರಲು ಹೇಳಿ ಎಲ್ಲರೊಡನೆ ಇಳಿದು ಹೋದರು.
ಮನೆ ಒಳಹೋಗಲು ಒಂದು ದೊಡ್ಡ ಬಾಗಿಲು ಅಲ್ಲಿ ಎರಡೂ ಕಡೆ ನೂರಾರು ಜನ ಕೂಡಬಹುದಾದ ಬಂಕಗಳು. ದಾಟಿ ಒಳಗೆ ಹೋದಾಗ ದೊಡ್ಡ ಕಟ್ಟೆ, ಕಟ್ಟೆಯ ಮೇಲೆ ಸಾಮಾನುಗಳನ್ನಿಳಿಸಿ ಬಂದೆವು. ಕೊಳ್ಳ ಹರಿದು ಎತ್ತುಗಳನ್ನು ಹೊಡೆದುಕೊಂಡು ಮೋನಣ್ಣನ ಹಿಂದೆ ಹೊರಟೆ. ಕಟ್ಟೆಯ ಮಗ್ಗಲು ಭಾಗದಲ್ಲಿ ಒಂದು ದನದ ಕೊಟ್ಟುಗೆ ಆಗಲೇ ಹಲವಾರು ಎತ್ತುಗಳು, ಆಕಳುಗಳು, ಎಮ್ಮೆಗಳು ಅಲ್ಲಿದ್ದವು. ನಾವು ಅಲ್ಲಿ ಜಾಗ ಹುಡುಕಿ ಎತ್ತುಕಟ್ಟಿ ಅಲ್ಲಿಯೇ ಇದ್ದ ಬಾವಿಯ ಕಟ್ಟೆಯಲ್ಲಿದ್ದ ನೀರಿನಿಂದ ಕೈಕಾಲು ತೊಳೆದುಕೊಂಡು ಕಟ್ಟೆಗೆ ಬಂದೆವು.

ಶಂಕರಮ್ಮ ಕುಡಿಯಲು ನೀರು ಕೊಟ್ಟು ದಾಸೋಹಕ್ಕೆ ಹೋಗಬೇಕು ಬೇಗ ಜಳಕಮಾಡಿ ಬನ್ನಿ ಎಂದರು.
ಅವರ ಪಕ್ಕದಲ್ಲಿದ್ದ ನನ್ನಾಕೆ ಪೆಚ್ಚಾಗಿ ನಿಂತಿದ್ದಳು.
ಅಷ್ಟರಲ್ಲಿ ಸ್ನಾನಮಾಡಿ ಶುಭ್ರವಾದ ಧೋತರ ಮೇಲೊಂದು ಕಸಿಅಂಗಿ ಹಾಕಿದ ಭವ್ಯಮೂರ್ತಿ ಅಣ್ಣ ಬಸವಣ್ಣನವರು ಮತ್ತು ಅವರ ಜೊತೆ ಅದೇ ರೀತಿಯ ಬಟ್ಟೆ ಧರಿಸಿದ ಶಿವಣ್ಣನವರು ಮತ್ತು ಅವರ ಪತ್ನಿ ಪಾರ್ವತಮ್ಮನವರು ಅಲ್ಲಿಗೆ ಬಂದರು.
ಅವರನ್ನ ನೋಡಿ ನಾವೆಲ್ಲ "ಶರಣು ಶರಣಾರ್ಥಿ" ಎಂದೆವು ಅವರು ಪ್ರತಿಯಾಗಿ "ಶರಣು ಶರಣಾರ್ಥಿ" ಎಂದು ಎಲ್ಲರಿಗೂ ಕುಳಿತುಕೊಳ್ಳಲು ಹೇಳಿದರು.
ಶಿವಣ್ಣನವರು "ಗುರು ಮತ್ತು ಮೋನಣ್ಣ ನೀವೀ ಬಟ್ಟೆ ತೆಗೆದುಕೊಳ್ಳಿ" ಎಂದು ನನಗೆ ಮತ್ತು ಮೋನಣ್ಣ ಕೈಯಲ್ಲಿ ಬಟ್ಟೆ ನೀಡಿದರು. ಪಾರ್ವತಮ್ಮನವರು ನನ್ನಾಕೆ ಹಾಗೂ ಶಂಕರಮ್ಮನವರ ಕೈಯಲ್ಲಿ ಸೀರೆಗಳನ್ನಿಟ್ಟರು.
ನಾನು ಮತ್ತು ಮೋನಣ್ಣ ಎದ್ದು ಹೋಗಿ ಅಣ್ಣನವರ ಲ್ಮಗಿಯಲು ಮುಂದಾದೆವು ಆಗ ಅಣ್ಣನವರು "ನಿಮ್ಮಿಬ್ಬರ ಮನೆಯವರು ಭಕ್ತರ ಕಾಲು ಒರೆಸಲು ತಮ್ಮ ಹಾಗೂ ನಿಮ್ಮ ಬಟ್ಟೆ ಉಪಯೋಗಿಸಿದ್ದು ನಾನು ನೋಡಿರುವೆ ಅದಕ್ಕೆ ಈ ಬಟ್ಟೆ ಕೊಡಲಾಗಿದೆ. ಆದರೆ ಇದನ್ನು ನಾನು ಪುಕ್ಕಟೆಯಾಗಿ ಕೊಡುವದಿಲ್ಲ ಇದರ ಬೆಲೆ ಕೊಡಬೇಕು" ಎಂದರು.
ನನಗೇನು ದಿಕ್ಕು ತೋರಲಿಲ್ಲ .
"ಅಣ್ಣ ನಿಮಗೇನು ಕೊಡಲಿ, ನಿನ್ನಾಶ್ರಯ ಕೋರಿ ಬಂದವರು ನಾವು" ಎಂದು ತಲೆತಗ್ಗಿಸಿನಿಂತೆ, ಮೋನಣ್ಣನ ಸ್ಥಿತಿಯು ಅದೇ ಆಗಿತ್ತು"ನಿನ್ನ ತಲೆಯ ಮೇಲಿನ ಶಲ್ಲೆ ನನಗೆ ಕೊಡು" ಎಂದರು ಬಸವಣ್ಣ. ದಿಗಿಲುಬಡಿದಂತಾಯಿತು ನಾನು ಬಡಿಬಡಿಸಿದೆ
"ಅಣ್ಣಾ ನಾನು ಗಾಣಹೊಡಿಯುವಾಗ ಕೈಒರಸಿದ ಎಣ್ಣೆಯ ಕಮಟು ವಾಸನೆ ಮತ್ತು ಬಿಸಿಲಿನಲ್ಲಿ ಮೈ ಒರೆಸಿಕೊಂಡ ಬೆವರಿನ ವಾಸನೆಯಿಂದ ಅದು ಮಲಿನವಾಗಿದೆ. ಅದನ್ನು ನೀವು ಮುಟ್ಟುವದೂ ಬೇಡ ಅಣ್ಣಾ, ಕ್ಷಮಿಸಿ ಅಣ್ಣಾ ಕ್ಷಮಿಸಿ" ಎಂದು ಅವರ ಕಾಲ ಮೇಲೆ ಕುಸಿದೆ.
ನನ್ನ ಹಿಡಿದೆತ್ತಿ ಅಣ್ಣ ಹೇಳಿದರು
"ನನಗೆ ಹಲವು ವಿಧದ ಪರಿಮಳದ ಪರಿಚಯ ಇದೆ, ಆದರೆ ಕಾಯಕಯೋಗಿಯ ಬೆವರಿನ ಪರಿಮಳ ಹೇಗಿರುತ್ತೆ ಎಂದು ತಿಳಿಯುವ ಆಸೆಯಾಗಿದೆ. ಅದಕ್ಕಾಗಿ ಅದನ್ನು ಕೊಡು"
ಅವರೇನು ಹೇಳುತ್ತಿದ್ದಾರೆ ನನಗೆ ಅರ್ಥವಾಗಲಿಲ್ಲ
ಸಂಮೋಹನಕ್ಕೊಳಗಾದವನಂತೆ ತಲೆಯ ಮೇಲಿನ ಶಲ್ಲೆ ಅವರ ಪಾದದಮೇಲೆ ಇಡಲು ಹೋದೆ, ಅದಕ್ಕೆ ಆಸ್ಪದ ಕೊಡದೆ ಶಲ್ಲೆಯನ್ನು ಕೈಯಲ್ಲಿ ತೊಗೊಂಡು ಕಣ್ಣಿಗೊತ್ತಿಕೊಂಡರು ಮರಳಿ ನನಗೆ ನೀಡಿದರು.

"ಈ ರಾಜ್ಯದಲ್ಲಿಯ ಪ್ರತಿಯೊಬ್ಬರ ತಲೆಯ ಮೇಲಿನ ಶಲ್ಲೆಯಿಂದ ಇಂತಹ ಪರಿಮಳ ಬಂದಾಗಲೇ ಈ ರಾಜ್ಯ ಕೈಲಾಸವಾಗುವದು, ನನ್ನ ಕನಸು ನನಸಾಗುವದು" ಎಂದರು

ಎಲ್ಲರೂ ಬೆರಗುಗಣ್ಣುಗಳಿಂದ ನೋಡುತ್ತಿದ್ದರು ಅಷ್ಟೇ. ಅಲ್ಲಿ ಮೌನ ಮನೆಮಾಡಿತ್ತು.

ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯವರು ಜೊತೆಯಾಗಿ ವಚನ ಹೇಳಲು ಆರಂಭಿಸಿದರು

**ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.**

**ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.**

**ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.**

**ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.**

**ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.**

**ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು.**

**ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು.**

**ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು.**

**ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ?**/218

-- ಅಕ್ಕಮಹಾದೇವಿ"

ವಚನ ಹಾಡುವದು ಮುಗಿದ ಮೇಲೆ

ಶಿವಣ್ಣನವರು "ಗುರು ಆ ಶಲ್ಲೆ ಕೊಡು ನನಗೂ ಆ ಪರಿಮಳ ಹೇಗಿರುತ್ತೆ ಎಂದು ತಿಳಿಯುವ ಕುತೂಹಲ" ಎಂದರು. ಮರುಮಾತನಾಡದೇ ಅವರ ಕೈಗೆ ಶಲ್ಲೆ ಕೊಟ್ಟೆ ಅದನ್ನವರು ಕಣ್ಣಿಗೊತ್ತಿಕೊಂಡು ಮರಳಿಸಿದರು.

ಮೌನಮುರಿದ ಶಿವಣ್ಣನವರು "ನೀವೆಲ್ಲ ತಯಾರಾಗಿ ಬನ್ನಿ ನಾವು ದಾಸೋಹದಲ್ಲಿರುತ್ತೇವೆ" ಎಂದು ಹೊರಟರು ಅವರ ಜೊತೆ ಅಕ್ಕನಾಗಮ್ಮ ಮತ್ತು ಪಾರ್ವತಮ್ಮ ಹೊರಟರು.

ನನ್ನಾಕೆ ಶಿವಣ್ಣನವರ ಕೊಟ್ಟ ಶಲ್ಲೆಯನ್ನು ಮಗುವಿನಂತೆ ಎದೆಗವಚಿ ಕೊಂಡು ಚೀಲದಲ್ಲಿಟ್ಟು ಗಂಗಾಂಬಿಕೆವರೊಡನೆ ಒಳಹೋದಳು.

ಯಾವ ಮಾತಿಲ್ಲದೆ ನಾನು ಮತ್ತು ಮೋನಣ್ಣ ಬಾವಿ ದಂಡೆಗೆ ಹೋಗಿ ಜಳಕಮಾಡಿ ಅಣ್ಣ ಕೊಟ್ಟ ಧೋತರ, ಕಸಿ ಆಂಗಿ ಮತ್ತು ತಲೆಯ ಮೇಲೆ ಶಲ್ಲೆ ಧರಿಸಿ ಬಂದೆವು. ನನಗೆಲ್ಲ ಮೈ ಪುಳಕ, ವಿಚಿತ್ರ ಅನುಭವ, ಮೈಯೆಲ್ಲ ರಕ್ಷಾಕವಚ ಧರಿಸಿದ ಅನುಭವ.

ಮೋನಣ್ಣನಿಗೂ ಅದೇ ಅನುಭವ. ಕಟ್ಟೆಯಮೇಲೆ ಕುಳಿತ ಕಣ್ಣು ಮುಚ್ಚಿ

1. **ಬಸವಣ್ಣನ ಪಾದವ ಕಂಡೆನಾಗಿ ಎನ್ನಂಗ ನಾಸ್ತಿಯಾಯಿತ್ತು.**

**ಚೆನ್ನಬಸವಣ್ಣನ ಪಾದವ ಕಂಡೆನಾಗಿ ಎನ್ನ ಪ್ರಾಣಬಯಲಾಯಿತ್ತು.**

**ಪ್ರಭುವೆ, ನಿಮ್ಮ ಶ್ರೀಚರಣಕ್ಕೆ ಶರಣೆಂದೆನಾಗಿ ಎನ್ನ ಅರಿವು ಸ್ವಯವಾಯಿತ್ತು.**

**ಚೆನ್ನಮಲ್ಲಿಕಾರ್ಜುನದೇವಯ್ಯಾ**

**ನಿಮ್ಮ ಶರಣರ ಕರುಣವ ಪಡೆದೆನಾಗಿ ನಿನಗೆ ಮತ್ತಾವುದಿಲ್ಲವಯ್ಯ ಪ್ರಭುವೆ.** / 296

----- ಅಕ್ಕಮಹಾದೇವಿ

**2.** **ಕೃಷಿಯ ಮಾಡಿ ಉಣ್ಣದೆ**

**ಹಸಿವು ಹರಿವ ಪರಿ ಇನ್ನೆಂತೊ?**

**ಕರ್ಮಯೋಗವ ಮಾಡದೆ**

**ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೊ?**

**ಬೇಯದಲಶನವನುಂಬ ಠಾವಾವುದು,**

**ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಕ್ಕೆ?**/1371 – ಸಿದ್ದರಾಮೇಶ್ವರ

ಎಂದು ಮೈಮರೆತು ಹಾಡಿದರು.
ಇದುವರೆಗೆ ನಡೆದ ಯಾವ ಘಟನೆಗಳೂ ನನಗೆ ಅರ್ಥವಾಗಲಿಲ್ಲ. ನಾವೆಲ್ಲ ಮೂಕವಾಗಿ ಯೋಧರ ಜೊತೆ ದಾಸೋಹದ ಕಡೆ ನಡೆದೆವು.
ದಾರಿಯಲ್ಲಿ ಆಕೆ ಮೆಲುವಾಗಿ ಹೇಳಿದಳು "ಮದುಮಗನಂಗ ಕಾಣಿಸಲಾಕಹತ್ತೀರಿ" ಎಂದಳು.
ನಾನು ಪಿಸುಗುಟ್ಟಿದೆ “ನೀನು ಕೆಂಪು ಸೀರೆ ಉಟಕೊಂಡು "ಮದುಮಗಳಂಗ ಕಾಣಿಸ್ತಿ". ಆಕೆ ನಾಚಿ ನೀರಾಗಿ ಹೇಳಿದಳು "ಇದು ನನ್ನ ತವರು ಮಹಾಮನೆ ಆಯೇರಿ". ಆಕೆಯ ಮುಖದಲ್ಲಿ ಸಂತೋಷ ಬೆಳದಿಂಗಳ ಮಂದ ಬೆಳಕಿನಾಗ ಕಾಣಿಸಿತು.

## ಹಳ್ಳಿಯಲ್ಲಿ ದಾಸೋಹ:

ನಾವು ಈ ಊರಿಗೆ ಬಂದು ಕೆಲವು ಗಂಟೆಯಾಗಿರಬಹುದು. ಶಿವಣ್ಣನವರು ನಮ್ಮ ಜೊತೆಯೇ ಇದ್ದರು.
ಅದು ಹೇಗೆ ದಾಸೋಹದ ವ್ಯವಸ್ಥೆ ಮಾಡಿದರು?
ಕೆಲವು ಘಂಟೆಗಳ ಮೊದಲು ಪ್ರಸ್ತಾಪಿಸಿದ ವಿಚಾರಗಳು ಇಷ್ಟು ಬೇಗ ಕಾರ್ಯಗತವಾದ ಬಗೆ ಹೇಗೆ?
ನನ್ನ ತಲೆಯಲ್ಲಿ ಆ ಪ್ರಶ್ನೆಗಳು ಕೊರೆಯತೊಡಗಿದವು.
ವಿಚಾರ ಮಾಡುತ್ತಾ ಮಾಡುತ್ತ ಊರಿನ ಹೊರಗೆ ಬಂದದ್ದು ಗೊತ್ತಾಗಲೇ ಇಲ್ಲ.

ಅಲ್ಲಿ ಇದ್ದದ್ದು ಬಯಲು ಭೂಮಿ ಒಂದು ಹೊಲದಲ್ಲಿ ಅನೇಕಾನೇಕ ದನಗಳು ಮುಂದೆ ಹಾಕಿದ ಮೇವು ತಿನ್ನುತ್ತಿದ್ದವು. ಅವುಗಳ ಕೊರಳಲ್ಲಿದ್ದ ಗಂಟೆಗಳ ನಿನಾದ ಮಧುರ ಸಂಗೀತದ ಹಾಗಿತ್ತು.
ಇನ್ನೊಂದು ಹೊಲದ ತುಂಬ ಜನ ಕುಳಿತಿದ್ದರು. ಅಲ್ಲಿ ಮಾತು ಚರ್ಚೆ ಮುಗಿದು ಮೌನ ಮನೆಮಾಡಿತ್ತು.
ಗಂಗಾಂಬಿಕೆಯವರನ್ನು ಕಂಡಕೊಡಲೇ ಅಲ್ಲಿದ್ದ ಹೆಣ್ಣುಮಕ್ಕಳಲ್ಲಿ ಕೆಲವರು ಎದ್ದು ಬಂದು ಶರಣು ಶರಣಾರ್ಥಿ ಹೇಳಿ ಅಕ್ಕಾ ಬಾ ಆರಾಮಾಗಿದ್ದೀಯಾ ಎಂದು ಮನೆಮಗಳಂತೆ ಆದರದಿಂದ ಬರಮಾಡಿಕೊಂಡರು. ಗಂಗಾಂಬಿಕೆ ಹೋಗಿ ಅಣ್ಣನವರ ಪಕ್ಕ ಕುಳಿತುಕೊಂಡರು.
ಶಿವಣ್ಣನವರು ಅಕ್ಕನಾಗಮ್ಮನವರಿಗೆ ವಚನ ಹೇಳಲು ವಿನಂತಿಸಿದರು.
ಅಕ್ಕನಾಗಮ್ಮನವರು ಎದ್ದು ಹೋಗಿ ಜನರ ಗುಂಪಿನಲ್ಲಿ ಕುಳಿತುಕೊಂಡು "ನಾನು ಭೀಮಕ್ಕ ಮತ್ತು ಗೆಳತಿಯರ ಜೊತೆ ವಚನಹೇಳುತ್ತೇನೆ" ಎಂದರು.
ಮೊದಲು ಆಯ್ದಕ್ಕಿ ಲಕ್ಕಮ್ಮನ ಪರಿಚಯ ಮಾಡಿಕೊಟ್ಟರು. ಕಾಯಕಕ್ಕೆ ಲಕ್ಕಮ್ಮ ಕೊಟ್ಟ ಮಹತ್ವ ಮತ್ತು ಪ್ರತಿಯೊಂದು ಅಕ್ಕಿಕಾಳು ಎಷ್ಟು ಮಹತ್ವದ್ದು ಎಂದು ವಿವರಿಸಿದರು. ವಚನದಲ್ಲಿ ಬರುವ ಎಲ್ಲ ಶರಣರ ಕಾಯಕ ಮತ್ತು ತತ್ವ ವಿವರಿಸಿದರು.ಅಕ್ಕನಾಗಮ್ಮನವರು ಎಲ್ಲರ ಹಿರಿಯಕ್ಕನಂತೆ ಹೇಳಿದ ಮಾತುಗಳಲ್ಲಿ ಆತ್ಮೀಯತೆ ಇತ್ತು, ಪ್ರೀತಿ ಇತ್ತು, ಮಮತೆ ಇತ್ತು ಮತ್ತು ಮುದ್ದುಮಕ್ಕಳಿಗೆ ತಿಳಿಹೇಳುವ ಹಿರಿತನ ಅಲ್ಲಿತ್ತು.

**ಬಸವಣ್ಣನ ಪ್ರಸಾದವಕೊಂಡು ಎನ್ನ ಕಾಯ ಶುದ್ಧವಾಯಿತ್ತಯ್ಯಾ. ಚೆನ್ನಬಸವಣ್ಣನ ಪ್ರಸಾದವಕೊಂಡು ಎನ್ನ ಜೀವ ಶುದ್ಧವಾಯಿತ್ತಯ್ಯಾ. ಮಡಿವಾಳಯ್ಯನ ಪ್ರಸಾದವಕೊಂಡು ಎನ್ನ ಭಾವ ಶುದ್ಧವಾಯಿತ್ತಯ್ಯಾ.**
**ಶಂಕರದಾಸಿಮಯ್ಯನ ಪ್ರಸಾದವಕೊಂಡು ಎನ್ನ ತನು ಶುದ್ಧವಾಯಿತ್ತಯ್ಯಾ.**
**ಸಿದ್ಧರಾಮಯ್ಯನ ಪ್ರಸಾದವಕೊಂಡು ಎನ್ನ ಮನ ಶುದ್ಧವಾಯಿತ್ತಯ್ಯಾ.**
**ಘಟ್ಟಿವಾಳಯ್ಯನ ಪ್ರಸಾದವಕೊಂಡು ಎನ್ನ ಪ್ರಾಣ ಶುದ್ಧವಾಯಿತ್ತಯ್ಯಾ.**
**ಅಕ್ಕನಾಗಾಯಮ್ಮನ ಪ್ರಸಾದವಕೊಂಡು ಎನ್ನ ಅಂತರಂಗ ಶುದ್ಧವಾಯಿತ್ತಯ್ಯಾ.**
**ಮುಕ್ತಾಯಕ್ಕಗಳ ಪ್ರಸಾದವಕೊಂಡು ಎನ್ನ ಬಹಿರಂಗ ಶುದ್ಧವಾಯಿತ್ತಯ್ಯಾ.**
**ಪ್ರಭುದೇವರ ಪ್ರಸಾದವಕೊಂಡು ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ.**
**ಇವರು ಮುಖ್ಯವಾದ ಏಳುನೂರೆಪ್ಪತ್ತು ಅಮರಗಣಂಗಳ ಪ್ರಸಾದವಕೊಂಡು ಬದುಕಿದೆನಯ್ಯಾ ಮಾರೇಶ್ವರಪ್ರಿಯ ಅಮಲೇಶ್ವರಾ,**
**ನಿಮ್ಮ ಶರಣರ ಪಾದಕ್ಕೆ ಅಹೋರಾತ್ರಿಯಲ್ಲಿ ನಮೋ ನಮೋ ಎನುತಿರ್ದೆನು.**/17

---- ಆಯ್ದಕ್ಕಿ ಲಕ್ಕಮ್ಮ
ಅಲ್ಲಿದ್ದ ಎಲ್ಲರೂ ಅವರ ಜೊತೆ ಹಾಡಿದರು.
ಆಮೇಲೆ ಅಲ್ಲಿದ್ದವರು ಒಬ್ಬೊಬ್ಬರಾಗಿ ವಚನ ಹಾಡಿದರು, ಕೋಲಾಟ ಆಡಿದರು ಮತ್ತು ಜಾನಪದ ಗೀತೆಗಳನ್ನು ಹಾಡಿದರು. ತಿಳಿ ಬೆಳದಿಂಗಳಲ್ಲಿ ಅವರೆಲ್ಲ ಹಾಡಿ ಕುಣಿದಾಡುವನ್ನು ನೋಡಿ ನಮ್ಮೂರಿನಲ್ಲಿ ಹೆಣ್ಣುಮಕ್ಕಳು ಆಚರಿಸುವ ಗೌರಿ ಹುಣ್ಣಿವೆ ಸಂಭ್ರಮ ನೆನಪಾಯಿತು.
ಎಲ್ಲರನ್ನೂ ಪ್ರಸಾದ ಸ್ವೀಕರಿಸಲು ಕರೆಯುತ್ತ ಶಿವಣ್ಣ ಹೇಳಿದರು
"ಅಣ್ಣ ಬಸವಣ್ಣ ಊರಿಗೆ ಬಂದಾನ ಅಂತ ಗೊತ್ತಾದ ಕೂಡಲೇ ನೀವೆಲ್ಲ ಅಂಬಲಿ ಮಾಡಿಕೊಂಡು ಬಂದಿದ್ದೀರಿ. ಎಲ್ಲರ ಅಂಬಲಿ ಅಣ್ಣನವರಿಗೆ
ಸವಿಯಲಾಗುವದಿಲ್ಲ. ಅದಕ್ಕಾಗಿ ಎಲ್ಲರ ಅಂಬಲಿ ಸೇರಿಸಿ ಪ್ರಸಾದ ಮಾಡಲಾಗಿದೆ.
ಈಗ ಅಣ್ಣನ ಜೊತೆ ಎಲ್ಲರೂ ಪ್ರಸಾದ ಸ್ವೀಕರಿಸೋಣ.
ಅದಕ್ಕೂ ಮೊದಲು ರಾಜಾಜ್ಞೆಯ ಕೆಲವು ವಿವರ ತಿಳಿಸುವೆ.
ಅವರು ಹೇಳಿದ ವಿಚಾರಗಳ ಸಾರಾಂಶ

1. ನಾಳೆಯಿಂದ ಇಲ್ಲಿ ದಾಸೋಹ ಪ್ರಾರಂಭವಾಗುತ್ತದೆ. ನೀವು ಪ್ರಸಾದ ತೆಗೆದುಕೊಂಡು ನಿಮ್ಮ ನಿಮ್ಮ ಕೆಲಸಕ್ಕೆ ಹೋಗುವದು ಅನಿವಾರ್ಯ. ಎಲ್ಲರೂ ಒಂದಿಲ್ಲೊಂದು ಕಾಯಕದಲ್ಲಿ ತೊಡಗಬೇಕು. ಸಾಯಂಕಾಲ ಬೇಗ ಬಂದು ಅಕ್ಷರಾಭ್ಯಾಸ ಮಾಡಿ ಪ್ರಸಾದ ಸ್ವೀಕರಿಸಬೇಕು.
2. ದುಡಿದ ಪ್ರತಿಯೊಬ್ಬರಿಗೂ ಪ್ರತಿ ಸೋಮವಾರ ನಿಯಮದಂತೆ ವಾರದ ಸಂಬಳ ಕೊಡಲಾಗುವದು.
3. ಹೊಲವಿಲ್ಲದವರು ಕೆರೆ ಕಟ್ಟೆ ಕಾಮಗಾರಿಗೆ ಹೋಗಬೇಕು.
4. ನಿಮ್ಮ ಮಕ್ಕಳನ್ನು ನನ್ನ ಮನೆಯಲ್ಲಿ ಬಿಟ್ಟು ಹೋಗಬೇಕು ಅವರ ಯೋಗಕ್ಷೇಮ ಪಾರ್ವತಿ ಮತ್ತು ನಮ್ಮೂರಿನಲ್ಲಿರುವ ವೃದ್ದರು ನೋಡಿಕೊಳ್ಳುತ್ತಾರೆ. ಅವರ ಲಾಲನೆ ಪಾಲನೆ ಮಾಡುತ್ತ ಅಕ್ಷರಾಭ್ಯಾಸ ಮಾಡಿಸುತ್ತಾರೆ.
5. A. ಕಾಯಕಯೋಗಿಗಳು ನಾಳೆಯಿಂದಲೇ ತಮ್ಮ ಕಾಯಕ ಪ್ರಾರಂಭ ಮಾಡಬೇಕು.
   B. ನಿಮಗೆ ಬೇಕಾದ ಕಚ್ಚಾ ವಸ್ತುಗಳನ್ನು ಮತ್ತು ಸೈನ್ಯಕ್ಕೆ ಬೇಕಾಗಿರುವ ವಸ್ತು
   ತಯಾರಿಸುವ ತರಬೇತಿಯನ್ನು ಕಲ್ಯಾಣದಿಂದ ಬಂದ ಪರಿಣಿತರು ಕೊಡುತ್ತಾರೆ.
   C. ನಿಮ್ಮ ವಸ್ತುಗಳ ಬೆಲೆಯನ್ನು ನಿಯಮದಪ್ರಕಾರ ರಾಜಕೋಶದಿಂದ ನೀಡಲಾಗುವದು. ನಿಮಗೂ ನಿಯಮಾನುಸಾರ ಪ್ರತಿದಿನ ಸಂಬಳ ನೀಡಲಾಗುವದು.

D. ನಿಮಗಾಗಿ ಮಾಡಿದ ವೆಚ್ಚವನ್ನು "ಹತ್ತರಮೇಲೊಂದು ನಿಯಮದಂತೆ" ನಿಮಗೆ
ಬಂದ ಆದಾಯದಲ್ಲಿ ಕಡಿತಗೊಳಿಸಲಾಗುವದು.

6. ಒಟ್ಟಾರೆಯಾಗಿ ನಿಮ್ಮ ಮತ್ತು ಪ್ರಾಣಿ ಪಕ್ಷಿಗಳ ಯೋಗಕ್ಷೇಮ ರಾಜರು ವಹಿಸುತ್ತಾರೆ.
ನೀವು ಕೆಲಸ ಮಾಡಿ ಅವರಿಗೆ ನಿಮ್ಮ ಕೃತಜ್ಞತೆ ತಿಳಿಸಿ. ಶ್ರದ್ಧೆಯಿಂದ ನೀವು ಮಾಡುವ ಪರಿಶ್ರಮಿಸವೇ ರಾಜರಿಗೆ ನೀವು ಕೊಡುವ ಭೂಕಂದಾಯ" ಎಂದರು.

ಎಲ್ಲರೂ ಚಪ್ಪಾಳೆ ತಟ್ಟಿ ತಮ್ಮ ಸಂತೋಷ ವ್ಯಕ್ತಪಡಿಸಿದರು. ರಾಜರ ಮತ್ತು ಬಸವಣ್ಣನವರ ಜೈಕಾರ ಮುಗಿಲುಮುಟ್ಟಿತು.
ಎಲ್ಲರೂ ಪ್ರಸಾದ ಸೇವಿಸಿ ತಮ್ಮ ಮನೆಗೆ ತೆರಳಿದರು. ನಾವೆಲ್ಲ ಮನೆಗೆ ಮರಳಿ ಕಟ್ಟೆಯ ಮೇಲೆ ಮಲಗಿದೆವು.
ಅಣ್ಣ ಅಲ್ಲಿದ್ದ ಮಂದಬೆಳಕಿನಲ್ಲಿ ಬರೆಯುತ್ತಿದ್ದಿದ್ದು ಕಾಣಿಸುತ್ತಿತ್ತು.
ನಿದ್ದೆ ಯಾವಾಗ ಬಂತು ಗೊತ್ತಾಗಲಿಲ್ಲ.

**ಅಯ್ಯಾ, ತನ್ನ ತಾನರಿದಡೆ ತನ್ನರುಹೆ ಗುರು; ಆ ಅರಿದ ನಿಶ್ಚಯವೆ ಲಿಂಗ:**

ಎಂದಿನಂತೆ ಬೇಗ ಎದ್ದೆ ಕೈಮುಗಿದು "ಶರಣು ಶರಣಾರ್ಥಿ" ಎಂದೆ. ಅಲ್ಲಿ ಅಣ್ಣ ಬಸವಣ್ಣನವರು ನಿಂತ ಹಾಗೆ ಭಾಸವಾಯಿತು ಮನಸ್ಸಿಗೆ. ಆದರೆ ಅಲ್ಲಿ ಯಾರೂ ಇರಲಿಲ್ಲ. ಮೋನಣ್ಣ ಎದ್ದು ಆಗಲೇ ಹೋಗಿದ್ದರು.
ಎದ್ದು ಅಲ್ಲಿಟ್ಟ ನೀರಿನಲ್ಲಿ ಮುಖತೊಳೆದುಕೊಂಡು, ಬಾವಿಕಟ್ಟೆಯ ಕಡೆಗೆ ಹೊರಟೆ.
ಕೊಟ್ಟಿಗೆ ಖಾಲಿಯಾಗಿತ್ತು ಅಲ್ಲೊಂದು ಶಗಣಿ ರಾಶಿ ಇತ್ತು. ಒಂದು ಪುಟ್ಟಿ ತುಂಬಿ ಅದನ್ನೆಲ್ಲ ಎಲ್ಲಿ ಹಾಕಬೇಕು ಎಂದು ಯೋಚಿಸುತ್ತಿರುವಾಗ ಮಂದಬೆಳಕಿನಲ್ಲಿ ಕೊಟ್ಟಿಗೆಯ ಆ ದೂರದ ತುದಿಯಲ್ಲಿ ಒಬ್ಬರು ನೀರು ಹಾಕುವದು ಒಬ್ಬರು ತೊಳೆಯುವದು ಕಾಣಿಸಿತು.
ಮಂದಬೆಳಕಿನಲ್ಲಿ ಅವರಲ್ಲೊಬ್ಬ ಅಣ್ಣ ಬಸವಣ್ಣ ಇನ್ನೊಬ್ಬ ಶಿವಣ್ಣನಿರಬೇಕೆಂದು ಅನಿಸಿತು. ಅದು ನಿಜವೋ ಅಥವಾ ನನ್ನ ಮನದ ಭ್ರಮೆಯೋ ಗೊತ್ತಾಗಲಿಲ್ಲ.
ಅಷ್ಟರಲ್ಲೊಬ್ಬ ನನ್ನ ಹತ್ತಿರ ಬಂದು ಪುಟ್ಟಿ ಹೊರಿಸಲೇ ಎಂದ. ಪುಟ್ಟಿ ಹೊರಿಸಿ ಮತ್ತು ಅದನ್ನೆಲ್ಲ ಎಲ್ಲಿ ಹಾಕಬೇಕು ತಿಳಿಸಿ ಎಂದೆ. ಅವನೊಟ್ಟಿಗೆ ಆ ಕೆಲಸ ಮುಗಿಸಿ ಭಾವಿಕಟ್ಟೆಯಲ್ಲಿ ಜಳಕಮಾಡಿ ಶುಚಿಯಾಗಿ ಕಟ್ಟೆಯ ಮೇಲೆ ಕುಳಿತುಕೊಂಡೆ. ಕಣ್ಣುಮುಚ್ಚಿ ಯೋಚಿಸತೊಡಗಿದೆ.
ಮೋನಣ್ಣ "ಲಿಂಗಪೂಜೆ ಮುಗಿಯಿತು" ಎಂದು ಪಿಸುಗುಟ್ಟೆದಾಗ ಕಣ್ಣು ಬಿಟ್ಟು ನೋಡಿದೆ. ಕಟ್ಟೆಯ ತುಂಬಾ ಜನ ಅವರೆಲ್ಲ ಮೌನವಾಗಿ ಕುಳಿತು ಅಣ್ಣನವರ ಕಡೆ ನೋಡುತ್ತಿದ್ದರು. ನನ್ನ ಮನದಲ್ಲಿ ದುಃಖ ಮನೆಮಾಡಿತು.

ಲಿಂಗಪೂಜೆ ಸಮಯದಲ್ಲಿ ಮೈಮರೆತು ನಿದ್ದೆ ಮಾಡಿದೆನಲ್ಲ ಎಂಬ ಭಾವ ಮನದಲ್ಲಿ ಮೂಡಿ ಕಣ್ಣಂಚಿನಲ್ಲಿ ನೀರು ಬಂತು. ಏನು ಮಾಡಬೇಕು ತಿಳಿಯಲಿಲ್ಲ. ಕಣ್ಣುಮುಚ್ಚಿಕೊಂಡು ಮತ್ತೆ ಮೈಮರೆತೆ. ಮೈಯೆಲ್ಲ ಮಿಂಚು ಹೊಡೆದಂತಾಯಿತು, ಯಾರೋ ಕಣ್ಣೀರು ಒರೆಸುತ್ತಿದ್ದಾರೆನಿಸಿ ಕಣ್ಣು ತೆರೆದೆ. ಎದುರಿಗೆ ಕುಳಿತಿದ್ದವರು ಬಸವಣ್ಣ ತಮ್ಮ ಬೆರಳಿನಿಂದ ಕಣ್ಣೀರು ಒರೆಸುತ್ತಿದ್ದರು. ಇದು ನಿಜವೋ ಭಾವನೆಯೋ ಗೊತ್ತಾಗಲಿಲ್ಲ. "ಯಾಕ ಏನಾಯಿತು" ಎಂಬ ಅಣ್ಣ ಬಸವಣ್ಣನವರ ಮಾತು ಕೇಳಿದಾಗ ಇದು ವಾಸ್ತವ ಎನ್ನುವದು ಅರಿವಾಗಿ ಹೇಳಿದೆ. "ನಾನು ಕಣ್ಣು ಮುಚ್ಚಿ ಕುಳಿತರೆ ಸಾಕು ನನ್ನ ಸುತ್ತಮುತ್ತಲ ಜಗತ್ತ ಮರೆತು ಹೋಗತ್ತೈತಿ ಹಾಗ ಅಲ್ಲೆಲ್ಲ ಬೆಳದಿಂಗಳ ಬೆಳಕು ತುಂಬಿಕೊಂಡಹಾಗ ಆಗತ್ತೈತಿ. ಮನದಲ್ಲಿ ವಿಚಾರಗಳು ಮಾಯವಾಗಿ ನಾನೂ ಬೆಳದಿಂಗಳಾಗಿ ಬೆಳಕಿನಾಗ ಬೆರೆತು ಹೋದಂಗ ಆಗತ್ತೈತಿ. ಆಗ ಅಲ್ಲಿ ಬೆಳಕ ಬಿಟ್ಟು ಏನೂ ಇರುವದಿಲ್ಲ. ಆದರ ಇದು ನಿದ್ದಿ ಅಲ್ಲ. ವಿಚಿತ್ರ ಅನುಭವ." ಎಂದು ಮನದಾಳದ ಮಾತು ಹೇಳಿದೆ.



"ನಾವು ಲಿಂಗವಿಡಿದು ಈ ಸ್ಥಿತಿಗೆ ಹೋಗತೀವಿ. ಬಯಲು ಬಯಲ ಬೆರೆಯುವ ಕ್ರಮ ಇದು. ನಿನಗೆ ಯಾವ ಸಾಧನವಿಲ್ಲದೇ ಆ ಸ್ಥಿತಿಗೆ ಹೋಗುವದು ಸಾಧ್ಯವಾಗಿದೆ ಅದಕ್ಕೇ ಅಲ್ಲಭಪ್ರಭುದೇವರು ಹೇಳಿದ್ದು

**ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ**

**ಬಯಲಾಯಿತ್ತಯ್ಯಾ.**

**ಬಯಲ ಜೀವನ ಬಯಲ ಭಾವನೆ**

**ಬಯಲು ಬಯಲಾಗಿ ಬಯಲಾಯಿತ್ತಯ್ಯಾ.**

**ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು**

**ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ**/1164

---- ಅಲ್ಲಮಪ್ರಭು

ನಿನಗೆ ಅನಾಯಾಸವಾಗಿ ಆ ಸ್ಥಿತಿ ಲಭ್ಯವಾಗತ್ತೈತಿ ಅದಕ ಸಂತೋಷಪಡು. “ನಿನ್ನ ಸಾಧನೆ ಮುಂದುವರಿಸು" ಎಂದು ಹರಸಿದರು. ಏನು ಹೇಳಬೇಕು ತಿಳಿಯದೆ ಕೈಮುಗಿದು ಕುಳಿತೆ.
ಆಗ ಗಂಗಾಂಬಿಕೆಯವರು ಒಂದು ವಚನ ಹೇಳಹತ್ತಿದರು

**ಅಯ್ಯಾ, ತನ್ನ ತಾನರಿದಡೆ ತನ್ನರುಹೆ ಗುರು;**

**ಆ ಅರಿದ ನಿಶ್ಚಯವೆ ಲಿಂಗ;**

**ಆ ಅರುಹಿನ ನಿಶ್ಚಯ ನಿಷ್ಪತ್ತಿಯೆ ಜಂಗಮ;**

**ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರಲಿಂಗವು ತಾನೆ!**

**ಇಂತು ಪ್ರಮಥರ ಸಚ್ಚಿದಾನಂದಲೀಲೆಯ**

**ಅರಿದಾನಂದಿಸ! ಸಂಗನ ಬಸವೇಶ್ವರ!** /706

----ಜಗಳಗಂಟ ಕಾಮಣ್ಣ

**ಬಸವಣ್ಣನ ಪ್ರಸಾದವಕೊಂಡು ಎನ್ನ ಕಾಯ ಶುದ್ಧವಾಯಿತ್ತಯ್ಯಾ**

**ಅಂಗೇಂದ್ರಿಯ ಕರಣ ಹರಣದಲ್ಲಿ ಲಿಂಗವ ಧರಿಸಿ**

**ಲಿಂಗಾಂಗಿಯಾದನಯ್ಯ ನಿಮ್ಮ ಶರಣ.**

**ಅದೆಂತೆಂದಡೆ:**

**ಘ್ರಾಣದಲ್ಲಿ ಲಿಂಗವ ಧರಿಸಿದನಾಗಿ, ಘ್ರಾಣ ಲಿಂಗದ ಘ್ರಾಣವಾಯಿತ್ತು.**

**ಜಿಹ್ವೆಯಲ್ಲಿ ಲಿಂಗವ ಧರಿಸಿದನಾಗಿ, ಜಿಹ್ವೆ ಲಿಂಗದ ಜಿಹ್ವೆಯಾಯಿತ್ತು.**

**ನೇತ್ರದಲ್ಲಿ ಲಿಂಗವ ಧರಿಸಿದನಾಗಿ, ನೇತ್ರ ಲಿಂಗದ ನೇತ್ರವಾಯಿತ್ತು.**

**ತ್ವಕ್ಕಿನಲ್ಲಿ ಲಿಂಗವ ಧರಿಸಿದನಾಗಿ, ತ್ವಕ್ಕು ಲಿಂಗದ ತ್ವಕ್ಕಾಯಿತ್ತು.**

**ಶ್ರೋತ್ರದಲ್ಲಿ ಲಿಂಗವ ಧರಿಸಿದನಾಗಿ, ಶ್ರೋತ್ರ ಲಿಂಗದ ಶ್ರೋತ್ರವಾಯಿತ್ತು.**

**ಮನದಲ್ಲಿ ಲಿಂಗವ ಧರಿಸಿದನಾಗಿ, ಮನ ಲಿಂಗದ ಮನವಾಯಿತ್ತು.**

**ಸರ್ವಾಂಗದಲ್ಲಿ ಲಿಂಗವ ಧರಿಸಿದನಾಗಿ, ಸರ್ವಾಂಗಲಿಂಗವಾಯಿತ್ತು,**

**ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣಂಗೆ./813**

--- ಸ್ವತಂತ್ರ ಸಿದ್ದಲಿಂಗ

https://www.facebook.com/vachanasanchaya/posts/660801984019813/

ಗಮನಿಸಿ:

ಒಮ್ಮೊಮ್ಮೆ ಕನಸಿನಲ್ಲಿ ಕಂಡದ್ದು ಸತ್ಯ ಘಟನೆ ಎಂದು ಭಾಸವಾಗುತ್ತದೆ ಮತ್ತು ಅದೇ ವಾಸ್ತವ ಎನ್ನುವಂತಾಗುತ್ತದೆ.

ಕಲ್ಯಾಣ ಕ್ರಾಂತಿಯ ನಂತರ ರಾಜಕೀಯ ಮತ್ತಿತರ ಕಾರಣಗಳಿಂದ ಶರಣ ಸಾಹಿತ್ಯ ಕಾಲಗರ್ಭದಲ್ಲಿ ಮೂರುನೂರು ವರ್ಷಗಳ ಕಾಲ ಮರೆಯಾಗಿತ್ತು.

ಆದರೆ ಶರಣ ಸಾಧನೆಗಳು ಮತ್ತು ಕೆಲವು ವಚನಗಳು ಜನಪದದಲ್ಲಿ ಹಾಸುಹೊಕ್ಕಾಗಿ ಹೋಗಿದ್ದವು.

ಶರಣರ ಅಧ್ಭುತ ಸಾಧನೆಗಳು ಅವರಿಗೆ ಪವಾಡಗಳಾಗಿ ಕಂಡರೆ ಶರಣರು ದೇವತಾ ಸ್ವರೂಪರಾಗಿ ಬಿಟ್ಟಿದ್ದರು.

ಕ್ರಾಂತಿಯ ಕಾವು ಕಡಿಮೆಯಾದ ಮೇಲೆ ಅಲ್ಲಿ ನಡೆದದ್ದು ಸಂಪ್ರದಾಯವಾದಿಗಳು ಮತ್ತು ಬಸವಾನುಯಾಯಿಗಳ ನಡುವಿನ ಹೊಂದಾಣಿಕೆ.

ಸಂಪ್ರಾದಾಯವಾದಿಗಳು ಬಸವಣ್ಣ ಮತ್ತು ಇತರ ಶರಣರ ಹೆಸರಿನಲ್ಲಿ ಗುಡಿಗಳನ್ನು ಕಟ್ಟಿಸಿ ಅಲ್ಲಿ ಅವರ ಪೂಜೆ ನಿರ್ವಹಿಸುವ ಕಾರ್ಯ ಪ್ರಾರಂಭಿಸಿ ಬಸವ ಅನುಯಾಯಿಗಳನ್ನು ತಮ್ಮೆಡೆಗೆ ಸೆಳೆದರು.

ಶರಣರ ಹೆಸರಿನ ಹಿಂದೆ ಅವರ ಜಾತಿಯನ್ನು ಅಥವಾ ಕಾಯಕಸೂಚಕ ಹೆಸರನ್ನು ಜೋಡಿಸುವ ಕೆಲಸವನ್ನು ಮಾಡಿ ಬಸವಾನುಯಾಯಿಗಳ ಒಕ್ಕಟ್ಟು ಮುರಿಯುವ ಪ್ರಯತ್ನದಲ್ಲಿ ಸಫಲರಾದರು.

ಅಷ್ಟೆ ಅಲ್ಲ ವಚನಗಳ ಅರ್ಥ ತಮಗಿಷ್ಟವಾದಂತೆ ಕೊಡಲು ಪ್ರಾರಂಭಿಸಿ ಬಸವ ತತ್ವ ಪ್ರಚಾರದ ಮುಂದಾಳತ್ವವಹಿಸಿದರು.

ಸಂಪ್ರಾದಾಯವಾದಿಗಳ ಆಶೆಯಂತೆ ಬಸವಪೂರ್ವದ ಪರಸ್ಥಿತಿ ಪುನರ್ನಿರ್ಮಾಣವಾಯಿತು.

ಅನೇಕ ಶರಣರ ಹೆಸರಿನಲ್ಲಿ ಜಾತಿಸೂತಕ ಮಠಗಳು ಮತ್ತು ಮಂದಿರಗಳನ್ನು ಆಯಾ ಸಮಾಜದವರು ನಿರ್ಮಿಸಿ ಎಲ್ಲರನ್ನು ಒಂದುಗೂಡಿಸಿದ ಬಸವಣ್ಣವರ ಕೆಲಸವನ್ನು ಮಣ್ಣುಪಾಲು ಮಾಡಲಾಗಿತ್ತು.

ಅಂದು ಬಿತ್ತಿದ ಬೇಧಭಾವದ ವಿಷಬೀಜ ಬೆಳೆದು ಹೆಮ್ಮರವಾಗಿ ಇಂದಿನ ಈ ಸ್ಥಿತಿಗೆ ಕಾರಣವಾಗಿದೆ.

ಮುಖ್ಯಮಂತ್ರಿಯಾಗಿ ಅಣ್ಣ ಬಸವಣ್ಣನವರು ಜನರನ್ನು ಕಾಪಾಡಿದ ಉತ್ತಮ ಕಾರ್ಯಗಳು ಮತ್ತು ವಿಧಾನಗಳನ್ನು ಮರೆಮಾಡಿ ರಾಜನ ಆಸನದ ಕೆಳಗೆ ಸಿಕ್ಕ ನಿಧಿಯಿಂದ ಕಾರ್ಯನಿರ್ವಹಿಸಿ ಜನರ ಕಷ್ಟ ಬಗೆಹರಿಸಿದರು ಎನ್ನುವದನ್ನು ಎಲ್ಲರೂ ನಂಬುವಂತೆ ಮಾಡಿದರು.

ಅದರಲ್ಲಿ ರಾಜನನ್ನು ಎತ್ತರದ ಸ್ಥಾನದಲ್ಲಿ ಬಿಂಬಿಸುವ ರಾಜನ ಅಸ್ಥಾನಿಕ ಸಾಹಿತಿಗಳ ಕರಾಮತ್ತೂ ಇರಬಹುದು.

15 ನೇಯ ಶತಮಾನದಲ್ಲಿ ಶರಣಸಾಹಿತ್ಯ ಪುನರುಥ್ಥಾನ ಮಾಡಿದ ಕವಿಗಳು, ಸಾಹಿತಿಗಳು ಮತ್ತು ಇತಿಹಾಸಕಾರರು ಬಹಳಷ್ಟು ಪುರಾವೆಗಳು ಲಭ್ಯವಾಗದ ಕಾರಣ ಶರಣರನ್ನು ದೇವತಾರೂಪಿಗಳಾಗಿ ಕಂಡು ಅದೇ ರೀತಿ ಅವರನ್ನು ಪವಾಡಪುರುಷರನ್ನಾಗಿ ಚಿತ್ರಿಸಿದ್ದಾರೆ. ಶರಣರು ಸಾಮಾನ್ಯರಾಗಿದ್ದರೂ ತಮ್ಮ ಅಸಾಮಾನ್ಯ ಪ್ರತಿಭೆ, ಸತತ ಅಧ್ಯಯನ ಮತ್ತು ಜನಪರ ಕಾಳಜಿಯಿಂದ ಜನರ ಮಧ್ಯದಲ್ಲಿದ್ದು ಅವರ ನೋವು ನಲಿವುಗಳಿಗೆ ಸ್ಪಂದಿಸಿ ಸಾಂತ್ವನ ನೀಡಿದ ಮಾಹಾಮಹಿಮರು ಎನ್ನುವ ವಿಚಾರ ಕನಸಿನಲ್ಲಿದೆ.

ಶರಣರನ್ನು ದೇವರನ್ನಾಗಿಸಿ ಅವರ ತತ್ವಗಳನ್ನು ಅರಿಯುವ ಪ್ರಯತ್ನ ನಡೆದಿದೆ ಬಸವಕಾಲದ ಸಮಾಜ ಪುನರ್ನಿರ್ಮಾಣದ ಪ್ರಯತ್ನ ನಡೆದಿದೆ.

(ನೀರನ್ನು ಪಾತ್ರೆಯ ಮೇಲಿನಿಂದ ಕಾಯಿಸಲಾಗುವದಿಲ್ಲ ನೀರು ಕಾಯಿಸುವದನ್ನು ಪಾತ್ರೆಯ ತಳದಿಂದ ಮಾಡಬೇಕು)

ನನ್ನ ಕನಸುಗಳಲ್ಲಿ ಸಾಮಾನ್ಯರಂತೆ ಇದ್ದು ಅಸಾಮಾನ್ಯ ಕೆಲಸ ಮಾಡಿದ ಶರಣರ ಕಾರ್ಯವನ್ನು ವಿವರಿಸುವ ಪ್ರಯತ್ನ ಕಂಡು ಬರುತ್ತದೆ.

## ಮನದಲ್ಲಿ ಲಿಂಗವ ಧರಿಸಿದನಾಗಿ, ಮನ ಲಿಂಗದ ಮನವಾಯಿತ್ತು:

ಪೂಜೆ ಮುಗಿಸಿಕೊಂಡು ಅಣ್ಣ ಬಸವಣ್ಣನವರು ಮತ್ತು ಶಿವಣ್ಣನವರು ಆಡಳಿತಾತ್ಮಕ ಕೆಲಸಕ್ಕಾಗಿ ಅಂಗರಕ್ಷಕರೊಡನೆ ಕುದುರೆ ಏರಿ ಹೊರಟುಹೋದರು. ದಾಸೋಹದಲ್ಲಿ ಏನಾದರೂ ಕೆಲಸ ಮಾಡಿದರಾಯಿತೆಂದುಕೊಂಡು ನಾನು ಮೋನಣ್ಣನೊಡಗೂಡಿ ದಾಸೋಹದ ಕಡೆ ಹೊರಟೆ. ಅಲ್ಲಿ ಜನವೋ ಜನ. ಬಯಲು ತುಂಬಾ ನೆರಳಿಗಾಗಿ ಹಂದರ ಹಾಕುತ್ತಿದ್ದವರು ಕೆಲವರಾದರೆ, ಅದನ್ನು ತೋರಣಕಟ್ಟಿ ಸಿಂಗರಿಸುವವರು ಹಲವು ಜನ. ತಮ್ಮ ಮನೆಗಳಿಂದ ತಂದ ಗಳ ಮತ್ತು ಕೌದಿ, ಹೊದಿಕೆ ಹಾಕಿ ಸುಂದರವಾದ ಮಂಟಪ ನಿರ್ಮಾಣವಾಗಹತ್ತಿತ್ತು. ಆಗ ನಮಗೆ ಗಂಟೆಗಳ ನಿನಾದ ಕೇಳಿಸತೊಡಗಿತು. ಅದೇನೆಂದು ನೋಡಲು ಹೋದೆವು.

ಅಲ್ಲಿ ಸಣ್ಣ ಸಣ್ಣ ಹಂದರಹಾಕಿ ನೆರಳಮಾಡಿ ಮೇವು ಹಾಕಿ ಕಟ್ಟಿದ ದನಗಳ ಸಾಲುಗಳು. ದಿನಗಳ ನಂತರ ಹೊಟ್ಟೆತುಂಬ ಮೇವು ತಿಂದು ಮಲಗಿ ಗೋಣುಹಾಕುವಾಗ ಅವುಗಳ ಕೊರಳಲ್ಲಿದ್ದ ಗಂಟೆ ಸರದಿಂದ ಬರುತ್ತಿದ್ದ ಮಧುರ ನಿನಾದ ಕೇಳುತ್ತಲೇ ಇರಬೇಕು ಎನ್ನಿಸುತ್ತಿತ್ತು.

ಅಷ್ಟರಲ್ಲಿ ಒಬ್ಬ ಯುವಕ ಅಲ್ಲಿಗೆ ಬಂದು"ಅಣ್ಣ ಶರಣು ಶರಣಾರ್ಥಿ" ಎಂದ. ನಾವು ಪ್ರತಿಯಾಗಿ "ಶರಣು ಶರಣಾರ್ಥಿ" ಹೇಳಿದೆವು.

"ನಿನ್ನೆ ಗಂಗಾಂಬಿಕೆಯವರ ಜೊತೆ ನೀವು ಬಂದದ್ದನ್ನು ನೋಡಿದ್ದೆ. ನನ್ನ ಹೆಸರು ಮಹಾದೇವ, ನಿನ್ನೆಯಿಂದ ಯುವಕರೆಲ್ಲ ಕೂಡಿ ಮಾಡಿದ ವ್ಯವಸ್ಥೆ ನೋಡಲು ಬನ್ನಿ"ಎಂದು ಕರೆದ.
ಅವನ ಹಿಂದೆ ನಡೆಯುತ್ತ ನಾನು ಹೇಳಿದೆ
"ನನ್ನ ಹೆಸರು ಗುರಣ್ಣ ಇವರು ನನ್ನ ಗೆಳೆಯ ಮೋನಣ್ಣ ನಾವು ಕಲ್ಯಾಣದಿಂದ ಬಂಡಿ ಹೊಡಕೊಂಡು ಬಂದೀವಿ" ಎಂದೆ.
ಕೊಟ್ಟಿಗೆಯ ಸ್ವಲ್ಪದೂರದಲ್ಲಿ ತೆಗೆದ ದೊಡ್ಡ ಗುಂಡಿ ತೋರಿಸಿ "ಅಣ್ಣಾ ಇದು ಗೊಬ್ಬರದ ಗುಂಡಿ, ಇಲ್ಲಿ ಹೆಂಡಿ ತಂದ ಹಾಕತೀವಿ. ನಮ್ಮ ಹೊಲಗಳಿಗೆಲ್ಲ ಉತ್ತಮ ಗೊಬ್ಬರ ಆಗತ್ತೈತಿ"
ಅದರ ಮಗ್ಗುಲಲ್ಲಿ ಇದ್ದ ಬಾವಿಯ ಪಕ್ಕದಲ್ಲಿ ಸಾಕಷ್ಟು ಕಲ್ಲ ಪರಸಿ ಹಾಕಿದ್ದರು
ಮಹಾದೇವ:
ಇಲ್ಲಿ ಎಲ್ಲ ದನಗಳ ಮೈ ತೊಳೀತೀವಿ. ಆ ನೀರ ಹೊಲದಲ್ಲಿ ಹರಸಿ ಹುಲ್ಲ ಬೆಳಿತೀವಿ ಅದನ್ನ ದನಕ್ಕ ಹಾಕತೀವಿ.
**ಮೋನಣ್ಣ:** ಬಾಳ ಒಳ್ಳೆಯ ಕೆಲಸ ಮಾಡೀರಿ. ಒಳ್ಳೆಯ ಯೋಚನೆ ಮಾಡೀರಿ.
ಇನ್ನೂ ಸ್ವಲ್ಪ ಮುಂದ ಹೋದಮ್ಯಾಲ ಹಕ್ಕಿಗಳ ಚಿಲಿಪಿಲಿ ಇಂಪಾಗಿ ಕೇಳಿಸತೊಡಗಿತು, ಅಲ್ಲಿದ್ದ ಕೆಲವು ಗಿಡದ ತುಂಬೆಲ್ಲ ವಿವಿಧ ಪಕ್ಷಿಗಳಿದ್ದವು. ಆ ಗಿಡದ ಕೆಳಗೆ ನೀರು ತುಂಬಿದ ಮಣ್ಣಿನ ಸಣ್ಣ ಸಣ್ಣ ಮಡಕೆಗಳಿಟ್ಟಿದ್ದರು. ಅಲ್ಲಲ್ಲಿ ಸಣ್ಣ ಸಣ್ಣ ಕಾಳು ತುಂಬಿದ ಡಬ್ಬಿಗಳನ್ನಿಟ್ಟಿದ್ದರು.
ಮಹಾದೇವ: ಕಾಳು ನೀರು ಇಟ್ಟು ಒಂದೆರಡು ತಾಸಿನಲ್ಲಿ ಇಷ್ಟೆಲ್ಲಾ ಪಕ್ಷಿಗಳು ಬಂದಾವು. ನಾಳಿನಿಂದ ಊರಲ್ಲಿ ಮತ್ತು ಸಮೀಪವಿರುವ ಎಲ್ಲ ಗಿಡದ ಕೆಳಗ ಕಾಳು ಮತ್ತು ನೀರು ಇಡತೀವಿ"
ಆ ಗಿಡದ ಕೆಳಗೆ ಕುಳಿತು ಆ ಪಕ್ಷಿಗಳ ಕಲರವ ಸ್ವಲ್ಪ ಹೊತ್ತು ಕೇಳಿ, ದಾಸೋಹ ಮಂಟಪದ ಕಡೆಗೆ ಹೊರಟೆವು.
ದಾಸೋಹದ ಸಮೀಪದಲ್ಲಿ ಇನ್ನೊಂದು ಭಾವಿ ಅದರ ಪಕ್ಕದಲ್ಲಿ ಸಾಕಷ್ಟು ಫರಸಿ ಕಲ್ಲು ಹಾಕಿದ್ದರು.
ಅಲ್ಲಿ ಕೈಕಾಲು ತೊಳೆದುಕೊಂಡ ನೀರು ಹೊಲಕ್ಕೆ ಹರಿದು ಹೋಗವ ವ್ಯವಸ್ಥೆಯಾಗಿತ್ತು.
**ಮಹದೇವ:**
ನಾನು ನನ್ನ ಗೆಳೆಯರೆಲ್ಲ ಇಂದು ನಸುಕಿನ ಜಾವ ಇಲ್ಲಿಯೇ ಸ್ನಾನಮಾಡೀವಿ ಹಂಗ ನೀರು ತುಂಬಸೀವಿ.
ಆ ನೀರು ಮೇವು ಬೆಳೆಯಲು ಅನುಕೂಲ. ಇಲ್ಲೇ ಮಗ್ಗಲಲ್ಲಿ ಮುಸುರಿ ತೊಳೆಯುವ ವ್ಯವಸ್ಥೆ ಮಾಡೀವಿ. ಆ ಮುಸರಿ ನೀರು ಎಮ್ಮೆಗಳಿಗೆ ಕುಡಸ್ತೀವಿ ಅವು ಹಾಲು ಹೆಚ್ಚು ಕೊಡತಾವ, ಮಕ್ಕಳು, ವೃದ್ದರಿರುವ ಮನೆಗೆ ಹಾಲು ಕೊಟ್ಟು ಉಳಿದಹಾಲು ದಾಸೋಹಕ್ಕೆ ಉಪಯೋಗಿಸುವ ವಿಚಾರ ಮಾಡೀವಿ".

ಉತ್ಸಾಹದ ಚಿಲುಮೆಯಂತಿದ್ದ ಅವ ತನ್ನ ಗೆಳೆಯರನ್ನು ಕೂಡಿಕೊಂಡು ಮತ್ತೆ ಕೆಲಸಮಾಡಲು ಹೊರಟ ಮಹಾದೇವ.
ಉತ್ಸಾಹದ ಚಿಲುಮೆಯಂತಿದ್ದ ಅವರನ್ನೆಲ್ಲ ನೋಡಿ ಅಣ್ಣ ಬಸವಣ್ಣನ ಕನಸು ನನಸಾಗುತ್ತದೆ ಎನಿಸಿತು.
ಆಗಲೇ ಅಲ್ಲಿ ಕಾಯಕಯೋಗಿಗಳಿಗೆ ಸಾಮಾನುಗಳನ್ನು ಹೊತ್ತುಕೊಂಡು ಬಂದ ಬಂಡಿಗಳು ಮತ್ತು ಪರಿಣತರು ಬಂದಿದ್ದರು. ಅಲ್ಲಿದ್ದ ಕಾಯಕಯೋಗಿಗಳು ತಮಗೆ ಬೇಕಾದ ಸಾಮಾನುಗಳನ್ನು ಪಡೆದುಕೊಂಡು ಆ ಬಂಡಿಗಳೊಡನೆ ಬಂದಿದ್ದ ಪರಿಣಿತರನ್ನು ಮನೆಗೆ ಕರೆದುಕೊಂಡು ಹೋದರು.
ತಮ್ಮ ಕಾಯಕ ಪ್ರಾರಂಭಿಸುವ ಹುಮ್ಮಸ್ಸು ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.
ನಿನ್ನೆ ಯೋಜನೆ ರೂಪಿತವಾಗುವದನ್ನು ನೋಡಿದ್ದೆ ಇಂದು ಅದು ವಿವಿಧ ರೂಪಗಳಲ್ಲಿ ಕಾರ್ಯಗತವಾಗುವದನ್ನು ನೋಡಹತ್ತಿದ್ದೆ. "ಇದು ಹೇಗೆ ಸಾಧ್ಯ" ಗೊಣಗಿದೆ. ಮೋನಣ್ಣ ಹೇಳಿದ
" ಆಡಳಿತಗಾರರು ಯೋಜನೆ ರೂಪಿಸುವದು ಮುಖ್ಯವಲ್ಲ ಅದನ್ನು ಜನರು ಹೇಗೆ ಉತ್ಸಾಹದಿಂದ ಕಾರ್ಯರೂಪಕ್ಕೆ ತರುತ್ತಾರೆ ಅನ್ನುವದು ಮುಖ್ಯ.
ಈ ರಾಜ್ಯದಲ್ಲೆಲ್ಲ ಇದೇ ರೀತಿಯ ದಾಸೋಹಗಳು ಪ್ರಾರಂಭವಾಗುತ್ತವೆ.
ಮುಳುಗುವವ ಹುಲ್ಲುಕಡ್ಡಿ ಕೇಳಿದರೆ ಹರಿಗೋಲನ್ನೇ ಕೊಟ್ಟ ಬಸವಣ್ಣ ಅದಕ್ಕೆ ಶಿವಣ್ಣ ಮತ್ತು ಮಹಾದೇವನಂತಹ ನಾವಿಕರು ಸಿಕ್ಕರೆ ದಡಸೇರುವದು ನಿಶ್ಚಿತ."
ಎಲ್ಲರೂ ಉತ್ಸಾಹ ದಿಂದ ಪ್ರಸಾದ ವ್ಯವಸ್ಥೆಯಲ್ಲಿ ತಯಾರು ಮಾಡುವದರಲ್ಲಿ ಭಾಗವಸಿದ ರೀತಿ ಬಸವಣ್ಣನವರ ಕನಸು ನನಸಾಗುವದರಲ್ಲಿ ಪ್ರಥಮ ಹಂತವದಾಗಿತ್ತು.
ನನ್ನ ಗೆಳೆಯನೊಬ್ಬ ಹೇಳಿದ ಮಾತು
"ಈಗ ರಾಜಕಾರಣದಲ್ಲಿ ಮುಂಚೂಣಿಯಲ್ಲಿರುವವರೆಲ್ಲ ಹೊಗಳುವದರಲ್ಲಿ ಮತ್ತು ತೆಗಳುವದರಲ್ಲಿ ಪರಣಿತನಾಗಿರುತ್ತಾರೆ". ಅವರು ತಮಗೆ ಲಾಭವಾಗುವಾಗ ಹೊಗಳುತ್ತಾರೆ ಅದ ರಿಂದ ಲಾಭವಿಲ್ಲ ಎನಿಸಿದಾಗ ತೆಗಳುತ್ತಾರೆ. ನನಗನಿಸದ್ದು ಈ ತರಹದ ಮಹಾನುಭಾವರು ಎಲ್ಲ ಕಾಲದಲ್ಲೂ ಇದ್ದರು ಮತ್ತು ಅದರಲ್ಲಿ ಪರಿಣಿತರಾದವರು ಉನ್ನತ ಪದವಿ ಗಳಿಸಿ ರಾಜನ ನಿಕಟವರ್ತಿಗಳಾಗಿ ಎಲ್ಲ ಲಾಭ ಪಡೆಯುತ್ತಿದ್ದರು.
ಇದಕ್ಕೆ ಅಪವಾದ ಅಣ್ಣ ಬಸವಣ್ಣನವರು. ಹೊಗಳುವವರನ್ನು ಕಂಡರೆ ಅವರಿಗಾಗುತ್ತಿರಲಿಲ್ಲ ಅದಕ್ಕಾಗಿಯೇ "ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ" ಎಂದರು. ಟೀಕೆ ಮಾಡುವವರು ನಮ್ಮ ತಪ್ಪು ತಿದ್ದಿಕೊಳ್ಳಲು ಸಹಕಾರಿಯಾಗುತ್ತಾರೆ ಎನ್ನುವದು ಅವರ ಅಭಿಪ್ರಾಯವಾಗಿತ್ತು.ಅಣ್ಣ

ಬಸವಣ್ಣನವರ ಕಾರ್ಯಕ್ರಮಗಳ ಟೀಕೆ ಯಾವ ರೀತಿಯದ್ದಾಗಿರಬಹುದು ಎನ್ನುವ ವಿವರ ಈ ಕನಸು ಭಾಗದಲ್ಲಿದೆ.

ತನಗೊಬ್ಬರು ಮುನಿದರು ತಾನಾರಿಗೂ ಮುನಿಯಲಾಗದು.
ಮನೆಯ ಕಿಚ್ಚು ಮೊದಲೊಮ್ಮೆ ಮನೆಯ ಸುಡುವಂತೆ
ತನ್ನ ಕೋಪ ತನ್ನನೆ ಸುಡುವುದು ನೋಡಯ್ಯ.
ಸವಿಮಾತುಗಳು ಬೇಗದಿಂದ ಆ ಕ್ರೋಧವ [ಗೆಲಿದಿರ್ಪುದು]
ಆ ಕ್ರೋಧ ದುರ್ಜನರ ಗೆಲುವುದು.
ಇಂತೀ ಸೋತುದಕ್ಕೆ ಸೋತವರ ಕೂಡೆ ಎತ್ತಣ ವಿರೋಧವಯ್ಯ?
ಸೌರಾಷ್ಟ್ರ ಸೋಮೇಶ್ವರನ ಶರಣರು ಸಚರಾಚರಪ್ರಾಣಿಗಳಲ್ಲಿ ವಿರೋಧವಿಲ್ಲದಿರಬೇಕು.
/೯೪೦-- ಅಣ್ಣ ಬಸವಣ್ಣ

ನಾವು ಮರಳಿ ದಾಸೋಹ ಮಂದಿರಕ್ಕೆ ಬಂದಾಗ ಅಲ್ಲಿ ಅಕ್ಕನಾಗಮ್ಮನವರ ಸಹಿತ ಮನೆಮಂದಿಯೆಲ್ಲರ ಪ್ರಸಾದ ಮುಗಿದಿತ್ತು. ನಮ್ಮನ್ನು ಕಂಡೊಡನೆ ಅಕ್ಕನಾಗಮ್ಮನವರು ಸಾಯಂಕಾಲ ಊರಿಗೆ ಮರಳಬೇಕು ಎಲ್ಲ ಕೆಲಸ ಮುಗಿಸಿಕೊಂಡು ಬನ್ನಿ ಎಂದು ಹೇಳಿ ಅಲ್ಲಿದ್ದ ಎಲ್ಲ ಮಕ್ಕಳನ್ನು ಕರೆದುಕೊಂಡು ಮನೆಗೆ ಹೋದರು ಅಕ್ಷರಾಭ್ಯಾಸ ಮಾಡಿಸಲು.
ನಾವೆಲ್ಲ ಪ್ರಸಾದ ಮುಗಿಸಿ ಬಂದೆವು. ಹೆಚ್ಚು ಕಡಿಮೆ ಎಲ್ಲರೂ ಪ್ರಸಾದ ಸೇವಿಸಿ ತಮ್ಮ ಕೆಲಸಕ್ಕೆ ಹೋಗಿದ್ದರು. ದಾಸೋಹ ಮಂದಿರದಲ್ಲಿ ಕೆಲವು ಹಿರಿಯರು ಮತ್ತು ಸಾಯಂಕಾಲ ಪ್ರಸಾದ ವ್ಯವಸ್ಥೆ ವಹಿಸಿಕೊಂಡವರು ಅಲ್ಲಿದ್ದರು.
"ಮೋನಣ್ಣ ಮುಂದೇನು ಮಾಡುವದು ಸಾಯಂಕಾಲದವರೆಗೆ ನಮಗ ಮಾಡಲಾಕ ಏನು ಕೆಲಸ ಇಲ್ಲ ಈಗ?" ಎಂದೆ.
ಅಷ್ಟರಲ್ಲಿ ಮಹಾದೇವ ಅಲ್ಲಿಗೆ ಬಂದು "ನಾನು ನನ್ನಜ್ಜನವರಿಗೆ ಪ್ರಸಾದ ಕೊಡಲು ಮನೆಗೆ ಹೊರಟಿರುವೆ ನೀವು ನನ್ನ ಜೊತೆ ಬಂದರೆ ಊರು ತೋರಿಸುತ್ತೇನೆ" ಎಂದ. ಸರಿ ಎಂದು ಅವನ ಹಿಂದೆ ಹೊರಟೆವು.
ಊರಿನ ಬೀದಿಯಲ್ಲಿ ನಡೆದಂತೆ ಹೆಚ್ಚುಕಡಿಮೆ ಎಲ್ಲ ಅಂಗಡಿಗಳ ಮತ್ತು ಮನೆಯ ಬಾಗಿಲುಗಳು ಮುಚ್ಚಿದ್ದವು.
ಅಲ್ಲೊಂದು ದೊಡ್ಡ ಕಿರಾಣಿ ಅಂಗಡಿ ತೆಗೆದಿತ್ತು.
ನಮ್ಮನ್ನು ನೋಡಿದೊಡನೆ ಆ ಅಂಗಡಿಯ ಮಾಲಿಕ ಅಲ್ಲಿಂದಲೇ "ಬನ್ನಿ ಬನ್ನಿ ದಯಮಾಡಿಸಿ. ಅವರನ್ನು ಒಳಗೆ ಕರೆದುಕೊಂಡು ಬನ್ನಿ ಮಹಾದೇವ ಸಾಹುಕಾರ" ಎಂದ.
"ಇವರು ವಿನಯ ಅಂತ ಈ ಊರಲ್ಲಿ ವ್ಯಾಪಾರಿ ಪ್ರಮುಖರು" ಎಂದು ಮಹಾದೇವ ಪರಿಚಯಿಸಿದ.

"ಬನ್ನಿ ಬನ್ನಿ ಕೆಲಸ ಮಾಡಿ ಮಾಡಿ ದಣಿದಿದ್ದೀರಿ. ಸ್ವಲ್ಪ ಸುಧಾರಿಸಿಕೊಳ್ಳಿ" ಎಂದರು ವಿನಯ.
ಮೂವರು ಹೋಗಿ ಅವನಂಗಡಿಯಲ್ಲಿ ಕುಳಿತೆವು.
ಅಲ್ಲಿದ್ದ ಸೇವಕನೊಬ್ಬನನ್ನು ಕರೆದು "ಶರಣರು ದಣಿದು ಬಂದಾರ ಮಜ್ಜಿಗೆ ತೊಗೊಂಡು ಬಾ" ಎಂದ.
ಮುಗುಳ್ನಕ್ಕ ಮಹಾದೇವ "ಅಣ್ಣಾ ಇದೀಗ ನಮ್ಮ ಪ್ರಸಾದ ಆಯಿತು ಏನೂ ಬೇಡ ಎಂದ. ಇದುವರೆಗೆ ಬಡವರಿಗೆ ಆಸರೆಯಾಗಿದ್ದವರು ವಿನಯ ಅವರು" ಎಂದ ವಿನಯ. "ಈ ಕಲಿಯುಗದಲ್ಲಿ ಸಮಾಜಕ್ಕಾಗಿ ಇಷ್ಟ ಕಷ್ಟಪಡುವವರು ಸಿಗುವದೇ ಅಪರೂಪ. ನೀವೆಲ್ಲ ಸೀದಾ ಸ್ವರ್ಗಕ್ಕೇ ಹೋಗತೀರಿ. ಎಲ್ಲಾ ಕಡೆ ನನ್ನಂತಹ ಸ್ವಾರ್ಥಿಗಳೇ ಅದೀವಿ ನಮಗ ನರಕ ಕಾಯಲಾಕ ಹತ್ತೈತಿ."
ಜೋರಾಗಿ ನಗುತ್ತ "ಹೌದಲ್ಲಾ ಇಂದು ದಾಸೋಹ ಚಾಲೂ ಆಗಿದ್ದು ಮರೆತು ಹೋಗಿತ್ತು. ಇಷ್ಟೊತ್ತು ನೊಣ ಹೊಡದು ಸಾಕಾಗಿ ನಾನೂ ಅಂಗಡಿ ಮುಚ್ಚಿ ಅಲ್ಲಿಗೇ ಹೊಂಟೀನಿ" ಎಂದನವನು.
ಅವರ ಕೊಂಕು ನುಡಿ ಮನಕ್ಕೆ ತಾಗಿದ್ದರೂ ಶಾಂತವಾಗಿಯೇ
"ಸರಿ ನಾವಿನ್ನು ಬರತೀವಿ" ಎಂದು ಹೇಳಿದ ಮಹಾದೇವ.
ನಾವು ಶರಣೆಂದು ಅಲ್ಲಿಂದ ಹೊರಟು ಬಂದೆವು. ಸ್ವಲ್ಪ ಹೊತ್ತು ಮೌನವಾಗಿದ್ದ ಮಹಾದೇವ
" ದಾಸೋಹ ಪ್ರಾರಂಭವಾದದ್ದು ಇವನ ಲಾಭಕ್ಕೆ ಕೊಕ್ಕೆ ಹಾಕಿದೆ. ಎರಡುವರ್ಷದ ಹಿಂದಿನ ಬರಗಾಲದಲ್ಲಿ ಅನಿವಾರ್ಯವಾಗಿ ಇವನ ಹತ್ತಿರ ಸಾಮಾನು ಅಥವಾ ಹಣ ಪಡೆದ ಬಡವರ ಪಾತ್ರೆ, ಪಗಡೆ, ಹೊಲ ಮತ್ತು ಮನೆ ಇವನದಾಗಿ ಬಹಳ ಶ್ರೀಮಂತನಾದ. ಇವನ ಮಾತು ಮಧುರ, ಕೃತಿ ಅತಿ ಕ್ರೂರ. ಬೆಣ್ಣೆಯಂತೆ ಮಾತನಾಡಿ ಸಾಲಕೊಟ್ಟು ವಸೂಲಿ ಮಡುವಾಗ ರಾಕ್ಷಸನಂತಾಗುತ್ತಾನೆ.".
ಇವನ ಹಗೆವುನಲ್ಲಿ ಸಾಕಷ್ಟು ಧಾನ್ಯ ಐತಿ ಹಾಂಗ ಇಟ್ಟರೆ ಕೆಟ್ಟು ಹೋಗತ್ತ ಮತ್ತ ಮನೆಯಲ್ಲಿ ಬಾಳ ಹಣ ಐತಿ. ಅವನ ಕಾಯಲಾಕ ಆಳುಗಳದಾವು ಆದರೂ ಅಂಜಿಕೆ. ಅದನ್ನೆಲ್ಲ ದಾಸೋಹಕ್ಕ ಕೊಟ್ಟರ ಅವನಿಗೆ ಲಾಭ ಐತಿ. ಎಲ್ಲಾ ಲಾಭಸಹಿತ ಮರಳಿ ಬರುವ ನಂಬಿಕೆ ಅವನಿಗೆ. ಅದಕ ದಾಸೋಹಕ್ಕ ಹೋಗತಾನ" ಎಂದು ವಿವರಿಸಿದ ಮಹಾದೇವ.
ಇಂತಹಾ ಜನರೂ ಇದ್ದಾರೆ ಎನಿಸಿ ಮನಸ್ಸಿಗೆ ನೋವಾಯಿತು.
ಅಷ್ಟರಲ್ಲಿ ಅಲ್ಲಿಗೆ ಬಡಕಲು ವ್ಯಕ್ತಿ ಬಂದು "ಮಹಾದೇವಣ್ಣ ಎಲ್ಲರೂ ಕಾಯಕ ಮಾಡಾಕ ಚಾಲೂ ಮಾಡ್ಯಾರ. ನನ್ನ ಹೊಲಿಯುವ ಕೆಲಸ ಬಂದಾಗೇತಿ. ನನಗೂ ಏನಾದರೂ ಮಾಡಿ ಕೆಲಸ ಮಾಡಲು ಅವಕಾಶ ಕೊಡು"
ಮಹಾದೇವ: ಇನ್ನೊಂದು ವಾರದಾಗ ಬಟ್ಟೆ ತೊಗೊಂಡು ಕಲ್ಯಾಣದಿಂದ ಪರಿಣತರು ಬಂದು ಯಾವ ರೀತಿ ಯೋಧರಿಗೆ ಸಮವಸ್ತ್ರ ಹೊಲಿಬೇಕು

ಹೇಳಿಹೋಗತಾರ. ಅಲ್ಲಿತನಕ ದಾಸೋಹಕ್ಕ ಹೊದಿಕಿ ಹೊಲಿ ಅಲ್ಲಿ ಸಂಬಳ ಕೊಡತಾರ"
ಆ ಮಾತು ಕೇಳಿ ತುಂಬಾ ಸಂತೋಷಗೊಂಡ ಆತ ಶರಣು ಹೇಳಿ ಹೋದ.
ಮುಂದೊಂದು ದೊಡ್ಡಕಟ್ಟೆಯ ಮನಿಯೊಳಗಿಂದ
"ಮಹಾದೇವ ತಡಿ ಬಂದೆ ತಡಿ" ಎಂಬ ಮಾತು ಕೇಳಿ ಅಲ್ಲಿಯೇ ನಿಂತೆವು. ಅಲ್ಲಿಗೆ ಬಂದ ವ್ಯಕ್ತಿ ನೋಡಿ ಅವ ನಶೆಯಲ್ಲಿದ್ದದ್ದು ಗೊತ್ತಾಗುತ್ತಿತ್ತು. ತೊದಲುತ್ತ ಹೇಳಿದ "ನಮ್ಮ ಮನಿ ಕಟ್ಟೆಮ್ಯಾಗ ಜೂಜ ಆಡಕೊಂತ ಒಳಗ ಹೋಗಿ ಸ್ವಲ್ಪ ಕುಡುದು ಭಜಿ ತಿನಕೊಂತ ಎಷ್ಟ ಆರಾಮ ಆಗಿದ್ದರು ನನ್ನಗೆಳೆಯರು. ಅವರನ್ನೆಲ್ಲ ಈ ಬಿಸಿಲಾಗ ದುಡಿಯಾಕ ಕಳಿಸಿ ಪುಣ್ಯಾಕಟಗೊಂಡಿ. ಹೋಗಲಿ ಕುಡದಮ್ಯಾಲ ನನ್ನ ಹೊಟ್ಟೆಗೆ ಹಿಟ್ಟ ಹಾಕತಿದ್ದ ನನ್ನ ಹೆಂಡತಿ ಅಡಗಿನೂ ಮಾಡದ ದುಡಿಯಾಕ ಕಳಿಸಿದಿ. ಯಾಕಪ್ಪ ನನ್ನ ಮ್ಯಾಲ ನಿನ್ನ ಸಿಟ್ಟು"
ಮಹಾದೇವ ಸಮಾಧಾನದಿಂದ ಹೇಳಿದ
"ಮಾಮಾ, ಅವರು ನಿನ್ನ ಹೊಲದಾಗ ಬದುಕು ಮಾಡಾಕ ಹೋಗ್ಯಾರ"
"ನನ್ನ ಹೊಲದಾಗೇನೈತಿ ಮಣ್ಣು ಅದನ ನಾವು ತಿನಬೇಕೇನು?" ಎನ್ನುವ ಅವನ ಭುಜದ ಮೇಲೆ ಕೈಹಾಕಿದ ಮಹಾದೇವ
"ಅವರು ದುಡದಿದ್ದಕ್ಕ ವಾರಾ ವಾರಾ ಸಂಬಳ ಕೊಡತಾರ, ದಾಸೋಹದಾಗ ಊಟಾ ಕೊಡತಾರ ಮತ್ತ ನಿನ್ನ ಮಕ್ಕಳಿಗೆ ಓದಸ್ತಾರ" ಎಂದರು.
"ಈ ಜಗತ್ತಿನಾಗ ಎಂತ ಹುಚ್ಚರು ಹುಟ್ಟಿದರು ನೋಡು ನಮ್ಮ ಹೊಲದಾಗ ನಾವ ದುಡದರ ಅವರು ಊಟ ಕೊಟ್ಟು ಸಂಬಳಕೊಟ್ಟು ನಮ್ಮ ಮಕ್ಕಳನ ಸಾಕತಾರ. ಅವರಿಗೆ ನನ್ನ ನಮಸ್ಕಾರ ತಿಳಿಸು. ಇಷ್ಟು ಹುಚ್ಚತನ ಇದ್ದರ ಮನೆ ಮಾರು ಮಾರಿಕೊಳ್ಳಬೇಕಾಗತ್ತ ಅಂತ ನಾ ಹೇಳಿನಂತ ಹೇಳು......." ಮುಂತಾಗಿ ಗೊಣಗುತ್ತ ಒಳಹೋದ.
ಅಲ್ಲಿ ಹಾದು ಹೋಗುತ್ತಿದ್ದ ತನ್ನ ಗೆಳೆಯನನ್ನು ಕರೆದು "ದಾಸೋಹದಿಂದ ಪ್ರಸಾದ ತಂದು ಇವನಿಗೆ ತಿನಿಸು. ನಾಳೆ ನಶೆಯೇರುವದಕ್ಕಿಂತ ಮೊದಲು ಪ್ರಸಾದಮಾಡಿಸಿ ಇವನನ್ನ ಹೊಲಕ್ಕ ಕಳಿಸಿಕೊಡು" ಎಂದು ಹೇಳಿ ನಮ್ಮೊಡನೆ ಮುಂದೆ ಸಾಗಿದ ಮಹಾದೇವ.
ದಾಸೋಹ ಪ್ರಾರಂಭ ಮಾಡುವದರಿಂದ ಎಲ್ಲರಿಗೂ ಸಂತೋಷ ಆಗಿದೆ ಎಂದುಕೊಂಡಿದ್ದ ನನಗೆ ವಾಸ್ತವಾಂಶಗಳ ಅನಾವರಣವಾಗತೊಡಗಿತ್ತು. ಅಂಗಡಿಯಲ್ಲಿ ನಡೆದ ಘಟನೆಯ ಬಗ್ಗೆ ವಿಚಾರ ಮಾಡುತ್ತ ಮುಂದೆ ಹೊಗುತ್ತಿದ್ದೆ. ಆಗ ಒಂದು ಮಂದಿರದಿಂದ ಮಂಗಳಾರತಿ ನಡೆಯುತ್ತಿರುವ ಶಬ್ದ ಕೇಳಿಸ ಹತ್ತಿತು. ನಾವು ಗುಡಿಯ ಮುಂಬಾಗಿಲಕ್ಕೆ ಬರುವಷ್ಟರಲ್ಲಿ ಪೂಜೆ ಮುಗಿಸಿ ಜನ ಹೊರಬರಹತ್ತಿದರು. ಅವರೆಲ್ಲರೂ "ಶರಣು ಮಹಾದೇವಣ್ಣ" ಎಂದು ಹೇಳುತ್ತ ಹೋಗುತ್ತಿದ್ದರು. ಅವರೆಲ್ಲ ಹೋಗುವವರೆಗೆ ಅಲ್ಲಿಯೇ ನಿಂತಿದ್ದವು.
ಕೊನೆ ಬಂದವರೇ ಪೂಜಾರಿ ಅವರನ್ನು ನೋಡಿದ ಕೂಡಲೇ

**ಮಹಾದೇವ:** ಶರಣು ಶರಣು ಪೂಜಾರಿಗಳೇ ಎಂದ. ನಾವೂ ಕೈಮುಗಿದೆವು.
**ಪೂಜಾರಿ:** ದೇವಿಯ ಆಶೀರ್ವಾದ ನಿನ್ನ ಮ್ಯಾಲೈತಿ ಅದಕ ಲಕ್ಷ್ಮಿ ನಿಮ್ಮ ಮನಿಯಾಗ ಕಾಲು ಮುರಕೊಂಡು ಬಿದ್ದಾಳ. ಮೊನ್ನೆ ದೇವಿ ನನ್ನ ಮೈಮ್ಯಾಗ ಬಂದು ಭಕ್ತರಿಗೆ
"ಚಿಂತಿ ಮಾಡಬ್ಯಾಡ್ರಿ, ನಾನು ಬಂದು ನಿಮ್ಮೆಲ್ಲರ ಕಾಯತೀನಿ" ಎಂದು ಹೇಳಿದಳು.
ಈಗ ನೋಡಿ ಅವಳ ಮಾತು ನಿಜವಾಯ್ತು, ಅಣ್ಣನಿಗೆ ದೇವಿ ಇಲ್ಲಿಯವರನ್ನ ಕಾಯಿ ಅಂತ ಪ್ರೇರಣೆ ಕೊಟ್ಟಳು, ಅಣ್ಣ ಬಂದು ದಾಸೋಹ ಚಾಲು ಮಾಡಿದರು. ಅದಕ ನಾ ಹೇಳೀನಿ ದಾಸೋಹದಾಗ ಒಂದು ಕಟ್ಟಿ ಕಟ್ಟಸರಿ ನಾ ದೇವಿ ಪ್ರತಿಷ್ಠಾಪಿಸಿ ದಿನಾಲೂ ಪುಕ್ಕಟೆ ಪೂಜೆ ಮಾಡತೀನಿ ನೀವೆಲ್ಲ ಸುಖವಾಗಿರತೀರಿ ಅಂತ ಅವರು ಇನ್ನೇನೋ ಹೇಳುವವರಿದ್ದರು
"ಶರಣು ಪೂಜಾರಿಗಳೇ" ಎಂದು ಹೇಳಿದ ಮಹಾದೇವ ಮುನ್ನೆಡೆದರು ನಮ್ಮಜೊತೆ. ಸ್ವಲ್ಪ ಮುಂದೆ ಹೋದಾಗ ದೂರ ಸರಿಯಿರಿ, ದೂರ ಸರಿಯಿರಿ ಎನ್ನುವದು ಕೇಳಿ ದಾರಿಯ ಬದಿಗೆ ಸರಿದು ನಿಂತೆವು. ಮಹಾದೇವ ಕೈಮುಗಿದು ನಿಂತ ಅವನಂತೆಯೇ ನಾವೂ ನಿಂತೆವು ನೀರು ಸಿಂಪಡಿಸುತ್ತ ಮುಂದೆ ಹೋದವನೊಬ್ಬ, ಮೊದಲು ಪತಾಕೆ ಮತ್ತು ಆಮೇಲೆ ಬಿಚ್ಚುಗತ್ತಿ ಯೋಧರು ಹೊರಬಂದರು ಅವರ ಹಿಂದೆ ರಾಜಬೀದಿಯಿಂದ ಒಬ್ಬ ಪಂಡಿತರು ಬಂದರು.
**ಮಹಾದೇವ:** ಶರಣು ಶರಣಾರ್ಥಿ ಪಂಡಿತರೇ
ಪಂಡಿತರು ಕೈಯೆತ್ತಿ ಆಶೀರ್ವದಿಸಿ ನಮ್ಮ ಕಡೆ ಯಾರಿವರು ಎಂದು ಸನ್ನೆಯಿಂದ ಕೇಳಿದರು.
**ಮಹಾದೇವ:** ಪಂಡಿತರೇ ಇವರು ನಿನ್ನೆ ತಾನೆ ಕಲ್ಯಾಣದಿಂದ ಅಣ್ಣ ಬಸವಣ್ಣನವರ ಜೊತೆ ಬಂದರು.
**ಪಂಡಿತರು:** ಓಹೋ ಬಸವ ಈ ಊರಿಗೆ ಬಂದಿದ್ದಾನೆಯೇ? ಅವನ ಹಿಂದೆ ಇರುವವರು ಸಂಸ್ಕಾರವಿಲ್ಲದ ಇಂತಹ ಕೆಲಸಗಾರರು ಮಾತ್ರ.
**ಮಹಾದೇವ:** ನಿನ್ನೆ ನೀವು ಊರಲ್ಲಿರಲಿಲ್ಲ ಅಂತ ಕಾಣಿಸುತ್ತದೆ.
**ಪಂಡಿತ:** ಹೌದು ನಿನ್ನೆ ಕಲ್ಯಾಣ ರಾಜರ ಆಸ್ಥಾನದಲ್ಲಿ "ಅರ್ಥಶಾಸ್ತ್ರ" ದ ಮೇಲೆ ನಾ ಬರೆದ ಟಿಪ್ಪಣೆಗಳ ಬಗ್ಗೆ ವಿವರಿಸಲು ಹೋಗಿದ್ದೆ. ನನ್ನ ಮಾತು ಕೇಳಿ ಎಲ್ಲರೂ ತಲೆದೂಗಿದರು. ಈಗಿರುವ ಬರಗಾಲದ ತೊಂದರೆ ನಿವಾರಿಸುವ ಬಗ್ಗೆ ನನ್ನ ಸಲಹೆ ಕೇಳಿದರು.
**ಮಹಾದೇವ:** ತಮ್ಮ ಸಲಹೆಗಳೇನು ಪಂಡಿತರೇ.
**ಪಂಡಿತರು:**
ಬಾ ಕಟ್ಟೆಯ ಮೇಲೆ ಕುಳಿತುಕೊಂಡು ನಾನು ಕೊಟ್ಟ ಅಮೂಲ್ಯ ಸಲಹೆಗಳ ವಿವರ ಹೇಳುವೆ. ನಿಮ್ಮಂತಹ ಯುವಕರಿಗೆ ಮುಂದೇನು ಮಾಡಬೇಕೆಂಬ ಬಗ್ಗೆ ಮಾರ್ಗದರ್ಶನ ಸಿಗುತ್ತದೆ.

ಸರಿ ಎಂದು ನಾವೆಲ್ಲ ಕಟ್ಟೆಯ ಮೆಲೆ ಕುಳಿತುಕೊಂಡೆವು. ರಾಜಋಷಿಯಿಂದ ಅವರ ಹಿಂಬಾಲಕರೊಬ್ಬರು ಹಾಸಿದ ಕಂಬಳಿ ಮೇಲೆ ಕುಳಿತು ತಮ್ಮ ಪ್ರವಚನ ಕೊಟ್ಟರು. ----------

ಅವರು ಕೊಟ್ಟ ಸಲಹೆಗಳ ಸಾರಾಂಶ ನನ್ನ ಮಾತುಗಳಲ್ಲಿ

1. ರಾಜಭಂಡಾರ ರಾಜ್ಯದ ರಕ್ಷಣೆಗಾಗಿ ಮತ್ತು ಉನ್ನತಿಗಾಗಿ ಮಾತ್ರ ವಿನಿಯೋಗವಾಗಬೇಕು.
2. ಅದರಲ್ಲಿ ಆದಾಯ ಹರಿದು ಬರಬೇಕು ಹೊರತು ಅನಾವಶ್ಯಕವಾಗಿ ಹರಿದು ಹೋಗಬಾರದು.
3. ರಾಜನಿರುವದೇ ರಾಜಧನವನ್ನು ರಕ್ಷಿಸಲು ಮತ್ತು ಹೆಚ್ಚಿಸಲು. ಅಡಳಿತಗಾರರು ಮತ್ತು ಪ್ರಜೆಗಳಿರುವದು ಅವನ ಸೇವೆ ಮಾಡಲು ಮತ್ತು ಅವನಿಚ್ಛೆ ಪೂರೈಸಲು. ರಾಜನೇ ಪ್ರಜೆಗಳ ಪಾಲಿನ ಕಾಣುವ ದೇವರು.
4. ರಾಜನ ಕೃಪಾಕಟಾಕ್ಷ ದಿಂದ ಆದಾಯ ಮತ್ತು ದೌಲತ್ತು ಅನುಭವಿಸಿರುವ ಆಡಳಿತಗಾರರು ತನ್ನೂರಿನ ಜನರ ಯೋಗಕ್ಷೇಮ ನೋಡಿಕೊಳ್ಳಬೇಕು.
5. ಹೆಚ್ಚಿಗೆ ಧಾನ್ಯ ಸಂಗ್ರಹ ಮತ್ತು ಹಣ ಸಂಗ್ರಹ ಮಾಡುವದು ಅಪರಾಧ. ಅದರ ಮೇಲೆ ರಾಜನ ಹಕ್ಕು ಇದೆ. ಅದಕ್ಕಾಗಿ ಆಡಳಿತಗಾರರು ಯೋಧರನ್ನು ನೇಮಿಸಿಕೊಂಡು ಅವುಗಳನ್ನೆಲ್ಲ ಕಿತ್ತುಕೊಂಡು ರಾಜನಿಗೆ ಅರ್ಧ ಕೊಟ್ಟು ಉಳಿದರ್ದ ಮಂದಿರಗಳಲ್ಲಿ ರಾಜನ ಹೆಸರಲ್ಲಿ ಪೂಜೆ ಮಾಡಿ ಬಂದವರಿಗೆ ಒಂದು ದೊಣ್ಣೆ ಪ್ರಸಾದ ನೀಡಬೇಕು.
6. ಈಗ ಜನರು ಅನುಭವಿಸುತ್ತಿರುವದು ಹಿಂದಿನ ಜನ್ಮದಲ್ಲಿ ಅವರು ಮಾಡಿದ ಕರ್ಮಫಲ. ಅದನ್ನವರು ಪೂರ್ಣವಾಗಿ ಅನುಭಸಲೇಬೇಕು.
7. ಇಂದ್ರ ತೃಪ್ತಿಯಾದರೆ ಮುಂದಿನ ಸಲ ಚನ್ನಾಗಿ ಮಳೆ ಆಗುತ್ತದೆ. ಅದಕ್ಕಾಗಿ ಅದ್ದೂರಿಯಾಗಿ ಯಜ್ಞ ಯಾಗಾದಿ ಮಾಡಿ ಪಂಡಿತರನ್ನು ಭಕ್ಷಭೋಜನದಿಂದ ತೃಪ್ತಿಪಡೆಸಿ ಕನಕ, ಆಕಳು ಮತ್ತು ಧಾನ್ಯ ದಾನಮಾಡಬೇಕು.
8. ನಾನಿಲ್ಲಿಗೆ ಬರುವಷ್ಟರಲ್ಲಿ ರಾಜಕೋಶವನ್ನು ದುರುಪಯೋಗಪಡಿಸುವ ಅಪರಾಧ ಮಾಡಿ ಜನರು ತಮ್ಮ ಪಾಪಕ್ಕೆ ತಕ್ಕ ಶಿಕ್ಷೆ ಅನುಭವಿಸುವದನ್ನು ತಪ್ಪಿಸಿ ಮಹಾಪಾಪ ಮಾಡಿದ್ದೀರಿ. ಅವರು ಕೆಲವು ದಿನ ಉಪವಾಸವಿರುವದು ದೇವರ ಇಚ್ಛೆಯಾಗಿತ್ತು ಅದನ್ನು ತಪ್ಪಿಸಿ ಅವರ ಹೊಟ್ಟೆ ತುಂಬಿಸುತ್ತಿರುವ ಪಾಪ ಮಾಡುತ್ತಿರುವಿರಿ ಎಂದು ಗೊತ್ತಾಯಿತು. ಮಹಾದೇವ ನಿನ್ನ ಪಾಲು ಆ ಘನಘೋರ ಪಾಪದಲ್ಲಿದೆ ಎಂದು ಗೊತ್ತಾಯಿತು. ನಿನಗೆ ಘನಘೋರ ನರಕ ತಪ್ಪದು.
9. ಕಲ್ಯಾಣಕ್ಕೆ ಹೋಗಿ ನಿಮ್ಮ ಆರ್ಥಿಕ ಅಪರಾಧಕ್ಕಾಗಿ ಶಿಕ್ಷೆಯಾಗುವಂತೆ ಮಾಡುತ್ತೇನೆ.

10. ಎಲ್ಲಿ ಧರ್ಮಪಾಲನೆಯಾಗುವದಿಲ್ಲವೋ ಮತ್ತು ಜನರು ಅಧರ್ಮದ ಹಾದಿಯಲ್ಲಿ ನಡೆಯುತ್ತಾರೆಯೋ ಅದನ್ನು ತಪ್ಪಿಸುವದು ನಮ್ಮ ಕರ್ತವ್ಯ.

.......

ಎಲ್ಲವನ್ನು ಸಹನೆಯಿಂದ ಕೇಳಿದ

**ಮಹಾದೇವ:** ಪಂಡಿತರೇ ನಾವು ಬರುತ್ತೇವೆ. ದಯಮಾಡಿ ಒಮ್ಮೆ ದಾಸೋಹ ಮಂದಿರಕ್ಕೆ ಬಂದು ಆಶೀರ್ವದಿಸಿ.

**ಪಂಡಿತ:** ಅಗತ್ಯ ಬರುತ್ತೇನೆ ನೀವು ಮಾಡಿದ ಆರ್ಥಿಕ ಅಪರಾಧದ ವಿವರ ಪೂರ್ಣವಾಗಿ ರಾಜರಿಗೆ ನೀಡಲು ಎಲ್ಲವನ್ನು ಕಣ್ಣಾರೆ ಕಾಣಬೇಕು. ನಾಳೆ ಬರುವೆ. ಬಸವನಿಗೆ ಇರಲು ಹೇಳು ನಾನವನಿಗೆ ಧರ್ಮಪಾಲನೆಯ ಬಗ್ಗೆ ತಿಳಿಹೇಳಬೇಕಾಗಿದೆ.

**ಮಹಾದೇವ:** ಅಣ್ಣ ಬಸವಣ್ಣನವರು ಸಾಯಂಕಾಲವೇ ಮರಳಿ ಕಲ್ಯಾಣಕ್ಕೆ ಹೋಗುತ್ತಾರೆ.

ಶರಣು ನಾವು ಬರುತ್ತೇವೆ ಎಂದು ನಮ್ಮೊಡನೆ ಹೊರಟ ಮಹಾದೇವ.

"ಹಿರಿಯರಿಗೆ ಸಾಷ್ಟಾಂಗ ನಮಸ್ಕರಿಸಿ ದಕ್ಷಿಣೆ ಕೊಡುವಷ್ಟು ಕನಿಷ್ಟ ಸಂಸ್ಕಾರವಿಲ್ಲ" ಎಂದು ತನ್ನ ಹಿಂಬಾಲಕರೊಬ್ಬರಲ್ಲಿ ಹೇಳುವದು ಕೇಳಿಸಿತು.

ಮಹಾದೇವನ ಮುಖ ಕೆಂಪಾಗಿದ್ದರೂ ಅವನು ಶಾಂತವಾಗಿ ಎಲ್ಲವನ್ನೂ ಸಹಿಸಿಕೊಂಡ.

ನನಗೆ ತಡೆಯಲಾಗದೇ ಕೇಳಿದೆ "ಮಹಾದೇವಣ್ಣ ಇದಕ್ಕೆಲ್ಲ ಉತ್ತರ ಕೊಡಬೇಕಾಗಿತ್ತು"

ಮಹಾದೇವ ಶಾಂತವಾಗಿ ಹೇಳಿದ

ಅನೇಕ ಪಂಡಿತರು ನಮ್ಮ ದೇಶದ ಅಭಿವೃದ್ಧಿ ಮತ್ತು ಸಾಮಾನ್ಯ ಜನರ ಏಳ್ಗೆಗಾಗಿ ಮಹಾರಾಜ ಮಾಡಬೇಕಾದ ಕೆಲಸಗಳು ಮತ್ತು ನಾಗರಿಕರ ಕರ್ತವ್ಯ ವಿವರಿಸಿ ಅರ್ಥಶಾಸ್ತ್ರ ಪುಸ್ತಕಗಳನ್ನು ರಚಿಸಿದ್ದು ಸಂಸ್ಕೃತದಲ್ಲಿ.

ಆ ಎಲ್ಲ ಮಹಾಗ್ರಂಥಗಳನ್ನು ತಮಗಿಷ್ಟವಾದಂತೆ ಮಾರ್ಪಡಿಸಿಕೊಂಡು ಅವರ ಮೂಲ ಉದ್ದೇಶಕ್ಕೆ ಕೊಡಲಿ ಏಟು ಕೊಟ್ಟು ತಮ್ಮ ಉದರ ಪೋಷಣೆಗೆ ಸುಗಮದಾರಿ ಮಾಡಿಕೊಂಡವರಲ್ಲಿ ಇವರೂ ಒಬ್ಬರು.

ಇವರಿಗೆಷ್ಟು ಅರ್ಥಶಾಸ್ತ್ರ ಗೊತ್ತಿದೆ ಗೊತ್ತಿಲ್ಲ. ಹಳ್ಳಿಗರ ಮುಂದೆ ಸಂಸ್ಕೃತ ಶ್ಲೋಕ ಹೇಳಿ ಏನೇನೋ ಅರ್ಥ ಹೇಳುತ್ತಾರೆ.

ಕಲ್ಯಾಣದ ರಾಜನ ಆಸ್ಥಾನದಲ್ಲಿ ಇವರ ಗೆಳೆಯರಿದ್ದಾರೆ. ಆಗಾಗ ಕಲ್ಯಾಣಕ್ಕೆ ಹೋಗಿ ಬಂದು ರಾಜನ ಭೆಟ್ಟಿಯಾಗಿದ್ದೆ ಅವನಿಗೆ ಉಪದೇಶ ಮಾಡಿದೆ ಎಂದು ಹೇಳುತ್ತಾರೆ.

ಆದರೆ ಇವರ ಹತ್ತಿರವಿರುವ ಯೋಧರಿಗೆ ಇವರೇ ಸಂಬಳ ಕೊಡುತ್ತಾರೆ ಎಂದು ಗೊತ್ತು.

ಹಳ್ಳಿಗರನ್ನು ಮರಳುಮಾಡಿ ಭವಿಷ್ಯ ಹೇಳಿ ಯಜ್ಞ ಯಾಗಾದಿ ಮಾಡಿ ಸುಖಜೀವನ ಸಾಗಿಸುತ್ತಾರೆ.
ಕಲ್ಯಾಣದಲ್ಲಿ ಇಂತಹ ಅನೇಕ ಪರಾವಲಂಬಿಗಳಿದ್ದಾರೆ. ಅವರೆಲ್ಲ ರಾಜನಿಗೆ ದೂರುವದು ಸಾಮಾನ್ಯ.
ಬರಗಾಲವನ್ನು ಬಂಡವಾಳ ಮಾಡಿಕೊಂಡು ಹಣಮಾಡುವ ಕನಸು ಕಂಡವರಿಗೆ ನಿರಾಸೆಯಾಗಿದೆ. ಅವರು ತಮ್ಮ ಅಸಮಾಧಾನ ಮಾತಿನಲ್ಲಿ ಹೊರಹಾಕುತ್ತಿದ್ದಾರೆ. ಇಂತಹವರೆಲ್ಲ ಒಂದಾಗಿ ರಾಜನಿಗೆ ದೂರಿದರೂ ಆಶ್ಚರ್ಯವಿಲ್ಲ.
ನಾನು ಅಣ್ಣ ನಮಗಾಗಿ ಹೇಳಿದ ಮಾತನ್ನ ಪಾಲಿಸಿದೆ

**ಲೋಕದ ಡೊಂಕ ನೀವೇಕೆ ತಿದ್ದುವಿರಿ**

**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;**

**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.**

**ನೆರೆಮನೆಯ ದಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ. /1143**

----ಅಣ್ಣ ಬಸವಣ್ಣ

**ಮೋನಣ್ಣ:** ನಾವು ಮರಳಿ ಹೋಗುವ ತಯಾರಿ ಮಾಡಿಕೊಳ್ಳಲು ವೇಳೆಯಾಗುತ್ತದೆ. ಮುಂದಿನ ಸಲ ನಿಮ್ಮ ಮನೆಗೆ ಬರುತ್ತೇವೆ.
**ಮಹಾದೇವ:** ಹಾಗೆ ಆಗಲಿ. ಹೋಗಿ ಬನ್ನಿ ಅಣ್ಣ ಬಸವಣ್ಣನನ್ನು ಬೀಳ್ಕೊಡಲು ನಾನು ಬರುತ್ತೇನೆ.
ಯಾಕೋ ಗೊತ್ತಿಲ್ಲ ಹೋಗಿಬರುತ್ತೇನೆ ಶರಣೆಂದು ಅವನನ್ನು ಅಪ್ಪಿಕೊಂಡೆ. ಒಂದೇ ಕ್ಷಣ ಮನ ಶಾಂತವಾಯಿತು, ದುಗುಡ ಕಮ್ಮಿಯಾಯಿತು ಮತ್ತು ಪಂಡಿತನ ಮಾತು ಕೇಳಿ ಬಂದಿದ್ದ ಕ್ರೋಧ ಮರೆಯಾಯಿತು.
ಗಮನಿಸಿ:

ನಮ್ಮೂರಿಗೆ ಹೋದರೆ ನನ್ನ ಗೆಳೆಯ ಮುದುಕಪ್ಪನ ಮನೆಗೆ ಹೋಗಿ ಊಟಮಾಡದೇ ಮರಳುವದಿಲ್ಲ. ಅವನ ನಿಜ ಹೆಸರೇನು ಗೊತ್ತಿಲ್ಲ ಅವರಜ್ಜಿ ಮುದಕಪ್ಪ ಅಂತ ಕರೆಯುತ್ತಿದ್ದಳು (ಅವನ ಹೆಸರು ಮತ್ತು ಆಕೆಯ ಯಜಮಾನರ ಒಂದೇ ಆಗಿತ್ತು. ಗಂಡನ ಹೆಸರಿಡಿದು ಯಾರಾದರೂ ಕರೆಯುತ್ತಾರೆಯೇ?). ಹಾಗಾಗಿ ಎಲ್ಲರೂ ಅವನನ್ನು ಮುದುಕ ಎಂದೇ ಕರೆಯುತ್ತಿದ್ದರು.

ಒಮ್ಮೆ ಅವನ ಮನೆಗೆ ಊಟಕ್ಕೆ ಹೋದಾಗ ನನಗಾದ ಅನುಭವ ನಿಮ್ಮೊಡನೆ ಹಂಚಿಕೊಳ್ಳುವೆ.

ಅವನ ಮನೆಗೆ ಹೋಗಬೇಕಾದರೆ ದೊಡ್ಡ ರಸ್ತೆಯಿಂದ ಹೊರಳಿ ಸಂದಿಯಲ್ಲಿ ಅವನ ಮನೆಗೆ ಹೋಗಬೇಕು. ಅವನ ಮನೆಗೆ ಹೊರಳುವಷ್ಟರಲ್ಲಿ ಅಲ್ಲಿ ಅವನ ನಾಯಿ ಅವನಿಗಾಗಿ ದಾರಿ ಕಾಯುತ್ತ ನಿಂತಿತ್ತು. ಅವ ಬರುತ್ತಿದ್ದಾನೆ ಎನ್ನುವದು ಆ ನಾಯಿಗೆ ಹೇಗೆ ಗೊತ್ತಾಯಿತು? ಎನ್ನುವ

ಪ್ರಶ್ನೆ ನನಗೆ ಕಾಡಹತ್ತಿತು. ಅವನನ್ನು ಕಂಡೊಡನೆ ಅದರ ತುಂಟಾಟ ಕುಣಿದಾಟ ನೋಡುವದೇ ಚನ್ನಾಗಿತ್ತು. ಅವನ ಸಮೀಪ ನಾನು ನಡೆಯಲೂ ಬಿಡಲಿಲ್ಲ.

ಇನ್ನು ಮನೆಯೊಳಗೆ ಕಲಿಟ್ಟೊಡನೆಯೆ ಅವನ ಮನೆಯ ಕೊಟ್ಟಿಗೆಯಲ್ಲಿದ್ದ ದನ ಕರುಗಳು ಕೂಗಿ ಅವನನ್ನು ಸ್ವಾಗತಿಸಿದವು. ಅವುಗಳೆಲ್ಲರ ಮೈದಡವಿ ಅವುಗಳಿಗೆ ನೀರು ಮೇವು ಕೊಟ್ಟ ಮೇಲೆ ಅವು ಸಮಾಧಾನವಾದವು.

ಅಷ್ಟರಲ್ಲಿ ಅಡಿಗೆ ಮನೆಯ ಬಾಗಿಲಲ್ಲಿ ತಾಯಿಯ ಸೋಂಟದ ಮೇಲೆ ಕುಳಿತಿದ್ದ ಮಗು ಕಿಟಾರನೆ ಕಿರುಚಿ ಕೈ ಚಾಚಿ ಚೀರಲಾರಂಭಿಸಿತು. ಅದನ್ನು ಎತ್ತಿಕೊಂಡು ಅವನು ಮುದ್ದಾಡತೊಡಗಿದ.

ಅಣ್ಣ ಊಟಮಾಡಲು ಕೈಕಾಲು ತೊಳೆದುಕೊಂಡು ಬನ್ನಿ ಅವರು ಹೀಗೆಯೇ ಮಗನ ಜೊತೆ ಎಲ್ಲರನ್ನು ಮರೆಯುತ್ತಾರೆ ಎಂದಳು ಶಾರದಕ್ಕ. ನಾನು ಬಂದು ಚಾಪೆಯ ಮೇಲೆ ಕುಳಿತುಕೋಡೆ.

ಅವನು ಅಂತೂ ಬಂದು ಕುಳಿತುಕೊಡ. ಶಾರದಕ್ಕ ಅಡ್ಡಣಗಿ ಇಟ್ಟು ಅದರ ಮೇಲೆ ತಾಬಂಡಿ ಇಟ್ಟು ಊಟ ಬಡಿಸಲು ಪ್ರಾರಂಭಿಸಿದಳು ಅಷ್ಟರಲ್ಲಿ ಅಲ್ಲಿಗೆ ಬಂದ ಬೆಕ್ಕು ಅವನ ತೊಡೆಯ ಮೇಲಿದ್ದ ಮಗುವನ್ನು ಸ್ವಲ್ಪ ಪಕ್ಕಕ್ಕೆ ಸರಿಸಿ ಕುಳಿತಿತು. ಮಗು ಮತ್ತು ಬೆಕ್ಕಿನ ನಡುವೆ ಸಣ್ಣ ಯುದ್ಧ ನಡೆದು ಶಾಂತಿಯೊಪ್ಪಂದವಾದದ್ದು ಶಾರದಕ್ಕ ಒಂದು ಬಟ್ಟಲು ಹಾಲು ತಂದು ಬೆಕ್ಕಿಗೆ ಇಟ್ಟ ಮೇಲೆ. ನನ್ನ ಗೆಳೆಯನಾಗ ಶಾರದಕ್ಕನನ್ನು ಕೇಳಿದ "ಹಪ್ಪಳ ಕರಿದಿಲ್ಲೇನು?. "ನಾನು ಅದೀನಿ ಅಂತ ಈಗ ನೆನಪಾಯಿತು ಯಜಮಾನರಿಗೆ" ಎಂದಳು ಹುಸಿಮುನಿಸಿನಿಂದ.

ನಮ್ಮ ದೇಶದ ಪ್ರತಿ ಹಳ್ಳಿಯ ಜನ ತಾವು ಸಾಕಿದ ಪ್ರಾಣಿಗಳನ್ನು ಮಕ್ಕಳಂತೆ ಪ್ರೀತಿಸುತ್ತಾರೆ. ಸಾಕುಪ್ರಣಿಗಳು ಮಕ್ಕಳಿಗಿಂತ ಹೆಚ್ಚು ಪ್ರೀತಿಯನ್ನು ಮರಳಿ ಕೊಡುತ್ತವೆ ಮತ್ತು ನಿಷ್ಠೆಯಿಂದ ಇರುತ್ತವೆ. ನೀವು ಹಳ್ಳಿಯವರಾಗಿದ್ದರೆ ಹೌದು ನೀವು ಹೇಳುವ ಮಾತು ನಿಜ ಎನ್ನುತ್ತೀರಿ ಒಮ್ಮೆಲೆ.

**ದಯವಿಲ್ಲದ ಧರ್ಮವದೇವುದಯ್ಯಾ,**
**ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ.**
**ದಯವೇ ಧರ್ಮದ ಮೂಲವಯ್ಯಾ,**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.**/726– ಅಣ್ಣ ಬಸವಣ್ಣ

## ಮಾಡುವಾತ ಕಲಿದೇವ, ಮಾಡಿಸಿಕೊಂಬಾತ ಕಲಿದೇವ

ನಾವಿಬ್ಬರೂ ಮನೆಗೆ ಬರುವಷ್ಟರಲ್ಲಿ ಅಲ್ಲಿ ಊರಿಗೆ ಹೊರಡುವ ಹೋಗುವ ತಯಾರಿ ನಡೆದಿತ್ತು. ನಾವೂ ನಮ್ಮ ಎತ್ತುಗಳಿಗೆ ನೀರುಕುಡಿಸಿ ಬಂಡಿಯ ಹತ್ತಿರ ಬಂದೆವು. ಆಗಲೇ ಬಂಡಿಯಲ್ಲಿ ಮೇವು ಹೇರಿ ಅದರ ಮೇಲೊಂದು ಕಂಬಳಿ ಹಾಕಲಾಗಿತ್ತು. ಅಲ್ಲಿ ಅನೇಕ ಪುಟ್ಟಿಗಳ ಜೊತೆ ಒಂದು ಅಂದದ ಲೋಹದ ಕೊಡ

ಇತ್ತು ಅದರ ಬಾಯಿ ಬಟ್ಟೆಯಿಂದ ಕಟ್ಟಿದ್ದರು. ಅಲ್ಲಿದ್ದವಿರಿಗೆಲ್ಲ ಹೋಗಿಬರುತ್ತೇವೆ ಎಂದು ಹೇಳಿ ನಾವೆಲ್ಲ ತಯಾರಾಗಿ ಹೊರಟಾಗ ಅಣ್ಣಾ, ಶಿವಣ್ಣಾ, ಅಂಗರಕ್ಷಕರು ಕುದುರೆಯೇರಿ ಹೊರಟರು.

ನನ್ನ ಬಂಡಿಯೇ ಕೊನೆಯದಾಗಿತ್ತು.

ತವರುಮನೆಯಿಂದ ಬಂದಾಗಲೂ ನನ್ನ ಹೆಂಡತಿಯ ಕಣ್ಣಲ್ಲಿ ಅಷ್ಟು ನೀರು ಬಂದಿದ್ದಿಲ್ಲ. ಶಂಕರಮ್ಮನ ಕಣ್ಣುತುಂಬಿತ್ತು ಮಾತನಾಡದೇ ಬಂಡಿ ಏರಿದ್ದರು. ದಾರಿಯ ಎರಡೂ ಪಕ್ಕ ಅದೇ ಆಗ ಹೊಲದಿಂದ ಕೆಲಸ ಮುಗಿಸಿಕೊಂಡು ಬಂದಿದ್ದ ಜನ ಇದ್ದರು, ಹೆಗಲಮೇಲೆ ಸಲಕಿ ಮತ್ತು ಗುದ್ದಲಿ ಇತ್ತು. ಅವರ ಮುಖ ಬಿಸಿಲಿನಿಂದ ಬಾಡಿತ್ತು. ಅಣ್ಣಾನವರನ್ನು ನೋಡಿ ಅವರ ಕಣ್ಣುಗಳು ಅರಳಿದ್ದವು, ಕೃತಜ್ಞತಾಭಾವ ಮನದಲ್ಲಿತ್ತು. ಅವರ ರಾಜರಪರ, ಅಣ್ಣಾನಪರ ಮತ್ತು ಶಿವಣ್ಣಾನವರ ಪರ ಜೈಕಾರ ಮುಗಿಲುಮುಟ್ಟಿತ್ತು.

ನಿಧಾನವಾಗಿ ಸಾಗಿದ ಸಾಲಿನಲ್ಲಿದ್ದ ನನಗೊಬ್ಬ ಅಜ್ಜಿ ಬಂಡಿ ನಿಲ್ಲಿಸಲು ಹೇಳಿದಳು. ಅಪ್ಪಾ ಕೊಡಲಾಕ ನನ್ನ ಹತ್ತರ ಏನೂ ಇಲ್ಲ, ಮನಿಯಾಗ ಸ್ವಲ್ಪ ಹುಣಸಿಕಾಯಿ ಇದ್ದವು ನನ್ನ ಮೊಮ್ಮಗ ಹರಕೊಂಡು ಬಂದಾನ ತೊಗೊಂಡು ಹೋಗು ಮಗ ಎಂದಳು.

ನಾವಿಬ್ಬರೂ ಬಂಡಿ ಇಳಿದು ಆಕೆಗೆ ಕಾಲಿಗೆರಗಿ ಆಶೀರ್ವಾದ ಪಡೆದೆವು. ಅವನ ಮೊಮ್ಮಗ ಹುಣಶಿಕಾಯಿ ತುಂಬಿದ ಪುಟ್ಟಿ ತಂದಿಟ್ಟ. ಅಲ್ಲಿದ್ದವರಿಗೆಲ್ಲ ಶರಣು ಹೇಳಿ ಹೊರಟೆವು.

ಬಂಡಿಗಳೆಲ್ಲ ಊರು ದಾಟಿ ಬಂದಿದ್ದವು. ನಮಗೂ ಹುಣಸಿಕಾಯಿಗೂ ಏನೋ ಸಂಬಂಧ ಇದೆ ಎನಿಸಿತು.

**ಗಂಗಾ:** ಇಂದು ಅಣ್ಣಾ ಬಸವಣ್ಣಾನವರಿಗೆ ಸಮಾಧಾನ ಆಗಿರಬೇಕು

**ಗುರಣ್ಣಾ:** ಯಾಕ ಏನಾತು?

**ಗಂಗಾ:** ಅಲ್ಲಿಂದ ಇಲ್ಲಿತನಕ "ಬೆವರಿನ ಪರಿಮಳ" ತುಂಬಿತ್ತು. ಅಣ್ಣಾ ಬಯಸಿದ್ದೂ ಇದನ್ನ.

ಅಕೆಯ ಕೈ ಅಣ್ಣಾ ಮುಟ್ಟಿದ ಶಲ್ಲೆ ಇಟ್ಟ ಚೀಲದ ಮೇಲೆ ಕೈಯಾಡಿಸುತ್ತಿತ್ತು.

**ಗುರಣ್ಣಾ:** ಹೌದು. ಇಡೀ ರಾಜ್ಯದ ತುಂಬ ಈ ಪರಿಮಳ ಹರಡಬೇಕು ಎನ್ನುವದು ಅವರ ಆಶೆ. ಆದರೆ?

**ಗಂಗಾ:** ಆದರೆ ಎಂತ ಯಾಕ ರಾಗ ಎಳಿಲಾಕ ಹತ್ತೀರಿ?

**ಗುರಣ್ಣಾ:** ಈ ಬೆವರಿನ ಪರಿಮಳಕ್ಕೆ ಎಲ್ಲ ಸಂಪ್ರದಾಯವಾದಿಗಳನ್ನು ಮತ್ತು ಶೋಷಣೆ ಮಾಡುವ ಕ್ರಿಮಿಗಳನ್ನು ಬುಡದಿಂದ ನಾಶಮಾಡುವ ಶಕ್ತಿ ಇದೆ. ಅವರೆಲ್ಲ ಒಂದಾಗಿ ಅಣ್ಣಾನವರ ತತ್ವಗಳನ್ನು ವಿರೋಧಿಸುತ್ತಾರೆ. ಈಗ ಕ್ರಾಂತಿಕಿಡಿ ಹತ್ತಿಯಾಗಿದೆ, ಕ್ರಾಂತಿ ಆಗತೈತಿ. ಅಣ್ಣಾನ ತತ್ವಗಳಿಗೆ ಜಯವಾದರೆ ಜಗತ್ತು ಸ್ವರ್ಗವಾಗುತ್ತ. ಇಲ್ಲದಿದ್ದರೆ ಶೋಷಣಮುಕ್ತ ಸಮಾಜಕ್ಕಾಗಿ ಹಲವು ಶತಮಾನ ಕಾಯಬೇಕಾಗತೈತಿ.

**ಗಂಗಾ:** ನಿಮಗ ದಣಿವಾಗೈತಿ. ಏನೇನೋ ಬಡಬಡಿಸಲಾಕ ಹತ್ತೀರಿ. ನೀ ಮಾತಾಡಿದ್ದು ನಿನಗ
ತಿಳಿಯಾಕಹತ್ತೈತೇನು. ಸುಮ್ಮನೆ ಬಂಡಿ ಹೊಡೀರಿ.
ತಿರುಗಿ ನೋಡಿದೆ, ಬೆಳದಿಂಗಳ ಆ ಮಂದಬೆಳಕಿನಲ್ಲಿ ಆಕೆಯ ಮುಖ ಸಿಟ್ಟಿನಿಂದ ಧುಮಗುಟ್ಟುವದು ಕಾಣಿಸುತ್ತಿತ್ತು. ಅವಳ ಮಾತು ಸರಿ ಎನಿಸಿತು ನಾನೇನು ಮಾತನಾಡಿದೆ? ನನಗೇ ಗೊತ್ತಾಗಲಿಲ್ಲ.
ಒಂದೆರಡು ಗಂಟೆ ಕಳೆದಿರಬಹುದು ಆಕೆ ಬಂಡಿ ನಿಲ್ಲಿಸಲು ಹೇಳಿದಳು. ದಾರಿ ಮಗ್ಗಲು ಬಂಡಿ ನಿಲ್ಲಿಸಿ ಏನು ಎಂದು ಕೇಳಬೇಕೆನಿಸುವಷ್ಟರಲ್ಲಿ ತೆಳು ಬೆಳಕಿನಲ್ಲಿ ಸಮೀಪದಲ್ಲಿ ಒಂದು ಬಾವಿಕಟ್ಟೆಯ ಮಗ್ಗಲು ಕೆಲವು ದನಗಳಿದ್ದವು ಅಲ್ಲಿ ಒಂದು ಕರು ಒದ್ದಾಡುತ್ತ ಕರುಣಾಜನಕವಾಗಿ ಕೂಗುವದು ಕೇಳಿಸುತ್ತಿತ್ತು.
ಬಂಡಿ ಕೊಳ್ಳುಹರಿದು ಆ ಬಾವಿಯ ಸಮೀಪಕ್ಕೆ ಹೋದೆವು.
ಬಾವಿ ಕಟ್ಟೆಯ ಮಗ್ಗುಲಲ್ಲಿದ್ದ ಕೆಸರಿನಲ್ಲಿ ಒಂದು ಕರು ಒದ್ದಾಡುತ್ತಿತ್ತು.
ಉಳಿದವುಗಳು ಅಲ್ಲಿರಬಹುದಾದ ನೀರು ಹೀರಿ ಕುಡಿಯಲು ಪ್ರಯತ್ನಿಸುತ್ತಿದ್ದವು.
ಆದಷ್ಟು ಬೇಗ ನೀರು ಕುಡಿಸಬೇಕು ಇಲ್ಲದಿದ್ದರೆ ಕರು ಬದುಕುವದು ಅಸಾಧ್ಯ ಎನಿಸಿತು.
ನಾನೊಂದು ಸಣ್ಣ ಕಲ್ಲು ಹರಳು ಬಾವಿಯಲ್ಲಿ ಒಗೆದೆ ಸ್ವಲ್ಪ ಸಮಯದ ಕಲ್ಲು ನೀರಲ್ಲಿ ಬಿದ್ದ ಸಪ್ಪಳ ಕೇಳಿಸಿತು. ಭಾವಿಯಲ್ಲಿ ನೀರಿದೆ ಎಂದು ಗೊತ್ತಾಯಿತು.
ಬಂಡಿಯಲ್ಲಿ ನೀರು ಸೇದಲು ಏನಾದರೂ ಪಾತ್ರೆ ಇದೆಯಾ ಎಂದು ಆಕೆಯನ್ನು ಕೇಳಿದೆ. "ಯಾವ ಪಾತ್ರೆಗಳಿಲ್ಲ ಎಲ್ಲ ಮಣ್ಣಿನ ಗಡಿಗೆಗಳು ಅದರಿಂದ ನೀರು ಸೇದಲಾಗಲ್ಲ" ಎಂದಳು.
ನನಗೆ ನೆನಪಾಯಿತು ಒಂದು ಬಟ್ಟೆಕಟ್ಟಿದ ಕೊಡ ಇದೆ ಎಂದು. ಓಡಿಹೋಗಿ ದನಕ್ಕೆ ಕಟ್ಟಿದ ಹಗ್ಗ ಹಾಗೂ ಆ ಕೊಡ ಎತ್ತಿಕೊಂಡು ಬಂದೆ. ಆಕೆ ಗಾಬರಿಯಿಂದ ಹೇಳಿದಳು
"ಅದರಾಗ ದಾಸೋಹಕ್ಕಾಗಿ ಪಾರ್ವತಮ್ಮನವರು ಕಳಿಸಿದ ತುಪ್ಪ ಇದೆ".
ಅದನ್ನು ಕೇಳುವ ಸ್ಥಿತಿಯಲ್ಲಿ ನಾನಿರಲಿಲ್ಲ, ನಾನಲ್ಲಿದ್ದ ಘರಿಸಿಕಟ್ಟೆಯ ಮೇಲೆ ಆ ತುಪ್ಪ ಸುರಿದು ಖಾಲಿಮಾಡಿದೆ.. ಮೊದಲು ಆ ಕರು ನೆಕ್ಕಿದ ಮೇಲೆ ಉಳಿದ ದನಗಳು ತುಪ್ಪ ನೆಕ್ಕತೊಡಗಿದವು. ತುಪ್ಪ ನೆಕ್ಕಿದರೆ ನೀರಡಿಕೆ ನೀಗುತ್ತದೆಯೇ?.
ಆದರೂ ಆ ಕರುವಿನ ಆರ್ತನಾದ ನಿಂತಿತ್ತು. ನಾನು ಎರಡು ಹಗ್ಗ ಜೋಡಿಸಿ ಕೊಡಕ್ಕೆ ಕಟ್ಟಿ ಇಳಿಬಿಟ್ಟೆ. ಕೊಡ ನೀರಿನ್ನು ತಲುಪಲಿಲ್ಲ, ಏನು ಮಾಡಬೇಕು ಎನ್ನುವಷ್ಟರಲ್ಲಿ ಆಕೆ ಬಟ್ಟೆ ಚಿಲತಂದು ಅದರಲ್ಲಿದ್ದ ಸೀರೆ ಹುರಿಮಾಡಿ ಒಂದು ತುದಿ ಕೊಟ್ಟಳು ಅದನ್ನು ಕಟ್ಟಿ ಇಳಿಬಿಟ್ಟೆ, ನೀರು ಸಿಗಲಿಲ್ಲ ಹೀಗೆ ಒಂದೊಂದಾಗಿ ಶಿವಣ್ಣವರು ಕೊಟ್ಟ ಹೊಸ ಸೀರೆ, ಧೋತರ ಎಲ್ಲ ಮುಗಿದರೂ ನೀರು ಸಿಗಲಿಲ್ಲ.
ಇನ್ನು ಕೊನೆಯದಾಗಿ ಉಳಿದದ್ದು ಆಕೆಯ ಹೆಗಲ ಮೇಲಿದ್ದ ಅಣ್ಣ ಬಸವಣ್ಣ ಮರಳಿಕೊಟ್ಟ ಶಲ್ಲೆ. ನನಗೇನು ಮಾಡಬೇಕು ತಿಳಿಯಲಿಲ್ಲ. ಆಕೆ ಶಲ್ಲೆಯನ್ನು

ಎರಡು ತುಂಡು ಮಾಡಿ ಒಂದು ತುಂಡು ನನಗೆ ಕೊಟ್ಟಳು, ಅದನ್ನು ಸುತ್ತಿಕೊಂಡು ಧೋತರ ಬಿಚ್ಚಿ ಕಟ್ಟು, ಇದು ಸಾಲದಿದ್ದರೆ ನನ್ನ ಸೀರೆ ಕೊಡತೀನಿ ಅನ್ನುವ ಆಕೆಯ ಧ್ವನಿಯಲ್ಲಿ ಆ ದನಕರರುಗಳನ್ನು ಬದುಕಿಸಲೇ ಬೇಕು ಎನ್ನುವ ಭಾವವಿತ್ತು. ಈಗ ಧೋತರ ಕಟ್ಟಿ ಇಳಿಬಿಟ್ಟೆ. ಇನ್ನೇನು ಆ ಧೊತರ ಮುಗಿಯಬೇಕು ಅಷ್ಟರಲ್ಲಿ ಕೊಡ ನೀರು ತಲುಪಿದ್ದು ಗೊತ್ತಾಯಿತು. ಅಂತೂ ಭಾವಿ ನೀರು ತಂದು ಅನುಭವವಿದ್ದ ನಾನು ಕೊಡ ಮುಳುಗಿಸಿ ನಿಧಾನವಾಗಿ ಮೇಲಕ್ಕೆಳೆದುಕೊಂಡೆ. ಅಷ್ಟರಲ್ಲಿ ಆಕೆ ಒಂದು ಹರವಿಯಲ್ಲಿದ್ದ ಬಾನವನ್ನು ಆ ದನಗಳಿಗೆ ಹಾಕಿ ಖಾಲಿ ಮಾಡಿ ಇಟ್ಟಿದ್ದ ಹರವಿಗೆ ನೀರು ಸುರಿದೆ. ಆ ಕರುವಿಗೆ ಆಕೆ ಒಂದು ಕುಡಕಿಯಿಂದ ನೀರು ಕುಡಿಸಹತ್ತಿದಳು. ಉಳಿದವುಗಳು ಒಂದೊಂದಾಗಿ ನೀರು ಕುಡಿಯಹತ್ತಿದವು. ಎಷ್ಟು ದನಗಳು ನೀರು ಕುಡಿದವು ಮತ್ತು ಎಷ್ಟೊತ್ತಾಯಿತು ಗೊತ್ತಾಗಲಿಲ್ಲ. ಅವುಗಳೆಲ್ಲ ಬದುಕಬೇಕು ಎನ್ನುವದು ಮನದ ತುಂಬ ತುಂಬಿತ್ತು.. ಆಕೆ ಮಗುವಿಗೆ ಕುಡಿಸಿದಂತೆ ಕರುವಿಗೆ ನೀರು ಕುಡಿಸುವ ದೃಶ್ಯ ನನಗೆ ಇನ್ನೂ ಕಣ್ಣಿಗೆ ಕಟ್ಟಿದೆ. ಅದಕ್ಕೆ ಸಾಕಾದಾಗ ಅವಳ ಕೈ ನೆಕ್ಕಹತ್ತಿತು. ಆ ಬೆಳದಿಂಗಳ ಮಂದ ಬೆಳಕಿನಲ್ಲಿ ಅವಳು ಮುಖದಲ್ಲಿ ಸಂತೋಷ ಕಾಣಿಸಹತ್ತಿತ್ತು. ಅಲ್ಲಿದ್ದ ದನಗಳಿಗೆಲ್ಲ ನೀರು ಸೇದಿ ಹಾಕಿ ನೀರು ಕುಡಿಸಿದೆ. ಅವು ನನ್ನ ಮೈ, ಕೈನೆಕ್ಕಿ ತಮ್ಮ ಸಂತೋಷ ವ್ಯಕ್ತಗೊಳಿಸಿದವು. ಅವೆಲ್ಲ ಕೆಸರಿನಲ್ಲಿ ಹೊರಳಾಡಿವೆ ಎನ್ನುವದು ನನ್ನ ಕಲ್ಪನೆಗೆ ಬರಲಿಲ್ಲ ನಾನೂ ಅವುಗಳ ಮೈ ಸವರಿ ಖುಶಿ ಪಟ್ಟೆ. ಆಕೆ ನಡೆ ಹೋಗೋಣ ಎಂದಾಗಲೆ ನಾನು ವಾಸ್ತವಕ್ಕೆ ಬಂದದ್ದು. ಧೊತರ ಉಟ್ಟುಕೊಂಡು ಅಲ್ಲಿದ್ದ ಬಟ್ಟೆ ಸುತ್ತಿಕೊಂಡು, ಹಗ್ಗ ಕಡೆಗೆ ಮಾಡಿ, ಕೊಡ ತೊಗೊಂಡು ಬಂಡಿಯ ಕಡೆ ಹೊರಟೆ. ಆಕೆ ಅವೆರಡು ಶಲ್ಲೆ ತುಂಡುಗಳನ್ನು ಮಡಚಿ ಹಿಡಿದುಕೊಂಡು ನನ್ನ ಹಿಂದೆ ಹೊರಟಳು ಕರು ಬಿಟ್ಟು ಬರಲು ಮನಸಾಗದೆ ಮರಳಿ ಹೋಗಿ ಅದಕ್ಕೆ ಮುದ್ದಿಟ್ಟು ಬಂದಳು. “ಅಂಬಾ” ಎನ್ನುವ ಆ ಕರುವಿನ ಮತ್ತು ಉಳಿದ ದನಗಳ ಕೂಗು ಬಂಡಿ ದೂರ ಸಾಗುವವರೆಗೂ ಕೇಳಿಸುತ್ತಿತ್ತು. ಆಕೆ ನಿಧಾನವಾಗಿ ಕೇಳಿದಳು " ದಾಸೋಹಕ್ಕೆ ಕೊಟ್ಟ ತುಪ್ಪ, ಬಾನ ನೆಲಕ್ಕ ಸುರದ ಬಿಟ್ಟು ತಪ್ಪು ಮಾಡಿಬಿಟ್ವೇವಿ ಏನ ಮಾಡುವದು?"ಎಂದಳು ಚಿಂತಾಕ್ರಾಂತಳಾಗಿ.

ಮೊದಲು ಮನೆ ಮುಟ್ಟೂನ "ನಾಳೆ ಅಣ್ಣಾ ದಾರಿತೋರಿಸ್ತಾನ, ಈ ಕತ್ತಲದಾಗ ನಮ್ಮ ಮನಿ ಸಿಗೂದೆಂಗ ನನಗಂತೂ ದಾರಿ ಸಿಗೂದಿಲ್ಲ" ಎಂದೆ.

“ನೀವ ಗಾಡಿ ಹೊಡೀರಿ ಮೊನ್ನೆಹಂಗ ಕೆರೆ ದಂಡೆಯಾಗ ರಾತ್ರಿ ಕಳೆದರಾಯಿತು"

"ಸರಿ"

ಈಗ ನನಗೆ ದಣಿವಾದ ಅನುಭವ ಅನಿಸಹತ್ತಿತು. ಇಳೀರಿ ಮನೆ ಬಂದಿದೆ ಎಂದು ಆಕೆಯ ಮಾತು ಕೇಳಿ ಎಚ್ಚರವಾಯಿತು. ನನ್ನ ಎತ್ತುಗಳು ನಮ್ಮನ್ನು ಮನೆಗೆ ಕರೆದುಕೊಂಡು ಬಂದಿದ್ದವು. ನನಗೆ ದಾರಿತೋರಿಸಿದ ದೇವರುಗಳು ಅವು. ಬಂಡಿಯಿಂದ ಕೆಳಗಿಳಿದು ಬಂಡಿ ಅದರ ಜಾಗಕ್ಕೆ ಬಿಟ್ಟು ಎತ್ತು ಕಟ್ಟಿ ಮನೆಯೊಳಗೆ ಬಂದು ಮಲಗಿಕೊಂಡೆವು.

ಆಕೆ "ನನ್ನ ಕಿವಿಯಾಗ ಅಂಬಾ ಎನ್ನುವ ಶಬ್ದ ಕೇಳಸಲಾಕ ಹತ್ತೈತಿ" ಅಂತ ಏನೇನೊ ಹೇಳಹತ್ತಿದ್ದಳು ಅದನ್ನು ಕೇಳುತ್ತಲೇ ನಿದ್ದೆಗೆ ಜಾರಿದ್ದೆ.

ಗಮನಿಸಿ: ಜಗದ ಇತಿಹಾಸದ ಪುಟಗಳನ್ನು ತಿರುವಿಹಾಕಿದಾಗ ಅನೇಕ ರಾಜಮಹಾರಾಜರು ತಮ್ಮ ಮಂತ್ರಿಗಳ ಸಲಹೆಗಳ ಮೇಲೆ ನಾಡಿನ ಜನರ ಏಳ್ಗೆಗಾಗಿ ಪರಿಶ್ರಮಿಸಿ ಜನ ಮನದಲ್ಲಿ ನೆಲೆಸಿದ್ದಾರೆ. ಅವರ ಯಶೋಗಾಥೆಯನ್ನು ಅನೇಕ ಕವಿಗಳ ಕವಿತೆಗಳಲ್ಲಿ ಸಾಹಿತಿಗಳ ತಮ್ಮ ಸಾಹಿತ್ಯ ಕೃತಿಗಳಲ್ಲಿ ಮತ್ತು ಜನಪದ ಗೀತೆಗಳಲ್ಲಿ ಅಳವಡಿಸಿದ್ದಾರೆ. ಅವರ ಒಳ್ಳೆಯ ಕಾರ್ಯಗಳ ಮೂಲ ಅವನ ಮಂತ್ರಿಯಾದರೂ ಮಂತ್ರಿಗಳ ಹೆಸರು ಎಲ್ಲಿಯೂ ಉಲ್ಲೇಖವಾಗುವದಿಲ್ಲ. ಆದರೆ ಮಹಾಮಂತ್ರಿ ಬಸವಣ್ಣನವರ ವಿಷಯದಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧ ಸಂಗತಿ ಕಂಡು ಬರುತ್ತದೆ. ಅಣ್ಣ ಬಸವಣ್ಣನವರ ಗುಣಗಾನ ಅನೇಕ ಕವಿಗಳ ಕವಿತೆಗಳಲ್ಲಿ ಸಾಹಿತಿಗಳ ತಮ್ಮ ಸಾಹಿತ್ಯ ಕೃತಿಗಳಲ್ಲಿ ಮತ್ತು ಜನಪದ ಗೀತೆಗಳಲ್ಲಿ ಕಂಡುಬರುವದಲ್ಲದೇ ಜನರು "ಬಸವ, ಬಸವಾ" ನಾಮ ಜಪಿಸುವದು ಕಂಡು ಬರುತ್ತದೆ. ಆದರೆ ಬಿಜ್ಜಳ ಮಹಾರಾಜನ ಹೆಸರು ಮಾತ್ರ ಇತಿಹಾಸದ ಪುಟಗಳಿಗೆ ಸೀಮಿತವಾಗಿದೆ.

ಭಾಗ 2

## ಕಲ್ಪನೆ:

“ಅಂಬಾ” “ಅಂಬಾ” ---- ಎನ್ನುವ ಕೂಗು ಮನವೆಲ್ಲ ತುಂಬಿತ್ತು. ಈ ಕೂಗು ಮನೆಯ ಮುಂದೆಯೇ ಬರುತ್ತಿದೆ ಎನಿಸಿ ಎಚ್ಚರವಾಗಿ ಬಾಗಿಲು ತೆಗೆದು ಹೊರಗೆ ಬಂದೆ. ನನಗಾಶ್ಚರ್ಯ ಆಕಳ ಕರುವೊಂದು ಬಂದು ಮೈ ನೆಕ್ಕತೊಡಗಿತು ದಿಟ್ಟಿಸಿ ನೋಡಿದರೆ ಅದು ನಿನ್ನೆ ರಾತ್ರಿ ದಾರಿಯಲ್ಲಿ ನೀರು ಕುಡಿಸಿದ ಆಕಳ ಕರುವಾಗಿತ್ತು. ಅದರ ಮೈ ಕೆಸರಾಗಿದ್ದು ತುಪ್ಪದ ವಾಸನೆ ಬರುತ್ತಿತ್ತು. ಅದರ ಮೈ ತೊಳಿಯಬೇಕೆಂದು ಭಾವಿಯ ಕಡೆಗೆ ನಡೆದೆ ಕರು ನನ್ನ ಹಿಂದೆ ಬಂದಿತು ಮಗುವಿನಂತೆ. ಭಾವಿಯಿಂದ ನೀರು ಸೇದಿ ಅದರ ಮೈ ತೊಳೆದು ಶುಭ್ರಗೊಳಿಸುವಷ್ಟರಲ್ಲಿ ಅಲ್ಲಿ ಒಂದಲ್ಲ ಅನೇಕ ದನಕರುಗಳು ಬಂದು ನನ್ನ ಸುತ್ತುವರಿದವು. ಏನು ಮಾಡಬೇಕು ತೋಚಲಿಲ್ಲ. ಪಾಪ ಅವುಗಳಿಗೆ ನೀರಡಿಕೆಯಾಗಿದೆ ಹಸಿವಾಗಿದೆ ಎಂದುಕೊಂಡು ನೀರು ಸೇದಿ ಮೈತೊಳೆದು ನೀರು ಕುಡಿಸಲು ಪ್ರಾರಂಭಿಸಿದೆ. ದನಗಳೆಲ್ಲ ಸೊರಗಿ ಅವುಗಳ ಮೈಎಲ್ಲ ಎಲುಬಿನ ಹಂದರವಾಗಿತ್ತು ಅದನ್ನು ತಿಕ್ಕಿ ತಿಕ್ಕಿ ತೊಳೆದ ನನ್ನ ಕೈ ನೋವಾಗಹತ್ತಿತು. ನೀರು ಕುಡಿದ ಮೇಲೆ ಅವು ಅಲ್ಲಿದ್ದ ಮೇವನ್ನು ಮೇಯಲು ಹೋಗಹತ್ತಿದವು. ಆಗ ಅವುಗಳ ಅಂಬಾ ಎನ್ನುವ ಕೂಗು ಮನಕ್ಕೆ ಮುದ ನೀಡುತ್ತಿತ್ತು ನನ್ನ ಕೆಲಸ ಮುಂದುವರೆಸಲು ಶಕ್ತಿ ಕೊಡುತ್ತಿತ್ತು.

ಎದ್ದು ಅಲ್ಲಿಗೆ ಬಂದು ನೋಡಿದ ನನ್ನಾಕೆಗೆ ಏನಾಗುತ್ತಿದೆ ಅರ್ಥವಾಗಲಿಲ್ಲ. ಆ ಕರು ಬಂದು ಅಕೆಯನ್ನು ಅಂಬಾ ಎಂದು ನೆಕ್ಕಹತ್ತಿದಾಗಲೇ ಆಕೆಗೆ ವಾಸ್ತವ ಪರಿಸ್ಥಿತಿ ಅರ್ಥವಾಯಿತು. ಆ ಕರುವನ್ನು ಮಗುವಿನಂತೆ ಮುದ್ದಾಡಿ, ಆಕೆ ನನ್ನ ಕೆಲಸದಲ್ಲಿ ನೆರವಾಗತೊಡಗಿದಳು. ಅಲ್ಲಿಗೆ ಬರುವ ದನಗಳ ಸಂಖ್ಯೆ ನಿರಂತರ ಬೆಳೆಯುತ್ತಲೇ ಹೋಯಿತು.

ರಾತ್ರಿಯೆಲ್ಲ ಆದ ಶ್ರಮ ಇಂದು ಆದ ಶ್ರಮದ ಫಲವಾಗಿ ನಾನು ಕುಸಿದು ಬಿದ್ದದ್ದಷ್ಟೆ ನೆನಪು.

ಎಚ್ಚರವಾಗಿ ಕಣ್ಣು ತೆರೆದು ನೋಡಿದಾಗ ಸುತ್ತಲೂ ಜನವೋ ಜನ ಏನಾಗುತ್ತಿದೆ ಎಂದು ಸುತ್ತಮುತ್ತಲೂ ನೋಡಿದೆ. ನನಗಾಶ್ಚರ್ಯ ಅಲ್ಲಿ ಜನಜಾತ್ರೆ ದನಗಳಿಗೆ ಮೈ ತೊಳೆಯುವವರು ಕೆಲವರಾದರೆ ಅವುಗಳಿಗೆ ಮೇವು ಹಾಕುವವರು ಕೆಲವರು ಮತ್ತು ಅಲ್ಲಿ ಹಂದರ ಹಾಕಿ ನೆರಳು ಮಾಡುತ್ತಿರುವವರು ಕೆಲವರು. ನಾನು ಎಚ್ಚರವಾಗಿ ಎದ್ದು ಕುಳಿತುಕೊಂಡೆ ಆಗ ನನಗೆ ಗಾಳಿ ಹಾಕುತ್ತಿದ್ದವರಲ್ಲಿ ಒಬ್ಬರು ಗುರಣ್ಣಗೆ ಎಚ್ಚರವಾಯಿತು ಎಂದು ಕೂಗಿದ. ಆಗ ಅಲ್ಲಿದ್ದವರೆಲ್ಲ ನನ್ನ ಸುತ್ತಲೂ ಸೇರಿದರು. ನನಗೆ ಏನಾಗುತ್ತಿದೆ ಎಂದು ಅರಿಯುಷ್ಟರಲ್ಲಿ ಒಬ್ಬ ಒಂದು ಲೋಟದಲ್ಲಿ ಹಾಲು ತಂದು ನನಗೆ ಕುಡಿಸಹತ್ತಿದ. ಅದು ನನಗೆ ಅಮೃತವೆನಿಸಿತು ದೇಹದಲ್ಲಿ ಶಕ್ತಿ ತುಂಬಿತು ಮೈಯೆಲ್ಲ ವಿದ್ಯುತ್ ಸಂಚಾರವಾಯಿತು. ಆಗ

ಅಲ್ಲಿದ್ದವರಲ್ಲೊಬ್ಬ “ಶರಣ ಗುರುವ ಉಘೇ ಉಘೇ” ಎಂದ ಅಲ್ಲಿದ್ದವರೆಲ್ಲ ಅವನ ದನಿಗೂಡಿಸಿ “ಶರಣ ಗುರುವ ಉಘೇ ಉಘೇ” ಎಂದರು.
ನನಗೇನು ಅರ್ಥವಾಗಲಿಲ್ಲ ಮತ್ತು ಏನು ಮಾಡಬೇಕು ತೋಚಲಿಲ್ಲ ಎಲ್ಲರಿಗೂ ಕೈಮುಗಿದೆ. ನನಗೆ ಗಾಬರಿಯಾಗಿತ್ತು ಅಷ್ಟರಲ್ಲಿ ನನ್ನಾಕೆ ಮತ್ತು ಮೋನಣ್ಣ ನನ್ನನ್ನು ಎಬ್ಬಿಸಿ ಕೈಹಿಡಿದು ಮನೆಯೊಳಗೆ ಕರೆದುಕೊಂಡು ಹೋದರು. ಏನಾಯಿತು ಎಂದು ತಿಳಿಯುವ ಕುತೂಹಲ. ಮೊನಣ್ಣ ಏನಾಯಿತು? ಎಂದೆ ನಿಧಾನವಾಗಿ. ಅಲ್ಲಿಗೆ ಬಂದ ಶಂಕರಮ್ಮ ಅಣ್ಣ ಎಲ್ಲ ಹೇಳತೀವಿ ಮೊದಲು ಸ್ವಲ್ಪ ಗಂಜಿ ಕುಡಿದು ಸುಧಾರಿಸಿಕೊಳ್ಳಿ ಎಂದು ಗಂಜಿಯ ಬಟ್ಟಲು ಕೈಯಲ್ಲಿಟ್ಟಳು. ಮರುಮತನಾಡದೆ ಗಂಜಿ ಕುಡಿದೆ ಸುಧಾರಿಸಿಕೊಂಡು ಅವರತ್ತ ನೋಡಿ ಏನಾಯಿತು ಹೇಳಿ ಎಂದೆ ಕುತೂಹಲ ತಾಳಲಾರದೆ.
ನಮ್ಮ ನಡುವೆ ನಡೆದ ಸಂವಾದ ಇಲ್ಲಿದೆ
**ಗಂಗಾ :** ನೀವು ಮೂರ್ಛೆಹೋಗಿ ಬಿದ್ದಾಗ ನನಗೇನು ಮಾಡಬೇಕು ತಿಳಿಯಲಿಲ್ಲ. ಅಲ್ಲಿದ್ದ ದನಗಳೆಲ್ಲ ಅಂಬಾ ಅಂಬಾ ಎನ್ನುತ್ತ ಕೂಗಾಡ ತೊಡಗಿದವು ಆ ಗದ್ದಲ ಕೇಳಿ ಸನಿಹದ ಜನರೆಲ್ಲ ಏನಾಗಿದೆ ಎಂದು ನೋಡಲು ಬಂದರು. ಅವರಿಗೆಲ್ಲ ಅಲ್ಲಿನ ಪರಿಸ್ಥಿತಿ ನೋಡಿ ಆಶ್ಚರ್ಯವಾಯಿತು. ನಡುವೆ ನಾವಿಬ್ಬರು ಸುತ್ತಲೂ ಅಸಹಾಯಕತೆಯಿಂದ ಕೂಗಾಡುತ್ತ ನಿಂತ ದನಕರುಗಳು. ಅವರಲ್ಲೊಬ್ಬರು ನಿಮ್ಮನ್ನು ಎತ್ತಿ ಕೂಡ್ರಿಸಲು ಪ್ರಯತ್ನಿಸಹತ್ತಿದರು ಮತ್ತೊಬ್ಬರು ನಿಮ್ಮ ಮುಖಕ್ಕೆ ನೀರು ಸಿಂಪಡಿಸಲು ನೀರು ಬೇಕೆಂದು ಭಾವಿಯಲ್ಲಿ ಕೊಡ ಇಳಿಬಿಟ್ಟರು. ಆಗಲೇ ನಡೆದದ್ದು ವಿಚಿತ್ರ ಘಟನೆ. ಅಲ್ಲಿ ಅಂಬಾ ಅಂಬಾ ಎನ್ನುತ್ತಿದ್ದ ನಿಂತಿದ್ದ ಆಕಳ ಮೊಲೆಯಿಂದ ಹಾಲು ಧಾರಕಾರವಾಗಿ ನಿಮ್ಮ ಮುಖದ ಮೇಲೆ ಹರಿಯಹತ್ತಿದ ಮೇಲೆ ನಿಮಗೆ ಎಚ್ಚರವಾಯಿತು.
ನಾನು ಮತ್ತು ಅಲ್ಲಿದ್ದವರೆಲ್ಲ ಆ ದೃಶ್ಯವನ್ನು ನಿಬ್ಬೆರಗಾಗಿ ನೋಡಿದೆವು. ನಿಮ್ಮನ್ನು ಎತ್ತಿ ಗಿಡದ ಕೆಳಗೆ ಮಲಗಿಸಿ ಗಾಳಿ ಹಾಕತೊಡಗಿದರು. ನನಗೇನು ಮಾಡಬೇಕು ತಿಳಿಯದೇ ನಿಮ್ಮ ಮಗ್ಗಲು ಕುಳಿತೆ. ಜನರಿಂದ ಜನರಿಗೆ ಸುದ್ದಿ ಹರಡಿ ಅಲ್ಲಿ ಜನರ ಗುಂಪು ಇನ್ನಷ್ಟು ಹೆಚ್ಚಾಯಿತು. ಬರುವಾಗ ಅವರು ಮೇವು ಮತ್ತು ಒಂದು ಬಟ್ಟಲು ತರಹತ್ತಿದರು.
ಅವರಲ್ಲಿ ಕೆಲವರು ನೀರು ಸೇದಿ ಮತ್ತೆ ಬಂದ ದನಗಳ ಮೈ ತೊಳೆಯಲು, ಕೆಲವರು ಅವುಗಳಿಗೆ ಮೇವು ಹಾಕಿ ಉಪಚಾರ ಮಾಡತೊಡಗಿದರು. ಹಾಲು ಹಿಂಡಿ ಅವರು ತಂದ ಬಟ್ಟಲಿಗೆ ಪ್ರಸಾದವೆಂದು ಸೇವಿಸತೊಡಗಿದರು.
**ಶಂಕರಮ್ಮ:** ಇಲ್ಲಿ ನಡೆದ ಘಟನೆ ವಿವರ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತ ನಮಗೂ ತಲುಪಿತು. ಒಬ್ಬ ಅಪರಿಚಿತ ಶರಣ ಕಲ್ಯಾಣಕ್ಕೆ ಬಂದಿದ್ದಾನೆ ಅವನ ಹಿಂದೆ ದನಕರುಗಳೆಲ್ಲ ಬೆನ್ನು ಹತ್ತಿ ಬಂದಿವೆ. ಅವನಿಗೆ ಆಕಳುಗಳು ತಮ್ಮ ಮೊಲೆಹಾಲು ಕೊಟ್ಟು ಉಪಚರಿಸುತ್ತಿವೆ. ಜನರು ಅಲ್ಲಿ ಹುಲ್ಲು ತೆಗೆದುಕೊಂಡು ಹೋಗುತ್ತಿದ್ದಾರೆ. ಮೇವು ಕೊಟ್ಟವರಿಗೆಲ್ಲ ಅಲ್ಲಿರುವ ಆಕಳುಗಳು ಬಟ್ಟಲು ತುಂಬ

ಹಾಲು ನೀಡುತ್ತವೆ. ನಮಗೂ ಆ ಪವಾಡ ನೋಡಬೇಕೆನಿಸಿ ಗಾಡಿತುಂಬ ಮೇವು ಮತ್ತು ಬಟ್ಟಲು ತೆಗೆದುಕೊಂಡು ಹೊರಟು ಇಲ್ಲಿಗೆ ಬಂದೆವು. ಇಲ್ಲಿ ಜನವೋ ಜನ ಎಲ್ಲರೂ ಮೇವು ಸಮರ್ಪಿಸಿ ಬಟ್ಟಲಲ್ಲಿ ಹಾಲು ಪ್ರಸಾದರೂಪವಾಗಿ ಪಡೆಯಲು ನಿಂತಿದ್ದರು. ಬಂದು ನೋಡಿದರೆ ಅಲ್ಲಿದ್ದವರು ನೀವು ಮತ್ತು ಗಂಗಕ್ಕ.

**ಮೋನಣ್ಣ:** ಬಸವಕಲ್ಯಾಣದ ಸುತ್ತಮುತ್ತಲೂ ಈಗ ಭೀಕರ ಬರಗಾಲ. ದನ ಸಾಕಲಾಗದೇ ಜನ ಅವುಗಳನ್ನು ಕಲ್ಯಾಣದ ಕಡೆಗೆ ಅಟ್ಟಿದ್ದಾರೆ ಹೇಗಾದರೂ ಬದುಕಲಿ ಎಂದು. ಇಲ್ಲಿ ನೀರು ಮತ್ತು ಮೇವು ಸಿಗುತ್ತದೆ ಎನ್ನುವದು ಅವುಗಳಿಗಳಿಗೆ ಗೊತ್ತಾಗಿ ಅವೆಲ್ಲ ಸಾಲುಗಟ್ಟಿ ಇಲ್ಲಿಗೇ ಬರಹತ್ತಿವೆ.

ಎಲ್ಲ ಕೇಳಿ ಏನು ಹೇಳಬೇಕು ಗೊತ್ತಾಗಲಿಲ್ಲ " ಅಣ್ಣ ಹೋಗುವಾ ನಾವೂ ಅವುಗಳ ಸೇವೆ ಮಾಡುವಾ" ಎಂದೆ.

**ಮೋನಣ್ಣ:** ಅದರ ಅವಶ್ಯಕತೆ ಇಲ್ಲ. ಅಲ್ಲಿ ಅನೇಕ ಯುವಕರು ಸೇರಿದ್ದಾರೆ. ಅಲ್ಲಿ ಬಂದ ದನಕರುಗಳಿಗೆ ನೆರಳಿನ ವ್ಯವಸ್ಥೆ ಮಾಡಹತ್ತಿದ್ದಾರೆ. ಇಲ್ಲಿಗೆ ಬರುವವರೆಲ್ಲ ಮೇವು ತರುತ್ತಿದ್ದಾರೆ. ಬಂದವರೆಲ್ಲ ದನಗಳ ಮೈ ತೊಳೆದು ನಮಸ್ಕರಿಸಿ ಪೂಜೆ ಮಾಡಿ ಅಲ್ಲಿ ವಿತರಣೆಯಾಗುತ್ತಿರುವ ಹಾಲನ್ನು ಪ್ರಸಾದ ರೂಪವಾಗಿ ಸೇವಿಸುತ್ತಿದ್ದಾರೆ. ದನಕರುಗಳ ಪಾಲನೆ ಸರಾಗವಾಗಿ ನಡೆಯುತ್ತದೆ ಚಿಂತೆ ಬೇಡಾ ನೀನು ಆರಾಮವಾಗಿರು. ಅಲ್ಲಿ ಬಂದ ದನಕರುಗಳಿಗಾಗಿ ದಾಸೋಹ ನಡೆದಿದೆ.

ನನಗೇನು ಹೇಳಬೇಕು ಏನು ಮಾಡಬೇಕು ತಿಳಿಯದೇ ಗೊಂದಲದಲ್ಲಿದ್ದ ನಾನು ಸುಮ್ಮನೇ ಮೂಕವಾಗಿ ಕುಳಿತೆ.

ಹೊರಗೆ ಜನರ ಗದ್ದಲವೋ ಗದ್ದಲ ನಡುವೆ "ಶರಣ ಗುರುವ ಉಘೇ ಉಘೇ" ಎನ್ನುವ ಘೋಷ. ಅಲ್ಲಿ ವಚನ ಭಜನೆಯೂ ಪ್ರಾರಂಭವಾದದ್ದು ಗೊತ್ತಾಗಹತ್ತಿತು.

ಬಾಗಿಲಿನಿಂದ ಅಣ್ಣಾ ಒಳಗೆ ಬರಬಹುದೇ? ಎನ್ನುವ ಮಾತು ಕೇಳಿಸಿತು. ಮೋನಣ್ಣ ಬನ್ನಿ ಬನ್ನಿ ಎಂದು ಅವರನ್ನು ಒಳಕರೆದ. ಬಂದವರು ಕಟ್ಟುಮಸ್ತಾದ ಪೇಟಾ ಸುತ್ತಿದ ಯುವಕರು ಮತ್ತು ಒಬ್ಬ ಯಜಮಾನರು. ಅವರೆಲ್ಲ ನನ್ನ ಹತ್ತಿರ ಕುಳಿತರು. ಯಜಮಾನ ಅಲ್ಪ ಸ್ವಲ್ಪ ಗೊತ್ತಿರುವ ಕನ್ನಡದಲ್ಲಿ ಮಾತಿಗಾರಂಭಿಸಿದ ಅವನ ಮಾತಿನ ಸಾರಾಂಶ

"ಅಣ್ಣಾ ನಾವು ಉತ್ತರದಿಂದ ನಮ್ಮ ದನಕರುಗಳಿಗೆ ಮೇವು ಅರಸಿ ಇಲ್ಲಿಗೆ ಬಂದೆವು ಕಳೆದ ಕೆಲವು ದಿನಗ ಳಿಂದ ಅವುಗಳಿಗೆ ಮೇವು ಹಾಕಲಾಗದ ಪರಸ್ಥಿತಿಯಲ್ಲಿ ಅವುಗಳೆಲ್ಲಾದರೂ ಬದುಕಲಿ ಎಂದು ಅವುಗಳನ್ನು ಬಿಟ್ಟುಬಿಟ್ಟೆವು. ನೀವು ಪುಣ್ಯಾತ್ಮರು ಅವುಗಳನ್ನು ಬದುಕಿಸಿಬಿಟ್ಟಿರಿ ಈಗ ಬಂದ ದನಕರುಗಳಲ್ಲಿ ನಮ್ಮವೂ ಕೆಲ ದನಕರುಗಳು ಇವೆ. ನಮ್ಮ ಕುಲಕಸುಬೇ ದನ ಸಾಕುವದು. ನೀವು ಅಪ್ಪಣೆ ಕೊಟ್ಟರೆ ಇಲ್ಲಿಗೆ ಬಂದಿರುವ ಎಲ್ಲ ದನಕರುಗಳ ಪಾಲನೆ ಮಾಡುತ್ತೇವೆ.

ದನಕರುಗಳ ಮಾಲಕರು ಬಂದಾಗ ಅವುಗಳನ್ನು ಅವರಿಗೆ ಮರಳಿ ಒಪ್ಪಿಸುತ್ತೇವೆ. ಅಪ್ಪಣೆ ಕೊಡಿ”
ನಮಗೇನು ಹೇಳಬೇಕು ತಿಳಿಯಲಿಲ್ಲ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಆಗ ಅಲ್ಲಿಗೆ ಬಂದವರು ಅಪ್ಪಣ್ಣನವರು. ಅವರನ್ನು ಕಂಡು ನಾವೆಲ್ಲ ಕೈಮುಗಿದೆವು. ಎದ್ದು ನಿಲ್ಲುವ ಪ್ರಯತ್ನದಲ್ಲಿದ್ದ ಅವರು ಬಂದವರೇ ನನ್ನನ್ನು ಅಪ್ಪಿಕೊಂಡು ಶರಣು ಶರಣಾರ್ಥಿ ಎಂದರು. ಎಲ್ಲರೂ ಕುಳಿತುಕೊಂಡಮೇಲೆ ಮೋನಣ್ಣ ನಡೆದ ವಿಷಯಗಳನ್ನೆಲ್ಲ ವಿವರಿಸಿದ ಮತ್ತು ಯಜಮಾನ ಹೇಳಿದ ವಿಷಯ ವಿವರಿಸಿದ.
**ಅಪ್ಪಣ್ಣ:** ಈ ಎಲ್ಲ ದನಕರುಗಳನ್ನು ಇಲ್ಲಿ ಸಾಕಲಾಗುವದಿಲ್ಲ. ಅದಕ್ಕಾಗಿ ಇಲ್ಲಿ ಸಮೀಪದ ಗುಡ್ಡದ ಬದಿಯಲ್ಲಿಯ ಕೆರೆಯ ಮಗ್ಗಲು ಬಯಲಿನಲ್ಲಿ ಅವುಗಳನ್ನು ಸಾಕಲು ವ್ಯವಸ್ಥೆ ಮಾಡಿದ್ದಾರೆ ಹಿರಿಯರು. ಈಗ ಅವುಗಳನ್ನು ಸಾಕಲು ಅಲ್ಲಿಗೆ ಬರಲು ಇವರು ಒಪ್ಪಿದರೆ ತುಂಬಾ ಅನುಕೂಲ. ಅಲ್ಲಿನ ಮೇವಿನ ವ್ಯವಸ್ಥೆ ನಾವೆಲ್ಲ ನೋಡಿಕೊಳ್ಳತೀವಿ.
ಆ ತಂಡದ ಯಜಮಾನನಿಗೆ ಸಂತೋಷ ತಡೆಯಲಾಗದೇ ಅಪ್ಪಣ್ಣನವರ ಕಾಲಿಗೆ ಬಿದ್ದು
“ಯಪ್ಪಾ ನಮ್ಮ ಹೊಟ್ಟೆ ಹೊರೆದು ಉಳಿದ ಹಾಲೆಲ್ಲ ದಾಸೋಹದ ಪಾಲು. ನಮ್ಮ ದನಕರುಗಳನ್ನು ಉಳಿಸಿಕೊಟ್ಟ ನಿಮಗೆಲ್ಲ ಶರಣು ಶರಣು”
ಎಂದು ಹೇಳಿದ.
ಈಗ ಅಲ್ಲಿಗೆ ದನಗಳನ್ನು ಸಾಗಿಸಬೇಕು ನಡೆಯಿರಿ ಎಂದರು ಅಪ್ಪಣ್ಣ.
ಅವರ ಮಾತು ನಮ್ಮೆಲ್ಲರ ಸಮಸ್ಯೆ ಬಗೆಹರಿಸಿತು.

**ಮಾತಿನಲ್ಲಿ ಶುದ್ಧವಿಲ್ಲದವರು ಶರಣರೆ ?**
**ಮನದಲ್ಲಿ ನಿಜವಿಲ್ಲದವರು ಶರಣರೆ ?**
**ಇಂದ್ರಿಯಂಗಳಿಗೆ ಮೈಗೊಡುವವರು ಶರಣರೆ ?**
**ವಿಷಯಕ್ಕೆ ಮುಂದುವರಿವವರು ಶರಣರೆ ? ಅಲ್ಲಲ್ಲ,**
**ಹಿಂದಣ ಮರವೆ ಮುಂದಣ ಎಚ್ಚರಿಕೆಯನರಿತು**
**ಜಾಗ್ರ ಸ್ವಪ್ನ ಸುಷುಪ್ತಿಯ ಹರಿದು,**
**ನಿರಾಳಲಿಂಗದಲ್ಲಿ ನಿಂದಾತ ಶರಣನಲ್ಲದೆ,**
**ಬಣ್ಣಗಾರ ಬಾಯಬಡುಕ ಭವದುಃಖಿಗಳ ಶರಣರೆಂದಡೆ**
**ನಗುವರಯ್ಯಾ ನಿಮ್ಮ ಶರಣರು ಅಖಂಡೇಶ್ವರಾ.** / 527----- ಷಣ್ಮುಖಸ್ವಾಮಿ

ಗಮನಿಸಿ:

ತಮ್ಮವರನ್ನು, ತಮ್ಮದಾದುದನ್ನು ಪ್ರೀತಿಸುವದು ಕಾಳಜಿ ತೋರುವದು ಮಾನವನ ಸಹಜ ಧರ್ಮ. ತಮ್ಮವರಿಗಾಗಿ ಕಾಳಜಿ ಮಾಡುತ್ತ ತಮ್ಮ ಪ್ರಾಣವನ್ನೇ ಪಣವಾಗಿಟ್ಟವರು ಅನೇಕ ಜನ ಸಿಗುತ್ತಾರೆ. ಆದರೆ ತನ್ನದಲ್ಲದವರಿಗಾಗಿ ಅವಿರತ ಪ್ರಯತ್ನಮಾಡುವ ಮನವುಳ್ಳವರು ಸಿಕ್ಕುವವರು ಅಪರೂಪ. ಸೇವೆ ಮಾಡುತ್ತ ಮಾಡುತ್ತ ಪ್ರಜ್ಞೆ ಕಳೆದುಕೊಂಡ ಅಪರೂಪದ ಘಟನೆ ನೋಡಿದ ಜನ ಹೊಗಳುವದರಲ್ಲಿ ಅತಿಶಯೋಕ್ತಿಯಿಲ್ಲ. ಆದರೆ ಆ ಹೊಗಳಿಕೆಯನ್ನು ಅವನು ಸ್ವೀಕರಿಸುವ ವಿವರ ಈ ಕನಸಿನ ಭಾಗದಲ್ಲಿದೆ.

ಪವಾಡ ಮತ್ತು ಪವಾಡಪುರುಷ ಇವೆರಡು ಶಬ್ದಗಳು ವಚನಗಳಲ್ಲಿ ಬಹಳ ಅಪರೂಪವಾಗಿ ಕಾಣಿಸಿಕೊಳ್ಳುವ ಪದಗಳು. ಪವಾಡ ಪದವನ್ನು 6 ವಚನಕಾರರು 9 ವಚನಗಳಲ್ಲಿ ಉಪಯೋಗಿಸಿದ್ದರೆ, ಪವಾಡಪುರುಷ ಪದವನ್ನು ಒಬ್ಬರೇ ಒಂದು ವಚನದಲ್ಲಿ ಉಪಯೋಗಿಸಿದ್ದಾರೆ. ಗಮನಿಸಿಬೇಕಾದ ಸಂಗತಿಯೆಂದರೆ ಶರಣರನ್ನೆಲ್ಲ ನಾವು ಪವಾಡಪುರುಷರಾಗಿ ಬಿಂಬಿಸಿದ್ದೇವೆ.

ಪವಾಡವು ಪ್ರಾಕೃತಿಕ ಅಥವಾ ವೈಜ್ಞಾನಿಕ ನಿಯಮಗಳಿಂದ ವಿವರಿಸಲಾಗದಂಥ ಘಟನೆ. ಅಂತಹ ಘಟನೆಗೆ ಅಲೌಕಿಕ ಜೀವಿ,ಜಾದೂ, ಪವಾಡ ಪುರುಷ, ಸಂತ, ಅಥವಾ ಧಾರ್ಮಿಕ ನಾಯಕನು ಕಾರಣ ಎಂದು ಹೇಳಲಾಗುತ್ತದೆ.

ವೈಜ್ಞಾನಿಕ ಮನೋಭಾವ ಬೆಳೆದ ಹಾಗೆಲ್ಲ ಮೂಢ ನಂಬಿಕೆ ಕಡಿಮೆಯಾಗಿ ನಡೆದ ಘಟನೆಯನ್ನು ವಿಶ್ಲೇಶಿಸಿ ವಿವರಿಸುವ ಪ್ರಯತ್ನ ನಡೆದ ಪರಿಣಾಮವಾಗಿ ಪವಾಡಗಳು ಕಡಿಮೆಯಾಗಿವೆ.

ಅಣ್ಣ ಬಸವಣ್ಣನವರು ತಮ್ಮ ವಚನದಲ್ಲಿ ಕೊಟ್ಟ ಪವಾಡದ ವಿವರ ಇಲ್ಲಿದೆ.

“---ಎಂಬತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿತೆನ್ನ ಭಕ್ತಿ.” – ಬಸವಣ್ಣ

ಒಮ್ಮೊಮ್ಮೆ ಸಹಜವಾಗಿ ನಡೆದ ಘಟನೆ ಸನ್ನಿವೇಶದ ಪ್ರಭಾವ ದಿಂದ ಪವಾಡವಾಗಿ ಕಾಣುತ್ತದೆ.

ಕರುವಿಲ್ಲದ ಎಮ್ಮೆ ಹಿಂಡಿಕೊಳ್ಳಲು ಸನಿಹ ಬಿಡುವದಿಲ್ಲ ಆದರೆ ಹಾಲು ಹಿಂಡಿಕೊಳ್ಳದಿದ್ದಾಗ ಕೆಚ್ಚಲು ಬಿಗಿದು ಒದ್ದಾಡಿ ನೋವು ತಡೆಯದಾದಾಗ ಅಲ್ಲಿ ಹಾಲು ತ ನ್ನಿಂದ ತಾನೇ ತೊಟ್ಟಿಕ್ಕುವದು ಸಾಮಾನ್ಯ. ಹೆಣ್ಣುಮಕ್ಕಳಲ್ಲಿ ಈ ರೀತಿಯ ತೊಂದರೆಯಾದಾಗ ಹಾಲು ತೆಗೆಯುವ ಸಾಧನಗಳು ಲಭ್ಯವಿವೆ.

ಈ ತರಹದ ಸಾಮಾನ್ಯ ಘಟನೆ ಜನರಿಗೆ ಪವಾಡವಾಗಿ ಕಂಡ ಮತ್ತು ಒಬ್ಬ ವ್ಯಕ್ತಿ ಪವಾಡಪುರುಷನಾದ ಬಗೆ ಈ ಕಲ್ಪನೆಯಲ್ಲಿದೆ..

ಯವುದೇ ಪ್ರಾಣಿ ತೊಂದರಯಲ್ಲಿದ್ದಾಗ ಸಹಾಯಮಾಡಿದಾಗ ಅದು ಅವನ ಹಿಂದೆಯೆ ಮನೆಗೆ ಬಂದ ವಿಚಾರ ಕೇಳಿದ್ದೀರಿ. ಅಂತಹ ಒಂದು ಘಟನೆಯ ವಿವರ ಇಲ್ಲಿದೆ.

ಮೋನಣ್ಣನ ನೆರವಿನಿಂದ ಹೊರ ಬಂದೆ. ಮನೆಯ ಮುಂದೆ ಜನಜಾತ್ರೆ. ಅವರೆಲ್ಲರನ್ನು ನೋಡಿದ್ದು ಮೊದಲ ಸಲ.

ನಮ್ಮನ್ನೆಲ್ಲ ನೋಡಿದ ಜನ “ಶರಣ ಗುರುವ ಉಘೆ ಉಘೆ” ಎಂದು ಕೂಗಿದರು. ನನ್ನನ್ನು ಅವರು ನೋಡಿಲ್ಲ ಆದರೆ ನಾನು ಮಾಡಿದ ಕೆಲಸ ಅವರ ಮೆಚ್ಚುಗೆಗೆ ಪಾತ್ರವಾಗಿತ್ತು. ನಾನು ಮಾಡಿದ ಕೆಲಸವಾದರೂ ಏನು ನೆನೆದು ನಾನು ಇವರ ಪ್ರೀತಿಗೆ ಅರ್ಹನಲ್ಲ ಎನಿಸಿ ತಲೆತಗ್ಗಿಸಿ ಕೈಮುಗಿದೆ. ನಾನು ಮನೆಯೊಳಗೆ ಓಡಿ ಹೋಗಿ ಮನೆಯೊಳಗೆ ಅಡಗಿಕೊಂಡಿರಬೇಕು ಎನಿಸಿದರೂ ಮೋನಣ್ಣನ ಸಹಾಯವಿಲ್ಲದೆ ನಡೆಯಲಾಗದ ಸ್ಥಿತಿಯಲ್ಲಿದ್ದ ನಾನು ಸುಮ್ಮನೆ ನಿಂತೆ. ಭಜನೆ ಮಾಡುವವರ ಮುಂದೆ ಮುಂದೆ ಅಲ್ಲಿದ್ದ ದನಗಳು ಹಿಂದೆ ಹಿಂದೆ ಹೊಡೆದುಕೊಂಡು ಹೊರಟರು.
ಯಾಕೊ ಗೊತ್ತಿಲ್ಲ ಕಣ್ಣಿನಲ್ಲಿ ನೀರಹನಿ ತೇಲಿಬಂತು ನನಗರಿವಿಲ್ಲದಂತೆ ಆಕೆಯು ಸಹ ತನ್ನ ಸೆರಗ ತುದಿ ಯಿಂದ ಕಣ್ಣಿರೊರಿಸಿಕೊಳ್ಳುವದು ಕಾಣಿಸಿತು. ಇನ್ನು ಮನೆಯೊಳಗೆ ಹೊಗಬೇಕು ಎನ್ನುವಷ್ಟರಲ್ಲಿ ಆ ಕರು ಹಿಂತಿರುಗಿ ಓಡಿಬಂದು ” ಆಕೆಯ ಮಗ್ಗಲು ನಿಂತು “ಅಂಬಾ” ಎನ್ನತೊಡಗಿತು. ಅಕೆ ಕುಳಿತು ಅದನ್ನಪ್ಪಿ ಸಂತೈಸತೊಡಗಿದಳು.
ಆ ಅಪರೂಪದ ದೃಶ್ಯ ಮಮತೆಗೆ ಹೊಸ ಅರ್ಥ ಕೊಟ್ಟಿತು. ಅಷ್ಟರಲ್ಲಿ ಮತ್ತೆರಡು ಹಸುಗಳು ಹಿಂದುರಿಗಿ ಓಡುತ್ತ ಬಂದವು. ಅಪ್ಪಣ್ಣನವರು ಅವನ್ನು ಮರಳಿ ಒಯ್ಯಲು ಬಂದವರಿಗೆ “ಹೋಗಲಿ ಬಿಡಿ ಗಂಗಕ್ಕ ಇವುಗಳನ್ನು ಸಾಕಲಿ” ಎಂದರು. ನನ್ನಾಕೆ ಖುಷಿಯಿಂದ ಅವನ್ನು ಹೊಡೆದುಕೊಂಡು ಹೋಗಿ ಎತ್ತಿನ ಪಕ್ಕದಲ್ಲಿ ಕಟ್ಟಿ ಬಂದಳು. ಸ್ವರ್ಗ ಸಿಕ್ಕಷ್ಟು ಆನಂದ ಅವಳ ಮುಖದಲ್ಲಿತ್ತು.
ಎಲ್ಲರೂ ಒಳ ಬಂದು ಕುಳಿತುಕೊಂಡೆವು. ನನಗೇನಾಯಿತು ಗೊತ್ತಿಲ್ಲ ಬಿದ್ದು ಬಿಕ್ಕಿ ಬಿಕ್ಕಿ ಅಳತೊಡಗಿದೆ. ಎಲ್ಲರೂ ಆವಾಕ್ಕಾದರು. ಅಪ್ಪಣ್ಣ ನನ್ನ ತಲೆಯ ಮೇಲೆ ಕೈಯಾಡಿಸಿ ಸಮಾಧಾನಪಡಿಸಿ “ಯಾಕ ಏನಾಯಿತು” ಎಂದರು.
“ನಾನು ಅತೀಸಾಮಾನ್ಯ, ಎದೆ ಸೀಳಿದರೆ ಎರಡಕ್ಷರ ಸಿಗೂದಿಲ್ಲ, ಶರಣರ ಒಂದೂ ತತ್ವ ಗೊತ್ತಿಲ್ಲ, ಆಚಾರ ವಿಚಾರ ಗೊತ್ತಿಲ್ಲ ಮತ್ತು ನಾನು ದನಗಳ ಮೈತೊಳೆಯುವದನ್ನು ಬಿಟ್ಟು ಯಾವ ಘನಂಧಾರಿ ಕೆಲಸ ಮಾಡಲಿಲ್ಲ. ನಾನು ಇಲ್ಲಿ ಬಂದವರೆಲ್ಲರ ಪಾದಪೂಜೆ ಮಾಡಬೇಕು ಅದರ ಬದಲಾಗಿ ಅವ ರಿಂದ ನನಗ ನಮಸ್ಕಾರ ಮಾಡಿಸಿಕೊಂಡೆ,...” ಎಂದು ಬಿಕ್ಕುತ್ತ ಬಡಬಡಿಸಿದೆ. ಅಪ್ಪಣ್ಣನವರ ಕೈ ನನ್ನ ಬೆನ್ನ ಸವರುತ್ತಿತ್ತು.
ನನ್ನಾಕೆ ಬಿಕ್ಕುತ್ತಾ ದನಿಗೂಡಿಸಿದಳು “ಹೌದು ಶರಣ ದರ್ಶನಮಾಡಿ ಅವರ ಸೇವಾ ಮಾಡಿ ಹೊಟ್ಟಿ ಹೊರಕೊಳ್ಳಾಕ ಬಂದ ನಮಗ ನಮಸ್ಕಾರ ಮಾಡಿದರು, ಈ ಪಾಪ ಪರಿಹಾರ ಮಾಡಿಕೊಳ್ಳುವ ದಾರಿ ನೀವ ತೋರಿಸಬೇಕು”
ಶಂಕರಕ್ಕ ನೀರು ತಂದುಕೊಟ್ಟಳು ಇಬ್ಬರೂ ನೀರು ಕುಡಿದೆವು ಸ್ವಲ್ಪ ಸಮಾಧಾನವಾಯಿತು. ಮೋನಣ್ಣ ಹೇಳಿದ “ಅಪ್ಪಣ್ಣನವರ ನನಗೇನು ಹೇಳಬೇಕು ಗೊತ್ತಗಲೊಲ್ಲದು ನೀವ ಅವರಿಗೆ ಸಮಾಧಾನ ಹೇಳಬೇಕು.’
ಅಪ್ಪಣ್ಣ ಕಣ್ಣುಮುಚ್ಚಿ ವಚನ ಹೇಳತೊಡಗಿದರು

**ಮಾವಿನಕಾಯೊಳಗೆ ಒಂದು ಎಕ್ಕೆಯ ಕಾಯಿ ನಾನಯ್ಯಾ.**

**ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ**

**ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ**/1056-- ಅಣ್ಣಾ ಬಸವಣ್ಣಾ.

ನಾವೆಲ್ಲ ಅವರ ಹಾಡುವ ವಚನ ಕೇಳುತ್ತ ಕೇಳುತ್ತಾ ಮೈಮರೆತು ಅವರೊಡನೆ ದ್ವನಿಕೂಡಿಸಿದೆವು. ಅಪ್ಪಣ್ಣನವರ ಮಧುರ ದ್ವನಿಯಲ್ಲಿ ವಚನ ಕೆಳುತ್ತ ಹಾಡುತ್ತ ಎಲ್ಲರ ಮನಸ್ಸು ಶಾಂತವಾಗಿತ್ತು.

ವಚನ ಸಂಗೀತದಲ್ಲಿ ಮನವನ್ನು ಶಾಂತಗೊಳಿಸುವ ದಿವ್ಯ ಶಕ್ತಿಯಿದೆ.

**ಆದ್ಯರ ವಚನ ಪರುಷ ಕಂಡಣ್ಣಾ;**

**ಸದಾಶಿವನೆಂಬ ಲಿಂಗ[ವು] ನಂಬುವುದು ನಂಬಲೊಡನೆ ನೀ ವಿಜಯ ಕಂಡಣ್ಣಾ. ಅಧರಕ್ಕೆ ಕಹಿ ಉದರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.** /205

--- ಅಣ್ಣಾ ಬಸವಣ್ಣಾ.

ಗಮನಿಸಿ:

“ಶರಣ” ಪದವನ್ನು 87 ವಚನಕಾರರು 1130 ವಚನಗಳಲ್ಲಿ 1423 ಕಡೆಗಳಲ್ಲಿ ಉಪಯೋಗಿಸಿದ್ದಾರೆ ಎನ್ನುವದನ್ನು ಗಮನಿಸಿದಾಗ ಆ ಪದಕ್ಕೆ ಶರಣರು ಎಷ್ಟು ಮಹತ್ವ ಕೊಟ್ಟಿದ್ದರು ಮತ್ತು ವಿವರಿಸಿದ್ದರು ಎನ್ನುವದು ಅರಿವಿಗೆ ಬರುತ್ತದೆ.

**ಅರಿದಡೆ ಶರಣ, ಮರೆದಡೆ ಮಾನವ:**

ಅಲ್ಲಮಪ್ರಭು 124, ಚನ್ನಬಸವಣ್ಣ 211, ದೇಶಿಕೇಂದ್ರ ಸಂಗನಬಸವಯ್ಯ 146 ಮತ್ತು ಬಸವಣ್ಣನವರು 33 ವಚನಗಳಲ್ಲಿ “ಶರಣ” ಪದದ ಅರ್ಥ ವಿವರಿಸಿದ್ದಾರೆ.

ಅನುಭವ ಮಂಟಪ ಸಾಮಾನ್ಯ ಮಾನವನನ್ನು “ಶರಣ”ನನ್ನಾಗಿ ಪರಿವರ್ತಿಸುವ ಕಾರ್ಯಾಗಾರವಾಗಿತ್ತು. ಕೆಲವರು ತಮ್ಮ ಕಾರ್ಯಗಳಿಂದ ಅವರ ಸತ್ಯ ಶುದ್ಧ ಕಾಯಕ ಪರಿಣಾಮವಾಗಿ ಶರಣರಾಗಿದ್ದಾರೆ.

ಒಬ್ಬ ಸಾಮಾನ್ಯ ಮಾನವ ಶರಣನಾದ ಘಟನೆ ಈ ಕನಸಿನ ಭಾಗದಲ್ಲಿದೆ.

ನನ್ನ ಮಗ ಶರಣನಾದ ವಿವರ:

ನನ್ನ ಮೊದಲ ಮಗನಿಗೆ ಯಾವ ಹೆಸರಿಡಬೇಕು ಎನ್ನುವದರ ಬಗ್ಗೆ ವಾದ ವಿವಾದ ಮಾಡಿ ಐದಾರು ಹೆಸರು ಆರಿಸಿ ಇಟ್ಟಿದ್ದೆವು. ಅವನು (1975) ರಲ್ಲಿ ಬಾಗಲಕೋಟೆಯ ದವಾಖಾನೆಯಲ್ಲಿ ಜನಿಸಿದ. ಅವನನ್ನು ನೊಡಲಿಕ್ಕೆ ಬಂದವರು “ಎನಂತಾನೆ ಕಲಬುರ್ಗಿ ಶರಣಬಸಪ್ಪ” ಎನ್ನುತ್ತಲೇ ಅವನನ್ನು

ಎತ್ತಿಕೊಳ್ಳುತ್ತಿದ್ದರು ಮತ್ತು "ಶರಣ" ಎನ್ನುತ್ತಲೇ ಆಡಿಸುತ್ತಿದ್ದರು. ಅಂತೂ ಅವನಿಗೆ ಹೆಸರಿಡುವ ಮೊದಲೇ ಅವನ ಹೆಸರು "ಶರಣ" ನಾಗಿ ನಾವಾರಿಸಿದ ಹೆಸರುಗಳು ಮೂಲೆಗುಂಪಾಗಿದ್ದವು. ಅವನ ಹೆಸರು "ಶರಣ" ಎಂದಾದದ್ದಿರಂದಲೇ ಅವನಿಷ್ಟು ಒಳ್ಳೆಯ ಮಗ ಎನ್ನುವದು ನನ್ನಾಕೆಯ ನಂಬಿಕೆ. ಈ ಕನಸಿನಲ್ಲಿ ಬರುವ ಗುರುವ ಪಾತ್ರ ಬರಿ ಹೆಸರಿಗಷ್ಟೇ ಶರಣನಾದನಾ? ಎನ್ನುವ ಪ್ರಶ್ನೆಗೆ ಮುಂದೆ ಉತ್ತರ ಕಂಡುಕೊಳ್ಳೋಣ.

**ಅಪ್ಪಣ್ಣ:** ಮಕ್ಕಳು ಬೆಳೆಯುವಾಗ ಅನೇಕ ಸಂತೋಷದ ಕ್ಷಣಗಳು ಇರುತ್ತವೆ. ಅದರಲ್ಲಿ ಒಂದು ಕ್ಷಣ ವಿವರಿಸುವೆ. ಮಗು ಅಂಬೆಗಾಲಿಕ್ಕಲು ಪ್ರಾರಂಬಿಸಿದಾಗ ತಂದೆ ತಾಯಿ ಚಪ್ಪಾಳೆ ಬಡಿದು ಮುಂದೆ ಹೋಗಲು ಪ್ರೋತ್ಸಾಹ ನೀಡುತ್ತಾರೆ. ಆ ಮಗು ಪ್ರಥಮಬಾರಿಗೆ ಹೊಸ್ತಿಲು ದಾಟಿದಾಗ ಅವರ ಸಂತೋಷಕ್ಕೆ ಪಾರವಿಲ್ಲ. ಹೊಸ್ತಿಲಕ್ಕೆ ಪೂಜೆ ಮಾಡಿ ಕಾಯಿ ಒಡೆಯುತ್ತಾರೆ. ಗುಡಿಗೆ ಹೋಗಿ ಪೂಜೆ ಮಾಡಿ ಬರುತ್ತಾರೆ. ಇಲ್ಲಿ ಮಗ ಮನೆಯ ಹೊಸ್ತಿಲ ದಾಟಿ ಹೊಸ ಪ್ರಪಂಚಕ್ಕೆ ಕಾಲಿಟ್ಟ ಕ್ಷಣ ಅವರಿಗೆ ಅವಿಸ್ಮರಣೀಯ. ಅವನು ಬೆಳೆದು ದೊಡ್ಡವನಾಗಿ
ಯಾವ ತೊಂದರೆಯಿಲ್ಲದೆ ಹೊರಜಗತ್ತಿನಲ್ಲಿ ಬೆಳೆಯಲಿ ಎಂದು ದೇವರಲ್ಲಿ ಪಾಲಕರು ಪ್ರಾರ್ಥಿಸುತ್ತಾರೆ.
ಈಗ ನಡೆದದ್ದು ಇಷ್ಟೇ ನೀವು ಸಾಮಾನ್ಯ ವ್ಯಕ್ತಿಗಳು ತೋರಿಸುವದಕ್ಕಿಂತ ಹೆಚ್ಚಿನ ಕಾಳಜಿ ಮತ್ತು ಪ್ರೀತಿಯನ್ನು ಪ್ರಾಣಿಗಳ ಮೇಲೆ ತೋರಿಸಿ ಮಾದರಿಯಾಗಿರುವಿರಿ, ಅದಕ್ಕೆ ಪ್ರತಿಯಾಗಿ ಪ್ರಾಣಿಗಳು ನಿಮ್ಮಿಬ್ಬರ ಮೇಲೆ ತಮ್ಮ ಪ್ರೀತಿಯನ್ನು ತೋರಿಸಿವೆ. ಕಲ್ಯಾಣದಲ್ಲಿ ಈ ರೀತಿಯಾದ ಘಟನೆ ನಡೆದದ್ದು ಇದೇ ಮೊದಲು. ಇದು ನೀನು ಶರಣನಾಗಲು ಇಟ್ಟ ಪ್ರಥಮ ಹೆಜ್ಜೆ, ನೀನು ಹೀಗೆಯೇ ಮುಂದುವರೆ ಎನ್ನುವ ಮನದಿಚ್ಛೆಯನ್ನು ಜೈಕಾರ ಮಾಡಿ ನಿನ್ನನ್ನು ಎಲ್ಲರೂ ಹರಿಸಿದ್ದಾರೆ. ನೀನು ಅದಕ್ಕಾಗಿ ಹಿಗ್ಗದೇ
"ನಿನ್ನ ನೀನರಿಯುವ" ಪ್ರಯತ್ನ ಮಾಡಿರುವೆ. "ತನ್ನ ತಾನರಿಯುವ" ನಿನ್ನ ಪ್ರಯತ್ನದಲ್ಲಿ ಸಫಲವಾಗುವಲ್ಲಿ ನಾವೆಲ್ಲ ಸಹಾಯಕ್ಕಿದ್ದೇವೆ.
ಅನುಭವ ಮಂಟಪವಿರುವದೇ ನಿನ್ನ ತರಹದವರಿಗೆ ಮಾರ್ಗದರ್ಶನ ಮಾಡುವದಕ್ಕಾಗಿ. ಮಡಿವಾಳ ಮಾಚಿದೇವರು "ತನ್ನ ತಾನರಿದ ಮಹಾಜ್ಞಾನಿ ಶರಣನು ಸಾಗಬೇಕಾದ ದಾರಿಯನ್ನು ತಿಳಿಸಿಕೊಟ್ಟಿದ್ದಾರೆ." ಈ ವಚನ ಕೇಳಿ ಎಂದು ಸುಮಧುರವಾಗಿ ವಚನ ಹೇಳಿದರು.

**ತನ್ನ ತಾನರಿದ ಮಹಾಜ್ಞಾನಿ ಶರಣನು ಚರಿಸುವ ಕ್ರಮವೆಂತೆಂದಡೆ:**
**ಸ್ಥೂಲವೆಂಬ ಕಂಥೆಯ ತೊಟ್ಟು, ಸೂಕ್ಷ್ಮವೆಂಬ ಟೊಪ್ಪರವನಿಕ್ಕಿ,ತತ್ವವೆಂಬ ಖರ್ಪರವನಾಂತು, ಸತ್ಯವೆಂಬ ದಂಡವಂ ಪಿಡಿದು,**
**ಶಾಂತಿಯೆಂಬ ಭಸಿತವಂ ತೊಡೆದು, ಸುಚಿತ್ತವೆಂಬ ಮಣಿಯ ಕಟ್ಟಿ, ವೈರಾಗ್ಯವೆಂಬ**

ಹಾವುಗೆಯಂ ಮೆಟ್ಟಿ,

ಮನದೃಢವೆಂಬ ಕೌಪವಂ ಕಟ್ಟಿ, ಆಚಾರವೆಂಬ ಕಂಕಣವನ್ನಿಕ್ಕಿ,ಕ್ಷಮೆದಮೆಗಳೆಂಬ

ಕುಂಡಲಮಂ ಧರಿಸಿ,

ಪರಮಾನಂದದಿಂದ ಸುಳಿದು, ಜಗವ ಪಾವನವ ಮಾಡಲೆಂದು ಭಕ್ತಿ ಭಿಕ್ಷವಂ ಬೇಡುತ್ತ

ಬಂದನಯ್ಯ,

ತನ್ನ ಒಲುಮೆಯ ಶರಣಗರ್ೆ ನಿಜಸುಖವನೀಯಲೆಂದು. ಕಲಿದೇವರದೇವಾ, ನಿಮ್ಮ ಶರಣ

ಪ್ರಭುವೆಂಬ ಜಂಗಮವಂ ಕಂಡು,

ಅರ್ಚಿಸಿ, ಪೂಜಿಸಿ, ಒಕ್ಕುದನುಂಡು, ನಿಶ್ಚಿಂತನಾದೆನಯ್ಯ. / 179.

---- ಮಡಿವಾಳ ಮಾಚಿದೇವರು

ಅವರ ಮಾತು ಕೇಳಿ ನಮ್ಮೆಲ್ಲರ ಮನ ಹಗುರವಾಯಿತು.
ಅಪ್ಪಣ್ಣ ಎಲ್ಲರಿಗೂ ಶುಭವಾಗಲಿ ಎಂದು ಹರಸಿ ಹೋದರು.
ಶಂಕರಕ್ಕ ಎಲ್ಲ ಅಡಿಗೆ ತಯಾರಿದೆ ಊಟಮಾಡಿ ಆರಾಮ ಅಗಿರಿ ಎಂದು ಹೇಳಿ ಮೋನಣ್ಣ ಜೊತೆಗೂಡಿ ಹೋದರು. ನನ್ನಾಕೆ ನನ್ನ ಮಕ್ಕಳು ಕ್ರಿಷ್ಣಾ, ಮಲಪಹಾರಿ ಮತ್ತು ಭೀಮಾ ಏನ ಮಾಡಲಾಕಹತ್ಯಾರ ನೋಡಿಕೊಂಡು ಬರತೀನಿ ಎಂದು ಹೊರಹೋಗಹತ್ತಿದಳು, ನಾನು ಕಕ್ಕಾಬಿಕ್ಕಿಯಾದುದನ್ನು ಗಮನಿಸಿ ಅದೇರಿ ನಾನು ನನ್ನ ಆಕಳುಗಳಿಗೆ ಮತ್ತು ಕರಕ್ಕೆ ಇಟ್ಟ ಹೆಸರು. ಸರಿ ಎಂದು ಹೇಳಿ ಮಲಗಿದೆ.

**ಕಷ್ಟದ ಕಾಲದಲ್ಲಿ ನಿಮಗೆ ದೇವರು ಬಂದು ಸಹಾಯ ಮಾಡಿದ್ದಾನೆಯೇ?**

ಸಾಮಾನ್ಯವಾಗಿ ಎಲ್ಲರೂ ಕೇಳುವ ಪ್ರಶ್ನೆ. ನನ್ನ ಅನುಭವದಲ್ಲಿ ಉತ್ತರ “ಹೌದು”. ಆ ಉತ್ತರವನ್ನು ನೀವು ಒಪ್ಪುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೂ ನನ್ನ ಒಂದು ಅನುಭವ ನಿಮ್ಮೊಡನೆ ಹಂಚಿಕೊಳ್ಳುವೆ.

ಒಂದು ಕಾರ್ಯಕ್ರಮದಲ್ಲಿ ಆಯೋಜಕರು ಸಜ್ಜನವರು ಜಾಣರು ಗಣಿತದಲ್ಲಿ ಪ್ರತಿಭಾವಂತರು ವಿಶ್ವವಿದ್ಯಾಲಯಕ್ಕೆ ದ್ವಿತೀಯಯಾಗಿ ನಮ್ಮೂರಿಗೆ ಕೀರ್ತಿ ತಂದವರು.... ಎಂದು ಹೊಗಳಿ ಹೊನ್ನಶೂಲಕ್ಕಿಕ್ಕುವಾಗ ನಾನು ಮುಗುಳ್ನಕ್ಕು ತಲೆತಗ್ಗಿಸಿ ಕುಳಿತೆ ಆಗ ಮನದಲ್ಲಿ ನಡೆದ ಕೋಲಾಹಲ ನಿಮ್ಮ ಮುಂದಿಡುವೆ.

ನಾನು ಮಾಡಿದ ಮೂರ್ಖ ನಿರ್ಧಾರ (1969) M Sc previous ನಾಲ್ಕು ಪೇಪರುಗಳಲ್ಲಿ ಎರಡು ಪೇಪರ ಮುಗಿದ ಮೇಲೆ ನನ್ನ ಸ್ಕೋರ 60 ದಾಟಲಿಕ್ಕಿಲ್ಲ ಎನಿಸಿ, ಮುಂದಿನ ವರ್ಷ ಎಲ್ಲ 8 ಪೇಪರಗಳನ್ನು ಒಮ್ಮೆಲೇ ಕೊಟ್ಟು ಚನ್ನಾಗಿ ಸ್ಕೋರ ಮಾಡಿದರಾಯಿತು ಎಂದು ನಿರ್ಧಾರಮಾಡಿ ಉಳಿದೆರಡು ಪೇಪರಗೆ ಹಾಜರಾಗದಿದ್ದದ್ದು. ಅದು ಮೂರ್ಖತನದ ನಿರ್ಧಾರ ಎನಿಸಿದ್ದು ನೆಲವಿಗೆ ಹಾರದ ಬೆಕ್ಕು

ಆಕಾಶಕ್ಕೆ ಹಾರಬಹುದೇ? ಎನ್ನುವ ಗೆಳೆಯರ ಗೇಲಿ ಮಾಡಿದಾಗ. ನಮ್ಮೂರಿನವರೆಲ್ಲರ ಕಣ್ಣಿನಲ್ಲಿ ದಡ್ಡ, ಉಡಾಳ, ಬುದ್ಧಿಗೇಡಿ ಮತ್ತು ಮೂರ್ಖನಾದಾಗ. ಆದರೇನು ಮಾಡುವದು ತಪ್ಪು ಮಾಡಿಯಾಗಿದೆ ದೇವರು ಮಾಡಿದಹಾಗಾಗಲಿ ಎಂದು ಸುಮ್ಮನಾದೆ ಅದನ್ನು ಬಿಟ್ಟು ದಾರಿಯಾವುದಿತ್ತು?.

ಹೊಸ ವರ್ಷದ ವೇಳಾಪಟ್ಟಿ ನೋಡಲು ಹೋದಾಗ ನನ್ನ ಮೆಚ್ಚಿನ ಪ್ರಾಧ್ಯಾಪಕರು ಕರೆಯಕಳಿಸಿದರು. ಅವರ ಮುಂದೆ ತಲೆತಗ್ಗಿಸಿ ನಿಂತೆ "ಕ್ಲಾಸರೂಮ ಕೊರತೆಯಿಂದ ಮುಂಜಾನೆ 8 ರಿಂದ 12 previous ಮತ್ತು 12.30 ರಿಂದ 5.30 final ಕ್ಲಾಸ ನಡೆಯುತ್ತವೆ. ಮುಂಜಾನೆ ತಪ್ಪದೇ ಕ್ಲಾಸನಲ್ಲಿ ಕುಳಿತುಕೊಂಡು previous ಪರೀಕ್ಷೆ ತಯಾರಿ ಮಾಡಿಕೋ ಮಧ್ಯಾನ್ಹ final class ಹಾಜರಾಗಿ ಎಲ್ಲರಂತೆ ಅಭ್ಯಾಸ ಮಾಡು. ವಿಶ್ವವಿದ್ಯಾಲಯದಲ್ಲಿ ಈ ರಿತಿಯ ವ್ಯವಸ್ಥೆ ಅದದ್ದು ಇದೇ ಮೊದಲು ಮತ್ತು ಇದೇ ಕೊನೆ" ಎಂದರು. ಅವರ ಮಾತಿನಲ್ಲಿ ಸಿಟ್ಟು, ನನ್ನ ಬಗ್ಗೆ ಅವರಿಗಿರುವ ಕಾಳಜಿ ಮತ್ತು ಬೇಜಾರು ಎಲ್ಲವೂ ಇತ್ತು. ನಮಸ್ಕರಿಸಿ ಹೊರ ಬಂದಮೇಲೆ ಅನಿಸಿದ್ದು ಇದು ದೇವರ ಕೊಡುಗೆ.

ಇದು ಕಾಣದ ದೇವರು ಮಾಡಿದ ಸಹಾಯ.

ಇನ್ನು ಕಾಣುವ ದೇವರ ಸಹಾಯದ ವಿವರ.

ಇಡೀ ವರ್ಷ ನನ್ನ ಜೊತೆ ಗ್ರಂಥಾಲಯದಲ್ಲಿ ಕುಳಿತುಕೊಂಡು ಓದಿ ನಾನು ಉಲ್ಲಸಿತನಾಗಿ ಹಗಲೂ ರಾತ್ರಿ ಓದುವಂತೆ ಮಾಡಿ ಸಲಹೆ ಸೂಚನೆಗಳಿತ್ತ ಗೆಳೆಯರೆಲ್ಲ ನನ್ನ ಪಾಲಿನ ದೇವರಲ್ಲವೇ?

ನಾನು ಬರುವದಕ್ಕೆ ಮೊದಲು ರಾತ್ರಿ ಮಾಡಿದ ಕಟಕ ರೊಟ್ಟಿ ಸಾರಿನಲ್ಲಿ ನೆನೆಹಾಕಿ ಇಡುತ್ತಿದ್ದ, ಹೋದ ಕೂಡಲೇ ತಾಟು ಕೈಗೆ ಕೊಟ್ಟು ಐದಹತ್ತು ನಿಮಿಷಗಳಲ್ಲಿ ನನ್ನ ಊಟ ಮಾಡಲು ನೆರವಾದ ಕಲ್ಲಪ್ಪ ದೇವರಲ್ಲವೇ?

ಹಾಸ್ಟೆಲ ಗೇಟಿನಲ್ಲಿ ಒಂದು ಪಾನಪಟ್ಟಿ ಅಂಗಡಿಯಿತ್ತು. ಅಲ್ಲೊಬ್ಬ ಹುಡಗನಿದ್ದ (ಹೆಸರು ಗೊತ್ತಿಲ್ಲ) ಅವ ತಡ ಆಗಬಾರದೆಂದು ಬಾಳಿಹಣ್ಣು ಸುಲಿದು ಹೋಗುವ ನನ್ನ ಕೈಗೆ ಕೊಡುತ್ತಿದ್ದ ಅವನು ನನ್ನ ಪಾಲಿನ ದೇವರಲ್ಲವೇ?

ಪರೀಕ್ಷೆ ನಡೆದಾಗ ನನ್ನ ಗೆಳೆಯ ಸುಭಾಸ ಅವರ ತಾಯಿ ಪೇಪರ ಮುಗಿದಾಗ ಬೆಟ್ಟಿಯಾಗಲು ಹೇಳಿದ್ದರು. ಅವರ ಮನೆಗೆ ಹೋದಾಗ ತಾಟಿನಲ್ಲಿ ಪಪ್ಪಾಯಿ ಹಣ್ಣು ಹೆಚ್ಚಿ ಇಟ್ಟುಕೊಂಡು ವೇಳೆಯಾಗಬಾರದು ಎಂದು ಬಾಗಿಲಲ್ಲಿ ದಾರಿ ಕಾಯುತ್ತಿದ್ದರು. ಹಣ್ಣು ತಿನಸಿ ಹರಸಿ ಕಳಿಸುತ್ತಿದ್ದ ಅವರು ನನ್ನ ಪಾಲಿನ ದೇವರಲ್ಲವೇ?

ಈ ರೀತಿಯ ಹಲವರ ಹರಕೆಯಿಂದ ಆ ವರ್ಷ second rank ಪಡೆದಾಗ ನನಗಿಂತ ಹೆಚ್ಚು ಸಂತಸಪಟ್ಟ ನನ್ನ ಗುರುಗಳು, ಗೆಳೆಯರು ನನ್ನ ಪಾಲಿನ ದೇವರಲ್ಲವೇ?

1. ಅಯ್ಯಾ, ನಿಮ್ಮವರ ಕಂಡಡೆ ನೀವೆಂದೆ ನಂಬುವ ನಂಬುಗೆಯ ಕರುಣಿಸಯ್ಯಾ.
   ಅಯ್ಯಾ ನಿಮ್ಮವರ ವಾಕ್ಯವ ಕೇಳಿದಡೆ,ನಿಮ್ಮ ವಾಕ್ಯವೆಂದೆ ನಂಬುವ ನಂಬುಗೆಯ ಕರುಣಿಸಯ್ಯಾ.
   ಅಯ್ಯಾ, ನಿಮ್ಮವರ ಕೀಳಿಲ ಕಾಯ್ದುಕೊಂಡಿಪ್ಪೆನಯ್ಯಾ.
   ಎನ್ನ ಮಾನಸ - ವಾಚಕ - ಕಾಯಕಕ್ಕೆ ಇದನೆ ಕರುಣಿಸಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನ, ನಿಮ್ಮ ಧರ್ಮ. / 151
   ---ಸಿದ್ದರಾಮೇಶ್ವರ
2. ಸರ್ವಮಯ ನಿನ್ನ ಬಿಂದುವಾದಲ್ಲಿ ಆವುದನಹುದೆಂಬೆ, ಆವುದನಲ್ಲಾಯೆಂಬೆ?
   ಸರ್ವಚೇತನ ನಿನ್ನ ತಂತ್ರಗಳಿಂದ ಆಡುವವಾಗಿ ಇನ್ನಾವುದ ಕಾಯುವೆ, ಇನ್ನಾವುದ ಕೊಲುವೆ?
   ತರುಲತೆ ಸ್ಥಾವರ ಜೀವಂಗಳೆಲ್ಲಾ ನಿನ್ನ ಕಾರುಣ್ಯದಿಂದೊಗೆದವು.
   ಆರ ಹರಿದು ಇನ್ನಾರಿಗೆ ಅರ್ಪಿಸುವೆ? ತೊಟ್ಟು ಬಿಡುವನ್ನಕ್ಕ ನೀ ತೊಟ್ಟುಬಿಟ್ಟ ಮತ್ತೆ ನೀ ಬಿಟ್ಟರೆಂದು ಎತ್ತಿ ಪೂಜಿಸುತಿರ್ದೆ ದಸರೇಶ್ವರನೆಂದು.1063 ---- ದಶರಯ್ಯ.
3. ಕೊಡುವಾತ ಶಿವ, ಕೊಂಬಾತ ಶಿವ, ಹುಟ್ಟಿಸುವಾತ ಶಿವ,ಕೊಲ್ಲುವಾತ ಶಿವನೆಂಬ ದೃಷ್ಟವನರಿಯದೆ,
   ನಡುಮನೆಯಲೊಂದು ದೇವರ ಜಗುಲಿಯನಿಕ್ಕಿ ಅದರ ಮೇಲೆ ಹಲವು ಕಲ್ಲು ಕಂಚು ಬೆಳ್ಳಿ ತಾಮ್ರದ
   ಪಾತ್ರೆಯನಿಟ್ಟು ಪೂಜೆ ಮಾಡಿ,ತಲೆ, ಹೊಟ್ಟೆ, ಕಣ್ಣುಬೇನೆ ಹಲವು ವ್ಯಾಧಿ ದಿನ ತಮ್ಮ ಕಾಡುವಾಗ
   ನಮ್ಮನೆದೇವರೊಡ್ಡಿದ ಕಂಟಕವೆಂದು ಬೇಡಿಕೊಂಡು ಹರಕೆಯ ಮಾಡಿ,
   ತನ್ನ ಸವಿಸುಖವ ಕೊಂಡು ಪರಿಣಾಮಿಸಿ, ವಿಧಿ ವಿಘ್ನ ಹೋದ ಮೇಲೆ ಪರದೇವರು ಕಾಯಿತೆಂದು ನುಡಿವವರ
   ಲೋಕದ ಗಾದೆಯ ಕಂಡು ನಾ ಬೆರಗಾದೆನೆಂದರೆ : ಹುಟ್ಟಿಸಿದ ಶಿವ ಪರಮಾತ್ಮ ಭಕ್ಷಿಸಿಕೊಂಡೊಯ್ಯುವಾಗ

ಕಟ್ಟೆಯ ಮೇಲಣ ಕಲ್ಲು ಕಾಯುವುದೆ ? ಕಾಯದಯ್ಯ.

ಮತ್ತೆ ಹೇಳುವೆ ಕೇಳಿರಣ್ಣಾ : ಸಿರಿ ತೊಲಗಿ ದರಿದ್ರ ಎಡೆಗೊಂಡು, ಮನೆಯೊಳಿಹ ಚಿನ್ನ ಬೆಳ್ಳಿ

ತಾಮ್ರ ಕಂಚಿನ ಪ್ರತಿಮೆಯನೆಲ್ಲ

ಒತ್ತೆಯ ಹಾಕಿ, ಹಣವ ತಂದು, ಉದರವ ಹೊರೆವಗೆ ಎತ್ತ ಹೋದನಯ್ಯಾ ಅವರ ಮನೆಯೊಳಿಹ ಮಿಥ್ಯದೈವ ?

ಅಕ್ಕಸಾಲೆಯ ಮನೆಯ ಕುಪ್ಪಟೆಯಲುರಿವುತಿಹ ಅಗ್ನಿದೇವತೆಗೆ ಗುರಿಯಾಗಿ ಹೋದವಯ್ಯಾ.

ಸರ್ವದೇವಪಿತ ಶಂಭು[ವೆಂಬು]ದನರಿಯದೆ ಶಿವನಿಂದ ಹುಟ್ಟಿ, ಶಿವನಿಂದ ಬೆಳೆದು, ಶಿವದೈವವ ಮರೆದು,

ಅನ್ಯದೈವವ ಹೊಗಳುವ ಕುನ್ನಿಮಾನವರ ಕಂಡು ನಾ ಬೆರಗಾದೆನಯ್ಯಾಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. / 94.

---- ಹೇಮಗಲ್ಲ ಹಂಪ

## ಸತ್ಯಕಾಯಕ ಸತ್ಯಕಾಯಕವೆಂದು ನುಡಿವಿರಿ, ಸತ್ಯಕಾಯಕವಾವುದೆಂದರಿಯಿರಿ

“ಬಿಸಿರೊಟ್ಟಿ ಮಾಡತೀನಿ ಹಾಲಕೆನಿ ಬೆಲ್ಲ ಹಾಕ್ಕೊಂಡು ಊಟಾಮಾಡಿ ಮಲಗಿಕೊಳ್ಳರಿ” ಎಂದು ಕರೆದಾಗಲೇ ನನಗೆ ಎಚ್ಚರವಾಯಿತು. “ಈಗ ಹಾಲ ಕೆನಿ ಎಲ್ಲಿ ಸಿಗತೈತಿ” ಎಂದೆ ನಿದ್ದೆಗಣ್ಣಲ್ಲಿ.

“ಏನ್ರಿ ಎಲ್ಲ ಮರೆತು ಹೋತೇನ್ರಿ ನನ್ನ ಮನೆಯಾಗ ಈಗ ತವರುಮಹಾಮನೆಯವರು ಬಳುಲಿ ಕೊಟ್ಟ ಎರಡು ಆಕಳ ಮತ್ತು ಕರು ಅದಾವ” ಎನ್ನುವ ಮಾತು ನನ್ನನ್ನು ಪೂರ್ಣ ಎಚ್ಚರಮಾಡಿ ಎಲ್ಲ ಘಟನೆಗಳು ನೆನಪಾದವು.

“ಹೌದಲ್ಲ ಬೇಗ ಊಟ ಮಾಡಿ ಎಣ್ಣಿ ತಗದು ನಾಳೆ ಅ ಅಂಗಡಿಯವಗ ಎಣ್ಣಿ ಒಯ್ದು ಕೊಡಬೇಕು, ಸೇಂಗಾ ಒಯ್ದ ಆಸಾಮಿ ನಾಪತ್ತೆಯಾದ ಅಂತಿರಬೇಕು.” ಎಂದೆ.

“ಅದೆಂಗ ಆಗತೈತಿ ನಿಮ್ಮ ಅಂಗೈ ಹ್ಯಾಂಗ ಅಗೈತಿ ನೆನಪಿಲ್ಲೇನು?”

“ಏನಾದರೂ ಆಗಲಿ ಕೈಗೆ ಅರವಿ ಕಟ್ಟಿಕೊಂಡು ಪಂಜಿನ ಬೆಳಕಿನಾಗ ಗಾಣ ಹೋಡಿತೀನಿ ನೀ ಚಿಂತಿ ಮಾಡಬ್ಯಾಡ. ”

ಮೊದಲ ಏಳ್ರಿ ಎದ್ದು ಊಟಮಾಡ್ರಿ. ಕೈಗೆ ಬಾವು ಬಂದಿತ್ತು, ಆಕೆಯೇ ಮುಖತೊಳೆದು ಒರಸಿದಳು.

ಅಷ್ಟರಲ್ಲಿ ಬಾಗಿಲಲ್ಲಿ ಮಲ್ಲಣ್ಣ, ಮಲ್ಲಣ್ಣಾ ಎನ್ನುವ ಧ್ವನಿ ಕೇಳಿಸಿತು. ಬನ್ನಿ ಬನ್ನಿ ಮಲ್ಲಣ್ಣ ಇನ್ನೂ ಊರಿಂದ ಬಂದಿಲ್ಲ ಎಂದು ಕರೆದೆ. ಹಣತೆಯ ಬೆಳಕಿನಲ್ಲಿ

ಒಳ ಬಂದ ಯುವಕನನ್ನು ನೋಡಿ ದಂಗಾಗಿ ಹೋದೆ. ಕಟ್ಟುಮಸ್ತಾದ ದೇಹ, ತೇಜಶ್ವಿ ಮುದ್ದು ಮುಖ ಚಿತ್ರಪಟದಲ್ಲಿರುವ ರಾಜಕುಮಾರನ ಹಾಗೆ ಕಂಡ. "ನಾನು ಮಲ್ಲಣ್ಣನ ಗೆಳೆಯ ಚನ್ನ, ಮನೆಯಲ್ಲಿ ದೀಪದ ಬೆಳಕು ಕಾಣಿಸಿತು ಅದಕ್ಕ ಅವ ಬಂದಿರಬೇಕು ಅಂತ ಬಂದೆ" ಎನ್ನುವ ಅವನ ಮಾತಿನಲ್ಲಿ ಜೇನಿನ ಮಧುರತೆ ಇತ್ತು.

ಅಲ್ಲಿಯೇ ಇದ್ದ ನನ್ನಾಕೆ "ಚಲೋ ಆತ ತಮ್ಮ ನಡೀರಿ ಬಿಸಿರೊಟ್ಟಿ ಮಾಡತೀನಿ ಇಬ್ಬರೂ ಊಟಮಾಬಿಡ್ರಿ" ಆಕೆಯ ಆತ್ಮೀಯತೆಗೆ ಮಾರುಹೋದವನ ಹಾಗೆ "ಆಗಲಿ ಅಕ್ಕ" ಎಂದು ಕೈಕಾಲು ಮುಖ ತೊಳೆದು  ಕೊಂಡು ಬಂದ.

ರೊಟ್ಟಿ ಬಡಿಯುತ್ತ

**ಗಂಗಾ:** ತಮ್ಮ ಇವತ್ತ ಹಾಲ ಕರೆದು ಕಾಸಿದ ಹಾಲಿನ ಕೆನಿ ತೆಗೆಯುವಾಗ ನನ್ನ ತವರಮನಿ ನೆನಪಾತು ಅದರಾಗ ನನ್ನ ತಮ್ಮ ಈರಣ್ಣ ನೆನಪಾದ. ಅಷ್ಟರಲ್ಲಿ ನೀ ಬಂದು ಸಮಾಧಾನ ಆತು ನೋಡು.

ಎನ್ನುತ್ತ ಇಬ್ಬರಿಗೂ ರೊಟ್ಟಿ ಹಾಕಿ ಬೆಲ್ಲ ಮತ್ತು ಕೆನಿ ಬಡಿಸಿದಳು.

**ಚನ್ನಣ್ಣ:** ಅಂತೂ ತವರಮನೆಯವರು ಒಳ್ಳೆಯ ಆಕಳಾ ಕೊಟ್ಟು ಕಳಿಸ್ಯಾರ ನೋಡು,

ಮಾವಗ ಇನ್ನಷ್ಟು ಕೆನಿ ಹಾಕು.

**ಗಂಗಾ:** ಇಲ್ಲ ತಮ್ಮ ನನ್ನ ತವರಮನೆಯವರು ಬಡವರು ಅವರ ಹತ್ತಿರ ಇರುವ ಆಕಳ

ಅವರಿಗೆ ಆಸರೆಯಾಗಿದೆ. ಈ ಎಲ್ಲ ಬಳುಲಿ ಕೊಟ್ಟವರು, ನನ್ನ ತವರು ಮಹಾಮನೆಯವರು. ಅವರ ಮನಸ್ಸು ಬಹಳ ದೊಡ್ಡದು. ಅಳಿಯಾ ನಾಲ್ಕಾರು ದನಗಳ ಮೈ ತೊಳೆದಿದ್ದಕ್ಕ ನಮಗ ಇವುಗಳನ್ನು ಕೊಟ್ಟು ಹರಸ್ಯಾರ.

ಒಲೆಯ ಬೆಂಕಿಯ ಬೆಳಕಿನಲ್ಲಿ ಅವಳ ಮುಖದಲ್ಲಿ ಹೆಮ್ಮೆ ಕಾಣುತ್ತಿತ್ತು.

**ಗಂಗಾ:** "ನೀ ಊಟ ಮಾಡು ತಮ್ಮಾ ನಾ ಅವರಿಗೆ ತಿನಿಸತೀನಿ."

**ಚನ್ನಣ್ಣ:** ಯಾಕ ಅವರ ಅಂಗೈಗೆ ಏನಾತು?

**ಗಂಗಾ:** ನೀರಡಿಸಿದ ಎಮ್ಮಿ, ಆಕಳ ಮತ್ತ ಕರ ತೊಳೆದರು. ಬೀಗರ ದನ ಅಂತ ಸಿಟ್ಟಿನಾಗ ಅವುಗಳನ್ನು ಅಂಗೈಯಿಂದ ತಿಕ್ಕಿ ತಿಕ್ಕಿ ತೊಳೆದ ಅವುಗಳ ಚರ್ಮ ಕಿತ್ತುಹೊಗುವಂಗ ಮಾಡಿ ತಮ್ಮ ಕೈ ಹಿಂಗ ಮಾಡಿಕೊಂಡಾರ. ಅಳಿಯನ ಕಾಟಕ್ಕ ಬ್ಯಾಸತ್ತು ದನಗಳೆಲ್ಲ ಓಡಿ ಹೋದವು.

**ಚನ್ನಣ್ಣ:** ನೀ ಊಟಾ ಮಾಡಿಸಬೇಕು ಅಂತ ಹಿಂಗ ಮಾಡಿರಬೇಕು. ನಾ ಉಣಿಸಿದರೆ ನಡಿತ್ತೈತಿ

ಅಲ್ಲಾ?

ಅವನ ಮಾತಿಗೆ ಮರುನುಡಿಯಲಿಲ್ಲ.  ಮಗುವಿಗೆ ತುತ್ತು ಮಾಡಿ ಉಣಿಸುವಂತೆ ನನಗೆ ಉಣಿಸಿದ ಮತ್ತ ತಾನೂ ಉಂಡ. ಊಟ ಮಾಡಿ ಮುಗಿಸಿದ ಮೇಲೆ ಹೇಳಿದ

**ಚನ್ನಣ್ಣ:** ಮಲ್ಲಣ್ಣ ಮತ್ತು ನಾನು ಕೂಡಿ ಇಲ್ಲಿಯ ತಂಗಾಳಿಯಲ್ಲಿ ಮಂದ ಬೆಳಕಿನಾಗ
ವಚನ ಹೇಳಿಕೊಂತ ಗಾಣ ಹೊಡದು ಸಂತೋಷ ಪಡುತ್ತಿದ್ದೆವು. ನೀವು ಸುಮ್ಮನ ಕುಂತು ನೋಡ್ರಿ ನಾ ಹ್ಯಾಂಗ ಗಾಣ ಹೊಡಿತೀನಿ ಅಂತ.
ನಾನೇನೋ ಹೇಳಬೇಕು ಎನ್ನುವಷ್ಟರಲ್ಲಿ ಹೊರಗೆ ಹೋಗಿ ನಾಲ್ಕಾರು ಎಲೆ ತಂದು ನನ್ನ ಅಂಗೈಮೇಲಿಟ್ಟು ಅಲ್ಲಿಯೆ ಗೂಟದ ಮೇಲಿದ್ದ ಬಟ್ಟೆ ಹರಿದು ಕಟ್ಟಹತ್ತಿದ. ಆಕೆ ಗಾಬರಿಯಿಂದ ಆ ಬಟ್ಟೆ ಬ್ಯಾಡ ಚನ್ನಣ್ಣ ಅದು ನಮ್ಮಣ್ಣ ಆಶಿರ್ವಾದ ಮಾಡಿ ಕೊಟ್ಟ ಶಲ್ಲೆದ ತುಂಡು ನಾಬ್ಯಾರೆ ಬಟ್ಟೆ ಕೊಡತೀನಿ ಎಂದಳು. ಆಯಿತು ಬಿಡು ಅಕ್ಕ ಅವರ ಆಶಿರ್ವಾದ ಫಲವಾಗಿ ಇವರ ಕೈ ನಾಳೆಯೊಳಗ ಗುಣ ಆಗತೈತಿ ಮತ್ತು ನಾಳೆ ಬೀಗರ ದನದ ಮೈ ತೊಳಿಯಾಕ ಮಾವನ ಕೈ ಗಟ್ಟಿಯಾಗಬೇಕಲ್ಲ. ಇಬ್ಬರಿಗೂ ನಗೆ ತಡೆಯಲಾಗಲಿಲ್ಲ. ನಾಳೆ ಬೀಗರ ದನ ತೊಳೆದರ ಕೆನೆಹಾಲು, ಕೆನೆಮೊಸರು ಮತ್ತು ಬೆಣ್ಣಿ ಸಿಗತದ ಎನ್ನುತ್ತ ಗೇಲಿ ಮಾಡಿದಳು ನನ್ನಾಕೆ. ನಮ್ಮನ್ನು ಗಾಣದ ಹತ್ತಿರದ ಕಟ್ಟೆಯ ಮೇಲೆ ಕೂಡ್ರಿಸಿ ಓಡಾಡಿ ನುರಿತ ಗಾಣಿಗ ನಂತೆ ಗಾಣ ಹೊಡೆಯಲಾ ರಂಭಿಸಿದ. ಅಕ್ಕ ಮಾವ ಇಬ್ಬರೂ ಕೂಡಿ ಒಂದ ವಚನ ಹೇಳಿ ಕೇಳಕೊಂತ ಗಾಣ ಸುತ್ತುದ ಮಜಾ ಅನಿಸತೈತಿ"
**ಗುರು:** ಚನ್ನಣ್ಣ ನಾನು ಕಲ್ಯಾಣಕ್ಕ ಬಂದ ಮ್ಯಾಲ ಕಲಿತಿದ್ದು ಒಂದ ವಚನ
**ಚನ್ನಣ್ಣ:** ಆಗಲಿ ನೀವಿಬ್ಬರೂ ಅದ ವಚನ ಹೇಳ್ರಿ
ನಾವಿಬ್ಬರೂ ಜೊತೆಯಾಗಿ

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ -------**

**ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ**

**-- –** ಅಣ್ಣ ಬಸವಣ್ಣ

ಎನ್ನುವ ವಚನ ಹಾಡಿ ಮುಗಿಸಿ ಚನ್ನಣ್ಣ ನನಗ ಗೊತ್ತಿರುವದು ಇದ ಒಂದ ವಚನ ಎಂದೆ.
**ಚನ್ನಣ್ಣ:** ಈ ಒಂದ ವಚನ ಗೊತ್ತಿದ್ದರ ಸಾಕು, ಇದರಂಗ ನಡೆದರ ಅವ ಶರಣ ಆಗತಾನ ಸಾವಿರಾರು ವಚನ ಗಿಳಿಹಾಂಗ ಓದಿದರೆ ಏನು ಫಲ. ನೀ ಹೇಳಿದ ಸಪ್ತಸೂತ್ರದಾಗ ಒಂದ ಸೂತ್ರ ಆಚರಿಸಿದರೆ ಸಾಕು ಉಳಿದವುಗಳನ್ನು ಪಾಲಿಸುವ ಅತ್ಮಸ್ಥೈರ್ಯ ಬರತೈತಿ.
"ಆಗಲಿ ತಮ್ಮ ಇವತ್ತಿನಿಂದ ನೀ ಹೇಳಿದಂಗ ನಡಕೊಳ್ಳಾಕ ಹತ್ತತೀವಿ".
ನನಗೆ ಗುರುವಿನಿಂದ ಉಪದೇಶ ಪಡದ ಅನುಭವ ಆಗಹತ್ತಿತು.
ಚನ್ನಣ್ಣ ನೀನು ಒಂದು ವಚನ ಹೇಳು ಎಂದೆ.
ಇದು ಅಣ್ಣ ಬಸವಣ್ಣವರು ಹೇಳಿದ ವಚನ, ಸುಮಧುರವಾಗಿ ಹೇಳತೊಡಗಿದ ಚನ್ನಣ್ಣ

ನಡೆಯ ಚೆನ್ನ ನುಡಿದು ತೋರಿ, ನುಡಿಯ ಚೆನ್ನ ನಡೆದು ತೋರಿ,
ಆ ನಡೆನುಡಿ ಎರಡರ ಚೆನ್ನ ಮೃಡ ನಿಮ್ಮೊಳಗಡಗಿಸಿ,
ತಾವೆಡೆಯಿಲ್ಲದೆ ಪರಿಪೂರ್ಣರಾದವರ ಪಡುಗವ ಹೊರುವೆ,
ಪಾದರಕ್ಷೆಯಹಿಡಿವೆ, ಎನಗಿದೆ ಮಾಟ, ಬಯಸುವ ಬೇಟ.
ಕೂಡಲಸಂಗಮದೇವಾ, ಇದು ನಿಮ್ಮ ಕೂಡುವ ಕೂಟ. / 780
--- ಅಣ್ಣ ಬಸವಣ್ಣ.

ಚನ್ನಣ್ಣ ಹೇಳುವ ವಚನ ಕೇಳುತ್ತ ಕೇಳುತ್ತ ಮೈಮರೆತೆವು.
ಅವ ವಚನ ಹೇಳುವದು ಜೋಗುಳ ಪದದ ಹಾಗಿತ್ತು ಗಾಣ ತಿರುಗುವ ಚಿವ್ ಚಿವ್ ಸದ್ದು ತಿರುಗುವ ಎತ್ತುಗಳು ತಲೆಹಾಕುವಾಗ ಬರುವ ಗಂಟೆಗಳ ಸದ್ದು ನಾವು ನಮ್ಮನ್ನೆ ಮರೆಯುವಂತೆ ಮಾಡಿತ್ತು.
ಅವನು ಹೇಳಿದ ಇನ್ನೊಂದು ವಚನ

ಸತ್ಯಕಾಯಕ ಸತ್ಯಕಾಯಕವೆಂದು ನುಡಿವಿರಿ, ಸತ್ಯಕಾಯಕವಾವುದೆಂದರಿಯಿರಿ;
ಭಕ್ತಗೃಹಂಗಳಿಗೆ ಭೃತ್ಯಕಾಯಕವನೊಡಗೊಂಡು ಹೋಗಿ ಆ ಭಕ್ತರಿಗೆ ತಾನು ಭೃತ್ಯನಾಗಿ ಶರಣೆಂದು, ತನ್ನ ಕಾಯಕವನೊಪ್ಪಿಸಿ
ಪದಾರ್ಥಂಗಳನು ಪಡೆವಲ್ಲಿ ಭಕ್ತಿ ಬಂಧನವಿಲ್ಲದೆ, ಆ ಭಕ್ತನ ಮನವ ನೋಯಿಸದೆ,
ಭಕ್ತಿಮಹೋತ್ಸಾಹದಿಂದ ಬಂದ ಪದಾರ್ಥಂಗಳನು ತಂದು ಲಿಂಗಜಂಗಮಕ್ಕೆ ನೀಡಿ,
ಅವರೊಕ್ಕುದ ಕೊಂಡಿಪ್ಪುದೆ ಸತ್ಯಕಾಯಕ, ಆತನೆ ಸದ್ಭಕ್ತ.
ಇನಿತಲ್ಲದೆ ಜಂಗಮಕ್ಕೆ ಸಲುವುದೆಂದು ಭಕ್ತನ ಬಂಧನಕಿಕ್ಕಿ ಭಕ್ತಿಯ ಮನೋತ್ಸಾಹಗುಂದಿಸಿ,
ಅಸುರಕರ್ಮದಿಂದ ತಂದ ದ್ರವ್ಯಂಗಳೆಲ್ಲವು ಅಸ್ಥಿ ಮಾಂಸ ಚರ್ಮಂಗಳೆನಿಸುವುದಲ್ಲದೆ ಅವು ಪದಾರ್ಥಂಗಳಲ್ಲ.
ಅದು ಲಿಂಗಜಂಗಮಕ್ಕೆ ಸಲ್ಲದು, ಅವಂಗೆ ಪ್ರಸಾದವಿಲ್ಲ. ಅದು ಸತ್ಯಕಾಯಕಕ್ಕೆ ಸಲ್ಲದು.
ಅವ ರಾಕ್ಷಸನಪ್ಪನಲ್ಲದೆ ಭಕ್ತನಲ್ಲ. ಅವನ ಮನೆಯ ಹೊಕ್ಕು ಲಿಂಗಾರ್ಚನೆಯ ಮಾಡುವಾತ ಜಂಗಮಸ್ಥಲಕ್ಕೆ ಸಲ್ಲ.
ಅವರಿರ್ವರನು ಕೂಡಲಚೆನ್ನಸಂಗಯ್ಯ ಇಪ್ಪತ್ತೆಂಟುಕೋಟಿ ನಾಯಕನರಕದಲ್ಲಿಕ್ಕುವ / 1578 –– ಚನ್ನಬಸವಣ್ಣ.

ಎಲ್ಲ ಕೆಲಸ ಮುಗಿಸಿ ಚನ್ನಣ್ಣ ಹೊರಟುಹೋದ.

## ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ

ಗಮನಿಸಿ:

ಶರಣರಿಗೆಲ್ಲ ತುಂಬ ಪ್ರಿಯವಾದ ಪದ "ಜ್ಞಾನ". ನಮಗೆ ಲಭ್ಯವಿರುವ ವಚನಗಳಲ್ಲಿ 132 ವಚನಕಾರರು 2595 ವಚನಗಳಲ್ಲಿ 4395 ಕಡೆಗಳಲ್ಲಿ "ಜ್ಞಾನ" ಪದ ಉಪಯೋಗಿಸಿದ್ದಾರೆ.

ಮಾನವ ಶರಣನಾಗಲು ಇರುವ ಸೋಪಾನವೇ ಜ್ಞಾನ.

ಅಣ್ಣ ಬಸವಣ್ಣನವರು "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ."

ಎಂಬ ವಚನದಲ್ಲಿ ಜ್ಞಾನದ ಮಹತ್ವ ವಿವರಿಸಿದ್ದಾರೆ.

"ಜ್ಞಾನ" ಪಡೆಯುವ ಕ್ರಿಯೆ ಜೀವನದ, ಕಾಯಕದ ಅವಿಭಾಜ್ಯ ಅಂಗವಾಗಿತ್ತು. ಕಲ್ಯಾಣಕ್ಕೆ ಬಂದ ಅನಕ್ಷರಸ್ಥ ಶರಣರು ಕೆಲವು ದಿನಗಳಲ್ಲಿ ಅಕ್ಷರಸ್ಥರಾಗಿ ವಚನಗಳನ್ನು ಅರ್ಥಮಾಡಿಕೊಂಡು ತಮ್ಮ ಅನುಭವಗಳನ್ನು ತಮ್ಮ ವಚನದಲ್ಲಿ ಅಳವಡಿಸಿಕೊಳ್ಳುವ ಮಟ್ಟಕ್ಕೆ ಬೆಳೆಯುತ್ತಿದ್ದರು. ಜೀವನ ಮತ್ತು ಶಿಕ್ಷಣ ಎರಡನ್ನು ಸಮನಾಗಿ ಅಳವಡಿಸಿಕೊಳ್ಳುವದು ಇಂದಿನ ಅವಶ್ಯಕತೆ.

ನನ್ನ ಶಾಲೆಯ ಹೆಸರೇ "ಜೀವನಶಿಕ್ಷಣ ಸರಕಾರಿ ಪ್ರಾಥಮಿಕ ಶಾಲೆ" ಆಗಿತ್ತು. ಅಲ್ಲಿ ಈ ರೀತಿಯ ಪ್ರಯೋಗ ನಡೆದಿತ್ತು. ನಮಗೆ ಜಮಖಾನೆ ನೇಯುವ ಕೆಲಸ ಕಲಿಸಲಾಗುತ್ತಿತ್ತು. ಹತ್ತಿಯಿಂದ ಬೀಜ ತೆಗೆದು, ನೂಲು ತೆಗೆದು, ನೇಯುವಾಗ ನಡೆಯುವ ಎಲ್ಲ ಕ್ರಿಯೆಗಳಲ್ಲಿ ನಾವೆಲ್ಲ ಭಾಗವಹಿಸುವ ಜಗಳಾಡುವ ,ಗುದ್ದಾಡುವ, ಚನ್ನಾಗಿ ಆದ ಕೆಲಸ ನಾನೇ ಮಾಡಿದೆ ಎನ್ನುವ ಆ ಎಲ್ಲ ಘಟನೆಗಳು ನೆನಪಾದಾಗ ಮನಕ್ಕೆ ಮುದವೆನಿಸುತ್ತದೆ. ಕೊನೆಗೆ ತಯಾರಾದ ಜಮಖಾನ ನಾನು ಮಾಸ್ತರ ಮಗ ಎಂದು ನನಗೇ ಕೊಟ್ಟರು. ಅದರಲ್ಲಿದ್ದ ದೊಡ್ಡ ದೊಡ್ಡ ಗಂಟುಗಳು ಮುಳ್ಳಿನಂತೆ ಚುಚ್ಚುತ್ತಿದ್ದರೂ ಅದು ಬಹಳ ದಿನಗಳ ಕಾಲ ನನ್ನ ಸುಪ್ಪತ್ತಿಗೆಯಾಗಿತ್ತು ಯಾಕಂದರ ಅದನ್ನು ತಯಾರಿಸಲು ನಾವೆಷ್ಟು ದುಡಿದಿದ್ದೆವು ಎನ್ನವ ಅರಿವು ನನಗಿತ್ತು.

ಕಲ್ಯಾಣದ ಒಂದು ಕಾಯಕ ಮಾಡುವ ಜನ ಸಮೂಹವೆಲ್ಲ ಒಂದೇ ಕಡೆ ಸೇರಿ ವಿಚಾರವಿನಿಮಯ ನಡೆಸಿ ತಮ್ಮ ಕಾಯಕದಲ್ಲಿದ್ದ ಕುಂದುಕೊರತೆಗಳನ್ನು ನಿವಾರಿಸಿಕೊಂಡು ನಿಪುಣ ವಿದ್ಯಾವಂತ ಕಾಯಕಯೋಗಿಯಾಗಿಸುವ ಆ ಪ್ರಕ್ರಿಯೆ ಊಹಿಸಿಕೊಂಡಾಗ ಮನ ಪುಳಕಿತವಾಗುತ್ತದೆ. ನಮ್ಮ ವಿದ್ಯಾಸಂಸ್ಥೆಗಳು ಪರಿಣಿತ ಕಾಯಕಯೋಗಿಗಳನ್ನು ತಯಾರಿಸುವ ಕೇಂದ್ರಗಳಾಗಲಿ ಎನ್ನುವದು ನನ್ನ ಮನದಾಸೆ.

ಎಂದಿನಂತೆ ಬೇಗ ಎಚ್ಚರವಾಯಿತು ಮನಸ್ಸು ಶಾಂತವಾಗಿತ್ತು. ಎದ್ದು ಮುಖತೊಳೆಯಲು ಹೋದಾಗಲೇ ನೆನಪಾದದ್ದು ಕೈಗಳಿಗೆ ಬಟ್ಟೆ ಕಟ್ಟಲಾಗಿದೆ ಎನ್ನುವದು. ಅಷ್ಟರಲ್ಲಿ ಅಲ್ಲಿಗೆ ಬಂದ ನನ್ನಾಕೆ ತಡೀರಿ ಬಟ್ಟೆ ಬಿಚ್ಚತೀನಿ ಗಾಯ ಮಾಯುತನಕ ನೀರು ಮುಟ್ಟಬೇಡಿ ಎನ್ನುತ್ತಲೇ ಕೈಗೆ ಕಟ್ಟಿದ

ಬಟ್ಟೆ ತುಂಡುಗಳನ್ನು ಬಿಚ್ಚಿ ಅವುಗಳನ್ನು ಕಣ್ಣಿಗೊತ್ತಿಕೊಂಡು ಮಡಚಿ ಅವುಗಳನ್ನು ಜೋಪಾನವಾಗಿಡಲು ಒಳಹೋದಳು. ನಾನು ಕೈ ಹೇಗಿದೆ ನೋಡಿದೆ ಅಲ್ಲಿ ಗಾಯವಾದ ಯಾವ ಗುರುತು ಇರಲಿಲ್ಲ. ನೋಡ ಬಾ ಇಲ್ಲಿ ಗಾಯವೆಲ್ಲಾ ಮಾಯವಾಗಿವೆ.
ಕೈನೋಡಿ "ನನ್ನ ತಮ್ಮ ಚನ್ನನ ಕೈಗುಣ ಹೇಗಿದೆ ನೋಡ್ರಿ, ಅವ ಮಾಯಗಾರ ಅವ ಮುಟ್ಟಿದಕೂಡಲೇ ನಿಮ್ಮ ಕೈ ಆರಾಮಾತು ನೋಡ್ರಿ".
"ಪೆದ್ದಿ ಮಾಯಾನೂ ಇಲ್ಲ ಏನೂ ಇಲ್ಲ ಅವ ಇಷ್ಟು ಸಣ್ಣ ವಯಸ್ಸಿನಾಗ ಔಷಧ ಜ್ಞಾನ ಪಡ ಕೊಂಡಾನ. ಗಾಣದಾಗ ಎಣ್ಣಿ ತೆಗೆಯುದ್ರಾಗ ಪರಿಣಿತ ಆಗ್ಯಾನ. ಅವ ಹೇಳಿದ ವಚನಗಳು ಇನ್ನ ಮನದಾಗ ಗುಣಗುಣಸಾಕ ಹತ್ಯಾವ. ಅವನ ದನಿಯಾಗ ಜೇನ ಐತಿ. ಅವನ ಮೂರ್ತಿ ಕಣ್ಣಮುಂದ ಐತಿ."
ಚನ್ನಣ್ಣ ಒಂದ ದಿನದಾಗ ನಿಮ್ಮನ್ನ ಮರಳ ಮಾಡ್ಯಾನ.
ಏನೇ ಆದರೂ ಅವ ನಿನ್ನ ತಮ್ಮ ಅಲ್ಲೇನು ನೀ ಮಾಡಿದ್ದ ಅವ ಮಾಡ್ಯಾನ?
ಹುಡುಗಾಟ ಸಾಕು ದನಕ್ಕ ಮೇವು ಹಾಕಬೇಕು ನಡೆಯಿರಿ ಎಂದು ಬಾಗಿಲ ತೆಗೆದು ಹೊರನಡೆದಳು . ನನಗೆ ನಿನ್ನೆ ಆದ ಘಟನೆಗಳ ಗುಂಗಿನಿಂದ ಹೊರಬರಲಾಗಲಿಲ್ಲ. ಚನ್ನಣ್ಣ ಬಂದದ್ದು ನನಗೆ ತುತ್ತು ಮಾಡಿ ಉಣಿಸಿದ್ದು ಗಾಣ ಹೊಡೆದದ್ದು ವಚನ ಹೇಳಿ ಅರ್ಥ ಹೇಳಿದ್ದು ಕನಸೇ ನನಸೇ? ಎನ್ನುವ ವಿಚಾರ ಮನದಲ್ಲಿ ಹೊಳೆಯಿತು. ಇದಕ್ಕೇ ದೀಕ್ಷೆ ಎನ್ನಲಾಗುತ್ತದೆಯೇ?
ಹೊರಗೆ ಬಂದಾಗ ಆಕೆ ಆಕಳುಗಳ ಸೇವೆಯಲ್ಲಿ ತಲ್ಲೀನವಾಗಿದ್ದಳು. ಅಲ್ಲಿ ಸ್ವಚ್ಚಮಾಡುವದೇನು ಇರಲಿಲ್ಲ ಚನ್ನ ಎಲ್ಲ ಮಾಡಿ ಎಣ್ಣಿ ಒಳಗಿಟ್ಟು ನಮಗೆ ನಮಸ್ಕರಿಸಿ ಹೋದದ್ದು ನೆನಪಿಗೆ ಬಂತು. ಅವನ ಜಾಣ್ಮೆ, ಕೆಲಸದಲ್ಲಿದ್ದ ಸಿಸ್ತು, ಮಾತಿನಲ್ಲಿದ್ದ ಮಧುರತೆ ಅವನು ಹೇಳಿದ ಒಂದು ವಚನದಂತೆ ನಡೆದರೆ ಸಾಕು ಎನ್ನುವ ಹಿತವಚನ ನೆನಪಿಸಿಕೊಳುತ್ತ ನಿಂತೆ. ಏನ್ರಿ ಇದು ನನ್ನ ತಮ್ಮನ ನೆನಪಿನಾಗ ಎಲ್ಲಾನೂ ಮರತು ನಿಂತು ಬಿಟ್ಟೇರಿ. ಬೇಗ ಜಳಕಾ ಮಾಡಿ ತಯಾರಾಗ್ರಿ ನಾನು ಹಾಲ ಕರದು ತಯಾರಾಗ್ತೀನಿ ಅಪ್ಪಣ್ಣನವರು ಮುಂಜಾನೆ ವಚನಾಭ್ಯಾಸ ಮಾಡಿಸಲು ಆರಂಭ ಮಾಡುವಷ್ಟರಲ್ಲಿ ನಾವು ಅಲ್ಲಿರೋಣ. ಇಂದು ತಯಾರಿಸಿದ ಎಣ್ಣಿ ತರಲಿಕ್ಕೆ ಹೇಳ್ಯಾರ. ಸರಿ ಎಂದು ನನ್ನ ಕೆಲಸದಲ್ಲಿ ನಿರತನಾದದರೂ ನಾನು ಇಂದು ಎಣ್ಣೆ ತಯಾರಿಸಿದ್ದು ಅವರಿಗೆ ಮೊದಲೇ ಹೇಗೆ ಗೊತ್ತಾಯಿತು ಎನ್ನುವ ಪ್ರಶ್ನೆ ಮನದಲ್ಲಿ ಮೂಡಿ ಮಾಯವಾಯಿತು.
ಅಪ್ಪಣ್ಣವರ ಸುತ್ತಮುತ್ತಲೂ ಅನೇಕ ಯುವಕರು, ಯುವತಿಯರು, ಹಿರಿಯರು ಮಕ್ಕಳು ಸೇರಿದ್ದರು ನಾವೂ ಅವರಲ್ಲಿ ಒಂದಾಗಿ ಕುಳಿತುಕೊಂಡೆವು.
ನಮ್ಮ ಮುಂದೆ ಉಸುಕು ಹರಡಿತ್ತು.
ಅಪ್ಪಣ್ಣ ನಮಗೆಲ್ಲ ಬೆರಳಿನಿಂದ ಕುಸುಬಿ, ಶೇಂಗಾ, ಎಳ್ಳು,---- ಮೊದಲಾದ ಶಬ್ದಗಳನ್ನು ಬರೆಯಲು ಹೇಳಿದರು ತಪ್ಪು ಬರೆದವರಿಗೆ ತಿದ್ದಿ ತಿಳಿಸಿದರು ಮತ್ತು ಅವುಗಳ ಗುಣಧರ್ಮ, ಬೆಳೆಯುವ ವಿಧಾನ ವಿವರಿಸಿದರು. ಅವರ ಮುಂದಿದ್ದ

ಕುಡುಕೆಗಳಲ್ಲಿ ನಾವು ತಯಾರಿಸಿದ ಎಣ್ಣೆ ಹಾಕಲು ಹೇಳಿದರು. ಅಲ್ಲಿದ್ದ ಮಕ್ಕಳಿಗೆ ಮೂಸಿ ನೋಡಿ ಎಣ್ಣೆ ಗುರುತಿಸಲು, ರುಚಿನೋಡಿ ಅವುಗಳಲ್ಲಿದ್ದ ಕುಂದುಕೊರತೆ ತಿಳಿಸಲು ಹೆಣ್ಣುಮಕ್ಕಳಿಗೆ ಹೇಳಿ ಮುಕ್ತವಾಗಿ ಚರ್ಚಿಸಿದರು. ಕೊನೆಯದಾಗಿ ಹಿರಿಯರು ಒಬ್ಬರಾಗಿ ಅಲ್ಲಿಯ ಎಣ್ಣೆಯ ಗುಣ ಹೆಚ್ಚುಮಾಡಬೇಕಾದರೆ ಏನು ಮಾಡಬೇಕು ಎನ್ನುವದನ್ನು ವಿವರಿಸಿದರು. ಹಿರಿಯರೊಬ್ಬರು ನಾನು ತಯಾರಿಸಿದ ಏಣ್ಣೆ ಪರೀಕ್ಷಿಸಿ

"ಮಾಡುವ ವಿಧಾನ ಸರಿಯಾಗಿದೆ ಆದರೆ ಅವರು ಉಪಯೋಗಿಸಿದ ಶೇಂಗಾ ಹಸನು ಮಾಡಿಲ್ಲವಾಗಿ ಅದರಲ್ಲಿ ಹುಲ್ಲಿನ ಬೀಜಗಳು ಇದ್ದುದರಿಂದ ವಾಸನೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ."

ಈ ಸಲಹೆ ಅತ್ಯಮೂಲ್ಯ ಅದನ್ನು ನಾನು ಸರಿಪಡಿಸಿಕೊಳ್ಳುವೆ ಎಂದೆ ನಾನು. ಕೊನೆಯದಾಗಿ ಅಪ್ಪಣ್ಣವರು

ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು ಜಂಗಮಕ್ಕೆ ಮಾಡಿದೆನೆಂಬ

ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ.

ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು ಸಂದಿಲ್ಲದೆ ಸಂಶಯವಿಲ್ಲದೆ

ಜಂಗಮಲಿಂಗಕ್ಕೆ

ದಾಸೋಹವ ಮಾಡುವುದೆ ಮಾಟ.

ಕಾಶಿಯಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ.

ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು. / ೨.

--- ನುಲಿಯ ಚಂದಯ್ಯ

ಅನುಭಾವ ಅನುಭಾವವೆಂದೆಂಬರು ಅನುಭಾವವೆಂಬುದು ನೆಲದ ಮರೆಯ ನಿಧಾನ

ಕಾಣಿರೋ

ಅನುಭಾವವೆಂಬುದು ಅಂತರಂಗದ ಶುದ್ಧಿ ಕಾಣಿರೋ.

ಅನುಭಾವವೆಂಬುದು ರಚ್ಚೆಯ ಮಾತೆ ? ಅನುಭಾವವೆಂಬುದು ಸಂತೆಯ ಸುದ್ದಿಯೆ ?

ಅನುಭಾವವೆಂಬುದೇನು ಬೀದಿಯ ಪಸರವೆ ?

ಏನೆಂಬೆ ಹೇಳಾ ಮಹಾಘನವ ! ಆನೆಯ ಮಾನದೊಳಗಿಕ್ಕಿದರಡಗೂದೆ

ದರ್ಪಣದೊಳಗಡಗೂದಲ್ಲದೆ ?

ಕಂಡ ಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ ಅನುಭಾವ, ಬಂದ ಬಂದಲ್ಲಿ ಪ್ರಸಂಗವ ಮಾಡುವ

ನಿಬರ್ುದ್ಧಿ ನೀಚರ ಮೆಚ್ಚ

ಕೂಡಲಚೆನ್ನಸಂಗಮದೇವ. / 127 -- ಚನ್ನಬಸವಣ್ಣ

ವಚನಗಳನ್ನು ಹೇಳಿ ಅರ್ಥ ವಿವರಿಸಿ ನಾಳೆ ಬರಲು ಹೇಳಿದರು.

## ಅರಿವಿನ ತೃಪ್ತಿಗೆ ಅನುಭಾವವಾಶ್ರಯ

ಗಮನಿಸಿ:

ಅನುಭವ ಮತ್ತು ಅನುಭಾವ ಎರಡು ಪದಗಳ ಪ್ರಯೋಗ ಅನೇಕ ಶರಣರು ತಮ್ಮ ವಚನಗಳಲ್ಲಿ ಮಾಡಿದ್ದಾರೆ. ಲಭ್ಯವಿರುವ ವಚನಗಳಲ್ಲಿ

ಅನುಭವ ಪದವನ್ನು 37 ವಚನಕಾರರು 123 ವಚನಗಳಲ್ಲಿ 148 ಕಡೆಗಳಲ್ಲಿ ಉಪಯೋಗಿಸಿದ್ದರೆ, ಅನುಭಾವ ಪದವನ್ನು 42 ವಚನಕಾರರು 382 ವಚನಗಳಲ್ಲಿ 447 ಕಡೆಗಳಲ್ಲಿ ಉಪಯೋಗಿಸಿದ್ದಾರೆ. ನಾನಿನ್ನೂ ಈ ಪದಗಳ ಅರ್ಥ ಅರಿಯಬೇಕಾಗಿದೆ.

36 ವರ್ಷಗಳ ಅಧ್ಯಾಪನ ಕಾಲದಲ್ಲಿ ನನಗಾದ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳುವೆ. ವಿದ್ಯಾರ್ಥಿಗಳು ತಮಗೆ ಬಿಡಿಸಲಾಗದ ಸಮಸ್ಯೆಗಳನ್ನು ಒಂದು ಹಾಳಿಯಲ್ಲಿ ಬರೆದುಕೊಡುತ್ತಿದ್ದರು ಅದನ್ನ ನಾನು solve ಮಾಡಿ ಮರುದಿನ ಅವರಿಗೆ ಆ ಹಾಳೆ ಮರಳಿ ಕೊಡುತ್ತಿದ್ದೆ. ಅದನ್ನು ಬಿಡಿಸಲು ಪ್ರಯತ್ನಿಸಿ ನನಗಾಗದಿದ್ದರೆ ನನ್ನ ಸಹೋದ್ಯೋಗಿಗಳೊಡನೆ ಚರ್ಚಿಸಿ ಸಮಸ್ಯೆಗೆ ಉತ್ತರ ಪಡೆಯುತ್ತಿದ್ದೆ. ಒಮ್ಮೊಮ್ಮೆ ಅವರಾರೂ ಸಿಗದಿದ್ದಾಗ ಆ ಸಮಸ್ಯೆ ಬಿಡಿಸುವ ಪ್ರಯತ್ನ ಮಾಡುತ್ತ ನಿದ್ದೆಗೆ ಜಾರುತ್ತಿದ್ದೆ. ನಿದ್ದೆ ಹತ್ತಿದ್ದರೂ ಮನದಲ್ಲಿ ಏನೋ ತಳಮಳ ರಾತ್ರಿ ಯಾವಾಗಲೋ ಎಚ್ಚರವಾಗಿ ಸಮಸ್ಯೆಗೆ ಪರಿಹಾರ ಬರೆದು ಮಲಗುತ್ತಿದ್ದೆ. ಯಾವಾಗ ಹುಡುಗ ಸಿಗುತ್ತಾನೋ ಅವನಿಗೆ ಆ ಹಾಳೆ ಕೊಡುವ ಕಾತರವಿರುತ್ತಿತ್ತು. ಆ ಹುಡುಗ ಸಿಕ್ಕು " ಸರ್ ರಾತ್ರಿ ಆ ಸಮಸ್ಯೆಗೆ ಪರಿಹಾರ ನನಗೆ ಸಿಕ್ಕಿತು" ಎಂದು ಹೇಳಿದಾಗ ನನಗೆ ವಿಚಿತ್ರವೆನಿಸುತ್ತಿತ್ತು. ಈ ರೀತಿ ನಡೆದ .ಪ್ರಸಂಗಗಳೇ ಹೆಚ್ಚು. ಅದು ಹೇಗೆ ಆಗುತ್ತಿತ್ತು ನನಗಿನ್ನೂ ಅರ್ಥವಾಗಿಲ್ಲ. ಬಹಳಮಾಡಿ ಅನುಭವ ಮತ್ತು ಅನುಭಾವ ಪದಗಳ ಅರ್ಥವಾದರೆ ಆ ಪ್ರಸಂಗಗಳು ಹೇಗೆ ಆದವು ಎನ್ನುವದು ಗೊತ್ತಾಗಬಹುದು.

ಅಪ್ಪಣ್ಣವರ ಮಾತಿನ ಮೋಡಿಯಿಂದ ಹೊರ ಬಂದ ಮೇಲೆ, ಅಲ್ಲಿ ಬಂದವರೆಲ್ಲ ಬಹಳ ಚಿರಪರಿಚಿತ ರಂತೆ ಆತ್ಮೀಯತೆಯಿಂದ ಮಾತನಾಡಿಸಿದರು. ಅವರೆಲ್ಲರೊಡಗೂಡಿ ಕೈ ಕಾಲು ಮುಖ ತೊಳೆದು ಅನುಭವ ಕಟ್ಟೆಯ ಮುಂದೆ ಕುಳಿತುಕೊಂಡೆವು. ನನಗೆ ಕಣ್ಣುಮುಚ್ಚಿ ಕುಳಿತುಕೊಂಡ ನೆನಪು ಎಂದಿನಂತೆ ಎಲ್ಲ ಮರೆತು ಬೆಳಕಿನಲ್ಲಿ ಲೀನವಾದ ಅನುಭವ. ಮನದ ಮುಂದೆ ಬಿಳಿಮೋಡದಲ್ಲಿ ಚಿತ್ರ ಮೂಡಿದ ಹಾಗೆ ಚನ್ನನ ಮುದ್ದು ಮುಖ ಕಾಣತೊಡಗಿತು. ಅವನ ಮಾತು ಅವನ ಮಧುರ ವಚನ ಗಾಯನ ಮನಸ್ಸನ್ನೆಲ್ಲ ಆವರಿಸಿತು. ಬೀಸಿದ ಗಾಳಿಗೆ ಮೋಡ ಚದುರಿದ ಹಾಗೆ ಚನ್ನನ ರೂಪ ಮಾಯವಾಯಿತು. ಅವನನ್ನ ಚನ್ನಾ, ಚನ್ನಾ ಎಂದು ಕೂಗಿ ಕರೆದು ಕಣ್ಣು ತೆರೆದೆ. ಅಲ್ಲಿದ್ದವರೆಲ್ಲ

ನನ್ನೆಡೆಗೆ ನೋಡುತ್ತಿದ್ದರು. ಮುಜುಗರವೆನಿಸಿ ತಲೆತಗ್ಗಿಸಿದೆ ಅವರೆಲ್ಲರ ಧ್ಯಾನಕ್ಕೆ ಭಂಗ ತಂದೆ ಎನ್ನುವ ಭಾವ ಮನದಲ್ಲಿ ಮೂಡಿತು. ಅಪ್ಪಣ್ಣ ಆಗ ಹೇಳಿದ ಮಾತು "ಸರಿಯಾದ ದಾರಿಯಲ್ಲಿದ್ದಿಯಾ ಇಂದಲ್ಲ ನಾಳೆ ಚನ್ನ ನಿನಗೆ ಸಿಗುತ್ತಾನೆ". ಅವರೇನು ಹೇಳುತ್ತಿದ್ದಾರೆ ಎನ್ನುವದು ಅಲ್ಲಿದ್ದವರಿಗೂ ನನಗೂ ಅರ್ಥವಾಗಲಿಲ್ಲ. ಅದರೂ ಆ ಮಾತು ನನ್ನ ಮನಕ್ಕೆ ಹಿತವೆನಿಸಿತು.
ಎಲ್ಲರ ಜೊತೆ ಎದ್ದು ಶರಣು ಹೇಳಿ ಅಲ್ಲಿ ಕೊಡಲಾದ ಹಾಲು ಪ್ರಸಾದ ಸೇವಿಸಿ ಮನೆಗೆ ಹೊರಟೆ ಮೌನವಾಗಿ.
ಮನದಲ್ಲಿ ಹೊಳೆದ ಈ ವಚನ

**ಅರಿವಿನ ತೃಪ್ತಿಗೆ ಅನುಭಾವವಾಶ್ರಯ.**

**ಲಿಂಗದ ಅನುಭಾವದಿಂದ ನಿಮ್ಮ ಕಂಡೆ.**

**ನಿಮ್ಮ ಕಂಡೆನ್ನ ಮರೆದೆ, ಕೂಡಲಚೆನ್ನಸಂಗಮದೇವಾ**

. -- ---ಚನ್ನಬಸವಣ್ಣ

ನಿನ್ನೆ ಚನ್ನ ಹೇಳಿದನೇ ಅಥವಾ ಇನ್ನೆಲ್ಲಿಯಾದರೂ ಕೇಳಿದ್ದೇನೆಯೇ?
"ಏನ್ರಿ ನೀವು ಮನದಲ್ಲಿ ದೇವರ ಧ್ಯಾನ ಮಾಡೂದು ಬಿಟ್ಟು ನನ್ನ ತಮ್ಮ ಚನ್ನನ ಧ್ಯಾನ ಮಾಡಿದಿರಿ" ಎಂದಾಗಲೇ ವಾಸ್ತವಕ್ಕೆ ಬಂದೆ. ನನ್ನ ಪುಣ್ಯ ನಿನ್ನ ಹೆಸರು ಹೇಳಿದ್ದರೆ ಗತಿಯೇನು. ನಕ್ಕು ಸುಮ್ಮನಾದೆ.
ಸ್ವಲ್ಪ ಹೊತ್ತಿನಲ್ಲಿ ಮನೆ ಬಂತು. ಮನೆಯ ಮುಂದೆ ದನಗಳನ್ನೆಲ್ಲ ಪಾಲನೆಮಾಡಲು ಒಯ್ದಿದ್ದ ಯಜಮಾನ ಮತ್ತು ಯುವಕರು ನಮ್ಮನ್ನು ಕಂಡೊಡನೆ ಶರಣು ಯಪ್ಪ ಎಂದರು. ಅವರಿಗೆ ಮರುನಮಸ್ಕರಿಸಿ ಮನೆಯೊಳಗೆ ಬರಲು ಹೇಳಿದೆ.
ಅವರು ತಮ್ಮೊಡನೆ ತಂದಿದ್ದ ಗಡಿಗೆ ಕೆಳಗಿಸಿದ ಮೇಲೆ ಯಜಮಾನ ಹೆಳಿದ " ಯಪ್ಪ ನಿನ್ನೆ ಕರೆದ ಹಾಲ ಹೆಪ್ಪ ಹಾಕಿ ಮಾಡಿದ ತುಪ್ಪ ಈ ಗಡಿಗ್ಯಾಗ ಐತಿ ತೊಗೊಳ್ರಿ". ನನ್ನಾಕೆ ಒಳಗೆ ಹೋಗಿ ಕೊಡ ತಂದು ಅದರಲ್ಲಿ ತುಪ್ಪ ಹಾಕಲು ಹೇಳಿದಳು. ಆ ಕೊಡ ತುಂಬಿ ಇನ್ನೂ ಸ್ವಲ್ಪ ತುಪ್ಪ ಉಳಿಯಿತು. ಇವತ್ತು ನೀವೆಲ್ಲ ದಾಸೋಹಕ್ಕ ಹೋಗಿ ಈ ತುಪ್ಪದ ಕೊಡ ಕೊಟ್ಟು ಅಲ್ಲಿ ಉಳಿದ ತುಪ್ಪ ದೀಪಕ್ಕ ಹಾಕಿ ಬನ್ನಿರಿ ಎಂದಳು ಉತ್ಸಾಹ ದಿಂದ.
ಆಗ ನನಗ ನೆನಪಾಯಿತು ಕೊಡ ತುಪ್ಪ ಸುರಿದು ಹಾಳಮಾಡಿದ್ದು.
ನನಗರಿವಾಗದೇ ಹೇಳಿದ್ದೆ "ಅಣ್ಣ ಬಸವಣ್ಣ ದಾರಿ ತೋರಿದ". ಅಲ್ಲಿದ್ದವರಿಗೆ ನಾನೇನು ಹೇಳಿದೆ ಗೊತ್ತಾಗದೇ ಸುಮ್ಮನಿದ್ದರು.
ನಾನು ಎಣ್ಣೆ ಮಾರಲು ಆ ಕಡೆ ಹೋಗುತ್ತಿರುವೆ ನನ್ನ ಬಂಡಿಯಲ್ಲಿನೀವು ಬನ್ನಿ ಅನುಭವ ಮಂಟಪ ಮತ್ತು ದಾಸೊಹದ ದಾರಿ ತೋರಸತೀನಿ" ಎಂದಾಗ ಅವರೆಲ್ಲರ ಮುಖದಲ್ಲಿ ಸಂತೋಷ ಕಾಣಿಸಿತು.
ಗಮನಿಸಿ:

(ನಾನು ಗಣಿತ ವಿದ್ಯಾರ್ಥಿ. ಯಾವುದೇ ಸಂಪ್ರದಾಯದ ಬಗ್ಗೆ ಮಾತನಾಡುವದು ನನ್ನ ಮಿತಿಗೆ ಮೀರಿದ್ದು. ನನಗನಿಸಿದ ವಿಚಾರಗಳನ್ನು ನಮೂದಿಸುವ ಕೆಲಸ ಮಾತ್ರ ಇಲ್ಲಿದೆ.)

"ಅನುಭವಮಂಟಪ" ಈಗ ಎಲ್ಲಮಾಧ್ಯಮಗಳಲ್ಲಿ ಪ್ರಚಾರದಲ್ಲಿರುವ ಪದ.

ಕುತೂಹಲಕ್ಕಾಗಿ ಈ ಪದವನ್ನು ಲಭ್ಯವಿರುವ ಎಷ್ಟು ವಚನಗಳಲ್ಲಿ ಉಪಯೋಗಿಸಿದ್ದಾರೆ ಎಂದು ತಿಳಿಯಲು ವಚನ ಸಂಚಯ ಮೊರೆಹೋದೆ. .

ತುಂಬಾ ಅಚ್ಚರಿಯ ಸಂಗತಿ "ಅನುಭವಮಂಟಪ" ಪದವನ್ನು ಒಬ್ಬರೇ ಓಬ್ಬರು ಒಂದೇ ವಚನದಲ್ಲಿ ಒಂದೇ ಒಂದು ಸಲ ಉಪಯೋಗಿಸಿದ್ದಾರೆ. ಆ ವಚನಕಾರ್ತಿ ಮತ್ತಾರೂ ಅಲ್ಲ ಅಣ್ಣ ಬಸವಣ್ಣನವರ ಪತ್ನಿ ನೀಲಮ್ಮನವರು.

ಅನುಭವ ಪದವನ್ನು 37 ವಚನಕಾರರು 123 ವಚನಗಳಲ್ಲಿ 148 ಕಡೆಗಳಲ್ಲಿ ಉಪಯೋಗಿಸಿದ್ದರೆ, ಮಂಟಪ ಪದವನ್ನು29 ವಚನಕಾರರು 152 ವಚನಗಳಲ್ಲಿ 216 ಕಡೆಗಳಲ್ಲಿ ಉಪಯೋಗಿಸಿದ್ದಾರೆ. ಅನುಭವ ಮತ್ತು ಮಂಟಪ ಪದಗಳು ಶರಣರಿಗೆ ಚಿರಪರಿಚಿತ ಆದರೆ "ಅನುಭವಮಂಟಪ" ಪದವನ್ನು ವಚನಗಳಲ್ಲಿ ಉಪಯೋಗಿಸಿಲ್ಲವೇಕೆ?.

ನೀಲಮ್ಮನವರು "ಅನುಭವಮಂಟಪ" ದ ಪರಿಪೂರ್ಣ ವಿವರಣೆಯ ಭಾಗ ಇಲ್ಲಿದೆ ಅದರ ವಿವರಣೆ ಅವಶ್ಯಕತೆ ಇಲ್ಲ.

**ಅನುಭವಮಂಟಪವನನುಮಾಡಿ, ಅನುಭವಮೂರ್ತಿಯಾದ ನಮ್ಮ ಬಸವಯ್ಯನು.**
**ಅರಿವ ಸಂಪಾದಿಸಿ ಆಚಾರವನಂಗಂಗೊಳಿಸಿ, ಏಳುನೂರೆಪ್ಪತ್ತು ಅಮರಗಣಂಗಳ**
**ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು.**--- ನೀಲಾಂಬಿಕಾ

ಈಗ ಮನದಲ್ಲಿ ಮೂಡುವ ಪ್ರಶ್ನೆಗಳು

"ಅನುಭವಮಂಟಪ" ಪದ ಇಷ್ಟು ವ್ಯಾಪಕವಾಗಿ ಉಪಯೋಗವಾದದ್ದು ಎಲ್ಲಿ ಮತ್ತು ಯಾವಾಗ?

ಶರಣರು ಅಷ್ಟದಳಮಂಟಪ, ಗಗನಮಂಟಪ, ಶಿಲೆಯ ಮಂಟಪ, ಕಮಲಮಂಟಪ ಮೊದಲಾದ ಪದಗಳನ್ನು ವಚನಗಳಲ್ಲಿ ಉಪಯೋಗಿಸಿದ್ದಾರೆ.

ಕೋಲ ಶಾಂತಯ್ಯನವರು ಮಹಾಮನೆಯ ಮಂಟಪ ಎನ್ನುವ ಪದ ಉಪಯೋಗಿಸಿದ್ದರೂ ಅದನ್ನು ದೇಹದ ವಿವರಣೆ ಮಾಡಲು ಉಪಯೋಗಿಸಿದ್ದಾರೆ.

12 ನೇಯ ಶತಮಾನದಿಂದ 16 ನೇಯ ಶತಮಾನದವರೆಗೆ ರಚಿಸಿದ ವಚನಗಳಲ್ಲಿ ಅನುಭವ ಮಂಟಪ ಪದ ವಚನಗಳಲ್ಲಿ ಬಳಕೆಯಾಗಿಲ್ಲ.

“ಅನುಭಾವಮಂಟಪ” ಎಂಬ ಪದ ಬಳಸಿದ್ದಾರೆಯೇ ಎಂದು ನೋಡಿದರೆ 16 ನೇಯ ಶತಮಾನದವರೆಗೆ ಈ ಪದವನ್ನು ಯಾವ ವಚನಕಾರರು ಬಳಸಿಲ್ಲ.

(ಇಲ್ಲಿ ನನಗೆ ಲಭ್ಯವಿರುವ ವಚನ ಸಂಚಯ ದಿಂದ ಮಾಹಿತಿ ಇಲ್ಲಿ ಬರೆದಿರುವೆ. ವಿಶಾಲವಾದ ವಚನ ಸಾಹಿತ್ಯದಲ್ಲಿ ಈ ರೀತಿಯ ಮಾಹಿತಿ ಲಭ್ಯಮಾಡುತ್ತಿರುವ ಆ ರೀತಿಯ ಅನುಕೂಲತೆ ಒದಗಿಸಿದವರಿಗೆಲ್ಲ ಧನ್ಯವಾದಗಳು)

16 ನೇಯ ಶತಮಾನದಲ್ಲಿ ಗುರುಸಿದ್ಧದೇವರು ವಚನಕಾರ 3 ವಚನಗಳಲ್ಲಿ 3 ಕಡೆಗಳಲ್ಲಿ ಉಪಯೋಗಿಸಿದ್ದಾರೆ. ವಚನಗಳಲ್ಲಿರುವ ಕೆಲವು ವಿವರಗಳು ಇಲ್ಲಿವೆ.

1. **ಅಯ್ಯ, ವರಕುಮಾರ ದೇಶಿಕೋತ್ತಮನೆ ಕೇಳ !**
   **ಕಲ್ಯಾಣಪಟ್ಟಣದ ಅನುಭಾವಮಂಟಪದಲ್ಲಿ**
   **ಬಸವ ಮೊದಲಾದ ಪ್ರಮಥರೆಲ್ಲ**
   **ಚೆನ್ನಬಸವರಾಜೇಂದ್ರಂಗೆ ಅಬ್ಧಿವಂದಿಸಿ,**
   **ಮಹಾಲಿಂಗೈಕ್ಯಾನುಭಾವವ ಬೆಸಗೊಳಲು**
   **ಅದೇ ಪ್ರಸಾದವ ನಿನಗೆ ಅರುಹಿಸಿ ಕೊಟ್ಟೆವು ಕೇಳಾ ನಂದೀಶ,**
   **ಸಂಗನಬಸವೇಶ್ವರ**-----/48.----ಗುರುಸಿದ್ಧದೇವರು
2. **ಅಯ್ಯ, ಇಂತು ಕಲ್ಯಾಣಪಟ್ಟಣದ ಅನುಭಾವಮಂಟಪದ ಶೂನ್ಯಸಿಂಹಾಸನದಲ್ಲಿ ಪ್ರಭುಸ್ವಾಮಿಗಳು ಬಸವರಾಜೇಂದ್ರ ಮುಖ್ಯವಾದ ಸಕಲಪ್ರಮಥಗಣಂಗಳು ಕೂಡಿ, ಚಿಕ್ಕದಂಡನಾಯಕ ಮುಖವಚನದಿಂದೆ ಶಿವಯೋಗಿ ಸಿದ್ಧರಾಮೇಶ್ವರನ ಉಪದೇಶಕಾರಣಾರ್ಥವಾಗಿ, ನವರತ್ನ ಖಚಿತ ಮಂಟಪವ ರಚಿಸಿ, ಶುಚಿ, ರುಚಿ, ಪರುಷ, ನಿಜ, ಸದ್ಭಕ್ತಿ, ಜ್ಞಾನ, ವೈರಾಗ್ಯ, ಸತ್ಕ್ರಿಯಾಚಾರ ಷಟ್ಸ್ಥಲಮಾರ್ಗವ ಚೆನ್ನಬಸವಣ್ಣನ ಮುಖವಚನದಿಂದೆ ಸಿದ್ಧರಾಮದೇಶಿಕೇಂದ್ರನಿಗೆ ಬೋಧ್ಧಿಸಿದ ನಿಲುಕಡೆಯ ಸೂತ್ರವದೆಂತೆಂದಡೆ** ------/9 **---**ಗುರುಸಿದ್ಧದೇವರು

ಅಂತೂ ಮನದಲ್ಲಿ ಮೂಡಿರುವ ಸಂದೇಹವನ್ನು ಪರಿಣಿತರೇ ಬಗೆಹರಿಸಬೇಕು.

ಇನ್ನು ಅನುಭವ ಮಂಟಪಕ್ಕೆ ಪರ್ಯಾಯವಾದ ಪದವಿದೆಯೇ? ಎಂಬ ಪ್ರಶ್ನೆ ಮನದಲ್ಲಿ ಹುಟ್ಟುವದು ಸಹಜ.

ಮಹಾಮನೆ ಪದವನ್ನು 16 ವಚನಕಾರರು 34 ವಚನಗಳಲ್ಲಿ 37 ಕಡೆಗಳಲ್ಲಿ ಉಪಯೋಗಿಸಿದ್ದಾರೆ.

ಅಣ್ಣ ಬಸವಣ್ಣನವರೇ ತಮ್ಮ ವಚನದಲ್ಲಿ ಸ್ಪಷ್ಟವಾಗಿ

**ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ,ಸತ್ಯಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು.**

**ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ,ಕೂಡಲಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು**. / 482 —ಅಣ್ಣ ಬಸವಣ್ಣ

ನಾನು ಸಣ್ಣವನಿದ್ದಾಗ (1950 -70) ನೋಡಿದ ಸಂಗಮದ ಸಂಗಮೇಶ್ವರ ದೇವಸ್ಥಾನದ ವಿವರಣೆಯನ್ನು ನನ್ನ ಮೊಮ್ಮಕ್ಕಳಿಗೆ ಹೇಳಿ ಈಗಿರುವ ದೇವಸ್ಥಾನ ತೋರಿಸಿಕೊಂಡು ಬಂದಾಗ ಅವರು ಕೇಳಿದ ಪ್ರಶ್ನೆ "ನೀವು ಹೇಳಿದ ಪವಿತ್ರ ಕ್ಷೇತ್ರ ಇದೇನಾ?".

ನನ್ನ ಕನಸಿನಲ್ಲಿ ಬರುವ "ಅನುಭವಮಂಟಪ"ದ ವಿವರಣೆ ಗತಿಯೂ ಇದೇ ಆಗಬಹುದು ನಿಮ್ಮ ಮನದಲ್ಲಿರುವ "ಅನುಭವಮಂಟಪ" ದ ಚಿತ್ರಣಕ್ಕೂ ನನ್ನ ವಿವರಣೆಗೂ

ಅಜಗಜಾಂತರ ಅಂತರವಿರಬಹುದು ಕ್ಷಮಿಸಿ.

"ಅಕ್ಕಾ ಆಕಳುಗಳ ಸೇವೆಯನ್ನು ಈ ಹುಡುಗ "ಕೆಂಪ" ಮಾಡುತ್ತಾನೆ. ಅವನ ಅಕ್ಕ ಮದುವೆಯಾಗಿ ಹೋದ ಮೇಲೆ ಅವನು ಅಕ್ಕನನ್ನು ನೆನಸಿ ಅಳುತ್ತಾನೆ. ಇಲ್ಲಿದ್ದರೆ ಅವನಿಗೆ ಸ್ವಲ್ಪ ಸಮಾಧಾನವಾಗುವದು" ಎಂದ ಯಜಮಾನ.
"ನೀವೆಲ್ಲ ನುಚ್ಚು ಮಜ್ಜಿಗೆ ಊಟಮಾಡಿಯೇ ದಾಸೋಹಕ್ಕೆ ಹೋಗಿ" ಎಂದಳು ನನ್ನಾಕೆ.
ಕೆಂಪಣ್ಣ ದನಕರು ಮೇಯಿಸಲು ಹೊಡೆದು ಕೊಂಡು ಹೋದ. ನಾನು ಮತ್ತು ದನಪಾಲಕರಾದ ಮೂವರು ಕೂಡಿ ಮಹಾಮನೆಗೆ ಹೊರಟೆವು. ನನ್ನಾಕೆಯನ್ನು ಬಿಟ್ಟು ಕಲ್ಯಾಣದೊಳಗೆ ಹೊರಟಿದ್ದ ಮೊದಲಬಾರಿಗೆ. ಕೆರೆಯ ಮಾರ್ಗ ಗೊತ್ತಿತ್ತು. ಅಲ್ಲಿಗೆ ಹೋಗಿ ಕೇಳಿದರೆ ಯಾರಾದರೂ ಮಹಾಮನೆಗೆ ಹೋಗುವ ದಾರಿ ತೋರಿಸುತ್ತಾರೆ ಎನಿಸಿ ನೆಮ್ಮದಿಯಿಂದ ಗಾಡಿ ಹೊಡೆಯತೊಡಗಿದೆ.
"ಮಹಾಮನೆ" ಹೇಗಿರಬಹುದು? ಮೊದಲಬಾರಿಗೆ ಮನದಲ್ಲಿ ಒಂದು ಪ್ರಶ್ನೆ ಮೂಡಿತು.
ಹೀಗೆ ಮನದಲ್ಲಿ ಪ್ರಶ್ನೆಮೂಡಿ ಉತ್ತರ ಕಂಡುಕೊಳ್ಳಲು ಎಂದೂ ಪ್ರಯತ್ನಿಸಿರಲಿಲ್ಲ. ಚನ್ನ ಬಂದು ಹೋದಮೇಲೇಯೇ ಈ ಸ್ಥಿತಿ.
ನಿರಾಳವಾಗಿ ಶಾಂತವಾಗಿದ್ದ ಮನಸ್ಸಿನಲ್ಲಿ ಏಕೆ? ಏನು? ಪ್ರಶ್ನೆಗಳು ಮೂಡಿ ಮನಸ್ಸು ಅಲ್ಲೋಲಕಲ್ಲೋಲವಾಗುತ್ತಿತ್ತು.
ಮಹಾಮನೆ ಎಂದಕೂಡಲೇ ನನಗನಿಸಿದ್ದು ಆಡಳಿತಗಾರ ಶಿವಣ್ಣನವರ ಮನೆಗಿಂತಲೂ ದೊಡ್ಡ ಮನೆಯಿರಬೇಕು. ಹಾಗೆ ನೋಡಿದರೆ ನಮ್ಮ ಮನೆಯೂ ದೊಡ್ಡದೇ. ದನಕಟ್ಟುವ ಜಾಗ, ಗಾಣ ಆಡುವಷ್ಟು ಬಯಲು, ಕಾಳು ಹಾಕಲು ಕೋಣೆ, ಎಣ್ಣಿ ಇಡುವ ಕೋಣೆ, ಅಡಿಗೆಮನಿ ಇತ್ಯಾದಿ ಇದ್ದ ನಮ್ಮ ಮನೆ ಅರ್ದ ಒಣಿಯಷ್ಟಿದೆ. ಇನ್ನು ಮಹಾಮನೆ ಹುಡುಕುವದೇನು ದೊಡ್ಡ ಕೆಲಸ ಎನಿಸಿ

ಸಮಾಧಾನಪಟ್ಟುಕೊಂಡೆ. ಬಸವಣ್ಣನವರು ಮಾಹಾಮಂತ್ರಿಗಳು ಸುತ್ತ ಮುತ್ತ ರಾಜಭಟರು ಮನೆಕಾಯಲು ಕಾವಲುಗಾರರು ಇರುತ್ತಾರೆ ಅವರು ನನ್ನನ್ನು ಒಳಗೆ ಬಿಡುತ್ತಾರೆಯೇ? ಎನ್ನುವ ಶಂಕೆ ಮನದಲ್ಲಿ ಕಾಡತೊಡಗಿತು. ಆಕೆಯನ್ನು ಕರೆದುಕೊಂಡು ಬರಬೇಕಿತ್ತು, ಆಗಲೇ ಆಕೆಯೊಮ್ಮೆ ದಾಸೋಹಕ್ಕೆ
ಹೋಗಿ ಬಂದಿದ್ದಳು.

ಅಗಲೇ ಇದುವರೆಗೆ ಸುಮ್ಮನೆ ಕುಳಿತಿದ್ದ ಯಜಮಾನ ತಲೆಯ ಮೇಲಿನ ಪೇಟಾ ತೆಗೆದು ಬಗಲಲ್ಲಿಟ್ಟುಕೊಂಡು ಕೇಳಿದ.

**ಯಜಮಾನ:** ಯಪ್ಪ ಈಗ ಅಣ್ಣ ಬಸವಣ್ಣನ ಸಿಂಹಾಸನದ ಮುಂದ ಹ್ಯಾಂಗ ನಮಸ್ಕಾರ ಮಾಡಬೇಕು.

**ಗುರುವ:** ಅಣ್ಣನವರಿಗೆ "ಶರಣು ಶರಣಾರ್ಥಿ" ಅಂದರ ಸಾಕು

ಆ ಮೂವರು ಶರಣು ಶರಣಾರ್ಥಿ ಅನ್ನುವದನ್ನು ಮತ್ತೆ ಮತ್ತೆ ಗುಣಗುಣಿಸತೊಡಗಿದರು.

ಅದರೂ ಅವರ ಮುಖದಲ್ಲಿ ಗಾಬರಿ ಭಯ ಇನ್ನೂ ಇತ್ತು.

ಕೇಳಿದ್ದ ರಾಜರ ಕಥೆಗಳಲ್ಲಿದ್ದ ರಾಜಸಭೆಯ ವರ್ಣನೆ ನನಗೂ ನೆನಪಾಯಿತು. ಅಂತೂ ಕೆರೆ ಬಂದಿತು ಮತ್ತು ಅಲ್ಲಿಯೆ ಎಡಕ್ಕೆ ತಿರುಗಿ ಸಣ್ಣ ಗುಡ್ಡ ಸುತ್ತುವ ದಾರಿಯಲ್ಲಿ ಹೊರಟೆ. ಅಲ್ಲಿ ಯಾವ ದೊಡ್ಡ ಮನೆಯ ಸುಳಿವಿಲ್ಲ ಆಗ ಒಂದು ಕಟ್ಟೆ ಮುಂದೆ ಅಂಗಳ ತುಂಬ ಹೂವಿನ ಗಿಡಗಳು ಮತ್ತು ಅಲ್ಲಿದ್ದ ಮರದ ಕೆಳಗೊಬ್ಬರು ಕುಳಿತಿದ್ದುದು ಕಾಣಿಸಿತು. ಅವರಿಗೆ ಮಹಾಮನೆಯ ದಾರಿ ಕೇಳಿದರಾಯಿತು ಎಂದು ಬಂಡಿ ತರುಬಿ ಕೆಳಗಿಳಿದು ಹೋದೆ. ಗಿಡದ ನೆರಳಿನಲ್ಲಿ ಕುಳಿತಿದ್ದ ಅಕೆಯನ್ನು ಅಕ್ಕ ಮಹಾಮನೆಯ ದಾರಿ ಯಾವದು?. ಆಕೆ ಎದ್ದು ಸಮೀಪ ಬಂದಾಗ ನನಗನಿಸಿತು ಆಕೆ ರಾಜಕುಮಾರಿಯಿರಬೇಕು, ಆದರೆ ರಾಜಕುಮಾರಿ ಕೌದಿ ಹೊದ್ದು ಕೌದಿ ಏಕೆ ಹೊಲೆಯುತ್ತ ಗಿಡದ ಕೆಳಗೆ ಕೂಳಿತುಕೊಂಡಿದ್ದಾಳೆ. ಮನದ ತುಂಬಾ ದಿಗಿಲು ಮೂಕನಾಗಿ ನಿಂತೆ ಕೌದಿಯನ್ನೇ ಉಡುಪಾಗಿಸಿದವರನ್ನು ನೋಡಿದ್ದು ಇದೇ ಮೊದಲು. ಅಷ್ಟರಲ್ಲಿ ಕಟ್ಟೆಯ ಮೇಲಿನಿಂದ ಇಳಿದು ಬಂದವರು "ಗುರು ಬಾ, ನಾ ನಿನ್ನನ್ನೇ ನೆನೆಸುತ್ತಿದ್ದೆ" ಏನ್ನುವ ಮಾತು ಕೇಳಿ ವಾಸ್ತವಕ್ಕೆ ಬಂದೆ. ನನ್ನಿದಿರಿಗೆ ಗಂಗಾಂಬಿಕೆಯವರಿದ್ದರು. ಅವರಿಗೆ ಶರಣು ಶರಣಾರ್ಥಿ ಹೇಳಿದೆ

**ಗಂಗಾಂಬಿಕೆ:** ಅವರಿದೀಗ ಹೊರಗೆ ಹೋದರು. ಸ್ವಲ್ಪ ಮುಂಚೆ ಬಂದಿದ್ದರೆ ಅವರು ಸಿಗುತ್ತಿದ್ದರು. ಬೊಂತಾದೇವಿ ನಿನ್ನೆ ಹೇಳಿದ "ಗುರಣ್ಣ" ಇವರೇ. ಇವರ ಹಿಂದೆಯೇ ಊರಿನಲ್ಲಿದ್ದ ದನಕರುಗಳೆಲ್ಲ ಬೆನ್ನತ್ತಿ ಬಂದಿದ್ದು. ಈಗ ಗೊತ್ತಿಲ್ಲ.

ನಾನು ಬೊಂತಾದೇವಿಯವರಿಗೆ "ಶರಣು ಶರಣಾರ್ಥಿ ಹೇಳಿ "ಅಕ್ಕಾ ದನಗಳು ಬಂದಿಲ್ಲ ಆದರೆ ಅವುಗಳ ಪಾಲಕರು ಬಂದಾರ" ಎಂದೆ.

**ಗಂಗಾಂಬಿಕೆ:** ಅವರನ್ನ ಒಳಗೆ ಕರಿ.

ನಾನು ಹೊರಗೆ ಬಂದು ಬಂಡಿ ಕೊಳ್ಳ ಹರಿದು ಅವರನ್ನ ಕರೆದುಕೊಂಡು ಬಂದು,
ಇವರು ಅಣ್ಣಾ ಬಸವಣ್ಣನವರ ಧರ್ಮಪತ್ನಿ ಗಂಗಾಂಬಿಕೆ ಮತ್ತೆ
ಇವರು ಬೊಂತಾದೇವಿ ಎಂದು ಪರಿಚಯಿಸಿದೆ.
ಅವರು "ಶರಣು ಶರಣಾರ್ಥಿ" ಹೇಳುತ್ತಾರೆ ಎಂದು ಕೊಂಡಿದ್ದ ನನಗೆ ಆಶ್ಚರ್ಯ
ಕಾದಿತ್ತು. ಅವರೆಲ್ಲರೂ ಬೊಂತಾದೇವಿಯ ಕಾಲಿಗೆರಗಿದ್ದರು. ಅವರೇನೋ
ಯಾವದೇ ಭಾಷೆಯಲ್ಲಿ ಹೇಳುತ್ತಿದ್ದರು ಬೊಂತಾದೇವಿ ಅವರಿಗೆ ಉತ್ತರಿಸುತ್ತಿದ್ದರು.
ನಾನು ಮತ್ತು ಗಂಗಾಂಬಿಕೆಯವರು ಸುಮ್ಮನೆ ನೋಡುತ್ತ ನಿಂತೆವು.
ಸ್ವಲ್ಪ ಸಮಯದ ನಂತರ ಆ ಮೂವರು ಎದ್ದು ದೂರ ಸರಿದು ಕೈಕಟ್ಟಿ
ತಲೆತಗ್ಗಿಸಿ ನಿಂತರು ಕಣ್ಣಿನಲ್ಲಿ ನೀರು ತುಂಬಿತ್ತು.
ಶರಣೆ ಬೊಂತಾದೇವಿ ಕಣ್ಣೀರು ಒರೆಸಿಕೊಂಡು ಗಂಗಾಂಬಿಕೆಯವರ
ಹತ್ತಿರ ಬಂದು
"ಅಕ್ಕ ಇವರು ನಮ್ಮೂರಿನವರು. ಹಿರಿಯವ ಧರ್ಮರಾಜ ಗೋಪಾಲಕರ
ಮುಖ್ಯಸ್ಥ. ಇವನು ತನ್ನೆಲ್ಲ ಬಳಗದೊಡನೆ ದನಗಳ ಪಾಲನೆ ಮಾಡುತ್ತ ಮಾಡುತ್ತ
ಇಲ್ಲಿಗೆ ಬಂದಿದ್ದಾನೆ. ನನ್ನನ್ನು ನೋಡಿ ಅವರಿಗಾದ ಸಂತೋಷ ತಡೆಯಲಾಗದೆ
ಅವರ ಕಣ್ಣಲ್ಲಿ ನೀರು ಬಂದಿದೆ.
ಮತ್ತೆ ಅವರ ಹತ್ತಿರ ಹೋಗಿ ಸಮಾಧಾನ ಮಾಡತೊಡಗಿದರು. ನನಗೆ ನನ್ನ
ಮನಸ್ಸಿನಲ್ಲಿದ್ದ ಮಹಾಮನೆಯ ಚಿತ್ರಕ್ಕೂ ಈಗ ನಾನು ನೋಡುತ್ತಿರುವ ಮನೆಯ
ಚಿತ್ರಕ್ಕೂ ಇರುವ ಅಜಗಜಾಂತರ ನನಗರಿವಿಲ್ಲದೆ ಪ್ರಶ್ನೆ ಹೊರ ಬಂತು. ಅಕ್ಕ ಇದೇ
ನಿಮ್ಮ ಮನೆಯಾ? ಗುರು ನಿನಗೇಕೆ ಈ ಸಂಶಯ. ಇಷ್ಟು
ವಿಶಾಲವಾದ ಸುಂದರವಾದ ಮನೆಯಲ್ಲಿ ಬಸವಣ್ಣನವರೊಡನೆ ಇರುವ
ಸೌಭಾಗ್ಯ ನನ್ನದು. ಒಳಗೆ ಹೋಗಿ ಮನೆ ನೋಡಿಕೊಂಡು ಬಾ. ಮನೆಯ ಮುಂದೆ
ಸಣ್ಣದಾಗಿ ಕಂಡರೂ ಒಳಗೆ ವಿಶಾಲವಾಗಿದೆ ಎನಿಸಿ. ಸರಿ ಅಕ್ಕ ಎಂದು ಹೊರಟೆ.
ಮೂರು ಪಾವಟಣಗೆ ಎರಿ ಹೋದ ಮೇಲೆ ಸುಮಾರು ಐವತ್ತು ಅರವತ್ತು ಜನ
ಕೂಡ್ರುವಷ್ಟು ಕಟ್ಟೆ. ಕಟ್ಟೆಯ ಮೇಲೆ ಎರಡು ತುದಿಯಲ್ಲಿ ಎರಡು ಚೌಕಟ್ಟಿಲ್ಲದ
ಬಾಗಿಲು ಒಳಗೆ ಹೋಗಬೇಕೆನ್ನುವಷ್ಟರಲ್ಲಿ ಗಂಗಾಂಬಿಕೆಯವರು. ನಿಧಾನ
ಮನೆಯೊಳಗೆ ಹೋಗುವಾಗ ತಲೆತಗ್ಗಿಸಿ ಹೋಗು. ಅವರು ಹಾಗೆ ಹೇಳಿರದಿದ್ದರೆ
ನನ್ನ ತಲೆ ಎರಡು ಹೋಳಾಗುತ್ತಿತ್ತು. ಬಾಗಿಲು ದಾಟಿದಾಗೆ ಇಳಿಯಲು ಮೂರು
ಮೆಟ್ಟಲು ಅಲ್ಲಿ ಕಟ್ಟೆಯಷ್ಟೇ ಜಾಗ. ಅಲ್ಲಿ ಎಣ್ಣೆಯ ದೀಪದ ಬೆಳಕಿನಲ್ಲಿ ಕಂಡ
ಎರಡು ರೂಮಗಳು. ನಮ್ಮೂರಲ್ಲಿ ಶೇಂಗಾ ಚೀಲ ಇಡಲಿಕ್ಕೆ ಇರುವ
ಕೋಣೆಗಳಂತಿದ್ದವು. ಒಂದು ಕೋಣೆಯಲ್ಲಿ ಮಂದವಾದ ದೀಪ ಮತ್ತು ಓದಲು
ಬರೆಯಲು ಇದ್ದ ಸಲಕರಣೆಗಳು. ಇನ್ನೊಂದರಲ್ಲಿ ಬೆಳಕಿರಲಿಲ್ಲ ಆದರೆ ಅದು ಸಹ
ಸಣ್ಣದು ಎಂದು ಗೊತ್ತಾಗುತ್ತಿತ್ತು. ಅದೆಲ್ಲ ಗುಡ್ಡ ಕೊರೆದು ಮಾಡಿದ ಗವಿಗಳು.
ಆದರೆ ಅಲ್ಲಿಯ ವಾತಾವರಣ ಪ್ರಶಾಂತವಾಗಿತ್ತು, ತಂಪಾಗಿತ್ತು ಮತ್ತು
ಹಿತವಾಗಿತ್ತು. ಒಳಗೆ ವಿಶಾಲವಾದ ಮನೆ ಇರಬಹುದು ಎನ್ನುವ ನನ್ನ ವಿಚಾರ

ಹುಸಿಯಾಗಿತ್ತು ಮತ್ತು ನಿರಾಶೆಯಾಗಿತ್ತು. ಪೆಚ್ಚು ಮೋರೆ ಹಾಕಿಕೊಂಡು ಹೊರ ಬಂದೆ.

ಗಿಡದ ನೆರಳಿನಲ್ಲಿ ಕುಳಿತ ಗಂಗಾಂಬಿಕೆಯವರು "ನೋಡಿದೆಯ ಗುರು ನನ್ನ ಗುರುಮನೆ ಮತ್ತು ಅರಮನೆ ನನ್ನ ಸರ್ವಸ್ವ. ಮನೆ ಎಷ್ಟು ದೊಡ್ಡದು ಅನ್ನುವದ ಕ್ಕಿಂತ ಮನಸ್ಸು ಎಷ್ಟು ದೊಡ್ಡದು ಅನ್ನುವದು ಮುಖ್ಯ."

ಆಗ ಬೊಂತಾದೇವಿಯವರು "ಈ ಸುಖವನ್ನು ಹುಡುಕಿಕೊಂಡು ನಾನು, ನನ್ನಣ್ಣ ಮತ್ತು ನನ್ನ ಅತ್ತಿಗೆ ಅರಮನೆ ತೊರೆದು ಸುಂದರ ಕಾಶ್ಮೀರ ದಿಂದ ಇಲ್ಲಿಗೆ ಬಂದಿದ್ದೇವೆ."

ನಾನೇನು ಕೇಳುತ್ತಿದ್ದೇನೆ ನೋಡುತ್ತಿದ್ದೇನೆ ಅರಿವಾಗಲಿಲ್ಲ. ನಾನು ಯಾವುದೋ ಬೇರೆ ಲೋಕದಲ್ಲಿದ್ದೇನೆ ಎನಿಸಿ ಮೂಕನಾದೆ.

ನೆರಳಲ್ಲಿ ನಾನು ಹೋಗಿ ಕುಳಿತು ಕೊಂಡೆ. ಗಂಗಾಂಬಿಕೆಯವರು ಇದು ಬಸವರಾಜರ ವಚನ ಎಂದು ಹೇಳಿ ಇಂಪಾಗಿ ಹಾಡಿದರು.

**ಮನೆ ನೋಡಾ ಬಡವರು: ಮನ ನೋಡಾ ಘನ.**

**ಸೋಂಕಿನಲ್ಲಿ ಶುಚಿ:ಸರ್ವಾಂಗ ಕಲಿಗಳು.**

**ಪಸರಕ್ಕನುವಿಲ್ಲ :ಬಂದ ತತ್ಕಾಲಕೆ ಉಂಟು,**

**ಕೂಡಲಸಂಗನ ಶರಣರು ಸ್ವತಂತ್ರಧೀರರು. / 1014.**

—ಅಣ್ಣ ಬಸವಣ್ಣ.

ಶರಣೆ ಬೊಂತಾದೇವಿಯವರು ಹೇಳಿದ ವಚನ ತುಂಬಾ ಇಂಪಾಗಿತ್ತು

**ಆನೆ ಕುದುರೆ ಭಂಡಾರವಿರ್ದಡೇನೊ?**

**ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ.**

**ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.**

**ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ?**

**ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.**

**ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ. / 96**

--- ಮೋಳಿಗೆ ಮಾರಯ್ಯ

## ಮನೆ ನೋಡಾ ಬಡವರು: ಮನ ನೋಡಾ ಘನ.

ಗಮನಿಸಿ:

ಗಾಣದಲ್ಲಿ ಸಿಲುಕಿದ ಎಳ್ಳು, ನೋಯದೆ ಎಣ್ಣೆಯ ಬಿಡುವುದೆ ?--ಮೋಳಿಗೆ ಮಾರಯ್ಯಾ

ನನ್ನ ಅಧ್ಯಾಪನ ಅವಧಿಯಲ್ಲಿ ಕಂಡುಕೊಂಡ ಸತ್ಯಗಳಲ್ಲಿ ಒಂದನ್ನು ಇಲ್ಲಿ ಕೊಡುವೆ.

ಅದೇಕೋ ಗೊತ್ತಿಲ್ಲ ಗಣಿತ ಬಹಳ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆ. ಹುಡುಗನೆಷ್ಟು ಜಾಣನಿದ್ದಾನೆ ಅಥವಾ ಅಧ್ಯಾಪಕನೆಷ್ಟು ವಿವರಿಸುತ್ತಿದ್ದಾನೆ ಅನ್ನುವದ ಕ್ಕಿಂತ ಮುಖ್ಯ ಅವರಿಬ್ಬರ ನಡುವೆ ಇರುವ ಅನ್ಯೋನ್ಯತೆ ಮತ್ತು ಆತ್ಮೀಯತೆ ಕಾರಣವಾಗುತ್ತದೆ. ಎಷ್ಟೋ ಸಲ ಹುಡುಗರನ್ನು ಕೂಡ್ರಿಸಿ ಆತ್ಮೀಯತೆ ತೋರಿಸಿ ವಿವರಿಸಿದಾಗ ಜಾಣ ವಿದ್ಯಾರ್ಥಿಗಳು ಬಿಡಿಸಲಾಗದ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಬಿಡಿಸಿದ ಅನೇಕ ಪ್ರಸಂಗ ನಾನು ನೋಡಿದ್ದೇನೆ. ಅದರಲ್ಲೂ ನಮ್ಮ ಕಾಲೇಜಿಗೆ ಬರುತ್ತಿದ್ದವರು ಹಳ್ಳಿಯಿಂದ ಬಂದ ಮುಗ್ಧ ವಿದ್ಯಾರ್ಥಿಗಳು. ಅಧ್ಯಾಪಕರು ಆತ್ಮೀಯತೆ ತೋರಿಸಿ ಅವರ ಮನದಲ್ಲಿರುವ ಕೀಳರಮೆ ಕಡಿಮೆಮಾಡಿ ಅವರ ಆತ್ಮಸ್ಥೈರ್ಯ ಹೆಚ್ಚಿಸಿದಾಗ ಅವರು ಉತ್ತಮ ಗುಣಗಳನ್ನು ಪಡೆದು ಒಳ್ಳೆಯ ಜೀವನ ರೂಪಿಸಿ ಕೊಂಡ ಅನೇಕ ಉದಾಹರಣೆಗಳು ನೆನಪಿಗೆ ಬರುತ್ತಿವೆ.

ಈ ಕನಸಿನ ಭಾಗದಲ್ಲಿ ಸಹ ಹಳ್ಳಿಯ ಹೈದನೊಬ್ಬ ವಚನ ಅರ್ಥ ಮಾಡಿಕೊಳ್ಳುವ ಮಟ್ಟಕ್ಕೆ ಹಂತ ಹಂತವಾಗಿ ಬೆಳೆಯುವ ರೀತಿ ಬಿಂಬಿತವಾಗಿದೆ.

**ಗಂಗಾಂಬಿಕೆ:** ಗುರು ಎಲ್ಲಿ ಕಳೆದು ಹೋಗಿದ್ದಿಯಾ?
ಎಂದು ಗಂಗಾಂಬಿಕೆಯವರು ಕರೆದಾಗಲೇ ನಾನು ವಾಸ್ತವಕ್ಕೆ ಬಂದೆ.
**ಗುರುವ:** "ತಾನುಂಬದು ಪಡಾಯಕ್ಕಿ, ಒಂದಾವಿನ ಹಾಲು, ಮಲಗುವುದರ್ಥ ಮಂಚ"
ಎಷ್ಟು ಸುಂದರವಾದ ಸರಳವಾದ ಮಾತು. ಎನ್ನುವ ಮಾತು ನನಗರಿವಾಗದೇ ಹೊರ ಬಂತು.
**ಗಂಗಾಂಬಿಕೆ:** ಇದು ಮೋಳಿಗೆ ಮಾರಯ್ಯನವರ ವಚನಭಾಗ.
ಮೋಳಗೆ ಮಾರಯ್ಯ ಯಾರಂತೀಯಾ ಬೊಂತಾದೇವಿಯವರ ಅಣ್ಣ.
**ಗುರುವ:** ಅಕ್ಕಾ ಅವರು ಕಾಶ್ಮೀರದ ರಾಜರು ಅಂದಿರಿ?
(ನನ್ನ ಜೀವಮಾನದಲ್ಲಿಯೇ ಕುತುಹಲ ತಡೆಯಲಾರದೇ ಪ್ರಶ್ನೆ ಮಾಡಿದ್ದು ಮೊದಲಸಲ. ಹೇಳಿದ್ದಕ್ಕೆಲ್ಲ ತಲೆಯಾಡಿಸುವದು ನನಗೆ ರೂಢಿಯಾಗಿತ್ತು. ಮೊನ್ನೆ ಚನ್ನ ಏನು ಮೋಡಿ ಮಾಡಿದನೋ ಗೊತ್ತಿಲ್ಲ ಯಾವುದನ್ನು ಸುಲಭವಾಗಿ ಮನಸ್ಸು ಒಪ್ಪಿಕೊಳ್ಳುತ್ತಿಲ್ಲ )

**ಗಂಗಾಂಬಿಕೆ:** ಹೌದು ಅವರ ಮೂಲ ಹೆಸರು ಮಹಾದೇವ ಭೂಪಾಲ ಮತ್ತು ಅವರ ಮಡದಿ ಗಂಗಾದೇವಿ ಕಾಶ್ಮೀರದ ಮಾಂಡವ್ಯ ಪ್ರದೇಶದ ಅರಸರಾಗಿದ್ದರು. ಅಲ್ಲಿಯ ಜನರೆಲ್ಲ ಅವರನ್ನು ಬಹಳ ಪ್ರಿತಿಸುತ್ತಿದ್ದರು. ಅವರ ಆಡಳಿತದಲ್ಲಿ ಶಾಂತಿ ಸುವ್ಯವಸ್ಥೆ ಇಲ್ಲಿ ನೆಲಸಿತ್ತು. ಮಹಾದೇವ ಭೂಪಾಲ ಅವರಿಗೆ ಮೊದಲಿನಿಂದ ಆಧ್ಯಾತ್ಮ ಮತ್ತು ತತ್ವಜ್ಞಾನದ ಬಗ್ಗೆ ಒಲವಿತ್ತು. ಇಲ್ಲಿ ನಡೆದ ಘಟನೆಗಳ ವಿವರ ಅವರಿಗೆ ಗೊತ್ತಾಗಿ ರಾಜ್ಯ ತ್ಯಾಗ ಮಾಡಿ ಅಲ್ಲಿಗೆ ಶರಣರಿಂದ ಅನುಭವ ಪಡೆಯಲು ಬಂದರು. ಇಲ್ಲಿಯೇ ಕಾಯಕ ಕೈಕೊಂಡು ನೆಲೆಸಿ ವಚನ ರಚಿಸಿ ನಮಗೆಲ್ಲ ಮಾರ್ಗದರ್ಶನ ಮಾಡುತ್ತಿದ್ದಾರೆ.

ಅವರಿಬ್ಬರೂ ಈ ಇಳಿವಯಸ್ಸಿನಲ್ಲಿ ಅಡವಿಯಲ್ಲಿ ಕಟ್ಟಿಗೆ ಕಡಿಯುವ ಕಾಯಕ ಮಾಡಿ ಅದನ್ನು ಮಾರಿ ಬಂದ ಹಣದಲ್ಲಿ ದಾಸೋಹ ಮಾಡುತ್ತಿದ್ದಾರೆ. ಅವರ ಮಡದಿಯೇ ಮೋಳಿಗೆ ಮಹಾದೇವಿ ಗಂಡನ ಎಲ್ಲ ಕಾರ್ಯಗಳಲ್ಲಿ ಸಹಕರಿಸಿ ವಚನ ರಚಿಸಿ ನಮಗೆಲ್ಲ ಮಾರ್ಗದರ್ಶಕರಾಗಿದ್ದಾರೆ. ಅವರ ವಚನ

**ನೀರು ನೆಲನಿಲ್ಲದೆ ಇರಬಹುದೆ ? ಬೀಜ ನೆಲೆಯಿಲ್ಲದೆ ಹುಟ್ಟಬಹುದೆ ?**

**ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ ?**

**ಚಿತ್ತ ಚಿತ್ತುವಿಲ್ಲದೆ ವಸ್ತುವ ಲಕ್ಷಿಸಿ ಗ್ರಹಿಸಬಲ್ಲುದೆ ?**

**ಇಂತೀ ಕ್ರೀಜ್ಞಾನ ಸಂಬಂಧಸ್ಥಲಭಾವ.**

**ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ ಉಭಯಸ್ಥಲಭೇದ.** / 43

------ ಮೋಳಿಗೆ ಮಹಾದೇವಿ

ಹಾಡಿ ತಮ್ಮ ಮಾತು ಮುಂದುವರೆಸಿದರು
ಇನ್ನು ಮಹಾದೇವ ಭೂಪಾಲನ ಆರೈಕೆಯಲ್ಲಿ ಅರಮನೆಯಲ್ಲಿ ಸುಖವಾಗಿ ಬೆಳೆದವರು
ನಿಜದೇವಿ. ಅವರು ಅಣ್ಣನ ದಾರಿಯಲ್ಲಿಯೇ ಸಾಗಿ
ಕಲ್ಯಾಣಕ್ಕೆ ಬಂದು ಬೊಂತಾದೇವಿಯಾಗಿ
ವಚನ ರಚಿಸಿ ಎಲ್ಲರಿಗೂ ವಚನ ಸಾರ ತಿಳಿಸುವದಲ್ಲದೇ ಕೌದಿ ಹೊಲೆಯುವ ಕಾಯಕ ನಡೆಸಿದ್ದಾರೆ. ಅವರು ಮತ್ತು ಅವರ ಶಿಷ್ಯರು ಒದಗಿಸಿದ ಕೌದಿಯಲ್ಲಿ ಶರಣರೆಲ್ಲ ಬೆಚ್ಚಗೆ ಮಲಗುವದು.

**ಬೊಂತಾದೇವಿ:** ಅಕ್ಕ ಯಾವಾಗಲೂ ಹೀಗೆಯ ಅವಕಾಶ ಸಿಕ್ಕರೆ ಸಾಕು ನಮ್ಮನ್ನೆಲ್ಲ ಹೊಗಳಿ ಹೊನ್ನಶೂಲಕ್ಕಿಕ್ಕುತ್ತಾರೆ. ಕಲ್ಯಾಣಕ್ಕೆ ಬಂದಮೇಲೆ ಅನೇಕ ಶರಣರ ದರ್ಶನ ಭಾಗ್ಯದಿಂದ ಅರಮನೆಯಲ್ಲಿ ಸಿಗದ ಸುಖ ನೆಮ್ಮದಿ ಸಿಕ್ಕು ಪುನೀತರಾಗಿದ್ದೇವೆ".

**ಗಂಗಾಂಬಿಕೆ:** ಹಾಗೇನಿಲ್ಲ ನಮ್ಮ ಯಜಮಾನರು ಹುಸಿಯ ನುಡಿಯಲು ಬೇಡ ಅಂತ ಕಲಿಸಿಬಿಟ್ಟಾರ. ನೀವು ರಚಿಸಿದ ಒಂದು ವಚನ ಹೇಳು ಕೇಳಿ ಸಂತೋಷಪಡತೀನಿ.

ಬೊಂತಾದೇವಿ: ಆಗಲಿ ಅಕ್ಕ ಎನ್ನುತ್ತ ಹೇಳಿದ ವಚನ

ಅಂತಾಯಿತ್ತಿಂತಾಯಿತ್ತೆಂತಾಯಿತ್ತೆನಬೇಡ,

ಅನಂತನಿಂತಾತನೆಂದರಿಯಾ ಬಿಡಾಡಿ.

ಕರೆದಡೆ ಓ ಎಂಬುದು ನಾದವೊ ಬಿಂದುವೊ ಪ್ರಾಣವೊ ಇದಾವುದು ? ಬಲ್ಲಡೆ ನೀ ಹೇಳಾ,

ಬಿಡಾಡಿ.

ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟಾಗಮ ಇದಪ್ರತಿ

ಬಿಡಾಡಿ.

**ಶಬ್ದವೆ ಬ್ರಹ್ಮ, ಶಬ್ದವೆ ಸಿದ್ಧ, ಶಬ್ದವೆ ಶುದ್ಧ ಕಾಣಿರೆ, ಬಿಡಾಡಿ ?**/ 1092—ಬೊಂತಾದೇವಿ

ಇಷ್ಟು ಹೇಳಿ ಮೌನವಾದರು.
ನನಗೇನು ಅರ್ಥವಾಗಲಿಲ್ಲ ಆದರೆ ಮನಕ್ಕೆ ಹಿತವೆನಿಸಿ ಆನಂದವೆನಿಸಿತು, ನಿನ್ನೆ ಚನ್ನ ವಚನ ಹೇಳಿದಾಗ ಅದೇ ರೀತಿ ಅನಿಸಿತ್ತು.
ಇದುವರೆಗೆ ಮೌನವಾಗಿ ಎಲ್ಲವನ್ನೂ ಕೇಳುತ್ತ ಕುಳಿತಿದ್ದ ಧರ್ಮರಾಜ ಹೇಳಿದ
**ಧರ್ಮರಾಜ:** ನೀವು ನಮ್ಮ ಜೊತೆ ಬಂದು ನಮ್ಮವರೆಲ್ಲರನ್ನೂ ಹರಸಬೇಕು. ನೀವಿಲ್ಲಿರುವ ಸುದ್ದಿ
ಗೊತ್ತಾದರೆ ಸಾಕು ಅವರೆಲ್ಲ ಇಲ್ಲಿಗೇ ಬರುತ್ತಾರೆ ನಿಮ್ಮನ್ನು ಭೆಟ್ಟಿಯಾಗಲು
**ಗಂಗಾಂಬಿಕೆ:** ಹಾಗೇಮಾಡಿ ಅವರಲ್ಲಿಗೆ ಹೋಗಿ ಬನ್ನಿ.
ನಮ್ಮ ಜೊತೆ ಬನ್ನಿ ಎನ್ನುತ್ತ ಕೈಮುಗಿದು ನಿಂತರು ಅವರೆಲ್ಲ.
**ಬೊಂತಾದೇವಿ:** ಆಗಲಿ ನೀವು ದಾಸೊಹಕ್ಕೆ ಹೋಗಿ ಬನ್ನಿ ಅಷ್ಟರಲ್ಲಿ ನಾನು ಈ ಕೌದಿ ಹೊಲೆದು
ಮುಗಿಸುತ್ತೇನೆ.
**ಗಂಗಾಂಬಿಕೆ:** ಬೊಂತಾದೇವಿಯವರು ಎಲ್ಲಿಗೆ ಹೋದರೂ ಕಾಲ್ನಡಿಗೆಯಲ್ಲಿ ಹೋಗುತ್ತಾರೆ. ಧರ್ಮರಾಜ ಅವರನ್ನು ಕರೆದುಕೊಂಡು ಹೋಗುತ್ತಾನೆ.
ಧರ್ಮರಾಜ ನೀವು ದಾಸೊಹಕ್ಕ ಹೋಗಿ ತುಪ್ಪ ಕೊಟ್ಟುಬಿಡಿ ನಾನು ಮಾರುಕಟ್ಟೆಗೆ ಹೋಗುತ್ತೇನೆ
ಎಂದು ಎಲ್ಲರಿಗೂ ಶರಣು ಹೇಳಿ ಹೊರಟುಬಂದಿದೆ.




**ಎನ್ನ ತನುವಿನಲ್ಲಿ ಗುರುಮೂರ್ತಿ ಸಂಗನಬಸವಣ್ಣನ ಕಂಡೆನು.**
ಗಮನಿಸಿ::

ಗುರು ಪದವನ್ನು 159 ವಚನಕಾರರು 5789 ವಚನಗಳಲ್ಲಿ 10542 ಕಡೆಗಳಲ್ಲಿ ಉಪಯೊಗಿಸಿದ್ದಾರೆ. ಹಾಗಾಗಿ ಗುರುವಿನ ವಿವರಣೆ ಕೊಡುವದು ನನಗೆ ಅಸಾಧ್ಯ.

ನನಗೆ "ಗುರು" ಎಂದು ಹೆಸರಿಟ್ಟರು, ಆದರೆ ಆ ಗುರುವಿನ ಒಂದು ಗುಣವು ನನ್ನಲ್ಲಿ ಅಳವಡಲಿಲ್ಲ. ನಾನು ಸಂಬಳಕ್ಕಾಗಿ, ಹಿಡಿ ಹಿಟ್ಟಿಗಾಗಿ ಮತ್ತು ಗೇಣು ಬಟ್ಟೆಗಾಗಿ ದುಡಿದೆ. ಆದರೆ ಆ ಶರಣಬಸವ ಕರುಣೆಯಿಟ್ಟು ನನಗೆ ಹೊರೆಯಾಗುವಷ್ಟು ವರ ನೀಡಿದ.

ಶರಣರು ವಿವರಿಸಿದ "ಗುರು" ಪದದ ಅರ್ಥ ವಿವರಿಸುವ ಎರಡು ವಚನಗಳು ಇಲ್ಲಿವೆ.

1. **ಎನ್ನ ತನುವಿನಲ್ಲಿ ಗುರುಮೂರ್ತಿ ಸಂಗನಬಸವಣ್ಣನ ಕಂಡೆನು.**
   **ಎನ್ನ ಮನದಲ್ಲಿ ಲಿಂಗಮೂರ್ತಿ ಚನ್ನಬಸವಣ್ಣನ ಕಂಡೆನು.**
   **ಎನ್ನ ಭಾವದಲ್ಲಿ ಜಂಗಮಮೂರ್ತಿ ಸಿದ್ಧರಾಮಯ್ಯನ ಕಂಡೆನು.**
   **ಎನ್ನ ತೃಪ್ತಿಮುಖದಲ್ಲಿ ಪ್ರಸಾದಮೂರ್ತಿ ಮರುಳಶಂಕರದೇವರ ಕಂಡೆನು.**
   **ಎನ್ನ ಅರಿವಿನ ಮುಖದಲ್ಲಿ ನೈಷ್ಠಿಕಾಮೂರ್ತಿ ಮಡಿವಾಳಯ್ಯನ ಕಂಡೆನು.**
   **ಎನ್ನ ಹೃದಯಮುಖದಲ್ಲಿ ಜ್ಞಾನಮೂರ್ತಿ ಪ್ರಭುದೇವರ ಕಂಡೆನು.**
   **ಇಂತೀ ಷಟ್ಸ್ಥಲವ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠೆಯ ಮಾಡಿ ತೋರಿದ**
   **ನಿಃಕಳಂಕ ಮಲ್ಲಿಕಾರ್ಜುನಾ,ನಿಮ್ಮ ಶರಣರ ಕಂಡು, ಪರಮಸುಖಿಯಾಗಿರ್ದೆನು**. / 164
   ---- ಮೋಳಿಗೆ ಮಾರಯ್ಯ
2. **ಸದ್ಗತಿಯ ತೋರುವ ಗುರುವಿಂಗೆ ರಾಜಸ ತಾಮಸವುಂಟೆ?**
   **ಕೆಡದ ಜ್ಯೋತಿಗೆ ಪಡಿಕುಡಿಗೆ ಎಣ್ಣೆ ಉಂಟೆ?**
   **ಆ ಬಿಡುಮುಡಿಯ ನಿನ್ನ ನೀನರಿ,**
   **ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.** / 95.
   ----ಕೋಲ ಶಾಂತಯ್ಯ

ಕೆರೆ ದಂಡೆಯಲ್ಲಿ ಬಂಡಿ ತರುಬಿ ತಲೆಯ ಮೇಲೆ ಎಣ್ಣಿ ಡಬ್ಬಿ ತೊಗೊಂಡು ಮಾರುಕಟ್ಟೆಯ ಕಡೆಗೆ ಹೊರಟೆ. ದಾರಿಯಲ್ಲಿ ನನಗೆ ಅಪರಿಚಿತರಾದ ಅನೇಕ ಜನರು ಶರಣು ಶರಣಾರ್ಥಿ ಎಂದಾಗ ಮುಜುಗರದಿಂದ ಶರಣು ಶರಣಾರ್ಥಿ ಹೇಳಿ ಮುನ್ನಡೆದೆ. ನಾನು ಮುನ್ನಡೆದಾಗ ಇವ ಶರಣ ಗುರುವ ಎನ್ನುವ ಮಾತು ಜೊತೆಗೆ ಇವನೆಂತಹ ಶರಣ ಹಣೆಯಲ್ಲಿ ವಿಭೂತಿಯಿಲ್ಲ, ಕೊರಳಲ್ಲಿ ರುದ್ರಾಕ್ಷಿ ಇಲ್ಲ ಎನ್ನುವ ಅವನ ಸಂಗಾತಿಯ ಮಾತು ಕೇಳಿಬಂತು.

ಶರಣ ಎಂದರೆ ಯಾರು? ಶರಣ ಹೇಗಿರಬೇಕು? ನಾನ್ಯಾವಾಗ ಶರಣನಾದೆ? ಎನ್ನುವ ಪ್ರಶ್ನೆಗಳು ಕಾಡತೊಡಗಿದವು.

ಹಸಿವು ನೀರಡಿಕೆ ಆದಾಗ ಆಗುವ ಸಂಕಟ ನನ್ನ ಜೀವನದಲ್ಲಿ ಅನುಭವಿಸಿದ್ದೇನೆ. ಅದನ್ನು ಸಹಿಸಬಹುದು ಸ್ವಲ್ಪ ಹೊತ್ತು. ಆದರೆ ತಲೆಯಲ್ಲಿ ಈಗ ಇರುವ ಪ್ರಶ್ನೆಗಳ ಕಾಟವನ್ನು ತಡೆಯಲಾಗುತ್ತಿಲ್ಲ.

ಮನದ ತುಂಬ ತುಂಬಿದ ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಗುವ ಬಗೆ ಹೇಗೆ?. ನನಗೆ ತಿಳುವಳಿಕೆ ಕೊಡುವವರು ಯಾರು?. ಕಲ್ಯಾಣದಲ್ಲಿರುವವರೆಲ್ಲ ಜ್ಞಾನಿಗಳು. ಸಮುದ್ರದಲ್ಲಿದ್ದೂ ನೀರಡಿಕೆಯಿಂದ ಬಳಲುವ ಸ್ಥಿತಿ ನೆನಪಾಯಿತು.

ವಿಚಾರ ಮಾಡುತ್ತ ನಾನು ವ್ಯಾಪಾರ ಮಾಡಿದ್ದ ಅಂಗಡಿ ಬಂದದ್ದೇ ಗೊತ್ತಾಗಲಿಲ್ಲ. ಬನ್ನಿ, ಬನ್ನಿ ಎಂದು ಆ ಅಂಗಡಿ ಮಾಲಕ ಕರೆದಾಗಲೇ ವಾಸ್ತವಕ್ಕೆ ಬಂದೆ. ಶರಣು ಶರಣಾರ್ಥಿಗಳು ನೀವು ಕರೆಯದಿದ್ದರೆ ಮುಂದೆ ಹೋಗುತ್ತಿದ್ದೆ ಎಂದ ನನ್ನನ್ನು ಆದರ ದಿಂದ ಒಳಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಲು ಹೇಳಿದ.

**ಗುರುವ:** ಕ್ಷಮಿಸಿ ವೇಳೆಗೆ ಸರಿಯಾಗಿ ಎಣ್ಣೆ ತಲುಪಿಸಲಾಗಲಿಲ್ಲ. ಇನ್ನು ಮೇಲೆ ಹಾಗೆಮಾಡಲ್ಲ. ನನಗೆ ಶೇಂಗಾ ಕೊಡಿ ನಾಳೆಯೇ ಎಣ್ಣಿ ತಲುಪಿಸುವೆ. ನನ್ನ ಕೂಲಿ ಭಾಗದ ಎಣ್ಣಿ ಬಳಸಿರುವೆ.

**ಅಂಗಡಿಯವ:** ಮೋನಣ್ಣ ಎಲ್ಲ ವಿಷಯ ತಿಳಿಸಿದ. ನಮ್ಮಲ್ಲಿ ಕೂಲಿ ಎನ್ನುವದು ಗೊತ್ತಿಲ್ಲದ ಪದ. ನಾನು ಶೇಂಗಾ ಕೊಡುತೀನಿ ನೀವು ಶ್ರಮಪಟ್ಟು ಎಣ್ಣೆ ತೆಗೆಯುತ್ತೀರಿ ನಾವಿಬ್ಬರೂ ನಮ್ಮ ನಮ್ಮ ಕಾಯಕ ಮಾಡುತ್ತೇವೆ ಅಷ್ಟೆ. ಅದಕ್ಕ ನಮ್ಮಿಬ್ಬರದೂ ಸಮಪಾಲು. ಹಾಗಾಗಿ ನಾನಿನ್ನೂ ನಿಮಗೆ ಸಾಮಾನು ಕೊಡಬೇಕು ಏನೇನು ಬೇಕು ಹೇಳಿ.

**ಗುರುವ:** ನಮಗೇನು ಬೇಕು? ನನ್ನಾಕೆ ಬಂದಿದ್ದರೆ ಹೇಳುತ್ತಿದ್ದಳು. ನನಗೇನು ಬೇಕು?

**ಅಂಗಡಿಯವ:** ಇಲ್ಲಿರುವ ಶರಣರೆಲ್ಲ ಕೇಳುವ ಪ್ರಶ್ನೆ. ನೀವು ಹೊಸದಾಗಿ ಕಲ್ಯಾಣಕ್ಕ ಬಂದೀರಿ. ನಿಮಗೇನು ಬೇಕು ಅನ್ನುವದನ್ನು ನಾ ಕೊಡತೀನಿ.

**ಗುರುವ:** ನೀವು ಕೊಡಬೇಕಾದ ಹಣದಷ್ಟೇ ಸಾಮಾನು ಕೊಡಿ.

**ಅಂಗಡಿಯವ:** ಸರಿ

ಎಣ್ಣಿ ಡಬ್ಬಿ ಒಳಗೆ ತೆಗೆದು ಕೊಂಡು ಹೋಗಿ ಮರಳಿ ಬರುವಾಗ ಸಾಮಾನುಗಳ ಚೀಲವನ್ನು ತಂದ.

**ಅಂಗಡಿಯವ:** ನಾನು ಇದುವರೆಗೂ ಇಷ್ಟು ಶುದ್ಧ ಪರಿಮಳಯುಕ್ತ ಎಣ್ಣೆ ನೋಡಿರಲಿಲ್ಲ. ಇದನ್ನ ದಾಸೋಹಕ್ಕ ಕಳಸತೀನಿ.

**ಗುರುವ:** ಕರಕಟ್ಟಲು ಧಾನ್ಯ ಬೇಕಿತ್ತು.

**ಅಂಗಡಿಯವ**: ಇಲ್ಲಿ ಅದರ ವ್ಯವಸ್ಥೆಯನ್ನೂ ಮಾಡಿರುವೆ. ಇಷ್ಟೆಲ್ಲ ಸಾಮಾನು ನಿಮಗೊಬ್ಬರಿಗೆ ಒಯ್ಯಲಾಗುವದಿಲ್ಲ ನಮ್ಮ ಹುಡುಗರು ಸಹಾಯ ಮಾಡುತ್ತಾರೆ.

**ಗುರುವ:** ಬೇಡ ಬೇಡ ನಾನು ಒಯ್ಯುತ್ತೇನೆ.

ಅವನು ಕೇಳಲಿಲ್ಲ. ಅವನ ಹಡುಗರು ಸಾಮಾನು ತಂದರು ನಾನು ಶೇಂಗಾ ಚೀಲ ಹೊತ್ತುಕೊಂಡು ಬಂದು ಬಂಡಿಯಲ್ಲಿ ಹಾಕಿದೆ. ಆ ಹುಡುಗರಿಗೆ ಶರಣು ಶರಣಾರ್ಥಿ ಹೇಳಿ ಹೊರಟೆ.
ತಲೆಯ ತುಂಬ ಪ್ರಶ್ನೆಗಳು. ಇವುಗಳಿಗೆ ಉತ್ತರ ಯಾರಿಂದ ಪಡೀಬೇಕು?
ಇಲ್ಲಿಯವರೆಗ ಆರಾಮ ಇದ್ದೆ. ತಲಿಯಾಗ ಯಾವ ಪ್ರಶ್ನೆಗಳು ಬರುತ್ತಿರಲಿಲ್ಲ ಆರಾಮಾಗಿದ್ದೆ. ಇದೆಲ್ಲ ಚನ್ನ ಪ್ರಾರಂಭ ಮಾಡಿದ್ದು. ಅಳಿಯರು ಅಂದರ ಹಿಂಗ ಸುಮ್ಮನಿರಾಕ ಬಿಡಲ್ಲ. ಇನ್ನೊಮ್ಮೆ ಬರಲಿ ನೋಡತೀನಿ.
"ನಡೆ ಚನ್ನ, ನುಡಿ ಚನ್ನ, ಚನ್ನ , ಚನ್ನ , ಆದರ ಈ ರೀತಿ ತಲ್ಯಾಗ ಹುಳ ಬಿಡುದೇನು ಚನ್ನ, ---" ಅವನ ಬರುವಿಕೆಗಾಗಿ ಮನ ಹಂಬಲಿಸುತ್ತಿತ್ತು.
ನನ್ನ ಎತ್ತುಗಳು ಮನೆಯ ಮುಂದೆ ಬಂಡಿ ನಿಲ್ಲಿಸಿದ್ದವು.
ಮನೆ ಒಳಗೆ ಬಂದಾಗ ಮೊನಣ್ಣ ಮತ್ತು ಶಂಕರಕ್ಕ ನನಗಾಗಿ ಕಾಯುತ್ತಿದ್ದರು.
ಮೊನಣ್ಣ ಸಾಮಾನು ಒಳಗೊಯ್ಯಲು ಸಹಾಯಮಾಡಿದ.
**ನನ್ನಾಕೆ**: ಏನ್ರಿ ಇದು ಇಷ್ಟು ಸಾಮಾನು ತಂದೀರಿ?
ನಾವ ದಾಸೋಹಕ್ಕ ನಮ್ಮ ಭಾಗದ ಎಣ್ಣಿ ಎಲ್ಲ ಕೊಟ್ಟೇವಿ. ಪಾಪ ಅಂಗಡಿಯವ ನಮಗೇನು ಕೊಡಬೇಕಾಗಿಲ್ಲ. ಸಾಲ ಮಾಡುದು ಒಳ್ಳೆಯದಲ್ಲ.
**ಮೋನಣ್ಣ:** ಇಲ್ಲಕ್ಕ ಈ ಊರಾಗ ಕಾಯಕ ಮಾಡಿದವರಿಗೆ ಹೆಚ್ಚಿನ ಪಾಲು ಯಾಕಂದರ ಶ್ರಮವಹಿಸಿ ದುಡಿಯುವದು ಮುಖ್ಯ.
ನೀವ ಹೊಸದಾಗಿ ಕಲ್ಯಾಣಕ್ಕ ಬಂದೀರಿ ಅಂತ ಅವರಿಗೆ ಗೊತ್ತೈತಿ ಅವರ ವಿಚಾರಮಾಡಿ ನಿಮಗೇನು ಬೇಕು ಆ ಎಲ್ಲ ಸಾಮಾನು ಕಳಿಸ್ಯಾರ ಹೆಚ್ಚು ಕಡಿಮೆ ಆದರ ಬೆಲೆ ಆಮೇಲೆ ಸರಿದೂಗಿಸಿಕೊಳ್ಳುತ್ತಾರೆ.
**ನನ್ನಾಕೆ:** ಈ ಊರು ಮತ್ತ ಜನ ವಿಚಿತ್ರ ನಮಗೇನು ಬೇಕು ಅಂತ ನಮಗ ಗೊತ್ತಿಲ್ಲ ಆದರ ಅವರು ನಮಗೇನು ಬೇಕು ಅಂತ ವಿಚಾರಮಾಡಿ ಕೊಡತಾರ.
**ಶಂಕರಕ್ಕ:** ಅದಕ ಈ ಊರಿಗೆ ಕಲ್ಯಾಣ ಅಂತಾರ.
**ಮೊನಣ್ಣ:** ಇಲ್ಲಿಯ ದಾಸೋಹ ಮಠಕ್ಕ ಒಬ್ಬರು ಬರತಾರಂತ ಅವರ ಹತ್ತಿರ ನಾಳೆಯಿಂದ ಮುಂಜಾನೆ ವಚನ ಪಾಠ ಮಾಡಿಸಿಕೊಳ್ಳಿ ಅಂತ ಅಪ್ಪಣ್ಣ ಹೇಳ್ಯಾರ ನಾವೂ ಬರತೀವಿ ನೀವ ಬರುತ್ತೀರೇನು?
**ಗುರುವ:** ಅದ ಕ್ಕಿಂತ ದೊಡ್ಡ ಕೆಲಸ ನಮಗೇನೈತಿ ವಚನ ಪಾಠ ಕೇಳುವ ಭಾಗ್ಯ ನಮಗ ಸಿಕ್ಕಿದ್ದು ನಮ್ಮ ಪುಣ್ಯ.
**ನನ್ನಾಕೆ:** ನಮಗೇನು ಬೇಕು ಅಂತ ನಮಗ ಗೊತ್ತಿಲ್ಲ ಆದರ ಅಪ್ಪಣ್ಣನವರು ನಮಗೇನು ಬೇಕು ಅಂತ ವಿಚಾರಮಾಡಿ ಕೊಡತಾರ. ಅಕ್ಕಾ ದಾಸೋಹಕ್ಕ ಶಿವಣ್ಣನವರು ಕಳಿಸಿದ ತುಪ್ಪ ನೆಲಕ್ಕ ಹಾಕಿ ಮಾಡಿದ ತಪ್ಪ ಅಣ್ಣ ಬಸವಣ್ಣ ತಿದ್ದಿದ. ಈಗ ನೆಲಕ್ಕ ಹಾಕಿದ ಬಾನ ಯಾವಾಗ ದಾಸೋಹಕ್ಕ ಸಬೇಕು ಅಂತ ಚಿಂತಿ ಆಗೈತಿ.

**ಶಂಕರಕ್ಕ:** ಅದಕ್ಯಾಕ ಚಿಂತಿ ಮಾಡತಿ. ಗಂಟ ಬಿಚ್ಚಿ ಜೋಳ ತೆಗಿ ನಾವಿಬ್ಬರೂ ಬೀಸೂನ ನಾಳೆ ಬಾನ ಮಾಡಿ ದಾಸೋಹಕ್ಕೆ ಕಳಿಸಿಬಿಡು.
ನನ್ನವಳ ಮುಖ ಹಿಗ್ಗಿ ಹೀರಿಕಾಯಿ ಆಯಿತು.

### ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರುವುಂಟೆ ?

ಗಮನಿಸಿ:.

ಇಂದಿನ ಶಿಕ್ಷಣ ವ್ಯವಸ್ಥೆಯನ್ನು ನೋಡಿದವರಿಗೆ ನಾನೇನು ಬರೆಯುತ್ತಿದ್ದೇನೆ ಅರ್ಥವಾಗುವದಿಲ್ಲ. ನಾಳೆಯ comments ಗಳಲ್ಲಿ ನನ್ನ ತೆಗಳುತ್ತೀರಿ ಎನ್ನುವದು ನನಗೆ ಗೊತ್ತಿದೆ. ನಾನು ವಿವರಿಸುತ್ತಿರುವದು 1955-60 ಅವಧಿಯಲ್ಲಿಯ ಅನುಭವನ್ನು. ಇನ್ನು 12 ನೇಯ ಶತಮಾನದಲ್ಲಿ ಈ ರೀತಿಯ ಘಟನೆ ನಡೆದಿರಬಹುದು ಎನ್ನುವದನನ್ನು ನೀವು ಒಪ್ಪಬಹುದು.

ಆಗ 7 ನೇಯ ಕ್ಲಾಸಿಗೆ ಬರುವ ವಿದ್ಯಾರ್ಥಿಗಳು ಕಟ್ಟುಮಸ್ತಾದ ಎತ್ತರದ ಹಳ್ಳಿಯ ಹುಡುಗರು.. (ಈಗಿನ ಪಿ ಯು ವಿದ್ಯಾರ್ಥಿಗಳ ಹಾಗೆ ಕಾಣುತ್ತಿದ್ದರು). ನಾನು ನಿಧಾನವಾಗಿ ಶಾಲೆಗೆ ಹೋದರಾಯಿತು ಎಂದು ಕಟ್ಟೆಯ ಮೇಲೆ ಕುಳಿತಿದ್ದರೆ ಶಾಲೆಗೆ ಹೊರಟ ಹುಡುಗರಲ್ಲೊಬ್ಬ ಒಲ್ಲೆ ಒಲ್ಲೆ ಅನ್ನುತ್ತಿದ್ದರೂ ಎಳೆದು ಹೆಗಲಮೇಲೆ ಕೂಡ್ರಿಸಿ ಕೊಂಡು ಶಾಲೆಗೆ ಒಯ್ಯುತ್ತಿದ್ದರು (ಕುರಿಮರಿಯ ಹಾಗೆ). ಗುರುಗಳಾದ ನಮ್ಮಪ್ಪನ ಪ್ರೀತಿಗಳಿಸುವದು ಅವರ ಉದ್ದೇಶ. ಆಗ ನಮ್ಮಪ್ಪನ ಕೈಯಲ್ಲಿಯ ಛಡಿಯೇಟು ಅವರ ಬೆನ್ನಮೇಲೆ "ಕತ್ತಿ ಎತ್ತಿಕೊಂಡು ಬರಬ್ಯಾಡ್ರಿ ಅಂತ ಎಷ್ಟು ಸಲ ಹೇಳಬೇಕು. ಇನ್ನೊಮ್ಮೆ ಹಾಗ ಮಾಡ್ಬ್ಯಾಡ್ರಿ". ಅವನು ನನ್ನನ್ನು ದಪ್ಪನೆ ಒಗೆದು ಮಾಯವಾಗುತ್ತಿದ್ದ. ಈಗ ನನ್ನ ಪಾಳಿ " ಕತ್ತಿಮರಿ ಆಗಿ ಪಾಪ ಹುಡುಗರ ಮ್ಯಾಲ ಮೆರವಣಗಿ ಮಾಡಿಕೊಂಡು ಬರತೀ ಬುದ್ಧಿ ಇಲ್ಲ" ಮಾತು ಅವರದಾದರೂ ಕೆಲಸ ಛಡಿಯದು. ಮರುದಿನ ಇನ್ನೊಬ್ಬ ಹುಡುಗನ ಸರದಿ. ಆದರೆ ಕತ್ತೆಮರಿ ಮಾತ್ರ ಒಂದೇ. ಇಲ್ಲಿ ನನಗೆ ಒಂದು ಲಾಭವಿತ್ತು. ಸಾಯಂಕಾಲ ಪಾಪ ನಿನ್ನ ಸುಮ್ಮನೆ ಬಡಿದುಬಿಟ್ಟೆ ಎಂದು ಲಿಂಬುಹುಳಿ ಪೆಪ್ಪರ ಮೆಂಟ ಕೊಡಿಸುತ್ತಿದ್ದರು. ನನಗೆ ಬಡಿದದ್ದು ಅವರಿಗೆ ನೆನೆಪಾಗುತ್ತಿದ್ದುದು ಕ್ಲಾಸ ಮುಗಿದಮೇಲೆಯೇ.

ನಾನು ಮೋನಣ್ಣ ಹೊರಗೆ ಬಂದೆವು. ನಾನು ಗಾಣ ಸ್ವಚ್ಛಮಾಡಿದೆ. ಶೇಂಗಾ ಹಾಕಿ ಗಾಣ ತಿರುಗಲಿಕ್ಕೆ ಆರಂಭಿಸಿದೆ. ನನ್ನೊಡನೆ ತಿರುಗುತ್ತ ಮೋನಣ್ಣ ಮಾತಿಗಾರಂಭಿಸಿದ
**ಮೋನಣ್ಣ:** ನಮಗೆ ಗುರುವಿನಿಂದ ವಚನ ಅಧ್ಯಯನ ಮಾಡಬೇಕು ಎನ್ನುವದು ಬಹಳ ದಿನದ ಆಶೆಯಾಗಿತ್ತು. ಅಪ್ಪಣ್ಣನವರು ಆ ಆಶೆಯನ್ನು ರವೇರಿಸುತ್ತಿದ್ದಾರೆ. ಆಕಳು ಕಾಣಿಸುತ್ತಿಲ್ಲ.
ಕೆಂಪರಾಜ ಮೇಯಿಸಲಿಕ್ಕೆ ತೊಗೊಂಡು ಹೋಗಿದ್ದಾನೆ.

**ಗುರುವ:** ಆಕಳು ಕೊಟ್ಟವರು ಬೊಂತಾದೇವಿಯವರ ಊರಿನವರು. ಅವರು ಒಬ್ಬ ಹುಡುಗನನ್ನು ಆಕಳ ಕಾಯಲಿಕ್ಕೆ ಬಿಟ್ಟಿದ್ದಾರೆ.
**ಮೋನಣ್ಣ:** ಶರಣೆ ಬೊಂತಾದೇವಿಯವರು ಸಿಕ್ಕಿದ್ದರಾ?
**ಗುರುವ:** ಈಗ ಅವರ ದರ್ಶನ ಮಾಡಿಕೊಂಡು ಬಂದೆ. ಅವರು ಧರ್ಮರಾಜನೊಡನೆ ಅವರ ಜಾಗಕ್ಕೆ ಹೊಗುತ್ತಾರೆ ಅಲ್ಲಿ ಅವರಿಗೆ ಕೌದಿ ಹೊಲೆಯುವದನ್ನು ಕಲಿಸುತ್ತಾರೆ. ಆಗ ಒಳಗಿನಿಂದ ಬಂದ ಶಂಕರಕ್ಕ
"ನಾವು ಕೌದಿ ಹೊಲೆಯುವದನ್ನು ಕಲಿಲಿಕ್ಕೆ ಹೋಗತೀವಿ."
**ಮೋನಣ್ಣ**: ಬಾಳ ಶಾಣ್ಯಾಕಿ ಅದಿ ಒಂದ ಕಾಲಕ್ಕ ಎರಡ ಕಡೆ ಇರಾಕಾಗುತ್ತೇನು. ನಾಳೆ ಮುಂಜಾನೆ ವಚನ ಕಲಿಸುವ ಗುರುಗಳ ಹತ್ತಿರ ಕಲಿಯಾಕ ಹೋಗುದೈತಿ.
**ಶಂಕರಕ್ಕ:** ನಡೀರಿ ಹೋಗೋಣ ನೀವ ಮಾಡಿದ ಗೊಂಬೆಗಳಿಗೆ ಬಣ್ಣ ಹಾಕಬೇಕು. ಗುರುವಿನ ಬೊಂಬೆಗೆ ಯಾವ ಬಣ್ಣ ಹಾಕಬೇಕು ಮತ್ತ ಶಿಷ್ಯನಗ ಯಾವ ಬಣ್ಣ ಹಾಕಬೇಕು ತಿಳಿವಲ್ಲದು.
**ಮೋನಣ್ಣ:** ಇವರಿವರಿಗೆ ಇಂತಹ ಬಣ್ಣ ಅಂತ ಇರುತ್ತೇನು. ನಿನಗ ತಿಳಿದ ಬಣ್ಣ ಹಾಕು. ಅಲ್ಲಿಗೆ ಬಂದ ನನ್ನಾಕೆ
"ಅಕ್ಕಾ ಸ್ವಲ್ಪ ಬಾನ ಕಟ್ಟೇನಿ ಹೋದ ಕೂಡಲೇ ಊಟ ಮಾಡಿ ಕೆಲಸ ಮಾಡರಿ." ಅವರಿಬ್ಬರೂ ಶರಣು ಹೇಳಿ ಹೋದರು.
**ಗುರುವ:** ನಾಳೆ ಕಲಿಸುವ ಗುರುಗಳು ಹೇಗಿರಬಹುದು?
ಮತ್ತ ತಲೆಯಲ್ಲಿ ಹುಟ್ಟಿದ ಪ್ರಶ್ನೆ. ನಾಳೆ ವಚನ ಕಲಿಲಾಕ ಹೋಗಬೇಕು ಎನ್ನುವದನ್ನು ನೆನಸಿಕೊಂಡರ ಆನಂದ ಆಗಲಾಕ ಹತ್ತೈತಿ. ಜೊತೆಗೆ ಅಂಜಿಕೆ ಆಗಲಾಕ ಹತ್ತೈತಿ. ನನ್ನ ಎದಿ ಸೀಳಿದರ ಎರಡಕ್ಷರ ಇಲ್ಲ. ಇನ್ನ ಒಂದೂ ವಚನ ಬರಲ್ಲ. ಹೆಸರ ಬಿಟ್ಟರ ಮತ್ತೇನು ಬರಿಯಾಕ ಬರೂದಿಲ್ಲ.
**ನನ್ನಾಕೆ:** ಅದು ಎಲ್ಲ ಗೊತ್ತಿದ್ದ ವಿಷಯ ಬಿಡ್ರಿ. ನಾನಂತೂ ನಿಮ್ಮ ಜೊತೆ ಪಟ್ಟ ಪಾಡು ಆ ಗುರುವಿಗೂ ಬಂತಲ್ಲಾ ಅಂತ ಚಿಂತಿ ಆಗೈತಿ.
**ಗುರುವ:** ಹೌದು ನಾನೂ ಅದನ್ನ ವಿಚಾರ ಮಾಡಲಾಕ ಹತ್ತೀನಿ. ನಿನ್ನವ್ವ ಏನ ಹೇಳ್ಯಾಳ ನೆನಪ ಐತಿ ಇಲ್ಲ. ನನ್ನ ಮಗಳನ ಮುದ್ದಾಗಿ ಬೆಳಸೀನಿ ಹೊಸ್ತಲ ಬಿಟ್ಟು ಹೊರಗೆ ಕಳಿಸಿಲ್ಲ. ನೀನ ಜಾಣ, ಅಕೀಗ ಏನು ಗೊತ್ತಾಗಲ್ಲ ಹೊಂದಿಸಿಕೊಂಡು ಹೋಗು.
**ನನ್ನಾಕೆ:** ನನಗ ಅದಕ ಭಯ ಆಗಾಕ ಹತ್ತೈತಿ ನಾವಿಬ್ಬರೂ ದೀಡ ಪಂಡಿತ ಅದೀವಿ. ನಾಳೆ ಗುರುಗಳು ಏನ ಕೇಳಿದರೂ ಹೇಳಲಾಕ ಬರಲ್ಲ.
**ಗುರುವ:** ಆದದ್ದಾಗಲಿ ಇಲ್ಲಿ ಕಾಯುವ ಅಣ್ಣ ಬಸವಣ್ಣ ಅಲ್ಲೂ ಕಾಯತಾನ. ಚಿಂತಿ ಯಾಕ ಮಾಡಬೇಕು.
ಅಂತೂ ಆ ದಿನ ಗುರು ಹೇಗಿರುತ್ತಾನೆ? ಅವರಿಗೆ ಹೇಗೆ ನಮಸ್ಕಾರ ಮಾಡಬೇಕು? ಇತ್ಯಾದಿ, ಇತ್ಯಾದಿ ವಿಚಾರ ಮಾಡುತ್ತಲೇ ದಿನ ಕಳೆಯಿತು. ರಾತ್ರಿಯಲ್ಲಿ ಅದೇ ವಿಚಾರ .

ಅಂತೂ ಬೇಗ ಎಚ್ಚರವಾಯಿತು ಜಳಕ ಮಾಡಿ ತಯಾರಾಗಿ ಹೊರಟೇಬಿಟ್ಟೆವು.
ಅಕೆಯ ಸಂಭ್ರಮ ಹೇಳತೀರದ್ದು ಎಣ್ಣೆ, ಬತ್ತಿ ಮತ್ತ ಪಣತಿ ತೆಗೆದು ಕೊಂಡಳು.
ಬೇಡವೆಂದರೂ ಗುರುಗಳಿಗಾಗಿ ಸಿಹಿ ತಯಾರಿಸಿ ತೆಗೆದುಕೊಂಡಳು.
ನಾವು ಹೋದಾಗ ಇನ್ನೂ ಯಾರೂ ಬಂದಿರಲಿಲ್ಲ. ಐದಾರು ಪಣತಿ ಹಚ್ಚಿ, ಕಟ್ಟೆ ಕಸ ಹುಡಗಿ ಅಲ್ಲಿದ್ದ ಹಾಸಿಗೆ ಹಾಸಿ ಆತಂಕ ದಿಂದ ಬರುವವರ ದಾರಿ ಕಾಯತೊಡಗಿದೆವು.
ಮೋನಣ್ಣ ಮತ್ತು ಶಂಕರಕ್ಕ ಬಂದ ಮೇಲೆ ಆತಂಕ ಕಡಿಮೆಯಾಯಿತು. ಅವರ ಜೊತೆ ಬಂದ ಇನ್ನಿಬ್ಬರನ್ನು ಪರಿಚಯಿಸಿದ ಮೋನಣ್ಣ.
ಆಷ್ಟರಲ್ಲಿ ಖಟ್ ಖಟ್ ಬಡಿಗೆ ನೆಲಕ್ಕೆ ಬಡಿದ ಶಬ್ದವಾಯಿತು. ಬಹಳಮಾಡಿ ವಯಸ್ಸಾದ ಗುರುಗಳು ಕೈಗೋಲು ಹಿಡಿದು ಬರುತ್ತಿರಬಹುದು ಎನಿಸಿ ಎಲ್ಲರೂ ನಿಂತು ಅವರ ದಾರಿ ಕಾಯಹತ್ತಿದೆವು.
ಅಲ್ಲಿಗೆ ಆಗಮಿಸಿದ ಕಟ್ಟುಮಸ್ತಾದ ಕುರುಚಲು ತಲೆಗೂದಲ, ಬಿಳಿ ಗಡ್ಡಮೀಸೆ, ಕಟ್ಟುಮಸ್ತಾದ ನಮ್ಮಪ್ಪನ ವಯಸ್ಸಿನ ಒಬ್ಬರು ಅಲ್ಲಿಗೆ ಬಂದರು. ಕಚ್ಚೆಪಂಜೆ, ಬರಿಮೈ, ಹೆಗಲಮೇಲೆ ಕಂಬಳಿ ಮತ್ತು ಎಡಕೈಯಲ್ಲಿ ಒಂದು ನೀಳವಾದ ಕಟ್ಟಿಗೆ. ಕಟ್ಟಿಗೆ ನೆಲಕ್ಕೆ ಅಪ್ಪಳಿಸಿ ಗಂಭಿರವಾಗಿ ನಡೆಯುವ ಅವರ ರೀವಿ ನೋಡಿಯೇ ನನ್ನ ದೇಹವೆಲ್ಲ ನಡುಗಿ ಮೈ ಜುಮ್ಮೆನಿಸಿತು. (ಅವರಿಗೆ ಬಿಳಿ ಗಡ್ಡ ಮೀಸೆ ಇರದಿದ್ದರೆ ಆ ಕತ್ತಲಲ್ಲಿ ಅವರು ಕಾಣಿಸುತ್ತಿರಲಿಲ್ಲ)
ಅವರು ಸನಿಹ ಬಂದಾಗ ಧೈರ್ಯ ತೆಗೆದು ಕೊಂಡು “ಶರಣು ಶರಣಾರ್ಥಿ” ಎಂದೆ. ಆಗ ಅವರ ಬಲಗೈಯ ಅಂಗೈ ನನ್ನ ಎಡ ಕಪಾಳದ ಮೆಲೆ ಛಟಾರ ಎಂದು ಅಪ್ಪಳಿಸಿತ್ತು. ಸಿಡಿಲು ಹೊಡೆದ ಅನುಭವ ಎಲ್ಲಡೆ ಬೆಳಕು ಒಂದು ಕ್ಷಣ. ಆಗ ಗುಡುಗಿನಂತ ಅವರ ಮಾತು ಕೇಳಿಸಿತು
“ಮಳ್ಳ ಹುಡುಗ ಗಾಣದಾಗ ಶೇಂಗಾ ಹಾಕದ ಎತ್ತಿಗೆ ಹೊಡದು ಹೊಡದು ಗಾಣ ತಿರುಗಿಸಿ ಎಣ್ಣಿ ತೆಗಿಲಾಕ ಹೊರಟೀ, ಮೊದಲ ಎತ್ತು ನಿಲ್ಲಿಸಿ ಶೇಂಗಾ ಹಾಕು” ಎಂದು ಹೇಳಿ ಮೋನಣ್ಣನ ಹತ್ತಿರ ನಡೆದರು.
ಮೋನಣ್ಣ ಕೈಮುಗಿದು “ಶರಣು ಶರಣಾರ್ಥಿ” ಎಂದ ಅವನ ಮಾತಿನಲ್ಲಿ ನಡುಕವಿತ್ತು.
ಈ ಸಲ ಅವರ ಕೈ ಮೋನಣ್ಣನ ತಲೆ ಕುಕ್ಕಿತ್ತು
“ನೀವು ಹಿಂಗ ಕುಟಕಿ ಕುಟಕಿ ಗೊಂಬಿ ಮಾಡತೀರಿ ಅಲ್ಲ, ಹಂಗ ಮಗ್ನಲಿದ್ದವರಿಗೆ ಕುಕ್ಕಿ ಕುಕ್ಕಿ ತಿದ್ದಲಾಕ ಬರಲ್ಲ?”
ಈಗ ಅಲ್ಲಿದ್ದ ಶ್ರಿಶೈಲಪ್ಪನ ಸರದಿ.
“ಶರಣು ಶರಣಾರ್ಥಿ” ಎನ್ನುವ ಶ್ರಿಶೈಲಪ್ಪನ ಕಿವಿ ಅವ್ರ ಕೈಯಲ್ಲಿ.
“ನನ್ನ ಕುರಿ ಹಿಂಡು ಮುನ್ನಡೆಸುವ ಕುರಿಗಿರುವಷ್ಟು ಬುದ್ದಿ ನಿನಗಿಲ್ಲ. ಸಿಕ್ಕ ವೇಳೆ ಹಾಳ ಮಾಡತಿ ದಡ್ಡ”

ಅವರು ಅವನ ಕಿವಿ ಬಿಟ್ಟು ಸ್ವಲ್ಪ ಹಿಂದೆ ಸರಿದು ಅವರ ಬಗಲಲ್ಲಿದ್ದ ಜೋಳಿಗೆಯಿಂದ ವಚನದ ಕಟ್ಟು ತೆಗೆದರು. ನಮಗೆ ಒಂದೊಂದು ಎಲೆ ಕೊಟ್ಟು 'ನಾಳಿಗೆ ಬರುವಾಗ ನಿಮಗೆ ಕೊಟ್ಟ ವಚನ ನೋಡಲಾರದ ಬರಿಲಾಕ ಬರಬೇಕು. ಅರ್ಥ ನನಗ ಆಗಿಲ್ಲ ಅದರ ಬಗ್ಗೆ ಚಿಂತಿ ಬ್ಯಾಡ. ಎಲ್ಲಾ ಹೆಸರು ಗೊತ್ತಿಲ್ಲದ ಎಲ್ಲಾ ನಮೂನಿ ಎಲಿ ತಿಂದ ಕುರಿ ಒಂದ ನಮೂನಿ ಹಿಕ್ಕೆ ಹಾಕವ ಕುರಿ ಹಿಂಡ ಹೊಡ ಕೊಂಡು ಹೊಂಟೇನಿ. "

"ನಾಳೆ ಬರತೇನಿ' ಎಂದವರೇ ಬಂದ ಹಾಗೇ ಬಿರ ಬಿರನೇ ಹೊರಟುಬಿಟ್ಟರು ಕಟ್ಟಿಗೆ ಘಟ್ಟಿಸುತ್ತ.




**ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯಾ**

ಗಮನಿಸಿ:

ಅನುಭವಗಳು ತೀರ ವೈಯಕ್ತಿಕ. ಆದರೂ ಅದನ್ನು ಹಂಚಿಕೊಂಡಾಗ ಮನಸ್ಸಿಗೆ ಹಿತವೆನಿಸುತ್ತದೆ. ಅದನ್ನು ಓದಿದವರಿಗೆ ಅಥವಾ ಕೇಳಿದವರಿಗೆ ನನ್ನ ಅನುಭವ ದೊಡ್ಡದೆನಿಸದಿದ್ದರೂ ನನ್ನ ಮನಕ್ಕೆ ಸಮಾಧಾನವಾಗುವದು ನಿಜ. ನನ್ನ ಮನದ ಮೇಲೆ ಅಪಾರ ಪ್ರಭಾವ ಬೀರಿದವರಲ್ಲಿ ಪ್ರೊ ತಲ್ಲೂರ ಅವರು ಒಬ್ಬರು. 1965 ರಲ್ಲಿ ನಾನು B Sc I ಸೇರಿದ ಮೇಲೆ ರಸಾಯನಶಾಸ್ತ್ರ ಪ್ರಯೋಗ ಮಾಡಲು ಕಲಿಸಿದ ಗುರುಗಳು. ಕಾಲೇಜು ಹಾಸ್ಟೆಲ ರೂಮಿನಲ್ಲಿ ರವಿವಾರ ಹಾಯಾಗಿ ನಿದ್ದೆಮಾಡುತ್ತಿದ್ದೆ. ಗಾಢನಿದ್ರೆಯಲ್ಲಿದ್ದ ನನಗೆ " ಏಳು ಇಷ್ಟೊತ್ತಾಯಿತು ನೋಡು" ಎನ್ನುವ ದನಿ ಕೇಳಿಸಿತು. ನಮ್ಮಪ್ಪ ಇಲ್ಲಿಗೂ ಬಂದನಾ ಎನಿಸಿ ಗಾಬರಿಯಾಗಿ ಕಣ್ಣು ತೆರೆದು ಎದ್ದು ಕುಳಿತೆ. ನನಗೆ ನಂಬಲಾಗಲಿಲ್ಲ ಎದುರಿಗೆ ಇದ್ದವರು ಪ್ರೊ ತಲ್ಲೂರರವರು. ಎದ್ದು ತಯಾರಾಗಿ ಅರ್ಧತಾಸಿನೊಳಗೆ ಪ್ರಯೋಗಾಲಯದಲ್ಲಿರು ಎಂದು ಹೇಳಿ ಹೋದರು. ಆಗಲೇ ಅವರು ಎರಡು ಪ್ರಯೋಗಮಾಡಿಸಿದ್ದರು.

ಅವರು ಹೋದಮೇಲೆ ನನ್ನ ಗೆಳೆಯ ಗೊಣಗಿದ ರವಿವಾರ ಮಲಗಲೂ ಬಿಡಲ್ಲ 16 ಪಾವಡರ analysis ಬದಲು 60 ಪಾವಡರ analysis ಮಾಡಿಸುತ್ತಾರೆ. ಇವರನ್ನ ಪರೀಕ್ಷಕರನ್ನಾಗಿ ಕಳಿಸಿದರೆ ನಾಲ್ಕಾರು ದಿನ ಮೊದಲೇ ಬುತ್ತಿ ಕಟ್ಟಿ ಕೊಂಡು ಹೋಗಿ ಹುಡುಗರಿಗೆ ಕಲಿಸಿ ಪರೀಕ್ಷೆ ತಗೊಂಡು ಬರತಾರ. ನನಗೆ ಎಲ್ಲವೂ ಹೊಸತು. ಪಟ್ಟಣದಲ್ಲಿ ಒಂಟಿತನ ಅನುಭವಿಸುತ್ತಿದ್ದ ನನಗೆ ನನ್ನ ಬಗ್ಗೆ ಕಾಳಜಿಮಡುವವರು ಇದ್ದಾರಲ್ಲ ಎನಿಸಿ ಸಮಾಧಾನವಾಯಿತು. ಹಿಂದಿನ ದಿನ ಅವರು ಕೊಟ್ಟ instructions ನೆನಪಿಸಿ ಕೊಂಡೆ..

1. ಮೊದಲು ನಿಮ್ಮ journal ತೆರೆದು ಟೇಬಲ ಮೇಲಿಡಬೇಕು. ನಿವೇನು ಮಾದುತ್ತಿದ್ದೀರಿ ಬರೆಯಬೇಕು.
2. ಪ್ರಯೋಗ ಮಾಡಬೇಕು, ಬಂದ result ಆಗಿಂದಾಗ್ಗೆ ಬರೆಯಬೇಕು.
3. Journal ಹೊಲಸಾಗುವ ಭಯ ಬೇಡ. ಹೊಲಸಾದಷ್ಟು ಹೆಚ್ಚು ಅಂಕ.
4. ಮನೆಗೆ ಹೋಗುವಾಗ ಸಹಿ ಹಾಕಿಸಿಕೊಂಡು ಹೋಗಬೇಕು. ಅವತ್ತಿನ ಪ್ರಯೋಗ ಅವತ್ತೇ ಮುಗಿಯಬೇಕು.

ಒಂದು ದಿನ ಪ್ರಯೋಗಮಾಡುತ್ತಿದ್ದೆ. ಅವರು ಹೇಳಿದಂತೆ ಬರೆದು ಪ್ರಯೋಗ ಮಾಡಿ white ppt ಎಂದು ಬರೆಯಹತ್ತಿದ್ದೆ.

ಅವರು ಕೇಳಿದರು ಏನು ಬರೆದಿರುವೆ. ಸರ್ "boil and decant we get white ppt" ಎಂದು ಬರೆದಿರುವೆ. ಸರಿ

boil and decant ಎಂದರೇನು? ತಬ್ಬಿಬ್ಬಾದೆ ಸಾವರಿಸಿ ಕೊಂಡು ಹೇಳಿದೆ "ಕುದಿಸಿ ಸೋಸಿದರೆ ಬಿಳಿ ppt ಬರುತ್ತದೆ"..

ಎಂದು ತೊದಲಿದೆ. ಅವರು ಕಿವಿ ಹಿಡಿದು ಕೊಂಡು ಕುಳಿತುಕೊಳ್ಳುತ್ತ ಹೇಳು " boil and decant ಅಂದರೆ ಕಾಸುವದು ಮತ್ತು ಬಸಿಯುವದು". ನಾನು ಹಾಗೆ ಮಾಡಿದೆ. ಎಲ್ಲರ ಮುಂದೆ ಹೀಗೆ ಹೇಳಿ ಬಾ ಎಂದರು. ಎಲ್ಲರ ಮುಂದೆ ಹಾಗೆ ಹೇಳಿ ಬಂದಮೇಲೆ ಅವರ ಹೇಳಿದ ಮಾತು "ಅರ್ಥ ಮಾಡಿಕೊಳ್ಳದಿದ್ದರೆ ಅಡ್ಡಿಯಿಲ್ಲ ಆದರೆ ತಪ್ಪು ಅರ್ಥಮಾಡಿಕೊಳ್ಳುವದು ಅಪರಾಧ".

ಆಗ ಅವರ ಮೇಲೆ ಕ್ಷಣಿಕ ಸಿಟ್ಟು ಬಂದದ್ದೂ ನಿಜ ಅದರೆ ಇಂದೂ ಬರೆಯಲು ಕುಳಿತರೆ ಸಾಕು ಅವರ ಮಾತು ನೆನಪಾಗುತ್ತದೆ. ಅವರನ್ನು ಸ್ಮರಿಸಿ ನಮಸ್ಕರಿಸಿ ಬರೆಯಲು ಆರಂಭಿಸುವೆ. ಆದರೆ ತಪ್ಪು ತಿದ್ದುವರಿಲ್ಲ ಎನಿಸುತ್ತದೆ. ಈ ಅನುಭವಗಳೇ ಕನಸಿನ ಮೂಲವಾಗಿರಬಹುದು.

ಏಳ್ರಿ ಎನ್ನುವ ಕರೆ ಕೇಳಿ ಕಣ್ಣು ತೆರೆದೆ ಮೋನಣ್ಣನ ಭುಜವೊರಗಿದ ನನಗೆ ನನ್ನಾಕೆ ನೀರು ಸಿಂಪಡಿಸುತ್ತಿದ್ದಳು. ಪೂರ್ಣ ಎಚ್ಚರವಾಗಿ ಕಣ್ಣು ತೆರೆದು ಕೇಳಿದೆ "ಗುರುಗಳೆಲ್ಲಿ".
**ನನ್ನಾಕೆ:** ನಿಮ್ಮ ಕೈಯಲ್ಲಿ ಈ ವಚನ ಕೊಟ್ಟು ಹೋದರು.
**ಮೋನಣ್ಣ:** ನಿಮ್ಮ ಕೈಯಲ್ಲಿರುವ ವಚನ ಓದಿ ಬರೆದು ತೋರಿಸಬೇಕು ನಾಳೆ.
**ಗುರುವ:** ಅದು ಹೇಗೆ ಸಾಧ್ಯ ನನಗ ಸರಿಯಾಗಿ ನನ್ನ ಹೆಸರ ಬರೆಯಾಕ ಬರಲ್ಲ. (ಕೆನ್ನೆ ಉರಿಯುವ ಅನುಭವ). ಆಗಲಿ ನಾಳಿತನಕ ಪ್ರಯತ್ನ ಮಾಡುತ್ತೇನೆ.
**ಶ್ರೀಶೈಲಪ್ಪ:** ಹೊರಗ ಬೆಳಕಾಗ್ಯೆತಿ ಉಸುಕಿನಾಗ ಅಕ್ಷರ ಅಭ್ಯಾಸ ಮಾಡುವ ನಡೆಯಿರಿ.
ಎಲ್ಲರೂ ಉಸುಕಿನಲ್ಲಿ ಬಂದು ಕುಳಿತುಕೊಂಡೆವು.
**ಮೋನಣ್ಣ:** "ಬಯಲು ಬಯಲು ನಾ ಬಯಲು ನೀ ಬಯಲು" ಎಂದು ಕೂಗಾಡುತ್ತಿದ್ದಿರಿ ಯಾಕೆ?
**ಗುರುವ:** ನನಗೇನಾಯಿತು ಗೊತ್ತಾಗಲಿಲ್ಲ. ನನಗೇನು ನೆನಪಿಲ್ಲ.
**ಶ್ರೀಶೈಲಪ್ಪ:** ನಿಮ್ಮ ಕೈಯಲ್ಲಿಯ ವಚನ ಯಾವುದು ನೋಡೋಣ ಎಲೆ ಕೊಡ್ರಿ. (ನನ್ನ ಕೈಯೆಲ್ಲಿಯ ಎಲೆಯಲ್ಲಿರುವ ವಚನ ಓದತೊಡಗಿದ)

**ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು**

**ಬಯಲು ಬಯಲಾಗಿ ಬಯಲಾಯಿತ್ತಯ್ಯಾ.**

**ಬಯಲ ಜೀವನ ಬಯಲ ಭಾವನೆ,**

**ಬಯಲು ಬಯಲಾಗಿ ಬಯಲಾಯಿತ್ತಯ್ಯಾ.**

**ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು**

**ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.** / 1164

-- ಅಲ್ಲಮಪ್ರಭುದೇವ

**ಮೋನಣ್ಣ:** ಗುರುವನ ಮನಸ್ಸಿಗೆ ಅರ್ಥ ಹೇಳಿ ಗುರುಗಳು ಹೋಗ್ಯಾರ ಅದಕ್ಕ ಅವ ಬಯಲು ಬಯಲು ಎಂದು ಬಡಬಡಿಸಿದ. ಮನದಿಂದ ಮನಕ್ಕೆ ನೇರವಾಗಿ ಅರ್ಥ ಹೇಳಬಹುದೇ?
ಅಲ್ಲಿಗೆ ಯೋಗಾಭ್ಯಾಸ ಮುಗಿಸಿಕೊಂಡು ಬಂದ ಅಪ್ಪಣ್ಣನವರು
**ಅಪ್ಪಣ್ಣ:** ಗುರುಗಳು ಹೇಳಿದ ವಿಚಾರಗಳನ್ನು ಮನನ ಮಾಡಿಕೊಳ್ಳುತ್ತಿದ್ದೀರಾ?
**ಮೋನಣ್ಣ:** ಅವರು ಏನೂ ಹೇಳಲಿಲ್ಲ ಅಪ್ಪಣ್ಣನವರೇ. ಶಿಕ್ಷೆ ಕೊಟ್ಟು ಹೋಗಿಬಿಟ್ಟರು.
**ಅಪ್ಪಣ್ಣ:** ಶಿಕ್ಷೆ ಯಲ್ಲಿ ಶಿಕ್ಷಣ ಅಡಗಿದೆಯಲ್ಲ.
**ಶ್ರೀಶೈಲಪ್ಪ:** ಗುರುಗಳು ಯಾವುದೋ ಮಹತ್ವದ ವಿಷಯ ಹೇಳಿ ಹೋಗಿದ್ದಾರೆ ಅಂತ ಅನಿಸುತ್ತ , ತತ್ವ ಯಾವುದು ಗೊತ್ತಾಗುತ್ತಿಲ್ಲ.

**ಮೋನಣ್ಣ**: ಗುರುವನ ಕಪಾಳ ಮೋಕ್ಷವಾಯಿತು, ನನ್ನ ತಲೆ ಕುಟುಕಿದ್ದಾಯಿತು ಮತ್ತ ಶ್ರೀಶೈಲಪ್ಪನ ಕಿವಿ ತಿರುಚಿದ್ದಾಯಿತು. ಇನ್ನು ವಚನದ ಅರ್ಥ ನನಗ ಗೊತ್ತಿಲ್ಲ ಅಂತ ಹೇಳಿ ಹೋದದ್ದಾಯಿತು.
**ಅಪ್ಪಣ್ಣ:** ಈ ಘಟನೆಗಳನ್ನು ಇನ್ನೊಮ್ಮೆ ಹೇಳು ಶ್ರೀಶೈಲಪ್ಪ.
**ಶ್ರೀಶೈಲಪ್ಪ:** ನನ್ನ ಕಿವಿ ಹಿಂಡಿದರು, ಮೋನಣ್ಣನ ತಲೆ ಕುಟಕಿದರು ಮತ್ತೆ ಗುರುವನ ಕೆನ್ನೆಗೆ ಬಾರಿಸಿ
ತಲೆಯಲ್ಲಿ ಮಿಂಚುಹೊಡೆಯುವಂತೆ ಮಾಡಿ ಅವನು ಬಯಲು ಬಯಲು ಎನ್ನುವ ಹಾಗೆ
ಮಾಡಿದರು. ನಡೆದ ಘಟನೆಗಳನ್ನು ವಿವರವಾಗಿ ವಿವರಿಸಿದ.
**ಅಪ್ಪಣ್ಣ:** ಎಲ್ಲ ಸರಿಯಾಗಿದೆಯಲ್ಲ. ಇದಕ್ಕಿಂತ ದೊಡ್ಡ ಪಾಠವೇನಿದೆ ಮತ್ತು ತತ್ವವೇನಿದೆ.
ನಾವು ಆರು ಜನ ಒಟ್ಟಾಗಿ ಹೇಳಿದೆವು " ಯಾವ ಅರ್ಥವಿದೆ? ಯಾವ ತತ್ವವಿದೆ?
**ಅಪ್ಪಣ್ಣ:** ಕಿವಿಯಲ್ಲಿ ಕೇಳಿ, ತಲೆಯಲ್ಲಿ ವಿಚಾರಿಸಿ ಬಯಲಲ್ಲಿ ಬಯಲಾಗಬೇಕು.
ನಾವೆಲ್ಲರೂ ಒಮ್ಮೆಲೆ ಹೇಳಿದೆವು ಚಕಿತರಾಗಿ " ಹೌದಾ ಇಷ್ಟೆಲ್ಲ ಅರ್ಥವಿದೆಯಾ?
**ಅಪ್ಪಣ್ಣ:** ಹೌದು ಅವರೊಬ್ಬ ಮಹಾಜ್ಞಾನಿ. ಅವರು ಏನನ್ನೂ ಹೇಳದೇ ಎಲ್ಲವನ್ನು ಕಲಿಸುತ್ತಾರೆ.
ಅದನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ನಾವು ಬೆಳೆಸಿಕೊಳ್ಳಬೇಕು.
**ಶ್ರೀಶೈಲಪ್ಪ:** "ಹೆಸರು ಗೊತ್ತಿಲ್ಲದ ಎಲ್ಲಾ ನಮೂನಿ ಎಲಿ ತಿಂದ ಕುರಿ ಒಂದೇ ನಮೂನಿ ಹಿಕ್ಕೆ ಹಾಕತಾವ" ಅಂತ ಹೇಳಿ ಹೋದರು ನನಗೇನು ಅರ್ಥ ಆಗಲಿಲ್ಲ. ದಯಮಾಡಿ ಅದರ ಅರ್ಥ ಹೇಳಿಕೊಡಿ.
**ಅಪ್ಪಣ್ಣ:** ಕಲ್ಯಾಣದಲ್ಲಿದ್ದ ಶರಣರೆಲ್ಲ ವಿವಿಧ ರೀತಿಯ ವಚನಗಳನ್ನು ರಚನೆ ಮಾಡಿ ನಿಮಗೆ
ಕೊಟ್ಟಿದ್ದಾರೆ. ಅವುಗಳನ್ನೆಲ್ಲ ಓದಿ ಅರಗಿಸಿಕೊಳ್ಳಿ, ಆಮೇಲೆ ನಿಮ್ಮ ಅನುಭವಗಳನ್ನು ವಚನಗಳ ರೂಪದಲ್ಲಿ ಬರೆದು ಮುಂದಿನವರಿಗೆ ದಾರಿ ತೋರಿಸಿ. ಕುರಿಹಿಕ್ಕಿ ಎಲ್ಲ ಬೆಳೆಗಳಿಗೆ ಒಳ್ಳೆಯ ಗೊಬ್ಬರ.
ಅವರು ಸ್ಪಷ್ಟವಾಗಿ ಹೇಳಿದ್ದಾರೆ "ಏನೂ ಇಲ್ಲದೆ ವಿಚಾರ ಮಾಡುವ ಗುರವನಿಗೆ ಮೋನಣ್ಣ ಅಭ್ಯಾಸ ಮಾಡಸಲಿ ಮತ್ತ ಶ್ರೀಶೈಲಪ್ಪ ಹೇಳಿದ ಹಾಗೆ ಉಳಿದವರು ಕೇಳಲಿ". ಗುರು ನಿನಗೇನಾಯಿತು ಹೇಳಲೇ ಇಲ್ಲ.
**ಗುರುವ:** ಗುರುಗಳಿಂದ ಕಪಾಳ ಮೋಕ್ಷವಾದಕೋಡಲೇ ಮಿಂಚು ಹೊಡೆದ ಅನುಭವ. ಪ್ರಕಾಶಮಾನವಾದ ಬೆಳಕು ಎಲ್ಲೆಡೆ. ಬೆಳಕು ಬಿಟ್ಟರೆ ಏನೇನು ಇಲ್ಲ. ದಿನಾಲೂ ಕಣ್ಣುಮುಚ್ಚಿ ಕುಳಿತರೆ ಮಂದವಾದ ಬೆಳದಿಂಗಳ ಬೆಳಕು ಕಾಣುತ್ತಿದ್ದೆ. ಆದರೆ ಇಂದು ನನಗೆ ಎಲ್ಲವೂ ಆ ಪ್ರಕಾಶಮಾನವಾದ ಬೆಳಕಿನಲ್ಲಿ ಕರಗಿದ ಅನುಭವ.

ಎಲ್ಲ ಕರಗಿದ ಅಲ್ಲೇನಿದೆ ಬಯಲು. ನನಗೆ ಗಾಬರಿಯಾಯಿತು ಕೂಗಿದೆ ನಾನು ಬಯಲು ನೀನು ಬಯಲು ಎಲ್ಲ ಬಯಲು.
ಆಗ ಎಲ್ಲ ಕಡೆ ಕತ್ತಲು ಆವರಿಸಿ ಕರಿ ಕತ್ತಲಲ್ಲಿ ಕಂಡದ್ದು ಬೆಳಗುವ ಎರಡು ಕಣ್ಣುಗಳು ಮಾತ್ರ.
ಅದು ಬಿಳಿ ಗಡ್ಡ ಮೀಸೆಯಿಲ್ಲದ ಗುರು ಎನಿಸಿತೊಮ್ಮೆ ಅಲ್ಲಲ್ಲ ಅದು ಕನ್ನಡಿಯಲ್ಲಿ ಕಾಣುವ ನಾನು ಎನಿಸಿತು ಇನ್ನೊಮ್ಮೆ. ಆಮೇಲೆ ಅವೆರಡು ಕಣ್ಣುಗಳು ಒಂದಾದದ್ದು ಗೋಚರ . ಗುರುವಿನಲ್ಲಿ ನಾನು ಒಂದಾದನೇ ಅಥವಾ ನನ್ನಲ್ಲಿ ಗುರು ಒಂದಾದನೋ ಗೊತ್ತಗಲೊಲ್ಲದು. ಆದರೆ ಎರಡು ಒಂದಾದ ಅನುಭವ ಅನನ್ಯ.
ಗುಡುಗು ಮಿಂಚು ಆಮೇಲೆ ಶುರುವಾಯಿತು ಮಳೆ. ನೀರು ಮುಖಕ್ಕ ಬಿದ್ದಾಗ ಎಚ್ಚರವಾಯಿತು.

**ಅಪ್ಪಣ್ಣ:**

ಎರಡು ನೇತ್ರ ಒಂದಾದ ಭಾಳನೇತ್ರವು ಇಷ್ಟಲಿಂಗದ ಗೋಳಕಕ್ಕೆ ಕೂಟವು.
ಒಂದು ಲಿಂಗ ಎರಡಾದುದೆ ಇಷ್ಟ ಪ್ರಾಣಲಿಂಗವು.
ಆ ಪ್ರಾಣಲಿಂಗದ ಹಸ್ತಂಗಳಿಗೆರಡು ನೇತ್ರಂಗಳೆ ಕುಚಂಗಳು,ಆ ಕುಚಂಗಳು ಹಿಡಿಯಲಿಕೆ,ಈ ಕುಚವೆರಡು ಗುಹ್ಯ ಒಂದು ಕೂಡಿ ತ್ರಿಕೂಟವೆಂಬ ಹೆಸರಾಯಿತ್ತು. ಆ ತ್ರಿಕೂಟವೆಂಬ ಶಾಂಭವಪುರದ ಮಧ್ಯದಲ್ಲಿ ಜ್ಯೋತಿರ್ಲಿಂಗವೇಕವಾದ ಬಳಿಕ, ತನುತ್ರಯದ ವಿಕಾರವ ಹೊದ್ದಲಾಗದು. ವಿಕಾರವ ಹೊದ್ದಿದರೆ ಮೀಸಲೋಗರವ ಶುನಿಮುಟ್ಟಿದಂತಾಯಿತ್ತು ಆ ಜೀವಾತ್ಮಪದಾರ್ಥವು ಲಿಂಗಕ್ಕೆ ಸಲ್ಲದು, ಅವರ ತೆರನೆಂತಾಯಿತ್ತೆಂದಡೆ ;
ಜನ್ಮದಾರಿದ್ರನು ನಿಕ್ಷೇಪವಂ ಕಂಡು ಹೋಗಲಾಗಿ ದಿಗಿಲುಬಿದ್ದು ಸತ್ತಂತಾಯಿತ್ತು.
ಅಂಥ ನಿರ್ಭಾಗ್ಯ ದುರ್ಮರಣನ ಕಂಡು ಹೇಸಿ, ತಮ್ಮ ತನುತ್ರಯವಿಕಾರಮಂ ಪೊರ್ದದೆ, ಲಿಂಗ ನಿಕ್ಷೇಪದಲ್ಲಿ ನಿರಂಗವಾಗಿ, ಮನ್ಮಥರತಿಯೆಂಬ ನರಕವ ಬೀಳದೆ, ಅಕ್ಷಯಸುಖಿಗಳಾದರು ನೋಡಾ ಗುಹೇಶ್ವರಲಿಂಗದಲ್ಲಿ. / 475

– ಅಲ್ಲಮಪ್ರಭು

ಸರಿ. ಅಭ್ಯಾಸ ಮುಂದುವರಿಸಿರಿ ಎಂದು ಹೇಳಿ ಹೊರಟುಬಿಟ್ಟರು.

1. ಆದಿಯನರುಹಿದ, ಅನಾದಿಯ ತೋರಿದ, ಇಹವ ಕೆಡಿಸಿದ, ಪರವ ನಿಲಿಸಿದ, ಘನವ ತೋರಿದ. ಮನವ ಸರಿಸವಿಟ್ಟು ಅನುವ ತೋರಿ ಆಯತವ ಮಾಡಿ ತನುವ ಮರೆಸಿ ಮಹವನರುಪಿದ, ಹಿಂದಣ ಪೂರ್ವಾಶ್ರಯವ ಹಿಂದುಮಾಡಿ ತೋರಿ, ಮುಂದಣ ಗತಿಯ ಸಂದೇಹವ ಬಿಡಿಸಿದ.

**ಕೂಡಲಸಂಗಮದೇವರಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.** / 198---
ಅಣ್ಣ ಬಸವಣ್ಣ.

2. **ಆದ್ಯರ ವಚನವ ನೋಡಿ, ಓದಿ ಹೇಳಿದಲ್ಲಿ ಫಲವೇನಿ ಭೋ? ತನ್ನಂತೆ ವಚನವಿಲ್ಲ, ವಚನದಂತೆ ತಾನಿಲ್ಲ.**
**ನುಡಿಯಲ್ಲಿ ಅದ್ವೈತವ ನುಡಿದು, ನಡೆಯಲ್ಲಿ ದಮರಾದಡೆ,ಶಿವಶರಣರು ಮೆಚ್ಚುವರೆ?**
**ಇದು ಕಾರಣ, ಅವರ ನಡೆನುಡಿ ಶುದ್ಧವಿಲ್ಲವಾಗಿ, ಅವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವಿಭೂತಿ ರುದ್ರಾಕ್ಷಿ ಪಂಚಮ ಪಂಚಾಕ್ಷರವಿಲ್ಲ. ಇಂತಿವಿಲ್ಲದೆ ಬರಿಯಮಾತಿನಲ್ಲಿ ಬೊಮ್ಮವ ನುಡಿವ ಬ್ರಹ್ಮೇತಿಕಾರರ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನ.** / 94
--- ಮೋಳಿಗೆ ಮಾರಯ್ಯ

## ಆದ್ಯರ ವಚನವ ನೋಡಿ, ಓದಿ ಹೇಳಿದಲ್ಲಿ ಫಲವೇನಿ ಭೋ?

ಅಪ್ಪಣ್ಣ ಹೋದಮೇಲೆ ನಮ್ಮಲ್ಲಿ ವಚನ ಓದಬೇಕು ಎನ್ನುವ ಛಲ ಮೂಡಿತ್ತು. ಗುರುಗಳಬಗ್ಗೆ ಅಪಾರ ವಿಶ್ವಾಸ ಮತ್ತು ಭಕ್ತಿ ಮೂಡಿತ್ತು.
ಮೋನಣ್ಣ ಮತ್ತು ಶ್ರೀಶೈಲಪ್ಪ ನನಗೆ ಅಕ್ಷರಾಭ್ಯಾಸ ಮಾಡಿಸಿದರು. ಬೆಳಕಾಯಿತ್ತು. ನಮ್ಮ ನಮ್ಮ ಕಾಯಕದ ನೆನಪಾಯಿತು. ನಾಳೆ ಇಲ್ಲಿ ಮತ್ತೆ ಕೂಡಿ ಅಭ್ಯಾಸ ಮಾಡುವಾ ಎಂದೆ.
**ಶ್ರೀಶೈಲಪ್ಪ:** ನಾಳೆಯವರೆಗೆ ಕಾಯಬೇಕೇಕೆ. ಹೇಗೂ ನನ್ನ ಮತ್ತು ನನ್ನಾಕೆ ಜಯಶ್ರೀ ಕಾಯಕ ವಚನಗಳ ಪ್ರತಿ ಮಾಡುವದು, ಮೋನಣ್ಣನ ಕಾಯಕ ಗೊಂಬೆ ಮಾಡುವದು. ಅದನ್ನು ಎಲ್ಲಾದರೂ ಮಾಡಬಹುದು. ನಿನ್ನ ಗಾಣ ಎತ್ತಿಕೊಂಡು ಬರಲಾಗುವದಿಲ್ಲ ಅದಕ್ಕಾಗಿ ನಾವೆಲ್ಲ ನಿಮ್ಮ ಮನೆಗೆ ಬರುತೀವಿ. ನಿನ್ನ ಗಾಣಕ್ಕ ಶೇಂಗಾ ಹಾಕತೀವಿ. ನಾಳೆಯೊಳಗೆ ಗುರುವನ ಅಕ್ಷರಾಭ್ಯಾಸ ಪೂರ್ಣವಾಗಬೇಕು ಎನ್ನುವದು ಗುರುಗಳ ಆಜ್ಞೆ.
**ಮೊನಣ್ಣ:** ನನಗ ಇದು ಹೊಳೆಯಲಿಲ್ಲ ನೋಡು. ಅಲ್ಲಿರುವ ಸೊಂಪಾದ ಗಿಡದ ನೆರಳಿನಾಗ ಅಧ್ಯಯನ ಸೊಗಸಾಗಿರುತ್ತ. ಇನ್ನ ಗೆಳತಿಯರಿಗೆ ಹರಟೆ ಹೊಡೆಯಲು ಅನುಕೂಲ ಆಗುತ್ತ
**ಶಂಕರಕ್ಕ;** ನಾವು ನಿಮಗಿಂತ ಚನ್ನಾಗಿ ಅಭ್ಯಾಸ ಮಾಡತೀವಿ.
**ಗುರುವ:** ಏನ ಒಂದ ದಿನದಾಗ ಓದು ಬರಹ ಬರತೈತಿ?.
**ಶ್ರಿಶೈಲಪ್ಪ:** ಹೌದ ಕನ್ನಡಭಾಷೆಗಿರುವ ತಾಕತ್ತು ಅದು. ಕನ್ನಡ ಭಾಷೆ ಸರಳ, ಮೂಲಾಕ್ಷರ ಬಂದರ ಸಾಕು, ಶಬ್ದ ರಚಿಸುವದು ಮಕ್ಕಳ ಆಟ ಇದ್ದಾಂಗ, ವ್ಯಾಕರಣ ಬಾಳ ಸುಲಭ ನೀರ ಕುಡ ದಂಗ.
**ಗುರುವ:** ನಾ ಕಷ್ಟಪಟ್ಟು ಕಲಿಲಾಕ ತಯಾರದೀನಿ.
ಹೆಣ್ಣುಮಕ್ಕಳು ಊಟದ ವಿಚಾರದ ಬಗ್ಗೆ ಸಮಾಲೋಚಿಸಿ. ಅದಷ್ಟು ಬೇಗ ಮರಳಿ ಬರುವದಾಗಿ ಹೇಳಿ ಹೋದರು.

ಮನೆಗೆ ಬಂದಾಗ ನನ್ನಾಕೆ ಉತ್ಸಾಹದ ಚಿಲುಮೆಯಾಗಿದ್ದಳು. ಬಂಡಿಯಲ್ಲಿ ಅವಳಿಗೆ ಕೊಟ್ಟ ವಚನ ಆಕೆಗೆ ಬಾಯಿಪಾಠ ಆಗಿತ್ತು. ಅಡಿಗೆ ಮಾಡುವ ಮತ್ತು ವಚನ ಗುಣಗುಣಿಸುವ ಕೆಲಸ ನಡೆದಿತ್ತು.
ನಾನು ಗಾಣ ಸ್ವಚ್ಛಮಾಡಿ ಶೇಂಗಾ ಹಾಕಿದೆ. "ಶೇಂಗಾ ಹಾಕದ ಗಾಣ ತಿರಗಸ್ತಿ" ಎನ್ನುವ ಗುರುಗಳ ಮಾತು ನೆನಸಿಕೊಂಡು. ಆಕೆಯನ್ನು ಕೂಗಿ ಕರೆದು "ಅಲ್ಲ ನಾನು ಶೇಂಗಾ ಎಣ್ಣಿ ತೆಗೆಯುವ ಕಾಯಕ ಮಾಡತೀನಿ ಎನ್ನುವದು ಹ್ಯಾಂಗ ಗುರುಗಳಿಗೆ ಗೊತ್ತಾಯಿತು?. ಆಕೆಗೆ ನಗು ತಡೆಯಲಾಗಲಿಲ್ಲ. ನಗು ನಿಂತ ಮೇಲೆ ಹೇಳಿದಳು "ಕಣ್ಣು ಮೂಗು ಇರುವ ಎಲ್ಲರೂ ನಿಮ್ಮ ಕಾಯಕ ಗುರುತಿಸುತ್ತಾರೆ. ನೀವ ಹಾಕಿ ಕೊಂಡ ಅರಿವೆ ನೋಡಿದ ಕೂಡಲೇ ಗೊತ್ತಾಗುತ್ತ ಗಾಣಿಗ ಎಂದು, ಮತ್ತು ಶೇಂಗಾ ಎಣ್ಣಿ ಸುವಾಸನೆ ದೂರದಿಂದ ಗೊತ್ತಾಗುತ್ತದೆ. ಆದರ ನನಗ ಈ ಸುವಾಸನೆ ಬಾಳ ಇಷ್ಟ. ಅದಕ ನೀವು ನನಗ ಇಷ್ಟ" ಆಗ ಅವಳ ನಗು ನನಗೆ ಹಿತವೆನಿಸಿತು.
ಆಕಳ ಮೇಯಿಸಿಕೊಂಡು ಆಕಳುಗಳನ್ನು ಕೆಂಪರಾಜ ತಂದು ಕಟ್ಟಿದ.
**ನನ್ನಾಕೆ:** ಕೆಂಪರಾಜ ಮಜ್ಜಿಗೆ ಕೊಡತೀನಿ ಕುಡಿ ಬಾ. ಅಲ್ಲ ಆಕಳಿಗ್ಯಾಕ ಕೆಂಪ ಬಣ್ಣ ಹಚ್ಚಿ?.
**ಕೆಂಪರಾಜ:** ಅಕ್ಕ ತಪ್ಪಾತ. ನನಗ ಕಲಿಸಿದ ಕನ್ನಡ ಅಕ್ಷರ ಕಡ್ಡಿಯಿಂದ ಕೆಂಪ ಮಣ್ಣು ನೀರಾಗ ಕಲಸಿ
ಬರೆದೀನಿ. ಆಕಳ ಕಾಯುವದು ಮತ್ತು ಬರೆಯುವದು ಆಯಿತು. ಈಗ ತೊಳಿತೀನಿ.
**ನನ್ನಾಕೆ:** ನೀ ಏನ ತಪ್ಪ ಮಾಡಿಲ್ಲ. ನನಗ ಸಹಾಯ ಮಾಡಿ. ನೋಡುನ ನಡಿ ಏನ ಬರದಿ.
ನಾನು ಕುತೂಹಲದಿಂದ ಅವರ ಜೊತೆ ಕೂಡಿದೆ.
**ನನ್ನಾಕೆ:** ಏನ ಬರದಿ ಮತ್ತ ಅದನ್ನ ಹ್ಯಾಂಗ ಓದತೀ ತೋರಿಸು.
**ಕೆಂಪರಾಜ:** ಅಕ್ಕ ಈ ಆಕಳಮ್ಯಾಗ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ ಸ್ವರಗಳನ್ನ ಬರೆದೀನಿ.
ಇನ್ನೊಂದರ ಮೇಲೆ
1. ಕ, ಖ, ಗ, ಘ, ಙ.
2. ಚ, ಛ, ಜ, ಝ, ಞ.
3. ಟ, ಠ, ಡ, ಢ, ಣ.
4. ತ, ಥ, ದ, ಧ, ನ.
5. ಪ, ಫ, ಬ, ಭ, ಮ.
ಮತ್ತು ಕರದ ಮ್ಯಾಗ ಯ ರ ಲ ವ ಶ ಷ ಸ ಹ ಳ ಮತ್ತ 0 ಬರದೀನಿ ಎನ್ನುವದನ್ನು ಅಕ್ಷರ ತೋರಿಸಿ ಓದಿ ಹೇಳಿದ. ಆ ಕಡೆ ಬ್ಯಾರೆ ಅಕ್ಷರ ಬರೆದೀನಿ.
**ನನ್ನಾಕೆ:** ಈಗ ಇಷ್ಟ ಸಾಕು ಬಾಳ, ಶ್ಯಾಣ್ಯಾ ಅದೀ. ನೀ ಬರದದ್ದು ಬಾಳ ಅನುಕೂಲ ಆತು ನೋಡ. ನಿಮ್ಮ ಮಾವ ಗಾಣ ಹೊಡಿತಾನ ನೀ ಅವನ ಮಗ್ಗಲ

ಅಕಳ ಜೊತೆ ತಿರುಗು ಮತ್ತು ಈ ಎಲ್ಲ ಅಕ್ಷರ ಕಲಿಸು. ನಾ ಮಜ್ಜಿಗೆಕೊಟ್ಟು ಅಡಗಿ ಮಾಡತೀನಿ.
**ಕೆಂಪರಾಜ:** ಅಕ್ಕ ನೀ ಅಡಗಿ ಮಾಡಿ ಮುಗಿಸುವದೊಳಗ ಮಾವ ಎಲ್ಲ ಅಕ್ಷರ ಕಲತಿರತಾರ ನೋಡ.
**ನನ್ನಾಕೆ:** ನಾ ಬಂದಮೇಲೆ ನನಗೂ ಕಲಿಸು. ಅಣ್ಣ ಬಸವಣ್ಣ ನಿನ್ನ ಕಳಿಸ್ಯಾನ.
ಆಕೆ ಅಡಗೆ ಮುಗಿಸಿ ಹೊರಗ ಬರುವಷ್ಟರಲ್ಲಿ "ಅಕ್ಕಾ ನೋಡು ಗುರುಮಾಮಾ ಎಲ್ಲ ಅಕ್ಷರ ಕಲತಾನ" ಎನ್ನುವ ವಿವರ ತಿಳಿಸಿದ ಕೆಂಪರಾಜ.
ಎಣ್ಣೆ ತೆಗೆದು ಒಳಗಿಟ್ಟು ಎತ್ತುಗಳಿಗೆ ನೀರು ಮತ್ತು ಮೇವು ಹಾಕಿ ನೆರಳಲ್ಲಿ ಬಂದು ಕುಳಿತು ಎಲ್ಲ ಅಕ್ಷರಗಳನ್ನು ಉಸುಕಿನಲ್ಲಿ ಬರೆದು ತೋರಿಸಿದಾಗ ಕೆಂಪರಾಜ ಕುಣಿದು ಕುಪ್ಪಳಿಸಿದ ಅ ಕ್ಷಣ ನಾನೆಂದೂ ಮರೆಯುವದಿಲ್ಲ.
ಅಲ್ಲಿಗೆ ಬಂದ ಮೋನಣ್ಣ ಮತ್ತು ಶ್ರೀಶೈಲ ದಂಪತಿ ಬಂಡಿಯಿಳಿದು ಬಂದು ಅವರೂ ನೆರಳಿನಲ್ಲಿ ಕುಳಿತುಕೊಂಡರು. ಅವರ ಮುಂದೆಯೂ ಅಕ್ಷರ ಬರೆದು ತೋರಿಸಿದೆ.
"ಬಯಲ" ಬರೆಯಲು ನನಗೆ ಬರಾಕ ಹತ್ಯೆತಿ ಎಂದೆ. ಮೋನಣ್ಣ ನಾನು ನಿಮಗ ಬಳ್ಳಿ ಕ, ಕಾ, ಕಿ,--- ಹ್ಯಾಂಗ ಬರಿಬೇಕು ಕಲಸತೀನಿ ಎಂದರೆ ಶ್ರೀಶೈಲಪ್ಪ ನಾ ವಾಕ್ಯ ರಚಿಸುವದನ್ನ ಕಲಸಿತೀನಿ ಎಂದ.
ಊಸಕಿನ ಬದಲಾಗಿ ಎಲಿಮ್ಯಾಗ ಬರೀರಿ ಎಂದು ತಾಳೆ ಎಲೆಗಳ ಕಟ್ಟು, ವಿವಿಧ ಬಣ್ಣಗಳು ಮತ್ತು ಬರೆಯಲು ಗಲಗಲಿ ತಾ ತಂದ ಚೀಲದಿಂದ ಹೊರತೆಗೆದ ಶ್ರೀಶೈಲಪ್ಪ,
ಕೆಂಪರಾಜ ಸಹಿತ ಎಲ್ಲರಿಗೂ ಕೊಟ್ಟ. ನಾ ಪ್ರತಿ ಎಲಿ ಮ್ಯಾಗ ಒಂದ ಅಕ್ಷರ ಬರೆದೀನಿ, ನೀವು ಅದರಂತೆ ಎಲಿತುಂಬ ಬರೀಬೇಕು.
ಮೊದಲಿನ ಎಲೆಯಲ್ಲಿ "ಅ" ಸುಂದರವಾಗಿ ಕಲಾತ್ಮಕವಾಗಿ ಬರೆದ. ಕನ್ನಡ ಅಕ್ಷರಗಳು ಎಷ್ಟು ಸುಂದರ! ಎನ್ನುವ ಮಾತು ಬಂದಿತು ನನಗರಿವಿಲ್ಲದೆ.
**ನನ್ನಾಕೆ:** ಈ ಎಲಿ ಎಷ್ಟ ಚಂದ ಐತಿ. ಎಷ್ಟ ಚಂದ ಬರೆದಾರ. ಈ ತರದ ಎಲಿ ನಾನೆಲ್ಲಿಯೂ ನೋಡಿಲ್ಲ.
**ಜಯಶ್ರೀ:** ಇವಕ ತಾಳೆಗರಿ ಅಂತಾರ. ತಾಳಿಗಿಡ ನಿಮ್ಮ ಕಡೆ ಬೆಳೆಯುವದಿಲ್ಲ. ಕೆಲವು ಕಡೆ ಬೆಳೆಯುತ್ತದೆ ಅಲ್ಲಿಂದ ಎಲಿ ತರಸ್ತಾರ. ಈ ಗಿಡದ ಬೀಜದಿಂದ ತಾಳೆ ಎಣ್ಣಿ ತಯಾರಿಸ್ತಾರ. ಆ ಎಣ್ಣಿ ಬಾಳ ಚಲೋ ಇರತೈತಿ.
**ಗುರುವ:** ತಾಳಿಗಿಡ ಇಲ್ಲೇ ಯಾಕ ಬೆಳೆಸಬಾರದು. ಅದರಿಂದ ಎಣ್ಣಿ ತೆಗೆದರಾಯ್ತು.
**ಶ್ರೀಶೈಲಪ್ಪ:** ನನ್ನ ಹತ್ತಿರ ಬೀಜ ಅದಾವು. ಅವನ್ನ ಇಲ್ಲೇ ಒಂದುಕಡೆ ಬಿತ್ತೂನು.
**ಮೋನಪ್ಪ:** ಅದರಾಗ ಅನೇಕ ತರದ ತಳಿ ಅದಾವ. ಕೆಲವು ತೆಂಗಿನಮರದಂಗ ದೊಡ್ಡ ಗಿಡ ಆಗತಾವ. ಅದರ ಎಲಿ ನವಿಲಗರಿಯಂಗ ಕಾಣತಾವ.
**ಜಯಶ್ರೀ:** ಎಲಿ ತಂದು ಬೇಕಾದ ಆಕಾರದಲ್ಲಿ ಕತ್ತರಿಸಿ ನೆರಳಿನಲ್ಲಿ ಒಣಗಿಸತಾರ. ಕುದಿಯುವ ನೀರಾಗ ಒಣಗಿದ ಎಲಿ ಹಾಕಿ ಸ್ವಲ್ಪ ಕುದುಸ್ತಾರ ಅದಕ ಅರಿಷಣ

ಮತ್ತು ಕೆಲವು ವಸ್ತು ಹಾಕತಾರ. ಆಮೇಲೆ ಹೊರತಗದು ಒಣಗಿಸಿದ ಮ್ಯಾಗ ಆ ಎಲಿ ಬರಿಲಾಕ ತಯಾರಾಗತೈತಿ.
**ಶಂಕರಕ್ಕ:** ನಾವ ಕರಬೇವು ಹಾಕಿ ಸಾರ ಮಾಡಿದಂಗ ಮಾಡತಾರ ಅಂದಂಗಾಯಿತು.
ಶ್ರಿಶೈಲಪ್ಪ ಎಲ್ಲರಿಗೂ ಒಂದು ಎಲಿ ಮತ್ತು ಡಬ್ಬಣದಂತಹ ಒಂದು ವಸ್ತು ಕೊಟ್ಟು "ಅ" ಬರೆಯಲು ಹೇಳಿದ.
ಮೋನಣ್ಣ ಮತ್ತು ಶಂಕರಕ್ಕ ಬರೆದರು. ನಾನು ಮತ್ತು ಆಕೆ ಬರೆಯುವಾಗ ಅಲ್ಲಲ್ಲಿ ರಂಧ್ರಗಳಾಗಿದ್ದವು ಅಷ್ಟೇ. ಕೈಗೆ ಚುಚ್ಚಲ್ಲಿಲ್ಲ.
**ನನ್ನಾಕೆ:** ಶಂಕರಕ್ಕ ನೀವು ಬರೆದದ್ದು ಕಾಣಿಸುತ್ತಿಲ್ಲ.
**ಶಂಕರಕ್ಕ:** ನಾನು ಬರೆದದ್ದು ಬಣ್ಣಹಾಕಿದ ಮೇಲೆ ಕಾಣುತ್ತದೆ. ದಿನಾಲೂ ನಾವು ಕಟ್ಟಿಗೆಯಲ್ಲಿ ಚಿತ್ರ ತೆಗೆದು ಬಣ್ಣ ಹಾಕುತ್ತೇವೆ. ಇಲ್ಲಿ ಎಲೆಯ ಮೇಲೆ ಗೀಚಿ ಬಣ್ಣಹಾಕುತ್ತಾರೆ. ನಮ್ಮ ಕೆಲಸಕ್ಕಿಂತ ಇದು ಬಹಳ ಕಷ್ಟದ ಕೆಲಸ. ಕೋಟಿ ಕೋಟಿ ವಚನಗಳನ್ನು ರಚಿಸಿದ ಶರಣರಿಗೆ ಅವುಗಳ ಪ್ರತಿ ಮಾಡಿದವರಿಗೆ ನನ್ನ ನಮನಗಳು. ಇದಕ್ಕಾಗಿ ಉಪಯೋಗಿಸುವ ಬಣ್ಣಗಳನ್ನು ಎಲೆ ಮತ್ತು ಹೂಗಳನ್ನು ಉಪಯೋಗಿಸಿ ತಯಾರಿಸುತ್ತಾರೆ. ಬಹಳ ಪ್ರಯತ್ನಪಟ್ಟು "ಅ" ಬರೆದು ಕರಿ ಬಣ್ಣ ಹಚ್ಚಿ ಬಟ್ಟೆಯಿಂದ ಒರೆಸಿ ಒಣಗಿಸಿದಾಗ ಆ ಎಲೆಯ ಮೇಲೆ ನಿಚ್ಚಳವಾಗಿ "ಅ" ಕಾಣಿಸಹತ್ತಿತು.
**ನನ್ನಾಕೆ:** ವರ್ಷ ಎರಡು ವರ್ಷಗಳಲ್ಲಿ ಎಲೆಗಳು ಒಣಗಿ ಪುಡಿಯಾಗುತ್ತವೆ ಅಲ್ಲ.
**ಶ್ರೀಶೈಲಪ್ಪ:** ಇವು ನೂರಾರು ವರ್ಷದವರೆಗೂ ಹಾಳಾಗುವದಿಲ್ಲ.
ಮನಸ್ಸು ಮಾಡಿದರೆ ಎಲ್ಲರೂ ನನಗಿಂತ ಚನ್ನಾಗಿ ಬರೆಯಬಹುದು ಎನ್ನುವ ಮಾತು ಶ್ರೀಶೈಲಪ್ಪನದು.
ಎಲ್ಲರೂ ಎಲ್ಲ ಅಕ್ಷರ ಬರೆದು ಮುಗಿಸಿದ ಮೇಲೆ ಮೋನಣ್ಣ ಕ, ಕಾ, ಕಿ, ಕೀ --- ಇತ್ಯಾದಿ ಬರೆಯುವದನ್ನು ಕಲಿಸಿದ. ಅಷ್ಟರಲ್ಲಿ ಸಾಯಂಕಾಲವಾಗಿತ್ತು.
ಶಂಕರಮ್ಮ ನಾವೆಲ್ಲ ಊಟ ಮಾಡಲು ಮರೆತಿದ್ದೇವೆ. ನಡೆಯಿರಿ ಊಟಮಾಡೋಣ ಎಂದರು. ಸರಿ ನಾನು ಸ್ವಲ್ಪ ತಡದು ಬರುತ್ತೇನೆ ಎಂದೆ.
ಮನದಲ್ಲಿದ್ದ ವಚನವನ್ನು ನೆನಪಿಗೆ ತಂದುಕೊಂಡು ತದೇಕಚಿತ್ತದಿಂದ ಬರೆದೆ.
ಎಲ್ಲರೂ ಕೈಕಾಲು ಮುಖ ತೊಳೆದು ಊಟಕ್ಕೆ ಮನೆಯೊಳಗೆ ಹೋಗಿ ಕುಳಿತುಕೊಂಡಿದ್ದರು ನನಗಾಗಿ ಕಾಯುತ್ತ.
ನಾನು ಶ್ರೀಶೈಲಪ್ಪನ ಕೈಯಲ್ಲಿ ನಾನು ಬರೆದ ಎಲೆ ಕೊಟ್ಟೆ. ಅವನು ಎದ್ದುನಿಂತು ನನ್ನನ್ನು ಅಪ್ಪಿಕೊಂಡು ಹೇಳಿದ "ಗುರುಗಳು ಕೊಟ್ಟ ವಚನ ಸರಿಯಾಗಿ ಬರೆದಿ".
ನಾಳೆ ಮಾಡಬೇಕಾದ ಕೆಲಸ ಇಂದೇ ಮಾಡಿ ಮುಗಿಸಿರುವೆ.
ಮೋನಣ್ಣ ಹೇಳಿದ

> **ನಾಳೆ ಬಪ್ಪುದು ನಮಗಿಂದೆ ಬರಲಿ,**
>
> **ಇಂದು ಬಪ್ಪುದು ನಮಗೀಗಲೆ ಬರಲಿ,**

ಇದಕಾರಂಜುವರು, ಇದಕಾರಳುಕುವರು

`ಜಾತಸ್ಯ ಮರಣಂ ಧ್ರುವಂ' ಎಂದುದಾಗಿ

ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವಡೆ

ಹರಿಬ್ರಹ್ಮಾದಿಗಳಿಗಳವಲ್ಲ. / 809 – ಅಣ್ಣ ಬಸವಣ್ಣ

**ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು, ಒರೆಯಾವಿನ ಬೆನ್ನ ಹರಿಯಲದೇಕಯ್ಯಾ**

ಎಲ್ಲರೂ ಊಟ ಮುಗಿಸಿ ಮತ್ತೆ ಅಧ್ಯಯನಕ್ಕೆ ತಯಾರಾದೆವು. ಓದುತ್ತ ಓದುತ್ತ ಬೆಳಗಾಗಹತ್ತಿದ್ದು ಗೊತ್ತಾಗಲಿಲ್ಲ.
ಇಲ್ಲಿಯೇ ಎಲ್ಲರೂ ಜಳಕಮಾಡಿ ದಾಸೋಹಮಠಕ್ಕೆ ಹೋಗಲು ತಯಾರಾದೆವು.

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,

ಒರೆಯಾವಿನ ಬೆನ್ನ ಹರಿಯಲದೇಕಯ್ಯಾ

ಲಜ್ಜೆಗೆಡಲೇಕೆ ನಾಣುಗೆಡಲೇಕೆ

ಕೂಡಲಸಂಗಮದೇವನುಳ್ಳನ್ನಕ್ಕ

ಬಿಜ್ಜಳನ ಭಂಡಾರವೆನಗೇಕಯ್ಯಾ. / 300--ಅಣ್ಣಬಸವಣ್ಣ

ನಾವೆಲ್ಲ ದಾಸೋಹಮಠಕ್ಕೆ ಹೋಗಲು ತಯಾರಾಗಿ ಧ್ಯಾನ ಮಾಡಲು ಕುಳಿತೆವು. ಸ್ವಲ್ಪಸಮಯದ ನಂತರ ಬ್ಯಾ ಬ್ಯಾ ಎನ್ನುವ ಕುರಿ ಹಿಂಡಿನ ಸದ್ದು ಜೊತೆಗೆ ಖಟ ಖಟ ಎನ್ನುವ ಊರಕೋಲಿನ ಶಬ್ದ ಕೇಳಿ ಬೆಚ್ಚಿ ಕಣ್ಣು ತೆಗೆದೆ. ಎದುರಿಗೆ ಗುರುಗಳು ನನ್ನ ಮನೆಯಲ್ಲಿ ಗುರುಗಳು ನಂಬಲಾಗಲಿಲ್ಲ. ಅವರ ಕಾಲಿಗೆ ಬಿದ್ದು ನಮಸ್ಕರಿಸಿ ಶರಣು ಶರಣೆಂದೆ. ಅವರು ಮಮತೆಯಿಂದ ನನ್ನ ಭುಜ ಹಿಡಿದೆತ್ತಿ ತಲೆ ಸವರಿ ಆಶೀರ್ವದಿಸಿದರು. ಆ ಅಪ್ಪುಗೆಯಲ್ಲಿ ಹಿತವಿತ್ತು ತಲೆಸವರಿದಾಗ ಮನಕ್ಕೆ ಮುದವೆನಿಸಿತು. ನಾವೆಲ್ಲ ಕೈಮುಗಿದು ನಿಂತೆವು ಏನು ಮಾತನಾಡಬೇಕು ತೋರಲಿಲ್ಲ. ನಾನು ನನಗರಿವಿಲ್ಲದೆ ಹಾಡತೊಡಗಿದೆ

**"ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ**

**ಬಯಲಾಯಿತ್ತಯ್ಯಾ.**

**ಬಯಲ ಜೀವನ ಬಯಲ ಭಾವನೆ ಬಯಲು ಬಯಲಾಗಿ ಬಯಲಾಯಿತ್ತಯ್ಯಾ.**

**ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ."**

ಗುರುಗಳು ತಲೆಯಾಡಿಸಿ

**"ಬಯಲು ಬಯಲಾಗುವ ಸಮಯ ಬಂದಿದೆ. ನಾನು ನನ್ನ ಕುರಿ ಹೊಡಕೊಂಡು ದೂರಹೋಗಬೆಕು ಇಲ್ಲದಿದ್ದರ ಪರಷುಕಟ್ಟ್ಯಾಗ ನನ್ನ ಕುರಿ**

**ಕಡದು ಹಂಚತಾರ. ಕುರಿ ಹಾಕಿದ ಹಿಕ್ಕಿ ಕೂಡಿಸಿ ಚೀಲ ತುಂಬಿ ಕೂಡಿಸಿ ಜೋಪಾನಮಾಡರಿ. ಮುಂದ ಅದ ಬೆಳಿ ಬೆಳಿಲಾಕ ಬೇಕಾಗತೈತಿ**"
ಎಂದು ಹೇಳಿ ನಮ್ಮನ್ನು ಆಶಿರ್ವಾದಿಸಿ ತಿರುಗಿ ಹೊರಟೇ ಬಿಟ್ಟರು.
ಅವರ ಕಣ್ಣಂಚಿನಲ್ಲಿ ಒಂದು ಮುತ್ತಿನ ಹನಿಯಾಗಿ ಕಣ್ಣೀರ ಹನಿ ಕಂಡ ಅನುಭವ ನನಗೆ. ಖಟ್ ಖಟ್ ಶಬ್ದ ಬ್ಯಾ ಬ್ಯಾ ದನಿ ದೂರವಾಗುತ್ತ ಹೋಗಿ ನಿಶಬ್ದಆವರಿಸಿತು. ನಾವೆಲ್ಲ ದಿಕ್ಕುತೋಚದೆ ಏನಾಯಿತು, ಗುರುಗಳು ಏನು ಹೇಳಿದರು ಮತ್ತೆ ಯಾಕೆ ಕಲ್ಯಾಣ ಬಿಟ್ಟು ಹೋದರು ತಿಳಿಯದೆ ಸ್ತಬ್ದವಾಗಿ ನಿಂತಿದ್ದೆವು ಬಹಳ ಹೊತ್ತು.
**ಶ್ರೀಶೈಲಪ್ಪ:** ಗುರುಗಳು ಏನು ಹೇಳಿದರು ಎನ್ನುವದು ನನಗೂ ಗೊತ್ತಾಗಲಿಲ್ಲ. ಗುರುವಿನ ಮಾರ್ಗದರ್ಶನ ಅರ್ಧಕ್ಕೆ ನಿಂತಿತು ಏನು ಮಾಡಲಿಕ್ಕಾಗುವದಿಲ್ಲ. ಗುರುಗಳು ತೋರಿದ ದಾರಿಯಲ್ಲಿ ನಮ್ಮ ಅಧ್ಯಯನ ಮುಂದುವರೆಸೋಣ.
**ಮೊನಣ್ಣ:** ನಾವು ಅಪ್ಪಣ್ಣನವರ ಹತ್ತಿರ ಹೋಗಿ ನಡೆದ ಘಟನೆ ತಿಳಿಸೋಣ ಅವರು ದಾರಿ ತೋರಿಸ್ತಾರ.
**ಶ್ರೀಶೈಲಪ್ಪ**: ನಾವು ಶಾಂತರಸರಿಗೆ ವಚನದ ಕಟ್ಟು ಕೊಟ್ಟು ವಿಷಯ ತಿಳಸ್ತೀವಿ. ನಾವೀಗ ಹೋಗಿಬರತೀವಿ.
**ನನ್ನಾಕೆ:** ಇಲ್ಲೇ ಅಡಿಗೆ ಮಾಡತೀನಿ, ಬುತ್ತಿ ತೊಗೊಂಡು ಹೋಗಿ. ನಾನು ನುಚ್ಚಿನಾಗಿನ ಹಿಟ್ಟ ತಗದೀನಿ. ರೊಟ್ಟಿ ಮಾಡತೀನಿ. ನೀವು ಸ್ವಲ್ಪ ಹೊತ್ತ ಇದ್ದರ ನಮಗೂ ಸಮಾಧಾನ ಆಗತೈತಿ.
**ಗುರುವ:** ನನಗ ದಿಕ್ಕ ತಿಳಿಯದಂಗ ಆಗ್ಯೆತಿ. ಸ್ವಲ್ಪ ಹೊತ್ತ ಇದ್ದ ಹೋಗಿ. ಅಷ್ಟರಲ್ಲಿ ಅಣ್ಣ ಬಸವಣ್ಣ ಏನಾರ ದಾರಿ ತೋರಿಸತಾನ.
**ಶಂಕರಕ್ಕ:** ಮಗ್ಗಲ ಹೊಲದಾಗ ಹಕ್ಕರಕಿ ಮತ್ತ ಪುಂಡಿಪಲ್ಲೆ ನೋಡಿನಿ ನಾ ಅದನ್ನ ಹರಕೊಂಡ ಬಂದ ಪಲ್ಲೆ ಮಾಡತೀನಿ.
**ಜಯಶ್ರೀ:** ನಾ ಕಲ್ಲಾಗ ಚಟ್ನಿ ಅರೀತೀನಿ. ಪುಂಡಿಪಲ್ಲೆದ ಜೊತೆಗೆ ಚಲೊ ಆಗತೈತಿ.
**ಶ್ರೀಶೈಲಪ್ಪ:** ಆಗಲಿ ಅವರು ಅಡಗಿ ಮಾಡುತನಕ ನಾವು ನಮ್ಮ ಕಾಯಕ ಮಾಡೂಣ ಮನಸ್ಸು ಶಾಂತ ಆಗತೈತಿ.
ನಾವು ನಮ್ಮ ಕಾಯಕದಲ್ಲಿ ನಿರತರಾದೆವು ಹೆಣ್ಣುಮಕ್ಕಳು ಅಡಿಗೆ ಮಾಡಲು ಹೋದರು.
ಗಾಣ ತಿರುಗುತ್ತಿತ್ತು ಮನದ ತುಂಬ ಗುರುಗಳು ಹೇಳಿದ ಮಾತು ಗಿರಕಿ ಹೊಡೆಯುತ್ತಿತ್ತು. ನಾನು ಎಣ್ಣೆ ತೆಗೆದು ಎತ್ತುಗಳಿಗೆ ನೀರು ಕುಡಿಸಿ ಮೇವು ಹಾಕಿ ಒಳಬಂದೆ. ಅಡಿಗೆ ತಯಾರಾಗಿದೆ ನೀವೆಲ್ಲ ತಯಾರಾಗಿ ಬನ್ನಿ ಪ್ರಸಾದ ತೊಗೊಂಡು ಮನೆಗೆ ಹೋಗೋಣ ಎನ್ನುವ ಶಂಕರಕ್ಕನ ಮಾತು ಕೇಳಿಸಿತು. ಆಗಲೇ ಆಗುಂತಕನೊಬ್ಬ ಬಾಗಿಲಲ್ಲಿ ನಿಂತು ಗುರುವ ಯಾರು? ಎಂದ.
ನಾನು, ಏನಾಗಬೇಕು.

ನಾನು ಬಿಜ್ಜಳ ಮಹಾರಾಜರ ಆಪ್ತ ಸೇವಕ ವೀರಭದ್ರ ನಿಮ್ಮನ್ನು ರಾಜರು ಈಗಲೇ ಕರೆದುಕೊಂಡು ಬರಲು ಹೇಳಿದ್ದಾರೆ.
ಮೊದಲೇ ಮುಂಜಾನೆ ಘಟನೆಯಿಂದ ಚೇತರಿಸಿಕೊಳ್ಳದ ನನಗೆ ದಿಕ್ಕೇ ತೋಚಲಿಲ್ಲ. ಅಸ್ಥಾನದ ಆಚಾರ ವಿಚಾರಗಳ ಪರಿಚಯವಿದ್ದ ಶ್ರೀಶೈಲಪ್ಪ ಗಾಬರಿಯಾಗಬೇಡ ಮಹಾರಾಜರ ಮುಂದೆ ನೀನು ಗುರುವನಾಗಿ ಇರು ಅವರು ಕೇಳುವ ಪ್ರಶ್ನೆಗಳಿಗೆ ಗುರುವನಾಗಿ ಉತ್ತರಿಸು.
ಒಳಗಿನಿಂದ ಬಂದ ನನ್ನಾಕೆಯಲ್ಲಿದ್ದ ಗಾಬರಿ ತೋರಿಸಿಕೊಳ್ಳದೆ " ಬುತ್ತಿ ಕಟ್ಟಿಕೊಡತೀನಿ, ರಾಜರಿಗೆ ಹಾಲು, ಕೆನೆಮೊಸರು, ಬೆಣ್ಣೆ, ತುಪ್ಪ ಮತ್ತು ಹುಂಚಿ ಟಕ್ಕು ಕಟ್ಟಿಕೊಡತೀನಿ ಒಯ್ದು ಕೊಡರಿ. ಮತ್ತು ಇವತ್ತ ತೆಗೆದ ಎಣ್ಣಿ ಡಬ್ಬಿ ಒಯ್ಯಲಾಕ ಮರಿಬ್ಯಾಡ್ರಿ.
ನಾನು ನಿನ್ನ ತವರಮನಿಗೆ ಹೊಂಟಿಲ್ಲ ಬುತ್ತಿ ರೊಟ್ಟಿ ಒಯ್ಯಾಕ, ನಾ ಹೊಂಟದ್ದು ಮಹಾರಾಜರನ್ನ ಬೆಟ್ಟಿಯಾಗಾಕ.
"ಮಹಾರಾಜರು ನಮ್ಮವರ ಅಲ್ಲೇನು ಅವರು ನಮ್ಮೆಲ್ಲರ ತಂದೆ ತಾಯಿ ಅಲ್ಲೇನು. ನನ್ನ ತವರಮನಿಗಿಂತ ಅವರ ಹೆಚ್ಚ ಅಲ್ಲೇನು?" ಅಕೆಯ ಮತ್ತು ನನ್ನ ಮಾತು ಕೇಳುತ್ತಿದ್ದ ರಾಜರ ಸೇವಕ
"ರಾಜರ ಭೆಟ್ಟಿಗೆ ಬರುವವರು ತಮ್ಮ ತಮ್ಮ ಕಾಣಿಕೆ ಕೊಡತಾರ. ಅಕ್ಕಾ ಅಷ್ಟು ಪ್ರೀತಿಯಿಂದ ಬುತ್ತಿ ಕಟ್ಟಿ ಕೊಡಲಾಕ ಹತ್ಯಾರ ತೊಗೊಂಡು ನಡೀರಿ" ಎಂದ.
ಶ್ರೀಶೈಲಪ್ಪ ಮತ್ತು ಮೋನಣ್ಣ ಅವರಿಗೂ ಸರಿ ಎನಿಸಿತು. ಶಂಕರಕ್ಕ "ನಾವ ಮತ್ತ ಅಡಗಿ ಮಾಡಿಕೊಳ್ಳತೀವಿ ನೀವ ಬುತ್ತಿ ಕಟ್ಟಿಕೊಂಡು ಹೊಗ್ರಿ". ಅದುವರೆಗೆ ಮೌನವಾಗಿದ್ದ ಜಯಶ್ರೀ "ನೀವು ನಿಮಗನಿಸಿದ್ದನ್ನು ನೇರವಾಗಿ ಸ್ಪಷ್ಟವಾಗಿ ಹೇಳಿ ಅಣ್ಣ ಬಸವಣ್ಣ ಹೇಳಿದ ಈ ವಚನ ನೆನಪಿನಲ್ಲಿರಲಿ.

**ನುಡಿದಡೆ ಮುತ್ತಿನ ಹಾರದಂತಿರಬೇಕು.**

**ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.**

**ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.**

**ನುಡಿದಡೆ ಲಿಂಗ ಮೆಚ್ಚಿ ಅಹುದಹುದನಬೇಕು.**

**ನುಡಿಯೊಳಗಾಗಿ ನಡೆಯದಿದ್ದಡೆ, ಕೂಡಲಸಂಗಮದೇವನೆಂತೊಲಿವನಯ್ಯಾ** / 845

—ಅಣ್ಣ ಬಸವಣ್ಣ.

ಅವರು ದೇಶದ ದೊರೆಯಾದರೆ ನೀವು ಈ ಮನೆಯ ದೊರೆ ಎನ್ನುವದನ್ನು ಮರೆಯದಿರಿ" ಎಂದರು.
ಸರಿ ಎಂದು ಅವ್ರು ಕೊಟ್ಟ ಚೀಲಗಳನ್ನು ವೀರಭದ್ರಪ್ಪ ತೆಗೆದುಕೊಂಡು ಬಾಗಿಲಲ್ಲಿ ನಿಲ್ಲಿಸಿದ್ದ ರಥದಲ್ಲಿಟ್ಟು ನಡೆಯಿರಿ ಹೋಗೋಣ ಎಂದ. ಎಲ್ಲರೂ ಸಮಧಾನವಾಗಿ ಹೋಗಿ ಬಾ ಎಂದರು. ರಥವನ್ನೇ ನೋಡಿರದ ನನಗೆ ಹತ್ತಿ

ಕುಳಿತುಕೊಳ್ಳಲು ಸಹಾಯಮಾಡಿದ ವೀರಭದ್ರಪ್ಪ. ರಥ ಮುಂದೆ ಹೋದಾಗ ಅವರೆಲ್ಲರ ಮುಖದಲ್ಲಿ ಗಾಬರಿ ಕಾಣುತ್ತಿತ್ತು.
**ವೀರಭದ್ರಪ್ಪ:** ನಿಮಗೆ ಮಹಾರಾಜರು ಪರಿಚಯವೇ?
**ಗುರುವ:** ಗಾಣ ಹೊಡಕೊಂತ ಆರಾಮವಾಗಿ ಹಳ್ಳಿಯಲ್ಲಿದ್ದೆ. ಅರಮನೆ ನೋಡಿಲ್ಲ ರಥದ ಮೇಲೆ ಕುಳಿತದ್ದೂ ಮೊದಲು. ನಾನು ನೋಡಿದ ರಾಜ ಸೇವಕ ನೀನೊಬ್ಬನೆ.
**ವೀರಭದ್ರಪ್ಪ:** ನಿಮ್ಮನ್ನ ಬಿಜ್ಜಳ ಮಹಾರಾಜರು ತಮ್ಮ ಖಾಸ ಕೊಠಡಿಗೆ ಕರೆದುಕೊಂದು ಬರಲು ಹೇಳಿದ್ದಾರೆ. ಬಸವಣ್ಣನವರು ಮತ್ತು ರಾಜರ ಆತ್ಮೀಯರ ಹೊರತಾಗಿ ಅಲ್ಲಿಗೆ ಯಾರೂ ಬರುವದಿಲ್ಲ. ಅಲ್ಲಿ ಎಲ್ಲ ಕಡೆಗೆ ಕಿವಿಗಳಿವೆ ಜಾಗರೂಕವಾಗಿ ಮಾತನಾಡಿ. ಅಲ್ಲಿ ಇಲ್ಲ ಎನ್ನುವ ಶಬ್ದಕ್ಕೆ ಅವಕಾಶವಿಲ್ಲ. ಯಾರು ಏನೇ ಹೇಳಿದರೂ ಸರಿ ಎನ್ನಿ.
ದಾರಿಯಲ್ಲಿ ಹೋಗುವವರೆಲ್ಲ ಗೌರವದಿಂದ ರಥಕ್ಕೆ ದಾರಿ ಬಿಡುತ್ತಿದ್ದರು. ರಥದಲ್ಲಿದ್ದ ನನ್ನನ್ನು ನೋಡಿ ಮುಗುಳು ನಗೆ ಅವರ ಮುಖದಲ್ಲಿ ಮೂಡುತ್ತಿತ್ತು. ಜೋರಾಗಿ ನಗಲು ಪ್ರಯತ್ನಿಸಿದ ಮಗುವಿನ ಬಾಯಿ ಮುಚ್ಚಿದ್ದೂ ಕಾಣಿಸಿತು. ಕೋಟೆ ಬಂದಿತು ಅಲ್ಲಿದ್ದ ಬಿಚ್ಚುಗತ್ತಿಯ ಯೋಧನೊಬ್ಬ ಬಂದು ಸಾರಥಿಯೊಡನೆ ಮಾತನಾಡಿ ಒಳಗೆ ಬಿಟ್ಟ. ಅಲ್ಲಿದ್ದವರೆಲ್ಲ ಕತ್ತಿ ಎತ್ತಿ ನಮಸ್ಕಾರ ಮಾಡಿದ್ದು ನನಗೆ ವಿಚಿತ್ರವೆನಿಸಿತು. ಒಳಗೆ ಯುದ್ಧಭೂಮಿಯ ವಾತಾವರಣ ಎಲ್ಲ ಕಡೆಯ ಆಯುಧ ಹಿಡಿದ ಯೋಧರು. ಯಾವ ಅಡೆತಡೆಯಿಲ್ಲದೆ ದೊಡ್ಡದೊಡ್ಡ ಕಟ್ಟಡ ದಾಟಿ ಸುಂದರವಾದ ಹೂ ತೋಟದಲ್ಲಿದ್ದ ಸುಂದರ ಮನೆಯಮುಂದೆ ರಥ ನಿಂತಿತು. ಆ ಮನೆಯ ಸುತ್ತಮುತ್ತಲೂ ಕಾವಲುಗಾರರು. ನಾವು ರಥದಿಂದ ಇಳಿದ ಕೂಡಲೇ ಒಬ್ಬ ಯೋಧ ಬಂದು ನನ್ನ ಚೀಲಗಳನ್ನು ತೆಗೆದುಕೊಂಡ ಒಳಹೊರಟ ಅವನ ಹಿಂದೆ ನಾನು ನಡೆದೆ.
ಅಲ್ಲೊಂದು ಸಣ್ಣ ಚಾವಡಿ ಕಟ್ಟೆಯಮೇಲೆ ನಾನು ತಂದ ಚೀಲಗಳನ್ನಿಟ್ಟು ನನ್ನನ್ನು ಪರಿಶೀಲಿಸಿದ.
ನನ್ನ ಚೀಲದಲ್ಲಿದ್ದ ಸಾಮಾನುಗಳನ್ನು ಒಂದೊಂದಾಗಿ ತೆಗೆದಿಟ್ಟ. ಅಲ್ಲಿದ್ದದ್ದು ನನಗೂ ಗೊತ್ತಿಲ್ಲ. ನಾನು ನೋಡಿದೆ ಬಿಸಿರೊಟ್ಟಿ, ಪುಂಡಿಪಲ್ಲೆ, ಹುಂಚಿಟಕ್ಕ, ಕೆಂಪಚಟ್ನಿ, ಹಾಲು, ಮೊಸರು, ಬೆಣ್ಣೆ, ತುಪ್ಪ, ಎಣ್ಣಿ, ಹಕ್ಕರಕಿ, ಬದನಿಕಾಯಿ ಪಲ್ಲೆ ಮತ್ತ ಸವತಿಕಾಯಿ. ಅದನ್ನು ನೋಡಿದ ಅವನಿಗೆ ಆಚ್ಚರಿ.
ಮುತ್ತು, ಬಂಗಾರ ಮತ್ತು ವಜ್ರ ತರುವದನ್ನು ಅವನು ನೋಡಿದ್ದ.
ಆಗ ಅಲ್ಲಿಗೆ ನನ್ನ ಅತ್ತೆಯ ವಯಸ್ಸಿನ ಸುಂದರ ಹೆಣ್ಣುಮಗಳು ಬಂದು "ಎನಪ್ಪ ಇದೆಲ್ಲ" ಎಂದರು. ಅವರನ್ನು ನೋಡಿದ ಕೂಡಲೇ ಯೊಧ ತಲೆ ತಗ್ಗಿಸಿ ನಿಂತ.
"ನನ್ನ ಹೆಂಡತಿ ಬುತ್ತಿ ಕಳಸ್ಯಾಳ ಅವ್ವ"
ಆಕಿ ಪೈಕಿ ಇಲ್ಲಿ ಯಾರ ಅದಾರ.

ನಮ್ಮನ್ನಾಳುವ ರಾಜಾ ರಾಣಿ ತನ್ನ ತಂದೆ ತಾಯಿ ಅಂತ ತಿಳಿದಾಳ. ನಾನು ಅವರನ್ನ ಭೆಟ್ಟಿಯಾಗುವದಕ್ಕೆ ಹೊಂಟೇನಿ ಅಂದಕೂಡಲೆ ಬುತ್ತಿ ಮಾಡಿ ಕಳಿಸ್ಯಾಳ.

ಅವರು ಅಚ್ಚರಿಯಿಂದ ನನ್ನ ಮುಖವನ್ನೊಮ್ಮೆ ನೋಡಿದರು.

ಅಕ್ಕರೆಯಿಂದ "ಒಳಗ ಹೋಗುಣ ಬಾ" ಎಂದು ನನಗೆ ಹೇಳಿ ಇವುಗಳ ರುಚಿ ವೈದ್ಯರಿಗೆ ತೋರಿಸಿ ಒಳಗೆ ತಂದು ಇಡು" ಎಂದು ಯೊಧನಿಗೆ ಹೇಳಿದರು.

"ಆಗಲಿ ಮಹಾರಾಣಿ" ಎಂದಾಗಲೇ ನನಗೆ ಗೊತ್ತಾದದ್ದು ಇದುವರೆಗೆ ನಾನು ಮಾತನಾಡಿದ್ದು ಈ ರಾಜ್ಯದ ಮಹಾರಾಣಿ ಜೊತೆ ಎಂದು.

## ಕೊಡುವವ ಮಾನವನಲ್ಲ. ಕೊಡುವವ ಕೊಂಬುವವ ಮಾನವರ ನಡುವಿಪ್ಪ ಮಹಾತ್ಮ

**ತನುವ ಕೊಟ್ಟು ತನು ಬಯಲಾಯಿತ್ತು, ಮನವ ಕೊಟ್ಟು ಮನ ಬಯಲಾಯಿತ್ತು, ಧನವ ಕೊಟ್ಟು ಧನ ಬಯಲಾಯಿತ್ತು,**

**ಈ ತ್ರಿವಿಧವನು ಕೊಟ್ಟು ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣಂಗೆ ಬಯಲಸಮಾದಿಯಾಯಿತ್ತು.** / *779* ---ಚನ್ನಬಸವಣ್ಣ.

ಗಮನಿಸಿ:

ಶರಣರು ಅತೀ ಹೆಚ್ಚು ವಚನಗಳಲ್ಲಿ "ಮನ" ಪದವನ್ನು ಉಪಯೊಗಿಸಿದ್ದಾರೆ. 173 ವಚನಕಾರರು 7000 ವಚನಗಳಲ್ಲಿ 11880 ಕಡೆಗಳಲ್ಲಿ ಉಪಯೊಸಿಗಿದ್ದಾರೆ. ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎನ್ನುವ ವಿವರಣೆ ಎಲ್ಲ ವಚನಗಳಲ್ಲಿ ಸಿಗುತ್ತದೆ.

ನಮ್ಮ ದೇಶದ ಯಾವುದೇ ಭಾಗದಲ್ಲಿ ನೀವು ಪ್ರವಾಸ ಮಾಡುವಾಗ ಕಾಣುವದು ಅಪರಿಚಿತರಾಗಿ ರೈಲು ಹತ್ತಿದ ಪ್ರಯಾಣಿಕರು ಅಲ್ಪಾವಧಿಯಲ್ಲಿ ತಮ್ಮ ತಮ್ಮ ಸುಖ ದು:ಖಗಳನ್ನು ಹಂಚಿಕೊಂಡು ಮನ ಹಗುರು ಮಾಡಿಕೊಂಡು ಇಳಿಯುವಾಗ ಗೆಳೆಯರಾಗಿರುತ್ತಾರೆ.

ಆದರೆ ನೀವು ಬೇರೆ ದೇಶದಲ್ಲಿ ಪ್ರವಾಸಮಾಡುವಾಗ ಆಗುವ ಅನುಭವವೇ ಬೇರೆ. ಅವರು ಪ್ರವಾಸದಾದ್ಯಂತ ಮುಖ ಸಿಂಡರಿಸಿಕೊಂಡು ಪುಸ್ತಕ ಓದುತ್ತ ವೇಳೆ ಕಳೆದು ಇಳಿಯುವಾಗ ಒಂದು ಮುಗುಳ್ನಗು ಬೀರಿ ಹೋಗುತ್ತಾರೆ. ಅದಕ್ಕೆ ಇರಬೇಕು ಅಲ್ಲಿ ಮಾನಸಿಕ ರೋಗಿಗಳು ಹೆಚ್ಚು. ಸಾಮಾನ್ಯವಾಗಿ ನಾನು ನನ್ನವಳ ಜೊತೆ ಮನೆಯ ಸಮೀಪದ ನಗರವನದಲ್ಲಿ ಅಡ್ಡಾಡಲು ಹೋಗುವದಿಲ್ಲ. ಅದಕ್ಕೆ ಬಲವಾದ ಕಾರಣವೂ ಇದೆ. ಅಲ್ಲಿಗೆ ಬರುವ ತನ್ನ ಪರಿಚಿತರನ್ನೆಲ್ಲ ಮಾತನಾಡಿಸಿ ಅಲ್ಲಿಯ ಕಲ್ಲು ಆಸನದ ಮೇಲೆ ಕುಳಿತು ಹರಟೆ ಹೊಡೆದು ದಿನವಿಡಿ ಲವಲವಕೆಯಿಂದ ಇರುತ್ತಾಳೆ.

ಆಕೆಗೆ ಅವರೆಲ್ಲರ ಮನೆಯಲ್ಲಿ ಮಾಡಿದ ಅಡಿಗೆ ಮತ್ತು ಆದ ಜಗಳ ಗೊತ್ತು. ನಾನು ಅಡ್ಡಾಡಿ ಗಾಳಿ ಸೇವಿಸಿ ಬರುತ್ತೇನೆ ಅಲ್ಲಿ ಬರುವವರ ಮುಖ ಪರಿಚಯ ಇದೆ ಆದರೆ ಅವರ ಹೆಸರು ಗೊತ್ತಿಲ್ಲ. ಹಟ ಮಾಡಿ ಒಂದು ಸಲ ತನ್ನೊಡನೆ ನನ್ನನ್ನೂ ತನ್ನ ಜೊತೆ ಕರೆದುಕೊಂಡು ಹೋದಳು. ಬಹಳಮಾಡಿ ನಿಮ್ಮವರು ಉರಲ್ಲಿರುವದಿಲ್ಲವೇ ಎಂದು ಯಾರಾದರೂ ಕೇಳಿರಬೇಕು. ಅಡ್ಡಾಡುವದು ಮುಗಿದ ಮೇಲೆ ಅಲ್ಲಿಯ ಬೆಂಚ ಮೇಲೆ ಕುಳಿತೆವು. ಅಲ್ಲಿಗೆ ಒಬ್ಬ ವೃದ್ಧ ಮಹಿಳೆ ನನ್ನವಳ ಮಗ್ಗಲು ಕುಳಿತು ನನ್ನವಳ ಜೊತೆ ಸುಮಾರು ಅರ್ಧ ಗಂಟೆ ಮಾತನಾಡಿದಳು ಅದರಲ್ಲಿ ತನ್ನ ದು:ಖವನ್ನೆಲ್ಲ ತೋಡಿಕೊಂಡಳು ಅತ್ತಳು ಅಲ್ಲಲ್ಲಿ ಕಣ್ಣಿರುಸುರಿಸಿದಳು. ನನ್ನಾಕೆಯ ಸಮಾಧಾನದ ಮಾತುಗಳು ಅವಳಿಗೆ ಹಿತವೆನಿಸಿರಬೇಕು ಕಡೆಗೆ ನಕ್ಕು ನಮ್ಮಿಬ್ಬರಿಗೂ ನಮಸ್ಕರಿಸಿ ಹೋದಳು. ನನ್ನಾಕೆಗೆ ಕೇಳಿದೆ ಎಷ್ಟು ದಿನದ ಪರಿಚಯ? ನಿನ್ನೆ ನಾವಿಬ್ಬರೂ ಬೆಟ್ಟಿಯಾದಾಗ ಒಬ್ಬರನ್ನೊಬ್ಬರು ನೋಡಿ ನಕ್ಕಿದ್ದೆವು ಅಷ್ಟೆ. ಅಂತೂ ಮನದಲ್ಲಿದ್ದ ಭಾವನೆಗಳನ್ನು ಹೊರಹಾಕಲು ಆತ್ಮೀಯರೆಸಿದವರೊಬ್ಬರು ಸಿಕ್ಕರೆ ಸಾಕು. ಈ ಕನಸಿನ ಭಾಗದಲ್ಲಿ ಆ ಘಟನೆಯ ಪ್ರಭಾವವಿದೆ.

**ತನ್ನ ವಿಚಾರಿಸಲೊಲ್ಲದು, ಇದಿರ ವಿಚಾರಿಸಹೋಹುದೀ ಮನವು.**
**ಏನ ಮಾಡುವೆನೀ ಮನವನು, ಎಂತು ಮಾಡುವೆನೀ ಮನವನು.**
**ಕೂಡಲಸಂಗಮದೇವನ ಶರಣರ ನಚ್ಚದ ಮಚ್ಚದ ಬೆಂದ ಮನವನು.** / 696 --ಬಸವಣ್ಣ

ಮಹಾರಾಣಿಯವರ ಹಿಂದೆ ನಡೆದೆ. ಅಲ್ಲಿ ಒಂದು ಬಣ್ಣ ಬಣ್ಣದ ಗ್ಲಾಸ ಕಿಡಕಿಯಿರುವ, ಬಣ್ಣದ ಚಿತ್ತಾರದ ಮೆತ್ತನೆ ಹಾಸಿಗೆ ಹಾಸಿದ್ದ ಖೋಲಿಯೊಳಗೆ ಬಂದೆ. ಅಲ್ಲಿ ಕುಳಿತುಕೊಂಡ ಮಹಾರಾಣಿಯವರು ನನಗೆ ಕುಳಿತುಕೊಳ್ಳಲು ಹೇಳಿದರು. ನಾನು ದೂರ ಸರಿದು ಕುಳಿತುಕೊಂಡೆ.

**ಮಹಾರಾಣಿ:** ಸಂಕೋಚಬೇಡ ಬಾ ಇಲ್ಲಿಯೇ ಸಮೀಪದಲ್ಲಿ ಕುಳಿತುಕೊಳ್ಳು. ಮಹಾರಾಜರು ಬರುವವರೆಗೆ ಮಾತನಾಡೋಣ ತಮ್ಮ.

**ಗುರುವ:** ನನ್ನಿಂದ ಶೇಂಗಾ ಎಣ್ಣೆಯ ಸುವಾಸನೆ ಬರುತ್ತದೆ ಎಂದು ನನ್ನಾಕೆ ಹೇಳುತ್ತಿರುತ್ತಾಳೆ ಅಮ್ಮ.

**ಮಹಾರಾಣಿ:** ನಾನು ಮದುವೆಯಾಗಿ ಬಂದ ದಿನದಿಂದ ಈ ಐದು ವರ್ಷ ಹೊರತುಪಡಿಸಿ ಪ್ರತಿದಿನ ಹಸಿ ರಕ್ತದ ವಾಸನೆ ನನಗ ರೂಢಿಯಾಗಿದೆ. ಗಂಡ, ಮಕ್ಕಳು ಮತ್ತು ಯೊಧರ ಬಾಯಿಂದ ಬರುವ ಕಡಿ, ಹೊಡಿ, ಬಡಿ ಎನ್ನುವ ಶಬ್ದ, ಗೆಲುವಾಗಲಿ ಸೋಲಾಗಲಿ ಯೊಧರ ಮಾರಣ ಹೋಮ ನಡೆದು ಅರಮನೆಯಲ್ಲಿ ತಮ್ಮ ಮನೆಯವರನ್ನು ಕಳೆದುಕೊಂಡ ಯೋಧರ ಮನೆಯವರ ರೋಧನ ಕೇಳಿ ಕೇಳಿ ಕಿವಿ ಕುರುಡಾಗಿದೆ.

ಬಸವವಣ್ಣನ ದಯೆಯಿಂದ ಈ ಐದು ವರ್ಷಗಳಿಂದ ಶರಣು ಶರಣೆಂಬ ಮಾತು ಪೂಜೆಯ ಘಂಟಾನಾದ ಜೈನ ಮುನಿಗಳ ಉಪದೇಶ ಕೇಳಿ ಮನಸ್ಸು ಸಮಾಧಾನವಾಗಿದೆ. ನಿನ್ನಿಂದ ಬಂದ ಅಮ್ಮಾ ಶಬ್ದ ಕೇಳದೆ ಬಹಳ ವರ್ಷ ಕಳೆದುಹೋಗಿವೆ. ಬರುವವರೆಲ್ಲ ಮುತ್ತು ವಜ್ರ ಮೊದಲಾದ ವಸ್ತು ಕೊಟ್ಟು ಮಹಾರಾಣಿ ಎನ್ನುವಾಗ ಅವರ ಕಣ್ಣಿನಲ್ಲಿದ್ದ ಆಶೆ, ಅಸೂಯೆ, ಅನುಮಾನ ಮತ್ತು ಭಯ ಕಾಣುತ್ತದೆ ಹೊರತು ಆದರ ಪ್ರೀತಿ ಆತ್ಮೀಯತೆ ಇರುವದಿಲ್ಲ.

**ಗುರುವ:** ಅಮ್ಮಾ ಸಮಧಾನಮಾಡಿಕೊಳ್ಳಿ ಮಹಾರಾಣಿಯಾಗುವ ಭಾಗ್ಯ ನಿಮ್ಮದು.

**ಮಹಾರಾಣಿ:** ನಾನು ಮಾಹಾರಾಣಿಯಾದಾಗ ಹಾಗೆ ಎಂದುಕೊಂಡು ಸಂಭ್ರಮಪಟ್ಟಿದ್ದೆ. ಎಂಟು ಮಕ್ಕಳಾಗಿ ಎಲ್ಲರನ್ನು ಬೆಳೆಸುವದರಲ್ಲಿ ಮುಳುಗಿದಾಗ ಎಲ್ಲವೂ ಚನ್ನಾಗಿದೆ ಎನಿಸಿತು. ಈಗ ಅವ್ರು ದೊಡ್ಡವರಾಗಿದ್ದಾರೆ. ಅವರ ಕಣ್ಣಲ್ಲಿ ಪ್ರೀತಿಯ ಲವಲೇಶವೂ ಇಲ್ಲ. ಅವರು ಅಸೂಯೆ ಅಹಂಕಾರದ ಮೊಟ್ಟೆಯಾಗಿದ್ದಾರೆ ರಾಜಕಾರಣದ ಹೆಸರಿನಲ್ಲಿ ಒಬ್ಬರೊಬ್ಬರಿಗೆ ಮೋಸ ಮಾದುವ ವಿವಿಧ ತಂತ್ರ ಹೆಣೆಯುವದರಲ್ಲಿ ನಿರತರಾಗಿದ್ದಾರೆ. ಅಧಿಕಾರದ ಆಶೆ ಅವರ ನೆತ್ತಿಗೇರಿದೆ.ಯಾವಾಗಾದರೊಮ್ಮೆ ನನ್ನ ಭೆಟ್ಟಿಯಾದರೆ ನಮ್ಮನ್ನು ಅವರ ಕುಟಿಲ ಯೊಜನೆಯ ಭಾಗವನ್ನಾಗಿ ಮಾಡುವ ಪ್ರಯತ್ನದಲ್ಲಿರುತ್ತಾರೆ. ಪ್ರೀತಿ ಎನ್ನುವ ಪದದ ಅರ್ಥ ಮರೆತಿದ್ದಾರೆ. ನೀನು ಅಮ್ಮಾ ಎಂದಾಗ ನನ್ನ ಭಾವನೆಗಳೆಲ್ಲ ಹೊರಬಂದವು. ಅರಮನೆಯಲ್ಲಿ ಭಾವನೆಗಳನ್ನು ವ್ಯಕ್ತಮಾಡಲು ಅವಕಾಶವಿಲ್ಲ.

**ಗುರುವ:** ಅಮ್ಮಾ ನನಗೆ ನಮ್ಮ ಅಜ್ಜಿಯ ನೆನಪಾಯಿತು. ಆಕೆಯೇ ಹೀಗೆ ನನ್ನನ್ನು ಮುಂದೆ ಕೂಡ್ರಿಸಿಕೊಂಡು ನನಗರ್ಥವಾಗದ ಏನೇನೊ ಹೇಳಿ ಸಮಾಧಾನಪಡುತ್ತಿದ್ದರು.

**ಮಹಾರಾಣಿ:** ಅಣ್ಣ ಬಸವಣ್ಣನ ಪರಿಚಯ ಆಗುವವರೆಗೆ ಎಲ್ಲವೂ ಚನ್ನಾಗಿತ್ತು. ನಾವೇನೋ ಸಾಧಿಸಿದ್ದೇವೆ ಸುಖದ ಸುಪ್ಪತ್ತಿಗೆಯಲ್ಲಿ ಇದ್ದೇವೆ ಎನಿಸಿತ್ತು. ನಾವು ಗಳಿಸಿದ ರಾಜ್ಯದ ವಿಶಾಲತೆ ಕೇಳಿ ಹಮ್ಮೆ ಎನಿಸುತ್ತಿತ್ತು. ನಮ್ಮ ಖಜಾನೆಯಲ್ಲಿರುವ ಧನ, ವಜ್ರ ವೈಢೂರ್ಯ ನೋಡಿ ಸಂತೋಷಪಡುತ್ತಿದ್ದೆ,

ಬಗೆ ಬಗೆಯ ಅಭರಣಗಳನ್ನು ಹಾಕಿಕೊಂಡು ಎಲ್ಲರಿಗೂ ತೋರಿಸಿ ಹೆಮ್ಮೆಪಡುತ್ತಿದ್ದೆ. ಈ ಎಲ್ಲ ಭಾವನೆಗಳು ವ್ಯರ್ಥ ಎನ್ನುವದನ್ನು ಮನಗಾಣಿಸಿದ ಅಣ್ಣ ಬಸವಣ್ಣ. ಮನಕ್ಕೆ ಮುದಕೊಡುವ ಅನೇಕ ವಿಷಯಗಳಿವೆ ಎಂದು ತಿಳಿಸಿದ. ಈಗ ನನ್ನವರು ಗಳಿಸಿದ ವಸ್ತು ನೋಡಿದಾಗ ರಕ್ತದ ವಾಸನೆ ಅಮಾಯಕ ಮೃತ ಯೊಧರ ಮನೆಯವರ ಆಕ್ರಂದನ ಕಿವಿಗೆ ಅಪ್ಪಳಿಸತೊಡಗುತ್ತದೆ. ನಾನೂ ಸಾಮಾನ್ಯಳಂತೆ ಅನುಭವ ಮಂಟಪದಲ್ಲಿ ಕುಳಿತು ಶರಣ ದರ್ಶನ ಪಡೆಯಬೇಕು ಅವರ ಮಾತು ಕೇಳಬೇಕು ಎನಿಸುತ್ತದೆ. ಅದರೇನು ಮಾಡಲಿ ನಾನು ಬಂಧಿ. ನಾನು ಮೌನವಾಗಿ ಕೇಳುತ್ತಿದ್ದೆ ಅವರು ಮಾತನಾಡುತಿದ್ದರು.

ಅಷ್ಟರಲ್ಲಿ ರಾಜಕುಮಾರ ರಾಯಮುರಾರಿ ಬರುತ್ತಿದ್ದಾರೆ ಎನ್ನುವ ಘೋಷಣೆ ಕೇಳಿಸಿತು. ಮಹಾರಾಣಿಯವರು ಸೆರಗಿನಿಂದ ಮುಖ ಒರೆಸಿಕೊಂಡರು. ಅವರಲ್ಲಿ ಮುಖದಲ್ಲಿಯ ನಗೆ ಮತ್ತು ಆತ್ಮೀಯತೆ ಮಾಯವಾಗಿ ಅವರ ಮುಖದಲ್ಲಿ ಗಂಭೀರತೆ ಕಾಣಿಸಿತು.

ನಾನು ಎದ್ದುನಿಂತು ಅವರು ಬಂದಕೂಡಲೇ "ಶರಣು ಶರಣಾರ್ಥಿ" ಎಂದೆ. ಅವರು ನನ್ನ ಕಡೆ ಲಕ್ಷಕೊಡದೆ ಮಹಾರಾಣಿಯವರಿಗೆ ಪಾದಮುಟ್ಟಿ ನಮಸ್ಕರಿಸಿ "ಮಹಾರಾಣಿಯವರಿಗೆ ಜಯವಾಗಲಿ. ನೀವು ಉಲ್ಲಸಿತರಾಗಿದ್ದು ನೋಡಿ ಸಮಾಧಾನವಾಯಿತು. ನಾವಿದ್ದೂ ಈ ಇಳಿ ವಯಸ್ಸಿನಲ್ಲಿ ನೀವು ಮತ್ತು ಮಹಾರಾಜರು ರಾಜ್ಯದ ಪ್ರಗತಿಗಾಗಿ ಪಡುವ ಶ್ರಮ ನೋಡಿ ಸಂಕಟವಾಗುತ್ತದೆ. ಸಾಧ್ಯವಾದಷ್ಟು ವಿಶ್ರಾಂತಿಪಡೆಯಿರಿ" ಎಂದು ಹೇಳಿ ನಮಸ್ಕರಿಸಿ ನನ್ನ ಕಡೆ ನೋಡದೇ ಬಿರಬಿರನೆ ಹೊರನಡೆದರು.

ಅವರು ಹೊರಹೋದ ಮೇಲೆ ಮಹಾರಾಣಿಯವರು ನಿಟ್ಟುಸಿರು ಬಿಟ್ಟು ಮೌನಕ್ಕೆ ಶರಣಾದರು.

ಒಳಗಿನಿಂದ ಒಬ್ಬರು ಹೊರಬಂದರು. ರೇಶ್ಮೆ ಪಂಜೆ ಉಟ್ಟು ಬರಿಮೈ ಬೆನ್ನುತುಂಬ ಕರಿ ಪಟ್ಟಿ ಪಟ್ಟಿ. ಅವರ ಭವ್ಯ ವ್ಯಕ್ತಿತ್ವದಿಂದಲೇ ಅವರು ಮಹಾರಾಜರೆಂದು ಗೊತ್ತಾಯಿತು. ಎದ್ದುನಿಂತು ಕೈಮುಗಿದು

"ಶರಣು ಶರಣಾರ್ಥಿ "ಎಂದೆ. ಅವರನ್ನು ನೋಡುತ್ತಿದ್ದಂತೆಯೇ ಮೈಕಂಪಿಸಿತು ಸ್ವಲ್ಪ ಸಮಯದಲ್ಲಿ ನಗೆ ಮೂಡಿತು.

**ಮಹಾರಾಜ:** ಏನು ನಡುಕ ನಿಂತು ಮುಗುಳ್ನಗೆ ಮೂಡಿತು.

**ಗುರುವ:** ಮಹಾರಾಜ ನಿಮ್ಮನ್ನು ನೋಡಿದಕೂಡಲೇ ಹುಲಿ ನೋಡಿದ ಹಾಗಾಗಿ ಮೈ ನಡುಗಿತು. ಹುಲಿಯಂತ ರಾಜನಿರುವಾಗ ನನಗೇತರ ಚಿಂತೆ ಎನಿಸಿ ನಗೆ ಬಂತು.

ಮಹಾರಾಣಿಯವರು ಎದ್ದು ನಿಂತು ಅವರ ಬೆನ್ನು ಸವರಿ

**ಮಹಾರಾಣಿ:** ಗುರುವ ಅವರ ಮೈತುಂಬ ಕಾಣುವ ಕರಿ ಪಟ್ಟಿಗಳು ಯುದ್ದಗಳಲ್ಲಾದ ಕತ್ತಿಯ ಗಾಯದ ಕಲೆಗಳು. ಅವರ ಸಾಹಸದ ಸಂಕೇತಗಳು .

**ಮಹಾರಾಜ:** ಸರಿ ಸರಿ ಕುಳಿತುಕೊಳ್ಳು.

ಅವರ ಮಾತಿನಲ್ಲಿ ಗಾಂಭಿರ್ಯವಿತ್ತು ಅಷ್ಟೇ ಕಠಿಣತೆಯೂ ಇತ್ತು. ಅವರಿಬ್ಬರೂ ಜೊತೆಯಾಗಿ ಕುಳಿತರು ನಾನು ಅನತಿದೂರದಲ್ಲಿ ಕುಳಿತೆ.

**ಮಹಾರಾಣಿ:** ಊಟ ಮಾಡಿ ಮಾತಾನಾಡುನ ಅವ ನಿಮಗಾಗಿ ಬುತ್ತಿ ತಂದಾನ.

**ಮಹಾರಾಜ:** ಅದೆಲ್ಲ ಆಮೇಲೆ. ಮೊದಲ ಅವ ನಾ ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿ. ನೀ ಏನ ಹೇಳಿದರೂ ಸತ್ಯವಾದ ಉತ್ತರಕೊಡಬೇಕು.ನಿನಗ ವಚನಗಳು ಬರತಾವೇನು?

**ಗುರುವ:** ನನಗ ಒಂದೇ ಒಂದು ವಚನ ಬರತೈತ್ರಿ.

"**ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ, .........**ಅಣ್ಣ ಬಸವಣ್ಣ"

**ಮಹಾರಾಜ:** ಸಾಕ ಸಾಕ ಇದ ವಚನ ಹೇಳಿ ಬಸವಣ್ಣ ನನ್ನ ಕೈ ಕಟ್ಟಿಹಾಕ್ಯಾನ. ಐದು ವರ್ಷ ಆತು ಕೈ ಕತ್ತಿ ಹಿಡಿಲಾಕ ಚಡಪಡಿಸಾಕ ಹತ್ಯಾವ್, ಮೂಗು ಹಸಿ ರಕ್ತದ ವಾಸನ ಬಯಸಕ ಹತ್ತೈತಿ. ಏನ ಮಾಡೂದು ಅವನ ವಚನ ನೆನಪಾದಕೂಡಲೇ ಮೈ ಮನಸ್ಸು ಎಲ್ಲ ಶಾಂತ ಆಗತ್ತೈತಿ. ಇರಲಿ ನೀ ಹೊರಗಿನಿಂದ ಬಂದಾಗ ಬೆಳಕಿನ ಬಣ್ಣ ಹ್ಯಾಂಗ ಇತ್ತು.

**ಗುರುವ:** ಬಿಳಿ

**ಮಹಾರಾಜ :** ಈ ಖೋಲಿಯೊಳಗ

**ಗುರುವ:** ಉತ್ತರ ಬಾಳ ಕಷ್ಟ ಅದರಿ. ಆ ಕಿಡಕಿಯಾಗ ಬರೂದು ಹಸರ ಐತಿ, ಅದರ ಎಡಕ ಇರುವ ಕಿಡಕಿಯಾಗ ಬರೂದು ಕೆಂಪ ಐತಿ, ಬಲಕ ಬರೂದು ನೀಲಿ, ಮೇಲಿನಿಂದ ಬರೂದು ಹಳದಿ ಮತ್ತ ಬಾಗಿಲಿನಿಂದ ಬರೂದು ಕೇಸರಿ. ಹೌದ್ರಿ ಎಲ್ಲ ತರದ ಬಣ್ಣದ ಬೆಳಕ ಐತ್ರಿ.

**ಮಹಾರಾಜ:** ನನಗ ನಿಜವಾದ ಬೆಳಕಿನ ಬಣ್ಣ ತಿಳಿಬೇಕಾದರ ಏನ ಮಾಡಬೇಕು.

**ಗುರುವ:** ಕಿಡಕಿ ಬಾಗಲ ತೆಗೆದು ಹೊರಗ ನೋಡಬೇಕ್ರಿ.

**ಮಹಾರಾಜ:** ಕಿಡಕಿ ತಗಿಲಾಕ ಬರೂದಿಲ್ಲ. ಅವನ ಗಟ್ಟಿಯಾಗಿ ಕೂಡ್ರಿಸಿಬಿಟ್ಟಾರ.

**ಗುರುವ:** ನನಗೊಂದು ಕನ್ನಡಿ ಕೊಡ್ರಿ ನಾ ನಿಮಗ ನಿಜವಾದ ಬೆಳಕಿನ ಬಣ್ಣ ತೊರಸ್ತೀನ್ರಿ. ಸಣ್ಣವರಿದ್ದಾಗ ಈ ರೀತಿ ಆಟ ಬಾಳ ಆಡೀನಿ.

**ಮಹಾರಾಣಿ:** ಎನ್ರಿ ಇದು ಪಾಪ ಹುಡುಗನಿಗ ಏನೇನೋ ಪ್ರಶ್ನೆ ಕೇಳಲಾಕ ಹತ್ತೀರಿ.

**ಮಹಾರಾಜ:** ನಾ ಸರಿಯಾದ ಪ್ರಶ್ನೆ ಕೇಳಿನಿ ಅವ ಸರಿಯಾದ ಉತ್ತರ ಕೊಟ್ಟಾನ. ನಿನಗ ಅರ್ಥ ಆತೇನು ಗುರುವ?

**ಗುರುವ:** ನನಗ ಅರ್ಥ ಆತ್ರಿ.

**ಮಹಾರಾಜ:** ಏನ ಅರ್ಥ ಆತು ತಿಳಿಸಿಹೇಳು ಮಹಾರಾಣಿಗೆ.

**ಗುರುವ:** ನೀವು ಅರಮನೆಯಾಗ ಇರತೀರಿ ಹೊರಗ ನಡೆದ ಘಟನೆಗಳನ್ನು ನಿಮ್ಮ ಸುತ್ತಮುತ್ತಲ ಇರುವವರು ಅವರ ಅನೂಕೂಲತೆಗೆ ತಕ್ಕಂಗಾ ಬಣ್ಣ ಬದಲಿಸಿ ಬದಲಿಸಿ ಹೇಳತಾರ. ನೀವು ಯಾವದು ಸರಿ ಯಾವದು ತಪ್ಪು ಅನ್ನುವ ಗೊಂದಲದಾಗ ಬೀಳ್ತೀರಿ. ಯಾವುದು ಸತ್ಯ ಎನ್ನುವದು ನಿಮಗ

ಗೊತ್ತಾಗಬೇಕಾದರ ನಿಮಗ ಒಂದು ಕಲೆ ಇಲ್ಲದ ಕನ್ನಡಿ ಮತ್ತು ಅದನ್ನು ಹಿಡಿಯಾಕ ಒಬ್ಬರು ಬೇಕು.

**ಮಹಾರಾಣಿ:** ಇವಹೇಳುದಕ ನೀವ ಕೇಳಿದ್ದಕ ಒಂದಕ್ಕೊಂದು ಸಂಬಂಧ ಇಲ್ಲ.

**ಮಹಾರಾಜ:** ಈಗ ಊಟ ಮಾಡೂಣ ಆಮೇಲೆ ಎಲ್ಲಾ ನಿನಗ ಗೊತ್ತಗತ್ತೈತಿ. ಅವನು ಏನೇನು ತಂದಾನ ಎಲ್ಲ ನೀಡಲಾಕ ಹೇಳು. ಅರಮನೆಯ ಊಟ ಬೇಸರಾಗೈತಿ. ನಾನು ಎದ್ದು ಕೈ ಮುಗಿದು ಹೊರಗೆ ಹೋಗಲು ಅಪ್ಪಣೆ ಕೇಳಿದೆ.

**ಮಹಾರಾಜ:** ನೀನೂ ನಮ್ಮ ಜೊತೆ ಊಟ ಮಾಡು, ಇನ್ನೂ ಕನ್ನಡಿ ಹಿಡಿಯುವದು ಬಾಕಿ ಐತಿ.

1. **ಸಾಸಿರದಳಕಮಲವೆಂದಡೆ ಸೂಸಿಕೊಂಡಿರುವ ಮನ. ಪವನವೆಂದಡೆ ಎಲ್ಲೆಡೆಯಲ್ಲಿ ಸೂಸಿ ಆಡುವಂತಹದು.**
   **ಬಿಂದುವೆಂದಡೆ ಆಗುಮಾಡುವಂತಹದು. ಈ ಮನ ಪವನ ಬಿಂದು ಮೂರನು ಒಡಗೂಡಿ ನೋಡಲು,**
   **ಪರಂಜ್ಯೋತಿಪ್ರಕಾಶದಂತಹ ಬೆಳಗೆ ಎನ್ನ ಕಂಗಳ ಮುಂದೆ ನಿಂದಿತ್ತು. ಆ ಮಹಾಬೆಳಗನೆ ಕಂಗಳಲ್ಲಿ ಹೆರೆಹಿಂಗದೆ ನೋಡಿದಡೆ, ಎನ್ನಂಗದ ಒಳಹೊರಗೆ ಪರಿಪೂರ್ಣವಾಗಿದ್ದಿತ್ತು ಕಾಣಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ, ನಿಮ್ಮ ಪಾದಕರುಣದಿಂದ.** / 107 —ಹಡಪದ ಲಿಂಗಮ್ಮ
2. **ಹಗೆ ನಿದ್ರೆಗೈವಲ್ಲಿ ಕೊಲುವ ಅರಿ ಬಂದು, ಮರೆದೊರಗಿದನೆಯೆಂದು ಎಬ್ಬಿಸಿ,**
   **ನಿನ್ನ ನಾ ಕೊಲಬಂದೆ ಎಂದನೆ.**
   **ಅರಿ ನೋಡಿ, ಕೊಲಬಂದವನಲ್ಲಾ ಎಂದು ಎನ್ನನುಳುಹಿದೆ.**
   **ಎನಗೂ ನಿನಗೂ ಹಗೆಯಿಲ್ಲ.**
   **ಎನ್ನೆಡೆ ನಿನ್ನೆಡೆಗೆ ತಂದು ಹಾಕಿದವರೆ ಹಗೆ, ನಾನೂ ನೀನೂ ಕೂಡಿ ಹಗೆಯನರಸಿ [ಕೊಲ್ಲುವ],**
   **ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗದಲ್ಲಿ.** / 86----ಸಗರದ ಬೊಮ್ಮಣ್ಣ.

## ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ ಸುವರ್ಣದ ಚಿನ್ನದಂತೆ

"ಗುರುವ" ಎನ್ನುವ ಮಾತು ಕೇಳಿ ಕಣ್ಣು ತೆರೆದೆ ಎದುರಿನ ಆಸನಗಳಲ್ಲಿ ರಾಜ ರಾಣಿಯರು ಕುಳಿತಿದ್ದರು. ಎದ್ದು ನಿಂತು ಕೈಮುಗಿದೆ. ಅವರಿಬ್ಬರೂ ನಾನು ಕಥೆಗಳಲ್ಲಿ ಕೇಳಿದ್ದ ರಾಜ ರಾಣಿಯಂತಿದ್ದರು. ಮಹಾರಾಣಿಯವರು ವಜ್ರ ವೈಡೂರ್ಯ ಖಚಿತ ಬಂಗಾರದ ಅಭರಣ ಧರಿಸಿದ್ದರು.

**ಮಹಾರಾಜ:** ನಾವೀಗ ಆಸ್ಥಾನಕ್ಕೆ ಹೋಗೋಣ. ಆದ ಘಟನೆಗಳನ್ನು ತಮ್ಮ ತಮ್ಮ ರೀತಿಯಲ್ಲಿ ವಿವರಿಸಿದವರ ಮುಂದೆ ಸತ್ಯದ ಅನಾವರಣೆಯಾಗಲಿ.

**ಮಹಾರಾಣಿ:** ಗಾಬರಿಯಾಗಬೇಡ. ನಿನ್ನ ಅನುಭವಗಳನ್ನು ವಿವರಿಸು.
**ಗುರುವ:** ಅಮ್ಮಾ, ನನಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಡಿ, ನಾನು ಕಣ್ಣುಮುಚ್ಚಿಕೊಂಡು ನಾನು ಕಂಡ ಘಟನೆಗಳನ್ನು ನಾನು ಕಂಡಂತೆ ವಿವರಿಸುವೆ ದಯಮಾಡಿ ನಡುವೆ ಯಾರೂ ನನ್ನ ಏಕಾಗ್ರತೆಗೆ ಭಂಗ ತರುವದು ಬೇಡ. ಮಹಾರಾಜರು ಕಲೆಗಳಿಲ್ಲದ ಕನ್ನಡಿಯಾಗು  ಎಂದಿದ್ದಾರೆ ಅವರ ಅಜ್ಞೆಯನ್ನು ಪಾಲಿಸುವೆ.
ಮಹಾರಾಣಿಯವರು ದಾಸಿಯನ್ನು ಕರೆದು ಏನೋ ಹೇಳಿದರು.
ಮಹಾರಾಜ ಮತ್ತು ಮಹಾರಾಣಿ ಘೋಷಣೆಗಳ ನಡುವೆ ನಡೆದರು ನಾನು ಅವರ ಹಿಂದೆ ನಡೆದೆ. ನನ್ನ ಮನವೆಲ್ಲಾ ಅಂದು ನಡೆದ ಘಟನೆಗಳನ್ನು ನೆನೆಸಿಕೊಳ್ಳುವದರಲ್ಲಿ ಲೀನವಾಗಿತ್ತು ಹಾಗಾಗಿ ನಾನೇನು ಕೇಳಿದೆ ನೋಡುತ್ತಿದ್ದೇನೆ ಗಮನಕ್ಕೆ ಬರಲಿಲ್ಲ.
ಆಸ್ಥಾನ ಹೇಗಿತ್ತು ಅಲ್ಲಿ ಯಾರಾರು ಇದ್ದಾರೆ ಗಮನಿಸದೆ ಅಲ್ಲಿ ಹಾಕಿದ್ದ ಮಂಚದ ಮೇಲೆ ಹೋಗಿ ಕಣ್ಣುಮುಚ್ಚಿಕೊಂಡು ಕುಳಿತೆ.
**ಮಹಾರಾಜ:** ಗುರು ನೀನು ನೋಡಿದ್ದನ್ನು ವಿವರಿಸು
ಎಂಬ ಮಹಾರಾಜರ ಮಾತು ಕೇಳಿದ್ದಷ್ಟೇ ನೆನಪು. ಮನವೆಲ್ಲಾ ಬೆಳಕು ತುಂಬಿತು ಆ ಬೆಳಕಿನಲ್ಲಿ ಆ ದೊಡ್ಡ ಮರದ ಕೆಳಗೆ ಕುಳಿತ ಭವ್ಯ ವ್ಯಕ್ತಿತ್ವದ ಅಣ್ಣ ಬಸವಣ್ಣನ ದಿವ್ಯ ಮೂರ್ತಿ.
ನಾನು ಬಯಲು ಅವನು ಬಯಲು ಬಯಲು ಬಯಲೊಡನೆ ಬೆರೆತ ಅನುಭವ ಮುಂದೇನಾಯಿತು ಗೊತ್ತಿಲ್ಲ.
ನಾನು ಕಣ್ಣು ತೆರೆದಾಗ ನನ್ನ ಕಣ್ಣುಮುಂದೆ ಕಂಡದ್ದು ಆ ಕೂಸು ನನ್ನನ್ನು ನೋಡಿದ್ದೇ ತಡ ಅದು ನಗುತ್ತ ತಪ್ಪು ಹೆಜ್ಜೆ ಇಡುತ್ತ ನನ್ನ ಕಡೆ ನಡೆದುಬರಹತ್ತಿತು ಅದರ ನಗೆಯಲ್ಲಿ ಬೆಳದಿಂಗಳ ಸೊಗಸಿತ್ತು. ಅದು ಬೀಳಬಹುದೆನಿಸಿ ನಾ ಎದ್ದು ಹೋಗಿ ಅದನ್ನು ಎತ್ತಿಕೊಂಡು ಮುತ್ತಿಕ್ಕಿದೆ. ಅದು ಮರಳಿ ಲೊಚನೆ ಲೊಚನೆ ಮುತ್ತಿಕ್ಕಿತು.
ಆ ಮಗುವಿನ ಅಪ್ಪುಗೆಯಲ್ಲಿ ಎಲ್ಲವನ್ನೂ ಮರೆತು ಸ್ವರ್ಗ ಸುಖ ಅನುಭವಿಸಿದೆ. ಅಷ್ಟರಲ್ಲಿ ಆ ಮಗುವಿನ ತಾಯಿ ಬಂದು ನನ್ನ ಕಾಲಿಗೆ ಬಿದ್ದು ನನ್ನ ಮಗನನ್ನು ಬದುಕಿಸಿದ ನನ್ನ ಪಾಲಿನ ದೇವರು ನೀವು. ಅಕೆಯ ಕಣ್ಣೀರು ನನ್ನ ಕಾಲಿಗೆ ಬಿದ್ದಾಗ ಎಚ್ಚರ. ಆಕೆಯನ್ನು ಕೈಹಿಡಿದು ಮೇಲೆತ್ತಿ ಆಕೆಗೆ ಮಗುವನ್ನಿತ್ತೆ.
"ನನ್ನನ್ನು ಬದುಕಿಸಿ ಕೈತುತ್ತು ಇಕ್ಕವರ ವಿರುದ್ದ ಏನೇನೋ ಹೇಳಲು ಎಳೆದುಕೊಂಡು ಬಂದಿದ್ದಾರೆ."
ಏನು ನಡೆಯುತ್ತಿದೆ ಎನ್ನುವದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬಂದೆ. ನನ್ನ ಭುಜದ ಮೇಲೆ ಕೈ ಇಟ್ಟ ಅನುಭವ ಮತ್ತು ಕೇಳಿಸಿದ್ದು ಯುವರಾಜ ರಾಯಮುರಾರಿಯ ಧ್ವನಿ

“ಈ ರೀತಿಯ ಮಹಾನುಭಾವಿಗಳು ನಮ್ಮ ರಾಜ್ಯದಲ್ಲಿದ್ದಾರೆ ಎನ್ನುವದು ಹೆಮ್ಮೆಯ ವಿಷಯ. ಬರಗಾಲ ಭೀಕರತೆಯಿಂದ ಜನರನ್ನು ಪಾರುಮಾಡಲು ಅಣ್ಣಾ ಬಸವಣ್ಣವರು ತೆಗೆದುಕೊಂಡ ನಿರ್ಣಯಗಳು ಅವರ್ಣನೀಯ. ರಾಜನ ಅನುಮತಿಪಡೆದಿಲ್ಲ ಎಂದು ಎನಿಸಿದರೂ ರಾಜಕೋಶಕ್ಕೆ ತೊಂದರೆಯಾಗದ ರೀತಿಯಲ್ಲಿ ಅವಶ್ಯಕ ಕ್ರಮಕೈಕೊಂಡದ್ದು ಅಭಿನಂದನಾರ್ಹ ಅದಕ್ಕಾಗಿ ಎಲ್ಲರೂ ಎದ್ದುನಿಂತು ಚಪ್ಪಾಳೆ ತಟ್ಟಿ ಅಭಿನಂದಿಸಿ”

ಆಗ ಅಲ್ಲಿ ಎಲ್ಲರೂ ಎದ್ದು ನಿಂತು ತಟ್ಟಿದ ಚಪ್ಪಾಳೆ ಸದ್ದು ಎಲ್ಲ ಕಡೆ ಪ್ರತಿದ್ವನಿಸಿತು.

ನಾನೀಗ ಪೂರ್ಣ ಎಚ್ಚರವಾಗಿದ್ದೆ ರಾಯಮುರಾರಿ ಕೈ ನನ್ನ ಭುಜದ ಮೇಲಿದ್ದರೂ ಅದು ಕಂಪಿಸುವ ಅನುಭವ ಆಯಿತು.

ಅಲ್ಲಿಯ ಆಸ್ಥಾನಿಕರೆಲ್ಲ ಚಪ್ಪಾಳೆ ತಟ್ಟುತ್ತಿದ್ದರೂ ಕೆಲವರ ಮುಖ ಇಂಗು ತಿಂದ ಮಂಗನಂತಾಗಿತ್ತು.

ಎಲ್ಲ ಶಾಂತವಾದ ಮೇಲೆ ಯುವರಾಜ ರಾಯಮುರಾರಿ ಮಾತು ಮುಂದುವರೆಸಿದರು

“ನಿಷ್ಠಾವಂತ ಸತ್ಯವಂತ ಗುರುವ ಮಹಾರಾಜರ ಮನದಲ್ಲಿದ್ದ ತಪ್ಪುಗ್ರಹಿಕೆಗಳನ್ನು ದೂರಮಾಡಿದರು. ಇವರನ್ನು ಮಹಾರಾಜರು ಸನ್ಮಾನಿಸಬೇಕು ಮತ್ತು ಇವರು ಕಲ್ಯಾಣದ ಸಮೀಪದಲ್ಲಿಯೇ ಇರಬೇಕು ಎನ್ನುವದಕ್ಕಾಗಿ “ಖರೋಸಾ” ಸುತ್ತಮುತ್ತಲ ಐದು ಹಳ್ಳಿಗಳು ಮತ್ತು ಆ ಕಾಡನ್ನು ಇವರಿಗೆ ಕೊಟ್ಟು ಆಡಳಿತಗಾರರನ್ನಾಗಿ ಮಾಡಬೇಕು. ಇವರ ಸೇವೆಗಾಗಿ ಇಪ್ಪತ್ತೊಂದು ಸೇವಕರನ್ನು ಮತ್ತು ಧನ ಕನಕ ಕೊಟ್ಟು ಹರಸಲಿ ಎಂದು ಮಹಾರಾಜರಲ್ಲಿ ಪ್ರಾರ್ಥಿಸುವೆ.”

ಮತ್ತೆ ಅಸ್ಥಾನದಲ್ಲಿ ಕರತಾಡನ ಮತ್ತು “ಬಿಜ್ಜಳ ಮಹಾರಾಜರಿಗೆ ಜಯವಾಗಲಿ” “ಯುವರಾಜ ರಾಯಮುರಾರಿ ಉಘೆ ಉಘೆ” ಎನ್ನುವ ಘೋಷಗಳು ಮೊಳಗಿದವು.

ಮಹಾರಾಜರು ನನ್ನನ್ನು ಹತ್ತಿರ ಕರೆದರು ನನ್ನ ಕೈಗೆ ದಾನಪತ್ರ ವಿತ್ತರು ಕೊರಳಲ್ಲಿ ಒಂದು ಪದಕ ಹಾಕಿ ನನಗೆ ತಮ್ಮೊಡನೆ ಬರಲು ಹೇಳಿ ಎದ್ದು ಒಳನಡೆದರು.

ಮಹಾರಾಣಿ ಅವರ ಹಿಂದೆ ನಾನು ಒಳನಡೆದೆವು. ಕೊರಳಲ್ಲಿ ಪದಕ ನೇತಾಡುತ್ತಿತ್ತು.

ಯಾಕೋ ನನಗೆ ಹರಕೆಯ ಕುರಿಯ ನೆನಪಾಯಿತು.

ಗುರುಗಳು ಮುಂಜಾನೆ ಹೇಳಿದ ಮಾತುಗಳು ನೆನಪಿಗೆ ಬಂತು

“ ಪರುಷಕಟ್ಟೆಯಲ್ಲಿ ನನ್ನ ಕುರಿಯ ಬಲಿಕೊಡುವಷ್ಟರಲ್ಲಿ ದೂರ ಹೋಗಬೇಕು”.

ನನ್ನನ್ನು ಮೊದಲಿಗೆ ಕುಳಿತಿದ್ದ ಖೋಲಿಗೆ ಯೋಧನೊಬ್ಬ ಕರೆದುಕೊಂಡು ಬಂದ. ನಾನಲ್ಲಿ ಕುಳಿತೆ. ಮನಸ್ಸು ಶಾಂತವಾಗಿತ್ತು. ಬಸವಣ್ಣ ಎಲ್ಲಾ ನಿನ್ನ ಕರುಣೆ.

ವೀರಭದ್ರ ಆ ಖೋಲಿಯಲ್ಲಿ ಕಿವಿಗಳಿವೆ ಎಂದಿದ್ದ. ಆದರೆ ಅಲ್ಲಿ ಪಿಸುಮಾತನಾಡುವ ಬಾಯಿಗಳಿವೆ ಎನಿಸಿತು.
“ದೇವರ ದಯೆ ಆರೋಪ ಹೊರಿಸಿ ಅಣ್ಣ ಬಸವಣ್ಣನವರನ್ನು ಕಲ್ಯಾಣದಿಂದ ಹೊರಹಾಕುವ ಈ ಬಡಪಾಯಿಯನ್ನು ಗಲ್ಲಿಗೇರಿಸುವ ಯುವರಾಜರ ಯೋಜನೆ ಹುಸಿಯಾಯಿತು” ಆದರೆ ಪಿಸುಮಾತು ಎಲ್ಲಿಂದ ಬಂತು ಗೊತ್ತಾಗಲಿಲ್ಲ.
ಇದೊಂದು ಮಾಯಾಗೃಹ. ಕಾಯುವ ಗುರುವಿದ್ದಾಗ ನಾನೇಕೆ ಚಿಂತಿಸಬೇಕು?

**ಹರ ತನ್ನ ಭಕ್ತರ ತಿರಿವಂತೆ ಮಾಡುವ ಒರೆದು ನೋಡುವ ಮಿಸುನಿಯ ಚಿನ್ನದಂತೆ.**

**ಅರೆದು ನೋಡುವ ಚಂದನದಂತೆ.**

**ಅರಿದು ನೋಡುವ ಕಬ್ಬಿನ ಕೋಲಿನಂತೆ. ಬೆದರದೆ ಬೆಚ್ಚದೆ ಇರ್ದಡೆ**

**ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥನು.** / 162

--- ದೇವರ/ಜೇಡರ ದಾಸಿಮಯ್ಯ

ಗಮನಿಸಿ:

ಕೆಲಸಕ್ಕೆ ಸೆರಿದ ಕೆಲವು ದಿನಗಳ ಬಳಿಕ ನಾನು ನನ್ನ ಪ್ರಾಧ್ಯಾಪಕರಾದ ಡಾ ಅಮೂರ ಅವರನ್ನು ಭೆಟ್ಟಿಯಾಗಿದ್ದೆ. ಅವರು ನೀನು ಒಳ್ಳೆಯ ಅಧ್ಯಾಪಕನಾಗಬೇಕಾದರೆ ಎರಡು ಕೆಲಸ ಮಾಡು

1. ಯಾವುದೇ ಕ್ಲಾಸಿಗೆ ಟಿಪ್ಪಣಿ (notes) ಮಾಡಿಕೊಳ್ಳದೇ ಹೊಗಬೇಡ. ಆ ಕ್ಲಾಸ ಮುಗಿದ ಮೇಲೆ ಆ ಟಿಪ್ಪಣಿಗಳನ್ನು ಎಸೆದುಬಿಡು.

2. ಕ್ಲಾಸಿನಲ್ಲಿ ಕಲಿಸುವಾಗ ಆ ಟಿಪ್ಪಣಿಗಳನ್ನು ಅಪ್ಪಿತಪ್ಪಿಯೂ ನೋಡಬೇಡ.

ಆ ಮಾತನ್ನು ನಿವೃತ್ತನಾಗುವವರೆಗೆ ಪಾಲಿಸಿದ ಸಮಾಧಾನವಿದೆ. ಪ್ರತಿದಿನ ಓದುವ ಮತ್ತು ಕ್ಲಾಸಿನ ಟಿಪ್ಪಣಿ ಹೊಸದಾಗಿ ಮಾಡುತ್ತಿದ್ದರಿಂದ ನನಗೆ ಸಮಯದ ಅಭಾವವಾಗುತ್ತಿತ್ತು. ನನ್ನ ಡಿಪಾರ್ಟಮೆಂಟನಲ್ಲಿ ಇಬ್ಬರು ಹಿರಿಯರು ಉಳಿದವರೆಲ್ಲ ಗೆಳೆಯರು. ಆ ಕಾಲದಲ್ಲಿ ನಮ್ಮ ಕಾಲೇಜಿನಲ್ಲಿ ಸ್ಕೂಟರ ಇದ್ದದ್ದು ನಮ್ಮ ಪ್ರೊ ದೇಶಪಾಂಡೆ ಅವರ ಹತ್ತಿರ ಮಾತ್ರ. ಅವರು ಕಾಲೇಜಿನ ಮುಂದೆ ಸ್ಕೂಟರ ನಿಲ್ಲಿಸಿದರೆ 10 ಗಂಟೆಯಾಯಿತು ಎಂದರ್ಥ. ಅವರು ಬಂದಾಗ ನಮ್ಮೆಲ್ಲರನ್ನು ನೋಡಿ ನಗುತ್ತಿದ್ದ ನಗು ಅವಿಸ್ಮರಣೀಯ. ಇನ್ನು ಕಾಲೇಜ ಮುಗಿದಾಗ ಗೆಳೆಯರೆಲ್ಲ ನಮ್ಮ ಡಿಪಾರ್ಟಮೆಂಟನಲ್ಲಿ ಹಾಜರ. ಹೋಟೆಲಿನಿಂದ ಕಟಮಿರ್ಚಿ ಬಂದಿತೆಂದರೆ 5.30 ಆಗಿದೆ ಎಂದು ಎಲ್ಲರಿಗೂ ಗೊತ್ತಾಗುತ್ತಿತ್ತು. ಹರಟೆ ಹೊಡೆದು ಕಟಮಿರ್ಚಿ ತಿಂದು ಚಹಾಕುಡಿದು ಮನೆ ಹೋಗುವದು ವಾಡಿಕೆ. ಹಾಗಾಗಿ ದಿನವಲ್ಲ ವರ್ಷಗಳು ಕಳೆದದ್ದೇ ಗೊತ್ತಾಗಲಿಲ್ಲ.

ಹೀಗಿರುವಾಗ ಒಂದು ಸಾಯಂಕಾಲ ಅಧ್ಯಕ್ಷರಿಂದ ನನಗೊಂದು ಆರ್ಡರ ಬಂದಿತು. ಕಾಲೇಜ ಸುಧಾರಣೆಗಾಗಿ ನಿಮ್ಮನ್ನು ಉಪಪ್ರಾಚಾರ್ಯರನ್ನಾಗಿ ನೇಮಿಸಲಾಗಿದೆ ನಾಳೆಯಿಂದ ಕಾರ್ಯನಿರ್ವಹಿಸಿ ಎನ್ನುವ ಆದೇಶ ಅದರಲ್ಲಿತ್ತು. ಉಪಪ್ರಾಚಾರ್ಯ ಪದವೇ ಹೊಸದು ಅದು ಸರಕಾರೀ ಹುದ್ದೆಯಲ್ಲ ಅದು ಅಧ್ಯಕ್ಷರ ಕೊಡುಗೆ. ಕೆಲಸ ಕಾರ್ಯ ಮತ್ತು ಜವಾಬ್ದಾರಿ ಬಗ್ಗೆ ಆಮೇಲೆ ವಿಚಾರಿಸಿದರಾಯಿತು ಎಂದು ಮನೆಗೆ ಹೋದೆ.

ಮರುದಿನ ಕಾಲೇಜಿಗೆ ಬಂದೆ. ಸಾಮಾನ್ಯವಾಗಿ ನನ್ನ ನೋಡಿ ಮುಗುಳ್ನಗುತ್ತಿದ್ದ ಸಿಬ್ಬಂದಿ ಎದ್ದು ನಿಂತು ನಮಸ್ಕಾರ ಸರ್ ಎಂದಾಗ ನನಗೇ ವಿಚಿತ್ರವೆನಿಸಿತು. “ಇವ ಅಧ್ಯಕ್ಷರ ಚಮಚಾ ಎಚ್ಚರದಿಂದಿರಬೇಕು” ಎನ್ನುವ ಗೆಳೆಯರಿಬ್ಬರ ಪಿಸುಮಾತು ನನ್ನ ಬೆನ್ನಿಗಪ್ಪಳಿಸಿತು. ಡಿಪಾರ್ಟಮೆಂಟಿಗೆ ಹೋದೆ ಹರಟೆ ಹೊಡೆಯುತ್ತಿದ್ದವರೆಲ್ಲ ಸುಮ್ಮನಾಗಿ ಓದುವದರಲ್ಲಿ ಮಗ್ನರಾದರು. ಸಾಯಂಕಾಲ ಕೆಲಸವಿದೆ ಎಂದು ಎಲ್ಲರೂ ಚಹಾ ಕುಡಿಯದೇ ಹೊದರು.

ಪ್ರಾಚಾರ್ಯರಿಗೆ ಸಹಾಯ ಮಾಡುವದನ್ನು ಬಿಟ್ಟು ಯಾವ ಹೆಚ್ಚಿನ ಕೆಲಸವಿರದಿದ್ದರೂ ನಾನು ಅಧ್ಯಕ್ಷರ ಒಲವಿನ ಗುಂಪಿನೊಡನೆ ಒಂದಾಗದೇ ನನ್ನ ಗೆಳೆಯರ ಬಳಗದಿಂದಾ ದೂರವಾಗಿ ಕೆಲವು ತಿಂಗಳು ಕಳೆದೆ. ಒಂದು ದಿನ ಅಧ್ಯಕ್ಷರಿಗೆ ನನಗೆ ಓದಲು ವೇಳೆ ಸಿಗುತ್ತಿಲ್ಲ ಹಾಗಾಗಿ ಉಪಪ್ರಾಚಾರ್ಯ ಆಗಿ ಬೇರೆಯವರನ್ನ ನೇಮಿಸಿ ಎಂದೆ. ಅವರು “ಅದಕ್ಕಾಗಿ ಬಹಳಜನ ಕಾಯುತ್ತಿದ್ದಾರೆ, ಕರೆದು ಹೆಣ್ಣು ಕೊಟ್ಟರೆ ಮಲರೋಗ ಬಂದಿತು ಎನ್ನುವ ಹಾಗಾಯಿತು ನಿನ್ನ ಸ್ಥಿತಿ” ಎಂದು ನಕ್ಕು ಸುಮ್ಮನಾದರು.

ಆ ಅವಧಿಯಲ್ಲಿ ಅನುಭವಿಸಿದ ಕಹಿ ಅನುಭವ ಈ ಕನಸಿನ ಭಾಗಕ್ಕೆ ಪ್ರೇರಣೆಯಾಗಿರಬಹುದು.

**ಅಹುದಹುದು ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.**
**ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ,**
**ಉರಿಯೊಳಡಗಿದ ಕರ್ಪುರದಂತೆ, ಬಯಲನಪ್ಪಿದ ವಾಯುವಿನಂತೆ**
**ಇಪ್ಪ ನಿಲವು ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ ?**
**ಅರಿವಡೆ ಮತಿಯಿಲ್ಲ, ನೆನೆವಡೆ ಮನವಿಲ್ಲ**
**ಎನ್ನ ಅಜಗಣ್ಣ ತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ**
**ನಮೋ ನಮೋ ಎನುತಿರ್ದೆನು.** / 6- -- ಮುಕ್ತಾಯಕ್ಕ

ಅಲ್ಲಿ ನಾನೊಬ್ಬನೇ ಮೌನವಾಗಿ ಕುಳಿತೆ. ಇಂದು ನಡೆದ ಘಟನೆಗಳೆಲ್ಲ ಕಣ್ಣ ಮುಂದೆ. ರಾಜಕಾರಣದ ಸೂತ್ರಗೊಂಬೆ ನಾನು ಎನಿಸಿತು.

ಅಣ್ಣ ಬಸವಣ್ಣ ದಾರಿ ತೋರಿಸುತ್ತಾನೆ ಎನಿಸಿದ ಮೇಲೆ ಮನಸ್ಸು ಶಾಂತವಾಯಿತು.

ಯೋಧರು ಅಲ್ಲಿದ್ದ ಆಸನಗಳನ್ನೆಲ್ಲ ತೆಗೆದು ಹೋದರು. ಈಗ ಮಹಾರಾಜರ ಮತ್ತು ಮಹಾರಾಣಿಯರ ಆಗಮನವಾಯಿತು. ನಾನು ಎದ್ದು ನಿಂತು ಶರಣು ಶರಣಾರ್ಥಿ ಎಂದೆ. ಅವರು ಕುಳಿತ ಮೇಲೆ ನನಗೂ ಕುಳಿತುಕೊಳ್ಳಲು ಹೇಳಿದರು. ಸ್ವಲ್ಪ ಹೊತ್ತು ಮೌನ ಆವರಿಸಿತ್ತು. ಹೆಣ್ಣುಮಗಳೊಬ್ಬಳು ಬಟ್ಟಲು ತಂದು ಮುಂದಿಟ್ಟಳು.

**ಮಹಾರಾಣಿ:** ಮಜ್ಜಿಗೆ ಕುಡಿ.

**ಗುರುವ:** ಆಗಲಿ ಮಹಾರಾಣಿ.

**ಮಹಾರಾಣಿ:** ಅಮ್ಮ ಅನ್ನುವದನ್ನು ಆಗಲೇ ಎಲ್ಲರಂತೆ ನೀನು ಮರೆತುಬಿಟ್ಟೆಯಾ.

**ಮಹಾರಾಜ:** ಮತ್ತೆ ಅವನೀಗ ಆಡಳಿತಗಾರ.

**ಗುರುವ:** ತಪ್ಪಾಯಿತು ಅಮ್ಮ. ಇಂದು ನಡೆದ ಘಟನೆಗಳೆಲ್ಲ ನೋಡಿ ಮನದಲ್ಲಿ ಗೊಂದಲವಾಗಿದೆ. ನಾನು ನಿಮ್ಮಲ್ಲಿ ಕೆಲವು ಬೇಡಿಕೆಗಳನ್ನು ಇಡಬೇಕು ಅನಿಸುತ್ತಿದೆ. ಮಾತನಾಡುವಾಗ ತಪ್ಪಾದರೆ ಕ್ಷಮಿಸಿ.

**ಮಹಾರಾಜ:** ಕೊಟ್ಟ ಪದವಿ ಮರಳಿ ಕೊಡುವ ಸಂಪ್ರದಾಯವಿಲ್ಲ. ಬೇರೇನಾದರು ಇದ್ದರೆ ಹೇಳು.

**ಮಹಾರಾಣಿ:** ಗೆಳೆಯ ಅಣ್ಣ ಬಸವಣ್ಣನ ವಿಚಾರ ಮಾಡಬೇಕು ಎನ್ನುವ ಗೊಂದಲದಲ್ಲಿದ್ದ ಮಹಾರಾಜರಿಗೆ ಸಮಸ್ಯೆ ಪರಿಹಾರವಾಗಿ ಸಮಾಧಾನವಾಗಿದೆ. ಅವರು ಸಂತೋಷದಲ್ಲಿದ್ದಾರೆ. ಏನು ಬೇಕಾದರು ಕೇಳು ದಯಪಾಲಿಸುತ್ತಾರೆ. ನಾನು ಏನು ಕೇಳಬೇಕು ಅಂತ ವಿಚಾರಸಲಾಕ ಹತ್ತೀನಿ.

**ಮಹಾರಾಜ:** ನಾನು ನಿನ್ನನ್ನು ದನಗಳಷ್ಟೇ ಪ್ರೀತಿಸುತ್ತವೆ ಅಂತ ತಿಳಿದಿದ್ದೆ. ಆದರೆ ಮಕ್ಕಳು ನಿನ್ನನ್ನು ಪ್ರೀತಿಸುತ್ತವೆ ಎನ್ನುವದೂ ಗೊತ್ತಾಯಿತು. ಆ ಮಗು ಮತ್ತು ಹೆಣ್ಣುಮಗಳು ತೋರಿಸಿದ ಪ್ರೇಮ ಭಾವ ನಡೆದ ಘಟನೆಗಳನ್ನೆಲ್ಲ ವಿವರಿಸಿದವು. ಅಂದ ಹಾಗೆ ಆ ಹೆಣ್ಣುಮಗಳು ಏನು ಹೇಳಿದಳು?

ಯುವರಾಜ ರಾಯಮುರಾರಿ ಬರುತ್ತಿದ್ದಾರೆ ಎನ್ನುವ ಘೋಷ ಕೇಳಿಸಿತು. ಅವರಿಬ್ಬರೂ ಗಂಭೀರರಾದರು.

ನಾನು ಎದ್ದುನಿಂತೆ ಅವರು ಬಂದೊಡನೆ ಕೈಮುಗಿದು "ಶರಣು ಶರಣಾರ್ಥಿ" ಎಂದೆ.

ಅವರು ನನ್ನ ಸನಿಹ ಬಂದು ಹೆಗಲ ಮೇಲೆ ಕೈಹಾಕಿ

**ಯುವರಾಜ:** ನೀನೀಗ ಆಡಳಿತಗಾರ "ರಾಜಕುಮಾರನಿಗೆ ಜಯವಾಗಲಿ" ಎನ್ನಬೇಕು. ನಾನು ಶರಣನಲ್ಲ ನೀನು ಶರಣನಲ್ಲ. ಆಡಳಿತಗಾರನಲ್ಲಿ ಜನರನ್ನು ಹೆದರಿಸುವ ಗತ್ತಿರಬೇಕು.

**ಗುರುವ;** ಆಗಲಿ ಯುವರಾಜ. ಎಲ್ಲವನ್ನೂ ಕಲಿಯುತ್ತೇನೆ.

ಯುವರಾಜ ತಂದೆ ತಾಯಿಗೆ ನಮಸ್ಕರಿಸಿ ತಾಯಿಯ ಮಗ್ಗಲು ಕುಳಿತ.
**ಮಹಾರಾಜ:** ಎನೋ ಕೇಳಬೇಕೆಂದಿದ್ದೆ ಕೇಳು.
**ಗುರುವ:** ನಾಳೆಯಿಂದ ದಿನಾಲೂ ನಿಮಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ತಲುಪಿಸಬೇಕು ಎಂದು ನಿರ್ಧರಿದ್ದೆ.
**ಯುವರಾಜ**: ಈಗ ಏನಾಗಿದೆ ನಾಳಿಯಿಂದ ನಿನ್ನ ಸೇವಕರಿಂದ ಕಳಿಸಿಕೊಡು. ನೀನೀಗ ಆಡಳಿತಗಾರ ಮಹಾರಾಜರು ಕರೆದಾಗ ಮಾತ್ರ ಭೆಟ್ಟಿಯಾಗಬೇಕು.
**ಗುರುವ:** ಹಾಗೇ ಆಗಲಿ ಯುವರಾಜ. ರಾಜ ಬೊಕ್ಕಸದಿಂದ ನನ್ನ ಸೇವಕರಿಗೆ ಹಣ ಸಂದಾಯವಾಗುವದು ಬೇಡವಾಗಿದೆ.
**ಯುವರಾಜ**: ಅದಕ್ಕೇನು ಮಾಡಬೇಕೆಂದಿರುವೆ.
**ಗುರುವ:** ಅವರಲ್ಲಿ ಕೆಲವರು ನನ್ನ ಕಾಯುವ ಜೊತೆಗೆ ಹೊಲ ಊಳುವ ಕೆಲಸ ಮಾಡಿದರೆ ದಿನಾಲೂ ಅರಮನೆಗೆ ಬೇಕಾದ ಕಾಯಿಪಲ್ಲೆ ಮತ್ತು ಪೂಜೆಗೆ ಬೇಕಾದ ಹೂ ಕಳಿಸಲಾಗುತ್ತದೆ. ಇನ್ನುಳಿದವರು ಕಟ್ಟಿಗೆ ಕಡಿಯುವ ಕೆಲಸ ಮಾಡಿದರೆ ದಿನಾಲೂ ಅರಮನೆಯ ಅಡಿಗೆಗೆ ಬೇಕಾಗುವ ಒಣ ಕಟ್ಟಿಗೆ ಜೊತೆಗೆ ಅಡವಿಯಲ್ಲಿಯ ಹಣ್ಣುಹಂಪಲು ಮತ್ತು ಜೇನು ಕಳಿಸಲಾಗುತ್ತದೆ. ದಿನಾಲೂ ಮಹಾರಾಣಿಯವರ ಸೇವೆ ಮಾಡುವ ಭಾಗ್ಯ ನನಗೆ ಸಿಗುತ್ತದೆ.
**ಮಹಾರಾಣಿ:** ನನಗಿರುವ ತೊಂದರೆ ನಿನಗರ್ಥವಾಯಿತು ನೋಡು. ಹಾಗೆ ಮಾಡು.
**ಯುವರಾಜ:** ಅಲ್ಲ ಸೇವಕರಿಗೆ ಹಣ ಸಂದಾಯ ಮಾಡುವ ಬಗೆ.
**ಗುರುವ:** ನನ್ನ ಜೊತೆ ಕಳಿಸುವ ಎಲ್ಲ ಇಪ್ಪತ್ತೊಂದು ಜನರಿಗೆ ಬಂಡಿ ಜೊತೆ ಎತ್ತು ಮತ್ತು ಒಕ್ಕುಲತನ ಮಾಡುವ ಸಾಮಾನು ಕೊಟ್ಟು ಕಳಿಸಿಬಿಡಿ. ಕಟ್ಟಿಗೆ ಮಾರಲು ಅನುಮತಿ ಕೊಡಿ ಬಂದ ಆದಾಯದಲ್ಲಿ ಅವರ ಜೀವನ ನಿರ್ವಹಣೆ ಆಗುತ್ತದೆ.
**ಮಹಾರಾಜ:** ನಿನಗಾಗಿ ಒಂದು ಮನೆ ಬೇಕಲ್ಲ.
**ಗುರುವ:** ಅದೇನು ಬೇಡ ಮಹಾರಾಜ. ನನಗೆ ನನ್ನ ಗೆಳೆಯರ ಜೊತೆ ಗುಡ್ಡದ ಪುಟ್ಟ ಗವಿಯಲ್ಲಿ ಇದ್ದು ನನ್ನ ಎಣ್ಣೆ ತೆಗೆಯುವ ಕಾಯಕ ಮಾಡಿಕೊಂಡಿರಬೇಕು ಎನ್ನುವ ಆಶೆ.
**ಮಹಾರಾಜ:** ಗೊತ್ತಾಯಿತು ಬಿಡು ನಿನ್ನ ಬೆನ್ನತ್ತಿದ ದನಗಳ ಬಿಟ್ಟು ಇರಲಾಗುವದಿಲ್ಲ. ಹಾಗೇ ಆಗಲಿ ನಾನೇಕೆ ನಿನ್ನ ಮತ್ತು ನಿನ್ನ ಗೆಳೆಯರ ಮಧ್ಯ ಬರಲಿ.
ಮಹಾರಾಣಿ ಮತ್ತು ಮಹಾರಾಜರಿಗೆ ನಗು ತಡೆಯಲಾಗಲಿಲ್ಲ ಮುಕ್ತವಾಗಿ ನಕ್ಕರು.
**ಯುವರಾಜ:** ನೀನೇನೊ ದೊಡ್ಡ ಬಹುಮಾನ ಕೇಳುತ್ತಿ ಎಂದುಕೊಂಡಿದ್ದೆ. ಇವೆಲ್ಲ ಮಹಾರಾಜರನ್ನು ಕೇಳಬೇಕಾ.?
**ಗುರುವ:** ಧನ್ಯವಾದಗಳು ಯುವರಾಜ. ಕೊಡುಗೈ ದೊರೆಗಳು ನೀವು. ಇನ್ನೊಂದು ಕೋರಿಕೆ.
**ಯುವರಾಜ:** ನೀನು ಕೇಳದೆಯೇ ಒಪ್ಪಬಹುದು ಆದರೂ ಏನು ಬೇಕು ಹೇಳು.

**ಗುರುವ:** ಸಾಕುಪ್ರಾಣಿಗಳಷ್ಟೆ ಕಾಡುಪ್ರಾಣಿಗಳು ಮುಖ್ಯ. ಕಾಡಿನಲ್ಲಿ ಬೇಟೆಯಾಡಬಾರದು ಎನ್ನುವ ರಾಜಾಜ್ಞೆಯಾಗಬೇಕು.
**ಯುವರಾಜ**: ಅವುಗಳ ಬೇಟೆಯಾಡದಿದ್ದರೆ ಅವುಗಳು ನಿನ್ನನ್ನು ಬೇಟೆಯಾಡುತ್ತವೆ.
**ಮಹಾರಾಜ**: ಹೋಗಲಿ ಬಿಡು. ನಾನೂ ಮೊದಲಾಗಿ ಯಾರೂ ಬೇಟೆಯಾಡಬಾರದು ಎಂಬ ಆಜ್ಞೆ ಈಗಿನಿಂದಲೇ ಜಾರಿಯಾಗುತ್ತದೆ. ನಿನ್ನ ಎಲ್ಲ ನಿರ್ಣಯಗಳಿಗೆ ನನ್ನ ಸಮ್ಮತಿ ಇರುತ್ತದೆ ನಿನ್ನನ್ನು ಯಾರು ಪ್ರಶ್ನಿಸುವದಿಲ್ಲ. ನಿರ್ಭೀತಗಾಗಿ ಕಾರ್ಯಮಾಡು.
**ಮಹಾರಾಣಿ:** ನನ್ನದೂ ಒಂದು ಕೋರಿಕೆ ಇದೆ ಮಹಾರಾಜ.
**ಮಹಾರಾಜ**: ಏನು ಬೇಕು ಹೇಳು ಬಹಳ ದಿನದಿಂದ ನೀನೇನು ಕೇಳಲಿಲ್ಲ.
ಮಹಾರಾಣಿ: ಪ್ರತಿತಿಂಗಳು ಹುಣ್ಣಿಮೆಯ ದಿನ ಗುರುವಿನ ಮನೆಯಲ್ಲಿ ಬೆಳದಿಂಗಳೂಟ ಮಾಡಲು ಅನುಮತಿ ಬೇಕು.
**ಮಹಾರಾಜ:** ನೀನೇನು ಚಿಂತೆ ಮಾಡಬೇಡ ನನ್ನನ್ನೂ ಜೊತೆಗೆ ಕರೆದುಕೊಂಡು ಹೋದರೆ ಮಾತ್ರ ಅನುಮತಿ ಕೊಡುತ್ತೇನೆ. ಇದಕ್ಕೆ ನಿನ್ನ ಸಮ್ಮತಿ ಇದೆಯಾ ಯುವರಾಜ?.
**ಯುವರಾಜ:** ನಿಮ್ಮ ಸಂತೋಷವೇ ನನ್ನ ಸಂತೋಷ.
**ಮಹಾರಾಜ**: ಸರಿ ನಾವಿನ್ನು ವಿಶ್ರಾಂತಿ ಪಡೆಯಲು ಹೋಗುತ್ತೇವೆ. ಯುವರಾಜ ನೀನು ಅವನು ಹೋಗಲು ಏರ್ಪಾಡು ಮಾಡು.
ನಾನು ಎದ್ದು ಹೋಗಿ ಅವರ ಪಾದಕ್ಕೆರಗಿದೆ. ಅವರು ಆಶಿರ್ವದಿಸಿದರು. ಮಹಾರಾಣಿ ಮತ್ತು ಮಹಾರಾಜ ವಿಶ್ರಾಂತಿಗಾಗಿ ತೆರಳಿದರು
**ಯುವರಾಜ:** ನೀನಿಲ್ಲೇ ಇರು ನಿನ್ನನ್ನು ಕಳಿಸುವ ಏರ್ಪಾಡು ಮಾಡುವೆ. ನೀನು ಇಲ್ಲೇ ಇರು.
ನನಗೆ ಬಹಳ ದಣಿವಾದ ಅನುಭವವಾಗಿ ಅಲ್ಲಿಯೇ ಒರಗಿದೆ.

1. **ನಡೆಯಲಾರದ ಹೆಳವಂಗೆ ಅಂಧ ಹೆಂಡತಿ ದೊರೆತರೆ ನಡೆವುದೇನಯ್ಯಾ**
   **ಅವರ ಜೀ[ವಿ]ತರೂಪ ?**
   **ನುಡಿಯಿಲ್ಲದ ಮೂಕಮಾನವಂಗೆ ಅರಸುಪಟ್ಟಬಂದರೆ, ಪ್ರಜೆ ಪರಿವಾರ ರಾಜ್ಯವ**
   **ನಡೆಸಿಕೊಳಬಲ್ಲನೇನಯ್ಯಾ ?**
   **ಅಜ್ಞಾನಗುಣ ಮಾಯಕಹರಿವನಕ ಸುಜ್ಞಾನಸಂಸಾರವುಂಟೇನಯ್ಯಾ ?**
   **ಜೀವನ ಬುದ್ಧಿಗುಣವುಳ್ಳನಕ್ಕ ಪರಮಾತ್ಮನ ಬೋಧೆಗೆ ಹರಿಯೆ ಸ್ವಸ್ಥಿರ ಚಿತ್ತನಯ್ಯಾ !**
   **ಸಂಸಾರಮಾಯೆ ಪ್ರಾಣವಾಗಿಪ್ಪವರಿಗೆ ನಿಃಸಂಸಾರವುಂಟೇನಯ್ಯಾ ಪರಮಗುರು ಪಡುವಿಡಿ**
   **ಸಿದ್ಧಮಲ್ಲಿನಾಥ ಪ್ರಭುವೆ ?** / 158

--- ಹೇಮಗಲ್ಲ ಹಂಪ

2. ಸಾಣೆಯ ಮೇಲೆ ಶ್ರೀಗಂಧವನಿಟ್ಟು, ಗಂಧ ಗಂಧವೆಂದಡೆ ಗಂಧವ ಕೊಡಬಲ್ಲುದೆ ?
ಜಡಚಕ್ರದೊಳಗೆ ಧಾನ್ಯವ ನೀಡಿ ಹಿಟ್ಟೆಂದಡೆ ಹಿಟ್ಟಾಗಬಲ್ಲುದೆ ?
ಗಾಣಕ್ಕೆ ಎಳ್ಳು ನೀಡಿ, ಎಣ್ಣೆ ಎಣ್ಣೆ ಎಂದಡೆ ಎಣ್ಣೆ ಬೀಳಬಲ್ಲುದೆ ?
ಪಂಚಾಮೃತವ ಪಾಕವ ಮಾಡಿ ಎಡೆಯ ಬಡಿಸಿ ಮುಂದಿಟ್ಟುಕೊಂಡು, ಹೊಟ್ಟೆ ತುಂಬು ತುಂಬು ಎಂದಡೆ
ಹೊಟ್ಟೆ ತುಂಬಿ ಹಸುವಡಗಬಲ್ಲುದೆ ?
ಹಾಗೆ ಜಡರೂಪವಾದ ಲಿಂಗವ ಜಡಮತಿಗಳಾದ ಗುರುಮುಖದಿಂ ಪಡಕೊಂಡು ಅಂಗದ ಮೇಲೆ ಇಷ್ಟಲಿಂಗವೆಂದು ಧರಿಸಿ ಆ ಲಿಂಗಕ್ಕೆ ಮುಕ್ತಿಯ ಕೊಡು ಕೊಡು ಎಂದಡೆ, ಆ ಲಿಂಗವು ಮುಕ್ತಿಯ ಕೊಡಲರಿಯದು.
ಅದೆಂತೆಂದೊಡೆ : ಚಂದನ, ಧಾನ್ಯ, ತಿಲಪಂಚಪಾಕವನು 'ಮರ್ದನಂ ಗುಣವರ್ಧನಂ' ಎಂದುದಾಗಿ,
ಇಂತೀ ಎಲ್ಲವು ಮರ್ದನವಿಲ್ಲದೆ ಸ್ವಧರ್ಮಗುಣ ತೋರಲರಿಯವು.
ಹಾಗೆ ಅಂತಪ್ಪ ಜಡಸ್ವರೂಪನಾದ ಲಿಂಗವನು ಜ್ಞಾನಗುರುಮುಖದಿಂ ಶಿಲಾಲಿಖಿತವ ಕಳೆದು, ಕಳಾಭೇದವ ತಿಳಿದು, ಆ ಲಿಂಗವೇ ಘನಮಹಾ ಇಷ್ಟಲಿಂಗವೆಂಬ ವಿಶ್ವಾಸ ಬಲಿದು ತುಂಬಿ ಅಂತಪ್ಪ ಇಷ್ಟಬ್ರಹ್ಮದಲ್ಲಿ ಅವಿರಳಸಂಬಂಧಿಯಾಗಿ ಆ ಇಷ್ಟಲಿಂಗದ ಸತ್ಕ್ರಿಯಾಚಾರದಲ್ಲಿ ಸರ್ವಾಂಗವನು ದಹಿಸಿದಲ್ಲದೆ ಭವಹಿಂಗದು, ಮುಕ್ತಿದೋರದು, ಮುಕ್ತಿಯ ಪಡೆಯಲರಿಯದೆ ಪ್ರಾಣಲಿಂಗಿಯಾಗಲರಿಯನು ನೋಡಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. / 454
---ಕಾಡಸಿದ್ಧೇಸ್ವರ

ಗಮನಿಸಿ:

ಯಾರೂ ಊಹಿಸಿದ ಘಟನೆಗಳು ಮತ್ತು ಇದು ಸಾಧ್ಯವೇ ಎನ್ನುವ ರೀತಿಯಲ್ಲಿ ಘಟನೆಗಳು ನಡೆದುಹೋಗುತ್ತವೆ. ಅದರಲ್ಲೂ ಮಹಾನಭಾವರ ಜಿವನದಲ್ಲಿ ಈ ತರಹದ ಘಟನೆಗಳು ನಡೆದಾಗ ಅವುಗಳು ಪವಾಡ ಎನಿಸಿಕೊಳ್ಳುತ್ತವೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡೆದ ಅನೇಕ ಘಟನೆಗಳು ಇನ್ನುಒಂದೆರಡು ಶತಮಾನಗಳ ನಂತರ ಪವಾಡಗಳೆನಿಸುವದಿಲ್ಲವೇ?. ಇತಿಹಾಸಕಾರರು ತುಂಬಾ ಜಾಣರು. ಉದಾಹರಣೆಗಾಗಿ ಬಿಜ್ಜಳ ಮಹಾರಾಜ ಮತ್ತು ಬಸವಣ್ಣನವರ ಬಗ್ಗೆ ಬರೆಯುವಾಗ ಬಸವಣ್ಣನವರ ಯೋಜನೆಗಳ ಬಲದಿಂದ ಕಲ್ಯಾಣ ಪ್ರಗತಿ ಸಾಧಿಸಿತು ಎಂದು

ಬರೆಯುವ ಸಾಧ್ಯತೆ ಬಹಳ ಕಡಿಮೆ. ಅದರ ಬದಲು ರಾಜಮಹಾಜರ ಹಿರಿಯರು ಮುಂದಾಲೊಚನೆಯಿಂದ ಕೂಡಿಸಿ ಬಚ್ಚಿಟ್ಟ ಧನವನ್ನು ಬಸವಣ್ಣ ತನ್ನ ಅಘಾದ ಜ್ಞಾನದ ಬಲದಿಂದ ಪತ್ತೆ ಹಚ್ಚಿದ ಎನ್ನುವ ಪವಾಡ ರೂಪಿಸಿ ಬರೆದ ಪ್ರಸಂಗ ಜನಮೆಚ್ಚಿಗೆ ಪಡೆದಿರಬಹುದಲ್ಲವೇ? ರಾಜ ಮತ್ತು ಅವನ ಹಿರಿಯರು ಮುಂದಾಲೋಚನೆಗಳುಳ್ಳವರು ಮತ್ತು ಬಸವಣ್ಣ ಮಹಾಜ್ಞಾನಿ ಎನ್ನುವದನ್ನು ಬರೆದು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಿರಬಹುದಲ್ಲವೇ?

## ನುಡಿಯಿಲ್ಲದ ಮೂಕಮಾನವಂಗೆ ಅರಸುಪಟ್ಟಬಂದರೆ, ಪ್ರಜೆ ಪರಿವಾರ ರಾಜ್ಯವ ನಡೆಸಿಕೊಳಬಲ್ಲನೇನಯ್ಯಾ ?

"ಏಳಿ ಆಡಳಿತಗಾರರೇ ಏಳಿ" ಎಂದು ದನಿ ಕೇಳಿ ಎದ್ದು ಕುಳಿತು ನೋಡಿದೆ. ವೀರಭದ್ರಪ್ಪ ಕೈಕಟ್ಟಿ ನಿಂತಿದ್ದ. ಎದ್ದು ಅವನ ಹಿಂದೆ ನಡೆದೆ. ಹೊರಗೆ ಸಾಲಾಗಿ ನಿಂತ ಯೋಧರು ಕತ್ತಿಯನ್ನೆತ್ತಿ ನಮಸ್ಕರಿಸಿದರು. ನಾನು ವೀರಭದ್ರಪ್ಪನ ಜೊತೆ ಬಂಡಿ ಏರಿದೆ. ಅವರ ಮಗ್ಗಲು ಕುಳಿತೆ. ಅವನು ನೀವು ಅಲ್ಲಿರುವ ಆಸನದ ಮೇಲೆ ಕುಳಿತುಕೊಳ್ಳಿ.

**ಗುರುವ:** ಯಾಕೆ ವೀರಭದ್ರಪ್ಪ ನಿನ್ನ ಮಾತಿನಲ್ಲಿ ಬದಲಾವಣೆ ಆಗಿದೆ.

**ವೀರಭದ್ರಪ್ಪ:** ಒಳಗೆ ಹೋಗುವಾಗ ನೀವು ನನ್ನಂತೆ ಕಾಯಕ ಮಾಡುವ ಸಾಮಾನ್ಯರಾಗಿದ್ದಿರಿ. ಈಗ ಮಹಾರಾಜರಿಗೆ ಆತ್ಮಿಯರಾದ ಆಡಳಿತಗಾರರಾಗಿ ಹೊರಬಂದಿದ್ದೀರಿ.

**ಗುರುವ:** ಅದು ಬಯಸದೇ ಬಂದದ್ದು. ನೀನು ಮೊದಲನೆಯ ಹಾಗೆಯೆ ನನ್ನೊಡನೆ ಇದ್ದರೆ ಸಂತೋಷ.

**ವೀರಭದ್ರಪ್ಪ:** ಮೊದಲಿಗಿಂತ ನಿಮ್ಮ ಮೇಲಿನ ಗೌರವ ಜಾಸ್ತಿಯಾಗಿದೆ. ಇಲ್ಲಿ ಮನಬಿಚ್ಚಿ ಮಾತನಾಡಲಾಗುವದಿಲ್ಲ. ನಿಮ್ಮನ್ನು ದೂರ ಕಳಿಸುವ ಏರ್ಪಾಡಾಗಿದೆ. ಅವರು ಕಳಿಸಿದಂತೆ ಕಳಿಸಿದಲ್ಲಿಗೆ ಹೋಗಿ. ಮೆರವಣೆಗೆಯಲ್ಲಿ ಊರು ದಾಟಿಸುತ್ತಾರೆ. ನಾನು ನಿಮ್ಮ ಜೊತೆಗೇ ಇರುತ್ತೇನೆ.

ಅಷ್ಟರಲ್ಲಿ ಬಾಜಿ ಬಜಂತ್ರಿ ಸಂಗೀತದೊಡನೆ ಬಂಡಿ ಮುಂದೆ ಸಾಗಿತು. ರಾಜನ ಜೈಕಾರದ ಜೊತೆಗೆ ಮಗ್ಗುಲು ನಿಂತವರಿಂದ ಹೂ ತೂರುವದು ಪ್ರಾರಂಭವಾಯಿತು.

ಕೋಟೆ ದಾಟಿದ ಮೇಲೆ ಜನಸಂದಣಿ ಹೆಚ್ಚಾಯಿತು. ನನಗೆ ದಿಕ್ಕು ತೋಚಲಿಲ್ಲ. ನಾನು ಮಾಡಿದ್ದಾದರೂ ಏನು?. ಜನಮೆಚ್ಚಿರುವದು ನನ್ನ ಯಾವ ಕೆಲಸವನ್ನು?. ಗುರುಗಳು ಹೇಳಿದ ಹಾಗೆ ಶೇಂಗಾ ಇಲ್ಲದೆ ಗಾಣ ತಿರುಗಲಾರಂಭಿಸಿತು. ಜನಸಂದಣಿ ಹೆಚ್ಚಾಯಿತು. ಒಂದುಕಡೆ ಬಂಡಿ ನಿಂತಿತು. ನನಗೆ ಶೇಂಗಾ ಕೊಟ್ಟ ವ್ಯಾಪಾರಿ ಅಲ್ಲಿ ಗುಂಪಿನಲ್ಲಿದ್ದ. ನಾನು ಬಂಡಿ ಇಳಿದು ಹೋದೆ ಅವ ಸಂತೋಷಗೊಂಡ ಕೈಯಲ್ಲಿದ್ದ ಹಾರ ಹಾಕಿದ, ಅಲ್ಲಿದ್ದವರೆಲ್ಲ ಹಾರ ಹಾಕಿ ನಮಸ್ಕರಿಸಿದರು. ವೀರಭದ್ರಪ್ಪ ಬಂದು ಆ ಹಾರಗಳನ್ನೆಲ್ಲ ತೆಗೆದು ಬಂಡಿಯಲ್ಲಿ ಹಾಕಿದ.

ದಯಮಾಡಿ ಕ್ಷಮಿಸಿ ಇಂದು ಎಣ್ಣೆ ತರಲಾಗಿಲ್ಲ. ನಾಳೆಯಿಂದ ಸರಿಯಾಗಿ ಕಳಿಸುವೆ. ನನ್ನ ಮಾತನ್ನು ಅವನು ಕಿವಿಗೆ ಹಾಕಿಕೊಳ್ಳಲಿಲ್ಲ. ಆಗ ಒಬ್ಬ ನಾ ಕಲ್ಯಾಣ ವರ್ತಕರ ಪ್ರಮುಖ. ನಾವೆಲ್ಲಾ ನಿಮಗಾಗಿ ಕೆಲವು ಸಾಮಾನುಗಳನ್ನು ಬಂಡಿಗಳಲ್ಲಿ ಕಳಿಸುತ್ತಿದ್ದೇವೆ ದಯಮಾಡಿ ಸ್ವೀಕರಿಸಿ. ನಿಮ್ಮ ಮನಸ್ಸಿಗೆ ನೋವಾಗದಿರಲೆಂದು ಅವುಗಳನ್ನು ಒಯ್ಯುತ್ತೇನೆ ಆದರೆ ಅವುಗಳ ಬೆಲೆಯನ್ನು ನಾಳೆಯಿಂದ ಕಳಿಸಿಕೊಡುವ ವಸ್ತುಗಳಲ್ಲಿ ಹೊಂದಿಸಿಕೊಳ್ಳಿ.
ಆ ಪ್ರಮುಖ ರೇಶ್ಮೆ ಬಟ್ಟೆಯನ್ನು ಮೈತುಂಬ ಹೊದಿಸಿ ಕೊರಳಲ್ಲಿ ಕೆಂಪು ಗುಲಾಬಿ ಹಾರ ಹಾಕಿ ಶರಣು ಶರಣೆಂದ.
ಅದುವರೆಗೆ ಸ್ತಬ್ಧವಾಗಿದ್ದ ಸಂಗೀತ ಮತ್ತೆ ಪ್ರಾರಂಭವಾಯಿತು. ವೀರಭದ್ರಪ್ಪ ಹೋಗೋಣ ಬನ್ನಿ ಎಂದ. ಅವನಜೊತೆ ಬಂಡಿ ಹತ್ತುವಾಗ ಅವ ಹೇಳಿದ "ನಿಮಗ ಅನುಭವ ಮಂಟಪಕ್ಕೆ ಹೋಗಬೇಕೆನಿಸಿದೆ. ಇಂದು ಬೇಡ".
ನಾನು ಹಿಂದುರಿಗಿ ನೋಡಿದೆ ರಸ್ತೆಯೆಲ್ಲ ಕೆಂಪು. ಒಂದು ಕ್ಷಣ ಗಾಬರಿಯಾಯಿತು. ಇನ್ನೊಮ್ಮೆ ಕಣ್ಣರಳಿಸಿ ನೋಡಿದೆ ರಸ್ತೆಯಲ್ಲಿ ಬಿದ್ದದ್ದು ರಕ್ತವಲ್ಲ ಅದು ಕೆಂಪು ಹೂಗಳ ರಾಶಿ.
ನನ್ನನ್ನು ನಾನು ನೋಡಿಕೊಂಡೆ, ವ್ಯಾಪಾರಿ ಬಹಳ ಜಾಣ ನನ್ನ ಕಮಟು ಬಟ್ಟೆ ಯಾರಿಗೂ ಕಾಣದಂತೆ ಮಾಡಿದ್ದ. ನನ್ನ ರೂಪವೇ ಬದಲಾಗಿತ್ತು.
ನಮ್ಮ ಪಯಣ ಸಾಗಿತು. ಕಲ್ಯಾಣದಲ್ಲಿ ಇಷ್ಟು ಜನರಿದ್ದಾರೆಯೇ.
ನಾನು ಮಾಡಿದ ಯಾವ ಕಾರ್ಯಕ್ಕೆ ಈ ಜನ ಇಷ್ಟು ಪ್ರೀತಿ ತೋರಿಸುತ್ತಿದ್ದಾರೆ?. ಒಮ್ಮೆ ಸಪ್ಪಳನಿಂತಾಗ ವೀರಭದ್ರಪ್ಪನನ್ನು ಇದೇ ಪ್ರಶ್ನೆ ಕೇಳಿದೆ.
"ನಿಮ್ಮ ಮುಗ್ಧತೆಯಿಂದ ಯುವರಾಜ ಬಸವಣ್ಣವರ ವಿಚಾರಣೆ ನಡೆಯಲೇಬೇಕೆಂದು ಮಾಡಿದ್ದ ಒಳಸಂಚನ್ನು ವಿಫಲಮಾಡಿದ್ದೀರಿ. ಅವರ ತಪ್ಪನ್ನು ಮುಚ್ಚಿಕೊಳ್ಳಲು ಯುವರಾಜರು ಆಡುತ್ತಿರುವ ಕಪಟ ನಾಟಕದ ಭಾಗ ಈಗ ನೋಡುತ್ತಿರುವದು. ನಿಮ್ಮನ್ನು ಯಾರ ಸಂಪರ್ಕಕ್ಕೆ ಬಾರದಂತೆ ಊರಿನಿಂದ ಹೊರದಬ್ಬಲಾಗುತ್ತಿದೆ".
ಕೆಲವು ಸಮಯದ ನಂತರ ಮೆರವಣಗೆಯಲ್ಲಿ ನನ್ನ ಬಂಡಿ ನನ್ನ ಮನೆಯ ಮುಂದೆ ಬಂದು ನಿಂತಿತು. ಅಲ್ಲಿ ಅಪ್ಪಣ್ಣನವರನ್ನು ಕಂಡೊಡನೆ ಬಂಡಿಯಿಂದಿಳಿದು ತಬ್ಬಿಕೊಂಡೆ. ಅವರು ಕಿವಿಯಲ್ಲಿ ಉಸುರಿದರು " ಅಣ್ಣಾ ಬಸವಣ್ಣಾ ನಿನ್ನ ಕಾಯತಾನ". ಆಗ ನನ್ನವಳ ಜೊತೆ ಶಂಕರಕ್ಕ ಮೊದಲಾದವರು ಆರತಿ ಬೆಳಗಿದರು. ನನ್ನವಳ ಕಣ್ಣಲ್ಲಿ ಭಯ ಕುತೂಹಲ ಎಲ್ಲ ಮನೆಮಾಡಿತ್ತು. ಮೋನಣ್ಣ "ಚಿಂತೆಬೇಡ ನಾನು ಮತ್ತು ಶ್ರೀಶೈಲಪ್ಪ ನಿಮ್ಮ ಜೊತೆ ಇದ್ದು ಅಲ್ಲಿಯೇ ಕಾಯಕ ಪ್ರಾರಂಭ ಮಾಡುತ್ತೇವೆ. ನಮ್ಮ ಬಂಡಿಗಳು ತಯಾರಿವೆ ನಿಮ್ಮ ಹಿಂದೆಯೇ ಬರುತ್ತೇವೆ. ಮತ್ತೆ ಸಂಗೀತ ಪ್ರಾರಂಭವಾಯಿತು. ಬಂಡಿಹತ್ತಿದೆ ಪ್ರಯಾಣ ಪ್ರಾರಂಭವಾಯಿತು.

ಮೊದಲ ದಿನ ನೋಡಿದ ಭವ್ಯವಾದ ಕಲ್ಯಾಣ ಪ್ರವೇಶ ದ್ವಾರ ಬಂದಿತು. ನಾವದನ್ನು ದಾಟಿದ ಮೇಲೆ ಸಂಗೀತಗಾರರು ಯೊಧರು ಮತ್ತು ಕಳಿಸಲು ಬಂದಿದ್ದ ಜನರು ಮರಳಿದರು. ಎಲ್ಲರ ಕಣ್ಣಲ್ಲಿ ನನ್ನ ಬಗ್ಗೆ ಇದ್ದ ಗೌರವದ ಭಾವ ಎದ್ದು ಕಾಣುತ್ತಿತ್ತು. ಅವರೆಲ್ಲ ಮರಳಿದ ಮೇಲೆ ನಿರಾಳವಾಗಿ

**ಗುರುವ:** ವೀರಭದ್ರಪ್ಪ, ನಾನು ಬರುವಾಗ ಇಲ್ಲಿಯ ಪೆಟ್ಟಿಗೆಯಲ್ಲಿ ಹಾಕಿದ್ದು ಒಂದು ಹಿಡಿಧಾನ್ಯ ಆದರೆ ಬಸವಣ್ಣ ಇಪ್ಪತ್ತೊಂದು ಬಂಡಿ ದಾನ್ಯದೊಡನೆ ಮರಳಿ ಕಳಿಸುತ್ತಿದ್ದಾನೆ.

**ವೀರಭದ್ರಪ್ಪ:** ಬಸವಣ್ಣ ಜಾಣ ಇನ್ನೇನು ಕೊಡುತ್ತಾನೆ ಇನ್ನೇನು ನಿಮ್ಮಿಂದ ಪಡೆಯುತ್ತಾನೆ ಅವನಿಗೇ ಗೊತ್ತು.

**ಗುರುವ:** ಯುವರಾಜ ನನಗೆ ಈ ರೀತಿಯ ಕೊಡುಗೆ ಕೊಟ್ಟದ್ದು ಏಕೆ?. ನನಗೆ ನಮ್ಮೂರಿನ ಹರಕೆ ಕುರಿ ನೆನಪಿಗೆ ಬಂತು.

**ವೀರಭದ್ರಪ್ಪ:** ನೀವು ಹೇಳಿದ ವಿವರಗಳು, ಆ ಮಗು ಬಂದು ಪ್ರೀತಿ ತೋರಿಸಿದ್ದು ಮತ್ತು ಆ ಹೆಣ್ಣುಮಗಳ ಮಾತುಗಳು ಯುವರಾಜ ತನ್ನ ಬಲೆಯಲ್ಲಿ ತಾನೇ ಸಿಕ್ಕುವಂತೆ ಮಾಡಿತ್ತು. ಆ ಹೆಣ್ಣುಮಗಳು ಹೇಳಿದ ಮಾತು ಮಹಾರಾಜರ ಕಿವಿಗೆ ಬೀಳಲಿಲ್ಲ. ಒಂದುವೇಳೆ ಅವರದನ್ನು ಕೇಳಿದ್ದರೆ ಯುವರಾಜ ಮತ್ತು ಅವನ ಸಂಗಡಿಗರನ್ನು ಗಲ್ಲಿಗೇರಿಸುತ್ತಿದ್ದರು. ಎಲ್ಲ ಸಾಕ್ಷಿಗಳನ್ನು ಕಲ್ಯಾಣದಿಂದ ದೂರ ಕಳಿಸಲು ಮಾಡಿದ ಯೋಜನೆಯ ಭಾಗ ಇದು.

**ಗುರುವ:** ಪಾಪ ಆ ಮಗು ಮತ್ತು ಅವರ ತಾಯಿ ಎಲ್ಲಿದ್ದಾರೆ?

**ವೀರಭದ್ರಪ್ಪ:** ಯುವರಾಜ ಮತ್ತು ಅವರ ಸಂಗಡಿಗರು ಆಘಾತದಿಂದ ಪಾರಾಗಿ ಸಂಚು ರೂಪಿಸುವ ಮೊದಲೇ ಅವರಿಬ್ಬರನ್ನು ಕಲ್ಯಾಣದಲ್ಲಿ ಜೋಪಾನವಾಗಿ ನನ್ನ ಗೆಳೆಯರು ಕಾಪಾಡಿದ್ದಾರೆ. ಸ್ವಲ್ಪ ದಿನದಲ್ಲಿ ನಿಮ್ಮ ಹತ್ತಿರ ಬರುವ ಅವರನ್ನು ನೀವು ರಕ್ಷಿಸಬೇಕು.

**ಗುರುವ:** ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಧನ್ಯವಾದಗಳು.

**ವೀರಭದ್ರಪ್ಪ:** ನೀವು ನಮ್ಮ ಜೊತೆಯಲ್ಲಿ ಬಂದವರನ್ನು ಖರೊಸಾಗೆ ಕಳಿಸಿ ನನ್ನ ಜೊತೆ ಗೋಪಾಲಕರಿರುವ ಸ್ಥಾನಕ್ಕೆ ಹೊಗಿ ಮುಂಜಾನೆ ಅವರೊಡನೆ ನಾವು ಪ್ರಯಾಣ ಮಾಡೋಣ.

**ಗುರುವ:** ಸರಿ ಹಾಗೇ ಮಾಡಿ. ನಿನ್ನನ್ನು ನಾನು ನಂಬಿರುವೆ. ನಂಬಿ ಕೆಟ್ಟವರಿಲ್ಲ ಅಂತ ಬಸವಣ್ಣ ಹೇಳಿದ್ದಾರೆ.

ವೀರಭದ್ರಪ್ಪ ತನ್ನ ಹಿಂದೆ ಬಂದವರಿಗೆಲ್ಲ ಖರೋಸಾಗೆ ಹೋಗಿ, ನಾವು ನಾಳೆ ಗೋಪಾಲಕರೊಡನೆ ಬೊಂತಾದೇವಿಯವರನ್ನು ಪೂಜೆ ಮಾಡಲು ಕರೆದುಕೊಂಡು ಬರುವದಾಗಿ ತಿಳಿಸಿ ಎರಡು ಬಂಡಿಗಳ ಜೊತೆ ಬಲಗಡೆ ತಿರುಗಿ ವೇಗವಾಗಿ ಹೊರಟ.

**ನಿಮ್ಮ ಶರಣ ಸ್ವಯಪ್ರಸಾದಿಯಾದನಯ್ಯಾ ಬಸವಣ್ಣ.**

ಗಮನಿಸಿ:

ಹಾವಿಗಂಜದವರು ಯಾರು. ಹಾವಿನಿಂದಲೇ ಅಪಾಯದಿಂದ ಪಾರಾದ ಘಟನೆ ಇಲ್ಲಿದೆ. ನಾನು ಬಾಲ್ಯದಲ್ಲಿ ಅಜ್ಜಿಯ ಊರು "ನನ್ನೂರಿ"ಗೆ ಬಂದಿದ್ದೆ. ನನ್ನೂರು ಈಗ ನಂದನೂರು ಆಗಿದೆ. ಅಲ್ಲಿಂದ ಕೂಗಳತೆ ದೂರದಲ್ಲಿರುವದೇ ಹೂವನೂರು. ಎರಡು ಊರಿನ ನಡೆವೆ ಬಂಡಿದಾರಿ ಇತ್ತು. ಒಂದು ದಿನ ರಾತ್ರಿ ಆ ಊರಲ್ಲಿ "ದೊಡ್ಡಾಟ"ವಿರುವದು ನನಗೆ ಗೊತ್ತಾದದ್ದೇ ತಡ ಅಜ್ಜಿಗೆ ದುಂಬಾಲು ಬಿದ್ದು ಹೋಗಲು ಒಪ್ಪಿಸಿದೆ ಮತ್ತು ನನ್ನ ಕಾಕಾನ ಹಿಂದೆ ದುಂಬಾಲು ಬಿದ್ದೆ. ಆಟ ಮುಗಿಯುವ ಹೊತ್ತಿಗೆ ನೀನು ಮಲಗಿರತಿ ನಿನ್ನಂತ ಕೋಣ ಹೊತ್ತುಕೊಂಡು ನನಗ ಬರಲಾಗುವದಿಲ್ಲ ಎಂದ ಅವರನ್ನು ಮತ್ತು ಅವರ ಗೆಳೆಯರನ್ನು ಕಾಡಿ ಬೇಡಿ ಒಪ್ಪಿಸಿ ಅಂತೂ ನಾಟಕ ನೋಡಲು ಹೊರಡುವದರಲ್ಲಿ ಯಶಸ್ವಿಯಾದೆ. ದೊಡ್ಡಾಟ ಅರ್ದಕ್ಕೆ ಬಂದಾಗ ನಿದ್ದೆಯ ಮಂಪರು ರಾಕ್ಷಸನೊಬ್ಬ ಅಬ್ಬರಿಸಿ ಕತ್ತಿ ಬೀಸುವ ದೃಶ್ಯ ನೋಡಿ ಬೆಚ್ಚಿಬಿದ್ದೆ. ಚಿಟಾರನೆ ಆ ರಾಕ್ಷಸನಿಗಿಂತಲೂ ಜೋರಾಗಿ ಕಿರಚಿ ಅಳತೊಡಗಿದೆ. ಅವನ ಕರಕೊಂಡು ಹೋಗತಿರೋ ಅಥವಾ ನಾಲ್ಕು ಬೇಕೊ ಎನ್ನುವ ಮಾತು ಕೇಳಿ ನನ್ನ ಕಾಕ ಮತ್ತು ಗೆಳೆಯರು ನನ್ನನ್ನು ದರದರನೆ ಎಳೆದುಕೊಂಡು ಅಲ್ಲಿದ್ದ ಒಂದು ಪಂಜಿನೊಡನೆ "ನನ್ನೂರಿ"ನ ದಾರಿ ಹಿಡಿದರು. ಥೂ ನಿನ ಎತ್ತಿಕೊಳ್ಳಬೇಕೆಂದರೆ ಎಲ್ಲ ಹಸಿ ಮಾಡಿಕೊಂಡಿ ಎಂದು ನನ್ನ ರಟ್ಟೆಗಳನ್ನು ಇಬ್ಬರು ಹಿಡಿದು ದರದರನೆ ಎಳೆದುಕೊಂಡು ಹೊರಟರು. ಅರ್ಧ ದಾರಿಯಲ್ಲಿ ಒಬ್ಬ ಹೇಳಿದ ನಿಲ್ಲಿ ನಿಲ್ಲಿ ಆ ಬೇಲ್ಯಾಗ ಒಂದು ದೊಡ್ಡ ಹಾವ ಹೋದಂಗಾತು. ನನ್ನ ಕಾಕಾ ಎತ್ತಿ ನನ್ನನ್ನು ಹೆಗಲ ಮ್ಯಾಲ ಹೊತ್ತುಕೊಂಡು ಮರಳಿ ದೊಡ್ಡಾಟ ನಡೆದಲ್ಲಿಗೆ ಗೆಳೆಯರೊಡನೆ ಮರಳಿ ಹೊರಟ. ಅಷ್ಟರಲ್ಲಿ "ನನ್ನೂರಿ"ನಿಂದ ಹೆಣ್ಣುಮಕ್ಕಳ ಚಿರಾಟ ಕೇಳಿಸಿತು. ನನ್ನನ್ನು ಕಾಕ ಕೆಳಗೆ ಒಗೆದು ಕಳ್ಳರು ಕಳ್ಳರು ಎಂದು ದೊಡ್ಡಾಟ ನಡೆದತ್ತ ಓಡಿದ. ಅಲ್ಲಿದ್ದವರೆಲ್ಲ ಪಂಜು ಹಿಡಿದು ಓಡಿ ಬಂದರು. ಅವರ ಕೂಗಾಟ ಸಿಳ್ಳು ಕೋಲಾಹಲ ನನ್ನನ್ನು ಪೂರ್ಣ ಎಚ್ಚರಗೊಳಿಸಿತು. ಅಲ್ಲಿದ್ದ ಕಲ್ಲುಗಳನ್ನು ಧೋತರದಲ್ಲಿ ಹಾಕಿಕೊಂಡು ಕಲ್ಲ ಬಿಸುತ್ತ ನನ್ನೂರ ಕಡೆ ಓಡಿದರು. ದಿಕ್ಕುಕಾಣದ ನಾನು ಅವರ ಹಿಂದೆ ಕೈಯಲ್ಲೊಂದು ಕಲ್ಲು ಹಿಡಿದು ಓಡಿದೆ. ಇವರೆಲ್ಲರ ಗದ್ದಲ ಕೇಳಿ ಅಲ್ಲಿಗೆ ಬಂದಿದ್ದ ದರೋಡೆಕೋರರು ಓಡಿ ಹೋಗಿದ್ದರು. ಒಂದು ಮನೆ ಬಾಗಿಲು ಮುರಿದಿದ್ದ ಅವರು ಗದ್ದಲ ಕೇಳಿ ಕಾಲ್ಕಿತ್ತಿದ್ದರು. ಹೊತ್ತು ಹೊರಡುವವರೆಗೆ ಬಡಿಗೆ ಹಿಡಿದು ಎಲ್ಲರೂ ಕಾವಲಿದ್ದರು. ನಾನೊಂದು ಬಡಿಗೆ ಹಿಡಿದು ಅವರ ಹಿಂದೆ ಹಿಂದೆ ಅಡ್ಡಾಡಿ ದಣಿದು ಅಲ್ಲೇ ಕಟ್ಟೆಯ ಮೇಲೆ ಮಲಗಿದೆ. ನಾನು ಎದ್ದ ಮೇಲೆ ನನ್ನ ಕಾಕಾ "ಗುರುವ ನಮ್ಮನ್ನ ಕರಕೊಂಡು ಬಂದದ್ದಕ ನಿಮ್ಮ ಚೀರಾಟ ಕೇಳಸಿತು ಇಲ್ಲದಿದ್ದರ ಆ ದೊಡ್ಡಾಟದ ಅಬ್ಬರದಾಗ ಏನು ಗೊತ್ತಾಗುತ್ತಿರಲಿಲ್ಲ. ಕತ್ತ್ಯಾಗ್ಯಾನ ಎಲ್ಲ ಹಸಿ ಮಾಡಿಕೊಂಡಿದ್ದ ಅದಕ ಜಳಕ ಮಾಡಿಬಂದೆ" ಎಂದು ನನ್ನಜ್ಜಿಗೆ ಹೇಳುವ ಮಾತು ಕೇಳಿಸಿತು. ಊರು ಉಳಿಸಿದವ ನಾನೇ ಎಂದು ನಾಲ್ಕೈದು ದಿನ

ಹೆಮ್ಮೆಯಿಂದ ಎದೆಸೆಟೆಸಿ ಊರೆಲ್ಲ ತಿರುಗಾಡಿದೆ ಯಾರೂ ಲಕ್ಷ ಕೊಡಲಿಲ್ಲ. ಉಪಕಾರ ಮಾಡಿದವರನ್ನೇ ಮರಿತಾರ ಎಂದು ಮನದಲ್ಲಿ ಬೈದು ಸುಮ್ಮನಾದೆ. ಅಂದು ಅವರೆಲ್ಲಾ ಪಾರಾದದ್ದು ಬೇಲಿಯಲ್ಲಿಯ ಹಾವು ಮತ್ತು ನನ್ನಿಂದ ಎಂದು ಈಗಲೂ ಅನಿಸುತ್ತದೆ. ನಿಮಗೆ?

**ಗುರುವ:** ವೀರಭದ್ರಪ್ಪ ಇಂದು ನಡೆದ ಘಟನೆಗಳು ನನ್ನ ಮನದಲ್ಲಿ ಕೋಲಾಹಲ ಉಂಟು ಮಾಡಿವೆ. ಏನಾಯಿತು? ಯಾಕಾಯಿತು? ತಿಳಿಯಲೊಲ್ಲದು.

**ವೀರಭದ್ರಪ್ಪ:** ಬಿಜ್ಜಳರಾಜ ಸಾಹಸ ಮತ್ತು ಪರಾಕ್ರಮದಿಂದ ಕಲ್ಯಾಣ ಮಹಾರಾಜನಾಗಿದ್ದಾನೆ. ಅವನು ಬಲಿಷ್ಟ ಸೈನ್ಯ ಕಟ್ಟಿ ತನ್ನವರನ್ನು ಸೋಲಿಸಿ ಪ್ರಭಲನಾಗಿದ್ದಾನೆ. ಅವನು ರಾಜಕೀಯ ಚಾಣಾಕ್ಷ. ಅಧಿಕಾರದಲ್ಲಿರಲು ತಂತ್ರ ರೂಪಿಸುವದರಲ್ಲಿ ಪರಿಣಿತ. ಯಾರನ್ನೂ ನಂಬುವದಿಲ್ಲ. ಅವರೆಲ್ಲರೂ ತನ್ನ ಆತ್ಮೀಯರೆಂದು ನಂಬಿಸುತ್ತಾನೆ.
ಯುವರಾಜ ಆತನಿಗಿಂತಲೂ ಚಾಣಾಕ್ಷ. ಅಧಿಕಾರಕ್ಕಾಗಿ ಪರಿತಪಿಸುತ್ತಿರುವ ಯುವಕ. ರಾಜನಾಗಲು ಏನು ಮಾಡಲೂ ಹೇಸದವ.

**ಗುರುವ:** ತಾವು ಅಣ್ಣ ಬಸವಣ್ಣನವರ ಆತ್ಮೀಯ ಗೆಳೆಯ ಎಂದು ಮಹಾರಾಜರು ಹೇಳಿದರು. ಐದು ವರ್ಷಗಳಿಂದ ಮಹಾರಾಜರು ಅಣ್ಣನವರ ಪ್ರಭಾವದಿಂದ ಬದಲಾಗಿದ್ದಾರೆ ಎಂದು ಮಹಾರಾಣಿಯರು ಹೇಳಿದರು.

**ವೀರಭದ್ರಪ್ಪ:** ಮಹಾರಾಣಿಯವರು ಮುಗ್ದರು. ತಮ್ಮ ಎಂಟು ಮಕ್ಕಳ ಲಾಲನೆ ಪಾಲನೆಯಲ್ಲಿ ತೊಡಗಿದ ಅವರಿಗೆ ರಾಜಕಾರಣದ ಅರಿವಿಲ್ಲ. ಮಕ್ಕಳು ದೊಡ್ಡವರಾದ ಮೇಲೆ ಅವರು ಪೂಜೆ ದಾನ ಧರ್ಮ ಮಾಡುವದರಲ್ಲಿ ನಿರತರಾಗಿದ್ದಾರೆ. ಮಹಾರಾಣಿಯರ ಮುಂದೆ ಮಹಾರಾಜರು ತಪಮಾಡುವ ಬೆಕ್ಕಿನಂತಿರುತ್ತಾರೆ.

**ಗುರುವ:** ಮಹಾರಾಜರು ಅಣ್ಣ ಬಸವಣ್ಣವರ ಬಗ್ಗೆ ಅಪಾರ ಪ್ರೀತಿ ವಿಶ್ವಾಸ ಇರುವದಾಗಿ ಹೇಳಿದರು ಅವರ ಪರಿಶ್ರಮದ ಫಲವಾಗಿ ಇಂದು ಶಾಂತಿ ನೆಲಸಿದೆ ಎಂದು ಹೇಳಿದರು.

**ವೀರಭದ್ರಪ್ಪ:** ಮಹಾರಾಜರಿಗೆ ಅಧಿಕಾರದ ಮೇಲೆ ಆಶೆ ಇದೆ. ತನ್ನ ತಮ್ಮ ಮತ್ತು ಮಕ್ಕಳ ಸಂಚಿನ ಅರಿವಿದೆ ಮತ್ತು ತಾವು ಅದಕ್ಕೆ ಬಲಿಯಾಗಬಹುದು ಎನ್ನುವ ಬಗ್ಗೆ ಭಯವಿದೆ. ಅವರಿಂದ ಪಾರಾಗಿ ಜನಮನ್ನಣೆ ಪಡೆದು ಅಧಿಕಾರದಲ್ಲಿರಲು ಬಸವಣ್ಣನವರನ್ನು ರಕ್ಷಾಕವಚವನ್ನಾಗಿ ಉಪಯೋಗಿಸುತ್ತಿದ್ದಾರೆ. ಅಣ್ಣ ಬಸವಣ್ಣನವರ ಆತ್ಮೀಯ ಗೆಳೆಯ ಎಂದುಕೊಳ್ಳುತ್ತ ಎಲ್ಲ ಸಂಪ್ರದಾಯವಾದಿಗಳ ಮನಒಲಿಸಲು ಸತತ ಪ್ರಯತ್ನ ನಡೆಸಿದ್ದಾರೆ. ಶರಣರ ಅಪಾರ ಅಭಿಮಾನಿಗಳು ಕಲ್ಯಾಣದ ಸೈನ್ಯದಲ್ಲಿದ್ದಾರೆ. ಬಸವಣ್ಣನವರಿಗೆ ಸ್ವಲ್ಪ ನೋವಾದರೂ ಉಳಿಗಾಲವಿಲ್ಲ ಎನ್ನುವ ಅರಿವು ಎಲ್ಲರಿಗೂ ಇದೆ. ಬಸವಣ್ಣನವರ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಅವರಲ್ಲಿ ಮತ್ತು ಸಂಪ್ರದಾಯವಾದಿ ಮಂತ್ರಿಗಳಲ್ಲಿ ಅಸಹನೆ ಹೆಚ್ಚಾಗಿದೆ.

**ಗುರುವ:** ಯುವರಾಜನ ಸಂಚೇನು?
**ವೀರಭದ್ರಪ್ಪ:** ಮೊದಲ ಹಂತವಾಗಿ ಯುವರಾಜ ಸೈನಿಕ ಅಧಿಕಾರಿಗಳ ಮತ್ತು ದುರಾಸೆಯುಳ್ಳ ಮಂತ್ರಿಗಳ ಮತ್ತು ಶರಣ ವಿರೋಧಿಗಳ ಗೆಳೆತನ ಮತ್ತು ಬೆಂಬಲ ಪಡೆದಿದ್ದಾನೆ. ತನ್ನ ನಂಬಿಕಸ್ಥರನ್ನು ಸೇನಾನಾಯಕರನ್ನಾಗಿ ಮಾಡಿದ್ದಾನೆ. ಮಹಾರಾಜರ ಪ್ರತಿಯೊಂದು ವಿಚಾರಗಳು ತನಗೆ ತಿಳಿಯುವಂತೆ ಅರಮನೆಯಲ್ಲಿ ಗೂಢಚಾರರನ್ನು ನೇಮಿಸಿದ್ದಾನೆ. ಅವನ ಅಪ್ಪಣೆಯಲ್ಲದೇ ಯಾವ ಕೆಲಸಗಳು ಆಗುವದಿಲ್ಲ ಆದರೆ ಎಲ್ಲವೂ ಮಹಾರಾಜರ ಅಪ್ಪಣೆ ಪ್ರಕಾರವೇ ನಡೆದಿವೆ ಎಂದು ಬಿಂಬಿಸುತ್ತಾನೆ..
ಅವನು ಶರಣರು ಎಸಗುವ ಜನವಿರೋಧಿ ಧರ್ಮವಿರೋಧಿ ಎನಿಸುವ ಒಂದೇ ಒಂದು ತಪ್ಪಿಗಾಗಿ ದಾರಿ ನೋಡುತ್ತಿದ್ದಾನೆ. ಆ ಸಮಯದಲ್ಲಿ ಯಾವ ರೀತಿ ದಂಗೆ ರೂಪಿಸಬೇಕು ಎನ್ನುವ ತಯಾರಿ ಮಾಡಿದ್ದಾನೆ.
**ಗುರುವ:** ಅವರು ಯಾವ ರೀತಿ ಸಂಚು ರೂಪಿಸುತ್ತಿದ್ದಾರೆ.
**ವೀರಭದ್ರಪ್ಪ:** ಶರಣರ ತತ್ವಗಳು ಜನರ ಮನಸ್ಸನ್ನು ಗೆದ್ದಿವೆ ಅವು ಸರಿ ಎನಿಸಿವೆ. ಆದರೆ ಅವಿನ್ನೂ ಆಳವಾಗಿ ಬೇರೂರಿಲ್ಲ. ತಮ್ಮ ಪೂರ್ವಿಕರು ಆಚರಿಸಿದ ಆಚರಣೆಗಳನ್ನು ಬದಲಾಯಿಸಿಕೊಳ್ಳುವದು ಅವರಿಗೆ ಇಷ್ಟವಿಲ್ಲ. ಅನೇಕ ಮೂಢನಂಬಿಕೆಗಳು ಅವರ ಮನದಲ್ಲಿ ಮನೆಮಾಡಿವೆ. ಅವುಗಳಿಗೆ ಧಕ್ಕೆಯಾದರೆ ಅವರು ರೊಚ್ಚಿಗೇಳುತ್ತಾರೆ. ಅದರಲ್ಲಿ ಮೇಲು ಜಾತಿ ಕೀಳು ಜಾತಿ ಎನ್ನುವದಿನ್ನೂ ಅವರ ಮನದಿಂದ ದೂರವಾಗಿಲ್ಲ. ಆ ಭಾವನೆಳನ್ನೆಲ್ಲ ಬಡಿದೆಬ್ಬಿಸುವ ಪ್ರಯತ್ನ ಅವರದು. ತಮ್ಮ ಅಸ್ತಿತ್ವಕ್ಕಾಗಿ ಪರದಾಡುತ್ತಿರುವ ಸಂಪ್ರದಾಯವಾದಿಗಳು ಹಿಂಸಾಮಾರ್ಗ ನಡೆಸಲು ಜನರನ್ನು ತಯಾರು ಮಾಡಿದ್ದಾರೆ.
ಅಣ್ಣ ಬಸವಣ್ಣವರಿಗೆ ಆಸ್ಥಾನದಲ್ಲಿ ಅಪಮಾನವಾದರೆ ಅವರು ತಮ್ಮ ಅನುಯಾಯಿಗಳೊಂದಿಗೆ ಕಲ್ಯಾಣ ತೊರೆಯುತ್ತಾರೆ ಎನ್ನುವ ವಿಚಾರ ಅವನದು. ಅದಕ್ಕೊಂದು ಅವಕಾಶಕ್ಕಾಗಿ ಕಾಯುತ್ತಿದ್ದಾನೆ. ಅದೇ ಸಂದರ್ಭದಲ್ಲಿ ಜಾತಿ ಜಾತಿಗಳ ನಡುವೆ ಕದನ ಏರ್ಪಡಿಸಿ ಅಧಿಕಾರ ಪಡೆದು ತಪ್ಪೆಲ್ಲಾ ಶರಣರದು ಎಂದು ಬಿಂಬಿಸಬೇಕು ಎನ್ನುವ ಆಲೋಚನೆ ಅವರದು. ಅಂತೂ ಮದ್ದಿನ ರಾಶಿ ಇದೆ. ಅದಕ್ಕೊಂದು ಕಿಡಿ ತಾಗಿಸುವ ಅವಕಾಶಕ್ಕಾಗಿ ಕಾಯುತ್ತಿದ್ದಾನೆ. ಇಂದು ಅವರಿಗೊಂದು ಉತ್ತಮ ಅವಕಾಶ ಸಿಕ್ಕಿತ್ತು.
ಮೊನ್ನೆ ನಡೆದ ಘಟನೆಗಳನ್ನೆಲ್ಲ ತಿರುಚಿ ಮಹಾರಾಜರ ಮನ ಕೆಡಿಸಿ ಬಸವಣ್ಣನವರನ್ನು ವಿಚಾರಕ್ಕೊಳಪಡಿಸಬೇಕೆಂದು ಮನವೊಲಿಸಿದ್ದ.
ಎಲ್ಲ ಕಡೆಗೂ ತನ್ನ ಬಂಟರ ಮೂಲಕ ಅಪಪ್ರಚಾರ ಮಾಡಿದ್ದ.
**ಗುರುವ:** ಅಣ್ಣ ಬಸವಣ್ಣನವರ ಆ ರೀತಿಯ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ಅಪಪ್ರಚಾರ ಮಾಡಲು ಹೇಗೆ ಸಾಧ್ಯ.
**ವೀರಭದ್ರಪ್ಪ:** ಅವರು ಮನೆ ಮನೆಗೆ ತನ್ನ ಬಂಟರನ್ನು ಕಳಿಸಿ ಹಬ್ಬಿಸಿದ್ದ ಸುದ್ದಿಗಳು

1. ಅಣ್ಣಾ ಬಸವಣ್ಣಾ ತನ್ನ ಬಂಟರೊಂದಿಗೆ ಹಳ್ಳಿಗೆ ಹೋಗಿ ಅಲ್ಲಿ ಅಡಿಗೆಮಾಡಿಸಿದರು. ಒಬ್ಬ ಅಸಹಾಯಕ ಚರ್ಮ ಹದಮಾಡುವ ಕಾಯಕದ ಹೆಣ್ಣುಮಗಳನ್ನು ಮತ್ತು ಮಗುವನ್ನು ದರದರನೆ ಎಳೆದುಕೊಂಡು ಬಂದು ಒತ್ತಾಯಪೂರ್ವಕವಾಗಿ ತಿನ್ನಿಸಿ ಎಂಜಲನ್ನು ಆ ಊರವರಿಗೆಲ್ಲ ತಿನ್ನಿಸಿದ್ದಾರೆ..
2. ತಮ್ಮ ಭಟರ ಮೂಲಕ ಊರಲ್ಲಿಯ ಎಲ್ಲ ಜನರನ್ನು ಎಳೆದುಕೊಂಡು ಬಂದು ಅವರನ್ನು ಕಟ್ಟೆಯ ಮೇಲೆ ಕೂಡ್ರಿಸಿ ಒತ್ತಾಯವಾಗಿ ಆ ಹೆಣ್ಣುಮಗಳ ಕೈಯಿಂದ ಊಟ ಮಾಡಿಸಿ ಎಲ್ಲರನ್ನು ಬ್ರಷ್ಟರನ್ನಾಗಿಸಿದರು.
3. ಈ ಅನಾಚಾರದಿಂದ ತಪ್ಪಿಸಿಕೊಳ್ಳುವದಕ್ಕಾಗಿ ಅಡಗಿದವರ ಜುಟ್ಟು ಹಿಡಿದು ಎಳದುಕೊಂಡು ಬಂದು ಬಲವಂತವಾಗಿ ಉಣಿಸಿ ಅವರನ್ನು ಧರ್ಮಬ್ರಷ್ಟರನ್ನಾಗಿಸಿದರು.
4. ಆ ಕಟ್ಟೆಯ ಮೇಲೆಯೇ ಆಸ್ಥಾನ ನಡೆಸಿ ರಾಜ ನಾವೆಲ್ಲ ಹೇಳಿದಂತೆ ಕೇಳಬೇಕು. ಪ್ರಜೆಗಳೇ ಪ್ರಭುಗಳು. ಅದಕ್ಕಾಗಿ ನಿಮ್ಮದೇ ಆದ ಸೈನ್ಯ ಕಟ್ಟಿ ಮತ್ತು ಊರಿನವರನ್ನೆಲ್ಲ ಒಟ್ಟಿಗೆ ಕೂಡ್ರಿಸಿ ಊಟಮಾಡಿಸಿ. ನಾನೇ ಅರ್ಥಮಂತ್ರಿ ರಾಜಕೋಶದಿಂದ ಹಣ ಕಳಿಸುವೆ.

ಇತ್ಯಾದಿ ಇತ್ಯಾದಿ. ಒಂದೇ ಕಾಲಕ್ಕೆ ರಾಜ, ಮೇಲ್ವರ್ಗದ ಮತ್ತು ಕೆಳವರ್ಗದ ಜನ ರೊಚ್ಚಿಗೇಳಬೇಕು, ಮುಖ್ಯವಾಗಿ ಸಂಪ್ರದಾಯವಾದಿಗಳು ಮತ್ತು ಶರಣ ಅನುಯಾಯಿಗಳ ನಡುವೆ ಸಂಘರ್ಷ ನಡೆಯಬೇಕು ಮತ್ತು ಬಸವಣ್ಣಾನ ವಿಚಾರಣೆ ನಡೆದು ಅವರು ಊರುಬಿಡಬೇಕು ಎನ್ನುವ ಸಂಚು ಅವರದಾಗಿತ್ತು. ಆದರೆ ಈ ಮಾತುಗಳನ್ನು ಯಾರೂ ನಂಬಿರಲಿಲ್ಲ. ಜನರನ್ನು ಮತ್ತು ಮಹಾರಾಜರನ್ನು ನಂಬಿಸಲು ನಿನ್ನನ್ನೂ,ಆ ಹೆಣ್ಣುಮಗಳು ಮತ್ತು ಮಗುವನ್ನು ಸಾಕ್ಷಿಯಾಗಿ ಕರೆತಂದಿದ್ದರು. ಏನೇನೋ ಹೇಳಿ ರಾಜನನ್ನು ಒಪ್ಪಿಸಿದ್ದರು.
ಆ ಹೆಣ್ಣುಮಗಳನ್ನು ಹುಡುಕಿ ಅವರು ಹೇಳಿದಂತೆ ಹೇಳಬೇಕು ಇಲ್ಲದಿದ್ದರೆ ಮಗು ಕೊಲ್ಲುವದಾಗಿ ಹೆದರಿಸಿ ಕರೆದುಕೊಂಡು ಬಂದಿದ್ದರು.
ಇನ್ನು ನಿಮ್ಮನ್ನು ಹೆದರಿಸಿ ಕರೆದುಕೊಂಡು ಬರುವ ಯೋಚನೆಯಿತ್ತು. ಆದರೆ ನೀವು ಪ್ರಾಣಿಗಳ ಮೇಲೆ ತೋರಿದ ಪ್ರೀತಿ ಕಲ್ಯಾಣದ ಜನಮನ ಗೆದ್ದಿತ್ತು. ನಿಮ್ಮನ್ನು ಬೆದರಿಸುವ ಸಾಹಸಕ್ಕೆ ಅವರು ಕೈಹಾಕಲಿಲ್ಲ. ರಾಜನಿಗೂ ಒಮ್ಮೆಲೆ ಬಸವಣ್ಣಾನನ್ನು ವಿಚಾರಮಾಡುವ ಧೈರ್ಯ ಬರಲಿಲ್ಲ. ಅದಕ್ಕಾಗಿ ಹಳ್ಳಿಯ ಮುಗ್ಧರಾದ ನಿಮ್ಮನ್ನು ತಮ್ಮ ಖಾಸ ಕೊಠಡಿಗೆ ಕರೆಸಿ ವಿಚಾರಿಸಿದರು. ನೀವು ಹೇಳಿದ ವಿಚಾರ ಕೇಳಿದ ಮೇಲೆ ಅಣ್ಣಾ ಬಸವಣ್ಣಾನವರ ಮೇಲೆ ಅಪರಾಧ ಹೊರೆಸಿ ವಿಚಾರಣೆ ನಡೆಸುವದನ್ನು ಬಿಟ್ಟು ನಿಮ್ಮ ಹೇಳಿಕೆ ಪಡೆಯಲು ನಿರ್ಧರಿಸಿದರು. ಆಸ್ಥಾನದಲ್ಲಿ ಬಹಳ ಜಾಣರಿದ್ದಾರೆ ಅವರು ಸುಳ್ಳನ್ನು ಸತ್ಯವನ್ನಾಗಿ, ಸತ್ಯವನ್ನು ಸುಳ್ಳಾಗಿಸುವ ಮಾಹಾ ಚತುರರು. ಆಸ್ಥಾನದಲ್ಲಿ ನಿಮ್ಮನ್ನು ಮಾತಿನ ಜಾಲಕ್ಕೆ

ಸಿಕ್ಕಿಸಿ ಅಣ್ಣ ತಪ್ಪುಮಾಡಿದ ಎಂದು ಹೇಳಿಸಿ ಆಮೇಲೆ ಅಣ್ಣನವರನ್ನು ವಿಚಾರಣೆಗೊಳಿಸಿ ಅಪಮಾನ ಮಾಡಬೇಕೆಂಬ ಸಂಚು ಅವರದಾಗಿತ್ತು.
ನೀವು ಹೇಳಿಕೆ ಮುಗಿಸಿದ ಕೂಡಲೇ ಆ ಮಗು ನಿಮ್ಮಕಡೆ ಓಡಿ ಬಂದ ರೀತಿ ಮತ್ತು ಅಳುತ್ತ ನಮಸ್ಕರಿಸಿ ಅವಳು ಹೇಳಿದ ಮಾತು ಯುವರಾಜ ಎಚ್ಚತ್ತುಕೊಳ್ಳುವಂತೆ ಮಾಡಿತು. ಅವನ ಪುಣ್ಯಕ್ಕೆ ಆ ಹೆಣ್ಣುಮಗಳು ಹೇಳಿದ ಮಾತುಗಳು ಮಹಾರಾಜರಿಗೆ ಕೇಳಿಸಲಿಲ್ಲ. ಯುವರಾಜ ಓಡಿ ಬಂದು ನಡುವೆ ಪ್ರವೇಶಿಸಿ ತಮ್ಮ ಸಂಚು ಹೊರಗೆ ಬರದಂತೆ ನೋಡಿಕೊಂಡರು.
ಈಗ ಸಾಕ್ಷಿ ನಾಶ ಅವರ ಗುರಿ. ಆ ಮಗು ಮತ್ತು ಹೆಣ್ಣುಮಗಳನ್ನು ಅರಮನೆಯಿಂದ ನಮ್ಮವರು ಪಾರುಮಾಡಿ ಕಾಪಾಡಿದ್ದಾರೆ.
ಅಣ್ಣ ಬಸವಣ್ಣನವರ ಮೇಲೆ ಅಪಾರ ಪ್ರೀತಿಯಿರುವ ಕಲ್ಯಾಣ ಜನ ನೀವು ಬಸವಣ್ಣನವರನ್ನು ಅಪವಾದದಿಂದ ರಕ್ಷಿಸಿದ ಭಾಂಧವನೆಂದು ತಿಳಿದು ನಿಮ್ಮನ್ನು ಪ್ರೀತಿಯಿಂದ ಬೀಳ್ಕೊಟ್ಟರು.
ನನ್ನನ್ನು ಮತ್ತು ಈಗ ನಿಮ್ಮನ್ನು ಕಾಯಲು ಬಂದವರೆಲ್ಲರನ್ನು ತನ್ನ ಆಪ್ತರೆಂದು ಯುವರಾಜ ತಿಳಿದುಕೊಂಡಿದ್ದಾನೆ.
ನಾವೆಲ್ಲ ದೇಶಭಕ್ತರು ಅಣ್ಣನ ಒಳ್ಳೆಯ ವಿಚಾರಗಳಿಗೆ ಮಾರು ಹೋಗಿದ್ದೇವೆ. ನಿಮ್ಮಂತಹ ಮುಗ್ಧರ ರಕ್ಷಣೆ ಮಾಡುವ ಪಣ ತೊಟ್ಟಿದ್ದೇವೆ.
**ಗುರುವ:** ಈ ಎಲ್ಲ ರಾಜಕೀಯ ತಂತ್ರಗಳು ನನಗೆ ಹೇಗೆ ಗೊತ್ತಾಗುತ್ತೆ? ಅಣ್ಣ ಬಸವಣ್ಣ ನಿಮ್ಮನ್ನು ಕಳುಹಿಸಿ ನನ್ನನ್ನು ಕಾಯ್ದ.
**ವೀರಭದ್ರಪ್ಪ:** ನಾವು ಯೋಧರು. ಹೊಡಿ, ಬಡಿ ಮತ್ತು ಕಡಿ ಎನ್ನುವದು ನಮ್ಮ ಭಾಷೆ. ಅದಕ್ಕಾಗಿಯೇ ಬೊಂತಾದೇವಿಯರ ಸಹಾಯ ಕೋರಲು ಹೊರಟಿದ್ದು. ಅವರು ರಾಜಕಾರಣ ಪರಿಣಿತರು ಮತ್ತು ಶರಣ ತತ್ವ ಅರಿತವರು. ನಾವೀಗ ಹೊರಟಿರುವ ಎಲ್ಲ ಹಳ್ಳಿಗಳಲ್ಲಿ ಅವರು ಸಂಚರಿಸಿ ಅವರನ್ನು ತಿದ್ದುವ ಪ್ರಯತ್ನ ಮಾಡಿ ಅಪಾರ ಪ್ರೀತಿ ಗಳಿಸಿದ್ದಾರೆ. ಅವರು ನಮಗೆ ದಾರಿ ತೋರಿಸುವರು.
**ಗುರುವ:** ತುಂಬಾ ಒಳ್ಳೆಯ ಆಲೋಚನೆ.
ಮಾತನಾಡುತ್ತ ವೇಳೆ ಕಳೆದದ್ದು ಗೊತ್ತಾಗಲಿಲ್ಲ.

**ಕಾಯದಲ್ಲಿ ಸಿಲುಕಿದ ಜೀವ, ನೋಯದೆ ಕರಣಂಗಳ ಬಿಡುವನೆ ?**

ಅಲ್ಲಿ ಕೊಳಲು ಇತರ ವಾದ್ಯಗಳ ಸಂಗೀತ ಕೇಳಿಸಿತು.
**ವೀರಭದ್ರಪ್ಪ:** ಗೋಪಾಲಕರು ನಿಮ್ಮನ್ನು ಕರೆಯಲು ಬಂದರು.
**ಗುರುವ:** ಅವರಿಗೆ ನಾವು ಬರುವ ವಿಷಯ ತಿಳಿದದ್ದು ಹೇಗೆ?
**ವೀರಭದ್ರಪ್ಪ:** ಇಲ್ಲಿ ಸಮಾಚಾರ ತಿಳಿಸುವ ಅನೇಕ ಜಾಲಗಳೆ ಇವೆ. ಮುಂದೆ ಅವುಗಳು ಕಾರ್ಯನಿರ್ವಹಿಸುವ ಬಗೆ ನಿಮಗೆ ಗೊತ್ತಾಗುತ್ತೆ.
**ಗುರುವ:** ಗಾಣ ತಿರುಗಿಸುತ್ತ ಆರಾಮವಾಗಿದ್ದೆ. ಈಗ ನಾನೇ ಗಾಣದಲ್ಲಿ ಸಿಲುಕಿದ್ದೇನೆ. ಎಣ್ಣೆ ಬರುತ್ತದೋ ಇಲ್ಲ ಗೊತ್ತಿಲ್ಲ.

**ವೀರಭದ್ರಪ್ಪ:** ಈಗ ಬರುವ ಎಣ್ಣೆ ಕಲ್ಯಾಣ ಬೆಳಗುವ ದೀಪದ ಎಣ್ಣೆಯಾದರೆ ನಮ್ಮ ಶ್ರಮ ಸಾರ್ಥಕ.

ಅಲ್ಲಿಗೆ ಬಂದ ಗೋಪಾಲಕರೆಲ್ಲ ಆತ್ಮೀಯತೆಯಿಂದ ಸ್ವಾಗತಿಸಿದರು. ಅವರೊಂದಿಗೆ ಅವರ ತಾಣಕ್ಕೆ ಹೋದೆವು. ಅಲ್ಲಿರುವವರೆಲ್ಲ ನನ್ನ ಸುತ್ತುವರೆದು ಅತ್ಮೀತೆಯಿಂದ ಕುಣಿದರು. ಆಗ ನಡೆದ ಅಚ್ಚರಿಯ ಘಟನೆ ಅಲ್ಲಿದ್ದ ದನಕರುಗಳೆಲ್ಲ ನನ್ನ ಸುತ್ತುವರೆದು ನೆಕ್ಕಿ ನೆಕ್ಕಿ ತಮ್ಮ ಸಂತೋಷ ವ್ಯಕ್ತಪಡಿಸಿದವು. ಪ್ರಾಣಿಗಳು ನನ್ನನ್ನು ಪ್ರೀತಿಸುತ್ತವೆ ಎಂದ ಮಹಾರಾಜರ ಮಾತು ನಿಜವೆನಿಸಿತು.

ಅಷ್ಟರಲ್ಲಿ ಅಲ್ಲಿಗೆ ಬೊಂತಾದೇವಿ ಬಂದರು. ನನಗೆ ಸಂತೋಷ ತಡೆಯಲಾಗದೆ ಅವರ ಕಾಲಿಗೆ ಬಿದ್ದು "ನನಗೆ ದಾರಿತೋರಿಸು ತಾಯಿ" ಎಂದೆ.

1. **ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ.**

   **ಉಪ್ಪ ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ.**

   **ಕೂಡಲಸಂಗಮದೇವಾ**

   **ಆನು ಮಾಡದೆನೆಂಬ ಕಿಚ್ಚು ಸಾಲದೆ"---ಅಣ್ಣಾ ಬಸವಣ್ಣಾ**

2. **ಗಾಣದಲ್ಲಿ ಸಿಲುಕಿದ ಎಳ್ಳು, ನೋಯದೆ ಎಣ್ಣೆಯ ಬಿಡುವುದೆ ?**

   **ಕಾಯದಲ್ಲಿ ಸಿಲುಕಿದ ಜೀವ, ನೋಯದೆ ಕರಣಂಗಳ ಬಿಡುವನೆ ?**

   **ಭಾವದಲ್ಲಿ ಸಿಲುಕಿದ ಭ್ರಮೆ, ನೋಯದೆ ವಿಕಾರವ ಬಿಡುವುದೆ ?**

   **ಇಂತಿವನರಿದಲ್ಲದೆ ಜ್ಞಾನಲೇಪವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ.**

   --ಅಮುಗೆ ರಾಯಮ್ಮ

ಬೊಂತಾದೇವಿಯವರು ನೀನು ನಿರಾಳವಾಗಿರು. ನಾವೆಲ್ಲ ನಿನ್ನ ಜೊತೆಗಿದ್ದೇವೆ. ನಾಳೆ ಬೇಗ ಹೋಗಬೇಕು. ನಿನಗೆ ವಿಶ್ರಾಂತಿ ಅವಶ್ಯಕತೆ ಇದೆ. ಊಟ ಮಾಡಿ ಮಲಗಿಕೊಳ್ಳು ಎಂದು ಹೇಳಿ ನಡೆದರು.

ನಾನು ಹಾಲು ಕುಡಿದು ಮಲಗಿದೆ.

ಬೇಗ ಎದ್ದು ತಯಾರಾಗಿ ಎಲ್ಲರೊಡಗೂಡಿ ಹೊರಟೆ. ಕಾಡು ದಟ್ಟವಾಗಹತ್ತಿತು. ಆ ತರದ ಕಾಡನ್ನೇ ನಾನು ನೋಡಿರಲಿಲ್ಲ.

**ವೀರಭದ್ರಪ್ಪ:** ದೊಡ್ಡ ದೊಡ್ಡ ಮರಗಳು ಇಲ್ಲಿವೆ, ಇಲ್ಲಿ ಜೋಕೆಯಿಂದ ಹೋಗಬೇಕು ಇಲ್ಲಿ ಕಾಡುಮ್ರುಗಗಳಿವೆ. ರಾಜಕುಮಾರನ ಅಚ್ಚುಮೆಚ್ಚಿನ ಬೇಟೆಯಾಡುವ ತಾಣ ಇದು. ಅವನಿಲ್ಲಿಗೆ ಬರದಂತೆ ಮಾಡಿದಿರಿ.

**ಗುರುವ:** ಪ್ರಾಣಿಗಳ ಪ್ರಾಣರಕ್ಷಣೆಯ ಕಾರಣಕ್ಕೆ ಕೇಳಿದೆ.

**ವೀರಭದ್ರಪ್ಪ:** ಇಲ್ಲಿ ನಡೆಯುವ ಆಕ್ರಮಗಳ ಪರಿಚಯವಿದ್ದ ಮಹಾರಾಜರು ತಮ್ಮನ್ನು ಮೊದಲು ಮಾಡಿ ಯಾರೂ ಇಲ್ಲಿ ಬೇಟೆಯಾಡಬಾರದು ಎಂದು ಆಜ್ಞೆ ಮಾಡಿದರು. ನಿಮ್ಮ ಮನಸ್ಸು ಪರಿಶುದ್ದವಾಗಿದೆ. ನಿಮ್ಮ ಮನಸ್ಸು ಹೇಳಿದಂತೆ ಮಾಡಿ ಎಲ್ಲವೂ ಒಳ್ಳೆಯದಾಗುತ್ತದೆ.

ಕಾಡು ದಟ್ಟವಾಗುತ್ತ ಬಂಡಿ ಸಾಗುವದೇ ದುಸ್ತರವಾಯಿತು. ಅಲ್ಲಲ್ಲಿ ಬರುವ ಟೊಂಗೆಗಳನ್ನು ಕಡಿದು ದಾರಿ ಮಾಡುತ್ತಿದ್ದರು.
**ವೀರಭದ್ರಪ್ಪ:** ನಾವು ಸಮೀಪವಾಗುವ ಅಡ್ಡ ರಸ್ತೆಯಿಂದ ಹೊರಟಿದ್ದೇವೆ ಸ್ವಲ್ಪ ಹೊತ್ತಿನಲ್ಲಿ ದೊಡ್ಡ ರಸ್ತೆ ಸೇರುತ್ತೇವೆ.
ದೊಡ್ಡ ರಸ್ತೆ ನಾವು ಸೇರುವದಕ್ಕೂ ನಿನ್ನೆ ನಮ್ಮ ಜೊತೆ ಹೊರಟವರೆಲ್ಲ ಅಲ್ಲಿ ಬರುವದಕ್ಕೂ ಸರಿಯಾಯಿತು.
ಎಲ್ಲರೂ ಜೊತೆಗೂಡಿ ಸಾಗಿದೆವು.
ಹಳ್ಳಿಯವರ ಒತ್ತಾಯದ ಮೇರೆಗೆ ಅವರೆಲ್ಲ ದಾರಿಯಲ್ಲಿಯ ಹಳ್ಳಿಯಲ್ಲಿ ತಂಗಿ ಈಗ ಹೊರಟಿರುವದು ಗೊತ್ತಾಯಿತು.
ಮುಂದೇನಾಗುತ್ತದೆ ಎನ್ನುವ ಯೋಚನೆಯಲ್ಲಿದ್ದ ನನಗೆ ಮತ್ತೆ ಸಂಗೀತ ಕೇಳಿಸಿತು.
**ಗುರುವ:** ಈ ತರಹ ವಾದ್ಯಗಳ ಸಪ್ಪಳ ನಾನೆಂದೂ ಕೇಳಿರಲಿಲ್ಲ. ಇದು ಯಾವ ರೀತಿಯ ವಾದ್ಯ?
**ವೀರಭದ್ರಪ್ಪ:** ಇದಕ್ಕೆ ಢಗಮು ಎನ್ನುತ್ತಾರೆ ಇದು ಇಲ್ಲಿಯ ಜನಾಂಗದ ವಿಷಿಷ್ಟ ವಾದನ. ಇಲ್ಲಿಯ ಜನರು ಶೂರರು ಧೀರರು ನಂಬಿಕಸ್ಥರು.
ಆಚಾರ ವಿಚಾರಗಳಲ್ಲಿ ನಿಷ್ಟೆಯುಳ್ಳವರು. ಕಾಡಿನಲ್ಲಿರುವ ವಸ್ತುಗಳನ್ನು ಮಾರಿ ಜೀವನ ನಡೆಸುತ್ತಾರೆ ಇವರು ಮಾಂಸ ಸೇವಿಸುವದಿಲ್ಲ, ಆದರೆ ಇತ್ತೀಚೆಗೆ ಬೇಟೆಯಾಡಿ ಮಾಂಸ ಮಾರಾಟ ಮಾಡುತ್ತಿದ್ದಾರೆ. ನಮ್ಮ ಜೊತೆ ಬಂದ ಗೋಪಾಲಕರು ಮತ್ತು ಇವರ ಜೀವನಕ್ರಮಗಳು ಒಂದೇ ತೆರನಾಗಿವೆ ಅದಕ್ಕಾಗಿ ಬೊಂತಾದೇವಿಯವರು ಇವರಿಗೆ ಅಚ್ಚುಮೆಚ್ಚು. ಆಗಾಗ ಬಂದು ಇವರಿಗೆ ಕೌದಿ ಹೊಲೆಯುವದನ್ನು ಕಲಿಸಿದ್ದಾರೆ. ಇವರಿಗೆ ಕೌದಿ ಮಾರಿ ಬರುವ ಆದಾಯ ಬದುಕಿಗೆ ಆಧಾರವಾಗಿದೆ.
**ಗುರುವ:** ಇವರು ಆರಾಧಿಸುವ ದೇವರು?
**ವೀರಭದ್ರಪ್ಪ:** ನನಗೆ ಹೆಚ್ಚು ಗೊತ್ತಿಲ್ಲ. ಇವರು ಆರಾಧಿಸುವ ದೇವರು (ಕಲ್ಲಿಂಗ) ಇದು ಹೆಚ್ಚುಕಡಿಮೆ ಇಷ್ಟಲಿಂಗದ ಹಾಗೆ ಬಹಳ ಭಾರವಾಗಿದ್ದು ಇದು ಸ್ಥಿರವಾಗಿ ನಿಲ್ಲಲು ಇದರ ಪಕ್ಕಕ್ಕೆ ಐದು ಗುಂಡುಗಳನ್ನು ಇಟ್ಟಿರುತ್ತಾರೆ. ಇವರು ಸ್ವಾತಂತ್ರ್ಯ ಪ್ರಿಯರು ಹಾಗಾಗಿ ಇದುವರೆಗೆ ಇವರಿಗೆ ಆಡಳಿತಗಾರರ ನೇಮಕವಾಗಿಲ್ಲ. ಇವರ ನಾಯಕನೇ ಇವರಿಗೆ ದೇವರಿದ್ದ ಹಾಗೆ. ಇವರು ತಲೆಬಾಗುವದು ತಮ್ಮ ದೇವರಿಗೊಬ್ಬರಿಗೇ.
ಜನರೆಲ್ಲ ವಾದ್ಯದೊಂದಿಗೆ ಬಂದರು ನನಗೆ ಆರತಿ ಮಾಡಿ ಹಾರ ಹಾಕಿ ಕರೆದುಕೊಂಡು ಹೋದರು. (ಯಾಕೋ ನನಗೆ ಮತ್ತೆ ಹರಕೆಯ ಕುರಿ ನೆನಪಿಗೆ ಬಂತು.) ಅಲ್ಲೊಂದು ದೊಡ್ಡ ಮರದ ಕೆಳಗೆ ಒಂದು ಕಟ್ಟೆ ಕಟ್ಟೆಯ ಮೇಲೆ ಒಂದು ಆಸನದ ಮೇಲೆ ಕಂಬಳಿ ಹಾಸಿದ್ದರು.
ನನ್ನ ಬಳಿಗೆ ಐದು ಜನ ಬಂದು ಕಟ್ಟೆಯ ಮೇಲೆ ಕರೆದುಕೊಂಡು ಹೋಗಿ ಆಸನದ ಮೇಲೆ ಕುಳಿತುಕೊಳ್ಳಲು ಹೇಳಿದರು. ಸರಿ ಸ್ವಲ್ಪ ತಾಳಿ ಎಂದು ಹೇಳಿ ನಾನು

ವೀರಭದ್ರಪ್ಪನನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ ಕೆಲವು ವಿಚಾರ ತಿಳಿಸಿದೆ. ಅವನು ಅಲ್ಲಿನ ಎಲ್ಲ ನಾಯಕರನ್ನು ಕರೆದುಕೊಂಡು ಕಟ್ಟೆಯ ಮುಂದಿನ ದೊಡ್ಡ ಬಯಲಿನ ಪಕ್ಕದಲ್ಲಿ ಕಾಣುತ್ತಿದ್ದ ಗುಡಿಸಲುಗಳ ಕಡೆಗೆ ಕರೆದುಕೊಂಡು ಹೋದ. ಸ್ವಲ್ಪ ಹೊತ್ತಾದ ಮೇಲೆ ಅವರೆಲ್ಲ ಮೆರವಣಿಗೆಯಲ್ಲಿ ಬಂದರು. ವೀರಭದ್ರಪ್ಪನ ಹೆಗಲ ಮೇಲೆ ಇಷ್ಟಲಿಂಗಾಕಾರದ ದೊಡ್ಡ ಕಲ್ಲಿತ್ತು ಮತ್ತೆ ಐವರು ನಾಯಕರ ಕೈಯಲ್ಲಿ ಕಲ್ಲಿನ ಗುಂಡುಗಳಿದ್ದವು. ಎಲ್ಲರೂ ಕಟ್ಟೆ ಹತ್ತಿ ಬಂದರು. ನಿಮ್ಮ ದೇವರನ್ನು ಆಸನದಲ್ಲಿ ಇಟ್ಟು ಪೂಜೆ ಮಾಡಿ ಎಂದೆ. ಅವರು ಬಹಳ ಖುಷಿಯಿಂದ ಕಟ್ಟೆಯ ಮೇಲೆ ಇಷ್ಟಲಿಂಗಾಕಾರದ ಕಲ್ಲಿಟ್ಟು ಅದು ಸ್ಥಿರವಾಗಿರಲು ಸುತ್ತಲೂ ಐದು ಕಲ್ಲುಗಳನ್ನಿಟ್ಟು ತಮ್ಮ ಪದ್ಧತಿಯಂತೆ ಹೂವಿನಿಂದ ಅಲಂಕರಿಸಿ ಪೂಜೆ ಮುಗಿಸಿದರು. ನಾನು ಮುಂದೆ ಹೋಗಿ ಹಾರ ಹಾಕಿ ನನ್ನ ಕೊರಳಿನಿಂದ ನಿನ್ನೆಯಿಂದ ಭಾರವಾಗಿದ್ದ ಮಹಾರಾಜರು ಕೊಟ್ಟಿದ್ದ ಪದಕವನ್ನ ಅಲ್ಲಿದ್ದ ಇಷ್ಟಲಿಂಗ ರೂಪದ ಕಲ್ಲಿಗೆ ಹಾಕಿ ನಮಸ್ಕರಿಸಿದೆ.
ಅಲ್ಲಿದ್ದವರೆಲ್ಲ ಅಪಾರ ಹರ್ಷದಿಂದ ಚಪ್ಪಾಳೆ ತಟ್ಟಿ ಕುಣಿದಾಡಿದರು.
ಅಲ್ಲಿಯ ನಾಯಕರು ಬಾಗಿ ನನಗೆ ತಲೆಬಾಗಿ ನಮಸ್ಕಾರ ಮಾಡಿದರು.
ಅವರನ್ನಪ್ಪಿಕೊಂಡು “ಈ ಊರಿನ ಎಲ್ಲರ ಯೋಗಕ್ಷೇಮ ನಿಮ್ಮದು, ಈ ದೇವರು ನಿಮಗೆ ಮಹಾರಾಜರು ಕಳಿಸಿದ ಆಡಳಿತಗಾರರು ಇವರು ಹೇಳಿದಂತೆ ಕೇಳಿ ನಡೆಯಿರಿ” ಎಂದು ಹೊಡಲನುವಾದೆ.
ಅವರು “ನೀವು ನಮ್ಮ ಆಡಳಿತಗಾರರು ಪ್ರಭು, ದೇವರು ನಿಮ್ಮನ್ನು ಕಳಿಸಿಕೊಟ್ಟಿದ್ದಾನೆ, ನಾವು ನಿಮ್ಮಾಜ್ಞೆ ಪಾಲಿಸುತ್ತೇವೆ., ಇಲ್ಲಿ ಕುಳಿತುಕೊಳ್ಳಿ ಸ್ವಲ್ಪ ಹೊತ್ತು” ಎಂದರು. ನಾನೀಗ ವಾಸ್ತವಕ್ಕೆ ಬಂದೆ ಎದುರಿಗೆ ನೂರಾರು ಜನ ಕುಳಿತುಕೊಂಡಿದ್ದರು ಅವರಲ್ಲಿ ಮೋನಣ್ಣ, ಶ್ರೀಶೈಲಪ್ಪ ದಂಪತಿಗಳಿದ್ದರು ಜೊತೆಗೆ ನನ್ನಾಕೆ ಬೊಂತಾದೇವಿಯ ಜೊತೆ ಇರುವದು ಕಾಣಿಸಿತು. ನಾನು ಎದ್ದು ಹೋಗಿ ಬೊಂತಾದೇವಿಯವರಿಗೆ ಬನ್ನಿ ಮೇಲೆ ಬಂದು ಕುಳಿತುಕೊಳ್ಳಿ ಎಂದೆ. ಅವರು ನಾನಲ್ಲಿಗೆ ಬರುವದಿಲ್ಲ ನಾನು ಜನರ ಮಧ್ಯದಲ್ಲಿ ಇರಲು ಇಚ್ಛಿಸುತ್ತೇನೆ. ಸರಿ ಎಂದು ನಾನು ಅಲ್ಲಿಯೇ ಕುಳಿತೆ. ನಾಯಕರೈವರು ಅಲ್ಲಿಯೇ ಬಂದು ಕುಳಿತುಕೊಂಡರು. ಜನರೆಲ್ಲ ನಮ್ಮ ಸುತ್ತುವರೆದರು.
ಬೊಂತಾದೇವಿ ಮತ್ತು ಶಂಕರಕ್ಕ ವಚನ ಹೇಳಿದರು ಸುತ್ತಲಿದ್ದವರೆಲ್ಲ ಅವರನ್ನನುಸರಿಸಿದೆವು.
ಅಲ್ಲಿಯೇ ಅವರು ಎಲೆಯಲ್ಲಿ ತಿಂಡಿ (ಕಾಡಹುಲ್ಲಿನ ಬೀಜದಿಂದ ಮಾಡಿದ ಕಿಚಡಿ ಎಂದು ಆಮೇಲೆ ಗೊತ್ತಾಯಿತು) ಹಾಗೂ ಕುಡಿಯಲು ಹಾಲು ಕೊಟ್ಟರು. ಹಬ್ಬದ ಸಂಭ್ರಮದ ವಾತಾವರಣ ಅಲ್ಲಿತ್ತು.
ಬೊಂತಾದೇವಿಯವರು ನೀವು ನಿಮ್ಮ ಮನೆ ಕಟ್ಟುವ ಜಾಗ ಆರಿಸಿಕೊಳ್ಳಿ ನಾನಿವರಿಗೆ ವಚನದ ಅರ್ಥ ಹೇಳುತ್ತೇನೆ.

ನಾವೆಲ್ಲ ವೀರಭದ್ರಪ್ಪನೊಡನೆ ಎದ್ದು ಹೊರಟೆವು. ಆಗ ನಾಯಕ "ಸ್ವಾಮಿ ಈ ಐವರು ಯುವಕರು ನಿಮ್ಮ ಜೊತೆಗಿರುತ್ತಾರೆ. ನೀವು ನಮ್ಮ ದೇವರು, ನಿಮ್ಮನ್ನು ಕಾಯುವದು ನಮ್ಮ ಕೆಲಸ" ಎಂದ. ಸರಿ ಎಂದು ಎಲ್ಲರೊಡನೆ ಹೊರಟೆ.
**ವೀರಭದ್ರಪ್ಪ:** ಕೊಲ್ಲಲು ಬಂದವರು ಪರಿವರ್ತನೆಯಾಗಿ ನಿಮ್ಮನ್ನು ಕಾಯಲು ಬಂದಿದ್ದಾರೆ.
**ಗುರುವ:** ನನಗರ್ಥವಾಗಲಿಲ್ಲ.
**ವೀರಭದ್ರಪ್ಪ:** ಯುವರಾಜನ ಸಂಚಿನ ಎರಡನೆಯ ಭಾಗ ಇದು. ಇವರು ಇದುವರೆಗೆ ಯಾವ ಆಡಳಿತಗಾರನನ್ನು ಒಪ್ಪಿಕೊಂಡಿಲ್ಲ. ಮಹಾರಾಜರು ಕಳಿಸಿದ ಆಡಳಿತಗಾರರು ಇವರ ಬಿಲ್ಲಿಗೆ ಬಲಿಯಾಗಿದ್ದಾರೆ. ಇವರು ಮೊದಲಬಾರಿಗೆ ಒಬ್ಬರ ಮುಂದೆ ತಲೆಬಾಗಿ ಪ್ರಭು ಎಂದು ಮನಸಾರೆ ಒಪ್ಪಿಕೊಂಡಿದ್ದು. ಇನ್ನು ಇಲ್ಲಿ ನಿಮಗೆ ಯಾರ ಭಯವೂ ಇಲ್ಲ.
ನಮ್ಮ ಜೊತೆ ಮೌನವಾಗಿ ಜೊತೆಯಾಗಿ ನಡೆಯುತ್ತಿದ್ದ ನನ್ನಾಕೆ ಬಂದ ಕಣ್ಣೀರನ್ನು ಸೆರೆಗಿನಿಂದ ಒರಸಿಕೊಂಡು "ಎಲ್ಲ ಅಣ್ಣ ಬಸವಣ್ಣನ ದಯೆ" ಎಂದಳು.
ಎದುರಿಗೆ ಕಡಿದಾದ ಬೆಟ್ಟ. ಹಚ್ಚ ಹಸಿರಾದ ಮರಗಳು ಅಲ್ಲಲ್ಲಿ ಹೂ ಅರಳಿ ಕಂಪು ಹರಡಿತ್ತು. ಬೆಟ್ಟದ ಬುಡಕ್ಕೆ ಬಂದಾಗ ಅಲ್ಲಿ ಹತ್ತು ಹನ್ನೆರಡು ಯುವಕರು ಜೊತೆಗೆ ಒಬ್ಬ ಬಿಳಿಗಡ್ಡದ ಮುದುಕ ನಿಂತಿದ್ದರು. ನಮ್ಮನ್ನು ನೋಡಿದೊಡನೆ ಆ
**ಮುದುಕಪ್ಪ:** ನನ್ನ ಹೆಸರು ಸಿದ್ದಪ್ಪ. ನೀವು ಜಾಗ ತೋರಿಸಿ ನಾವು ಸಾಯಂಕಾಲದೊಳಗೆ ಗವಿ ತಯಾರ ಮಾಡಿಕೊಡುತ್ತೇವೆ.
**ಗುರುವ:** ಸಿದ್ದಪ್ಪಜ್ಜ ನಿಮಗೆ ಅನುಭವ ಇದೆ. ನಮಗೆ ಇರಲು ಸಣ್ಣ ಗೂಡಿದ್ದರೂ ಸಾಕು ಆದರೆ ಗಾಣ ನಡೆಸಲು ಜಾಗವಿರಬೇಕು. ಮೊನಣ್ಣ ಮತ್ತು ಶ್ರಿಶೈಲಪ್ಪ ಅವರ ಕಾಯಕ ಮಾಡಲು ಅನುಕೂಲವಾಗಿರಬೇಕು.
**ಶ್ರೀಶೈಲಪ್ಪ:** ಹೊರಗೊಂದು ದೊಡ್ಡ ಗಿಡವಿದ್ದರೆ ಸಾಕು.
**ಮುದುಕಪ್ಪ:** ಇಲ್ಲಿಂದ ಎಡಗಡೆ ಸ್ವಲ್ಪ ಮುಂದೆ ಹೋಗೋಣ ಅಲ್ಲಿ ಒಳ್ಳೆಯ ಜಾಗ ಇರಬಹುದು ನೋಡೋಣ.
ಎಡಗಡೆ ಒಂದು ಬಂಡಿಹೋಗುವಷ್ಟು ಕಡಿದಾದ ದಾರಿ ಅಲ್ಲಿರುವ ಗಿಡ ಬಳ್ಳಿಯ ನಡುವೆ ಜಾಗ ಮಾಡಿಕೊಂಡು ಸ್ವಲ್ಪ ಮುಂದೆ ಹೋದಕೂಡಲೇ ಮುಂದೆ ಹೋಗಲು ಸಾಧ್ಯವಿಲ್ಲದಷ್ಟು ಕಡಿದಾದ ಬೆಟ್ಟ ಬಂತು.
**ಗುರುವ:** ಇಲ್ಲಿ ಜಾಗ ಸಮತಟ್ಟು ಮಾಡಿದರೆ ಗಾಣ ತಿರುಗುತ್ತದೆ. ಇಲ್ಲಿ ಮಗ್ಗಲು ಗುಡ್ಡದಲ್ಲಿ ಗುಹೆ ಮಾಡಬಹುದು.
ಮುದುಕಪ್ಪ ಮಗ್ಗಲಿದ್ದ ಕಡಿದಾದ ಹಸಿರು ಬಳ್ಳಿ ಗಿಡಗಳಿಂದ ಕೂಡಿದ ಬೆಟ್ಟ ಪರಿಶೀಲಿಸಿದ.
**ಮುದುಕಪ್ಪ:** ಈ ಜಾಗ ಪ್ರಶಸ್ತವಾಗಿದೆ. ಇಲ್ಲಿ ಬೆಳೆದಿರುವ ಬಳ್ಳಿ ಅಪರೂಪದ್ದು.

ಇವು ಇದ್ದರೆ ಸಮೀಪ ಯಾವ ವಿಷ ಜಂತುಗಳು ಸುಳಿಯವುದಿಲ್ಲ. ಇನ್ನು ಯಾವ ಕಾಡುಪ್ರಾಣಿಗಳೂ ಇದರ ಕಡೆ ಸುಳಿಯುವದಿಲ್ಲ. ಅವೆಲ್ಲ ಒಂದಕ್ಕೊಂದು ಹೆಣೆದು ಗಟ್ಟಿಯಾಗುತ್ತವೆ ಇದನ್ನು ಕಡಿಯುವದಾಗಲೀ ಅಥವಾ ತೆಗೆಯುವದಾಗಲೀ ತುಂಬಾ ಕಠಿಣ. ಯವುದೇ ಗಾಯಕ್ಕೆ ಇದರ ರಸ ಒಳ್ಳೆಯ ಔಷಧ.
ಇದರಲ್ಲಿ ಒಂದು ಸಣ್ಣ ಬಾಗಿಲಿನಷ್ಟು ಬಳ್ಳಿ ತೆಗೆದು ಒಳಗೆ ಮೂರು ಗವಿಗಳನ್ನು ಮಾಡಿಕೊಡತೀವಿ ನೀವೆಲ್ಲ ಇಲ್ಲಿಯೇ ಸಮೀಪದಲ್ಲಿರುವ ಮಂದಿರ ಮತ್ತು ಕೆರೆ ನೋಡಿಕೊಂಡು ಬನ್ನಿ.
ಸರಿ ಎಂದು ಹೊರಟೆವು.

**ಹೋತನ ಹೊಡದು, ಆಡ ಕೂಡಿ, ಕುರಿಯ ನಿಲಿಸಿ,**

**ತಗರ ತಡದು, ಹಿಂಡನೊಬ್ಬುಳಿತೆಮಾಡಿ,**

**ಹುಲಿ ತೋಳ ಚೋರ ಭಯಮಂ ಕಳೆದು,**

**ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೆ, ವೀರಬೀರೇಶ್ವರಾ.**/94

**---** ವೀರ ಗೊಲ್ಲಾಳ

## ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ ?

ಗಮನಿಸಿ{

ಮಾನವ, ಪ್ರಕೃತಿ, ಪ್ರಾಣಿ, ಪಕ್ಷಿಗಳ ನಡುವಿನ ಸಂಬಂಧ ಅವರ್ಣನೀಯ. ಹಾವಿಗಂಜುವವರು ಹಲವರಾದರೆ ನೂರಾರು ಹಾವುಗಳ ಜೊತೆ ಇರುವವರು ಸಿಗುತ್ತಾರೆ. ಸಿಂಹ ಎಲ್ಲ ಪ್ರಾಣಿಗಳನ್ನು ಭಕ್ಷಿಸುತ್ತದೆ ಎನ್ನುವದು ನಿಜವಾದರೂ ಅವುಗಳ ಜೊತೆ ವಾಸಿಸುವವರೂ ಸಿಗುತ್ತಾರೆ.
ಈ ರೀತಿಯ ಆಚರಣೆ ಅಭೂತಪೂರ್ವ ಎನಿಸುವದು. ಅದಕ್ಕೆ ನಿಜವಾದ ಕಾರಣ ಗೊತ್ತಿಲ್ಲ. ಸಕಲ ಜೀವಜಂತುಗಳ ನಡುವೆ ವರ್ಣಿಸಲಾಗದ ಅನುಬಂಧ ಇದೆ. ಒಮ್ಮೊಮ್ಮೆ ಈ ತರಹದ ಅಸಂಬಂಧ ಪವಾಡ ಎನಿಸುತ್ತದೆ. ಅಂತಹದೊಂದು ಘಟನೆಯ ವಿವರ ಇಲ್ಲಿದೆ.

**ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ ?**

**ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ**

**ಕೈಲಾಸವೆಂಬ ಆಸೆ ಬೇಡ. ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ. / 23**-

- ಆಯ್ದಕ್ಕಿ ಲಕ್ಕಮ್ಮ

ಮಂದಿರ ಎನ್ನುವ ಶಬ್ದ ಕಿವಿಗೆ ಬಿದ್ದ ತಕ್ಷಣ ಹೆಣ್ಣುಮಕ್ಕಳು ಅಲ್ಲಿದ್ದ ಹೂವಿನ ಗಿಡಗಳ ಕಡೆ ಹೋಗಿ ಹೂ ಹರಿಯಹತ್ತಿದರು. ಅದನ್ನು ಕಂಡ ತಕ್ಷಣ ನನಗಾಗಿ ಕಳಿಸಿದ ಬಿಲ್ಲುವೀರರು (ಇನ್ನುಮೇಲೆ ನನ್ನ ತಮ್ಮಂದಿರು ಏಂದು ಕರೆಯುವೆ) ಬಿಲ್ಲು ಕೆಳಗಿಟ್ಟು ಅಲ್ಲಿದ್ದ ಗಿಡದ ದೊಡ್ಡ ಎಲೆಗಳನ್ನು ಹರಿದು ಹೂಹಾಕಲು ಬುಟ್ಟಿ ಮಾಡಿದರು. ಅವರ ಕರಕುಶಲತೆ ಮೆಚ್ಚುವಂತಹದು.

**ವೀರಭದ್ರಪ್ಪ:** ಅಲ್ಲಿಯ ಕೆರೆಯ ಮಗ್ಗಲು ಗಿಡಗಳಲ್ಲಿ ಕಾಡುಜೇನು ಹುಟ್ಟುಗಳಿವೆ. ಮಂದಿರಕ್ಕೆ ಜಾಗರೂಕರಾಗಿ ಹೋಗಿ ಬರಬೇಕು.
**ಗುರುವ:** ಹೆಣ್ಣುಮಕ್ಕಳು ಮಂದಿರಕ್ಕೆ ಹೋಗಲು ಉತ್ಸುಕರಾಗಿದ್ದಾರೆ ಜಾಗರೂಕತೆಯಿಂದ ಹೋಗಿ ಬರೋಣ.
ಸರಿ ಎಂದವರೇ ಎಲ್ಲರನ್ನು ಕರೆದು ವಿಷಯ ತಿಳಿಸಿ ಜಾಗರೂಕರಾಗಿರಲು ತಿಳಿಸಿದರು.
ಅಲ್ಲಿಂದ ಇಳಿಜಾರಿನಲ್ಲಿ ಸ್ವಲ್ಪ ದೂರ ಸಾಗಿದಾಗ ಕಂಡದ್ದು ವಿಶಾಲವಾದ ಕೆರೆ ಸುತ್ತಲೂ ದೊಡ್ಡ ಗಿಡಗಳ ಗುಂಪು. ಒಂದು ಕಡೆ ಸುಂದರವಾದ ಚಿಕ್ಕದಾದ ಮಂದಿರ ಅದರ ಮೇಲಿರುವ ಕಳಸ ಬಿಸಿಲಿನಲ್ಲಿ ಥಳಥಳಿಸುತ್ತಿತ್ತು. ನಿಧಾನವಾಗಿ ಇಳಿದು ಮಂದಿರದ ಹತ್ತಿರ ಬಂದೆವು.
ಸಪ್ಪಳಮಾಡದೇ ಮೌನವಾಗಿ ಅವರೆಲ್ಲ ಮಂದಿರದ ಒಳ ಹೋದರು. ನನಗೆ ಅಲ್ಲಿಯ ಆ ಗಿಡಗಳಲ್ಲಿಯ ಬಗೆಬಗೆಯ ಪರಿಮಳ ಆಸ್ವಾದಿಸುತ್ತ ಸ್ವಲ್ಪ ಹೊತ್ತು ಕುಳಿತುಕೊಳ್ಳಬೇಕೆನಿಸಿ ಕಣ್ಣುಮುಚ್ಚಿ ಕುಳಿತುಕೊಂಡೆ. ಯಥಾಪ್ರಕಾರ ನನ್ನಲ್ಲೇ ನಾನು ಲೀನವಾದೆ. ಮನದಲ್ಲಿ ಬೆಳಕು ಮೂಡಿತು. ನಿಧಾನವಾಗಿ ಬೆಳದಿಂಗಳ ಹಾಗೆ ತಂಪಾಗಿದ್ದ ಬೆಳಕು ಪ್ರಖರವಾಗುತ್ತಾ ಹೋಯಿತು ಆಮೇಲೆ ಎಲ್ಲಾ ಮಾಯವಾಯಿತು. ಆಗ ಕಣ್ಣು ತೆರೆದು ಎದ್ದು ನಿಂತು ಸುತ್ತಲೂ ನೋಡಿದೆ. ದೂರದಲ್ಲಿ ಎಲ್ಲರೂ ನಿಂತಿದ್ದರು ಎಲ್ಲರ ಮುಖದಲ್ಲಿ ಆತಂಕ ಮನೆಮಾಡಿತ್ತು. ನನ್ನವಳ ಕಣ್ಣಲ್ಲಿ ಭಯ ಕಾಣುತ್ತಿತ್ತು. ಅಕೆಯನ್ನು ಶಂಕರಮ್ಮ ಸಂತೈಸುತ್ತಿದ್ದಳು. ಏನಾಯಿತು ಅರ್ಥವಾಗಲಿಲ್ಲ. ಅವರ ಹತ್ತಿರ ಹೋದಾಗ ಎಲ್ಲರೂ ಕೈಮುಗಿದು ಶರಣು ಶರಣೆಂದರು. ನನ್ನವಳಂತೂ ಗಡಗಡ ನಡಗುತ್ತ "ಶರಣು ಶರಣು" ಎಂದಳು. ನನಗೆ ದಿಕ್ಕು ತೋಚಲಿಲ್ಲ. ನಾನೆಂದು ಶರಣನಾದೆ? ಮತ್ತೆ ಗಾಣ ತಿರುಗಲಾರಂಭಿಸಿತು.
**ಗುರುವ:** ಏನಾಯಿತು ಮೋನಣ್ಣ?
**ಮೋನಣ್ಣ:** ಎಲ್ಲಾ ಹೇಳುತ್ತೇವೆ ಇಲ್ಲಿಂದ ಮೊದಲು ಹೋಗೋಣ.
ಎಲ್ಲರೂ ಅಲ್ಲಿಂದ ಹೊರಟು ದೂರವಿದ್ದ ಕಲ್ಲುಲಿಂಗವಿದ್ದ ಕಟ್ಟೆಯ ಮೇಲೆ ಕುಳಿತುಕೊಂಡೆವು.
**ಶ್ರೀಶೈಲಪ್ಪ:** ನಿಮಗೇನಾಯಿತು ಮೊದಲು ಹೇಳಿ.
**ಗುರುವ:** ಎಂದಿನಂತೆ ಕಣ್ಣುಮುಚ್ಚಿ ಕುಳಿತೆ. ಮೊದಲು ಬೆಳದಿಂಗಳ ಬೆಳಕು ಆವರಿಸಿತು. ಕ್ರಮೇಣ ಬಿಸಿ ಏರತೊಡಗಿ ಆ ಬೆಳಕು ಸುಡುಬಿಸಿಲಿನಂತೆ ಭಾಸವಾಯಿತು. ಕಿವಿಯಲ್ಲಿ ಜೋರಾದ ಝೇಂಕಾರ ಕೇಳಹತ್ತಿತು. ಆಮೇಲೆ ಎಲ್ಲ ಶಾಂತ. ಅಮೇಲೆ ಕಣ್ಣುತೆಗೆದಾಗ ಸುತ್ತ ಮುತ್ತ ನೋಡಿದೆ ದೂರದಲ್ಲಿ ನೀವು ಕಂಡಿರಿ ಅಷ್ಟೇ. ನೀವು ಯಾಕೆ ಗಾಬರಿಯಾಗಿದ್ದೀರಿ?
**ಶ್ರೀಶೈಲಪ್ಪ:** ನಾವು ಮಂದಿರಕ್ಕೆ ಹೋಗಿ ಮರಳಿದಾಗ ನಿಮ್ಮ ತಲೆಯ ಮೇಲೆ ಒಂದು ಜೇನುಹುಳ ಸುತ್ತುವರಿಯುತ್ತಿತ್ತು. ಅದು ಭಯಾನಕ ಕಾಡುಜೇನುಹುಳ

ಕಚ್ಚಿದರೆ ಮೂರ್ಚೆಹೋಗುತ್ತಾರೆ ಎಂದು ಕಿವಿಯಲ್ಲಿ ಉಸಿರಿದ ಇವನು ನಿಧಾನವಾಗಿ ದೂರ ಹೋಗುವಾ ಎಂದ . ಅದಕ್ಕಾಗಿ ಇಲ್ಲಿ ಬಂದು ನಿಂತಿದ್ದೇವೆ. ಇವರಲ್ಲೊಬ್ಬ ಔಷಧ ಹುಡುಕಿ ತರಲು ಹೋಗಿದ್ದಾನೆ.

**ಮೋನಣ್ಣ:** ಸ್ವಲ್ಪಹೊತ್ತಿನಲ್ಲಿ ಅಲ್ಲಿಗೆ ಜೇನುಹುಳಗಳ ಗುಂಪೇ ಬಂದು ನಿಮ್ಮ ಮೈಮೇಲೆಲ್ಲ ಕುಳಿತುಕೊಳ್ಳಹತ್ತಿದವು.

**ಶಂಕರಮ್ಮ:** ಅಮೇಲೆ ನೀವು ಕಾಣಲೇ ಇಲ್ಲ ಅಲ್ಲಿದ್ದದ್ದು ಜೇನುಹುಳಗಳ ಗುಂಪು. ಏನುಮಾಡಬೇಕು ತೋಚದೆ ನಿಂತೆವು.

**ನನ್ನಾಕೆ:** ನಮ್ಮ ಪುಣ್ಯ ಒಂದು ಜೇನುಹುಳ ಹಾರಿ ಹೋಗಿ ಗಿಡದ ಮೇಲೆ ಕುಳಿತುಕೊಂಡಿತು ಅದನ್ನನುಸರಿಸಿದ ಉಳಿದವು ಅಲ್ಲಿ ಗೂಡುಕಟ್ಟಿದವು. ನಿಮ್ಮ ಮೇಲೆ ಒಂದೂ ಹುಳವಿಲ್ಲ. ನೀವು ಎದ್ದು ಬಂದಾಗಲೇ ಗೊತ್ತು ನಿಮ್ಮನ್ನು ಅವು ಕಚ್ಚಿಲ್ಲ ಎಂದು.

**ಗುರುವ:** ನನಗೆ ಏನು ಆಗಿಲ್ಲ ಸುಮ್ಮನೆ ಗಾಬರಿಯಾಗಿರುವೆ ಎಂದು ಅವಳ ಕೈಹಿಡಿದೆ.

**ನನ್ನಾಕೆ:** ಏನ್ರಿ ಇದು ಕೈ ಸುಡುತ್ತಿದೆ.

ಮೋನಣ್ಣ ತಲೆಯ ಮೇಲೆ ಕೈಯಿಟ್ಟು ನಿಮ್ಮ ನೆತ್ತಿ ಬೆಂಕಿಯುಂಡೆಯಾಗಿದೆ.

**ಶ್ರೀಶೈಲಪ್ಪ:** ಅದಕ್ಕಾಗಿಯೇ ಜೇನುಹುಳುಗಳು ನಿಮ್ಮನ್ನು ಬಿಟ್ಟು ಗಿಡದಮೇಲೆ ಕುಳಿತುಕೊಳ್ಳಲು ಹೋದದ್ದು.

ಆ ಊರ ನಾಯಕ ಕೈಯಲ್ಲಿ ಎಲೆಗಳನ್ನು ಹಿಡಿದುಕೊಂಡು ಓಡೋಡಿ ಬಂದ.

**ನಾಯಕ**: ಪ್ರಭು ನಿಮಗೆ ಹಚ್ಚಲೆಂದು ಈ ಎಲೆಗಳನ್ನು ತೆಗೆದುಕೊಂಡು ಬಂದೆ.

**ಗುರುವ:** ಅದರ ಅವಶ್ಯಕತೆ ಇಲ್ಲ ನಾನೀಗ ಆರಾಮ ಆಗಿದ್ದೇನೆ.

**ನಾಯಕ:** ಜೇನುಹುಳ ಕಡಿತಕ್ಕೆ ನಮ್ಮ ಅನೇಕ ಪ್ರಾಣಿಗಳು ಮತ್ತು ಜನರು ಬಲಿಯಾಗಿದ್ದಾರೆ. ಅವುಗಳನ್ನು ಇಲ್ಲಿಂದ ಕಳಿಸಲಾಗುತ್ತಿಲ್ಲ.

**ಗುರುವ:** ಅವುಗಳಿಗೆ ಬದುಕಲು ಹಕ್ಕಿಲ್ಲವೇ? ಅವು ತಮ್ಮ ಜಾಗದಲ್ಲಿ ಇರಲು ಬಿಡದೇ ನಾವು ಅವುಗಳಿಗೆ ತೊಂದರೆ ಕೊಟ್ಟಾಗ ಅವು ಕಚ್ಚುತ್ತವೆ. ಆಕಡೆ ಹೋಗದಿದ್ದರೆ ಅವು ತೊಂದರೆ ಮಾಡುವದಿಲ್ಲ. ಅವುಗಳನ್ನು ಅವುಗಳಷ್ಟಕ್ಕೆ ಬಿಟ್ಟುಬಿಡಿ.

**ನಾಯಕ:** ಹಾಗೇ ಆಗಲಿ ಪ್ರಭು.

ಈ ಸುದ್ದಿಯೆಲ್ಲ ಆ ಹಟ್ಟಿಯಲ್ಲಿ ಹರಡಿತ್ತು. ಅವರೆಲ್ಲ ಗಾಬರಿಯಿಂದ ಬಂದು ನಾನು ಆರಾಮವಾಗಿದ್ದು ಕಂಡು ಸಂತೋಷ ಪಡುತ್ತಿದ್ದರು. ಈ ಆತ್ಮೀಯತೆ ಬಂದದ್ದು ಅಣ್ಣನ ಕೃಪೆ ಎಂದು ಮನದಲ್ಲೇ ನೆನಸಿದೆ.

ಅವರೊಡನೆ ಸ್ವಲ್ಪ ಸಮಯ ಕಳೆದು ಗವಿ ನಿರ್ಮಾಣದ ಜಾಗೆಯ ಕಡೆಗೆ ನಡೆದೆವು.

ಅಲ್ಲಿ ಯಾರು ಇಲ್ಲದ್ದನ್ನು ಕಂಡು ಅಶ್ಚರ್ಯವೆನಿಸಿತು. ಅವರೆಲ್ಲ ಎಲ್ಲಿ ಹೋದರು ಎಂದು ವಿಚಾರಿಸುವಾಗ ನಮ್ಮ ಮುಂದಿನ ಗೋಡೆಯಲ್ಲಿ ಒಂದು ಹಸಿರು ಬಾಗಿಲು ತೆಗೆದು ಅದರಿಂದ ಸಿದ್ದಜ್ಜ ಹೊರಬಂದ.
**ವೀರಭದ್ರಪ್ಪ:** ಗವಿ ಅಗಿಯುವ ಕೆಲಸ ಎಲ್ಲಿಗೆ ಬಂತು.
**ಸಿದ್ದಜ್ಜ:** ನಾವು ಮಾಡುವದೇನು ಇಲ್ಲ. ಇಲ್ಲಿ ನಮಗೆ ಚಾಲುಕ್ಯರ ಕಾಲದ ಒಂದು ಕಲ್ಲಿನ ಗುಹೆ ಸಿಕ್ಕಿತು. ಬಹಳ ಸುವ್ಯವಸ್ಥಿತವಾದ ಗವಿ ಇಲ್ಲಿವೆ. ನಾವು ಅದನ್ನು ಶುದ್ಧೀಕರಿಸಿದೆವು ಅಷ್ಟೇ. ಬನ್ನಿ ನೋಡಬನ್ನಿ.
ಹಸಿರು ಬಳ್ಳಿಯ ಬಾಗಿಲ ದಾಟಿ ಹೋದಕೂಡಲೇ ಒಂದು ಮಂಟಪ ಮೂರು ದಿಕ್ಕಿನಲ್ಲಿ ಮೂರು ಬಾಗಿಲು ಆ ಬಾಗಿಲ ದಾಟಿದ ಮೇಲೆ ಒಳಗೆ ವಿಶಾಲವಾದ ಒಂದು ಗವಿ ಇದ್ದವು.
ಇಳಿಬಿದ್ದ ಬಳ್ಳಿಗಳ ಮದ್ಯದಿಂದ ಬಿಸಿಲಿನ ಕಿರಣಗಳು ಅಲ್ಲಿ ಬೆಳಕನ್ನು ಕೊಡುತ್ತಿದ್ದವು.
**ಸಿದ್ದಜ್ಜ:** ನೀವು ಇಲ್ಲಿ ಇದ್ದುಬಿಡಿ. ನಾನೂ ಇಲ್ಲಿ ಇನ್ನೂ ವಿಶೇಷತೆಗಳೇನಾದರೂ ಇದೆಯಾ ಆಮೇಲೆ ಬಂದು ನೋಡುವೆ. ಇವತ್ತು ಇಷ್ಟು ಸಾಕು ನೀವು ನಿಮ್ಮ ಕಾಯಕ ಪ್ರಾರಂಭಿಸಿಕೊಳ್ಳಿ. ನಮ್ಮ ಹುಡುಗರು ಬಂಡಿ ಬರುವ ದಾರಿ ಮಾಡುತ್ತಾರೆ. ಹೋಗಿ ಬರುತ್ತೇನೆ.
**ವೀರಭದ್ರಪ್ಪ**: ನಾನು ನಾಳಿಗೆ ಅರಮನೆಗೆ ಕಳಿಸಬೇಕಾದ ಕಟ್ಟಿಗೆ ಮತ್ತು ಇತರ ಸಾಮಾನುಕಳಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.
ನಾವು ಬಂಡಿಯ ಹತ್ತಿರಕ್ಕೆ ಬಂದಾಗ ನನಗೊಂದು ಆಶ್ಚರ್ಯ ಕಾದಿತ್ತು. ಅಪ್ಪಣ್ಣನವರು ನನ್ನ ಬಂಡಿಯಲ್ಲಿ ಒಂದು ಹೊಸ ಗಾಣ ಕಳಿಸಿಕೊಟ್ಟಿದ್ದರು. ಗುಹೆಯ ಹತ್ತಿರ ಬಂಡಿಗಳನ್ನು ಹೊಡೆದುಕೊಂಡು ಬಂದಾಗ ಅಲ್ಲಿ ಗಾಣ ಹಾಕಲು ಜಾಗ ಮಾಡಿ ನಮಗಾಗಿ ದಾರಿ ಕಾಯುತ್ತಿದ್ದರು ಸಿದ್ದಜ್ಜ.
ನಾನು ಮುಂಜಾನೆ ಬರುವಾಗಲೇ ಗಾಣದ ಅಳತೆ ತಂದಿದ್ದೆ. ಈಗ ನೀವು ಹೇಳಿದ ಹಾಗೆ ಗಾಣ ಹಾಕೋಣ.
ಸಾಯಂಕಾಲದ ಹೊತ್ತಿಗೆ ನಾವು ಮೂವರು ಕಾಯಕದಲ್ಲಿ ತೊಡಗಿದೆವು. ಹೆಣ್ಣುಮಕ್ಕಳು ಹೊರಗೆ ಗಿಡದ ಕೆಳಗೆ ಒಲೆ ಹೂಡಿ ಅಡಿಗೆ ಮಾಡಲು ತೊಡಗಿದರು. ನನ್ನ ಐದು ತಮ್ಮಂದಿರಿಗೂ ಅಡಿಗೆ ಮಾಡಿ. ನಮ್ಮಜ್ಜ ಮತ್ತು ಅವರ ಬಳಗ ಮರೆತಿರೇನೂ? ಎಂದಳು ಆಕೆ.
ಅಷ್ಟರಲ್ಲಿ ನಾಯಕ ಕೆಲವು ಜನರೊಡನೆ ಅಲ್ಲಿಗೆ ಬಂದು
"ಪ್ರಭು ದಾಸೋಹಕ್ಕ ಬರಬೇಕು ಎಂದ. ಕಲ್ಯಾಣದಿಂದ ಬಂದವರು ಅಣ್ಣಾ ಬಸವಣ್ಣ ದಾಸೋಹ ಪ್ರಾರಂಭ ಮಾಡಲು ಆದೇಶ ಕೊಟ್ಟಿರುವ ವಿಚಾರ ತಿಳಿಸಿದರು. ಅವರು ಹೇಳಿದಂತೆ ನಾವೂ ಮಾಡೀವಿ.
ನಾವೆಲ್ಲ ಅವರೊಡನೆ ನಡೆದೆವು ದಾಸೋಹದೆಡೆಗೆ.

# ಮನಮಗ್ನವಾಗಿ ಶಿವಧ್ಯಾನದಲ್ಲಿ ಕೂಡಿ, ಒಂದೇ ದಳವ ಧರಿಸಿದರೆ ಶಿವನು ಒಲಿಯನೆ?

ಗಮನಿಸಿ:

"ಶರಣ" ಪದವನ್ನು 141 ವಚನಕಾರರು 4035 ವಚನಗಳಲ್ಲಿ 6161 ಲಡೆಗಳಲ್ಲಿ ಉಪಯೋಗಿಸಿರುವದು ಆ ಪದದ ಮಹತ್ವವನ್ನು ತೋರಿಸುತ್ತದೆ. ಯಾರಿಗೆ ಶರಣನೆನಬೇಕು ಎನ್ನುವದನ್ನು ವಿವರಿಸಿದ್ದಲ್ಲದೆ, ಸಾಮಾನ್ಯ ಮಾನವ ಶರಣರಾಗುವ ಬಗೆಯನ್ನು ವಿವಿಧ ಬಗೆಯಲ್ಲಿ ವಿವರಿಸಿದ್ದಾರೆ. ಒಬ್ಬ ಸಾಮಾನ್ಯನನ್ನು ಜನ ಶರಣ ಎಂದಾಗ ಅವನ ಮನದಲ್ಲಾಗುವ ತಳಮಳ ಈ ಕನಸಿನ ಭಾಗದಲ್ಲಿದೆ.



ಮಹಾರಾಜರು, ಮಹಾರಾಣಿ, ಕಲ್ಯಾಣದ ಜನ, ನಾಯಕ, ಗೆಳೆಯರು ಮತ್ತು ನನ್ನ ಹೆಂಡತಿ ನನ್ನನ್ನು ಪ್ರೀತಿಸುವದೇಕೆ, ಗೌರವಿಸಿವದೇಕೆ?.
ಮತ್ತೆ ಗಾಣ ತಿರುಗಲು ಪ್ರಾರಂಭಿಸಿತು. ನಾನು ಹೇಗಿದ್ದೇನೆ ಎಂದು ನನ್ನಾಕೆಯನ್ನು ಕೇಳಬೇಕೆನಿಸಿತು. ಪಾಪ ಈಗ ನಡೆಯುತ್ತಿರುವ ಘಟನೆಗಳ ಬಗ್ಗೆ ಚಿಂತಿಸಿ ಹಣ್ಣಾಗಿದ್ದಾಳೆ. ಹೋಗಲಿ ನನ್ನನ್ನು ನಾನು ಹೇಗಿರುವೆ? ಎಂದು ಪ್ರಶ್ನಿಸಿದರೆ ಮನದಲ್ಲಿ ಹೊಳೆದ ಉತ್ತರ.
**ಬಣ್ಣ:** ಸಣ್ಣವನಿದ್ದಾಗ ನಮ್ಮಜ್ಜಿ ಎರಿಹೊಲಕ ಕರಕೊಂಡು ಹೋಗುತ್ತಿದ್ದಳು ನನ್ನನ್ನು ಒಂದು ಬಿಳಿ ಧೊತರ ಹಾಕಿ ಅದರಲ್ಲಿ ಕೂಡ್ರಿಸಿ ಇಲ್ಲೇ ಇರು ಎಲ್ಲಿಗೂ ಹೋಗಬೇಡ. ನಿನ್ನ ಎರಿಹೊಲದಾಗ ಹುಡುಕೂದು ಕಷ್ಟ ಅಂತ ಮುದ್ದು ಮಾಡಿ ಹೋಗುತ್ತಿದ್ದಳು. ಗೊತ್ತಾತಲ್ಲ ನಮ್ಮಜ್ಜಿ ನನ್ನ ಬಣ್ಣದ ವಿವರಣೆ ಕೊಟ್ಟದ್ದು.
**ರೂಪ:** ನಮ್ಮತ್ತೆ ಈ ಕೋತಿ ಮುಖ ನೋಡಿ ಯಾರು ಹೆಣ್ಣು ಕೊಡ್ತಾರೆ ಅನ್ನುತ್ತಲೇ ತನ್ನ ಮಗಳನ್ನು ಕೊಟ್ಟಿದ್ದಳು. ಅಂದಮೇಲೆ ನನ್ನನ್ನು ನೋಡಿಕೊಳ್ಳುವದರಲ್ಲಿ

ಅರ್ಥವೇನಿದೆ?. ಕಣ್ಣು ತೆರೆದು ಆಕೆಯನ್ನುನೋಡಿದೆ. ಪಣತಿಯ ಮಂದ ಬೆಳಕಿನಲ್ಲಿ ದಂತದ ಗೊಂಬೆಯಂತಿದ್ದಳು. ಮೊದಲಬಾರಿಗೆ ನನಗನಿಸಿದ್ದು ನನ್ನಾಕೆ ಸುಂದರಿ.

**ಜ್ಞಾನ:** ಇನ್ನು ನನ್ನ ಹೆಂಡತಿ ಅನೇಕ ಪದ, ಜಾನಪದ ಹಾಡುಗಳನ್ನ ಕಲತಾಳ ಮತ್ತ ಹಾಡತಾಳ. ರಂಗೋಲಿ ಹಾಕತಾಳ. ನನಗೆ ಬರುವದು ಅದೇ ಒಂದು ವಚನ "ಕಳಬೇಡ, ಕೊಲಬೇಡ,..." ಅದೂ ಇಲ್ಲಿಗೆ ಬಂದ ಮೇಲೆ ಕಲಿತಿದ್ದು. ಮತ್ತ ಗುರು ಮೊನ್ನೆ ಹೇಳಿದ ವಚನ ಬರೆಯಲಿಕ್ಕ ಬರತೈತಿ. ಉಳಿದುದೆಲ್ಲ ಶೂನ್ಯ.

**ಕಾಯಕ:** ಗಾಣ ತಿರುಗಿಸುವದನ್ನು ಬಿಟ್ಟರೆ ಮತ್ತ ಯಾವ ಕೆಲಸ ಬರೂದಿಲ್ಲ. ಆದರೂ ಯಾಕ ನನ್ನ ಗೌರವಿಸಿ ಪ್ರೀತಿಸತಾರ? ಯಾಕೆ ಹೀಗೆ? ನನಗ್ಯಾಕೆ ಯಾರಾದರೂ ತಲೆಬಾಗಿಸಿ ಶರಣೆಂದಾಗ ನನ್ನ ಬಗ್ಗೆ ನನಗೆ ಸಂಕೋಚವಾಗುತ್ತದೆ. ಇಂದು ನಾಯಕ "ಪ್ರಭು" ಎಂದಾಗ ಸಂಕಟವಾಯಿತು ಏಕೆ?. ಅನುಭವಿ ಹಿರಿಯರು ಹಾಗೆ ಕರೆಯಬಾರದಿತ್ತು ಅನಿಸಿದ್ದೇಕೆ? ಏನು ಅರಿಯದ, ತಿಳಿಯದ ನನ್ನಂತ ಕಿರಿಯನಿಗೆ ಸಿದ್ದಜ್ಞ`ನಂತಹ ಹಿರಿಯ ನಮಿಸಿದ್ದು ಯಾವ ನ್ಯಾಯ?. ನನ್ನ ಹೆಂಡತಿ, ಅನುಭವಿ ಗೆಳೆಯರು ಶರಣು ಶರಣೆಂದು ಇಂದು ನಮಿಸಿದ್ದೇಕೆ? ತಲೆ ತುಂಬ ಉತ್ತರಗಳಿಲ್ಲದ ಪ್ರಶ್ನೆಗಳು.

ನಾನು ಶರಣನಲ್ಲ ನಾನು ಸಾಮಾನ್ಯರಲ್ಲಿ ಸಾಮಾನ್ಯ ಎಂದು ಚೀರಿ ಹೇಳಬೇಕು ಎನಿಸಿತು. ಜೊತೆಗೆ ಅವರ ಗೌರವಕ್ಕೆ ಚ್ಯುತಿ ಬರದಂತೆ ನಡೆಯಬೇಕು ಎನಿಸಿತು. ಯಾವುದೇ ಮರವಾಗುವದಕ್ಕಿಂತ ಮೊದಲು ಸಸಿಯಾಗಿತ್ತಲ್ಲವೇ?. ಆ ಸಸಿಗೆ ಗೊಬ್ಬರ ನೀರು ಹಾಕಿ ಬೆಳೆಸಿದವರ ಪರಿಶ್ರಮ ಅದರ ಬೆಳವಣಿಗೆಗೆ ಕಾರಣವಾಯಿತಲ್ಲವೆ?. ತಾನು ದೊಡ್ಡ ಮರವಾಗಬಲ್ಲೆ ಎನ್ನುವದು ಸಸಿಗೆ ಗೊತ್ತಿತ್ತಾ? ಏನೇನೋ ಒಂದಕ್ಕೊಂದು ಸಂಬಂಧವಿಲ್ಲದ ಯೋಚನೆಗಳು. ಕಲ್ಲು ಕಲ್ಲಿಗೆ ತಾಗುವಾಗ ಆಗುವ ಒಂದು ಕಿಡಿ ಸುಡುವ ಬೆಂಕಿಯಾಗಬಲ್ಲದು. ಅಂತೂ ಅಣ್ಣ ಬಸವಣ್ಣ ಜ್ಞಾನದ ಕಿಡಿಹಾಕಿದ್ದಾಯಿತು ಇನ್ನು ನನ್ನ ಕೈಯಲ್ಲೇನಿದೆ. ಆದರೆ ಆ ಜ್ಞಾನ ಪಡೆಯುವ ಸಾಧನ ಯಾವುದು?. ಉತ್ತರ ಒಮ್ಮೆಲೆ ಹೊಳೆಯಿತು

"ವಚನಗಳು".

ಏಕೊ ಇಂದು ಮುಂಜಾನೆ ಬೊಂತಾದೇವಿಯವರು ಹೇಳಿದ ವಚನ ನೆನಪಾಯಿತು

**ನೀನೊಲಿದಡೆ ಕೊರಡು ಕೊನರುವುದಯ್ಯಾ,**

**ನೀನೊಲಿದಡೆ ಬರಡು ಹಯನಹುದಯ್ಯಾ,**

**ನೀನೊಲಿದಡೆ ವಿಷವೆಲ್ಲ ಅಮತವಹುದಯ್ಯಾ,**

**ನೀನೊಲಿದಡೆ ಸಕಲ ಪಡಿಪದಾರ್ಥ**

**ಇದಿರಲ್ಲಿರ್ಪುವು ಕೂಡಲಸಂಗಮದೇವಾ. / 836**—ಅಣ್ಣ ಬಸವಣ್ಣ

ಮೊದಲಬಾರಿಗೆ "ಎಲ್ಲಕ್ಕೂ ಕೂಡಲಸಂಗಮದೇವನ ಒಲುಮೆ ಕಾರಣ" ಎನ್ನುವ ಉತ್ತರ ಸಿಕ್ಕಿತು.
"ಯಾರೀ ಕೂಡಲಸಂಗಮದೇವ? ಹೇಗಿದ್ದಾನೆ? ಎಲ್ಲಿದ್ದಾನೆ?" ಮತ್ತೆ ಪ್ರಶ್ನೆಗಳು ಹುಟ್ಟಿದವು ಮನದಲ್ಲಿ.
ಅಂತೂ ಗಾಣ ನಿಲ್ಲುವ ಲಕ್ಷಣ ಕಾಣಿಸುತ್ತಿಲ್ಲ.
ಶರಣ ಗುರುವ, ಶರಣ ಗುರುವ ಎನ್ನುವ ಮಾತು ಕೇಳಿಸಿತು. ಎದ್ದು ಹೊರಬಂದೆ ಪಂಜಿನ ಬೆಳಕಿನಲ್ಲಿ ಕಂಡವರು ಸಿದ್ದಜ್ಜ.
ಅಜ್ಜ ಏನಾಯಿತು? ಎಂದೆ. ಮೋನಣ್ಣ ಮತ್ತು ಶ್ರೀಶೈಲಪ್ಪಅವರನ್ನೂ ಕರೆಯಿರಿ ಈಗಲೇ ಮಾತನಾಡಬೇಕು.
ಆಗಲೇ ನಮ್ಮ ದನಿ ಕೇಳಿ ಎಲ್ಲರೂ ಎದ್ದು ಬಂದಿದ್ದರು.
ಅವರು ಅಜ್ಜಾ ಏನಾಯಿತು?. ಎಲ್ಲರೂ ಅಲ್ಲಿ ಕುಳಿತು ಅಜ್ಜನಿಗೆ ನೀರು ಕುಡಿಸಿ ಏನಾಯಿತು ತಿಳಿಸಿ ಎಂದೆವು.
ಹೆಣ್ಣುಮಕ್ಕಳು ಬಂದು ಏನಾಯಿತು ಅಜ್ಜ? ಎಂದರು ಗಾಬರಿಯಲ್ಲಿ. ಅಜ್ಜ ತುಂಬ ಸಂತೋಷದಲ್ಲಿದ್ದ
**ಸಿದ್ದಜ್ಜ:** ನನಗೆ ಉತ್ತರ ಸಿಕ್ಕಿತು. ನಿದ್ದೆ ಕೆಡಿಸಿದ್ದಕ್ಕೆ ಕ್ಷಮೆ ಇರಲಿ. ಕೆಲವು ವಿಷಯ ತಿಳಿಸುವೆ. ನಿಮ್ಮ ಸಲಹೆ ನನಗೆ ಬೇಕು. ಅದು ನಮ್ಮನ್ನು ಬಿಟ್ಟು ಯಾರಿಗೂ ಗೊತ್ತಾಗಬಾರದು.
**ಮೊನಣ್ಣ:** ಸರಿ ಅಜ್ಜ. ವಿಷಯ ವಿವರವಾಗಿ ತಿಳಿಸಿ.
**ಸಿದ್ದಜ್ಜ:** ನಾನು ಐವತ್ತು ವರ್ಷ ಕಾಲ ಕಳೆದದ್ದು ಬದಾಮಿಯಲ್ಲಿ. ಅಲ್ಲಿಯ ಗವಿಗಳ ರಕ್ಷಣೆ ಮಾಡುವ ಕೆಲಸ ನನ್ನದಾಗಿತ್ತು. ಅವುಗಳು ಚಾಲುಕ್ಯ ಅರಸರು ಐದಾರು ನೂರು ವರ್ಷಗಳ ಹಿಂದೆ ನಿರ್ಮಿಸಿದ ಗವಿಗಳು. ಅತ್ಯಮೂಲ್ಯ ಕಲಾಕೃತಿಗಳು ಮತ್ತು ರಹಸ್ಯಗಳನ್ನು ಒಳಗೊಂಡಿರುವ ಅಲ್ಲಿಯ ಕಾಡು, ಬೆಟ್ಟ ಗುಹೆಗಳು ನನಗೆ ಚಿರಪರಿಚಿತ. ಅಲ್ಲಿಯ ಸಾಂಕೇತಿಕ ಭಾಷೆಯ ಅರಿವೂ ಅಲ್ಪ ಸ್ವಲ್ಪವಿದೆ.
ಆಗಿನ ಕಾಲದ ಶಿಲ್ಪ ಕಲಾಶಾಲೆ ಪಟ್ಟದಕಲ್ಲು ಆಗಿತ್ತು. ಅಲ್ಲಿ ದೇವಾಲಯಗಳ ಮೊದಲ ಮೂಲಮಾದರಿ ರಚಿಸಿ ಗುರುಗಳು, ರಾಜರ ಸಮ್ಮತಿ ಪಡೆದ ಮೇಲೆಯೇ ಮಂದಿರಗಳ ನಿರ್ಮಾಣ ಮಾಡುತ್ತಿದ್ದರು.
ನಾನು ಬದಾಮಿಯ ಗವಿಗಳನ್ನು ಅಲ್ಲಿಯ ಕಲಾತ್ಮಕ ಶಿಲ್ಪಗಳನ್ನು ನೋಡಿದಾಗ ಇದನ್ನು ರಚಿಸುವದಕ್ಕಿಂತ ಮೊದಲು ಎಲ್ಲಿಯಾದರೂ ಬೆಟ್ಟದಲ್ಲಿ ಇದರ ಮೊದಲ ಮೂಲಮಾದರಿ ರಚಿಸಿ ಕಲಾಕಾರರಿಗೆ ಪೂರ್ವ ತರಬೇತಿ ಕೊಟ್ಟಿರಬೇಕು ಎನಿಸಿಸುತ್ತಿತ್ತು. ಸಾಕಸ್ಟು ಬೆಟ್ಟ ಗುಡ್ಡಗಾಡು ಅಡ್ಡಾಡಿ ಹುಡುಕಿದೆ ಆದರೆ ಎಲ್ಲಿಯೂ ಅದರ ಸುಳಿವು ಸಿಕ್ಕಿರಲಿಲ್ಲ. ಆದರೆ ಇಂದು ಈ ಗುಹೆ ನೋಡಿದಾಗ ಈ ಗುಡ್ಡದಲ್ಲಿ ಬದಾಮಿ ಗುಹೆಗಳ ಮೊದಲ ಮೂಲಮಾದರಿ ರಚಿಸಿ ಕೆಲಸಗಾರರಿಗೆ ತರಬೇತಿ ಕೊಟ್ಟು ಆಮೇಲೆ ಬದಾಮಿಯ ಗವಿಗಳನ್ನು ರಚಿಸಿರಬೇಕು ಎನಿಸುತ್ತದೆ.

ಬದಾಮಿ ಗುಹೆಗಳ ಪ್ರಾವಿಣ್ಯತೆ ಇಲ್ಲಿ ಇರದಿದ್ದರೂ ಇಲ್ಲಿಯಂತೆಯೇ ಬದಾಮಿಯ ಗುಹೆಗಳಿರಬೇಕು.

**ಶೀಶ್ಯೆಲಪ್ಪ:** ನಿಮ್ಮ ವಿಚಾರ ಸರಿಯಾಗಿದೆ ಅನಿಸುತ್ತದೆ. ಈ ಪ್ರದೇಶವು ಚಾಲುಕ್ಯರ ಆಡಳಿತಕ್ಕೊಳಪಟ್ಟಿತ್ತು.

**ಸಿದ್ದಜ್ಜ:** ಇಂದು ಕೆರೆಯ ದಂಡೆಯಲ್ಲಿಯ ಗಿಡಗಳು ಮತ್ತು ಜೇನುಗಳು ಬದಾಮಿಯಲ್ಲಿಯ ಕೆರೆ ಮತ್ತು ಅಲ್ಲಿಯ ಮರ ಮತ್ತು ಜೇನುಗಳು ಒಂದೇ ವಿಧದ ಅಪರೂಪವಾಗಿರುವ ಪ್ರಭೇದದ್ದಾಗಿವೆ. ಇನ್ನು ಗುಹೆ ಮರೆಮಾಡಲು ಹಾಕಿರುವ ಇಲ್ಲಿರುವ ಬಳ್ಳಿಯನ್ನು ನಾನು ಬದಾಮಿ ಗುಹೆಗಳ ಬಳಿ ಬಿಟ್ಟು ಬೇರೆಲ್ಲೂ ನೋಡಿಲ್ಲ.

**ಮೋನಣ್ಣ;** ಜೇನುಗಳು ಪ್ರಭಲ ಸೈನಿಕರು. ಜೇನುಗಳು ಸಾವಿರಾರು ಸೈನಿಕರ ನಾಶಮಾಡಬಲ್ಲವು. ನಾನು ಬಾಣದ ತುದಿಗೆ ಜೇನುಹುಟ್ಟು ಕಟ್ಟಿ ಬಿಟ್ಟು ಸೈನಿಕರ ನಾಶ ಮಾಡಿದ ಕಥೆಗಳನ್ನು ಓದಿದ್ದೇನೆ.

**ನನ್ನಾಕೆ:** ಅಂದರೆ ಇದು ಚಾಲುಕ್ಯರ ಅಸ್ತ್ರ ನಮ್ಮ ಮನೆಯವರ ಮೇಲೆ ಪ್ರಯೋಗವಾಗಿತ್ತು.

**ಶಂಕರಕ್ಕ:** ನಿಮ್ಮವರು ವೀರರು ಗೆದ್ದು ಬಂದಿದ್ದಾರೆ.

**ನನ್ನಾಕೆ:** ನನ್ನವರ ವೀರತನವೇನು ಬಂತು. ಅವರು ಸೊಳ್ಳೆಗೆ ಹೆದರುತ್ತಾರೆ. ಎಲ್ಲ ಅಣ್ಣ ಬಸವಣ್ಣನವರ ಕೃಪೆ.

**ಸಿದ್ದಜ್ಜ:** ನೀವು ಗೊಂಬೆಗಳ ತಯಾರಕರು. ಗೊಂಬೆಗಳ ರಚನಾ ಶಾಸ್ತ್ರ ಬಲ್ಲವರು. ಇಲ್ಲಿರುವ ಬೊಂಬೆಗಳ ರಚನೆ ನೋಡಿ ಇಲ್ಲಿರುವ ವಿಷೇಷತೆ ವಿವರಿಸಬಲ್ಲೆಯಾ.?.

**ಮೊನಣ್ಣ;** ಪ್ರಯತ್ನಿಸುವೆ ಅಜ್ಜಾ. ನಾವು ಇಲ್ಲಿರುವ ಶಿಲ್ಪ ಕಲಾಕೃತಿಯನ್ನು ಇನ್ನೊಮ್ಮೆ ಸೂಕ್ಷ್ಮವಾಗಿ ನೋಡೋಣ.

ಪಂಜಿನ ಬೆಳಕಿನಲ್ಲಿ ಅಲ್ಲಿರುವ ಶಿಲ್ಪ ಕಲಾಕೃತಿಯನ್ನು ವಿವರವಾಗಿ ಇನ್ನೊಮ್ಮೆ ನೋಡಿದೆವು.

> **ಪೃಥ್ವಿಯಲ್ಲಿದ್ದು ಪೃಥ್ವಿಯನರಿತು, ಅಪ್ಪುವಿನಲ್ಲಿದ್ದು ಅಪ್ಪುವನರಿತು, ತೇಜದಲ್ಲಿದ್ದು ತೇಜವನರಿತು,**
> **ವಾಯುವಿನಿಲ್ಲಿದ್ದು ವಾಯುವನರಿತು, ಆಕಾಶದಲ್ಲಿದ್ದು ಆಕಾಶವನರಿತು, ತನ್ನಲ್ಲಿದ್ದು ತನ್ನನರಿತು,**
> **ಕಣ್ಣಿನೊಳಗಣ ಕಣ್ಣ ಕಂಡು ಕಲ್ಲಿನೊಳಗಡಗಿ, ಅಲೇಖನಾದ ಶೂನ್ಯನ ಭೇದವನರಿತು, ಕಾಯವನರಿ / 42**
>
> -- ವಚನಭಂಡಾರಿ ಶಾಂತರಸ

ಸಿದ್ದಜ್ಜ ಅಲ್ಲಿ ಕಣ್ಣುಮುಚ್ಚಿ ಪದ್ಮಾಸನದಲ್ಲಿ ಕುಳಿತ.

**ಶ್ರೀಶೈಲಪ್ಪ:** ಗವಿಯ ಗೋಡೆಯಲ್ಲಿಯ ಶಿವನ ವಿಗ್ರಹ ತುಂಬಾ ಸುಂದರವಾಗಿದೆ. ಆದರೆ ಆದಿಶೇಷನ ಮೇಲೆ ಶಿವ ಕುಳಿತ ವಿಗ್ರಹ ನಾನೆಲ್ಲೂ ನೋಡಿಲ್ಲ.
**ಮೋನಣ್ಣ;** ಅಜ್ಜ ಇಲ್ಲಿಯ ಶಿವನಿಗೆ ಕೊರಳಲ್ಲಿ ಹಾವಿಲ್ಲ ಮತ್ತು ಅವನು ಆಸೀನನಾದ ಹಾವು ಆದಿಶೇಷನ ಹಾಗಿಲ್ಲ. ಆದಿಷೇಶನನ್ನು ರಚಿಸುವ ಕ್ರಮವೇ ಬೇರೆ.
**ಶಂಕರಕ್ಕ:** ಹೌದು ಆದಿಶೇಷನ ಮೈಮೇಲೆ ಇರುವ ಪಟ್ಟಿಗಳಲ್ಲಿ ಬಿಳಿಯ ಮೈಮೇಲೆ ಕರಿಯ ರೇಖೆಗಳಿರುತ್ತವೆ.
**ಮೊನಣ್ಣ:** ಇಲ್ಲಿ ಕರಿ ಮೈಮೇಲೆ ಬಿಳಿಯ ರೇಖೆಗಳಿವೆ.
**ಸಿದ್ದಜ್ಜ:** ನನಗರ್ಥವಾಯಿತು ಇಲ್ಲಿ ಪಾವಟಿಗೆಗಳಿವೆ ಎಂದು ಸೂಚಿಸಿದ್ದಾರೆ.
**ಶಂಕರಕ್ಕ:** ಸಾಮಾನ್ಯವಾಗಿ ಆದಿಶೇಷನಿಗೆ ಐದು, ಒಂಬತ್ತು ಹೆಡೆಗಳು ಮತ್ತು ಮಧ್ಯದಲ್ಲಿರುವದನ್ನು ಬಿಟ್ಟು ಉಳಿದ ಎಲ್ಲ ಹೆಡೆಗಳು ಎಲ್ಲದರಲ್ಲಿ ಸರ್ವ ಸಮಾನವಾಗಿರುತ್ತವೆ. ಅಜ್ಜ ಎರಡು ಮೂರು ಕಡೆ ಇದೀಗ ಹೆಡೆಗಳು ಮೊಳಕೆ ಒಡೆದಂತೆ ಕಾಣುತ್ತವೆ.
**ಮೊನಣ್ಣ:** ಇಲ್ಲಿ ಹೆಡೆಗಳು ಒಂದೇ ಸಮನಾಗಿಲ್ಲ ಮತ್ತು ಅವುಗಳೆಲ್ಲಾ ಬಾಯಿ ತೆರೆದಿವೆ ಆ ಬಾಯಿಗಳ ಆಕಾರ ಬೇರೆಬೇರೆ ಆಗಿವೆ ಕಟೆಯುವಾಗ ಕಲ್ಲು ಪೆಣಕೆ ಹಾರಿದ ಹಾಗೆ ಒಂದೆರಡು ಹೆಡೆಗಳಲ್ಲಿ ಕಾಣುತ್ತಿವೆ. ಶಿವನ ಜಡೆಯು ಮಧ್ಯದ ಐದನೆಯ ಹೇಡೆಯ ಮೇಲಿದೆ.
**ಸಿದ್ದಜ್ಜ :** ಈ ಪಾವಟಿಗೆಗಳ ಕೊನೆಗೆ ಹನ್ನೊಂದು ವಿವಿಧ ಆಕಾರದ ಗವಿಗಳಿವೆ ಮತ್ತು ನಿರ್ಮಾಣದ ಹಂತದಲ್ಲಿರುವ ಕೆಲವು ಗುಹೆಗಳಿವೆ. ಅವುಗಳೆಲ್ಲಾ ಆ ಕಡೆ ಬಾಯಿ ತೆರೆದಿವೆ.. ಮಧ್ಯದ ಗವಿಯಲ್ಲಿ ಶಿವನ ದೇವಾಲಯವಿದೆ. ಈ ಗುಹೆಗಳು ನುಣುಪಾಗಿಲ್ಲ.
**ಶ್ರೀಶೈಲಪ್ಪ:** ಅಜ್ಜ ನಿಮ್ಮ ವಿವರಣೆ ತುಂಬಾ ಸರಿಯಾಗಿದೆ.
**ಮೋನಣ್ಣ;** ಅಜ್ಜ ಇಲ್ಲಿ ನೊಡು ಶಿವನ ಜಟೆಯಿಂದ ಗಂಗೆ ಹುಟ್ಟುವದಿಲ್ಲ ಬದಲಾಗಿ ಮಧ್ಯದ ಹೆಡೆಯ ಮೇಲ್ಭಾಗದಿಂದ ಧುಮ್ಮುಕ್ಕುತ್ತಾಳೆ.
**ಸಿದ್ದಜ್ಜ:** ತುಂಬಾ ಮಹತ್ವದ ವಿವರ. ಐದನೆಯ ಗುಹೆಯ ಮೆಲ್ಭಾಗದಲ್ಲಿ ನೀರಿನ ಜರಿ ಮತ್ತು ಕೊಳವಿದೆ ಮತ್ತು ಅದರಿಂದ ನೀರು ಕೆಳಗೆ ಹರಿದು ಬರುತ್ತದೆ.
**ಗುರುವ:** ಹಾಗಾದರೆ ಆ ಪಾವಟಣೆಗಳು ಎಲ್ಲಿಂದ ಪ್ರಾರಂಭವಾಗುತ್ತವೆ.
**ಶ್ರಿಶೈಲಪ್ಪ:** ಹಾವಿನ ಬಾಲದ ತುದಿ ಗಮನಿಸಿ ಅದು ಬಾಣದಾಕಾರದಲ್ಲಿದೆ.
**ಮೋನಣ್ಣ;** ನೋಡಿ ಬಾಲದ ತುದಿಯ ಹತ್ತಿರ ಮೋಡದಲ್ಲಿ ಮುಳುಗಿದ ಸೂರ್ಯ ಕಾಣುತ್ತಿದ್ದಾನೆ. ಅಲ್ಲಿ ಶಿವನ ಜಡೆಯಿಂದ ನೀರು ಬಂದು ಮೋಡದ ಮೇಲೆ ಬೀಳುತ್ತದೆ.
**ಸಿದ್ದಜ್ಜ:** ಬಾಣ ತೋರಿಸುವ ದಿಕ್ಕಿನಲ್ಲಿ ಒಂದು ದೊಡ್ಡ ಗವಿ ಇದೆ. ಮತ್ತು ಪಶ್ಚಿಮ ದಿಕ್ಕಿನಲ್ಲಿ ಮೆಟ್ಟಲು ಪ್ರಾರಂಭವಾಗುತ್ತವೆ ಎಂದಂಗಾಯಿತು.
**ಗುರುವ**: ಆ ದಿಕ್ಕಿನಲ್ಲಿ ಗೋಡೆಯಿದೆ.

**ಮೊನಣ್ಣ;** ಅಜ್ಜ ಇಲ್ಲೊಂದು ವಿಚಿತ್ರವಿದೆ ಐದನೆಯ ಹೆಡೆಯ ಕೆಳಭಾಗದಲ್ಲಿ ಒಂದು ಆಮೆ ಚಿತ್ರವಿದೆ, ಆಮೆಯ ಕಾಲುಗಳು ಬೇರೆ ಬೇರೆ ಗಾತ್ರ ಮತ್ತು ಉದ್ದವಾಗಿವೆ. ಒಂದು ಕಾಲು ಆದಿಷೇಶನ ಬಾಲದ ಕಡೆಗಿದೆ.
**ಸಿದ್ದಜ್ಜ:** ಮಂದಿರದ ಕೆಳಗೆ ಒಂದು ವೃತ್ತಕಾರದ ಗವಿ ಇದ್ದು ಅದರಿಂದ ನಾಲ್ಕು ಸುರಂಗ ಮಾರ್ಗಗಳು ವಿವಿಧ ದೂರದ ವರೆಗೆ ಸಾಗುತ್ತವೆ.
ಅದರಲ್ಲಿ ಒಂದು ಮಾರ್ಗ ಇಲ್ಲಿಂದ ಪ್ರಾರಂಭವಾಗುತ್ತದೆ.
**ಶ್ರೀಶೈಲಪ್ಪ:** ಆಮೆಯ ಪಾದಗಳಲ್ಲಿ ವಿವಿಧ ಚಿತ್ರಗಳಿವೆ.
**ಸಿದ್ದಜ್ಜ:** ಅವು ನೆಲಮಾರ್ಗದ ಕೊನೆಯಲ್ಲಿರುವ ಪ್ರದೇಶದ ವಿವರ ಕೊಡುತ್ತವೆ. ಇಲ್ಲಿಂದ ಹೊರಹೋಗುವ ಮಾರ್ಗ ಹುಡುಕಬೇಕು. ಅಲ್ಲಲ್ಲಿ ಅನೇಕ ವಿವರಗಳು ಸಿಗುತ್ತವೆ.
**ಮೋನಣ್ಣ:** ಮತ್ತೆ ಹೆಚ್ಚಿನ ವಿವರಗಳಾವವು ನನಗೆ ಕಾಣುವದಿಲ್ಲ.
**ಸಿದ್ದಜ್ಜ:** ಸಾಕಷ್ಟು ವಿವರ ಕೊಟ್ಟಿದ್ದೀಯ. ಅದರೆ ಪೂರ್ವದ ಕಡೆಯ ಬಾಗಿಲು ಎಲ್ಲಿದೆ ಮತ್ತು ಅದನ್ನು ತೆಗೆಯುವ ಬಗೆ ತಿಳಿದುಕೊಳ್ಳಬೇಕು.
**ಶಂಕರಕ್ಕ:** ಅದರ ವಿವರ ಇಲ್ಲಿರಲಿಕ್ಕಿಲ್ಲ. ಬೇರೆ ಕಡೆ ಹುಡುಕೋಣ ನಡೀರಿ.
ಎಲ್ಲರೂ ಮತ್ತೆ ನಡುವಿನ ಮಂಟಪಕ್ಕ ಬಂದೆವು. ಅಲ್ಲಿ ನಾಲ್ಕು ಕಂಬಗಳು ಮತ್ತು ಆ ಕಂಬದ ಮೇಲೆ ಒಂದೇ ತೆರನಾದ ಒಬ್ಬೊಬ್ಬ ಸುಂದರಿಯ ಶಿಲ್ಪ ಅವರ ಎಡ ಕೈಯಲ್ಲಿ ಪಣತಿ ಇದ್ದರೆ ಬಲಕೈಯಲ್ಲಿ ಕಮಲದ ಹೂ.
**ಜಯಶ್ರೀ:** ಆ ಹೂಗಳು ಎಷ್ಟು ಸುಂದರ ಅದಾವ ನೋಡ್ರಿ.
**ಶ್ರಿಶೈಲಪ್ಪ:** ಅಂತೂ ಮೌನಗೌರಿ ಮಾತನಾಡಿಬಿಟ್ಟಳು. ಈ ಹೂವು ಈ ಸುಂದರಿಯ ಕೈಯಲ್ಲಿದ್ದರೆ ಹೇಗೆ ಕಾಣಿಸುತ್ತಾಳೆ?
ಶ್ರಿಶೈಲಪ್ಪ ಆ ಹೂ ಕಿತ್ತಿಕೊಡಬೇಕೆಂದು ಕೈ ಹಾಕಿದ ಹೂ ಬಂದೇ ಬಿಟ್ಟಿತು ಅವ ಒಂದು ಕ್ಷಣ ಗಾಬರಿಯಾದ.
ಆದರೆ ಅಲ್ಲೊಂದು ವಿಲಕ್ಷಣ ನಡೆಯಿತು ಆ ಶಿಲ್ಪದ ಇನ್ನೊಂದು ಕೈಯಲ್ಲಿಯ ಪಣತಿ ಒಳಹೋಯಿತು. ಎಲ್ಲರೂ ಬೆರಗಾಗಿ ಏನಾಯಿತು ಎಂದು ನೋಡುತ್ತಿದ್ದೆವು.
**ಸಿದ್ದಜ್ಜ:** ಉಳಿದ ಮೂರ್ತಿಯಲ್ಲಿಯ ಹೂ ತೆಗೆದು ಪಣತಿ ಹಚ್ಚಿದರೆ ಏನಾಗುತ್ತದೆ ನೋಡುವಾ.
ಹೆಣ್ಣುಮಕ್ಕಳು ಪಣತಿಯಲ್ಲಿ ಎಣ್ಣೆಬತ್ತಿ ಹಾಕಿ ದೀಪ ಬೆಳಗಿಸಿದರು.
**ಶ್ರಿಶೈಲಪ್ಪ:** ಸ್ವಲ್ಪ ಸಮಯದವರೆಗೆ ಪಂಜನ್ನು ಆರಿಸಿಬಿಡತೀನಿ ಎಂದು ಆರಿಸಿಬಿಟ್ಟ.
ಅಲ್ಲಿ ಪ್ರಶಾಂತವಾದ ಬೆಳಕಿನಲ್ಲಿ ಅ ಸುಂದರಿಯರ ಮುಖ ಕಾಂತಿ ಹೆಚ್ಚಾಯಿತು.
**ಮೋನಣ್ಣ:** ಆ ಕಣ್ಣುಗಳಿಂದ ಬೆಳಕಿನ ಕಿರಣಗಳು ಆ ಕೋಣೆಗೆ ಹೋಗುತ್ತಿವೆ ಅಜ್ಜ.

ಅಜ್ಜ ಕಣ್ಣುತೆರೆದು ಕುಳಿತಿದ್ದ. ನಾವು ಆ ಕೋಣೆಗೆ ಹೋಗಿ ನೋಡಿದಾಗ ಎಡಕಣ್ಣಿನಿಂದ ಬಂದ ಕಿರಣಗಳು ಒಂದು ಬಿಂದುವಿನಲ್ಲಿ ಮತ್ತು ಬಲಗಣ್ಣಿನಿಂದ ಬಂದ ಕಿರಣಗಳು ಇನ್ನೊಂದು ಕಡೆ ಏಕತ್ರಗೊಂಡಿದ್ದವು.

**ಸಿದ್ದಜ್ಜ:** ಆ ಬಿಂದುಗಳನ್ನು ಗುರುತು ಮಾಡಬೇಕು.

ಮೋನಣ್ಣಒಳಗೆ ಹೋಗಿ ಬಣ್ಣದ ಡಬ್ಬಿ ತಂದು ಕುಂಚದಿಂದ ಗುರುತು ಮಾಡಿದ. ಅಲ್ಲಿ ಯಾವ ಗುರುತೂ ಇಲ್ಲ.

**ಜಯಶ್ರೀ:** ಆ ಗುರುತಿರುವ ಕಲ್ಲು ನೀರು ಹಾಕಿ ತೋಳೆಯೋಣ ಏನಾದರೂ ಗುರುತು ಕಾಣಬಹುದು.

ನನ್ನಾಕೆ ಸ್ವಲ್ಪ ನೀರು ಚಿಮಕಿಸಿ ಬಟ್ಟೆಯಿಂದ ಒರೆಸಿದಳು. ನಮಗೇನು ಬದಲಾವಣೆ ಕಾಣಿಸಲಿಲ್ಲ.

ಮೋನಣ್ಣ ಮತ್ತು ಶಂಕರಮ್ಮ ಅಲ್ಲಿ ಕಟ್ಟಿಗೆ ಇದೆ. ಅವರ ಸೂಕ್ಷ್ಮ ದೃಷ್ಟಿಗೆ ಅದು ಗೋಚರವಾಗಿತ್ತು. ಮೋನಣ್ಣ ಉಳಿ ತಂದು ಅಲ್ಲಿಯ ಕಟ್ಟಿಗೆಯನ್ನು ತುಂಡು ತುಂಡು ಮಾಡಿ ಹೊರತೆಗೆದ ಅಲ್ಲಿ ಒಂದು ಕುಳಿ ಹೊರತಾಗಿ ಏನೂ ಇರಲಿಲ್ಲ ನಾಲ್ಕು ಸಣ್ಣ ರಂಧ್ರಗಳು ಗೋಚರವಾದವು.

**ಜಯಶ್ರೀ:** ನನ್ನ ಕೈಯಲ್ಲಿರುವ ಹೂಗಳ ಕೊನೆ ಚೂಪಾಗಿದೆ ಅಲ್ಲಿ ಇವನ್ನು ಇಡಲು ಆಗುತ್ತದೆಯೇ ನೋಡಿ.

ಸಿದ್ದಜ್ಜ ನಮಗೆಲ್ಲ ದೂರ ಸರಿಯಲು ಹೇಳಿ ಅಲ್ಲಿರುವ ರಂದ್ರಕ್ಕೆ ಎಡಗೈಯಲ್ಲಿದ್ದ ನಾಲ್ಕು ಹೂಗಳನ್ನು ಸಿಕ್ಕಿಸಿದ. ಆಗ ಅಲ್ಲಿ ಗಾಲಿಗಳು ತಿರುಗಿದ ಶಬ್ದವಾಗಿ ಗೋಡೆಯಲ್ಲಿ ಒಂದು ಕಲ್ಲು ಮಗ್ಗಲಿಗೆ ಸರಿದು ಒಂದು ಬಾಗಿಲು ಗೋಚರಿಸಿತು ಮತ್ತು ಆ ಬಾಗಿಲಿನಿಂದ ತಂಗಾಳಿ ಬೀಸಿ ಬಂತು,.

ನಾವೆಲ್ಲ ಹರ್ಷದಿಂದ ಕುಣಿದಾಡುವಷ್ಟೇ ಬಾಕಿ ಇತ್ತು. ಈ ಹೂ ಹೊರಗೆ ತೆಗೆದರೆ ಬಾಗಿಲು ಮುಚ್ಚುತ್ತೆ. ಇಲ್ಲಿ ಮರೆಮಾಡಲು ಏನಾದರೂ ತಂದು ಇಡಿ. ಮೋನಣ್ಣನ ಗೊಂಬೆಯ ಡಬ್ಬಿ ತಂದು ಕುಳಿಯ ಮೇಲಿಟ್ಟ. ಸಿದ್ದಾಜ್ಜ ನಾ ಆ ಬಾಗಿಲಿನಿಂದ ಒಳಗೆ ಹೊಗಿ ನೋಡುತ್ತೇನೆ ನೀವು ಜಾಗರೂಕರಾಗಿ ಇರಿ ಏಂದು ಹೇಳಿ ಹೋದ. ಸ್ವಲ್ಪ ಹೊತ್ತಿನಮೇಲೆ ಬನ್ನಿ ಬನ್ನಿ ಎಲ್ಲರೂ ಬನ್ನಿ ಎಂದ. ನಾವೆಲ್ಲ ಒಬ್ಬೊಬ್ಬರಾಗಿ ಹೋಗಿ ನೋಡಿದರೆ ಅದೊಂದು ತುಂಬಾ ವಿಶಾಲವಾದ ಕಲ್ಲಿನಲ್ಲಾದ ಸ್ವಾಭಾವಿಕ ಗವಿ, ಅದು ದೊಡ್ಡ ಕೊಟ್ಟಿಗೆಯಂತಿದ್ದು ಅಲ್ಲಿ ದನಗಳಿಗೆ ನೀರು ಕುಡಿಸಲು ದೋಣಿ ಮತ್ತು ಮೇವು ಇಡಲು ಜಾಗವಿತ್ತು.

**ಸಿದ್ದಜ್ಜ:** ಇಲ್ಲಿ ಇನ್ನೊಂದು ಬಾಗಿಲು ತೆರೆದಿದೆ ಅಲ್ಲಿಂದ ನಿಮ್ಮ ಗಾಣ ಕಾಣುತ್ತಿದೆ ಮತ್ತು ಆ ಬಾಗಿಲು ಬಂಡಿ ಒಳತರಬಹುದಾದಷ್ಟು ದೊಡ್ಡದಾಗಿದೆ.

**ಶ್ರಿಶೈಲಪ್ಪ:** ಬೆಳಗಾಗುವದರಲ್ಲಿದೆ ಇವತ್ತು ಇಷ್ಟು ಸಾಕು ಇದು ಎಲ್ಲರಿಗೆ ಗೊತ್ತಾದರೆ ತೊಂದರೆಯಿಲ್ಲ. ನಾವು ಈ ಜಾಗೆಯನ್ನು ಎತ್ತು ಕಟ್ಟಲು ಬಂಡಿ ಬಿಡಲು ಯೊಧರಿಗೆ ಇರಲು ಉಪಯೋಗಿಸಬಹುದು.

**ಜಯಶ್ರೀ:** ನನ್ನ ಕೈಯಲ್ಲಿಯ ಎರಡು ಹೂವೇನು ಮಾಡಲಿ.

**ಶ್ರಿಶೈಲಪ್ಪ:** ತಲೆಯಲ್ಲಿ ಮುಡಿದುಕೊಂಡು ಬಿಡು.
**ಸಿದ್ದಜ್ಜ:** ಅವು ಮೊದಲಿದ್ದ ಸ್ಥಳದಲ್ಲಿ ಇಟ್ಟು ಬಿಡಿ ತಾಯಿ.
**ಗುರುವ:** ನೀರಿನ ಡೋಣಿ ಇದೆ ನೀರೆಲ್ಲಿಂದ ತಂದು ತುಂಬಿಸುವದು.
**ಸಿದ್ದಜ್ಜ:** ದೋಣಿ ಮಾಡಿದವರು, ನೀರು ಬರುವ ವ್ಯವಸ್ಥೆ ಮಾಡದೇ ಇರುತ್ತಾರೆಯೇ?.
"ಪ್ರಭು", ಎನ್ನುವ ದನಿ ಕೇಳಿ ಹೊರ ಬಂದೆವು.
ಅಲ್ಲಿ ವೀರಭದ್ರಪ್ಪ ಮತ್ತು ನಾಯಕ ಅನೇಕ ಸಂಗಡಿಗರ ಜೊತೆ ನಿಂತಿದ್ದರು.
**ವೀರಭದ್ರಪ್ಪ:** ಕಲ್ಯಾಣಕ್ಕೆ ಹೋಗುವ ಬಂಡಿಗಳೆಲ್ಲ ತಯಾರಿವೆ. ಒಮ್ಮೆ ಪರಿಶೀಲಿಸಿ ಒಪ್ಪಿಗೆ ಕೊಡಿ.
**ಗುರುವ:** ಅದೆಲ್ಲ ಬೇಡ ಹೋಗಿಬನ್ನಿ. ದಾಸೋಹಕ್ಕೆ ಬೇಕಾದ ಎಲ್ಲಾ ಸಾಮಗ್ರಿ ಮತ್ತು ಬರುವಾಗ ಬೊಂತಾದೇವಿಯರು ಕಲಿಸಲು ಬೇಕಾದ ಎಲ್ಲ ಸಾಮಾನು ತೆಗೆದುಕೊಂಡು ಬನ್ನಿ.
**ನಾಯಕ:** ಇನ್ನಷ್ಟು ಬಿಲ್ಲುಗಾರರು ಬೇಕಾ.
**ಗುರುವ:** ಈಗಿರುವ ನನ್ನ ತಮ್ಮಂದಿರ ಜೊತೆ ಇನ್ನೂ ಕೆಲವರನ್ನು ಹೂ ಮತ್ತು ಔಷಧ ವನ ನಿರ್ಮಾಣ ಕೆಲಸಕ್ಕೆ ಹಚ್ಚಿ. ಮುಂದಿನ ಬೆಳದಿಂಗಳೂಟಕ್ಕೆ ಮಹಾರಾಣಿಯವರು ಬರುತ್ತಾರೆ. ನಾವೂ ನಮ್ಮ ಕಾಯಕ ಮುಗಿಸಿ ಅಲ್ಲಿ ಬರ್ತ್ತೇವೆ.
**ನಾಯಕ:** ಕಲ್ಲುಲಿಂಗ ಕಟ್ಟೆಯ ಮುಂದಿರುವ ಬಯಲಿನಲ್ಲಿ ವನ ನಿರ್ಮಾಣ ಮಾಡಿದರೆ ಹೇಗೇ?
**ಗುರುವ:** ತುಂಬಾ ಚನ್ನಾಗಿರುವ ಆಲೋಚನೆ. ನಮ್ಮ ಕಾಯಕ ಮುಗಿದ ಮೇಲೆ ನಾವೂ ಬಂದು ಅವರ ಜೊತೆ ಕೆಲಸ ಮಾಡುತ್ತೇವೆ.
**ಶ್ರಿಶೈಲಪ್ಪ:** ನಾನು ಮತ್ತು ಜಯಶ್ರೀ ಪ್ರತಿಮಾಡಿರುವ ವಚನ ತಲುಪಿಸಿ ಹೊಸ ವಚನ ಕಟ್ಟು ತರುತ್ತೇವೆ.
**ಗುರುವ:** ವೀರಭದ್ರಪ್ಪ ಮತ್ತು ನೀವು ಜೊತೆಗೂಡಿ ಹೂವಿನ ಗಿಡಗಳನ್ನು ಮತ್ತು ಅವುಗಳನ್ನು ಆರೈಕೆ ಮಾಡಬಲ್ಲ ಪರಿಣಿತರನ್ನು ಕರೆತನ್ನಿ.
**ನಾಯಕ:** ಔಷಧ ತಜ್ಞರ ನೆರವಿನಿಂದ ನಾಳೆ ಕಾಡಿನಲ್ಲಿರುವ ಔಷದ ಸಸ್ಯಗಳನ್ನು ತಂದು ಪ್ರತಿಯೊಬ್ಬರು ಗಿಡ ನೆಡುತ್ತಾರೆ ಮತ್ತು ಅವುಗಳನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಾರೆ.
ಎಲ್ಲರೂ ಶರಣೆಂದು ಹೊರಟು ಹೋದರು.

## ಬಪ್ಪುದು ಬಪ್ಪುದಲ್ಲದೆ ಬಾರದ್ದು ಬಪ್ಪುದೆರಿ ಬಪ್ಪುದು ತಪ್ಪದು, ಬಾರದುದು ಬಾರದು

**ಆವ ಪದಾರ್ಥವ ಮೋಹಿಸಿ ಲವಲವಿಸಬೇಡ.**

**ಬಪ್ಪುದು ಬಪ್ಪುದಲ್ಲದೆ ಬಾರದ್ದು ಬಪ್ಪುದೆರಿ ಬಪ್ಪುದು ತಪ್ಪದು, ಬಾರದುದು ಬಾರದು,**

**ಅಹದಹದಾಗದ್ದಾಗದು.**

**ಬಹುದುಃಖಂಗೊಳಲೇಕೆರಿ ಬಪ್ಪುದು ತಪ್ಪದು, ಸಹಜವೆಂತಾಗುವದಲ್ಲದೆ.**

**ವಿಹಿತವ ತಾ ಬರವುತಿಹನು ಪಣೆಯೊಳು ಶಿವನು.**

**ಇಂತಿದು ನಿನ್ನ ಭೋಗವೆಲ್ಲಿದ್ದಡೂ ಬಿಡದೆಂದಾತ**

**ನಮ್ಮಂಬಿಗರ ಚೌಡಯ್ಯ.** / 48— ಅಂಬಿಗರ ಚೌಡಯ್ಯ

ಕಲ್ಯಾಣಕ್ಕೆ ಹೋದವರಿನ್ನೂ ಬರಲಿಲ್ಲ ಅವರ ದಾರಿ ಕಾಯುತ್ತ ನಿನ್ನೆ ಸಿದ್ದಜ್ಜ ಕುಳಿತ ಹಾಗೆ ಕುಳಿತೆ ದೇಹಕ್ಕೆ ಹಿತವೆನಿಸಿತು.

**ಮೋನಣ್ಣ:** ನೀವು ಹಾಕಿದ ಪದ್ಮಾಸನ ತುಂಬಾ ಚನ್ನಾಗಿದೆ. ಬಹಳ ದಿನಗಳ ಯೋಗ ಮಾಡಿದ ಅನುಭವ ನಿಮಗಿದೆ.

**ಗುರುವ:** ಇಲ್ಲ ಮೊನಣ್ಣ ನಿನ್ನೆ ಸಿದ್ದಜ್ಜ ಕುಳಿತ ರೀತಿಯನ್ನು ಅನುಸರಿಸಿದೆ. ಅದಕ್ಕೆ ಪದ್ಮಾಸನ ಅನ್ನುತ್ತಾರೆ ಎನ್ನುವದು ನೀವು ಹೇಳಿದ ಮೇಲೆ ಗೊತ್ತಾಯಿತು.

**ಮೋನಣ್ಣ:** ಸರಿ ನಾನೂ ಪ್ರಯತ್ನಿಸುತ್ತೇನೆ.

ಅದೇ ಆಸನದಲ್ಲಿ ಕುಳಿತು ಕಣ್ಣುಮುಚ್ಚಿದೆ. ಮನದ ತುಂಬ ಬೆಳಕು ಆವರಿಸಿತು. ಆಗ ಮನದಲ್ಲಿ ನಾನು ಗಾಣ ಹೊಡೆಯುವ ಚಿತ್ರ ತೇಲಿ ಬಂತು. ಜೊತೆಗೆ ಗಾಣದಲ್ಲಿದ್ದ ಶೇಂಗಾಕಾಳುಗಳು ಅಯ್ಯೋ ಕಾಪಾಡಿ ಎನ್ನುವ ಕೂಗೂ ಕೇಳಿಸಿತು.

**ಗುರುವ:** ಯಾಕೆ ಏನಾಯಿತು?

**ಶೇಂಗಾ ಕಾಳು**: ಕರುಣೆಯಿಲ್ಲದ ಮಾನವ ನೀನು. ನಮ್ಮನ್ನು ಕಲ್ಲಿನಿಂದ ರುಬ್ಬಹತ್ತಿರುವೆ, ನನಗೆಷ್ಟು ನೋವಾಗುತ್ತದೆ ಗೊತ್ತಾ.

ಮೈ ಚರ್ಮವೆಲ್ಲಾ ಕಿತ್ತುಹೋಗಿದೆ, ಇಲ್ಲಿ ನೋಡು ಚರ್ಮ ಕಿತ್ತು ಹೋದ ಭಾಗದಿಂದ ರಸ ಒಸರುತ್ತಿದೆ. ಮೈಯೆಲ್ಲ ಬಿಗಿಯಾಗಿ ಒಣಗುತ್ತಿದೆ. ಯಾಕೆ ಇಷ್ಟು ಹಿಂಸೆ ಕೊಡುತ್ತಿದ್ದೀರಿ?

**ಗುರುವ:** ನಾನು ನಿನ್ನನ್ನು ಗಾಣದಲ್ಲಿ ಹಾಕದಿದ್ದರೆ ಏನಾಗುತ್ತಿತ್ತು?

**ಶೇಂಗಾ ಕಾಳು**:: ನೆಲದಲ್ಲಿ ಬಿದ್ದು ಹಾಯಾಗಿರುತ್ತಿದ್ದೆ. ಅಲ್ಲಿರುವ ತಂಗಾಳಿ ಮೈಗೆ ತಾಗಿ ಹಾಯಾಗಿರುತ್ತಿದ್ದೆ.

**ಗುರುವ:** ನಿನ್ನ ಗತಿ ಏನಾಗುತ್ತಿತ್ತು ಗೊತ್ತಾ?

**ಶೇಂಗಾ ಕಾಳು**:: ಏನಾಗುತ್ತಿತ್ತು ನನಗೆ ಗೊತ್ತಿಲ್ಲ ಆದರೆ ಇಷ್ಟು ಕಷ್ಟ ಆಗುತ್ತಿರಲಿಲ್ಲ.

**ಗುರುವ:** ನಿನ್ನಲ್ಲಿರುವ ಎಣ್ಣೆಯ ಅಂಶ ನಿನಗೆ ಮುಳುವಾಗುತ್ತಿತ್ತು. ಆ ಎಣ್ಣೆಯ ವಾಸನೆಗೆ ಹುಳು ಹುಪ್ಪಟೆಗಳು ಆಕರ್ಷಿತವಾಗಿ ಬರುತ್ತಿದ್ದವು. ಅವು ತಮ್ಮ ಚೂಪಾದ ಹಲ್ಲುಗಳಿಂದ ನಿನ್ನ ಚರ್ಮ ಸೀಳಿ ಕಚ್ಚಿ ತಿನ್ನುವಾಗಿನ ನೋವು ನಿನಗೆ ಊಹಿಸಲಾಗುತ್ತಾ? ಕೊನಗೆ ನೀನು ಮಣ್ಣಲ್ಲಿ ಮಣ್ಣಾಗಿ ಅಡ್ಡಾಡುವರ ಕಾಲ ಕೆಳಗಿನ ಧೂಳಾಗುತ್ತಿದ್ದೆ.

**ಶೇಂಗಾ ಕಾಳು**:: ಈಗೇನಾಗುತ್ತಿದೆ ಸಹಿಸಲಾಗದಷ್ಟು ನೋವಾಗುತ್ತಿದೆ. ನನಗಾಗುವ ಲಾಭವೇನು?
**ಗುರುವ:** ಈಗೇನೋ ನೋವಾಗುತ್ತದೆ. ಅದನ್ನು ಸಹಿಸಿದರೆ ನಿನ್ನಲ್ಲಿ ಹೊರಬಂದ ಎಣ್ಣೆ ಕೂಡಲಸಂಗಮ ದೇವನ ಮುಂದಿನ ದೀಪದ ಬೆಳಕಾಗುತ್ತದೆ. ನಿನ್ನ ತಿರುಳು ಶೇಂಗಾ ಹಿಂಡಿಯಾಗಿ ಪಶುಗಳ ಅಹಾರವಾಗುತ್ತಿ. ಇನ್ನುನೀನು ಕುಸುಬೆಯಾಗಿದ್ದರೆ ಸುಲಿದ ಚರ್ಮ ತಾಯಂದರ ಒಲೆ ಹಚ್ಚಲು ಆಧಾರವಾಗುತ್ತಿದ್ದಿ ಏನು ಮಾಡುವದು ನಿನಗಾ ಭಾಗ್ಯವಿಲ್ಲ.
**ಶೇಂಗಾ ಕಾಳು**:: ಹೌದಲ್ಲ ಇದು ನನಗೆ ಹೊಳೆಯಲಿಲ್ಲ. ಬೇಗ ಬೇಗ ನಿಮ್ಮ ಕೆಲಸ ಮುಂದುವರಿಸಿ.
ಚೀಲದಲ್ಲಿದ್ದ ಶೇಂಗಾಕಾಳುಗಳೆಲ್ಲ ಒಮ್ಮೆಲೇ ಎಲ್ಲಾ ಕೂಗಿದವು "ನನ್ನನ್ನು ಮೊದಲು ಗಾಣಕ್ಕೆ ಹಾಕಿ"
ನನಗರಿವಿಲ್ಲದೆ ನಾನೂ ಕೂಗಿದೆ "ನನ್ನನ್ನು ಮೊದಲು ಗಾಣಕ್ಕೆ ಹಾಕಿ".
ಏನಾಯಿತು ಗುರಣ್ಣ ಎನ್ನುವ ಶ್ರೀಶೈಲಪ್ಪನ ಮಾತು ಕೇಳಿ ಕಣ್ಣು ತೆರೆದೆ. ಎದುರಿಗೆ ಸಿದ್ದಜ್ಜ ಮತ್ತೆ ಕೆಲವರಿದ್ದರು.
**ಸಿದ್ದಜ್ಜ:** ಗಾಣಕ್ಕ ಹಾಕಿಯಾಯಿತಲ್ಲ. ಇನ್ನು ಎಣ್ಣೆ ದೀಪಕ್ಕ ಹಾಕುವದಷ್ಟೇ ಉಳಿದಿದೆ.
ಅಲ್ಲಿದ್ದವರಿಗಾರಿಗೂ ನಮ್ಮ ಮಾತಿನ ಅರ್ಥ ಆಗಿರಲಿಕ್ಕಿಲ್ಲ.
ಎದ್ದುನಿಂತು ಎಲ್ಲರಿಗೆ ಶರಣು ಶರಣಾರ್ಥಿ ಎಂದೆ. ಅವರು ಮರಳಿ "ಶರಣು ಶರಣಾರ್ಥಿ" ಹೇಳಿದರು.
ಶ್ರೀಶೈಲಪ್ಪ ಅಲ್ಲಿದ್ದವರಲ್ಲಿ ಹಾಲು ಬಣ್ಣದ ಮೇಣದ ಬೊಂಬೆಯ ಮೂರ್ತಿಯಂತಿದ್ದ ಒಬ್ಬರನ್ನು ತೋರಿಸಿ ಇವರು"ಶಾಂತಪ್ಪ" ಎಂದು ಪರಿಚಯಿಸಿದ. ಇನ್ನೊಬ್ಬರು ಕಂಚಿನ ಮೈಕಟ್ಟಿನ ಹುರಿಮೀಸೆಯ ಭವ್ಯ ವ್ಯಕ್ತಿತ್ವದ ವ್ಯಕ್ತಿಯನ್ನು ತೋರಿಸಿ ಇವರು " ಮಾಚಣ್ಣ" ಎಂದು ಪರಿಚಯಿಸಿದ. ನಾನವರನ್ನು ನಿಬ್ಬೆರಗಾಗಿ ನೊಡುತ್ತಿದ್ದೆ ಮೈ ಸ್ವಲ್ಪ ಕಂಪಿಸಿತು.
"ಪ್ರಭು" ಈಗಾಗಲೇ ತಡವಾಗಿದೆ ಪ್ರಸಾದ ಇಲ್ಲಿಗೆ ತಂದಿರುವೆವು ದಯಮಾಡಿ ಸ್ವೀಕರಿಸಿ ಎಂದರು ನಾಯಕ.
ನಾವೆಲ್ಲ ಮೌನವಾಗಿ ಪ್ರಸಾದ ಸ್ವೀಕರಿಸಿದ ಮೇಲೆ ನಾಯಕ ತಮ್ಮವರೊಂದಿಗೆ ಶರಣು ಹೇಳಿ ಹೊರಟು ಹೋದ.
ಎಲ್ಲರೂ ಒಳಹೋಗಿ ಕುಳಿತುಕೊಂಡೆವು.
**ಶಾಂತಪ್ಪ:** ನಾನು, ಮಾಚಪ್ಪ, ಸಿದ್ದಜ್ಜ ಮತ್ತು ನಮ್ಮ ಜೊತೆ ಬಂದ ಮೂರು ಯೋಧರ ಜೊತೆ ಗವಿಗಳನ್ನು ನೋಡಲು ಮೇಲೆ ಹೋಗುತ್ತೇವೆ. ನೀವೆಲ್ಲ ಇಲ್ಲಿರಿ ಗಾಬರಿಯಾಗಬೇಡಿ. ಅಣ್ಣ ಬಸವಣ್ಣ ನಮ್ಮ ಕಾವಲಿಗಿದ್ದಾನೆ.
ಆ ಮಾತಿನಲ್ಲಿ ಜೇನಿನ ಸಿಹಿಇತ್ತು. ಅವರ ಮಾತು ಕೇಳುತ್ತಲೇ ಇರಬೇಕು ಎನಿಸಿತು. ಮಾಚಣ್ಣ ಎದ್ದುಹೋಗಿ ಬಂಡಿಯಿಂದ ಒಂದು ಬಿಚ್ಚುಗತ್ತಿ ತೆಗೆದುಕೊಂಡು

ಬಂದರು, ಉಳಿದವರು ಪಂಜನ್ನು ತೆಗೆದುಕೊಂಡರು. ಮೊನಣ್ಣಾ ನಿನ್ನೆಯ ಹಾಗೆ ಬಲಗಡೆಯ ಹೂ ಹಾಕಿದ ಕೂಡಲೇ ಅಲ್ಲೊಂದು ಬಾಗಿಲು ತೆರೆಯಿತು ಅಲ್ಲಿ ಅವರೆಲ್ಲ ಮೇಲೆ ಹೋದರು.

ಅತಂಕ ಎಲ್ಲರ ಮುಖದಲ್ಲಿ ಮನೆಮಾಡಿತ್ತು ಸ್ವಲ್ಪ ಹೊತ್ತು ಮೌನವಾಗಿದ್ದ ನಾನು

**ಗುರುವ:** ಶ್ರಿಶೈಲಪ್ಪ ಏನಾಗುತ್ತದೆ ಗೊತ್ತಾಗುತ್ತಿಲ್ಲ.

**ಶ್ರೀಶೈಲಪ್ಪ:** ವಚನಗಳನ್ನು ರಕ್ಷಿಸಲು ಈ ಸ್ಥಾನ ಯೋಗ್ಯವೇ ಎಂದು ಪರಶೀಲಿಸಲಾಗುತ್ತಿದೆ.

**ಗುರುವ:** ಪೆಟ್ಟಿಗೆಯಲ್ಲಿಟ್ಟು ಕೀಲಿ ಹಾಕಿ ಒಂದು ಭದ್ರವಾದ ಖೋಲಿಯಲ್ಲಿಟ್ಟಿದ್ದರೆ ಆಗುತ್ತಿರಲಿಲ್ಲವೇ?

**ಶ್ರೀಶೈಲಪ್ಪ:** ಕಲ್ಯಾಣದಲ್ಲಿರುವ ಶರಣರೆಲ್ಲ ತಮ್ಮ ಅನುಭಗಳನ್ನು ಘನೀಕರಿಸಿ ರಚಿಸಿದ ವಚನಗಳು ಕೋಟ್ಯಾನುಕೋಟಿ.

ಆ ವಚನಗಳನ್ನು ಅನುಭವಮಂಟಪದಲ್ಲಿ ಪರಿಷ್ಕರಿಸಿದ ನಂತರ ಅವುಗಳ ಹತ್ತು ಹನ್ನೆರಡು ಪ್ರತಿ ಮಾಡಿ ಸಂಗ್ರಹಾಲಯದಲ್ಲಿ ಇಡಲಾಗುತ್ತದೆ. ವಚನ ಪ್ರತಿ ಮಾಡುವದು ನನ್ನ ಕಾಯಕ.

**ಜಯಶ್ರೀ:** ಈ ವಚನಗಳಲ್ಲಿ ಒಂದು ಪ್ರತಿಯನ್ನು ಯಾರೂ ಬೇಕಾದರೂ ಬಂದು ಓದಲು ವಚನ ಗ್ರಂಥಾಲಯ ಇದೆ. ದೇಶದ ನಾನಾ ಭಾಗದಿಂದ ಪರಿಣಿತರು ಮತ್ತು ಆಸಕ್ತರು ಅಲ್ಲಿ ಬಂದು ಅಧ್ಯಯನ ಮಾಡುತ್ತಾರೆ.

**ಶ್ರೀಶೈಲಪ್ಪ:** ನಾನಾ ಭಾಗದಿಂದ ಆಸಕ್ತರಿಗೆ ವಚನಕಟ್ಟುಗಳನ್ನು ಪ್ರಸಾದ ರೂಪವಾಗಿ ಕೊಡುತ್ತಾರೆ. ಕೆಲವರು ಅವುಗಳ ಅಧ್ಯಯನ ಮಾಡಿದರೆ ಕೆಲವರು ಅದು ಪವಿತ್ರವಾದ ವಸ್ತುವೆಂದು ಜಗಲಿಯ ಮೇಲಿಟ್ಟು ಪೂಜಿಸುತ್ತಾರೆ. ದೇಶದಲ್ಲಿರುವ ಗ್ರಂಥಾಲಯಕ್ಕೆ , ಪಂಡಿತರಿಗೆ ಕಳಿಸಿಕೊಡಲಾಗಿದೆ.

**ಜಯಶ್ರೀ:** ಎಲ್ಲ ಕಡೆ ಶರಣರ ತತ್ವಗಳು ಪ್ರಚಾರವಾಗಿ ಕಲ್ಯಾಣಕ್ಕೆ ದಿನಾಲೂ ಸಾವಿರಾರು ಜನ ಬರುತ್ತಾರೆ ಅದರಲ್ಲಿ ಕೆಲವರು ಮರಳಿದರೆ ಉಳಿದವರು ಇಲ್ಲಿಯೇ ಕಾಯಕ ನಿರತರಾಗುತ್ತಾರೆ.

**ಶಂಕರಕ್ಕ:** ಆ ರೀತಿಯಾಗಿ ಎಷ್ಟು ಜನ ಕಲ್ಯಾಣದಲ್ಲಿರಬಹುದು.

**ಜಯಶ್ರೀ:** ಎಣಿಸಲಾಸಾಧ್ಯ. ಕೆಲವು ವಚನಗಳಲ್ಲಿ ಲಕ್ಷದ ಮೇಲೆ ತೊಂಬತ್ತು ಸಾವಿರ ಶರಣರು ಕಲ್ಯಾಣ್ದಲ್ಲಿದ್ದಾರೆ ಎನ್ನುವ ಉಲ್ಲೇಖಗಳಿವೆ. ಇವರೆಲ್ಲ ಅನುಭವಮಂಟಪದೊಡನೆ ನಿಕಟವಾಗಿರುವವರು ಆದರೆ ಸರಳ ಜೀವನ ನಡೆಸುತ್ತ ತಮ್ಮ ಕಾಯಕದಲ್ಲಿ ನಿರತರಾದವರು ಬಹಳ ಜನರಿದ್ದಾರೆ ಮತ್ತು ಕಲ್ಯಾಣದ ಎಲ್ಲ ಕೆಲಸಗಾರರಲ್ಲಿ ಬಹಳ ಜನ ಶರಣರಿದ್ದಾರೆ.

**ನನ್ನಾಕೆ:** ಆ ಅಂಕಿ ಅನ್ನಲಿಕ್ಕೇ ಬರೂದಿಲ್ಲ ಅಷ್ಟು ಜನ ವಚನ ರಚಿಸಿದರ ಇಡಲಾಕ ಜಾಗ ಎಲ್ಲಿ ಸಿಗುತ್ತ.

**ಶ್ರೀಶೈಲಪ್ಪ:** ಆ ವಚನಗಳು ಶರಣರು ವಿಶ್ವಕ್ಕ ಕೊಟ್ಟ ಅಮೂಲ್ಯ ಆಸ್ತಿ. ಅದನ್ನು ಸಾವಿರಾರು ವರ್ಷ ಜೋಪಾನವಾಗಿ ಕಾಯ್ದಿಡುವ ಕೆಲಸ ಮಾಡಬೇಕಾಗಿದೆ. ಅವು ಜಗತ್ತಿಗೆ ಮಾರ್ಗದರ್ಶಕ ತತ್ವಗಳು. ಈ ತತ್ವಗಳಿಂದ ತಮ್ಮ ಹೊಟ್ಟೆಪಾಡಿಗೆ ಕುತ್ತು ಎನ್ನುವ ಜನ ಬಹಳ ಜನರಿದ್ದಾರೆ. ಅವರಿಗೆ ಅವಕಾಶ ಸಿಕ್ಕರೆ ಸಾಕು ವಚನ ನಾಶ ಮಾಡುತ್ತಾರೆ. ಅದಕ್ಕಾಗಿಯೇ ಇವುಗಳನ್ನಿಡಲು ಗುಪ್ತ ಸ್ಥಾನ ಹುಡುಕುತ್ತಿದ್ದಾರೆ.
**ನನ್ನಾಕೆ:** ಒಂದೆರಡು ವರ್ಷ ಇಟ್ಟರ ಮನ್ಯಾಗಿನ ಕಾಳು ಕಡಿ ಹಾಸಗಿ ಎಲ್ಲ ಹುಳಾ ಹತ್ತಿ ನಾಶ ಆಗತಾವ ಇನ್ನ ಸಾವಿರ ವರ್ಷದತನಕ ಕೆಡಬಾರದು ಅಂದರ ಹ್ಯಾಂಗ ಇಡಬೇಕು. ನಮ್ಮನಿ ಹ್ಯಾಂಗಿತ್ತು ಹಾಂಗ ಬಿಟ್ಟು ಬಂದೀವಿ ನಾವು ಮರಳಿ ಹೋಗುವಷ್ಟರಲ್ಲಿ ಎಲ್ಲ ಇಲಿ ಹೆಗ್ಗಣ ಪಾಲು ಆಗಿರತೈತಿ.
**ಶ್ರೀಶೈಲಪ್ಪ:** ಕಲ್ಲಿನಾಗ ಕೊರದ ಈ ಗವಿಯೊಳಗ ಯಾವ ಹುಳ ಹುಪ್ಪಡಿ, ಇಲಿ, ಹೆಗ್ಗಣ ಬರಾಕ ಆಗಲ್ಲ. ಮತ್ತು ಈ ಜಾಗ ಕೆಲವರಿಗೆ ಮಾತ್ರ ಗೊತ್ತಿರತೈತಿ. ಇಲ್ಲಿ ಬಂದ ಹುಡುಕಿ ವಚನ ನಾಶ ಮಾಡಲಾಕ ಆಗೂದಿಲ್ಲ.
**ನನ್ನಾಕೆ:** ಒಡವೆ, ಬಂಗಾರ ಎಲ್ಲಾ ನೆಲದೊಳಗ ಇಡತಾರ ಅಂತ ನಮ್ಮಜ್ಜಿ ಹೇಳಿದ ನೆನಪು.
**ಶ್ರೀಶೈಲಪ್ಪ:** ಎಷ್ಟೇ ಜೋಪಾನವಾಗಿಟ್ಟರೂ ಗೆದ್ದಲ ಬಿಡೂದಿಲ್ಲ. ಬಂಗಾರನ ಗೆದ್ದಲು ಮುಟ್ಟುವದಿಲ್ಲ.

> **ಸಿಡಿಲೊಡನೆ ಕಾದುವಂಗೆ ಕೊಡೆಯೊಂದು ಮರೆಯೆ ?**
>
> **ಪರ್ವತವ ಹೊರುವಂಗೆ ಸಿಂಬಿಯೊಂದು ಸಹಾಯವೆ ?**
>
> **ಸಕ್ಕರೆಯ ಸವಿವುದಕ್ಕೆ ಬೇರೊಂದು ಪದಾರ್ಥವೆ ?**
>
> **ಗುಹೇಶ್ವರನ ಅರಿವುದಕ್ಕೆ ಕುರುಹು ಮುನ್ನೇಕೆ ?** / 1520
>
> — ಅಲ್ಲಮಪ್ರಭುದೇವರು

ಎಲ್ಲರೂ ಮೇಲೆ ಹೋದಮೇಲೆ
**ಶಂಕರಕ್ಕ:** ನೀವು ಇಷ್ಟು ದಿವಸ ವಚನಗಳ ಪ್ರತಿ ಮಾಡುವದನ್ನು ನೋಡುತ್ತಿದ್ದೆ ನಾನು ಬರಿಲಾಕ ಕಲಕೋತೀನಿ.
ಜಯಶ್ರೀ ಇಂದು ಕಲ್ಯಾಣದಿಂದ ತಂದ ವಚನ ಕಟ್ಟುಗಳ ಬಟ್ಟೆಯ ಗಂಟನ್ನ ತಂದಳು. ನನ್ನಾಕೆ ಅದನ್ನು ಎತ್ತಿ ನೋಡಿ
**ನನ್ನಾಕೆ:** ಏನ್ರಿ ಈ ಗಂಟು ಎಷ್ಟು ಭಾರ ಐತಿ.
**ಜಯಶ್ರೀ:** ಈ ಗಂಟಿನಾಗ ಹತ್ತು ವಚನಗಳ ಕಟ್ಟು ಅದಾವು. ಒಂದು ವಚನದ ಕಟ್ಟಿನಾಗ ಐವತ್ತ ರಿಂದ ನೂರು ವಚನ ಇರತಾವ. ಇದು ಅಲ್ಲಮಪ್ರಭು ಅವರ ವಚನಗಳ ಕಟ್ಟುಗಳು. ಅವರು ಬರೆದ ವಚನಗಳ ಕಟ್ಟುಗಳನ್ನು ಬಟ್ಟೆಯಲ್ಲಿ ಗಂಟಕಟ್ಟಿ ಇಟ್ಟಾರ.
ನಾವ ಕೇಳಿದಂಗ ಅವರ ವಚನಗಳ ಕಟ್ಟುಗಳ ಗಂಟು ಸಾಗಿಸಲಾಕ ನೂರಾರು ಬಂಡಿ ಬೇಕಂತ.

ಅಲ್ಲಮಪ್ರಭು ಇದುವರೆಗೆ ಎಷ್ಟು ವಚನ ರಚಿಸ್ಯಾರ ಎನ್ನುವದು ಶಾಂತಪ್ಪನವರಿಗೆ ಗೊತ್ತು.
ಶ್ರಿಶೈಲಪ್ಪ ನಿಧಾನವಾಗಿ ಒಂದು ಗಂಟು ಬಿಚ್ಚಿದ.
**ಮೋನಣ್ಣ:** ಶ್ರೀಶೈಲಪ್ಪ ಇಷ್ಟು ಕಾಳಜಿಮಾಡಿ ಗಂಟು ಬಿಚ್ಚುವದನ್ನು ನೋಡಿದರೆ ಅದರಲ್ಲಿ ವಜ್ರ ವೈಢೂರ್ಯ ಇದ್ದಂಗ ಕಾಣಿಸುತ್ತದೆ.
**ಶ್ರೀಶೈಲಪ್ಪ:** ಅದಕ್ಕಿಂತಲೂ ಬೆಲೆಬಾಳುವ ವಸ್ತುಗಳು ಇದರಲ್ಲಿವೆ.
ಆ ಗಂಟಿನಲ್ಲಿದ್ದ ಒಂದು ವಚನದ ಕಟ್ಟು ತೊಗೊಂಡು ಅದಕ್ಕೆ ಕಟ್ಟಿದ ದಾರ ನಿಧಾನವಾಗಿ ಬಿಚ್ಚಿ ಒಂದೊಂದು ಎಲಿ ಕಡೇಕ ಮಾಡಿ ನಮಗೆಲ್ಲ ಕೊಟ್ಟ. ನಾವು ಅವುಗಳ ಪ್ರತಿ ಮಾಡಲು ಪ್ರಯತ್ನಿಸಹತ್ತಿದೆವು.
ನಾವೆಲ್ಲ ಕೆಲವು ಪ್ರತಿ ಮಾಡುವಷ್ಟರಲ್ಲಿ ಮೇಲೆ ಹೋದವರು ಇಳಿದು ಬರುವ ಸಪ್ಪಳ ಕೇಳಿಸಿತು.
ಅವರು ಇಳಿದು ಬಂದಮೇಲೆ ನೀರು ಕುಡಿದು ಅವರೆಲ್ಲ ಕುಳಿತರು. ಅಲ್ಲಿ ಏನೇನಿದೆ ಎಂದು ತಿಳಿಯುವ ಕುತೂಹಲ ನಮಗೆಲ್ಲ.
ಎಲ್ಲರೂ ಸುಧಾರಿಸಿಕೊಂಡ ಮೇಲೆ
**ಶಾಂತಪ್ಪ:** ನಾವು ಬಯಸಿದ ಬಳ್ಳಿ ಕೈಗೆ ಸಿಕ್ಕಿತು. ಈ ತರಹದ ಜಾಗೆ ಸಿಗಲೆಂಬ ಕನಸು ಕಾಣುತ್ತಿದ್ದೆವು. ಗುರುವ ಅವರ ಆಗಮನದಿಂದ ವಚನ ರಕ್ಷಣೆಗೆ ಒಂದು ಉತ್ತಮ ಸ್ಥಳ ಸಿಕ್ಕಿತು.
**ಗುರುವ:** ನಾನು ಈಗಲೇ ಸಂಕೊಚದಿಂದ ಕುಗ್ಗಿ ಹೋಗಿರುವೆ. ನಾನು ಪ್ರಸಂಗದ ಕೈಗೂಸಾಗಿರುವೆ. ಏನಾಗಿದೆ ಎನ್ನುವದನ್ನರಿಯದೇ ಕಂಗಾಲಾಗಿರುವೆ. ಮತ್ತೆ ನೀವು ಹೊಗಳಿ ನನ್ನನ್ನು ಇನ್ನಷ್ಟು ಕಂಗಾಲು ಮಾಡುತ್ತಿರುವಿರಿ.
**ಶಾಂತಪ್ಪ:** ಜೀವನದಲ್ಲಿ ನಡೆಯುವ ಘಟನೆಗಳು ನಮಗೆ ತಿಳಿಯದೇ ಘಟಿಸುತ್ತವೆ. ಅದರಲ್ಲಿ ಕೆಲವು ಮಹತ್ವದ ಕಾರ್ಯ ನಿರ್ವಹಿಸುವದಕ್ಕೆ ನಮಗರಿವಿಲ್ಲದೆ ನೆರವಾಗುತ್ತವೆ.
**ಗುರುವ:** ಎಲ್ಲ ಅಣ್ಣ ಬಸವಣ್ಣನ ದಯೆ.
**ಮಾಚಣ್ಣ:** ಪರಸ್ಥಿತಿ ದಿನದಿಂದ ದಿನಕ್ಕೆ ಭಿಗಡಾಯಿಸುತ್ತಿದೆ. ಇದು ಸಿಂಹದ ಗುಹೆಯಾಗಬೇಕು. ನೀವು, ನಾಯಕ ಮತ್ತು ಸಂಗಡಿಗರೆಲ್ಲ ರಕ್ಷಾಕವಚವಾಗಬೇಕು. ಎನ್ನುವ ಗುಡುಗಿನಂತ ಮಾತು ಕಿವಿಗೆ ಬಿದ್ದಮೇಲೆ ದಿಕ್ಕುತಿಳಿಯದಂತಾಯಿತು. ಅವರ ಮಾತು ಯಾರಿಗೂ ಅರ್ಥವಾಗಲಿಲ್ಲ. ಆದರೂ ಅದರಲ್ಲಿ ಕೊಲ್ಮಿಂಚಿನಂತ ಬೆಳಕಿತ್ತು.
**ಗುರುವ:** ಅಣ್ಣ ನೀನು ಏನ ಮಾಡಬೇಕು ಹೇಳಿ ಅದನ್ನ ಮಾಡತೇವಿ.
**ಮಾಚಣ್ಣ:** ನಿಮ್ಮ ಕಾಯಕದಲ್ಲಿನ ಪ್ರಾವಿಣ್ಯತೆ ಶರಣರ ಕಾಯಬೇಕು. ಖಡ್ಗದ ಬಲದಿಂದ ಸಾಧಿಸಲಾಗದ್ದನ್ನು ಕಾಯಕಯೋಗಿಗಳು ಸಾಧಿಸಬಹುದು. ಇಂದು ಮಹಾರಾಜರು ಈ ಅಡವಿಯನ್ನು ಯಾರೂ ಆಡಳಿತಗಾರರ ಅಪ್ಪಣೆಯಿಲ್ಲದೇ ಪ್ರವೇಶಮಾಡಬಾರದು ಎನ್ನುವ ಆಜ್ಞೆ ಹೊರಡಿಸಿದ್ದಾರೆ. ನೀವು ಅರಣ್ಯದ

ರಕ್ಷಣೆಗಾಗಿ ಬಿಲ್ಲುಗಾರರನ್ನು ನೇಮಿಸಬೇಕು ಅವರಿಗಾಗಿ ಕುದರೆಗಳನ್ನು ಕಳಿಸಲಾಗುವದು.

**ಗುರುವ:** ಈ ಕೆಲಸ ನಾಯಕರು ಸಮರ್ಥವಾಗಿ ನಿರ್ವಹಿಸುತ್ತಾರೆ ನನ್ನ ಕಾಯಕದ ಉಪಯೋಗ ಇಲ್ಲೇನಿದೆ.

**ಮಾಚಣ್ಣ:** ನೀವು ಕಲ್ಯಾಣದ ಯುವಕರಿಗೆ ಗುಣಮಟ್ಟದ ಎಣ್ಣೆ ತಯಾರಿಸಲು ಕಲಿಸಬೇಕು. ಇಲ್ಲಿಯೇ ಹತ್ತು ಹನ್ನೆರಡು ಗಾಣ ಹಾಕುವ ಮತ್ತು ಶೇಂಗಾಕಾಳು ಕಳಿಸುವ ಏರ್ಪಾಡು ಮಾಡಿ ಕಲಿಯಲು ಇಚ್ಛೆಯುಳ್ಳ ಯುವಕರನ್ನು ಕಳಿಸಕೊಡಲಾಗುವದು. ನೀವು ಅವರಿಗೆ ತರಬೇತಿಕೊಟ್ಟು ಅರ್ಧ ಎಣ್ಣೆ ಶೇಂಗಾಕಾಳಿನ ಬೆಲೆ ಮತ್ತು ಕಾಯಕಯೋಗಿಗಳ ವೇತನಕ್ಕಾಗಿ ಕೊಟ್ಟು ಉಳಿದ ಎಣ್ಣೆ ಇಲ್ಲಿಯೇ ಸಂಗ್ರಹಿಸಬೇಕು. ಹೂ, ಔಷಧ ಗಿಡ ಬೆಳೆಯುವ ಯೋಜನೆ ಚನ್ನಾಗಿದೆ ಅದರ ಜೊತೆ ಕಾಯಿಪಲ್ಲೆ, ಹಣ್ಣು ಹಂಪಲ ಬೆಳೆಯುವ ತರಬೇತಿ ಕೊಡುವ ವ್ಯವಸ್ಥೆ ಮಾಡಿ. ಕಲ್ಯಾಣದಿಂದ ಪರಿಣಿತರು ಬಂದು ತರಬೇತಿ ಕೊಡುತ್ತಾರೆ. ಕಾಡು ಜನರ ಬದುಕಿಗೆ ದಾರಿ ಸಿಗಲಿ.

**ಗುರುವ**: ಇದಕ್ಕಿಂತ ಸಂತೋಷದ ಸಂಗತಿ ನನಗೇನಿದೆ.

**ಮೋನಣ್ಣ:** ನಾನೇನು ಮಾಡಲಿ ಮಾಚಣ್ಣ.

**ಮಾಚಣ್ಣ**: ನೀವು ಬೊಂಬೆ ತಯಾರಿಸುವ ಕೆಲಸ ಎಲ್ಲಿ ಕಲಿತಿರಿ?

**ಮೋನಣ್ಣ:** ನನ್ನ ತಂದೆ ತಾಯಿ ಉತ್ತರದಿಂದ ಬರುವ ಕರಕುಶಲ ವಸ್ತು ಮಾರುವ ಸಂಚಾರಿ ವ್ಯಾಪಾರಿ ತಂಡದಲ್ಲಿ ಗೊಂಬೆ ತಯಾರಿಸುತ್ತಿದ್ದರು. ಅವರಿಂದ ನಾನು ಬೊಂಬೆ ಮಾಡುವದನ್ನು ಕಲಿತೆ.

**ಮಾಚಣ್ಣ**: ಆ ಸಂಚಾರಿ ವ್ಯಾಪಾರಿ ತಂಡದ ವಿವರ ತಿಳಿಸಿ.

**ಮೋನಣ್ಣ:**

1. ಸಂಚಾರಿ ವ್ಯಾಪಾರಿ ತಂಡಕ್ಕೆ ಒಬ್ಬ ಮಾಲಿಕ ಎಲ್ಲ ಅವನ ಆಜ್ಞೆಯಂತೆ ನಡೆಯುವದು.
2. ಸುಮಾರು 300 ರಿಂದ 400 ಕರಕುಶಲ ಕಾರ್ಮಿಕರು ತಂಡದಲ್ಲಿದ್ದು ಅವರ ಊಟ ಮತ್ತು ವಸತಿ ವ್ಯವಸ್ಥೆ ಎಲ್ಲ ಮಾಲಕನದು.
3. ಅವರೆಲ್ಲರಿಗಾಗಿ ಇರಲು ಡೇರೆ ಕೊಡುತ್ತಿದ್ದರು.
4. ಎಲ್ಲ ಕಲಾಕಾರರಿಗೆ ನಿಯಮಿತ ವೇತನ ಮಾಲಕ ಕೊಡುತ್ತಾನೆ.
5. ಸಾಗಣೆಗಾಗಿ ಐವತ್ತು ಅರವತ್ತು ಎತ್ತಿನ ಬಂಡಿಗಳು ಇದ್ದರೆ, ಸುಮಾರು 100 ಕುದುರೆಗಳು ಇದ್ದವು.
6. ಸಾಮಾನುಗಳ ಮತ್ತು ಇತರ ವಸ್ತುಗಳನ್ನು ಕಾಯುವದು ತುಂಬಾ ಮಹತ್ವದ ಕೆಲಸ. ಅದಕ್ಕಾಗಿ ತರಬೇತಿ ಪಡೆದ ನೂರಾರು ಯೋಧರನ್ನು ನೇಮಿಸಿಕೊಳ್ಳುತ್ತಿದ್ದರು. ಈ ಯೊಧರಲ್ಲದೇ ಅವರು ಬೀಡು ಬಿಡುವ ಸ್ಥಳದ ಯುವಕರನ್ನೂ ಸಹ ತಮ್ಮ ರಕ್ಷಣೆಗಾಗಿ

ನಿಯಮಿಸಿಕೊಳ್ಳುತ್ತಿದ್ದರು. ಅವರಾರು ಎನ್ನುವದು ಯಾರಿಗೂ ಗೊತ್ತಾಗುತ್ತಿದ್ದಿಲ್ಲ.

7. ಕೆರೆಯ ಸನಿಹ ಮತ್ತು ದೊಡ್ಡ ಊರಿಗೆ ಸಮೀಪದಲ್ಲಿ ವಸತಿ ಸ್ಥಳವನ್ನು ಬಹಳ ಜಾಗರೂಕತೆಯಿಂದ ಆರಿಸಿಕೊಳ್ಳುತ್ತಿದ್ದರು.
8. ನಮ್ಮಪ್ಪ ತಮ್ಮ ನಕ್ಷೆಯಲ್ಲಿ ತಾವು ತಂಗಿದ ಸ್ಥಳಗಳನ್ನು ಗುರುತಿಸಿದ್ದಾರೆ ಅದನ್ನು ನಿಮಗೆ ಕೊಡುವೆ.
9. ಸಾಮಾನುಗಳ ಸಂಗ್ರಹದ ಸುತ್ತಲೂ ಯೊಧರ ಡೇರೆಗಳಿದ್ದರೆ. ಕಲಾಕಾರರ ವಸತಿಯಿಂದ ದೂರದಲ್ಲಿ ಯೊಧರ ವಸತಿ ಇದ್ದು ಎಲ್ಲ ದಿಕ್ಕುಗಳಿಂದ ರಕ್ಷಣೆ ನೀಡಲಾಗುತ್ತಿತ್ತು.
10. ಎಲ್ಲಕ್ಕೂ ಮೊದಲು ಆದಳಿತಗಾರನಿಗೆ ಕಾಣಿಕೆ ಕೊಟ್ಟು ತಮ್ಮ ತಂಡದಲ್ಲಿರುವವರ ವಿವರ ಕೊಟ್ಟು ವ್ಯಾಪಾರ ಮಾಡಲು ಪರವಾನಗಿ ಪಡೆಯುತ್ತಿದ್ದರು.
11. ಅಲ್ಲಿಯ ಜನರ ಅಭಿರುಚಿ ಮತ್ತು ಅವಶ್ಯಕತೆಗನುಸಾರ ಕಲಾಕಾರರು ತಯಾರಿಸಿದ ಸಮಾನುಗಳನ್ನು ನುರಿತ ವ್ಯಾಪಾರಿ ತಂಡ ಆ ಭಾಗದ ಊರುಗಳಲ್ಲಿ ವ್ಯಾಪಾರ ಮಾಡುತ್ತಿದ್ದರು.
12. ಅಲ್ಲಿಯ ಆಡಳಿತಗಾರ ಪ್ರತಿ ವ್ಯಾಪಾರಿ ತಂಡದ ಜೊತೆ ಒಂದಿಬ್ಬರು ಯೋಧರನ್ನು ಮತ್ತು ನಮ್ಮ ವಸತಿ ಸ್ಥಳದ ಸುತ್ತ ಯೊಧರ ಒಂದು ತುಕಡಿಯನ್ನು ನಿಯಮಿಸುತ್ತಿದ್ದ.

**ಮಾಚಣ್ಣ:** ಈ ರೀತಿಯ ತಂಡದಲ್ಲಿದ್ದು ಕಲ್ಯಾಣಕ್ಕೆ ಬಂದು ನೆಲೆಸಿದ ಜನರು ಎಷ್ಟಿರಬಹುದು.

**ಮೋನಣ್ಣ:** ಬಹಳ ಜನರಿರಬಹುದು. ಸುಮಾರು ಐವತ್ತು ಕುಟುಂಬಗಳ ಪರಿಚಯ ನಮಗಿದೆ.

**ಮಾಚಣ್ಣ:** ನೀವು ಅವರೊಡನೆ ಕೂಡಿಕೊಂಡು ಇಲ್ಲಿಯ ಕಾಡುಜನರಿಗೆ ತರಬೇತಿಕೊಟ್ಟು ವ್ಯಾಪಾರಿ ತಂಡಕ್ಕೆ ಬೇಕಾಗಬಹುದಾದ ಎಲ್ಲ ವಸ್ತುಗಳನ್ನು ತಯಾರಿಸಬೇಕು. ಎಲ್ಲರಿಗೂ ಈಗ ವೇತನ ಕೊಡಲಾಗುವದು ಮತ್ತು ಆಮೇಲೆ ಬಂದ ಲಾಭದಲ್ಲಿ ಸಮಪಾಲು ಕೊಡಲಾಗುವದು. ಕಲಾಕೃತಿ ತಯಾರಿಕೆ ಇಲ್ಲಿಯ ಜನರಿಗೆ ಸ್ವಾಭಿಮಾನದಿಂದ ಬದುಕುವ ಮಾರ್ಗ ಒದಗಿಸಬೇಕು. ಸಧ್ಯಕ್ಕೆ ಕಲ್ಯಾಣದ ವ್ಯಾಪಾರಿ ಸಂಘ ಕಚ್ಚಾವಸ್ತುಗಳನ್ನು ಮತ್ತು ನಿಮಗೆ ಮತ್ತು ಇಲ್ಲಿ ಕೆಲಸ ಮಾಡುವವರಿಗೆಲ್ಲ ವೇತನ ಕೊಡುವರು ಮತ್ತು ನೀವು ಮಾಡಿದ ವಸ್ತುಗಳನ್ನು ಮಾರುವ ವ್ಯವಸ್ಥೆ ಮಾಡುವರು.

**ಮೋನಣ್ಣ:** ಇದು ನನಗೆ ಬಯಸದೇ ಬಂದ ಭಾಗ್ಯ. ನನ್ನ ಜೊತೆಯ ಕಲಾಕಾರರೆಲ್ಲ ಇಲ್ಲಿಗೆ ಬರುತ್ತಾರೆ.

**ಮಾಚಣ್ಣ:** ಅವರಿಗೆಲ್ಲ ಇರಲು ಬಟ್ಟೆ, ಊಟ ಮತ್ತು ಡೇರೆಯ ವ್ಯವಸ್ಥೆ ಮಾಡಲಾಗುವದು.

**ಶ್ರೀಶೈಲಪ್ಪ:** ನಾನೇನು ಮಾಡಬೇಕು?
**ಮಾಚಣ್ಣ:** ಶಾಂತಪ್ಪನವರೊಡಗೂಡಿ ವಚನ ರಕ್ಷಿಸುವ ಕೆಲಸ ಮಾಡಿ. ನಾವೀಗ ಹೋಗಿ ನಿಮಗೆ ಬೇಕಿರುವ ಸಾಮಾನು ಕಳಿಸುತ್ತೇವೆ. ಮೋನಣ್ಣ ನನ್ನ ಜೊತೆ ಬಂದು ಕಲಾಕಾರರನ್ನು ಕರೆದುಕೊಂಡು ಬರುತ್ತಾರೆ.

**ಹೇಮದ ಪುತ್ಥಳಿಯ ಕರಗಿ [ಸಿ] ಮರಳಿ ರೂಪನರಸಲುಂಟೆ?**

**ದರ್ಪಣದಿಂದ ತನ್ನನರಿದಾತ ಮತ್ತೆ ದರ್ಪಣಕ್ಕೆ ಕಿಂಕರನಾಗಬೇಕೆ?**

**ಶ್ರುತಿಯಿಂದ ತನ್ನನರಿದಾತ ಮತ್ತೆ ಶ್ರುತಿಗೆ ಕಿಂಕರನಾಗಬೇಕೆ?**

**ಹೇಳಾ, ಎಲೆ ಮರುಳೆ ಜಡಪಿಂಡವೆ! ನೀನು ನಿರವಯ ನಿರ್ಗುಣ ನಿತ್ಯ ಪರಿಪೂರ್ಣನಹೆ.**

**ಈ ಸಿಮ್ಮಲಿಗೆಯ ಚೆನ್ನರಾಮನ ಅರಿವಿನೊಳಗಡಗಿದಡೆ ಶ್ರುತಿಗತೀತನಹೆ**. / 71

-- ಚಂದಿಮರಸ

ಇಷ್ಟು ದಿನ ಕಾಳು ಇಲ್ಲದ ಗಾಣಕ್ಕೆ ಮಾಚಣ್ಣ ಕಾಳು ತುಂಬಿಹೋಗಿಬಿಟ್ಟ. ಗಾಣ ತಿರುಗಲಾರದಷ್ಟು ಕಾಳುಗಳು.
ಅವರು ಹೇಳಿದ ವಿಷಯಗಳೆಲ್ಲ ಪೂರ್ಣವಾಗಿ ಅರ್ಥವಾಗಲೊಲ್ಲದು.
ಅವರು ಪರಸ್ಥಿತಿ ದಿನದಿಂದ ದಿನಕ್ಕೆ ಭಿಗಡಾಯಿಸುತ್ತದೆ ಎಂದರೇಕೆ? ಆ ಮಹಾನುಭಾವ ಯಾರ ಪರಸ್ಥಿತಿಯ ಬಗ್ಗೆ ಮಾತನಾಡಿದರು?
ನನ್ನ ಪರಸ್ಥಿತಿಯ ಬಗ್ಗೆ ಅಂತೂ ಅಲ್ಲ. ಹಾಗಾದರೆ ಈ ರಾಜ್ಯದ ಪರಸ್ಥಿಯ ಬಗ್ಗೆ ಸೂಚನೆ ಕೊಟ್ಟರಾ? ನಾನು ಅರಮನೆಯಲ್ಲಿ ನನಗೂ ಹೀಗೆನಿಸಿತ್ತು ಅಲ್ವಾ?.
ಮಗನಿಗೆ ಅಂಜಿ ಬದುಕುವ ಮಹಾರಾಜ, ಪಾಪ ಬಡಪಾಯಿಗಳ ಮೇಲೆ ಅಪವಾದಹೊರಿಸಿ ಸಂಚು ರೂಪಿಸಿ ಅಧಿಕಾರ ಹಿಡಿಯಲು ಬಯಸುವ ಯುವರಾಜ. ಯುವರಾಜ ಬಸವಣ್ಣನವರ ಅನುಯಾಯಿಗಳ ಮೇಲೆ ಸಂಚು ರೂಪಿಸಿ ಅಣ್ಣನವರನ್ನು ಕಲ್ಯಾಣದಿಂದ ಹೊರಹಾಕಬಹುದಲ್ಲವೇ? ಅಣ್ಣನನ್ನು ಹೊರಹಾಕಿದ್ದು ತಾನಲ್ಲ ಎಂದು ನಿರೂಪಿಸಲು ತಂತ್ರ ರೂಪಿಸಬಹುದಲ್ಲವೇ?
ಹೊಡಿ, ಬಡಿ, ಮತ್ತು ಕಡಿ ಎನ್ನುವ ಯೋಧರ ಮತ್ತು ಕುತಂತ್ರಿ ಅಧಿಕಾರದಾಹಿ ಮಂತ್ರಿಗಳನ್ನು ಮುಂದಿಟ್ಟುಕೊಂಡು ಏನು ಮಾಡಬಹುದು? ಅವರು ದ್ವೇಷಿಸುವ ಶರಣರ ಮತ್ತು ವಚನಗಳ ಗತಿ ಏನಾಗಬಹುದು?
ಶರಣರ ಅಭಿಮಾನಿಗಳು ಸೈನ್ಯದ ತುಂಬ ಮತ್ತು ಊರತುಂಬ ಇರುವಾಗ ಮಂಚಣ್ಣನವರು ಖಡ್ಗದ ಕೆಲಸವಿಲ್ಲ ಎಂದು ಹೇಳಿದ್ದೇಕೆ?
ಕಾಯಕಯೋಗಿಗಳು  ಈ ಸಂದರ್ಭದಲ್ಲಿ ಹೇಗೆ ಉಪಯೋಗಕ್ಕೆ ಬರುತ್ತಾರೆ? ಹತ್ತು ಹನ್ನೆರಡು ಗಾಣಗಳ ಎಣ್ಣೆ ಉಪಯೋಗವೇನು?
ಉತ್ತರ ಹೊಳೆಯಲಿಲ್ಲ, ಅವರು ಹೇಳಿದಂತೆ ಕೇಳಿದರಾಯಿತು. ತಲೆತುಂಬ ಯೋಚನೆಗಳು ತುಂಬಿ ಗಾಣ ತಿರುಗದೆ ನಿಂತು ನಿದ್ದೆ ಹತ್ತಿತು.
ಎದ್ದು ತಯಾರಾಗುವಷ್ಟರಲ್ಲಿ ಹೂಗಿಡ ಹಚ್ಚುವ ಹುಮ್ಮಸ್ಸಿನಲ್ಲಿ ತಯಾರಾಗಿ ನನಗಾಗಿ ಕಾಯುತ್ತಿದ್ದ ಆಕೆಯೊಡನೆ ಮೈದಾನದ ಕಡೆ ನಡೆದೆ. ಆಗಲೆ ಅಲ್ಲಿ

ಜನಸಾಗರವೇ ಇತ್ತು. ಕಲ್ಯಾಣದಿಂದ ಬಂದ ಪರಿಣಿತರು ಎಲ್ಲೆಲ್ಲಿ ಯಾವ ಯಾವ ಗಿಡ ಹಚ್ಚಬೇಕು ಎನ್ನುವದನ್ನು ಹೇಳುತ್ತಿದ್ದರು. ನಮ್ಮನ್ನು ಕಂಡೊಡನೆ ನಾಯಕನೊಡಗೂಡಿ ಅಲ್ಲಿದ್ದ ಎಲ್ಲರೂ ಕೈಮುಗಿದು "ಶರಣು ಶರಣಾರ್ಥಿ" ಹೇಳಿದರು. ನಾವಿಬ್ಬರೂ ಪ್ರತಿಯಾಗಿ ಕೈಮುಗಿದು ಶರಣು ಶರಣಾರ್ಥಿ ಹೇಳಿದೆವು. ಅವರ ಜೊತೆಗೂಡಿ ಗಿಡನೆಡುವ ಕೇಲಸದಲ್ಲಿ ಸಂತೋಷವೆನಿಸಿತು.
ಕಲ್ಯಾಣದಿಂದ ಬಂದ ಪರಿಣಿತರು ಬಂದ ಎಲ್ಲ ಕೆಲಸ ಮುಗಿಯಿತು. ಇನ್ನು ನೀರು ಹಾಕಿ ಬೆಳೆಸುವದೊಂದೇ ಬಾಕಿ. ಅಲ್ಲೇ ಇದ್ದ ನಾಯಕ ಅದರ ಕಾಳಜಿ ಬಿಡಿ ಎಲ್ಲರೂ ದಿನಾಲೂ ನೀರು ಹಾಕಿ ಕಾಯುತ್ತಾರೆ. ಇಲ್ಲೇ ನೀರು ಹರಿದು ಬರುವ ಹಾಗಿದ್ದರೆ ಚನ್ನಾಗಿತ್ತು ಗಿಡಗಳು ಸೊಂಪಾಗಿ ಬೆಳೆಯುತ್ತಿದ್ದವು ಎಂದರು. ನಿರೆಲ್ಲಿದೆ ಎಂದು ಗೊತ್ತಿರದ ನನಗೆ ಏನು ಹೇಳಬೇಕು ತಿಳಿಯಲಿಲ್ಲ
"ಅಣ್ಣ ಬಸವಣ್ಣ ಏನಾದರೂ ವ್ಯವಸ್ಥೆ ಮಾಡುತ್ತಾನೆ ಬಿಡಿ" ಎಂದೆ.
ಆಗ ಬಳ ಬಳ ಸಪ್ಪಳವಾಗಿ ಕಾಲು ಒದ್ದೆಯಾದ ಅನುಭವ ನನ್ನಾಕೆ ಆಕಡೆ ಸರಿದು ನೀರು ಹರಿದು ಬರುತ್ತಿದೆ ಮಗ್ಗಲು ಸರಿ ಕಾಲು ಕೆಸರಾಗುತ್ತದೆ ಎಂದಳು. ನನಗೋ ಅಲ್ಲಿ ನೀರು ಹರಿಯುವದನ್ನು ಕಂಡು ಕುಣಿಯಬೇಕೆನಿಸಿತು. ಅಲ್ಲಿದ್ದವರೆಲ್ಲ ಸಂತೋಷದಿಂದ
"ತಾಯಿ ಗಂಗಾದೇವಿ ಹರಿದು ಬಂದಳು" ಎನ್ನುತ್ತ "ಜೈ ಬಸವ ಜೈ ಜೈ ಗುರುಬಸವ" ಎಂದು ಭಜನೆ ಮಾಡಲಾರಂಭಿಸಿದರು. ನಾನೂ ಅವರ ಜೊತೆಗೂಡಿದೆ. ನಾನು ಬಸವಣ್ಣನ ದಯೆಯಿಂದ ನೀರು ಬರ್ತದೆ ಎನ್ನುವದಕ್ಕೂ ಅಲ್ಲಿ ನೀರು ಬರುವದಕ್ಕೂ ಸರಿಯಾಗಿತ್ತು. ಏನಾಗುತ್ತದೆ ನನಗೆ ತಿಳಿಯಲಿಲ್ಲ. ಎಲ್ಲರೂ ಕೂಡಿ ಗಂಗಾಪೂಜೆಮಾಡಿ ಅಲ್ಲಿ ನೆಟ್ಟ ಗಿಡಗಳಿಗೆ ನೀರು ಹಾಕಹತ್ತಿದರು.
ದಿಕ್ಕು ತಿಳಿಯದ ನಾನು ಶರಣು ಹೇಳಿ ಅಲ್ಲಿಂದ ಹೊರಟು ಬಂದೆ.
ನಮ್ಮನ್ನು ಕಾಣುತ್ತಲೇ ಶ್ರೀಶೈಲಪ್ಪ ಮತ್ತು ಜಯಶ್ರೀ ಸಂತೋಷದಿಂದ ನೀರು ಬಂತು ಎಂದು ಹೇಳಿದರು. ನಾವಿಬ್ಬರೂ ಒಮ್ಮೆಲೆ ಏನಾಯಿತು? ಎಂದೆವು. ಸಿದ್ದಜ್ಜ ನಾವೂ ಕೂಡಿ ನೀರಿನ ಡೋಣಿಯ ಹತ್ತಿರ ಹುಡಕಾಡಿದಾಗ ಅಲ್ಲೊಂದು ಗೋಡೆಯಲ್ಲಿ ಕಲ್ಲು ಸ್ವಲ್ಪ ಮುಂದೆ ಬಂದಿತ್ತು ಅದನ್ನು ತೆಗೆದಾಗ ಅಲ್ಲಿದ್ದ ಡೋಣಿಯಲ್ಲಿ ನೀರು ಧಾರಕಾರವಾಗಿ ಹರಿಯಹತ್ತಿತು. ಆದರೆ ಅದನ್ನು ನಿಲ್ಲಿಸುವದು ಹೇಗೆ ಗೊತ್ತಾಗುತ್ತಿಲ್ಲ. ಸಿದ್ದಜ್ಜ ಎಲ್ಲಿಗೋ ಹೋದರು.
ಅದನ್ನು ಬಂದ ಮಾಡಬೇಡಿ ಅದೇ ಈಗ ತೋಟದಲ್ಲಿ ಗಂಗಾಮಾತೆಯಾಗಿ ಹರಿಯುತ್ತಿದ್ದಾಳೆ.
ನೀರು ಹರಿಸಿದವರು ನೀವು ಮತ್ತು ಸಿದ್ದಜ್ಜ. ಆದರೆ ಅಲ್ಲಿ ಒಂದು ಪವಾಡವೇ ನಡೆದುಹೋಯಿತು ಎಂದು ನಡೆದ ವಿಷಯವನ್ನೆಲ್ಲ ತಿಳಿಸಿದಳು ನನ್ನಾಕೆ.
ಸಾಯಂಕಾಲದ ಹೊತ್ತಿಗೆ ಮೋನಣ್ಣ ಮತ್ತು ಉಳಿದವರೆಲ್ಲ ಮರಳಿದರು. ಅವರ ಜೊತೆ ಅಪಾರ ಪ್ರಮಾಣದ ಸಾಮಾನು ತಂದಿದ್ದರು. ಸಿದ್ದಜ್ಜ ಆಗಲೇ ಗಾಣ ಹಾಕಲು ಜಾಗ ಆರಿಸಿದ್ದ ಅಲ್ಲಿಯೇ ಹನ್ನೊಂದು ಗಾಣ ಇಳಿಸಲು ತಿಳಿಸಿದ.

ಮೋನಣ್ಣನು ತಂದ ಸಾಮಾನುಗಳನ್ನೆಲ್ಲ ಬೊಂತಾದೇವಿಯವರ ಡೇರೆಯ ಪಕ್ಕದಲ್ಲಿ ಇಳಿಸಲು ಹೇಳಿದ.
ನಾಳೆ ಎಲ್ಲರೂ ಬರುತ್ತಾರೆ ನಿಮ್ಮ ಕಾಯಕ ಪ್ರಾರಂಬಿಸಬಹುದು. ನೀವು ವಿಶ್ರಾಂತಿ ಪಡೆಯಿರಿ ಎಂದು ಸೂಚಿಸಿ ಸಿದ್ದಜ್ಜ ಅಲ್ಲಿಯ ಕೆಲಸ ನೋಡಲು ಹೋದ. ಅಲ್ಲಿಗೆ ಬಂದ ವೀರಭದ್ರಪ್ಪ ಕಲ್ಯಾಣಕ್ಕೆ ಕಳಿಸಿದ ಎಲ್ಲ ಕಟ್ಟಿಗೆ ವ್ಯಾಪಾರ ಆಗಿದೆ. ನಾಳೆ ಕುದುರೆಗಳು ಬರುತ್ತವೆ ನೀವು ಕುದುರೆ ಸವಾರಿ ಕಲಿಯಬೇಕು. ಉಳಿದ ನಾಲ್ಕು ಹಳ್ಳಿಗಳಿಗೆ ಹೋಗಿಬರಲು ಅನುಕೂಲವಾಗುತ್ತದೆ ಎಂದು ತಿಳಿಸಿ ಹೋದ. ನಿರಂತರವಾಗಿ ಕೆಲಸ ಮಾಡುವ ಇವರಿಗೆಲ್ಲ ಮನದಲ್ಲೇ ನಮಿಸಿದೆ.

**ಆನು ಮಾಡಿದುದಲ್ಲದೆ ಬಯಸಿದ ಬಯಕೆ ಸಲುವುದೆ ಅಯ್ಯಾ.**

**ಒಡೆಯರೊಡವೆಯ ಕೊಂಡಡೆ ಕಳ್ಳಂಗಳಲಾಯಿತ್ತೆಂಬ ಗಾದೆ ಎನಗಿಲ್ಲಯ್ಯಾ.**

**ಇಂದೆನ್ನ ವಧುವ, ನಾಳೆನ್ನ ಧನವ, ನಾಡಿದ್ದೆನ್ನ ತನುವ ಬೇಡರೇಕಯ್ಯಾ**

**ಕೂಡಲಸಂಗಮದೇವಾ, ಆನು ಮಾಡಿದುದಲ್ಲದೆ ಬಯಸಿದ ಬಯಕೆ ಸಲುವುದೆ ಅಯ್ಯಾ.** /

420-- ಬಸವಣ್ಣ

ಕಲ್ಯಾಣದಿಂದ ಮರಳಿ ಬಂದ ಮೋನಣ್ಣ ಮತ್ತು ಶಂಕರಕ್ಕನನ್ನು ನೋಡಿ ಸಂತೋಷವಾಯಿತು.
**ಗುರುವ:** ಎಲ್ಲ ಕೆಲಸಗಳು ಮುಗಿದವೇ?.
**ಮೋನಣ್ಣ:** ನಾವು ಮಾಡಬೇಕಾದ ಕಾಯಕದ ವಿವರ ಅಲ್ಲಿಯ ವ್ಯಾಪಾರಿಗಳಿಗೆ ಮೊದಲೇ ಗೊತ್ತಾಗಿತ್ತು. ಅವರೆಲ್ಲ ಕೂಡಿ ಯಾವ ಯಾವ ಸಾಮಾನು ಬೇಕಾಗಬಹುದೆಂದು ವಿಚಾರಿಸಿ ಎಲ್ಲ ಬಂಡಿ ಹೇರಿ ಇಟ್ಟಿದ್ದರು. ಅವರಲ್ಲಿ ಅನೇಕರು ಉತ್ತರದ ರಾಜ್ಯಗಳಿಂದ ಬಂದವರು. ಸಂಚಾರಿ ತಂಡದಲ್ಲಿಯ ವ್ಯಾಪಾರ ಬಿಟ್ಟು ಕಲ್ಯಾಣ ಸುಖದ ನಾಡು ಎಂದು ಗೊತ್ತಾಗಿ ನನ್ನಂತೆ ಶಾಂತ ಜೀವನ ಅರಸಿ ಬಂದವರು. ಅವರೆಲ್ಲ ತಮ್ಮ ಅನುಭವದ ಆಧಾರದಲ್ಲಿ ಏನೇನು ಮಾಡಿದರೆ ವ್ಯಾಪಾರವಗುತ್ತೆ ಮತ್ತು ಲಾಭವಾಗುತ್ತದೆ ಎಂದು ಸಮಾಲೋಚಿಸಿ ಸಾಮಾನು ಕಳಿಸಿದ್ದಾರೆ. ಜೊತೆಗೆ ಈ ಸತ್ಕಾರ್ಯದಲ್ಲಿ ಕೈಗೂಡಿಸಲು ತಮಗೊಂದು ಅವಕಾಶ ಸಿಕ್ಕಿತಲ್ಲ ಎಂದು ಹಿಗ್ಗಿದ್ದಾರೆ.
**ಶ್ರೀಶೈಲಪ್ಪ:** ನಿಮ್ಮ ಎಲ್ಲ ಕಲಾಕಾರ ಗೆಳೆಯರೆಲ್ಲ ಸಿಕ್ಕರೇ?
**ಶಂಕರಕ್ಕ:** ಇಂದು ನಾವು ಕಲ್ಯಾಣಕ್ಕೆ ಹೋದದ್ದು ನಮ್ಮ ಭಾಗ್ಯ. ಇಂದು ಮಹಾದೇವಿಯಕ್ಕ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದರು. ಅವರು ಬೇಡವೆಂದರೂ ಅವರ ಜೊತೆ ಅನೇಕ ಶರಣರು ಪ್ರಯಾಣ ಬೆಳೆಸಿದರು. ಅವರನ್ನೆಲ್ಲ ಬೀಳ್ಕೊಡಲು ಕಲ್ಯಾಣದ ಜನರೆಲ್ಲ ಸೇರಿದ್ದರು. ಹಾಗಾಗಿ ನಮ್ಮ ಗೆಳೆಯರೆಲ್ಲ ಅಲ್ಲಿಯೇ ಸಿಕ್ಕರು.
**ಮೋನಣ್ಣ:** ನಾವು ಬರುವ ಉದ್ದೇಶ ಅವರಿಗೆಲ್ಲ ಗೊತ್ತಾಗಿಬಿಟ್ಟಿತ್ತು. ಅಡವಿಯ ಜನರಿಗೆ ಕಲಿಸುವ ಮತ್ತು ಜೀವನ ರೂಪಿಸುವ ಒಳ್ಳೆಯ ಕಾರ್ಯದಲ್ಲಿ ಅದೂ ಬೊಂತಾದೇವಿಯರ ಮಾರ್ಗದರ್ಶನದಲ್ಲಿ ಕೆಲಸ ಮಾಡುವದೇ ತಮ್ಮ

ಭಾಗ್ಯವೆಂದು ಅಂದುಕೊಂಡ ಅವರು ನಮ್ಮನ್ನು ಬೆಟ್ಟಿಯಾಗಿ ನಾವು ಬರುವದಕ್ಕೆ ಎಲ್ಲ ತಯಾರಿ ಮಾಡಿಕೊಂಡು ನಾಳೆ ಬರುತ್ತೇವೆ ಎಂದು ತಿಳಿಸಿದರು. ನಾವು ಅಂದುಕೊಂಡಿರುವದಕ್ಕಿಂತ ಹೆಚ್ಚು ಜನ ಬರಬಹುದು. ಅವರಿಗಾಗಿ ಮಳೆಗಾಲದಲ್ಲಿಯೂ ವಾಸಿಸಬಹುದಾದ ಡೇರೆಗಳನ್ನು ಕಳಿಸುವ ವ್ಯವಸ್ಥೆಯಾಗಿದೆ.

**ಶ್ರೀಶೈಲಪ್ಪ:** ನಿಮ್ಮ ಜೊತೆ ನಾವೂ ಬರಬೇಕಿತ್ತು ಅಕ್ಕನ ದರ್ಶನ ಭಾಗ್ಯ ಸಿಗುತ್ತಿತ್ತು. ನನ್ನಾಕೆಯೆಂದರೆ ಅಕ್ಕನವರಿಗೆ ಬಹಳ ಅಕ್ಕರೆ.

### ಈ ಭಕ್ತನ ಅಂಗಳ ಅವಿಮುಕ್ತಿಕ್ಷೇತ್ರ

**ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,**

**ಭಕ್ತರ ಪಡುಗ, ಪಾದತ್ರಾಣ, ಪಹರಿ, ಬಾಗಿಲು, ಬೊಕ್ಕಸ, ಬಿಯಗ**

**ಮುಂತಾದ ಕಾಯಕವಂ ಮಾಡಿಕೊಂಡು**

**ವ್ರತಕ್ಕೆ ಊಣೆಯವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ**

**ಈ ಭಕ್ತನ ಅಂಗಳ ಅವಿಮುಕ್ತಿಕ್ಷೇತ್ರ, ಆತನ ಮನೆಯೆ ಆಚಾರವೆ ಪ್ರಾಣವಾದ**

**ರಾಮೇಶ್ವರಲಿಂಗದಾಶ್ರಯ.** / 11-- ಅಕ್ಕಮ್ಮ.

ಆ ದಿನ ನನ್ನ ಜೀವನದ ಅತಿ ಮಹತ್ವದ ದಿನವಾಯಿತು. ಕಲ್ಯಾಣದಿಂದ ಬಂದ ವಿದ್ಯಾರ್ಥಿಗಳಿಗೆಲ್ಲ ನನ್ನ ಅನುಭವ ಧಾರೆ ಎರೆಯುವ ಸುಯೋಗ ನನಗೆ ಸಿಕ್ಕಿತ್ತು. ಯಾವುದೇ ಕಾಯಕದಲ್ಲಿ ನಿಪುಣನಾಗಬೇಕಾದರೆ ಶ್ರದ್ಧೆ ಮತ್ತು ತರಬೇತಿ ಅವಶ್ಯಕ. ಅಲ್ಲಿ ಬಂದ ಯುವಕರಲ್ಲಿ ಉತ್ಸಾಹವಿತ್ತು. ಮೊದಲಬಾರಿಗೆ ವಚನ ಹೇಳುತ್ತ ಅವರೊಡನೆ ಗಾಣ ತಿರುಗುವಾಗ ಆದ ಅನುಭವವೇ ಬೇರೆ.

ನನ್ನಾಕೆ ತನ್ನ ಆಕಳು, ಕರು ಮತ್ತು ಹೂವಿನ ತೋಟದ ನಿರ್ವಹಣೆಯಲ್ಲಿ ನಿರತಳಾದಳು. ವೇಳೆ ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಮೋನಣ್ಣ ಮತ್ತು ಶಂಕರಕ್ಕ ಕಲಾವಸ್ತು ನಿರ್ಮಿಸುವ ಕಲೆ ಕಲಿಸುವದರಲ್ಲಿ ಲೀನವಾಗಿದ್ದರು. ಶ್ರಿಶೈಲಪ್ಪ ಮತ್ತು ರಾಜಶ್ರೀ ವಚನ ಪ್ರತಿ ಮಾಡುವದರಲ್ಲಿ ಲೀನವಾಗಿಬಿಟ್ಟಿದ್ದರು.

ಶಂಕರಕ್ಕ ಹೇಳಿದ ವಚನ ನಿಜವಾಗಿತ್ತು.

ಬೇಡವೆಂದರೂ ಕುದುರೆ ಸವಾರಿ ಕಲಿಸಿದರು. ಮುಂಜಾನೆ ನಾಯಕ ಬಂದು ನನ್ನನ್ನು ಐದೂ ಹಳ್ಳಿ ನೋಡಲು ಕರೆದುಕೊಂಡು ಹೋಗುತ್ತಿದ್ದ. ಅವೆಲ್ಲ ಈಗ ಕಲಾಕೇಂದ್ರಗಳಾಗಿದ್ದವು. ಅನೇಕ ಕಾಯಕ ಮಾಡುವವರು ಅಲ್ಲಿ ಬಂದು ನೆಲೆಸಿದ್ದರು. ಒಂದು ಊರಿನ ದಾಸೋಹದಲ್ಲಿ ಪ್ರಸಾದ ಸೇವಿಸಿ ನಾಯಕ ತಂಡದೊಡನೆ ಮರಳಿ ಬಂದು ನನ್ನ ಕಾಯಕದಲ್ಲಿ ನಿರತನಾಗುತ್ತಿದ್ದೆ.

ವೀರಭದ್ರಪ್ಪ ಬಂದು ಮೂರು ಹಳೆಯ ಮಂದಿರಗಳ ಜಿರ್ಣೋದ್ಧಾರ ಕೆಲಸ ಪೂರ್ಣವಾಯಿತು ನಾಳೆ ದಾಸೋಹ ಅಲ್ಲಿಯೂ ಪ್ರಾರಂಭವಾಗುವದು ಬರಬೇಕು ಎಂದ.
ನಾಳೆ ಬೇಡ ಈಗಲೇ ನೋಡಿ ಬರೋಣ ಎಂದೆ. ನನ್ನಾಕೆಯೊಡನೆ ಬಂಡಿಯಲ್ಲಿ ಹೊರಟೆ ಜೊತೆಗೆ ಮೊನಣ್ಣ ಮತ್ತು ಶ್ರೀಶೈಲಪ್ಪ ದಂಪತಿಗಳು ತಮ್ಮ ಬಂಡಿಗಳಲ್ಲಿ ಹೊರಟರು. ಮುಂದೆ ವೀರಭದ್ರಪ್ಪ ಮತ್ತು ಯೊಧರಿದ್ದರೆ ಹಿಂದೆ ನಾಯಕ ಮತ್ತು ಸಂಗಡಿಗರಿದ್ದರು ಯವಾಗಲೂ ನೆರಳಾಗುತ್ತಿರುವ ನನ್ನ ತಮ್ಮಂದಿರು ಬಂಡಿಯ ಮಗ್ಗುಲಲ್ಲಿ ಸಾಗಿದ್ದರು.
ಅಣ್ಣ ಬಸವಣ್ಣನ ಕೃಪೆಯಿದ್ದರೆ ಏನಾಗುತ್ತದೆ ಎನಿಸಿದಾಗ
ವಚನ ನೆನಪಾಯಿತು ನನಗರಿವಿಲ್ಲದೇ ರಾಗಬದ್ಧವಾಗಿ ಹಾಡಿದೆ. ಎಲ್ಲರಿಗೂ ಅಚ್ಚರಿ. ನನ್ನವಳು "ನಿಮ್ಮ ದನಿ ತುಂಬಾ ಚನ್ನಾಗಿದೆ. ಯಾವಾಗ ಹಾಡಲು ಕಲಿತಿರಿ? ಎಂದಳು. 'ಎಲ್ಲ ಸಹವಾಸ ದೋಷ" ಎಂದೆ.
"ಈಗೀಗ ನನ್ನ ಮನದಲ್ಲಿ ಹೊಳೆದ ವಿಚಾರಗಳೆಲ್ಲ ನನಗರಿವಿಲ್ಲದೆ ನನ್ನ ನಾಲಿಗೆಯ ಮೇಲೆ ಬಂದು ಬಿಡುತ್ತದೆ. ಯಾಕೋ ನನ್ನ ಮನಸ್ಸು, ಭಾವನೆ, ವಿಚಾರ ಮತ್ತು ಮಾತು ಎಲ್ಲ ಒಂದೇ ಆಗಿವೆ ಎಂದೆನಿಸುತ್ತಿದೆ."
ನಿನ್ನೆ ನಾನು ಕೇಳಿದ ವಚನ ಹೇಳತೀನಿ ಕೇಳರಿ ನಿಮ್ಮ ಮನಸ್ಸಿನ ತೊಳಲಾಟ ಕಡಿಮೆ ಆಗುತ್ತ
ವಚನ ಮುಗಿಯುವಷ್ಟರಲ್ಲಿ ಸುಂದರವಾದ ಭವ್ಯ ಪುರಾತನ ಮಂದಿರ ಬಂದಿತು. ಎಲ್ಲರೂ ಒಳಹೋಗಿ ಅಲ್ಲಿಯ ಪ್ರಶಾಂತವಾದ ವಾತಾವರಣದಲ್ಲಿ ಕಣ್ಮುಚ್ಚಿ ಕುಳಿತೆವು.

**ಮಾಡುವಂತಿರಬೇಕು ಮಾಡದಂತಿರಬೇಕು.**

**ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು.**

**ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು.** / 1043– ಬಸವಣ್ಣ

ವಚನವನ್ನು ಶ್ರೀಶೈಲಪ್ಪ ಮತ್ತು ಜಯಶ್ರೀ ಇಂಪಾಗಿ ಹಾಡಿದಾಗ ನಾವೆಲ್ಲಿದ್ದೇವೆ ಎನ್ನುವದನ್ನು ಮರೆತಿದ್ದೆವು.
ವೀರಭದ್ರಪ್ಪ ನಾವು ಆರು ಜನರನ್ನು ದಾಸೊಹ ನೋಡಲು ಕರೆದುಕೊಂಡು ಹೋದ ಅಲ್ಲಿಯ ಸುವ್ಯವಸ್ತೆ ಕಂಡು ತುಂಬಾ ಚನ್ನಾಗಿದೆ ಎಂದೆ. ನಮ್ಮನ್ನೆಲ್ಲ ಉಗ್ರಾಣಕ್ಕೆ ಕರೆದುಕೊಂಡು ಹೋಗಿ "ಇಲ್ಲೊಂದು ಬಾಗಿಲಿದೆ ಇಲ್ಲಿಂದ ನೇರವಾಗಿ ನೀವಿರುವ ಗುಹೆಯ ಮೇಲಿರುವ ಗುಹೆಗೆ ಇಲ್ಲಿಂದ ಹೋಗಬಹುದು, ನಾವು ಇಲ್ಲಿಂದ ಅಹಾರ ಧಾನ್ಯ ಇತ್ಯಾದಿ ಅಲ್ಲಿಗೆ ಸಾಗಿಸುತ್ತೇವೆ ಅದಕ್ಕೆ ನಿಮ್ಮ ಸಹಮತಿ ಬೇಕು ಎಂದ. ಏಕೆ ಎಂದು ಕೇಳಲಿಲ್ಲ. ಸರಿ ಉತ್ತಮ ಕೆಲಸ ಎಂದೆ. ಆಗ ನೆನಪಾಯಿತು ಇವರು ನಾನು ಈ ಭಾಗದ ಆಡಳಿತಗಾರ ಎಂದು ತಿಳಿದಿದ್ದಾರೆ

ಎಂದು. ವೀರಭದ್ರಪ್ಪ ನಿಮಗೆ ಸರಿ ಎನಿಸಿದ್ದನ್ನು ಮಾಡಿ ಅಣ್ಣ ಬಸವಣ್ಣ ದಾರಿ ತೋರಿಸುತ್ತಾನೆ.
"ಇತ್ತೀಚೆಗೆ ಸಿದ್ದಜ್ಜ ಕಾಣಿಸುತ್ತಿಲ್ಲ" ಎಂದೆ. ಅವರು ಇನ್ನೂ ಕೆಲವು ಮಂದಿರಗಳ ಜೀರ್ಣೋದ್ದಾರ ಮಾಡಿ ದಾಸೋಹ ಪ್ರಾರಂಭ ಮಾಡಲು ಹೋಗಿದ್ದಾರೆ.
ನನ್ನ ಕಾಯಕಕ್ಕೆ ತಡವಾಯಿತು ಮರಳಿ ಹೋಗೋಣ ಎಂದೆ. ಎಲ್ಲರೂ ಮರಳಿ ಹೊರಟೆವು.
ನನ್ನ ಬಂಡಿಯ ಮುಂದೆ ಕುದುರೆಯಲ್ಲಿ ಹೊರಟಿದ್ದ ವೀರಭದ್ರಪ್ಪ ಇಂಪಾಗಿ ಹಾಡಲಾರಂಭಿಸಿದ

**ಒಲೆ ಹತ್ತಿ ಉರಿದರೆ ನಿಲ ಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲ ಬಾರದು**

**ಏರಿ ನೀರುಂಬಡೆ, ಬೇಲಿ ಕೈಯ ಮೇವಡೆ**

**ನಾರಿ ತನ್ನ ಮನೆಯಲ್ಲಿ ಕಳುವಡೆ**

**ತಾಯ ಮೊಲೆವಾಲು ನಂಜಾಗಿ ಕೊಲುವಡೆ**

**ಇನ್ನಾರಿಗೆ ದೂರುವೆ**

**ತಂದೆ ಕೂಡಲಸಂಗಮದೇವ ನೀ ಹುಟ್ಟಿಸಿ ಜೀವನ ಭವದುಃಖಿಯ ಮಾಡಿದ ಬಳಿಕ.**

**ಬಿಡಿಸುವರಾರುಂಟು ?**—ಅಣ್ಣ ಬಸವಣ್ಣ.

ಯಾಕೋ ಈ ವಚನ ಕೇಳುತ್ತ ಕೇಳುತ್ತ ನನ್ನ ಮನದಲ್ಲಿ ಭಯದ ಭಾವನೆ ಮೂಡಿತು ಒಂದು ಕ್ಷಣ. ನನ್ನಾಕೆಗೆ ಹೇಳಿದೆ " ವೀರಭದ್ರಪ್ಪ ಯಾವುದೋ ಘಟನೆಯ ಮುನ್ಸೂಚನೆ ಕೊಡುತ್ತಿದ್ದಾನೆ"
"ನಿವ್ಯಾಕ ಹಾಗಂತೀರಿ ಕಾಯುವ ಬಸವಣ್ಣನಿದ್ದಾನ". ಮನಕ್ಕೆ ಸ್ವಲ್ಪ ಸಮಾಧಾನವಾಯಿತು.

**ಕೊಡುವವ ಮಾನವನೆಂದು ಒಡಲಾಸೆಯ ತೋರದಿರು, ಕೊಡುವವ ಮಾನವನಲ್ಲ.**

**ಕೊಡುವವ ಕೊಂಬುವವ ಮಾನವರ ನಡುವಿಪ್ಪ ಮಹಾತ್ಮ ಸಂಜೀವಂಗೆ ಒಡಲಾಸೆ ತೋರಿ ಬೇಡಿಕೊ.**

**ಜೀವನ ಬುದ್ಧಿಯಿಂದ ನರನನಾಸೆಗೈಯದಿರು. ಆಸೆಗೈದರೆ ಕಾವವರಲ್ಲ , ಕೊಲ್ಲುವವರೂ ಅಲ್ಲ ,**

**ಕೊಡುವವರೂ ಅಲ್ಲ , ಬಿಡುವವರೂ ಅಲ್ಲ . ನಾಯ ಬಾಲವ ನಂಬಿ ಹೊಳೆಯ ಹಾದವರುಂಟೇ ?**

**ವಷಭನ ಬಾಲವ ಪಿಡಿದರೆ ನದಿಯ ತಡಿಯ ಸೇರುವರಲ್ಲದೆ. ನಂಬು ನಂಬು ನಮ್ಮ**

ಪರಮಗುರು ಪಡುವಿಡಿ ಸಿದ್ಧಮಲ್ಲನೆಂಬ

ಮಹಾಭಾಗ್ಯವ ನಂಬಿದರೆ ನಿನಗೆ ಬಡತನವೆ ಆತ್ಮ? / 93

---- ಹೇಮಗಲ್ಲ ಹಂಪ.

ಎಂದು ಶ್ರಿಶೈಲಪ್ಪ ಹಾಡುವ ವಚನ ಮುಗಿಯುವಷ್ಟರಲ್ಲಿ ನಮ್ಮ ಗುಹೆ ಬಂದಿತು. ಕಲ್ಯಾಣದಿಂದ ನಿಯಮಿತವಾಗಿ ಸಾಮಾನುಗಳು ಬರುತ್ತಿದ್ದವು ಮತ್ತು ತಯಾರಾದ ಸಾಮಾನುಗಳು ಹೋಗುತ್ತಿದ್ದವು. ಎಲ್ಲವೂ ಕುಶಲ ಎನ್ನುವ ಮನೋಸ್ಥಿತಿಯಲ್ಲಿ ನಾವಿದ್ದಾಗ ಶಾಂತಪ್ಪ, ಮಾಚಣ್ಣ ಮತ್ತು ಸಿದ್ದಜ್ಜ ವೀರಭದ್ರಪ್ಪನೊಡನೆ ಬಂದದ್ದು ನಮಗೆಲ್ಲ ಖುಷಿತಂದಿತು. ಆದರೆ ಗಂಭಿರರಾಗಿದ್ದ ಅವರು ಮೇಲಿನ ಗವಿಗಳಿಗೆ ಹೋಗಿ ಮರಳಿ ಬಂದು ಕುಳಿತುಕೊಂಡು ನೀರು ಕುಡಿದರು. ಮಾಚಣ್ಣನವರು ಬಹಳ ಗಂಭಿರವಾದ ಯೋಚನೆಯಲ್ಲಿ ಮುಳುಗಿದ್ದರು. ಮೌನ ಮುರಿದು ನಾನು ಕೇಳಿದೆ

**ಗುರುವ:** ಕಲ್ಯಾಣದಲ್ಲಿ ಎಲ್ಲಾ ಕ್ಷೇಮವೇ.

**ಶಾಂತಪ್ಪ:** ಮೇಲ್ನೋಟಕ್ಕೆ ಎಲ್ಲ ಸರಿಯಾಗಿದೆ. ಆದರೆ ಯಾಕೋ ಮದ್ದಿನ ಮನೆಯ ಮೇಲೆ ಕುಳಿತ ಅನುಭವವಾಗುತ್ತಿದೆ.

**ಮಾಚಣ್ಣ:** ನೀವೆಲ್ಲ ತುಂಬಾ ಚನ್ನಾಗಿ ನಿಮ್ಮ ಕೆಲಸ ನಿರ್ವಹಿಸಿದ್ದೀರಿ. ಇನ್ನೂ ಮುಖ್ಯವಾದ ಕೆಲಸಗಳು ಇವೆ ಸಮಯ ಬಂದಾಗ ಅವುಗಳನ್ನು ತಿಳಿಸುವೆ.

**ಶಾಂತಪ್ಪ:** ವಚನಗಳು ಸುರಕ್ಷಿತವಾಗಿರುವದು ಸಮಾಧಾನ ತಂದಿದೆ.

ಇಷ್ಟು ಹೇಳಿ ನಮ್ಮನ್ನೆಲ್ಲ ಕುತೂಹಲದಲ್ಲಿ ಮುಳುಗಿಸಿ ಹೋಗಿಬಿಟ್ಟರು. ಏನಾಯಿತು ಎನ್ನುವ ಪ್ರಶ್ನೆ ಮೂಡಿ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಮೌನಕ್ಕೆ ಶರಣಾದೆವು.

ಅವರನ್ನು ಬೀಳ್ಕೊಟ್ಟು ಬಂದ ವೀರಭದ್ರಪ್ಪ ನಮ್ಮ ಆತಂಕ ಕಂಡು ಅವನೇ ಮಾತಿಗಾರಂಭಿಸಿದ.

**ವೀರಭದ್ರಪ್ಪ:** ಅನುಭವಮಂಟಪದ ಅಧ್ಯಕ್ಷರಾಗಿ ಶರಣರಿಗೆಲ್ಲ ಮಾರ್ಗದರ್ಶನ ಮಾಡುತ್ತಿದ್ದ ಅಲ್ಲಮಪ್ರಭು ಅವರು ಕಲ್ಯಾಣ ಬಿಟ್ಟು ಶ್ರೀಶೈಲಕ್ಕೆ ಹೊರಟು ಹೋದದ್ದು ಶಾಂತಪ್ಪನವರನ್ನು ಚಿಂತೆಗೀಡುಮಾಡಿದೆ.

**ಮೋನಣ್ಣ:** ಅಲ್ಲಮಪ್ರಭು ಕಲ್ಯಾಣ ತೊರೆದರೆ?

**ವೀರಭದ್ರಪ್ಪ:** ಹಾಗೇನಿಲ್ಲ. ಮಳೆಗಾಲ ಮುಗಿದ ಮೇಲೆ ಶರಣರು ಲೋಕಸಂಚಾರ ಆರಂಭಿಸಿ ತಮ್ಮ ಭಕ್ತರೆಲ್ಲರಿಗೆ ದರ್ಶನ ಕೊಟ್ಟು ಶರಣ ತತ್ವಗಳನ್ನು ವಿವರಿಸಿ ಹೇಳುತ್ತಾರೆ. ಈ ಸಲ ಅವರ ಜೊತೆ ಅನೇಕ ಶರಣರು ಹೋಗಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಸಿದ್ಧರಾಮೇಶ್ವರರು ಅವರ ಅನುಯಾಯಿಗಳ ಜೊತೆ ಸೊನ್ನಲಾಪುರಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಹೀಗಾಗಿ ಶಾಂತಪ್ಪನವರಿಗೆ ಅಷ್ಟೇ ಅಲ್ಲ ಶರಣರೆಲ್ಲರಿಗೂ ಬೇಜಾರಾಗಿದೆ.

**ಶ್ರೀಶೈಲಪ್ಪ:** ನೀವು ಹೇಳಿದ ವಿಷಯ ಕೇಳಿ ನನಗೂ ಬೇಜಾರಾಗಿದೆ. ಆದರೆ ಆ ಶರಣರು ಇಷ್ಟು ದಿನ ಕಲ್ಯಾಣದಲ್ಲಿದ್ದದ್ದೇ ನಮ್ಮ ಪುಣ್ಯ.

**ವೀರಭದ್ರಪ್ಪ:** ರಾಜಕುಮಾರ ರಾಯಮುರಾರಿಯ ಅಸಹನೆ ತುಂಬಾ ಹೆಚ್ಚಾಗಿದೆ. ಕೋಟೆ ಕಾಯುವದಕ್ಕಾಗಿ ಅಷ್ಟೇ ಅಲ್ಲ ನಗರದ ಬೀದಿ ಬೀದಿಗಳಲ್ಲಿ ಯೊಧರ ಆಯೊಜನೆ ಮಾಡುತ್ತಿದ್ದಾನೆ ಅವರ ನಾಯಕನನ್ನಾಗಿ ತನ್ನ ನಿಷ್ಠರನ್ನು ನಿಯಮಿಸುತ್ತಿದ್ದಾನೆ. ಶರಣರ ತತ್ವಗಳ ಒಲವಿರುವವರನ್ನು ದೂರ ಕಳಿಸಿಕೊಡುತ್ತಿದ್ದಾನೆ. ಸಣ್ಣ ಸಣ್ಣ ಅಪರಾಧ ಹೊರಿಸಿ ನಿರಪರಾಧಿ ಶರಣರಿಗೆ ಶಿಕ್ಷಿಸಿ ಜನರಲ್ಲಿ ಹೆದರಿಕೆ ಹುಟ್ಟಿಸುತ್ತಿದ್ದಾನೆ. ಕಿರುಕಳದಿಂದ ಬೇಸತ್ತು ಕೆಲವರು ಕಲ್ಯಾಣ ತೊರೆದಿದ್ದಾರೆ.
ಅವನನ್ನು ತುಂಬಾ ಕೆರಳಿಸಿರುವ ವಿಷಯ ತನ್ನ ಆಪ್ತ ಮಂತ್ರಿ ಮತ್ತು ಬಸವ ಅನುಯಾಯಿಗಳ ಬದ್ದ ವಿರೊಧಿಯಾದ ಮಧುವರಸ ಮತ್ತು ಆತನ ಗೆಳೆಯರು ಶರಣರಾಗಿ ವಚನ ರಚಿಸಲು ಪ್ರಾರಂಭಿಸಿದ್ದು.
ತನ್ನ ಬಲ ಕುಗ್ಗಿದೆ ಶರಣರು ಪ್ರಭಲರಾಗುತ್ತಿದ್ದಾರೆ ಎಂದೆನಿಸಿರುವ ರಾಜಕುಮಾರನ ನಡೆ ನುಡಿಯಲ್ಲಿ ಒರಟುತನ ಕಾಣಿಸತೊಡಗಿದೆ.
ಮಹಾರಾಜರನ್ನು ತೀರ್ಥಯಾತ್ರೆಗೆ ಕಳಿಸಲು ಒಪ್ಪಿಸಿ ಅವರನ್ನು ಕಲ್ಯಾಣದಿಂದ ದೂರ ಕಳಿಸಲು ಯೋಜನೆ ರೂಪಿಸಿದ್ದಾನೆ. ಅಣ್ಣ ಬಸವಣ್ಣನವರು ಕಲ್ಯಾಣದಲ್ಲಿರುವವರೆಗೆ ತನಗೆ ಅಧಿಕಾರ ದಕ್ಕುವದಿಲ್ಲ ಎನ್ನುವದು ಗೊತ್ತಾಗಿದೆ. ಅಪರಿಚಿತ ಸಾಮಾನ್ಯ ನಾಗರಿಕರಾದ ನಿಮ್ಮ ಬೆಂಬಲಕ್ಕೆ ನಿಂತ ಜನಸಮೂಹ ನೋಡಿದ ಅವನಿಗೆ ಬಸವಣ್ಣವರ ನಿಜವಾದ ಶಕ್ತಿ ಪರಿಚಯವಾಗಿದೆ. ಅರಮನೆಯಲ್ಲಿ ಅಧಿಕಾರಕ್ಕಾಗಿ ನಡೆದಿರುವ ಕಲಹ ಅವನನ್ನು ದಿಕ್ಕೆಡಿಸಿದೆ. ಹಾಗಾಗಿ ಅವನು ಶರಣರಿಂದಾದ ಒಂದು ತಪ್ಪು ಸಿಕ್ಕರೆ ಸಾಕು ಅದನ್ನೇ ದೊಡ್ಡದು ಮಾಡಿ ತಪ್ಪೆಲ್ಲ ಶರಣರದೇ ಎಂದು ಬಿಂಬಿಸಿ ರಾಜನಾಗುವ ಹವಣಿಕೆಯಲ್ಲಿದ್ದಾನೆ.
**ನನ್ನಾಕೆ:** ಅಣ್ಣಾ ಶರಣ ಅಂದರೆ ಯಾರು. ಅವನನ್ನು ಗುರುತಿಸುವದು ಹೇಗೆ?
**ಜಯಶ್ರೀ:** ತುಂಬಾ ಮಹತ್ವದ ಪ್ರಶ್ನೆ ಕೇಳಿದಿ ಅಕ್ಕ. ಈ ಪ್ರಶ್ನೆಗೆ ತಮ್ಮ ವಚನಗಳಲ್ಲಿ ಎಲ್ಲ ಶರಣರು ಉತ್ತರಿಸಿದ್ದಾರೆ. ಅತೀ ಹೆಚ್ಚು ವಚನ ರಚನೆಯಾದದ್ದೇ ಈ ತತ್ವ ವಿವರಿಸುವದಕ್ಕಾಗಿ. ನೀಲಮ್ಮನವರು ವಿವರಿಸಿದ ವಚನ ಇಲ್ಲಿದೆ.

**ಕಾಮದ ಹಂಗಿಗನಲ್ಲ ಶರಣ ಮೋಹದ ಇಚ್ಛೆಯವನಲ್ಲ ಶರಣ**

**ಉಭಯದ ಸಂಗದವನಲ್ಲ ಶರಣ ಪ್ರಾಣದ ಕುರುಹಿಲ್ಲದ ಶರಣಂಗೆ ಪ್ರಸಾದದ ನೆಲೆಯಿಲ್ಲವಯ್ಯ.**

**ಎನಗೇನೂ ತಲೆದೋರದೆ ಮುಸುಕಿಟ್ಟು ಬಸವಳಿದೆನಯ್ಯಾ ಸಂಗಯ್ಯ ನಿಮ್ಮಲ್ಲಿ.** / 139--ನೀಲಾಂಬಿಕಾದೇವಿ.

**ಶ್ರೀಶೈಲಪ್ಪ:** ಅಣ್ಣ ಬಸವಣ್ಣನವರು ಶರಣರಲ್ಲಿರಬೇಕಾದ ಗುಣಗಳ ವಿವರವನ್ನು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

ಲೋಕದಿಚ್ಛೆಯ ನಡೆವವನಲ್ಲ, ಲೋಕದಿಚ್ಛೆಯ ನುಡಿವವನಲ್ಲ,
ಲೋಕವಿರಹಿತ ಶರಣ, ಶರಣವಿರಹಿತ ಲೋಕವೆಂಬುದು
ಕಾಣಬಂದಿತ್ತು ನೋಡಾ.
ಲಿಂಗವೆ ಗೂಡಾಗಿ, ಜಂಗಮವೆ ಸ್ವಾಯತವಾಗಿ
ಪ್ರಸಾದವೆ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ ನೋಡಯ್ಯಾ.
ಕೂಡಲಸಂಗಮದೇವಾ, ನಿಮ್ಮ ಶರಣ ಚೆನ್ನಬಸವಣ್ಣಂಗೆ
ನಮೋ ನಮೋ ಎಂಬೆನು. / 1144---ಅಣ್ಣ ಬಸವಣ್ಣ
ಉಪಮಿಸಬಾರದ ಉಪಮಾತೀತರು,
ಕಾಲಕರ್ಮರಹಿತರು, ಭವವಿರಹಿತರು,
ಕೂಡಲಸಂಗಮದೇವಾ, ನಿಮ್ಮ ಶರಣರು. / 291 ---ಅಣ್ಣ ಬಸವಣ್ಣ
ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ಇಂತೀ ಪಂಚೇಂದ್ರಿಯಂಗಳಲ್ಲಿ ಬ್ರಹ್ಮಚಾರಿಯಾಗಿ,
ಕೂಡಲಸಂಗಮದೇವರಲ್ಲಿ ಎನ್ನನಾಗುಮಾಡಲಿಕೆ
ಬ್ರಹ್ಮಚಾರಿಯಾದರು ಪ್ರಭುದೇವರು. / 1223--ಅಣ್ಣಾ ಬಸವಣ್ಣಾ

**ಮೋನಣ್ಣ:** ಈ ವಚನಗಳು ಶರಣರ ವಿವರಣೆ ಕೊಡುವದು ನಿಜ. ಆದರೆ ವಾಸ್ತವದಲ್ಲಿ ಕಠಿಣ ಪ್ರಸಂಗದಲ್ಲಿ ಯೋಧರು ಕಲ್ಯಾಣದಲ್ಲಿಯ ಶರಣರನ್ನು ಅದು ಹೇಗೆ ಗುರುತಿಸುತ್ತಾರೆ.

**ವೀರಭದ್ರಪ್ಪ:** ನೀವು ಕೇಳುವದು ಸರಿಯಾಗಿದೆ. ಈಗ ಇಲ್ಲಿಯ ಬೀದಿ ಬೀದಿಯಲ್ಲಿ ಕಾವಲಿಗಿರುವವರಲ್ಲಿ ಬಹಳಷ್ಟು ಯೊಧರು ಕಲ್ಯಾಣಕ್ಕೆ ಹೊಸತಾಗಿ ಬಂದವರು. ಆದರೆ ಅವರ ನಾಯಕನಾಗಿ ನೇಮಿಸ್ಪಲ್ಪಟ್ಟವರು ಕಲ್ಯಾಣದಲ್ಲಿಯೇ ಹುಟ್ಟಿ ಬೆಳೆದವರು ಅವರಿಗೆ ಇಲ್ಲಿಯ ಜನರ ಪೂರ್ಣ ಪರಿಚಯವಿದೆ. ಬಿಡುವಿನ ವೇಳೆಯಲ್ಲಿ ತಂದೆ ತಾಯಿ ಕುಟುಂಬ ಸಮೇತ ಅನುಭವ ಮಂಟಪಕ್ಕೆ ಬಂದವರು. ಇಲ್ಲಿಯ ವಿಚಾರಗಳಿಗೆ ಮಾರುಹೋದವರು. ಆದರೆ ಕರ್ತವ್ಯದ ಮಾತು ಬಂದಾಗ ಯೋಧರಿಗೆ ಮೇಲಿನವರ ಆದೇಶ ಪಾಲಿಸುವದು ಅನಿವಾರ್ಯ. ಯುವರಾಜನಿಗೆ

ಭಯವಿರುವದೇ ಶರಣರ ಒಲವಿರುವ ಇವರು ತನ್ನ ಪರವಾಗಿ ನಿಲ್ಲುತ್ತಾರೋ ಇಲ್ಲವೋ ಎನ್ನುವದೇ ಅವನ ಸಮಸ್ಯೆ. ಅದಕ್ಕಾಗಿ ಹೊಸಬರಿಗೆ ಕಲ್ಯಾಣದ ಪರಿಚಯವಾದಮೇಲೆ ಹಳಬರನ್ನೆಲ್ಲ ಬೇರೆಕಡೆ ಸಾಗಿಸುವ ಯೋಜನೆ ಇದೆ. ಈಗ ನಿಮ್ಮ ಜೊತೆಗಿರುವ ನಾವೆಲ್ಲ ಹೊರಗೆ ಹೋಗಬೇಕಾಗುತ್ತದೆ. ನಾಳೆಯಿಂದ ಕೆಲ ಹೊಸಬರು ನಮ್ಮ ಜೊತೆ ಸೇರಿಕೊಳ್ಳುತ್ತಾರೆ. ಅಷ್ಟರಲ್ಲಿ ನಮ್ಮೆಲ್ಲ ಕೆಲಸ ಮುಗಿದಿದೆ. ಇನ್ನೇನಿದ್ದರೂ ಕಾಯುವ ಕೆಲಸ. ಮೇಲೆ ಹೋಗುವ ಬಾಗಿಲೂ ಯಾವುದೇ ಸಂದರ್ಭದಲ್ಲಿ ಗುರುವ ಅವರ ಅನುಮತಿ ಇಲ್ಲದೆ ತೆಗೆಯಬೇಡಿ. ನಾವಿನ್ನು ನಿಮಗೆ ಅಪರಿಚಿತರು. ಇಷ್ಟು ಹೇಳಿ ಎದ್ದು ಬಿರಬಿರನೆ ನಡೆದುಬಿಟ್ಟ.

**ಪರಮವಿಭೂತಿಯ ಹಣೆಯಲ್ಲಿ ಧರಿಸಿ,**

**ಕೊರಳಲ್ಲಿ ರುದ್ರಾಕ್ಷಿಯ ಧರಿಸಿ,**

**ಗುರು ಕೊಟ್ಟ ಲಿಂಗವ ಕರದಲ್ಲಿ ಧರಿಸಿ,**

**ಮರಳಿ ಮತ್ತೆ ಧರೆಯ ಪ್ರತಿಷ್ಠೆಗೆರಗುವ**

**ನರಕಿಜೀವಿಗಳನೇನೆಂಬೆನಯ್ಯಾ, ಕಲಿದೇವಯ್ಯ.** / 224

—ಮಡಿವಾಳ ಮಾಚಿದೇವ

ಎನ್ನುವ ವಚನ ಶ್ರೀಶೈಲಪ್ಪ ಮತ್ತು ಜಯಶ್ರೀ ಹಾಡುವದು ಬಹಳ ಹೊತ್ತು ಕೇಳಿಸುತ್ತಿತ್ತು.

ಇಂದು ಮತ್ತೆ ಗಾಣ ತಿರುಗಲಾರಂಭಿಸಿತು. ಮನದಲ್ಲಿ ಮೂಡಿದ ಒಂದೇ ಪ್ರಶ್ನೆ. ನಾನು ಶರಣನೇ? ಒಮ್ಮೆಯೂ ನನ್ನ ಬಗೆಗೆ ವಿಚಾರಿಸದ ನನಗೆ ಈ ಪ್ರಶ್ನೆ ಹೊಸತು. ನಮ್ಮೂರಲ್ಲಿ ನನಗೆ ಗುರಲಿಂಗ, ಗುರಲಿಂಗಪ್ಪ, ಗುರಪ್ಪ, ಗುರಣ್ಣ, ಅಥವಾ ಗುರುವ ಎಂದು ಕರೆದಾಗ ಆತ್ಮೀಯತೆಯ ಕರೆಯೆನಿಸಿ ಓಗೊಡುತ್ತಿದ್ದೆ. ಆದರೆ ಇಲ್ಲಿ ಶರಣ ಗುರುವ ಎಂದಾಗ ಯಾರನ್ನೋ ಕೂಗುತ್ತಿದ್ದಾರೆ ಎಂದು ಸುಮ್ಮನಾಗುತ್ತಿದ್ದೆ. ಅವರು ಕರೆಯುತ್ತಿರುವದು ನನ್ನನ್ನೇ ಎಂದಾಗ ಓಗೊಡಲು ಸಂಕೋಚವಾಗುತ್ತದೆ. ಮೊದಲು ನಾಯಕ ಎನ್ನುವ ಪದವಿಯ ಹಾಗೇ ಇದು ಮಹರಾಜ ದಯಪಾಲಿಸಿದ ಪದವಿ ಎಂದೇ ತಿಳಿದಿದ್ದೆ. ಅದರ ಬಗ್ಗೆ ವಿಚಾರಿಸಲು ವೇಳೆಯೇ ಸಿಕ್ಕಿರಲಿಲ್ಲ. ಆದರೆ ಇಂದು ಶರಣರನ್ನು ಕಲ್ಯಾಣದಿಂದ ಹೊರಹಾಕುವ ಯೋಜನೆಯ ಅಂಗವಾಗಿ ರಾಜಕುಮಾರ ಯೋಧರನ್ನು ನಿಯಮಿಸಿದ್ದಾನೆ ಎಂದಾಗ ಮನದಲ್ಲಿ ಮೂಡಿದ ಪ್ರಶ್ನೆ ಪ್ರಸ್ತುತವೆನಿಸಿತು.

ನಾನು ಗುರುವನಿಂದ ಶರಣ ಗುರುವ ಆಗಿದ್ದು ಎಂದು?.

ಅಕ್ಕ ನಾಗಮ್ಮ, ಗಂಗಾಂಬಿಕದೇವಿ ಮತ್ತು ಬಸವಣ್ಣನವರ ದರ್ಶನವಾದ ಕ್ಷಣವೇ ನನ್ನಲ್ಲಿ ಬದಲಾವಣೆ ಆಯಿತೇ?

ಯುವರಾಜನ ಸಂಚಿನಿಂದ ಪಾರಾದ ಮೇಲೆ ಶರಣನಾದೆನೆ? ಇದುವರೆಗೆ ನಾನು ಮಾಡಿದ್ದೇನು? ದಾಸೋಹದಲ್ಲಿ ಪ್ರಸಾದ, ಉಳಿದ ವೇಳೆಯಲ್ಲಿ ಗಾಣ ತಿರುಗಿಸುವದು, ಸಾಯಂಕಾಲ ಅಕ್ಷರಾಭ್ಯಾಸ ಮತ್ತು ವಚನ ಅಧ್ಯಯನ, ರಾತ್ರಿ

ದಾಸೋಹದಲ್ಲಿ ಪ್ರಸಾದ ಮತ್ತು ನಿದ್ದೆ. ನಾನಿರುವದು ಹೇಗೆ?. ಹಣೆಯಲ್ಲಿ ವಿಭೂತಿಯಿಲ್ಲ, ಕೊರಳಲ್ಲಿ ರುದ್ರಾಕ್ಷಿಯಿಲ್ಲ, ಕೊರಳಲ್ಲಿ ಲಿಂಗವಿಲ್ಲ, ಪೂಜಾವಿಧಾನ ಗೊತ್ತಿಲ್ಲ, ವಚನಗಳ ಅರಿವಿಲ್ಲ, ಮೈಮೇಲೆ ಕಾವಿಯಿಲ್ಲ ಹಾಕಿರುವದು ಕಲಾಕಾರರು ಪ್ರೀತಿಯಿಂದ ಕೊಟ್ಟ ಕೌದಿಯ ಬಟ್ಟೆಯ ತುಣಕು ಮತ್ತು ಕಣ್ಣುಮುಚ್ಚಿ ಕುಳಿತಾಗ ಮೈಮರೆಯುವ ರೋಗ ಬೇರೆ. ಅದು ಹೇಗೆ ನಾನು ಶರಣ?. ಇಲ್ಲಿರುವ ಎಲ್ಲರೂ ಇರುವದು ಹೀಗೇಯೆ ಹಾಗಾಗಿ ಅವರೆಲ್ಲ ಶರಣರೇ?. ಉತ್ತರ ಹೊಳೆಯಲಿಲ್ಲ ಶೀಶೈಲಪ್ಪನನ್ನು ಕೇಳಿದರಾಯ್ತು ಎಂದು ಸಮಾಧಾನ ಪಟ್ಟುಕೊಂಡೆ.

ಕೆಲವು ದಿನಗಳು ಕಳೆದರೂ ಅನನೊಡನೆ ಮಾತನಾಡಲಾಗಲಿಲ್ಲ. ಎಂದಿನಂತೆ ಕಾಯಕಮುಗಿಸಿ ಮರಳಿಬಂದಾಗ ಶ್ರಿಶೈಲಪ್ಪ ಒಬ್ಬರೊಡನೆ ಮಾತನಾಡುತ್ತ ಕುಳಿತುಕೊಂಡಿದ್ದ. ನಾನವರಿಗೆ ಶರಣು ಶರಣಾರ್ಥಿ ಹೇಳಿ ಕುಳಿತುಕೊಂಡೆ. ಅವರು ಪ್ರತಿಯಾಗಿ ಶರಣಾರ್ಥಿ ಹೇಳಿದರು. ಎಲ್ಲರೂ ಬಂದು ಅಲ್ಲಿ ಕುಳಿತುಕೊಂಡರು.

**ಶ್ರೀಶೈಲಪ್ಪ:** ಇವರು ಗುಂಡಪ್ಪ ಶರಣರು ಕಲ್ಯಾಣದಿಂದ ಇದೀಗ ಬಂದಿದ್ದಾರೆ.

**ಗುರುವ:** ಕಲ್ಯಾಣದ ಯಾವ ಸಮಾಚಾರಗಳು ಗೊತ್ತಾಗಲಿಲ್ಲ.

**ಗುಂಡಣ್ಣ:** ಬಹಳ ಸಮಾಧಾನಕರವಾದ ಸಂಗತಿಗಳಾವವೂ ಇಲ್ಲ. ಶಿವಯೋಗಿ ಸಿದ್ದರಾಮೇಶ್ವರ ಅವರು ಕಲ್ಯಾಣದಿಂದ ಹೊರಟು ಹೋದರು. ಈ ಸಲ ಅವರ ಜೊತೆ ಬಹಳಷ್ಟು ಶರಣರು ಹೋದರು. ಉತ್ತರದಿಂದ ಬಂದ ಶರಣರು ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ನಾಡಿಗೆ ಮರಳಿದರು. ಅನುಭವ ಮಂಟಪದ ಜವಾಬ್ದಾರಿ ಹೊತ್ತಿದ್ದ ಚನ್ನಬಸವಣ್ಣನವರು ಸಧ್ಯಕ್ಕೆ ಅನುಭವಮಂಟಪದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಶ್ರಿಶೈಲಪ್ಪ:** ಯುವಕರೂ, ಉತ್ಸಾಹಿಗಳೂ ಆದ ಅವರು ಅನುಭವ ಮಂಟಪವನ್ನು ಸರಿಯಾದ ದಿಕ್ಕಿನಲ್ಲಿ ಸಾಗಿಸಿಕೊಂಡು ಹೋಗುವದರಲ್ಲಿ ಯಾವ ಸಂದೇಹವೂ ಇಲ್ಲ.

**ಗುಂಡಣ್ಣ:** ಅದೇನೋ ನಿಜ. ಆದರೆ ಈಗ ಬಹಳ ಜಟಿಲವಾದ ಸಮಸ್ಯೆಯೊಂದು ಎದುರಾಗಿದೆ.

**ಜಯಶ್ರೀ:** ಅನುಭವ ಮಂಟದಲ್ಲಿ ಶರಣರು ಬಗೆಹರಿಸಲಾಗದ ಸಮಸ್ಯೆ ಯಾವುದು?

**ಗುಂಡಣ್ಣ:** ಮಧುವರಸರು ನಿನ್ನೆ ತಮ್ಮ ಮಗಳು ಲಾವಣ್ಯವತಿಯ ಮದುವೆಯನ್ನು ಹರಳಯ್ಯನವರ ಪುತ್ರ ಶೀಲವಂತನಿಗೆ ಜೊತೆ ಮಾಡಲು ಅನುಭವಮಂಟಪದಲ್ಲಿ ಪ್ರಸ್ತಾಪಿಸಿ ಎಲ್ಲರ ಅನುಮತಿ ಕೇಳಿದರು. ಹರಳಯ್ಯನವರೂ ತಮ್ಮ ಸಮ್ಮತಿ ಇದೆ ಎಂದು ತಿಳಿಸಿದರು. ಈ ವಿಚಾರವಾಗಿ ನಾಳೆ ಎಲ್ಲ ಶರಣರ ಸಭೆ ಕರೆಯಲಾಗಿದೆ ಮತ್ತು ಅನುಭವ ಮಂಟಪದಲ್ಲಿ ಚರ್ಚೆ

ನಡೆಯಲಿದೆ. ಈಗಾಗಲೇ ಈ ವಿಷಯ ಕಲ್ಯಾಣದಲ್ಲಿ ಬೆಂಕಿಯ ಜ್ವಾಲೆಯ ಹಾಗೆ ಹಬ್ಬುತ್ತಿದೆ.

**ಶ್ರಿಶೈಲಪ್ಪ:** ಏನು ಮಧುವರಸರು ಹರಳಯ್ಯನವರ ಜೊತೆ ಸಂಬಂಧ ಬೆಳೆಸುವದಾಗಿ ಹೇಳಿದರೇ?

**ನನ್ನಾಕೆ:** ಇಬ್ಬರ ತಾಯಿ ತಂದೆ ಮದುವೆಗೆ ಒಪ್ಪಿಗೆ ಕೊಟ್ಟಮೇಲೆ ಸಮಸ್ಯೆ ಏನು ಇದೆ? ಹುಡುಗ ಹುಡುಗಿಗೆ ಮದುವೆಯಾಗಲು ಮನಸ್ಸಿಲ್ಲವೇ?

**ಗುಂಡಣ್ಣ:** ಅವರಿಬ್ಬರ ಸಮ್ಮತಿಯ ಮೇರೆಗೆ ಮದುವೆಯ ನಿರ್ಣಯವಾಗಿದೆ.

**ನನ್ನಾಕೆ:** ಮನೆಯ ಎಲ್ಲರೂ ಒಪ್ಪಿದ ಮೇಲೆ ಸಮಸ್ಯೆ ಏನು?

**ಜಯಶ್ರೀ:** ಅಕ್ಕ ಇಲ್ಲಿ ಸಮಸ್ಯೆ ಅವರಿದ್ದ ಪೂರ್ವಾಶ್ರಮದ ಧರ್ಮದ್ದು.

**ಶ್ರೀಶೈಲಪ್ಪ:** ಈ ಸಮಾಜದಲ್ಲಿ ಜಾತಿವ್ಯವಸ್ಥೆ ಮನೆಮಾಡಿದೆ, ಉಚ್ಚಕುಲ, ನೀಚಕುಲ ಎನ್ನುವ ಬೇಧಭಾವ ಎಲ್ಲರ ಮನೆಯಾಳದಲ್ಲಿ ಆಳವಾಗಿ ಬೇರೂರಿದೆ. ಅದನ್ನ ನಿವಾರಿಸಲು ಎಲ್ಲ ಶರಣರು ಸತತ ಪ್ರಯತ್ನ ಪಟ್ಟಿದ್ದಾರೆ. ಆದರೂ ಪೂರ್ಣ ಸಫಲವಾಗಿಲ್ಲ. ಸಾವಿರಾರು ವರ್ಷಗಳಿಂದ ಬೇರೂರಿರುವ ನಂಬಿಕೆಗಳನ್ನು ಕೆಲವು ವರ್ಷಗಳಲ್ಲಿ ಮರೆಮಾಡಲಾಗುವದಿಲ್ಲ ಮತ್ತು ಬದಲಿಸಲಾಗುವದಿಲ್ಲ.

**ನನ್ನಾಕೆ:** ನಮ್ಮೂರಾಗ ಒಬ್ಬ ಕೇರಿಯ ಸಣ್ಣಹುಡುಗ ಓಡತ ಬಂದು ಮಡಿಲೇ ನೀರು ತರುವ ಕಾವೇರಮ್ಮನಿಗೆ ಹಾಯ್ದು ಬಿಟ್ಟಿದ್ದ. ಅವಾಗ ಆಕಿ ಪೈಕಿ ಮಂದಿ ಬಂದ ಆ ಹುಡುಗಗ ಹೊಡೆಯಾಕಹತ್ತಿದರು ಈ ವಿಷಯ ಗೊತ್ತಾಗಿ ಆ ಹುಡುಗನ ಕಡೆ ಮಂದಿ ಬಂದು ಅವರನ್ನ ಬಡಿಯಾಕಹತ್ತಿದರು. ಅವರ ನಡುವಿನ ಜಗಳ ದೊಡ್ಡವರು ಕೂಡಿಕೊಂಡು ಬಿಡಿಸಿದರು ಅಷ್ಟರೊಳಗ ಅಲ್ಲಿ ಅನೇಕರ ತಲಿ ಒಡದು ರಕ್ತ ಚಲ್ಲಾಡಿತ್ತು. ಈಗಲೂ ಒಬ್ಬರ ಕಂಡರ ಇನ್ನೊಬ್ಬರಿಗಾಗೊದಿಲ್ಲ. ಬಡಿಸಿಕೊಂಡ ಹುಡುಗ ಈಗ ದೊಡ್ಡವನಾಗ್ಯಾನ ಆದರೂ ಅವರ ನಡುವಿನ ಮನಸ್ತಾಪ ಕಮ್ಮಿಯಾಗಿಲ್ಲ.

**ಜಯಶ್ರೀ:** ಒಂದು ವೇಳೆ ಆ ಹುಡುಗ ಮತ್ತು ಕಾವೇರಮ್ಮನ ಮಗಳು ಪ್ರೀತಿ ಮಾಡಿ ಮದುವಿ ಆಗತೀವಿ ಅಂದರ ನಿಮ್ಮೂರಾಗ ಏನಾಗತ್ಯೆತಿ?

**ನನ್ನಾಕೆ:** ಆ ಹುಡುಗನ ಮನೆಯವರು ಮತ್ತು ಕಾವೇರಮ್ಮನ ಮನೆಯವರು ಒಪ್ಪಿದರೂ ಉಳಿದವರು ಸುಮ್ಮನಿರತಾರೇನೂ?. ಊರ ತುಂಬ ಜಗಳ ಆಗತ್ಯೆತಿ, ರಕ್ತದ ಹೊಳಿ ಹರೀತ್ಯೆತಿ. ಅದನ್ನ ಯಾರ ಕಡಿಯಿಂದ ತಡಿಯಾಕಾಗಲ್ಲ.

**ಜಯಶ್ರೀ:** ಇಲ್ಲಿ ಇರುವ ಸಮಸ್ಯೆಯೂ ಇದೇ. ಮಧುವರಸರು ಉಚ್ಚಕುಲದಲ್ಲಿ ಹುಟ್ಟಿ ಮಂತ್ರಿಯಾಗಿದ್ದವರು. ಸಂಪ್ರದಾಯವಾದಿಗಳ ಬೆಂಬಲದಿಂದ ಬಸವಣ್ಣನವರ ತತ್ವಗಳನ್ನು ವಿರೋಧಿಸಿದವರು. ಅದರಲ್ಲೂ ಹರಳಯ್ಯನಂತಹ ಶರಣರು ಸ್ವಾವಲಂಬಿಗಳಾಗಿ ತಲಿಎತ್ತಿ ನಡೆಯುವದನ್ನು ಸಹಿಸದವರು. ಅವರೆಲ್ಲ ನೀಚಜಾತಿಯವರು ತಮ್ಮ ಸೇವೆಗಾಗಿ ಹುಟ್ಟಿದವರು ಎಂದು ನಂಬಿದವರು ಮತ್ತು ಅದೇ ರೀತಿ ಪ್ರಚಾರ ಮಾಡಿ ದ್ವೇಷ ಬಿತ್ತಿದವರು. ಅವರ ಬೆನ್ನಿಗೆ ಯುವರಾಜ

ಮತ್ತು ಆ ಊರಲ್ಲಿಯ ಸಂಪ್ರದಾಯವಾದಿಗಳ ಬೆಂಬಲ ಇತ್ತು. ಯುವರಾಜ ಈ ತರಹದ ವ್ಯಕ್ತಿಗಳನ್ನು ಮುಂದಿಟ್ಟುಕೊಂಡು ರಾಜನಾಗಲು ಪ್ರಯತ್ನಿಸುತ್ತಿದ್ದ. ಇನ್ನು ಹರಳಯ್ಯನವರು ತಮ್ಮ ಕಾಯಕವನ್ನು ನಿಷ್ಟೆಯಿಂದ ಮಾಡುತ್ತ ಅಣ್ಣ ಬಸವಣ್ಣನವರಿಗೆ ಆತ್ಮೀಯರಾಗಿದ್ದವರು. ಹರಳಯ್ಯನವರು ಹಿರಿಯರು ಎಲ್ಲರಿಗೂ ಅಚ್ಚುಮೆಚ್ಚು.

**ಗುಂಡಣ್ಣ:** ಮಧುವರಸರ ಮನಪರಿವರ್ತನೆಯಾಗಿ ಶರಣ ತತ್ವಗಳಿಗೆ ಮಾರುಹೋಗಿ ಶರಣರಾದದ್ದು ಒಂದು ದೊಡ್ಡ ಪವಾಡ. ಅದ್ರಲ್ಲೂ ಅವರು ಹರಳಯ್ಯನವರ ನಡೆ ನುಡಿ ಅವರ ಮಗ ಶೀಲವಂತನ ಆದರ್ಶ ಬದುಕು ನೋಡಿ ತಮ್ಮ ಮಗಳಿಗೆ ಇವನೇ ಯೋಗ್ಯ ವರ ಎಂದು ನಿರ್ಧರಿಸಿದ್ದು ಇನ್ನೊಂದು ಪವಾಡ.

**ಶ್ರೀಶೈಲಪ್ಪ:** ಇದು ಶರಣರಿಗೊಂದು ಪರೀಕ್ಷಾ ಕಾಲ. ತಮ್ಮ ತತ್ವ ಸಿದ್ಧಾಂತಗಳನ್ನು ಸಮಾಜದ ವಿರೋಧದ ನಡುವೆಯೂ ಅನುಷ್ಠಾನ ಗೊಳಿಸಲೇಬೇಕಾದ ಅನಿವಾರ್ಯತೆ. ಸಮಾಜ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವದೇ ಮುಖ್ಯ.

**ಗುಂಡಣ್ಣ:** ಯುವರಾಜ ಈಗಾಗಲೇ ಸಂಪ್ರದಾಯವಾದಿಗಳಿಗೆ ಅಪಪ್ರಚಾರ ಮಾಡಲು ಸೂಚಿಸಿದ್ದಾನೆ. ತನ್ನ ಬೆಂಬಲ ಅವರಿಗೆ ಕೊಟ್ಟು ಪರಸ್ಥಿತಿ ವಿಕೋಪಕ್ಕೆ ಹೊಗುವ ಹಾಗೆ ನೋಡಿಕೊಳ್ಳುತ್ತಾನೆ. ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾನೆ.

**ಶ್ರಿಶೈಲಪ್ಪ:** ಧರ್ಮದ್ರೋಹವಾಗುತ್ತದೆ ಎನ್ನುವ ದೂರು ಮಹಾರಾಜರ ಮುಂದೆ ಹೋಗುವದು. ಇಲ್ಲಿ ಮಹಾರಾಜರ ಪಾತ್ರ ಬಹಳ ಮುಖ್ಯವಾಗುತ್ತದೆ. ಅಣ್ಣ ಬಸವಣ್ಣನವರ ಮೇಲಿದ್ದ ಗೌರವ, ಶರಣರ ತತ್ವಗಳ ಬಗ್ಗೆ ಒಲವು, ರಾಜಕುಮಾರನ ಕುತಂತ್ರ, ಸಂಪ್ರದಾಯವಾದಿಗಳ ಒತ್ತಾಸೆ ಇವುಗಳಲ್ಲಿ ಯಾವುದನ್ನು ಆರಿಸಿಕೊಳ್ಳುತ್ತಾರೆ ಎನ್ನುವದು ಪ್ರಮುಖವಾಗುತ್ತದೆ.

**ಗುಂಡಣ್ಣ:** ಅದಕ್ಕಾಗಿಯೇ ಈ ಸಮಯದಲ್ಲಿ ಅವರನ್ನು ಯಾತ್ರೆಗೆ ಕಳಿಸುವ ಯೊಜನೆ ರೂಪಿತವಾಗುತ್ತದೆ. ಈಗ ನಾವು ಜಾಗರೂಕತೆಯಿಂದ ವಚನಗಳ ಮತ್ತು ಶರಣರ ರಕ್ಷಣೆ ಮಾಡಬೇಕಾಗಿದೆ. ನೀವು ಆ ಕಾರ್ಯ ಇಂದೇ ಪೂರ್ಣಮಾಡಿ ನಾನಿನ್ನು ಬರುತ್ತೇನೆ.

ಅವರು ಹೋದಮೇಲೆ ನಾವೆಲ್ಲಾ ದಿಕ್ಕುತಿಳಿಯದೇ ಕುಳಿತೆವು ಸ್ವಲ್ಪ ಹೊತ್ತು.

## ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ

ಗಮನಿಸಿ:

ಧರ್ಮ ಪರಿವರ್ತನೆಗೂ ಹಾಗೂ ಆಚಾರ ವಿಚಾರ ಪರಿವರ್ತನೆಗೂ ಇರುವ ವ್ಯತ್ಯಾಸ ವಿವರಣೆ ಇಲ್ಲಿದೆ.

ಬರೆಯಲು ಪ್ರಾರಂಭದಲ್ಲಿಯೇ ವಿಘ್ನ.

ಬೆಳೆದ ಹೂವಿನ ಗಿಡ ನೋಡಲು ನನ್ನವಳು ಕರೆದಳು.

ಆ ಗಿಡಗಳ ಇತಿಹಾಸ ---

ಮೊದಲು ಅಲ್ಲಿ ಒಂದು ಗುಲಾಬಿ ಗಿಡ ಬೆಳೆದಿದ್ದಳು ಅದು ತುಂಬಾ ಹುಲುಸಾಗಿ ದಟ್ಟವಾಗಿ ಬೆಳೆಯಿತು. ಅದು ಬೆಳೆಯುವ ರೀತಿ ನೋಡಿ ಸಂತಸಪಟ್ಟು ಅದಕ್ಕೆ ಇನ್ನಷ್ಟು ಗೊಬ್ಬರ ನೀರು ಕೊಟ್ಟು ಆ ಗಿಡ ಬೆಳೆದ ಕುಂಡಲವನ್ನು ಚನ್ನಾಗಿ ಬಿಸಿಲು ಬರುವ ಜಾಗದಲ್ಲಿಟ್ಟಳು. ಒಂದು ದಿನ ನನ್ನನ್ನು ಕರೆದು ಏನ್ರೀ ಇಷ್ಟು ದೊಡ್ಡಗಿಡದಾಗ ಬಣ್ಣ ಚನ್ನಾಗಿಲ್ಲದ ಸಣ್ಣ ಹೂವು ಬಿಟ್ಟಾವ ನೋಡ್ರೀ. ನಿಜವಾಗಿಯೂ ಆಕೆಗೆ ನಿರಾಶೆಯಾಗಿತ್ತು ಆದರೆ ಅಷ್ಟು ಚನ್ನಾಗಿ ಬೆಳೆದ ಗಿಡ ಕಿತ್ತೆಸೆಯಲು ಮನಸ್ಸಿಲ್ಲ. ಆಗ ನಾನು ಗೊತ್ತಿರುವ ಮಾಲಿಯನ್ನು ಕರೆದು ಆ ಗುಲಾಬಿ ಗಿಡದ ವಿಚಾರ ತಿಳಿಸಿದೆ. ಅವನು ಒಳ್ಳೆಯ ಹೂ ಬಿಡುವ ಗಿಡದ ಕೊಂಬೆಗಳನ್ನು ತಂದ, ಮೊದಲು ಗಿಡದ ಬಲಿತ ಕೆಲವು ಕೊಂಬೆಗಳನ್ನು ಕಡಿದು ಹಾಕಿ ಅವಕ್ಕೆ ತಾನು ತಂದ ಗಿಡದ ಕೊಂಬೆಗಳನ್ನು ಕಸಿಮಾಡಿದ. ಆದರೆ ನನ್ನಾಕೆಗೆ ಸಮಾಧಾವಾಗದೇ ಇನ್ನೊಂದು ಬೇರೆ ಕುಂಡಲದಲ್ಲಿ ಅವನು ತಂದ ಗಿಡದ ಕೊಂಬೆ ನೆಡೆಸಿದಳು.

ಈಗ ಕರೆದದ್ದು ಆ ಗಿಡಗಳು ಬಿಟ್ಟಿರುವ ಹೂವು ತೋರಿಸಲು

ನಾನು ಹೊದಾಗ ಆಕೆಯ ಮುಖದಲ್ಲಿ ಆನಂದ ಎದ್ದು ಕಾಣಿಸುತ್ತಿತ್ತು ಎರಡೂ ಗಿಡದಲ್ಲಿ ಹೂಗಳು ಅರಳಿದ್ದವು.

ನೊಡ್ರಿ ದೊಡ್ಡ ಗಿಡದ ತುಂಬ ಬೇರೆ ಬೇರೆ ಬಣ್ಣದ ದೊಡ್ಡ ಹೂ ಬಿಟ್ಟು ಎಷ್ಟು ಚಂದ ಕಾಣಿಸುತ್ತದೆ. ಆದರೆ ಇನ್ನೊಂದು ಗಿಡ ಹೂವಿದ್ದರೂ ಚನ್ನಾಗಿ ಕಾಣಿಸಲೊಲ್ಲದು. ಮೊದಲಗಿಡ ಮೊದಲೇ ಹುಲುಸಾಗಿ ದಟ್ಟವಾಗಿ ಬೆಳೆದಿತ್ತು ಅದಕ್ಕೆ ಹೊಸ ಹೂ ಅಲಂಕಾರ ಹೆಚ್ಚಿಸಿತ್ತು. ಹೊಸ ಗಿಡ ಇನ್ನೂ ಬೆಳೆಯುವ ಹಂತದಲ್ಲಿತ್ತು.

ಹೌದೆಂದು ಹೇಳಿಬಂದು ಬರೆಯಲು ಕುಳಿತುಕೊಂಡೆ.

ನಾನು ಬರೆಯಬೇಕೆಂಬ ವಿಷಯ ಮನದಿಂದ ಮರೆಯಾಗಿತ್ತು.

ಅದಕ್ಕಾಗಿ ಬರೆಯಬೇಕೆಂದಿರುವ ವಿಷಯ ಮುಂದುವರಿಸುವ ಬದಲು ನಿಮ್ಮ ಮನ ಕಲ್ಪನಾ ಲೋಕದಲ್ಲಿ ವಿಹರಿಸಬಹುದಾದ ಎರಡು ಸಂಗತಿಗಳನ್ನು ಇಲ್ಲಿ ವಿವರಿಸುವೆ.

--------

12 ನೇಯ ಶತಮಾನದಲ್ಲಿ ನಡೆದಿರಬಹುದಾದ ಎರಡು ಕಾಲ್ಪನಿಕ ಘಟನೆಯಲ್ಲಿರುವವರು ನೀವು ಮತ್ತು ನಿಮ್ಮ ಕುಟುಂಬ ಎಂದು ಊಹಿಸಿಕೊಳ್ಳಿ.

**ಕಾಲ್ಪನಿಕ ಘಟನೆ 1:**

********

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ. ---ಅಣ್ಣ ಬಸವಣ್ಣ

**********

ಚಿಕ್ಕ ಹಳ್ಳಿಯಿಂದ ಕಲ್ಯಾಣಕ್ಕೆ ಕೆಲಸ ಅರಸಿ ಬಂದ ನೀವು ನಿಮ್ಮ ಧರ್ಮ ತೊರೆದು ವಿಧಿವಿಧಾನದಿಂದ ಬೇರೆ (XXX) ಧರ್ಮಕ್ಕೆ ಪರಿವರ್ತನೆ ಹೊಂದಿ ಜೀವನ ಸಾಗಿಸುತ್ತಿದ್ದೀರಿ ಎಂದು ಊಹಿಸಿಕೊಳ್ಳಿ. ಕೆಲವು ಸಮಯದ ನಂತರ ತಂದೆ ತಾಯಿ, ಬಂಧು ಬಳಗದ ನೆನಪಾಗಿ ನಿಮ್ಮೂರಿಗೆ ಹೋಗಿಬರಲು ನಿರ್ಧರಿಸಿ ಅಲ್ಲಿಗೆ ಹೊರಟಿರುವ ನಿಮ್ಮ ಗೆಳೆಯನಿಗೆ ಬರುವ ದಿನ ತಿಳಿಸುತ್ತೀರಿ.
ನಿಮ್ಮ ಗೆಳೆಯನ ಮೂಲಕ ನಿಮ್ಮ ಎಲ್ಲ ವಿವರ ನಿಮ್ಮೂರಿನವರಿಗೆಲ್ಲ ಮೊದಲೇ ತಲುಪಿರುತ್ತದೆ. ಅಂತೂ ತಿಳಿಸಿದ ದಿನ ಕುಟುಂಬ ಸಮೇತ ಮರಳಿ ನಿಮ್ಮ ಊರಿಗೆ ಬಂದಿದ್ದೀರಿ.
ನೀವು ಬರುವಿರೆಂದು ಗೊತ್ತಿದ್ದರೂ ನಿಮ್ಮ ಮನೆಯ ಬಾಗಿಲು ಹಾಕಿದೆ. ಮನೆಯೊಳಗಿನಿಂದ ತಾಯಿ ಬಿಕ್ಕಿ ಬಿಕ್ಕಿ ಹಾಡಾಡಿಕೊಂಡು ಅಳುವ, ಅವರನ್ನು ಸಂಬಾಳಿಸುವ ಅಕ್ಕತಂಗಿಯರ ಮಾತುಗಳು, ತಂದೆಯಿಂದ ಸಿಟ್ಟಿನಿಂದ ಕೂಗಾಡುವ (ಎಲ್ಲವೂ ನಿಮಗೆ ಅರಿವಾಗಲಿ ಎಂದೇ ಇರಬೇಕು) ಶಬ್ದ ಕೇಳುತ್ತದೆ. ಅಷ್ಟರಲ್ಲಿ ನಿಮ್ಮ ಹಿರಿಯಕ್ಕ ಹೊರಬಂದು ಬೈದು ಹಿಡಿಶಾಪ ಹಾಕಿ ಚಟಿಗೆ ಮುರಿದು ತೆರೆದ ಬಾಗಿಲನ್ನು ರಪ್ಪನೆ ಹಾಕಿ ಒಳಹೋಗುತ್ತಾಳೆ.
ಆಗ ನಿಮಗೊಂದು ಆಶ್ಚರ್ಯ ಘಟನೆ ನಡೆಯುತ್ತದೆ ನಿಮ್ಮೂರಿನ ಮೊದಲೇ (XXX) ಧರ್ಮಕ್ಕೆ ಪರಿವರ್ತನೆಗೊಂಡ ಕೆಲವು ಕುಟುಂಬದವರು ಅಲ್ಲಿಗೆ ಬಂದು ನಿಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಉಪಚರಿಸುತ್ತಾರೆ.
ನಿಮಗೆ ಸ್ವಲ್ಪ ಸಮಾಧಾನವಾದರೂ ಅಲ್ಲಿ ಆತ್ಮೀಯತೆಯ ಕೊರತೆ ಕಾಣಿಸುತ್ತದೆ. ಅದರಲ್ಲಿಯೂ ಅವರ ಪೂರ್ವಧರ್ಮದ ನಿಮ್ಮ ಪೂರ್ವಧರ್ಮದ ಅಂತರ ಅಲ್ಲಿ ಅವ್ಯಕ್ತವಾಗಿ ಮಾತುಗಳಲ್ಲಿ ಕಾಣಿಸುತ್ತದೆ. ಅನಿವಾರ್ಯವಾಗಿ ಅವರ ಉಪಚಾರ ಸ್ವೀಕರಿಸುತ್ತೀರಿ ಮತ್ತು ನಿಮಗಿರುವ ಅಸಹಾಯಕತೆ ಅಲ್ಲಿ ಎದ್ದುಕಾಣುತ್ತದೆ.
ಧರ್ಮಾಂತರವಾಗುವದು ಎಷ್ಟು ಕಷ್ಟದ ವಿಷಯ ಮತ್ತು ಸಮಾಜ , ಬಂಧು ಬಳಗ ಎಷ್ಟು ನಿಷ್ಟುರ ಎಂಬ ಅನುಭವವಾಗುತ್ತದೆ. ಅಂತೂ ಉಸಿರುಕಟ್ಟಿಸುವ ಆ ವಾತಾವರಣದಲ್ಲಿರಲಾರದೆ ಮರಳಿ ಕಲ್ಯಾಣಕ್ಕೆ ಬರುತ್ತೀರಿ ಅಲ್ಲಿಯೇ ಜೀವನಪರ್ಯಂತ ನೆಲೆಸಲು ನಿರ್ಧರಿಸುತ್ತೀರಿ.
ಆಗ ನಿಮ್ಮ ಮನದಲ್ಲಿ ಮೂಡುವ ಪ್ರಶ್ನೆ "ಧರ್ಮಾಂತರವಾಗಿ ಸಾಧಿಸಿದ್ದೇನು? ಕಳೆದುಕೊಂಡಿದ್ದೇನು?"

ಈಗಲೂ ಧರ್ಮಾಂತರ ಪ್ರಕ್ರಯೆ ನಡೆದಿದೆ. ಆಶೆ ಅಮಿಷಕ್ಕೊಳಗಾಗಿ ಮತಾಂತರವಾದವರು ತಮ್ಮ ಮೂಲಮತದವರಿಂದ ದೂರವಾಗಿ ಹೊಸಮತದವರ ಅನಾದರಗಳಿಗೆ ಒಳಗಾಗಿದ್ದುದನ್ನು ಕಾಣುತ್ತೇವೆ.

**ಕಾಲ್ಪನಿಕ ಘಟನೆ 2:**

************

**ಇವ ನಮ್ಮವ, ಇವ ನಮ್ಮವ,**
**ಇವ ನಮ್ಮವನೆಂದೆನಿಸಯ್ಯಾ.**
**ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ.**

************

ಚಿಕ್ಕ ಹಳ್ಳಿಯಿಂದ ಕಲ್ಯಾಣಕ್ಕೆ ಕೆಲಸ ಅರಿಸಿಕೊಂಡು ಬಂದಿದ್ದೀರಿ. ಅಲ್ಲಿಯೇ ನಿಮ್ಮ ಕಾಯಕಮಾಡುತ್ತ ಶರಣರ ಆಚಾರ ವಿಚಾರಗಳಿಗೆ ಮಾರುಹೋಗಿದ್ದೀರಿ. ನಿಮ್ಮ ಆಚಾರ ವಿಚಾರಗಳಲ್ಲಿ ಪರಿವರ್ತನೆಯಾಗಿದೆ.

ಶುದ್ಧ ಕಾಯಕದಿಂದ ಬಂದದ್ದರಲ್ಲಿ ಕೆಲವು ಭಾಗ ದಾಸೋಕ್ಕರ್ಪಿಸಿ, ಲಿಂಗಪೂಜೆ ಮಾಡುತ್ತ ಜೀವನ ಸಾಗಿಸುತ್ತಿದ್ದೀರಿ. ಕೆಲವು ಸಮಯದ ನಂತರ ತಂದೆ ತಾಯಿ, ಬಂಧು ಬಳಗದ ನೆನಪಾಗಿ ನಿಮ್ಮೂರಿಗೆ ಹೋಗಿಬರಲು ನಿರ್ಧರಿಸಿ ಅಲ್ಲಿಗೆ ಹೊರಟಿರುವ ನಿಮ್ಮ ಗೆಳೆಯನಿಗೆ ಬರುವ ದಿನ ತಿಳಿಸುತ್ತೀರಿ. ನಿಮ್ಮ ಗೆಳೆಯನ ಮೂಲಕ ನಿಮ್ಮ ಎಲ್ಲ ವಿವರ ನಿಮ್ಮೂರಿನವರಿಗೆಲ್ಲ ತಲುಪಿರುತ್ತದೆ.

ನಿಮಗಾಶ್ಚರ್ಯ ಅಗಸಿಬಾಗಿಲಿನಲ್ಲಿ ನಿಮ್ಮ ಬಂಧು ಬಳಗ, ಊರ ಎಲ್ಲ ಧರ್ಮದ ಜನ ಸೇರಿದ್ದಾರೆ, ನಿಮ್ಮನ್ನು ಆದರದಿಂದ ಬರಮಾಡಿಕೊಂಡ ಜನ ನಿಮ್ಮ ಮನೆಯ ಸಮೀಪದ ಗುಡಿಗೆ ಆದರದಿಂದ ಕರೆದುಕೊಂಡು ಹೋಗುತ್ತಾರೆ. ಆ ಗುಡಿಯಲ್ಲಿ ಪೂಜೆ ಮಾಡಿ ಎಲ್ಲರೂ ಪ್ರಸಾದ ತೆಗೆದುಕೊಂಡು ತಮ್ಮ ಮನೆಗೆ ಮರಳುತ್ತಾರೆ. ಶರಣ ಬಂದ ಶರಣ ಬಂದ ಎಂಬ ಮಕ್ಕಳು ಆಟವಾಡುತ್ತ ಕುಣಿದಾಡುತ್ತ ಹೇಳುವ ಮಾತು ಕಿವಿಗೆ ಬೀಳುತ್ತದೆ.

ಆಗ ಅಲ್ಲಿಗೆ ಬಂದ ಊರ ಹಿರಿಯರು ನಿಮ್ಮನ್ನು ಗೌರವದಿಂದ ಮಾತನಾಡಿಸಿ ಕಲ್ಯಾಣದ ಬಗ್ಗೆ, ಕಲ್ಯಾಣದ ಶರಣರ ಬಗ್ಗೆ ವಿಚಾರಿಸುತ್ತಾರೆ. ಅನುಭವಮಂಟಪದಲ್ಲಿ ನಡೆಯುವ ಕಾರ್ಯಕ್ರಮಗಳ

ವಿವರ ನಿಮ್ಮಿಂದ ಕೇಳಿ ನೀವು ಹೇಳುವ ಮಾತನ್ನು ಆಸ್ಥೆಯಿಂದ ಕೇಳುತ್ತಾರೆ. ನಿಮಗರಿವಿಲ್ಲದಂತೆ ಅನುಭವಮಂಟದಲ್ಲಿ ಶರಣರ ಸಂಗದಿಂದ ನಿಮ್ಮಲ್ಲಾದ ಪರಿವರ್ತನೆ, ಮಾತಿನಲ್ಲಿರುವ ನಮ್ರತಾಭಾವ, ನೀವು ಆಗಾಗ ನಿಮಗರಿವಿಲ್ಲದಂತೆ ಹೇಳುವ ವಚನದ ಸಾಲುಗಳು, ಅಲ್ಲಿ ನಡೆದ ಘಟನೆಗಳ ವಿವರ ಹೇಳುವಾಗ ಶರಣರ ಪ್ರತಿರೂಪವನ್ನು ನಿಮ್ಮಲ್ಲಿ ಅವರು ಕಾಣುತ್ತಾರೆ.
ಆಗ ಅಲ್ಲಿಗೆ ಬಂದ ನಿಮ್ಮಕ್ಕ ಮನೆಗೆ ಬಾ ಎಂದು ಕರೆಯುತ್ತಾಳೆ. ಮನೆಗೆ ಬಂದ ನಿಮಗೆ ಆಶ್ಚರ್ಯ ಮನೆ ಮುಂದೆ ಸಾರಿಸಿ ರಂಗೋಲಿ ಹಾಕಿದ್ದಾರೆ, ಬಾಗಿಲಿಗೆ ತಳಿರು ತೋರಣದಿಂದ ಸಿಂಗರಿಸಿದ್ದಾರೆ (ನಿಮಗೆ ಉಗಾದಿ ಹಬ್ಬದ ನೆನಪು ಬರುವದು ಸಹಜ). ಒಳಗೆ ಹೋದಾಗ ಅಲ್ಲಿರುವ ತಂದೆ ತಾಯಿ, ಅಕ್ಕತಂಗಿ, ಅಣ್ಣ ತಮ್ಮ, ಬಂಧು ಬಳಗದವರ ಪ್ರೀತಿಯ ಮಾತು ನಿಮ್ಮನ್ನು ಮಂತ್ರಮುಗ್ಧನನ್ನಾಗಿ ಮಾಡತ್ತದೆ. ನೀವು ಸ್ನಾನಮಾಡಿ ಬರುವಷ್ಟರಲ್ಲಿ ಅಲ್ಲಿ ಪೂಜಾ ವ್ಯವಸ್ಥೆಯಾಗಿರುತ್ತದೆ. ನಿಮ್ಮ ಹೆಂಡತಿ ಮಕ್ಕಳೂ ಸಹ ಮಡಿಯಾಗಿ ಪೂಜೆಗೆ ಕುಳಿತುಕೊಳ್ಳುತ್ತಾರೆ.
ನಿಮ್ಮೆಲ್ಲರ ಲಿಂಗಪೂಜೆಯನ್ನು ಕೈಮುಗಿದು ನಿಂತು ವೀಕ್ಷಿಸಿ ಪಾವನರಾದ ಭಾವ ನಿಮ್ಮ ಬಳಗದವರಲ್ಲಿ ಎದ್ದು ಕಾಣುತ್ತದೆ. ಅವರೆಲ್ಲ ವಿಭೂತಿ ಧಾರಣೆ ಮಾಡಿ ನೀವು ಹೇಳುವ ಮಂಗಳಾರುತಿಯನ್ನು ಭಕ್ತಿಭಾವದಿಂದ ಕೇಳಿ ಮರಳಿ ಹೇಳುತ್ತಾರೆ.
ಅಷ್ಟರಲ್ಲಿ ಅಲ್ಲಿರುವ ಪೂಜಾ ಕೋಣೆಯಿಂದ (ಹಲವಾರು ದೇವರ ಫೋಟೊಗಳು, ಮೂರ್ತಿಗಳು ಅಲ್ಲಿರುವದು ನಿಮಗೆ ಗೊತ್ತು ). ಪೂಜೆಮುಗಿಸಿಕೊಂಡು ಬಂದ ನಿಮ್ಮಜ್ಜ ಅಲ್ಲಿ ನಡೆದ ಪೂಜೆಯಲ್ಲಿ ಭಾಗವಹಿಸುತ್ತಾನೆ. ಲಿಂಗಪೂಜೆ ಮಾಡಿದ ನಿಮಗೆ ಶರಣೆಂದು ಹೇಳಿ ಭಕ್ತಿಯಿಂದ ನೀವು ಕೊಟ್ಟ ಪ್ರಸಾದ ಹಣೆಗೊತ್ತಿಕೊಂಡು ಸ್ವೀಕರಿಸುತ್ತಾನೆ.

***********

**ನಮಗೆ ಲಿಂಗವುಂಟು,**
**ನಾವು ಲಿಂಗವಂತರೆಂದು ನುಡಿವರು.**
**ಮತ್ತೆ ಮರಳಿ ಭವಿಶೈವದೈವಂಗಳಿಗೆರಗುವ**
**ಈ ಮಂಗಮಾನವರನೇನೆಂಬೆನಯ್ಯಾ, ಕಲಿದೇವಯ್ಯ.** / 199
---- ಮಡಿವಾಳ ಮಾಚಿದೇವ

*************

ವಚನ ನಿಮ್ಮ ನೆನಪಿಗೆ ಬಂದರೂ ಅಲ್ಲಿರುವ ಎಲ್ಲರ ಮಮತೆಗೆ ಬಂಧನಕ್ಕೆ ಒಳಗಾಗಿ ಎದ್ದು ಹೋಗಿ ಅಲ್ಲಿರುವ ಎಲ್ಲ ದೇವರಿಗಳಿಗೊಮ್ಮೆ ಕೈಮುಗಿಯುತ್ತೀರಿ.

ನಿಮ್ಮವ್ವ ಮಾಡಿದ ಹಬ್ಬದ ಅಡಿಗೆ ಸಂಭ್ರಮದಿಂದ ಎಲ್ಲರಿಗೂ ಬಡಿಸುತ್ತಾಳೆ.
(ಯಾವ ರೀತಿ ಅಡಿಗೆ ಮಾಡಿರುತ್ತಾರೆ ಎಂಬ ಆತಂಕದಲ್ಲಿರುವ ನೀವು ಅಲ್ಲಿರುವ ಶಾಖಾಹಾರ ನೋಡಿ ನಿರಾತಂಕವಾಗುತ್ತೀರಿ. ನಿಮಗಾಗಿ ನಿಮ್ಮ ತಾಯಿ, ಬಳಗ ಊಟದ ಪದ್ಧತಿಯನ್ನೇ ಬದಲಿಸಿಕೊಂಡದ್ದನ್ನು ನೋಡಿ ನಿಮ್ಮ ಮನತುಂಬಿ ಕಣ್ಣಾಲಿಯಲ್ಲಿ ನೀರು ಬರುತ್ತದೆ).
ಊಟವಾದ ಮೇಲೆ ಎಲ್ಲರೂ ಜತೆಗೂಡಿ ನಿಮ್ಮ ಅನುಭವ ಹಂಚಿಕೊಳ್ಳುತ್ತಾರೆ.
ಕಲ್ಯಾಣದ ಎಲ್ಲ ಶರಣರ ವಿಚಾರಗಳನ್ನು ಭಕ್ತಯಿಂದ ಕುತೂಹಲದಿಂದ ಕೇಳುತ್ತಾರೆ. ನೀವು ಅಂತಹ ಮಹಾನುಭಾವಿಗಳ ಸಂಗದಲ್ಲಿರುವದು ಅವರಿಗೆ ಹೆಮ್ಮೆಯ ವಿಷಯ.
ನೀವು ಮರಳಿ ಊರಿಗೆ ಹೊರಟಾಗ ದೂರದವರೆಗೆ ಬಂದ ಬಂಧು ಬಳಗದವರ, ಊರವರ “ಹೋಗಿ ಬಾ” ಎಂಬ ಮಾತು ಮನ ತುಂಬುತ್ತದೆ.
ಇಂತಹ ಅನೇಕ ಮಧುರ ನೆನಪಿಗಳೊಂದಿಗೆ ಮರಳಿ ಕಲ್ಯಾಣಕ್ಕೆ ಬರುತ್ತೀರಿ.
ಈಗ ನಿಮ್ಮ ಮನದಲ್ಲಿ ಮೂಡುವ ಪ್ರಶ್ನೆ
" ನೀವು ಧರ್ಮಾಂತರವಾಗಿದ್ದೀರಾ?"
ಇದು ಕಲ್ಪನೆ. ಅದನ್ನಲ್ಲಿಗೆ ಮರೆತು ವಾಸ್ತವ ಸ್ಥಿತಿಗೆ ಬರೋಣ .ದಯಮಾಡಿ ಟೀಕೆ ಟಿಪ್ಪಣೆಗಳು ಬೇಡ.

**ಕೂಡಲಸಂಗಮದೇವರ ನೆರೆ ನಂಬಿದನಾದಡೆ; ಕಡೆಗೆ ತನ್ನಂತೆ ಮಾಡುವ**.

ಮೊದಲ ಮಾತು:
ಇಲ್ಲಿರುವ ಕನಸು ಕಾಲ್ಪನಿಕವಾದರೂ ಇಲ್ಲಿ ವರ್ಣಿತವಾಅಗಿರುವ ಗವಿ ಸಮೂಹ ಚಾಲುಕ್ಯ ಅರಸರು ನಿರ್ಮಿಸಿದ ಬದಾಮಿ ಗವಿಗಳ ಮೂಲ ಪ್ರತಿಕೃತಿಗಳು. ಖರೋಸಾ ಗವಿಗಳು ಅಸ್ತಿತ್ವದಲ್ಲಿದ್ದು ಅವುಗಳ ವಿವರಣೆ ಇಲ್ಲಿ ನಿಜವಾದದ್ದು. ಅಲ್ಲಿ ವಚನಗಳನ್ನು ಅಡಗಿಸಿಟ್ಟಿರುವ ಸಾಧ್ಯತೆ ಬಹಳಷ್ಟಿದೆ.
ಸಂಶೋಧನೆಯ ಅವಶ್ಯಕತೆ ಇದೆ.

**ಜಾತಿ ಜಾತಿಯ ಕೂಡಿದಲ್ಲದೆ ನಿಹಿತ ಸುಖವಿಲ್ಲ.**
**ಬಲ್ಲವ ಬಲ್ಲವನಲ್ಲಿಯಲ್ಲದೆ ಒಳ್ಳೆಯ ಗುಣವಿಲ್ಲ.**
**ಭಟ ಮುಗ್ಗಿದಡೆ ತಿಳಿದ ಭಟ ಕೈ ಹಿಡಿದೆತ್ತಿ,**
**ಇದಿರಾಗೆಂದಡೆ, ಊಣೆಯವೆಲ್ಲಿ ಅಡಗಿತ್ತು? ಕೇಳುವ ಬನ್ನಿ, ಅರ್ಕೇಶ್ವರಲಿಂಗವ.–**
ಮಧುವಯ್ಯ/ಮಧುವರಸ

ಎಲ್ಲರೂ ದಿಕ್ಕುಗಾಣದೆ ಮುಂದೇನು ಮಾಡಬೇಕು ಎನ್ನುವದನ್ನು ವಿಚಾರಿಸುತ್ತ ಕುಳಿತೆವು ಬಹಳಹೊತ್ತು

**ಶ್ರಿಶೈಲಪ್ಪ:** ವಚನಗಳ ರಕ್ಷಣೆ ಆಗಿದೆ. ಇನ್ನು ಶರಣರ ರಕ್ಷಣೆ ಮಾಡುವದು ಬಾಕಿ ಇದೆ.
**ಗುರುವ:** ಮೇಲಿನ ಗವಿಗಳಲ್ಲಿ ಎಷ್ಟು ಶರಣರಿಗೆ ರಕ್ಷಣೆ ಮಾಡಲು ಸಾಧ್ಯ.
**ಶ್ರೀಶೈಲಪ್ಪ:** ಕಲ್ಯಾಣದ ಶರಣರೆಲ್ಲರೂ ಕಾಯಕ ಮಾಡುತ್ತ ಹಲವು ಕಾಲ ಯಾರಿಗೂ ಗೊತ್ತಾಗದ ಹಾಗೆ ಹಲವು ತಿಂಗಳು ಇರಬಹುದು. ಅವರಿಗೆಲ್ಲ ದಾಸೋಹ ವ್ಯವಸ್ಥೆ ಆಗುವಷ್ಟು ದಾಸ್ತಾನು ಇದೆ.
**ಗುರುವ:** ಗವಿ ಅಷ್ಟೊಂದು ವಿಶಾಲವಾಗಿದೆಯೇ?
**ಶ್ರೀಶೈಲಪ್ಪ:** ಇದೊಂದು ಗವಿ ಸಮೂಹ. ನೋಡಲು ಹನ್ನೊಂದು ವಿಶಾಲವಾದ ಗವಿಗಳು ಆದರೆ ಅಂತರ್ಗತವಾಗಿ ಅನೇಕ ಗವಿಗಳು ಇವೆ. ಎಲ್ಲ ಗವಿಗಳ ನಡುವೆ ದಾರಿಗಳಿವೆ. ಎಲ್ಲಕ್ಕಿಂತಲೂ ಮೇಲೆ ನೀರಿನ ಕೊಳವಿದ್ದು ಮುಂದೆ ದಟ್ಟವಾದ ಕಾಡು ಎಲ್ಲವನ್ನೂ ಮರೆಮಾಡಿದೆ.
**ಗುರುವ:** ಇಲ್ಲಿರುವ ಎಲ್ಲ ಶರಣರನ್ನು ರಕ್ಷಿಸುವ ಕೆಲಸ ಮೊದಲು ಮಾಡೋಣ. ನೀವು ಹೋಗಿ ಬೊಂತಾದೇವಿಯರು ಮತ್ತು ಕಲ್ಯಾಣದಿಂದ ಬಂದ ಶರಣರನ್ನು ಕರೆದುಕೊಂಡು ಬನ್ನಿ. ಮೋನಣ್ಣ ಬಾಗಿಲು ತೆಗೆಯುವ ಕೆಲಸ ಮಾಡಲಿ, ಶ್ರೀಶೈಲಪ್ಪ ಗವಿಗೆ ಹೋಗುವ ದಾರಿ ತೋರಿಸಲಿ ಎಂದು ಹೊರಬಂದೆ.
ಹೊರಗೆ ತಮ್ಮಂದಿರು (ಬೇಡವೆಂದರೂ ಬಿಡದೆ ಬೆಂಬತ್ತಿದ ಅಂಗರಕ್ಷಕರು) ಬಿಲ್ಲು ಹಿಡಿದು ಕಾಯುತ್ತಿದ್ದರು. ಅವರನ್ನು ಕರೆದು ನಾಯಕನನ್ನು ಬರಹೇಳಿ ಎಂದೆ. ಅವರು ನಿಂತಲ್ಲಿಂದ ಕದಲಿಲ್ಲ. ಏನು ಮಾಡಬೇಕು ತಿಳಿಯಲಿಲ್ಲ ಇದು ನಾನವರಿಗೆ ಹೇಳಿದ ಮೊದಲ ಮಾತು. ಸ್ವಲ್ಪ ಸಮಯದಲ್ಲಿ ನಾಯಕ ಬಂದು "ಶರಣು ಶರಣಾರ್ಥಿ" ಎಂದಾಗ ನನಗೆ ಅಚ್ಚರಿ.
ಪ್ರತಿ ಶರಣಾರ್ಥಿ ಹೇಳಿ
"ಬೆಳ್ಳಿ ಚಿಕ್ಕಿ ಮೂಡುವಷ್ಟರಲ್ಲಿ ಇಲ್ಲಿರುವ ಎಲ್ಲ ಕಟ್ಟಾಳುಗಳು ಬಿಲ್ಲು ಆಯುಧ ಸಹಿತ ಇಲ್ಲಿರಬೇಕು ಉಳಿದವರಿಗೆಲ್ಲ ತಮ್ಮ ಕಾಯಕ ಸಲಕರಣೆ ಜೊತೆ ಬರಲು ತಿಳಿಸಿ, ಅವರ ಬಂಧುಬಳಗದವರು ಈ ಕಾಡಿನ ಸನಿಹದಲ್ಲಿದ್ದರೆ ಅಲ್ಲಿಗೇ ಹೋಗಲಿ, ಈ ಕೆಲಸ ಯಾರ ಅರಿವಿಗೆ ಬರದಿರಲಿ" ಎಂದು ಹೇಳಿದೆ ಗಡಬಿಡಿಯಿಂದ.
ಬಹಳಮಾಡಿ ನಾಯಕನಿಗೆ ನಾನು ಹೇಳಿದ ಮೊದಲ ಕೆಲಸ ಇದಾಗಿತ್ತು.
ಶ್ರಿಶೈಲಪ್ಪ ಗಾಣ ಕಾಯಕ ಕಲಿಯಲು ಬಂದವರ ಜೊತೆ ಗವಿಗೆ ಹೊಗುವ ಮೆಟ್ಟಲುಗಳಮೇಲೆ ದೀಪ ಬೆಳಗಿಸುವ ಕೆಲಸ ಮಾಡಲು ಹೋದ. ನಾಯಕ ಮಾತ್ರ ನಿಂತಲ್ಲಿಯೇ ನಿಂತಿದ್ದ. ಅವನು ನನ್ನ ಮಾತನ್ನು ಅರ್ಥ ಮಾಡಿಕೊಂಡನೋ ಇಲ್ಲವೋ ಅಥವಾ ಅವನು ನನ್ನ ಮಾತನ್ನು ಕೇಳದೇ ಇರಬಹುದು ಎನ್ನುವ ಸಂದೇಹ ಮನದಲ್ಲಿ ಮೂಡಿತು. ನಾನೇನು ಮಾಡಲು ಸಾಧ್ಯ?. ನನಗಾಶ್ಚರ್ಯ ಸ್ವಲ್ಪ ಹೊತ್ತಿನಲ್ಲಿ ಅಲ್ಲಿ ಎಲ್ಲ ಯುವಕರು ನೆರೆದಿದ್ದರು. ಕಾಯಕಯೋಗಿಗಳು ಅಲ್ಲಿದ್ದರು. ಸಪ್ಪಳ ಮಾಡದೇ ಸಂವಾದ ನಡೆಸುವ ಕಲೆ ಅವರಿಗೆ ಗೊತ್ತಿತ್ತು ಮತ್ತು

ಅವರು ಹಕ್ಕಿ ಪಕ್ಕಿಗಳ ಭಾಷೆಯಲ್ಲಿ ಒಬ್ಬರೊಡನೊಬ್ಬರು ಸಂವಾದ ಮಾಡುತ್ತಾರೆ ಎನ್ನುವ ವಿಚಾರ ನನಗಾಗ ಗೊತ್ತಾಯಿತು. ಬೊಂತಾದೇವಿ ಮತ್ತು ಇತರರ ಜೊತೆ ಮೇಲಿನ ಗವಿಗೆ ಹೊರಟು ಹೋದರು. ನಾಯಕ ನನ್ನ ಮುಖ ನೋಡಿದ
"ಎಲ್ಲರೂ ಗಿಡಗಳ ಮೇಲಿದ್ದು ಕಾಡು ಕಾಯಬೇಕು ಮೂರ್ನಾಕು ದಿನಗಳ ಅಹಾರ ವ್ಯವಸ್ಥೆ ಅವರಿಗಾಗಲಿ. ಯಾರೂ ಯಾವದೇ ಸಂದರ್ಭದಲ್ಲಿ ಯಾರನ್ನು ಕೊಲ್ಲಬಾರದು ನಡೆದ ವಿದ್ಯಮಾನ ನಾಯಕನಿಗೆ ತಿಳಿಸಿ ಅವನ ಆಜ್ಞೆಯಂತೆ ನಡೆಯಲಿ"
ನಾನೇನು ಹೇಳಿದೆ ನನಗೇ ಅರ್ಥವಾಗಲಿಲ್ಲ. ಬಿಲ್ಲು ಬಾಣ ಕೈಯಲ್ಲಿದ್ದು ಯಾರನ್ನೂ ಕೊಲ್ಲಬಾರದು, ಕಾಡು ಕಾಯಬೇಕು ಒಂದಕ್ಕೊಂದು ಸರಿಹೊಂದದ ವಿಚಾರ. ನಾಯಕ ಆ ಮಾತು ಕೇಳಿ ತಲೆಯಾಡಿಸಿದ. ಸ್ವಲ್ಪ ಸಮಯದಲ್ಲಿ ಅಲ್ಲಿ ನನ್ನ ತಮ್ಮಂದಿರು ಮತ್ತು ನಾಯಕ ಬಿಟ್ಟು ಬೇರಾರೂ ಇರಲಿಲ್ಲ. ಗವಿಯಲ್ಲಿ ಬಂದು ನೋಡಿದರೆ ಎಲ್ಲ ಖಾಲಿ. ಹೊರಗೆ ಬಂದೆ ಬೆಳ್ಳಿಚುಕ್ಕಿ ಮೂಡಿತ್ತು "ಎಲ್ಲ ಐದು ಹಳ್ಳಿಗಳನ್ನು ನೋಡಿಕೊಂಡು ಬರುವಾ" ಎಂದು ಕುದುರೆಯೇರಿದೆ. ಆ ಹಳ್ಳಿಗಳನ್ನು ನೋಡಿದಾಗ ನಾನು ದಂಗಾದೆ ಎಲ್ಲಾ ಖಾಲಿ ಅಷ್ಟೆ ಅಲ್ಲ ಯಾರೋ ದಾಳಿ ಮಾಡಿ ಹಳ್ಳಿಯನ್ನೆಲ್ಲ ಲೂಟಿಮಾಡಿ ಊರನ್ನೆಲ್ಲ ಹಾಳು ಮಾಡಿ ಎಲ್ಲರನ್ನು ಓಡಿಸಿ ಹೋಗಿದ್ದಾರೆ ಎನ್ನಿಸುವ ವಾತಾವರಣ. ಅಲ್ಲಿ ಇದ್ದದ್ದು ಗುಡಿಸಲುಗಳ ಅವಶೇಷ ಮಾತ್ರ. ನಾಯಕನ ಜಾಣತನ ನನಗೆ ಮೆಚ್ಚುಗೆಯಾಯಿತು. ಅಲ್ಲಿಗೆ ಬಂದವರು ತಾವು ಮಾಡಬೇಕಾದ ಕೆಲಸವನ್ನು ಮೊದಲು ಯಾರೋ ಮಾಡಿದ್ದಾರೆ ಹೆಚ್ಚಿಗೆ ಹುಡುಕದೆ ಮರಳುವ ವಾತಾವರಣ ಅಲ್ಲಿತ್ತು.
ನಾವು ಬಂದು ಹೂವಿನ ತೋಟದಲ್ಲಿಯ ದೇವರ ಕಟ್ಟೆಯ ಮೇಲೆ ಕುಳಿತೆವು ಕಲ್ಯಾಣದಿಂದ ಬರಬಹುದಾದ ಸಮಾಚಾರದ ದಾರಿ ನೋಡುತ್ತ.
ಸಾಯಂಕಾಲದವರೆಗೂ ಯಾವ ಸಮಾಚಾರವಿಲ್ಲ ಆತಂಕ ಹೆಚ್ಚಾಯಿತು.
**ನಾಯಕ:** ನಾಲ್ಕು ಕುದುರೆ ಸವಾರರು ಅಡವಿಯ ಪ್ರವೇಶ ಮಾಡುತ್ತಿದ್ದಾರೆ.
**ಗುರುವ:** ಒಳಗೆ ಬರಲಿ ಬಿಡಿ.
ಬಂದವರು ಯಾರು ಅನ್ನುವ ಕುತೂಹಲ ಅವರೆಲ್ಲರನ್ನೂ ಕಾಯುವವರು ಗಿಡದ ಮೇಲಿದ್ದಾರೆ ಎನ್ನುವದು ಅವರಿಗೆ ಗೊತ್ತಿರಲಿಲ್ಲ. ಸಮೀಪ ಬಂದಾಗ ಬಂದವರಲ್ಲಿ ವೀರಭದ್ರಪ್ಪನವರ ಆತ್ಮೀಯ ಗೆಳೆಯ ಭದ್ರಪ್ಪನೆಂದು ಗುರುತಾಯಿತು.
**ಗುರುವ:** ಶರಣು ಶರಣಾರ್ಥಿ ಬನ್ನಿ ಭದ್ರಪ್ಪ ಇಂದು ಅನುಭವಮಂಟಪದಲ್ಲೇನಾಯಿತು?
**ಭದ್ರಪ್ಪ:** ಅದನ್ನು ತಿಳಿಸಲು ವೀರಭದ್ರಪ್ಪ ಕಳಿಸಿದ್ದಾರೆ.
**ಗುರುವ:** ನಡೆದ ಘಟನೆಗಳನ್ನುವಿವರವಾಗಿ ವಿವರಿಸಿ.
**ಭದ್ರಪ್ಪ:**

ಮಧುವರಸರು ನಿನ್ನೆ ತಮ್ಮ ಮಗಳು ಲಾವಣ್ಯವತಿಯ ಮದುವೆಯನ್ನು ಹರಳಯ್ಯನವರ ಪುತ್ರ ಶೀಲವಂತನಿಗೆ ಜೊತೆ ಮಾಡಲು ಅನುಭವಮಂಟಪದಲ್ಲಿ ಪ್ರಸ್ತಾಪಿಸಿ ಎಲ್ಲರ ಅನುಮತಿ ಕೇಳಿದರು.
ಆನಂತರ ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವೇ ಉಂಟಾಯಿತು. ಕೆರಳಿದ ಸಂಪ್ರದಾಯವಾದಿಗಳು ಮನೆ ಮನೆಗೆ ಹೋಗಿ ಧರ್ಮ ಉಳಿಸಿ ಆಗುತ್ತಿರುವ ಧರ್ಮ ವಿರೋಧಿ ಕೆಲಸವನ್ನು ವಿರೋಧಿಸಿ ತಡೆಗಟ್ಟಿ ಎನ್ನುವದನ್ನು ಪ್ರಚಾರಮಾಡಿ ಜನರನ್ನು ಉದ್ರೇಕಿಸಿದರು. ತಮ್ಮದು ಅತೀ ಉತ್ತಮಜಾತಿ ಅದರ ಅಪಮಾನವಾಗುತ್ತದೆ ಎಂದೂ ಮತ್ತು ಏನೂ ಗೊತ್ತಿರದ ಜನರಿಗೆ ಅನ್ಯಾಯವಾಗುತ್ತದೆ ಎಂದೂ ವಿವರಿಸಿದರು. ಜಾತಿ ಪದ್ಧತಿಯನ್ನು ಒಪ್ಪಿರುವ ಮುಗ್ಧರಿಗೆ ಅವರ ಮಾತು ಸರಿ ಎನಿಸಿ ಪ್ರತಿಭಟಿಸಲು ಸಜ್ಜಾದರು. ಈ ಉರಿಯುವ ಬೆಂಕಿಗೆ ರಾಜಕುಮಾರ ತುಪ್ಪ ಸುರಿದದಿದ್ದೂ ಆಯಿತು ಈ ಮದುವೆಯನ್ನು ಸಮರ್ಥಿಸುವವರಿಗೆ ಕಠಿಣ ಶಿಕ್ಷೆ ಕೊಡುವ ಪ್ರಚಾರವೂ ನಡೆಯಿತು. ಅಂತೂ ಅವರೆಲ್ಲ ವಿರೋಧಿಸುವ ಸಲುವಾಗಿ ಸಿದ್ಧರಾಗಿ ಅನುಭವಮಂಟಪಕ್ಕೆ ಬಂದರು. ವಚನಗಳನ್ನು ಓದಿ ಅರ್ಥಮಾಡಿಕೊಂಡವರಿಗೆ ಇದರಲ್ಲಿ ಯಾವ ತಪ್ಪು ಕಾಣಿಸಲಿಲ್ಲ. ಯಾವುದೇ ಸಂದರ್ಭದಲ್ಲೂ ಇದನ್ನು ಬೆಂಬಲಿಸುವ ಆಲೋಚನೆಯೊಂದಿಗೆ ಅನುಭವಮಂಟಪಕ್ಕೆ ಬಂದರು.
ಅಲ್ಲಿ ನಿರ್ಮಾಣವಾದ ಪರಸ್ಥಿತಿಯ ಲಾಭ ಪಡೆದು ಬಸವ ತತ್ವ ಸಮರ್ಥಕರ ಕಗ್ಗೊಲೆ ನಡೆಸಲು ತನ್ನ ಆಪ್ತ ಯೋಧರನ್ನು ಯುವರಾಜ ಕಳಿಸಿದ್ದೂ ಆಯಿತು. ಶರಣರೆಲ್ಲ ಸೇರಿ ಸಭೆ ಆರಂಭವಾದಾಗ ಅಲ್ಲಿ ಮೌನ ಮನೆಮಾಡಿದ್ದರೂ ಒಳಗೆ ಜ್ವಾಲಮುಖಿ ಅಡಗಿರುವದು ಎಲ್ಲರ ಮುಖ ನೋಡಿದಾಗ ಗೊತ್ತಾಗುತ್ತಿತ್ತು.
ನಾನಿಲ್ಲಿ ವಿವರಿಸುತ್ತಿರುವದು ಕೆಲವು ಅಂಶಗಳನ್ನು ಮಾತ್ರ.
ಸಭೆ ಪ್ರಾರಂಭವಾಗುತ್ತಿದ್ದಂತೆ ಮಾತಿಗೆ ಪ್ರಾರಂಭಿಸಿದವರು ಮಧುವರಸರು.
ಅವರು ಪಂಡಿತರು, ಜ್ಞಾನಿಗಳು ಮತ್ತು ಉತ್ತಮ ಭಾಷಣಕಾರರು.
ಅವರು ತಾವು ಬಾಲ್ಯದಿಂದ ಇಂದಿನವರೆಗೆ ವೇದ ಪುರಾಣವನ್ನೆಲ್ಲ ಓದಿ ಕಟ್ಟಾ ಆಚರಣೆಗಳನ್ನು ನಡೆಸಿದ್ದನ್ನು ವಿವರಿಸಿ. ಜಾತಿ ಪದ್ಧತಿಯಲ್ಲಿ ತಮಗಿದ್ದ ನಂಬಿಕೆಯನ್ನು ವಿವರಿಸಿದರು. ಎಲ್ಲ ಅಂತ್ಯಜರು ತಮ್ಮ ಮುಂದೆ ಅನತಿ ದೂರದಲ್ಲಿ ನಿಂತು ಕೈಕಟ್ಟಿ ತಲೆತಗ್ಗಿಸಿ ನಮಸ್ಕರಿಸುವ ಸಂಪ್ರದಾಯ ಮುರಿದು ಹರಳಯ್ಯ ಪ್ರಥಮ ಬಾರಿಗೆ "ಶರಣು ಶರಣಾರ್ಥಿ" ಎಂದಾಗ ತಮಗಾದ ಅಪಮಾನ ಎಂದು ತಿಳಿದು ಅವನಿಗೆ ನಾನಾ ರೀತಿಯಲ್ಲಿ ನಿಂದಿಸಿದ ರೀತಿಯನ್ನು ವಿವರಿಸಿದರು.
ಅವರ ಮಾತಿನಲ್ಲಿ ನಡೆದ ಘಟನೆಗಳ ಅನಾವರಣವಿತ್ತು. ಅವರು ಸತ್ಯವನ್ನು ನುಡಿಯುತ್ತಿದ್ದಾರೆ ಎನ್ನುವ ಭರವಸೆ ಕೇಳುಗರಲ್ಲಿ ಮೂಡಿತು.
ನಾನು ಬಸವಣ್ಣನನ್ನು ಅವರ ಅನುಯಾಯಿಗಳನ್ನು ಕಲ್ಯಾಣದಿಂದ ದೂರ ಕಳಿಸಿ ಧರ್ಮ ರಕ್ಷಣೆ ಮಾಡಬೇಕೆಂದು ನಂಬಿದ ಜನರ ಗುಂಪಿನ ನಾಯಕನಾಗಿದ್ದೆ.

ಮಧುವರಸ ದಂಪತಿಗಳು ಶ್ರದ್ಧೆಯಿಂದ ತಮ್ಮ ತೊಡೆಯ ಚರ್ಮದಿಂದ ಮಾಡಿದ ಪಾದರಕ್ಷೆಯನ್ನು ತಾನು ತೊಟ್ಟುಕೊಳ್ಳಲು ಹೋದಾಗ ಆದ ಮಾನಸಿಕ ಹಿಂಸೆ ವಿವರಿಸಿದರು. ಅದನ್ನು ಆವರು ಬಸವಣ್ಣನಿಗೆ ಕೊಟ್ಟಾಗ ಅವನು ಅವನ್ನು ತಲೆಯ ಮೇಲಿಟ್ಟುಕೊಂಡು ಗೌರವಿಸಿದ ರೀತಿ ಕಂಡಾಗ ಅವರಲ್ಲಿ ಈ ಶ್ರದ್ಧೆ ಭಕ್ತಿ ಹೇಗೆ ಮೂಡಿತು ಎನ್ನುವ ಪ್ರಶ್ನೆ ಮನದಲ್ಲಿ ಮೂಡಿತು.
ಸಾವಿರಾರು ವರ್ಷಗಳ ಸತತ ಪ್ರಯತ್ನಗಳ ನಂತರವೂ ನನ್ನ ಧರ್ಮ ಒಳ್ಳೆಯ ಜನ ಮತ್ತು ಒಳ್ಳೆಯ ಸಮಾಜ ನಿರ್ಮಿಸಲಾಗದಿದ್ದಾಗ, ನನ್ನ ಧರ್ಮಕ್ಕಿಂತಲೂ ಬಿನ್ನವಾದ ಶರಣರ ತತ್ವ ಯಾವದು. ನನ್ನ ಧರ್ಮ ಪಾಲಿಸುವವರಲ್ಲಿ ಮೂಢತೆ, ಅಂಧಶ್ರದ್ಧೆ, ಅಸೂಯೆ, ಢಂಭಾಚಾರ, ಅಸಮಾನತೆ ಮೂಡಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಗುತ್ತಲಿದೆ.
ಆದರೆ ಅಲ್ಪಕಾಲದಲ್ಲಿ ಜನರಲ್ಲಿ ಜ್ಞಾನ ಬಿತ್ತಿ ಅಸಮಾನತೆ ತೊಡೆದುಹಾಕಿ ಅವ್ರಲ್ಲಿ ಸ್ವಾಭಿಮಾನ ತುಂಬಿ ಅವರನ್ನು ಕಾಯಕಯೋಗಿಗಳನ್ನಾಗಿ ಮಾಡಿದ ಶಕ್ತಿ ವಚನಗಳಲ್ಲಿದೆಯಾ ಎನ್ನುವ ಕುತೂಹಲ ಮನದಲ್ಲಿ ಮೂಡಿತು.
ಅವುಗಳನ್ನು ಓದಿ ಅರ್ಥಮಾಡಿಕೊಂಡು ಅವುಗಳಲ್ಲಿರುವ ದೋಷಗಳನ್ನು ಪ್ರಚುರಪಡಿಸಿ ನನ್ನ ಧರ್ಮ ರಕ್ಷಿಸಬೇಕು ಎಂದು ವಚನಗಳ ಅಧ್ಯಯನ ಪ್ರಾರಂಭಿಸಿದೆ. ಇನ್ನೂ ಹೆಚ್ಚಿನ ಅಧ್ಯಯನ ಮಾಡಬೇಕೆಂದು ಅನುಭವ ಮಂಟಪಕ್ಕೆ ಬಂದೆ. ಅಲ್ಲಿಯವರಿಗೆಲ್ಲ ನನ್ನ ಇತಿಹಾಸ ಗೊತ್ತಿದ್ದರೂ ನನ್ನನ್ನು ಅವರು ಆದರದಿಂದ ಬರಮಾಡಿಕೊಂಡರು. ಇಲ್ಲಿ ಯಾವ ಆಡಂಬರವೂ ಇಲ್ಲ, ಮೇಲು ಕೀಳೆಂಬ ಭಾವನೆಗಳಿಲ್ಲ, ದ್ವೇಷ ರಾಗಗಳಿಲ್ಲ, ತಮ್ಮ ಧರ್ಮದ ಪ್ರಚಾರವಿಲ್ಲ ಅನ್ಯ ಧರ್ಮದ ಅವಹೇಳನವಿಲ್ಲ. ಇಲ್ಲಿರುವದು ತೆರೆದ ಖಾಲಿ ಪುಸ್ತಕ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ಪರಸ್ಪರ ಹಂಚಿಕೊಳ್ಳುವ ಕೆಲಸ ಮಾತ್ರ. ಇಲ್ಲಿ ಬಂದಮೇಲೆ ನಾನು ನಾನಾಗಿ ಉಳಿಯಲಿಲ್ಲ ನನ್ನ ಜೊತೆ ನನ್ನವರೂ ಬದಲಾದರು. ಆಶೆ ಅಳಿಯಿತು, ಸತ್ಯ ಗೋಚರಿಸಿತು.
ವಚನ ಅಧ್ಯಯನ ಮಾಡುತ್ತ ಹೋದಹಾಗೆ ಅದರಲ್ಲಿರುವ ತತ್ವಗಳು ಆದರ್ಶಗಳು ಸಿದ್ಧಾಂತಗಳು ನನ್ನನ್ನೇ ನುಂಗಿ ನೀರು ಕುಡಿದವು. ನನ್ನಲ್ಲಿರುವ ಅಹಂಕಾರ, ಅಸಹನೆ, ಅಜ್ಞಾನ ದೂರವಾಗಿ ನನ್ನ ಅರಿವು ನನಗಾಗತೊಡಗಿತು. ನಾನು ಇದುವರೆಗೆ ಪಾಲಿಸುತ್ತ ಬಂದ ಧರ್ಮದ ನಿಜಾರ್ಥವಾಗತೊಡಗಿತು. ನನ್ನ ಧರ್ಮದಲ್ಲಿರುವ ಉದಾತ್ತ ತತ್ವಗಳನ್ನು ತಲೆತಲಾಂತರದಿಂದ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಪರಿವರ್ತಿಸಿ ಹೇಗೆ ಉಪಯೋಗಿಸಿಕೊಂಡಿದ್ದಾರೆ ಎಂದು ಗೊತ್ತಾಯಿತು. ಅದರಲ್ಲಿರುವ ಕುಂದುಕೊರತೆಗಳು ಅವನ್ನು ನಿವಾರಿಸಬೇಕಾದರೆ ಕೈಕೊಳ್ಳಬೇಕಾದ ಕ್ರಮಗಳ ಅರಿವಾಯಿತು. ಶರಣರು ಪ್ರತಿಪಾದಿಸುತ್ತಿರುವದು ಯಾವುದೇ ಜಾತಿ, ಧರ್ಮ ಸಿದ್ಧಾಂತವಲ್ಲ ಅದು ಮಾನವನನ್ನು ದೇವನನ್ನಾಗಿ ಮಾಡುವ ಸಿದ್ಧಾಂತ ಎನ್ನುವ ಅರಿವಾಯಿತು. ಮಾನವರೆಲ್ಲ ಒಂದು ಅವರು

ದೇವನ ಅದ್ಭುತ ಕಲಾಕೃತಿಗಳು. ಅವರಲ್ಲಿ ಬೇಧ ಭಾವ ಮಾಡುವದು ಮಹಾಪಾಪ ಎನ್ನುವದು ನನಗರಿವಾಯಿತು.
ಮಾನವರೂ ಪ್ರಾಣಿಗಳಲ್ಲವೇ? ಅವರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುವದು ಸರಿಯೇ? ನೀವು ಯೋಚಿಸಿ.
ನಾನು ಜನರನ್ನು, ಪ್ರಾಣಿಗಳನ್ನು ಮತ್ತು ಜಗವನ್ನು ನೋಡುವ ಪದ್ದತಿಯೇ ಬದಲಾಯಿತು. ಪ್ರತಿಯೊಂದು ನೋಡುವಾಗ ಅವರು ನನ್ನವರು ಎನ್ನುವ ಪ್ರೀತಿ ಮೂಡತೊಡಗಿತು. ಅಲ್ಪಕಾಲದಲ್ಲಿ ಜನ ಶರಣರಾದ ಬಗೆ ಗೋಚರವಾಯಿತು. ನನ್ನನ್ನಾರೂ ಇಲ್ಲಿ ಕರೆಯಲಿಲ್ಲ ಧರ್ಮ ಬೋಧನೆ ಮಾಡಲಿಲ್ಲ ಅಥವಾ ಧರ್ಮಾಂತರ ಮಾಡಲಿಲ್ಲ. ನಾನಾಗಿ ಬಂದೆ ನಾನಾಗಿ ನನ್ನನ್ನು ನಾನೇ ಬದಲಿಸಿಕೊಂಡೆ. ನನ್ನ ಮಗಳು ಮತ್ತು ಮನೆಯವರು ನಾನಾರಿಸಿಕೊಂಡ ಮಾರ್ಗದಲ್ಲೇ ನಡೆದರು. ನಾನು ಹರಳಯ್ಯನವರ ಮಟ್ಟಕ್ಕೆ ಬೆಳೆಯಲು ಪ್ರಯತ್ನಿಸುತ್ತಿರುವೆ. ಅವರು ಈ ಸಂಬಂಧಕ್ಕೆ ಒಪ್ಪಿದ್ದು ನಮ್ಮ ಪುಣ್ಯ.
ಈಗ ನಾನು ಕಂಡ ಹರಳಯ್ಯನವರೇ ಬೇರೆ ನನಗಿಂತಲೂ ಹೆಚ್ಚು ಅನುಭವಿಗಳು ಆಧ್ಯಾತ್ಮದಲ್ಲಿ ಉನ್ನತ ಸ್ಥಾನ ಪಡೆದವರು. ತಮ್ಮ ಕಾಯಕದಲ್ಲಿ ಕೈಲಾಸ ಕಂಡವರು. ನನ್ನ ಮಗಳು ಲಾವಣ್ಯವತಿ ಇಲ್ಲಿಗೆ ಬರಲು ಪ್ರಾರಂಭಿಸಿದ ಮೇಲೇ ಆಕೆಯ ಜೀವನಕ್ರಮ ಮತ್ತು ಆಚಾರ ವಿಚಾರಗಳಲ್ಲಿ ಬದಲಾವಣೆಯಾಯಿತು. ಆಗ ಅವಳು ಒಳ್ಳೆಯ ಗುಣಗಳ ಗಣಿಯಾದ ಕಾಯಕಯೋಗಿಯಾದ ಶೀಲವಂತನನ್ನು ಮೆಚ್ಚಿಕೊಂಡಳು. ನನ್ನ ಮುಂದೆ ಅವನನ್ನು ಮದುವೆಯಾಗುವ ಪ್ರಸ್ತಾಪವನ್ನಿಟ್ಟಳು.
ಹರಳಯ್ಯನವರ ಮಗ ಶಿಲವಂತನ ನಡವಳಿಕೆ ಕೆಲವು ದಿನ ಗಮನಿಸಿದೆ. ನನ್ನ ಮಗಳಿಗೆ ಇವನಿಗಿಂತ ಅನುರೂಪವಾದ ವರ ಮತ್ತು ಒಳ್ಳೆಯ ಮನೆತನ ಸಿಗುವದಿಲ್ಲ ಎನಿಸಿತು. ಇಲ್ಲಿ ನಡೆಯುತ್ತಿರುವದು ಎರಡು ಶರಣ ಮನೆತನಗಳ ನಡುವೆ ನಡೆಯುವ ಸಂಬಂಧ. ಎಲ್ಲ ಪೊರೆಗಳನ್ನು ಕಳಚಿ ಪರಿಶುದ್ದವಾದ ಎರಡು ಜೀವಿಗಳ ನಡುವಿನ ಮದುವೆ,
ಹೊಸ ಸಮಾಜದ ಹೊಸ ವಿಚಾರಗಳ ಉಗಮದ ಸೂಚನೆ.
ಅಲ್ಲಿದ್ದ ಎಲ್ಲರೂ ಅವರ ಮಾತನ್ನ ಮಂತ್ರಮುಗ್ದರಾಗಿ ಕೇಳುತ್ತಿದ್ದರು. ನಡು ನಡುವೆ ತಾವು ರಚಿಸಿದ ವಚನಗಳು ಮತ್ತು ಶರಣರ ವಚನಗಳನ್ನು ಉದಾಹರಿಸುತ್ತಿದ್ದರು.
ಅಂತೂ ಕೊನೆಗೆ ನಾನಿಲ್ಲಿ ನನ್ನ ಮಗಳ ಮದುವೆಗೆ ನೆರೆದಿರುವ ಎಲ್ಲ ಶರಣರ ಅನುಮತಿ ಕೋರಿ ನೀವೆಲ್ಲ ಅವರನ್ನು ಆಶೀರ್ವದಿಸಲು ಕೋರುವೆ ಎಂದರು.
ಈ ಮದುವೆಗೆ ತಮ್ಮ ಒಪ್ಪಿಗೆ ಇದೆಯೇ?
ಇದುವರೆಗೆ ತಮ್ಮನ್ನು ತಾವು ಮರೆತಿದ್ದ ಜನರು ಎದ್ದು ನಿಂತು ಒಮ್ಮೆಲೆ ಘೋಷಿಸಿದರು " ಒಪ್ಪಿಗೆ ಇದೆ, ಒಪ್ಪಿಗೆ ಇದೆ".

ಅವರು ಬರುವಾಗ ಅಂದುಕೊಂಡ ಉದ್ದೇಶವನ್ನೇ ಮರೆತುಬಿಟ್ಟಿದ್ದರೋ ಅಥವಾ ಮಧುವರಸರ ಮಾತು ಒಪ್ಪಿಗೆಯಾಯಿತೋ ಗೊತ್ತಿಲ್ಲ. .
ನಿರ್ಣಯವಾದ ಬೆನ್ನಲ್ಲೇ ಬಸವಣ್ಣನವರು ಎದ್ದು ನಿಂತರು ಎಲ್ಲ ಕಡೆಗೆ ಮೌನ ಆವರಿಸಿತು

**ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ**

**ರಾಶಿಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯ**

**ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ**

**ನಾಳಿನ ದಿನಕ್ಕಿಂದಿನ ದಿನ ಲೇಸೆಂದು ಹೇಳಿರಯ್ಯ**

**ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ** "

-------ಅಣ್ಣ ಬಸವಣ್ಣ

ಎಂದು ಹೇಳಿ ಕುಳಿತುಕೊಂಡರು.
ಅಲ್ಲಿ ನೆರೆದಿರುವವರ ಸಮ್ಮುಖದಲ್ಲಿ ಸರಳವಾಗಿ ಮದುವೆ ನಡೆದೇ ಹೋಯಿತು.
ನೆರೆದವರೆಲ್ಲ ಆ ಸುಂದರ ದಂಪತಿಗಳಿಗೆ ಆಶಿರ್ವದಿಸಿ ಪ್ರಸಾದ ಸೇವಿಸಿ ಹೊರಟು ಹೋದರು.
ಸಂಪ್ರದಾಯವಾದಿಗಳ ಮತ್ತು ಯುವರಾಜನ ಸಂಚು ವಿಫಲವಾಯಿತು.
**ಗುರುವ:** ಎಲ್ಲ ಸಮಸ್ಯೆಗಳ ನಿವಾರಣೆಯಾಯಿತಲ್ಲ.
**ಭದ್ರಪ್ಪ:** ಸಮಸ್ಯೆ ಪ್ರಾರಂಭವಾದದ್ದು ಈಗ. ಸಂಪ್ರದಾಯವಾದಿ ಮುಖಂಡರೆಲ್ಲ ಧರ್ಮ ವಿರೋಧಿ ಕೆಲಸ ನಡೆದಿದೆ ಈ ಧರ್ಮದ್ರೋಹಿಗಳನ್ನು ಶಿಕ್ಷಿಸಿ ಎಂದು ಮಹಾರಾಜನಿಗೆ ದೂರು ಕೊಟ್ಟಿದ್ದಾರೆ. ನಾಳೆ ರಾಜ ಕರೆದ ಸಭೆಯಲ್ಲಿ ಈ ಬಗ್ಗೆ ನಿರ್ಣಯವಾಗಲಿದೆ. ನಾವು ನಮ್ಮ ಎಚ್ಚರಿಕೆಯಲ್ಲಿ ಇರಬೇಕು.
**"ನೀವು ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ. ನಿಮಗೆ ಮುತ್ತಿದವರೇ ನಿಮ್ಮನ್ನು ಕಾಯುತ್ತಾರೆ. ಅಣ್ಣನ ಮಾತು ಕೊಲಬೇಡ ನೆನಪಿಡಿ"**
ಎನ್ನುವ ಸಂದೇಶ ನಿಮಗೆ ತಿಳಿಸಲು ನನಗೆ ಹೇಳಿದ್ದಾರೆ.
ನಾನಿನ್ನು ಬರುತ್ತೇನೆ ಎಂದು ಹೇಳಿ ಕತ್ತಲಲ್ಲಿ ತನ್ನವರೊಂದಿಗೆ ಕರಗಿ ಹೋದ ಭದ್ರಪ್ಪ.

**ಬಾಣತಿ ರಕ್ಕಸಿಯಾದಡೆ ಮಕ್ಕಳ ಕಾಯುವರಿನ್ನಾರಯ್ಯಾ?**

**ಬಾಣತಿ ರಕ್ಕಸಿಯಾದಡೆ ಮಕ್ಕಳ ಕಾಯುವರಿನ್ನಾರಯ್ಯಾ ?**

**ಸೋಜಿಗದ ಮಾಯೆ ಸಟೆಯಪ್ಪ ಜಗವ ಪಿಡಿದಿರಲು**

**ಆ ಜಗವನಾ ಮಾಯಾಹಸ್ತದಿಂ ತೊಲಗಿಸುವರಿನ್ನಾರಯ್ಯಾ ?**

**ನಾ ಬಲ್ಲೆ, ನಾ ಹಿರಿಯನೆಂಬವರೆಲ್ಲರು ಮಾಯೆಯ ಅಣಲೊಳಗೆ ಸಿಕ್ಕಿದರು.**

**ಹರಿಹರಬ್ರಹ್ಮಾದಿಗಳೆಲ್ಲರೂ ಮಾಯೆಯ ಕೈಯ ಶಿಶುವಾದರಯ್ಯಾ.**

**ಸೌರಾಷ್ಟ್ರ ಸೋಮೇಶ್ವರಾ, ನಿನ್ನ ಮಾಯೆ**

**ಅಖಿಳಕ್ಕೆ ತಾನರಸಾದಳಯ್ಯಾ.** / 276.—ಆದಯ್ಯ.

ಭದ್ರುಪ್ಪ ಕತ್ತಲಲ್ಲಿ ಕರಗಿಹೋದಮೇಲೆ ನಾಯಕ ಮತ್ತು ನಾನು ಇಬ್ಬರೇ ಆ ಕಟ್ಟೆಯ ಮೇಲೆ ಕುಳಿತುಕೊಂಡಿದ್ದೆವು ಬಹಳಹೊತ್ತು ಮೌನವಾಗಿ.
ಈ ಸಲ ಸಂಚು ವಿಫಲವಾದ ಮೇಲೆ ಯುವರಾಜ ಸುಮ್ಮನಿರುತ್ತಾನೆಯೇ?.
ಅವನೇನು ಮಾಡಬಹುದು?
ಉತ್ತರ ಹೊಳೆಯಲಿಲ್ಲ.
ಆಜ್ಞೆ ಪಾಲಿಸುವದಷ್ಟೇ ತನ್ನ ಕೆಲಸವೆಂದು ತಿಳಿದು ನಡೆದಿದ್ದ ನಾಯಕ ನಿಧಾನವಾಗಿ ಮೆಲುದನಿಯಲ್ಲಿ ಕೇಳಿದ "ಹೋಗುವಾಗ ಭದ್ರಣ್ಣ ಹೇಳಿದ ಮಾತು ನನಗರ್ಥವಾಗಲಿಲ್ಲ ದೊರೆ".
ಭದ್ರಣ್ಣನ ಮಾತಿಗೆ ನಾನಾಗ ಲಕ್ಷ ಕೊಟ್ಟಿರಲಿಲ್ಲ. ನೆನಪಿಸಿಕೊಂಡು ಹೇಳಿದೆ ಭದ್ರಣ್ಣ ಹೆಳಿದ್ದು
"ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ, ನಿಮಗೆ ಮುತ್ತಿದವರೇ ನಿಮ್ಮನ್ನು ಕಾಯುತ್ತಾರೆ. ಅಣ್ಣನ ಮಾತು ಕೊಲಬೇಡ ನೆನಪಿಡಿ". ನಾಯಕ ಮೆಲುವಾಗಿ ಅದನ್ನೇ ಒಂದೆರಡು ಸಲ ಹೇಳಿದ. ಆಮೇಲೆ ಮತ್ತೆ ಕೈಬೆರಳು ಮಣಿಸುತ್ತ ಒಂದನೆಯ ಬೆರಳು ಮುಟ್ಟಿ "ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ", ಎರಡನೆಯ ಬೆರಳು ಮುಟ್ಟಿ "ನಿನಗೆ ಮುತ್ತಿದವರೇ ನಿಮ್ಮನ್ನು ಕಾಯುತ್ತಾರೆ" ಮತ್ತೆ ಮೂರನೆಯ ಬೆರಳು ಮುಟ್ಟಿ "ಅಣ್ಣನ ಮಾತು ಕೊಲಬೇಡ ನೆನಪಿಡಿ". ಇದನ್ನೇ ನಾಲ್ಕಾರುಸಲ ಮತ್ತೆ ಮತ್ತೆ ಮಾಡಿದ ಮೇಲೆ ನನ್ನನ್ನು ಕೇಳಿದ "ಅಣ್ಣ ಹೇಳಿದ್ದೇನು".
**ಗುರುವ:** ಕಲ್ಯಾಣಕ್ಕೆ ಬಂದ ಮೇಲೆ ನಾನು ಕೇಳಿದ ಅಣ್ಣನವರ ವಚನ

a. **"ಕಳಬೇಡ**
b. **ಕೊಲಬೇಡ**
c. **ಹುಸಿಯ ನುಡಿಯಲು ಬೇಡ**
d. **ಮುನಿಯಬೇಡ**
e. **ಅನ್ಯರಿಗೆ ಅಸಹ್ಯಪಡಬೇಡ**
f. **ತನ್ನ ಬಣ್ಣಿಸಬೇಡ**

**ಇದಿರ ಹಳಿಯಲು ಬೇಡ. ಇದೇ ಅಂತರಂಗಶುದ್ಧಿ**

**ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"**

--- ಬಸವಣ್ಣ.

ಇದರಲ್ಲಿಯ ಎರಡನೇಯ ಶಬ್ದ “ಕೊಲಬೇಡ”. ಇದು ಅಣ್ಣನವರು ಕೊಟ್ಟ ಆದೇಶ.
**ನಾಯಕ:** ಅದು ಹೇಗೆ ದೊರೆ ಕೊಲ್ಲದೇ ಕಾಯುವದು?
**ಗುರುವ:** ಮುತ್ತಿದವರೇ ಕಾಯುತ್ತಾರೆ ಎಂದು ಹೇಳಿದ್ದಾರೆ.
**ನಾಯಕ:** ನಿಮ್ಮನ್ನು ಮುತ್ತಿದವರಾರು?
**ಗುರುವ:** ನನ್ನಲ್ಲೇನಿದೆಯೆಂದು ನನ್ನನ್ನು ಮುತ್ತುತ್ತಾರೆ. ಬಡವರಲ್ಲಿ ಬಡವ ನಾನು.
**ನಾಯಕ:** ಈ ಪ್ರಶ್ನೆಗೆ ಉತ್ತರ ಸಿಕ್ಕರೆ ಎಲ್ಲ ಅರ್ಥ ಆಗುತ್ತದೆ ದೊರೆ.
ಎಷ್ಟೇ ಪ್ರಯತ್ನಪಟ್ಟರೂ ನೆನಪಾಗಲೊಲ್ಲದು. ವಿಚಾರಮಾಡುತ್ತ ಕಣ್ಮುಚ್ಚಿ ಕುಳಿತೆ ನನ್ನಲ್ಲಿ ನಾನು ಲೀನವಾದೆ. ಬೆಳಕಾಯಿತು. ಕಲ್ಯಾಣದಲ್ಲಿ ಏನಾಗಿರಬಹುದು? ಮತ್ತೆ ಮತ್ತೆ ಕಾಡುತ್ತಿರುವ ಪ್ರಶ್ನೆ.
ಕಲ್ಯಾಣದಿಂದ ಯಾರಾದರೂ ಬರುವವರೆಗೆ ಕಾಯಲೇಬೇಕು.
ಸಾಯಂಕಾಲವಾಗುತ್ತ ಬಂದ ಹಾಗೆ ಮನದ ಕಳವಳ ಹೆಚ್ಚಾಯಿತು. ನಾಯಕ ಆಕಾಶ ನೋಡುತ್ತ ಒಮ್ಮೆಲೆ ಚೀರಿದ.
**ನಾಯಕ:** ಅನಾಹುತ ಆಗಿದೆ ದೊರೆ.
**ಗುರುವ:** ಏನಾಯಿತು, ಏನಾಯಿತು
**ನಾಯಕ:** ಬಹಳ ದಿನಗಳ ಮೇಲೆ ರಣಹದ್ದುಗಳು ಕಲ್ಯಾಣ ಕಡೆ ಹಾರಿ ಹೋಗುತ್ತಿವೆ.
**ಗುರುವ:** ಅದು ಯಾವ ಅನಾಹುತದ ಮುನ್ಸೂಚನೆ
**ನಾಯಕ**: ಮೊದಲಿನಿಂದ ಕಲ್ಯಾಣದಲ್ಲಿ ತಪ್ಪುಮಾಡಿದವರಿಗೆ (ಎಳೆಹೂಟೆ) ಆನೆ ಕಾಲಿಗೆ ಕಟ್ಟಿಸಿ ಎಳೆದೊಯ್ದು ಅಗಸಿ ಬಾಗಿಲಿಗೆ ತೂಗುಹಾಕುವ ಶಿಕ್ಷೆ ವಿಧಿಸುತ್ತಿದ್ದರು. ಆ ಹೆಣದ ಹಸಿ ಮಾಂಸ ಮತ್ತು ಹಸಿರಕ್ತ ಕುಡಿಯಲು ಹದ್ದುಗಳು ಅಲ್ಲಿಗೆ ಹಾರಿ ಹೋಗುತ್ತಿದ್ದವು. ಆದರೆ ಅಣ್ಣ ಬಸವಣ್ಣ ಕಲ್ಯಾಣಕ್ಕೆ ಬಂದ ಮೇಲೆ ಯಾರಿಗೂ ಆ ರೀತಿಯ ಶಿಕ್ಷೆ ಆಗಲಿಲ್ಲ. ನಾವಾರೂ ಆ ಕಡೆ ಹದ್ದು ಹಾರಿ ಹೋದದ್ದನ್ನು ನೋಡಿಲ್ಲ. ಏನೋ ಅನಾಹುತ ಆಗಿದೆ ದೊರೆ.
ನನ್ನ ಮೈಯೊಮ್ಮೆ ಕಂಪಿಸಿತು. ನಾಲಗೆ ತೊದಲಿತು.
**ಗುರುವ:** ಬಸವ, ಬಸವ, ಬಸವ, ತಂದೆ ಬಸವಾ.
ನಾಯಕ ಮಾತನಾಡಲಿಲ್ಲ ನನ್ನೊಡನೆ ಬಸವ ಭಜನೆ ಮಾಡತೊಡಗಿದ. ಎಷ್ಟು ಹೊತ್ತು ಹಾಗೇ ಭಜನೆ ಮಾಡಿದೆವೊ ಗೊತ್ತಿಲ್ಲ. ಎಚ್ಚತ್ತಮೇಲೆ
**ಗುರುವ:** ಅಂದರೆ ನಿಜವಾಗಿ ಅಲ್ಲಿ ಯಾರಿಗಾದರು ಎಳೆಹೂಟೆ ಶಿಕ್ಷೆಯಾಗಿದೆಯಾ?
**ನಾಯಕ:** ಹಾರಿ ಹೋಗುವ ಹದ್ದುಗಳನ್ನು ನೋಡಿದರೆ ಅಲ್ಲಿ ಯಾರನ್ನಾದರೂ ನೇಣುಹಾಕಿರುವದು ನಿಜವೆನಿಸುತ್ತದೆ.
**ಗುರುವ:** ಇಂದು ಮಧುವರಸರು ಮತ್ತು ಹರಳಯ್ಯನವರ ವಿಚಾರಣೆ ಮಹಾರಾಜರು ನಡೆಸುವವರಿದ್ದರು.

**ನಾಯಕ:** ಅಂದರೆ ಅವರಿಗೆ ಶಿಕ್ಷೆ ಜಾರಿಯಾಯಿತೇ?
**ಗುರುವ:** ಹಾಗೆನ್ನಬೇಡ ನಾಯಕ. ಮಹರಾಜರು ಅಷ್ಟು ಕ್ರೂರಿಗಳಲ್ಲ.
**ನಾಯಕ:** ನಿಮಗೆ ಗೊತ್ತಿಲ್ಲ ದೊರೆ. ಮಹಾರಾಜರು ಮತ್ತು ಅವರ ಯೋಧರ ಕ್ರೂರತನ ಕಥೆಗಳಾಗಿ ಎಲ್ಲ ಕಡೆ ಪ್ರಚಾರವಾಗಿವೆ. ಸೋತ ಸೈನಿಕರು ಮತ್ತು ಅವರ ಪರಿವಾರದ ಮಕ್ಕಳು ಮತ್ತು ಹೆಣ್ಣುಮಕ್ಕಳನ್ನು ಬಿಡದೇ ಸಂಹರಿಸುತ್ತಿದ್ದರು. ಒಬ್ಬ ವೈರಿ ಉಳಿದರೆ ತಮಗೆ ಮುಂದೆ ಅಪಾಯ ಬರಬಹುದು ಎನ್ನುವ ಮುಂದಾಲೊಚನೆ ಅವರದು. ಕಾಲಿಗೆ ತೊಡರಿದ ಬಳ್ಳಿಯನ್ನು ಬೇರು ಸಹಿತ ಕಿತ್ತು ಎಸೆಯುವ ಸಂಪ್ರದಾಯ ಅವರದು.
**ಗುರುವ:** ನೀನು ಹೇಳುವ ಮಾತಿನ ಸಂಕೇತವೇನು?
**ನಾಯಕ:** ಒಂದುವೇಳೆ ಮಧುವರಸರು ಮತ್ತು ಹರಳಯ್ಯನವರಿಗೆ ಶಿಕ್ಷೆ ಜಾರಿಯಾಗಿದ್ದರೆ ಅವರ ಬಂಧು ಬಳಗ ಮತ್ತು ಅವರ ಬೆಂಬಲಿಗರಾರನ್ನೂ ಜೀವಂತ ಬಿಡುವದಿಲ್ಲ. ವೈರಿಗಳ ನಾಮಾವಶೇಷ ಮಾಡುವದರಲ್ಲಿ ಅವರು ಜಾಣರು. ನನ್ನ ಸಂಬಂಧಿಕರೆಲ್ಲ ತಲೆತಲಾಂತರದಿಂದ ರಾಜರುಗಳ ಸೇನೆಯಲ್ಲಿ ಯೋಧರಾಗಿದ್ದಾರೆ. ಅವರೆಲ್ಲರ ಅನುಭವ ಇದೇ ಆಗಿದೆ.
ಮೌನಿಬಾಬ ನಾಯಕ ನಿಜವಾಗಿಯೂ ಅನುಭವಿ ಯೋಧ ಅವನ ಯೋಚನೆ ಸರಿಯಾದ ದಾರಿಯಲ್ಲಿದೆ ಎನಿಸಿತು.
**ಗುರುವ:** ನೀನನ್ನುವದು ಅವನು ಶರಣರಿಗೆ ತೊಂದರೆ ಕೊಡುತ್ತಾನೆ ಎನಿಸುತ್ತದೆಯೇ?
**ನಾಯಕ:** ಕಲ್ಯಾಣದಲ್ಲಿ ಅಣ್ಣ ಬಸವಣ್ಣನವರಿರುವರೆಗೆ ಮಹಾರಾಜರಿಂದ ಹಾಗಾಗುವದಿಲ್ಲ. ಮಹಾರಾಜರಿಗೆ ಅಪಾಯವಾದರೆ ಏನನ್ನೂ ಹೇಳಲಾಗುವದಿಲ್ಲ.
**ಗುರುವ:** ಅಂದರೆ ಮಹಾರಾಜರೂ ಅಪಾಯದಲ್ಲಿದ್ದಾರೆಯೇ?
**ನಾಯಕ:** ಅವರು ಅಪಾಯದಲ್ಲಿದ್ದು ಬಹಳ ದಿನಗಳಾದವು. ಅಣ್ಣನವರ ಸ್ನೇಹ ಅವರನ್ನು ಪಾರುಮಾಡಿದೆ.
ನನಗರಿವಿಲ್ಲದಂತೆ ನನ್ನ ಕಣ್ಣಿನಿಂದ ನೀರು ಹರಿಯುತ್ತಿತ್ತು.
**ನಾಯಕ:** ದೊರೆ ಇದು ದು:ಖ ಪಡುವ ಸಮಯವಲ್ಲ. ನೀವು ವೀರ ಯೊಧರ ಪಡೆ ಮುನ್ನಡೆಸಬೇಕು.
**ಗುರುವ:** ಅಂದರೆ
**ನಾಯಕ**: ನಿಮಗೆ ಕಳುಹಿಸಿದ ಸಂದೇಶದ ಮೊದಲ ಸಾಲು "ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ" ಇದನ್ನೇ ಹೇಳುತ್ತದೆ. ನಮ್ಮನ್ನೆಲ್ಲ ಮುನ್ನಡೆಸಬೇಕಾದವರು ನೀವು.
**ಗುರುವ:** ಹೌದಾ!
**ನಾಯಕ:** ನಾವು ಯಾರನ್ನೂ ಕೊಲ್ಲದೆ ಗೆಲ್ಲುವ ಉಪಾಯ ಶರಣರು ತಿಳಿಸಿದ್ದಾರೆ. ಅದರ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿ. ಕಲ್ಯಾಣ ಸೈನಿಕರು ತರಬೇತಿ

ಪಡೆದ ವೀರ ಯೋಧರು ಅವರ ತುಕಡಿಯನ್ನು ಎದುರಿಸುವದು ಅಸಾಧ್ಯ ಒಬ್ಬ ಯೋಧ ಇರುವವರೆಗೂ ಅವರು ಹೋರಾಡುತ್ತಾರೆ.
**ಗುರುವ:** ಗಾಣ ತಿರುಗಿಸಿ ಗೊತ್ತಿರುವ ನನಗೆ ಕತ್ತಿ ತಿರುಗಿಸಲು ಸಾಧ್ಯವೇ?
**ನಾಯಕ:** ಅದಕ್ಕಾಗಿಯೇ ಶರಣರು ಉಪಾಯ ಹೇಳಿದ್ದಾರೆ ದಯಮಾಡಿ ನಿಮ್ಮನ್ನು ಮುತ್ತಿದ್ದವರಾರು ನೆನಪಿಸಿಕೊಂಡು ಹೇಳಿ.
**ಗುರುವ:** ಸರಿ
ಮತ್ತೆ ಕಣ್ಣುಮುಚ್ಚಿಕೊಂಡು ಕುಳಿತೆ ನನ್ನನ್ನು ನಾನು ಮರೆತೆ. ಮನದ ಎಲ್ಲ ಕಡೆ ಬಯಲು, ಅಲ್ಲಿ ತಿಳಿಬೆಳದಿಂಗಳ ಬೆಳಕು ತುಂಬಿತ್ತು.

1. **ಶಿವಭಕ್ತನಾಗಿ ತನ್ನ ಹಿಡಿದೆಹೆನೆಂದು ಹೋದಡೆ;**
   **ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣ ಮಾಡುವ, ಮಸಿಯ ಮಾಡುವ.**
   **ಕೂಡಲಸಂಗಮದೇವರ ನೆರೆ ನಂಬಿದನಾದಡೆ; ಕಡೆಗೆ ತನ್ನಂತೆ ಮಾಡುವ. / 1203**—
   ಅಣ್ಣ ಬಸವಣ್ಣ
2. **ನಂಬಿದೆನಯ್ಯಾ ನಾನು, ನಚ್ಚಿದೆನಯ್ಯಾ ನಾನು,**
   **ಬದುಕಿದೆನಯ್ಯಾ ನಾನು ನಿಮ್ಮ ಕೃಪೆಯಿಂದಲಿ, ಹಾಳು ಕುಳಿಯಲ್ಲಿ ಬಿದ್ದ ಪಶುವಿನ ಕರುವ ತೆಗೆದು**
   **ತಾಯ ಮುಖವ ತೋರುವಂತೆ, ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ ಕೂಡಲಸಂಗನ ಶರಣರ ಚರಣವ ತೋರಿ, ಎನ್ನನುಳುಹಿದನು.**
   **ಹೋದ ಜೀವಕ್ಕೆ ತನ್ನ ಕರುಣವೆಂಬ ಮರುಜವಣಿಯ ಹಿಂಡಿ ಎತ್ತಿದನು,**
   **ಚೆನ್ನಬಸವಣ್ಣನಿಂದಲೆಂತಕ್ಕೆ ಬದುಕಿದೆನು.** / 774.
   — ಅಣ್ಣ ಬಸವಣ್ಣ

ಮನದ ತುಂಬ ಬೆಳದಿಂಗಳ ಬೆಳಕು ಸ್ವಲ್ಪ ಸ್ವಲ್ಪ ಕಡಿಮೆಯಾಗತೊಡಗಿತು ಅಲ್ಲಿ ಮೂಡಿತ್ತು ಒಬ್ಬ ಕುಳಿತ ವ್ಯಕ್ತಿಯ ಚಿತ್ರ ಅವನ ಮೈತುಂಬ ಜೇನುಹುಳಗಳು. ಆಗ ಎಲ್ಲಿಂದಲೋ ಕೇಳಿಸಿದ ದನಿ "ದೊರೆ, ದೊರೆ". ನನಗರಿಯದೇ ಬಂದ ಉತ್ತರ "ನಾನೇನು ಮಾಡಲಿ ಜೇನುಹುಳಗಳು ಮುತ್ತಿವೆ." ಮತ್ತೆ ಮತ್ತೆ ಕೂಗಿದ ದನಿ ಕೇಳಿ ಕಣ್ಣುಬಿಟ್ಟೆ. ಎದುರಿಗೆ ನಾಯಕ ಕೈಕಟ್ಟಿ ನಿಂತಿದ್ದ.
**ನಾಯಕ:** ನಿಮ್ಮನ್ನು ಮುತ್ತಿದ್ದವರಾರು ಗೊತ್ತಾಯಿತು ಪ್ರಭು
**ಗುರುವ:** ನಿಮಗೆ ಸರಿ ಅನಿಸಿದ ಕ್ರಮ ಕೈಕೊಳ್ಳಿ.
**ನಾಯಕ:** ಸರಿ ದೊರೆ ಬನ್ನಿ.
ಅವನ ಹಿಂದೆ ಹೊರಟೆ, ಅಲ್ಲಿಂದ ಸ್ವಲ್ಪ ದೂರ ಸಾಗಿ ಕಡಿದಾದ ಬೆಟ್ಟ ಏರಿ ಹೋದಮೇಲೆ ಅಲ್ಲಿ ಕಲ್ಲುಗಳ ಮರೆಯಲ್ಲಿಯ ಜಾಗದಲ್ಲಿ ಕುಳಿತುಕೊಳ್ಳಲು ಹೇಳಿದ. ಅಲ್ಲಿ ಕೌದಿ ಹಾಸಿ ಮೆತ್ತನೆಯ ಹಾಸಿಗೆ ಮಾಡಲಾಗಿತ್ತು. ಅಲ್ಲಿ

ಕುಳಿತುಕೊಂಡ ಮೇಲೆ ಕುಡಿಯಲು ನೀರು ಕೊಟ್ಟ ಈ ಹಣ್ಣುಗಳನ್ನು ತಿನ್ನಿ ನಿನ್ನೆಯಿಂದ ಏನನ್ನು ನೀವು ತಿಂದಿಲ್ಲ. ಸರಿ ಎಂದೆ ಅವನು ಕೊಟ್ಟ ಹಣ್ಣು ತಿಂದೆ. ನಾವು ಕುಳಿತಲ್ಲಿಂದ ಆ ವಿಶಾಲವಾದ ಕೆರೆ ಕಾಣುತ್ತಿತ್ತು. ಕೆರೆಯ ಸುತ್ತಲೂ ಬೆಳೆದ ದಟ್ಟವಾದ ಬೆಳೆದ ಗಿಡಗಳು.

ನೀವಿನ್ನು ಮಲಗಿಕೊಳ್ಳಿ ದೊರೆ. ನಿಮ್ಮಿಂದ ಮುಂದೆ ಆಗುವ ಘಟನೆಗಳನ್ನು ನೋಡಲಾಗುವದಿಲ್ಲ. ನಾವು ಶರಣರ ಆದೇಶದಂತೆ ನಡೆಯುವೆವು. ನಾನು ನಿದ್ದೆ ಮಂಪರಿನಲ್ಲಿ ಸರಿ ಎನಿಸಿದಂತೆ ಮಾಡಿ ಕೊಲಬೇಡಿ ಎಂದು ನಿದ್ದೆಗೆ ಜಾರಿದೆ. ಎಷ್ಟು ಹೊತ್ತು ನಿದ್ರೆ ಮಾಡಿದೆ ಗೊತ್ತಿಲ್ಲ. "ದೊರೆ ದೊರೆ ಎದ್ದೇಳಿ' ಎಂದು ನಾಯಕ ಕೂಗಿ ಕರೆದಾಗಲೇ ಎಚ್ಚರ. ಎದ್ದು ಅವನು ಕೊಟ್ಟ ನೀರು ಕುಡಿದು ಸುತ್ತಲೂ ನೋಡಿದೆ. ಆಗಲೇ ಸಾಯಂಕಾಲವಾಗುತ್ತಿತ್ತು. ತಂಗಾಳಿ ಬೀಸುತ್ತಿತ್ತು. ಎದ್ದವನೇ ಗಾಬರಿಯಿಂದ ಕೇಳಿದೆ

**ಗುರುವ:** ಏನಾಯಿತು.

**ನಾಯಕ:** ನಿಮ್ಮ ಆದೇಶ ಪಾಲನೆಯಾಯಿತು.

**ಗುರುವ:** ಏನಾಯಿತು ವಿವರಿಸಿ ಹೇಳಿ ನಾಯಕ.

**ನಾಯಕ:** ನಿಮ್ಮನ್ನು ಮುತ್ತಿದವರು ನಮ್ಮನ್ನು ಕಾಯ್ದರು. ಅಣ್ಣನವರ ಆದೇಶ "ಕೊಲಬೇಡ" ಪಾಲನೆಯಾಯಿತು.

**ಗುರುವ:** ಏನಾಯಿತು ಎಲ್ಲವನ್ನು ವಿವರಿಸಿ ನನಗೇನು ತಿಳಿಯದಾಗಿದೆ.

**ನಾಯಕ:** ನೀವು ಎಚ್ಚರಾಗಿ ಹೇಳಿದ್ದು "ಜೇನುಹುಳಗಳು ಮುತ್ತಿವೆ" ಎನ್ನುವ ಮಾತು. ಅಂದು ಕೆರೆಯದಂಡೆಯಮೇಲೆ ನೀವು ಕುಳಿತಾಗ ರಾಣಿ ಜೇನೊಂದು ನಿಮ್ಮ ತಲೆಯಮೆಲೆ ಕುಳಿತುಕೊಂಡಿತು ಅದನ್ನನುಸರಿರಿಸಿ ನಿಮ್ಮ ಮೇಲೆ ಎಲ್ಲ ಜೇನುನೊಣಗಳು ಬಂದು ಮೆತ್ತಿದವು. ಆಮೇಲೆ ಏನಾಯಿತೋ ಗೊತ್ತಿಲ್ಲ ಅವೆಲ್ಲ ಹಾರಿ ಹೋದವು ನೀವು ಕಣ್ಣು ತೆಗೆದಿರಿ.

**ಗುರುವ:** ಹೌದು ಆದಾವದೂ ನನಗೆ ಗೊತ್ತಾಗದಿದ್ದರೂ ನನ್ನಾಕೆ ಹೇಳಿದ ಮೇಲೇಯೆ ಗೊತ್ತಾಯಿತು. ಅದಕ್ಕೂ ಇಂದು ನಡೆದ ಘಟನೆಗೂ ಏನು ಸಂಬಂಧ.

**ನಾಯಕ:** ನಿಮಗೆ ಕಲ್ಯಾಣದಿಂದ ಬಂದ ಸಂದೇಶ "ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ, ನಿಮಗೆ ಮುತ್ತಿದವರೇ ನಿಮ್ಮನ್ನು ಕಾಯುತ್ತಾರೆ. ಅಣ್ಣನ ಮಾತು ಕೊಲಬೇಡ ನೆನಪಿಡಿ"

**ಗುರುವ:** ಹೌದು ನೆನೆಪಿದೆ.

**ನಾಯಕ:** ನೀವು ಧ್ಯಾನದಲ್ಲಿ ಹೇಳಿದ್ದು "ಜೇನುಹುಳಗಳು ಮುತ್ತಿವೆ",

**ಗುರುವ:** ನಾನೆಲ್ಲಿ ಧ್ಯಾನ ಮಾಡಿದೆ. ನಾನು ಕುಳಿತುಕೊಂಡು ಕಣ್ಣುಮುಚ್ಚಿದರೆ ಸಾಕು ಎಲ್ಲ ಮರೆತು ಬಯಲಲ್ಲಿ ಬಯಲಾಗುತ್ತೇನೆ.

**ನಾಯಕ:** ಅದೇ ದೊರೆ ರಾತ್ರಿಯೆಲ್ಲ ಹಾಗೇ ಕುಳಿತಿದ್ದು ಕೊನೆಯದಾಗಿ ನೀವು ಹೇಳಿದ ಮಾತು "ಜೇನುಹುಳಗಳು ಮುತ್ತಿವೆ". ನಿಮಗೆ ವಿಶ್ರಾಮದ ಅವಶ್ಯಕತೆ ಇದೆ

ಮತ್ತು ಮುಂದೆ ನಡೆಯುವ ಘಟನೆಗಳನ್ನು ನೋಡುವದು ನಿಮ್ಮಿಂದಾಗುವದಿಲ್ಲ ಎಂದು ತಿಳಿದು ನಿಮ್ಮನ್ನು ಬಂಡೆಮರೆಯಲ್ಲಿ ಕರೆದುಕೊಂಡು ಹೋಗಿ ಕುಳ್ಳಿರಿಸಿದೆ.
**ಗುರುವ:** ಅದು ನೆನಪಿಗೆ ಬರುತ್ತಿದೆ ಆಗ ಕಂಡ ಕೆರೆ ಮತ್ತು ಸುತ್ತಲೂ ಬೆಳೆದ ಮರಗಳ ಸುಂದರ ನೋಟ ಇನ್ನೂ ನೆನಪಿದೆ.
**ನಾಯಕ:** ನೀವು "ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ" ಎಂದು ನನಗೆ ಆಜ್ಞಾಪಿಸಿದಿರಿ. ನಿಮಗೆ ಹಸಿವಾಗಿತ್ತು ಹಣ್ಣು ತಿನ್ನಲು ಕೊಟ್ಟೆ. ನೀವು ಹಣ್ಣು ತಿಂದು ಮಲಗಿದಿರಿ.
**ಗುರುವ:** ಇದುವರೆಗಿನ ವಿಷಯಗಳೆಲ್ಲ ನೆನಪಿವೆ. ಮುಂದೇನಾಯಿತು?
**ನಾಯಕ:** ನಿಮಗೆ ಕೊಟ್ಟ ಹಣ್ಣುಗಳು ನಿಮ್ಮನ್ನು ಶಾಂತವಾಗಿ ಇದುವರೆಗೆ ಮಲಗುವಂತೆ ಮಾಡಿದವು ಕ್ಷಮಿಸಿ. ನೀವು ಮಲಗಿದಮೇಲೆ ನಾನು ಶರಣರು ಕಳಿಸಿದ ಅದೇಶ ಏನು ಎಂದು ವಿಚಾರಿಸತೊಡಗಿದೆ.
ಕಲ್ಯಾಣದ ಸೇನಾ ತುಕಡಿ ಎಂದರೆ ಸುಮಾರು ಐದಾರು ಸಾವಿರ ಯೋಧರ ಗುಂಪು. ಅವರನ್ನು ಕೆಣಕಿದವರಾರೂ ಬದುಕುಳಿಯುವದಿಲ್ಲ ಅದಕ್ಕಾಗಿಯೇ "ಕೊಲಬೇಡ" ಎಂದು ಹೇಳಿದ್ದು. ನಾವು ಒಬ್ಬನನ್ನು ಕೊಂದರೆ ಸಾಕು ನಮ್ಮೆಲ್ಲರ ಸಾವು ಖಚಿತ ಅದಕ್ಕಾಗಿ ನಾನು ಯಾವುದೇ ಸಂದರ್ಭದಲ್ಲಿ ಸೈನಿಕರಿಗೆ ಯಾರ ಕಣ್ಣಿಗೂ ಕಾಣಬೇಡಿ ಮತ್ತು ಯಾರನ್ನೂ ಕೊಲ್ಲಬೇಡಿ ಎಂದು ನಮ್ಮವರಿಗೆ ಹೇಳಿದೆ. ನಾವು ಅವರನ್ನು ಎದುರಿಸದಿದ್ದರೂ ಅವರು ನಮ್ಮನ್ನು ಹುಡುಕಿ ಕೊಲ್ಲುವದು ನಿಸ್ಚಿತ ಅವರನ್ನು ಎದುರಿಸುವದು ಹೇಗೇ? ನೀವು ಜೇನುಹುಳಗಳು ನಿಮ್ಮನ್ನು ಮುತ್ತಿದ್ದವು ಎಂದಿರಿ ಶರಣರ ಸಂದೇಶ ನಿಮ್ಮನ್ನು ಮುತ್ತಿದವರು ಕಾಯುತ್ತಾರೆ ಎನ್ನುವ ಮಾತು ನಾವೇನು ಮಾಡಬೇಕು ಎನ್ನುವದನ್ನು ಸೂಚಿಸಿತು.
**ಗುರುವ:** ನನಗೇನು ಅರ್ಥವಾಗಲಿಲ್ಲ.
**ನಾಯಕ:** ನಾನು ನನ್ನ ಎಲ್ಲ ಬಿಲ್ಲುಗಾರರಿಗೆ ಒಂದು ಕೌದಿ ತೆಗೆದುಕೊಂಡು ಕೆರೆಯ ದಂಡೆಯ ಮೇಲಿರುವ ಗಿಡಗಳಲ್ಲಿ ಅವಿತು ಕುಳಿತುಕೊಳ್ಳಬೇಕು ಮತ್ತು ನಾನು ಸೂಚನೆಕೊಟ್ಟಾಗ ಅಲ್ಲಿರುವ ಜೇನುಗೋಡುಗಳನ್ನೆಲ್ಲ ಬಾಣಬಿಟ್ಟು ನೆಲಕ್ಕೆ ಕೆಡವಬೇಕು. ಅಲ್ಲಿ ಸಾವಿರಾರು ಜೇನುಗೂಡುಗಳು ಇವೆ ಆ ಗಿಡಗಳ ದೊಡ್ಡ ದೊಡ್ಡ ಎಲೆಯ ಮರೆಯಲ್ಲಿ ಅವು ಕಾಣುವದಿಲ್ಲ.
**ಗುರುವ:** ಹೌದು ಇಲ್ಲಿರುವ ಜೇನುಗಳು ಕಡಿದರೆ ಸಾಕು ಮೂರ್ಚೆಹೋಗುತ್ತಾರೆ ಎಂದು ಕೇಳಿದ ನೆನಪು.
**ನಾಯಕ:** ನಮ್ಮ ನಿರೀಕ್ಷೆಯಂತೆ ಒಂದು ಯೋಧರ ಪಡೆ ಮಧ್ಯಾನ್ಹದ ಹೊತ್ತಿಗೆ ಇಲ್ಲಿಗೆ ಬಂತು. ಅವರ ಕಣ್ಣಿಗಾರೂ ಬೀಳಲಿಲ್ಲ. ಹುಡುಕುತ್ತ ಹುಡುಕುತ್ತ ಕೆರೆಯ ದಂಡೆಗೆ ಬಂದರು. ಸುಡುವ ಬಿಸಿಲಿನಲ್ಲಿ ಬಂದ ಅವರಿಗೆ ತಂಪಾದ ನೆರಳು ಶುಭ್ರವಾದ ನೀರು ಕಂಡು ಸ್ವರ್ಗವೇ ಸಿಕ್ಕಂತಾಯಿತು. ಇಲ್ಲಿಯೇ ಊಟ ಮಾಡಿ ಮುಂದೆ ಸಾಗುವ ಈಗ ಸುಧಾರಿಸಿಕೊಳ್ಳಿ ಎನ್ನುವ ಮಾತು ಅವರ ಕಿವಿಗೆ ಬಿದ್ದದ್ದೇ ತಡ ಐದಾರು ಸಾವಿರದಷ್ಟಿದ್ದ ಯೋಧರು ಅಲ್ಲಿರುವ ಗಿಡದ ನೆರಳಲ್ಲಿ ತಮ್ಮ

ಬಟ್ಟೆ ಕಳಚಿ ನೀರಿಗೆ ಧುಮುಕಿ ಈಸಲಾರಂಭಿಸಿದರು ಒಬ್ಬರನ್ನೊಬ್ಬರು ಕರೆದು ನೀರಿನಲ್ಲಾಡುವದರಲ್ಲಿ ತೊಡಗಿದರು. ಅಲ್ಲಿದ್ದ ಎಲ್ಲರೂ ವೀರಯೊಧರು, ಯುವಕರು ಮತ್ತು ಈಜುಪ್ರವೀಣರು. ಹೀಗಾಗಿ ನೀರು ಕಂಡರೆ ಸುಮ್ಮನಿರಲಾಗುತ್ತದಯೇ? ಎಲ್ಲರೂ ನೀರಿಗಿಳಿದರು. ನಾನು ಬಾಣಬಿಡಲು ಸೂಚಿಸಿದೆ. ಜೇನುಗೂಡುಗಳು ನೆಲಕ್ಕೆ ಅಪ್ಪಳಿಸುತ್ತಿದ್ದಂತೆ ಸಿಟ್ಟಿಗೆದ್ದ ಜೇನುಹುಳುಗಳು ಕೆರೆಯಲ್ಲಿದ್ದ ಯೊಧರ ಕಡೆ ಧುಮಕತೊಡಗಿದವು. ಅದನ್ನು ಕಂಡ ಯೊಧರು ನೀರಲ್ಲಿ ಮುಳುಗಿ ಸುರಕ್ಷಿತವೆಂದು ಭಾವಿಸಿದರು. ಕೆರೆಯ ಮೇಲಿದ್ದ ಕೆಲವು ಯೋಧರೂ ಸಹ ನೀರಿಗೆ ಧುಮಿಕಿ ರಕ್ಷಣೆ ಪಡೆದರು. ನಮ್ಮವರು ಜೇನುಗೂಡು ಕೆಡವುತ್ತಲೇ ಹೋದರು. ಕೆರೆಯ ಮೇಲೆ ಜೇನು ಹುಳುಗಳ ಹಾರಟ ಮತ್ತು ಜೇಂಕಾರ ಮುಗಿಲು ಮುಟ್ಟಿತು. ನೀರಲ್ಲಿ ಎಷ್ಟು ಹೊತ್ತು ಮುಳುಗಿರಲು ಸಾಧ್ಯ ನೀರ ಮೇಲಿಂದ ಒಂದು ತಲೆ ಅಥವಾ ದೇಹದ ಭಾಗ ಹೊರಬಂದರೆ ಸಾಕು ಜೇನುನೊಣಗಳು ದಾಳಿಯಿಡುತ್ತಿದ್ದವು. ಯೊಧರ ಚೀತ್ಕಾರ ಕೇಳುತ್ತಿತ್ತು. ಒಂದು ಹುಳ ಕಡಿದರೆ ಸಾಕು ನೀರಲ್ಲಿ ಮೂರ್ಚೆಹೋಗಿಬಿದ್ದ ಅವರ ಸಾವಾಗುತ್ತಿತ್ತು. ಸ್ವಲ್ಪಹೊತ್ತಿನಲ್ಲಿ ಹುಳುಗಳು ನಮ್ಮಕಡೆ ಹಾರಿ ಬರಲಾರಂಬಿಸಿದವು ನಾನೂ ನಿಮ್ಮಹಾಗೆ ಕೌದಿ ಹೊದ್ದು ಕುಳಿತುಕೊಂಡೆ. ಆಮೇಲೆ ಯಾರ ಚೀರಾಟವೂ ಕಾಣಲಿಲ್ಲ ಮತ್ತು ಜೇನುಹುಳುಗಳ ಝೇಂಕಾರವೂ ಕಡಿಮೆಯಾಯಿತು. ಬಿಸಿಲು ಕಡಿಮೆಯಾದ ಹಾಗೆ ಅವುಗಳ ಸಿಟ್ಟು ಕಡಿಮೆಯಾಗಿ ಲಕ್ಷವೆಲ್ಲ ಹೊಸ ಗೂಡುಕಟ್ಟುವದರಲ್ಲಿ ಹೋಗುತ್ತದೆ. ನಮ್ಮವರೆಲ್ಲ ಅಲ್ಲಿಂದ ಇಳಿದು ಸುರಕ್ಷಿತ ಸ್ಥಾನದಲ್ಲಿದ್ದಾರೆ. ನಾವರನ್ನು ಕೊಲ್ಲಲಿಲ್ಲ ಆದರೂ ಯೊಧರಾರೂ ಬದುಕುಳಿಯಲಿಲ್ಲ. ಅವನು ಕೈಮುಗಿದು ಬಸವ, ಬಸವ, ತಂದೆ ಬಸವ ಎನ್ನತೊಡಗಿದ. ನಾನೂ ಅವನೊಡನೆ ದನಿಗೂಡಿಸಿದೆ.

**ನಾಯಕ:** ಮುಂದೇನು ಮಾಡುವದು.

**ಗುರುವ:** ಬಸವಣ್ಣ ದಾರಿತೋರಿಸುತ್ತಾನೆ. ಸಧ್ಯಕ್ಕೆ ಅವನನ್ನು ನೆನೆಯೋಣ ಎಂದು ಕಣ್ಣುಮುಚ್ಚಿ ಕುಳಿತೆ.

**ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯಾ**.

**ಎನ್ನ ಆಪತ್ತು, ಸುಖ-ದುಃಖವನಿನ್ನಾರಿಗೆ ಹೇಳುವೆ**

**ಶರಣಸ್ಥಲದವರಿಗೆ ಹೇಳಿದಡೆ ಮಚ್ಚರ !**

**ಸವತಿ-ಸಕ್ಕರೆ, ಬೇವು-ಬೆಲ್ಲ ಉಂಟೆ! ಇನ್ನಾರಿಗೆ ಹೇಳುವೆ!**

**ಕೂಡಲಸಂಗಮದೇವಾ, ಜಂಗಮವಾಗಿ ಬಂದು**

**ಎನ್ನ ಮನದ ಸೂತಕವ ಕಳೆಯಾ.** / 329—ಅಣ್ಣ ಬಸವಣ್ಣ

**ನಾಯಕ:** ಕತ್ತಲಾಗುತ್ತ ಬಂತು ಹೋಗೋಣ ಬನ್ನಿ. ಇಲ್ಲಿ ನಡೆದ ವಿಷಯಗಳೆಲ್ಲ ಮಾಚಣ್ಣನವರಿಗೆ ಗೊತ್ತಾಗಿದೆ, ಇನ್ನು ನೀವಿಲ್ಲಿರುವದು ಬೇಡ ಕಳಿಸಿಕೊಡಿ ಎನ್ನುವ ಸಂದೇಶ ಕಳಿಸಿದ್ದಾರೆ.
**ಗುರುವ:** ಸರಿ ಹಾಗೇ ಆಗಲಿ. ಬಸವಣ್ಣ ನಮಗೆ ದಾರಿತೋರಿಸುತ್ತಾನೆ.
ನಾವು ಗಾಣ ಹಾಕಿದ ಜಾಗಕ್ಕೆ ಬಂದೆವು. ಅಲ್ಲಿ ಗಾಣಕ್ಕೆ ನಮಸ್ಕರಿಸಿ ಬಸವ ಬಸವ ಎಂದೆ. ಅಲ್ಲಿಗೇ ನನ್ನ ಬಂಡಿ ಹೊಡೆದುಕೊಂಡು ಕೆಂಪರಾಜ ಬಂದ. ನಾನು ಗಂಜೀಹಾಳ ಬಿಡುವಾಗ ಇದ್ದ ಹಾಗೆಯೆ ನನ್ನ ಬಂಡಿಯಲ್ಲಿ ಸಾಮಾನುಗಳನ್ನು ಹೇರಿದ್ದರು. ನನ್ನ ಎತ್ತುಗಳು ನನ್ನ ಕಂಡ ಸಂತೋಷಕ್ಕೆ ಗೋಣ ಆಡಿಸಿ ಗೆಜ್ಜೆ ಸಪ್ಪಳ ಮಾಡಿದವು. ಅವುಗಳನ್ನು ಅಪ್ಪಿ ಮುದ್ದಾಡಿದೆ. ಅಷ್ಟರಲ್ಲಿ ಪ್ರೀತಿಯಿಂದ ಮೈಯೆಲ್ಲ ನೆಕ್ಕುವ ಅನುಭವ. ನನ್ನಾಕೆಯ ಮುದ್ದಿನ ಕರ ಅಲ್ಲಿತ್ತು ಮತ್ತು ಆ ಎರಡು ಆಕಳುಗಳೂ ಅಲ್ಲಿದ್ದವು. ಅವನ್ನೆಲ್ಲ ನೋಡಿದಾಗ ನನ್ನಾಕೆಯ ನೆನಪಾಯಿತು. ಆಕೆ ಎಲ್ಲರೊಡನೆ ಮೇಲಿನ ಗವಿಗೆ ಹೋದ ನೆನಪಾಯಿತು.
**ಕೆಂಪರಾಜ:** ಗಾಡಿ ಹತ್ತಿ ಅಣ್ಣ ನಾವು ಹೋಗೋಣ.
**ನಾಯಕ:** ನಿಮ್ಮ ಬಟ್ಟೆಗಳನ್ನು ಬದಲು ಮಾಡಿ.
ನಾನು ಹಾಕಿಕೊಂಡಿದ್ದ ಬಣ್ಣದ ಕಸೂತಿಯ ಬಟ್ಟೆ ಕಳಚಿಟ್ಟು ನನ್ನ ಬಟ್ಟೆ ಧರಿಸಿದೆ. ಅವುಗಳಿಂದ ಬರುತ್ತಿದ್ದ ಕಮಟು ವಾಸನೆ ಬಹಳ ಹಿತವೆನಿಸಿತು. ತಲೆಯ ಮೇಲೆ ಅಣ್ಣ ಕೊಟ್ಟ ಶಲ್ಲೆಯ ತುಂಡು ಸುತ್ತಿಕೊಂಡೆ. ಮತ್ತೆ ಮನದಲ್ಲಿ ಮೂಡಿದ ಪ್ರಶ್ನೆ
"ನನ್ನವಳು ಎಲ್ಲಿ?. ಆಕೆಯನ್ನು ಇಲ್ಲಿಯೇ ಬಿಟ್ಟು ಹೋಗುವದೇ?
**ಕೆಂಪರಾಜ:** ಚಿಂತೆಬೇಡ ಅಣ್ಣ ಕರುವನ್ನು ಹುಡುಕಿಕೊಂಡು ಅಕ್ಕ ಬರುತ್ತಾಳೆ ಬಂಡಿ ಹತ್ತಿ. ಅವನು ನನ್ನ ಮನಸ್ಸಿನ ಪ್ರಶ್ನೆಗೆ ಉತ್ತರಿಸಿದ್ದ. ಬಂಡಿ ಹತ್ತಿ ಕುಳಿತೆ.
**ಗುರುವ:** ನಾಯಕ ನಿನ್ನ ಎಲ್ಲ ಜನರಿಗೆ ನನ್ನ ನಮಸ್ಕಾರ ತಿಳಿಸು ಬಸವಣ್ಣ ಅವರನ್ನೆಲ್ಲ ಕಾಯುತ್ತಾನೆ. ನಾನು ಬರುವಾಗ ಖಾಲಿ ಎಣ್ಣೆ ಡಬ್ಬಿ ತಂದಿದ್ದೆ ಅವುಗಳಲ್ಲಿ ಎಣ್ಣೆ ತುಂಬಿಕೊಂಡು ಹೋಗುತ್ತಿದ್ದೇನೆ.
**ನಾಯಕ:** ನಮ್ಮೆಲ್ಲರ ಜೀವ ಉಳಿಸಿ ನೀವು ಎಣ್ಣೆಯನ್ನೆಲ್ಲ ಅಮೃತ ತುಂಬಿಕೊಂಡು ಹೋಗುತ್ತಿದ್ದೀರಿ. ನಮ್ಮೆಲ್ಲರ ನೆನಹು ಶರಣರ ಆಶೀರ್ವಾದ ನಿಮ್ಮ ಜೊತೆಗಿದೆ, ಬಸವ ದಾರಿ ತೋರಿಸುತ್ತಾನೆ, ಹೋಗಿ ಬನ್ನಿ. ಅವನ ದನಿಯಲ್ಲಿ ನಡುಕವಿತ್ತು. ನಾಯಕ ಆ ಕಡೆ ತಿರುಗಿ ನಿಂತ. ಆ ವೀರನ ಕಣ್ಣಲ್ಲಿ ಮುತ್ತುದುರುವದನ್ನು ನೋಡಬಾರದೆಂದು ಕಣ್ಣು ಮುಚ್ಚಿದೆ.
ನನ್ನ ಕಣ್ಣೀರನ್ನು ಮರೆಮಾಡಲು ಅಣ್ಣ ಕೊಟ್ಟ ಶಲ್ಲೆಯ ತುಂಡು ನೆರವಾಯಿತು. ಬಂಡಿ ಹೊರಟಿತು. ಸ್ವಲ್ಪ ದೂರ ಹೋದಮೇಲೆ "ಹೋಗಿಬನ್ನಿ ಶರಣ ಗುರುವ" ಎನ್ನುವ ಮಾತು ಗಾಳಿಯಲ್ಲಿ ತೇಲಿಬಂತು. ಗಿಡದ ಮೇಲೆ ಕುಳಿತು ಕಾವಲಿದ್ದ ವೀರರ ಆಶೀರ್ವಾದ ಅದಾಗಿತ್ತು.
**ಗುರುವ:** ಕೆಂಪರಾಜ ನಾವೆಲ್ಲಿಗೆ ಹೋಗುತ್ತಿದ್ದೇವೆ.

**ಕೆಂಪರಾಜ:** ನನಗೂ ಗೊತ್ತಿಲ್ಲ ಅಣ್ಣಾ. ದಾರಿ ಕರೆದುಕೊಂಡ ಹಾಗೆ ಹೋಗುತ್ತಿದ್ದೇನೆ. ಅಣ್ಣಾ ಈ ಹಣ್ಣು ತಿನ್ನಿ ನಿಮಗಾಗಿ ಆರಿಸಿಕೊಂಡು ಬಂದಿರುವೆ.
**ಗುರುವ:** ತಾ ಈಗ ಹಸಿವಾದದ್ದು ಗೊತ್ತಾಗುತ್ತಿದೆ. ಇಲ್ಲಿಯವರೆಗೆ ನಡೆದದ್ದೆಲ್ಲ ಕನಸೆನಿಸುತ್ತದೆ. ಕಲ್ಯಾಣದಲ್ಲೇನು ನಡೆಯಿತು?
**ಕೆಂಪರಾಜ:** ಏನು ನಡೆಯಿತು ನಮಗೂ ಗೊತ್ತಾಗಲಿಲ್ಲ ಅಣ್ಣಾ. ಆದರೆ ನಡೆದದ್ದೆಲ್ಲ ಸರಿ ಇಲ್ಲ ಎಂದು ಎಲ್ಲರೂ ಹೇಳುತ್ತಾರೆ. ನಮ್ಮ ಜನವೆಲ್ಲ ತಮ್ಮೂರಿಗೆ ಹೋಗುವ ತಯಾರಿಯಲ್ಲಿದ್ದಾರೆ. ನೀವು ನಿದ್ದೆ ಮಾಡಿ ಅಣ್ಣಾ ನಾನು ಬಂಡಿ ಹೊಡೆಯುತ್ತೇನೆ. ನಮ್ಮನ್ನು ಯಾರೋ ಕಾಯುತ್ತಿದ್ದಾರೆ ಮತ್ತು ದಾರಿತೋರಿಸುತ್ತಿದ್ದಾರೆ ಎನಿಸುತ್ತಿದೆ.
**ಗುರುವ:** ಅಣ್ಣಾ ಬಸವಣ್ಣನೇ ನಮಗೆ ದಾರಿತೋರಿಸುತ್ತಿದ್ದಾನೆ. ನಂಬಿ ನಡೆ.
ಕಣ್ಣುಮುಚ್ಚಿದರೂ ನಿದ್ರೆ ಹತ್ತಲಿಲ್ಲ. ಮತ್ತೆ ಗಾಣ ತಿರುಗತೊಡಗಿತು ಆದರೆ ಈಗ ಅದು ಖಾಲಿ ಇಲ್ಲ. ಗಾಣಕ್ಕೆ ಶೇಂಗ, ಎಳ್ಳು, ಖೊಬ್ಬರಿ, … ಎಲ್ಲಾ ಒಮ್ಮಲೇ ಹಾಕಿ ಗಾಣ ತಿರುಗಿಸಿದ ಅನುಭವ.
ಐದಾರು ಸಾವಿರ ಯೊಧರ ಮರಣ ಕಲ್ಯಾಣದಲ್ಲಿ ಯಾವ ಪರಿಣಾಮ ಬೀರಬಹುದು? ಯುವರಾಜ ಇದನ್ನು ಹೇಗೆ ಸ್ವೀಕರಿಸುತ್ತಾನೆ? ಶರಣರಿಗೆ ತೊಂದರೆ ಕೊಟ್ಟವರಿಗೆ ದೇವರ ಶಿಕ್ಷೆ ಎಂದೆನಿಸಬಹುದೇ? ಅಥವಾ ಶರಣರೆಲ್ಲ ಇವರನ್ನೆಲ್ಲ ಕೊಂದಿದ್ದಾರೆ ಎನಿಸಬಹುದೇ?. ಪ್ರತೀಕಾರಕ್ಕಾಗಿ ಮತ್ತೆ ಅಲ್ಲಿ ದಾಳಿಮಾಡಬಹುದೇ?. ಆ ಎಲ್ಲ ಯೋಧರ ಹತ್ಯೆಗೆ ಕಾರಣನಾದ ಆಡಳಿತಗಾರನಿಗೆ ಯಾವ ಶಿಕ್ಷೆ ವಿಧಿಸಬಹುದು? ಶರಣರಿಗೆ ತೊಂದರೆ ಕೊಟ್ಟರೆ ದೇವರು ಶಿಕ್ಷಿಸುತ್ತಾನೆ ಎಂಬ ಭಯ ಯೋಧರಲ್ಲಿ ಮೂಡುತ್ತದೆಯೇ? ಒಂದು ಪ್ರಶ್ನೆಗೂ ನನ್ನಲ್ಲಿ ಉತ್ತರವಿಲ್ಲ.
ಕಣ್ಣು ತೆರೆದಾಗ ಬೆಳಗಾಯಿತ್ತು. ಬಂಡಿ ನಿಂತಿದ್ದು ಒಂದು ತೋಟದಲ್ಲಿದ್ದ ಮೇವಿನ ದೊಡ್ಡಿಯಲ್ಲಿ. ಕೆಂಪರಾಜ ಬಂಡಿ ಕೊಳ್ಳು ಹರಿದು ಅಲ್ಲಿ ಎತ್ತು ಕಟ್ಟಿ ಮೇವು ಹಾಕಿದ. ಸಮೀಪದಲ್ಲಿದ್ದ ಭಾವಿಯಲ್ಲಿಯ ನೀರು ಸೇದಿಕೊಟ್ಟ. ಮುಖ ತೊಳೆದುಕೊಂಡಮೇಲೆ ವಾಸ್ತವಕ್ಕೆ ಬಂದೆ.
**ಗುರುವ:** ನಾವೆಲ್ಲಿದ್ದೇವೆ ಕೆಂಪರಾಜ.
**ಕೆಂಪರಾಜ:** ನನಗೂ ಗೊತ್ತಿಲ್ಲ ಅಣ್ಣಾ. ಇಲ್ಲಿಗೆ ಬಂದಾಗ ಒಂದು ಅಜ್ಜಿ ಕೈಮಾಡಿ ಬಂಡಿ ನಿಲ್ಲಿಸಲು ಹೇಳಿದಳು. ಇಲ್ಲಿ ಕೆಲವು ಕಾಲ ಆರಾಮ ತೊಗೊಂಡು ಹೋಗಿ ಎಂದಳು.
**ಗುರುವ:** ಅಜ್ಜಿ ಎಲ್ಲಿ.
**ಕೆಂಪರಾಜ:** ಆಕಳ ಹಾಲ ಕರೆದು ಕಾಯಿಸಲು ಗುಡಿಸಲು ಒಳಗೆ ಹೋಗ್ಯಾಳ.
ಸನಿಹದಲ್ಲಿದ್ದ ಗುಡಿಸಲಿನಿಂದ ಹಾಲಿನ ಎರಡು ಮಗಿ ಹಿಡಿದುಕೊಂಡು ಒಬ್ಬ ಮುದಕಿ ಬಂದಳು. ಆ ಮುದಕಿಯನ್ನು ನೋಡಿದಕೂಡಲೇ ನಮ್ಮಜ್ಜಿ ನೆನಪಿಗೆ ಬಂದಳು ಎಲ್ಲ ಆಕೆಯ ಹಾಗೆ ಇರಲು ಹೇಗೆ ಸಾದ್ಯ?. ನಮಸ್ಕಾರ ಅಜ್ಜಿ ಎಂದು

ನಮಸ್ಕರಿಸಲು ಹೋದಾಗ, ನನ್ನಾಕೆಯ ನಗೆ ಕೇಳಿಸಿತು ಗಾಬರಿಯಾಗಿ ನೋಡಿದಾಗ ನಗುತ್ತಿದ್ದವಳು ಆ ಮುದಕಿ.
**ಗುರುವ:** ಏನೇ ಇದು ಅವತಾರ.
**ನನ್ನಾಕೆ:** ಇದು ಅನಿವಾರ್ಯ ಕಲ್ಯಾಣ ಜನರೆಲ್ಲ ನನ್ನನ್ನು ನಿಮ್ಮನ್ನು ನೋಡ್ಯಾರ ಅದಕ ನನಗ ಹೀಗೆ ಹೋಗಲು ಶಂಕರಕ್ಕ ತಯಾರ ಮಾಡಿ ಕಳಿಸ್ಯಾಳ. ನಾನು ಕೆಲವು ದಿನ ಹೀಗೆ ಇರಬೇಕು.
**ಗುರುವ:** ಮತ್ತ ನಾ ಮುದುಕನಾಂಗ ತಯಾರಾಗಬೇಕಲ್ಲ.
**ನನ್ನಾಕೆ:** ಅದರ ಅವಶ್ಯಕತೆಯಿಲ್ಲ. ನಿಮ್ಮನ್ನು ನೀವು ನೋಡಿಕೊಂಡಿಲ್ಲ. ಕಲ್ಯಾಣದಾಗ ನಿಮ್ಮನ್ನು ನೋಡಿದವರಾರು ನಿಮ್ಮನ್ನು ಈಗ ಗುರುತು ಹಿಡಿಯುವದಿಲ್ಲ.
ಕೆಂಪರಾಜ ಆಕಳ ಮೇಯಿಸಿಕೊಂಡು ಬರಲು ಹೋದ. ಅಲ್ಲಿಯ ಎಳೆಬಿಸಿಲಿನಲ್ಲಿ ಕುಳಿತುಕೊಂಡು
**ಗುರುವ:** ನೀವೆಲ್ಲಾ ಮೇಲೆ ಹೋದಮೇಲೆ ಏನಾಯಿತು ಮತ್ತು ಕಲ್ಯಾಣದಲ್ಲಿ ಇದುವರೆಗೆ ಏನಾಯಿತು ಎನ್ನುವ ಕುತೂಹಲ ನನಗೆ ವಿವರಿಸಿ ಹೇಳು.
**ನನ್ನಾಕೆ:** ಮೇಲೆ ಹೋದಮೇಲೆ ಸಾವಿರಾರು ಜನರಿರಬಹುದಾದ ಗವಿಗಳು ಮತ್ತು ಗವಿಗಳೊಳಗೆ ಗವಿಗಳು ಇದ್ದವು. ಗವಿಗಳ ಮುಂದೆ ಇಳಿಬಿದ್ದ ಬಳ್ಳಿಗಳು ಮತ್ತು ದಟ್ಟವಾದ ಕಾಡು. ಇಲ್ಲಿ ಗವಿಗಳಿವೆ ಎಂದು ಯಾರಿಗೂ ಗೊತ್ತಾಗುವದಿಲ್ಲ. ನೂರಾರು ವರ್ಷಗಳಿಂದ ಅಜ್ಞಾತವಾಗಿರುವ ಪ್ರದೇಶ. ನಾವು ಹೋಗುವ ಮೊದಲೇ ಅಲ್ಲಿಗೆ ನೂರಾರು ಜನರು ಕಲ್ಯಾಣದಿಂದ ಬಂದು ಅಲ್ಲಿದ್ದರು. ಅವರೆಲ್ಲ ಅಲ್ಲಿದ್ದ ದಾಸೋಹದಲ್ಲಿ ಊಟ ಮಾಡುತ್ತ ತಮ್ಮ ಕಾಯಕದಲ್ಲಿ ತೊಡಗಿಕೊಂಡಿದ್ದರು. ನಾವು ಹೋದಮೇಲೆ ಬರುವವರ ಸಂಖ್ಯೆ ಹೆಚ್ಚಾಯಿತು. ಸಾವಿರ ಸಾವಿರ ಜನರು ಬೇರೆ ಬೇರೆ ಮಂದಿರಗಳ ಗುಪ್ತದ್ವಾರದಿಂದ ಬಂದು ಸೇರಿದರು. ಕಲ್ಯಾಣ ಅವರು ತೊರೆದು ಬಂದ ವಿಚಾರ ಯಾರ ಗಮನಕ್ಕೂ ಬಂದಿಲ್ಲ. ಕಟ್ಟಕಡೆಗೆ ಬಂದವರು ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯವರು. ಒಟ್ಟಾರೆಯಾಗಿ ಕಲ್ಯಾಣ ತೊರೆಯಲಾಗದ ಎಲ್ಲ ಶರಣರು ಅಲ್ಲಿದ್ದಾರೆ. ಕಲ್ಯಾಣದಲ್ಲಿ ನಡೆಯುವ, ಕಾಡಿನಲ್ಲಿ ನಡೆಯುವ ಎಲ್ಲ ವಿಷಯಗಳು ಗೊತ್ತಾಗುವ ವ್ಯವಸ್ಥೆಯಿದೆ.
**ಗುರುವ:** ಮೊದಲು ಕಲ್ಯಾಣದಲ್ಲೇನಾಯಿತು ಹೇಳು.
**ನನ್ನಾಕೆ:** ಕಲ್ಯಾಣದಲ್ಲೇನಾಯಿತು ಯಾರಿಗೂ ಗೊತ್ತಿಲ್ಲ. ಕೊನೆಗೆ ಬಂದ ಅಕ್ಕನಾಗಮ್ಮನವರು, ಚನ್ನಬಸವಣ್ಣ, ಮಾಚಿದೇವರು ಮತ್ತಿತರರು. ಎಲ್ಲಾ ಸರಿಯಾಗಿದೆ ಚಿಂತೆ ಮಾಡುವ ಅವಶ್ಯಕತೆಯಿಲ್ಲ. ನಾವು ನಮ್ಮ ಕಾಯಕ ಮಾಡುತ್ತ ವಚನಗಳನ್ನು ಉಳವಿಗೆ ಸಾಗಿಸಬೇಕಾಗಿದೆ ಎಂದು ಹೇಳುತ್ತ ಧೈರ್ಯ ಹೇಳುತ್ತ, ಎಲ್ಲ ಅನುಕೂಲತೆಗಳನ್ನು ಒದಗಿಸುತ್ತ ಕಾಯಕದಲ್ಲಿ ನಿರತರಾಗಿದ್ದಾರೆ. ನಿಮ್ಮ ಸಮಾಚಾರ ಶಂಕರಕ್ಕನಿಂದ ನನಗೆ ಗೊತ್ತಾಗುತಿತ್ತು.

**ಗುರುವ:** ಕಲ್ಯಾಣದಲ್ಲೇನಾಯಿತು?
ಅಷ್ಟರಲ್ಲಿ ದೂರದಿಂದ ಕುದುರೆಗಳು ಓಡಿಬರುವ ಸದ್ದು ಕೇಳಿಸಿತು. ನಮ್ಮ ಸಮೀಪ ಬಂದವರು ಕುದುರೆಯ ಮೆಲಿದ್ದ ಅನೇಕ ಯೋಧರು.
**ಯೋಧ ನಾಯಕ:** ಏ ಮುದಕಿ ಈ ಕಡೆ ಯಾರಾದರೂ ಹೋದರಾ?
**ನನ್ನಾಕೆ:** ಈ ಕಡೆ ಯಾರ ಬರತಾರ ಯಪ್ಪ. ನಾವ ಬಂದ ತೋಟ ನೋಡಿಕೊಂಡ ಹೋಗತೀವಿ. ಏನ ಯಪ್ಪ ಅಪರೂಪಕ್ಕ ಈ ಕಡೆ ಹೊಂಟೀರೀ? ಬಾಳ ದಿವಸದ ಮ್ಯಾಗ ಮನಶ್ಯಾರನ ನೋಡಿದಂಗಾಯಿತು. ನೀರು ಕುಡಿತಿರೇನು?
**ಯೋಧ ನಾಯಕ:** ಅಷ್ಟ ಸಮಯ ನಮಗಿಲ್ಲ. ಇಷ್ಟು ದಿನ ಕಳ್ಳ ಕಾಕರ ಹುಡುಕುತಿದ್ದೀವಿ ಈಗ ಶರಣರ ಹುಡುಕಾಕ ಹತ್ತೀವಿ.
ಇನ್ನೊಬ್ಬ ಯೋಧ ಕುದುರೆಯಿಂದ ಕೆಳಗಿಳಿದ. ನನ್ನನ್ನು ನೋಡಿದ ಅವನು. "ಲೇ ಬಾರಲೇ ಇಲ್ಲಿ" ಎಂದ. ಸಮೀಪ ಹೋದ ನನ್ನ ಮೈಕೈಯೆಲ್ಲ ಮುಟ್ಟಿ ನೋಡಿದ.
**ಗುರುವ:** ನನ್ನ ಹತ್ತಿರ ಯಾವ ಆಯುಧ ಇಲ್ಲ ದೊರೆ.
**ಯೋಧ:** ಕತ್ತಿ, ಗುರಾಣಿ ಹುಡುಕುವ ಕಾಲ ಮುಗಿದೋಯ್ತು ಈಗ ವಚನಗಳ ಕಟ್ಟುಗಳನ್ನು ನೋಡಿ ರಾಜ ಭಯಪಡುವ ಕಾಲ ಬಂದಿದೆ. ಸಿಕ್ಕರೆ ಸುಟ್ಟು ಹಾಕಲು ಆದೇಶ ಐತಿ.
ಥೂ ಇವನ ಹೊಲಸು ಕಮಠ ನಾರತಾನ ಜಳಕ ಮಾಡಿ ಎಷ್ಟು ದಿನ ಆತೋ ಏನೋ? ಇವ ಶರಣನಾಗಿರಲು ಸಾಧ್ಯವಿಲ್ಲ.
**ಯೋಧ ನಾಯಕ:** ಮೂಗು ಮುಚ್ಚಿಕೊಂಡು ಎಲ್ಲ ಪರೀಕ್ಷೆ ಮಾಡು.
ಯೊಧ ನನ್ನ ಗಡ್ಡ ಹಿಡಿದು ಮುಖ ಮೇಲೆತ್ತಿ ಹಣೆ, ಕತ್ತು ಮತ್ತು ಎಡ ಅಂಗೈ ನೋಡಿದ
**ಯೋಧ:** ತೊಳಿಯದ್ದಕ್ಕ ಮುಖ ಸುಟ್ಟ ಬದನಿಕಾಯಿ ಆಗ್ಯೆತಿ ಇನ್ನ ವಿಭೂತಿ ಎಲ್ಲಿ ಕಾಣತ್ಯೆತಿ, ಕೊಳ್ಳಾಗ ಕಲ್ಲು ಕಟ್ಟಿಕೊಂಡಿಲ್ಲ ಮತ್ತು ಏನೂ ನೇತುಹಾಕಿಕೊಂಡಿಲ್ಲ ಇನ್ನು ಅಂಗೈಯಾಗ ಯಾವ ಗುರುತೂ ಇಲ್ಲ.
ಥೂ ಇವನ ಹೋಗಿ ಬಾವ್ಯಾಗ ಡುಮಕಿ ಹೊಡಿ ಎಂದು ನನ್ನ ನೂಕಿ ತನ್ನ ಕುದುರೆ ಏರಿದ.
ಅವರು ಹೊರಡಬೇಕು ಎನ್ನುವಷ್ಟರಲ್ಲಿ ಒಬ್ಬ ಯೋಧ ಕುದುರೆಯಿಂದ ಕೆಳಗುರಿಳಿದ.
**ಯೋಧ ನಾಯಕ:** ನಿದ್ದೆ ನೀರಡಕೆ ಅನ್ನದೆ ತಿರುಗಿದರ ಹಿಂಗ ತಲೆ ತಿರುಗಿ ಬೀಳತಾರ. ಅವನಿಗೆ ನೀರು ಬಡಿದು ಏನಾರ ತಿನಸರಿ ಆರಾಮ ಆಗತಾನ. ನಮಗ ತಡ ಆಗತ್ಯೆತಿ ಸಾಯಂಕಾಲ ಬರುವಾಗ ಅವನನ್ನು ಕರಕೊಂಡು ಹೊಗುತೀವಿ.
ಎಂದವನೇ ಯೊಧ ಮತ್ತು ಅವನ ಕುದುರೆ ಬಿಟ್ಟು ತಂಡದೊಡನೆ ಹೊರಟೇ ಬಿಟ್ಟ.
ನನ್ನಾಕೆ ಅವಸರವಾಗಿ ಗುಡಿಸಲೊಳಗೆ ಹೋಗಿ ನೀರು ತೆಗೆದುಕೊಂಡು ಬಂದಳು. ನಾನು ಅವನ ಸಮೀಪ ಹೋಗಿ ಕುಳಿತುಕೊಂಡ ತಕ್ಷಣ ಅವ ನನ್ನನ್ನು ತೆಕ್ಕೆ ಬಿದ್ದು

ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನ ಕಣ್ಣೀರು ನನ್ನ ಭುಜ ತೋಯಿಸಿತು. ನಮಗೇನು ಅರ್ಥವಾಗದೇ ಒಬ್ಬರನ್ನೊಬ್ಬರನ್ನು ನೋಡಿಕೊಂಡೆವು.

**ಅರಸು ಮುನಿದಡೆ ನಾಡೊಳಗಿರಬಾರದಯ್ಯಾ**

**ಅರಸು ಮುನಿದಡೆ ನಾಡೊಳಗಿರಬಾರದಯ್ಯಾ,**

**ಗಂಡ ಮುನಿದಡೆ ಮನೆಯೊಳಗೆ ಇರಬಾರದಯ್ಯಾ.**

**ಕೂಡಲಸಂಗಮದೇವಾ**

**ಜಂಗಮ ಮುನಿದಡೆ ನಾನೆಂತು ಬದುಕುವೆ / 105**— ಅಣ್ಣ ಬಸವಣ್ಣ

ಸ್ವಲ್ಪ ಹೊತ್ತಾದ ಮೇಲೆ ಅವನ ದುಃಖ ಕಡಿಮೆಯಾಗಿ ಆ ಯೋಧ ತಲೆ ಎತ್ತಿದ. ನೋಡಿ ನಾನೂ ದಂಗಾದೆ ಅವ ಮತ್ತಾರೂ ಅಲ್ಲ ಭದ್ರಣ್ಣ. ಅವನಿಗೆ ನೀರು ಕುಡಿಸಿ ಅವನನ್ನು ಎಬ್ಬಿಸಿ ಕರೆದುಕೊಂಡು ಬಂದು ಅಲ್ಲಿದ್ದ ಗಿಡದ ಕೆಳಗೆ ಕುಳಿತುಕೊಂಡೆವು. ಕುದುರೆಯ ಮೇಲಿಂದ ಬಿದ್ದ ರಭಸಕ್ಕೆ ಅಲ್ಲಲ್ಲಿ ತೆರಚಿದ ಗಾಯಗಳಾಗಿದ್ದವು. ನನ್ನಾಕೆ ಅಲ್ಲಿಯೇ ಸನಿಹದಲ್ಲಿದ್ದ ಎಲೆ ತಂದು ರಸ ಹಿಂಡಿದಳು.

**ಭದ್ರಣ್ಣ:** ಅದೇನು ದೊಡ್ಡ ಗಾಯವಲ್ಲ ಬಿಡಿ ಅಕ್ಕ. ಮನಕ್ಕಾದ ಗಾಯಕ್ಕೇನು ಹಾಕಬೇಕು ಹೇಳಿ?

**ಗುರುವ:** ಸ್ವಲ್ಪ ಸಮಾಧಾನ ಮಾಡಿಕೊಂಡು ಕಲ್ಯಾಣದಲ್ಲೇನು ನಡೆಯಿತು ವಿವರವಾಗಿ ತಿಳಿಸಿ.

**ಭದ್ರಣ್ಣ:** ನಿಮ್ಮನ್ನು ಭೆಟ್ಟಿಯಾಗಿ ಕಲ್ಯಾಣಕ್ಕೆ ಹೋದಾಗ ನಮ್ಮ ತಂಡವನ್ನು ಅನುಭವ ಮಂಟಪದ ಭದ್ರತೆಯ ಕೆಲಸಕ್ಕಾಗಿ ನಿಯಮಿಸಲಾಯಿತು. ಆ ಊರಿನ ಪರಿಚಯವಿರುವ ಮತ್ತು ಶರಣರ ಬಗ್ಗೆ ಅಭಿಮಾನವಿದ್ದ ಯೋಧರನ್ನೆಲ್ಲ ಕಲ್ಯಾಣದ ಗಡಿ ಕಾಯಲು ಕಳಿಸಲಾಗಿತ್ತು. ನೆಪಕ್ಕೆ ಶರಣರಿಗೆ ಭದ್ರತೆ ಅಲ್ಲೇನು ನಡೆಯುತ್ತದೆ ತಿಳಿಸುವದು ಮತ್ತು ಶರಣರ ಚಟುವಟಿಕೆ ಗಮನಿಸುವದು ನಮ್ಮ ಕೆಲಸ.

**ಗುರುವ:** ಮಹಾರಾಜರು ಈ ತರಹದ ಕೆಲಸ ಮಾಡುತ್ತಾರಾ?

**ಭದ್ರಣ್ಣ:** ಇದು ಯುವರಾಜರ ವಿಚಿತ್ರ ವ್ಯವಹಾರ. ಅವರು ಯರನ್ನೂ ನಂಬುವದಿಲ್ಲ ನಮ್ಮ ಮೇಲೆ ಕಣ್ಣಿಡಲು ಜನರನ್ನ ನೇಮಿಸಿರುತ್ತಾರೆ ಎನ್ನುವದೂ ನಮಗೆ ಗೊತ್ತು. ಅವರಗೆ ನಾವು ನಮ್ಮನ್ನು ಕಾಯುವವರೆಲ್ಲ ಮಕ್ಕಳಿಂದಾಗಿನಿಂದ ಇಲ್ಲಿಯವರೆಗೆ ಶರಣತತ್ವ ಕೇಳಿ ಬೆಳೆದಿದ್ದೇವೆ ಮತ್ತು ಕಲ್ಯಾಣಕ್ಕೆ ಮತ್ತು ಶರಣರಿಗೆ ಅನ್ಯಾಯವಾಗಲು ಬಿಡುವದಿಲ್ಲ ಎನ್ನುವದು ಅವರಿಗೆ ಗೊತ್ತಿರಲಿಲ್ಲ.

**ಗುರುವ:** ಶೀಲವಂತ ಮತ್ತು ಲಾವಣ್ಯ ರ ಮದುವೆ ನಿರ್ಧಾರ ಶರಣರ ಮನದಲ್ಲಿ ತಳಮಳವನ್ನುಂಟು ಮಾಡಿರಲಿಲ್ಲವೇ?

**ಭದ್ರಣ್ಣ:** ಅಲ್ಲಿಯ ವತಾವರಣದಲ್ಲಿ ಯಾವುದೇ ಬದವಣೆಯಾಗಿರಲಿಲ್ಲ. ಎಲ್ಲವೂ ಎಂದಿನಂತೆ ಇತ್ತು. ಅಣ್ಣನವರು ಅಥವಾ ಉಳಿದವರು ಎಂದಿನಂತೆ

ನಿದ್ರಾವಶರಾಗಿದ್ದರು. ಆದರೆ ಕಲ್ಯಾಣದ ಬೀದಿಗಳಲ್ಲಿ ಗಡಿಯಿಂದ ಹೊಸದಾಗಿ ಕಲ್ಯಾಣಕ್ಕೆ ಬಂದ ಯೋಧರು ಗಸ್ತು ತಿರಗುತ್ತಿದ್ದರು. ಮಧುವರಸರ ಮತ್ತು ಹರಳಯ್ಯನವರ ಮನೆಯನ್ನು ಕಾಯುತ್ತಿದ್ದಾರೆ ಎನ್ನುವದು ಗೊತ್ತಾಗಿತ್ತು. ಆದರೆ ಮಧ್ಯರಾತ್ರಿಯಲ್ಲಿ ಅಲ್ಲಿದ್ದ ಗಂಡುಮಕ್ಕಳ ಮತ್ತು ಹಿಂಬಾಲಕರನ್ನು ಬಂಧಿಸಿ ಕರೆದೊಯ್ಯಲಾಯಿತೆನ್ನುವದು ಗೊತ್ತಾಯಿತು.

**ಗುರುವ:** ವಿಚಾರಣೆ ನಡೆಸಲು ಮಹಾರಾಜರು ನಿರ್ಧರಿಸಿದ್ದರು. ಅದು ಹೇಗೆ ಬಂಧನವಾಯಿತು?

**ಭದ್ರಣ್ಣ:** ಆಗಲೇ ಯುವರಾಜ ಅವರು ಆರೋಪಿಗಳೆಂದು ನಿರ್ಣಯಿಸಿ ಕೊಡಬೇಕಾದ ಶಿಕ್ಷೆಯನ್ನು ನಿರ್ಧಾರಮಾಡಿಯಾಗಿತ್ತು.

**ಗುರುವ:** ಮಹಾರಾಜರಿಗೆ ಈ ವಿಷಯ ಗಮನಕ್ಕೆ ಬರಲಿಲ್ಲವೇ?

**ಭದ್ರಣ್ಣ:** ಅವರ ಗಮನಕ್ಕೆ ಬರಲೆಂದೇ ಈ ರೀತಿಯ ಬಂಧನ ಮಾಡಿದ್ದು. ತನ್ನ ಮಾತಿನಂತೆ ನಡೆಯದಿದ್ದರೆ ನಿಮ್ಮ ಗತಿಯೂ ಇದೇ ಎನ್ನುವ ಸಂದೇಶ ಕೊಟ್ಟಿದ್ದ ಯುವರಾಜ.

**ಗುರುವ:** ಯುವರಾಜನ ಭಯ ಮಹಾರಾಜರಿಗೂ ಇತ್ತಾ?

**ಭದ್ರಣ್ಣ:** ಸತ್ಯ ಯಾವದು ಮಿತ್ಯ ಯಾವದು ಗೊತ್ತಾಗಲಿಲ್ಲ. ಅಂದು ರಾತ್ರಿ ನಡೆದ ಘಟನಾವಳಿಗಳು ನಡೆದದ್ದಕ್ಕೂ ನಾನು ಕೇಳಿದ್ದಕ್ಕೂ, ನನ್ನ ಗೆಳೆಯರು ಕೊಟ್ಟ ಸಮಾಚಾರಗಳಿಗೂ ಹೊಂದಾಣಿಕೆಯಾಗುತ್ತಿಲ್ಲ . ಬಹಳ ಸಲ ಇಲ್ಲಸಲ್ಲದ ಸುದ್ದಿಗಳೇ ಬಹಳ ಹರಿದಾಡುತ್ತವೆ. ನನ್ನ ಗೆಳೆಯರು ಹೇಳಿದ ಸುದ್ದಿಗಳು ಮತ್ತು ನಾವೆಲ್ಲ ಕಣ್ಣಾರೆ ಕಂಡ ದೃಶ್ಯಗಳನ್ನೆಲ್ಲ ವಿವರಿಸುವೆ. ನನ್ನ ಮನದ ಭಾರ ಕಡಿಮೆಮಾಡಿಕೊಳ್ಳುವೆ.

ನನ್ನಾಕೆ ಗಂಜಿ ತಂದು ಕೊಟ್ಟಳು ನಾವಿಬ್ಬರೂ ಕುಡಿದ ಮೇಲೆ ಕೆಂಪರಾಜ ಮತ್ತು ನನ್ನ ನಾಲ್ಕು ತಮ್ಮಂದಿರಿಗೂ ಗಂಜಿ ಮಾಡಿ ಕೊಡು.

**ನನ್ನಾಕೆ:** ನಾಲ್ಕು ತಮ್ಮಂದಿರು ಯಾವಾಗ ಎಲ್ಲಿಂದ ಬಂದರು ನನಗ ಗೊತ್ತಾಗಲಿಲ್ಲ.

**ಗುರುವ:** ಗಂಜಿ ಮಾಡು ನಾನು ಕರೀತೀನಿ ನಿನಗ ಗೊತ್ತಾಗತೈತಿ. ಹೇಳಿ ಭದ್ರಣ್ಣ.

**ಭದ್ರಣ್ಣ:**

**ಘಟನೆ 1:**

ಬೆಳ್ಳಿಮೂಡುವ ಸಮಯ ಅವಸರವಸರವಾಗಿ ಬಂದ ನನ್ನೊಬ್ಬ ಗೆಳೆಯ ನನ್ನ ಕಿವಿಯಲ್ಲಿ "ನಾನು ಪ್ರವಾಸಕ್ಕೆ ಮಹಾರಾಜರನ್ನು ಕರೆದುಕೊಂಡು ಹೊಗುತ್ತಿದ್ದೇನೆ ಬರುವದು ಯಾವಾಗ ಗೊತ್ತಿಲ್ಲ, ನನ್ನ ತಂದೆ ತಾಯಿಯ ಜವಾಬ್ದಾರಿ ನಿನ್ನದು. ನಾನು ಊರು ಬಿಡುವಾಗ ಪಾರಿವಾಳ ಹಾರಿಸುವೆ. ಇದು ತುಂಬಾ ರಹಸ್ಯವಾಗಿರಲಿ" ಎಂದು ಹೇಳಿ ಕತ್ತಲಲ್ಲಿ ಕರಗಿಹೋದ.

**ಘಟನೆ 2:**

ಇದಾದ ಸ್ವಲ್ಪ ಸಮಯದ ನಂತರ ಇನ್ನೊಬ್ಬ ಆತ್ಮೀಯ ಗೆಳೆಯ ದಾಸೋಹದ ಕರಿನೆರಳಲ್ಲಿ ಯಾರಿಗೂ ಕಾಣದಂತೆ ಕಂಬಳಿ ಹೊದ್ದು ಬಂದು ಕಿವಿಯಲ್ಲಿ "ಜಗದೇವ ಅವರ ಜೊತೆಗೂಡಿ ಶಿಕ್ಷೆ ಜಾರಿಯಾಗುವ ಮೊದಲು ಬಂಧಿತರನ್ನು ಕಾಪಾಡುತ್ತೇವೆ. ಶರಣರನ್ನು ಕಾಪಾಡು. ನನ್ನ ಕೆಲಸವಾದಮೇಲೆ ನಿನಗೆ ಸುದ್ದಿ ಮುಟ್ಟುತ್ತೆ. " ಉಸುರಿ ಹೋದ.

**ಗುರುವ:** ಯಾರೀ ಜಗದೇವ?

**ಭದ್ರಣ್ಣ:** ಜಗದೇವ, ಮಲ್ಲಿಬೊಮ್ಮ ಮತ್ತು ಕಸಪಯ್ಯ ಇವರು ಪ್ರಭಾವಿ ದಂಡನಾಯಕರು. ಕಲ್ಯಾಣದ ಸೈನ್ಯದ ಮೇಲೆ ಇವರ ಪ್ರಭಾವ ಬಹಳ. ತುಂಬಾ ಸರಳ ವ್ಯಕ್ತಿತ್ವದ ಪ್ರಾಮಾಣಿಕರು, ಕಲ್ಯಾಣದ ಜನರ ಮೆಚ್ಚುಗೆ ಪಡೆದವರು. ಶರಣರ ತತ್ವಗಳನ್ನು ಅರ್ಥಮಾಡಿಕೊಂಡು ಅದರಂತೆ ನಡೆದವರು.
ಇವೆರಡು ಘಟನೆಗಳು ನಡೆದದ್ದು ನಿಜವೋ ಅಥವಾ ನನ್ನ ಭ್ರಮೆಯೋ ನನಗೀಗಲು ಗೊತ್ತಾಗುತ್ತಿಲ್ಲ.

**ಗುರುವ:** ನಿನೊಬ್ಬ ನುರಿತ ಯೋಧ. ನಿನಗೆ ಭ್ರಮೆಯಾಗಲು ಸಾಧ್ಯವೇ?

**ಭದ್ರಣ್ಣ:** ನಾನು ಮುಂದೆ ನನ್ನ ಕಣ್ಣೆದುರಿಗೆ ನಡೆದ ಘಟನೆಗಳನ್ನು ವಿವರಿಸಿದ ಮೇಲೆ ನೀವೇ ಅದು ಭ್ರಮೆ ಹೌದು ಅಲ್ಲವೇ ನಿರ್ಧರಿಸಿ.

**ಗುರುವ:** ಸರಿ

**ಭದ್ರಣ್ಣ:** ಎಂದಿನಂತೆ ಅಣ್ಣ ಬಸವಣ್ಣನವರು ಧ್ಯಾನ ಪೂಜೆ ಮುಗಿಸಿ ದಾಸೊಹದಲ್ಲಿ ಪ್ರಸಾದ ತೊಗೊಂಡು ಅರಮನೆಯ ಕಡೆ ಹೊರಟರು. ನಾವೆಲ್ಲ ನೆರಳಾಗಿ ಅವರ ಹಿಂದೆ ಹೋದೆವು.
ದಾರಿಯಲ್ಲಿ ಮುಂದೇನಾಗುತ್ತದೆ ಎಂದು ಗಾಬರಿಯಲ್ಲಿ ಕಾಯುವ ಜನ, ಜನಕ್ಕಿಂತ ಹೆಚ್ಚಿನ ಯೋಧರು. ಅರಮನೆಯ ಸಭಾಗೃಹದ ತುಂಬಾ ಜನ. ಅಣ್ಣನವರು ಹೋಗಿ ತಮ್ಮ ಜಾಗದಲ್ಲಿ ಕುಳಿತರು. ನಿನ್ನನ್ನು ನಿಲ್ಲಿಸಿದ್ದ ಜಾಗದಲ್ಲಿ ಮೂವರನ್ನು ಮುಖ ಕಪ್ಪು ಬಟ್ಟೆಯಿಂದ ಮುಚ್ಚಿ ಕೈಕಾಲು ಸರಪಳಿಯಿಂದ ಕಟ್ಟಿ ನಿಲ್ಲಿಸಿದ್ದರು. ಅವರ ಮುಖ ನೋಡದೇ ಅವರು ಹಾಕಿಕೊಂಡ ಬಟ್ಟೆ ಮತ್ತು ನಿಲವಿನಿಂದ ಅವರು ಮಧುವರಸರು, ಹರಳಯ್ಯನವರು ಮತ್ತು ಶೀಲವಂತ ಎನ್ನುವದು ಎಲ್ಲರಿಗೂ ಗೊತ್ತಾಗುತ್ತಿತ್ತು. ಗಂಭೀರವಾಗಿ ಬಂದ ಮಾಹಾರಾಜರು ಯರನ್ನೂ ಗಮನಿಸದೆ
"ನನಗೆಲ್ಲ ವಿವರಗಳು ಗೊತ್ತಾಗಿವೆ ನನ್ನ ತೀರ್ಪನ್ನು ಬರೆದು ಕಳಿಸುವೆ ನನ್ನ ಪರವಾಗಿ ಮಂತ್ರಿಗಳು ಬಂದು ತೀರ್ಪು ಓದುತ್ತಾರೆ"
ಎಂದು ಹೇಳಿದವರೇ ಎದ್ದು ಹೋದರು.
ಅಲ್ಲಿದ್ದವರೆಲ್ಲ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು ವಿಧಿ ವಿಧಾನದಂತೆ ವಿಚಾರಣೆ ನಡೆಸದೇ ಮಹಾರಾಜರು ಅವಸರವಾಗಿ ಬಂದು ಅವಸರವಾಗಿ ಹೊರಟು ಹೋದದ್ದು ಎಲ್ಲರಿಗೂ ಅಚ್ಚರಿಯ ವಿಷಯವಾಗಿತ್ತು. ಯುವರಾಜ,

ಕೆಲವು ಮತ್ರಿಗಳು ಅರಮನೆಯೊಳಗೆ ಹೋದರೆ ಉಳಿದವರು ಹೊರಗೆ ನಡೆದರು. ಮೂವರೂ ಕೈದಿಗಳನ್ನು ದರದರನೆ ಎಳೆದುಕೊಂಡು ಒಳಗೆ ಹೋದರು. ನಾವೆಲ್ಲ ಅಣ್ಣನವರ ಹಿಂದೆ ಹೋದೆವು. ನನ್ನ ತಂಡದ ಕೆಲವರು ಅಲ್ಲಿಯೇ ಉಳಿದರು.

ಬಸವಣ್ಣನವರು ಎಂದಿನಂತೆ ಕುದುರೆ ಏರಿ ನಗರ ವೀಕ್ಷಣೆಗೆ ಹೋದರು. ಗಂಗಾಂಬಿಕೆ ಮತ್ತು ಅಕ್ಕನಾಗಮ್ಮ ಕಾಯಕ ನಡೆಸಲು ಹೋದರು. ನಾವು ಈ ವಿಷಯ ಯುವರಾಜನಿಗೆ ವರದಿ ಮಾಡಿದೆವು.

ನಮಗೆ ಅರಮನೆಗೆ ಮರಳಿ ಬರಲು ಸೂಚನೆ ಬಂತು. ನಾವೆಲ್ಲ ಅರಮನೆಗೆ ಮರಳಿ ಬಂದಾಗ ಮಹರಾಜರ ತೀರ್ಪು ಬಂದಿರಲಿಲ್ಲ. ಎಲ್ಲರೂ ಕಾತುರದಿಂದ ಕಾಯುತ್ತಿದ್ದರು. ಮೊದಲಬಾರಿಗೆ ಎಲ್ಲಕಡೆ ಬಿಚ್ಚುಕತ್ತಿ ಯೋಧರಿದ್ದರು. ನಮಗೂ ಹಾಗೆ ಮಾಡಲು ತಿಳಿಸಿದರು.

ಸ್ವಲ್ಪ ಹೊತ್ತಿನಲ್ಲಿ ಯುವರಾಜ ಮಂತ್ರಿಗಳೊಂದಿಗೆ ಹೊರಬಂದ ಹಿರಿಯ ಮಂತ್ರಿಯೊಬ್ಬರು ಎದ್ದು ನಿಂತು

"ಮಹಾರಾಜರು ಕಳುಹಿಸಿದ ತೀರ್ಪು ಮತ್ತು ಅವರ ಆಜ್ಞೆಯನ್ನು ಓದುತ್ತಿರುವೆ ಮಹಾರಾಜರ ಆಜ್ಞೆ

1. ಗೆಳೆಯ ಮತ್ತು ಹಿತೈಷಿಯಾಗಿ ನಂಬಿದ್ದ ಬಸವಣ್ಣನವರು ಮತ್ತು ಅವರ ಸಂಗಡಿಗರು ಧರ್ಮದ್ರೋಹದ ಅಪರಾಧ ಮಾಡಿದ್ದು ಮನಸ್ಸಿಗೆ ಆಘಾತವನ್ನುಂಟು ಮಾಡಿದೆ. ಕೆಲವು ಕಾಲ ರಾಜಕೀಯದಿಂದ ದೂರ ಇರಲು ತೀರ್ಮಾನಿಸಿರುವೆ.
2. ಕೆಲವು ದಿನ ರಾಜಕುಮಾರ ಸೋಮದೇವನಿಗೆ ನನ್ನ ಪರವಾಗಿ ಆಡಳಿತ ನಡೆಸುವ ಎಲ್ಲ ಅಧಿಕಾರ ಹಸ್ತಾಂತರ ಮಾಡುತ್ತೇನೆ.
3. ಈಗ ಧಾರ್ಮಿಕ ಅಪರಾಧ ಎಸಗಿದ ಮಧುವರಸ, ಹರಳಯ್ಯ ಮತ್ತು ಶೀಲವಂತರಿಗೆ ಈಗಲೇ ಊರೆಲ್ಲ ಮೆರವಣಿಗೆ ಮಾಡಿ ಕಣ್ಣು ಕೀಳಿಸಿ, ಎಳೆಹೂಟೆ ಶಿಕ್ಷೆ ವಿಧಿಸುತ್ತೇನೆ.

ಅಲ್ಲಿ ನೆರೆದಿದ್ದ ಸಭಾಸದರು ಪ್ರತಿಕ್ರಿಯಿಸುವದಕ್ಕಿಂತ ಮೊದಲು ರಾಜಕುಮಾರನಿಗೆ ಅಧಿಕಾರ ವಹಿಸುವ ಸಂಪ್ರದಾಯಿಕ ಕ್ರಿಯೆ ನಡೆಯಲಾರಂಬಿಸಿತು. ಮಹಾರಾಜ ಸೋಮದೇವನ ಜೈಕಾರ ಎಲ್ಲೆಡೆ ಮೊಳಗಿತು. ಅಧಿಕಾರ ವಹಿಸಿಕೊಂಡು ಮಹಾರಾಜ ಸೋಮದೇವ ಶಿಕ್ಷೆ ಜಾರಿಗೊಳಿಸಲು ಆದೇಶಿಸಿದ.

ಸಭಾಭವನದ ಮಗ್ಗಲು ಕೊಠಡಿಯಿಂದ ಚಿತ್ಕಾರ ಕೇಳಿಸತೋಡಗಿದವು. ಆ ಮೂವರ ಕಣ್ಣು ಕೀಳಲಾಗುತ್ತಿದೆ ಎಂದು ಎಲ್ಲರ ಅರಿವಿಗೆ ಬಂದಿತು. ಆಗಲೇ ಮೂವರನ್ನೂ ದರದರನೇ ಎಳೆದುಕೊಂಡು ಬಂದರು ಅವರ ಮೈ ಕೈಯೆಲ್ಲ ಗಾಯ ಮುಖದ ತುಂಬ ಗುರುತಿಸಲಾಗದಷ್ಟು ಗಾಯ ಕಣ್ಣು ಕಿತ್ತಿದ್ದರಿಂದ ರಕ್ತ ಒಸರುತ್ತಿತ್ತು. ಅದನ್ನು ನೊಡಲಾರದೇ ಕಣ್ಣುಮುಚ್ಚಿಕೊಂಡ ಜನರಾದರೆ ಕೆಕೇ

ಹಾಕುತ್ತಿದ್ದ ಅಪರಿಚಿತ ಯೋಧರು. ಉತ್ಸಾಹದಿಂದ ಅವರನ್ನು ಎಳೆದುಕೊಂಡು ಹೋಗಿ ಆನೆಯ ಕಾಲಿಗೆ ಕಟ್ಟಿ ಎಳೆಯಲು ಪ್ರಾರಂಭಿಸಿದರು. ಅಲ್ಲಿದ್ದ ಕಟ್ಟಾಳುಗಳ ಕೈ ಅದರುತ್ತಿದ್ದರೂ "ಕೊಲಬೇಡ" ಎನ್ನುವ ಮಂತ್ರ ಅವರನ್ನು ಕಟ್ಟಿಹಾಕಿತ್ತು. ಅಲ್ಲಿಯ ನಾಗರಿಕರ ಕಣ್ಣಲ್ಲಿ ಹರಿಯುವ ನೀರನ್ನು ಒರೆಸಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ವಾದ್ಯದವರು ಬಂದರು. ಕುಣಿಯುತ್ತಿದ್ದ ಯೋಧರ ಉತ್ಸಾಹ ಇಮ್ಮಡಿಗೊಂಡಿತು. ಯಾವನೋ ಒಬ್ಬ ದಾರಿಯಲ್ಲಿ ಮುಳ್ಳುಕಂಟಿ ತಂದುಹಾಕಿದ ಆ ಪೈಶಾಚಿಕ ಕೃತ್ಯ ಇನ್ನೂ ಕೆಲವರನ್ನು ಉತ್ತೇಜಿಸಿತು. ಊರ ಜನರ ಮುಖ ನೋಡದೇ ಇರುವ ಯುದ್ಧಭೂಮಿಯಿಂದ ಬಂದ ಯೋಧರ ಕೃತ್ಯ ನೋಡಲಾಗದೆ ಸೈರಿಸಲಾರದೆ ನಾವು ಅಲ್ಲಿಂದ ದೂರ ಹೊರಟು ಹೋದರೂ ಆ ಕೇಕೆ ಮದ್ದಳೆ ಸದ್ದು ಕೇಳಿಸುತ್ತಿತ್ತು.
ಎಲ್ಲ ಕಡೆ ಸ್ಮಶಾನ ಮೌನ ಎಲ್ಲಕಡೆ ಬಿಕ್ಕಿ ಬಿಕ್ಕಿ ಅಳುವ ಶಬ್ದ ಕೇಳಿಸುತ್ತಿತ್ತು. ಆಯುಧ ಸಿಟ್ಟಿನಿಂದ ಅದುಮಿ ಹಿಡಿದ ಕಾರಣ ಅನೇಕ ಯೋಧರ ಕೈಯಿಂದ ರಕ್ತ ಒಸರುತ್ತಿತ್ತು. ಅನೇಕ ಜನರು ಅವಡುಕಚ್ಚಿ ಹಲ್ಲು ಬಿಗಿಹಿಡಿದ ಪರಿಣಾಮ ಬಾಯಿಂದ ರಕ್ತ ಒಸರುತ್ತಿತ್ತು. ಎಲ್ಲರನ್ನು ಕಟ್ಟಿಹಾಕಿದ್ದು ಒಂದೇ ಮಂತ್ರ "ಕೊಲಬೇಡ". ಒಂದುವೇಳೆ ಅವರಾ ಮಂತ್ರ ಹೇಳಿರದಿದ್ದರೆ ಇಷ್ಟೊತ್ತಿಗೆ ಕಲ್ಯಾಣ ಅರಸ ಮತ್ತು ಯುವರಾಜನ ದೇಹ ಆನೆಯ ಕಾಲಲ್ಲಿರುತ್ತಿದ್ದವು.
ಅನ್ಯಾಯ ಮಾಡುವದು ಎಷ್ಟು ತಪ್ಪೋ ಅದಕ್ಕಿಂತ ಅನ್ಯಾಯ ಸಹಿಸುವದು ಇನ್ನೂ ದೊಡ್ಡ ತಪ್ಪು. ಆದರೇನು ಮಾಡುವದು ಅಣ್ಣನ ಮಾತು ಮೀರಲಾಗುತ್ತದೆಯೇ.
ನನ್ನ ಗೆಳೆಯನ ಪಾರಿವಾಳ ನನ್ನ ತಲೆಯ ಮೇಲೆ ಹಾರಾಡಿ ಮಹಾರಾಜರ ಯಾತ್ರೆ ಪ್ರಾರಂಭವಾಗಿದೆ ಎನ್ನುವ ಸೂಚನೆ ಕೊಟ್ಟಿತು.
ಆದರೆ ನನ್ನನ್ನು ದಿಕ್ಕುಕೆಡಿಸಿದ್ದು ಕಂಬಳಿ ಹೊದ್ದ ವ್ಯಕ್ತಿಯೊಬ್ಬ ಬಂದು "ನಾವು ಯಶಸ್ವಿಯಾಗಿದ್ದೇವೆ" ಎಂದು ಹೇಳಿ ಹೋದದ್ದು. ಇನ್ನೊಮ್ಮೆ ಮೆರವಣಿಗೆ ನಡೆದ ರಸ್ತೆಗೆ ಹೋದೆ ಅಲ್ಲಿ ಯೋಧರ ಪೈಶಾಚಿಕ ಕೃತ್ಯ ನಡೆದಿತ್ತು. ಅನೆಯ ಕಾಲಿಗೆ ಕಟ್ಟಿದ್ದ ಮೂರು ಮಾಂಸದ ಮುದ್ದೆಗಳು ಕಾಣುತ್ತಿದ್ದವು. ಅಲ್ಲಿದ್ದ ಯೋಧರು ಸಿಕ್ಕ ಸಿಕ್ಕ ನಾಗರಿಕರಿಗೆ ಕತ್ತಿಯಿಂದ ತಿವಿದು ಓಡಿಸುತ್ತಿದ್ದರು. ಹಸಿ ರಕ್ತದ ವಾಸನೆ ಅಲ್ಲಿ ತೇಲಿ ಬರುತ್ತಿತ್ತು. ನಾನು ತಿರುಗಿ ಬಂದು ನನ್ನ ಗೆಳೆಯರನ್ನು ಕೂಡಿಕೊಂಡೆ. ಭದ್ರಪ್ಪ ಬಿಕ್ಕಿ ಬಿಕ್ಕಿ ಅಳತೊಡಗಿದ ಅವನನ್ನು ಹೇಗೆ ಸಮಾಧಾನ ಹೇಳಬೇಕು ಗೊತ್ತಾಗದೇ ಸುಮ್ಮನೆ ಕಣ್ಣುಮುಚ್ಚಿ ಕುಳಿತೆ. ನನಗೆ ಆ ರಸ್ತೆಯ ನೆನಪಾಯಿತು ಅಂದು ನನ್ನ ಮೇಲೆ ಕೆಂಪು ಹೂ ತೂರಿದ್ದ ಜನ ಆ ರಸ್ತೆಯಲ್ಲಿ ಕೆಂಪು ರಕ್ತ ಚಿಮ್ಮುವ ಸೂಚನೆ ನೀಡಿದ್ದರಾ? ಕಸಪಯ್ಯ ಹರಳಯ್ಯ, ಮಧುವರಸ ಮತ್ತು ಶೀಲವಂತರನ್ನು ಪಾರುಮಾಡಿ ಕರೆದುಕೊಂಡು ಮರೆಯಾಗಿದ್ದರೆ ಶಿಕ್ಷೆ ವಿಧಿಸಿದ್ದು ಯಾರಿಗೆ? ಯುವರಾಜ ಶರಣರ ಶಕ್ತಿ ಮತ್ತು ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವ ಪ್ರಥಮ ಪರೀಕ್ಷೆಯಾ?. ಶರಣರನ್ನು ಹೊರಹಾಕಲು ಮಹಾರಾಜ ಮತ್ತು

ಯುವರಾಜರ ಜೊತೆಯಾಗಿ ಹೂಡಿದ ಸಂಚಾ? ವಚನಗಳು ಮತ್ತು ವಚನಕಾರರನ್ನು ಬೇರು ಸಹಿತ ಕಿತ್ತುಹಾಕಲು ಸಂಪ್ರದಾಯವಾದಿಗಳು ಸಫಲರಾದರೇ? “ಕೊಲಬೇಡ” ಎನ್ನುವ ಮಂತ್ರ ವಿಫಲವಾಯಿತೇ?
ಗಾಣ ತಿರುಗಿದರೆ ಎಣ್ಣೆ ಬರುವದು ಆದರೆ ನನ್ನ ಗಾಣ ತಿರುಗಿ ತಿರುಗಿ ಬಂದದ್ದು ಕಣ್ಣೀರು ಮಾತ್ರ.

1. **ಇರಿವುದು ಕಡಿವುದು ಕೊಲುವುದು**
   **ಮಲದೇಹಿಗಳಿಗಲ್ಲದೆ ನಿರ್ಮಲದೇಹಿಗಳಿಗುಂಟೆ?**
   **ಸಮಯ ಸಮುದ್ರದಂತಿರಬೇಕು.**
   **ತಪ್ಪನರಸಿ ಶಿಕ್ಷಿಸುವನ್ನಬರ**
   **ನರದೂತ ಕುಲಕ್ಕೆ ಪರಿಶಿವ ರೂಪುಂಟೆ?**
   **ಆ ಹರವರಿಯ ನುಡಿದಡೆನಗೇನು?**
   **ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.** / 25------ ಘಟ್ಟಿವಾಳಯ್ಯ
2. **ಇರಿವ ಕೈದಿಂಗೆ ದಯ ಧರ್ಮದ ಮೊನೆ ಉಂಟೆ?**
   **ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ?**
   **ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ?**
   **ಎನಗೆ ನಿಮ್ಮೊಳಗಿನ್ನೇತರ ಮಾತು?**
   **ವೇಷಧಾರಿಗಳಲ್ಲಿ ನಿಮ್ಮ ಕೂಟಕ್ಕೆ ಹೊರಗು**
   **ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.** / 24.------ ಘಟ್ಟಿವಾಳಯ್ಯ

ನನ್ನವಳು ನನ್ನ ಕಣ್ಣೀರು ಒರೆಸಿದಾಗಲೇ ಮರಳಿ ವಾಸ್ತವಕ್ಕೆ ಬಂದಿದ್ದೆ. ಭದ್ರಣ್ಣನ ಅಳುವದರ ಜೊತೆ ನಮ್ಮ ಸುತ್ತಲಿರುವ ಕೆಲವು ಕಂಟಿಗಳು ಬಿಕ್ಕುವದು ಕೇಳಿಸಿತು. ಗಾಬರಿಯಾದ ನನ್ನಾಕೆ ಏನ್ರಿ ಇದು ಇಲ್ಲಿ ಕಂಟಿಗಳೂ ಸುಖ ದುಃಖದಲ್ಲಿ ಪಾಲಾಗುತ್ತವೆ. ಅವು ಕಂಟಿಗಳಲ್ಲ ನನ್ನ ತಮ್ಮಂದಿರು. ನಮ್ಮ ರಕ್ಷಣೆಗಾಗಿ ನಾಯಕ ಕಳಿಸಿರುವ ನನ್ನ ತಮ್ಮಂದಿರು. ಇಷ್ಟೊತ್ತಾದರೂ ನನಗೆ ಗೊತ್ತಾಗಲಿಲ್ಲ. ಕಂಟಿಯಂತೆ ಕಾಣುವ ಹಾಗೆ ಮರೆಮಾಡಿಕೊಂಡಿದ್ದ ನನ್ನ ತಮ್ಮಂದಿರು ಅಕ್ಕ “ಶರಣು ಶರಣಾರ್ಥಿ” ಎಂದರು. ಆಕೆ ಮರು ಶರಣೆಂದು ಹೇಳಿ ಅವರಿಗೆ ಗಂಜಿ ತರಲು ಹೋದಳು.
**ಗುರುವ:** ಭದ್ರಣ್ಣ ಸಮಾಧಾನ ಮಾಡಿಕೊಳ್ಳಿ, ಮುಂದೇನಾಯಿತು ಹೇಳಿ.
**ಭದ್ರಣ್ಣ:** ನಮ್ಮನ್ನು ಮತ್ತೆ ಅರಮನೆಗೆ ಕರೆದು ಕೋಟೆ ಕಾಯುವ ಕೆಲಸ ವಹಿಸಲಾಯಿತು. ಬಹಳ ವಿಚಿತ್ರ ಗಳಿಗೆಗೊಮ್ಮೆ ನಮ್ಮ ಜಾಗ ಬದಲಾಯಿಸುತ್ತಿದ್ದರು. ಅಣ್ಣ ಬಸವಣ್ಣ ಅಥವಾ ಶರಣರೆಲ್ಲಾ ಎಲ್ಲಿ ಹೋದರು

ಹುಡುಕಲು ಆದೇಶಿಸುತ್ತಾರೆ ಎಂದು ನಿರೀಕ್ಷಿಸುತ್ತಿದ್ದ ನಮ್ಮನ್ನು ಕೋಟೆ ಕಾಯುವ ಕೆಲಸ ವಹಿಸಿದ್ದು ವಿಚಿತ್ರವೆನಿಸಿತು. ಯಾಕೋ ಯಾವುದೋ ಸಂಚು ನಡೆಯುತ್ತದೆ ಎನ್ನುವ ಅನುಮಾನ ಬಂದಿತು.

**ಗುರುವ:** ಯಾವ ರೀತಿಯ ಅನುಮಾನ ನಿಮಗೆ ಬಂತು.

**ಭದ್ರಣ್ಣ:** ಊರಲ್ಲಿ ಶರಣರ ಮೇಲೆ ಕೈಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಅವರನ್ನು ಊರಿನಿಂದ ದೂರಕಳಿಸಿ ಅಜ್ಞಾತ ಸ್ಥಳದಲ್ಲಿ ಹತ್ಯೆಮಾಡಿದರೆ ಯಾರಿಗೂ ಗೊತ್ತಾಗುವದಿಲ್ಲ. ಎಲ್ಲರೂ ಅವರು ಪ್ರವಾಸಕ್ಕೆ ಹೋಗಿದ್ದಾರೆ ಎಂದು ತಿಳಿದು ಸುಮ್ಮನಾಗುತ್ತಾರೆ.

**ಗುರುವ:** ನಿಮ್ಮ ಊಹೆ ಸರಿಯಾಗಿದೆ. ಬಹಳ ಶರಣರು ನಾನಿದ್ದ ಕಾಡಿಗೆ ಬರುತ್ತಾರೆ ಅಲ್ಲಿಯೇ ಅವರ ಹತ್ಯೆ ಮಾಡಲು ಐದು ಆರು ಸಾವಿರದ ಸೈನ್ಯ ತುಕಡಿಯನ್ನು ನಿನ್ನೆ ಕಳಿಸಿಕೊಟ್ಟಿರಬೇಕು.

**ಭದ್ರಣ್ಣ**: ಕೃಷ್ಣಾನದಿಯ ಆ ದಡದಿಂದ ಸೈನಿಕ ತುಕಡಿ ಕಲ್ಯಾಣಕ್ಕೆ ಬರುವದಿದೆ ಎಂದು ಕೇಳಿದ್ದೆ.

**ಗುರುವ:** ಆ ವಿಷಯ ಎಲ್ಲ ವಿವರವಾಗಿ ತಿಳಿಸುವೆ. ಮೊದಲು ಕಲ್ಯಾಣದಲ್ಲೇನಾಯಿತು ತಿಳಿಸು.

**ಭದ್ರಣ್ಣ:** ಕೋಟೆಯ ಮೇಲೆ ಸುತ್ತುಹಾಕುತ್ತಿದ್ದ ನಮಗೆ ಕೋಟೆಯ ಮೇಲಿನಿಂದ ಕೋಟೆಯ ಒಳಗಿನ ಹಾಗೂ ಹೊರಗಿನ ದೃಶ್ಯಗಳು ಕಾಣುತ್ತಿದ್ದವು. ಊರಲ್ಲಿ ಬಿಚ್ಚುಗತ್ತಿಯ ಯೋಧರನ್ನು ಬಿಟ್ಟು ಒಬ್ಬ ನರಪಿಳ್ಳೆಯೂ ಕಾಣುತ್ತಿಲ್ಲ. ನೀರಸ ಮೌನ. ದೂರದಲ್ಲಿ ಕೇಕೆ ತಮಟೆಯ ಧ್ವನಿ ಕೇಳಿಸುತ್ತಿತ್ತು. ಕೋಟೆಯ ಒಳಗಡೆ ಸಂಭ್ರಮದ ವಾತಾವರಣವಿತ್ತು. ಅರಮನೆಯ ಮುಂಭಾಗ ಒಂದು ದೊಡ್ಡ ವೇದಿಕೆ ತಾಯಾರಿ ನಡೆದಿತ್ತು. ಇನ್ನೊಂದು ಕಡೆ ಸಾವಿರಾರು ಜನರಿಗೆ ಅಡಿಗೆ ಮಾಡುವ ಕೆಲಸ ನಡೆದಿತ್ತು. ಮಹಾರಾಜರು ಜೈನರು ಹೀಗಾಗಿ ಕಟ್ಟಾ ಅಹಿಂಸಾವಾದಿಗಳು ಕೋಟೆಯಲ್ಲಿ ಮಾಂಸದ ಅಡಿಗೆ ಮಾಡಿದ್ದನ್ನು ನೋಡಿರಲಿಲ್ಲ. ಆದರೆ ಇಂದು ಯೋಧರಿಗಾಗಿ ಅಡಿಗೆಮಾಡುವ ತಂಡ ಅಡಿಗೆ ಮಾಡುತ್ತಿದ್ದರು. ಅವರು ಮಾಂಸ ಕಟ ಕಟ ಕತ್ತರಿಸುವ ಸದ್ದು ದೂರದವರೆಗೆ ಕೇಳಿಸುತ್ತಿತ್ತು. ಅರಮನೆಯೊಳಗೆ ಹೋಗಿ ಬರುವ ಯೋಧ ನಾಯಕರಲ್ಲಿ ಉತ್ಸಾಹ ಕಾಣುತ್ತಿತ್ತು. ಅಲ್ಲಿ ಯೋಧ ನಾಯಕರೆಲ್ಲ ಸೇರಿ ಮುಂದಿನ ಕಾರ್ಯಕ್ರಮ ರೂಪಿಸುವ ಕೆಲಸ ನಡೆದಿತ್ತು. ಆದರೆ ತುಂಬಾ ವಿಚಿತ್ರವಾಗಿ ಕಂಡ ಸಂಗತಿ ಎಂದರೆ ಕೋಟೆಯ ಹಿಂದುಗಡೆ ಸ್ವಚ್ಚತಾ ಕಾರ್ಯ ನಡೆದಿತ್ತು.

**ಗುರುವ:** ಕೋಟೆಯ ಹೊರಗಡೆ ಏಕೆ ಸ್ವಚ್ಚತಾ ಕಾರ್ಯ ನಡೆದಿತ್ತು?

**ಭದ್ರಣ್ಣ:** ನನಗೂ ಗೊತ್ತಾಗಲಿಲ್ಲ. ನನ್ನ ಗೆಳೆಯನೊಬ್ಬನನ್ನು ಕೇಳಿದೆ. ಅವನಿಗೂ ಸರಿಯಾಗಿ ಗೊತ್ತಿರಲಿಲ್ಲ ಆದರೂ ಸಣ್ಣವನಿದ್ದಾಗ ಒಮ್ಮೆ ಇಲ್ಲಿ ರಾಜವಂಶಜರೊಬ್ಬರ ಅಂತ್ಯಕ್ರಿಯೆ ನಡೆದ ಘಟನೆ ನೋಡಿದ ನೆನಪು ಎಂದ.

ಕೆಲವೊಮ್ಮೆ ಹೊಸ ಯೋಧರ ತಂಡ ಇಲ್ಲಿ ಇರಲು ವ್ಯವಸ್ಥೆ ಮಾಡುತ್ತಾರೆ ಎಂದೂ ತಿಳಿಸಿದ.
ಕೇಕೆ ಹಾಕುತ್ತ, ಹಿಂಸೆ ಕೊಡುತ್ತ , ತಮಟೆ ಬಾರಿಸುತ್ತ, ಖಡ್ಗ ಝಳಪಿಸಿ ನೃತ್ಯ ಮಾಡುತ್ತ ಮೂವರ ರಕ್ತಸಿಕ್ತ ದೇಹವನ್ನು ಊರತುಂಬೆಲ್ಲ ಮೆರವಣಿಗೆ ಮಾಡಿ, ಅಗಸಿಯಲ್ಲಿ ಅವರ ದೇಹ ನೇತುಹಾಕಿದ ವಿಷಯಯನ್ನು ಸಾಯಂಕಾಲ ಮರಳಿ ಬಂದವರು ರಾಜಕುಮಾರನಿಗೆ ತಿಳಿಸಿದರು. ಅವರಲ್ಲಿ ಕೆಲವರಿಗೆ ಏನೋ ಮಹಾ ಕೆಲಸ ಸಾಧಿಸಿದ ಹೆಮ್ಮೆ ಇತ್ತು ಹಲವರಲ್ಲಿ ಪಾಪಪ್ರಜ್ಞೆ ಎದ್ದು ಕಾಣುತ್ತಿತ್ತು.
**ಗುರುವ:** ರಾಜಕುಮಾರ ನಿರಾಳನಾಗಿರಬೇಕು.
**ಭದ್ರಣ್ಣ:** ಶರಣರಾರೂ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ ಎಲ್ಲಿಯೂ ಹಿಂಸಾಚಾರ ನಡೆಯಲಿಲ್ಲ ಎಂಬ ವಿಷಯ ಅಲ್ಲಿದ್ದ ರಾಜಕುಮಾರ ಮತ್ತು ಅವರ ಹಿತೈಷಿಗಳನ್ನು ಚಿಂತೆಗೀಡುಮಾಡಿತು. ಶರಣರು ವಿರೋಧಿಸುತ್ತಾರೆ ಅಲ್ಲಿ ರಕ್ತದೋಕಳಿಯಾಗುತ್ತದೆ, ಅವರೆಲ್ಲರ ಹತ್ಯೆ ಮಾಡಬಹುದು ಎಂದು ನಂಬಿದ್ದ ಅವರಿಗೆಲ್ಲ ನಿರಾಶೆಯಾಗಿ ಚಿಂತೆಗೀಡುಮಾಡಿತು.
**ಗುರುವ:** ಇದೆಂತ ವಿಚಿತ್ರ ವೈರಿಗಳೆನಿಸಿದವರೆಲ್ಲ ಕಲ್ಯಾಣ ತೊರೆದ ಮೇಲೆ ಅವರಿಗೇನು ಭಯ.
**ಭದ್ರಣ್ಣ**: ಕಾಲಿಗೆ ಬಳ್ಳಿ ತಗುಲಿದರೆ ಇಡೀ ಬಳ್ಳಿಯನ್ನೇ ಬೇರು ಸಹಿತ ಕಿತ್ತು ನಾಶ ಮಾಡುವ ಸಂಪ್ರದಾಯ ಅವರದು. ಶರಣರು ಬದುಕಿದ್ದರೆ ಮುಂದೆ ಅವರಿಂದ ಆಡಳಿತಕ್ಕೆ ತೊಡಕಾಗುವ ಭಯ ಅವರಿಗಿತ್ತು.
ಸ್ವಲ್ಪ ಸಮಯದಲ್ಲಿ ರಾತ್ರಿ ಕೋಟೆಯಲ್ಲಿ ಉತ್ಸವ ಆಚರಿಸಲು ನಮಗೆ ಆವ್ಹಾನ ಬಂದಿತು. ಉತ್ಸವದ ನಂತರ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಇರುವದಾಗಿಯೂ ತಿಳಿಸಲಾಯಿತು.
**ಗುರುವ:** ಉತ್ಸವ ಯಾಕೆ?
**ಭದ್ರಣ್ಣ:** ಯುವರಾಜ ಮಹಾರಾಜನಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಅಧಿಕಾರಿಗಳು ಸಂತೋಷಕೂಟ ಏರ್ಪಡಿಸಿದ್ದರು. ಯೋಧರೆಲ್ಲಾ ಸಾಮಾನ್ಯವಾಗಿ ಸಮಾರಂಭಕ್ಕೆ ಬರುವಾಗ ವಿಶೇಷ ಉಡಿಗೆಯಲ್ಲಿ ಬರುವದು ವಾಡಿಕೆ ಈ ಸಲ ಆಯುಧ ಸಹಿತ ಬರಲು ತಿಳಿಸಿದ್ದು ವಿಷೇಶವಾಗಿತ್ತು. ಮಧ್ಯಾನದ ಊಟಮಾಡಿಲ್ಲವೆನ್ನುವ ಕಾರಣದಿಂದ ಊಟದ ನಂತರ ಸಮಾರಂಭ ಏರ್ಪಡಿಸಿದ್ದರು. ಊಟಕ್ಕೂ ಮೊದಲು ಎಲ್ಲರಿಗೂ ಬೇಕಾದಷ್ಟು ಮದಿರೆ ಕೊಡಲಾಯಿತು. ಮದಿರೆ ಸೇವಿಸಿ ಅರೆಪ್ರಜ್ಞಾವಸ್ಥೆಯಲ್ಲಿ ಭರ್ಜರೀ ಊಟಮಾಡಿದ ಯೋಧರು ಸಮಾರಂಭಕ್ಕೆ ಆಗಮಿಸಿದರು. ಮಹಾರಾಜನಿಗೆ ಅಭಿನಂದನ ಸಮಾರಂಭ ಪ್ರಾರಂಭವಾಯಿತು.
ಒಮ್ಮಿಂದೊಮ್ಮಲೇ ಅರಮನೆಯಿಂದ ಚೀರಾಡುವ ಗೋಳಾಡುವ ಶಬ್ದ ಕೇಳಿ ಬಂತು. ಜೊತೆಗೆ ಮಹಾರಾಜರ ಕೊಲೆಮಾಡುತ್ತಿದ್ದಾರೆ ಎಂದು ಕೂಗು ಕೇಳಿಸಿತು.

ಆಮೇಲೆ ಅಲ್ಲಿಗೆ ಮೂವರು ಯೋಧರು ಒಂದು ಕೈಯಲ್ಲಿ ಬಿಚ್ಚುಕತ್ತಿ ಇನ್ನೊಂದು ಕೈಯಲ್ಲಿ ರಕ್ತ ತೊಟ್ಟಿಕ್ಕುತ್ತಿರುವ ರುಂಡದ ಜುಟ್ಟುವನ್ನು ಹಿಡಿದು ಬಂದರು. ಇವರೇ ರಾಜನ ಕೊಂದವರು ಇವರೇ ಕೊಂದವರು ಎಂದು ತೋರಿಸಿದರು.
ಮಬ್ಬುಗತ್ತಲಿನಲ್ಲಿ ಅವರಾರೆಂದು ಗೊತ್ತಾಗಲಿಲ್ಲವಾದರೂ ಅವರ ಹಣೆಯಲ್ಲಿದ್ದ ಢಾಳವಾಗಿ ಹಚ್ಚಿದ್ದ ವಿಭೂತಿ ಅವರಾರೆಂದು ಹೇಳುತ್ತಿತ್ತು. ಯುವರಾಜ ಮತ್ತು ಮಂತ್ರಿಗಳು ಒಳಗೋಡಿಹೋದರು ಗಾಬರಿಯಿಂದ ಅವರ ಹಿಂದೆ ರುಂಡ ಹಿಡಿದ ಯೋಧರು ಹೋದರು. ಆ ಕೆಲವು ಕ್ಷಣಗಳ ಕೋಲಾಹಲದಲ್ಲಿ ರಕ್ತಸಿಕ್ತ ಮುಖಗಳನ್ನು ಮಬ್ಬುಗತ್ತಲಲ್ಲಿ ಗುರುತಿಸಲು ಸಾಧ್ಯವೇ?. ಆದರೂ ಅಲ್ಲಿ ಉಂಟಾದ ಕೋಲಾಹಲದಲ್ಲಿ "ಜಗದೇವ ಮತ್ತು ಮಲ್ಲಿಬೊಮ್ಮ" ಎಂಬ ಹೆಸರುಗಳು ಮೊದಲು ಪಿಸುಮಾತಿನಲ್ಲಿ ತೇಲಿಬಂದವು. ಆಮೇಲೆ ಅವರ ಹೆಸರಿನಲ್ಲಿ ಧಿಕ್ಕಾರ ಪ್ರಾರಂಭವಾಗಿ ಬಿಚ್ಚುಗತ್ತಿಗಳು ಹೊರಬಂದವು. ಅಲ್ಲಿ ಕೋಲಾಹಲವೋ ಕೋಲಾಹಲ ಮುಂದೇನು ಮಾಡಬೇಕು ಎನ್ನುವ ಭಾವ ಎಲ್ಲರಲ್ಲಿ. ಅಷ್ಟರಲ್ಲಿ ಒಳಗಿನಿಂದ ದಂಡನಾಯಕರೊಬ್ಬರು ಹೊರಬಂದು ಸುಮ್ಮನಿರಲು ಹೇಳಿದರು. ಅಲ್ಲಿ ಮೌನ ಮನೆಮಾಡಿತು. ಅವರು "ಮುಂಜಾನೆ ಸೂರ್ಯೋದಯದ ವೇಳೆಗೆ ಮಹಾರಾಜರ ಅಂತ್ಯಕ್ರಿಯೆ ವಿಧಿವಿಧಾಗಳ ಮೂಲಕ ನಡೆಯಲಿದೆ, ಅಷ್ಟರಲ್ಲಿ ರಾಜನ ಹತ್ಯೆಗೆ ಸಂಚುನಡೆಸಿ ಊರಲ್ಲಡಗಿದವರ ಹತ್ಯೆ ಮಾಡಿ ಅವರ ಆತ್ಮಕ್ಕೆ ಶಾಂತಿ ತನ್ನಿ. ನಾಯಕರೆಲ್ಲ ಬಂದು ನೀವು ಮಾಡಬೇಕಾದ ಕೆಲಸಗಳನ್ನು ವಿವರಿಸುತ್ತಾರೆ. ನೀವೆಲ್ಲ ಕೋಟೆಯ ಬಯಲಲ್ಲಿ ನಿಲ್ಲಿ" ಎಂಬ ಆಜ್ಞೆ ಅಲ್ಲಿ ಕೇಳಿಬಂತು.
ಒಳಿತು ಕೆಡಕುಗಳ ಅರಿವಾಗುವ ಸ್ಥಿತಿಯಲ್ಲಿರದ ಯೋಧರು ರಣಕೇಕೆ ಹಾಕುತ್ತ ರುಂಡ ಚಂಡಾಡಲು ಹೊರಟರು.
ನನಗೆ ದಿಗಿಲಾಗಿ ಸುಮ್ಮನೆ ನಿಂತೆ ಗರಬಡಿದವನಹಾಗೆ
ಊರು ತೊರೆದು ಯಾತ್ರೆಗೆ ಮಹಾರಾಜರು ಹೊರಟು ಹೋಗಿಯಾಗಿತ್ತು.
ಅರಮನೆಯಿಂದ ಮಧುವರಸ, ಹರಳಯ್ಯ ಮತ್ತು ಶೀಲವಂತನನ್ನು ಪಾರುಮಾಡಿ ಜಗದೇವ, ಮಲ್ಲಿಬೊಮ್ಮ ಮತ್ತು ಉಳಿದವರು ಊರು ತೊರೆದದ್ದು ಆಗಿತ್ತು.
ಅದರೂ ಇಲ್ಲಿರದ ಮಹಾರಾಜರನ್ನು ದೂರದಲ್ಲಿರುವ ಜಗದೇವ ಮತ್ತು ಮಲ್ಲಿಬೊಮ್ಮ ಕೊಂದಿರುವ ಘಟನೆ ನಡೆದಿತ್ತು. ಯಾವುದು ಸತ್ಯ? ಯಾವುದು ನನ್ನ ಭ್ರಮೆ?.

**ಸತ್ತ ಹೆಣ ಕೂಗಿದುದುಂಟು,**

**ಬೈತಿಟ್ಟ ಬಯಕೆ ಕರೆದುದುಂಟು,**

**ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು.**

**ಇದ ನಿಶ್ಚೈಸಿ ನೋಡಿ ಚೆನ್ನಮಲ್ಲಿಕಾರ್ಜುನದೇವರಲ್ಲಿ.** / 390

**-----** ಅಕ್ಕ ಮಹಾದೇವಿ

ಗಮನಿಸಿ:

ಶಾಂತಮೂರ್ತಿ ತಂದೆ ಶಿವನಿಗೆ ಅಪಮಾನಮಾಡಲು ಯಜ್ಞವೇರ್ಪಡಿಸಿ ಕರೆಯದೇ ಬಂದ ತಾಯಿ ಅಗ್ನಿಗಾಹುತಿಯಾಗುವಂತೆ ಮಾಡಿದ ದಕ್ಷಬ್ರಹ್ಮನ ಕೊಂದು ಸೇಡು ತೀರಿಸಿಕೊಂಡ ವೀರಭದ್ರನನ್ನು ಯೋಧರೆಲ್ಲ ಅತ್ಯಂತ ಭಕ್ತಿಯಿಂದ ಆರಾಧಿಸುತ್ತಿದ್ದರು.

ಒಂಟಿಯಾಗಿ ಕಲಿತನ ತೋರಿದ ವೀರಭದ್ರನೇ ಬಹುತೇಕ ಕಲ್ಯಾಣ ಯೋಧರ ಆರಾಧ್ಯದೈವವಾಗಿದ್ದ. ಯೋಧರ ತರಬೇತಿಯ ಸಮಯದಲ್ಲಿ ಇದನ್ನೇ ಉದಾಹರಣೆ ಕೊಡುತ್ತಿದ್ದರು ಅಷ್ಟೇ ಅಲ್ಲ ಉತ್ಸಾಹ ಮತ್ತು ರೋಷ ತುಂಬಲು "ಅಹಾ ರುದ್ರ, ಅಹಾ ವೀರಭದ್ರ" ಎಂಬ ಜೈಕಾರ ಮಾಡಿಸುತ್ತಿದ್ದರು.

ಈಗಲೂ ಹುಮನಾಬಾದಲ್ಲಿರುವ ವೀರಭದ್ರೇಶ್ವರ ದೇವರು ಆ ಭಾಗದಲ್ಲಿ ಬಹುತೇಕರ ಆರಾಧ್ಯದೈವ. ಜಾತ್ರೆಗೆ ಲಕ್ಷಾಂತರ ಭಕ್ತರು ಬಂದು ರಾತ್ರಿಯೆಲ್ಲ ನಡೆಯುವ ಮೆರವಣಿಗೆಯಲ್ಲಿ ಪಾಲ್ಗೊಂಡು ಅಲ್ಲಿಯ "ಅಗ್ನಿ ಕುಂಡ ಹಾಯುವ" ಕಾರ್ಯಕ್ರಮ ನೋಡಿಕೊಂಡು ಹೋಗುವ ವಾಡಿಕೆ ಈಗಲೂ ಇದೆ.

ಮೂರು ಶತಮಾನಗಳ ವಚನ ಸಾಹಿತ್ಯ ಅಜ್ಞಾತವಾಗಿದ್ದ ಕಾಲದಲ್ಲಿಯೂ ವಚನಗಳು ಜನಮನದಲ್ಲಿ ನೆಲೆಯಾಗಲು ನಿಲ್ಲಲು ವೀರಭದ್ರನ ಮೆರವಣಿಗೆಯಲ್ಲಿ ಪುರಾಣಿಕರು ಮತ್ತು ಭಕ್ತರು ಹೇಳುವ ವಚನ ಪಠಣ ಅನೇಕ ಕಾರಣಗಳಲ್ಲಿ ಒಂದು ಎಂದು ನನ್ನ ಭಾವನೆ. ವಿವರ ಅಮೇಲೆ ಗಮನಿಸೋಣ.

ಅಲ್ಲಿಯ ಎಲ್ಲ ಯೋಧರು ಮದಿರೆಯ ಮತ್ತಿನಲ್ಲಿ ಓಲಾಡುತ್ತಿದ್ದರು. ಆದರೆ ದಂಡನಾಯಕರು ಮತ್ತು ತಂಡ ನಾಯಕರು ಮಾತ್ರ ಬಹಳ ಅಚ್ಚುಕಟ್ಟಾಗಿ ತಂಡ ರಚಿಸುತ್ತಿದ್ದರು. ಪ್ರತಿ ತಂಡಕ್ಕೊಬ್ಬ ನಾಯಕ, ಊರಿನ ಪರಿಚಯವಿರುವ ಉಪನಾಯಕ ಮತ್ತು ಹೊರಗಿನಿಂದ ಕರೆಸಿಕೊಂಡ ಮತ್ತು ಕಲ್ಯಾಣದ ಪರಿಚಯವಿರುವ ಯೊಧರು ಸಮಪ್ರಮಾಣದಲ್ಲಿದ್ದರು. ಏನು ಮಾಡಬೇಕು ಎನ್ನುವ ಮಾಹಿತಿ ತಂಡದ ನಾಯಕರಿಗೆ ಮೊದಲೇ ತಿಳಿಸಿದ್ದರು. ಆಗ ಬಂದ ಮಹಾದಂಡನಾಯಕ "ಮಹಾರಾಜರ ಹತ್ಯೆಯ ಸಂಚು ರೂಪಿಸಿದವರ ಶಿಕ್ಷಿಸಿ ಮಹಾರಾಜರ ಆತ್ಮಕ್ಕೆ ಶಾಂತಿ ಕೊಡುವ ಪವಿತ್ರ ಕಾರ್ಯ ಮುಗಿಸಿ ಬನ್ನಿ".

ಎಲ್ಲವೂ ಪೂರ್ವನಿರ್ಧಾರಿತ ಯೋಜನೆಯಂತೆ ನಡೆಯುತ್ತಿದೆಯೇನೋ ಎನಿಸಿತು. ಅಲ್ಲಿ ಗಡಬಡಿಯಾಗಲೀ, ಗಾಬರಿಯಾಗಲಿ ಅಥವಾ ರಾಜ ಮಡಿದ ಶೋಕವಾಗಲೀ ಇರಲಿಲ್ಲ.

"ಜೈ (ಸೋಮೇಶ್ವರ) ಸೋಮದೇವ ಮಹಾರಾಜ" ಎಂಬ ಘೋಷಣೆ ಮುಗಿಲುಮುಟ್ಟಿತು.

ನನ್ನ ತಂಡ ನನಗೆ ಪೂರ್ಣ ಪರಿಚಯವಿರುವ ಕಲ್ಯಾಣ ಪಟ್ಟಣದ ಭಾಗದ ಕಡೆ ನಡೆಯಿತು.

ಕೇಕೆ ಹಾಕುತ್ತ, "ಜೈ ಸೋಮದೇವ ಮಹಾರಾಜ" ಎಂದು ಘೋಷಣೆ ಕೂಗುತ್ತ ನಮ್ಮ ತಂಡ ಬಂದು ನಾಯಕ ಹೇಳಿದ ಮನೆಯ ಹೊರಗೆ ಕಾವಲು ನಿಂತಿತು.

ನಾಯಕ ಮತ್ತು ಐದಾರು ಜನ ಆ ಮನೆಯ ಬಾಗಿಲು ಮುರಿದು ಒಳಹೋದರು.
ನನಗೆ ಬಾಗಿಲು ಕಾಯುವ ಕೆಲಸ ವಹಿಸಿದ್ದರಿಂದ ಬಾಗಿಲಲ್ಲಿಯೇ ಕಾವಲು ನಿಂತೆ.
ಒಳಗೆ ಈ ಯಾವ ಗೊಂದಲಕ್ಕೆ ಕಿವಿಗೊಡದೆ ನಿಶ್ಚಿಂತೆಯಿಂದ ಶಾಂತವಾಗಿ
ಕಣ್ಣುಮುಚ್ಚಿಕೊಂಡು ಪೂಜೆಯಲ್ಲಿ ನಿರತರಾದ ಮನೆಯ ಜನ ಮಂದ
ಬೆಳಕಿನಲ್ಲಿ ನನಗೆ ಕಾಣುತ್ತಿದ್ದರು. ಅವರ ಮನದಲ್ಲಿ ಪ್ರತಿಭಟಿಸಬೇಕೆಂಬ ಅಥವಾ
ಪಾರಾಗಲು ಏನಾದರೂ ಉಪಾಯ ಮಾಡಬೇಕೆಂಬ ವಿಚಾರವಿಲ್ಲದೇ
ಶಾಂತಮನಸ್ಕರಾಗಿ ಏಕಚಿತ್ತದಿಂದ ಪೂಜೆಯಲ್ಲಿ ತಲ್ಲೀನರಾಗಿದ್ದರು. ಹಣೆಯಲ್ಲಿ
ವಿಭೂತಿ ಮಿಂಚುತ್ತಿತ್ತು. ಕೊರಳಲ್ಲಿ ರುದ್ರಾಕ್ಷಿ ಸರ ಹೊಳೆಯುತ್ತಿತ್ತು.
ಒಳಹೋದ ಯೋಧರು ಅವರೆಲ್ಲರ ರುಂಡ ಚಂಡಾಡಿ ಹೋ ಹೋ ಎನ್ನುತ್ತ
ರಕ್ತಸಿಕ್ತ ಖಡ್ಗಗಳೊಂದಿಗೆ ಹೊರಬಂದರು, ಪೈಶಾಚಿಕ ನೃತ್ಯ ಮಾಡುತ್ತ "ಜೈ
ಸೋಮದೇವ ಮಹಾರಾಜ" ಎನ್ನುವ ಘೋಷಣೆ ಮುಗಿಲು ಮುಟ್ಟಿತು. ಒಳಗಿನಿಂದ
ಬಸವಾ, ಬಸವಾ ಎನ್ನುವ ಕ್ಷೀಣ ಧ್ವನಿ ಕೇಳಿಸಿತು.
ಹಲವರ ಕತ್ತಿಯಿಂದ ರಕ್ತ ತೊಟ್ಟಿಕ್ಕುತ್ತಿತ್ತು.
ಆ ಓಣಿಯಲ್ಲಿರುವವರೆಲ್ಲ ಇದೇ ರೀತಿ ಶಾಂತಿಯುತ ಬಲಿದಾನವಾಗಲು ಮತ್ತು
ಪೂಜೆಮಾಡುತ್ತ ಲಿಂಗೈಕ್ಯರಾಗಲು ನಿರ್ಧಾರ ಮಾಡಿರುವರೇನೋ? ಎನಿಸಿ
ಮನಸ್ಸಿಗೆ ಬಹಳ ಹಿಂಸೆ ಎನಿಸಿತು. ಇದರ ಹೊರತಾಗಿ ಅವರಿಗೆ ಬೇರೆ
ದಾರಿಯಾವುದಿತ್ತು?
ನನ್ನಂತೆ ಬಹಳಷ್ಟು ಜನ ತಲೆತಗ್ಗಿಸಿ ನಿಂತಿರುವದು ನನ್ನ ಗಮನಕ್ಕೆ ಬಂತು.
ಮುಂದೆ ಯಾವ ಮನೆಗೆ ಹೊಗಬೇಕು ಎನ್ನುವದು ನಾಯಕನ ನಿರ್ಧಾರವಾಗಿತ್ತು.
ಹೀಗೆಯೆ ಹಲವು ಮನೆಗಳಲ್ಲಿರುವವರ ಗತಿಯಾಯಿತು. ಯಾವ ಪ್ರತಿರೋಧವೂ
ಬರದಿದ್ದನ್ನು ಕಂಡು ನಾಯಕನ ಮುಖದಲ್ಲಿ ಆಶ್ಚರ್ಯ ಎದ್ದು ಕಾಣುತ್ತಿತ್ತು
ರೋಷ ಇನ್ನೂ ಹೆಚ್ಚಾಗುತ್ತಿತ್ತು.
ಆಮೇಲೆ ಆರಿಸಿಕೊಂಡದ್ದು ನನ್ನ ಗೆಳೆಯನ ಮನೆ ನನಗೆ ಬಹಳ ಆತಂಕ
ಯಾಕಂದರೆ ಅವನು ರಾಗವಾಗಿ ವಚನ ಹೇಳುವದು ಮತ್ತು ವಿಶ್ಲೇಷಣೆ ಮಾಡುತ್ತ
ನಮಗೆಲ್ಲ ಮಾದರಿಯಾಗಿದ್ದ.
ನಾನು ಆತಂಕಗೊಂಡು ನನ್ನ ಕೆಲಸ ಮರೆತು ಒಳಗೆ ಹೋದೆ ನನಗಾಶ್ಚರ್ಯ
ಅವನ ಮನೆಯ ವಾತಾವರಣರವೇ ಬದಲಾಗಿತ್ತು ಅವನ ಪೂಜಾಪದ್ದತಿ ಮತ್ತು
ಪೂಜೆಗೊಳ್ಳುವ ದೇವರೇ ಬದಲಾಗಿದ್ದ.
ಬಹಳಮಾಡಿ ಓಣಿಯಲ್ಲಿ ಗದ್ದಲ ಪ್ರಾರಂಭವಾದ ಕೂಡಲೇ ಈ ಪರಿವರ್ತನೆ
ಆಗಿರಬಹುದು. ತುಂಬಾ ಜಾಣನವನು.
ಹೋಮಕ್ಕೆ ತುಪ್ಪ ಹಾಕುತ್ತಿದ್ದ ಅವನನ್ನು ನೋಡಿದ ನಮ್ಮ ನಾಯಕ ಅವನಿಗೆ
ನಮಸ್ಕರಿಸಿ ಹೊರಬಂದ. ನಾನು ನಿರಾಳವಾದೆ. ಮನದಲ್ಲಿ ಮುಂದಿನ
ಮನೆಗಳವರೆಲ್ಲ ಹೀಗೆ ಮಾಡಲಿ, ಕಂಟಕದಿಂದ ಪಾರಾಗಲಿ ಎಂದು ಹಾರೈಸಿದೆ.

ಇದೇ ರೀತಿ ಅನೇಕರ ಹತ್ಯೆ ಅವ್ಯಾಹತವಾಗಿ ನಡೆಯುತ್ತ ಸಾಗಿತು. ಅದನ್ನೆಲ್ಲ ನೋಡಿ ನೋಡಿ ಕೆಲವು ಯೋಧರ ಮನದ ರೋಷ ಉಕ್ಕಿ ಅವರ ಕೈ ನಡುಗುತ್ತಿರುವದು ನನ್ನ ಗಮನಕ್ಕೆ ಬಂತು ನನ್ನ ಗತಿಯೂ ಅದೇ ಆಗಿತ್ತು. ಆಮೇಲೆ ಮುಂದಿನ ಮನೆಗೆ ಹೋದಾಗ ಒಳಗೇನು ನಡೆಯಿತು ನನಗೆ ಗೊತ್ತಾಗಲಿಲ್ಲ, ಸ್ವಲ್ಪ ಸಮಯದ ನಂತರ ರಕ್ತಸಿಕ್ತ ಖಡ್ಗದೊಡನೆ ಯೋಧರು ಹೊರಬಂದರೆ ನಾಯಕ ಮಾತ್ರ ಒಬ್ಬ ಯುವತಿಯ ಜುಟ್ಟು ಹಿಡಿದು ದರ ದರನೆ ಎಳೆದುಕೊಂಡು ಹೊರಗೆ ಬಂದ.
ಆಕೆ ಜೋರಾಗಿ "ಅಣ್ಣಾ ಬೇಡ , ಬೇಡ " ಎಂದು ದಯನೀಯವಾಗಿ ಬೇಡಿಕೊಳ್ಳುತ್ತಿದ್ದಳು. ಆಕೆಯ "ಕಾಪಾಡಿ, ಕಾಪಾಡಿ" ಎಂಬ ಆರ್ತನಾದ ಮುಗಿಲು ಮುಟ್ಟಿತ್ತು. ನಾಯಕ ಮತ್ತು ಕೆಲವು ಯೋಧರು ಅಕೆಯ ಸುತ್ತ ಪಿಶಾಚಿಗಳಂತೆ ಕುಣಿದು ಆಕೆಯ ಬಟ್ಟೆ ಎಳೆಯುಲಾರಂಭಿಸಿದರು.
ನನ್ನ ರಕ್ತ ಕುದಿಯುತ್ತಿದ್ದರೂ ತಡೆದುಕೊಂಡು ಏನು ಮಾಡಬೇಕೆಂದು ತಿಳಿಯದೇ ಆ ಹೇಯ ಕೃತ್ಯ ನೋಡಲಾರದೆ ನಾನು ಒಂದು ಕ್ಷಣ ಕಣ್ಣುಮುಚ್ಚಿದೆ.
(ಅದಕ್ಕಿಂತ ಬೇರೆ ಮಾರ್ಗ ನನಗೆ ಹೊಳೆಯಲಿಲ್ಲ. ನಾನೆಂತಹ ಹೇಡಿ ಎಂದು ನನ್ನ ಬಗ್ಗೆ ನನಗೆ ತಿರಸ್ಕಾರವಾಯಿತು)
ಆ ಒಂದೇ ಒಂದು ಕ್ಷಣದಲ್ಲಿ ಅಲ್ಲಿ ಹಾಹಾಕಾರ ಕೇಳಿಸಿತು ಕಣ್ಣು ತೆರೆದು ನೋಡಿದಾಗ ಅಲ್ಲಿ ಕುಣಿಯುತ್ತಿದ್ದವರ ರುಂಡಗಳೆಲ್ಲ ನೆಲಕ್ಕುರುಳಿದ್ದವು.
ಅಲ್ಲಿ "ಅಹಾ ರುದ್ರ ಅಹಾ ವೀರಭದ್ರ" ಎಂಬ ಜೈಕಾರ ಮಾಡುತ್ತಿದ್ದವರು ನನಗೆ ವೀರಭದ್ರ ದೇವರಂತೆ ಕಂಡರು. ಮನದಲ್ಲೇ ಕೈಮುಗಿದು ನಾನೂ ಖಡ್ಗವೆತ್ತಿದೆ.
ರಾಜನ ಸಮರ್ಥಕರು ಸುಮ್ಮನಿರುತ್ತಾರೆಯೇ ಅವರು "ಜೈ ಸೋಮದೇವ ಮಹಾರಾಜ" ಎಂದು ಘೋಷಿಸುತ್ತ ಕಾದಾಟ ಪ್ರಾರಂಭಿಸಿದರು. ಹೀಗೆ ಆಲ್ಲಿ ಘನಘೋರ ಕಾದಾಟವೇ ಪ್ರಾರಂಭವಾಯಿತು.
ಕಾದಾಡುತ್ತ ಕಾದಾಡುತ್ತ ಎಲ್ಲರೂ ಮುಖ್ಯ ರಸ್ತೆಗೆ ಬಂದೆವು. ಯೋಧರಲ್ಲಿ ಯಾರ ಒಲವು ಯಾರ ಕಡೆ ಎನ್ನುವದು ಸ್ವಲ್ಪ ಮಟ್ಟಿಗೆ ಗೊತ್ತಿತ್ತು ಹಾಗಾಗಿ ಅಲ್ಲಿ ಎರಡು ಗುಂಪುಗಳಾಗಿ ಘನಘೋರ ಕಾದಾಟ ನಡೆಯಿತು. ಆ ಪರ ವಿರೋಧ ಜೈಕಾರಗಳು ಮುಗಿಲು ಮುಟ್ಟಿದವು.
ಆ ಕೋಲಾಹಲ ಕೇಳಿದ ಬೇರೆ ಬೇರೆ ಕಡೆ ಹೋದ ಯೋಧರು ಓಡೋಡುತ್ತ ಅಲ್ಲಿನ ಬಯಲಿನಲ್ಲಿ ಒಂದುಗೂಡಿದರು.
ಅದೊಂದು ರಣರಂಗವೇ ಆಯಿತು.
ಅದುವರೆಗೆ ರೋಷ ತುಂಬಿಕೊಂಡಿದ್ದ ಅರಸನ ವಿರೋಧಿಗಳು ಅಲ್ಲಿದ್ದ ರಾಜರಪರ ಯೋಧರನ್ನು "ಅಹಾ ರುದ್ರ , ಅಹಾ ವೀರಭದ್ರ" ಎಂದು ಹುಡುಕಿ ಹುಡುಕಿ ಕೊಲ್ಲತೊಡಗಿದರು.

ಆದರೆ ಸ್ವಲ್ಪ ಹೊತ್ತಿನಲ್ಲಿ ಸುಧಾರಿಸಿಕೊಂಡ ರಾಜನಪರ ಸೈನಿಕರು ತಮ್ಮ ನಾಯಕರ ಮಾರ್ಗದರ್ಶನದ ಫಲವಾಗಿ ಅನೇಕ ರಾಜವಿರೋಧಿಗಳ ಕೊಲೆ ನಡೆಸಿದರು.
ಆ ಮಬ್ಬುಕತ್ತಲಲ್ಲಿ ಯಾರು ಯಾರನ್ನು ಕೊಂದರೆನ್ನುವದು ಗೊತ್ತಾಗಲೇ ಇಲ್ಲ. ರೋಷಾವೇಶ ತುಂಬಿದ್ದ ನಾನೆಷ್ಟು ಜನರ ಕೊಂದೆ ನನಗೆ ಗೊತ್ತಾಗಲಿಲ್ಲ. ರಾಜನ ಸಮರ್ಥಕರ ಕೈ ಮೇಲಾಯಿತು ಯಾಕಂದರೆ ಅವರಿಗೆ ಮಾರ್ಗದರ್ಶನ ಮಾಡುವ ನಾಯಕರಿದ್ದರು ಮತ್ತು ಒಂದು ಗುರಿ ಇತ್ತು. (ಗೆದ್ದರೆ ಬಹುಮಾನ ಸಿಗುವದು ಖಾತ್ರಿಯಿತ್ತು. ರಾಜನ ಸೇವೆಯೇ ಪರಮಧರ್ಮ ಎಂಬ ನಂಬಿಕೆ ಅವರ ಮನದಲ್ಲಿ ತುಂಬಲಾಗಿತ್ತು.)
ಅವರು ಒಟ್ಟಾಗಿ ದಾಳಿ ಮಾಡಲಾರಂಭಿಸಿದರು.
ಆದರೆ ರಾಜ ವಿರೋಧಿಗಳಿಗೆ ಮಾರ್ಗದರ್ಶನ ಮಾಡುವವರಾರೂ ಇರಲಿಲ್ಲ ಮತ್ತು ಗುರಿಯೂ ಇರಲಿಲ್ಲ. "ಕೊಲಬೇಡ" ಎನ್ನುವ ಮಂತ್ರ ಅವರ ಕೈ ತಡೆಯುತ್ತಿತ್ತು.
(ಅವರ ಮನದಲ್ಲಿಯ ರೋಷವೂ ಕಡಿಮೆಯಾಗಿ ಭವಿಷ್ಯದ ಯೋಚನೆ ಬರಲಾರಂಭಿಸಿತು).
ಅವರು ಬಿಡಿ ಬಿಡಿಯಾಗಿ ಹೋರಾಡಲಾರಂಭಿಸಿದರು. ಒಂದು ವೇಳೆ ರಾಜವಿರೋಧಿಗಳಿಗೊಬ್ಬ ನಾಯಕನಿದ್ದು ಮಾರ್ಗದರ್ಶನ ಮಾಡಿದ್ದರೆ ಇಷ್ಟೊತ್ತಿಗೆ ರಾಜಸತ್ತೆಯ ಪತನವಾಗಿರುತ್ತಿತ್ತು. ಇತಿಹಾಸವೇ ಬೇರೆಯಾಗಿರುತ್ತಿತ್ತು.
ಅವರಿಗೆ ದಾರಿತೋರುವವರಾರೂ ಇರಲಿಲ್ಲ ಹೀಗಾಗಿ ಅವರಲ್ಲಿ ಕೆಲವರು ಅನಿವಾರ್ಯವಾಗಿ
"ಜೈ ಸೋಮದೇವ ಮಹಾರಾಜ" ಎಂದು ಕೂಗುತ್ತ ದಲ ಬದಲಿಸಿದ್ದರು.
ಉಳಿದ ಕೆಲವರು ಊರು ತೊರೆದು ಕತ್ತಲಲ್ಲಿ ಕರಗಿ ಹೋಗಿದ್ದರು.
ಅಂತೂ ಸ್ವಲ್ಪ ಸಮಯದ ನಂತರ ಯೋಧರೆಲ್ಲ "ಜೈ ಸೋಮದೇವ ಮಹಾರಾಜ" ಜೈಕಾರ ಮಾಡುತ್ತ ಅರಮನೆಗೆ ಬಂದು ಸೇರಿದರು. ರಾಜನ ಕೊಲ್ಲಲು ಸಂಚು ರೂಪಿಸಿದ ಎಲ್ಲರ ನಾಶ ಮಾಡಿ ಬಂದುದಾಗಿ ಘೋಷಿಸಿದರು.
ಅಲ್ಲಿ ಮಡಿದವರೆಲ್ಲ ರಾಜನ ವಿರೋಧಿಗಳು ಉಳಿದವರೆಲ್ಲ ರಾಜನ ಬೆಂಬಲಿಗರೆಂದು ಬಿಂಬಿಸಲಾಯಿತು.
ಎಲ್ಲರ ಜೊತೆ ನಾನು ಸೇರಿಕೊಳ್ಳುವದು ಅನಿವಾರ್ಯವಾಗಿತ್ತು.
ಎಲ್ಲರೂ ಕೋಟೆಯ ಹಿಂದುಗಡೆಯ ಬಯಲಲ್ಲಿ ಸೇರಿದೆವು. ನನ್ನ ಮಗ್ಗಲು ಸಾಲಿನಲ್ಲಿದ್ದ ಯೋಧ
"ಅನುಭವ ಮಂಟಪ ನಾಶ ಮಾಡಿ, ಶರಣರ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿ ಬಂದೆವು, ಎಷ್ಟು ಹುಡುಕಿದರೂ ಶರಣರಾರೂ ಸಿಗಲಿಲ್ಲ" ಎಂದು ತಾವು ಮಾಡಿದ ಘನಕಾರ್ಯ ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಿದ್ದ.

ನನ್ನ ಕಣ್ಣಲ್ಲಿ ನನಗರಿಯದೇ ಕಣ್ಣೀರು ಬಂತು. ಮಹಾರಾಜರನ್ನು ನೆನೆದು ಕಣ್ಣೀರು ಸುರಿಸುತ್ತಿದ್ದೇನೆ ಎಂದು ತಿಳಿದ ನಮ್ಮ ತಂಡದ ನಾಯಕ ಮೆಚ್ಚಿಗೆಯಿಂದ ಕಣ್ಣಲ್ಲೇ ನನಗೆ ಸಾಂತ್ವನ ಹೇಳಿದ. ದಂಡನಾಯಕರೆಲ್ಲ ಅಲ್ಲಿ ನೆರೆದಿದ್ದರು. ಅಲ್ಲಿಯ ವೇದಿಕೆಯ ಮೇಲೆ ಒಟ್ಟಿದ ಕಟ್ಟಿಗೆಯ ರಾಶಿಯ ಮೇಲೆ ಹೂಮುಚ್ಚಿದ ಮಹಾರಾಜನ ದೇಹವಿತ್ತು. ವಾಡಿಕೆಯಂತೆ ಯೋಧರೆಲ್ಲ ನಮನ ಸಲ್ಲಿಸಿದ ಮೇಲೆ ಅಗ್ನಿಸ್ಪರ್ಶವಾಯಿತು. ಆ ಸಮಯದಲ್ಲೂ ಮೊಳಗಿದ ಘೋಷಣೆ
"ಜೈ ಸೋಮದೇವ ಮಹಾರಾಜ" "ಜೈ ಸೋಮೇಶ್ವರ ಮಹಾರಾಜ".
(ಒಂದು ರಾತ್ರಿಯಲ್ಲಿ ಸೋವಿದೇವ, ಸೋಮದೇವನಾಗಿ ಮತ್ತೆ ಆರಾಧ್ಯದೈವ ಸೋಮೇಶ್ವರನಾಗಿ ಯೊಧರ ಬಾಯಲ್ಲಿ ಪರಿವರ್ತಿತನಾಗಿದ್ದ. ಮಾನವ ದೇವನಾಗುವದು ಎಷ್ಟು ಸರಳ. ಪಾಪ ಶರಣರು ಒಂದೇ ರಾತ್ರಿಯಲ್ಲಿ ಹುಡುಕಿ ಹುಡುಕಿ ಕೊಲ್ಲುವಷ್ಟು ಪರಮ ಪಾಪಿ ದೇಶದ್ರೋಹಿಗಳಾಗಿದ್ದರು ಯೋಧರ ಮನದಲ್ಲಿ. ಅಧಿಕಾರವುಳ್ಳವರು ಘಟನೆಗಳನ್ನು ತಮಗೆ ಬೇಕಾದಂತೆ ಹೇಗೆ ತಿರುಚಬಲ್ಲರು ಎನ್ನುವದಕ್ಕೊಂದು ಉದಾಹರಣಣೆ ಇಲ್ಲಿತ್ತು.) ಅಮೇಲೆ ಎಲ್ಲರೂ ಮೈದಾನದಲ್ಲಿ ಸೇರಿದೆವು. ಅಲ್ಲಿದ್ದವರಾರು ಮನುಷ್ಯರಂತೆ ಕಾಣಲಿಲ್ಲ ರಣಹದ್ದುಗಳ ಗುಂಪು ಗುಂಪಾಗಿ ನಿಂತಂತೆ ಕಾಣಿಸಿದರು. ಅಷ್ಟರಲ್ಲಿ ಅಲ್ಲಿಗೆ ಬಂದ ಮಹಾರಾಜ ಸೋಮೇಶ್ವರ
“ನೀವು ಶ್ರಮವಹಿಸಿ ಬಿಜ್ಜಳ ಮಹಾರಾಜ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಿದಿರಿ. ಈಗ ಊರು ಬಿಟ್ಟು ಓಡಿಹೋಗಿರುವ ವಿರೋಧಿಗಳನ್ನೆಲ್ಲ ಬೆನ್ನಹತ್ತಿ ಹುಟ್ಟಡಗಿಸಿ ಬನ್ನಿ. ಒಬ್ಬ ವಿರೋಧಿಯೂ ಬದುಕಿರಬಾರದು ಮತ್ತು ಒಂದು ವಚನವೂ ಉಳಿಯಬಾರದು. ನಿಮಗೆಲ್ಲ ಸೂಕ್ತ ಬಹುಮಾನ ನೀಡಲಾಗುವದು.” ಎಂಬ ಆದೇಶ ನೀಡಿದ.
ಕೆಲವು ತಂಡಗಳು ಅಲ್ಲಿಯೇ ಉಳಿದವು, ಉಳಿದವರೆಲ್ಲ ರಾಜಾಜ್ಞೆ ಪಾಲಿಸಲು ಹೊರಟರು.
ನಮ್ಮ ತಂಡ ಈ ಕಡೆ ಬಂತು ಮತ್ತು ನಾ ನಿಮ್ಮನ್ನ ಭೆಟ್ಟಿಯಾದೆ. ನಿಮ್ಮ ಕಾಳಜಿ ನೀವು ಮಾಡಿಕೊಳ್ಳಿ. ನಾನಿಲ್ಲಿದ್ದರೆ ನಿಮಗೆ ತೊಂದರೆ. ಇಷ್ಟು ಹೇಳಿ ಅಲ್ಲಿ ನಿಲ್ಲದೇ ನಾನು ನನ್ನ ತಂಡ ಸೇರಿಕೊಳ್ಳುವದಾಗಿ ಹೇಳಿ ಹೊರಟೇ ಬಿಟ್ಟ.

**ಮರನುರಿದು ಬೆಂದು ಕರಿಯಾದ ಮತ್ತೆ ಉರಿಗೊಡಲಾದುದ ಕಂಡು,**

**ಆತ್ಮ ಪರಿಭವಕ್ಕೆ ಬಪ್ಪುದಕ್ಕೆ ಇದೆ ದೃಷ್ಟ.**

**ಕರಿ ಭಸ್ಮವಾದ ಮತ್ತೆ ಉರಿಗೊಡಲಿಲ್ಲ, ಅರಿಕೆ ನಿಂದಲ್ಲಿ ಆತ್ಮ ಪರಿಭವಕ್ಕೆ ಬರಲಿಲ್ಲ,**

**ಉರಿಯೊಳಗೊಡಗೂಡಿದ ತಿಲಸಾರ ತುಪ್ಪ ಮರಳಿ ಅಳೆತಕ್ಕುಂಟೆ ?**

**ವಸ್ತುವಿನಲ್ಲಿ ಕರಿಗೊಂಡ ಚಿತ್ತ, ತ್ರಿವಿಧಮಲಕ್ಕೆ ಹೊರಳಿ ಮರಳುವದೆ ?**

ಈ ಗುಣ ನಡೆ ನುಡಿ ಸಿದ್ಧಾಂತವಾದವನ ಇರವು,

ಗಾರುಡೇಶ್ವರಲಿಂಗವ ಕೂಡಿದವನ ಕೂಟ./1214

------ ಉಪ್ಪರಗುಡಿಯ ಸೋಮಿದೇವಯ್ಯ

ಗಮನಿಸಿ:

ಜಗದ ಇತಿಹಾಸದಲ್ಲಿ ಲೆಕ್ಕವಿಲ್ಲದಷ್ಟು ಯುದ್ಧ ನಡೆದದ್ದು ಸರ್ವವಿದಿತ. "ಕೊಲಬೇಡ" ಎಂಬ ಮಾತಿಗೆ ಕಟ್ಟುಬಿದ್ದು ಶಕ್ತಿಯಿದ್ದೂ ಪ್ರತಿರೋಧ ತೋರದೇ ಊರು ತೊರೆದ ಉದಾಹರಣೆ ಬಹಳಮಾಡಿ ಕಲ್ಯಾಣದಲ್ಲಿಯಷ್ಟೇ ನಡೆದಿರಬೇಕು. ತತ್ವಗಳು ಹೇಳುವದಕ್ಕಷ್ಟೇ ಇಲ್ಲ ಅವುಗಳನ್ನು ಆಚರಿಸಬೇಕು ಎಂದು ಶರಣರು ನಿರೂಪಿಸಿದರು. ಅದಕ್ಕಾಗಿಯೇ ವಚನಗಳು ಜನಮನದಲ್ಲಿ ನೆಲೆಯೂರಿದವು. ಗೆದ್ದವರು ಮಾಡುವ ಪ್ರಥಮ ಕೆಲಸ ಸ್ಮಾರಕಗಳನ್ನು ನಾಶಮಾಡುವದು ಮತ್ತು ಗ್ರಂಥಾಲಯಗಳನ್ನು ಸುಡುವದು. ತಮ್ಮ ವಿರೋಧಿಗಳಾರೂ ಬದುಕಿರಬಾರದು. ಅದಕ್ಕಾಗಿ ಯೊಧರನ್ನು ಮತ್ತು ಜನರನ್ನು ಪ್ರಚೋದಿಸುವದು ಸಾಮಾನ್ಯವಾಗಿ ಎಲ್ಲರೂ ಮಾಡುತ್ತಾರೆ. ಅಧಿಕಾರಕ್ಕಾಗಿ ಬಂಧು ಬಾಂಧವರನ್ನು ಕೊಂದವರ ಉದಾಹರಣೆ ಅನೇಕ. ಆದರೆ ತಂದೆಯನ್ನು ಕೊಲ್ಲದೇ ಅವನ ಕೊಲೆಯ ಭ್ರಮೆ ಹುಟ್ಟಿಸಿ ಅಧಿಕಾರಕ್ಕೆ ಬಂದು ಸುಳ್ಳುಗಳ ಆಧಾರದಲ್ಲಿ ಕಾಲ್ಪನಿಕ ಘಟನೆಗಳನ್ನು ಹುಟ್ಟಿಸಿ ವಿರೋಧಿಗಳ ನಾಶಮಾಡಿದ ಏಕೈಕ ವ್ಯಕ್ತಿ ಈ ಸೊಮೇಶ್ವರ ಮಹಾರಾಜ.

ವಚನ ಸಾಹಿತ್ಯ ಮೂರು ಶತಮಾನಗಳ ಕಾಲ ಅಜ್ಞಾತವಗಿರುವಂತೆ ಮಾಡಿದ ಇವನ ಕುಕೃತ್ಯಗಳು ಅನಾವರಣವಾಗುತ್ತಿವೆ.

ಈಗ ದೊರೆಯುತ್ತಿರುವ ಶಿಲಾಶಾಸನಗಳು ಮತ್ತು ವಚನಗಳು ಬಿಜ್ಜಳ ದೊರೆ ಕ್ರಾಂತಿಯ ನಂತರವೂ ಜೀವಂತವಾಗಿದ್ದ ಮತ್ತು ಹರಳಯ್ಯ ಮತ್ತು ಅವರ ಮಗ ಊರಿಗೆ ಮರಳಿ ಅಲ್ಲಿ ಪಾದುಕೆ ಇಟ್ಟದ್ದು ಗೊತ್ತಾಗುತ್ತಿದೆ. ಜಗದೇವ ಮತ್ತು ಮಲ್ಲಿಬೊಮ್ಮರ ಸಮಾಧಿಗಳು ಕಲ್ಲೂರಲ್ಲಿದ್ದು ಅವರಿಗೆ ಮರಣದಂಡನೆಯಾಯಿತು ಎನ್ನುವದು ಸುಳ್ಳು. ಇತಿಹಾಸಕಾರರನ್ನು ಮತ್ತು ಸಮಕಾಲೀನರನ್ನು ಸುಳ್ಳು ಸಂಚು ರೂಪಿಸಿ ಮೋಸಗೊಳಿಸಿದ ಪ್ರಸಂಗ ಇದೊಂದೇ ಇರಬೇಕು ಎನಿಸುತ್ತದೆ.

**ಕ್ಷೀರದಿಂದಾದ ತುಪ್ಪ ಕ್ಷೀರವಪ್ಪುದೇ ? ನೀರಿನಿಂದಾದ ಮುತ್ತು**

**ನೀರಪ್ಪುದೇ ?**

**ಮೀರಿ ಪೂರ್ವಕರ್ಮವನು ಹರಿದ ಭಕ್ತಗೆ ಬೇರೆ ಮತ್ತೆ ಜನ್ಮವುಂಟೆ ಲಿಂಗವಲ್ಲದೆ ?**

**ಕಟ್ಟಿಹೆ ಬಿಟ್ಟಿಹೆವೆಂಬ ದಂದುಗ ನಿಮಗೇಕೆ ?**

**ತೆರನನರಿಯದೆ ಹಲವು ತೊಪ್ಪಲ ತರಿತಂದುಯ್ಯಯ್ಯ ಮೇಲೊಟ್ಟಲೇಕೊ ?**

**ಜಂಗಮ ಬಂದರೆ ತೆರನರಿತು ಅರ್ಪಿಸಬಲ್ಲಡಲ್ಲಿ ಶಿವ ತೆರಹಿಲ್ಲದಿಪ್ಪನೆಂದಾತನಂಬಿಗರ ಚೌಡಯ್ಯ.**

------ ಅಂಬಿಗರ ಚೌಡಯ್ಯ
ಭದ್ರಣ್ಣ ಹೋದಮೇಲೆ ದಿಕ್ಕುತಿಳಿಯದೇ ಕುಳಿತೆವು.

## ಇರಿವ ಕೈದಿಂಗೆ ದಯ ಧರ್ಮದ ಮೊನೆ ಉಂಟೆ?

**ಗುರುವ:** ನಾವು ಮುಂದೇನು ಮಾಡುವದು?
**ನನ್ನಾಕೆ:** ಇದುವರೆಗೆ ನಾವು ಮಾಡಿದ್ದಾದರೂ ಏನು? ಹೊಳೆಯಲ್ಲಿಯ ಕಟ್ಟಿಗೆ ತುಂಡುಗಳು ನಾವು? ಪ್ರವಾಹ ಸೆಳೆದುಕೊಂಡು ಹೋದ ಕಡೆ ಹೋಗುವದಷ್ಟೇ ನಮ್ಮ ಕೆಲಸ.
ಆಕಳು ಮೇಯಿಸಲು ಹೋಗಿದ್ದ ಕೆಂಪರಾಜ ಬಂದ. ನಮಗೆಲ್ಲರಿಗೂ ಹಾಲು ಕೊಟ್ಟಳು.
**ಕೆಂಪರಾಜ:** ಅಕ್ಕಾ ನಾವಿಲ್ಲಿರುವದು ಬೇಡ ಇಲ್ಲಿಂದ ಬೇರೆಕಡೆ ಹೋಗೋಣ. ಅವರಿಗೆ ಬೇಕಾದ ಖರೋಸಾ ಆಡಳಿತಗಾರ ಇನ್ನೂ ಸಿಕ್ಕಿಲ್ಲ. ಸಿಗುವವರೆಗೆ ಅವರು ಬಿಡುವದಿಲ್ಲ.
**ಗುರುವ:** ಸರಿ.
ಕೆಂಪರಾಜ ಬಂಡಿ ಹೊಡೆದುಕೊಂಡು ಬಂದ. ಅವನೀಗ ರಸ್ತೆಬಿಟ್ಟು ಹೊಲದಲ್ಲಿಯೇ ಬಂಡಿ ಹೊಡೆದುಕೊಂಡು ಹೊರಟ. ನನ್ನ ತಮ್ಮಂದಿರು ಬಂಡಿ ಹೋದ ಗುರುತು ಸಿಗದಂತೆ ಮಾಡುತ್ತಿದ್ದರು. ಹೀಗೆ ಹಗಲು ರಾತ್ರಿ ಪ್ರವಾಸ ಮಾಡುತ್ತ ಜನರಿಲ್ಲದ ಜಾಗದಲ್ಲಿ ಸಾಗಿ ನದಿಯ ದಂಡೆಗೆ ಬಂದು ತಲುಪಿದಾಗ ರಾತ್ರಿಯಾಗಿತ್ತು. ತಂಪು ಗಾಳಿ ಬೀಸುತ್ತಿತ್ತು.
ಒಂದು ಗಿಡದ ಕೆಳಗೆ ಬಂಡಿ ನಿಲ್ಲಿಸಿ ಅಲ್ಲಿಯೇ ರಾತ್ರಿ ಕಳೆದೆವು. ನನ್ನ ಊರು ಗಂಜೀಹಾಳದಲ್ಲಿ ಮಲಪಹಾರಿ ತುಂಬಿ ಹರಿಯುವಾಗ ರಾತ್ರಿಯೆಲ್ಲ ಜೋಗುಳ ಹಾಡಿದ ಸದ್ದು ಇಲ್ಲಿಯೂ ಇತ್ತು, ತಂಗಾಳಿಯಲ್ಲಿ ಕೌದಿ ಹೊದ್ದು ಮಲಗಿದಾಗ ಆಗುವ ಅನುಭವ ಇಲ್ಲಿಯೂ ಆಯಿತು.
ಬೆಳಗಾದ ಮೇಲೆ ಎಲ್ಲಿ ನದಿ ದಾಟಬೇಕು ಎನ್ನುವದನ್ನು ಪತ್ತೆ ಹಚ್ಚಲು ಕೆಂಪರಾಜನೊಡನೆ ಹೊರಟೆ. ಸ್ವಲ್ಪ ದೂರದಲ್ಲಿ ನದಿ ಭೋರ್ಗರೆಯುತ್ತಿತ್ತು. ಈ ನದಿ ದಾಟುವದು ಸುಲಭವಲ್ಲ. ಅದಕ್ಕಾಗಿಯೇ ವಿಶೇಷ ಜಾಗೆ ಇರಬೇಕು ಹುಡುಕೋಣ ಎಂದು ನದಿ ದಂಡೆಗುಂಟ ಹೊರಟೆವು. ಮುಂದೆ ಸಾಗಿ ನೋಡಿದಾದ ನಮಗೆ ಆಶ್ಚರ್ಯ ಕಾದಿತ್ತು. ಅಲ್ಲಿ ಜನವೋ ಜನ ಎಲ್ಲ ಗಿಡಗಳ ಕೆಳಗೆ ಅವರು ಆಶ್ರಯ ಪಡೆದಿದ್ದರು. ಅಲ್ಲಿಯೇ ಒಲೆ ಹೂಡಿ ಅಡಿಗೆ ಕೆಲಸ ಮಾಡುತ್ತಿದ್ದವರು ಕೆಲವರಾದರೆ, ಅಲ್ಲಿಯೇ ತಮ್ಮ ಕಾಯಕ ಮಾಡುತ್ತಿದ್ದವರು ಹಲವರು. ಇಡೀ ಕಲ್ಯಾಣವೇ ಇಲ್ಲಿ ಬಂದಿದೆ ಎನ್ನಿಸಿತು. ಅಲ್ಲಿದ್ದ ಒಬ್ಬ ಯಜಮಾನನನ್ನು ಕೇಳಿದೆ
**ಗುರುವ:** ಅಜ್ಜಾ ನದಿ ಎಲ್ಲಿ ದಾಟಬೆಕು?

**ಯಜಮಾನ:** ಅಯ್ಯೋ ಹುಚ್ಚಪ್ಪಾ ಇಲ್ಲಿದ್ದವರೆಲ್ಲ ನದಿ ದಾಟಲು ದಾರಿ ಕಾಯುತ್ತಿದ್ದಾರೆ. ಇಲ್ಲಿರುವ ಕೆಲವೇ ನಾವುಗಳಲ್ಲಿ ಅಥವಾ ತೆಪ್ಪಗಳಲ್ಲಿ ನದಿ ದಾಟಬೇಕು. ನಿನ್ನ ಪಾಳಿ ಬರುವದು ಇವರೆಲ್ಲ ನದಿ ದಾಟಿದ ಮೇಲೆ.
**ಗುರುವ:** ನನ್ನ ಎತ್ತು ಬಂಡಿ ದಾಟುವದು ಹೇಗೆ?.
**ಯಜಮಾನ:** ಅದಕ್ಕೆಲ್ಲ ಹಣ ತೆರಬೇಕು ಮತ್ತು ಅಂಬಿಗರ ನಾಯಕನನ್ನು ಭೆಟ್ಟಿಯಾಗಿ ಪಾಳಿ ಹಚ್ಚಬೇಕು.
ಅಂತೂ ನದಿ ದಾಟುವದು ಅಷ್ಟು ಸರಳ ಮಾತಲ್ಲ. ಇಲ್ಲೇ ಜನರ ಮಧ್ಯದಲ್ಲಿದ್ದು ನಮ್ಮ ಪಾಳಿಗಾಗಿ ದಾರಿ ಕಾಯೋಣ ಎಂದು ಮರಳಿ ಬಂಡಿಯಿದ್ದಲ್ಲಿಗೆ ಮರಳಿದೆವು.
ಮರಳಿ ಬರುವಷ್ಟರಲ್ಲಿ ನನ್ನಾಕೆ ಗಂಜಿ ಮಾಡಿದ್ದಳು ನಾವೆಲ್ಲ ಗಂಜಿ ಕುಡಿದೆವು. ನನ್ನ ತಮ್ಮಂದಿರು ನಾವು ಬಂದ ಕೆಲಸವಾಯಿತು ನಾವು ಮರಳುತ್ತೇವೆ ನಿಮ್ಮ ಬಂಡಿಯಲ್ಲಿರುವ ಮುಂದಿನ ಎರಡು ಡಬ್ಬಿಗಳಲ್ಲಿ ಎಣ್ಣೆ ಇದೆ ಹಿಂದಿನ ಎರಡು ಡಬ್ಬಿಗಳಲ್ಲಿ ಅಮೃತವಿದೆ ಎಂದು ಹೇಳಿ ಮರೆಯಾಗಿಬಿಟ್ಟರು. ಅವರು ಹೇಳಿದ್ದೇನು ಗೊತ್ತಾಗಲಿಲ್ಲ. ಆದರೆ ನದಿ ದಾಟಲು ಹಣ ಹೇಗೆ ಹೊಂದಿಸಬೇಕೆಂದು ಹೇಳಿ ಹೋಗಿದ್ದರು.
ಅಲ್ಲಿಂದ ಹೊರಟು ಜನರ ಮಧ್ಯದಲ್ಲಿ ಗಿಡವೊಂದರ ಕೆಳಗೆ ಜಾಗ ಹುಡುಕಿ ಬಂಡಿ ನಿಲ್ಲಿಸಿದೆವು. ಅಂತೂ ಕಲ್ಯಾಣದಿಂದ ಬಂದ ಜನಸಾಗರ ನಾವೂ ಸೇರಿಕೊಂಡಿದ್ದೆವು.
ಬಂಡಿ ಹತ್ತಿ ಪುಟ್ಟಿ ಹುಡುಕಿದೆ. ಅದು ನನ್ನ ಮನೆತನದ ಮೂಲ ಆಸ್ತಿ. ನಮ್ಮಜ್ಜಿ ಎಣ್ಣೆ ಮಾರಲು ಉಪಯೋಗಿಸುತ್ತಿದ್ದ ಪುಟ್ಟಿ ಅಳತೆ ಮಾಪುಗಳು ಸಿಕ್ಕವು. ಅವುಗಳನ್ನು ಉಪಯೋಗಿಸಿ ನನ್ನಜ್ಜಿ ತನ್ನ ಏಳು ತಂಗಿಯಂದಿರ ಮದುವೆ ಮಾಡಿ ಮೆಟ್ಟಿಗೆ ಹಚ್ಚಿದ್ದು. ಮತ್ತು ನಾವೆಲ್ಲ ಬದುಕು ಕಟ್ಟಿಕೊಳ್ಳುವಂತೆ ಮಾಡಿದ್ದು. ಅವುಗಳಿಗೆ ನಮಸ್ಕರಿಸಿ, ಚಿಕ್ಕ ಡಬ್ಬಿಯಲ್ಲಿಎಣ್ಣೆ ತುಂಬಿ ಪುಟ್ಟಿಯಲ್ಲಿಟ್ಟೆ. ಆಗಲೇ ನನ್ನಾಕೆ ತಲೆಯ ಮೇಲೆ ಸಿಂಬೆಯನ್ನಿಟ್ಟುಕೊಂಡು ನಿಂತಿದ್ದಳು. ಆಕೆಯ ತಲೆಯ ಮೇಲೆ ಪುಟ್ಟಿಯನ್ನಿರಿಸಿ ಬಂಡಿಯಿಂದ ಕೆಳಗಿಳಿದೆ. ನನ್ನಜ್ಜಿ ಎಣ್ಣೆ ಮಾರಲು ಹೊರಟ ದೃಶ್ಯ ಮನದ ಮುಂದಿತ್ತು. ನೆನಪಿನಲ್ಲಿ ಮುಳುಗಿಹೋದೆ. ಆಕೆ ನಡೆಯಿರಿ ಯಜಮಾನರೇ ಹೋಗೋಣ ಎಂದಾಗಲೇ ಎಚ್ಚತ್ತು ಹೆಗಲಮೇಲೆ ಚೀಲ ಹಾಕಿಕೊಂಡು ಒಂದು ಸಣ್ಣ ಎಣ್ಣೆಡಬ್ಬಿ ತೆಗೆದುಕೊಂಡು ಅಕೆಯ ಹಿಂದೆ ಹೊರಟೆ.
"ಎಣ್ಣೆ ಬೇಕೇ ಶುದ್ದ ಶೇಂಗಾ ಎಣ್ಣೆ" ಎನ್ನುವ ಮಾತು ಹೊರಟಿತು ರೂಢಿಯಂತೆ. ಆದರೆ ಅಲ್ಲಿದ್ದವರು ಎಣ್ಣೆ ಖರೀದಿಸುತ್ತಾರೆ ಎನಿಸಲಿಲ್ಲ. ಹೆಚ್ಚುಕಡಿಮೆ ಅವರೆಲ್ಲ ಕಟ್ಟಿಗೆ ಆರಿಸಿ ತಂದು ಒಲೆಹೂಡಿ ಮುದ್ದಿಮಾಡಿ ತಂದ ಚಟ್ನಿ ಹಾಕಿಕೊಂಡು ತಿನ್ನುವವರೇ ಜಾಸ್ತಿ ಇದ್ದರು. ಆದರೂ ನನ್ನ ಪ್ರಯತ್ನ ಮುಂದುವರೆಸಿದೆ ."ಎಣ್ಣೆ ಬೇಕೆ, ಶುದ್ದ ಶೇಂಗಾ ಎಣ್ಣೆ" ಎನ್ನುತ್ತ ಮುನ್ನಡೆದೆ. ಅಂತೂ ಎಣ್ಣೆ

ಮಾರಾಟವಾಗಲಿಲ್ಲ. ಅಲ್ಲಿಯ ಒಂದು ಗಿಡದ ಕೆಳಗೆ ಪುಟ್ಟಿ ಇಳಿಸಿ ಕುಳಿತುಕೊಂಡೆವು. ಆ ನೆರಳಿನಲ್ಲಿ ಮಕ್ಕಳು ಆಡುತ್ತಿದ್ದರು ಕೆಲವರು ಊಟ ಮಾಡುತ್ತಿದ್ದರು. ಕೆಂಪು ಚಟ್ನಿ ಸವರಿದ ರೊಟ್ಟಿ ಅವರ ಕೈಯಲ್ಲಿ. ನನ್ನಾಕೆ ಒಂದು ಪಾವು ಮಾಪಿನಲ್ಲಿ ಎಣ್ಣೆ ಹಾಕಿಕೊಂಡು ಹೋದಳು. ಅವಳು ಅವರ ರೊಟ್ಟಿಯಲ್ಲಿದ್ದ ಚಟ್ನಿಗೆ ಎಣ್ಣೆ ಹಚ್ಚಿ ಸುತ್ತಿಕೊಟ್ಟಳು. ಮಕ್ಕಳು ಅದನ್ನು ಕುಣಿದಾಡುತ್ತ ತಿನ್ನತೊಡಗಿದರು. ಆಕೆ ಎಲ್ಲವನ್ನೂ ಮರೆತು ಅವರ ಸಂತೋಷದಲ್ಲಿ ಒಂದಾದಳು. ಅಷ್ಟರಲ್ಲಿ ಅಲ್ಲಿಗೆ ಸಣ್ಣವರಷ್ಟೇ ಅಲ್ಲ ದೊಡ್ಡವರು ರೊಟ್ಟಿ ಹಿಡಿದುಕೊಂಡು ಬಂದರು. ಒಣ ಚಟ್ನಿ ಪುಡಿ ಹಾಕಿಕೊಂಡು ಉಣ್ಣಬೇಕಾದವರು ಅಕೆಯಿಂದ ಎಣ್ಣೆ ಹಾಕಿಸಿಕೊಂಡು ಉಣ್ಣಹತ್ತಿದರು. ಅಂತೂ ವ್ಯಾಪಾರ ಮಾಡದೇ ಎಣ್ಣೆ ಡಬ್ಬಿ ಖಾಲಿ ಮಾಡಿದಳು ನನ್ನಾಕೆ. ಆಗ ಒಬ್ಬ ಮುದುಕಿ ನಾಲ್ಕಾರು ಖಡಕ ರೊಟ್ಟಿ ಚಟ್ನಿ ತಂದು "ಯಪ್ಪಾ ಇವನ್ನ ತಿಂದು ಹೊಟ್ಟೆ ತುಂಬಿಸಿಕೊಳ್ಳಿ ನಾಳೆಯ ದಾರಿ ಬಸವಣ್ಣ ತೋರಿಸುತ್ತಾನೆ" ಎಂದಳು. ಅಕೆ ಕೊಟ್ಟ ಖಡಕ ರೊಟ್ಟಿ ಅಂಗೈಯಲ್ಲಿ ಹಿಡಿದು ಚಟ್ನಿಯಲ್ಲಿ ಎಣ್ಣೆ ಹಾಕಿ ತಿನ್ನುವ ಸ್ವರ್ಗ ಸುಖ ಬಲ್ಲವನೇ ಬಲ್ಲ. ಅಲ್ಲಿಯೇ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಲು ಕುಳಿತೆವು. ಕೆಂಪರಾಜ ಗಿಡವೇರಿ ಕುಳಿತ.

ಸಾಯಂಕಾಲ ಅಲ್ಲಿಂದಲೇ ಕೂಗಿ ಹೇಳಿದ "ಯೊಧರ ದೊಡ್ಡ ತಂಡ ಕುದುರೆ ಏರಿ ಬರುತ್ತಿದೆ". ಎಲ್ಲರೂ ಗಾಬರಿಯಿಂದ ಎದ್ದು ತಮ್ಮ ತಮ್ಮವರನ್ನು ಹುಡುಕಿ ಗುಂಪಾಗಿ ನಿಲ್ಲತೊಡಗಿದರು. ದೂರದಲ್ಲಿ ಧೂಳೆದ್ದು ಸುಂಟರಗಾಳಿಯಂತೆ ಕಾಣುತ್ತಿತ್ತು. ಅಲ್ಲಿದ್ದವರಲ್ಲಿ ನಡುಕ ಹುಟ್ಟಿದ್ದು ಸುಳ್ಳಲ್ಲ.

ಕಲ್ಯಾಣದಿಂದ ಹೊರಟ ಕುದುರೆ ದಳದ ಯೋಧರ ದಂಡು ಅಲ್ಲಿಗೆ ಬಂತು ನಮ್ಮನ್ನೆಲ್ಲ ಕೆಲವರು ಸುತ್ತುವರಿದು ನಿಂತರು. ಅಲ್ಲಿದ್ದವರು ಸಾವಿರಾರು ಯೊಧರು. ಎಲ್ಲರ ಕೈಯಲ್ಲಿ ಬಿಚ್ಚುಗತ್ತಿ. ಆದರೆ ಸ್ವಲ್ಪ ಹೊತ್ತಿನಲ್ಲಿ ಗುಂಪಿನಿಂದ ಯಪ್ಪ, ಕಾಕ, ಮಾವ, ಏ ಮಗಾ..... ಎನ್ನುವ ಕೂಗುಗಳು ಜನಸಾಗರದಿಂದ ಕೇಳಿಸಲಾರಂಭಿಸಿತು. ಕೆಲವರ ಮುಖದಲ್ಲಿದ್ದ ಭಯ ಕಡಿಮೆಯಾಗಿ ಅಲ್ಲಿ ಬಹಳದಿನಗಳ ನಂತರ ತಮ್ಮವರನ್ನು ಕಂಡ ಖುಶಿ ತೇಲಹತ್ತಿತು. ಅವರಿಂದ ತಮಗೆ ತೊಂದರೆಯಾಗುವದಿಲ್ಲ ಎನ್ನುವ ಭರವಸೆ ಬಂದು ಅವರ ಮುಖದಲ್ಲಿ ನಸುನಗೆ ಮೂಡಿತು.

ಅ ತಂಡದ ಮುಖಂಡ

"ನೀವೆಲ್ಲರೂ ಈಗಲೇ ಮರಳಿ ಕಲ್ಯಾಣಕ್ಕೆ ಹೊರಡಬೇಕು" ಇದು ರಾಜಾಜ್ಞೆ ಎಂದ. ಆದರೆ ಅಲ್ಲಿದ್ದವರು ಕದಲದೇ ಸುಮ್ಮನೆ ಕುಳಿತಿದ್ದರು ಅವರೆಲ್ಲ ಆ ಗುಂಪಿನಲ್ಲಿ ತಮ್ಮವರಾರು ಇದ್ದಾರೆ ಎಂದು ಹುಡುಕುವದರಲ್ಲಿ ತಲ್ಲೀನರಾಗಿದ್ದರು ಗುರುತು ಸಿಕ್ಕಾಗ ಮುಖ ಅರಳುತ್ತಿತ್ತು.

ನಾಯಕನ ಮಾತಿಗೆ ಯಾರೂ ಲಕ್ಷಕೊಡಲಿಲ್ಲ.

ಅವನ ಪಿತ್ತ ನೆತ್ತಿಗೇರಿತು ಕುದುರೆ ಛಬಕಾದಿಂದ ಕುದುರೆಗೆ ಬಾರಿಸುವಂತೆ ಮುಂದಿದ್ದವರಿಗೆ ಬಾರಿಸತೊಡಗಿದ ಅವನ ಜೊತೆಗಿದ್ದ ಕೆಲ ಯೋಧರು ಅವನನ್ನ ಅನುಸರಿಸಿದರು. ಚಿಕ್ಕಮಕ್ಕಳು, ತಾಯಂದಿರು ಮತ್ತು ಮುದುಕರು ದಿಕ್ಕುಕಾಣದೇ ಚೀರಾಡುತ್ತ ಚಲ್ಲಾಪಿಲ್ಲಿಯಾಗಿ ಓಡಾಡಹತ್ತಿದರು.
ಆಗೊಬ್ಬ ಸೈನಿಕರ ಕ್ರೌರ್ಯದ ಪರಿಚಯವಿದ್ದ ಒಬ್ಬ ಮುದುಕ ಕೈಮುಗಿದು "ಸರಿ ಗಂಟು ಮೂಟೆ ತೊಗೊಂಡು ತಯಾರಾಗಿ ಬರತೀವಿ ಸ್ವಲ್ಪ ತಡೀರಿ" ಎಂದು ಗೋಗರೆದ ನಾಯಕನ ಮುಂದೆ.
ದಳದ ನಾಯಕ "ಆಯಿತು ಬೇಗ ಹೊರಡಿ" ಎಂದಾಜ್ಞಾಪಿಸಿದ ಕೈಲಿದ್ದ ಛಬಕಿಯಿಂದ ಅವನಿಗೂ ಬಾರಿಸಿದ. ಮುದುಕ ನೋವಿನಿಂದ "ಆಗಲಿ ಯಪ್ಪಾ ನನ್ನ ಗಂಟು ತೊಗೋತೀನಿ" ಎಂದು ಹೊರಟ ಗಿಡಗಳ ಕಡೆಗೆ.
ಇದನ್ನು ಕಂಡ ಎಲ್ಲರೂ ತಮ್ಮ ತಮ್ಮ ಗಂಟು ಮೂಟೆಯೊಂದಿಗೆ ತಯಾರಾದರು. ಅಲ್ಲಿದ್ದ ಸಾವಿರಾರು ಜನ ಕುರಿಮಂದೆಯಂತೆ ಗುಂಪಾಗಿ ನಿಂತರು.
ಕುದುರೆಯ ಮೇಲಿದ್ದ ನಾಯಕ "ನಡೆಯಿರಿ ಬೇಗ, ಬೇಗ" ಎಂದ ನಾಯಕ.
ಜನರ ಹಿಂದೆ ನಾಯಕ ಮತ್ತು ಬಹುಮಾನದ ಆಶೆಹೊತ್ತ ಯೋಧರು ಉತ್ಸಾದಿಂದ ಕೇಕೆ ಹಾಕುತ್ತ ಕುದುರೆ ಮೇಲೆ ಕುಳಿತು ಕೈಯಲ್ಲಿ ಕತ್ತಿ ಹಿಡಿದು ತಿರುಗಿಸುತ್ತ "ಬೇಗ, ಬೇಗ" ಎಂದು ದಬಾಯಿಸುತ್ತ ನಡೆದರು.
ಆವರ ಹಿಂದೆ ಮೌನವಾಗಿ ತಮ್ಮ ಕುದುರೆಯ ಮೇಲೆ ಉಳಿದ ಯೋಧರು ಅನ್ಯಮನಸ್ಕರಾಗಿ ನಡೆದಿದ್ದರು.
ಒಬ್ಬ ಮುದಕಿಯು ತಲೆಯ ಮೇಲೆ ಸೀರೆಯ ಗಂಟು ಇಟ್ಟುಕೊಂಡು ಕುಂಟುತ್ತಾ ನಿಧಾನವಾಗಿ ನಡೆದಿದ್ದಳು.
ಆಗ ತಂಡದ ನಾಯಕ ಬೇಗ ನಡಿ ಎಂದು ತನ್ನ ಕೈಯಲ್ಲಿಯ ಕತ್ತಿಯಿಂದ ಆಕೆಯ ತಲೆಯ ಮೇಲಿನ ಸೀರೆಯ ಗಂಟಿಗೆ ಬಡಿದ. ಆಕೆಯ ತಲೆಯ ಮೇಲಿನ ಗಂಟು ಹರಿದು ಅದರಲ್ಲಿಯ ಒಂದು ವಚನದ ಕಟ್ಟು ನೆಲಕ್ಕೆ ಬಿತ್ತು .
ಅದನ್ನು ನೊಡಿದ ಆ ತಂಡದ ನಾಯಕನಿಗೆ ಪಿತ್ತ ನೆತ್ತಿಗೇರಿತು, "ವಚನ ರಕ್ಷಿಸುವವರ ತಲೆದಂಡವಾಗಬೇಕು" ಎಂಬ ರಾಜಾಜ್ಞೆ ನೆನಪಾಯಿತು. ಆತ ಕತ್ತಿಯಿಂದ ಅವಳ ಕತ್ತು ಕತ್ತರಿಸಿಬಿಟ್ಟ "ಬಸವಾ" ಎಂದು ಚೀತ್ಕರಿಸುತ್ತ ರುಂಡ ನೆಲಕ್ಕಪ್ಪಳಿಸಿತು. ನೆಲಕ್ಕೆ ಬಿದ್ದ ರುಂಡದಿಂದಲೂ “ಬಸವ, ಬಸವ” ಎನ್ನುವ ಕ್ಷೀಣ ದನಿ ಬಂದರೆ, ಕೆಲವು ಯೋಧರು ಗಹಗಹಸಿ ನಕ್ಕ ಶಬ್ದ ಅಲ್ಲೆಲ್ಲ ರಿಂಗುಣಿಸಿತು. ಎಲ್ಲರೂ ಗಾಬರಿಯಲ್ಲಿ ಎಲ್ಲ ದಿಕ್ಕುಗಳಲ್ಲಿ ಓಡಿದರು.
ಶರಣರ ನೋವನ್ನು ಕಂಡು ಮರಗಿ ಮನದಲ್ಲಿ ರೋಷ ಹತ್ತಿಕ್ಕಿಕೊಂಡಿದ್ದ ಅವನ ಹಿಂದೆ ಬರುತ್ತಿದ್ದ ಯೋಧರ ಸಹನೆಯ ಕಟ್ಟೆ ಒಡೆಯಿತು ಕ್ರೋಧ ಒಮ್ಮೊಂದೊಮ್ಮಲೇ ಹೊರಹೊಮ್ಮಿ ಅವರು ಕೇಕೆ ಹಾಕುತ್ತ ಕತ್ತಿ ಎತ್ತಿದರು.
ಆ ತಂಡದ ನಾಯಕ ಮತ್ತು ಗಹಗಹಿಸಿ ಕೇಕೆ ಹಾಕುತ್ತಿದ್ದ ಯೋಧರ ತಲೆಗಳು ನೆಲಕ್ಕುರುಳಿದ್ದವು.

“ಅಹಾ ರುದ್ರ, ಅಹಾ ವೀರಭದ್ರ” ಎನ್ನುವ ಜೈಘೋಷ ಮೊಳಗಿತು. ಪ್ರತಿಯಾಗಿ “ಜೈ ಸೋಮೇಶ್ವರ ಮಹಾರಾಜ’ ಘೋಷವೂ ಪ್ರತಿಧ್ವನಿಸಿತು.
ಸ್ವಲ್ಪ ಸಮಯದಲ್ಲೇ ಅಲ್ಲಿಯ ಬಯಲು ರಣರಂಗವಾಗಿತ್ತು. ಎಲ್ಲರೊಂದಿಗೆ ನಾವೂ ದೂರ ಓಡಿಬಂದು ನಡುಗುತ್ತ ನಿಂತಿದ್ದೆವು. ಅಲ್ಲಿದ್ದವರ ಬಾಯಲ್ಲಿ “ಬಸವಾ ಬಸವಾ” ಅನ್ನುವ ಮಂತ್ರ ಹೊರಟವು. ಬಸವ ಕಾಯುತ್ತಾನೆ ಎನ್ನುವ ಅವರ ನಂಬಿಕೆ ಸುಳ್ಳಾಗಲಿಲ್ಲ. ರಾಜನ ಬಗ್ಗೆ ಒಲವಿದ್ದ ಒಬ್ಬ ಯೋಧನೂ ಬದುಕುಳಿಯಲಿಲ್ಲ.
ಆಗ ವಿಷಯ ಅರ್ಥವಾಗುತ್ತಿದ್ದಂತೆ ಅಲ್ಲಿದ್ದ ಕಾಯಕಯೋಗಿಗಳ ಮತ್ತು ಯೋಧರ ಕೇಕೆ ಹರ್ಷೋದ್ಗಾರ ಮುಗಿಲುಮುಟ್ಟಿತು. ಎಲ್ಲ ಕಡೆ “ಬಸವಾ ಬಸವಾ” ಎನ್ನುವ ಘೋಷ ಮೊಳಗಿತು.
ಅಲ್ಲಿ ರಕ್ತ ಮಡುಗಟ್ಟಿ ರುಂಡಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಎಲ್ಲರೂ ಮೈಮರೆತು ಕುಣಿದು ಕುಪ್ಪಳಿಸತೊಡಗಿದರು. ಯೋಧರ ನೆಲಕ್ಕುರುಳಿದ ರುಂಡಗಳು ಕುಣಿಯುತ್ತಿದ್ದವರ ಕಾಲಲ್ಲಿ ಸಿಕ್ಕು ಕಾಲ್ಚೆಂಡಿನಂತೆ ರಸ್ತೆಯ ಮಗ್ಗಲು ಹೊಲ ಸೇರಿದವು.
ಅಲ್ಲಿ ಉಳಿದ ಯೊಧರ ರೋಷ ಕಮ್ಮಿಯಾದಮೇಲೆ ಅಲ್ಲಿದ್ದ ಎಲ್ಲ ಕುದುರೆ ಕಟ್ಟಿಹಾಕಿದರು. ಕಲ್ಯಾಣದ ಕಡೆ ಯಾರೂ ಹೋಗದ ಹಾಗೆ ಪಹರೆ ಹಾಕಿದರು. ಈಗ ಅಲ್ಲಿದ್ದವರಿಗೆ ಸ್ವಲ್ಪ ನಿರಾಳವೆನಿಸಿತ್ತು. ಓಡಿ ಹೋಗಿ ಹುಡುಕಿ ಹುಡಿಕಿ ತಮ್ಮ ಸಂಬಂಧಿ ಯೋಧರನ್ನು ಅಪ್ಪಿಕೊಂಡು ಕಣ್ಣೀರಿಡುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು.
ನನಗಾಗ ಒಮ್ಮೆಲೆ ನೆನಪಾಯಿತು “ಎರಡು ಡಬ್ಬಿಗಳಲ್ಲಿ ಅಮೃತವಿದೆ”. ಅಷ್ಟರಲ್ಲಿ ನನ್ನನ್ನೊಬ್ಬ ಯೋಧ ಬಂದು ಅಪ್ಪಿಕೊಂಡ. ನಾನು ಅವನನ್ನು ಗುರುತಿಸಿದೆನಾದರೂ ಗಮನಿಸಿದವನಂತೆ “ಅಣ್ಣಾ ಬಂಡಿಯಲ್ಲಿ ಅಮೃತವಿದೆ” ಎಂದೆ. ನಾವಿಬ್ಬರೂ ಓಡಿಹೋಗಿ ಬಂಡಿಯಲ್ಲಿದ್ದ ಡಬ್ಬಿಗಳನ್ನು ಮತ್ತು ಅದರ ಕೆಳಗಿದ್ದ ಬಟ್ಟೆಗಳನ್ನು ತೆಗೆದುಕೊಂಡು ಬಂದೆವು. ಅಲ್ಲಿ ಗಾಯವಾಗಿ ಬಿದ್ದುಕೊಂಡವರನ್ನು ಎಬ್ಬಿಸಿ ಅವರ ಗಾಯಗಳಿಗೆ ಎಣ್ಣೆ ಹಚ್ಚಿದ ಪಟ್ಟಿ ಹಾಕತೊಡಗಿದೆವು. ಹೌದು ಆ ಡಬ್ಬಿಯಲ್ಲಿದ್ದದ್ದು ಅಮೃತವೇ, ಶೇಂಗಾ ಎಣ್ಣೆಯಲ್ಲಿ ಕಾಡ ಔಷಧಿಯ ಮಿಶ್ರಣ. ಪಟ್ಟಿ ಹಾಕಿದ ತಕ್ಷಣ ರಕ್ತಶ್ರಾವ ನಿಲ್ಲುತ್ತಿತ್ತು, ಉರಿತ ಕಮ್ಮಿ ಆಗುತ್ತಿತ್ತು. ನಮ್ಮನ್ನು ನೋಡಿ ಅಲ್ಲಿದ್ದ ಯುವಕರು ಯುವತಿಯರು ಪಟ್ಟಿಕಟ್ಟಿ ನೀರು ಕುಡಿಸಿ ಗಾಯಾಳುಗಳನ್ನೆಲ್ಲ ಒಂದು ಕಡೆ ಕೂಡ್ರಿಸಿದರು. ಯೋಧರೆಲ್ಲಾ ಒಂದು ಕಡೆ ಸೇರಿದರು. ಮುಂದೇನು ಮಾಡುವದು ಎನ್ನುವ ವಿಚಾರ ವಿಮರ್ಶೆ ಮಾಡತೊಡಗಿದರು
ನಾನೊಂದು ನಿಟ್ಟುಸಿರು ಬಿಟ್ಟು ಕಣ್ಣುಮುಚ್ಚಿಕೊಂಡು ಕುಳಿತೆ. ಮನದಲ್ಲಿ ಅನೇಕ ಪ್ರಶ್ನೆಗಳು ಮೂಡಿದವು

ಈಗ ನಡೆದದ್ದು ಯುದ್ಧವಾ? ಯಾರಿಗೆ ಗೆಲುವಾಯಿತು? ಯಾರಿಗೆ ಸೋಲಾಯಿತು?
ಶರಣರು ಕಾದಾಡಿ ಗೆದ್ದರೆ?

**ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದಡೇನಯ್ಯಾ**
**ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದಡೇನಯ್ಯಾ**
**ಸುಚರಿತ್ರರು ಎಂತಿದ್ದಡೇನಯ್ಯಾ**
**ಅವಲೋಹವ ಕಳೆವ ಪರುಷ ಎಂತಿದ್ದಡೇನಯ್ಯಾ**
**ಕೂಡಲಸಂಗನ ಶರಣರು**
**ರಸದ ವಾರುದಿಗಳು ಎಂತಿದ್ದಡೇನಯ್ಯಾ** / 242--ಅಣ್ಣ ಬಸವಣ್ಣ

ಗಮನಿಸಿ:

ವಿಶ್ವದ ಇತಿಹಾಸದಲ್ಲಿ ಅಧಿಕಾರಕ್ಕಾಗಿ ನಡೆದ ಯುದ್ಧಗಳು ಅನೇಕ. ಆದರೆ ತತ್ವಗಳ ಅನುಷ್ಠಾನಕ್ಕಾಗಿ ಅಹಿಂಸಾ ಮಾರ್ಗದಲ್ಲಿ ನಡೆದ ಕಾಯಕಯೋಗಿಗಳ ರಕ್ಷಣೆ ಮಾಡಲು ಆಡಳಿತ ಪಕ್ಷದ ಯೋಧರೇ ಕಾದಾಟಕ್ಕಿಳಿದ ಉದಾಹರಣೆಗಳು ವಿರಳ. ಆದರೆ ಕಲ್ಯಾಣದ ಕ್ರಾಂತಿ ಅಪರೂಪದ ಘಟನೆ.

ರಾಜರುಗಳು ತಾವು ಮಾಡಿದ್ದೇ ಸರಿ ಎನ್ನುವ ಹಾಗೆ ತಮ್ಮ ಹೊಗಳುಭಟ್ಟರ ಮೂಲಕ ಪ್ರತಿಪಾದಿಸಿದರೆ, ಕಾಲಕ್ರಮೇಣ ಇತಿಹಾಸಕಾರರು ಅವರ ಮಾತನ್ನೇ ಪ್ರಚುರಗೊಳಿಸುತ್ತ ಬಂದಿದ್ದಾರೆ. ಇಲ್ಲಿಯೂ ಆದದ್ದು ಅದೇ , ಶರಣರ ದಂಗೆಯನ್ನು ರಾಜ ದಮನ ಮಾಡಿದ ಎನ್ನುವದನ್ನೆ ಹಲವು ಶತಮಾನಗಳ ಕಾಲ ವಿವರಿಸುತ್ತ ಬಂದಿದ್ದಾರೆ. ಶರಣರ ತತ್ವಗಳ ಅರಿವಿರದ ಅವರು ಬರೆದದ್ದನ್ನು ನಂಬಿ ಬಸವಕಲ್ಯಾಣದಲ್ಲಿ ಶರಣರು ರಕ್ತದ ಓಕಳಿಯಾಡಿದರು ಭಿಮಾನದಿತೀರದಲ್ಲಿ ಘನಘೋರ ಯುದ್ದದಲ್ಲಿ ಶರಣರು ಕಾದಾಡಿ ಗೆದ್ದರು ಎನ್ನುವದನ್ನು ಒಪ್ಪಿದ್ದೇವೆ. ಪಾಪ ಸಾಹಿತಿಗಳಿಗೆ ಏನನ್ನು ನಂಬುವದು ಎನ್ನುವದು ತಿಳಿಯದೇ ಅರ್ಧಸತ್ಯವನ್ನು ಒಪ್ಪಿಕೊಂಡು ಭೀಮಾ ನದಿತೀರದಲ್ಲಿ ನಡೆದ ಕಾಳಗದಲ್ಲಿ ಯಾವುದೋ ಅವ್ಯಕ್ತ ಸಹಾಯದಿಂದ ವಿಜಯ ಸಾಧಿಸಿದರು ಎನ್ನುವದನ್ನು ಸಾದರಪಡಿಸುತ್ತಾರೆ. ಎಂಟು ಶತಮಾನಗಳ ಹಿಂದೆ ವಚನಗಳ ಹೊರತಾಗಿ ಯಾವುದೇ ದಾಖಲೆ ಇಲ್ಲದಿದ್ದಾಗ ಅದು ಹೇಗೆ ಇತಿಹಾಸಕಾರರ ಮಾತನ್ನು ನಿರಾಕರಿಸುವದು ಹೇಗೆ?

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಶರಣರಾರೂ ತಮ್ಮ ಸಹನೆ ಸಂಯಮ ಕಳೆದುಕೊಳ್ಳಲಿಲ್ಲ. ಯಾವುದೇ ಸಂದರ್ಭದಲ್ಲಿ ಅವರು ಕೈಗೆ ಕತ್ತಿ ತೆಗೆದುಕೊಳ್ಳಲಿಲ್ಲ.

ಪರುಷಮುಟ್ಟಿ ಕಬ್ಬಿಣ ಚಿನ್ನವಾದ ಮೇಲೆ ಮತ್ತು ಅದು ಯಾವುದೇ ಸಂದರ್ಭದಲ್ಲಿ ಮರಳಿ ಕಬ್ಬಿಣವಾಗುವದಿಲ್ಲ.

ಶರಣರೇ ಇತಿಹಾಸದಲ್ಲಿ ಅಹಿಂಸೆಯ ಪಾಠ ಕಲಿಸಿದ ಮೊದಲ ಗುರುಗಳು.

ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ರೀತಿಯ ಅನೇಕ ಪ್ರಕರಣಗಳು ಗಾಂಧೀಜಿಯವರ ನೇತೃತ್ವದಲ್ಲಿ ನಡೆದಿವೆ.

**ಅಲ್ಲಲ್ಲಿಯ ಶರಣರು ಅಲ್ಲಲ್ಲಿಯೇ ನಿಲಲು,**
**ಅಲ್ಲಲ್ಲಿಯ ಭಕ್ತಿ ಅಲ್ಲಲ್ಲಿಯೆ ಅಡಗಿತ್ತು.**
**ಅಲ್ಲಲ್ಲಿಯ ಕಾಯವಲ್ಲಲ್ಲಿಯೆ ಸಂದು ನಾನು**
**ಅಲ್ಲಲ್ಲಿಯೆ ಅಡಗಿಯಾನು ಅನುಮಿಷ ದೃಷ್ಟಿಯುಳ್ಳವಳಾದೆನು.**
**ಅಲ್ಲಲ್ಲಿಯೇ ಭ್ರಮಿಸಲು ಭ್ರಮೆಯಡಗಿ**
**ಸಂಗಯ್ಯನಲ್ಲಿ ಮುಖವರಿತೆನಯ್ಯ ಬಸವಪ್ರಭುವೆ.** / 33.-
----- ನೀಲಾಂಬಿಕೆ

ನಾನು ನನ್ನ ಗೆಳೆಯ ಯೋಧನ ಕಿವಿಯಲ್ಲಿ ಉಸುರಿದೆ
**ಗುರುವ:** ವೀರಭದ್ರಪ್ಪ ಈಗ ಹೊಳೆ ದಾಟುವ ಯೋಜನೆ ಮಾಡಬೇಕು. ಹೊತ್ತು ಹೊರಡುವಷ್ಟರಲ್ಲಿ ಇಲ್ಲಿರುವವರೆಲ್ಲ ಆ ದಂಡೆಯಲ್ಲಿರಬೇಕು. ನಾನಾರೆಂಬುದು ಯಾರಿಗೂ ಗೊತ್ತಾಗಬಾರದು.
**ವೀರಭದ್ರಪ್ಪ:** ಸರಿ ಅಣ್ಣಾ ಆದರೆ ಇಷ್ಟು ಜನರನ್ನು ಆ ಕಡೆ ತೆಪ್ಪದ ಮುಲಕ ಸಾಗಿಸುವದು ಕಷ್ಟ.
ಕೆಂಪರಸ ದೂರದಿಂದಲೇ ಕೂಗಿದ ಬನ್ನಿ ಬನ್ನಿ. ನಾವಿಬ್ಬರು ಹೋದಾಗ ಅವನು ಒಂದು ಖಾಲಿ ಬಂಡಿಯ ಎರಡೂ ಗಾಲಿ ಬಿಚ್ಚಿ ಪಕ್ಕಕ್ಕೆ ಕಟ್ಟಿದ್ದ. ನಾವು ಹೋದಕೂಡಲೇ ಹೇಳಿದ
**ಕೆಂಪರಾಜ:** ಅಣ್ಣ ಇದು ನೀರಲ್ಲಿ ತೇಲುವ ಡೋಣಿಯಂತೆ ಕಾಣುವದಿಲ್ಲವೇ?
**ವೀರಭದ್ರಪ್ಪ:** ತುಂಬಾ ಒಳ್ಳೆಯ ಆಲೋಚನೆ. ಇಲ್ಲಿರುವ ನೂರಾರು ಬಂಡಿಜೊಡಿಸಿ ಒಂದು ಸೇತುವೆ ನಿರ್ಮಿಸಬಹುದು. ಇಲ್ಲಿ ಭೀಮಾ ನದಿ "ಊ" ಆಕಾರದಲ್ಲಿ ಹರಿಯುವದು ವಿಶೇಷ. ಅದುದರಿಂದ ಇಲ್ಲಿ ನದಿ ಶಾಂತವಾಗಿ ಹರಿಯುತ್ತದೆ. ಇನ್ನು ಸೇತುವೆ ನಿರ್ಮಿಸುವ ಕಲೆ ಯೋಧರಿಗೆ ಗೊತ್ತು. ನಮ್ಮಲ್ಲಿರುವ ಯೊಧರು ಅನುಭವಿಗಳಿದ್ದಾರೆ ಅವರು ಈ ಕೆಲಸ ಮಾಡುತ್ತಾರೆ.
ವೀರಭದ್ರಪ್ಪ ಎಲ್ಲ ಯೋಧರು ಕುಳಿತಿದ್ದಲ್ಲಿಗೆ ಹೋದ. ಅವನನ್ನು ನೋಡಿ ಎಲ್ಲರೂ ಗೌರವ ತೋರಿಸಿದರು ಆಗಲೇ ನನಗೆ ಗೊತ್ತಾದದ್ದು ಅವನೂ ಒಬ್ಬ ದಂಡನಾಯಕನೆಂದು.
**ವೀರಭದ್ರಪ್ಪ:** ನಮಗೆ ಇಲ್ಲಿಂದ ದೂರ ಸಾಗಿ ತಲೆಮರೆಸಿಕೊಳ್ಳುವದೊಂದೇ ಉಳಿದಿರುವ ಮಾರ್ಗ. ಈಗ ನಮ್ಮ ಹತ್ತಿರ ವೇಳೆ ಕಮ್ಮಿ ಇದೆ. ಕಲ್ಯಾಣಕ್ಕೆ ಸುದ್ದಿ ತಲುಪುವಷ್ಟರಲ್ಲಿ ನಾವೆಲ್ಲ ನದಿ ದಾಟಬೇಕು.
ಇಲ್ಲಿರುವ ಯುವಕರನ್ನು ಮೊದಲು ನೀವು ಈಸಿ ನದಿ ದಾಟಿಸಿ. ಇಲ್ಲಿರುವ ಎತ್ತುಗಳ, ಕುದುರೆಗಳ ಸಹಾಯದಿಂದಲೂ ಕೆಲವರನ್ನ ಆ ದಂಡೆಗೆ ಸಾಗಿಸಿ.

ಇಲ್ಲಿರುವ ಎಲ್ಲ ಬಂಡಿಗಳನ್ನು ಉಪಯೋಗಿಸಿ ಒಂದು ಸೇತುವೆ ನಿರ್ಮಿಸಲು ಕೆಲವರು ಸಹಾಯ ಮಾಡಿ ಅದರ ಸಹಾಯದಿಂದ ಮಕ್ಕಳು, ಹೆಣ್ಣುಮಕ್ಕಳು ಮತ್ತು ಮುದುಕರು ನದಿ ದಾಟುವರು. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಮರಣ ಹೊಂದಿದವರೆಲ್ಲ ನಮ್ಮ ಸೋದರರು ಅವರನ್ನೆಲ್ಲ ಗೌರವಯುತವಾಗಿ ಶವಸಂಸ್ಕಾರ ಮಾಡಿ.
ಅವರ ಸರಳವಾದ ಮಾತು ಎಲ್ಲರಿಗೂ ಹಿಡಿಸಿತು. ಯೋಧರೆಲ್ಲ ಎದ್ದು ನಿಂತು "ಅಹಾ ರುದ್ರಾ, ಅಹಾ ವೀರಭದ್ರ " ಎಂದು ಕೂಗಿ ತಮಗೆ ಸರಿಕಂಡ ಕೆಲಸದಲ್ಲಿ ತೊಡಗಿದರು. ಜನರೆಲ್ಲ "ಬಸವಾ ಬಸವಾ" ಎನ್ನುತ್ತ ತಾವೇನು ಸಹಾಯ ಮಾಡಬಹುದು ಎಂದು ವಿಚಾರಿಸುತ್ತ ತಮ್ಮ ಸಾಮಾನುಗಳ ಗಂಟು ಕಟ್ಟತೊಡಗಿದರು. ಆಕಾಶದಲ್ಲಿ ಚಂದಿರ ಮೂಡಿ ನಿಮ್ಮ ಕೆಲಸಕ್ಕೆ ನನ್ನದೂ ಸಹಾಯವಿರಲಿ ಎಂದು ಪ್ರಕಾಶಿಸತೊಡಗಿದ.
ನನ್ನಾಕೆ ಮತ್ತು ಕೆಂಪರಾಜ ಗಾಯಾಳುಗಳ ಆರೈಕೆಯಲ್ಲಿ ನಿರತರಾಗಿದ್ದರು. ಎರಡುಮೂರು ಘಂಟೆಗಳಲ್ಲಿ ಗಾಯಾಳುಗಳು ಗುಣವಾಗಿ ಅಲ್ಲಿ ನಡೆದ ಕೆಲಸ ಕಾರ್ಯಗಳಲ್ಲಿ ನೆರವಾಗತೊಡಗಿದರು. ಇದು ಕಾಡಿನಲ್ಲಿ ಸಿಗುವ ಔಷಧಿಗಳನ್ನು ಕೂಡಿಸಿ ಶ್ರಮಪಟ್ಟು ತಯಾರಿಸಿದ ಔಷಧಿ ಎಣ್ಣೆಯಲ್ಲಿ ಸೇರಿಸಿದ ಪರಿಣಾಮ. ಆದರೆ ಅದನ್ನು ಹೇಳುವಂತಿರಲಿಲ್ಲ. ಎಲ್ಲರೂ ನನ್ನ ಶೇಂಗಾ ಎಣ್ಣೆಯ ಪರಿಣಾಮ ಎಂದು ಗುಣಗಾನ ಮಾಡಿದರೆ ಅದನ್ನು ನಿರಾಕರಿಸುವದು ಹೇಗೆ? ಇವರು ಮಹಾನುಭಾವ ಇವರ ಕೈ ತಗುಲಿದ ಶೇಂಗಾ ಎಣ್ಣೆ ಔಷಧವಾಯಿತು ಎನ್ನುವ ಹೊಗಳಿಕೆ ಕೇಳಿ ಕಿವಿ ಮುಚ್ಚಿಕೊಳ್ಳಬೇಕು ಎನಿಸಿತು. ಪರಿಶ್ರಮ ಒಬ್ಬರದಾದರೆ ಹೊಗಳಿಕೆ ನನಗೆ. ಅಲ್ಲಿದ್ದವರು ನನಗಾವ ಕೆಲಸ ಮಾಡಲು ಅವಕಾಶ ಕೊಡಲಿಲ್ಲ. ನಾನೊಬ್ಬನೇ ದೂರಬಂದು ಕುಳಿತುಕೊಂಡೆ.
ಕಿವಿಗೆ "ಬಸವಾ ಬಸವಾ" ಎನ್ನುವ ಕಾಯಕಯೋಗಿಗಳ ಮಂತ್ರ ಜೊತೆಗೆ "ಅಹಾ ರುದ್ರ, ಅಹಾ ವೀರಭದ್ರ" ಎನ್ನುವ ಗುಡುಗು ಕೇಳುತ್ತಿತ್ತು. ಯಾಕೋ ಇಂದು ಅವೆರಡು ಕಿವಿಗೆ ಹಿತವೆನಿಸುತ್ತಿದ್ದವು. ಯಾವದು ಹಿತ ಯಾವುದು ಅಹಿತ ನಿರ್ಧರಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಬರಿ ಶೇಂಗಾಎಣ್ಣೆ ಜೀವನಾಧಾರ ನಿಜ ಆದರೆ ಇಂದು ಅದರಲ್ಲಿ ಕಾಡ ಔಷಧಿ ಸೇರಿ ಜೀವಗಳನ್ನು ಉಳಿಸಿತಲ್ಲವೇ?. ಅಣ್ಣಾ ಕೊಲಬೇಡ ಎಂದ ಅಷ್ಟೇ ರಕ್ಷಿಸಿಕೊಳ್ಳಬೇಡ ಎನ್ನಲಿಲ್ಲ ಅಲ್ಲವೇ? ಗಾಣ ತಿರುಗಿದ್ದಷ್ಟೇ ಎಣ್ಣೆ ಬರಲಿಲ್ಲ.
ಎಲ್ಲ ಕೆಲಸಗಳು ಬೇಗ ಬೇಗನೆ ಮುಗಿದವು. ಅಲ್ಲಿ ತಯಾರಾದ ಬಂಡಿಗಳ ಸೇತುವೆ ಬಹಳ ಜನ ಆಕಡೆಯ ದಂಡೆ ಸೇರಲು ಸಹಾಯಮಾಡಿತು. ಬೆಳ್ಳಿ ಚಿಕ್ಕಿ ಮೂಡುವ ಮೊದಲು ಈ ಕಡೆಯ ದಂಡೆ ಪೂರ್ಣ ಖಾಲಿಯಾಗಿತ್ತು.
ಉಳಿದವ ನಾನೊಬ್ಬನೇ. ಅಲ್ಲಿ ಮಡಿದವರ ಶವಸಂಸ್ಕಾರವೂ ಮುಗಿದಿತ್ತು. ಇಲ್ಲೇನು ನಡೆಯಿತು ಎನ್ನುವದು ರಾಜನಿಗೆ ಗೊತ್ತಾಗದೇ ಎಲ್ಲ ಸೈನಿಕರೂ ಯುದ್ಧದಲ್ಲಿ ಮಡಿದರು ಎನ್ನುವದು ಅಲ್ಲಿ ಬಿಂಬಿತವಾಗಿತ್ತು. ಯೋಧರ ಎಲ್ಲ

ಉಡುಪುಗಳೂ ಮೆಡಲುಗಳೂ ಅಗ್ನಿಗಾಹುತಿಯಾಗಿದ್ದವು. ಅಲ್ಲಿದ್ದ ಯೊಧರೆಲ್ಲ ಕಾಯಕಯೋಗಿಗಳ ಉಡುಗೆಯಲ್ಲಿದ್ದು ಯಾರಿಗೂ ಅವರು ಯೋಧರು ಎನ್ನುವದು ಗೊತ್ತಾಗುತ್ತಿರಲಿಲ್ಲ.
ವೀರಭದ್ರಪ್ಪ ಬಂದು ಎಲ್ಲ ಕೆಲಸ ಮುಗಿಯಿತು ನಾವಿಬ್ಬರು ಹೊಳೆ ದಾಟಿದರೆ ಆಯಿತು ಹೋಗೋಣ ಎಂದ. ಅವನ ಮಾತಿನಲ್ಲಿ ಹೆಮ್ಮೆಯಿತ್ತು ಮತ್ತು ಎಲ್ಲರೂ ಸಂಕಟದಿಂದ ಪಾರಾದ ಸಮಾಧಾನವಿತ್ತು.
ನಾವಿಬ್ಬರೂ ಆ ದಂಡೆಗೆ ಹೋದಾಗ ಅಲ್ಲಿ ಎಲ್ಲರೂ ನೆರೆದಿದ್ದರು. ಅವರೆಲ್ಲಾ ಚಪ್ಪಾಳೆ ಹೊಡೆದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಒಂದು ತಿಂಗಳು ಮಾಡಬೇಕಾದ ಕೆಲಸ ಅಲ್ಪ ಕಾಲದಲ್ಲಿ ಮುಗಿದಿತ್ತು. ಅನೇಕ ದಿನಗಳ ಕಾಲ ಗಾಯದಿಂದ ನರಳಬೇಕಾದವರು ಅಲ್ಪ ಸಮಯದಲ್ಲಿ ಗುಣವಾಗಿ ಕೆಲಸದಲ್ಲಿ ತೊಡಗಿದ್ದು ಅಸಾಮಾನ್ಯವೆನಿಸಿತ್ತು.
ನನಗೋ ತುಂಬಾ ಸಂಕೊಚವಾಯಿತು. ಏನು ಹೇಳಬೇಕು ಏನು ಮಾಡಬೇಕು ತಿಳಿಯಲಿಲ್ಲ. ಹೊಳೆಯ ದಂಡೆಯ ಮೇಲೇರಿ ಒಂದು ಕಲ್ಲು ಬಂಡೆಯ ಮೇಲೆ ಕುಳಿತುಕೊಂಡು ಇಷ್ಟೆಲ್ಲ ಸಹಾಯ ಮಾಡಿದ ಶರಣರನ್ನು ನೆನೆಯುತ್ತ ಕಣ್ಣು ಮುಚ್ಚಿ ಕುಳಿತುಕೊಂಡೆ. ನಾನು ಬಸವಣ್ಣನವರನ್ನು ನೋಡಿದ್ದು ಅಲ್ಪಕಾಲ. ನನ್ನ ಮೇಲೆ ಅವರ ಪ್ರಭಾವ ಅಪಾರ ಇನ್ನು ಅವರ ಜೊತೆಗೆ ಇದ್ದು ಬೆಳೆದ ಶರಣರ ಮೇಲೆ ಅವರ ಪ್ರಭಾವ ಎಷ್ಟಾಗಿರಬಹುದು? ಅವರೆಲ್ಲ ಎಲ್ಲಿ ಹೋದರು? ನನ್ನನ್ನು ರಕ್ಷಿಸಿದಂತೆ ಅವರನ್ನೂ ರಕ್ಷಿಸಿರಬಹುದು ಅಲ್ಲವೇ?. ನನಗೆ ಬರುವದು ಒಂದು ವಚನ ಅದರ ಪರಿಣಾಮ ಅಪಾರ ಇನ್ನು ವಚನಗಳನ್ನೆಲ್ಲ ಅರ್ಥಮಾಡಿಕೊಂಡವರು ಹೇಗಿರಬಹುದು? ಅವರನ್ನು ನೋಡುವ ಭಾಗ್ಯ ನನಗೆ ಸಿಕ್ಕಲಿಲ್ಲ.
ಮುಖದ ಮೇಲೆ ಎಳೆಬಿಸಿಲು ಬಿದ್ದಾಗಲೇ ಎಚ್ಚರವಾಗಿ ಕಣ್ಣು ತೆಗೆದೆ. ಎದುರಿಗೆ ಜನವೋ ಜನ. ನದಿ ದಾಟಿದವರೆಲ್ಲ ಅಲ್ಲಿ ಒಂದುಕಡೆ ಕುಳಿತಿದ್ದರೆ ಇನ್ನೊಂದು ಕಡೆ ವೀರಭದ್ರಪ್ಪ ಮತ್ತು ಎಲ್ಲ ಯೋಧರು ಇದ್ದರು. ಇಷ್ಟು ಹೊತ್ತು ಕುಳಿತುಕೊಂಡು ನಿದ್ದೆ ಮಾಡಿದೆನಾ? ಬೇಜಾರಾಯಿತು. ಏನು ಮಾತನಾಡಬೇಕು ತಿಳಿಯದೇ ಕಕ್ಕಾಬಿಕ್ಕಿಯಾಗಿ ಕುಳಿತೆ. ನಿನ್ನೆ ಮೊದಲಿಗೆ ಸಿಕ್ಕ ಯಜಮಾನ ಮಾತನಾಡಲಾರಂಭಿಸಿದ
**ಯಜಮಾನ:** ಯಪ್ಪಾ ನಿನ್ನೆ ನಮ್ಮನ್ನೆಲ್ಲ ಕಾಪಾಡಿ ಬದುಕಿಸಿ ಈ ದಂಡೆಗೆ ತಂದ ನಿನ್ನ ಉಪಕಾರ ಮರೆಯುದಿಲ್ಲಪ್ಪ. ನಿನ್ನ ಮತ್ತು ಮನೆಯವರನ್ನು ಬಸವಣ್ಣ ಸುಖವಾಗಿಟ್ಟಿರಲಿ. ನಾವು ನಿನಗ ಹೇಳಿ ಹೋಗಲಾಕ ದಾರಿ ಕಾಯಲಾಕ ಹತ್ತಿದ್ದಿವಿ.
**ಗುರುವ:** ಅಜ್ಜ ನಾ ಮಾಡಿದ್ದೇನ ಐತಿ ಇದರಾಗ. ನಮ್ಮನ್ನೆಲ್ಲ ಪಾರು ಮಾಡಿ ಈ ದಡ ಸೇರಿಸಿದವರು ಇಲ್ಲೇ ಕುಂತಾರ ನೋಡು. ಅಣ್ಣ ಅವರಿಗೆ ಒಳ್ಳೆಯ ಬುದ್ದಿ ಕೊಟ್ಟು ನಮ್ಮನ್ನೆಲ್ಲ ರಕ್ಷಣಾ ಮಾಡ್ಯಾನ. ಎಲ್ಲರ ಪರವಾಗಿ ಅವರಿಗೆ ನಾನು ಕೈಮುಗೀತೀನಿ. ನಾವು ಹೋದ ಮ್ಯಾಲ ಶರಣ ಹೇಳಿದಂಗ ನಡದು ನಿಮ್ಮ

ಪರಿಶ್ರಮ ಸಾರ್ಥಕ ಮಾಡತೀವಿ ಅಂತ ಎಲ್ಲಾರ ಪರವಾಗಿ ಅವರಿಗೆ ಮಾತ ಕೊಡತೀನಿ. ಹೋಗಿ ಬನ್ನಿ ಅಜ್ಜ. ಎಲ್ಲರಿಗೂ ಶರಣು ಶರಣಾರ್ಥಿ.
ಎದ್ದು ನಿಂತು ಎಲ್ಲರಿಗೂ ಕೈಮುಗಿದೆ. ಅವರೆಲ್ಲ ಎದ್ದು ಹೊರಟು ಹೊದರು ಅವರೆಲ್ಲರ ಕಣ್ಣಲ್ಲಿ ಯೋಧರ ಬಗ್ಗೆ ಮೆಚ್ಚುಗೆಯಿತ್ತು. ಇನ್ನೂ ಅನೇಕರು ಕುಳಿತೇ ಇದ್ದರು.
ನಾನು ಅತ್ತ ಇತ್ತ ಕಣ್ಣಾಡಿಸಿ ನೋಡಿದೆ ದೂರದಲ್ಲಿ ಕೆಂಪರಾಜ ಮತ್ತು ನನ್ನಾಕೆ ಕುಳಿತಿದ್ದದ್ದು ಕಾಣಿಸಿತು.
**ಗುರುವ:** ಕೆಂಪರಾಜ ಬಂಡಿ ಎತ್ತು ಎಲ್ಲಿವೆ ನೋಡು ಬಂಡಿ ಹೂಡು ಹೊರಡೋಣ.
**ವೀರಭದ್ರಪ್ಪ:** ನೀವು ಹೊರಟು ಹೋದರೆ ನಮ್ಮ ಗತಿಯೇನು ನಮಗೆ ದಾರಿ ತೋರಿಸುವವರಾರು?
**ಗುರುವ:** ಬಸವಣ್ಣ ನಿಮಗೆ ಮಾರ್ಗ ತೋರಿಸುತ್ತಾನೆ.
**ವೀರಭದ್ರಪ್ಪ:** ಇಲ್ಲಿರುವ ಯೋಧರಿಗೆಲ್ಲ ಒಬ್ಬ ಮಾರ್ಗದರ್ಶಕ ಬೇಕು. ಅವರು ಮರಳಿ ಊರಿಗೆ ಹೋಗುವಂತಿಲ್ಲ. ಈಗ ಅವರು ಚದುರಿ ಹೋದರೆ ಜೀವನೋಪಾಯಕ್ಕಾಗಿ ತಪ್ಪು ಮಾರ್ಗ ಹಿಡಿಯುತ್ತಾರೆ. ಸಮಾಜವನ್ನು ಆ ಕಂಟಕದಿಂದ ನೀವು ಪಾರುಮಾಡಬೇಕು. ಈಗ ಅವರಿಗೆ ನಿಮ್ಮ ಮೇಲೆ ಅಪಾರ ನಂಬಿಕೆಯಿದೆ. ನೀವು ಹೇಳಿದ ಮಾತನ್ನು ಕೇಳುತ್ತಾರೆ ನಿಮಗಾಗಿ ಜೀವ ಪಣಕ್ಕಿಡುತ್ತಾರೆ. ಇನ್ನೂ ವಚನ ಮತ್ತು ಶರಣರನ್ನು ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ.
**ಗುರುವ:** ನಾನು ಅಸಹಾಯಕ ನಾನೇನು ಮಾಡಲು ಸಾದ್ಯ? ಎರಡು ಹೊಟ್ಟೆ ಹೊರಿಯಲಾಕ ಊರು ಬಿಟ್ಟು ಬಂದವ ನಾನು. ಹೇಗೇ ಬಂದೆನೋ ಹಾಗೇ ಮರಳಿಹೋಗುತ್ತಿರುವೆ.
**ವೀರಭದ್ರಪ್ಪ:** ನೀವು ನಮ್ಮ ಜೊತೆಗಿರಿ ಸಾಕು ನಿಮ್ಮ ಮೂಲಕ ಅಣ್ಣ ಬಸವಣ್ಣ ನಮಗೆ ದಾರಿತೋರಿಸುತ್ತಾನೆ.
**ಗುರುವ:** ಸರಿ. ಇಲ್ಲಿರುವ ಎಲ್ಲರನ್ನು ಇಲ್ಲಿಂದ ಬೇರೆ ಸುರಕ್ಷಿತ ಸ್ಥಳಕ್ಕೆ ಕಳಿಸಿಕೊಡಬೇಕು. ಈಗ ಯೊಧರನ್ನು ಬಿಟ್ಟು ಉಳಿದವರನ್ನೆಲ್ಲ ತಮ್ಮ ತಮ್ಮ ಊರಿಗೆ ಕಳಿಸಿಕೊಡುವ ಏರ್ಪಾಡು ಆಗಲಿ.
**ವೀರಭದ್ರಪ್ಪ:** ಈಗ ಉಳಿದವರೆಲ್ಲ ಇಲ್ಲಿರುವ ಯೋಧರ ಸಂಬಂಧಿಗಳು ಅವರ ಮೇಲೇಯೆ ಅವಲಂಬಿತರು. ಅವರೂ ನಮ್ಮ ಜೊತೆಗಿರುತ್ತಾರೆ.
**ಗುರುವ:** ಸರಿ ಈಗ ಎಲ್ಲಿಗೆ ಪ್ರಯಾಣ ಮಾಡೋಣ.
**ವೀರಭದ್ರಪ್ಪ:** ಇಲ್ಲಿಂದ ಉತ್ತರಕ್ಕೆ ಒಂದೆರಡು ಗಂಟೆ ಪ್ರಯಾಣ ಮಾಡಿದರೆ ದಟ್ಟವಾದ ಕಾಡಿನಲ್ಲಿ ಒಂದು ಕೆರೆಯಿದೆ ಅಲ್ಲಿಗೇ ಹೋಗೋಣ.
**ಗುರುವ:** ಸರಿ ಹೊರಡೋಣ ನಡೆಯಿರಿ.

ಎಲ್ಲರೂ ಲಗುಬಗೆಯಿಂದ ತಯಾರಾದರು. ಎಲ್ಲರೂ ಬಂಡಿಯೇರಿ ಹೊರಟರು, ನಾನು ಬಂಡಿಯೇರಲು ಹೊರಟೆ.
**ವೀರಭದ್ರಪ್ಪ:** ತಡೆಯಿರಿ ನಾವು ಆಮೇಲೆ ಹೋಗೋಣ ಎಂದ.
**ಗುರು:** ಸರಿ
ಎಲ್ಲರೂ ಹೋದಮೇಲೆ ಅಲ್ಲಿ ಉಳಿದವರು ಕೆಲವು ಜನ ಯೋಧರು ಮತ್ತು ಕುದುರೆಗಳು.
**ಗುರುವ:** ಬಸವಾ, ಇಷ್ಟು ದೊಡ್ಡ ಸಂಸಾರ ಸಾಗಿಸಲು ಎಲ್ಲಿಗೆ ಹೋಗಬೇಕು?
**ವೀರಭದ್ರಪ್ಪ:** ಮಂಗಲವೇಢೆಗೆ.
**ಗುರುವ:** ಅಲ್ಲಿ ಹೇಗೆ ನಮಗೆ ಸಹಾಯ ಸಿಕ್ಕಬಹುದು. ಯಾರನ್ನೂ ಕೇಳಿ ಬದುಕುವದು ನನಗೆ ಇಷ್ಟವಿಲ್ಲ. ನಾಲ್ಕಾರು ದಿನ ಉಪವಾಸ ಇದ್ದರೂ ಅಡ್ಡಿ ಇಲ್ಲ. ಕಾಯಕ ಮಾಡೋಣ ಬಂದ ಹಣದಿಂದ ಬದುಕೋಣ.
**ವೀರಭದ್ರಪ್ಪ:** ಅಲ್ಲಿ ಯಾರ ಹತ್ತಿರವೂ ಸಹಾಯ ಬೇಡುವದಿಲ್ಲ. ನಮ್ಮ ಹತ್ತಿರವಿರುವ ಕೆಲವು ಕುದುರೆ ಮಾರೋಣ. ಇವುಗಳು ತರಬೇತಿ ಪಡೆದ ಕುದುರೆಗಳು ಅವುಗಳಿಗೆ ಬಹಳ ಬೇಡಿಕೆ ಮತ್ತು ಬೆಲೆ ಇರುತ್ತದೆ. ಬಂದ ಹಣ ಸ್ವಲ್ಪ ದಿನ ದೂಡಲು ಸಹಾಯಕ ಆಗುವದು.
**ಗುರುವ:** “ಎಣ್ಣಿ ಬೇಕಾ, ಶುದ್ದ ಶೇಂಗಾ ಎಣ್ಣಿ” ಎಂದು ಎಣ್ಣಿ ಮಾರುತ್ತಿದ್ದೆ. ಇನ್ನು “ಕುದುರೆ ಬೇಕಾ, ಒಳ್ಳೆಯ ಜಾತಿ ಕುದುರೆ” ಎನ್ನಬೇಕೇ?
**ವೀರಭದ್ರಪ್ಪ:** ಹಾಗೇನಿಲ್ಲ ಅಣ್ಣಾ. ಈಗ ಇಲ್ಲಿರುವ ಯೋಧರಿಗೆ ಕುದುರೆ ವ್ಯಾಪಾರ ಮಾಡಿ ಅನುಭವ ಇದೆ. ನೀವು ಯಜಮಾನರಾಗಿ ನಮ್ಮ ಜೊತೆ ಬಂದರಾಯಿತು.
**ಗುರುವ:** ಸರಿ.
ನನಗೆ ಕೊಟ್ಟ ಬಟ್ಟೆಯನ್ನು ತೊಟ್ಟುಕೊಂಡು ಕುದುರೆ ಏರಿ ಹೊರಟೆ.

**ಸರ್ವಾಂಗಲಿಂಗವಾದ ಶರಣನ ಕಾಯ ಆವ ದೇಶದಲ್ಲಿ ಆಳಿದಡೇನು?**

ನಾನೊಂದು ಕುದುರೆಯ ಮೇಲೆ ಕುಳಿತ ಕೀಲುಕುದುರೆ. ಏನು ಅಣ್ಣಾ ನಿನ್ನಾಟ. ನನ್ನನ್ನು ರಾಜ್ಯವಿಲ್ಲದೆ ಆಡಳಿತಗಾರನನ್ನಾಗಿ ಮಾಡಿದೆ, ಕತ್ತಿ ಹಿಡಿಯದೇ ವೀರನನ್ನಾಗಿ ಮಾಡಿ ಗೆಲ್ಲಿಸಿದೆ, ಎಣ್ಣೆ ಹಚ್ಚುವ ವೈಧ್ಯನನ್ನಾಗಿ ಮಾಡಿದೆ, ಈಗ ಕುದುರೆ ವ್ಯಾಪಾರಿಯನ್ನಾಗಿ ಮಾಡಿದೆ. ನನ್ನದೇನು ಇಲ್ಲದೇ ಮಾಲಕನನ್ನಾಗಿ ಮಾಡಿದಿ. ಏನೇನೋ ವಿಚಾರ ತಲೆತುಂಬ.
**ವೀರಭದ್ರಪ್ಪ:** ಅಣ್ಣಾ ಊರು ಬಂತು ಇಳಿಯಿರಿ.
ಅಲ್ಲೊಂದು ದೊಡ್ಡ ಮೈದಾನದಲ್ಲಿದ್ದ ಕಟ್ಟೆಯ ಮೇಲೆ ನಾನು ಕುಳಿತೆ. ಪ್ರತಿಯೊಂದು ಕುದುರೆಯ ಕೊರಳಲ್ಲಿ ಅದರ ವಿವರವಿರುವ ಪಟ್ಟಿ ಇತ್ತು. ಸಾಲಾಗಿ ನಿಂತ ಕುದುರೆಗಳ ಮುಂದೆ ಡೋಲು ಬಡಿಯುವನೊಬ್ಬ. ನೀವು ಇಲ್ಲೇ ಇರಿ ಎಂದು ಊರೊಳಗೆ ಮೆರವಣಿಗೆ ಹೋಗಿ ಬರುತ್ತೇವೆ ಎಂದು ಹೇಳಿ ಹೊರಟರು. ಊರಲ್ಲಿ ಸುತ್ತಾಡಿಸಿಕೊಂಡು ಬಂದ ಮೇಲೆ ಅಲ್ಲಿ ಜನ ಜಮಾಯಿಸಿದ್ರು. ಆಗ ಒಂದೊಂದೇ ಕುದುರೆಯ ನಡಿಗೆ ಓಡಾಟ ಪ್ರದರ್ಶನ ನಡೆಯಿತು.

ಆಗೊಬ್ಬ ಯೋಧ ಬಂದು ಆಡಳಿತಗಾರರು ಕರೆಯುತ್ತಿದ್ದಾರೆ ಬನ್ನಿ ಎಂದ. ನಾನು ವೀರಭದ್ರಪ್ಪನೊಡನೆ ಹೊರಟೆ, ದಾರಿಯಲ್ಲಿ ಅವನು ಆಡಳತಗಾರರ ಪರವಾನಿಗೆ ಕೇಳಿದ್ದೆವು ಅದಕ್ಕಾಗಿ ಅವರು ಕರೆ ಕಳಿಸಿದ್ದಾರೆ ಎಂದ. ನಾವಿಬ್ಬರೂ ಅರಮನೆಯಂತಹ ದೊಡ್ಡ ಮನೆಯ ಒಳಗೆ ಪ್ರವೇಶ ಮಾಡಿ ಒಳಗಿರುವ ಕೊಠಡಿಯಲ್ಲಿ ಕುಳಿತುಕೊಂಡೆವು. ಒಳಗೆ ಬಂದವರನ್ನು ನೋಡಿ ಎದ್ದು ನಿಂತು "ಶರಣು ಶರಣಾರ್ಥಿ" ಎಂದೆವು ಪ್ರತಿಯಾಗಿ ಅವರು ಶರಣು ಹೇಳಿ ಕುಳಿತುಕೊಳ್ಳಲು ಹೇಳಿದರು. ಅಣ್ಣ ಬಸವಣ್ಣನವರದೇ ವಯಸ್ಸು ಮಾತಿನಲ್ಲಿ ಮೆದು ಮತ್ತು ಖಚಿತತೆ ಇತ್ತು.

**ಆಡಳಿತಗಾರ:** ನಿಮ್ಮ ಕುದುರೆಗಳು ಎಷ್ಟು?

**ಗುರುವ:** ನಮ್ಮ ಯಾವ ಕುದುರೆಗಳೂ ಇಲ್ಲ. ನಾವು ಬಂದದ್ದು ಶರಣರಿಗಾಗಿ ಕುದುರೆ ಮಾರಲು.

ಆಡಳಿತಗಾರ ಗಂಭೀರವಾದರು

**ಆಡಳಿತಗಾರ:** ನನಗರ್ಥವಾಗಲಿಲ್ಲ ವಿವರಿಸು, ನಿಜ ಹೇಳಿ.

**ಗುರುವ:** ಅಣ್ಣ ಬಸವಣ್ಣ "ಹುಸಿಯ ನುಡಿಯಲುಬೇಡ" ಎಂದು ಆಜ್ಞಾಪಿಸಿದ್ದಾರೆ. ಹಾಗಾಗಿ ನಾನು ಹೇಳುವದೆಲ್ಲ ಸತ್ಯ.

ಸಂಕ್ಷಿಪ್ತವಾಗಿ ನನ್ನಅನುಭವ ಕೇಳಿದ ಮತ್ತು ನಿನ್ನೆ ನಡೆದ ಎಲ್ಲ ಘಟನೆಗಳನ್ನು ಒಂದೊಂದಾಗಿ ವಿವರಿಸಿದೆ.

ವೀರಭದ್ರಪ್ಪ ಸುಮ್ಮನಿರಲು ಹೇಳಿದ್ದರೂ ಅಣ್ಣನ ಮಾತು "ಹುಸಿಯ ನುಡಿಯಲುಬೇಡ" ನೆನಪಾಗಿ ಇದ್ದದ್ದನ್ನು ಇದ್ದಂತೆ ಹೇಳಿದ್ದೆ.

ಇದೆಲ್ಲ ಕೇಳಿ ಬಸವಕಲ್ಯಾಣದ ಆಡಳಿತ ಪರವಾದ ಈ ಆಡಳಿತಗಾರ ನಮ್ಮನ್ನೆಲ್ಲ ಬಂಧಿಸಿ ಶಿಕ್ಷಿಸಬಹುದು ಎನ್ನುವ ಭಯದಿಂದ ವೀರಭದ್ರಪ್ಪನ ಮುಖ ಕಪ್ಪಾಯಿತು. ಸ್ವಲ್ಪ ಹೊತ್ತು ಗಂಭೀರವಾಗಿ ಆಲೋಚನೆಯಲ್ಲಿ ಮುಳಗಿದ ಆಡಳಿತಗಾರ.

**ಆಡಳಿತಗಾರ:** ಅಣ್ಣ ಬಸವಣ್ಣ,ನೀಲಾಂಬಿಕೆ, ಗಂಗಾಂಬಿಕೆ ಮತ್ತು ಅಕ್ಕ ನಾಗಲಾಂಬಿಕೆ ಎಲ್ಲಿದ್ದಾರೆ ಮತ್ತು ಹೇಗಿದ್ದಾರೆ?

**ವೀರಭದ್ರಪ್ಪ:** ಗಂಗಾಂಬಿಕೆ, ಚನ್ನಬಸವಣ್ಣ ಮತ್ತು ನಾಗಲಾಂಬಿಕೆಯವರು ಖರೋಸ ಗವಿಯಲ್ಲಿ ಶರಣರೊಡನೆ ಸುರಕ್ಷಿತವಾಗಿದ್ದಾರೆ.

ಈ ಗುರುವ ಮತ್ತು ಸಂಗಡಿಗರು ಅವರೆಲ್ಲರನ್ನೂ ಸಂಹರಿಸಲು ಬಂದ ಯೋಧರಿಂದ ರಕ್ಷಿಸಿದ್ದಾರೆ. ಅವರು ಸಮಯ ನೋಡಿಕೊಂಡು ಅಲ್ಲಿಂದ ಉಳವಿಗೆ ಪ್ರಯಾಣ ಬೆಳೆಸಲಿದ್ದಾರೆ. ಅಣ್ಣ ಬಸವಣ್ಣ ಮತ್ತು ನೀಲಾಂಬಿಕೆಯವರು ಕಲ್ಯಾಣ ತೊರೆದಿದ್ದಾರೆ. ಬಹಳಮಾಡಿ ಕೂಡಲಸಂಗಮಕ್ಕೆ ತೆರಳಿರಬಹುದು. ಅವರನ್ನ ಹುಡುಕಿಕೊಂಡು ಕಲ್ಯಾಣ ಯೋಧರು ಹೋಗಿರಬೇಕೆಂದು ನನ್ನ ಶಂಕೆ. ಅವರ ಬಗ್ಗೆ ಹೆಚ್ಚಿನ ವಿವರ ಗೊತ್ತಿಲ್ಲ.

**ಆಡಳಿತಗಾರ:** ರಾಜಕುಮಾರ ಬಹಳ ಮಹತ್ವಾಕಾಂಕ್ಷಿ ಎಂದು ಗೊತ್ತಿತ್ತು. ಆದರೆ ಈ ರೀತಿ ಸಂಚು ರೂಪಿಸಬಹುದೆಂದು ಅನಿಸಿರಲಿಲ್ಲ. ನನಗೆ ಗುಪ್ತಚರರಿಂದ ಅಲ್ಲಿಯ ಸಮಾಚಾರ ತಿಳಿದಿತ್ತು ಆದರೆ ಈ ರೀತಿಯ ಸಂಚು ನಡೆದದ್ದು ಗೊತ್ತಾಗಲಿಲ್ಲ.

ಬಸವಣ್ಣ, ನಾನು ಮತ್ತು ಶಂಕರ ಜೊತೆಯಾಗಿ ಓದಿ ಆಡಿ ಬೆಳೆದವರು. ಬಸವಣ್ಣನವರು ಇಲ್ಲಿಯೇ ಮಂತ್ರಿಯಾಗಿ ಆಮೇಲೆ ಮಹಾಮಂತ್ರಿಯಾದವರು. ಅವರ ಸಾಧನೆ ಅಪೂರ್ವವಾದದ್ದು. ವಚನಗಳು ಮುಂದಿನ ಜನಾಂಗಕ್ಕೆ ದಾರಿದೀಪಗಳು.

**ವೀರಭದ್ರಪ್ಪ:** ಆ ದೀಪಗಳನ್ನೆಲ್ಲ ಆರಿಸುವ ಪ್ರಯತ್ನ ನಡೆದಿದೆ. ಅವುಗಳ ರಕ್ಷಣೆಗೆ ಅಕ್ಕನಾಗಮ್ಮ, ಚನ್ನಬಸವಣ್ಣ, ಮಾಚಿದೇವರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟಿದ್ದಾರೆ.

**ಆಡಳಿತಗಾರ:** ನಾನು ಕಲ್ಯಾಣ ಆಡಳಿತದ ಭಾಗೀದಾರ. ನನಗೆ ನನ್ನದೇ ಆದ ಕಟ್ಟಳೆಗಳಿವೆ. ನನಗೆ ಮಹಾರಾಜರ ವಿರುದ್ದ ಹೋಗಲು ಮನಸ್ಸಿಲ್ಲ. ಇತ್ತಕಡೆ ಮುಂದಿನ ಜನಾಂಗಕ್ಕೆ ದ್ರೋಹ ಮಾಡುವ ಆಶೆಯೂ ಇಲ್ಲ. ಯುದ್ದ ಗೆದ್ದಮೇಲೆ ವೈರಿಗಳ ಕುದುರೆಗಳು ಗೆದ್ದವರ ಸ್ವತ್ತು ಇದು ನಿಯಮ. ನಾನು ನಿಮ್ಮ ಎಲ್ಲ ಕುದುರೆಗಳನ್ನು ಖರೀದಿಸಿದರೆ ನನ್ನಿಂದ ನೀವೇನು ಬಯಸುವಿರಿ.

**ಗುರುವ:** ವಚನಗಳನ್ನು ಮತ್ತು ಶರಣರನ್ನು ರಕ್ಷಿಸಬೇಕು.

**ಆಡಳಿತಗಾರ:** ಅಷ್ಟೊಂದು ಶಕ್ತಿ ನನ್ನಲ್ಲಿಲ್ಲ. ಕಲ್ಯಾಣದ ಮಹಾರಾಜನನ್ನು ಎದುರಿಸುವ ಶಕ್ತಿ ನನ್ನಲ್ಲಿಲ್ಲ ಮತ್ತು ನನ್ನ ಗೆಳೆಯರಲ್ಲಿಯೂ ಇಲ್ಲ. ಆದರೆ ಭೀಮಾ ನದಿಯಿಂದ ಕೃಷ್ಣಾ ನದಿ ದಡದವರೆಗೆ ಅವರಿಗೆಲ್ಲ ಬೇಕಾದ ಅಹಾರ ಧಾನ್ಯ ಮತ್ತು ಇತರ ಸೌಲಭ್ಯ ಒದಗಿಸಬಲ್ಲೆ. ಎಲ್ಲಕ್ಕಿಂತ ಮುಖ್ಯ ಸಮಸ್ಯೆ ಇಲ್ಲಿರುವದು ಕಲ್ಯಾಣದ ಯೋಧರದು ಅವರನ್ನು ರಾಜದ್ರೋಹಿಗಳು ಎಂದು ಘೋಷಿಸಿದಾಗ ನನ್ನ ಪ್ರದೇಶದಲ್ಲಿ ಆಶ್ರಯ ಕೊಡುವದು ರಾಜದ್ರೋಹವಾಗುತ್ತದೆ.

**ವೀರಭದ್ರಪ್ಪ:** ಅದಕ್ಕೊಂದು ಪರಿಹಾರವಿದೆ.

**ಆಡಳಿತಗಾರ:** ಅದು ಸರಿ ಅನಿಸಿದರೆ ವಿಚಾರ ಮಾಡುವೆ.

**ವೀರಭದ್ರಪ್ಪ:** ಕಲ್ಯಾಣದಿಂದ ಬಂದ ಯೋಧರಾರು ಬದುಕಿಲ್ಲ ಅವರನ್ನೆಲ್ಲ ಕೊಂದು ಸುಡಲಾಗಿದೆ ಎನ್ನುವದು ಎಲ್ಲ ಕಡೆ ಹರಡಿದೆ ಮತ್ತು ಅಲ್ಲಿಯ ವಾತಾವರಣವೂ ಹಾಗೆ ಇದೆ. ಯೊಧರ ಆಯುಧಗಳು ಮತ್ತು ಮೆಡಲುಗಳು ಮತ್ತು ಬಟ್ಟೆಗಳು ಅಲ್ಲಿಯೇ ಅಗ್ನಿಗಾಹುತಿಯಾಗಿದ್ದು. ಪರಿಣಿತರ ಪರಿಶೀಲನೆಯಲ್ಲಿ ಎಲ್ಲ ಯೋಧರು ಮಡಿದಿರುವದು ಗೊತ್ತಾಗುತ್ತದೆ ಮತ್ತು ಆ ರೀತಿಯ ವರದಿ ಹೋಗುತ್ತದೆ. ಈಗ ಇರುವ ಯೋಧರೆಲ್ಲ ಕಾಯಕಯೋಗಿಗಳ ಹಾಗೆ ಇದ್ದಾರೆ. ಒಂದು ಸಮಸ್ಯೆ ಇದೆ.

**ಆಡಳಿತಗಾರ:** ಏನದು.

**ವೀರಭದ್ರಪ್ಪ:** ಅವರ ನಡೆ ನುಡಿ ಆಚಾರ ವಿಚಾರ ಗಮನಿಸಿದಾಗ ಅವರು ಯೋಧರೆನ್ನುವದು ಸುಲಭವಾಗಿ ಗೊತ್ತಾಗುತ್ತದೆ. ಅದನ್ನು ಬದಲಿಸುವದು ತುಂಬಾ ಕಷ್ಟ.
**ಆಡಳಿತಗಾರ:** ಅದಕ್ಕೆ ಪರಿಹಾರವೇನು.
**ವೀರಭದ್ರಪ್ಪ:** ಅವರನ್ನೆಲ್ಲ ನಿಮ್ಮ ಯೋಧರನ್ನಾಗಿ ಪರಿವರ್ತನೆ ಮಾಡುವದು ಮತ್ತು ಶರಣರು ಸಾಗುವ ಮಾರ್ಗದಲ್ಲಿ ಅವರನ್ನು ನಿಯಮಿಸುವದು. ಆಗ ಅವರನ್ನು ಯಾರೂ ಗುರುತುಹಿಡಿಯುವದಿಲ್ಲ ಮತ್ತು ಶರಣರ ರಕ್ಷಣೆಯೂ ಆಗುತ್ತದೆ.
**ಆಡಳಿತಗಾರ:** ನಿಮ್ಮ ಸಲಹೆ ಸರಿಯಾಗಿದೆ ಎನಿಸುತ್ತದೆ. ಆದರೆ ಅವರ ನಾಯಕತ್ವ ವಹಿಸುವವರಾರು.
**ವೀರಭದ್ರಪ್ಪ:** ಆ ಸಮಸ್ಯೆ ಇಲ್ಲ. ಅವರ ನಾಯಕರು ಅವರ ಜೊತೆಗೆ ಇದ್ದಾರೆ. ಅವರ ಮನೆಮಂದಿಗೆ ಈ ಊರಲ್ಲಿ ಇರಲು ಆಶ್ರಯ ಸಿಕ್ಕರೆ ಸಾಕು ಅವರೆಲ್ಲ ನಿಮ್ಮ ಆಜ್ಞಾಪಾಲಕರಾಗುತ್ತಾರೆ. ಕೃಷ್ಣಾ ನದಿ ದಾಟಿಸಿದ ಮೇಲೆ ನಮ್ಮ ರಕ್ಷಣೆಗಾಗಿ ಕೆಲವು ಯೋಧರನ್ನು ನೀವು ನಮ್ಮೊಡನೆ ಕಳುಹಿಸಬೇಕು.
**ಆಡಳಿತಗಾರ:** ಒಟ್ಟಾರೆಯಾಗಿ ಗುರುವಿನ ಸಂಸಾರದ ಭಾರವನ್ನೆಲ್ಲ ನಾನು ಹೊರಬೇಕು.
**ಗುರುವ:** ಅಲ್ಲಲ್ಲ ವಚನ ರಕ್ಷಿಸಿ ಮುಂದಿನ ಜನಾಂಗಕ್ಕೆ ಬೆಳಕು ನೀಡಬೇಕು. ಅಣ್ಣ ಬಸವಣ್ಣ ಮತ್ತು ಶರಣರು ಕಂಡ ಕನಸು ನನಸಾಗಬೇಕು.
**ಆಡಳಿತಗಾರ:** ಅವರ ಕನಸಷ್ಟೇ ಅಲ್ಲ ನಮ್ಮೆಲ್ಲರ ಕನಸು. ನಾನು ನನಗಾದಷ್ಟು ಸಹಾಯ ಮಾಡುವೆ ಆದರೆ ನಿಯಮವನ್ನು ಮೀರಿ ಯಾವ ಕೆಲಸವನ್ನೂ ಮಾಡುವದಿಲ್ಲ.
ನಾವಿಬ್ಬರೂ ಒಮ್ಮೆಲೆ ಸರಿ ಇದು ತಮ್ಮ ಕೃಪೆ ಎಂದೆವು.
ಈಗ ನೀವು ನಿಮ್ಮ ಕುದುರೆಗಳನ್ನು ಮತ್ತು ಅವುಗಳ ಪಾಲಕರನ್ನು ಇಲ್ಲಿಯೇ ಬಿಟ್ಟು ಹೋಗಿ ನಿಮಗೆ ಬೇಕಾದ ಎಲ್ಲ ಸಾಮಾನುಗಳು ಮತ್ತು ಯೊಧರಿಗೆ ಬೇಕಾದ ಸಮವಸ್ತ್ರ ಕಳಿಸಿಕೊಡುವೆ.
ಅವರಿಗೆ ನಮಸ್ಕರಿಸಿ ಹೊರಬಂದೆವು ನಿರಾಳರಾಗಿ.
**ಗುರುವ:** ಅಣ್ಣನ ಮಂತ್ರ "ಕೊಲಬೇಡ" ಎನ್ನುವದು ಫಲಪ್ರದವೆಂದು ನಿನ್ನೆಯವರೆಗೆ ಗೊತ್ತಾಯಿತ್ತು. ಇಂದು "ಹುಸಿಯನುಡಿಯಲು ಬೇಡ" ಎನ್ನುವದು ಅಷ್ಟೇ ಫಲ ಕೊಡುತ್ತದೆ ಎಂದು ಗೊತ್ತಾಯಿತು. ಈ ಏಳು ಸೂತ್ರ ಪಾಲಿಸುವವನೇ ಶರಣ ಅಲ್ಲವೇ?. ನಾಡಿನಲ್ಲಿರುವವರೆಲ್ಲ ಶರಣರಾಗಬೇಕೆನ್ನುವದೇ ಅವರ ಕನಸು ಅಲ್ಲವೇ?
**ವೀರಭದ್ರಪ್ಪ:** ಹೌದು. ಅವರ ಕನಸು ನನಸಾಗಲು ವಚನಗಳು ಉಳಿಯಬೇಕು.

**ಕಂಗಳ ಮುಂದೆ ತೋರಿದ ಮಿಂಚು ಮನದ ಮೇಲೆ ತಿಳಿಯಿತ್ತಿದೇನೊ!**

**ಕಳೆಯಬಾರದು ಕೊಳಬಾರದು ಕಂಗಳ ಕತ್ತಲೆಯ, ಮನದ ಮಿಂಚುವ.**

**ಇದ ಬಲ್ಲವರನಲ್ಲೆನಿಸಿತ್ತು ಸಿಮ್ಮಲಿಗೆಯ ಚೆನ್ನರಾಮನೆಂಬ ನಾಮದೊಡಕು.** / 26

--- ಚಂದಿಮರಸ

ಗಮನಿಸಿ:

ಮಣ್ಣಿನಲ್ಲಿ ಹುದುಗಿಹೋದ ಅನೇಕ ನಗರಗಳು ಕಾಲದ ನಂತರ ತಮ್ಮ ನಿಜರೂಪದಲ್ಲಿ ಪತ್ತೆಯಾಗಿವೆ. ಆದರೆ ಇತಿಹಾಸದ ಗರ್ಭದಲ್ಲಿ ಹುದುಗಿಹೋದ ಅನೇಕ ಘಟನೆಗಳು ಪತ್ತೆಯಾದ ಮೇಲೆ ಅವುಗಳ ನಿಜವಾದ ಸ್ವರೂಪವನ್ನೇ ಕಳೆದುಕೊಂಡಿವೆ. ಅದಕ್ಕೊಂದು ತಾಜಾ ಉದಾಹರಣೆ ವೀರಸೇನಾನಿ ಸುಭಾಶ್ಚಂದ್ರ ಬೋಸ ಅವರ ಮರಣ ಹೇಗಾಯಿತು ಎನ್ನುವದೇ ಇನ್ನು ನಿರ್ಣಯವಾಗಿಲ್ಲ. ಇನ್ನು 12 ನೇಯ ಶತಮಾನದಲ್ಲಿ ನಡೆದ ಬಸವಣ್ಣ ಮತ್ತು ಶರಣರ ಮರಣವಾದ ಸ್ಥಳ ಮತ್ತು ಕಾರಣಗಳು ರಹಸ್ಯವಾಗಿಯೇ ಉಳಿದಿವೆ. ಇಷ್ಟೆಲ್ಲ ವಚನಗಳು ಲಭ್ಯವಾಗಿದ್ದರೂ ಎಲ್ಲಿಯೂ ತಮ್ಮ ಬಗ್ಗೆ ಹೇಳದಿರುವದು ಇತಿಹಾಸಕಾರರಿಗೆ ದೊಡ್ಡ ತೊಂದರೆ. “ತನ್ನ ಬಣ್ಣಿಸಬೇಡ” ಎನ್ನುವ ಅಣ್ಣ ಬಸವಣ್ಣನವರ ಮಾತನ್ನು ಎಲ್ಲ ಶರಣರು ಪಾಲಿಸಿದ್ದಾರೆ. “(ಇದಿರು) ಹಳಿಯಲು ಬೇಡ” ಎನ್ನುವ ಮಾತಿಗೆ ಕಟ್ಟುಬಿದ್ದು ತಮ್ಮ ಮೇಲೆ ಆದ ಅನ್ಯಾಯವನ್ನೂ ಎಲ್ಲಿಯೂ ಹೇಳದೇ ಇರುವದು ಬಿಜ್ಜಳ ದೊರೆ ಮತ್ತು ಅವನ ಮಕ್ಕಳು ಮಾಡಿದ ಸಂಚುಗಳು ಮರೆಯಾಗಲು ಪ್ರಮುಖ ಕಾರಣ.

**ಮಿಂಚು ಮಿಂಚಿದಡೆ, ಮಿಂಚಿನಲುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು.**

**ಇಂದ್ರಚಾಪ ತೋರಿದಡೆ ಇಂದ್ರಚಾಪದಲುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು.**

**ಮಹಾನುಭಾವಿಗಳು ಮನದೆರೆದು ಮಾತನಾಡಿದಡೆ ಅನುಭಾವದೊಳಗುಳ್ಳ**

**ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು. ಕೂಡಲಚೆನ್ನಸಂಗಯ್ಯನಲ್ಲಿ ಸ್ವಾಯತವಾದ**

**ಶರಣರು ಸ್ವೇಚ್ಛಾಪರರ**----- ಚನ್ನಬಸವಣ್ಣ

ನಾವು ಬಂದದ್ದು ಒಂದು ದೊಡ್ಡ ಕೆರೆಯ ಮಗ್ಗಲಿದ್ದ ಗುಡಿಯ ಬಳಿ. ಅಲ್ಲಿ ನಮ್ಮ ದಾರಿ ಕಾತುರದಿಂದ ಕಾಯುತ್ತಿದ್ದ ಯೋಧರು ಮತ್ತು ಅವರ ಬಂಧುಗಳು. ಅವರಲ್ಲಿ ಮುಂದೇನು ಎನ್ನುವ ಪ್ರಶ್ನೆ ಮನೆಮಾಡಿತ್ತು. ಸಮಯಕ್ಕೆ ತಕ್ಕಂತೆ ಆತುರದಲ್ಲಿ ಮಹಾರಾಜರ ವಿರುದ್ದ ಬಂಡೆದ್ದು ಕಾದಾಡಿದ್ದು ಮರೆಯಾಗಿ ಭಯ ಅವರಲ್ಲಿ ಮನೆಮಾಡಿದ್ದು ಸಹಜ.

ಅವರೆಲ್ಲರನ್ನು ಗುಡಿಯ ಮುಂದೆ ಕುಳಿತುಕೊಳ್ಳಲು ಹೇಳಿದ ವೀರಭಪ್ಪ. ಗುಡಿಯ ಕಟ್ಟೆಯ ಮೇಲೆ ನನಗೆ ಮತ್ತು ಸೇನಾನಾಯಕರನ್ನು ಕುಳಿತುಕೊಳ್ಳಲು ಹೇಳಿದ. ಉತ್ಸವ ಮೂರ್ತಿಯಾದ ನಾನು ಅನಿವಾರ್ಯಾಗಿ ಅಲ್ಲಿ ಕುಳಿತೆ. ದೂರದಲ್ಲಿ ಅವರ ಬಂಧುಗಳೆಲ್ಲ ಬಂದು ಕುಳಿತುಕೊಂಡರು. ವೀರಭದ್ರಪ್ಪ ನನಗೆ

ಮಾತನಾಡಲು ಹೇಳಿದ. ನಾನೇನು ಮಾತನಾಡಬೇಕು ತಿಳಿಯಲಿಲ್ಲ ತಲೆಯಲ್ಲ ಖಾಲಿ. ನೆನಪಾದದ್ದು ಅದೇ ವಚನ ನನಗರಿವಿಲ್ಲದೇ ಬಾಯಿಗೆ ಬಂತು ಕಣ್ಣು ಮುಚ್ಚಿ ಹೇಳಿದೆ

**"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ------"**

-- ಅಣ್ಣ ಬಸವಣ್ಣ

ಮುಂದೆ ಕುಳಿತವರೆಲ್ಲ ನಾನು ಹೇಳಿದ್ದನ್ನು ಮತ್ತೆ ಮತ್ತೆ ಮರುನುಡಿದರು. ಜೊತೆಗೆ ಬಸವಾ ಬಸವಾ ಎನ್ನುವ ಭಜನೆ. ನಾನು ಮಾತು ಮುಂದುವರೆಸಿದೆ

**ಗುರುವ:** ಅಣ್ಣ ಈ ವಚನವನ್ನು ಒರೆಗೆ ನಮ್ಮ ಮೂಲಕ ಹಚ್ಚಿದ್ದಾನೆ. ಈ ಮಂತ್ರ ನಿಜವಾಗಿಯೂ ಪರಿಣಾಮಕಾರಿ ಎನ್ನುವದು ಇಂದೂ ಸಹ ಸಿದ್ದವಾಯಿತು. ಎಲ್ಲ ವಿವರ ವೀರಭದ್ರಪ್ಪ ಕೊಡುತ್ತಾರೆ.

**ವೀರಭದ್ರಪ್ಪ:** ನಮ್ಮೆಲ್ಲರನ್ನು ಮಂಗಳವೇಢೆಯ ಆಡಳಿತಗಾರರು ತಮ್ಮ ಯೋಧರನ್ನಾಗಿ ನೇಮಕಗೊಳಿಸಲು ಇಚ್ಚಿಸುತ್ತಾರೆ. ನಾವು ಮೊದಲಿದ್ದ ಪದವಿ ವೇತನ ಮತ್ತು ಅನುಕೂಲತೆಗಳನ್ನು ಕೊಡುತ್ತಾರೆ. ಈಗಿರುವಂತೆ ನಿಮ್ಮ ನಾಯಕರೇ ನಾಯಕರಾಗಿ ಮುಂದುವರೆಯುತ್ತಾರೆ. ನಮ್ಮ ಮನೆಯವರು ನಾವು ಕೆಲಸ ಮಾಡುವ ಊರಿನ ಸಮೀಪ ವಸತಿ ಮತ್ತಿತ್ತರ ಸೌಲಭ್ಯ ಪಡೆಯುತ್ತಾರೆ. ನಿಮ್ಮ ಇಚ್ಚೆಯೇ ಬಹಳ ಮುಖ್ಯ. ನಿಮ್ಮ ಮನಸಾಕ್ಷಿಯಾಗಿ ಒಪ್ಪಿಗೆ ಸೂಚಿಸಿ. ಎಲ್ಲರೂ ಎದ್ದು ನಿಂತು ನಮ್ಮ ಒಪ್ಪಿಗೆ ಇದೆ ಎಂದರು. ಅವರ ಸಂಬಂಧಿಕರೂ ಎದ್ದು ನಿಂತು ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಲ್ಲಿ ಒಮ್ಮೆಲೆ ಎಲ್ಲರ ಕಷ್ಟ ನೀಗಿದ ಭಾವ ಮೂಡಿತು. ಎಲ್ಲರೂ ಕುಳಿತು "ಬಸವ ಬಸವ" ನಾಮ ಜಪಿಸಿದರು. ಅಲ್ಪ ಸಮಯದಲ್ಲಿ ಅಲ್ಲಿ ಅನೇಕ ಯೊಧರು ಮತ್ತು ಬಂಡಿಗಳು ಬಂದವು. ಅವುಗಳಲ್ಲಿದ್ದ ಅಡಿಗೆ ಸಾಮಾನುಗಳನ್ನು ಗುಡಿಯ ಪಕ್ಕದ ದಾಸೋಹ ಕೊಠಡಿಗೆ ಸಾಗಿಸಲಾಯಿತು. ಯೋಧರ ಸಂಬಂಧಿಗಳೆಲ್ಲ ಅಡಿಗೆ ಮಾಡಲು ಅಲ್ಲಿಗೆ ತೆರಳಿದರು.

ವೀರಭದ್ರಪ್ಪ, ನಾಯಕರು ಮತ್ತು ಮಂಗಳವೇಢೆಯಿಂದ ಬಂದ ಯೋಧರು ಜೊತೆಗೂಡಿ ಅಲ್ಲಿದ್ದ ಯೊಧರಿಗೆ ಸಮವಸ್ತ್ರ ನೀಡಿದರು. ಅಲ್ಲಿ ಸ್ವಲ್ಪ ಹೊತ್ತಿನಲ್ಲಿ ಮಂಗಳವೇಢೆಯ ಯೋಧರಾಗಿ ಬದಲಾದ ಯೋಧರು ಸಾಲಾಗಿ ನಿಂತಿದ್ದರು. ಮಂದಿರದಲ್ಲಿ ಪೂಜೆ ಮಾಡಿ ಎಲ್ಲರೂ ಪ್ರಸಾದ ಸೇವಿಸಿ ತಮ್ಮ ತಮ್ಮ ಸಂಬಂಧಿಗಳೊಡನೆ ದೇವರಿಗೆ ಮತ್ತು ನಮಗೆ ನಮಸ್ಕರಿಸಿ ಹೊರಟು ಹೋದರು. ಅಲ್ಲಿ ನಾನು, ನನ್ನಾಕೆ ಮತ್ತು ವೀರಭದ್ರಪ್ಪ ಮಾತ್ರ ಉಳಿದದ್ದು. ಎಲ್ಲ ಕಡೆ ಬಯಲು.

ನಮಗೆ ಮಾತು ಹೊರಡಲಿಲ್ಲ. ಮೌನವಾಗಿ ಕುಳಿತೆವು. ನಾನು ಕಣ್ಣುಮುಚ್ಚಿಕೊಂಡು ಕುಳಿತೆ ನನಗೆ ನೆನಪಾದದ್ದು

**ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ**

**ಬಯಲಾಯಿತ್ತಯ್ಯಾ.**

**ಬಯಲ ಜೀವನ ಬಯಲ ಭಾವನೆ ಬಯಲು ಬಯಲಾಗಿ ಬಯಲಾಯಿತ್ತಯ್ಯಾ.**

**ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ**

– ಅಲ್ಲಮಪ್ರಭು

ಎನ್ನುವ ವಚನ ಮತ್ತು ಅದನ್ನು ಬರೆಯಲು ಹೇಳಿದ ಗುರುಗಳು.
ಅವರು ಬಿರುಗಾಳಿಯಂತೆ ಬಂದದ್ದು ಕಿವಿಹಿಂಡಿ ಬುದ್ದಿ ಹೇಳಿ ವಚನ ಓದಲು ಬರೆಯಲು ಕಲಿಸಿದ್ದು ಎಲ್ಲಾ ಒಂದೊಂದಾಗಿ ನೆನಪಿಗೆ ಬರಹತ್ತಿತು. ಜೊತೆಗೆ ಅವರು ಹೇಳಿದ ಮಾತು

**"ಬಯಲು ಬಯಲಾಗುವ ಸಮಯ ಬಂದಿದೆ. ನಾನು ನನ್ನ ಕುರಿ ಹೊಡಕೊಂಡು ದೂರಹೋಗಬೇಕು ಇಲ್ಲದಿದ್ದರ ಪರಷುಕಟ್ಟ್ಯಾಗ ನನ್ನ ಕುರಿ ಕಡದು ಹಂಚತಾರ. ಕುರಿ ಹಾಕಿದ ಹಿಕ್ಕಿ ಕೂಡಿಸಿ ಚೀಲ ತುಂಬಿ ಕೂಡಿಸಿ ಜೋಪಾನಮಾಡರಿ. ಮುಂದ ಅದ ಬೆಳಿ ಬೆಳಿಲಾಕ ಬೇಕಾಗತೈತಿ"**

ನೆನಪಿಗೆ ಬಂತು.
ಗುರುಗಳು ಕರಾರುವಕ್ಕಾಗಿ ಭವಿಷ್ಯ ನುಡಿದಿದ್ದರು. ಆಗ ನನಗೇನು ಅರ್ಥವಾಗಿರಲಿಲ್ಲ. ಇಂದು ಅವರ ಮಾತಿನ ಅರ್ಥ ಆಗುತ್ತಿದೆ.
ಕುರಿ ತನಗೆ ಸಿಕ್ಕಿರುವದನ್ನೆಲ್ಲ ತಿಂದು ಅರಗಿಸಿಕೊಳ್ಳುತ್ತದೆ. ಕುರಿಯ ಹಿಕ್ಕಿ ಅತಿ ಉತ್ತಮ ಗೊಬ್ಬರ. ಅದನ್ನು ಹಾಕಿದಾಗ ಬೆಳೆ ಹುಲುಸಾಗಿ ಬೆಳೆಯುತ್ತದೆ. ಶರಣರು ಹಾಗೇ ಅಲ್ಲವೇ ತಮ್ಮ ಗಮನಕ್ಕೆ ಬಂದ ಎಲ್ಲವನ್ನು ಓದಿ ಅರಗಿಸಿಕೊಂಡು ಜ್ಞಾನಿಗಳಾಗಿ ತಮ್ಮ ಅನುಭವವನ್ನು ವಚನಗಳ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ. ಆ ವಚನಗಳನ್ನು ಕೂಡಿಸಿ ಜೋಪಾನವಾಗಿಟ್ಟು ಮುಂದಿನ ಜನಾಂಗಕ್ಕ ತಲುಪಿಸುವ ಜವಾಬ್ದಾರಿ ನಮಗೆ ಕೊಟ್ಟಿದ್ದಾರೆ. ಗುರುವಿನ ಆಜ್ಞೆ ಪಾಲಿಸುವದಷ್ಟೇ ನಮ್ಮ ಕೆಲಸ. ಅವರ ಭವಿಷ್ಯದಲ್ಲಿ ಹುಲುಸಾಗಿ ಬೆಳೆ ಬೆಳಿತೈತಿ ಅನ್ನುವ ಭರವಸೆ ಮನದಲ್ಲಿ ನಂಬಿಕೆ ಹುಟ್ಟಿಸಿತು.
ಯಾಕೋ ಅವರು ಹೇಳಿದ ನನ್ನ ಕುರಿ ಕಡಿತಾರ ಎನ್ನುವ ಮಾತು ಮತ್ತೆ ಮತ್ತೆ ಮರುಕಳಿಸಹತ್ತಿತು. ರಕ್ತಪಾತ ಹೇಗಿರುತ್ತೆ ಎನ್ನುವದನ್ನು ಮೊದಲಬಾರಿಗೆ ನಿನ್ನೆ ಕಂಡಿದ್ದೆ. ರಕ್ತ ರಕ್ತ ಎಲ್ಲ ಕಡೆ. ನನ್ನ ಗುರುವಿನ ಕುರಿ ಕಡಿದಾಗ ಚಿಮ್ಮಿದ ರಕ್ತ ನನ್ನ ಮೈಯೆಲ್ಲ ಸಿಡಿದ ಅನುಭವವಾದಾಗ ಕಣ್ಣಲ್ಲಿ ನೀರು ಹರಿಯತೊಡಗಿತು ಬಿಕ್ಕಿ ಬಿಕ್ಕಿ ಅಳತೊಡಗಿದೆ. ನನ್ನವಳು ನೀರು ಹಾಕಿದಾಗ ಎಚ್ಚರವಾಯಿತು. ಕಣ್ಣುತೆರೆದೆ ನಾನ್ನಾಕೆ ಗಾಬರಿಯಾಗಿ ನೆತ್ತಿಗೆ ನೀರು ಬಡಿಯುತ್ತಿದ್ದಳು ಮತ್ತು ವೀರಭದ್ರಪ್ಪ ಏಳಿ ಗುರು ಏಳಿ ಎಚ್ಚತ್ತುಕೊಳ್ಳಿ ಎನ್ನುತ್ತಿದ್ದ.
**ಗುರುವ:** ಅನಾಹುತವಾಯಿತು ವೀರಭದ್ರಪ್ಪ ನನ್ನ ಗುರುವಿನ ಕುರಿಯನ್ನು ಕಡಿದರು ನೋಡಿ ನನ್ನ ಮೈಯೆಲ್ಲ ರಕ್ತ ಸಿಕ್ತವಾಗಿದೆ.

**ವೀರಭದ್ರಪ್ಪ:** ಪೂರ್ಣ ಎಚ್ಚರವಾಗಿ ನೀವೀಗ ಮಂದಿರದಲ್ಲಿದ್ದೀರಿ. ಇಲ್ಲಿ ಯಾವ ರಕ್ತಪಾತವಾಗಿಲ್ಲ. ನಿನ್ನೆಯ ಘಟನೆ ನಿಮ್ಮ ಮನದ ಮೇಲೆ ಪ್ರಭಾವ ಬೀರಿದೆ. ನಿಮಗೆ ವಿಶ್ರಾಮದ ಅವಶ್ಯಕತೆ ಇದೆ.
**ನನ್ನಾಕೆ:** ಅವರಿಗೆ ಅವರ ಗುರುಗಳ ನೆನಪಾಗಿದೆ. ಆ ಗುರುಗಳು ಇವರಿಗೊಂದು ವಚನ ಕಲಿಯಲು ಕೊಟ್ಟು ಅವಸರವಾಗಿ ಕಲ್ಯಾಣ ತೊರೆದು ಹೋಗುವಾಗ ಹೇಳಿದ ಮಾತು ಇವರಿಗೆ ನೆನಪಾಗಿದೆ ಅಂತ ಕಾಣಿಸತ್ತೈತಿ.
**ವೀರಭದ್ರಪ್ಪ:** ಅವರೇನು ಹೇಳಿ ಹೋದರು.
**ನನ್ನಾಕೆ:** "ಬಯಲು ಬಯಲಾಗುವ ಸಮಯ ಬಂದಿದೆ. ನಾನು ನನ್ನ ಕುರಿ ಹೊಡಕೊಂಡು ದೂರಹೋಗಬೇಕು ಇಲ್ಲದಿದ್ದರ ಪರಷುಕಟ್ಟ್ಯಾಗ ನನ್ನ ಕುರಿ ಕಡದು ಹಂಚತಾರ. ಕುರಿ ಹಾಕಿದ ಹಿಕ್ಕಿ ಕೂಡಿಸಿ ಚೀಲ ತುಂಬಿ ಕೂಡಿಸಿ ಜೋಪಾನಮಾಡರಿ. ಮುಂದ ಅದ ಬೆಳಿ ಬೆಳಿಲಾಕ ಬೇಕಾಗತ್ತೈತಿ"
**ವೀರಭದ್ರಪ್ಪ:** ತುಂಬಾ ಅರ್ಥಪೂರ್ಣ ಮಾತು ಹೇಳಿ ಹೋಗ್ಯಾರ. ಅವರ ಹೇಳಿದ ಹಾಗೆ ಎಲ್ಲ ನಡಿಲಾಕ ಹತ್ತೈತಿ.
**ನನ್ನಾಕೆ:** ಪರುಷಕಟ್ಟಿ ಅಂದರ ಏನು?
**ವೀರಭದ್ರಪ್ಪ:** ಇದು ಬಸವಕಲ್ಯಾಣದ ಮಧ್ಯಭಾಗದಲ್ಲಿರುವ ಕಟ್ಟೆ. ಇಲ್ಲಿ ದಿನಾಲೂ ಸಾಯಂಕಾಲ ಅಣ್ಣ ಬಸವಣ್ಣನವರು ಬಂದು ಕುಳಿತುಕೊಳ್ಳುತ್ತಿದ್ದರು ಮತ್ತು ಜನರ ಕಷ್ಟಕ್ಕೆ ಪರಿಹಾರ ಸೂಚಿಸುತ್ತಿದ್ದರು. ನನ್ನ ಜೊತೆ ನನ್ನಾಕೆಯೂ ಬಿಕ್ಕಿ ಅಳತೊಡಗಿದಳು. ದಿಕ್ಕು ತೋಚದೇ ವೀರಭದ್ರಪ್ಪ ಕುಳಿತಿದ್ದ. ಸ್ವಲ್ಪ ಹೊತ್ತಾದ ಮೇಲೆ ಸುಧಾರಿಸಿಕೊಂಡು ನನ್ನಾಕೆಯ ತಲೆ ಸವರಿ
**ಗುರುವ:** ಇದು ನಮ್ಮ ಮನದ ಕಲ್ಪನೆ. ಮನದ ಕಲ್ಪನೆಯಲ್ಲಿ ಮೂಡಿದ ಭಾವನೆಗಳಿಗೆ ಅರ್ಥವಿಲ್ಲ.
**ವೀರಭದ್ರಪ್ಪ:** ಗುರೂ ಏನು ನಿಮ್ಮ ಕಲ್ಪನೆಯಲ್ಲಿ ಮೂಡಿದ ಚಿತ್ರ.
**ಗುರುವ:** ನೀವು ಪರುಷಕಟ್ಟೆಯ ವಿವರಣೆ ಕೊಟ್ಟಾಗ ಅಣ್ಣ ಬಸವಣ್ಣನವರ ನೆನಪಾಯಿತು. ನನ್ನ ಗುರು ಕುರಿ ಅವರೇನಾ ಅವರ ಹತ್ಯೆ ಆಯಿತಾ ಎನ್ನುವದನ್ನು ನೆನೆಸಿಕೊಂಡು ಅಳು ಬಂತು.
**ವೀರಭದ್ರಪ್ಪ:** ಹಾಗಾಗುವ ಸಂಭವ ಕಡಿಮೆ.
**ನನ್ನಾಕೆ:** ಬಸವಾ, ಬಸವಾ ಎನ್ನುವ ಭಜನೆಯಲ್ಲಿ ಮುಳುಗಿದಳು ನಮಗಿಬ್ಬರಿಗೂ ಸ್ವಲ್ಪ ಸಮಾಧಾನವಾಯಿತು. ಇಲ್ಲಿಯೇ ವಿಶ್ರಾಂತಿ ಪಡೆಯಬೇಕೆನಿಸಿ ಕಣ್ಣುಮುಚ್ಚಿ ಕುಳಿತೆ.
ಗಮನಿಸಿ:

ಬಸವಣ್ಣ ಮೊದಲು ಮಾಡಿ ಎಲ್ಲ ಶರಣರು ಇಂದು ದೇವರ ರೂಪದಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಶರಣ ಕಾಯಕ್ಕನುಸಾರ ಶರಣರ ಮೂರ್ತಿಗಳು ರೂಪಗೊಂಡು ಅವರ ಹೆಸರಿನಲ್ಲಿ ಗುಡಿಗಳು ಮಠಗಳು ಜನಪ್ರೀಯವಾಗಿವೆ. ವಚನಗಳಲ್ಲಿ ಶರಣರು ಬರೆದಿದ್ದದ್ದು ಯಾವದು ಎಂದು ಕಂಡುಹಿಡಿಯಲು ಅನೇಕ

ಸಂಶೋಧನೆಗಳು ನಡೆದಿವೆ. ಯಾವುದೇ ವಚನ ಹೇಳಿದರೂ ಅದರ ನೈಜತೆಯ ಬಗ್ಗೆ ಸಂಶಯ ಮೂಡಿಸುತ್ತಾರೆ. ಕೆಲವು ಕಡೆ ಆಸ್ತಿ ಅಂತಸ್ತು ಸ್ಥಾಪನೆಗಾಗಿ ವಚನ ತತ್ವಗಳ ದುರುಪಯೋಗವಾಗುತ್ತಿದೆಯಾ ಎನಿಸುತ್ತದೆ. ಶರಣರು ಸಮಾಜದ ಎಲ್ಲ ಕಾಯಕಯೋಗಿಗಳು ಒಂದಾಗಲಿ ಎಂದು ಬಲಿದಾನವಾಗಿದ್ದರೆ. ಇಂದು ಅವುಗಳನ್ನು ಬೇರೆ ಬೇರೆ ಮಾಡಿ ಸ್ವಹಿತ ಸಾಧನೆ ಮಾಡಲಾಗುತ್ತಿದೆಯಾ? ಇವೆಲ್ಲ ಕಂಟಕ ಪರಿಹಾರವಾಗಿ ಶರಣರು ಇಚ್ಚಿಸಿದ ಒಂದು ಸಮಾಜ ನಿರ್ಮಾಣವಾಗಿ ಅವರು ಕಂಡ ಕನಸು ನನಸಾಗುತ್ತಾ? ಇಲ್ಲ ಅವರ ಬಲಿದಾನ ವ್ಯರ್ಥವಾಗುತ್ತಾ? ಇವೆಲ್ಲ ಸಾಮಾನ್ಯರಲ್ಲಿ ಮೂಡುವ ಪ್ರಶ್ನೆಗಳು. ಇನ್ನು ಸಾಮಾನ್ಯರಲ್ಲಿ ಸಾಮಾನ್ಯನಾದ ನನ್ನ ಮನದಲ್ಲಿ ಉತ್ತರವಿಲ್ಲದ ಈ ಪ್ರಶ್ನೆಗಳು ಹುಟ್ಟಿದ್ದು ಸಹಜ. ಹಿರಿಯರ ಸತತ ಪ್ರಯತ್ನದ ಫಲವಾಗಿ ವಚನಗಳು ದೊರೆತು ಎಲ್ಲ ಭಾಷೆಗಳಲ್ಲಿ ಲಭ್ಯವಾದದ್ದು ಮತ್ತು ಅವುಗಳ ನೈಜ ಅರ್ಥ ಮಾಡಿಕೊಡುವ ಅನುಭಾವಿಗಳ ಸಭೆಗೆ ಲಕ್ಷಾಂತರ ಜನ ಹೋಗುತ್ತಿರುವದನ್ನು ಕಂಡಾಗ ಮನದ ಮೂಲೆಯಲ್ಲಿ ಶರಣರ ಕನಸು ನನಸಾಗಬಹುದು ಎನ್ನುವ ಆಶೆ ಚಿಗುರೊಡೆಯುತ್ತದೆ.

ನಾನು ಎಷ್ಟು ಹೊತ್ತು ಹಾಗೆ ಕುಳಿತಿದ್ದೆ ಗೊತ್ತಿಲ್ಲ. ಮನದ ತುಂಬ ಪ್ರಶಾಂತವಾದ ಬೆಳದಿಂಗಳ ಬದಲಾಗಿ ಆವರಿಸಿದ್ದು ಕೆಂಪು ರಕ್ತ ಕೆಂಪು ಬಣ್ಣ. ನಿನ್ನೆ ನೋಡಿದ ಘಟನೆ ಮನದಿಂದ ಮಾಸಿರಲಿಲ್ಲ. ಚೀರಾಟ ಕೂಗಾಟ ಮರೆಯಲಾಗುತ್ತಿಲ್ಲ. ಯಾಕೆ ಹೀಗಾಯಿತು? ಈ ಘಟನೆ ಅನಿವಾರ್ಯವೇ? ಸೋಮೇಶ್ವರ ಅರಸನಾಗಿದ್ದ ಅವನಿಗೆ ಬೇಕಾದ ಅಧಿಕಾರ ದಕ್ಕಿತ್ತು, ಮತ್ತೇಕೆ ಈ ಅಕ್ರಮಣ? ಶರಣರನ್ನು ವೈರಿಗಳೆಂದು ಪರಿಗಣಿಸಿದ್ದೇಕೆ? ಅವನಿಗೆ ಶರಣರು ಮಾಡಿದ ದ್ರೋಹವೇನು? ಒಬ್ಬರು ಬೆಳೆಯಬೇಕೆಂದರೆ ಇನ್ನೊಬ್ಬರನ್ನು ದಮನಮಾಡುವದು ಅನಿವಾರ್ಯವೇ? ಧಾರ್ಮಿಕ ವಿಚಾರಗಳರಿಯದೇ ಧಾರ್ಮಿಕ ಆಚರಣೆಗಳಿಂದ ಸಾವಿರಾರು ವರ್ಷಗಳಿಂದ ಬದುಕುತ್ತಿರುವವರ ಒಳಸಂಚೇ? ಇವರ ಸಂಚಿಗೆ ಶರಣರು ಬಲಿಯಾಗಿಯೋ ಅಥವ ಸ್ವಾಭಾವಿಕವಾಗಿಯೋ ಕಾಲಾಧೀನವಾದ ನಂತರ ವಚನಗಳಿಂದಲೇ ಮತ್ತೆ ಈ ತತ್ವಗಳು ಪುನರ್ಜೀವನ ಪಡೆಯುವದೆಂತು? ಗುರುಗಳು ಹೇಳಿದ್ದು ವಚನಗಳು ಗೊಬ್ಬರ ಎಂದು. ಈ ಗೊಬ್ಬರವನ್ನು ಸಂಪ್ರದಾಯವಾದಿಗಳು ತಮಗೆ ಬೇಕಾದ ಹಾಗೆ ಉಪಯೋಗಿಸಬಹುದಲ್ಲವೇ? ಶರಣರು ಕಂಡ ಕನಸು ನನಸಾಗುತ್ತ? ಶರಣರ ಯೋಚನೆಯಂತೆಯೇ ಶರಣ ತತ್ವಗಳ ಅನುಷ್ಠಾನವಾಗುತ್ತಾ?. ಉತ್ತರವಿಲ್ಲದ ನೂರೆಂಟು ಪ್ರಶ್ನೆಗಳು ಮನದ ತುಂಬ. ಯಾಕೋ ಸಂಕಟ ಸಂಕಟ ತಾಳಲಾರದೆ ನೆಲಕ್ಕುರುಳಿದೆ.
ನನಗಾಶ್ಚರ್ಯ ಯಾರೋ “ಏಳು ಗುರುವಾ ಏಳು” ಎಂದು ಭುಜ ಹಿಡಿದು ಎಬ್ಬಿಸಿದ ಅನುಭವ. ಗಾಬರಿಯಿಂದ ಎದ್ದು ಕುಳಿತು ಕಣ್ಣುಬಿಟ್ಟೆ. ನನ್ನನ್ನು ಎಬ್ಬಿಸಿದವರು ನನ್ನ ಅಜ್ಜಿಯ ವಯಸ್ಸಿನ ಮಹಿಳೆಯೊಬ್ಬರು. ನನ್ನ ಅಜ್ಜಿಯೇ

ಮುಂದೆ ನಿಂತಂತಾಗಿ ಅವರ ಕಾಲಿಗೆ ಬಿದ್ದು ಶರಣು ಶರಣಾರ್ಥಿ ಎಂದೆ. ಅಲ್ಲಿಯೇ ಇದ್ದ ನನ್ನಾಕೆಯೂ ಅವರಿಗೆ ನಮಸ್ಕರಿಸಿದಳು.
ಅವರು ಆಶೀರ್ವದಿಸಿ ನಮ್ಮ ಹತ್ತಿರ ಕುಳಿತರು. ಅವರಲ್ಲದೇ ಇನ್ನೂ ಮೂವರು ಮಧ್ಯವಯಸ್ಕ ಮಹಿಳೆಯರು ಅಲ್ಲಿದ್ದರು ಅವರಿಗೂ ನಮಸ್ಕರಿಸಿದೆವು.
ಆಡಳಿತಗಾರರು ಅಲ್ಲಿಯೇ ವೀರಭದ್ರಪ್ಪನೊಡನೆ ಮಾತನಾಡುತ್ತಿದ್ದವರು ನೀವು ಮಾತನಾಡುತ್ತಿರಿ ನಾನು ದಾಸೋಹ ನೋಡಿ ಬರುವೆ ಎಂದು ಹೇಳಿ ಹೋದರು.
**ಅಜ್ಜಿ:** ಏನೇ ಹುಡಗಿ ನೀನು ಗುರುಬಸವ್ವನಂಗ ಚಂದ ಅದೀ. ಆಕೆಯ ಬಣ್ಣ, ಆಕೆಯ ಉಬ್ಬಿದಗಲ್ಲ ಅದೇ ಮೂಗು ಮತ್ತು ಗುಳಿಬಿದ್ದ ಕಣ್ಣು. ಈ ಕಮಂಗಿ ನಿನಗೆಲ್ಲಿ ಸಿಕ್ಕ.
ನನ್ನಾಕೆ ನಾಚಿಕೆಯಿಂದ ಕೆಂಪಾದಳು. ನನಗೆ ಆಶ್ಚರ್ಯ, ಬೆರಗಾಗಿ ಅಜ್ಜಿಯ ಕಡೆ ನೋಡತೊಡಗಿದೆವು.
**ನನ್ನಾಕೆ:** ಇವರೂ ಗುರಬಸವಮ್ಮನ ಮೊಮ್ಮಗ.
**ಅಜ್ಜಿ:** ನಾ ಹೂವನೂರ ದೇಸಾಯಿಯವರ ಮೊಮ್ಮಗಳು. ನಮ್ಮಜ್ಜ ನಿಮಗೆ ಗೊತ್ತಿಲ್ಲ ನೀವು ಹುಟ್ಟುವಷ್ಟರಲ್ಲಿ ಇಲ್ಲಿಗೆ ನಾವೆಲ್ಲ ಬಂದು ಬಿಟ್ಟಿದ್ದೆವು. ಬಿಡು ನಿಮ್ಮಜ್ಜಿ ನಾನು ಆಡಿ ಬೆಳೆದವರು. ನಿಮ್ಮಜ್ಜಿ ಗಟ್ಟಿಗಿತ್ತಿ ಪುಟ್ಟಿ ಹೊತ್ತು ಎಣ್ಣಿ ಮಾರಿ ತನ್ನ ತಂಗಿಯರನ್ನ ಮದುವಿ ಮಾಡಿಕೊಟ್ಟಳು. ಆಕೆನ ನೋಡಿ ಎಲ್ಲರೂ ಕಲಿಯಬೇಕು.
**ಗುರುವ:** ನಿಮ್ಮನ್ನ ನೋಡಿ ನಮ್ಮಜ್ಜಿ ನೋಡಿದ ಹಾಗ ಆಯಿತು.
**ಅಜ್ಜಿ:** ಪಾರ್ವತಿ ಬಂದಾಗ ನಿನ್ನ ಹೆಂಡತಿ ಗಂಗವ್ವ ಮಾಡಿದ ರೊಟ್ಟಿ ಪುಂಡಿಪಲ್ಲೆ ಬಾಳ ಬಾಳ ಹೊಗಳಿದಳು. ಅದಕ ನಾ ರೊಟ್ಟಿ ತಿನಲಾಕ ಬಂದೀನಿ. ಈಕಿಯ ಹೆಸರು ಗೌರಿ ಆಡಳಿತಗಾರನ ಹೆಂಡತಿ. ಈಕೆ ಮತ್ತು ಪಾರ್ವತಿ ನನ್ನ ಮಕ್ಕಳು ಮತ್ತ ಗಂಗಾಂಬಿಕೆ ನನ್ನ ಅಕ್ಕನ ಮಗಳು.
ಅಲ್ಲಿ ಕುಳಿತಿದ್ದ ಗೌರಮ್ಮ ಬಂದು ನನ್ನ ಮಗ್ಗಲು ಕುಳಿತು ನನ್ನ ತಲೆ ನೇವರಿಸಿದರು. ಎಷ್ಟೋ ವರ್ಷಗಳ ನಂತರ ನನ್ನ ತಾಯಿ ನನ್ನ ತಲೆ ನೇವರಿಸಿ ರಮಿಸುವ ನೆನಪಾಯಿತು. ಕಣ್ಣಲ್ಲಿ ನೀರು ತುಂಬಿತು
**ಗೌರಮ್ಮ:** ಯಾಕ ಏನಾಯಿತು.
**ಗುರುವ:** ನಮ್ಮವ್ವನ ನೆನಪಾಯಿತು. ನಾನು ಸಂಕಟದಲ್ಲಿದ್ದಾಗ ಆಕೆ ಹೀಗೆಯೇ ಸಮಾಧಾನ ಮಾಡುತ್ತಿದ್ದಳು. ಇಂದು ರಾತ್ರಿಯೆಲ್ಲ ಏನೇನೋ ಯೋಚನೆಗಳು, ಸಂಕಟ ನಿಮ್ಮನ್ನು ನೋಡಿ ಸಮಾಧಾನವಾಯಿತು.
**ಗೌರಮ್ಮ:** ನಿನ್ನೆ ನಮ್ಮ ಯಜಮಾನರು ಎಲ್ಲ ಹೇಳಿದರು. ಜೀವಪಣಕ್ಕಿಟ್ಟು ನನ್ನ ತಂಗಿ ಗಂಗಾಂಬಿಕೆ, ವೈನಿ ನಾಗಲಾಂಬಿಕೆ ಮತ್ತು ಇತರ ಶರಣರಿಗೆ ಸಹಾಯ ಮಡಿದ್ದನ್ನು ಹೇಳಿದರು.
**ಗುರುವ:** ನಾನೇನು ಮಾಡಲಿಲ್ಲ ಅವ್ವ. ಎಲ್ಲ ಅಣ್ಣ ಬಸವಣ್ಣ ಮಾಡಿದ್ದು. ನನಗೇನು ಬರೂದಿಲ್ಲ ಗಾಣ ಹೊಡೆಯುವದು ಬಿಟ್ಟು.

**ಅಜ್ಜ:** ನನಗ ಅವರನ್ನೆಲ್ಲ ನೋಡಬೇಕು ಅನಿಸಲಾಕ ಹತ್ತೈತಿ. ತುಂಟ ಚನ್ನನ ನೋಡಿ ಎಷ್ಟು ದಿನ ಆಯ್ತು. ಬಸವ ಆಗ ಮೇಲಿಂದ ಮೇಲೆ ಕರಕೊಂಡ ಬರತಿದ್ದ ಈಗ ಅಜ್ಜ ನೆನಪು ಆಗುವದಿಲ್ಲ ಅವನಿಗೆ.
**ನನ್ನಾಕೆ:** ಈಗ ಅವನ ಸಂಸಾರ ಬಾಳ ದೊಡ್ಡದಾಗ್ಯೆತಿ. ಲಕ್ಷದ ಮೇಲೆ ತೊಂಬತ್ತು ಸಾವಿರ ಮಂದಿ ಅವರ ಮನ್ಯಾಗ ಅದಾರ.
**ಅಜ್ಜ:** ನನಗ ಎಲ್ಲ ಗೊತ್ತೈತಿ ಬಿಡು ನಿಮ್ಮಣ್ಣನ ಮೇಲ್ಗಟ್ಟೆ ಏನರ ಹೇಳಾಕ ಬರಬ್ಯಾಡ.
**ಗೌರಮ್ಮ:** ನೀವೆಲ್ಲ ಪಾರ್ವತಿ ಮನಿಗೆ ಬಂದು ಹೋದ ಮ್ಯಾಗ ಅಣ್ಣ ಹೇಳಿದ ಮಾರ್ಗದಲ್ಲಿ ನಡೆದು ಬರಗಾಲದ ಸಂಕಟದಿಂದ ಜನ ಪಾರಾಗ್ಯಾರ. ಈ ವರ್ಷ ಮಳಿ ಚನ್ನಾಗಿ ಆದದ್ದಕ ಎಲ್ಲರ ಬಂಗಾರದಂತ ಬೆಳೆ ಬೆಳೆದಾರ. ಎಲ್ಲರ ಸಾಲ ತೀರಿಸಿ ಈ ವರ್ಷದ ತೆರಿಗೆ ಕೊಟ್ಟಾರ. ಅವರೆಲ್ಲರ ಪಾಲಿಗೆ ಅಣ್ಣ ಬಸವಣ್ಣ ದೇವರಾಗ್ಯಾನ.
**ಅಜ್ಜ:** ಹಂಗ ಅದಾನ ಅಂತನ ನಮ್ಮಕ್ಕ ಹೆಣ್ಣ ಕೊಟ್ಟದ್ದು. ಅವ, ಶಂಕರ ಮತ್ತು ಶಿವ ಮೂರು ಮಂದಿ ಸಂಗಮದಾಗ ಹನ್ನೆರಡು ವರ್ಷ ಕೂಡಿ ಕಲತರು. ಅವರ ಅಕ್ಕ ನಾಗಮ್ಮ ಬಾಳ ಕಾಳಜಿ ಮಾಡಿ ಬೆಳೆಸಿದಳು. ಎಲ್ಲರದೂ ಒಂದ ದಾರಿ ಆದರ ಬಸವನದು ಒಂದ ದಾರಿ. ಎಡವಟ್ಟ ಅಂದರ ಎಡವಟ್ಟ. ಎಲ್ಲದಕೂ ಯಾಕ? ಎಂತು? ಹೀಂಗ ಯಾಕ ಮಾಡಬೇಕು? ಹಂಗ ಯಾಕ ಮಾಡಬಾರದು? ಅನ್ನುವ ಪ್ರಶ್ನೆ ಮಾಡತಿದ್ದ. ಅವನ ಪ್ರಶ್ನೆಗೆ ಬ್ಯಾಸತ್ತು ಕಾಕಾ ಕಾಕಿ ಅವನ ಸಂಗಮದ ಅಗ್ರಹಾರಕ್ಕ ಕಳಿಸಿದರು. ಅಲ್ಲಿಯೂ ಅವನದು ಅದೇ ಆಟ. ಬ್ಯಾಸತ್ತು ಅವನ ಗುರುಗಳು ಇಲ್ಲಿ ಅವರ ಮಾವಂದಿರು ತಿದ್ದಿ ಬುದ್ದಿ ಹೇಳತಾರ ಅಂತ ಮಂಗಳವೇಢೆಗೆ ಕಳಿಸಿದರು ಸುಧಾರಿಸತಾನ ಅಂತ. ಇಲ್ಲಿ ಬಂದ ಮ್ಯಾಲ ಅವ ಬದಲಾಗಲಿಲ್ಲ ನಮ್ಮನ್ನ ಬದಲುಮಾಡಿಬಿಟ್ಟ. ಹಳೆಯದೆಲ್ಲಾ ಬದಲು ಮಾಡುವ ಹಠ ಇನ್ನೂ ಜಾಸ್ತಿಯಾಯಿತು. ಮದುವೆ ಮಾಡಿದರ ಹುಡುಗ ದಾರಿಗ ಬಂದು ಎಲ್ಲರಂಗ ಇರತಾನ ಅಂತ ನಮ್ಮಕ್ಕ ತನ್ನ ಮಗಳು ಗಂಗಾಂಬಿಕೆ ಕೊಟ್ಟು ಮದವಿ ಮಾಡಿದಳು. ಬಸವ ನಮಗಿಂತ ಜಾಣ ಗಂಗಾಂಬಿಕೆ ಅಷ್ಟ ಅಲ್ಲ ಆಕೆ ಅಣ್ಣಂದಿರು, ಅಪ್ಪಂದಿರು ಅವನ ತಾಳಕ್ಕ ತಕ್ಕಂಗ ಕುಣಿಯುವ ಹಾಂಗ ಮಾಡಿದ. ಅವನ ಗುಣಾನ ಹಂಗ ಒಮ್ಮೆ ಅವನ ಜೊತೆ ಮಾತಾಡಿದರ ಸಾಕ ಮೋಡಿ ಮಾಡಿಬಿಡತಿದ್ದ. ಬಿಜ್ಜಳ ಅಂತೂ ಅವನ ವಿಚಾರಕ್ಕ ಬುದ್ದಿಗೂ ಮಾರುಹೋಗಿ ಮಂತ್ರಿ ಮಾಡಿದ. ಕಡೇಕ ತನ್ನ ಸಾಕತಂಗಿ ನೀಲಾಂಬಿಕೇನ ಮದುವೆ ಆಗಬೇಕು ಅಂತ ಅಂಗಲಾಚಿ ಮದುವೆನೂ ಮಾಡಿದ.
**ಗೌರಮ್ಮ:** ಅವ್ವಾ ನೀ ನಿನ್ನ ಅಳಿಯನ ಹೊಗಳಾಕ ಹತ್ತಿಯೋ ಏನ ಬೈಯಾಕ ಹತ್ತಿಯೋ?
**ಅಜ್ಜ:** ಯಾವಾಗಲೂ ಹಿಂಗ ಆಗತೈತಿ ಅರಳು ಮರಳು ಬೈಯಾಕಂತ ಚಾಲೂ ಮಾಡತೀನಿ ಆದರೆ ಹೊಗಳಾಕ ನಿಲ್ಲತೀನಿ. ಇಂತಾ ಅಳಿಯಂದಿರು ಸಿಕ್ಕದ್ದು ನಮ್ಮ

ಪುಣ್ಯ. ಬಸವ ಸಣ್ಣವನಿದ್ದಾಗ ಹ್ಯಾಂಗ ಇದ್ದನೋ ಈಗ ಹಾಂಗ ಅದಾನ. ಮಂತ್ರಿ ಆದರೂ ಏನು ಬದಲಾಗಿಲ್ಲ. ಈಗೀಗ ಅವನ ಮಾತು ನನಗೂ ಸರಿ ಅನಸಾಕ ಹತ್ಯಾವ.
**ಗೌರಮ್ಮ:** ಅಳಿಯನ ವರ್ಣಿಸಿದ್ದು ಸಾಕು. ಮಗಳು ಹ್ಯಾಂಗ ಅದಾಳ ಸ್ವಲ್ಪ ವಿಚಾರಿಸು.
**ಅಜ್ಜಿ:** ಗಂಗಾಂಬಿಕೆ ಬಗ್ಗೆ ಏನು ಕೇಳುದ್ಯೆತಿ ಮಂತ್ರಿಯ ಹೆಂಡತಿ ಆರಾಮ ಇರತಾಳ. ಬಿಜ್ಜಳ ಗೆಳೆಯನಿಗೆ ಸವಲತ್ತು ಕೊಟ್ಟಿರತಾನ ಆಕಿಗೇನ ಕಮ್ಮಿ. ಸುಖ ಸುಪ್ಪತ್ತಿಗೆಯಲ್ಲಿ ತೇಲತಿರತಾಳ.
**ಗೌರಮ್ಮ:** ಗಂಗವ್ವ ನೀ ಹೇಳು ಅಕ್ಕನಾಗಮ್ಮ ಮತ್ತು ಗಂಗಾಂಬಿಕೆ ಹ್ಯಾಂಗ ಅದಾರ. ನೀ ಅವರನ್ನ ಭೆಟ್ಟಿ ಆಗಿದ್ದೇನು?
ಕೆಂಪರಾಜ ಹಾಲು ಕಾದಾವ ಅಕ್ಕ ಎಂದು ಕರೆದ. ನನ್ನಾಕೆ ಎದ್ದು ಹೋಗಿ ಕುಡುಕೆಯಲ್ಲಿ ಹಾಲು ತಂದು ಎಲ್ಲರಿಗೂ ಕೊಟ್ಟು. ಅವ್ವಾ ನನ್ನ ಆಕಳ ನೋಡಬನ್ನಿ ಎಂದು ಗೌರಮ್ಮನನ್ನು ಹೊರಗೆ ಕರೆದುಕೊಂಡು ಹೋದಳು.
**ಗುರುವ:** ಅಜ್ಜಿ ನಾನು ಆಡಳಿತಗಾರರಿಗೆ ಹಾಲು ಕೊಟ್ಟು ಬರತೀನಿ ಎಂದು ಹೊರಟೆ.
ದೂರದಲ್ಲಿ ಕುಳಿತು ನನ್ನಾಕೆ ಗೌರಮ್ಮನವರು ಮಾತಿನಲ್ಲಿ ತೊಡಗಿದ್ದರು. ನಾನು ಹೊರಗೆ ಬಂದು ಒಂದು ಕಲ್ಲಿನ ಮೇಲೆ ಕುಳಿತೆ.
ಅಣ್ಣ ಹೇಳಿದ ಮಾತು “ಹುಸಿಯ ನುಡಿಯಲುಬೇಡ” ಎನ್ನುವದನ್ನು ನನ್ನಾಕೆ ಪಾಲಿಸುವ ಪಾಠ ಕಲಿಸಿದ್ದಳು. ನನ್ನನ್ನು ಕೇಳಿದ್ದರೆ ನಾನು ಸತ್ಯ ಸಂಗತಿ ತಿಳಿಸಿ ಅಜ್ಜಿಯ ಮನನೋಯಿಸುತ್ತಿದ್ದೆ.
(ಬಸವನ ಅಭಿಮಾನಿಗಳ ಮನನೋಯಬಾರದೆಂದು ಶರಣರ ಅಂತ್ಯದ ವಿವರಗಳನ್ನು ಇತಿಹಾಸಕಾರರು ಹೀಗೆಯೇ ಮುಚ್ಚಿಟ್ಟಿರಬಹುದು)
ಅಣ್ಣ ಮತ್ತು ಶರಣರು ಎಲ್ಲರ ಮನದಲ್ಲಿ ದೇವರಾಗಿದ್ದರು. ಇದುವರೆಗೆ ಸೃಷ್ಟಿಯಾಗಿದ್ದ ಕೋಟ್ಯಾನುಕೋಟಿ ಇದ್ದ ದೇವರ ಸಂಖ್ಯೆ ಮತ್ತೆರಡು ಲಕ್ಷ ಹೆಚ್ಚಾಗಿತ್ತು. ತಮಗಿಷ್ಟವಾದವರ ಮೂರ್ತಿ ತಯಾರಿಸಿ ಅವರಿಗೊಂದು ಗುಡಿ ನಿರ್ಮಿಸಿ ಪೂಜೆ ಮಾಡಿ ಅವರ ಹೆಸರಿನಲ್ಲಿ ಬದುಕುವ ಜನಾಂಗವೇ ಸೃಷ್ಟಿಯಾಗಿ ಶರಣರ ಕೃಪೆ ಕೊಡಿಸುವ ದುಃಖ ಪರಿಹರಿಸುವ ದಾರಿ ತೋರಿಸುವ ಶರಣಧೂತರಾಗಬಹುದೇ?. ಹಾಗಾದರೆ ಶರಣರು ಪ್ರತಿಪಾದಿಸಿದ ತತ್ವಗಳ ಗತಿಯೇನು?. ವಚನಗಳು ಈಗ ಇರುವ ಹಾಗೆಯೇ ಮುಂದಿನ ಜನಾಂಗಕ್ಕೆ ತಲುಪಬಹುದೇ? ಅಥವಾ ತಮಗೆ ಬೇಕಾದ ಹಾಗೆ ತಿದ್ದಿ ಇವೇ ವಚನಗಳು ಎನ್ನಬಹುದೇ?. ಶಾಂತರಸ ಎಷ್ಟು ಜಾಣ ಶರಣರು ಬರೆದ ವಚನಗಳ ಮೂಲಪ್ರತಿ ಜೋಪಾನವಾಗಿ ಇಡುವ ವ್ಯವಸ್ಥೆ ಮಾಡಿದ್ದಾರೆ.
“ಗುರುವ, ಗುರುವ” ಈಗ ಕರೆದವರು ಆಡಳಿತಗಾರರು. ಅಣ್ಣಾ ಎಂದು ಕಣ್ತೆರೆದು ಎದ್ದು ನಿಂತು “ಶರಣು ಶರಣಾರ್ಥಿ” ಎಂದೆ.

**ಗುರುವ:** ಕ್ಷಮಿಸಿ ಇತ್ತಿತ್ತಲಾಗಿ ನನ್ನಲ್ಲಿ ನಾನು ಕರಗಿಹೋಗುವದೂ ಹೆಚ್ಚಾಗಿದೆ. ಮನದ ತುಂಬ ಉತ್ತರಿಸಲಾಗದ ಪ್ರಶ್ನೆಗಳು ಮುತ್ತಿ ಘಾಸಿಗೊಳಿಸುತ್ತವೆ ಆಡಳಿತಗಾರರೇ.
**ಆಡಳಿತಗಾರ:** ನನಗೊಂದು ಹೆಸರಿದೆ. ನನ್ನನ್ನು ಶಂಭು. ಮೊದಲಿಗೆ ಪ್ರಶ್ನೆ ಹುಟ್ಟಿಕೊಂಡು ಉತ್ತರ ಬರಲು ದಾರಿ ಮಾಡಿಕೊಡುತ್ತವೆ. ಪ್ರಶ್ನೆ ಇಲ್ಲದೇ ಉತ್ತರವೆಲ್ಲಿ? ಮನುಷ್ಯ ಬೆಳೆಯುವದು ಹೇಗೆ. ಬೀಜವಿಲ್ಲದೇ ಬೆಳೆ ಬರುವದು ಹೇಗೇ?
**ವೀರಭದ್ರಪ್ಪ:** ಇಲ್ಲಿ ಎಲ್ಲ ವ್ಯವಸ್ಥೆ ಆಗಿದೆ. ಯುದ್ಧ ನಡೆದಾಗ ಈ ಜಾಗೆಯನ್ನು ಯುದ್ಧ ಸಾಮಗ್ರಿ ಮತ್ತು ಯೋಧರ ರಕ್ಷಣೆಗಾಗಿ ಉಪಯೋಗಿಸುತ್ತಾರೆ. ಹೀಗಾಗಿ ಇಲ್ಲಿ ಶರಣರು ಕೆಲವು ದಿನ ಸುರಕ್ಷಿತವಾಗಿ ಇರಬಹುದು. ಬೇಕಾದಷ್ಟು ಅಹಾರ ಸಾಮಗ್ರಿ ಇಲ್ಲಿದೆ.
**ಶಂಭು:** ಇಲ್ಲಿ ಇನ್ನೊಂದು ಜಾಗವಿದೆ ನೋಡಿ. ದಾಸೋಹದ ಒಳಹೋಗಿ ಅಲ್ಲಿದ್ದ ಒಂದು ಚಿತ್ರ ತಿರುಗಿಸಿದಾಗ ಅಲ್ಲೊಂದು ವಿಶಾಲವಾದ ಗವಿ ಇತ್ತು.
ಇಲ್ಲಿ ವಚನಗಳನ್ನು ಸುರಕ್ಷಿತವಾಗಿ ಇಡಬಹುದು.
**ಗುರುವ:** ಇದು ತುಂಬಾ ಒಳ್ಳೆಯ ಜಾಗ.
ಅಲ್ಲಿಂದ ಗುಡಿಗೆ ಬಂದೆವು.
**ಶಂಭು**: ನೀವೆಲ್ಲ ಮನೆಗೆ ಹೋಗಿ ನಾವು ಬೇರೆ ಕಡೆ ಹೋಗಿ ಬರುತ್ತೇವೆ.
ನನ್ನಾಕೆ ಮತ್ತು ಹೆಣ್ಣುಮಕ್ಕಳೆಲ್ಲ ಅಂಗರಕ್ಷಕರೊಡನೆ ಹೊರಟು ಹೋದರು.
**ಕೆಂಪರಾಜ:** ಅಣ್ಣಾ ಮೋನಣ್ಣ ಮತ್ತಿತರರು ಬರುತ್ತಿದ್ದಾರೆ.
**ಶಂಭು:** ಸರಿ ಒಳ್ಳೆಯದಾಯಿತು ಅವರೂ ನಮ್ಮ ಜೊತೆ ಬರಲಿ. ಅವರಿಗೆ ನಾನೇ ಇಲ್ಲಿಗೆ ಬರಲು ತಿಳಿಸಿದ್ದೆ.
ಅಲ್ಲಿ ಬಂದವರು ಶ್ರೀಶೈಲಪ್ಪ, ಮೋನಣ್ಣ ಮತ್ತು ಕಾಡಿನ ದೊರೆ. ಅವರೆಲ್ಲ ನನಗೆ ಮತ್ತು ಆಡಳಿತಗಾರರಿಗೆ ಶರಣು ಹೇಳಿದರು.
**ಗುರುವ:** ನನಗೆ ಆಶ್ಚರ್ಯ ಇವರ ಪರಿಚಯವಿದೆಯೇ.
**ಶಂಭು:** ಕೆಂಪರಾಜನಿಗೆ ಹೇಳಿ ಇಲ್ಲಿಗೆ ಬರಲು ತಿಳಿಸಿದ್ದೆ.
**ಗುರುವ:** ಕೆಂಪರಾಜ ನನ್ನ ಜೊತೆಗೇ ಇದ್ದ. ಅದು ಹೇಗೆ ಇವರಿಗೆ ಸುದ್ದಿ ಮುಟ್ಟಿಸಿದ.
**ಶ್ರೀಶೈಲಪ್ಪ:** ನೀವು ಖರೋಸಾ ಕಾಡಿನ ಆಡಳಿತಗಾರ ಎನ್ನುವದನ್ನು ಮರೆತಿದ್ವೀರಿ. ಅವರೆಲ್ಲ ನಿಮ್ಮ ಸುತ್ತ ರಕ್ಷಾಕವಚ ರಚಿಸಿದ್ದಾರೆ. ಕೂಗಳತೆಗೊಬ್ಬ ಕೂಗು ಯೋಧನಿದ್ದಾನೆ. ಅವರು ನಮಗೆ ಗೊತ್ತಾಗದಂತೆ ಪಕ್ಷಿ ಮತ್ತು ಪ್ರಾಣಿಗಳ ಭಾಷೆಯಲ್ಲಿ ಸಂಭಾಷಿಸುತ್ತಾರೆ. ನಿಮ್ಮ ಸುತ್ತ ಮುತ್ತ ನಡೆದ ಘಟನೆಗಳೆಲ್ಲ ಕಾಡ ದೊರೆಗೆ ಗೊತ್ತಾಗುತ್ತದೆ.
**ಗುರುವ:** ಸರಿ.

**ಶಂಭು:** ಎಲ್ಲರೂ ಕುಳಿತುಕೊಳ್ಳಿ. ಕೆಲವು ವಿಚಾರಕ್ಕೆ ನಿಮ್ಮ ಸಲಹೆ ಬೇಕು. ಮಹಾರಾಜ ಸೋಮೇಶ್ವರನ ಗುಪ್ತಚರರೆಲ್ಲ ಈ ಭಾಗದಲ್ಲಿ ಪಸರಿಸುತ್ತಿದ್ದಾರೆ. ಅವರ ಕಣ್ಣುತಪ್ಪಿಸಿ ವಚನಗಳನ್ನು ಸಾಗಿಸುವದು ತುಂಬಾ ಕಷ್ಟ.
**ಶ್ರೀಶೈಲಪ್ಪ:** ವಚನಗಳ ಕಟ್ಟುಗಳನ್ನು ಶರಣರು ಜೊತೆಗೆ ತರಲಾಗುವದಿಲ್ಲ. ವಚನಕಟ್ಟುಗಳು ಸಿಕ್ಕರೆ ತಲೆದಂಡ ಎನ್ನುವ ಆಜ್ಞೆ ಮಹಾರಾಜ ಜಾರಿಗೊಳಿಸಿದ್ದಾನೆ. ಅದಕ್ಕಾಗಿಯೇ ಮೊನ್ನೆ ಪಾಪ ಅಜ್ಜಿಯ ತಲೆ ಬೇರಾದದ್ದು. ಆದರೆ ಅಕೆಯ ಬಲಿ ಅಂದಿನ ವಿಜಯಕ್ಕೆ ಕಾರಣವಾಯಿತು. ಖರೋಸಾದಿಂದ ಇಲ್ಲಿಯವರೆಗೆ ಕಟ್ಟಿಗೆ ವ್ಯಾಪಾರ ಮಾಡುವ ಮಹಾರಾಜನ ಪರವಾನಿಗೆ ಆಡಳಿತಗಾರರಿಗೆ ಬಹಳ ವರ್ಷಗಳಿಂದ ಇದೆ. ವಚನಗಳನ್ನು ಕಟ್ಟಿಗೆ ಬಂಡಿಯಲ್ಲಿ ಇಲ್ಲಿಯವರೆಗೆ ತರಬಹುದು.
**ಶಂಭು:** ಕಲ್ಯಾಣದ ಗುಪ್ತಚರರು ಮತ್ತು ಯೋಧರು ಜಾಗೃತರಾದರೆ ಅವರ ಕಣ್ಣುತಪ್ಪಿಸಿ ವಚನದ ಕಟ್ಟುಗಳನ್ನು ತರುವದು ಕಷ್ಟ. ಅವರು ಬಂಡಿಯ ಅಂಗುಲ ಅಂಗುಲ ಪರೀಕ್ಷಿಸುತ್ತಾರೆ.
**ಮೋನಣ್ಣ:** ಒಂದು ನಿಮಿಷ ತಡೆಯಿರಿ ಬಂದೆ. ಹೊರಗೆ ಹೋಗಿ ಕುದುರೆಯ ಮೇಲಿದ್ದ ಕಟ್ಟಿಗೆ ತುಂಡು ತಂದು ಆಡಳಿತಗಾರರ ಕೈಗೆ ಕೊಟ್ಟ. ಅವರು ಅದನ್ನು ಪರೀಕ್ಷಿಸಿ ಜೋರಾಗಿ ನೆಲಕ್ಕೆ ಅಪ್ಪಳಿಸಿದರು.
**ಶಂಭು:** ಇದರಲ್ಲೇನಿದೆ. ಇದು ಖರೋಸಾ ಕಾಡಿನಲ್ಲಿರುವ ವಿಶೇಶ ಕಟ್ಟಿಗೆ ತುಂಡು. ವೀರಭದ್ರ ಜಾತ್ರೆಯಲ್ಲಿ ಅಗ್ನಿಗೆ ಅರ್ಪಿಸಲು ಬಹಳ ಬೇಡಿಕೆಯಲ್ಲಿರುವ ಕಟ್ಟಿಗೆ. ಇದು ಸಪೂರವಾಗಿದ್ದು ನಿಧಾನವಾಗಿ ಕೆಂಡವಾಗುತ್ತದೆ ಅಲ್ಲದೇ ಸುಡುವಾಗ ಮಧುರ ವಾಸನೆ ಬರುತ್ತದೆ.
ಆ ಕಟ್ಟಿಗೆಯನ್ನು ಮೋನಣ್ಣ ಕೈಯಲ್ಲಿ ಹಿಡಿದು ತಿರುಗಿಸಿದ ಅದು ಎರಡು ತುಂಡಾಗಿ ಅದರಿಂದ ವಚನಗಳ ಕಟ್ಟುಗಳು ಹೊರಬಂದವು.
**ಮೋನಣ್ಣ:** ಅಣ್ಣಾ ಇದು ಕಾಶ್ಮೀರದ ಕಲೆ. ಆಯುಧಗಳನ್ನು ಬಚ್ಚಿಡುವ ವಿಧಾನ. ಬೊಂತಾದೇವಿಯರು ನಮಗೆಲ್ಲ ಕಲಿಸಿಕೊಟ್ಟರು. ನಾವೆಲ್ಲ ವಚನಗಳನ್ನು ಇದೇ ರೀತಿಯಾಗಿ ಅಡಗಿಸಿಟ್ಟಿದ್ದೇವೆ.
ಇದರಷ್ಟೆ ವಚನ ಕಟ್ಟುಗಳಿಲ್ಲದ ಕಟ್ಟಿಗೆಯ ತುಂಡುಗಳಿವೆ.
ಆಡಳಿತಗಾರ ಯೋಚನೆಗಳಲ್ಲಿ ಮುಳುಗಿದ.
**ಶಂಭು:** ನಿಮ್ಮದು ತುಂಬಾ ಚನ್ನಾಗಿರುವ ಆಲೋಚನೆ. ಮುಂದಿನ ಹುಣ್ಣಿವೆಗೆ ಕುಡಚಿಯ ವೀರಭದ್ರೇಶ್ವರ ಜಾತ್ರೆ ಇದೆ. ಕುಡಚಿಯಲ್ಲಿ ನನ್ನ ಅಳಿಯ ಮಹೇಶ ಅಧಿಕಾರಿ. ಅವನಿಗೆ ಗಂಡುಮಗುವಾಗಿದೆ ಅದಕ್ಕಾಗಿ ಈ ವರ್ಷ ಜಾತ್ರೆಗೆ ಬೇಕಾದ ಕಟ್ಟಿಗೆ ಕೊಡುವ ಹರಕೆ ಹೊತ್ತಿದ್ದಾನೆ.
ಆ ಜಾತ್ರೆಗೆ ಮಹಾರಾಜರನ್ನೂ ಆಹ್ವಾನಿಸಿದ್ದಾನೆ. ಅಧಿಕಾರಿಗಳಿಂದ ಕಟ್ಟಿಗೆ ಒಯ್ಯಲು ಪರವಾನಿಗೆಯೂ ಸಿಕ್ಕಿದೆ. ನಾನು ಇಲ್ಲಿಂದ ಕಟ್ಟಿಗೆ ಕಳಿಸುವದಾಗಿ ಒಪ್ಪಿರುವೆ ಇದು ಎಲ್ಲರಿಗೂ ಗೊತ್ತಿರುವ ವಿಚಾರ.

**ಶ್ರೀಶೈಲಪ್ಪ**: ನಾವು ಖರೋಸಾದಿಂದ ಕಟ್ಟಿಗೆ ಇಲ್ಲಿಯವರೆಗೆ ಬಂಡಿಯಲ್ಲಿ ತಂದು ತಲುಪಿಸುವೆವು. ಇಲ್ಲಿಂದ ಕುಡಚಿಗೆ ಕಳಿಸಿಕೊಡುವ ವ್ಯವಸ್ಥೆ ಮಾಡಿ.
**ಮೋನಣ್ಣ:** ಅಲ್ಲಿ ಮುಖ್ಯವಾಗಿ ವಚನಗಳ ಕಟ್ಟಿರುವ ಕಟ್ಟಿಗೆಗಳನ್ನು ಮತ್ತು ಸಾದಾ ಕಟ್ಟಿಗೆಗಳನ್ನು ಬೇರೆ ಮಾಡುವ ಕೆಲಸವಾಗಬೇಕು.
**ಶ್ರೀಶೈಲಪ್ಪ:** ಆ ಕೆಲಸ ಮಾಡಲು ಬಂಡಿ ಹೊಡೆದುಕೊಂಡು ಬರುವವರಿಗೆ ತರಬೇತಿ ಕೊಟ್ಟು ಕಳಿಸುವ ವ್ಯವಸ್ಥೆ ಆಗಿದೆ. ಆದರೆ ಅಲ್ಲಿ ಕಟ್ಟಿಗೆ ಹಾಕುವ ಜಾಗೆ ಹೇಗಿದೆಯೋ ನೋಡಬೇಕು.
**ಶಂಭು:** ಈಗ ನಾವು ಅಲ್ಲಿಗೇ ಹೋಗಿ ದೇವರ ದರ್ಶನ ಮಾಡಿ ಬರೋಣ. ನೀವೆಲ್ಲ ನನ್ನ ಅಂಗರಕ್ಷಕರಾಗಿ ಅಲ್ಲಿಗೆ ಬನ್ನಿ.
**ಗುರುವ:** ತುಂಬಾ ಚನ್ನಾಗಿರುವ ಆಲೋಚನೆ.
ನಾವೆಲ್ಲ ಕುದುರೆ ಏರಿ ಹೊರಟೆವು. ಹೋಗುತ್ತ ಹೋಗುತ್ತ ನನ್ನ ಪಕ್ಕದಲ್ಲಿದ್ದ ಶಂಭು ನನ್ನೊಡನೆ ಮಾತಿಗಾರಂಭಿಸಿದ
**ಶಂಭು:** ಇಲ್ಲಿಂದ ಐದು - ಆರು ಯೋಜನ ದೂರ ಸಾಗಬೇಕು. ಇದು ಯೋಧರಿಗಾಗಿಯೆ ನಿರ್ಮಾಣವಾದ ಮಾರ್ಗ. ಯೋಜನೆ ದೂರದಲ್ಲಿ ಒಂದೊಂದು ಕುದುರೆ ಮೇಯಿಸಲು ವ್ಯವಸ್ಥೆ ಇದೆ. ಎರಡು ಯೋಜನೆಗಳ ಅಂತರದಲ್ಲಿ ಕೆರೆ ಹಾಗೂ ಮಂದಿರ ಮತ್ತು ಅಡಗುದಾಣಗಳಿವೆ ಇಲ್ಲಿ ಕುದುರೆಗಳನ್ನು ಬದಲಾಯಿಸಿಕೊಳ್ಳುವ ವ್ಯವಸ್ಥೆಯೂ ಇದೆ. ಇವು ಇರುವ ಸುಳಿವು ಸಾಮಾನ್ಯರಿಗೆ ಗೊತ್ತಾಗುವದಿಲ್ಲ ದಟ್ಟಡವಿಯಲ್ಲಿ ಸಾಗುವ ಮಾರ್ಗ ಸುರಕ್ಷಿತವಾಗಿದ್ದು ಯೋಧರು ಹದ್ದಿನ ಕಣ್ಣಿನಿಂದ ಕಾಯುತ್ತಾರೆ. ಮೊದಲಿಗೆ ಬಿಜ್ಜಳ ಕರ್ಹಾಡ - 4000 ಮತ್ತು ತರ್ದವಾಡಿ – 1000 ಭಾಗದ ಮಂಡಾಳಧೀಶ್ವರನಾಗಿದ್ದ. ಮಹತ್ವಕಾಂಕ್ಷಿಯಾಗಿದ್ದ ಈತ ಸುಮಾರು ಕ್ರಿ.ಶ. 1162 ವೇಳೆಗೆ ಇನ್ನೂ ಅನೇಕ ಪ್ರದೇಶಗಳನ್ನು ಆಕ್ರಮಿಸಿಕೊಂಡು ಚಾಲುಕ್ಯ ಅರಸರ ಅಸಮರ್ಥ ಆಳ್ವಿಕೆಯನ್ನು ಬದಿಗೊತ್ತಿ ಕಲ್ಯಾಣದಲ್ಲಿ ಅಧಿಕಾರವನ್ನು ಸ್ಥಾಪಿಸಿದನು. ತನ್ನನ್ನು ತಾನೇ ಶ್ರೀಪೃಥ್ವಿವಲ್ಲಭ ಮತ್ತು ಪರಮೇಶ್ವರ ಎಂದು ಘೋಷಿಸಿಕೊಂಡ. ಬಸವಣ್ಣನವರನ್ನು ನೂತನವಾಗಿ ಸ್ಥಾಪಿತವಾದ ಕಳಚೂರಿ ಆಳ್ವಿಕೆಯಲ್ಲಿ ಭಂಡಾರ ಅಥವಾ ರಾಜ್ಯದ ಆರ್ಥಿಕ ಆಡಳಿತದ ಮಂತ್ರಿಯನ್ನಾಗಿ ಸೇವೆಗೆ ಸೇರಿಸಿಕೊಂಡರು.
ತರ್ದವಾಡಿ - 1000 ನಾಡು ಕೃಷ್ಣಾ, ಮಲಪ್ರಭಾ, ಭೀಮಾ ಮತ್ತು ಮಂಜ್ರಾ ನದಿಗಳು ಹರಿಯುವ ಫಲವತ್ತಾದ ನಾಡು.
ಇಲ್ಲಿ ಅವನು ತನ್ನ ಪ್ರಭಲ ಪಡೆ ಕಟ್ಟುವದಲ್ಲದೆ ಅನೇಕ ಸುರಕ್ಷತಾ ಕ್ರಮಗಳನ್ನು ಕೈಕೊಂಡಿದ್ದಾನೆ. ಸಾಗುವ ಹಾದಿ ಇಕ್ಕಟ್ಟಾಗಿದ್ದು ಕುದುರೆ ಮಾತ್ರ ಸಾಗುವಷ್ಟು ದಾರಿ ಇದೆ. ರಾತ್ರಿಯಲ್ಲಿ ಇಲ್ಲಿ ನಡೆದು ಹೋಗುವದು ಅನಿವಾರ್ಯ. ಇಲ್ಲಿ ಶಾಂತವಾದ ವಾತಾವರಣದಲ್ಲಿ ಕುದುರೆ ಸದ್ದು ದೂರದವರೆಗೆ ಕೇಳಿಸುತ್ತದೆ. ಇಲ್ಲೆಲ್ಲ ನಾನು ನಿಯಮಿಸಿದ ಯೋಧರಿದ್ದರೂ ಮಹಾರಾಜರಿಗೆ ಆಪ್ತವಾಗಿರುವ

ಅನೇಕ ಗುಪ್ತಚರರಿದ್ದಾರೆ. ನಾನು, ಶಂಕರ ಮತ್ತು ನನ್ನ ಅಳಿಯ ಮಲ್ಲಣ್ಣ ಕೆಲವು ಭಾಗದ ಆಡಳಿತಗಾರರಾದೆವು. ನನ್ನ ತಂದೆ ಮತ್ತು ದೊಡ್ಡಪ್ಪ ಮಂಗಳವೇಢೆಯಲ್ಲಿ ಮಂತ್ರಿಗಳಾಗಿದ್ದವರು. ಅಣ್ಣ ಬಸವಣ್ಣ ಅವರ ಪ್ರಭಾವ ಬಳಿಸಿಕೊಳ್ಳದೇ ಕರಣಿಕರಾಗಿ ಕೆಲಸ ಆರಂಭಿಸಿದರು. ತಮ್ಮ ಪ್ರತಿಭೆಯಿಂದ ಬಿಜ್ಜಳ ದೊರೆಯ ಆಪ್ತ ಗೆಳೆಯರಾದರು ಮತ್ತು ಹಂತ ಹಂತವಾಗಿ ಬೆಳೆದು ಮಹಾಮಂತ್ರಿಯಾದರು.

ಮಾತನಾಡುತ್ತ ಮಾತನಾಡುತ್ತ ಒಂದು ಕೆರೆ ಬಂತು. ಅಲ್ಲಿ ಇಳಿದಾಗ ಯೊಧರು ಅಲ್ಲಿಗೆ ಬಂದು ಕುದುರೆ ನೀರು ಕುಡಿಸಲು ತೊಗೊಂಡು ಹೋದರು. ನಾವು ಅಲ್ಲಿ ವಿಶ್ರಮಿಸಿ ಮುಂದೆ ಸಾಗಿದೆವು. ಹೀಗೆ ಐದಾರು ತಂಗುದಾಣಗಳನ್ನು ದಾಟಿದೆವು. ಆದೇ ರೀತಿ ಸಾಗುತ್ತ ಸಾಯಂಕಾಲದ ಹೊತ್ತಿಗೆ ನದಿ ದಂಡೆಗೆ ಬಂದು ತಲುಪಿದೆವು.

ಗಮನಿಸಿ:

ಮೊದಲಿಗೆ ಈ ವಿವರಣೆ ನಿಮಗೆ ಅನಗತ್ಯ ಎನಿಸಿದರೂ. ವಚನ ರಕ್ಷಿಸುವಲ್ಲಿ ನನ್ನ ಕಲ್ಪನೆಯ ಒಂದು ಘಟನೆಯ ವಿವರಣೆ ಮಾಡಲು ಇದು ಅವಶ್ಯಕ.

ನಾನು ಸಣ್ಣವನಾಗಿದ್ದಾಗ ಮದುವೆಗೆ ಹೋಗುವ ಸಂಭ್ರಮ ವರ್ಣನೆಗೆ ನಿಲುಕದ್ದು. ಆಗೆಲ್ಲ ಬಂಡಿಯೇ ಸಾರಿಗೆ ಸಾಧನೆ. ಮದುವೆಗೆ ಎಷ್ಟು ಬಂಡಿಗಳು ಬರುತ್ತವೆ ಅನ್ನುವದೇ ಮದುವೆ ಮಾಡುವವರ ಯೋಗ್ಯತೆಯ ಮಾನದಂಡ. ಮದುವೆಗೆ ಬರಲು ರಾತ್ರಿಯೆಲ್ಲ ಕರೆಯುವದು ಯುವಕರ ಕೆಲಸ. ತಮ್ಮ ಬಂಡಿಯ ಸಿಂಗಾರ ಮತ್ತು ಅದಕ್ಕೆ ಸುಂದರವಾದ ಬಟ್ಟೆ ಹೊದಿಕೆ (ಕೊಲ್ಲಾರ್ ಬಂಡಿ) ಹೊದಿಸುವದು ಮತ್ತು ಎತ್ತುಗಳ ಸಿಂಗಾರ ಮಾಡುವದು ಮದುವೆಗೆ ಒಂದು ವಾರವಿರುವಾಗಲೇ ಪ್ರಾರಂಭವಾಗುತ್ತಿತ್ತು. ಬಂಡಿಯ ಮೇಲೆ ಮೇಲೆ ಮೇವು ಹಾಕಿ ಅದರಮೇಲೆ ಗುಡಾರ ಹಾಕಿ ಹೆಣ್ಣು ಮಕ್ಕಳು ಮತ್ತು ಮಕ್ಕಳಿಗೆ ಸುಖಾಸನ ನಿರ್ಮಿಸಿ ಬಂಡಿಯಲ್ಲಿ ಹೋಗುವಾಗ ಧಕ್ಕಡಿ ಆಗದಂತೆ ಮಾಡುತ್ತಿದ್ದರು. ಬಂಡಿಗಳು ಯೋಗ್ಯತೆಯ ಪ್ರದರ್ಶನದ ಒಂದು ಭಾಗ.

ಬೆಳ್ಳಿಚಿಕ್ಕಿ ಮೂಡುವ ಹೊತ್ತಿನಲ್ಲಿ ಊರಮುಂದೆ ಬಂಡಿಸಾಲು ಅವುಗಳಲ್ಲಿ ಅಪರೂಪಕ್ಕೆ ಹೊರತೆಗೆದ ತಮ್ಮ ಮದುವೆ ಸೀರೆ ಉಟ್ಟು ಮೈತುಂಬ ಆಭರಣ ಹಾಕಿ ನಮ್ಮಪ್ಪ ಕೊಟ್ಟಿದ್ದು ಎಂದು ಹೇಳುತ್ತ ಎಲ್ಲರಿಗೂ ತೋರಿಸುತ್ತ ಬಂಡಿಯೇರುವ ಹೆಣ್ಣುಮಕ್ಕಳು, ಜಾಗಸಿಕ್ಕಲ್ಲೆಲ್ಲ ನಿದ್ದೆಗಣ್ಣಲ್ಲಿ ಬೆಚ್ಚಗೆ ಮಲಗುವ ನನ್ನಂತಹ ಚೀಪುಗಲ್ಲುಗಳು. ನಿಧಾನವಾಗಿ ಬಂಡಿ ಓಡಿಸಿ ಎಂದು ಬುದ್ದಿ ಹೇಳುವ ಮುದುಕ ಮುದಕಿಯರು. ಅಗಲೇ ಗಡಚಿಕ್ಕುವ ಬೆಂಡು ಬಾಜಿಯವರ ಹಿಂದೆ ಕೆಂಪು ಶಾಲು ಹೊದ್ದುಕೊಂಡು ಬರುವ ಕನ್ಯಾಮಣಿ ಮತ್ತು ಮನೆಯವರು, ಬೀಗರು. ಎಲ್ಲ ಬಂಡಿ ಹತ್ತಿದ ಮೇಲೆ ಹೊರಡುವ ಮನೆದೇವರ ಘೋಷಣೆ. ಊರು ದಾಟುತ್ತಲೇ ಬಂಡಿಗಳನ್ನು ಓಡಿಸುವ ಸ್ಪರ್ಧೆ ಪ್ರಾರಂಭ. ಮೆತ್ತಗೇ

ಮೇವಿನ ಮೇಲೆ ಗುಡಾರ ಹಾಕಿದ್ದರೂ ಬಂಡಿ ಎತ್ತಿ ಒಗೆದಾಗ ಮುಳ್ಳುಗಳು ಚುಚ್ಚಿದ ಅನುಭವ. ಒಂದು ಕೈಯಿಂದ ಬಂಡಿಯನ್ನು ಇನ್ನೊಂದು ಕೈಯಲ್ಲಿ ನಮ್ಮನ್ನು ಹಿಡಿದು ನಾವು ಹಾರಿ ಬೀಳದಂತೆ ಮಾಡುತ್ತಿದ್ದ ಅಕ್ಕಂದಿರ ಕಾಳಜಿ ಮರೆಯಲಾಗುತ್ತದೇಯೇ?. ಬಂಡಿ ಹೊಡೆಯುತ್ತಿದ್ದ ತನ್ನ ಗಂಡನನ್ನು ಓರೆಗಣ್ಣಲ್ಲಿ ನೋಡಿ ಹೆಮ್ಮೆ ಪಟ್ಟು ಅವರಿಗೆ ನಿಧಾನವಾಗಿ ಬಂಡಿ ಹೊಡಿಯುವಂತೆ ಹೇಳು ಎಂದು ಊರಿಗೇ ಕೇಳುವಂತೆ ಹೇಳುವ ನಮ್ಮತ್ತಿಯೆಯ ಮಾತು ಬಂಡಿಯ ವೇಗ ಹೆಚ್ಚಾಗುವಂತೆ ಮಾಡುತ್ತಿತ್ತು. ಸ್ವಲ್ಪ ಬಿಸಿಲು ಏರುತ್ತಿರುವಂತೆ ಬಂಡಿಗಳ ವೇಗ ಕಡಿಮೆಯಾಗಿ ಒಂದು ಕೆರೆಯ ದಂಡೆಯ ಮೇಲೆ ಇದ್ದ ಗುಡಿಯ ಬಯಲಿನಲ್ಲಿ ಬಂದು ನಿಂತವು. ಇದು ಎಲ್ಲರಿಗೂ ಮೊದಲೇ ಗೊತ್ತಿರುತ್ತಿತ್ತೇನೋ. ಬೇಗ ಬನ್ನಿ ಎನ್ನುವ ಹಿರಿಯರ ಮಾತು ಬರುವ ಮೊದಲೇ ಯುವಕರೆಲ್ಲ ಕೆರೆಯಲ್ಲಿ ಈಜು ಬಿದ್ದಾಗಿತ್ತು. ಬೇಗ ಎದ್ದು ಬಂದವರಿಗೆ ಮುಂಜಾನೆ ಕ್ರಿಯೆ ಮುಗಿಸಲು ನೆರವಾಗಿತ್ತು. ನಾವಂತೂ ನಮ್ಮಜ್ಜ ಕಣ್ಗಾವಲಿನಲ್ಲಿ ಕೆರೆಯ ದಂಡೆಯ ನೀರಿನಲ್ಲಿ ನೆನೆದು ಹೊರಬಂದು ಚೀಲದಿಂದ ಹೊಸಬಟ್ಟೆ ಉಟ್ಟುಕೊಂಡೆವು. ಯುವಕರೆಲ್ಲ ಹೊಸ ಬಣ್ಣದ ಬಟ್ಟೆ ಹಾಕಿ ತಲೆಯ ಮೇಲೆ ರೇಶ್ಮೆ ರುಮಾಲು ಸುತ್ತಿ ಬಂದಾಗ ನ್ಯಾರಿ ತಯಾರಿಯಾಗಿತ್ತು. ಎಲೆಯಲ್ಲಿ ಚುರಮರಿ ಖಾರ, ರವಾಉಂಡಿ ಮತ್ತು ಕರಚಿಕಾಯಿ ತಿನ್ನುವ ಸಂಭ್ರಮದಲ್ಲಿದ್ದ ನಮಗೆ ಬೀಗರ ಮನ್ಯಾಗ ಏನ ತಿನ್ನುವವರು ಎಂದಾಗಲೇ ಎಲೆ ಸುತ್ತಿ ಒಗೆದು ನೀರು ಕುಡಿದು ಬಂಡಿ ಏರಿದ್ದು. ಮದುವೆ ಮುಗಿಸಿಕೊಂಡು ಮರಳಿ ಬರುವಾಗ ಬೀಗರು ಹಾಕಿದ ಬಂಗಾರ, ಬಟ್ಟೆ ಮತ್ತು ಊಟದ ವಿವರಣೆ ಅಕ್ಕಂದಿರು ಮಾಡುತ್ತಿದ್ದರೆ ನಾವೆಲ್ಲ ನಿದ್ದೆಗೆ ಜಾರುತ್ತಿದ್ದೆವು.ಈಗ ನೀವು ಹನ್ನೆರಡನೆಯ ಶತಮಾನದಲ್ಲಿ ಆದಳಿತಗಾರನ ಸಂಬಂಧಿಗಳ ಮದುವೆ ಸಮಾರಂಭಕ್ಕೆ ಹೊರಟ ಬಂಡಿಗಳ ಮೆರವಣಿಗೆ ಮನದಲ್ಲಿ ಊಹಿಸಿಕೊಳ್ಳಿ.

**ಗುರುವ:** ಇದು ಯಾವ ನದಿ?
**ಶಂಭು:** ಕೃಷ್ಣಾ ನದಿ.
**ಗುರುವ:** ಕೂಡಲಸಂಗಮದಿಂದ ಹೊರಡುವಾಗ ಕೃಷ್ಣಾ ನದಿ ಮತ್ತು ಮಲಪಹಾರಿ ನದಿ ಸಂಗಮವಾಗುವ ಜಾಗದಲ್ಲಿ ಮೊಳಕಾಲ ಮುಳುಗುವಷ್ಟು ನೀರಿತ್ತು. ಈಗ ಕೃಷ್ಣಾ ಇಲ್ಲಿ ಮೈದುಂಬಿ ಹರಿಯುತ್ತಿದ್ದಾಳೆ. ಆ ದಂಡೆ ಕಾಣದಷ್ಟು ನೀರು. ಇದನ್ನು ದಾಟುವದು ಹೇಗೆ?
**ಶಂಭು:**ಈಗಂತೂ ಸಮಸ್ಯೆಯಿಲ್ಲ. ನಮಗಾಗಿ ಹರಗೋಲು. ಕಾಯುತ್ತಿದೆ. ಜಾತ್ರೆಯ ಸಮಯದಲ್ಲಿ ಇಲ್ಲಿ ಹರಿಗೋಲ, ತೆಪ್ಪಗಳ ಮೂಲಕ ಜನರನ್ನ ಸಾಗಿಸುತ್ತಾರೆ. ಆ ದಂಡೆಯಲ್ಲಿ ಯೋಧರು ಮತ್ತು ಆಡಳಿತಗಾರರ ಅಳಿಯ ದಾರಿ ಕಾಯುತ್ತಿದ್ದರು. ಆದರದಿಂದ ನಮ್ಮೆಲ್ಲರನ್ನು ತಮ್ಮ ವಾಡೆಗೆ ಕರೆದುಕೊಂಡು ಹೋಗಿ ಉಪಚಾರ ಮಾಡಿದರು. ಅಳಿಯ ಮಲ್ಲಣ್ಣ ಮತ್ತು ಮಗಳು ರೂಪವತಿ ಪರಿಚಯ ಮಾಡಿಕೊಟ್ಟರು.

**ಶಂಭು:** ನಾವು ಗಡಿಬಿಡಿಯಲ್ಲಿರುವೆ. ದೇವರ ಅಗ್ನಿಕುಂಡಕ್ಕಾಗಿ ಕಟ್ಟಿಗೆ ವ್ಯವಸ್ಥೆ ಮಾಡಿರುವೆ. ಕಟ್ಟಿಗೆಯನ್ನು ಎಲ್ಲಿ ಇಡಬೇಕು ಮತ್ತು ಈ ಸಲ ಜಾತ್ರೆಗೆ ನಮ್ಮಲ್ಲಿಂದ ಬಹಳ ಜನ ಬರುತ್ತಾರೆ ಅವರಿಗೆಲ್ಲಿ ವ್ಯವಸ್ಥೆ ಮಾಡಬೇಕು ವಿಚಾರಿಸಲು ಬಂದೆ.
**ಮಲ್ಲಣ್ಣ:** ಅಲ್ಲಿ ಇಲ್ಲಿ ಏಕೆ ನಮ್ಮ ಮನೆಯಲ್ಲಿಯೇ ಎಲ್ಲ ವ್ಯವಸ್ಥೆ ಮಾಡಬಹುದು ಜಾಗೆ ತೋರಿಸುತ್ತೇನೆ ಬನ್ನಿ.
ಅವರ ಮನೆಯಲ್ಲಿ ನೂರಾರು ಎತ್ತುಗಳನ್ನು ಕಟ್ಟಬಹುದಾದ ಗೋದಲಿ ಅದರ ಮುಂದೆ ನೂರಾರು ಬಂಡಿ ಬಿಡಬಹುದಾದಷ್ಟು ಬಯಲು ಇತ್ತು. ಸುತ್ತಲೂ ಭದ್ರವಾದ ಎತ್ತರವಾದ ಗೋಡೆ.
**ಮಲ್ಲಣ್ಣ:** ಕಟ್ಟಿಗೆ ಬಂಡಿಗಳು ಇಲ್ಲಿಯೇ ಬಂದು ಒಂದು ದಿನ ಇರಲಿ. ರಾತ್ರಿ ಮೆರವಣಿಗೆಯಲ್ಲಿ ಇಲ್ಲಿಂದ ಗುಡಿಗೆ ಹೋದರಾಯ್ತು. ಇನ್ನು ಬರುವ ಬೀಗರಿಗೆ ಈ ಮನೆಯಲ್ಲಿ ಎಲ್ಲ ವ್ಯವಸ್ಥೆ ಮಾಡಿಸುತ್ತೇನೆ. ಎಷ್ಟು ಜನ ಬಂದರೂ ಅಡ್ಡಿಯಿಲ್ಲ. ಸಮಸ್ಯೆಯಿರುವದು ಹೊಳೆ ದಾಟುವದು. ಅದಕ್ಕಾಗಿ ಏನು ಉಪಾಯ ಮಾಡಬೇಕು ಯೋಚಿಸುತ್ತಿರುವೆ.
**ಶಂಭು:** ಈ ಮೊದಲೇ ವಿಚಾರಿಸಿದಂತೆ ಒಂದು ತೂಗುಸೇತುವೆ ನಿರ್ಮಿಸಲು ಜನ ಕಳಿಸಿಕೊಡುತ್ತೇನೆ.
ಆಡಳಿತಗಾರರ ಜತೆಗೆ ನಾವು ನಾಲ್ವರನ್ನು ಒಳಗೆ ಊಟಕ್ಕೆ ಕರೆದುಕೊಂಡುಹೋದರು.
**ಮಲ್ಲಣ್ಣ:** ಜಾತ್ರೆಯ ನಂತರ ನನ್ನ ಧಾರವಾಡದ ಅಕ್ಕನ ಮಗಳ ಮದುವೆ ಕಾರ್ಯಕ್ಕೆ ಹೊರಡಬೇಕು. ವರ ಇದೇ ಊರಿನವ. ಅದಕ್ಕ ಎಲ್ಲರನ್ನೂ ಕರಿಲಾಕ ನಾನು ಆಕೆ ಬರುವ ಸೋಮವಾರ ನಿಮ್ಮಲ್ಲಿಗೆ ಬಂದು ಅಲ್ಲಿಂದ ಕಲ್ಯಾಣಕ್ಕೆ ಹೋಗಿ ಎಲ್ಲರನ್ನೂ ಕರೆದು ಬರವ ವಿಚಾರ ಮಾಡಿರುವೆ. ನದಿ ತುಂಬಿ ಹರಿಯುತ್ತಿದ್ದುದರಿಂದ ಕಲ್ಯಾಣದ ಸಮಾಚಾರ ಗೊತ್ತಾಗಲೇ ಇಲ್ಲ. ನದಿ ತುಂಬಿ ಹರಿಯುವಾಗ ಆ ಕಡೆ ಹೋಗುವದು ತುಂಬಾ ಕಷ್ಟ. ಹಲವು ದಿನಗಳ ಹಿಂದೆ ಗಡಿಯಲ್ಲಿದ್ದ ಯೋಧರ ದೊಡ್ಡ ತುಕಡಿಯನ್ನು ಕಲ್ಯಾಣಕ್ಕೆ ಕರೆಸಿಕೊಂಡದ್ದೇಕೆ ಗೊತ್ತಾಗಲಿಲ್ಲ. ಅಂತಹ ಬಲಿಷ್ಟ ತುಕಡಿಯ ಅವಶ್ಯಕತೆ ಅಲ್ಲೇನಿತ್ತು?
**ಶಂಭು:** ಸರಿ ಎಲ್ಲ ವಿಷಯ ತಿಳಿಸುತ್ತೇನೆ ರೂಪಾಳೂ ಬರಲಿ. ಕೆಲಸದವರಾರೂ ಇಲ್ಲಿ ಇರುವದು ಬೇಡ, ಊಟ ಮಾಡುತ್ತ ಮಾತನಾಡುವ.
ರೂಪ ಬಂದು ಎಲ್ಲರಿಗೂ ಊಟಕ್ಕೆ ಬಡಿಸಿದಳು
**ರೂಪಕ್ಕ:** ಇವರೆಲ್ಲರ ಪರಿಚಯವಾಗಲಿಲ್ಲ. ಇವರು ನಿನ್ನ ಅಂಗರಕ್ಷಕರಲ್ಲ ಎನ್ನುವದು ಅವರನ್ನು ನೋಡಿದಾಗಲೇ ಗೊತ್ತಾಯಿತು.
**ಶಂಭು:** ಹೌದು ಮಗಳೇ ಇವರು ಕಲ್ಯಾಣದಿಂದ ಬಂದವರು. ಕಲ್ಯಾಣದಲ್ಲಿ ಚಿತ್ರ ವಿಚಿತ್ರ ಊಹಿಸಲಸಾಧ್ಯವಾದ ಘಟನೆಗಳು ನಡೆದಿವೆ.
**ಮಲ್ಲಣ್ಣ:** ಯೋಧರನ್ನು ಗಡಿಭಾಗದಿಂದ ಕಲ್ಯಾಣಕ್ಕೆ ಕರೆಸಿಕೊಂಡಾಗಲೇ ಯುವರಾಜ ತನ್ನ ತಂದೆಯ ವಿರುದ್ಧ ಏನೋ ಸಂಚು ರೂಪಿಸಿದ್ದಾನೆ ಎನ್ನಿಸಿತ್ತು.

**ಶಂಭು:** ಅದು ಯುವರಾಜ ಮತ್ತು ಅವರ ತಂದೆ ಜೊತೆಗೂಡಿ ಶರಣರ ವಿರುದ್ಧ ರೂಪಿಸಿದ ಸಂಚು.
**ಮಲ್ಲಣ್ಣ:** ಅದು ಹೇಗೆ ಸಾಧ್ಯ. ಬಿಜ್ಜಳ ಮಹಾರಾಜರು ಅಣ್ಣ ಬಸವಣ್ಣನವರು ತನ್ನ ಆತ್ಮೀಯ ಗೆಳೆಯ ಮತ್ತು ಅವರ ತತ್ವಗಳು ಎಲ್ಲರನ್ನೂ ಸುಧಾರಿಸುತ್ತವೆ ಎನ್ನುತ್ತಿದ್ದರು. ಈ ವರ್ಷವಂತೂ ರಾಜ್ಯವನ್ನು ಬರಗಾಲದಿಂದ ಬಸವಣ್ಣ ಪಾರುಮಾಡಿದ ಎಂದಿಗಿಂತಲೂ ಹೆಚ್ಚಿನ ಕರ ಬಂದಿದೆ ಎಂದು ಹೊಗಳುತ್ತಿದ್ದರು.
**ಶಂಭು:**ಅದೆಲ್ಲ ನಿಜ. ತನ್ನ ಅಧಿಕಾರ ಲಾಲಸೆಗಾಗಿ ತನ್ನ ಭಾಂಧವರನ್ನೇ ಬಲಿಕೊಟ್ಟ ಅವರಿಗೆ ಬಸವಣ್ಣ ಯಾವ ಲೆಕ್ಕ. ತಮ್ಮ ಅಧಿಕಾರ ಉಳಿಸಿಕೊಳ್ಳಲು ಯಾವ ಕೆಲಸ ಮಾಡಲು ಹಿಂದೆ ಮುಂದೆ ನೋಡುವದಿಲ್ಲ.
**ರೂಪಕ್ಕ:** ಅಣ್ಣ ಬಸವಣ್ಣನವರು, ಅಕ್ಕ ನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ ಮತ್ತು ಚನ್ನ ಕ್ಷೇಮವಾಗಿದ್ದಾರ? ಏನಾಯಿತು ಬೇಗ ಹೇಳಿ.
**ಶಂಭು:** ಮಹಾರಾಜ ಬಿಜ್ಜಳ ಕ್ಷೇತ್ರದರ್ಶನಕ್ಕೆ ಹೋಗಿದ್ದರೂ ಅವರ ಕೊಲೆಯಾಗಿದೆ ಎಂದು ನಂಬಿಸಿದ್ದಷ್ಟೇ ಅಲ್ಲ ಅದಕ್ಕೆ ಶರಣರೇ ಕಾರಣ ಎಂದು ಅಪವಾದ ಹೊರೆಸಿ ಅನೇಕ ಶರಣರ ಹತ್ಯೆಮಾಡಿಯಾಗಿದೆ. ಈ ಗುರುವ ಕಾಡಿನ ಆಡಳಿತಗಾರನಾಗಿ ನಿಯಮಿಸ್ಪಟ್ಟವನು ಮತ್ತು ಆ ಕಾಡಿನ ದೊರೆ ಜೊತೆಯಾಗಿ ಇಲ್ಲಿಂದ ಬಂದ ಯೊಧರ ಪಡೆಯಿಂದ ಅಕ್ಕ ನಾಗಲಾಂಬಿಕೆ, ಗಂಗಾಂಬಿಕೆ ಮತ್ತು ಚನ್ನ ಸಹಿತ ಅನೇಕ ಶರಣರ ರಕ್ಷಣೆ ಮಾಡಿದ್ದಾರೆ.. ಈ ವಿರಭದ್ರಪ್ಪ ಮತ್ತು ಮೋನಣ್ಣ ವಚನಗಳನ್ನು ರಕ್ಷಿಸಿದ್ದಾರೆ ಎಂದು ಸಂಕ್ಷಿಪ್ತವಾಗಿ ಎಲ್ಲ ವಿವರ ತಿಳಿಸಿದರು.
**ಮಲ್ಲಣ್ಣ**: ಅಣ್ಣ ಬಸವಣ್ಣನವರು ಮತ್ತು ನೀಲಾಂಬಿಕೆಯವರು ಎಲ್ಲಿದ್ದಾರೆ.
**ಶಂಭು:**ಗೊತ್ತಿಲ್ಲ ಕೂಡಲಸಂಗಮದ ಕಡೆಗೆ ಹೋಗಿದ್ದಾರೆ ಎನ್ನುವ ವದಂತಿ ಇದೆ. ಮಲ್ಲಣ್ಣ ಮತ್ತು ರೂಪಾ ಇಬ್ಬರ ಕಣ್ಣಲ್ಲಿ ನೀರು ತಂದು ನಮಗೆಲ್ಲ ಇಬ್ಬರು ಜೊತೆಯಾಗಿ ನಮಸ್ಕಾರ ಮಾಡಿ "ನೀವು ನಾಡಿಗೆ ದೊಡ್ಡ ಉಪಕಾರ ಮಾಡಿದಿರಿ". ಆಡಳಿತಗಾರರು ಅವರನ್ನು ಸಂತೈಸಿ
**ಶಂಭು:** ಈಗ ಅಳುವದಕ್ಕೆ ಸಮಯವಿಲ್ಲ. ಇವರು ಮಾಡಿದ ಅಪೂರ್ಣ ಕೆಲಸ ನಾವೆಲ್ಲ ಜೊತೆಯಾಗಿ ಪೂರ್ಣ ಮಾಡಬೇಕಾಗಿದೆ.
**ಮಲ್ಲಣ್ಣ:** ಏನು ಮಾಡಬೇಕು ಹೇಳಿ ನನ್ನ ಪ್ರಾಣವನ್ನು ಒತ್ತೆಯಿಟ್ಟು ಸಹಾಯ ಮಾಡುವೆ. ಲಕ್ಷಾಂತರ ಶರಣರ ಪರಿಶ್ರಮದ ಫಲವಾಗಿ ಮೂಡಿಬಂದ ವಚನ ಸಾಹಿತ್ಯ ರಕ್ಷಿಸಲು ಏನು ಮಾಡಬೇಕು ಹೇಳಿ.
**ಶಂಭು:** ಆ ವಚನಗಳು ಕಟ್ಟಿಗೆಯ ಜೊತೆಗೆ ನಿಮ್ಮ ಮನೆಗೆ ಬರುತ್ತವೆ. ಅವು ಬರುವಾಗ ಕಲ್ಯಾಣಕ್ಕೆ ಬದ್ದರಾದ ಯೋಧರಾಗಲೀ ಗುಪ್ತಚರರಾಗಲೀ ಇಲ್ಲಿರಬಾರದು. ಬಂಡಿಯ ಜೊತೆಗೆ ಬಂದವರು ಕೊಟ್ಟ ವಚನ ಕಟ್ಟುಗಳನ್ನು ನೀವು ಜೋಪಾನವಾಗಿಡಬೇಕು.

**ಮಲ್ಲಣ್ಣ:** ಈ ವಾಡೆಯಲ್ಲಿ ಅನೇಕ ರಹಸ್ಯ ಕೊಠಡಿಗಳಿವೆ ನೀವದರ ಬಗ್ಗೆ ಚಿಂತೆ ಮಾಡಬೇಡಿ. ನಾವೆಲ್ಲ ಎಲ್ಲಿಯು ಹೋಗದೆ ಅವುಗಳನ್ನು ಕಾಯುತ್ತೇವೆ.
**ಶಂಭು:** ಅವುಗಳನ್ನು ಕಾಯುವದಕ್ಕಿಂತ ಮುಖ್ಯವಾಗಿ ಧಾರವಾಡಕ್ಕೆ ಸಾಗಿಸಬೇಕಾಗಿದೆ.
**ರೂಪಕ್ಕ:** ಅಪ್ಪಾ ಅದರ ಚಿಂತಿ ಬಿಡಿ. ನಾವು ಮದುವೆಗೆ ಧಾರವಾಡಕ್ಕೆ ಹೋಗುವದು ಎಲ್ಲರಿಗೂ ಗೊತ್ತು. ನಾವು ಹೋಗುವ ಬಂಡಿಗಳಲ್ಲಿ ವಚನಗಳನ್ನು ಅಡಗಿಸಿಡುವ ವ್ಯವಸ್ಥೆ ಮಾಡುತ್ತೇವೆ. ಬಂಡಿಯಲ್ಲಿ ಸಾಕಷ್ಟು ಯೋಧರ ಮನೆಮಂದಿ ನಮ್ಮ ಜೊತೆ ಬರುತ್ತಾರೆ.
**ಶಂಭು:** ಮೋನಣ್ಣನಿಗೆ ನಾಲ್ಕೈದು ನಂಬಿಗಸ್ಥ ಸಹಾಯಕರನ್ನುಕೊಡಿ ಅವರು ಬಂಡಿಯಲ್ಲಿ ವಚನಗಳನ್ನು ಅಡಗಿಸಿಡಲು ಜಾಗೆ ಮಾಡುತ್ತಾರೆ.
**ರೂಪಕ್ಕ:** ಅಪ್ಪಾ ಶರಣರ ರಕ್ಷಣೆ ಹೇಗೆ ಮಾಡಬೇಕು ಎನ್ನುವದನ್ನು ಹೇಳಲಿಲ್ಲ.
**ಶಂಭು:** ಅದರ ಚಿಂತೆ ನಿಮಗೆ ಬೇಡ. ಅವರನ್ನು ರಕ್ಷಿಸಿಕೊಳ್ಳುವ ಉಪಾಯ ಅವರೇ ಮಾಡುತ್ತಾರೆ. ನೀವು ಹೊರಟ ಪ್ರತಿ ಬಂಡಿಯಲ್ಲಿ ಒಂದೆರಡು ಜಾಗ ಖಾಲಿ ಇರಲಿ. ದಾರಿಯಲ್ಲಿ ಕೈಮಾಡಿದ ಪ್ರಯಾಣಿಕರಿಗೆ ಯಾರು ಏನು ವಿಚಾರಿಸದೇ ಕರೆದುಕೊಂಡು ಹೋಗಿ. ಮೊನಣ್ಣ ಸೂಚಿಸುವವರು ಬಂಡಿ ಹೊಡೆಯಲಿ. ವರನ ಮೆರವಣಿಗೆ ಈ ಊರ ಗುಡಿಯ ಪೂಜೆಯ ನಂತರ ಪ್ರಾರಂಭವಾಗಲಿ. ನೀವು ಮಾಡುತ್ತಿರುವದು ತುಂಬಾ ಅಪಾಯದ ಕೆಲಸ. ಈಗಾಗಲೇ "ವಚನದ ಕಟ್ಟು ಸಿಕ್ಕವರ ತಲೆದಂಡ" ಎನ್ನುವ ರಾಜಾಜ್ಞೆಯಾಗಿದೆ. ಆ ಅಜ್ಞೆ ಇಲ್ಲಿಗೂ ತಲುಪುತ್ತದೆ. ರಾಜಕೀಯ ಪರಸ್ಥಿತಿ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ನಾವು ಮಹಾರಾಜನ ಅಜ್ಞೆಯನ್ನು ಪಾಲಿಸಲೇಬೇಕಾಗುತ್ತದೆ.
**ರೂಪಕ್ಕ:** ಶರಣರನ್ನು ಮತ್ತು ವಚನಗಳನ್ನು ರಕ್ಷಿಸುವಾಗ ಎಲ್ಲ ತ್ಯಾಗಕ್ಕೂ ನಾನು ಸಿದ್ಧ. ತಲೆದಂಡವಾದರೂ ಸರಿ ನಾನು ಈ ಕೆಲಸ ಮಾಡುತ್ತೇನೆ. ನಿಮ್ಮ ಅಥವಾ ನಮ್ಮವರ ಅಜ್ಞೆಯನ್ನೂ ನಾನು ಪಾಲಿಸುವದಿಲ್ಲ.
**ಶಂಭು:** ಈಗ ನನಗೆ ಸಮಾಧಾನವಾಯಿತು. ನಮ್ಮಿಂದಾಗದಿದ್ದರೂ ಸರಿ ನಿಮ್ಮಂತಹ ತಾಯಂದಿರು ಮನಸ್ಸು ಮಾಡಿದರೆ ವಚನಗಳ ರಕ್ಷಣೆಯೂ ಆಗುತ್ತದೆ ಅಷ್ಟೇ ಅಲ್ಲ ಪಾಲನೆಯೂ ಆಗುತ್ತದೆ.
ಮಾತನಾಡುತ್ತ ಊಟಮಾಡುವ ಶಾಸ್ತ್ರ ಮುಗಿಸಿದೆವು. ಆತಂಕ ಎಲ್ಲರ ಮನ ತುಂಬಿತ್ತು.
**ಶಂಭು:**ನಾವೀಗಲೇ ಹೊರಡುತ್ತೇವೆ. ರಾತ್ರಿಯಲ್ಲಿ ಶರಣರು ಬರುವಾಗ ಆಗುವ ತೊಂದರೆಗಳೇನು ಮತ್ತು ಅವುಗಳ ನಿವಾರಣೆ ಹೇಗೆ ಎನ್ನುವದನ್ನು ಅರಿಯಬೇಕಾಗಿದೆ. ಮಲ್ಲಣ್ಣ ಮತ್ತು ನನಗೆಲ್ಲ ನಮಸ್ಕರಿಸಿ ಆಶೀರ್ವಾದ ಕೋರಿದರು. ಅವರ ಅತ್ಮವಿಶ್ವಾಸ ನೋಡಿ ವಚನಗಳ ರಕ್ಷಣೆ ಅಗುತ್ತದೆ ಎನ್ನುವ ನಂಬಿಕೆ ಮೂಡಿತು. ನಾವು ಹಿಂಬಾಗಿಲಿನಿಂದ ಹೊರಬಂದಾಗ ನಮ್ಮನ್ನೆಲ್ಲ ಗುರುತಿಸಲಾಗುತ್ತಿರಲಿಲ್ಲ.

ಹನ್ನೆರಡನೆಯ ಶತಮಾನದಲ್ಲಿದ್ದ ದಟ್ಟಕಾಡುಗಳಲ್ಲಿ ಸಂಚರಿಸುವಾಗ ಆಗಬಹುದಾದ ತೊಂದರೆಗಳ ವಿವರ ಈ ಕನಸಿನ ಭಾಗದಲ್ಲಿದೆ.

**ಕೋಣನ ಹೇರಿಂಗೆ ಕುನ್ನಿ ಬಸುಕುತ್ತಬಡುವಂತೆ ತಾವೂ ನಂಬರು,**

**ನಂಬುವರನೂ ನಂಬಲೀಯರು,**

**ತಾವೂ ಮಾಡರು, ಮಾಡುವರನೂ ಮಾಡಲೀಯರು.**

**ಮಾಡುವ ಭಕ್ತರ ಕಂಡು ಸೈರಿಸಲಾರದವರ, ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ**

**ಕೂಡಲಸಂಗಮದೇವ**----- ಅಣ್ಣಾ ಬಸವಣ್ಣಾ

ನದಿ ದಾಟಿದ ಕೂಡಲೇ ದಟ್ಟವಾದ ಕಾಡು ಪ್ರಾರಂಭವಾಯಿತು. ಕಾಡಿನಲ್ಲಿ ಕೆಲವು ದಿನ ಇದ್ದವನಾದರೂ ಕಾಡಿನಲ್ಲಿ ನಡೆದಾಡಿದ್ದು ಪ್ರಥಮ ಅನುಭವ. ಕಾಲಿಗೆಲ್ಲ ತಪ್ಪಲು ರಸ ಲೇಪಿಸಿಕೊಳ್ಳಲು ಮತ್ತು ಸೊಂಟಕ್ಕೆ ಒಂದು ಬಳ್ಳಿ ಸುತ್ತಿಕೊಳ್ಳಲು ದೊರೆ ಕೊಟ್ಟ. ಯಾಕೆ ಎನ್ನುವ ಪ್ರಶ್ನೆಗೆ ಕಾಲಿಗೆ ಮುಳ್ಳು ಚುಚ್ಚಿದಾಗ ನೋವು ಕಡಿಮೆ ಎನಿಸುತ್ತದೆ ಮತ್ತು ರಕ್ತಸ್ರಾವ ಕಡಿಮೆಯಾಗುತ್ತದೆ ಮತ್ತು ಹುಳ ಹುಪ್ಪಡಿ ದೂರ ಹೋಗುತ್ತವೆ ಎಂದ. ಆದರೆ ಕತ್ತಲೆಯಲ್ಲಿ ಕಾಲೆಲ್ಲಿಡಬೇಕು ತಿಳಿಯುತ್ತಿರಲಿಲ್ಲ. ದೊರೆ ಕಿಸೆಯಲ್ಲಿಂದ ಒಂದು ಪೊಟ್ಟಣ ತೆಗೆದ ಅದರಿಂದ ಬೆಳಕು ಹೊಮ್ಮುತ್ತಿತ್ತು. ಇವು ಬೆಂಕಿ ಹುಳಗಳು. ಇವು ನಮಗೆ ದಾರಿ ತೊರಿಸುತ್ತವೆ ಎಂದು ಒಂದೆರಡು ಹುಳಗಳನ್ನು ನೆಲಕ್ಕೆ ಸಮೀಪ ಬಿಟ್ಟ. ನೆಲದಲ್ಲೇನಿದೆ ಕಾಣಿಸಿ ಕಾಲಿಡಲು ಅನುಕೂಲವಾಯಿತು.
ಅವುಗಳ ಸಹಾಯದಿಂದ ಮಂದೆ ಸಾಗತೊಡಗಿದ. ನಾವು ಅವನ ಹಿಂದೆ ಸಾಗಿದೆವು. ಇಲ್ಲಿ ಕಾಡುಪ್ರಾಣಿಗಳು ಇವೆ ಅವುಗಳಿಂದ ರಕ್ಷಣೆ ಪಡೆಯುವದು ಹೇಗೆ ಎಂದು ನಮ್ಮವರಿಗೆ ಗೊತ್ತು.
ಶರಣರು ಈ ಹಾದಿಯಲ್ಲಿ ಹಲವು ದಿನ ನಡೆಯಬೇಕು ಎಂದು ನೆನೆಸಿಕೊಂಡಾಗ ಮನಕ್ಕೆ ಬಹಳ ನೋವಾಯಿತು. ಅಕ್ಕನಾಗಮ್ಮ, ಗಂಗಾಂಬಿಕೆ, ಬೊಂತಾದೇವಿ ,.. ಎಲ್ಲರೂ ಹಿರಿಯರು ಅವರು ಈ ರೀತಿಯಾಗಿ ಇಪ್ಪತ್ತೈದು ಯೋಜನ ನಡೆಯಬೇಕು. ನೆನೆಸಿಕೊಂಡು ಮೈ ಜುಮ್ಮೆಂದಿತು.
**ಗುರುವ:** ಇದಕ್ಕಿಂತ ಒಳ್ಳೆಯ ಮಾರ್ಗವಿಲ್ಲವೇ?
**ಶಂಭು:** ಅನೇಕ ಮಾರ್ಗಗಳುಂಟು. ಆದರೆ ಶರಣರ ಗುರುತು ಬಹಳ ಜನಕ್ಕಿದೆ ಅವರನ್ನು ಯಾರು ನೋಡಿದರೂ ತೊಂದರೆ ಅದಕ್ಕಾಗಿ ರಾತ್ರಿಯಲ್ಲಿಯೇ ಈ ಮಾರ್ಗದಲ್ಲಿ ಸಂಚಾರ ಮಾಡುವದು ಒಳಿತು. ಈ ಮಾರ್ಗದ ಅನತಿ ದೂರದಲ್ಲಿ ನಮ್ಮ ಯೋಧರಿದ್ದು ಇಲ್ಲಿಗೆ ಯಾರೂ ಬರದಂತೆ ಕಾಯುತ್ತಾರೆ. ಅದರಲ್ಲೂ ಶರಣರನ್ನು ಹಿಡಿದುಕೊಟ್ಟವರಿಗೆ ಅಥವಾ ಕೊಂದು ಗುರುತು ಕೊಟ್ಟವರಿಗೆ ಮಹಾರಾಜ ಬಹುಮಾನ ಘೋಷಿಸಬಹುದು. ಸಾಮಾನ್ಯವಾಗಿ ದಂಡಿತರನ್ನು, ಕಳ್ಳಕಾಕರನ್ನು ಹುಡುಕುವ ಎಲ್ಲ ತಂತ್ರಗಳನ್ನು ಉಪಯೋಗಿಸುತ್ತಾನೆ. ಜನರನ್ನು

ಕೆರಳಿಸುವ ಯಾವುದಾದರೂ ಹೊಸ ತಂತ್ರವನ್ನು ಅವನು ಉಪಯೋಗಿಸಬಹುದು.

**ದೊರೆ:** ಖರೋಸಾ ಕೆರೆಯಲ್ಲಿ ಯೋಧರ ಹೆಣಗಳು ತೇಲಲಾರಂಭಿಸಿವೆ. ಕೆರೆಯ ಪಕ್ಕ ಕಲ್ಯಾಣದ ಅನೇಕ ಬಡಿಗರು, ಕಾಜು ಕೆಲಸಗಾರರು ಬಂದು ಡೇರಿ ಹಾಕಲಾರಂಭಿಸಿದ್ದಾರೆ. ಜೊತೆಗೆ ವಿಚಿತ್ರ ಸಂಗತಿಯೆಂದರೆ ಕಲ್ಯಾಣದ ಕಟುಕರು ತಮ್ಮ ಆಯುಧ ಸಮೇತ ಬಂದಿದ್ದಾರೆ.

**ಶಂಭು:** ಅರ್ಥವಾಗದ ವ್ಯವಹಾರ. ಹೊಸ ಸಂಚೇನೋ ಸಿದ್ಧವಾಗುತ್ತಿದೆ.

**ಶ್ರೀಶೈಲಪ್ಪ:** ಕಾಜಿನ ಪೆಟ್ಟಿಗೆ ಮಾಡಿ ಅದರಲ್ಲಿ ದ್ರಾವಣ ಹಾಕಿ ದೇಹ ಕೆಡದಂತೆ ಇಡುವ ಪದ್ಧತಿ ಹಲವು ದೇಶದಲ್ಲಿದೆ. ಇಲ್ಲಿಯ ಜನರಿಗೂ ಆ ವಿದ್ಯೆ ಗೊತ್ತು.

**ಶಂಭು:** ಇಷ್ಟೊಂದು ಯೋಧರ ದೇಹವನ್ನೇಕೆ ಕಾಯ್ದಿಡುತ್ತಾರೆ. ಸಾಮಾನ್ಯವಾಗಿ ಯುದ್ಧದ ನಂತರ ಸಾಮೂಹಿಕ ಗೌರವಪೂರಕವಾಗಿ ದಹನ ಸಂಸ್ಕಾರ ಮಾಡುವ ಪದ್ಧತಿ ಇಲ್ಲಿ ನಡೆದುಕೊಂಡು ಬಂದಿದೆ. ಆದರೆ ಇಲ್ಲಿ ಅವರ ದೇಹವನ್ನು ಕಾಯ್ದಿಡುವದೇಕೆ?

**ಗುರುವ:** ಅವರ ತಂದೆ ತಾಯಿ ಬಂಧು ಬಳಗ ನೋಡಲೆಂದು ಅವರ ಊರಿಗೆ ದೇಹ ಕಳಿಸುವ ತಯಾರಿ ನಡೆದಿದೆಯೇ?

**ಶಂಭು:** ಹಾಗೇ ಇರಬಹುದು. ಆದರೆ ಕಟುಕರನ್ನು ಕರೆಸಿದ್ದೇಕೆ?

**ಗುರುವ:** ಕಟುಕರ ಕೆಲಸ ಕಡಿಯುವದು. ಅದು ಕುರಿಯಾದರೇನು? ಕೋಣವಾದರೇನು? ಯೋಧರಾದರೇನು?

**ಶ್ರೀಶೈಲಪ್ಪ:** ಅಂದರೆ ಯೋಧರ ದೇಹ ತುಂಡು ಮಾಡಿ ಕಾಜಿನ ಡಬ್ಬಿಯಲ್ಲಿ ಹಾಕಿ ಅವರ ಊರಿಗೆ ಕಳಿಸುತ್ತಾರೆಯೇ?

**ಶಂಭು:** ಇದು ಅತೀ ದೊಡ್ಡ ಸಂಚು. ಶರಣರನ್ನು ಪೂರ್ಣ ನಾಶಮಾಡುವ ಸಂಚು. ಇದರ ವ್ಯಾಪಕ ಪರಿಣಾಮ ಯಾರಿಂದಲೂ ತಡೆಯಲಾಗಲ್ಲ.

**ಗುರುವ:** ನನಗರ್ಥವಾಗಲಿಲ್ಲ.

**ಶಂಭು:** ಒಬ್ಬ ಯೋಧನ ಮರಣವಾರ್ತೆ ಬರುವದಕ್ಕೂ ಅವನ ಮೃತ ದೇಹ ತುಂಡಾಗಿ ಬರುವದಕ್ಕೂ ಇರುವ ವ್ಯತ್ಯಾಸ ನಿಮಗೆ ಊಹಿಸಲಾಗುತ್ತಾ?

**ಶ್ರೀಶೈಲಪ್ಪಾ**: ಯೋಧನ ಮರಣವಾರ್ತೆ ಅವರ ಮನೆಯವರನ್ನ, ಬಂಧು ಭಾಂಧವರನ್ನು ಶೋಕಸಾಗರದಲ್ಲಿ ಮುಳುಗಿಸುತ್ತದೆ ಮತ್ತು ಅವನನ್ನು ಕೊಂದವರ ವಿರುದ್ಧ ಉದ್ರೇಕಿಸುತ್ತದೆ. ಆದರೆ ಅವನ ಛಿದ್ರ ಛಿದ್ರ ದೇಹ ಬಂದರೆ ಆ ಗ್ರಾಮ ಅಲ್ಲದೇ ಸುತ್ತಮುತ್ತಲಿನ ಗ್ರಾಮಸ್ಥರನ್ನೆಲ್ಲ ಶೋಕಸಾಗರದಲ್ಲಿ ಮುಳುಗಿಸುವದಷ್ಟೇ ಅಲ್ಲ ಅವನನ್ನು ಕೊಂದವರ ವಿರುದ್ಧ ಉದ್ರೇಕಿಸುತ್ತದೆ. ಅವನನ್ನು ಕೊಂದ ವೈರಿಗಳ ಸಂಹಾರ ಮಾಡಲು ಪ್ರೇರೇಪಿಸುತ್ತದೆ.

**ಶಂಭು:** ಇಲ್ಲಿ ಯೋಧರ ದೇಹವನ್ನು ಗಾಜಿನ ಡಬ್ಬಿಯ ದ್ರಾವಣದಲ್ಲಿಟ್ಟು ಅವರವರ ಊರಿಗೆ ಕಳಿಸಲಾಗುತ್ತದೆ.

**ಗುರುವ:** ಜೇನುಹುಳ ಕಡಿದು ನೀರಲ್ಲಿ ಮುಳಗಿ ಯೋಧ ಸತ್ತದ್ದು ಜನರನ್ನು ಅದು ಹೇಗೆ ಉದ್ರೇಕಿಸುತ್ತದೆ?
**ಶಂಭು**: ಮಹಾರಾಜ ಸೋಮೇಶ್ವರನ ಜಾಣತನವಿರುವದೇ ಇಲ್ಲಿ. ಅವನು ಕೆರೆಯಿಂದ ಹೊರತೆಗೆದ ಯೋಧರ ದೇಹವನ್ನು ಅವರ ಸಮವಸ್ತ್ರದಲ್ಲಿ ಸೇರಿಸಿ ಅವರ ಕೈ, ಕಾಲು, ತಲೆ ಅಥವಾ ದೇಹದ ಭಾಗವನ್ನು ಕತ್ತರಿಸಿ ಅವನ ಹತ್ಯೆಯಾಗಿದೆ ಎನ್ನುವ ಹಾಗೆ ಮಾಡಿ ಆ ಡಬ್ಬಿಯಲ್ಲಿ ಹಾಕಲಾಗುವದು. ಆ ದೇಹವನ್ನು ಸಕಲ ಮರ್ಯಾದೆಯೊಡನೆ ಕಲ್ಯಾಣದ ಸೈನಿಕರು ಅವರ ಮನೆಯವರಿಗೆ ತಲುಪಿಸಿ ಧನಸಹಾಯ ಕೊಡುವದು. ಇದರಿಂದ ರಾಜನ ಮೇಲಿನ ಪ್ರೀತಿ, ಗೌರವ ಹೆಚ್ಚಾಗುತ್ತದೆ. ದುಃಖದಲ್ಲಿರುವ ಯಾರೂ ಅವರು ಜೇನಹುಳ ಕಚ್ಚಿ ನೀರಿನಲ್ಲಿ ಮುಳುಗಿದ ವಿಷಯ ಗಮನಿಸುವದಿಲ್ಲ.
ಭೀಮಾ ನದಿ ದಂಡೆಯಲ್ಲಿ ಯೋಧರ ದೇಹ ಸಿಗುವದಿಲ್ಲ. ಆದರೆ ಅವರ ಆಯುಧಗಳು ಮೆಡಲುಗಳು ಮುಂತಾದ ಸುಡದೇ ಉಳಿದ ಅವಶೇಷಗಳು ಸಿಕ್ಕುತ್ತವೆ. ಆ ಅವಶೇಷಗಳನ್ನು ಹಣದ ಗಂಟಿನೊಂದಿಗೆ ಯೋಧರ ಮನೆಗೆ ತಲುಪಿಸಲೂಬಹುದು.
**ಶ್ರೀಶೈಲಪ್ಪ**: ಕಲ್ಯಾಣದಲ್ಲಿ ಮಡಿದ ಯೋಧರ ದೇಹವನ್ನೂ ಅವರ ಮನೆಗೆ ಕಳಿಸಬಹುದು.
**ಗುರುವ**: ಒಟ್ಟಾರೆಯಾಗಿ ಸುಮಾರು ಹತ್ತು ಸಾವಿರ ಯೋಧರ ಕೊಲೆ ಶರಣರು ಮಾಡಿದ್ದಾರೆ ಎನ್ನುವ ಸುಳ್ಳನ್ನು ಎಲ್ಲರೂ ನಂಬುವ ಹಾಗೆ ಸಾಕ್ಷಿಗಳನ್ನು ಮನಮನೆಗೂ ತಲುಪಿಸುತ್ತಾನೆ. ಯೋಧರಿಗೆ ಮರಣಾನಂತರ ರಾಜ ಸಲ್ಲಿಸುವ ಸನ್ಮಾನ ಮತ್ತು ಅವರ ಮನೆಯವರಿಗೆ ಸಂಭಾವನೆ ಕೊಡುವದು ಮಾದರಿಯಾಗುತ್ತದೆ. ಅದರಿಂದ ಶರಣರ ಸರ್ವನಾಶ ಆಗುವದು ಹೇಗೆ?
**ಶಂಭು:** ಶರಣರನ್ನು ದೇವರೆಂದು ತಿಳಿದು ಆರಾಧಿಸುವ ಜನ ಎಲ್ಲ ಹಳ್ಳಿಗಳಲ್ಲಿದ್ದಾರೆ. ಅವರ ಊರಿಗೆ ಹೋದ ಶರಣರನ್ನು ಶಿಕ್ಷಿಸುವದು ಅಸಾಧ್ಯ. ಈಗಿರುವ ಪರಸ್ಥಿತಿಯಲ್ಲಿ ಜನರೇ ಶರಣರನ್ನು ಕಾಯುತ್ತಾರೆ. ಈಗ ಕಲ್ಯಾಣದಿಂದ ಯೋಧನ ಶವದೊಂದಿಗೆ ಊರಿನವರೆಗೆ ಮೆರವಣಿಗೆಯಲ್ಲಿ ಸಾಗಿ ದಾರಿಯಲ್ಲೆಲ್ಲ ಶರಣರು ಇವನ ಹತ್ಯೆ ಮಾಡಿದ್ದಾರೆ ಎಂದು ಡಂಗುರ ಸಾರುತ್ತ ಅವರೂರಿನಲ್ಲಿಯೂ ಹೀಗೇಯೇ ಹೇಳಿದರೆ, ಶರಣರ ಮೇಲಿನ ಅಭಿಮಾನ ಕಡಿಮೆಯಾಗುತ್ತದೆ ಅಷ್ಟೇ ಅಲ್ಲ ಶರಣ ಸಿಕ್ಕರೆ ಯೋಧರು ಬೇಡ ಊರವರೇ ಅವನನ್ನು ಶಿಕ್ಷಿಸುತ್ತಾರೆ. ಮಹಾರಾಜ ಯೋಧರ ಮನೆಯವರಿಗೆ ಮಾಡಿದ ಸಹಾಯ ಅವನೊಬ್ಬ ಉತ್ತಮ ರಾಜ ಎನ್ನುವದನ್ನು ನಂಬಿ ಅವನಿಗೆ ಸಹಾಯ ಮಾಡುತ್ತಾರೆ.
ಅದನ್ನೆಲ್ಲ ಕೇಳಿ ನಾವೆಲ್ಲ ದಂಗಾಗಿ ಹೋದೆವು. ಶರಣರು ಹೇಳುವದೊಂದು ಮಾಡುವದೊಂದು ಎನ್ನುವದು ಎಲ್ಲ ಕಡೆ ಪ್ರಚಾರವಾಗುತ್ತದೆ. ಇದೀಗ

ನೆಲೆಯೂರುತ್ತಿರುವ ಶರಣರ ತತ್ವಗಳು ಆಚರಣೆಗಳು ನೆಲಕಚ್ಚುತ್ತವೆ. ಅಲ್ಲಲ್ಲಿ ಇರುವ ವಚನಗಳ ಕಟ್ಟುಗಳು ಜಗಲಿ ಸೇರುತ್ತವೆ ಇಲ್ಲಾ ಒಲೆ ಸೇರುತ್ತವೆ.

**ಶ್ರೀಶೈಲಪ್ಪ:** ಯಾವ ಸುಳ್ಳೂ ಬಹಳ ದಿನ ನಿಲ್ಲುವದಿಲ್ಲ. ಈ ಮಹಾರಾಜನ ಸಂಚು ಬದಲಾಗುವದು ನಿಶ್ಚಿತ. ಆದರೆ ಅಷ್ಟರಲ್ಲಿ ಅಪಾರ ಹಾನಿಯಾಗಿರುತ್ತದೆ. ಮುಂದಿನ ಜನಾಂಗಕ್ಕೆ ತಪ್ಪಿನ ಅರಿವಾದರೂ ಕಾಲಮಿಂಚಿಹೋಗಿರುತ್ತದೆ.

**ಗುರುವ:** ಈ ಸಂಕಟದಿಂದ ಪಾರಾಗುವ ಬಗೆ ಹೇಗೆ?

**ಶಂಭು:** ಆದಷ್ಟು ಬೇಗ ಶರಣರೆಲ್ಲ ಐದು ಹತ್ತು ಜನರ ಗುಂಪಿನಲ್ಲಿ ನಿಗೂಢ ಸ್ಥಳಕ್ಕೆ ಹೋಗುವದು. ಅವರ ಗುರುತು ಪರಿಚಯ ಯಾರಿಗೂ ಸಿಗದಂತೆ ಹಲವು ಕಾಲ ಇರುವದು. ಭೀಮಾ ಮತ್ತು ಕೃಷ್ಣಾ ನದಿಗಳ ಮದ್ಯದಲ್ಲಿರುವ ಜನರಿಗೆ ಬಸವಣ್ಣನವರ ಮತ್ತು ಶರಣರ ನಿಕಟ ಪರಿಚಯ ಇದೆ. ಅವರ ವಿರುದ್ಧ ಹೇಳುವ ಮಾತನ್ನು ಯಾರೂ ನಂಬುವದಿಲ್ಲ. ಕೃಷ್ಣಾ ನದಿಯ ಆ ದಂಡೆಯ ಆಚೆಯ ಪ್ರದೇಶದಲ್ಲಿ ಶರಣರ ತತ್ವಗಳು ಜನಮನ ಮುಟ್ಟಿಲ್ಲ.

ನಾವೀಗ ನಮ್ಮ ಕುದುರೆಯ ಮೇಲೆ ನಮ್ಮ ನಮ್ಮ ಜಾಗೆ ತಲುಪಬೇಕು. ನಾಳೆಯಿಂದಲೇ ಕಟ್ಟಿಗೆ ಕಳಿಸುವ ಕೆಲಸ ಮತ್ತು ಶರಣರು ಸುರಕ್ಷಿತ ಸ್ಥಾನ ಸೇರಬೇಕು. ಆದಷ್ಟು ಹತರಾದ ಯೋಧರ ಪ್ರದೇಶ ಬಿಟ್ಟು ಬೇರೆ ದಾರಿಯಲ್ಲಿ ಸಾಗಬೇಕು. ಶಂಭು ಕುದರೆಯೇರಿ ತಮ್ಮ ಅಂಗರಕ್ಷಕರೊಡನೆ ಹೊರಟರು. ನನ್ನನ್ನು ಗುಡಿಯಲ್ಲಿ ಬಿಟ್ಟು ಉಳಿದವರೆಲ್ಲ ಖರೋಸ ಕಡೆ ಹೊರಟು ಹೋದರು

**ಸತ್ಯವೂ ಇಲ್ಲ, ಅಸತ್ಯವೂ ಇಲ್ಲ,**

**ಸಹಜವೂ ಇಲ್ಲ, ಅಸಹಜವೂ ಇಲ್ಲ,**

**ನಾನೂ ಇಲ್ಲ, ನೀನೂ ಇಲ್ಲ.**

**`ಇಲ್ಲ' `ಇಲ್ಲ' ಎಂಬುದು ತಾನಿಲ್ಲ**

**ಗುಹೇಶ್ವರನೆಂಬುದು ತಾ ಬಯಲು !** / 1499 **--ಅಲ್ಲಮಪ್ರಭು.**

ಗಮನಿಸಿ:

ಊರೆಲ್ಲ ಜೋಳ ಸಜ್ಜಿ ಬೀಸಾಕ ಚಾಲೂ ಮಾಡಿದರ ಸಾಕು ನಮ್ಮೂರ ಜಾತ್ರಿ ಇನ್ನೊಂದು ತಿಂಗಳಮ್ಯಾಲ ಐತಿ ಅಂತ ನಮಗ ಗೊತ್ತಾಗುತ್ತಿತ್ತು. ಗಿರಣಿಗೆ ಹೋದರ ಪಾಳ್ಯಾಗ ಐದಾರು ತಾಸು ಕಾಯುದು ನನಗ ಸಂತೋಷದ ವಿಷಯ. ಅಷ್ಟು ಹೊತ್ತು ಅಲ್ಲಿಗೆ ಬಂದ ಹುಡುಗರ ಜೊತೆ ಆಡಲಾಕ ಸಿಗತಿತ್ತು. ಅದಕ್ಕಿಂತ ಮುಖ್ಯವಾಗಿ ಗಿರಣಿಗೆ ಕೊಟ್ಟ ರೊಕ್ಕದ ಜೊತೆಗೆ ಹೆಚ್ಚಿಗೆ ಕೊಡುವ ಹಣದಲ್ಲಿ ನಿಂಬಿಹುಳಿ ಪೆಪ್ಪರಮಡ್ಡಿ ಮತ್ತು ಹುರಕಡ್ಲಿ ತಿನ್ನಲಾಕ ಸಿಗುತ್ತಿತ್ತು. ಎಲ್ಲರ ಮನೆಯಲ್ಲೂ ರೊಟ್ಟಿ ಮಾಡುವ ಸಂಗೀತ ಎಲ್ಲ ಕಡೆ ಕೇಳಿಸುತ್ತಿತ್ತು. ಆಗ ಊರ ತುಂಬ ಸಜ್ಜೆ ರೊಟ್ಟಿಯ ಪರಿಮಳ (ಈಗ ಆ

ಪರಿಮಳ ಇರುದಿಲ್ಲ ತಿಂದರ ಆ ರುಚೀನೂ ಇರೂದಿಲ್ಲ), ಕರಚಿಕಾಯಿ, ಚಕ್ಕಲಿ ಕರಿಯುವ ವಾಸನೆ ನಮ್ಮ ಆಶೆಗಳನ್ನು ಇಮ್ಮಡಿಗೊಳಿಸುತ್ತಿತ್ತು. ಡಬ್ಬಿಯಲ್ಲಿ ತುಂಬಿಟ್ಟ ಸಿಹಿ ತಿಂಡಿಗಳನ್ನು ತಾಯಿಗೆ ತಿಳಿಯದಂತೆ ನಾವು ತಂದು ಗೆಳೆಯರೊಂದಿಗೆ ಹಂಚಿಕೊಂಡು ತಿನ್ನುವ ರುಚಿಯೇ ಬೇರೆ. ಮದುವೆಯ ದಿನಗಳಲ್ಲಿ ರೊಟ್ಟಿ ಹಿಟ್ಟು ತಂದುಕೊಟ್ಟು ರೊಟ್ಟಿ ಮಾಡಿಸಿಕೊಂಡು ಹೋಗುವ ಸಂಪ್ರದಾಯ ಈಗಲೂ ಇದೆ. ಹೆಣ್ಣುಮಕ್ಕಳು ಸೇರಿ ಶಾವಿಗೆ ಮಾಡುವದು, ಕರಚಿಕಾಯಿ ಮಾಡುವದು ಈಗಲೂ ಇದೆ.

**ನಿಜವನರಿದವಂಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ;**
**ನಿತ್ಯವೂ ಇಲ್ಲ, ಅನಿತ್ಯವೂ ಇಲ್ಲ;**
**ಅದು ತಾ ಮುನ್ನವೆ ಇಲ್ಲ,**
**ಬಚ್ಚ ಬರಿಯ ನಿರಾಳ ತಾನೆ**
**ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ,**
**ನೀವು ಬಯಲು.** / 84----- ಘಟ್ಟಿವಾಳಯ್ಯ.

ಮಂದಿರದಲ್ಲಿ ನಾನೊಬ್ಬನೇ. ಎದುರಿನ ನಂದಾದೀಪದಿಂದ ಬರುವ ಮಂದವಾದ ಬೆಳಕು. ಸೂರ್ಯ ಮರೆಯಾದ ಮೇಲೆ ನಂದಾದೀಪದ ಬೆಳಕೇ ನಮಗೆ ಆಧಾರ ಮತ್ತೆ ಸೂರ್ಯ ಬರುವ ಪ್ರತೀಕ್ಷೆ ಮಾಡುವದಷ್ಟೇ ನಮ್ಮ ಮುಂದಿರುವ ದಾರಿ. ಮುಂಬರುವ ಜನರು ಏನನ್ನು ನಂಬಬೇಕು? ಯಾವುದು ಸತ್ಯ? ಯಾವದು ಮಿಥ್ಯ?. ಹಣ ಮತ್ತು ಅಧಿಕಾರದ ಬಲದಿಂದ ಅಸತ್ಯವನ್ನು ಮಿಥ್ಯವನ್ನಾಗಿ ಪರಿವರ್ತಿಸಲು ಸಾಧ್ಯವೇ? ಯೋಗಿಗಳನ್ನು ಕಟುಕರನ್ನಾಗಿ ಬಿಂಬಿಸಲು ಸಾಧ್ಯವೇ? ಇದು ಸೋಮೇಶ್ವರನ ಹೊಸ ಉಪಾಯವೇ ಅಥವಾ ಹಿಂದಿನಿಂದ ನಡೆದು ಬಂದ ಸಂಪ್ರದಾಯವೇ? ಗೆದ್ದ ರಾಜರನ್ನ ದೇವರನ್ನಾಗಿಯೂ ಸೋತವರನ್ನು ಕಥೆಗಳಲ್ಲಿ ರಾಕ್ಷಸರಾಗಿ ಬಿಂಬಿಸುವದು ಈ ಸಂಪ್ರದಾಯದ ಭಾಗವೇ?

ಮನದ ತುಂಬ ಉತ್ತರವಿಲ್ಲದ ಪ್ರಶ್ನೆಗಳು. ಮೈಮೇಲೆ ಎಳೆಬಿಸಿಲು ಬಿದ್ದಾಗ ದ್ವಂದ್ವದಿಂದ ಹೊರಬಂದು ಕಣ್ದೆರೆದೆ. ಎದ್ದು ಕೆರೆಯಲ್ಲಿ ಸ್ನಾನಮಾಡಿ ಕಟ್ಟೆಯ ಮೇಲೆ ಕುಳಿತೆ. ಕೆಂಪರಾಜ ಹಾಲು ಕುಡಿಯಿರಿ ಎಂದಾಗ ವಾಸ್ತವಕ್ಕೆ ಬಂದೆ. ನಾವೀಗ ಊಟಕ್ಕೆ ಆಡಳಿತಗಾರರ ಮನೆಗೆ ಹೋಗಬೇಕು. ಸರಿ ಎಂದು ಅವನು ತಂದ ಬಂಡಿ ಏರಿದೆ.

ನಮ್ಮೂರಿನಲ್ಲಿ ಮುಂಜಾನೆ ಎಲ್ಲ ಮನೆಯಲ್ಲಿ ಕೇಳುವದು ರೊಟ್ಟಿ ಬಡೆಯುವ ಸಂಗೀತದ ಸದ್ದು. ಆದರೆ ಈ ಊರಲ್ಲಿ ಈ ವೇಳೆಗೆ ಎಲ್ಲರ ಮನೆಯಲ್ಲಿ ರೊಟ್ಟಿ ಬಡಿಯುವ ಸದ್ದೇ ಸದ್ದು.

ಮನೆಯ ಒಳಗೆ ಹೋದಾಗ ಹೆಣ್ಣುಮಕ್ಕಳ ಸಡಗರವೋ ಸಡಗರ. ಎಲ್ಲ ಕಡೆ ಬೀಸುವ ಕುಟ್ಟುವ ಕೆಲಸ ಭರದಿಂದ ಸಾಗಿತ್ತು.

ಅಲ್ಲಿದ್ದ ಗೌರಮ್ಮನಿಗೆ ನಮಸ್ಕರಿಸಿದೆ.

**ಗೌರಮ್ಮ:** ಬನ್ನಿ ಬನ್ನಿ ಗಂಗಕ್ಕ ಮತ್ತು ಅಜ್ಜಿ ಅಡಿಗೆಯಮನೆಯಲ್ಲಿ ರೊಟ್ಟಿ ಮಾಡುವದರಲ್ಲಿ ತೊಡಗ್ಯಾರ. ನೀವು ಇಲ್ಲಿಗೆ ಬಂದವರಿಗೆಲ್ಲಐದು ಸೇರು ಜೋಳ ಮತ್ತು ಐದು ಸೇರು ಸಜ್ಜೆ ಹಿಟ್ಟು ಅಳೆದುಕೊಡಿ.
**ಗುರುವ:** ಅಕ್ಕ ಯಾವುದಾದರೂ ಜಾತ್ರೆ ಅಥವಾ ಸಮಾರಂಭ ಇದೆಯಾ?
**ಗೌರಮ್ಮ:** ಎರಡೂ ಇವೆ. ಕುಡಚಿ ಜಾತ್ರೆ ಮತ್ತು ನನ್ನ ಅಳಿಯನ ಅಕ್ಕನ ಮಗಳ ಮದುವೆ ತಯಾರಿ ಎರಡೂ ಅದಾವ. ಇಲ್ಲಿಂದ ಬಾಳ ಮಂದಿ ಜಾತ್ರಿ ಮುಗಿಸಿಕೊಂಡು ನಮ್ಮ ಜೊತೆ ಮದುವಿ ಮುಗಿಸಿಕೊಂಡ ಬರತಾರ. ಅದಕ್ಕ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಮಾದಲಿ, ಹುಗ್ಗಿ, ಬಾನ, ಕರಚಿಕಾಯಿ ಮತ್ತು ಚಟ್ನಿ ಊರವರೆಲ್ಲ ಮಾಡಿಕೊಡಲಾಕ ಚಾಲೂ ಮಾಡ್ಯಾರ. ನಿನ್ನ ಹೆಂಡತಿ ಕೈಗುಣ ಹ್ಯಾಂಗ ಐತಿ ನೋಡು. ಒಬ್ಬಾಕಿಗೆ ರೊಟ್ಟಿ ಮಾಡು ಅಂತ ಕರಕೊಂಡ ಬಂದರ ಇಡೀ ಊರಿನ ಎಲ್ಲ ಹೆಣ್ಣಮಕ್ಕಳಿಗೆ ರೊಟ್ಟಿ ಬಡಿಲಾಕ ಹಚ್ಚ್ಯಾಳ.
**ಗುರುವ:** ಅಜ್ಜಿ ಆಶೆ ಅದ ಇತ್ತ. ನಾ ಕೆಂಪರಾಜಗ ಹೇಳತೀನಿ ಅವ ಪುಂಡಿಪಲ್ಲೇ ಹರಕೊಂಡು ತರತಾನ.
**ಗೌರಮ್ಮ:** ಬ್ಯಾಡ ಕೆಲವು ಮನಿಯವರು ಬಾನ, ಹುಳ್ಳಾನುಚ್ಚು ಮತ್ತ ಪುಂಡಿಪಲ್ಲೆ ಮಾಡಿಕೊಡತೀವಿ ಚಿಂತಿ ಮಾಡಬ್ಯಾಡ್ರಿ ಅಂತ ಹೇಳ್ಯಾರ. ಊರವರೆಲ್ಲ ಹಾಲ ಕಳಸ್ತೀನಿ ಅಂದಾರ ಹಾಲ ಕಾಸಿ ಕೆಂಪರಾಜ ಬೆಣ್ಣಿ ಮಾಡಿದರ ಸಾಕ.
**ಗುರುವ:** ನನ್ನ ಬಂಡ್ಯಾಗ ಒಂದ ಡಬ್ಬಿ ಎಣ್ಣಿ ಐತಿ. ಚಟ್ನಿ ಕೂಡ ರುಚಿ ಆಗತೈತಿ. ಅದೂ ಇರಲಿ ಊರಾಗಿನ ಗಾಣಿಗರು ಇದ್ದ ಎಣ್ಣಿ ಎಲ್ಲಾ ಕಳಿಸಿಕೊಟ್ಟಾರ ಮತ್ತು ಬೇಕಾದಷ್ಟು ಎಣ್ಣಿ ತೆಗಿಲಾಕ ಹತ್ಯಾರ. ಬ್ಯಾಡಂದರೂ ಕೆಲವರು ಚಕ್ಕಲಿ, ರವಾ ಉಂಡಿ, ಶೇಂಗಾದ ಹೋಳಿಗಿ ಮತ್ತು ನವಣಕ್ಕಿ ಹೋಳಗಿ ಮಾಡಿಕೊಂಡು ಬರಲಾಕ ಹತ್ಯಾರ. ನಮಗ ಹೇಳದ ಇನ್ನೇನು ಮಾಡಿಕೊಂಡು ಬರತಾರ ಗೊತ್ತಿಲ್ಲ. ತಮಗೇನೇನು ಅಡಗಿ ಮಾಡಲಾಕ ಬರತೈತಿ ಅದನ್ನೆಲ್ಲ ಮಾಡತಾರ. ತಮ್ಮ ಮಗಳ ಮದುವೆಗೆ ಹೋಗುತ್ತೇವೆ ಅನ್ನುವ ಹಾಗೆ ತಯಾರಿ ಮಾಡಲಾಕ ಹತ್ಯಾರ.
**ಗುರುವ:** ಯವ್ವಾ ಇದೆಲ್ಲ ಕೇಳಿ ಬಾಯಾಗ ನೀರು ಬರಲಾಕ ಹತ್ತೈತಿ. ನಮ್ಮೂರ ಜಾತ್ರಿ ನೆನಪಿಗೆ ಬರಲಾಕ ಹತ್ತೈತಿ.
ಅಷ್ಟರಲ್ಲಿ ಹೊರಗಿನಿಂದ ಬಂದ ಆಡಳಿತಗಾರ ಶಂಭು
**ಶಂಭು:** ಊರಿಗೆ ಹೋಗುವವರು ಮನಿಗೊಂದು ಬಂಡಿ ತಯಾರ ಮಾಡಲಾಕ ಹತ್ಯಾರ. ಬರುವರರಿಗೆಲ್ಲ ಹೊಸ ಬಟ್ಟಿ ತರಲಾಕ ಹೇಳಿನಿ. ಬೀಗರ ಮನ್ಯಾಗ ನಮ್ಮವರೆಲ್ಲ ಮಿಂಚಬೇಕು ನೋಡು. ಸಾಯಂಕಾಲ ಬಟ್ಟೆ ಹಂಚಿ ಬಾ.
**ಗೌರಮ್ಮ:** ಎಲ್ಲರಿಗೂ ಎರಡು ಜತಿ ಬಟ್ಟೆ ಕೊಡ್ರಿ ಒಂದು ಜಾತ್ರಿಗಾಗತೈತಿ ಇನ್ನೊಂದು ಮದುವಿ ದಿನ ಬರತೈತಿ. ಸಂಜಿ ಮುಂದ ಗುರುವನಕೂಡ ಇವತ್ತ ಮಾಡಿದ ಅಡಿಗಿ ಕಳಿಸಿಕೊಡ್ರಿ ಅವ ಮಗಳಿಗೆ ಮುಟ್ಟಿಸತಾನ, ಪಾಪ ಅಕಿ ಎಲ್ಲಿ ತಯಾರಿ ಮಾಡಿಸಿಕೊಂತ ಕೂತ್ಕೊಳ್ಳತಾಳ ಮದುವಿ ತಯಾರ ಮಾಡೂದು ಬಿಟ್ಟು.

ಹೊಗುವಾಗ ಮನಿ ದೇವರಿಗೆ ಮಾಡಿದ ಎಡಿ ಕೊಟ್ಟು ಹೋಗಲಾಕ ಮರೀಬ್ಯಾಡ ಅಂತ ಹೇಳ್ರಿ.
**ಶಂಭು:** ಇವತ್ತ ಊರಾಗಿನ ಎಲ್ಲ ದೇವರಿಗೆ ಎಡಿ ಕೊಟ್ಟ ನಾವ ಹೋಗಿ ಮನಿ ದೇವರಿಗೆ ಎಡಿ ಕೊಟ್ಟು ಬರೂಣ.
ಎಲ್ಲ ಮಾತುಗಳು ಜೋರಾಗಿ ಅಲ್ಲಿದ್ದವರಿಗೆಲ್ಲ ಕೇಳುವಂತೆ ಗೌರಮ್ಮ ಮತ್ತು ಶಂಭು ಹೇಳಿದ್ದು ವಿಶೇಷವಾಗಿತ್ತು.
**ಗೌರಮ್ಮ:** ಗುರುವನಿಗೆ ಗಂಗಕ್ಕ ಮಾಡಿದ ರೊಟ್ಟಿ ತಿನ್ನುವ ಅವಸರ.
ನಡಿ ಪಾಪ ಅವ ಎಷ್ಟೊತ್ತು ಕಾಯಬೇಕು. ಕೆಂಪರಾಜನನ್ನು ಕರಿ.
ನಗುತ್ತ ಎಲ್ಲರೂ ಒಳಹೋದೆವು.
ನಮ್ಮೆಲ್ಲರ ಮುಖದಲ್ಲಿ ನಗೆ ತುಂಬಿಕೊಂಡಿದ್ದರೂ ಮನದ ಸಂಕಟ ಯಾರ ಮುಂದೆ ಹೇಳಿಕೊಳ್ಳುವಂತಿಲ್ಲ. ಇಷ್ಟೆಲ್ಲ ಅಡಿಗೆ ಯಾರಿಗಾಗಿ ಎಂದು ನಮಗೆಲ್ಲ ಗೊತ್ತಿತ್ತು. ಅದನ್ನೆಲ್ಲ ಎಲ್ಲಿಗೆ ಮುಟ್ಟಿಸಬೇಕೆಂದು ಗೌರಮ್ಮ ಹೇಳಿದ್ದೂ ಆಯಿತು. ಆದರೆ ಊರವರಿಗೆ ಜಾತ್ರೆ ಮತ್ತು ಆಡಳಿತಗಾರ ಮನೆಯಲ್ಲಿಯ ಮದುವೆಯ ಸಂಭ್ರಮದ ಗುಂಗು ತುಂಬಿತ್ತು. ಅಲ್ಲಿ ಇರಬಹುದಾದ ಗೂಢಚಾರರು ಅದನ್ನು ನಂಬದೇ ಬೇರೆ ಮಾರ್ಗವಿರಲಿಲ್ಲ.
ಊರವರೆಲ್ಲ ಮಾಡಿದ ಅಡಿಗೆ ತಂದು ಕೊಟ್ಟು ನಾಳೆಗೆ ಬೇಕಾದ ಹಿಟ್ಟು ಒಯ್ಯಲಾರಂಭಿಸಿದರು.
ಗೌರಮ್ಮ ಮತ್ತು ನನ್ನವಳು ಜೊತೆಯಾಗಿ ಊರವರು ಮಾಡಿತಂದ ಅಡಿಗೆಯನ್ನೆಲ್ಲ ಬುಟ್ಟಿಗೆ ತುಂಬಿ ಬಂಡಿಗೆ ಹೇರಲಾರಂಭಿಸಿದರು. ಐದು ಬಂಡಿಯ ಬದಲಾಗಿ ಹತ್ತು ಬಂಡಿ ತಯಾರಾಗಿದ್ದವು. ಬಂಡಿಗಳನ್ನು ಹೊರಗೆ ನಿಲ್ಲಿಸಿ ಪೂಜೆ ಮಾಡಲಾಯಿತು. ಮೆರವಣಿಗೆ ಮೂಲಕ ಊರಲ್ಲಿರುವ ಎಲ್ಲ ದೇವರ ಗುಡಿಗಳಿಗೆ ಊರ ಹಿರಿಯರು ಮತ್ತು ಮುತ್ತೈದೆಯರು ಎಡೆ ಕೊಟ್ಟ ಮೇಲೆ ಮನೆ ದೇವರಿಗೆ ಎಡೆ ಕೊಡಲು ಊರು ಬಿಟ್ಟು ಹೊರಟೆವು. ಮನೆ ಮಂದಿಯಷ್ಟೇ ಒಂದು ಬಂಡಿಯಲ್ಲಿದ್ದರು ಉಳಿದವರು ಮರಳಿದರು.
ಬಹಳ ಜನ ಹೆಣ್ಣುಮಕ್ಕಳು ಇದ್ದರೆ ಈ ತರಹದ ತಾಯಿ ತಂದೆ ಇರಬೇಕು, ರೂಪಕ್ಕ ಪುಣ್ಯವಂತೆ ಎನ್ನುವ ಮಾತು ವ್ಯಾಪಕವಾಗಿ ಕೇಳಿಸಿತು.
ಗುಡಿ ತಲುಪಿದಾಗ ಎಲ್ಲ ಕಡೆ ಕತ್ತಲೆ.
ಗುಡಿಯಲ್ಲಿ ದೀಪ ಬೆಳಗಿ ಪೂಜೆ ಮಾಡಿ ಎಡೆ ಹಿಡಿಯಲಾಯಿತು. ಆಗ ಹಕ್ಕಿ ಪಿಕ್ಕಿಗಳ ಕೂಗು ಕೇಳಿಸತೊಡಗಿತು. ಈಗ ಕೆಂಪರಾಜ ಬರುತ್ತಾನೆ ಎನಿಸಿತು.
ಕೆಂಪರಾಜ ಬಂದು ಖರೋಸಾದಿಂದ ಕೆಲವರು ಬಂದಿದ್ದಾರೆ ಎಂದ.
**ಶಂಭು:** ಅವರಿಗೆ ಕೆರೆ ದಂಡೆಯಲ್ಲಿ ಕುಳಿತುಕೊಳ್ಳಲು ಹೇಳು. ನಾನು ಹೆಣ್ಣುಮಕ್ಕಳನ್ನು ಮನೆಗೆ ಕಳಿಸಿ ಬರುತ್ತೇನೆ.

**ಅಜ್ಜಿ:** ರೂಪಾಗ ನಾ ಕೇಳಿದೆನಂತ ತಿಳಿಸು. ಮತ್ತೇನು ಬೇಕು ಕೇಳು. ನೀ ಗಂಗಕ್ಕನ ಕರಕೊಂಡು ಹೋಗಿ ಕಳಿಸು ಆಕಿ ಇದ್ದರ ರೂಪಾಗ ಅನುಕೂಲ ಆಗತೈತಿ. ಈ ಚೀಲ ತೊಗೊ ಅದರಾಗ ಗಂಗಕ್ಕಗ ಮತ್ತ ನಿನಗ ಹೊಸ ಬಟ್ಟೆ ಅದಾವ. ಮುಂದಿನಸಲ ಬರುವಾಗ ಒಂದ ಕೂಸ ಜೊತೆ ಬರಬೇಕು.

**ನನ್ನಾಕೆ:** ಅಜ್ಜಿ ಆಶಿರ್ವಾದ ಮಾಡು. ನಿಮ್ಮ ಆಶಿರ್ವಾದ ಇದ್ದರ ರೂಪಕ್ಕ ಹಮ್ಮಿಕೊಂಡ ಕೆಲಸ ಪೂರ್ಣ ಆಗತೈತಿ.

ನಾನು ಮತ್ತು ನನ್ನಾಕೆ ಅಲ್ಲಿದ್ದವರಿಗೆಲ್ಲ ನಮಸ್ಕಾರ ಮಾಡಿದೆವು.

ಗೌರಮ್ಮ ಮೌನಕ್ಕೆ ಶರಣಾಗಿದ್ದರು. ಪಾಪ ಅಜ್ಜಿಗೆ ನಾವಾರೂ ಸತ್ಯ ಸಂಗತಿ ತಿಳಿಸಿಲ್ಲ.

ಶಂಭು ಹೊರತಾಗಿ ಎಲ್ಲರೂ ಹೋದರು. ಯಾಕೋ ಮನಸ್ಸು ತಡೆಯಲಿಲ್ಲ ನನ್ನಾಕೆಯೊಡನೆ ಬಿಕ್ಕಿ ಬಿಕ್ಕಿ ಅತ್ತೆ.

**ಶಂಭು:** ಕಣ್ಣೀರು ಹರಿಸುವ ವೇಳೆ ಇದಲ್ಲ. ನಾವೇನು ಮಾಡಬೇಕು ಎನ್ನುವ ನಿರ್ಧಾರ ಮಾಡಬೇಕಿದೆ.

**ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ**

**ಅಸತ್ಯದ ಮನೆಯಲ್ಲಿ ಶಿವನಿರ್ಪನೆ ?**

**ಇಲ್ಲಿಲ್ಲ ನೋಡಿರೊ.**

**ಇದು ಕಾರಣ, ನಮ್ಮ ಅಖಂಡೇಶ್ವರಲಿಂಗವನೊಲಿಸಬೇಕಾದಡೆ**

**ಸತ್ಯವ ಸಾಧಿಸಬೇಕು ಕಾಣಿರೋ.** / 646---- ಷಣ್ಮುಖಸ್ವಾಮಿ

ಅಲ್ಲಿಗೆ ಬಂದವರು ಮಾಚಣ್ಣ, ಶಾಂತಪ್ಪ ಮತ್ತು ವೀರಭದ್ರಪ್ಪ. ಅವರೆಲ್ಲರನ್ನು ನೋಡಿ ಸಮಾಧಾನವಾಯಿತು. ಅವರಿಗೆ ಶರಣುಶರಣಾರ್ಥಿ ಹೇಳಿದೆ. ಎಲ್ಲರೂ ಒಳಗೆ ಬಂದು ಕುಳಿತುಕೊಂಡರು.

**ಗುರುವ:** ಬಹಳ ದಿನಗಳವರೆಗೆ ನಿಮ್ಮ ಸಮಾಚಾರ ಗೊತ್ತಾಗಲಿಲ್ಲ ವೀರಭದ್ರಪ್ಪ. ಏನಾಯಿತು ವಿವರಿಸಿ.

**ವೀರಭದ್ರಪ್ಪ:** ನಿಮ್ಮನ್ನು ಭೆಟ್ಟಿಯಾಗಿ ಬಂದ ನಂತರ ನನಗೆ ನನ್ನ ಅಶ್ವಪಡೆಯೊಡನೆ ಕಲ್ಯಾಣನಗರದ ಗಡಿ ಕಾಯಲು ಕಳುಹಿಸಿದರು. ಅನಿವಾರ್ಯವಾಗಿ ಶರಣರ ರಕ್ಷಣಾ ಪಡೆ ಹೊರತುಪಡಿಸಿ ಎಲ್ಲ ಭಟರನ್ನು ಕರೆದುಕೊಂಡು ಹೊರನಡೆದೆ.

ರಾಜಕುಮಾರನ ಅನುಮತಿ ಪಡೆದ ಅವನ ನಿಷ್ಠಾವಂತ ನಾಯಕರ ಅನೇಕ ಸೈನ್ಯ ತುಕಡಿಗಳು ಕಲ್ಯಾಣ ಪ್ರವೇಶಿಸಿದವು.

ಆಮೇಲೆ ಕಲ್ಯಾಣದಲ್ಲಿ ಏನು ನಡೆಯಿತು ಎಂಬ ವಿಚಾರ ನನಗೆ ಗೊತ್ತಾಗಲಿಲ್ಲ. ಮಧ್ಯರಾತ್ರಿಯ ನಂತರ ಅರಮನೆ ಕಾವಲಿಗೆ ಭಟರೊಡನೆ ಬರಬೇಕೆಂಬ ಆದೇಶ ಬಂದಿತು.

ನಾನು ನನ್ನ ಭಟರೊಂದಿಗೆ ಕಲ್ಯಾಣಕ್ಕೆ ಹೊರಡಬೇಕೆನ್ನುವಷ್ಟರಲ್ಲಿ ಅನೇಕ ತಂಡಗಳಲ್ಲಿ ಅವಸರದಲ್ಲಿ ಹೊರಗೆ ಓಡುತ್ತಿದ್ದ ಸೈನಿಕರು ಸಿಕ್ಕರು. ಅವರನ್ನು ತಡೆಯಬೇಡಿ ಎಂದು ನನ್ನ ಪಡೆಗೆ ಹೇಳಿದೆ.
ಅವರಲ್ಲಿ ಒಬ್ಬ ಪರಿಚಿತ ಯೋಧನನ್ನು ಕರೆದು ಏನಾಯಿತು ಎಂದು ವಿಚಾರಿಸಿದೆ
" ಅವನು ಶಿಕ್ಷೆ ಜಾರಿಯಾಯಿತು"
ಎಂದು ಹೇಳಿ ಅಳುತ್ತ ಓಡಿಹೋದ. ಇನ್ನೊಬ್ಬ ಓಡಿಹೋಗುತ್ತಿರುವ ಪರಿಚಿತ ಯೋಧನನ್ನು ಕೇಳಿದೆ ಅವನು ಆವೇಶದಿಂದ ನಡುಗುತ್ತ ಹೇಳಿದ
"ಕೇಕೆ ಹಾಕುತ್ತ ಆನೆಗೆ ಕಟ್ಟಿ ಮೂವರನ್ನು ಎಳೆದುಕೊಂಡು ಹೋಗುವಾಗ ಆ ರಸ್ತೆಯಲ್ಲಿದ್ದ ಅನೇಕರ ಕತ್ತು ಹಾರಿಸಿದರು, ರುಂಡವನ್ನು ಭಲ್ಲೆಗೆ ಚುಚ್ಚಿ ಕುಣಿಯುತ್ತ ರಕ್ಕಸ ಪ್ರವೃತ್ತಿ ಮೆರೆದರು. ಈಗ ಊರಲ್ಲಿ ಹುಡುಕಿ ಹುಡುಕಿ ಶರಣರ ಹತ್ಯೆ ಮಾಡುತ್ತಿದ್ದಾರೆ. ಅಲ್ಲಿದ್ದ ನಮಗೆ ಸಹಿಸಲಾಗಲಿಲ್ಲ ಮುಂದೆ ದಾರಿಕಾಣದೇ ಮನನೋವಾಗಿ ಅಲ್ಲಿ ಇರಲಾಗದೇ ಅನಿವಾರ್ಯವಾಗಿ ನಾವು ಕಲ್ಯಾಣ ತೊರೆದು ಓಡಿ ಹೊರಟಿದ್ದೇವೆ. ಇಷ್ಟೊತ್ತಿಗಾಗಲೇ ಊರಲ್ಲಿ ಅನಾಹುತವಾಗಿದೆ."
ಎಂದು ಬಿಚ್ಚುಗತ್ತಿ ಹಿಡಿದು ಆವೇಶದಿಂದ ಹೊರಟು ಹೋದ.
ಅವನ ನೋಟದಲ್ಲಿ ನನ್ನ ಬಗ್ಗೆ ಇರುವ ಅಸಹ್ಯ ಭಾವ ಆ ಮಂದಬೆಳಕಿನಲ್ಲಿ ಎದ್ದು ಕಾಣುತ್ತಿತ್ತು. ಚಂದ್ರನೂ ನಾಚಿಕೆಯಿಂದ ಮೋಡದಲ್ಲಿ ಮರೆಯಾಗಿದ್ದ.
ನಾನು ಗೊಂದಲಕ್ಕೊಳಗಾದೆ ಅಲ್ಲಿಂದಲೇ ನನ್ನ ಊರಿಗೆ ಮರಳಬೇಕೆನಿಸಿತು ಆದರೆ ನಾನು ಹೋದರೆ ನನ್ನ ಜೊತೆಯಲ್ಲಿರುವ ನರರಾಕ್ಷಸರಂತಹ ವೀರ ಯೋಧರು ರಾಜಾಜ್ಞೆಯಂತೆ ಇನ್ನಷ್ಟು ಮಾರಣಹೋಮ ಮಾಡುತ್ತಾರೆ. ನಾನವರ ಜೊತೆ ಕಲ್ಯಾಣದಲ್ಲಿದ್ದರೆ ಕೆಲವರ ಪ್ರಾಣವನ್ನಾದರೂ ಉಳಿಸಬಹುದೆಂದು ಯೋಚಿಸಿ ಪಡೆಯೊಂದಿಗೆ ಕೋಟೆಕಡೆ ಹೊರಟೆ.
ನಾನು ಇನ್ನೂ ಅಗಸಿಯ ಹತ್ತಿರ ಬಂದಿದ್ದಿಲ್ಲ ಆಗಲೇ ನನಗೆ ಯುದ್ದ ಭೂಮಿಯಲ್ಲಿ ಚಿರಪರಿಚಿತವಾದ ಹಸಿ ಮಾನವ ರಕ್ತದ ವಾಸನೆ ಬರಹತ್ತಿತು. ಯದ್ದ ಭೂಮಿಯಲ್ಲಿ ಪಳಗಿದ ನನ್ನ ಕುದುರೆ ಹೂಂಕರಿಸಿ ಓಡತೊಡಗಿತು ಹಿಂದೆ ಬರುತ್ತಿದ್ದ ಸವಾರರು ರಣಕೇಕೆ ಹಾಕಲು ತೊಡಗಿದರೆ ಅವರ ಕುದುರೆಗಳು ಹೂಂಕರಿಸುತ್ತ ಕೆನೆಯತೊಡಗಿದವು.
ಹಸಿರಕ್ತದ ವಾಸನೆ ಮೂಗಿಗೆ ಬಡಿದಾಗ ಯೋಧರು ಮತ್ತು ಕುದುರೆಗಳು ಪ್ರತಿಕ್ರಿಯಿಸುವ ರೀತಿ ಅದು. ವೀರಾವೇಶದಿಂದ ಹೋರಾಡಲು ಮಾನಸಿಕವಾಗಿ ತಯಾರಾಗಲು ಕೊಟ್ಟ ತರಬೇತಿ ಅದು.
ಪರಿಸ್ಥಿತಿ ನೋಡಿಕೊಂಡು ಪುರ ಪ್ರವೇಶ ಮಾಡಬೇಕೆಂದು ಯೋಚಿಸಿ ಅವರಿಗೆಲ್ಲ ಅಲ್ಲಿಯೇ ನಿಲ್ಲಲು ಹೇಳಿದೆ.
ಕಷ್ಟಪಟ್ಟು ಕುದುರೆಗಳನ್ನು ನಿಯಂತ್ರಣಕ್ಕೆ ತಂದರು ಅವರ ಉದ್ರೇಕವು ಸ್ವಲ್ಪ ಕಡಿಮೆಯಾಯಿತು

ಇಷ್ಟು ಹೇಳುವಷ್ಟರಲ್ಲಿಯೇ ದುಃಖದ ಕಟ್ಟೆ ಒಡೆದಿತ್ತು ಕಣ್ಣು ತುಂಬಿ ಬಂದಿತ್ತು.
ನನಗೂ ಹಾಗೆಯೇ ಆಗಿತ್ತು.

**ಮಂಚಣ್ಣ:** ನಮಗೆ ದುಃಖ ಸಹಿಸಿಕೊಳ್ಳುವದೊಂದೇ ನಮಗಿರುವ ಮಾರ್ಗ.
ಮುಂದೇನಾಯಿತು ವಿವರಿಸು.

**ವೀರಭದ್ರಪ್ಪ:**

ಇಬ್ಬರು ಯೋಧರನ್ನು ಕರೆದುಕೊಂಡು ಅರಮನೆಗೆ ಹೋಗಲು ಅಗಸಿಯ ಸಮೀಪ ಬಂದೆ. ನಾನು ಅಲ್ಲಿ ಮಂದ ಬೆಳಕಿನಲ್ಲಿ ಕಂಡ ದೃಶ್ಯ ಮೈ ಜುಮ್ಮೆನಿಸಿ ನನ್ನ ಮೈಯೆಲ್ಲ ಕಂಪಿಸುವಂತೆ ಮಾಡಿತು. ಅಗಸಿಯ ಮೇಲೆ ನೇತಾಡುತ್ತಿದ್ದ ದೇಹಗಳು ಕಂಡವು. ಆ ದೇಹಗಳನ್ನು ಹದ್ದುಗಳು ಕುಕ್ಕಿ ಕುಕ್ಕಿ ತಿಂದು ವಿಕಾರಮಾಡಿದ್ದವು. ಆ ದೃಶ್ಯ ನನ್ನ ಮನ ಕಲಕಿ ರೋಷ ಉಕ್ಕಿತು.

ಅಗಸಿ ದಾಟುವಾಗ ಮೇಲಿಂದ ನನ್ನ ಹಣೆಯ ಮೇಲೆ ಹನಿ ರಕ್ತದ ತೊಟ್ಟು ಬಿದ್ದಿತು.

ನನಗೇನಾಯಿತು ನನಗೇ ಗೊತ್ತಾಗಲಿಲ್ಲ ಕತ್ತಿ ಹೊರತೆಗೆದು ವಿಚಿತ್ರವಾಗಿ ಕೂಗುತ್ತ ಕುದುರೆಗೆ ಚಾಟಿಯಿಂದ ಬಡಿದೆ. ಕುದುರೆ ಓಡಲು ಪ್ರಾರಂಭಿಸಿತು ನನ್ನ ಹಿಂದೆ ನನ್ನಿಬ್ಬರು ಯೋಧರು ಹಿಂಬಾಲಿಸಿದರು. ನನ್ನ ಕುದರೆಯು ಓಡುವದನ್ನು ನಿಲ್ಲಿಸಿ ಕೆನೆಯುತ್ತ ನಿಂತಿತು. ನನ್ನ ಮನವೀಗ ಸ್ವಲ್ಪ ಹತೋಟಿಗೆ ಬಂದಿತ್ತು.

ನಾನು ಅಲ್ಲಿ ಕಂಡಿದ್ದೇನು ರಸ್ತೆಯಲ್ಲಿ ರುಂಡ ಮುಂಡ ಬೇರೆಯಾಗಿ ಚಲ್ಲಾಪಿಲ್ಲಿಯಾಗಿ ಅಲ್ಲಲ್ಲಿ ಬಿದ್ದ ದೇಹದ ಭಾಗಗಳು ಮತ್ತು ಅಲ್ಲಿ ಚೆಲ್ಲಿದ ಹೆಪ್ಪುಗಟ್ಟಿದ ರಕ್ತದ ಮಡುಗಳು. ಅದನ್ನು ನೋಡಿ ಮತ್ತೆ ಮೈಮರೆತೆ ಕೂಗುತ್ತ ಆವೇಶದಿಂದ ಮನ್ನಡೆದೆ.

ಏನು ಮಾಡಲು ಹೊರಟಿದ್ದೆ ಎಂಬುದು ನನಗೆ ಅರಿವಿರಲಿಲ್ಲ.

ಆಗ ಪರುಷಕಟ್ಟೆ ಬಂದಿತು ಅಲ್ಲಿಳಿದು ನಮಸ್ಕರಿಸಿ ಮುಂದೆ ಸಾಗುವದು ನನ್ನ ವಾಡಿಕೆ.

ಆ ವಾಡಿಕೆಯಂತೆ ನನ್ನ ಕುದುರೆ ಅಲ್ಲಿ ಬಂದು ತಲೆಬಾಗಿ ನಿಂತಿತು. ನಾನು ವಾಡಿಕೆಯಂತೆ ನಮಸ್ಕರಿಸಿದೆ.

ಆಗ ನೆನಪಾಯಿತು ನನ್ನ ಹಿಂದಿರುವ ರಾಕ್ಷಸ ಪ್ರುವೃತ್ತಿಯ ಶೂರ ವೀರ ಪಡೆ, ಮತ್ತು ಊರಲ್ಲಿ ವಿಜಯೋತ್ಸವ ಆಚರಿಸುತ್ತಿರುವ ಕಲ್ಯಾಣ ಸೈನಿಕರ ಅಪಾರ ಪಡೆ ಕೂಡಿದರೆ ಇನ್ನಷ್ಟು ತಲೆಗಳು ನೆಲಕ್ಕುರುಳುತ್ತವೆ.

ನಾನು ಒಂಟಿಯಾಗಿ ಏನು ಮಾಡಬಹುದು?

ಅಣ್ಣ ಬಸವಣ್ಣನವರ "ಕೊಲಬೇಡ" ಎಂಬ ಮಾತು ಮನವನ್ನು ಜಾಗ್ರತಗೊಳಿಸಿತು.

ದುಡುಕಿ ಏನು ಮಾಡಿದರೂ ಅಪಾಯವೆಂದೆನಿಸಿ ಸ್ವಲ್ಪ ಸೈರಣೆ ತಂದುಕೊಂಡು ಕನಿಷ್ಟಪಕ್ಷ ನನ್ನ ಪಡೆಯಿಂದಾಗಬಹುದಾದ ಅನಾಹುತ ತಡೆಯಬಹುದು ಎನಿಸಿ ಕುದುರೆಯನ್ನು ಹಿಂದುರಿಗಿಸಿ ಅನುಭವ ಮಂಟಪದ ಕಡೆಗೆ ಹೊರಟೆ.

ಅನುಭವಮಂಟಪಕ್ಕೆ ಸಮೀಪ ಬರುತ್ತಿದ್ದಂತೆ ನನ್ನ ಕಿವಿಗಳಿಗಪ್ಪಳಿಸಿದ್ದು ಅನುಭವ ಮಂಟಪದಲ್ಲಿ ನಾಯಿಗಳ ಕಚ್ಚಾಟದ ಕ್ರೂರ ದನಿ. ದೂರದಿಂದಲೇ ಅಲ್ಲಿ ಬಿದ್ದ ದೇಹಗಳ ಮಾಂಸಕ್ಕಾಗಿ ಕಚ್ಚಾಡುತ್ತಿರುವ ನೂರಾರು ಬೀದಿನಾಯಿಗಳು ಕಣ್ಣಿಗೆ ಬಿದ್ದವು.

ಮುಂದೆ ಹೋಗಲು ಮನಸ್ಸಾಗದೇ ಮನದ ತುಂಬ ದುಃಖ ತುಂಬಿ ಕುದುರೆಯಿಂದ ಕೆಳಗಿಳಿದು ಭಟರಿಗೆ ಕಾಣದಂತೆ ಕಣ್ಣೀರು ಒರೆಸಿಕೊಂಡೆ. ಅಷ್ಟರಲ್ಲಿ ಅಲ್ಲಿ ಸಮೀಪದಲ್ಲಿ ನರಳುತ್ತಿರುವ ಧ್ವನಿ ಕೇಳಿ ಅಲ್ಲಿ ತೆರಳಿ ನೋಡಿದಾಗ ಅಲ್ಲಿ ಕಂಡದ್ದು ಗಾಯವಾಗಿ ನರಳುತ್ತಿದ್ದ ದಾಸೋಹ ಕಾಯಕದ ಮುದಕಿ ಮಲ್ಲವ್ವ. ಸಣ್ಣವನಾಗಿದ್ದಾಗ ಕೈತುತ್ತು ಹಾಕಿದ ಮಮತೆಯ ಮೂರ್ತಿ.

ಕೆಳಗೆ ಕುಳಿತು ಅವಳ ತಲೆ ಎತ್ತಿ ತೊಡೆಯಮೇಲೆ ಹಾಕಿಕೊಂಡೆ ಅವಳು " ದೇಹಗಳನ್ನು ನಾಯಿ, ನರಿ, ಹದ್ದುಗಳ ಪಾಲು ಮಾಡಬೇಡ" ಎಂದು ಹೇಳಿ ಕೊನೆಯುಸಿರೆಳೆದಳು.

ಅಲ್ಲಿಂದ ಎದ್ದು ಸುತ್ತಲೂ ನೋಡಿದೆ ಅಲ್ಲಿ ಕಾಣಿಸಿದ್ದು ದಾಸೋಹಕ್ಕಾಗಿ ರಾಶಿಯೊಟ್ಟಿದ್ದ ಅಪಾರ ಕಟ್ಟಿಗೆ ರಾಶಿ.

ನನಗೆ ತಿಳಿಯದೇ ಕೂಗು ಹಾಕಿದೆ ಭಟರಿಬ್ಬರು ಬಂದರು ನನ್ನ ಪಡೆಯನ್ನೆಲ್ಲ ಕರೆದುಕೊಂಡು ಬರಲು ತಿಳಿಸಿದೆ.

ನನ್ನ ಭಟರು ದಾರಿಯಲ್ಲಿಯ ವಾತಾವರಣ ನೋಡುತ್ತ ಮದೋನ್ಮತ್ತರಾಗಿ ಕೇಕೆ ಹಾಕುತ್ತ ಅಲ್ಲಿಗೆ ಬಂದರು ಅವರಿಗದು ರಣರಂಗದಂತೆ ಕಂಡಿದ್ದು ಸಹಜ. ನಾನವರಿಗೆ ಇಲ್ಲಿರುವ ಕಟ್ಟಿಗೆ ಚನ್ನಾಗಿ ಅಗಲವಾಗಿ ಹೊಂದಿಸಿ ಬೀದಿಯಲ್ಲಿ ಬಿದ್ದಿರುವ ದೇಹಗಳ ಭಾಗಗಳನ್ನು ಹಾಗೂ ಉರಲ್ಲಿರುವ ಎಲ್ಲ ದೇಹಗಳನ್ನು ತಂದು ಹಾಕಿರಿ ಎಂದೆ.

ನನ್ನ ಆದೇಶ ಅವರಿಗೆ ವಿಜಯೋತ್ಸವದ ಭಾಗವೆನಿಸಿತೇನೋ ಗೊತ್ತಿಲ್ಲ ಕೊಗು ಹಾಕುತ್ತ ತಮ್ಮ ಕೆಲಸದಲ್ಲಿ ನಿರತರಾದರು.

ಇವರ ಕೇಕೆ ರಣೋತ್ಸಾಹ ಗಮನಿಸಿ ಇತರ ಯೋಧರೂ ಬಂದರು. ಅವರು ತಾವು ಮಾಡಿದ ಮಹಾತ್ಕಾರ್ಯದ ಅಂತಿಮ ಭಾಗ ಈ ವಿಜಯೋತ್ಸವ ಎಂದು ಭಾವಿಸಿ ಅವರೂ ರಣಕೇಕೆ ಹಾಕುತ್ತ ಭಲ್ಲೆಯಲ್ಲಿ ರುಂಡ ಹಿಡಿದು ಕುಣಿಯುತ್ತ ಕಟ್ಟಿಗೆಯ ಮೇಲೆ ರುಂಡ ಬೀಸಾಡಿದರು. ನಾನು ನಿಂತಲ್ಲಿಯೇ ಸ್ಥಂಭೀಭೂತನಾಗಿ ನಿಂತಿದ್ದೆ. ಮನವು ಭಾವನಾರಹಿತವಾಗಿತ್ತು.

ನನ್ನ ಭಟನೊಬ್ಬ ಎಲ್ಲ ಕೆಲಸ ಮುಗಿಯಿತು ಎಂದಾಗ ಕಣ್ಣು ಬಿಟ್ಟು ನೋಡಿದೆ ಅಲ್ಲಿ ಕಟ್ಟಿಗೆಯ ರಾಶಿಯಮೇಲೆ ಹೆಣಗಳ ರಾಶಿಯೇ ಇತ್ತು. ಅದರಲ್ಲಿ ಒಬ್ಬ ರಾಜಪರಿವಾರದವನಾಗಲೀ, ಸಂಪ್ರದಾಯವಾದಿಗಳಾಗಲೀ ಅಥವಾ ಪುರೋಹಿತಶಾಹಿಗಳ ಒಂದೂ ದೇಹವಿರಲಿಲ್ಲ.

ಸುತ್ತಲ್ಲಿದ್ದವರೆಲ್ಲ ಹೊಟ್ಟೆಪಾಡಿಗಾಗಿ ದುಡಿಯುವ ಬಡಪಾಯಿಗಳು, ಉನ್ಮತ್ತರಾಗಿ ಕುಣಿಯುತ್ತಿದ್ದ ಯೋಧರು ಮತ್ತು ನಾಲಿಗೆ ಹೊರಚಾಚಿ ಜೊಲ್ಲುಸುರಿಸುತ್ತಿರುವ ತಮ್ಮ ಅಹಾರ ಕಸಿದುಕೊಂಡರಲ್ಲಾ ಎಂದು ಬೊಗಳುತ್ತಿರುವ ನಾಯಿಗಳು.
ಅನುಭವಮಂಟಪದತ್ತ ತಿರುಗಿ ನೋಡಿ ನಮಸ್ಕರಿಸಿದೆ.
ಯಾಕೋ ಅಕ್ಕನ ವಚನ ನೆನಪಾಯಿತು

> **ಹಣ್ಣ ಮೆದ್ದ ಬಳಿಕ ಆ ಮರನನಾರು ತರಿದಡೇನು ? ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು ?**
>
> **ಮಣ್ಣ ಬಿಟ್ಟ ಬಳಿಕ ಆ ಕೆಯ್ಯನಾರು ಉತ್ತಡೇನು ? ಚೆನ್ನ ಮಲ್ಲಿಕಾರ್ಜುನನರಿಯದ ಬಳಿಕ ಆ ಕಾಯವ ನಾಯಿ ತಿಂದಡೇನು,**
>
> **ನೀರು ಕುಡಿದಡೇನು?** / 410 -- ಅಕ್ಕಮಹಾದೇವಿ.

ಅನತಿ ದೂರದಲ್ಲಿ ಭಯಭೀತರಾಗಿ ರೋಧಿಸುತ್ತ ನಿಂತ ಅಸಹಾಯಕರಾಗಿ ಕಣ್ಣೀರು ಹಾಕುತ್ತಿರುವ ಜನರೂ ಕಣ್ಣಿಗೆ ಬಿದ್ದರು.
ನಾನು ಬಾಗಿ ಮುದಕಿಯ ದೇಹವನ್ನೆತ್ತಿ ಕಟ್ಟಿಗೆಯ ರಾಶಿಯ ಮೇಲೆ ಹಾಕಿದೆ. ಅಲ್ಲಿ ನೆರೆದಿದ್ದವರೆಲ್ಲ ಎಲ್ಲರೂ ದೇಹದಮೇಲೆ ಮತ್ತೆ ಕಟ್ಟಿಗೆ ಪೇರಿಸಿಟ್ಟರು.
ಅವರು ನನ್ನ ಆಜ್ಞೆಗಾಗಿ ಕಾಯಲಿಲ್ಲ ಆ ಹೆಣದರಾಶಿಯ ಸುತ್ತ ಕುಣಿಯುತ್ತ, ಕೇಕೆ ಹಾಕುತ್ತ ರಾಜನಿಗೆ ಜೈಕಾರ ಹಾಕುತ್ತ ಅಗ್ನಿಸ್ಪರ್ಶ ಮಾಡಿದರು. ನಾನು ಮನದಲ್ಲಿಯೇ ಮಡಿದವರಿಗೆಲ್ಲ ನಮಸ್ಕರಿಸಿ ಕುದುರೆ ಏರಿ ಹೊರಟೆ.
ನನ್ನ ಭಟರು ನನ್ನ ಹಿಂದೆ ಹೊರಟರು ಅವರಲ್ಲಿ ಅನೇಕರು ಯಾರಿಗೂ ಗೊತ್ತಾಗದಂತೆ ಕಣ್ಣೀರನ್ನು ಒರಸಿಕೊಳ್ಳುವದು ಕಂಡಿತು.
ನನಗಿಂತಲೂ ಮೊದಲು ಈ ಸಮಾಚಾರ ರಾಜಪರಿವಾರಕ್ಕೆ ಮುಟ್ಟಿತ್ತು.
ನಾನು ಅರಮನೆ ಮುಟ್ಟಿದಾಗ ಅರಮನೆಯ ಮೇಲೆ ಕೇಕೆ ಹಾಕುತ್ತ ಬೆಂಕಿಯ ಜ್ವಾಲೆ ವೀಕ್ಷಿಸುತ್ತಿದ್ದ ರಾಜಮನೆತನದವರು, ಅವರ ಅಂಗರಕ್ಷಕರು ಕಾಣಿಸಿದರು.
ಅಗಲೇ ಮಹಾರಾಜ ಬಿಜ್ಜಳನ ಅಂತ್ಯಕ್ರಿಯೆಗೆ ಹೊರಟಿದ್ದ ರಾಜಕುಮಾರ ಬರಹೇಳಿ ಕಳುಹಿಸಿದ. ನಾನು ಹೋದಾಗ ರಾಜಕುಮಾರ ನೀನು ನಮ್ಮ ವೈರಿಗಳಿಗೆ ಸರಿಯಾದ ತಕ್ಕ ಶಿಕ್ಷೆ ಕೊಟ್ಟು ಬಂದಿರುವೆ.
ಈಗ ಅರಮನೆಯ ಭದ್ರತೆಯ ಜವಾಬ್ದಾರಿ ನಿನ್ನ ಪಡೆಯದು.
ಹೊರಗೆ ಬಂದಮೇಲೆ ಬಿಜ್ಜಳ ಮಹಾರಾಜನ ಅಂತ್ಯಕ್ರಿಯೆಗೆ ಹೊರಟಿದ್ದ ಯೊಧ ನಾಯಕರ ಅಭಿನಂದನೆ ಸ್ವೀಕರಿಸಿ ಬಂದು ನನ್ನ ಪಡೆಗೆ ಕೋಟೆಯ ಒಳ ಹೊರ ರಕ್ಷಣಾ ಜವಾಬ್ದಾರಿ ವಹಿಸಿ ನನ್ನ ಬಿಡಾರಕ್ಕೆ ಹೊರಟು ಬಂದೆ. ನನಗಾದ ಮಾನಸಿಕ ಆಘಾತದ ಪರಿಣಾಮವಾಗಿ ನಾನು ಅಲ್ಲಿಗೆ ಬಂದು ಬಿದ್ದುಕೊಂಡದ್ದಷ್ಟೇ ನೆನಪು. ನನಗೆ ಎಚ್ಚರವಾಗಿದ್ದು ಯೋಧನೊಬ್ಬ ಬಂದು ಮರುದಿನ ಎಬ್ಬಿಸಿ ಮಹಾರಾಜರು ನಿಮಗೆ ಕರೆಕಳಿಸಿದ್ದಾರೆ ಎಂದಾಗ.
ಮಹಾರಾಜರನ್ನು ಬೇಟ್ಟಿಯಾದಾಗ ಖರೋಸಾ ಕಾಡಿನ ಸುತ್ತ ಕಾವಲು ಹಾಕು

ಯಾರೂ ನನ್ನ ಅಪ್ಪಣೆಯಿಲ್ಲದೇ ಒಳಹೋಗಬಾರದು ಮತ್ತು ಹೊರಹೋಗಬಾರದು ಎಂದು ಆಜ್ಞಾಪಿಸಿದ.
ಅಲ್ಲಿ ಮಾಚಣ್ಣನವರಿಂದ ಎಲ್ಲ ವಿಷಯ ತಿಳಿದು ನಿಮ್ಮನ್ನು ಭೆಟ್ಟಿಯಾಗಲು ಬಂದೆ.

1. ಆಚಾರವನನಾಚಾರವ ಮಾಡಿ ನುಡಿವರು.
ಅನಾಚಾರವನಾಚಾರವ ಮಾಡಿ ನುಡಿವರು.
ಸತ್ಯವನಸತ್ಯವ ಮಾಡಿ ನುಡಿವರು.
ಅಸತ್ಯವ ಸತ್ಯವ ಮಾಡಿ ನುಡಿವರು.
ವಿಷವ ಅಮೃತವೆಂಬರು. ಅಮೃತವ ವಿಷವೆಂಬರು.
ಸಹಜವನರಿಯದ ಅಸಹಜರಿಗೆ,
ಶಿವನೊಲಿಯೆಂದಡೆ ಎಂತೊಲಿವನಯ್ಯ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನೀ ಮಾಡಿದ ಮಾಯವ ನೋಡಿ, ನಾನು ಬೆರಗಾದೆನು. / 54
--- ಸ್ವತಂತ್ರ ಸಿದ್ದಲಿಂಗ

2. ಆಳಿಂಗೆ ವರುಷದ ಚಿಂತೆ.
ಬಂಟರಿಗೆ ಮೋಸದ ಚಿಂತೆ.
ಮಜೂರಿ ಮಾನವರಿಗೆ ದಿವಸದ ಚಿಂತೆ.
ನೆರೆದ ಹಿರಿಕಿರಿಯರಿಗೆ ಅಶನದ ಚಿಂತೆ.
ಲಿಂಗೈಕ್ಯನಾದ ಶರಣನಿಗೆ ತನ್ನ ದೇಹದ ಚಿಂತೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ. / 59 -- ಕಾಡಸಿದ್ದೇಶ್ವರ

ವೀರಭದ್ರಪ್ಪ ಹೇಳಿದ ಮಾತು ಕೇಳಿ ಎಲ್ಲರೂ ಮೂಕರಾಗಿದ್ದೆವು. ಮೌನ ಮುರಿದ ಶಂಭು
**ಶಂಭು:** ಇಲ್ಲಿ ಹತ್ತು ಬಂಡಿಯಲ್ಲಿ ಶರಣರಿಗೆ ಮತ್ತು ಯೋಧರಿಗೆ ಬೇಕಾದ ಅಹಾರವಿದೆ. ಈಗ ಸೋಮೇಶ್ವರ ಮಾಡುವ ಸಂಚನ್ನು ಎದುರಿಸಿ ವಚನಗಳ ಮತ್ತು ಶರಣರ ರಕ್ಷಣೆ ಮಾಡಬೇಕಾಗಿದೆ.
**ಶಾಂತಪ್ಪ:** ಹೌದು ನೀವು ಹೇಳುವದು ಸರಿಯಾಗಿದೆ. ಕಲ್ಯಾಣದಿಂದ ಯೋಧರ ಶವಗಳನ್ನು ಅವರವರ ಮನೆಗೆ ಕಳಿಸುವ ತಯಾರಿ ನಡೆದಿದೆ. ನಿಮ್ಮ ಹೇಳಿಕೆಯಂತೆ ಕಟ್ಟಿಗೆ ಬಂಡಿಗಳು ನಾಳೆ ಮುಂಜಾನೆ ನಿಮ್ಮೂರಿಗೆ ಹೊರಡುತ್ತವೆ.

ಅವು ನಿಮ್ಮ ಯೊಧರ ರಕ್ಷಣೆಯಲ್ಲಿ ಮೆರವಣಿಗೆಯಲ್ಲಿ ನಿಮ್ಮೂರಿಗೆ ಹೊರಡುತ್ತವೆ. ಅದರ ಜೊತೆಗೆ ಮದುವೆಗೆ ಹೊರಟ ಸಂಬಂಧಿಗಳ ಬಂಡಿಗಳು ಇರಲಿವೆ.
**ಶಂಭು:** ಆ ಎಲ್ಲ ಬಂಡಿಗಳಲ್ಲಿ ನಮ್ಮ ಬೀಗರ ಜೊತೆಗೆ ಅಶಕ್ತ ಶರಣ ಶರಣೆಯರೂ ಇರಲಿ ಅವರು ಶರಣರೆಂದು ಯಾರಿಗೂ ಗೊತ್ತಾಗಬಾರದು. ಅವರು ಹೊಸಬಟ್ಟೆಯಲ್ಲಿ ಮೈತುಂಬ ಆಭರಣ ಹಾಕಿಕೊಂಡು ಮದುವೆಗೆ ಬರುವ ಶ್ರೀಮಂತ ಬೀಗರಂತಿರಬೇಕು. ಅವರಿಗಾಗಿ ಬಟ್ಟೆ ಬರೆ ಆಭರಣಗಳು ಬಂಡಿಯಲ್ಲಿವೆ. ಅವರಲ್ಲಿ ವಚನಗಳ ಕಟ್ಟುಗಳು ಇರಬಾರದು. ಯಾವ ಕಾರಣಕ್ಕೂ ವಚನ ಪಠನೆ, ಪೂಜೆ ಮಾಡಬಾರದು. ಅವರು ನಮಗೆ ಹೇಗೆ ಬೀಗರಾಗಬೇಕು ಎನ್ನುವ ವಿವರ ಕೊಡುವಂತಿರಬೇಕು. ಅವರ ಜೊತೆಯಲ್ಲಿರುವವರು ಹಾಗೇ ಹೇಳಬೇಕು.
ಒಟ್ಟಾರೆಯಾಗಿ ನಾವು ಗುಡಿಯಲ್ಲಿಟ್ಟುಕೊಂಡಿರುವ ಪೂಜೆ ಮತ್ತು ಧಾರವಾಡದ ಮದುವೆಗೆ ಹೊರಟ ವಿಚಾರ ಎಲ್ಲ ಯೊಧರಿಗೆ ಮತ್ತು ಬೇಹುಗಾರರಿಗೆ ಗೊತ್ತಾಗಬೇಕು.
**ಮಾಚಣ್ಣ:** ಶರಣರನ್ನು ಹತ್ತು ಹದಿನೈದು ಜನರ ಗುಂಪಿನಲ್ಲಿ ಕಳಿಸುವ ಕೆಲಸ ಮೊದಲ ದಿನದಿಂದ ನಡೆದಿದೆ. ಉತ್ತರ, ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಹೋಗಬೇಕಾದ ಶರಣರು ಹೊರಟಾಗಿದೆ. ಈಗ ಉಳಿದವರು ಬಹಳ ಜನ ಉಳವಿಗೆ ಹೋಗಬಯಸುತ್ತಿದ್ದಾರೆ. ಆದರೂ ಅವರ ಊರಿಗೆ ಹೋಗಲು ಹೇಳುತ್ತಿರುವೆವು.
**ಶಂಭು:** ಅದೂ ಅಷ್ಟು ಸುರಕ್ಷಿತವಲ್ಲ. ಎಲ್ಲ ಕಡೆ ಶರಣರನ್ನು ಹುಡುಕಿ ಶಿಕ್ಷಿಸುವ ರಾಜಾಜ್ಞೆ ಹೊರಡಬಹುದು. ಅವರನ್ನೆಲ್ಲ ಅಜ್ಞಾತ ಸ್ಥಳಕ್ಕೆ ಅಥವಾ ಉತ್ತರದ ಕ್ಷೇತ್ರಸ್ಥಳಕ್ಕೆ ಕಳಿಸಿದರೆ ಚನ್ನಾಗಿರುತ್ತದೆ. ನೀವು ಈಗ ಎಲ್ಲೆಲ್ಲಿ ವಾಸ್ತವ್ಯ ಮಾಡುತ್ತೀರಿ ಎನ್ನುವ ವಿವರ ತಿಳಿಸಿದರೆ ಅಲ್ಲಿರುವ ನನ್ನ ಗೆಳೆಯರಿಗೆ ಸಂದೇಶ ಕಳಿಸುವೆ. ಮೊದಲು ಕೈಕಾಲು ತೊಳೆದುಕೊಂಡು ಬನ್ನಿ ಪ್ರಸಾದ ಸೇವಿಸುತ್ತ ಮಾತನಾಡೋಣ. ನಮಗೆಲ್ಲ ಕೆಂಪರಸ ಬಡಿಸಲು ಆರಂಭಿಸಿದ.
**ಮಾಚಣ್ಣ:** ಈಗ ಶರಣರೆಲ್ಲ ಕುಶಲಕರ್ಮಿಗಳಂತೆ ಇರುತ್ತಾರೆ. ಬೇರೆ ಬೇರೆ ಭಾಗದಿಂದ ಬರುವ ಕುಶಲ ವಸ್ತು ಮಾರಾಟ ಮಾಡುವ ತಂಡಗಳಾಗಿ ಹೋಗುತ್ತಾರೆ. ಈಗಾಗಲೇ ಉತ್ತರದಿಂದ ಹೊರಟ ವ್ಯಾಪಾರಿ ತಂಡ ಸೇರುವವರು ಕೆಲವರಾದರೆ. ತಮ್ಮದೇ ತಂಡ ಕಟ್ಟಿಕೊಂಡು ಅನೇಕರು ಹೊರಡುತ್ತಾರೆ. ಅವರು ತಮ್ಮ ರಕ್ಷಣೆ ಮತ್ತು ಜೀವನೋಪಾಯ ತಾವೇ ಮಾಡಿಕೊಳ್ಳುತ್ತಾರೆ. ನಾಳೆ ಅವರೆಲ್ಲ ಖರೋಸಾ ತೊರೆಯುತ್ತಾರೆ. ಇನ್ನು ನಾಗಲಾಂಬಿಕೆಯವರ ಜೊತೆಯಲ್ಲಿರುವ ಎಲ್ಲಕಡೆ ಚಿರಪರಿಚಿತವಿರುವ ಸಾವಿರಾರು ಜನರನ್ನು ಉಳವಿಯ ವರೆಗೆ ಕಳಿಸುವ ಏರ್ಪಾಡು ಮಾಡಬೇಕಾಗಿದೆ.
**ಶಾಂತಪ್ಪ:** ಉಳವಿಗೆ ಹೋಗುವ ಅನೇಕ ಮಾರ್ಗಗಳಲ್ಲಿ ಅವರಾರಿಸಿಕೊಂಡ ಮಾರ್ಗದಲ್ಲಿ ಕೆಲವರು ಹೋಗುತ್ತಾರೆ. ಅಕ್ಕನಾಗಮ್ಮವರು ಕುಡಚಿ ಮಾರ್ಗವನ್ನಾರಿಸಿಕೊಂಡಿದ್ದಾರೆ.

**ಶಂಭು:** ಕುಡಚಿಯವರೆಗೆ ಅವರು ಹೋಗುವ ವ್ಯವಸ್ಥೆ ಮಾಡಲಾಗಿದೆ. ಆಮೇಲೆ ನಡೆಯುವ ಘಟನೆಗಳನ್ನು ಉಹಿಸಿಕೊಳ್ಳಲಾಗುತ್ತಿಲ್ಲ.
**ಮಾಚಣ್ಣ:** ಗುರುವ ಕಟ್ಟಿಗೆಯ ಬಂಡಿಗಳ ಜೊತೆ ಬರುತ್ತಾರೆ. ಗಂಗಕ್ಕ ಮತ್ತು ಶಂಕರಕ್ಕ ಅಕ್ಕನಾಗಮ್ಮ ಮತ್ತು ಸಂಗಡಿಗರ ಕಾಳಜಿ ಮಾಡುತ್ತಾರೆ. ಉಳಿದುದೆಲ್ಲ ಅಣ್ಣ ಬಸವಣ್ಣನ ಆಜ್ಞೆಯಂತೆ ನಡೆಯುತ್ತದೆ. ಯಾರೂ ಯಾರ ಆದೇಶಕ್ಕೂ ಕಾಯುವದು ಬೇಡ.
ಶಂಭು ಅವರಿಗೆ ಸಮಸ್ಕರಿಸಿ ನಾವಿಬ್ಬರು ಬಂಡಿ ಏರಿದೆವು ಕೆಂಪರಾಜ ಬಂಡಿ ಹೊಡೆಯಲಾರಂಭಿಸಿದ. ಉಳಿದವರೆಲ್ಲ ತಮ್ಮ ಕುದರೆ ಏರಿ ಕತ್ತಲಲ್ಲಿ ಮರೆಯಾದರು.
**ಕೆಂಪರಾಜ:** ಅಕ್ಕ ಆಕಳುಗಳು ಮತ್ತ ಕರ ಗೌರಮ್ಮನವರನ್ನ ನಿಮ್ಮ ಹಾಗೆ ಪ್ರೀತಿಸಲಾಕ ಹತ್ಯಾವ. ಅವರು ನೀ ಚಿಂತಿ ಬಿಟ್ಟು ಹೋಗು ಅಂದಿದ್ದಾರೆ.
**ನನ್ನಾಕೆ**: ಆದರ ನಮ್ಮ ಬಂಡಿ ಹಿಂದ ಬರುವ ಆಕಳು ಕರ ಯಾವವು ಮತ್ತ. ಅವುಗಳ ಒದ್ದಾಟ ನೋಡದೆ ಗೌರಮ್ಮ ನಮ್ಮ ಜೊತೆ ಕಳಿಸ್ಯಾರ ಕಾಣಿಸ್ತೈತಿ.
**ಕೆಂಪರಾಜ:** ಅಕ್ಕ ಇಂತಹ ಒಳ್ಳೆಯ ಜನರಿಗೆ ಇಷ್ಟ ಕಷ್ಟ ಬರಬಾರದು.
**ಗುರುವ:** ಅಕ್ಕ ತಮ್ಮನ ಮಾತು ಸಾಕು. ಇಲ್ಲಿ ಎಲ್ಲಾ ಕಡೆ ಕಿವಿ ಅದಾವ. ಬೆಳ್ಳಿಚಿಕ್ಕಿ ಮೂಡುವ ಹೊತ್ತಿಗೆ ಖರೊಸಾ ಕಾಡಿನ ಅಂಚಿನಲ್ಲಿದ್ದ ಕೆರೆಗೆ ಬಂದಿದ್ದೆವು. ಬಂಡಿಗಳೆಲ್ಲ ಅವುಗಳು ಸೇರಬೇಕಾದ ಸ್ಥಾನ ಮಂಜಣ್ಣನವರ ಆದೇಶಾನುಸಾರ ಸೇರಿಯಾಗಿತ್ತು. ಉಳಿದಿದ್ದದ್ದು ಈ ಬಂಡಿಯೊಂದೇ .
**ಕೆಂಪರಾಜ:** ಇಲ್ಲಿ ಸ್ನಾನ ಮಾಡಿ ನೀವು ಮಂದಿರಕ್ಕೆ ಹೋಗಿ ನಾನು ಮತ್ತು ಅಕ್ಕ ಆಮೆಲೆ ಬರುತ್ತೇವೆ.
ಆ ಕಾಡಿನಂಚಿನಲ್ಲಿದ್ದದ್ದು ಮಹಾದೇವ ದೇವಸ್ಥಾನ, ಬಹು ಪುರಾತನವಾದ ಬೃಹತ ಮಂದಿರ. ಖರೋಸಾ ಗವಿಗಳಿಂದ ನೇರ ಸಂಪರ್ಕ ಹೊಂದಿದ್ದ ಮಂದಿರ. ಇನ್ನೂ ಮಂದಿರ ದೂರವಿರುವಾಗಲೇ ಸಾಲಾಗಿ ಅಂಗಡಿ ಪ್ರಾರಂಭವಾಗಿದ್ದವು ಜನಸಂದಣಿ ಸೇರಿತ್ತು. ನನಗೆ ಕೂಡಲಸಂಗಮದ ಜಾತ್ರೆಯ ನೆನಪಾಯಿತು. ದೇವರ ದರ್ಶನಕ್ಕೆ ಹೊರಟ ಜನಸಂದಣಿಯಲ್ಲಿ ಜಾಗ ಮಾಡಿಕೊಂಡು ಗುಡಿಯ ಮುಂದೆ ಹೋದೆ. ಅಲ್ಲಿ ಸಾಲಾಗಿ ಕಟ್ಟಿಗೆ ಹೇರಿದ ಬಂಡಿಗಳ ಪೂಜೆ ನಡೆದಿತ್ತು. ಆ ಎಲ್ಲ ಬಂಡಿಗಳ ರಕ್ಷಣೆಗಾಗಿ ಅನೇಕ ಯೋಧರು ನಿಂತಿದ್ದರು. ಮಂದಿರದಲ್ಲಿ ಮಂಗಳಾರತಿ ನಡೆದಿತ್ತು. ಪೂಜೆ ಮುಗಿದ ನಂತರ ಮಂದಿರದಿಂದ ಬಂದ ಹೆಣ್ಣುಮಕ್ಕಳು ಅಲ್ಲಿದ್ದ ಬಂಡಿಯನ್ನೇರಿದರು. ಅವರು ಧರಿಸಿದ ಬಟ್ಟೆ ಮತ್ತು ಬಂಗಾರದ ಸಾಮಾನುಗಳು ಇವರಿಗೆ ಯೋಧರು ತೋರಿಸುತ್ತಿದ್ದ ಮರ್ಯಾದೆ ಇವರೆಲ್ಲ ಆಡಳಿತಗಾರರ ಬಂಧುಗಳೆನ್ನುವದನ್ನು ಸಾರುತ್ತಿತ್ತು. ಅವರೆಲ್ಲ ಬಂಡಿಯೇರಿದ ಮೇಲೆ ನನಗೆ ಮುಂದಿನ ಬಂಡಿಯೇರಲು ಹೇಳಿದರು. ಆ ಬಂಡಿಯ ಮುಂದೆ ಮಂಗಲವೇಢೆಯ ಯೋಧಪಡೆ ಮತ್ತು ಕರಡಿಮಜಲಿನವರು ಪ್ರತಿ ಬಂಡಿಯ ಎರಡೂ ಮಗ್ಗಲು ಒಬ್ಬ ಯೋಧ ಕುದುರೆಯ ಮೇಲೆ. ಅಂತೂ ಎಲ್ಲ

ಜನರ ಸಮ್ಮುಖದಲ್ಲಿ ಹರ ಹರ ಮಹಾದೇವ ಘೋಷಣೆಯೊಂದಿಗೆ ಮೆರವಣಿಗೆ ಹೊರಟಿತು. ಕಾಡು ದಾಟಿದ ಮೇಲೆ ಸಂಗೀತಗಾರರು ಬಂಡಿಯೇರಿದರು.
ನನಗೆ ಅಲ್ಲಿಯ ಊರುಗಳ ಪರಿಚಯವಿಲ್ಲ. ಯಾವುದೇ ಊರು ಬಂದಾಗ ಮತ್ತೆ ಸಂಗೀತದೊಂದಿಗೆ ಮೆರವಣಿಗೆ ಮತ್ತೆ ಕೆಲವು ಬಂಡಿಗಳಲ್ಲಿ ಬಂದ ಬೀಗರು ಸೇರಿಕೊಳ್ಳುತ್ತಿದ್ದರು. ದಾರಿಯಲ್ಲಿರುವ ಗುಡಿಯಲ್ಲಿ ಪೂಜೆ ಸಲ್ಲಿಸಿ ಅಲ್ಲಿದ್ದವರು ಕೊಟ್ಟ ನೀರು ಫಲಹಾರ ಸೇವಿಸಿದ ಮೇಲೆ ಬಂಡಿಗಳ ಸಾಲು ಮುಂದೆ ಸಾಗುತ್ತಿತ್ತು. ಅಲ್ಲಲ್ಲಿ ಎತ್ತುಗಳ ಬದಲಾವಣೆಯೂ ಆಗುತ್ತಿತ್ತು. . ಮಧ್ಯರಾತ್ರಿಯ ಹೊತ್ತಿಗೆ ಮಂಗಳವೇಢೆಯ ಒಂದು ವಿಶಾಲವಾದ ಗುಡಿಯ ಅಂಗಳದಲ್ಲಿ ಎಲ್ಲ ಬಂಡಿಗಳು ತಲುಪಿದವು. ಅಲ್ಲಿಯೇ ಬಂದಿದ್ದ ಶಂಭು ಮತ್ತು ಗೌರಮ್ಮ ಎಲ್ಲ ಬೀಗರ ಯೋಗಕ್ಷೇಮ ವಿಚಾರಿಸಿ ಅವರ ಊಟದ ವ್ಯವಸ್ಥೆ ಮಾಡಿದರು. ಪ್ರವಾಸಮಾಡುತ್ತ ಬಂಡಿಯಲ್ಲೇ ವಿಶ್ರಾಂತಿ ಪಡೆಯಿರಿ ನಾಳೆಯ ಪೂಜೆಯ ವೇಳೆಗೆ ಕುಡಚಿಯ ದೇವಸ್ಥಾನದಲ್ಲಿ ಪೂಜೆಯಿದೆ ಎಂದು ಹೇಳಿ ನಮ್ಮನ್ನೆಲ್ಲ ಬೀಳ್ಕೊಟ್ಟರು. ಅಲ್ಲಿರುವ ಎಲ್ಲ ಎತ್ತುಗಳ ಬದಲಾವಣೆಯಾಗಿತ್ತು. ಬೆಳ್ಳಿಚಿಕ್ಕಿ ಮೂಡುವ ಹೊತ್ತಿಗೆ ಪ್ರಯಾಣ ಪ್ರಾರಂಭವಾಗಿ ಅಲ್ಲಲ್ಲಿ ಆದರಾತಿಥ್ಯ ಮತ್ತು ವಿಶ್ರಾಂತಿ ಪಡೆದು ಸಾಯಂಕಾಲ ನದಿ ದಂಡೆ ತಲುಪಿದೆವು. ಅಲ್ಲೊಂದು ಬಂಡಿ ದಾಟುವಷ್ಟು ಹಗ್ಗ ಹಲಗೆ ಉಪಯೋಗಿಸಿ ಸೇತುವೆ ನಿರ್ಮಾಣವಾಗಿತ್ತು. ಮೊದಲು ಜನರನ್ನು ಆಮೇಲೆ ಅವರ ಬಂಡಿಗಳನ್ನು ದಾಟಿಸಿ ಗುಡಿಗೆ ಕಳಿಸಲಾಯಿತು. ಅದಾದ ಮೇಲೆ ಕಟ್ಟಿಗೆಯ ಬಂಡಿಗಳನ್ನು ದಾಟಿಸಲಾರಂಭಿಸಿದರು. ಇನ್ನೇನು ಕೊನೆಯ ಬಂಡಿ ದಾಟಬೇಕು ಅಷ್ಟರಲ್ಲಿ ಚಟ ಚಟ ಶಬ್ದದೊಂದಿಗೆ ಹಗ್ಗ ಹರಿದು ಬಂಡಿ ಎತ್ತು ಹೊಳೆಯ ನೀರಿನಲ್ಲಿ ಬಿದ್ದು ಹೋದವು. ಎಲ್ಲೆಡೆ ಹಾಹಾಕಾರ . ಅದೃಷ್ಟ ಚನ್ನಾಗಿತ್ತು ಎತ್ತುಗಳು ಮತ್ತು ಬಂಡಿಹೊಡೆಯುವವ ಈಸಿ ಪಾರದರಾದರೂ ಬಂಡಿ ಮತ್ತು ಕಟ್ಟಿಗೆಗಳು ನೀರುಪಾಲಾಗಿದ್ದವು. ಸೇತುವೆಗೆ ಉಪಯೋಗಿಸಿದ್ದ ಕೆಲವು ಕಟ್ಟಿಗೆಗಳು ಜಾರಿ ನದಿ ಪಾಲಾದವು. ಏನು ಮಾಡುವದೆಂದು ಗೊಂದಲದಲ್ಲಿದ್ದಾಗ ಮಲ್ಲಣ್ಣನವರು ಬಂದು ಅಲ್ಲಿರುವ ಹಗ್ಗ ಉಪಯೋಗಿಸಿ ಸೇತುವೆ ನಿರ್ಮಿಸಿ ಜನರಾದರೂ ನದಿ ದಾಟಬಹುದು. ಎಲ್ಲ ಕಟ್ಟಿಗೆ ಬಂಡಿಗಳು ಮಲ್ಲಣ್ಣನವರ ಮನೆ ಸೇರಿ ಕಟ್ಟಿಗೆ ಇಳಿಸಿದವು. ಮಲ್ಲಣ್ಣನವರು ಈ ಎಲ್ಲ ಬಂಡಿಗಳನ್ನು ಸ್ವಚ್ಛಮಾಡಿ ಎತ್ತುಗಳ ಮೈ ತೊಳೆದು ಪ್ರಸಾದ ತೆಗೆದುಕೊಳ್ಳಿ ಎಂದು ಹೇಳಿ ಕಳಿಸಿದರು. ಗುಡಿಗೆ ಹೋದವರು ಅಲ್ಲಿಂದ ಬಣ್ಣ ಹಚ್ಚಿದ ಕೊಲ್ಲಾರ ಬಂಡಿಗಗಳಲ್ಲಿ ಬಂದಿಳಿದರು. ಮಲ್ಲಣ್ಣನವರ ಮನೆಯಂಗಳದ ತುಂಬ ಸಿಂಗಾರಗೊಂಡ ಬಂಡಿಗಳೇ ಬಂಡಿಗಳು. ಬಂದವರಿಗೆಲ್ಲ ಬಿಸಿನೀರಿನ ಸ್ನಾನದ ವ್ಯವಸ್ಥೆ, ಪ್ರಸಾದದ ವ್ಯವಸ್ಥೆ ಆಗಿತ್ತು. ಮನೆತುಂಬ ಓಡಾಡುವ ಹುಡುಗರು. ಅಲ್ಲಿಯ ಸಂಭ್ರಮ ನೋಡಲು ಎರಡು ಕಣ್ಣು ಸಾಲದಾಗಿತ್ತು.
ಅಲ್ಲಿಗೆ ಬಂದ ಮಲ್ಲಣ್ಣನವರು ಅಳಿಯನ ಜೊತೆ ನೀವೆಲ್ಲರೂ ಬರಲು ಬೀಗರು ಹೇಳಿಕಳಿಸಿದ್ದಾರೆ. ಅದಕ್ಕೆ ಪ್ರಸಾದ ಮುಗಿದ ತಕ್ಷಣ ಎಲ್ಲರೂ ಹೊರಟುಬಿಡಿ. ನಾವು

ಉಳಿದವರೆಲ್ಲ ಜಾತ್ರೆ ಮುಗಿಸಿ ಉಳಿದ ಬೀಗರನ್ನೆಲ್ಲ ಕರೆದುಕೊಂಡು ಅಕ್ಕಿಕಾಳಿಗೆ ಬರುತ್ತೇವೆ. ಅಲ್ಲಿಯವರೆಗೆ ಅಲ್ಲಿಯ ಕಾರ್ಯಕ್ರಮ ನಡೆಯುತ್ತಿರಲಿ. ಆ ಮಾತು ಎಲ್ಲರಿಗೂ ಸರಿ ಎನಿಸಿತು. ಎಲ್ಲರೂ ತಯಾರಾಗಲು ಪ್ರಾರಂಭಿಸಿದರು.
ನಾನೇನು ಮಾಡಬೇಕು ಎಂದು ವಿಚಾರಿಸತೊಡಗಿದೆ. ಅಷ್ಟರಲ್ಲಿ ಒಬ್ಬ ಕುದುರೆ ಸವಾರ ಎರಡು ಕುದರೆಯೊಡನೆ ಬಂದು ನಡೆಯಿರಿ ಹೋಗೋಣ ಎಂದ ಅವನ ತಂದ ಕುದುರೆಯೇರಿ ಅವನ ಹಿಂದೆ ನಡೆದೆ. ಆಗಲೇ ಅಲ್ಲಿ ಅಳಿದುಳಿದ ಕಟ್ಟಿಗೆ ಫಳಿಗಳನ್ನು ಉಪಯೋಗಿಸಿ ಒಂದು ಕುದುರೆ ದಾಟುವಷ್ಟು ಸೇತುವೆ ನಿರ್ಮಾಣವಾಗಿತ್ತು.
ನಾವು ನದಿದಾಟಿ ಸ್ವಲ್ಪ ದೂರ ಸಾಗಿದ ಮೇಲೆ ಇಬ್ಬರೂ ಕುದುರೆಯಿಂದಿಳಿದು ಕುಳಿತೆವು. ಅವ ತಂದ ಬುತ್ತಿ ಬಿಚ್ಚಿ ಊಟ ಮಾಡಿದೆವು. ನಮ್ಮನ್ಯಾರೂ ಗಮನಿಸುತ್ತಿಲ್ಲ ಎನ್ನುವದನ್ನು ಖಚಿತ ಪಡಿಸಿದ ಮೇಲೆ
**ಗುರುವ:** ಭದ್ರಣ್ಣ ಏನೀ ಅವತಾರ. ನಿನ್ನನ್ನು ಗುರುತುಹಿಡಿಯಲು ಕಷ್ಟವಾಯಿತು.
**ಭದ್ರಣ್ಣ:** ಗಳಿಗೆಗೊಮ್ಮೆ ಯೋಧರ ಕೆಲಸಗಳನ್ನು ಬದಲಾವಣೆ ಮಾಡುತ್ತಿದ್ದಾರೆ. ಯಾರ ಮೇಲೂ ನಂಬಿಕೆಯಿಲ್ಲ. ಈಗ ನನ್ನನ್ನು ಈ ವಿಭಾಗದ ಗುಪ್ತಚರ ನಾಯಕನನ್ನಾಗಿ ಕಳಿಸಿದ್ದಾರೆ. ಇಲ್ಲಿ ನಡೆದ ಎಲ್ಲಾಕೆಲಸಗಳ ವಿವರ ನನ್ನ ಜೊತೆಗಿದ್ದ ಇತರ ಏಳು ಜನಕ್ಕೂ ಗೊತ್ತು. ನಾವೀಗ ಇನ್ನೂ ಯಾರಿಗೂ ಸಂದೇಶ ಕಳಿಸಿಲ್ಲ. ಆ ವಿಷಯ ಮುಖತಃ ಅರಿಕೆ ಮಾಡಲಿದ್ದೇವೆ. ನನ್ನ ಜೊತೆಗಿದ್ದವರು ನನ್ನ ನಂಬಿಗಸ್ಥರು. ಈಗ ಸ್ವಲ್ಪು ಹೊತ್ತಿನಲ್ಲಿ ಈ ರಸ್ತೆಯ ಮೂಲಕ ನಾವೆಲ್ಲ ಹೊಗುತ್ತೇವೆ. ಹೋಗುವಾಗ ಅಲ್ಲಿರುವ ತಂಗುದಾಣಗಳಲ್ಲಿರುವ ನೀರು ಮತ್ತು ಇರಬಹುದಾದ ಅಹಾರಕ್ಕೆ ವಿಷ ಬೆರೆಸಿ ಬರುವ ಆದೇಶ ನಮಗಿದೆ.
ಈ ಮಾರ್ಗದಲ್ಲಿ ಯಾರೂ ಹೋಗಬಾರದು ಎನ್ನುವ ಉದ್ದೇಶ ಅವರದು.
**ಗುರುವ**: ಈ ಸಂಕಟದಿಂದ ಪಾರಾಗುವ ದಾರಿ ಯಾವದು.
**ಭದ್ರಣ್ಣ:** ನಮ್ಮನೆಲ್ಲ ನಿನ್ನ ಯೋಧರಿಂದ ಕೊಲ್ಲಿಸಿಬಿಡುವದು.
**ಗುರುವ:** ಏನು ನೀವು ಹೇಳುತ್ತಿರುವದು. ಅಣ್ಣ ಬಸವಣ್ಣನವರ ಆಜ್ಞೆ ಮೀರಿ ಅದೂ ನಮ್ಮವರನ್ನ ಕೊಲ್ಲುವದು ಯಾವ ನ್ಯಾಯ?
**ಭದ್ರಣ್ಣ:** ಇದು ನ್ಯಾಯ ಅನ್ಯಾಯ ಯೋಚಿಸುವ ಸಮಯವಲ್ಲ. ಸಾವಿರಾರು ಶರಣರ ಜೀವನ ಮರಣದ ಪ್ರಶ್ನೆ ಅಲ್ಲದೇ ವಚನಗಳ ಉಳಿವಿನ ಪ್ರಶ್ನೆ ಇದೆ. ನಾವು ಇಲ್ಲಿಂದ ಮರಳಿದರೆ ನಾವು ಅಣ್ಣನವರ ಕನಸುಗಳಿಗೆ ಕೊಳ್ಳಿ ಇಟ್ಟಂತಾಗುತ್ತದೆ. ಬಿಜ್ಜಳ ಮತ್ತು ಸೋಮೇಶ್ವರನಿಗಿಂತ ನಾವು ಶರಣರಿಗೆ ಮಾಡಿದ ಅನ್ಯಾಯ ಹೆಚ್ಚಿನದಾಗುತ್ತದೆ. ಅನಿವಾರ್ಯ ನಿನ್ನ ಶಿಷ್ಯನನ್ನು ಕರೆದು ಬೇಗ ಆಜ್ಞೆ ಮಾಡು.
**ಗುರುವ:** ಇದು ಸಾಧ್ಯವಿಲ್ಲ ಭದ್ರಣ್ಣ. ಕೆಂಪರಾಜ ಇಲ್ಲ ನನ್ನ ಯೋಧರನ್ನು ಸಂಪರ್ಕಿಸುವ ಪದ್ಧತಿಯೂ ಗೊತ್ತಿಲ್ಲ.

**ಭದ್ರಣ್ಣ:** ಅದು ಸುಲಭ. ನಾನು ಕತ್ತಿ ಹೊರತೆಗೆಯುತ್ತೇನೆ ನೀನು ಜೋರಾಗಿ ಚೀರಬೇಕು ಅಷ್ಟೆ.
ಹಾಗೆ ಮಾಡಿದೆ. ಒಂದೇ ಒಂದು ಕ್ಷಣ ಭದ್ರಣ್ಣನ ಕೈಯಲ್ಲಿದ್ದ ಕತ್ತಿ ಬಾಣ ತಗುಲಿ ದೂರ ಹೋಗಿ ಬಿದ್ದಿತ್ತು. ನನ್ನ ನಾಲ್ಕು ಜನ ತಮ್ಮಂದಿರು ಬಿಲ್ಲು ಬಾಣ ಹಿಡಿದು ಭದ್ರಣ್ಣನ ಸುತ್ತ ನಿಂತಿದ್ದರು ನನ್ನ ರಕ್ಷಣೆಗಾಗಿ.
**ಗುರುವ:** ಇವರು ನನ್ನ ಗೆಳೆಯರು ಶಾಂತರಾಗಿ ನಿಮ್ಮನ್ನು ಕರೆಯಲು ನಾವು ಮಾಡಿದ ಉಪಾಯವಿದು. ಇವರ ಜೊತೆ ಇನ್ನು ಏಳು ಜನ ಈ ದಾರಿಯಲ್ಲಿ ಬರುತ್ತಾರೆ ಅವರನ್ನು ಕೊಲ್ಲಬಾರದು ಆದರೆ ಅವರು ಒಂದು ವಾರ ಎಲ್ಲಿಯೂ ಹೋಗದಂತೆ ಮಾಡಬೇಕು. ಸಾಧ್ಯವಿದೆಯೇ? ಸರಿ ಎಂದವರೇ ಕತ್ತಲಲ್ಲಿ ಮರೆಯಾದರು.
**ಭದ್ರಣ್ಣ:** ನಾನಿನ್ನು ಮರಳಿ ಹೋಗುತ್ತೇನೆ. ನೀವು ಇಂದು ಯಾರಿಗೂ ಗೊತ್ತಾಗದಂತೆ ಗುಡಿಯಲ್ಲಿದ್ದು ನಾಳೆ ಮುಂಜಾನೆ ಈ ದಾರಿಯಲ್ಲಿ ಹೊರಟು ಶರಣರನ್ನು ಸೇರಿಕೊಳ್ಳಿ.
**ಗುರುವ:** ನಿನ್ನ ಉಪಕಾರ ಎಂದೆಂದಿಗೂ ಮರೆಯುವಂತಹುದಲ್ಲ.
ಇಬ್ಬರೂ ಬಹಳ ಭಾರವಾದ ಮನಸ್ಸಿನಿಂದ ಬೇರೆ ಬೇರೆ ದಿಕ್ಕಿನಲ್ಲಿ ಹೋದೆವು. ಸ್ವಲ್ಪ ಹೊತ್ತಿನಲ್ಲಿ ಮುದುಕನೊಬ್ಬ ಅಲ್ಲಿಗೆ ಬಂದ ನಡೆಯಿರಿ ಹೋಗೋಣ ಎಂದ. ಮೋನಣ್ಣ ಎನ್ನುವದು ಅವನ ಧ್ವನಿಯಿಂದ ಯಿಂದ ಗೊತ್ತಾಗಿತ್ತು. ಇಬ್ಬರೂ ಕುದುರೆ ಏರಿ ಹೊರಟೆವು.

a. **ಆಸೆಯಾಗಿ ನಿಂದು, ರೋಷವಾಗಿ ಕೊಂದು, ಮೋಸವಾಗಿ ತಿಂದು, ವೇಷವಾಗಿ ಸುಳಿದು,**
**ಭಾಷೆಯಾಗಿ ನಿಂದು, ಪಾಶವಾಗಿ ಕಟ್ಟಿ, ಶೇಷವಾಗಿ ಕರಗಿ, ಮೊಸಲಕ್ಷಿಯಾಗಿ**
**ಜಗವ ಮರುಳುಮಾಡಿ ಕಾಡುತಿದ್ದುದು ನಿಮ್ಮ ಮಾಯದ ದಿಗಡ**
**ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ.** --- ಹೇಮಗಲ್ಲ ಹಂಪ

b. **ದಿಟದಿಟ ಈ ಬಂದುತ್ತೆ, ಈ ಬಂದುತ್ತೆ ಸಾವು, ಎನಗಿನ್ನೆಂತಯ್ಯಾ?**
**ಸ್ಥಿರಾಯುಗಳೆನಿಪ ದೇವಜಾತಿಗಳೆಲ್ಲ ಸತ್ತುದ ಕೇಳುತ್ತಿದ್ದೇನೆ.**
**ಮತ್ತೆಯೂ ಅರಿದು ಅಧರ್ಮವನೆ ಮಾಡುವೆನು. ಧರ್ಮವ ಮಾಡೆನು, ದುಷ್ಕರ್ಮಿ ನಾನು, ಎನಗೆಂತಯ್ಯಾ?**
**ಸುಧರ್ಮಿ ನೀನು, ಭಕ್ತಿಜ್ಞಾನವೈರಾಗ್ಯವ ಬೇಗ ಬೇಗ ಇತ್ತು ಸಲಹಯ್ಯಾ**
**ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.**
---ಉರಿಲಿಂಗಪೆದ್ದಿ.

ಗಮನಿಸಿ:

ನನ್ನ ಕನಸಿನಲ್ಲಿ ಬರುವ ವ್ಯಕ್ತಿಗಳು, ಸನ್ನಿವೇಷಗಳು, ಸ್ಥಳಗಳು ಕಾಲ್ಪನಿಕ ಎನ್ನುವದು ನಿಜವಾದರೂ ಆ ವಿವರಗಳು ಆಗ ನಡೆದ ಘಟನೆಗಳಿಗೆ ಬಹಳ ಹತ್ತಿರ ಎನ್ನಿಸುತ್ತದೆ. ಅದರಲ್ಲೂ ಅಲ್ಲಿಯ ಸ್ಥಳಗಳು ಪೂರ್ಣ ಕಾಲ್ಪನಿಕ ಎನಿಸಿದರೂ ಅವುಗಳ ಅಸ್ತಿತ್ವ ಇನ್ನೂ ಇದೆಯೇ ಎನ್ನುವ ಭಾವನೆ ಬರುತ್ತದೆ. ಉದಾಹಣೆಗೆ ಖರೋಸಾ ಗವಿಗಳು ಮತ್ತು ಅದರ ಸುತ್ತಮುತ್ತಲ ಪ್ರದೇಶ.

ಖರೋಸಾ ಗವಿಯಲ್ಲಿರುವ ಶಿವಮಂದಿರ ಮತ್ತು ಸ್ವಲ್ಪ ದೂರದಲ್ಲಿರುವ ಮಹಾದೇವ ಮಂದಿರ ಮತ್ತು ಇತರ ಮಂದಿರಗಳು. ಗವಿಗಳಿಂದ ಕೆಳಗಿಳಿದು ಬಂದಾಗ ಇರುವ ದೊಡ್ಡ ಕೆರೆ, ಕೆರೆಯ ಪಕ್ಕದಲ್ಲಿರುವ ಮಂದಿರ. ಆ ಮಂದಿರಕ್ಕೆ "ಬಲಿ ಮಂದಿರ" ಎಂದು ಈಗಲೂ ಕರೆಯುತ್ತಾರೆ.

ಏನಾಗುತ್ತಿದೆ ನನಗೆ ಗೊತ್ತಾಗುತ್ತಿಲ್ಲ. ಅತ್ತಿಂದ ಇತ್ತ ಇತ್ತಿಂದ ಅತ್ತ ಹೋಗುವ ಬರುವ ಕೆಲಸ. ನನ್ನಿಂದಾದ ಕೆಲಸ ಯಾವದೂ ಇಲ್ಲ. ನಾನು ನಿಮಿತ್ತ ಮಾತ್ರ. ಮೋನಣ್ಣನ ಕುದುರೆ ಹಿಂದೆ ನನ್ನ ಕುದುರೆ ಹೋಗುತ್ತಿತ್ತು. ಅವೆರಡು ತರಬೇತಿ ಪಡೆದ ಕುದುರೆಗಳು ಅವು ನಡೆದಾಗ ಸಪ್ಪಳವಾಗುತ್ತಿರಲಿಲ್ಲ.
ದಾರಿಯಲ್ಲೊಂದು ಗುಡಿ ಕಾಣಿಸಿತು ಒಳಗೆ ಹೋಗಿ ಮಲಗಿದ್ದಷ್ಟೇ ನೆನಪು.
"ಏಳು ಮಾವ ಏಳು ಎಷ್ಟೊತ್ತು ಮಲಗೋದು. ಅಕ್ಕ ಹಾಲು ತಂದಾಳ ಕುಡಿ ಏಳು" ಯಾರೊ ಕೈಹಿಡಿದು ಎಬ್ಬಿಸಿದ ಅನುಭವ. "ಏಳು, ಏಳು" ಎನ್ನುವ ಆ ಮಾತು ನನ್ನನ್ನು ಏಳುವಂತೆ ಮಾಡಿತು. ನಿಧಾನವಾಗಿ ಕಣ್ದೆರೆದೆ. ಅಲ್ಲಿದ್ದದ್ದು ಕತ್ತಲೆ. ಇನ್ನಷ್ಟು ಕಣ್ಣರಳಿಸಿ ನೋಡಿದಾಗ ಒಂದು ಮಂದವಾಗಿ ಉರಿಯುವ ಪಣತಿ ಅಲ್ಲಿರುವ ಕತ್ತಲೆಯನ್ನು ಸೀಳಿ ಬೆಳಕು ಬೀರುತ್ತಿತ್ತು. ಆಗ ಮತ್ತೆ "ಏಳು" ಶಬ್ದ ಮತ್ತೆ ಕೇಳಿಸಿತು. ಇನ್ನಷ್ಟು ದಿಟ್ಟಿಸಿದಾಗ ಎದುರಿಗೆ ಶುಭ್ರ ವಸ್ತ್ರಧಾರಿಯಾದ ತೇಜಸ್ವಿ ಯುವಕ ನನಗೆ ಏಳಲು ಹೇಳುತ್ತಿದ್ದ. ಪೂರ್ಣ ಎಚ್ಚರವಾಗಿ ಕಣ್ಣರಳಿಸಿ ನೋಡಿದಾಗ ನನ್ನಿಂದ "ಚನ್ನಾ" ಎನ್ನುವ ಮಾತು ಹೊರಬಂತು.
**ಚನ್ನ**: ಹೌದು ಮಾಮಾ ನಾನು ನಿಮ್ಮ ಚನ್ನ. ಏಳು ಹಾಲು ಕುಡಿ.
**ಗುರುವ:** ಅಂದು ಬಂದು ಮಾಯವಾದ ನಿನ್ನನ್ನು ಹುಡುಕದ ದಿನವಿಲ್ಲ. ಇಲ್ಲಿ ನಿನ್ನನ್ನು ಕಂಡು ಸಂತೋಷವಾಯಿತು. ನನ್ನ ಮನದ ಸಂಕಟ ನಿವಾರಿಸಲು ಅಣ್ಣ ಬಸವಣ್ಣ ನಿನ್ನನ್ನು ಕಳಿಸಿದ್ದಾನೆ. ನಾನು ಮಾಡಿದ ತಪ್ಪಿನಿಂದ ಆದ ಅನಾಹುತ ನೆನೆಸಿಕೊಂಡಾಗ ಬದುಕುವ ಆಶೆಯೇ ಹೊರಟುಹೋಗಿ ಬದುಕಲೇಬಾರದು ಎನಿಸಿತ್ತು.
**ಚನ್ನ:** ಮೊದಲು ಹಾಲು ಕುಡಿದ ಮೇಲೆ ಎಲ್ಲ ವಿಷಯ ವಿವರಿಸು.
ಚನ್ನ ನನ್ನಾಕೆಯ ಕೈಯಲ್ಲಿದ್ದ ಹಾಲಿನ ಕುಡುಕೆ ತೆಗೆದುಕೊಂಡು ನನಗೆ ಕುಡಿಸಿದ. ಅಮೃತ ಕುಡಿದ ಅನುಭವ. ಪೂರ್ಣ ಎಚ್ಚರವಾಯಿತು. ಅಲ್ಲಿಯ ಕತ್ತಲೆಗೆ ಕಣ್ಣು ಹೊಂದಿಕೊಂಡು ಹೋಯಿತು. ನಾನೊಂದು ಗವಿಯಲ್ಲಿದ್ದ ದೃಶ್ಯ ಪೂರ್ಣ ಕಾಣಿಸಹತ್ತಿತ್ತು. ಆ ಗವಿಯ ತುಂಬ ಜನವೋ ಜನ. ಎಲ್ಲರೂ ನನ್ನತ್ತಲೇ

ಕುತೂಹಲದಿಂದ ನೋಡುತ್ತಿದ್ದರು. ಆಗ ತಲೆಯನ್ನು ನೇವರಿಸಿದ್ದು ಮಮತೆಯ ಕೈ. ಯಾರೆಂದು ನೋಡಿದರೆ ಅಲ್ಲಿದ್ದವರು ಅಕ್ಕ ನಾಗಮ್ಮ ಮತ್ತು ಗಂಗಾಂಬಿಕೆ. ನನಗೆ ನಂಬಲಾಗಲಿಲ್ಲ. ಅವರ ಕಾಲಿಗೆ ನಮಸ್ಕಾರ ಮಾಡಲು ಅವರ ಕಾಲ್ಮುಟ್ಟಿ ಆವಕ್ಕಾದೆ. ಅವರ ಅಂಗಾಲು ಕಲ್ಲು ಮುಳ್ಳು ಚುಚ್ಚಿ ಕೆಂಪಾಯಿತ್ತು ಅಲ್ಲಿ ರಕ್ತ ಹೆಪ್ಪುಕಟ್ಟಿದ ಗುರುತುಗಳು ಕಣ್ಣಿಗೆ ರಾಚುತ್ತಿದ್ದವು. ಆ ಪಾದಗಳನ್ನು ಹಣೆಗೆ ಒತ್ತಿಕೊಂಡೆ ದುಃಖದಿಂದ ಬಿಕ್ಕಿದೆ. ಅವರು ನನ್ನನ್ನು ಪ್ರೀತಿಯಿಂದ ಎತ್ತಿ ಕೂಡ್ರಿಸಿ.
**ಅಕ್ಕ ನಾಗಮ್ಮ**: ಈಗ ನೋವಿಗೆ ದುಃಖಪಡುವ ಸಮಯವಲ್ಲ. ಇನ್ನಷ್ಟು ಕಷ್ಟಪಡಲು ನಾವೆಲ್ಲ ತಯಾರಾಗಬೇಕಾಗಿದೆ. ನನ್ನ ತಲೆ ನೇವರಿಸುತ್ತ ಹೇಳದ ವಚನ ಅರ್ಥವಾಗದಿದ್ದರೂ ಮನಕ್ಕೆ ಸಮಾಧಾನವಾಗಿತ್ತು.
**ಗಂಗಾಂಬಿಕೆ:**

> **ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೊ**
>
> **ಮಾದಲಾಂಬಿಕಾನಂದನನು ?**
>
> **ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೊ**
>
> **ಮಾದರಸನ ಮೋಹದ ಮಗನು ?**
>
> **ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊಗಂಗಾಪ್ರಿಯ**
>
> **ಕೂಡಲಸಂಗನ ಶರಣ ಚೆನ್ನ ?**—ಗಂಗಾಂಬಿಕೆ

ಅವರ ಅಭಯ ಹಸ್ತ ತಲೆಯಮೇಲಿಟ್ಟಾಗ ಆದ ಅನುಭವ ಅವರ್ಣನೀಯ.
**ಚನ್ನ:** ಯಾಕ ಏನಾಯಿತು? ತುಂಬಾ ನೊಂದು ಹೋಗಿದ್ದೀಯಾ ಮಾವಾ?
**ಗುರುವ:** ಅಣ್ಣ ಬಸವಣ್ಣನವರ ಮಾತು ಮೀರಿ ನನ್ನ ತಮ್ಮಂದಿರು ನಾಲ್ಕು ಯೋಧರನ್ನು ಅನಿವಾರ್ಯವಾಗಿ ಕೊಲ್ಲಬೇಕಾಯಿತು.
**ಮಂಚಣ್ಣ:** ಅವರನ್ನು ಕೊಲ್ಲದಿದ್ದರೆ ಏನಾಗುತ್ತಿತ್ತು?
**ಗುರುವ:** ಎಲ್ಲ ಕೆರೆಗಳ ನೀರು ವಿಷಮಯವಾಗುತ್ತಿತ್ತು. ಅವನ್ನು ಕುಡಿದ ಪ್ರಾಣಿ, ಪಕ್ಷಿ ಮತ್ತು ಮಾನವರು ಸಾವನ್ನಪ್ಪುತ್ತಿದ್ದರು.
**ಮಂಚಣ್ಣ:** ಆ ಎಲ್ಲ ಪ್ರಾಣಿ, ಪಕ್ಷಿ ಮತ್ತು ಮಾನವರ ಪ್ರಾಣ ಉಳಿಸಿದ ಕೆಲಸ ಮಾಡಲು ನಿನ್ನ ಆದೇಶ ಸಹಾಯಮಾಡಿತು, ನೀನು ನಿಮಿತ್ತ ಮಾತ್ರ. ಮತ್ತೇಕೆ ಚಿಂತೆ.
**ಚನ್ನಬಸವಣ್ಣ:** ನೀನು ನಿನ್ನ ಕೆಲಸ ಮಾಡಿದ್ದೀಯಾ.
**ಗುರುವ:** ನಾನು ಏನೋ ಪಾಪ ಮಾಡಿದಂತೆ ಎನಿಸುತ್ತದೆ. ನನ್ನ ಗೆಳೆಯರ ಬಂಧನಕ್ಕೆ ನಾನು ಕಾರಣನಾದೆನು. ಕಾದಾಟದಲ್ಲಿ ಅವರು ಮಡಿದರೆ ನಾನೇ ಅದಕ್ಕೆ ಕಾರಣನಾಗುತ್ತೇನೆ.
**ಚನ್ನಬಸವಣ್ಣ:**

**ಆನು, ನೀನು, ಅರಿದೆ ಮರೆದೆ, ಅಳಿದೆನುಳಿದೆನೆಂಬ ಸಂಶಯ ಭ್ರಮೆ,**

**ಅತತ್ವ ತತ್ವವಿವೇಕಭ್ರಮೆ, ಮೂಲ ಸ್ಥೂಲ ಸೂಕ್ಷ್ಮ ವಿಪರೀತ ಭ್ರಮೆ,**

**ಪುಣ್ಯಪಾಪ ಸ್ವರ್ಗ ನರಕ ಬಂಧಮೋಕ್ಷ ಪ್ರವರ್ತಕ ನಿವರ್ತಕ**

**ಆದಿಯಾದ ಸಪ್ತಕರ್ಮ ಬಂಧಭ್ರಮೆ, ಹುಸಿಜೀವ ಪರಮನೈಕ್ಯಸಂಧಾನ ಭ್ರಮೆ,**

**ಯೋಗದಾಸೆ ಸಿಲುಕುಭ್ರಮೆ, ಅಂತಮರ್ುಖಭ್ರಮೆ ಬಹಿಮರ್ುಖಭ್ರಮೆ,**

**ಅನೃತಭ್ರಮೆ ಸತ್ಯಭ್ರಮೆ ನಿತ್ಯಭ್ರಮೆ, ವಾಗದ್ವೈತಭ್ರಮೆ, ಅದ್ವೈತಭ್ರಮೆ,**

**ಮಂತ್ರಭ್ರಮೆ ತಂತ್ರಭ್ರಮೆ, ನಾಹಂ ಭ್ರಮೆ, ಕೋಹಂ ಭ್ರಮೆ, ಸೋಹಂ ಭ್ರಮೆ.**

**ತತ್ವ ಸಕರಣವೇಷ್ಟಿತ ಜಗತ್ರಯವೆಲ್ಲಾ ಮಾಯಾಮಯ.**

**ಕೂಡಲಚೆನ್ನಸಂಗಾ ನಿಮ್ಮ ಶರಣಂಗಾವ ಭ್ರಮೆಯೂ ಇಲ್ಲ.** / 292 -- ಚನ್ನಬಸವಣ್ಣ.

**ಗುರುವ:** ಅಲ್ಲ ಚನ್ನ ಇಷ್ಟು ಸಣ್ಣವಯಸ್ಸಿನಲ್ಲಿ ಇಷ್ಟೊಂದು ಜ್ಞಾನ ಅದು ಹೇಗೆ ಪಡೆದೆ.

**ಚನ್ನಬಸವಣ್ಣ:** ನನ್ನ ತಾಯಿ ನಾಗಮ್ಮ ತಂದೆ ಶಿವದೇವ ಅವರು ಹೆಸರಿಡುವಾಗಲೇ ಕಿವಿಯಲ್ಲಿ ವಚನ ಹೇಳಿದರು. ಇನ್ನು ನನ್ನ ಸೋದರಮಾವ ಬಸವಣ್ಣ,ಅತ್ತೆ ಗಂಗಾಂಬಿಕೆ ಮತ್ತು ನೀಲಾಂಬಿಕೆಯವರು ನನ್ನನ್ನು ವಚನ ಹೇಳುತ್ತಲೇ ಆಡಿಸಿದರು. ನಾನು ಬೆಳೆದದ್ದು ಶರಣರ ತೊಡೆಯ ಮೇಲೆ ವಚನ ಕೇಳುತ್ತ. ನಾವು ಗೆಳೆಯರು ಆಟವಾಡಿದ್ದು ವಚನ ಹೇಳುತ್ತ. ನಾನು ಓದಿದ್ದು, ಬೆಳೆದದ್ದು ಅನುಭವಮಂಟಪದಲ್ಲಿ ವಚನಗಳ ವಿಶ್ಲೇಷಣೆ ಕೇಳುತ್ತ. ಎಲ್ಲ ಶರಣರ ಪ್ರೀತಿ ಆಶೀರ್ವಾದ ಮತ್ತು ಅನುಭವಮಂಟಪದಲ್ಲಿ ಎಲ್ಲ ಶರಣರು ತಮ್ಮ ಅನುಭಾವ ನನಗೆ ಧಾರೆಯೆರೆದು ಬೆಳೆಸಿದರು.

**ಗುರುವ:** ನಮ್ಮನ್ನು ಕ್ಷಮಿಸಿಬಿಡು ಚನ್ನಬಸವಣ್ಣ. ನಿಮ್ಮನ್ನು "ಚನ್ನಾ" ಎಂದು ಸಲುಗೆಯಿಂದ ಕರೆದುದಕ್ಕಾಗಿ ಕ್ಷಮಿಸಿ. ನಿಮಗೆ ಗಾಣ ಹೊಡೆಯಲು ಹಚ್ಚಿದ ತಪ್ಪು ನನ್ನದು ಕ್ಷಮಿಸು.

**ಚನ್ನಬಸವಣ್ಣ:** ಅಕ್ಕ ಮತ್ತು ಮಾವನ ಅನನ್ಯ ಪ್ರೀತಿ ಮತ್ತು ಕೈತುತ್ತು ಸಿಕ್ಕು ಆನಂದಪಟ್ಟ ಭಾಗ್ಯ ನನ್ನದು. ನೀವು ಅಂದರೆ ಆ ಪ್ರೀತಿಗೆ ಅಪಮಾನ. ನೀವು ಚನ್ನ ಎಂದು ಕರೆದಾಗಲೇ ಮನಸ್ಸಿಗೆ ಹಿತ. ನನಗಿಂತ ಅಕ್ಕ ಮಾವ ಸಿಕ್ಕಿದ್ದು ನನ್ನ ಭಾಗ್ಯ.

**ನನ್ನಾಕೆ:** ನನಗೆ ಕಲ್ಯಾಣಕ್ಕೆ ಬಂದು ಅನುಭವ ಮಂಟಪಕ್ಕೆ ಹೋಗಲಾಗಲಿಲ್ಲ ಎನ್ನುವ ಮನದ ಚಿಂತೆ ಇಂದು ದೂರಾಯಿತು.

**ಶಂಕರಮ್ಮ:** ಈಗ ಇಲ್ಲಿಯೇ ಅನುಭವ ಮಂಟಪ ನೋಡಿದ ಭಾಗ್ಯ ನಮ್ಮದಾಯಿತು

**ಅಕ್ಕ ನಾಗಮ್ಮ:** ನಾಲ್ಕು ಜನ ಸೇರಿ ತಮ್ಮ ಅನುಭವಗಳನ್ನು ಹಂಚಿಕೊಂಡರೆ ಅದುವೇ ಅನುಭವ ಮಂಟಪ. ಅದಕ್ಕೇನು ಭವ್ಯ ಬಂಗಲೆ ಬೇಕೆ? ಶುದ್ಧ ಮನದ ತಾರ್ಕಿಕ ವಿಚಾರಮಾಡುವ ಆಸಕ್ತಿ ಇದ್ದರೆ ಸಾಕು.

**ಶಾಂತಣ್ಣ:** ಅಲ್ಲಮಪ್ರಭುದೇವರು ಪರ್ಯಟನಕ್ಕ ಹೊರಟಮೇಲೆ ನಿಮ್ಮ ತಮ್ಮ ಚನ್ನಬಸವಣ್ಣನವರೇ ಅನುಭವಮಂಟಪದ ಚಾಲನೆ ಮಾಡಿದರು. ಅವರೇ ಇಂದಿನ ಅನುಭವಗೋಷ್ಟಿ ಸಂಚಾಲಕರು.

1. **ಪರುಷ ಮುಟ್ಟಲು ಕಬ್ಬುನ ಹೊನ್ನಾದಂತೆ ಪುಣ್ಯ ಪಾಪಗಳಿಲ್ಲ, ಸ್ವರ್ಗನರಕಗಳಿಲ್ಲಯ್ಯಾ ನಿಮ್ಮವರಿಗೆ. ಕೂಡಲಚೆನ್ನಸಂಗಾ ನಿಮ್ಮ ಶರಣ[ರು] ಭವರಹಿತರು** ---ಚನ್ನಬಸವಣ್ಣ.

2. **ಊರೊಂದೆಸೆ, ಕಾಡೊಂದೆಸೆ. ನರರೊಂದೆಸೆ, ಸುರರೊಂದೆಸೆ, ಹಗಲೊಂದೆಸೆ, ಇರುಳೊಂದೆಸೆ. ಪುಣ್ಯವೊಂದೆಸೆ, ಪಾಪವೊಂದೆಸೆ. ಜ್ಞಾನವೊಂದೆಸೆ, ಅಜ್ಞಾನವೊಂದೆಸೆ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮಶರಣರೊಂದೆಸೆ, ಲೋಕವೊಂದೆಸೆ**-- ಸ್ವತಂತ್ರ ಸಿದ್ಧಲಿಂಗ

ಅಲ್ಲಿದ್ದ ಎಲ್ಲ ಶರಣರು ಅಲ್ಲಿ ನಡೆದ ಸಂವಾದವನ್ನು ಕೇಳಿ ನಿದ್ದೆಗೆ ಜಾರಿದರು.

**ಅಕ್ಕನಾಗಮ್ಮ**: ಖರೋಸಾ ಅರಣ್ಯದಲ್ಲೇನು ನಡೆದಿದೆ ಮಂಚಣ್ಣ?

**ಮಂಚಣ್ಣ:** ನಾವೆಲ್ಲ ಖರೋಸಾ ತೊರೆದ ಮೇಲೆ ಅಲ್ಲಿದ್ದ ಎಲ್ಲ ಯೋಧರ ಮೃತ ದೇಹಗಳನ್ನು ಹೊರತೆಗೆದು ಕಾಜಿನ ಪೆಟ್ಟಿಗೆಯಲ್ಲಿರಿಸಿ ಆ ದೇಹದ ಯಾವ ಅಂಗ ಛೇದನವಾಗಿದೆ ಎನ್ನುವದು ಕಾಣುವಂತೆ ಮಾಡಿ ಉಳಿದ ಭಾಗ ಹೂವಿನಿಂದ ಅಲಂಕಾರ ಮಾಡಿದ ಬಂಡಿಯಲ್ಲಿ ಈಗ ಕಲ್ಯಾಣಕ್ಕೆ ಒಯ್ದಿದ್ದಾರೆ. ಆದರೆ ಸತ್ಯವೇನೆಂದು ಎಲ್ಲ ಯೋಧರಿಗೂ ಗೊತ್ತು. ಶರಣರಿಗೆ ತೊಂದರೆ ಕೊಟ್ಟರೆ ಆಗುವ ಪರಿಣಾಮವಿದು ಎನ್ನುವದನ್ನು ಯೋಧರು ನಂಬಿದ್ದಾರೆ. ರಾಜ ಒಪ್ಪಿಸಿದ ಕೆಲಸಗಳನ್ನು ಕಾಟಾಚಾರಕ್ಕಾಗಿ ಮಾಡುತ್ತಿದ್ದಾರೆ.

ಕೆರೆಯಲ್ಲಿಯ ಶವಗಳೆಲ್ಲ ಸಾಗಿಸಿದ ಮೇಲೆ ಅಲ್ಲಿ ಗವಿಗಳನ್ನು ಅವುಗಳಿಗೆ ಸಾಗುವ ಮಾರ್ಗಗಳನ್ನು ನಾಶಮಾಡಿದ್ದಾರೆ. ಶಾಂತಣ್ಣನವರು ಜಾಣ್ಮೆಯಿಂದ ಅಲ್ಲಿಟ್ಟ ವಚನದ ಕಟ್ಟುಗಳು ಸುರಕ್ಷಿತವಾಗಿವೆ. ಸ್ಮಶಾನದಂತಾಗಿರುವ ಆ ಜಾಗಕ್ಕೆ ಇನ್ನೂ ಯಾರೂ ಕಾಲಿಡುವ ಧೈರ್ಯ ಮಾಡುವದಿಲ್ಲ. ಇನ್ನು ಸಾಮಾನ್ಯರು ಅಲ್ಲಿಯ ಆಡಳಿತಗಾರ ಗುರುವ ಮಾಟಗಾರ. ಅಲ್ಲಿಗೆ ಬಂದ ಯೋಧರನ್ನೆಲ್ಲ ಸಂಮೋಹನಕ್ಕೊಳಪಡಿಸಿ ಕೆರೆಗೆ ಹಾರುವಂತೆ ಮಾಡಿಬಿಟ್ಟು ಶರಣರನ್ನು ರಕ್ಷಿಸಿದ ಮಹಾಪುರುಷ ಎಂದು ಹಾಡಿ ಹೊಗಳುತ್ತಿದ್ದಾರೆ.

**ಗುರುವ:** ಯೋಜನೆ ರೂಪಿಸಿದವರು ಮಂಚಣ್ಣನವರು, ಕಾರ್ಯರೂಪಕ್ಕೆ ತಂದವರು ದೊರೆ. ನಿಮಿತ್ತ ಮಾತ್ರ ನಾನು.

**ನನ್ನಾಕೆ**: ಈಗ ಗೊತ್ತಾತ ನೋಡ್ರಿ ನನ್ನನ್ನು ಮತ್ತು ನನ್ನ ತಮ್ಮನನ್ನು ವಶೀಕರಿಸಿಕೊಂಡು ಅವರು ಹೇಳಿದಂಗ ಕೇಳುವಂಗ ಮಾಡ್ಯಾರ. ಪಾಪ ನನ್ನ ತಮ್ಮ ಚನ್ನ ಬೆಳತನಕಾ ಗಾಣ ಹೊಡದು ಸುಸ್ತಾದ. ದನಕರುಗಳೆಲ್ಲ ಪಾಪ ಇವರನ್ನ ಬೆನ್ನುಹತ್ತಿ ಯಾಕ ಬಂದವು ಈಗ ಗೊತ್ತಾತ.

**ಚನ್ನಬಸವಣ್ಣ:** ಅದಕ ಮಹಾರಾಜರು ಇವನ ಮ್ಯಾಲ ಪ್ರೀತಿ ಹೆಚ್ಚಾಗಿ ಇವನಿಗೆ ಮತ್ತು ಇವನಿಗೆ ಸಹಾಯ ಮಾಡಿದ ದೊರೆಗೆ ಗಲ್ಲು ಶಿಕ್ಷೆ ವಿಧಿಸಿ ಹುಡುಕಿ ಕೊಟ್ಟವರಿಗೆ ಖರೋಸಾ ಆಡಳಿತಗಾರನನ್ನಾಗಿ ಮಾಡುವದಾಗಿ ರಾಜಾಜ್ಞೆ ಹೊರಡಿಸಿದ್ದಾರೆ.

**ಮಂಚಣ್ಣ:** ಮಹಾರಾಜನಷ್ಟೇ ಅಲ್ಲ ಅಲ್ಲಿದ್ದ ಸಂಪ್ರದಾಯವಾದಿಗಳೆಲ್ಲ ಜೊತೆಗೂಡಿ ವಚನಗಳನ್ನು ನಾಶಮಾಡುವ ಮತ್ತು ಶರಣರಿಗೆ ಎಲ್ಲಿಯೂ ಆಶ್ರಯ ಸಿಗದೇ ನೆಲೆಯಾಗಿ ನಿಲ್ಲದಂತೆ ಮಾಡುವ ಯೋಜನೆ ರೂಪಿಸಿದ್ದಾರೆ.

**ಚನ್ನಬಸವಣ್ಣ**: ಆ ಯೋಜನೆಗಳನ್ನು ವಿವರವಾಗಿ ಹೇಳಿದರೆ ಅದರಿಂದ ಪಾರಾಗುವ ಕ್ರಮಗಳನ್ನು ನಾವು ಯೋಜಿಸಬಹುದು.

**ಮಂಚಣ್ಣ:**

ಕಲ್ಯಾಣದಲ್ಲಿ ಮತ್ತು ಸುತ್ತಮುತ್ತಲೂ ಇರುವ ಪ್ರವಚನಕಾರರನ್ನು, ಪಂಡಿತರನ್ನು ಕರೆಸಿಕೊಂಡು ಒಬ್ಬೊಬ್ಬರಿಗೆ ಒಂದು ಯೋಧನ ಶವದ ಬಂಡಿಯಲ್ಲಿ ಹೋಗಿ ದಾರಿಯಲ್ಲಿ ಬರುವ ಪ್ರತಿ ಗ್ರಾಮದಲ್ಲಿ ಮತ್ತು ಗಲ್ಲಿ ಗಲ್ಲಿಗಳಲ್ಲಿ ಕೆಳಗಿನ ವಿಷಯಗಳನ್ನು ಜನರಿಗೆ ಮನಮುಟ್ಟುವಂತೆ ವಿವರಿಸುವ ಜವಾಬ್ದಾರಿ ಕೊಟ್ಟಿದ್ದಾರೆ. ಅವುಗಳನ್ನು ವಿವರಿಸಲು ಯಾವ ಕಥಾಪ್ರಸಂಗ ಹೇಳಬೇಕು ಮತ್ತು ಯಾವ ಶ್ಲೋಕ ಉದಾಹರಿಸಬೇಕು ಎನ್ನುವದನ್ನು ಕಲಿಸಿಕೊಟ್ಟಿದ್ದಾರೆ. ಅವರಿಗೆಲ್ಲ ಸಂಭಾವನೆ ಈಗಾಗಲೇ ಕೊಟ್ಟಾಗಿದೆ.

1. ಸಾವಿರಾರು ವರ್ಷಗಳಲ್ಲಿ ನಡೆದು ಬಂದ ಪರಂಪರೆ ಮತ್ತು ಈಗಿರುವ ಜಾತಿ ವಿಂಗಡನೆಯ ಮಹತ್ವ ತಿಳಿಸುವದು.
2. ಯಾವ ಕುಲದವರು ಯಾರನ್ನು ಮದುವೆಯಾಗಬಹುದು ಎಂಬ ಪುರಾತನರ ನಿರ್ಧಾರ ತಿಳಿಸುವದು.
3. ಆ ನಿಯಮವನ್ನು ಮೀರಿದವರಿಗೆ ರಾಜನು ವಿಧಿಸಬಹುದಾದ ಶಿಕ್ಷೆಯ ವಿವರಣೆ. ಮಹಾರಾಜರಿಗಿರುವ ಪರಮಾಧಿಕಾರದ ವಿವರಣೆ.
4. ಕಲ್ಯಾಣದಲ್ಲಿ ನಡೆದ ಧರ್ಮವಿರೋಧಿ ಚಟುವಟಿಕೆಗಳ ವಿವರಣೆ. ಅದರಲ್ಲೂ ಉನ್ನತ ಕುಲದ ವಧುವನ್ನು ಕೀಳುಕುಲದ ವರನಿಗೆ ಮದುವೆ ಮಾಡಿ ಎರಡೂ ಕುಲಗಳ ಪರಂಪರೆ ಸರ್ವನಾಶವಾದ ಸಾವಿರಾರು ವರ್ಷಗಳ ಪರಂಪರೆಯನ್ನು ಮುರಿದ ವಿವರಣೆ. ಶರಣರು ಮಾಡಿದ ತಪ್ಪನ್ನು ಮನದಟ್ಟು ಮಾಡಿಕೊಡುವದು.

5. ಮಹಾರಾಜ ಬಿಜ್ಜಳ ವಿಧಿಸಿದ ಶಿಕ್ಷೆ ಎಷ್ಟು ಸಮರ್ಪಕ ಮತ್ತು ಪುರಾತನ ಧರ್ಮ ಉಳಿಸಲು ಅವನ ಹೋರಾಟ ವಿವರಿಸಿ ಎಳೆಹೂಟೆ ಶಿಕ್ಷೆಯನ್ನು ಸಮರ್ಥಿಸುವದು.
6. ಧರ್ಮ ಉಳಿಸುವ ಹೋರಾಟದಲ್ಲಿ ತೊಡಗಿದ ಜನರ ಪ್ರಿತಿಪಾತ್ರರಾದ ಮಹಾರಾಜರನ್ನು ಶರಣರು ಕೊಲೆ ಮಾಡಿದ ಮತ್ತು ರಾತ್ರಿಯೆಲ್ಲ ಯೋಧರನ್ನು ಹುಡುಕಿ ಹುಡುಕಿ ಕೊಲೆಗೈದು ಕಟ್ಟಿಗೆಯಲ್ಲಿ ಹಾಕಿ ಸುಟ್ಟ ಪ್ರಕರಣವನ್ನು ಎಲ್ಲರಿಗೂ ಮನದಟ್ಟಾಗುವಂತೆ ಸಂಗೀತ, ಕಥೆಗಳು ಮತ್ತು ಶ್ಲೋಕಗಳ ಮೂಲಕ ವಿವರಿಸುವದು.
7. ಶರಣರೆಲ್ಲ ಮಾಯಗಾರರು, ಮಾಟಗಾರರು ಮತ್ತು ಮಂತ್ರವಾದಿಗಳು ಎನ್ನುವದನ್ನು ಬಿಂಬಿಸಲು ಕೆಳಗಿನ ಉದಾಹರಣೆಗಳನ್ನು ಕೊಡುವದು.
    - ಖರೋಸಾ ಕಾಡಿಗೆ ಯೊಧರು ಅಪರಾಧಿಗಳ ಶೋಧಕ್ಕೆ ಹೋದಾಗ ಮಾಯೆಯಿಂದ ರಾಕ್ಷರನ್ನು ಸೃಷ್ಟಿಸಿ ಯೋಧರ ಸಂಹಾರ ಮಾಡಿ ಕೆರೆಗೆ ಎಸೆದ ಪ್ರಸಂಗ ರಸವತ್ತಾಗಿ ವಿವರಿಸುವದು.
    - ಭೀಮಾನದಿ ದಡದಲ್ಲಿ ಕಲ್ಯಾಣದ ಯೋಧರು ಕಲಿತನದಿಂದ ಶರಣರು ಸೃಷ್ಟಿಸಿದ ಮಾಯಾಸುರರ ಜೊತೆ ಕಾದಾಡಿ ಮಡಿದ ಪ್ರಸಂಗ ವಿವರಿಸುವದು. ಶರಣರೆಷ್ಟು ಕ್ರೂರಿಗಳು ಎನ್ನುವದನ್ನು ಬಿಂಬಿಸುವದು.
    - ಹೀಗೆ ವೀರಮರಣ ಹೊಂದಿದ ಯೋಧನ ಮನೆಗಳಿಗೆ ಅವರು ಉಪಯೋಗಿಸಿದ ವಸ್ತುಗಳನ್ನು ತಲುಪಿಸಿ ಅವರ ಮನೆಯವರಿಗೆ ಹೊಲ ಮನೆ ಹಾಗೂ ಜೀವನೋಪಾಯಕ್ಕಾಗಿ ಧನ ಹೊಸ ಮಹಾರಾಜ ಕೊಟ್ಟ ವಿವರಣೆ ಕೊಟ್ಟು ಹೊಸ ಮಾಹಾರಾಜ ಎಷ್ಟು ಉದಾರಿ ಮತ್ತು ಜನಾನುರಾಗಿ ಎಂದು ಬಿಂಬಿಸುವದು.
    - ಶರಣರು ಧರ್ಮವಿರೋಧಿಗಳಾಗಲು ಮತ್ತು ಕ್ರೂರಿಗಳಾಗಲು ಕಾರಣ ವಚನಗಳು ಅವನ್ನು ಸಿಕ್ಕಲ್ಲಿ ನಾಶಮಾಡಲು ಪ್ರೇರೇಪಿಸುವದು.
    - ಶರಣರಿಗೆ ಆಶ್ರಯ ಕೊಟ್ಟರೆ ಮುಂದೆ ಆಗಬಹುದಾದ ಧರ್ಮವಿರೋಧಿ ಮತ್ತು ರಾಜವಿರೋಧಿ ಚಟುವಟಿಕೆಗಳ ನಡೆಯುವ ಆತಂಕ ವಿವರಿಸಿ ಅವರಿಗೆಲ್ಲಿಯೂ ಆಶ್ರಯ ನೀಡದಂತೆ ಜನರನ್ನು ಪ್ರೇರೇಪಿಸುವದು.
8. ಇನ್ನು ಮಹಾರಾಜ ಸೋಮೇಶ್ವರ ತೋರಿದ ಜಾಣತನ ಮಡಿದ ಯೋಧರಿಗೆ ಜಮೀನು, ಮನೆ ಮತ್ತು ಪರಿಹಾರ ಎಲ್ಲ ಅಲ್ಲಿನ ಆಡಳಿತಗಾರರು ಭರಿಸಲು ಆದೇಶಿಸಿದ್ದು. ಮತ್ತು ಯೋಧರ ಜೊತೆಗೆ

ಬಂದ ಯೋಧರ ಮತ್ತು ಪ್ರವಾಚನಕಾರರರಿಗೆ ಕೊಡುಗೆ ಕೊಡುವ ಆದೇಶ ಹೊರಡಿಸಿದ್ದು.

**ಅಕ್ಕ ನಾಗಮ್ಮ**: ದುರ್ಜನರು ಬಹಳ ವಿಚಾರ ಮಾಡಿ ಸಂಚು ರೂಪಿಸಿದ್ದರೂ ಅದರಿಂದ ಪಾರಾಗಲು ಒಳ್ಳೆಯವರಿಗೆ ದಾರಿಯೊಂದು ಇದ್ದೇ ಇರುತ್ತದೆ. ಅದನ್ನು ಹುಡುಕಬೇಕು ಅಷ್ಟೇ.

**ಶಾಂತಣ್ಣ:** ಈ ಸಂಚು ರೂಪಿತವಾಗುವ ಮೊದಲೇ ವಚನಗಳೆಲ್ಲ ಶರಣರ ಮೂಲಕ ದೂರದ ಊರಿಗೆ ತಲುಪಿಸಲಾಗಿದೆ. ಕೆಲವು ಪ್ರತಿಗಳನ್ನು ಅಲ್ಲಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ಅವೂ ಮುಂದಿನ ಜನಾಂಗದವರು ಹುಡುಕಿ ತೆಗೆಯುತ್ತಾರೆ. ಉಳವಿಗೆ ಸಾಗಿಸಬೇಕಾದ ವಚನಗಳು ಧಾರವಾಡಕ್ಕೆ ಸಾಗಿಸಲ್ಪಟ್ಟು ಸುರಕ್ಷಿತವಾಗಿವೆ.

**ಚನ್ನಬಸವಣ್ಣ:** ವಚನ ರಕ್ಷಿಸಿದ್ದಾಯಿತು. ಆದರೆ ಆ ವಚನಗಳ ಅರ್ಥವನ್ನು ಸರಿಯಾಗಿ ಮಾಡಿಕೊಡುವ ವ್ಯವಸ್ಥೆ ಮಾಡಬೆಕಾಗಿದೆ.

**ಅಕ್ಕ ನಾಗಮ್ಮ:** ಕಲ್ಯಾಣದಿಂದ ಹೋದ ಶರಣರನ್ನು ಊರೊಳಗೆ ಬಿಡದಿದ್ದರೇನು. ಊರೊಳಗೆ ಇರುವ ಶರಣರು ತತ್ವ ಪ್ರಸಾರ ಮಾಡಲು ಸಾಕಲ್ಲ. ನಾವು ಅವರಿಗೆ ವಚನ ತಲುಪಿಸಬೇಕು. ಅವರು ಹೇಗೆ ಕೆಲಸ ಮಾಡಬೇಕು ಎನ್ನುವದನ್ನು ಆಲೋಚಿಸಬೇಕು. ಮಹಾರಾಜ ಹಾಗೂ ಅವನ ಸಂಗಡಿಗರಿಗೆ ಅರಿವಾಗದಂತೆ ಈ ಕಾರ್ಯ ನಡೆಯಬೇಕು.

**ಶಂಕರಕ್ಕ:** ದಿನಾ ಮುಂಜಾನೆ ಪ್ರತಿ ಮನೆಗೆ ಹೋಗಿ ಒಂದು ವಚನ ಹೇಳುವಂಗಾಗಬೇಕು. ಅವನ ಹತ್ತಿರ ಯಾವ ವಚನವಿರುವದಿಲ್ಲ ಆಗ ಪ್ರತಿಯೊಬ್ಬರಿಗೆ ವಚನ ತಲುಪಿ ಅವರ ಮನದಲ್ಲಿ ತತ್ವ ನೆಲೆಯೂರುತ್ತದೆ.

**ನನ್ನಾಕೆ:** ನಮ್ಮೂರಾಗ ಒಬ್ಬ ಮುದುಕ ಅದಾನ, ಅವಗ ಹತ್ತಿರದ ಬಂಧುಗಳಾರೂ ಇಲ್ಲ ಒಂದು ಹಳೆ ಮನಿಯಾಗ ಇರತಾನ. ಒಂದು ಪುಟ್ಟಿ ತೊಗೊಂಡು ಮುಂಜಾನೆ ಮನಿ ಮನಿ ಅಡ್ಡಾಡಿ ರೊಟ್ಟಿ ಪಲ್ಲೆ ತೊಗೊಂಡು ಹೋಗಿ ಒಂದು ಗಿಡದ ತಳಗ ನೀರು ಇಟಗೊಂಡು ಕುತ್ಕೊಂಡು ಆ ದಾರಿಯಲ್ಲಿ ಬರುವ ಹೋಗುವವರಿಗೆ ಕರೆದು ಊಟ ಮಾಡಿಸಿ ಅವರಿಗೆ ಕಥಿ ಹೇಳತಾನ. ಹುಡುಗರು ನೆರಳಾಗ ಆಡೂದು ಹೊಟ್ಟಿ ಹಸಿತಾಗ ಉಣ್ಣೂದು ಮಾಡಕೊಂತ ಬಾಳ ಕಥಿ ಕಲತಾರ. ಅವಗ ವಚನ ಗೊತ್ತಿದ್ದರ ಊರ ಹುಡುಗರೆಲ್ಲಾ ಇಷ್ಟೊತ್ತಿಗೆ ವಚನ ಕಲೀತಿದ್ದರು.

**ಗಂಗಾಂಬಿಕೆ:** ನೀವು ಹೇಳೂದು ಒಂದು ದಾರಿ ತೋರಿಸಲಾಕ ಹತ್ಯೆತಿ. ಎಲ್ಲಾ ಊರಾಗ ಈ ತರಹದ ಒಂದಿಬ್ಬರು ಸಿಗತಾರ.

**ಶ್ರೀಶೈಲಪ್ಪ**: ಅಕ್ಕಾ ನೀವು ಒಪ್ಪಿದರ ನಾಳೆ ನಾನು ಸಮೀಪದ ಒಂದ ಊರಿಗೆ ಹೋಗಿ ಜನರಿಗೆ ವಚನ ಕಲಿಸಿ ಬರತೀನಿ. ಆ ಊರಾಗ ಒಬ್ಬರಾದರೂ ಸಿಕ್ಕತಾರೇನು ನೋಡತೀನಿ.

**ಅಕ್ಕ ನಾಗಮ್ಮ:** ಎಲ್ಲ ಕಡೆ ಯೋಧರಿದ್ದಾರೆ. ಜೋಕೆಯಿಂದ ಹೋಗಿ ಬಾ. ಈಗ ಎಲ್ಲಾರೂ ವಿಶ್ರಾಂತಿ ಪಡೆಯೋಣ

ಅಷ್ಟರಲ್ಲಿ ಹಕ್ಕಿ ಪಕ್ಕಿಗಳ ಶಬ್ದ ಕೇಳಿಸತೊಡಗಿದವು.
**ಮಂಚಣ್ಣ**: ನಮ್ಮನ್ನೆಲ್ಲ ಹುಡುಕುವ ಯೋಧರ ತಂಡ ಹೊರಟಿದೆ.
ಎಲ್ಲರೂ ದೀಪ ಆರಿಸಿ ಮಲಗಿಕೊಂಡೆವು.

**ದಿಟದಿಟ ಈ ಬಂದುತ್ತೆ, ಈ ಬಂದುತ್ತೆ ಸಾವು, ಎನಗಿನ್ನೆಂತಯ್ಯಾ?**

**ಸ್ಥಿರಾಯುಗಳೆನಿಪ ದೇವಜಾತಿಗಳೆಲ್ಲ ಸತ್ತುದ ಕೇಳುತ್ತಿದ್ದೇನೆ.**

**ಮತ್ತೆಯೂ ಅರಿದು ಅಧರ್ಮವನೆ ಮಾಡುವೆನು.**

**ಧರ್ಮವ ಮಾಡೆನು, ದುಷ್ಕರ್ಮಿ ನಾನು, ಎನಗೆಂತಯ್ಯಾ?**

**ಸುಧರ್ಮಿ ನೀನು, ಭಕ್ತಿಜ್ಞಾನವೈರಾಗ್ಯವ ಬೇಗ ಬೇಗ ಇತ್ತು ಸಲಹಯ್ಯಾ**

**ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.** ---ಉರಿಲಿಂಗಪೆದ್ದಿ.

ಎಂದಿನಂತೆ ಬೇಗ ಎಚ್ಚರವಾಗಿ ಶುಭ್ರನಾಗಿ ಗುಡಿಯಲ್ಲಿ ಬಂದು ಕುಳಿತೆ. ಆಗಲೇ ಅಲ್ಲಿ ಒಬ್ಬ ಬಿಳಿ ವಸ್ತ್ರಧಾರಿ ಕುಳಿತಿದ್ದರು. ಬಹಳಮಾಡಿ ಪ್ರವಾಸ ಮಾಡುತ್ತಿರುವ ಸಾಧು ಇರಬೇಕು ಎನಿಸಿತು. ಅವರಿಗೆ "ಶರಣು ಶರಣಾರ್ಥಿ ಗುರುಗಳೇ" ಎಂದೆ. ಅವರು ಪ್ರತಿಯಾಗಿ "ಶರಣು ಶರಣಾರ್ಥಿ" ಎಂದರು. ಎಲ್ಲಿಯೋ ಕೇಳಿದ ಪರಿಚಿತ ದನಿ. ದಿಟ್ಟಿಸಿ ನೋಡಿದಾಗ ಅವನು ಶ್ರೀಶೈಲಪ್ಪ.
**ಗುರುವ:** ಯಾಕೀ ವೇಷ. ನಿನ್ನೆಯವರೆಗೆ ಚನ್ನಾಗಿದ್ದಿರಿ. ಒಮ್ಮೆಲೆ ಸನ್ಯಾಸಿಯಾದುದೇಕೆ?
**ಶ್ರೀಶೈಲಪ್ಪ:** ಇಂದು ಒಂದು ಊರಿಗೆ ಹೋಗುತ್ತೇನೆ. ಅಲ್ಲಿ ಆಗುವ ಅನುಭವ ಬಂದು ನಿಮ್ಮೊಡನೆ ಹಂಚಿಕೊಳ್ಳುವೆ.
ಅವರು ಹೋಗಲು ಎದ್ದು ನಿಂತರು.
**ಗುರುವ**: ಹೆಗಲಲ್ಲಿ ಜೋಳಿಗೆ ಏಕೆ? ಮತ್ತು ಸಣ್ಣ ಗಂಟೆಗಳೇಕೆ?
**ಶ್ರೀಶೈಲಪ್ಪ:** ಹೊಟ್ಟೆ ತುಂಬಿಸಿಕೊಳ್ಳಲು ಹಿಟ್ಟು ಬೇಕು. ಮನೆಯವರು ಜೋಳಿಗೆಯಲ್ಲಿ ಹಿಟ್ಟು ಹಾಕುತ್ತಾರೆ ಮತ್ತು ಅದರಲ್ಲಿ ಗಂಜಿಮಾಡಿಕೊಳ್ಳಲು ಒಂದು ಗಡಿಗೆಯೂ ಇದೆ. ಯಾವುದೇ ಗುಡಿಗೆ ಹೋದರೂ ಅಲ್ಲಿ ಪ್ರವೇಶಮಾಡುವ ಮೊದಲು ಗಂಟೆ ಬಾರಿಸಿ ದೇವರೇ ಎಚ್ಚರವಾಗು ನಾನು ಬಂದಿದ್ದೇನೆ ಎನ್ನುವದು ಸಂಪ್ರದಾಯ. ನಾನು ಪ್ರತಿಮನೆಗೆ ಹೋಗುತ್ತಿರುವಂತೆಯೇ ಈ ಗಂಟೆಯ ಸಪ್ಪಳ ಆ ಮನೆಯಲ್ಲಿರುವ ಪ್ರತಿಯೊಬ್ಬನಿಗೆ " ದೇವರೇ ಏಳು ನನ್ನ ವಚನ ಕೇಳು" ಎಂದು ಹೇಳುತ್ತದೆ.
**ಗುರುವ:** ಹೋಗಿ ಬನ್ನಿ ನಿಮ್ಮ ಅನುಭವ ನಮಗೆಲ್ಲ ಹೊಸ ದಾರಿ ತೋರಬಹುದು.
ಅಂದು ಯಾವ ಕೆಲಸವಿರಲಿಲ್ಲ. ಶ್ರೀಶೈಲಪ್ಪ ಬರುವ ಹಾದಿಯನ್ನೇ ಕಾಯುವ ಕೆಲಸ. ವಚನ ಪಠಣ ಸದಾಕಾಲ ನಡೆದಿತ್ತು.

ಸ್ವಲ್ಪ ಕತ್ತಲಾದ ಮೇಲೆ ಅವರು ಬಂದರು. ಎಲ್ಲರೂ ಅವರ ಕಡೆ ಕುತೂಹಲದಿಂದ ನೋಡತೊಡಗಿದೆವು.

**ಅಕ್ಕ ನಾಗಮ್ಮ:** ದಣಿದು ಬಂದಿದ್ದೀರಿ ಸ್ವಲ್ಪು ವಿಶ್ರಮಿಸಿ ಆಮೇಲೆ ನಿಮ್ಮ ಅನುಭವ ಹಂಚಿಕೊಳ್ಳಿ.

**ಶ್ರೀಶೈಲಪ್ಪ:** ದಣಿವಾಗಿಲ್ಲ ಅಕ್ಕ. ನನಗೆ ಈ ಭೂಪ್ರದೇಶದ ಪರಿಚಯವಿರಲ್ಲ ಆದರೂ ಒಂದು ಕಾಲುದಾರಿಹಿಡಿದು ಹೊರಟೆ. ಕಾಡು ದಾಟಿ ಬಯಲು ಪ್ರದೇಶ ಬಂದು ಒಂದು ಹಳ್ಳಿ ಬಂದಿತು. ಅಲ್ಲಿಯ ಹಳ್ಳದಾಟಿ ಹೋದಕೂಡಲೇ ನನ್ನ ಸೊಂಟಕ್ಕೆ ಗಂಟೆ ಕಟ್ಟಿಕೊಂಡೆ ಮತ್ತು ಕೋಲಿಗೆ ಗೆಜ್ಜೆಕಟ್ಟಿ ತಲೆಗೆ ರುಮಾಲು ಸುತ್ತಿಕೊಂಡು ಊರ ಸಮೀಪಕ್ಕೆ ಬಂದಾಗ ನನ್ನನ್ನು ಸ್ವಾಗತಿಸಿದವರು ಅಲ್ಲಿಯ ನಾಯಿಗಳು. ಅವು ನನ್ನ ಗಂಟೆಯ ಸದ್ದು ಮತ್ತು ಕೋಲು ಮತ್ತು ಗೆಜ್ಜೆಯ ದನಿ ಕೇಳಿ ಸ್ವಲ್ಪ ದೂರದಿಂದ ಬೊಗಳಲು ಪ್ರಾರಂಭಿಸಿದವು. ನಾನು ಧೈರ್ಯದಿಂದ ಊರೊಳಗೆ ಹೋದ ಹಾಗೆ ಅವು ಸುಮ್ಮನಾದವು. ಅಲ್ಲೊಂದು ಮನೆಯ ಕಟ್ಟೆಯ ಮೇಲೆ ಐದಾರು ವರ್ಷದ ಹುಡುಗ ನಿಂತಿದ್ದ. ನಾನು ಆ ಮನೆಯ ಮುಂದೆ ನಿಂತುಕೊಂಡು ರಾಗವಾಗಿ ಅಣ್ಣನ ವಚನ

**"ತಂದೆ ನೀನು ತಾಯಿ ನೀನು ಬಂಧು ನೀನು ---ಹಾಲಲದ್ದು ನೀರಲದ್ದು"** –ಅಣ್ಣ ಬಸವಣ್ಣ

ರಾಗವಾಗಿ ಹಾಡಿದೆ. ಮೊದಲವನು ಲಕ್ಷಕೊಡದಿದ್ದರೂ ಎರಡನೇಯ ಸಲ ಹಾಡುವಾಗ ನನ್ನೊಡನೆ ದನಿ ಕೂಡಿಸಿದ

**"ತಂದೆ ನೀನು, ತಾಯಿ ನೀನು, ..."** ತೊದಲು ನುಡಿಯಿಂದ ದನಿಗೂಡಿಸತೊಡಗಿದ. ಒಳಗಿನಿಂದ ಬಂದ ತಾಯಿ ತನ್ನ ಮಗ ಹಾಡುವದನ್ನು ಕೇಳಿ ಮನೆಯವರನ್ನೆಲ್ಲ ಕೂಗಿ ಕರೆದಳು "ಬನ್ನಿ ಬನ್ನಿ ಪಾಪು ಹಾಡಾಕ ಹತ್ತೈತಿ, ಎಷ್ಟ ಚಂದ ಹಾಡತ್ತೈತಿ". ಮನೆಯಲ್ಲಿದ್ದವರೆಲ್ಲ ಹೊರಬಂದರು. ತಾಯಿ ಆ ಮಗುವನ್ನು ಎತ್ತಿಕೊಂಡು ಲೊಚ ಲೊಚನೆ ಮುತ್ತಿಟ್ಟು ಸಂತೋಷಪಟ್ಟಳು. ಈಗ ಅವರ ಲಕ್ಷ ನನ್ನ ಮೇಲೆ ಬಿತ್ತು. ನಾನು ಅದೇ ವಚನ ಮತ್ತೊಮ್ಮೆ ಹಾಡಿದೆ ಈ ಸಲ ಮನೆಯವರೆಲ್ಲ ಕೈಮುಗಿದು ದನಿಗೂಡಿಸಿದರು. ಆಗ ಮನೆಯ ಹಿರಿಯ ಒಳಗೆ ಬನ್ನಿ ಪ್ರಸಾದ ಸ್ವೀಕರಿಸಿ ದಕ್ಷಿಣೆ ತೆಗೆದುಕೊಂಡು ಹೋಗಿ ಅಯ್ಯ ಎಂದ. ಇಲ್ಲ ಯಜಮಾನರೇ ನನ್ನ ಕಾಯಕಕ್ಕೆ ತಡವಾಗುತ್ತದೆ ಒಂದು ಹಿಡಿ ಹಿಟ್ಟು ಹಾಕಿಬಿಡಿ ಎಂದೆ. ಅಷ್ಟರಾಗಲೇ ಅಲ್ಲಿ ಅನೇಕ ಹುಡುಗರು ಸೇರಿದ್ದರು. ಮನೆಯ ಯಜಮಾನಿ ಹಿಡಿಹಿಟ್ಟು ತಂದು ನನ್ನ ಜೋಳಿಗೆಯಲ್ಲಿ ಹಾಕಿದಳು. ನಾನು ಅವರಿಗೆ ಶರಣು ಹೇಳಿ "ಅಣ್ಣ ಬಸವಣ್ಣನ ಆಶೀರ್ವಾದ ನಿಮ್ಮ ಮೇಲಿರಲಿ" ಎಂದು ಹಾರೈಸಿ ಮುಂದಿನ ಮನೆಗೆ ಬಂದೆ. ಆಗಲೇ ಅಲ್ಲಿಯ ಮನೆಯವರು ಹೊರಬಂದಿದ್ದರು ಮಕ್ಕಳು ಸುತ್ತಲೂ ನೆರೆದಿದ್ದರು. ನಾನು ಅದೇ ವಚನವನ್ನು ಮತ್ತೆ ಹಾಡಿದೆ ಈ ಸಲ ಆ ಮನೆಯವರು ಮತ್ತು ನೆರೆದ ಮಕ್ಕಳು ನನ್ನ ಜೊತೆಯಾಗಿ ಹಾಡಿದರು. ಮನೆಯಾಕೆ ಹಿಡಿ ಹಿಟ್ಟು ತಂದು ನನ್ನ ಜೋಳಿಗೆಗೆ ಹಾಕಿದಳು. ಹೀಗೇಯೇ

ಐದಾರು ಮನೆಗಳ ಮುಂದೆ ನಾನು ಮತ್ತು ಮಕ್ಕಳು ಸಾಗಿದ ಮೇಲೆ ಒಂದು ಮಗು ಕೇಳಿತು "ಕಾಕಾ ನನಗೆ ಇನ್ನೊಂದು ವಚನ ಕಲಿಸು". ಮುಂದಿನ ಮನೆಗೆ ಹೋದಾಗ ಅಣ್ಣ ಬಸವಣ್ಣನವರ

**"ಕಳಬೇಡ, ಕೊಲಬೇಡ, ---ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"**

– ಅಣ್ಣ ಬಸವಣ್ಣ

ವಚನ ಹೇಳಿದೆ. ಅಲ್ಲಿದ್ದ ಮಕ್ಕಳು ಮತ್ತು ಮನೆಯವರೆಲ್ಲ ಜೊತೆಯಾಗಿ ಆ ವಚನ ಹೇಳಿದರು.

ಅಂತೂ ಊರೆಲ್ಲ ಅಲೆದಾಡಿದಾಗ ನನ್ನ ಜೋಳಿಗೆ ತುಂಬಿ ಭಾರವಾಗಿತ್ತು. ಹತ್ತಾರು ವಚನಗಳು ಅಲ್ಲಿನವರಿಗೆ ಕಂಠಸ್ಥವಾಗಿದ್ದವು. ಸಂಗೀತದಲ್ಲಿರುವ ಮಾಂತ್ರಿಕ ಶಕ್ತಿ ಮತ್ತು ವಚನಗಳಲ್ಲಿರುವ ಆಧ್ಯಾತ್ಮಿಕ ಶಕ್ತಿ ಜೊತೆಯಾಗಿ ಅಲ್ಲಿ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತ್ತು.

ಅಲ್ಲೊಂದು ಮರದ ನೆರಳಿನಲ್ಲಿ ಕುಳಿತೆ. ಮಕ್ಕಳೆಲ್ಲ ಮನೆಗೆ ಹೋದರು, ನನಗೂ ಹಸಿವಾಗಿತ್ತು. ಪಕ್ಕದಲ್ಲಿದ್ದ ಮನೆಯಾಕೆಗೆ ಕೊಡ ಮತ್ತು ಹಗ್ಗ ಕೇಳಿ ಪಡೆದು ಭಾವಿಯಲ್ಲಿ ನೀರು ಸೇದಿಕೊಂಡು ಕಲ್ಲು ಒಲೆಹೂಡಿ, ಒಣಕಟ್ಟಿಗೆ ಆರಿಸಿ ಒಲೆ ಹೊತ್ತಿಸಲು ತಯಾರಿ ಮಾಡಿದೆ. ಜೋಳಿಗೆಯಲ್ಲಿಯ ಹಿಟ್ಟು ಬಹಳಷ್ಟಾಗಿತ್ತು ಗಡಿಗೆ ಸಣ್ಣದಿತ್ತು. ನಾನೇನು ಮಾಡುತ್ತಿದ್ದೇನೆಂದು ಕುತೂಹಲದಿಂದ ನೋಡುತ್ತಿದ್ದ ಅಜ್ಜಿಯ ಮನೆಗೆ ಹೋಗಿ "ಅವ್ವ ಅಂಬಲಿ ಮಾಡಲು ಒಂದು ಗಡಿಗೆ ಕೊಡಿ" ಎಂದೆ. ಆಕೆ ಒಂದು ಗಡಿಗೆ, ಮುಚ್ಚಳ ಮತ್ತು ಒಂದು ತಟ್ಟೆಯಲ್ಲಿ ಬೆಂಕಿ ತಂದು ಕೊಟ್ಟಳು. ಆ ಗಡಿಗೆಯ ತುಂಬಾ ಅಂಬಲಿ ತಯಾರಾಗಿ ಇನ್ನಷ್ಟು ಹಿಟ್ಟು ಉಳಿದಿತ್ತು. ಅಜ್ಜಿ ಒಂದು ಗಡಗಿಯಲ್ಲಿ ಮಜ್ಜಿಗೆ ತಂದು ಕೊಟ್ಟಳು.

ನಾನು ಕಟ್ಟೆಯ ಮೇಲೆ ಕುಳಿತು ಕಣ್ಣುಮುಚ್ಚಿ ಅಕ್ಕ ನಾಗಮ್ಮನವರ ವಚನ

**ಎನ್ನ ಕುಲಸೂತಕವ ಕಳೆದಾತ ಬಸವಣ್ಣ. ಎನ್ನ ಛಲಸೂತಕವ ಕಳೆದಾತ ಬಸವಣ್ಣ.**

**ಎನ್ನ ತನುಸೂತಕವ ಕಳೆದಾತ ಬಸವಣ್ಣ. ಎನ್ನ ಮನಸೂತಕವ ಕಳೆದಾತ ಬಸವಣ್ಣ.**

**ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ. ಎನ್ನ ಭಾವಸೂತಕವ ಕಳೆದಾತ ಬಸವಣ್ಣ.**

**ಎನ್ನ ಅರುಹುಮರಹಿನ ಸಂದುಸಂಶಯವಬಿಡಿಸಿದಾತ ಬಸವಣ್ಣ.**

**ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ. ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ**

**ಬಸವಣ್ಣ.**

**ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ.**

**ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ**

**ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು---** – ಅಕ್ಕ ನಾಗಮ್ಮ

ವಚನ ರಾಗಬದ್ಧವಾಗಿ ಹೇಳತೊಡಗಿದೆ. ಕಣ್ಣುಬಿಟ್ಟಾಗ ಅಲ್ಲಿ ಅನೇಕ ಜನ ಕೈಮುಗಿದು ನಿಂತಿದ್ದರು. ನಾನು ಮತ್ತೊಮ್ಮೆ ಅದೇ ವಚನ ಹೆಳಿದಾಗ ಅವರೆಲ್ಲ ಭಕ್ತಿಯಿಂದ ಕೈಮುಗಿದು ದನಿಗೂಡಿಸಿದರು.
ಅಲ್ಲಿದ್ದ ಯುವಕರೊಬ್ಬರಿಗೆ ಈ ಪ್ರಸಾದ ಹಂಚಲು ನೆರವಾಗುತ್ತೀರಾ ಎಂದೆ. ಅಷ್ಟೇ ಸಾಕು ಅಲ್ಲಿದ್ದವರು ಮನೆಗೆ ಹೋಗಿ ಕುಡಿಕೆ ಹಿಡಿದು ಬಂದರು ಆ ಯುವಕ ಅವರಿಗೆಲ್ಲ ಪ್ರಸಾದ ಹಂಚತೊಡಗಿದ. ಅಲ್ಲಿಗೆ ಬಂದ ಮಹಿಳೆಯರು ಖಾಲಿ ಕೈಯಲ್ಲಿ ಬರಲಿಲ್ಲ ಬರುವಾಗ ಕೈಯಲ್ಲೊಂದು ತಟ್ಟೆ ಅದರಲ್ಲಿ ತಮ್ಮ ಮನೆಯಲ್ಲಿ ಮಾಡಿದ ಅಡಿಗೆಯನ್ನು ತಂದು ಯುವಕರಿಗೆ ಕೊಟ್ಟು ಪ್ರಸಾದ ತೆಗೆದುಕೊಳ್ಳಲು ಕುಳಿತುಕೊಳ್ಳಹತ್ತಿದರು. ಒಂದು ಕಡೆ ಕುಳಿತ ನನಗೆ ಶರಣು ಹೇಳಿ ಹೋಗುತ್ತಿದ್ದರು. ಮುಂಜಾನೆ ನನ್ನ ಬೆನ್ನುಹತ್ತಿದ್ದ ನಾಯಿಗಳು ದೂರದಲ್ಲಿ ನಿಂತು ಜೊಲ್ಲು ಸುರಿಸುತ್ತಿದ್ದವು. ನಾನೊಬ್ಬ ಯುವಕನನ್ನು ಕರೆದು " ಅಣ್ಣ ಅಲ್ಲಿರುವ ಪ್ರಾಣಿ ಪಕ್ಷಿಗಳಿಗೂ ಪ್ರಸಾದ ಕೊಡುವ ವ್ಯವಸ್ಥೆ ಮಾಡುತ್ತೀರಾ" ಎಂದೆ. ಆ ಮಾತು ಕೆಳಿ ಅವನು ಆವಾಕ್ಕಾದ ತನ್ನ ಗೆಳೆಯರನ್ನು ಕರೆದು ವಿಚಾರ ತಿಳಿಸಿದ. ಅವರಿಗೆ ಈ ಮಾತು ಹೊಸತು. ಅವರ ಉತ್ಸಾಹ ಇಮ್ಮಡಿಸಿತು. ಅಲ್ಲಿದ್ದ ನಾಯಿಗಳಿಗಷ್ಟೇ ಅಲ್ಲದೇ ಅಲ್ಲಿ ಹಾದು ಹೋಗುವ ದನಕರುಗಳಿಗೆಲ್ಲ ಪ್ರಸಾದ ನೀಡಿದರು. ದೂರದಲ್ಲಿ ಹರಿವಾಣಗಳಲ್ಲಿಟ್ಟ ಪ್ರಸಾದ ತಿನ್ನಲು ಬಂದ ಹಕ್ಕಿಗಳ ಗುಂಪು ನೋಡಿ ಸಂತೋಷಪಟ್ಟರು. ನಾನು ಮಾಡಿದ್ದು ಅಲ್ಪ ಗಂಜಿ ಅದು ಅಕ್ಷಯವಾಗಿ ಊರವರೆಲ್ಲರ ಪ್ರಸಾದವಾಗಿತ್ತು.
ಅಂತೂ ಎಲ್ಲರ ಪ್ರಸಾದ ಮುಗಿದು ಹೊರಡಬೇಕು ಎನ್ನುವಷ್ಟರಲ್ಲಿ ಯಜಮಾನರೊಬ್ಬರು ಅಲ್ಲಿಗೆ ಬಂದರು.
ಅವರನ್ನು ನೋಡಿ ಅಲ್ಲಿದ್ದವರೆಲ್ಲ ಗೌರವದಿಂದ ನಮಿಸಿ ದೂರ ಸರಿದು ನಿಂತರು. ನಾನು ಎದ್ದು ನಿಂತು "ಶರಣು ಶರಣಾರ್ಥಿ" ಹೇಳಿದೆ.
ಯಜಮಾನರು: ಬಹಳ ದಿನಗಳ ಮೇಲೆ ಬಸವನಾಮ ಕೇಳಿ ಬಹಳ ಸಂತೋಷವಾಯಿತು. ಅನಾರೋಗ್ಯದಿಂದ ಕಲ್ಯಾಣಕ್ಕೆ ಹೋಗಲಾಗಲಿಲ್ಲ. ಕಲ್ಯಾಣವೇ ಇಲ್ಲಿಗೆ ಬಂದಿತು.
**ಶ್ರೀಶೈಲಪ್ಪ:** ನೀವು ಹೇಳುವದು ಕೇಳಿ ಸಂತೋಷವಾಯಿತು. ಎಲ್ಲರೂ ಕಲ್ಯಾಣಕ್ಕೆ ಹೋಗುವ ಅವಶ್ಯಕತೆಯಿಲ್ಲ. ನಾವಿದ್ದಲ್ಲಿಯೇ ಕಲ್ಯಾಣ ನಿರ್ಮಿಸಿಬಹುದಲ್ಲವೇ?
ಯಜಮಾನರು: ಹೌದು ಇಂದು ಮುಂಜಾನೆಯಿಂದ ಇಲ್ಲಿಯವರೆಗೆ ನೀನು ಕಲ್ಯಾಣ ನಿರ್ಮಿಸಿದ ರೀತಿ ಕಣ್ಣಾರೆ ಕಂಡಿರುವೆ. ನೀವೇಕೆ ಇಲ್ಲಿಯೇ ಇದ್ದು ನಮಗೇಕೆ ಮಾರ್ಗದರ್ಶನ ಮಾಡಬಾರದು.
**ಶ್ರೀಶೈಲಪ್ಪ:** ಇಲ್ಲ ಯಜಮಾನರೇ ನನಗೀಗಾಲೇ ಶರಣರು ಬೇರೆ ಕಾಯಕ ಒಪ್ಪಿಸಿದ್ದಾರೆ.
ಯಜಮಾನರು ಇಲ್ಲಿ ಬಾರೋ ಪರಪ್ಪ ಎಂದರು.

ಇದುವರೆಗೆ ಉತ್ಸಾಹದಿಂದ ಓಡಾಡುತ್ತಿದ್ದ ಯುವಕ ಅಲ್ಲಿ ಬಂದು ಕುಳಿತುಕೊಂಡ.
**ಯಜಮಾನರು:** ಇವ ಪರಪ್ಪ. ವಚನಗಳನ್ನು ಬಹಳ ಚನ್ನಾಗಿ ಹಾಡುತ್ತಾನೆ. ಸಮಾಜದ ಎಲ್ಲ ಕೆಲಸಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾನೆ.
**ಶ್ರೀಶೈಲಪ್ಪ:** ಪರಪ್ಪನವರೆ ನಾನು ಇಂದು ಮಾಡಿದ ಕೆಲಸ ನಾಳೆಯಿಂದ ಮುಂದುವರಿಸಿಕೊಂಡು ಹೋಗಲು ಸಾದ್ಯವೇ?
**ಪರಪ್ಪ:** ಅದು ಬಸವಪ್ರಸಾದ. ನಾಳೆಯಿಂದ ನಾನೇನು ಮಾಡಬೇಕು ಎನ್ನುವ ದಾರಿ ತೋರಿಸಿದಿರಿ.
ಆಗಲೇ ಸಾಯಂಕಾಲವಾಗಿತ್ತು ಬಹಳ ಜನ ಅಲ್ಲಿ ಸೇರಿದ್ದರು.
ನಾನು ಹಾಕಿಕೊಂಡಿದ್ದ ಗಂಟೆ ಬಿಚ್ಚಿ ಪರಪ್ಪನ ಸೋಂಟಕ್ಕೆ ಕಟ್ಟಿದೆ ಮತ್ತು ನನ್ನ ಕೈಯಲ್ಲಿಯ ಗೆಜ್ಜೆಕೋಲು ಕೊಟ್ಟೆ.
ಅದು ಅವನು ಬಸವ ಕೊಟ್ಟ ಪ್ರಸಾದ ಎಂದು ಸ್ವೀಕರಿಸಿ.
"ನಾನು ಜೀವನ ಪರ್ಯಂತ ಈ ಕಾಯಕ ಮಾಡುವೆ".
ರಾಗವಾಗಿ ವಚನ ಹೇಳತೊಡಗಿದ.

**ಹೊರಗನೆ ಕೊಯ್ದು ಹೊರಗನೆ ಪೂಜಿಸಿದಡೆ, ಪರಿಣಾಮವಿಲ್ಲ, ಪ್ರಯೋಜನವಿಲ್ಲ ಸುಖ ದೊರೆಕೊಳ್ಳದು ನೋಡಾ !**

**ಅದೆಂತೆಂದಡೆ: ಸರ್ವಜೀವಂಗಳಲ್ಲಿ ಜೀವಹಿಂಸೆಯ ಮಾಡದಿರಬಲ್ಲಡೆ ಪ್ರಥಮಪುಷ್ಪ.**

**ಸರ್ವೆಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯಪುಷ್ಪ.**

**ಸರ್ವಾಹಂಕಾರವರತು ಶಾಂತನಾಗಿರಬಲ್ಲಡೆ ತೃತೀಯಪುಷ್ಪ.**

**ಸರ್ವವ್ಯಾಪಾರವಳಿದು ನಿವ್ರ್ಯಾಪಾರಿಯಾಗಿರಬಲ್ಲಡೆ ಚತುರ್ಥಪುಷ್ಪ.**

**ದುರ್ಭಾವ ಪ್ರಕೃತಿಯಳಿದು ಸದ್ಭಾವವೆಡೆಗೊಂಡಿರಬಲ್ಲಡೆ ಪಂಚಮಪುಷ್ಪ.**

**ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ ಷಷ್ಠಪುಷ್ಪ.**

**ಅನೃತವ ಮರೆದು ಸತ್ಯವ ನುಡಿಯಬಲ್ಲಡೆ ಸಪ್ತಮಪುಷ್ಪ.**

**ಸಕಲಪ್ರಪಂಚವಳಿದು ಶಿವಜ್ಞಾನಸಂಪನ್ನರಾಗಿರಬಲ್ಲಡೆ ಅಷ್ಟಮಪುಷ್ಪ.**

**ಇಂತೀ ಅಷ್ಟದಳಕಮಲದಲ್ಲಿ ಸಹಜಪೂಜೆಯ ಮಾಡಬಲ್ಲ ಶರಣರು**

**ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ-ಕೂಡಲಚೆನ್ನಸಂಗಮದೇವಾ** - ಚನ್ನಬಸವಣ್ಣ

ವಚನ ಹೇಳಿದಾಗ ಅಲ್ಲಿದ್ದವರೆಲ್ಲ ಚಪ್ಪಾಳೆ ತಟ್ಟಿ ತಮ್ಮ ಸಂತೋಷ ವ್ಯಕ್ತಪಡಿಸಿದರು.
ಕತ್ತಲಾಗುತ್ತದೆ ಬರುತ್ತೇನೆ ಎಂದು ಹೇಳಿ ನಾನಲ್ಲಿಂದ ಹೊರಟು ಬಂದೆ.
ಅಪರಿಚಿತನಾಗಿ ಅಲ್ಲಿಗೆ ಹೋದ ನಾನು ಆ ಊರ ಮನೆ ಮಗನಾಗಿ ಮರಳುತ್ತಿದ್ದೆ.

ಆ ಊರಿನ ಹಳ್ಳ ದಾಟುವವರೆಗೆ ಅಲ್ಲಿದ್ದವರು ಬಂದು ನನಗೆ ಶರಣು ಶರಣೆಂದರು. ಮುಂಜಾನೆ ನನ್ನನ್ನು ಗದರಿಸಿದ್ದ ನಾಯಿಗಳು ಹಳ್ಳ ದಾಟಿ ದೂರದವರೆಗೆ ಹಿಂಬಾಲಿಸಿದವು ಅವುಗಳ ಕಣ್ಣಲ್ಲಿದ್ದ ಭಾವ ಅಪೂರ್ವ.

1. **ಗುರು ಉಪದೇಶ ಮಂತ್ರವೈದ್ಯ, ಜಂಗಮ ಉಪದೇಶ ಶಸ್ತ್ರವೈದ್ಯ ನೋಡಾ,**

   **ಭವರೋಗವ ಕಳೆವ ಪರಿಯ ನೋಡಾ.**

   **ಕೂಡಲಸಂಗನ ಶರಣರ ಅನುಭಾವ**

   **ಮಡಿವಾಳನ ಕಾಯಕದಂತೆ** ---ಅಣ್ಣ ಬಸವಣ್ಣ.

2. **ಕಾಯಕಕೃತ್ಯ, ನೇಮಕೃತ್ಯ, ಆಚರಣೆಕೃತ್ಯ, ದಾಸೋಹಕೃತ್ಯ, ಭಾವಕೃತ್ಯ,**

   **ಸೀಮೆಕೃತ್ಯ, ಯಾಚಕಕೃತ್ಯ, ಗಮನಕೃತ್ಯ, ಲಿಂಗಕೃತ್ಯ, ಜಂಗಮಕೃತ್ಯ,**

   **ಪಾದೋದಕಕೃತ್ಯ, ಪ್ರಸಾದಕೃತ್ಯ, ಕೊಡೆಕೊಳ್ಳೆನೆಂಬ ಉಭಯಕೃತ್ಯ,**

   **ಮರೆದರಿಯೆ ಅರಿದು ಮರೆಯೆನೆಂಬ ಅರಿವುಕೃತ್ಯ**

   **ತನ್ನ ಕೃತ್ಯಕ್ಕೆ ಆವುದು ನಿಷೇಧವೆಂದು ಬಿಟ್ಟಲ್ಲಿ, ರಾಜ ಹೇಳಿದನೆಂದು,**

   **ಗುರುವಾಜ್ಞೆಯ ಮೀರಿದಿರೆಂದು,**

   **ಶರಣರ ಸಮೂಹ ಹೇಳಿದರೆಂದು ಮಿಕ್ಕಾದ ತನ್ನ ಪರಿಸ್ಪಂದಿಗಳರಿದರೆಂದು**

   **ಇಂತೀ ಗುಣಕ್ಕೆ ಅನುಸರಣೆಯ ಮಾಡಿದೆನಾದಡೆ ಎನಗದೆ ಭಂಗ.**

   **ಇದಕ್ಕೆ ನೀ ಒಪ್ಪಿದಡೆ, ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವೆ**

   **ನೀ ತಪ್ಪಿದೆಯಾದಡೆ ನಿನಗೆ ಎಕ್ಕಲನರಕ.**-- ಅಕ್ಕಮ್ಮ

ಶ್ರೀಶೈಲಪ್ಪ ಹೇಳಿದ ವಿವರಣೆ ಕೇಳಿದ ಎಲ್ಲರೂ ಗಂಭೀರವಾಗಿ ಯೋಚಿಸತೊಡಗಿದರು.

**ಅಕ್ಕ ನಾಗಮ್ಮ:** ಶ್ರೀಶೈಲಪ್ಪ ನಿನ್ನ ಅನುಭವ ನಾವು ಮುಂದೆ ಸಾಗಬೇಕಾದ ದಾರಿಗೆ ಒಂದು ಹೊಸ ದಿಕ್ಕು ತೋರಿಸುತ್ತದೆ. ಇದುವರೆಗೆ ನಾವು ವಚನಗಳನ್ನು ರಕ್ಷಿಸುವ ಬಗ್ಗೆ ಯೋಚಿಸಿದ್ದೆವು. ಅವುಗಳನ್ನು ಮತ್ತು ಶರಣರನ್ನು ಉಳವಿಯಲ್ಲಿ ರಕ್ಷಿಸಬೇಕು ಎನ್ನುವ ದಿಕ್ಕಿನಲ್ಲಿಯೇ ಯೋಚಿಸುತ್ತಿದ್ದೆವು. ಅದಕ್ಕಿಂತಲೂ ಜನರ ಮನದಲ್ಲಿ ವಚನಗಳನ್ನು ಬಚ್ಚಿಡಬೇಕು ಮತ್ತು ಶರಣರ ರಕ್ಷಣೆಯ ಜವಾಬ್ದಾರಿ ಜನರಿಗೇ ವಹಿಸಬೇಕು ಎನ್ನುವ ಸೂಚನೆ ಇಂದು ಸಿಕ್ಕಿತು.

**ಶಾಂತಪ್ಪ:** ಈಗಾಗಲೇ ಬಹಳ ಊರುಗಳಲ್ಲಿ ವಚನಾಸಕ್ತರನ್ನು ಗುರುತಿಸಿ ಅವರು ವಚನ ಅಧ್ಯಯನ ಮಾಡಲು ಪ್ರೋತ್ಸಾಹ ಕೊಡಲಾಗಿದೆ. ಬಹಳ ಭಕ್ತರ ಮನೆಯಲ್ಲಿಯ ಜಗುಲಿಯ ಮೇಲೆ ವಚನಗಳ ಕಟ್ಟುಗಳು ಸ್ಥಾನಪಡೆದು ಸುರಕ್ಷಿತವಾಗಿವೆ. ಅವುಗಳನ್ನು ಪೂಜಿಸಿದರೆ ಸಾಲದು ಅವುಗಳ ಅಧ್ಯಯನ ಮಾಡಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವ ಕೆಲಸವಾಗಬೇಕಾಗಿದೆ.

**ಚನ್ನಬಸವಣ್ಣ:** ಇಲ್ಲಿರುವ ಎಲ್ಲ ಶರಣರ ಮನದಲ್ಲಿ ಉಳವಿಗೆ ಬರುವ ಯೊಚನೆಯಿದೆ. ಅದು ಸರಿಯಾದ ವಿಚಾರ. ಈಗ ನಾವು ಗುಂಪಾಗಿ ಒಮ್ಮೆಲೇ ಹೋಗುವ ಬದಲು ನಾವೊಂದು ಊರು ಆರಿಸಿಕೊಂಡು ಅಲ್ಲಿ ನಮ್ಮ ಕಾಯಕ ಪೂರೈಸಿ ಉಳವಿಗೆ ಬರಬೇಕು.

**ಮಂಚಣ್ಣ:** ಪ್ರತಿ ಊರಲ್ಲಿಯೂ ಶರಣರ ಬಗ್ಗೆ ಅಭಿಮಾನ ಹೊಂದಿದ ಮತ್ತು ವಚನಗಳ ಪ್ರಸಾರಕ್ಕೆ ಅನುವಾಗುವ ಜನರಿದ್ದಾರೆ. ನೀವು ಊರು ಆರಿಸಿಕೊಂಡರೆ ನಾನು ಅಲ್ಲಿರುವ ಅಭಿಮಾನಿಗಳ ವಿವರ ಕೊಡುವೆ.

**ಅಕ್ಕ ನಾಗಮ್ಮ:** ಈಗಾಗಲೇ ಸಾವಿರಾರು ಶರಣರು ಧಾರವಾಡ ಸೇರಿದ್ದಾರೆ. ಅವರಿಗೆ ಅಲ್ಲಿ ನಮಗಾಗಿ ದಾರಿ ಕಾಯುವ ಬದಲು ಹಳ್ಳಿಗೆ ಹೋಗಿ ವಚನ ಪ್ರಚಾರ ಕಾಯಕ ಕೈಕೊಳ್ಳಲು ತಿಳಿಸಬೇಕು ಮತ್ತು ಸಾಧ್ಯವಾದರೆ ಅಲ್ಲಿಯೇ ನೆಲೆನಿಲ್ಲಲು ತಿಳಿಸಬೇಕು. ಅನಿವಾರ್ಯವಾದರೆ ಅವರು ಉಳವಿಗೆ ಬರಲಿ.

**ಮಂಚಣ್ಣ:** ಹಾಗೇ ಮಾಡಬೇಕು. ಯೋಧರ ಶವಗಳು ಹಳ್ಳಿಮುಟ್ಟಿ ಜನರು ರೊಚ್ಚಿಗೆದ್ದು ಮಹಾರಾಜನ ಸಂಚು ಸಫಲವಾಗುವ ಮೊದಲು ಶರಣರು ತಮ್ಮ ಕಾಯಕ ಆರಂಬಿಸಬೇಕು. ನಮ್ಮನ್ನು ನಮ್ಮ ಕಾಯಕ ಕಾಯುತ್ತದೆ. ನಮ್ಮನ್ನು ಹುಡುಕಲು ಹೊರಟ ಯೋಧರ ಪಡೆ ಈಗ ಕೃಷ್ಣಾ ನದಿ ತೀರ ತಲುಪಿದೆ ಮತ್ತು ಒಂದೆರಡು ದಿನದಲ್ಲಿ ಮರಳಿ ಕಲ್ಯಾಣಕ್ಕೆ ಮರಳುತ್ತಾರೆ. ಅಷ್ಟರಲ್ಲಿ ನಾವು ನಮ್ಮ ಕಾರ್ಯ ಕ್ಷೇತ್ರ ತಲುಪಬೇಕು.

**ಅಕ್ಕ ನಾಗಮ್ಮ:** ಅವರು ಮರಳಿ ಕಾಡಿನಲ್ಲಿ ಹುಡುಕುವ ಕೆಲಸ ಮಾಡಲ್ಲವೇ?

**ಮಂಚಣ್ಣ:** ಸಾಧ್ಯತೆ ಕಡಿಮೆ. ಕಲ್ಯಾಣದಲ್ಲಿದ್ದ ಯೊಧರನೇಕರು ಎಳೆಹೂಟೆ ಶಿಕ್ಷೆ ಜಾರಿಯಾದ ರಾತ್ರಿ ಮನನೊಂದು ಪಲಾಯನ ಮಾಡಿದ್ದಾರೆ ಅವರೆಲ್ಲ ಕಾದಾಟದಲ್ಲಿ ಮಡಿದರೆಂದು ತಿಳಿಯಲಾಗಿದೆ. ಅಂದು ರಾತ್ರಿ ನಡೆದ ಯೊಧ ಯೋಧರ ಕಲಹದಲ್ಲಿ ಮಡಿದ ಯೋಧರು ಹಲವರು. ಸೈನಿಕ ಲೆಕ್ಕಾಚಾರದ ಪ್ರಕಾರ ಅಂದು ಕಾಣೆಯಾದವರ ಸಂಖ್ಯೆ ನಾಲ್ಕು ಸಾವಿರಕ್ಕೂ ಹೆಚ್ಚು. ಇನ್ನು ಗಡಿಯಿಂದ ಕರೆಸಿಕೊಂಡ ಯೊಧರ ಪಡೆಯಲ್ಲಿದ್ದ ನಾಲ್ಕು ಸಾವಿರ ಯೋಧರು ಕೆರೆಯಲ್ಲಿ ಪ್ರಾಣತೆತ್ತರು. ಭೀಮಾನದಿ ತೀರದಲ್ಲಿ ನಡೆದ ಅಂತರ್ಯುದ್ದದಲ್ಲಿ ಮಡಿದವರು ಮತ್ತು ಪಲಾಯನ ಮಾಡಿದವರು ಸುಮಾರು ನಾಲ್ಕು ಸಾವಿರ. ಈಗ ಸುಮಾರು ಹನ್ನೆರಡು ಸಾವಿರ ಯೋಧರ ಮೃತ ದೇಹ ಮತ್ತು ಅವರ ಅವಶೇಷಗಳನ್ನು ಅವರವರ ಮನೆಗೆ ತಲುಪಿಸಲು ಕಳಿಸಿಕೊಟ್ಟ ಯೋಧರು ಹಲವು ಸಾವಿರ. ಎಲ್ಲ ಕಡೆ ಶರಣರನ್ನು ಹುಡುಕಲು ಕಳಿಸಿದ ಯೋಧರ ಸಂಖ್ಯೆ ಕೆಲವು ಸಾವಿರ. ಹೀಗಾಗಿ ಕಲ್ಯಾಣದಲ್ಲಿರುವ ಯೋಧರ ಸಂಖ್ಯೆ ಅತೀಕಡಿಮೆ. ಈಗ ಯಾರಾದರೂ ಸುಲಭವಾಗಿ ಕಲ್ಯಾಣ ಗೆದಿಯಬಹುದು. ಶರಣರು ಪ್ರತಿಕ್ರಿಯಿಸಿಲ್ಲ ಎನ್ನುವದೇ ಮಹಾರಾಜನಿಗೆ ವರದಾನ. ಹಾಗಾಗಿ ಎಲ್ಲ ಯೋಧರನ್ನು ಮರಳಿ ಬರಲು ಆದೇಶಿಸಿದ್ದಾನೆ. ಹುಡುಕಲು ಬಂದ ಯೋಧರಲ್ಲಿ ಕೆಲವರಿಗೆ ಶರಣರ ಬಗ್ಗೆ ಅಪಾರ ಗೌರವ ಇನ್ನು ಕೆಲವರಿಗೆ ಭಯ. ಯಾವಾಗ ಶರಣರ ಪರವಾಗಿ ಅವರು

ಸೃಷ್ಟಿಸಿದ ಭೂತಗಳು ತಮ್ಮನ್ನು ಕೊಲ್ಲತ್ತವೆಯೋ ಎಂಬ ಪಾಪ ಪ್ರಜ್ಞೆ ಅವರನ್ನು ಕಾಡುತ್ತಿದೆ. ಅನಿವಾರ್ಯವಾಗಿ ಅವರೆಲ್ಲ ಅಲ್ಲಿ ಇಲ್ಲಿ ಹುಡುಕಾಡಿದ ನಾಟಕ ಮಾಡುತ್ತಿದ್ದಾರೆ. ಭೀಮಾ ನದಿ ಮತ್ತು ಕೃಷ್ಣಾ ನದಿ ನಡುವಿನ ಪ್ರದೇಶದಲ್ಲಿ ಯಾವ ಶರಣರಿಗೂ ಹಾನಿಯಾಗಲು ಅಲ್ಲಿಯ ಅಭಿಮಾನಿಗಳು ಬಿಡುವದಿಲ್ಲ ಎನ್ನುವದು ಅವರಿಗೆ ಗೊತ್ತು.

**ಅಕ್ಕ ನಾಗಮ್ಮ**: ಯೋಧರು ಮರಳಿ ಹೋಗುವಷ್ಟು ದಿನ ನಮಗೆ ಕಾಲಾವಕಾಶವಿದೆ. ಯಾರು ಯಾವ ಕಡೆ ಹೋಗಬೇಕು ಮತ್ತು ಅಲ್ಲಿ ಅವರಿಗೆ ಯಾರಿಂದ ಸಹಾಯ ಸಿಗಬಹುದು ನಿರ್ಧರಿಸಿ ಕಳಿಸಿಕೊಡಿ. ನಾವೆಲ್ಲ ಕಾಯಕಯೋಗಿಗಳು ಸಣ್ಣ ಸಣ್ಣ ಗುಂಪಿನಲ್ಲಿ ಹೋಗಿ ಎಲ್ಲ ಕಡೆ ಕಾಯಕ ನಿರತರಾಗೋಣ.

ಯೋಜನೆಯಂತೆ ಅನೇಕ ಕಾಯಕಯೋಗಿಗಳು ಅವರು ಆಯ್ದುಕೊಂಡ ಸ್ಥಳಗಳಿಗೆ ಪಯಣಿಸಿದರು. ಯೋಧರ ಪಡೆ ಮರಳಿ ಕಲ್ಯಾಣಕ್ಕೆ ಸಾಗಿದ ಸಮಾಚಾರವೂ ಬಂತು. ಯಾವಾಗ ಯಾವ ಸಂಕಟ ಬರುತ್ತೋ ಗೊತ್ತಿಲ್ಲವಾದುದರಿಂದ ಕಾಡಿನ ದಾರಿಯಲ್ಲಿಯೇ ಪ್ರವಾಸ ಆರಂಭಿಸಿದೆವು. ರಾತ್ರಿ ಪ್ರವಾಸ ಮಾಡಿ ಸುಮಾರು ಒಂದು ಯೋಜನ ನಡೆದು ಅಲ್ಲಿದ್ದ ಕೆರೆಯ ದಡದಲ್ಲಿ ವಿಶ್ರಮಿಸುತ್ತಿದ್ದೆವು. ಮಂಚಣ್ಣ ಮತ್ತಿತರರು ಎಲ್ಲ ವ್ಯವಸ್ಥೆ ಮಾಡುತ್ತಿದ್ದರೆ ಆ ಬಯಲಿನಲ್ಲಿಯೇ ಅನುಭವ ಮಂಟಪ ಕಾರ್ಯನಿರ್ವಹಿಸುತ್ತಿತ್ತು. ಚನ್ನಬಸವಣ್ಣ ಮತ್ತಿತರ ಶರಣರು ವಚನ ರಚನೆ ಮತ್ತು ವಿವರಿಸುವದರಲ್ಲಿ ಕಾಲ ಕಳೆಯುತ್ತಿದ್ದರು. ನಾನು , ಮೋನಣ್ಣ ಮತ್ತು ಶ್ರೀಶೈಲಪ್ಪ ನಮ್ಮ ಮನೆಯವರೋಡನೆ ನಡೆದು ನಡೆದು ಗಾಯಗಳಾಗಿದ್ದ ಶರಣರ ಕಾಲುಗಳಿಗೆ ತಪ್ಪಲು ರಸ ಲೇಪಿಸುವ ಕೆಲಸ ಮಾಡುತ್ತಿದ್ದೆವು. ಆ ಕಾಲುಗಳ ನೋವು ನಮ್ಮ ಅನುಭವಕ್ಕೆ ಬಂದರೂ ಅವರು ಆ ವಚನ ರಚನೆಯಲ್ಲಿ ಆ ನೋವು ಮರೆತುಬಿಡುತ್ತಿದ್ದರು. ನನಗಾಗ ಅರ್ಥವಾಯಿತು. ನನ್ನ ಗುರುಗಳು ಅಂದು ಬರೆಯಲು ಹೆಳಿದ ವಚನ ಭಾಗ " ಬಯಲು ಜೀವನ, ಬಯಲು ಭಾವನ". ಬಯಲಲ್ಲಿ ಬಯಲಾದವನಿಗೆ ಸುಖ ಮತ್ತು ದುಃಖ ಒಂದೇ. ಅಷ್ಟಾದರೂ ತಮ್ಮ ಕಾಯಕದಲ್ಲಿ ನಿರತರಾಗುವ ಅವರ ಸೇವೆ ಮಾಡುವ ಭಾಗ್ಯ ಬಸವ ಕರುಣಿಸಿದ. ಮಂಚಣ್ಣನವರ ಕಾರ್ಯ ಕ್ಷಮತೆ ನಮಗೆಲ್ಲ ಮಾದರಿ. ಶರಣ ರಕ್ಷಣೆ, ಅವರ ದಾಸೋಹ ವ್ಯವಸ್ಥೆ ಇನ್ನೂ ಅನೇಕ ಕಾಯಕ ಕೈಕೊಳ್ಳುತ್ತಿದ್ದರು. ಅವರು ಒಬ್ಬ ವ್ಯಕ್ತಿಯಲ್ಲ ಅವರ ಹಿಂದೆ ದೈವೀ ಶಕ್ತಿ ಇದೆ ಎನಿಸುತ್ತಿತ್ತು.

ಹೀಗೆ ಸಾಗುತ್ತ ಕೃಷ್ಣಾ ನದಿ ದಂಡೆಯ ಸಮೀಪದ ಕೆರೆಯ ಸಮೀಪದ ಗವಿಗಳನ್ನು ತಲುಪಿದ್ದೆವು.

ಅಲ್ಲಿ ವೀರಭದ್ರಪ್ಪ ಮತ್ತು ಸಂಗಡಿಗರು ಸುರಕ್ಷಿತವಾದದನ್ನು ಕಂಡು ಸಂತೋಷವಾಯಿತು. ಅವರೆಲ್ಲ ನಾವು ಮರಳಿ ಕಲ್ಯಾಣಕ್ಕೆ ಹೋಗುವದಿಲ್ಲ ನಾವು ಶರಣರ ರಕ್ಷಣೆಯಲ್ಲಿ ನಿರತರಾಗುತ್ತೇವೆ ನಾವು ಶರಣರ ಜೊತೆ ಇರುವಷ್ಟು

ಯೋಗ್ಯರಲ್ಲ ಎಂದು ಹೇಳಿ ಹೊರಟು ಹೋದದ್ದು ಬಹಳ ಬೇಸರ ತಂದಿತು. ಮಾಚಣ್ಣ ಮತ್ತು ಅವರ ಸಂಗಡಿಗರು ಶರಣ ರಕ್ಷಣೆಗಾಗಿ ಕೈಕೊಂಡ ಕ್ರಮಗಳಾವವು ಗೋಚರವಾಗುತ್ತಿರಲಿಲ್ಲ. ಆದರೆ ಎಲ್ಲರನ್ನು ಕಣ್ಣಲ್ಲಿ ಕಣ್ಣಿಟ್ಟು ರಕ್ಷಿಸುತ್ತಿದ್ದಾರೆ ಎನ್ನುವದು ಅನುಭವಕ್ಕೆ ಬರುತ್ತಿತ್ತು. ತಾಯಿಯ ಮಡಿಲಿನಲ್ಲಿದ್ದ ಮಗುವಿನಂತೆ ಅಲ್ಲಿದ್ದ ಎಲ್ಲರೂ ನಿರಾಳವಾಗಿದ್ದರು.

**ಮಂಚಣ್ಣ:** ನಾವು ಕಾಡಿನೊಳಗೆ ಹೋಗುವ ಬನ್ನಿ.

ನಾನು, ಮೋನಣ್ಣ ಮತ್ತು ಶ್ರೀಶೈಲಪ್ಪ ಜೊತೆಗೂಡಿ ಮಡದಿಯರೊಂದಿಗೆ ಕಾಡಿಗೆ ಮಂಚಣ್ಣನೊಡನೆ ಹೋದೆವು ಜೊತೆಗೆ ದೊಡ್ಡ ಬುಟ್ಟಿಗಳನ್ನು ಮತ್ತು ಚೀಲಗಳನ್ನು ಒಯ್ದಿದ್ದೆವು. ಅಲ್ಲಿ ಒಂದು ಪೊದೆ ತೋರಿಸಿ ಮಂಚಣ್ಣ ಇದನ್ನು ಗುರುತಿಸಿ ಇದು ಸಂಜಿವಿನಿ ಇದರ ಎಲೆಗಳನ್ನು ಹರಿದು ಪುಟ್ಟಿಯಲ್ಲಿ ಹಾಕಿಕೊಳ್ಳಿ ಎಂದ ಅದೇ ರೀತಿಯ ಬೇರೆ ಮೂರು ಗಿಡಗಳ ಎಲೆ ಹರಿದುಕೊಂಡು ಅವರೊಡನೆ ಬಂದೆವು. ಆ ಎಲೆಗಳನ್ನು ಅರೆದು ರಸ ತೆಗೆದು ಅಲ್ಲಿದ್ದ ಶೇಂಗಾ ಎಣ್ಣೆಯ ಡಬ್ಬಿಯ ಎಣ್ಣೆಯಲ್ಲಿ ಕೂಡಿಸಿದೆವು.

ಆಗ ಆ ಎಣ್ಣೆಯಿಂದ ಬಂದ ಸುವಾಸನೆಯಿಂದ ಇದು ಬೀಮಾ ನದೀತೀರದಲ್ಲಿ ಉಪಯೋಗಿಸಿದ ಅಮೃತ ಎಂದು ಗೊತ್ತಾಯಿತು.

ಮಂಚಣ್ಣ ಆಗಲೇ ಅಲ್ಲಿ ತಂದಿಟ್ಟಿದ್ದ ಸಣ್ಣ ಸಣ್ಣ ದಾರ ಕಟ್ಟಿದ ಡಬ್ಬಿಗಳಿಗೆ ಹಾಕಿ ಭದ್ರವಾಗಿ ಮುಚ್ಚಳ ಹಾಕಲು ಹೇಳಿದ. ನಾವೀ ಕೆಲಸ ಮಾಡುತ್ತಿದ್ದಾಗ ಅಕ್ಕನಾಗಮ್ಮ ಅಲ್ಲಿಗೆ ಬಂದರು

**ಅಕ್ಕನಾಗಮ್ಮ:** ಏನಿದು ಮಂಚಣ್ಣ.

**ಮಂಚಣ್ಣ:** ಇವುಗಳು ಅಮೃತ ತುಂಬಿದ ಡಬ್ಬಿಗಳು ಪ್ರತಿ ಶರಣ ಶರಣೆಯರ ಸೊಂಟಕ್ಕೆ ಕಟ್ಟಿಕೊಳ್ಳಬೇಕು.

**ಗುರುವ:** ಇದರಲ್ಲಿ ಅಮೃತವಿದೆ. ಭೀಮಾ ನದಿ ತೀರದಲ್ಲಿ ಗಾಯಗೊಂಡ ಯೊಧರ ಗಾಯಗಳ ನೋವನ್ನು ಕ್ಷಣಮಾತ್ರದಲ್ಲಿ ಮಾಯಮಾಡಿ ಅವರು ಬೇಗ ಗುಣಮುಖವಾಗುವಂತೆ ಮಾಡಿತು.

**ಮಂಚಣ್ಣ:** ಇದನ್ನು ಸ್ವಲ್ಪ ಸೇವಿಸಿದರೆ ಕೆಲವು ಕಾಲ ನಿಸ್ಚೇತರಾಗಿ ಸತ್ತವರಂತಾಗುತ್ತಾರೆ ಅಮೆಲೆ ಎಚ್ಚರವಾಗುತ್ತದೆ ಮತ್ತು ಇದನ್ನು ಬೆಂಕಿಯಲ್ಲಿ ಹಾಕಿದರೆ ಇದರ ಹೊಗೆ ಸ್ವಲ್ಪ ಕಾಲ ಮೂರ್ಚೆಗೊಳಿಸುತ್ತದೆ.

**ಅಕ್ಕ ನಾಗಮ್ಮ:** ಇದು ಈಗ ಯಾಕೆ ಬೇಕು ಮಂಚಣ್ಣ.

**ಮಂಚಣ್ಣ:** ಆ ದಂಡೆಯ ರಾಜಕೀಯ ವಿದ್ಯಮಾನಗಳು ವೇಗವಾಗಿ ಬದಲಾಗುತ್ತಿವೆ. ಮಲ್ಲಣ್ಣ ಮತ್ತು ನಮ್ಮ ಹಿತೈಸಿಗಳನ್ನು ಬಂಧಿಸಲಾಗಿದೆ. ಕಲ್ಯಾಣದಲ್ಲಿ ಮಡಿದ ಯೋಧರ ಪ್ರತೀಕಾರ ತೆಗೆದುಕೊಳ್ಳುವ ಕೂಗು ಅವರ ಸಂಬಂಧಿಗಳಿಂದ ಹೆಚ್ಚಾಗಿದೆ. ಶರಣರು ನದಿ ದಾಟಿ ಬರುತ್ತಾರೆ ಎನ್ನುವ ಸಂಶಯ ಬಲವಾಗಿದೆ. ನದಿಯ ದಂಡೆಯಗುಂಟ ಕಾವಲು ಬಲವಾಗಿದೆ. ನಾವು ಇನ್ನೆರಡು ದಿನಗಳ ಒಳಗಾಗಿ ಇಲ್ಲಿಂದ ಪಾರಾಗಿ ಆ ದಂಡೆ ಸೇರಲೇಬೇಕು. ಆ ಭಾಗದಲ್ಲಿ

ನಮ್ಮನ್ನು ಹುಡುಕಲು ಒಂದು ಯೊಧರ ಪಡೆ ಗಡಿಯಿಂದ ಬರುತ್ತಿದೆ ಅಷ್ಟರೊಳಗಾಗಿ ನಾವು ಆ ದಂಡೆಯಲ್ಲಿರಬೇಕು.
**ಅಕ್ಕ ನಾಗಮ್ಮ:** ಶರಣರು ಇದ್ದುದೇ ಕಲ್ಯಾಣ. ಎಲ್ಲಿದ್ದರೂ ಕಾಯುವವ ಬಸವ. ನೀವು ಮಾಡಿದ ಸಹಾಯವು ಅವರಿಗೆ ಧೈರ್ಯ ಕೊಡುತ್ತದೆ. ಈಗ ಎಲ್ಲ ಶರಣರನ್ನು ಕೂಡಿಸಿ ಮಾತನಾಡಿ ಇಂದು ರಾತ್ರಿಯೇ ಹೊರಡುವ ತಯಾರಿ ಮಾಡುವಾ.
ಮಂಚಣ್ಣನ ಚಿಂತೆ ಸ್ವಲ್ಪ ಕಡಿಮೆಯಾಯಿತು.
**ನನ್ನಾಕೆ:** ಯವ್ವ ಯಾರು ಯಾರು ಎಲ್ಲಿಯೇ ಹೊಗಲಿ ನಮಗೆ ನಿಮ್ಮ ಸೇವೆಮಾಡುವ ಅವಕಾಶ ಕೊಡಿ..
**ಶ್ರೀಶೈಲಪ್ಪ:** ಎಲ್ಲೇ ಇದ್ದರೂ ನಾವು ಮೂವರು ಕೂಡಿ ಇರುತ್ತೇವೆ, ಬಸವನ ಇಚ್ಛೆಯಂತೆ ಬಾಳುತ್ತೇವೆ . ಅವ್ವಾ ನಿಮ್ಮ ಜೊತೆ ಇರಲು ನಮಗೆ ಅನುಮತಿ ಕೊಡಿ.
**ಅಕ್ಕ ನಾಗಮ್ಮ:** ಅದು ಬಸವೇಚ್ಛೇಯಾದರೆ ಹಾಗೇ ಆಗಲಿ. ಎಲ್ಲ ಶರಣರು ತಮ್ಮ ತಮ್ಮ ಮನದಿಚ್ಛೆಯಂತೆ ಬಾಳಲಿ. ಬಸವ ಅವರನ್ನು ಕಾಯುತ್ತಾನೆ. ನಾನಂತೂ ಕುಡಚಿಯ ಮಾರ್ಗವಾಗಿಯೇ ಹೋಗುವೆ ಮಲ್ಲಣ್ಣನನ್ನು ಈ ಸ್ಥಿತಿಯಲ್ಲಿ ಬಿಟ್ಟು ಮುಂದೆ ಹೋಗುವದಿಲ್ಲ.
**ಮಂಚಣ್ಣ:** ಬೆಳಗಾಗುವದ್ರೊಳಗಾಗಿ ನಾವು ನದಿ ದಾಟಬೇಕು. ನದಿಯ ಎರಡೂ ಬದಿ ಇರುವ ದಟ್ಟವಾದ ಕಾಡು ಮತ್ತು ಅಲ್ಲಲ್ಲಿ ಇರುವ ಕಬ್ಬಿನ ತೋಟ ನಮ್ಮನ್ನು ರಕ್ಷಿಸುತ್ತವೆ. ನಾವೆಲ್ಲ ಇಂದು ರಾತ್ರಿ ಹತ್ತು ಹದಿನೈದು ಜನರ ಗುಂಪಿನಲ್ಲಿ ನದಿಯ ದಂಡೆಯಗುಂಟ ಎಡಕ್ಕೆ ಹತ್ತು ಯೋಜನ ದೂರದ ಕೂಡಲಸಂಗಮದ ಕಡೆಗೆ ಅಥವಾ ಬಲಗಡೆಗೆ ಹತ್ತು ಯೋಜನ ದೂರವಿರುವ ನದಿ ಉಗಮದ ಕಡೆ ಪ್ರಯಾಣ ಬೆಳೆಸೋಣ. ನಿಮಗೆ ಪ್ರಸಾದ ಮತ್ತು ರಕ್ಷಣೆ ಕಲಿದೇವರು ಸೃಷ್ಟಿಸಿ ಇಟ್ಟಿದ್ದಾನೆ. ನಮ್ಮೆಲ್ಲರನ್ನು ಅವನು ಕಾಪಾಡುತ್ತಾನೆ. ನಮ್ಮ ಕೆಲವು ಹಿತೈಸಿಗಳು ತಮ್ಮ ನೆರವಿಗೆ ಬರುತ್ತಾರೆ. ನಾವೀಗ ಕಾಯಕಯೋಗಿಗಳು. ಕಾಯಕವೇ ನಮಗೆ ಹಳ್ಳಿಗಳಿಗೆ ಪ್ರವೇಶ ದೊರಕಿಸುತ್ತದೆ ಅವರ ಪ್ರೀತಿ ಅಭಿಮಾನ ದೊರಕಿಸುತ್ತದೆ. ನಿಮ್ಮ ಜೊತೆ ಅಮೃತದ ಒಂದು ಎಣ್ಣೆಯ ಡಬ್ಬಿ ಯಾವಾಗಲೂ ಇರಲಿ ಅದನ್ನು ಹಚ್ಚಿದಾಗ ಗಾಯ ಬೇಗ ಮಾಯುತ್ತದೆ, ಅದನ್ನು ಬೆಂಕಿಯಲ್ಲಿ ಹಾಕಿದಾಗ ಹೊಗೆ ಮೂರ್ಚೆಗೊಳಿಸುತ್ತದೆ ಮತ್ತು ಅದರ ಕೆಲವು ಹನಿ ಬಾಯೊಳಗೆ ಹಾಕಿಕೊಂಡರೆ ಮಾನವ ಸ್ವಲ್ಪಕಾಲ ನಿರ್ಜೀವಿಯಂತಾಗಿರುತ್ತಾನೆ. ಕೆಲವು ಅನಿವಾರ್ಯ ಪ್ರಸಂಗದಲ್ಲಿ ಉಪಯೋಗಿಸಿ. ಇದರ ವಾಸನೆಗೆ ವಿಷಜಂತುಗಳು ಸಮೀಪ ಬರುವದಿಲ್ಲ.
**ಚನ್ನಬಸವಣ್ಣ:**

**ಭಕ್ತ ಶಾಂತನಾಗಿರಬೇಕು,**

**ತನ್ನ ಕುರಿತು ಬಂದಠಾವಿನಲ್ಲಿ ಸತ್ಯನಾಗಿರಬೇಕು,**

ಭೂತಹಿತವಹ ವಚನವ ನುಡಿಯಬೇಕು,

ಗುರುಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು

ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು,

ತನುಮನಧನವ ಗುರುಲಿಂಗ ಜಂಗಮಕ್ಕೆ ಸವೆಸಲೇಬೇಕು,

ಅಪಾತ್ರದಾನವ ಮಾಡಲಾಗದು,

ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು,

ಇದೇ ಮೊದಲಲ್ಲಿ ಬೇಹ ಶೌಚ ನೋಡಾ.

ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇಸಾಧನ

ಕೂಡಲಚೆನ್ನಸಂಗಮದೇವಾ.

**ಅಕ್ಕ ನಾಗಮ್ಮ:**

ಶ್ರೀಗುರುವೆ ತಾಯಿತಂದೆಯಾಗಿ, ಲಿಂಗವೆ ಪತಿಯಾಗಿ,

ಜಂಗಮವೆ ಅತ್ತೆಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ,

ಸತ್ಯಸದಾಚಾರವೆಂಬ ಮನೆಗೆ ಕಳುಹಿದರಾಗಿ,

ಶರಣಸತಿ ಎಂಬ ನಾಮ ನಿಜವಾಯಿತ್ತು.

ಆದಂತೆ ಇರುವೆ, ಹಿಂದುಮುಂದರಿಯದೆ ನಡೆವೆ.

ಮನಕ್ಕೆ ಮನಸಾಕ್ಷಿಯಾಗಿ ಮಾಡುವೆ,

ಬಸವಣ್ಣಪ್ರಿಯ ಚೆನ್ನಸಂಗಯ್ಯಾ ನಿಮ್ಮಡಿಗಳಿಗೆ

**ಗಂಗಾಂಬಿಕೆ:** ನಾವೆಲ್ಲ ಅಕ್ಕಮಹಾದೇವಿಯರ ಮಾತನ್ನು ನೆನೆಸಿಕೊಂಡು ಬಾಳೋಣ. ನಾವಿದ್ದಲ್ಲಿಯೇ ಕಲ್ಯಾಣ ಕಟ್ಟೋಣ.

ಹಸಿವಾದೊಡೆ ಭಿಕ್ಷಾನ್ನಗಳುಂಟು

ತೃಷೆಯಾದೊಡೆ ಕೆರೆಭಾವಿಗಳುಂಟು

ನಮನಕೆ ಹಾಳು ದೇಗುಲಗಳುಂಟು

ಆತ್ಮಸಂಗಾತಿಗೆ ಚೆನ್ನಮಲ್ಲಿಕಾರ್ಜುನ, ನೀ ಎನಗುಂಟು.–ಅಕ್ಕಮಹಾದೇವಿ.

**ಚನ್ನಬಸವಣ್ಣ:**

"ಬಸವ' ಎಂಬ ಮೂರಕ್ಷರ ಹೃದಯಕಮಲದಲ್ಲಿ ನೆಲೆಗೊಂಡಡೆ,

ಅಭೇದ್ಯ ಭೇದ್ಯವಾಯಿತ್ತು, ಅಸಾಧ್ಯ ಸಾಧ್ಯವಾಯಿತ್ತು.

ಇಂತು ಬಸವಣ್ಣನಿಂದ ಲೋಕಲಾಕಿಕದ ಕುಭಾಷೆಯ ಕಳೆದು,

**ಲೋಕಾಚರಣೆಯನತಿಗಳೆದು ಭಕ್ತಿಭರವಪ್ಪುದು, ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣನ ಕಾರುಣ್ಯದಿಂದ"**–ಚನ್ನಬಸವಣ್ಣ

ನಾವಿರುವ ಊರೇ ಕಲ್ಯಾಣ. ಅಲ್ಲೊಂದು ಅನುಭವ ಮಂಟಪ ನಿರ್ಮಿಸೋಣ. ನಾವೆಲ್ಲ ನಮ್ಮ ಕಾಯಕ ಮುಗಿಸಿಕೊಂಡು ಉಳವಿಯಲ್ಲಿ ಭೆಟ್ಟಿಯಾಗೋಣ. ಕತ್ತಲಾಗ ಬಂದ ಹಾಗೆ ಎಲ್ಲರೂ ಪ್ರಸಾದ ಸೇವಿಸಿ ಹೋಗಲು ತಯಾರಾದರು. ಅವರೆಲ್ಲ ಯಾವ ಕಡೆ ಹೋಗಬೇಕು ಮತ್ತು ಯಾರಾರು ಜೊತೆಗೆ ಹೋಗಬೇಕು ಎನ್ನುವದನ್ನು ಅವರವರೇ ನಿರ್ಧರಿಸಿದ್ದರು. ಒಂದೇ ಕಾಯಕ ಮಾಡುವವರು ತಮ್ಮ ಬಂಧು ಬಳಗವಿರುವ ಹಳ್ಳಿಯ ಕಡೆ ಹೊರಟದ್ದು ಸಾಮಾನ್ಯವಾಗಿತ್ತು. ಶಾಂತಣ್ಣ ಮತ್ತು ಮಾಚಣ್ಣನವರು ಅವರು ಹೋಗಬೇಕಾದ ಮಾರ್ಗ ಅವರಿಗೆ ಸಹಾಯ ಮಾಡಬಲ್ಲ ಜನರು ಮತ್ತು ವಚನಗಳ ಕಟ್ಟು ಇರುವ ಭಕ್ತರ ಹೆಸರು ಇತ್ಯಾದಿ ವಿವರ ಒದಗಿಸಿದರು.

ಶರಣರು ಒಬ್ಬೊಬ್ಬರಾಗಿ ಹೊರಟರು ಹೋಗುವಾಗ ಅವರ ಮುಖದಲ್ಲಿ ವಚನಗಳನ್ನು ರಕ್ಷಿಸಬೇಕು ಎನ್ನುವ ಛಲ ಕಾಣುತ್ತಿತ್ತು. ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ಭಾವ ಎಲ್ಲ ಹಿರಿಯರಲ್ಲಿತ್ತು.

ಚನ್ನಬಸವಣ್ಣನವರು ವಚನ ರಚನೆಯಲ್ಲಿ ತಲ್ಲೀನರಾಗಿದ್ದರು. ಅಕ್ಕನಾಗಮ್ಮ ಮತ್ತು ಗಂಗಾಂಬಿಕೆಯವರು ತಮ್ಮ ಮುಂದಿನ ಪ್ರವಾಸದ ಬಗ್ಗೆ ಯೋಜಿಸತೊಡಗಿದರು.

**ಗಾಳಿಯ ಹಡೆದಲ್ಲಿ ತೂರಿಕೊಳ್ಳಯ್ಯಾ, ಗಾಳಿ ನಿನ್ನಾಧೀನವಲ್ಲಯ್ಯಾ. ನಾಳೆ ತೂರಿಹೆನೆಂದಡೆ ಇಲ್ಲಯ್ಯಾ. ಶಿವಶರಣೆಂಬುದೊಂದು ಗಾಳಿಯ ಹಡೆದಲ್ಲಿ, ಬೇಗ ತೂರೆಂದನಂಬಿಗ ಚೌಡಯ್ಯ.**---ಅಂಬಿಗರ ಚೌಡಯ್ಯ.

ಪ್ರಸಾದವಾದ ನಂತರ ಎಲ್ಲ ಶರಣರು ಅನುಭವ ಮಂಟಪದ ಕಾರ್ಯಕ್ರಮಕ್ಕಾಗಿ ಒಂದೆಡೆ ಸೇರಿದರು. ಇಲ್ಲಿಂದ ಹೊರಡಬೇಕಾದ ವಿಷಯ ಆಗಲೇ ಎಲ್ಲರಿಗೂ ಗೊತ್ತಾಗಿದ್ದರೂ ಅವರಲ್ಲಿ ಗಡಬಿಡಿಯಾಗಲೀ ಚಿಂತೆಯಾಗಲೀ ಇರಲಿಲ್ಲ. ನಿಶ್ಚಿಂತವಾದ ಶಾಂತವಾದ ಅವರ ನಡವಳಿಕೆ ನನ್ನನ್ನು ಚಕಿತಗೊಳಿಸಿತು.

**ಅಕ್ಕ ನಾಗಮ್ಮ:**

**ನಾಳೆ ಬಪ್ಪುದು ನಮಗಿಂದೆ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕಾರಂಜುವರು, ಇದಕಾರಳುಕುವರು**

**`ಜಾತಸ್ಯ ಮರಣಂ ಧ್ರುವಂ' ಎಂದುದಾಗಿ ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ.** – ಅಣ್ಣ ಬಸವಣ್ಣ

ವಚನವನ್ನು ರಾಗವಾಗಿ ಹಾಡಿದರು. ನಾವೆಲ್ಲ ಅವರನ್ನನುಸರಿಸಿ ಹಾಡಿದೆವು. ಸ್ವಲ್ಪ ಹೊತ್ತು ಮೌನನವಾವರಿಸಿತ್ತು. ವಚನದ ಅರ್ಥ ಎಲ್ಲರಿಗೂ ಆಗಿ ಈಗಿರುವ ಪರಸ್ಥಿತಿಯ ತೀರ್ವತೆಯ ಅರಿವಾಯಿತು.

**ಚನ್ನಬಸವಣ್ಣ:**

**ಹೋ ಹೋ ಗುರುವೆ ನಿಮ್ಮ ಚಮ್ಮಾವುಗೆಯ ಬಂಟ ನಾನಾಗಿರಲು ಅಂಜುವರೆ ?**

**ಅಳುಕುವರೆ ? ಸಂಗಮನಾಥ ಬಂದು, ನಿಮ್ಮ ಮನವ ನೋಡಲೆಂದು ತಮ್ಮ**

**ಮನವನಡ್ಡಲಿಕ್ಕಿದನೊಂದು ಲೀಲೆಯಿಂದ.**

**ಅದು ನಿಮಗೆ ಸಹಜವಾಗಬಲ್ಲುದೆ ?**

**ಮಂಜಿನ ಮೋಹರ, ರವಿಯ ಕಿರಣವ ಕೆಡಿಸಲಾಪುದೆ ?**

**ನಿಮ್ಮ ನೆನೆವರಿಗೆ ಸಂಸಾರವಿಲ್ಲೆಂದು ಶ್ರುತಿಗಳು ಹೊಗಳುತ್ತಿರಲು ನಿಮ್ಮ ಅರುಹಿಂಗೆ**

**ಕೇಡುಂಟೆ ? ಕೂಡಲಚೆನ್ನಸಂಗನ ಶರಣರ ಕರೆವಡೆ ಎನ್ನ ಮನವೆಂಬ ಚಮ್ಮಾವುಗೆಯ ಮೆಟ್ಟಿ**

**ನಡೆಯಾ ಸಂಗನಬಸವಣ್ಣ**—ಚನ್ನಬಸವಣ್ಣ.

**ಮೋನಣ್ಣ:** ಇದು ಗೋರಕ್ಷ / ಗೋರಖನಾಥ ಅವರ ವಚನ.

**ವಿಷಕ್ಕೆ ಅಂಜುವರಲ್ಲದೆ ಸರ್ಪಂಗೆ ಅಂಜುವರುಂಟೆ?**

**ಕೊಲುವ ವ್ಯಾಘ್ರಂಗೆ ಅಂಜುವರಲ್ಲದೆ ಸುಲಿದ ಬಣ್ಣಕ್ಕೆ ಅಂಜುವರುಂಟೆ?**

**ಅರಿವು ಸಂಪನ್ನರಲ್ಲಿ ಇದಿರೆಡೆಯಡಗಬೇಕಲ್ಲದೆ ಬರುಕಾಯದ ದರುಶನ ಬಿರುಬರಲ್ಲಿ**

**ಉಂಟೆ? ನೆರೆಯರಿವಿನ ಹೊಲಬು ಕಾಯಕಾಂಡ ಕರ್ಮಕಾಂಡಿಗಳಲ್ಲಿ ಜ್ಞಾನಹೀನ**

**ಪಾಷಂಡಿಗಳಲ್ಲಿ ಆವ ಭಾವದ ಮಾರ್ಗವನು ನಿಧಾನಿಸಿ ಉಪೇಕ್ಷಿಸಲಿಲ್ಲ.**

**ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗವನರಿದವರಲ್ಲಿಯಲ್ಲದೆ.**

-- ಗೋರಕ್ಷ / ಗೋರಖನಾಥ

**ಮಾಚಣ್ಣ:**

**ಹೋದ ದಿವಸ ವಿಷವೆಂದರಿವುದು ಮನದಲ್ಲಿ.**

**ಬರುವ ದಿವಸ ಸುಧಾಸಮವೆಂದರಿವುದು ಸದ್ಭಾವದಲ್ಲಿ.**

**ಹೋದಂತೆ ಹೋದಡೆ ಕಲಿದೇವರ ಕಾಂಬ ಪರಿಯೆಂತೊ, ಸಿದ್ಧರಾಮಯ್ಯಾ**

– ಮಡಿವಾಳ ಮಾಚಿದೇವ.

ಕೃಷ್ಣಾ ನದಿ ಆಚೆಗಿನ ಪರಸ್ಥಿತಿ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಯೋಧರ ದೇಹಗಳ ಅಂತ್ಯಕ್ರಿಯೆ ನಡೆಸಿದ ಅವರ ಬಂಧುಬಾಂಧವರಲ್ಲಿ ಶೋಕದ ಜೊತೆಗೆ ಕ್ರೋಧ ಮನೆಮಾಡಿದೆ. ಕಲ್ಯಾಣದಿಂದ ಬಂದ ತರಬೇತಿ ಪಡೆದ ಪ್ರವಚನಕಾರರು ಮಹಾರಾಜರು ಕಲಿಸಿದ ಗಿಳಿಪಾಠ ಹೇಳಿ. ಶರಣರೇ ಇವರನ್ನೆಲ್ಲ ಕೊಂದವರು,

ಶರಣರು ಪಾಪಿಗಳು, ಭೂತ ಪ್ರೇತ ಅರಾಧಕರು, ಧರ್ಮ ನಾಶಮಾಡುತ್ತಿರುವ ದ್ರೋಹಿಗಳು ಎನ್ನುವ ಮಾತನ್ನು ನಂಬುವಂತೆ ಮಾಡಿದ್ದಾರೆ. ಕೋಪ ಶಾಂತವಾಗುವವರೆಗೆ ಬೇರೆ ಯಾವ ವಿಚಾರವೂ ಅವರ ತಲೆಯಲ್ಲಿ ಹೋಗುವದಿಲ್ಲ.
ಕೋಪದಲ್ಲಿ ಅವರೇನು ಮಾಡುವರು ಅವರಿಗೇ ಗೊತ್ತಿರುವದಿಲ್ಲ. ಇನ್ನು ಗಡಿಯಿಂದ ಒಂದು ಯೋಧರ ತುಕಡಿ ನಮ್ಮನ್ನೆಲ್ಲ ಹುಡುಕಿ ಶಿಕ್ಷಿಸಲು ಬರುತ್ತಿದೆ. ಅವರು ಬರುವಷ್ಟರಲ್ಲಿ ನಾವು ಇಲ್ಲಿಂದ ಹೊಅರಟು ದೂರ ಸಾಗಬೇಕು. ನಿಮಗೆ ಆಶ್ರಯ ಸಿಕ್ಕಲ್ಲಿ ನೀವು ನೆಲೆಸಿ ಅಲ್ಲಿ ಶರಣ ಸಂಸ್ಕಾರ ನೆಲೆಗೊಳ್ಳುವಂತೆ ಮಾಡಿ. ಇಲ್ಲವೇ ನಿಮಗೆ ಸರಿ ಅನಿಸಿದ ದಾರಿ ಹಿಡಿದು ಉಳವಿಗೆ ಬಂದು ಸೇರಿಕೊಳ್ಳಿ. ಅಣ್ಣನವರ ಮತ್ತು ಶರಣರ ಕನಸು ನನಸಾಗಲು ಸತತ ಪ್ರಯತ್ನ ಮಾಡಿ. ಅಣ್ಣ ಬಸವಣ್ಣ ನಮ್ಮನ್ನೆಲ್ಲ ಕಾಯುತ್ತಾನೆ.
ಈಗ ಕಲ್ಪನೆಯ ಚೌಕಟ್ಟಿನಿಂದ ಹೊರಬಂದು ವಾಸ್ತವವಾಗಿ ಶರಣರು ಅಕ್ಕನಾಗಮ್ಮನವರ ಮಾರ್ಗದರ್ಶನದಲ್ಲಿ ತರೀಕೇರಿಯವರೆಗೆ ಸಾಗಿದ ಮಾರ್ಗ ಮತ್ತು ಅವರ ಸಾಧನೆ ಅರಿಯುವಾ.

ಭಾಗ 3:

**ಕಲ್ಯಾಣ ಕ್ರಾಂತಿ**: ವಾಸ್ತವ

**ವಚನ ಸಂರಕ್ಷಣೆ "ಸಾಹಸ ಗೀತೆ":**

**ಮನದಾಳದ ಮಾತು:**

ನಾನು ಬರೆಯುತ್ತಿರುವ ವಿಷಯ ವಿವರಿಸುವಲ್ಲಿ ನನ್ನ ಕಲ್ಪನೆಗಳ ಪ್ರಭಾವ ಇದೆ. ಅದಕ್ಕಾಗಿ ಅದು ಪೂರ್ಣ ಸರಿ ಅಥವಾ ತಪ್ಪು ಎಂದು ದಯಮಾಡಿ ವಿಮರ್ಶಿಸಬೇಡಿ, ಅನೇಕ ಸಂಭಾವನೆಗಳಲ್ಲಿ ಇದೂ ಒಂದು ಸಂಭಾವನೆ ಎಂದು ತಿಳಿದುಬಿಡಿ.

ಇದು ಗೆಳೆಯರೊಂದಿಗಿನ ಸಂವಾದ. ಯಾವುದೇ ತತ್ವಗಳನ್ನು ಪ್ರತಿಪಾದಿಸುವ , ಖಂಡಿಸುವ, ಅಥವಾ ಸಂಶೋಧನಾ ಪ್ರಬಂಧ ಮಂಡಿಸುವ ಪ್ರಯತ್ನ ಇಲ್ಲಿಲ್ಲ. ಇದು ಮನದ ಭಾವನೆಗಳನ್ನು, ತುಡಿತಗಳನ್ನು ಗೆಳೆಯರೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವ ಪ್ರಕ್ರಿಯೆ.

**ಚಿಕ್ಕಿ ಜೋಡಿಸುವ ಆಟ:**



ವೇಳೆ ಕಳೆಯಲು (lockdown effect) ಮೊಮ್ಮಗ ಆಡಿಸಿದ ಆಟದ ವಿವರ ಕೊಡುವೆ. ತೇಜಸ ಆಟಗಾರರಾದ ನಾಲ್ಕು ಜನರಿಗೆ ಬಿಳಿಹಾಳಿಯಲ್ಲಿ ಹತ್ತು ಉದ್ದ ಸಾಲು ಮತ್ತು ಹತ್ತು ಅಡ್ಡಸಾಲಿನಲ್ಲಿ 100 ದಪ್ಪ ಬಿಂದುಗಳನ್ನು ಹಾಕಿ ಒಂದೊಂದು ಪೆನ್ಸಿಲ್ಲ ಕೊಟ್ಟು ಬಿಂದುಗಳನ್ನು ಜೋಡಿಸಿ ಚಿತ್ರ ರಚಿಸಲು ಹೇಳಿದ. ನನ್ನ ಹೆಂಡತಿಗೆ ಖುಷಿಯಾಗಿ ಒಂದು ಸುಂದರವಾದ ರಂಗೋಲಿ ರಚಿಸಿದಳು. ಮೊಮ್ಮಗಳು ತನಿರಿಕಾ ತಾನು ಡ್ರಾಯಿಂಗ ಕ್ಲಾಸಿನಲ್ಲಿ ರಚಿಸಿದ ಸುಂದರ ಬೊಂಬೆ ಬಿಡಿಸಿದಳು. ಮಗ ಅಲ್ಲಿ ಒಂದು computer flow chart ರಚಿಸಿದ. ನನಗೆ ಏನು ಮಾಡಬೇಕು ಗೊತ್ತಾಗಲಿಲ್ಲ. ನಾನು ಅಲ್ಲಿ ಬಿಂದುಗಳನ್ನು ಜೋಡಿಸಿ ಸಾಧ್ಯವಾದಷ್ಟು + × = ÷ - ಸಂಜ್ಞೆಗಳನ್ನು ಬರೆದೆ. ನಾನು ಅದ್ಯಯನ ಮಾಡುತ್ತಿರುವದು ಗಣಿತ ಅದಕ್ಕಾಗಿ ನನ್ನ ಮನಕ್ಕೆ ಹೊಳೆದದ್ದು ಈ ವಿಚಾರ ಮಾತ್ರ. ಆಗ ನನ್ನ ಸೊಸೆ ತೀರ್ಪುಗಾರಳಾಗಿ ಪ್ರವೇಶವಾಯಿತು.

ಎಲ್ಲ ಚಿತ್ರಗಳನ್ನು ಪರಿಸೀಲಿಸಿ ನಾನು ಬರೆದ ಚಿತ್ರ ಬೆಸ್ಟ ಎಂದಳು. ಕೊಟ್ಟ ಕಾರಣ ನಾನು ತೆಗೆದ ಚಿತ್ರ ಸಧ್ಯಕ್ಕಿರುವ ಬೆಂಗಳೂರಿನ lockdown ಪರಿಸ್ಥಿತಿ ಬಿಂಬಿಸುವ modern art.

ಹಾಳೆಯಲ್ಲಿದ್ದ ಚಿಕ್ಕಿಗಳು ಒಂದೇ ತೆರನಾಗಿದ್ದರೂ ಅಲ್ಲಿ ಬಿಡಿಸಿರುವ ಚಿತ್ರಗಳು ಚಿತ್ರಿಸುವವರ ಅಭಿರುಚಿ, ಅನುಭವ ಮತ್ತು ಅವರ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ.

**ಶರಣರ ಚರಿತ್ರೆ:**

ಇದನ್ನು ಹೇಳಲಿಕ್ಕೆ ಕಾರಣ ಎಂಟುನೂರು ವರ್ಷಗಳ ನಂತರ ನಮಗೆ ದೊರೆತ ಶರಣರ ಬಗ್ಗೆ ಗೊತ್ತಿರುವ ಕೆಲವು (ಸತ್ಯವೆಂದು ಪರಿಗಣಿಸ್ಪಟ್ಟ) ಸಂಗತಿಗಳನ್ನು ಉಪಯೋಗಿಸಿ ಆಗ ನಡೆದ ಘಟನೆಗಳನ್ನು ವಿವರಿಸುವಾಗ, ವಿವರಗಳ ಮೇಲೆ ವಿವರಿಸುವವನ ಅನುಭವ ಮತ್ತು ಅವನ ಊಹೆಗಳ ಪ್ರಭಾವ ಇರುತ್ತದೆ ಎನ್ನುವದನ್ನು ಹೇಳಲು ಮೇಲಿನ ಉದಾಹರರಣೆ ಕೊಟ್ಟಿರುವೆ.

ಶರಣ ಚರಿತೆ ಬೆಳಕಿಗೆ ಬಂದದ್ದು ಕಲ್ಯಾಣ ಕ್ರಾಂತಿಯ ಶತಮಾನಗಳ ನಂತರ. ನಮಗೆ ಇದುವರೆಗೆ ದೊರೆತ ಶರಣರ ವಚನಗಳಲ್ಲಿ ಎಲ್ಲಿಯೂ ತಮ್ಮ ಜೀವನದ ಬಗ್ಗೆ ಅಥವಾ ನಡೆದ ಘಟನಾವಳಿಗಳ ಬಗ್ಗೆ ವಿವರ ಸಿಕ್ಕುವದಿಲ್ಲ.

ಆ ಶತಮಾನಗಳ ಅವಧಿಯಲ್ಲಿ ಶರಣರ ಕಾಲದಲ್ಲಿ ನಡೆದ ನಿಜವಾದ ಘಟನೆಗಳು ಕಥಾರೂಪ ಪಡೆದುಕೊಂಡುಬಿಟ್ಟಿದ್ದವು. ಆನಂತರ ಕವಿಗಳು ಮತ್ತು ಸಾಹಿತಿಗಳು ಸಿಕ್ಕ ಕೆಲವು ಆಧಾರಗಳು ಮತ್ತು ಮೌಖಿಕವಾಗಿ ಕೇಳಿದ ಕಲ್ಪನಾಧಾರಿತ ಕಥನಗಳ ಆಧರದ ಮೇಲೆ ಶರಣರ ಚರಿತ್ರೆ ಘಟನೆಗಳ ಮೇಲೆ ಬೆಳಕು ಚಲ್ಲಿದರು.

ಹಾಗಾಗಿ ಅವರು ವಿವರಿಸಿದ ಘಟನೆಗಳು ಸರಿ ಅಥವಾ ತಪ್ಪು ಎಂಬುದನ್ನು ಪೂರ್ಣವಾಗಿ ನಿರ್ಧರಿಸಲಾಗುವದಿಲ್ಲ.

ನಾನಿಲ್ಲಿ ವಿವರಿಸುತ್ತಿರುವ ಘಟನೆಗಳು ನನಗೆ ಸಿಕ್ಕ ಕೆಲವು ಚಾರಿತ್ರಿಕ ಅಂಶಗಳನ್ನು ಕಾಲ್ಪನಿಕವಾಗಿ ಜೊಡಿಸಿ ಕಥಾರೂಪದಲ್ಲಿ ಬರೆದವುಗಳಾಗಿವೆ. ಹಾಗಾಗಿ ಅವು ಐತಿಹಾಸಿಕ ಘಟನೆಗಳ ವಿವರಣೆಗಳಲ್ಲ.

ಹೀಗಾಗಿರಬಹುದು ಎನ್ನುವ ವಿವರ ಕೊಡುವ ಪ್ರಯತ್ನ ಇಲ್ಲಿದೆ.

**ಬಿಜ್ಜಳ ಚಾಣಾಕ್ಷ ಆಡಳಿತಗಾರ:**

ಇಲ್ಲಿ ಆಗ ದೊರೆಯಾಗಿದ್ದ ಬಿಜ್ಜಳನ ಪೂರ್ವಾಪರ ತಿಳಿದುಕೊಂಡರೆ ಕಲ್ಯಾಣ ಕ್ರಾಂತಿಯ ಮೂಲಕಾರಣಗಳು ಗೊತ್ತಾಗುತ್ತವೆ. (ನಾನಿಲ್ಲಿ ವಿಕಿಪಿಡಿಯಾದಲ್ಲಿ ಸಿಕ್ಕ ವಿವರ ತೆಗೆದುಕೊಂಡಿರುವೆ)

ಕ್ರಿ ಶ 1153ರ ಹೊತ್ತಿಗೆ ಮುಮ್ಮಡಿ ತೈಲ ಸಾಮ್ರಾಟನಾಗಿದ್ದರೂ ಬಿಜ್ಜಳ ಸ್ವತಂತ್ರನಾಗಿದ್ದ. ಕೆಲದಿನಗಳಲ್ಲಿ ಅನೇಕ ಚಾಳುಕ್ಯ ಸಾಮಂತರನ್ನು ತನ್ನ ಕಡೆ ಸೇರಿಸಿಕೊಂಡು ತನ್ನ ಪ್ರಭಾವ ವಿಸ್ತರಿಸಿದ. ಎದುರುಬಿದ್ದ ಇತರ ಸಾಮಂತರನ್ನು ಸೋಲಿಸಿಯೇ ತನ್ನ ಆಳ್ವಿಕೆಯನ್ನು ಭದ್ರಪಡಿಸಿಕೊಂಡ. 1162ರ ಹೊತ್ತಿಗೆ ಚಾಳುಕ್ಯ ಸಾಮ್ರಾಜ್ಯದ ಬಹುಭಾಗ ಇವರ ಅಧೀನಕ್ಕೆ ಬಂತು. ಹಲವು

ತಂತ್ರಗಳಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರೂ ಇವನ ಆಳ್ವಿಕೆ ಸುಗಮವಾಗಿರಲ್ಲಿಲ್ಲ. ಅದು ಕೇವಲ ಆರು ವರ್ಷಗಳಷ್ಟು ಶೈಶವವಾಗಿತ್ತು. ಅಧಿಕಾರ ಕಳೆದುಕೊಂಡ ಹಲವು ಚಾಳುಕ್ಯ ವಂಶೀಯರು ಮತ್ತು ಸಾಮಂತರು ತಮ್ಮ ಬಲವರ್ಧನೆಯಲ್ಲಿ ತೊಡಗಿದರು. ಏಳು ಜನ ರಾಜಕುಮಾರರಲ್ಲಿ ಹಿರಿಯಮಗ (ರಾಯಮುರಾರಿ) ಸೋವಿದೇವ ಮಹತ್ವಾಕಾಕ್ಷಿಯಾಗಿದ್ದ. ಈ ಅಧಿಕಾರ ಲಾಲಸೆಯ ರಾಜಕುಮಾರನನ್ನು ಮತ್ತು ರಾಜ ವಂಶಸ್ಥರನ್ನು ಶರಣತತ್ವ ವಿರೋಧಿಸುವ ಸಂಪ್ರದಾಯವಾದಿಗಳು ಗಾಳವಾಗಿ ಉಪಯೋಗಿಸಿದರು.

**ಶರಣರ ಮುಂದಾಲೋಚನೆ:**

ಬಸವಣ್ಣನವರ ವಿಚಾರಗಳು ಆಡಳಿತದಲ್ಲಿ ಸುಧಾರಣೆ ತಂದು ಸುಖ ಶಾಂತಿ ನೆಲೆಗೊಂಡಿತು. ಅವರ ಮತ್ತು ಇತರ ಶರಣ ಹೊಸ ವಿಚಾರ ಧಾರೆ ದೇಶ ವಿದೇಶಗಳಲ್ಲಿ ಜನಮನ ಸೆಳೆಯಿತು. ಬಸವಕಲ್ಯಾಣ ಧಾರ್ಮಿಕ ಮತ್ತು ಸಾಸ್ಕೃತಿಕ ಪ್ರವಾಸಿ ಕೇಂದ್ರವಾಯಿತು. ಬಸವಣ್ಣನವರ ಪ್ರಭಾವ ಬಹಳಷ್ಟು ಬೆಳೆದು ಶರಣರ ವಚನಗಳು ಎಲ್ಲರ ಮನ ತಲುಪತೊಡಗಿದವು. ಬಸವಕಲ್ಯಾಣಕ್ಕೆ ಬರುವವರ ಸಂಖ್ಯೆ ಹೆಚ್ಚಾದ ಹಾಗೆ ಮತ್ತು ಶರಣಸಂಸ್ಕೃತಿ ನೆಲೆಯೂರಲು ಪ್ರಾರಂಭವಾದ ಹಾಗೆ ಅಲ್ಲಿನ ಆಸ್ಥಾನದಲ್ಲಿದ್ದ ಬಸವವಿರೋಧಿ ಸಾಂಪ್ರದಾಯಕ ಶಕ್ತಿಗಳು ಸಂಘಟಿತರಾಗಿ ವಿರೋಧ ಮಾಡುವ ತಂತ್ರದ ಅಂಗವಾಗಿ ಕುಟಿಲೋಪಾಯ ಮಾಡಲು ಪ್ರಾರಂಭಿಸಿದರು.
ಅದಕ್ಕಾಗಿ ಶರಣಧರ್ಮ ವಿರೋಧಿಗಳ, ಸೇನೆಯಲ್ಲಿದ್ದ ಅಧಿಕಾರಿಗಳ ಮತ್ತು ಅಧಿಕಾರದಾಹವಿರುವ ರಾಜವಂಶಜರ ಸಹಕಾರ ಪಡೆಯಲಾರಂಭಿಸಿದರು. ಆದರೆ ಬಸವಣ್ಣನವರ ಮತ್ತು ಆಸ್ಥಾನದಲ್ಲಿದ್ದ ಅವರ ಅನುಯಾಯಿಗಳ ಪ್ರಾಮಾಣಿಕತೆ ನಡೆ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಅವರ ಕೊಡುಗೆ ಬಿಜ್ಜಳ ರಾಜನ ಮೆಚ್ಚುಗೆಗೆ ಪಾತ್ರವಾಗಿ ವಿರೋಧಿಗಳ ಆಟ ನಡೆಯದಂತೆ ಮಾಡಿತು. ವಿರೋಧಿಗಳು ರಾಜನ ದೃಷ್ಟಿಯಲ್ಲಿ ಮತ್ತು ಅಲ್ಲಿರುವ ಜನ ಜನಸಾಮಾನ್ಯರಿಗೆ ತಪ್ಪು ಎಂದೆನಿಸುವ ಘಟನೆ ಶರಣರಿಂದಾಗಲಿ ಎಂಬ ಪ್ರತೀಕ್ಷೆಯಲ್ಲಿ ಇದ್ದರು. ಆಸ್ಥಾನ, ಸೈನ್ಯ ಮತ್ತು ಆಡಳಿತದಲ್ಲಿದ್ದ ಬಸವಾಭಿಮಾನಿಗಳಿಗೆ, ಇದರ ಆಡಳಿತ ನಿಪುಣರಾಗಿದ್ದ ಚನ್ನಬಸವಣ್ಣ, ಮಡಿವಾಳ ಮಾಚಿದೇವರು ಮತ್ತು ಇತರ ಶರಣ ಅಭಿಮಾನಿ ಆಡಳಿತಗಾರರಿಗೆ ಇದರ ಅರಿವಿತ್ತು.
ಶಾಂತಿ, ಸೈರಣೆ ಆಧಾರವಾಗಿದ್ದ ಶರಣಧರ್ಮ ಅನುಯಾಯಿಗಳು ತಮ್ಮ ಕಾಯಕ ಮತ್ತು ಲಿಂಗಪೂಜೆಯಲ್ಲಿ ನಿಶ್ಚಿಂತರಾಗಿ ಇದ್ದರು.
ಸಂಪ್ರದಾಯವಾದಿಗಳ ಸಂಚಿನ ಸುಳಿವು ಸಿಕ್ಕ ಮೇಲೆ ಚನ್ನಬಸವಣ್ಣನವರು, ಶಾಂತರಸರು ಮತ್ತು ಮಡಿವಾಳ ಮಾಚಿದೇವರು ಜೊತೆಯಾಗಿ ಕಠಿಣ ಸಂದರ್ಭದಲ್ಲಿ ವಚನಗಳ ಮತ್ತು ಶರಣರ ರಕ್ಷಣೆಗಾಗಿ ತೆಗೆದುಕೊಳ್ಳುವ ಉಪಾಯ ಯೋಚಿಸತೊಡಗಿದರು.

ಅಲ್ಲಮಪ್ರಭು ಅವರು ತಾವು ಹಾಡಿದ ವಚನಗಳ ಸಂಖ್ಯೆಯ ವಿವರ ಈ ವಚನದಲ್ಲಿದೆ



**ಎಂಬತ್ತು (ಎರಡೆಂಬತ್ತು?) ಕೋಟಿ ವಚನವ ಹಾಡಿ**
**ಹಲವ ಹಂಬಲಿಸಿತ್ತೆನ್ನ ಮನವು,**
**ಮನ ಘನವನರಿಯದು, ಘನ ಮನವನರಿಯದು.**
**ಗುಹೇಶ್ವರನೆಂಬ ಲಿಂಗವನರಿದ ಬಳಿಕ**
**ಗೀತವೆಲ್ಲ ಒಂದು ಮಾತಿನೊಳಗು !** / 449-
--- ಅಲ್ಲಮಪ್ರಭು

ಅಂದರೆ ಅನುಭವ ಮಂಟಪದಲ್ಲಿ ಚರ್ಚೆಯಾಗಿ ಅಂಗೀಕರಿಸ್ಪಟ್ಟ ವಚನಗಳ ಸಂಖ್ಯೆ ಎಂಬತ್ತು ಕೋಟಿಗಿಂತಲೂ ಹೆಚ್ಚು.
ಇನ್ನು ಎಲ್ಲ ಶರಣರು ರಚಿಸಿದ ವಚನಗಳ ಸಂಖ್ಯೆಯನ್ನು ಊಹಿಸುವದು ಅಸಾಧ್ಯ. ಶರಣರು ತಾವು ರಚಿಸಿದ ವಚನವನ್ನು ಅನುಭವ ಮಂಟಪದಲ್ಲಿ ಮಂಡಿಸುತ್ತಿದ್ದರು. ಅಲ್ಲಿದ್ದ ಪರಿಣತರೆಲ್ಲರ ಒಪ್ಪಿತವಾದ ವಚನವನ್ನು ಶಾಂತರಸರು ರಕ್ಷಿಸಿಡುತ್ತಿದ್ದರು. ಕೋಟ್ಯಂತರ ವಚನಗಳನ್ನು ರಕ್ಷಿಸುವ ಮಹಾನ ಸವಾಲು ಎದುರಿಸುವದಕ್ಕಾಗಿ ಅವರೆಲ್ಲ ಒಂದು ಯೋಜಿತ ಕಾರ್ಯಕ್ರಮ ರೂಪಿಸಿದರು ವಚನಗಳ ಅನೇಕ ಪ್ರತಿ ತಯಾರಿಸಲು ಆರಂಭಿಸಿದರು.
ಅವರೆಲ್ಲರ ಅಭಿಪ್ರಾಯದ ಮೇರೆಗೆ ಶಾಂತರಸರು ವಚನದ ಕಟ್ಟುಗಳ ಪ್ರತಿಗಳನ್ನು ಗ್ರಂಥಾಲಯದಲ್ಲಿ ಮತ್ತು ಬೇರೆ ಬೇರೆ ರಹಸ್ಯ ಸ್ಥಳಗಳಲ್ಲಿ ಅಡಗಿಸಿಟ್ಟು ಅವುಗಳನ್ನು ಕಾಯಲು ಕೆಲವರನ್ನು ನಿಯೋಜಿಸಿದರು.
ಆ ಮಹತ್ವದ ಕೆಲಸಕ್ಕೆ ಅಲ್ಲಿದ್ದ ನಿಷ್ಟಾವಂತ ಸಾಹಸಿ ಮತ್ತು ಕಾಡಿನ ಪರಿಚಿತವಾಗಿರುವ ನಾಯಕ (ಬೇಡ) ಜನಾಂಗದ ಯುವಕರಿಗೆ ವಹಿಸಿದರು. ಇದು ಅವರ ಮುಂದಾಲೋಚನೆಗೆ ಸಾಕ್ಷಿ.
ಶಾಂತರಸರು ಮತ್ತು ಶರಣರು ಅನುಸರಿಸಿದ ಇನ್ನೊಂದು ಮಹತ್ವದ ಕ್ರಮ ಬಸವಕಲ್ಯಾಣಕ್ಕೆ ದಿನಾಲೂ ನೂರಾರು ಯಾತ್ರಿಕರು, ಪ್ರವಾಸಿಗರು, ಭಕ್ತರು ಮತ್ತು ಜಂಗಮರು ಬಂದು ಹೋಗುತ್ತಿದ್ದರು. ಅವರಿಗೆ ಶರಣರ ಪ್ರಸಾದವೆಂದು ವಚನದ ಕಟ್ಟೊಂದನ್ನು ನೀಡಲು ಪ್ರಾರಂಭಿಸಿದರು.
ಬಂದ ಭಕ್ತರು ಆ ಕಟ್ಟನ್ನು ತಮಗೆ ಸಿಕ್ಕ ದೇವರ ಪ್ರಸಾದವೆಂಬ ಪೂಜ್ಯ ಭಾವನೆಗಳಿಂದ ತಮ್ಮೊಡನೆ ಒಯ್ದು ಆ ಕಟ್ಟನ್ನು ಪೂಜಾಕೋಣೆಯ ಜಗುಲಿಯಲ್ಲಿಟ್ಟು ಪೂಜಿಸಲು ಕೆಲವರು ಆರಂಭಿಸದರೆ, ಅದರಲ್ಲಿರುವ ವಚನಗಳನ್ನು ಅಧ್ಯಯನ ಮಾಡಿ ಹಲವರಿಗೆ ವಿವರಿಸಿ ಸಂತೋಷ ಪಟ್ಟು ಅದನ್ನೇ ಕಾಯಕವನ್ನಾಗಿ ಮಾಡಿಕೊಂಡರು ಕೆಲವರು.
ಒಟ್ಟಾರೆಯಾಗಿ ವಚನಗಳ ರಕ್ಷಣೆಯಾಯಿತು ಮತ್ತು ಪ್ರಸಾರವೂ ಆಯಿತು.

ಈ ಶತಮಾನದ ಆರಂಭದಲ್ಲಿ ವಚನ ಸಂಗ್ರಹ ಆರಂಭಿಸಿದಾಗ ಅನೇಕ ಭಕ್ತರ ಮನೆಯ ಪೂಜಾಗೃಹದ ಜಗಲಿಯ ಮೇಲೆ ಸಿಕ್ಕ ವಚನಕಟ್ಟುಗಳು ಇಂದು ವಚನಗಳ ಉಳಿವಿಗೆ ಕಾರಣವಾದವು.
ನಾನು (1965 -1970) ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲದಲ್ಲಿ ಅಧ್ಯಯನ ಮಾಡುತ್ತಿದ್ದಾಗ ವಚನ ಸಾಹಿತ್ಯ ಸಂಶೋಧನೆ ಮಾಡುತ್ತಿದ್ದ ನನ್ನ ಮಿತ್ರರು ಅನೇಕ ದಿನಗಳವರೆಗೆ ಊರೂರು ಕಾಲ್ನಡಿಗೆಯಲ್ಲಿ ಪ್ರಮಾಸಮಾಡಿ ವಚನದ ಕಟ್ಟುಗಳನ್ನು ಸಂಗ್ರಹಿಸಿ ತಂದ ತಮ್ಮ ಅನುಭವಗಳನ್ನು ಸಂತಸದಿಂದ ಹಂಚಿಕೊಂಡ ಮಧುರ ನೆನಪುಗಳು ಇನ್ನೂ ಹಚ್ಚಹಸಿರಾಗಿವೆ. ಇನ್ನೂ ಅನೇಕ ವಚನಕಟ್ಟುಗಳು ಅಲ್ಲಲ್ಲಿ ಪುಜೆಗೊಳ್ಳುತ್ತಲಿವೆ. ಅವುಗಳನ್ನು ಹುಡುಕಿ ತೆಗೆಯುವ ಪ್ರಕ್ರಿಯೆ ಇನ್ನೂ ನಡೆದಿದೆ. ಶರಣರ ದೂರಗಾಮಿ ದೃಷ್ಟಿ ಇದಕ್ಕೆಲ್ಲ ಕಾರಣ. ಇಂದಿಗೂ ನೀವು ಕರ್ನಾಟಕದ ಯಾವದೇ ಮಠಕ್ಕೆ ಹೊದರೆ ಪ್ರಸಾದ ಮಾಡಿ ಹೋಗುವಾಗ ಒಂದು ವಚನದ ಪುಸ್ತಕವನ್ನು ಮಠಾಧೀಶರು ಆಶೀರ್ವಾದ ರೂಪದಲ್ಲಿ ನೀಡುವ ಸಂಪ್ರದಾಯವಿದೆ.
ಹೀಗೆ ವಚನ ಸಾಹಿತ್ಯ ಪ್ರಸಾರ ನಿರಂತರವಾಗಿ ನಡೆದಿದೆ.

**ಶರಣರು ಕಲ್ಯಾಣದಿಂದ ಉಳವಿಗೆ ಹೋಗಲು ಆರಿಸಿಕೊಂಡ ಮಾರ್ಗ:**

ಕಲ್ಯಾಣದಿಂದ ಉಳವಿಗೆ ಇರುವ ದೂರ 532 ಕಿ ಮೀ (ಸುಮಾರು 27 ಯೋಜನ) ಕಾರಿನಲ್ಲಿ ಪಯಣಿಸಿದರೆ ಸುಮಾರು ಹನ್ನೆರಡು ತಾಸು ಬೇಕು. ಅದೇ ಕಾಲ್ನಡಿಗೆಯಲ್ಲಿ ಅವಿರತವಾಗಿ ನಡೆದರೆ ನಾಲ್ಕು ದಿನ ನಾಲ್ಕು ತಾಸು ಬೇಕು. ಈಗಲೂ ಭಕ್ತರು ಕಲ್ಯಾಣದಿಂದ ಉಳವಿಗೆ ಕಾಲ್ನಡಿಗೆಯಲ್ಲಿ ಹೊಗುವ ಪರಂಪರೆ ಇದೆ. ಅವರು ಹೆಚ್ಚುಕಡಿಮೆ 11 ದಿನ ತೆಗೆದುಕೊಳ್ಳುತ್ತಾರೆ.
ಹನ್ನೆರಡನೆಯ ಶತಮಾನದಲ್ಲಿ ಈ ಪ್ರದೇಶದಲ್ಲಿ ದಟ್ಟವಾದ ಕಾಡಿತ್ತು. ವನ್ಯಮೃಗಗಳ ತಾಣವಾಗಿತ್ತು.
ಬದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಆಡಳಿತಕಾಲದಲ್ಲಿ ಅಲ್ಲಿ ಒಳ್ಳೆಯ ರಾಜಮಾರ್ಗಗಳಾಗಿದ್ದವು. ಕಲ್ಯಾಣ ಚಾಲುಕ್ಯರು ತಮ್ಮ ರಾಜಧಾನಿಯನ್ನು ಮಂಗಳವೇಢೆಯಿಂದ ಕಲ್ಯಾಣಕ್ಕೆ ಬದಲಾಯಿಸದ ಮೇಲೆ ಆ ಪಟ್ಟಣಗಳನ್ನು ಜೋಡಿಸುವ ರಾಜಮಾರ್ಗ ಇನ್ನಷ್ಟು ಸುಧಾರಿಸಿತ್ತು.
ಬೆಳಗಾವಿ ಜಿಲ್ಲೆಯ ಹಲಸಿ ಕದಂಬರ ಎರಡನೇಯ ರಾಜಧಾನಿಯಾಗಿತ್ತು ಮತ್ತು ಉಳವಿ ಕದಂಬರ ಆಡಳಿತಕ್ಕೊಳಪಟ್ಟಿತ್ತು. ಹೀಗಾಗಿ ಅಲ್ಲಿಯೂ ಸಂಪರ್ಕ ರಸ್ತೆಯಿತ್ತು ಆದರೆ ಅದು ಕಡಿದಾದ ಬೆಟ್ಟಗುಡ್ಡಗಳಲ್ಲಿ ಸಾಗುವ ದುರ್ಗಮ ರಸ್ತೆಯಾಗಿತ್ತು. ಈಗಲೂ ಅದೇ ಮಾರ್ಗ ಕಲ್ಯಾಣದಿಂದ ಉಳವಿಗೆ ಸಂಪರ್ಕ ಕಲ್ಪಿಸುತ್ತದೆ. ಈಗಲೂ ಅದು ದಟ್ಟ ಕಾಡುಗಳಿಂದ ಕೂಡಿದ ಈ ಪ್ರದೇಶ ದುರ್ಗಮವಾಗಿದೆ. ಇಲ್ಲಿಯ ಸೃಷ್ಟಿ ಸೌಂದರ್ಯ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ.

ಯಾವಾಗಲೂ ತುಂಬಿ ಹರಿಯುವ ಭೀಮಾ, ಮತ್ತು ಕೃಷ್ಣಾ ನದಿಗಳನ್ನು ದಾಟುವದೇ ಪ್ರಯಾಸದ ಸಂಗತಿಯಾಗಿತ್ತು.




ಭೀಮಾ ನದಿ ದಾಟಲು ಮಾಚನೂರ ಮತ್ತು ಘೋಡೆಸ್ವರ ನಡುವೆ ಡೋಣಿಯ ಮೂಲಕ ಸಾಗಬೇಕಾಗಿತ್ತು. ಈಗ ಅಲ್ಲಿ ಸೇತುವೆ ನಿರ್ಮಾಣವಾಗಿದೆ.
ಕೃಷ್ಣಾ ನದಿ ದಾಟಲು ಕುಡಚಿ ಹತ್ತಿರ ಡೋಣಿಯಲ್ಲಿ ನದಿ ದಾಟಬೇಕಿತ್ತು. ಈಗ ಅಲ್ಲಿ ಸೇತುವೆಯಾಗಿದೆ.
ಈ ಎರಡೂ ಜಾಗೆಗಳಲ್ಲಿ ನದಿಗಳು "ಊ" ಆಕಾರದಲ್ಲಿ ಹರಿಯುತ್ತಿದುದರಿಂದ ಇಲ್ಲಿ ಡೋಣಿಯಲ್ಲಿ ನದಿ ದಾಟುವದು ಸುಲಭವಾಗಿತ್ತು.




ದಟ್ಟ ಅಡವಿಯಲ್ಲಿದ್ದ ಸರಕು ಸಾಗಣೆಯ ಮತ್ತು ಯೋಧರ ಸಂಚಾರದ ಈ ರಸ್ತೆಗಳಲ್ಲಿ ಯೋಧರ ಸರ್ಪಗಾವಲಿತ್ತು. ಯೋಜನಕ್ಕೊಂದು ವಿಶ್ರಾಂತಿ ತಾಣಗಳು ಇದ್ದ ಈ ರಸ್ತೆಯೇ ಆಗಿನ ದೊಡ್ಡ ಊರುಗಳನ್ನು ಸಂಪರ್ಕಿಸುವ ಏಕೈಕ ಮಾರ್ಗವಾಗಿತ್ತು.

ಈ ಎಲ್ಲ ವಿವರಣೆ ಓದಿದ ನಿಮಗೆ ಶರಣರು ಯೋಧರಿಂದ ಮರೆಯಾಗಿ ಈ ಮಾರ್ಗದಲ್ಲಿ ಸಾಗಲು ಸಾಧ್ಯವೇ ಇಲ್ಲ ಎನ್ನುವದು ಗೊತ್ತಾಗುತ್ತದೆ.
ಹಾಗಾದರೆ ಶರಣರು ಸಾಗಿದ ಮಾರ್ಗ ಯಾವದು?
ಈ ಪ್ರಶ್ನೆಗೆ ಹತ್ತು ಹಲವು ಉತ್ತರಗಳನ್ನು ಪರಿಣಿತರು ಒದಗಿಸಿದ್ದಾರೆ. ಹಿರಿಯರು ಹೇಳಿದ ಆ ಹಾದಿಯಲ್ಲಿ ಪ್ರತಿವರ್ಷ ಪ್ರವಾಸ ಮಾಡುವ ಭಕ್ತರು ಅನೇಕರಿದ್ದಾರೆ. ನನ್ನ ಉತ್ತರ ಹತ್ತರಲ್ಲಿ ಹನ್ನೊಂದನೆಯದು.
ನಾನಿಲ್ಲಿ ಬರೆಯುತ್ತಿರುವದು ಪ್ರಯಾಣಿಸಿ ಅನುಭವದಿಂದ ಬಂದ ಉತ್ತರವಲ್ಲ. ಮನೆಯಲ್ಲಿ ಕುಳಿತುಕೊಂಡು "ಗೂಗಲ್ ಅರ್ಥ" ಮೂಲಕ ಅಲ್ಲಿರುವ ಪ್ರದೇಶಗಳನ್ನು ಅವಲೋಕಿಸಿ ಸಾವಿರಾರು ಶರಣರು ಸುರಕ್ಷಿತವಾಗಿ ಸಾಗಿರಬಹುದಾದ ಮಾರ್ಗ ವಿವರಿಸಿರುವೆ.
ಶರಣರು ರಾಜಕಾರಣ ಪರಿಣಿತರಷ್ಟೇ ಅಲ್ಲ ನುರಿತ ಯೋಧರಾಗಿದ್ದರು. ಅವರು ಆರಿಸಿಕೊಂಡ ಈ ಮಾರ್ಗ ಎಷ್ಟು ಸುರಕ್ಷಿತವಾಗಿತ್ತು ಎನ್ನುವದನ್ನು ಇಲ್ಲಿ ವಿವರಿಸುತ್ತಿರುವೆ.
ಇದು ಕಲ್ಪನೆಯಿಂದ ಮೂಡಿ ಬಂದಿದೆಯಾದರೂ ಅಲ್ಲಿರುವ ಕುರುಹುಗಳು ಅದರಲ್ಲಿಯೂ ಅವರ ನೆನಪಿಗಾಗಿ ನಿರ್ಮಿಸಿದ ಸ್ಮಾರಕಗಳು ಮತ್ತು ಗುಡಿಗಳು ನನ್ನ ಕಲ್ಪನೆಗಳು ನಿಜವಾಗಿಯೂ ವಾಸ್ತವದಲ್ಲಾಗಿರಬೇಕೆಂದು ನಿರೂಪಿಸುತ್ತವೆ. ಅವರು ಸಾಗಿದ ದಾರಿಯಲ್ಲಿ ಇರುವ ಮಹಾದೇವ ಮಂದಿರ, ವೀರಭದ್ರೇಶ್ವರ ಮಂದಿರ ಮತ್ತು ಶಿವ ಮಂದಿರ ಮೊದಲೇ ಇದ್ದವೋ ಅಥವಾ ಆಮೇಲೆ ನಿರ್ಮಾಣವದವೋ ಗೊತ್ತಿಲ್ಲ. ಆದರೆ ಬಸವ ಮಂದಿರಗಳು ಮತ್ತು ಶರಣರ ಹೆಸರಿನ ಮಂದಿರಗಳು ಆಮೇಲೆ ನಿರ್ಮಾಣವಾಗಿವೆ ಎನ್ನುವದು ಸತ್ಯ.
ಆಗಿದ್ದ ಪರಿಸ್ತಿತಿ ಮತ್ತು ಘಟನೆಗಳನ್ನು ಆಧರಿಸಿ ಸ್ಥಳಗಳನ್ನು ಆಯ್ದುಕೊಂಡಿರುವೆ. ಇಲ್ಲಿರುವ ಸ್ಥಳಗಳ ಹೆಸರುಗಳು ಇಂದು ಹೀಗಿವೆ, ಹನ್ನೆರಡನೆಯ ಶತಮಾನದಲ್ಲಿ ಅವುಗಳ ಹೆಸರೇನಿತ್ತೋ ಗೊತ್ತಿಲ್ಲ.

**ಕೊಲಲಾರದೆಯೆ ಹಿಂದೆ ಬಂದುದನರಿದುದಿಲ್ಲಾಗಿ, ಮುಂದೆ ಬಾಹದಕೆ ನೀ ಚಿಂತಿಸಲೇಕೆ ?**

**ಇಂದಿಗೆಂಬುದು ಲಿಂಗದೊಲವು. ಶಿವಶರಣಂಗೆ ನಾಳೆ ಇಂದು ಎಂಬ ಅಭಾವವಿಲ್ಲ.**

**ಕಡುಗಲಿಯಾದ ಶರಣ ರಕ್ಷೆಯ ಕಾಯವೇನಯ್ಯಾ, ಅಖಂಡ ಮಂಡಲೇಶ್ವರಾ.**

--- ಅಖಂಡ ಮಂಡಲೇಶ್ವರ.

**ಕಲ್ಯಾಣದಿಂದ ಖರೋಸಾದವರೆಗೆ:**

ಕಲ್ಯಾಣದಲ್ಲಿಯ ಪರಸ್ಥಿತಿಯಲ್ಲಿ ಬದಲಾವಣೆಯಾಗುತ್ತಿದೆ ಎನ್ನುವ ಸೂಚನೆ ಅರಿತ ಶಾಂತರಸ ವಚನಗಳನ್ನು ಬೇರೆ ಬೇರೆ ಕಳಿಸಿ ರಕ್ಷಿಸುವ ವ್ಯವಸ್ಥೆ ಮಾಡಿದ್ದರು.
ಯೋಧರ ಪಡೆಗಳ ಚಲನವಲನ ಅರಿತ ಮಡಿವಾಳ ಮಾಚಿದೇವ ಮತ್ತು ಚನ್ನಬಸವಣ್ಣ ಆದಷ್ಟು ಶರಣರು ತಮ್ಮ ತಮ್ಮ ಊರಿಗೆ ಹೋಗಲು ಏರ್ಪಾಡು

ಮಾಡಿದ್ದರು. ಈ ಎಲ್ಲ ಕೆಲಸಗಳು ಅಕ್ಕನಾಗಮ್ಮನವರ ಆದೇಶದಂತೆ ನಡೆಯಿತು. ಇದು ಶರಣರೆಲ್ಲ ಪ್ರವಾಸ ಹೋಗಿ ಬರುವ ಸಮಯವಾದದ್ದರಿಂದ ಇದನ್ನಾರೂ ಗಮನಿಸಲಿಲ್ಲ. ಅಲ್ಲಮಪ್ರಭುಗಳು ಶ್ರಿಶೈಲದ ಕಡೆಗೆ ಮತ್ತು ಸಿದ್ಧರಾಮೇಶ್ವರರು ತಮ್ಮ ಅನುಯಾಯಿಗಳೊಡನೆ ಸೊನ್ನಲಾಪುರಕ್ಕೆ ಪ್ರಯಾಣ ಬೆಳೆಸಿದರು. ಮಧುವಯ್ಯನ ಮಗಳು ಮತ್ತು ಹರಳಯ್ಯನ ಮಗ ಇವರ ವಿವಾಹ ಪ್ರಸ್ತಾಪವಾಗುತ್ತಿದ್ದ ಹಾಗೇ ಕೆಲವು ಶರಣರನ್ನು ಬಿಟ್ಟು ಉಳಿದವರೆಲ್ಲ ಚದುರಿ ಬೇರೆ ಬೇರೆ ಕಡೆ ಚದುರಿ ಆಶ್ರಯ ಪಡೆದಾಗಿತ್ತು.

ರಾಜಕುಮಾರ ಸೋಮದೇವ (ಸೋಮೇಶ್ವರ) ತುಂಬಾ ಚಾಣಕ್ಷನಾಗಿದ್ದು ಅವನಿಗೆ ಸಂಪ್ರದಾಯವಾದಿ ಯೋಧ ನಾಯಕರ ಬೆಂಬಲ ಮತ್ತು ಸಲಹೆ ಇತ್ತು. ಕಲ್ಯಾಣದಲ್ಲಿದ್ದ ಬಹಳಷ್ಟು ಶರಣ ಬೆಂಬಲಿಗ ಕಾಯಕಯೋಗಿಗಳು (ತರ್ದವಾಡಿ ನಾಡು) ಬೀಮಾ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶಗಳಿಂದ ಬಂದವರಾಗಿದ್ದಾರೆ. ಅವರು ತಮ್ಮೂರಿಗೆ ಮರಳಬೇಕಾದರೆ ಕೆಲವೇ ಕೆಲವು ಕಡೆ ತುಂಬಿ ಹರಿಯುವ ಬೀಮಾ ನದಿ ದಾಟಬಹುದಾಗಿತ್ತು. ಅವರು ರಾಜಮಾರ್ಗದ ಪಕ್ಕದಲ್ಲಿ ಸಾಗುವ ಸಂಭವ ಹೆಚ್ಚಾಗಿತ್ತು. ಅದಕ್ಕಾಗಿ ಆ ಮಾರ್ಗ ಮತ್ತು ಸ್ಥಳಗಳಲ್ಲಿ ಯೋಧರ ಪಹರೆ ಹೆಚ್ಚಿಸಿದ್ದ. ರಾಜನಾಗುವ ಸಂದರ್ಭದಲ್ಲಿ ಕಲ್ಯಾಣದ ಪರಸ್ಥಿತಿ ತನಗೆ ಅನುಕೂಲವಾಗುವಂತೆ ಯೋಧರ ನೇಮಕ ಮಾಡಿದ್ದ. ತನ್ನ ಅಶ್ವಪಡೆಯ ಮೇಲೆ ತುಂಬಾ ನಂಬಿಕೆಯಿದ್ದ ಆತ ಶರಣರನ್ನು ಯಾವಾಗ ಬೇಕಾದರೂ ಬಂಧಿಸಿ ಶಿಕ್ಷಿಸಬಹುದು ಎಂದು ನಂಬಿದ್ದ. ಹಾಗಾಗಿ ಶರಣರ ಚಲನವಲನಗಳ ಬಗ್ಗೆ ಅಷ್ಟಾಗಿ ಗಮನಹರಿಸಲಿಲ್ಲ.

ಮಧುವಯ್ಯ, ಹರಳಯ್ಯ ಮತ್ತು ಅವರ ಮಗನಿಗೆ ಶಿಕ್ಷೆ ವಿಧಿಸಲ್ಪಡುತ್ತಿದ್ದಂತೆ ಬಸವಣ್ಣನವರು ಕೂಡಲಸಂಗಮಕ್ಕೆ ಮತ್ತು ಉಳಿದವರು ಬೇರೆ ಕಡೆ ಅಕ್ಕನಾಗಮ್ಮನವರ ಮಾರ್ಗದರ್ಶನದಲ್ಲಿ ಪ್ರಯಾಣ ಬೆಳೆಸಿದರು.

ನಾನಿಲ್ಲಿ ಮಡಿವಾಳ ಮಾಚಿದೇವರ ರಕ್ಷಣೆಯಲ್ಲಿ ಸಾಗಿದ ಸಾವಿರಾರು ಶರಣರ ಪ್ರವಾಸದ ವಿವರ ಕೊಡುವೆ.

ಸಾಮಾನ್ಯವಾಗಿ ಬೀಮಾನದಿಯ ಕಡೆ ಹೋಗುವವರು ದಕ್ಷಿಣ ದಿಕ್ಕಿಗೆ ಹೋಗುವದು ವಾಡಿಕೆ. ಅದಕ್ಕಾಗಿಯೇ ಕಲ್ಯಾಣದಿಂದ ಸೊನ್ನಲಾಪುರದ ಕಡೆ ಹೋಗುವ ರಾಜಮಾರ್ಗದ ಸನಿಹದಲ್ಲಿ ಬಲವಾದ ಯೋಧಪಡೆ ಕಾವಲಿತ್ತು. ಅದರ ಸುಳಿವಿದ್ದ ಶರಣರು ಉತ್ತರ ದಿಕ್ಕಿಗೆ ದಟ್ಟ ಕಾಡಿರುವ ದಾರಿಯಲ್ಲಿ ಸಾಗಿದ್ದು ಅವರ ಜಾಣತನಕ್ಕೆ ಸಾಕ್ಷಿ. ಸಾಮಾನ್ಯವಾಗಿ ಬೀಮಾನದಿಯ ಕಡೆ ಹೋಗುವವರು ದಕ್ಷಿಣ ದಿಕ್ಕಿಗೆ ಹೋಗುವದು ವಾಡಿಕೆ.

ಚಿತ್ರದಲ್ಲಿ ರಾಜಮಾರ್ಗ ಮತ್ತು ಶರಣರು ಸಾಗಿದ ದಿಕ್ಕುಗಳನ್ನು ಕಾಣಬಹುದು




**ಮೊದಲ ದಿನದ ಪ್ರಯಾಣ:**

ಅವರು ಹೋಗಬೇಕಾದ ಮಾರ್ಗ ನಿರ್ಣಯ ಮಡಿವಾಳ ಮಾಚಿದೇವ, ಚನ್ನಬಸವಣ್ಣ ಮೊದಲಾದ ಪರಿಣಿತರು ನಿರ್ಣಯಿಸಿದರು. ಅದಕ್ಕವರು ಅನುಸರಿಸಿದ ಮಾನದಂಡಗಳು

1. ಕಲ್ಯಾಣ ಯೊಧರ ಕಣ್ಗಾವಲಿದ್ದ ಮಾರ್ಗದಲ್ಲಿ ಸಾಗದಿರುವದು.
2. ಸಾಮಾನ್ಯವಾಗಿ ಬಹಳ ಜನ ಭಕ್ತರು ಪೂಜೆಗೆ ತೆರಳಲಿರುವ ಮಂದಿರ ಮಾರ್ಗಗಳನ್ನು ಆರಿಸಿಕೊಳ್ಳುವದು. ಯೋಧರು ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ನಡೆದುಕೊಳ್ಳುತ್ತಿದ್ದರು. ಹಾಗಾಗಿ ಮಂದಿರಕ್ಕೆ ಹೋಗುವವರ ಮೇಲೆ ನಿರ್ಭಂಧ ವಿಧಿಸುತ್ತಿರಲಿಲ್ಲ.
3. ಅನೇಕ ಯೋಧಪಡೆಯ ನಾಯಕರಲ್ಲಿ ಅನೇಕರು ಶರಣರ ಅಭಿಮಾನಿಗಳಿದ್ದರು. ಅದೂ ರಾಜನ ಹಿತೈಷಿಗಳಿಗೆ ಗೊತ್ತಿತ್ತು. ಅವರನ್ನು ಯಾರೂ ಸಂಚರಿಸದ ಮತ್ತು ಮಹತ್ವವಲ್ಲದ ರಸ್ತೆಗಳ ಕಾವಲಿಗೆ ಅಥವಾ ಕೆಲಸಕ್ಕೆ ಹಾಕಿದ್ದರು. ಈ ವಿವರಗಳೆಲ್ಲ ಗೊತ್ತಿದ್ದ ಶರಣರು ಆ ಮಾರ್ಗಗಳನ್ನು ಆರಿಸಿಕೊಂಡಿದ್ದರು.
4. ಶರಣರ ತಂಡದಲ್ಲಿದ್ದವರೆಲ್ಲ ಹಿರಿಯರು ಅವರು ಒಂದು ದಿನದಲ್ಲಿ ಹೆಚ್ಚುನಡೆಯಲಾಗುತ್ತಿರಲಿಲ್ಲ.  ಅದಕ್ಕಾಗಿ ದಿನಕ್ಕೊಂದು ಯೋಜನ (19.2 ಕಿ ಮೀ) ದೂರಕ್ಕಿಂತ ಕಡಿಮೆ ಅಂತರದಲ್ಲಿ ವಾಸಮಾಡಲು ಏರ್ಪಾಟು ಮಾಡಲು ಯೋಜಿಸಿದ್ದರು.
5. ಸಾವಿರಾರು ಜನ ವಸತಿ ಮಾಡಬೇಕಾದರೆ ನೀರು, ನೆರಳಿನ ಅವಶ್ಯಕತೆ ಬಹಳ ಅದಕ್ಕಾಗಿ ಕೆರೆಯ ಮಗ್ಗಲಿನ ಪ್ರದೇಶ ಅವರು ಆರಿಸಿಕೊಂಡಿದ್ದರು.
6. ಆಗ ಎಲ್ಲ ಕಡೆ ದಟ್ಟ ಕಾಡಿದ್ದರೂ ಅವರು ಹಳ್ಳ ಕೊಳ್ಳಗಳಗುಂಟ ಜನಸಂಚಾರವಿಲ್ಲದ ದಾರಿಯನ್ನು ಆರಿಸಿಕೊಂಡಿದ್ದರು.

7. ಕಾಡಿನಲ್ಲಿ ರಾತ್ರಿ ಪ್ರವಾಸ ಕಷ್ಟಕರವಾಗಿದ್ದರೂ ಅವರು ಸಾಧ್ಯವಾದಷ್ಟೂ ರಾತ್ರಿಯಲ್ಲೇ ಪ್ರವಾಸ ಮಾಡಲು ನಿರ್ಧರಿಸಿದರು.
8. ತಂಡದಲ್ಲಿದ್ದವರಿಗೆ ಅಹಾರ ತಯಾರಿಸುವ ಮತ್ತು ಅಹಾರ ಪದಾರ್ಥ ತರುವ ಕೆಲಸವನ್ನು ನಿಷ್ಠಾವಂತ ಕಾಡ ಯುವಜನರ ಮತ್ತು ತಮ್ಮ ಅಭಿಮಾನಿಗಳ ಸಹಾಯ ಪಡೆಯಲು ನಿರ್ಧರಿಸಿದ್ದರು.

ಮಹಾರಾಜ ಶಿಕ್ಷೆ ಪ್ರಕಟಿಸಿದ ಸ್ವಲ್ಪ ಹೊತ್ತಿನಲ್ಲೇ ಇವರ ಪ್ರಯಾಣ ಆರಂಭವಾದದ್ದು ಮಹಾಮನೆಯಿಂದ
ಮೂರು ಕಿ ಮೀ ದೂರದಲ್ಲಿರುವ **ಪ್ರತಾಪುರ** ಕಡೆಗೆ. ಈಗಲೂ ಗೂಗಲ್ ಮ್ಯಾಪ ಚಿತ್ರದಲ್ಲಿ ಆ ಭಾಗ ಹಸಿರಾಗಿರುವದನ್ನು ಗಮನಿಸಿ. ಆಗ ಅಲ್ಲಿ ದಟ್ಟವಾದ ಕಾಡಿತ್ತು ಎನ್ನುವದನ್ನು ದೃಢಪಡಿಸುತ್ತದೆ.
ಅಲ್ಲಿ ಎರಡು ಪ್ರಸಿದ್ಧವಾದ ಮಂದಿರಗಳಿವೆ
1. ವೀರಭದ್ರೇಶ್ವರ ಮಂದಿರ
2. ಮಹಾದೇವ ಮಂದಿರ.
ಇವೆರಡು ಪುರಾತವಾದ ಮಂದಿರಗಳು ಹೌದೋ ಅಲ್ಲವೋ ಗೊತ್ತಿಲ್ಲ.
ಆದರೆ ಶರಣರಿಲ್ಲಿ ಇಲ್ಲಿ ಕೆಲವು ಕಾಲ ತಂಗಿದ್ದರು ಎನ್ನುವದನ್ನು ಸೂಚಿಸುತ್ತದೆ.
ಮಹಾದೇವ ಮಂದಿರವಿದ್ದ ಶರಣರು ತಂಗಿದ ಸ್ಥಳ ಸೂಚಕವಾದರೆ, ವೀರಭದ್ರೇಶ್ವರ ಮಂದಿರ ಅವರ ಭದ್ರತೆಗಾಗಿ ಬಂದ ಯೋಧರು ನೆಲೆಸಿದ ಸ್ಥಳ ಸೂಚಕ.
ಈ ದಿಕ್ಕಿನಲ್ಲಿ ಭೀಮಾ ನದಿತೀರಕ್ಕೆ ಸಾಗಬಹುದು ಎಂದು ಊಹಿಸಲು ಸಾಧ್ಯವಿಲ್ಲ. ಮತ್ತು ಇದು ರಾಜಮಾರ್ಗದಿಂದ ಮತ್ತು ಯೋಧರು ಸಂಚರಿಸುವ ಮಾರ್ಗದಿಂದ ದೂರ. ಈಗಲೂ ಅದು ಪೊದೆ ಮತ್ತು ಹಳ್ಳದ ಮಾರ್ಗ. ಭಕ್ತರಿಗೆ ದಾಸೊಹ ವ್ಯವಸ್ಥೆ ಮಾಡುವ ಈ ಮಂದಿರಗಳಲ್ಲಿ ವಿಶ್ರಮಿಸಿ ಮುಂದೆ ಸಾಗಿರಬಹುದು.
ಪ್ರತಾಪುರದಲ್ಲಿ ವಿಶ್ರಾಂತಿ ಪಡೆದ ನಂತರ ಅವರು ಸಾಗಿದ ದಾರಿ ಎಲ್ಲರ ಊಹೆಗೆ ಮೀರಿದ್ದು. ಅಲ್ಲಿಂದ ಅವರು ನೇರವಾಗಿ **ಮಸ್ತಾಪುರ** ಕೆರೆಗೆ ಹೋಗಬಹುದಾಗಿತ್ತು. ಆದರೆ ಅಲ್ಲಿ ಕೋಟೆ ಕಾವಲಿನವರ ಕಣ್ಣಿಗೆ ಬೀಳಬಹುದಾಗಿತ್ತು. ಅದಕ್ಕಾಗಿ ಕೋಟೆಯಿಂದ ಸುಮಾರು 3 ಕಿ ಮೀ ದೂರದಲ್ಲಿದ್ದ ಮಹಾದೇವ ಮಂದಿರದಲ್ಲಿ ವಿಶ್ರಾಂತಿ ಪಡೆದು ರಾತ್ರಿಗೆ ಕೆರೆ ತಲುಪಿರಬಹುದು. ಅಲ್ಲೀಗ ಬಸವೇಶ್ವರ ಮಂದಿರ ನಿರ್ಮಾಣ ಆಗಿದೆ.
**ಮಸ್ತಾಪುರ** ಕೆರೆಯಿಂದ ಉತ್ತರ ಭಾರತದ ಕಡೆ ಹೋಗುವ ಎಲ್ಲ ಶರಣರು ಹೋಗಿರಬಹುದು. ಒಟ್ಟರೆಯಾಗಿ ಅವರು ಮೊದಲ ದಿನ 10 – 11 ಕಿಮೀ ನಡೆದು ಅಲ್ಲಿ ಒಂದು ರಾತ್ರಿ ಕಳೆದಿರಬಹುದು. ಬೆಟ್ಟ ಬಲಕುಂದ (ಬೆಟ್ಟ ಬಾಲಕುಂಡ) ಶರಣರು ವಾಸಿಸುತ್ತಿದ್ದ ಸ್ಥಳ. ಯಾವ ಪರಿಣಿತರಿಗೂ ಶರಣರು ಈ ದಿಕ್ಕಿನಲ್ಲಿ ತಂಗಿರಬಹುದು ಎನ್ನುವದನ್ನು ಊಹಿಸಲು ಸಾದ್ಯವಿಲ್ಲ. ಅವರನ್ನು ಹುಡುಕಲು ಹೊರಟಿರಬಹುದಾದ ಯೊಧರು ಭೀಮಾ ನದಿ ಕಡೆಗೆ ಹೋಗುತ್ತಾರೆ. ಕಲ್ಯಾಣ

ತೊರೆದು **ಮಸ್ತಾಪುರ** ಕೆರೆಯ ದಂಡೆಗೆ ಬಂದು ತಲುಪುವಷ್ಟರಲ್ಲಿ ಸಂಜೆಯಾಗಿತ್ತು. ಕಲ್ಯಾಣದಲ್ಲಿ ನಡೆದ ಎಲ್ಲ ವಿದ್ಯಮಾನಗಳು ಮಾಚಿದೇವರ ಮೂಲಕ ಎಲ್ಲರಿಗೂ ಗೊತ್ತಾಗುತ್ತಿತ್ತು. ಮಾಚಿದೇವರ ಸಹಾಯಕ್ಕಾಗಿ ಗೂಢಚಾರರ ಪಡೆ ನಿರಂತರ ನಿರತವಾಗಿತ್ತು.




**ಎರಡನೆಯ ದಿನದ ಪ್ರಯಾಣ:**

ಸುದ್ದಿ ಮುಟ್ಟಿಸುವ ಸಾಧನವಾದದ್ದು ಕೂಗು ತಂಡ. ನಿರ್ಧಿಷ್ಟ ದೂರದಲ್ಲಿ ಯಾರ ಗಮನಕ್ಕೆ ಬರದಂತೆ ಈ ತಂಡದವರು ಪಕ್ಷಿಗಳಂತೆ ಕೂಗಿ ವಿಷಯ ತಿಳಿಸುತ್ತಿದ್ದರು. ಪ್ರತಿಯೊಂದು ತಂಡಕ್ಕೂ ವಿಶೇಷವಾದ ಸಾಂಕೇತಿಕ ಭಾಷೆ ಇರುತ್ತಿತ್ತು ಅವರ ಹೊರತಾಗಿ ಯಾರಿಗೂ ಆ ವಿಷಯ ಅರ್ಥವಾಗುತ್ತಿರಲಿಲ್ಲ. ಕೆರೆಯ ದಂಡೆಯ ಮೇಲೆ ಕುಳಿತು ಅಕ್ಕ ನಾಗಮ್ಮನವರು ಸೂರ್ಯ ಮುಳುಗುವದನ್ನು ನೋಡುತ್ತಿದ್ದರು

**ಅಕ್ಕನಾಗಮ್ಮ** : ಸೂರ್ಯಮುಳುಗುವ ಈ ಸಮಯದಲ್ಲಿ ಕೆರೆಯ ನೀರೆಲ್ಲ ಕೆಂಪಾಗಿ ಕಾಣುತ್ತಿದೆ.

**ಮಾಚಣ್ಣ** : ಹೌದು ಅಕ್ಕಾ. ಎಂದಿಗಿಂತ ಇಂದು ಹೆಚ್ಚು ಕೆಂಪಾಗಿದೆ. ಕಲ್ಯಾಣದಲ್ಲಿ ಹರಿದ ರಕ್ತದ ಬಣ್ಣವನ್ನು ಅದು ಪ್ರತಿಬಿಂಬಿಸುತ್ತಿದೆ.

**ಅಕ್ಕನಾಗಮ್ಮ:** ಕಲ್ಯಾಣದಲ್ಲಿ ಇದುವರೆಗೆ ನಡೆದ ಘಟನೆಗಳ ವಿವರ ಬಂದಿತಾ?.

**ಮಾಚಣ್ಣ** : ಎಲ್ಲ ಅಶುಭ ಸಮಾಚಾರ. ಮಹಾರಾಜನ ಆಜ್ಞೆಯಂತೆ ಶಿಕ್ಷೆ ಜಾರಿಯಾಯಿತು. ಆ ದೃಶ್ಯ ನೋಡುತ್ತ ಕಣ್ಣೀರು ಹರಿಸುತ್ತ ನಿಂತಿದ್ದ ಅಮಾಯಕರ ಕತ್ತು ಚಂಡಾಡಿ ತಮ್ಮ ಭಲ್ಲೆಗೆ ಸಿಕ್ಕಿಸಿ ನೃತ್ಯ ಮಾಡುತ್ತ ಕುಣಿದ ರಾಕ್ಷಸ ಪ್ರವೃತ್ತಿಯನ್ನು ಗಡಿಯಿಂದ ಬಂದ ಯೋಧರು ಮೆರೆದರು. ಕಲ್ಯಾಣದ ಆ ರಸ್ತೆಯ ಪ್ರತಿಬಿಂಬವೇ ಈ ಕೆರೆಯಲ್ಲಿ ಕಾಣುತ್ತಿರುವದು. ಇಂದು ರಾತ್ರಿ ಕರಾಳ ರಾತ್ರಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ. ಉನ್ಮತ್ತ ಅಮಾನುಷ ಗಡಿಯಲ್ಲಿರುವ ಯೋಧರಿಗೆ ಪಟ್ಟಣದ ಜವಾಬ್ದಾರಿ ಕೊಟ್ಟರೆ ಪಟ್ಟಣದ ಗತಿ ಏನಾಗುತ್ತದೆ ಊಹಿಸಿಕೊಳ್ಳಲಾಗುತ್ತಿಲ್ಲ.

ಸೇಡು ತೀರಿಸಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದ್ದ ಸಂಪ್ರದಾಯವಾದಿ ಮಂತ್ರಿಗಳು ಅವರನ್ನು ತಮ್ಮ ಇಚ್ಛೆಗೆ ತಕ್ಕ ಹಾಗೆ ಬಳಸಿಕೊಳ್ಳುತ್ತಾರೆ.

**ಅಕ್ಕನಾಗಮ್ಮ:** ಈಗ ನಾವೇನು ಮಾಡುವ ಸ್ಥಿತಿಯಲ್ಲಿ ಇಲ್ಲ. ನಮ್ಮನ್ನು ನಂಬಿಕೊಂಡು ಬಂದಿರುವ ಈ ಎಲ್ಲ ಶರಣರ ರಕ್ಷಣೆ ನಮ್ಮ ಜವಾಬ್ದಾರಿ. ನಮ್ಮ ಮುಂದಿನ ಯೋಜನೆ ಏನು.

**ಮಾಚಣ್ಣ** : ಈಗ ಎಲ್ಲರ ಗಮನ ಪಟ್ಟಣದ ಆಗುಹೋಗುಗಳ ಮೇಲಿದೆ. ನಾವೆಲ್ಲ ಪ್ರಸಾದ ಸೇವಿಸಿ ಸ್ವಲ್ಪ ವಿಶ್ರಾಂತಿ ಪಡೆದು ಕಲ್ಯಾಣದಿಂದ ಸಾದ್ಯವಾದಷ್ಟು ದೂರ ಹೋಗಬೇಕು. ನಾಳೆ ಕಲ್ಯಾಣದ ಪರಸ್ಥಿತಿ ಅರಿದು ಸುಧಾರಿಸಿಕೊಂಡ ಬಳಿಕ ಯೋಧರ ನಿಯೋಜನೆಯಾಗುತ್ತದೆ. ಅಲ್ಲಿಯವರೆಗೆ ನಮ್ಮನ್ನು ಹುಡುಕುವ ಹೊಸ ಪ್ರಯತ್ನ ನಡೆಯುವದಿಲ್ಲ.

**ಚನ್ನಬಸವಣ್ಣ:** ನಿಮ್ಮ ಸಲಹೆ ಸರಿಯಾಗಿದೆ ಹಾಗೆ ಮಾಡೋಣ. ನಾವು ಸಾಗುವ ರಸ್ತೆಯಲ್ಲಿಯ ರಕ್ಷಣಾ ವ್ಯವಸ್ಥೆ ಬಿಗಿಗೊಳಿಸಿ.

ಮಧ್ಯರಾತ್ರಿ ಒಂದು ಜಾವದ ನಂತರ ಅವರೆಲ್ಲ ಪ್ರಯಾಣ ಬೆಳೆಸಿದರು. ಆ ಕೆರೆಗೆ ಹರಿದು ಬರುವ ಹಳ್ಳದ ದಂಡೆಯಗುಂಟ ಅವರ ಪ್ರಯಾಣ ಸಾಗಿತ್ತು. ಬೆಳದಿಂಗಳ ಅಲ್ಪ ಬೆಳಕು ಅವರಿಗೆ ದಾರಿ ತೋರಿಸುತ್ತಿತ್ತು. ಮುಳ್ಳು ಕಂಟಿಗಳನ್ನು ಮತ್ತು ಬಳ್ಳಿಗಳನ್ನು ಸವರಿ ದಾರಿ ನಿರ್ಮಿಸಿ ಆದಷ್ಟು ಮುಳ್ಳುಗಳನ್ನು ಬದಿಗೆ ಸರಿಸಿ ಸ್ವಲ್ಪ ಹುಲ್ಲು ಹಾಕಿ ದಾರಿ ಸಮಮಾಡುವ ಅಡವಿಯ ಕೆಲ ಜನ ಅಲ್ಲಿದ್ದರು.

ಶರಣರು ತಮ್ಮ ಕಾಯಕ ಸಾಮಗ್ರಿಗಳನ್ನು ತಲೆಯ ಮೇಲೆ ಮತ್ತು ಬೇಕಾದ ಬಟ್ಟೆಗಳನ್ನು ಹೆಗಲ ಜೋಳಿಗೆಯಲ್ಲಿ ಹಾಕಿ ಒಬ್ಬರ ಹಿಂದೆ ಒಬ್ಬರು ಸಾಲಾಗಿ ಸಾಗಹತ್ತಿದರು. ಎಷ್ಟೇ ಕಾಳಜಿ ವಹಿಸಿದರೂ ಕಾಲಿಗೆ ನಡುತ್ತಿದ್ದ ಮುಳ್ಳು ಮತ್ತು ಮೈಯೆಲ್ಲ ತರಚುತ್ತಿದ್ದ ಮಗ್ಗುಲ ಗಿಡಗಳು ಅವರಿಗೆ ಅಪಾರ ನೋವುಂಟು ಮಾಡುತ್ತಿದ್ದರೂ ಅವರಿಂದ ಯಾವ ಶಬ್ದವೂ ಹೊರಡುತ್ತಿರಲಿಲ್ಲ.

ಗಾಯದ ಮೆಲೆ ತಣ್ಣೀರು ಅವರ ಬೇನೆ ಹೆಚ್ಚಿಸಿದರೂ ಮೌನವಾಗಿ ಸಹಿಸಿದ ಅವರ ಕಾಲುಗಳಿಗೆ ಅಲ್ಲಿದ್ದ ಯುವಕರು ತಾವು ತಂದಿದ್ದ ಔಷಧ ಲೇಪನ ಮಾಡಿದರು. ಅವರು ಸ್ವಲ್ಪ ಸುಧಾರಿಕೊಳ್ಳುವಷ್ಟರಲ್ಲಿ ಗುಡಿಯಲ್ಲಿ ಮಂಗಳಾರತಿಯಾಗಿ ಅವರಿಗೆಲ್ಲ ಪ್ರಸಾದ ವಿತರಣೆಯಾಯಿತು. ಒಂದು ಜಾವ ವಿಶ್ರಾಂತಿ ಪಡೆದು ಮತ್ತೆ ಪ್ರಯಾಣ ಮುಂದುವರೆಸಲು ನಿರ್ಣಯಿಸಲಾಯಿತು

ಮುಂದಿನ ನಡೆ ನಿರ್ಣಯಿಸಲು ಕೆಲವರು ಅಕ್ಕ ನಾಗಮ್ಮನವರ ಹತ್ತಿರ ಬಂದು ಕುಳಿತರು.

**ಅಕ್ಕನಾಗಮ್ಮ:** ಮಾಚಣ್ಣ ಕಲ್ಯಾಣದಿಂದ ಸಮಾಚಾರ ಬಂದಿತೇ?

ಮಾಚಣ್ಣವರಿಂದ ಯಾವ ಉತ್ತರವೂ ಬರಲಿಲ್ಲ ಕಣ್ಣಲ್ಲಿ ನೀರು ಮತ್ತು ಬಿಕ್ಕಳಿಕೆ ಬಂದಿತು.

**ಚನ್ನಬಸವಣ್ಣ:** ಎಲ್ಲ ಅರ್ಥವಾಯಿತು. ಇದು ಚಿಂತಿಸುವ ಸಮಯವಲ್ಲ. ನಮ್ಮ ಜೊತೆ ಬಂದಿರುವ ಶರಣರನ್ನಾದರೂ ನಾವು ಸುರಕ್ಷಿತ ಸ್ಥಾನ ತಲುಪಿಸುವ ಕೆಲಸ ಮೊದಲು ಮಾಡಬೇಕು.

**ಮಾಚಣ್ಣ** : ಅಕ್ಕಾ ನೀವು ಸರಿ ಎಂದರೆ ಸಾಕು ಇಂದು ಸಾಯಂಕಾಲದೊಳಗಾಗಿ ಕಲ್ಯಾಣ ನಮ್ಮದಾಗುತ್ತದೆ ಮಹಾರಾಜ ಸೋಮೇಶ್ವರನ ಬಂಧನವಾಗುತ್ತದೆ. ಎಲ್ಲ ಯೋಧರು ಆದ ಅನ್ಯಾಯ ನೋಡಿ ಸಿಟ್ಟಿನಿಂದ ಕುದಿಯುತ್ತಿದ್ದಾರೆ. ಅಣ್ಣ ಹೇಳಿದ ಮಂತ್ರ "ಕೊಲಬೇಡ" ನಮ್ಮೆಲ್ಲರನ್ನು ಕೈಕಟ್ಟಿಹಾಕಿದೆ. ಆದರೆ ನಮ್ಮೆಲ್ಲ ಗೆಳೆಯರು ರಾಜಾಜ್ಞೆಗೆ ಕಟ್ಟುಬಿದ್ದು ಅಮಾಯಕರ ಕೊಲೆ ಮಾಡುವದನ್ನು ಪ್ರತಿಭಟಿಸದೇ ಅಸಾಯಕರಾಗಿ ನೋಡುತ್ತಿದ್ದಾರೆ. ನಿನ್ನೆ ರಾತ್ರಿ ಶರಣರನ್ನು ಆರಿಸಿ ಆರಿಸಿ ಮನೆಗೆ ನುಗ್ಗಿ ಪೂಜಾನಿರತರಾದ ಅವರನ್ನು ಕೊಲೆಗೈಯಲಾಯಿತು.

ಕಲ್ಯಾಣದ ಯಾವ ಭಾಗದಲ್ಲಿ ಯಾರಿಂದಲೂ ಪ್ರತಿರೋಧ ವ್ಯಕ್ತವಾಗಲಿಲ್ಲ. ಆದರೆ ಈ ಅನ್ಯಾಯ ಸಹಿಸದ ಕೆಲ ಯೋಧರು ಶರಣರನ್ನು ಕೊಲೆಗೈಯುತ್ತಿರುವ ತಮ್ಮ ಸಂಗಡಿಗರನ್ನು ಕೊಂದು ಪಲಾಯನ ಮಾಡಿದ್ದಾರೆ. ಹೀಗಾಗಿ ಅನೇಕಾನೇಕ ಕಲ್ಯಾಣ ಯೊಧರ ಕೊಲೆಯಾಗಿದೆ.

ಅಲ್ಲಿ ಮಡಿದ ಎಲ್ಲರನ್ನು ಒಂದೇ ಕಡೆ ಅಗ್ನಿ ಸಂಸ್ಕಾರ ಮಾಡಿದ್ದಾರೆ. ಮಹಾರಾಜ ಸೋಮೇಶ್ವರ ತನ್ನ ತಪ್ಪು ಮುಚ್ಚಿಕೊಂಡು ಆ ತಪ್ಪನ್ನು ಶರಣರ ಮೇಲೆ ಹಾಕುವ ಪ್ರಯತ್ನ ನಡೆಸಿದ್ದಾನೆ.

**ಅಕ್ಕನಾಗಮ್ಮ:** ಯಾವ ಪ್ರತಿರೋಧ ಒಡ್ಡದೇ ಅಣ್ಣನ ಮಾತು "ಕೊಲಬೇಡ" ಪಾಲಿಸಿ ಬಲಿದಾನವಾದ ಶರಣರ ಬಲಿದಾನ ವ್ಯರ್ಥವಾಗುವದಿಲ್ಲ. ಇಲ್ಲಿ ನಿಜವಾದ ಜಯವಾದದ್ದು ಶರಣ ತತ್ವಗಳಿಗೆ. ಈ ತತ್ವಗಳು ಮುಂದೆ ಜಗದ ದಾರಿದೀಪಗಳು. ಹುಟ್ಟಿದವ ಸಾಯಲೇಬೇಕು. ನಾವೆಲ್ಲ ಶರಣ ತತ್ವಗಳ ರಕ್ಷಣೆಯಲ್ಲಿ ಬಲಿಯಾಗೋಣ.

ಬದಲಾಗಿ ಆ ತತ್ವಗಳ ಬಲಿ ಕೊಟ್ಟು ರಾಜ್ಯ ಸಂಪಾದಿಸಿ ಸಾಧಿಸುವದಾದರೂ ಏನು? ನಮಗೂ ಮತ್ತು ಸೋಮೆಶ್ವರನಿಗೂ ವ್ಯತ್ಯಾಸವೇನು?. ಬರುವ ಜನಾಂಗ ಅವನನ್ನು ನೆನಪಿನಲ್ಲಿಡುವದಿಲ್ಲ ಆದರೆ ಶರಣ ತತ್ವಗಳಿಗಾಗಿ ಬಲಿದಾನ ಮಾಡಿದವರನ್ನೆಲ್ಲ ಆರಾಧಿಸುತ್ತಾರೆ ಮತ್ತು ತತ್ವ ಪಾಲನೆಯಲ್ಲಿ ತೊಡಗುತ್ತಾರೆ. ಈಗ ನಮಗಿರುವದು ಎರಡು ದಾರಿ ತತ್ವ ರಕ್ಷಣೆಯಲ್ಲಿ ಬಲಿಯಾಗುವದು ಅಥವಾ ತತ್ವಗಳನ್ನು ಬಲಿಕೊಟ್ಟು ಅಧಿಕಾರ ಪಡೆಯುವದು. ಎರಡು ದಾರಿಗಳಲ್ಲಿ ನಿಮಗೆ ಸರಿ ಎನಿಸಿದ್ದನ್ನು ಆರಿಸಿಕೊಳ್ಳಿ.

**ಮಾಚಣ್ಣ** : ಯೋಧರ ಮತ್ತು ಶರಣರ ಮಾರಣ ಹೋಮದ ಸುದ್ದಿ ಕೇಳಿ ನೊಂದ ಮನದ ಭಾವನೆ ಹೊರಹಾಕಿದೆ. ಅಕ್ಕ ಕ್ಷಮಿಸಿ. ನಿಮ್ಮ ಮಾತು ಕಣ್ತೆರೆಸಿತು. ನಿಮ್ಮಿಂದ ಒಂದು ಅನುಮತಿ ಬೇಕು.

ಈಗ ಪಲಾಯನ ಮಾಡಿ ಅಲ್ಲಲ್ಲಿ ತಲೆ ಮರೆಸಿಕೊಂಡ ಯೊಧರು ನಿಮ್ಮಿಂದ ಕಲ್ಯಾಣದಿಂದ ದೂರವಾಗಿದ್ದರೂ ನಿಮ್ಮೆಲ್ಲರ ಸೇವೆ ಮತ್ತು ಸುರಕ್ಷತೆ ಮಾಡಲು ಬಯಸುತ್ತಿದ್ದಾರೆ. ಅವರು ಶರಣರಂತೆ ಬಾಳಲು ಬಯಸುತ್ತಿದ್ದಾರೆ.

**ಅಕ್ಕನಾಗಮ್ಮ:** ಶರಣಧರ್ಮ ಪರಿಪಾಲನೆ ಮಾಡಲು ಯಾರ ಅನುಮತಿ ಬೇಕಿಲ್ಲ. ಅವರ ಸಹಾಯ ಸ್ವಾಗತಾರ್ಹ ಆದರೆ ಅವರು ಕೊಲ್ಲುವ ಮಾರ್ಗ ತ್ಯಜಿಸಬೇಕು.

**ಮಾಚಣ್ಣ:** ಅಕ್ಕಾ ತಮ್ಮ ಕರ್ತವ್ಯ ಪಾಲನೆಯಲ್ಲಿ ಒಮ್ಮೊಮ್ಮೆ ಕೊಲ್ಲುವದು ಅನಿವಾರ್ಯವಾಗುತ್ತದೆ. ಅವರ ಮನಪರಿವರ್ತನೆಯಾಗುವವರೆಗೆ ಅವರು ಬೇರೆ ಬೇರೆ ಕಾಯಕಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಕೆಲವರು ಮುಂದೆ ಸಾಗಿ ಪ್ರಸಾದದ ವ್ಯವಸ್ಥೆ ಮಾಡಿದರೆ, ಕೆಲವರು ಶರಣರು ಸಾಗುವ ಮಾರ್ಗ ಮಾಡುತ್ತಾರೆ. ಇನ್ನು ಕೆಲವರು ರಕ್ಷಣಾವ್ಯವಸ್ಥೆ ಮಾಡುತ್ತಾರೆ. ತೋರಕೆಗಾದರೂ ಅವರ ಹತ್ತಿರ ಅಸ್ತ್ರಗಳಿರುತ್ತವೆ ಅನಿವಾರ್ಯವಾಗುವವರೆಗೆ ಅವುಗಳನ್ನು ಉಪಯೋಗಿಸುವದಿಲ್ಲ. ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯುವದು ಅನಿವಾರ್ಯ. ಅವರಿಗೆಲ್ಲ ಶರಣ ಸಂಸ್ಕಾರ ಕೊಡಲಾಗುವದು.

**ಚನ್ನಬಸವಣ್ಣ:** ಬೆಳಗಾಗುವ ಸಮಯವಾಯಿತು ನಮ್ಮ ಪ್ರಯಾಣ ಪ್ರಾರಂಭಿಸೋಣ.

ಎಲ್ಲರೂ ಪ್ರಸಾದ ಸೇವಿಸಿ ಮುಂದಿನ ಪ್ರಯಾಣಕ್ಕೆ ಅನುವಾಗಿ ಹೊರಟರು. ಸ್ವಲ್ಪ ಹೊತ್ತಿನಲ್ಲಿ ಬಾನಲ್ಲಿ ಕೆಂಪು ಬಣ್ಣ ತುಂಬಿ ಕಲ್ಯಾಣದಲ್ಲೇನಾಯಿತು ಎನ್ನುವ ಚಿತ್ರವನ್ನು ಆಕಾಶದಲ್ಲಿ ಬರೆದು ಜಗಕೆಲ್ಲ ಸಾರಿತು.

ಈಗ ಬೆಳಕಿನಲ್ಲಿ ತಾವೆಷ್ಟು ಘನ ಕಾಡಿನಲ್ಲಿ ಸಾಗಿದ್ದೇವೆ ಎನ್ನುವದು ಅನುಭವಕ್ಕೆ ಬರಹತ್ತಿತ್ತು. ನಿನ್ನೆ ಚುಚ್ಚಿದ ಮುಳ್ಳುಗಳ ಗಾಯದ ನೋವು ಪ್ರತಿ ಹೆಜ್ಜೆ ಇಟ್ಟಾಗ ಅನುಭವಕ್ಕೆ ಬರುತ್ತಿತ್ತು. ಆದರೂ ನಿಧಾನವಾಗಿ ಹೆಜ್ಜೆಯಿಡುತ್ತ ಸಾಗಿದರು. ಬಿಸಿಲು ಬಲಿಯುವ ಮೊದಲು **ಕಸರ ಬಾಲಕುಂದ** ಕೆರೆಯ ದಂಡೆಗೆ ಬಂದು ತಲುಪಿದ್ದರು. ಅಲ್ಲಿಯೂ ಒಂದು ಪುರಾತನ ಮಹಾದೇವ ದೇವಾಲಯ. ಅದರ ವಿಶಾಲವಾದ ಪ್ರಾಂಗಣದಲ್ಲಿ ತಮ್ಮ ಸಾಮಾನುಗಳನ್ನು ಇರಿಸಿದರು.

ಕಾಡು ಪ್ರಾಣಿಗಳು ನೀರು ಕುಡಿಯಲು ಇಲ್ಲಿಗೆ ಬರುತ್ತವೆ ಜೋಕೆಯಾಗಿ ಕೆರೆಯಲ್ಲಿ ಈಜಾಡಿ ಅನ್ನುವ ಹಿರಿಯರ ಮಾತು ಅವರಿಗೆ ಕೇಳಿಸಿತು. ಕೆಲವರು ಕೆರೆಯಲ್ಲಿ ಈಜಾಡಿ ತಮ್ಮ ದೇಹದ ನೋವು ಮರೆತರು. ಸ್ನಾನಮಾಡಿ ಪೂಜೆ ಮಾಡಿಕೊಂಡು ಪ್ರಸಾದ ಸೇವಿಸಿ ಅಲ್ಲಿಯ ನೆರಳಲ್ಲಿ ಪವಡಿಸಿದರು.

**ಹುಸಿಯ ನುಡಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ, ವಿಷಯಂಗಳಾತಂಗೆ ತೃಣವು**

**ನೋಡಾ,ಬಯಸುವವನಲ್ಲ ಭಕ್ತ.**

**ದಯೆಯೆಂಬುದು ತನ್ನ ಕೈಯಲ್ಲಿ, ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು.**

**ಕೋಪವೆಂಥದೆಂದರಿಯ, ತಾಪತ್ರಯಂಗಳು ಮುಟ್ಟಲಮ್ಮವು, ವ್ಯಾಪ್ತಿಗಳಡಗಿದವು.**

**ಲಿಂಗವನೊಳಕೊಂಡ ಪರಿಣಾಮಿ.**

**ಆತನ ಪಥ ಲೋಕಕ್ಕೆ ಹೊಸತು, ಲೋಕದ ಪಥವಾತನಿಗೆ ಹೊಸತು.**

**ತನಗೊಮ್ಮೆಯು ಲಿಂಗಧ್ಯಾನ, ಲಿಂಗಕೊಮ್ಮೆಯು ತನ್ನ ಧ್ಯಾನ.**

**ಘನಘನಮಹಿಮೆಯ ಹೊಗಳಲೆನ್ನಳವಲ್ಲ. ಪನ್ನಗಧರ ಕೇಳಯ್ಯಾ,**

**ಚೆನ್ನ ಹಂಪೆಯ ವಿರುಪಯ್ಯಾ, ನಿಮ್ಮ ನಂಬಿದ ಸತ್ಯಶರಣ ಪರಿಣಾಮಿ.**

--- ಅಗ್ಘವಣಿ ಹಂಪಯ್ಯ

ಇದುವರೆಗೆ ಶರಣರ ವಿಷಯವಾಗಿ 448 ಲೇಖನಗಳನ್ನು ಬರೆಯುವಾಗ ಇರದಿದ್ದ ಭಾವನೆಗಳು ನನ್ನ ಮನದಲ್ಲಿಇಂದು ಮೂಡುತ್ತಿವೆ. ಮನ ವ್ಯಾಕುಲವಾಗಿ ಕಣ್ಣು ತುಂಬಿ ಬರುತ್ತಿವೆ. ಬರೆಯಲು ಶಬ್ದಗಳು ಸಿಗುತ್ತಿಲ್ಲ.

ಗಂಡ, ಬೀಗ ಮತ್ತು ಇದ್ದೊಬ್ಬ ಮುದ್ದಿನ ಮಗ ಮಾಡದಿರುವ ತಪ್ಪಿಗಾಗಿ ಕಣ್ಣು ಕೀಳಿ, ಆನೆ ಕಾಲಿಗೆ ಕಟ್ಟಿ ಎಳೆದೊಯ್ದು ಅಗಸಿಯಲ್ಲಿ ನೇಣುಹಾಕಲಾದ ಘಟನೆ ಮರೆತು ಸಮಾಧಾನವಾಗಿರು ಎಂದು ಹೇಳುವ ಮಾತುಗಳನ್ನು ಬರೆಯುವದು ನನ್ನಿಂದ ಸಾಧ್ಯವಿಲ್ಲ ಎನ್ನಿಸಿ ಒಂದೆರಡು ಕಣ್ಣೀರು ಹನಿ ಸುರಿಸಿದೆ. ನಿದ್ದೆ ಮಾಡಿ ಎದ್ದ ಮೇಲೆ ಅನಿವಾರ್ಯವಾಗಿ ಸಾರವಿಲ್ಲದ ಕೆಲವು ಸಾಲುಗಳನ್ನು ಬರೆದಿರುವೆ ಅಷ್ಟೇ ನನ್ನಿಂದ ಸಾಧ್ಯವಾದದ್ದು. ಕ್ಷಮೆ ಇರಲಿ. ಇನ್ನೆಂದೂ ಈ ಘಟನೆ ವಿವರಿಸುವ ಗೋಜಿಗೆ ಹೋಗುವದಿಲ್ಲ.

## ಮೂರನೆಯ ದಿನದ ಪ್ರಯಾಣ:

ಎಲ್ಲರೂ ವಿಶ್ರಾಂತಿ ಪಡೆಯುತ್ತ ನಿದ್ರೆಗೆ ಜಾರಿದರೆ ಆ ಮಂದಿರದ ಒಂದು ಕಡೆ ಅಕ್ಕನಾಗಮ್ಮ, ಗಂಗಾಂಬಿಕೆ, ಬೊಂತಾದೇವಿ, ಹರಳಯ್ಯನವರ ಮಡದಿ ಕಲ್ಯಾಣಮ್ಮ ಮೊದಲಾದ ಹಿರಿಯ ಶರಣೆಯರು ಕುಳಿತಿದ್ದರು. ಕಲ್ಯಾಣಮ್ಮನ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ಅಲ್ಲಿದ್ದರವರೆಲ್ಲ ದುಃಖತಪ್ತರಾಗಿದ್ದರು.

**ಅಕ್ಕನಾಗಮ್ಮ:** ಅಕ್ಕ ಕಲ್ಯಾಣಮ್ಮ ಗಂಡ ಹಾಗೂ ಮುದ್ದಿನ ಮಗನನ್ನು ಕಳೆದುಕೊಂಡ ನಿಮಗೆ ಸಮಾಧಾನ ಹೇಳಲು ನನ್ನ ಹತ್ತಿರ ಶಬ್ದಗಳಿಲ್ಲ.

**ಕಲ್ಯಾಣಮ್ಮ** : ಗಂಡ ಹಾಗೂ ಮಗನನ್ನು ಕಳೆದುಕೊಂಡ ದುಃಖಕ್ಕಿಂತ ಹೆಚ್ಚಾಗಿ ಇಂದು ನಡೆದ ಘಟನೆಗಳಲ್ಲಿ ಅವರ ಕಾರಣದಿಂದಾಗಿ ಅನೇಕ ಯೋಧರು ಹಾಗು ಶರಣರ ಬಲಿದಾನವಾದದ್ದುಕೇಳಿ ಅತೀ ಹೆಚ್ಚು ದುಃಖ ಆಗಿದೆ.

**ಗಂಗಾಂಬಿಕೆ** : ಆ ಎಲ್ಲ ಘಟನೆಗಳಿಗೆ ನಿಮ್ಮ ಯಜಮಾನರು ಮತ್ತು ಮಗ ಹೇಗೆ ಕಾರಣವಾಗುತ್ತಾರೆ. ಶರಣ ತತ್ವ ಅನುಷ್ಠಾನಕ್ಕಾಗಿ ಬಲಿದಾನವಾದವರು ಅವರು. ಜಗತ್ತಿಗೆ ಹೊಸ ಮಾರ್ಗ ತೋರಿದ ಮಹಾತ್ಮರವರು. ಶತ ಶತಮಾನಗಳ ನಂತರವೂ ಅವರ ಆಚರಣೆ ಅನುಕರಣೀಯ. ಸಮಾಜ ಒಗ್ಗಟ್ಟಾಗಿರಲು

ಇರುವದು ಇದೊಂದೇ ಮಾರ್ಗ. ಬರಿ ಮಾತಿನಲ್ಲಿ ವಚನಗಳಲ್ಲಿ ನಾವೆಲ್ಲ ಒಂದು ಎಂದರೆ ಸಾಕೇ? ಆಚರಣೆಗಳಲ್ಲಿ ಅದು ತೋರಬೇಡವೇ?.

**ಕಲ್ಯಾಣಮ್ಮ** : ನನ್ನ ಮಗನ ಪ್ರೀತಿಯ ಸಾಕಾರ ಮಾಡಲು ಅಣ್ಣ ಬಸವಣ್ಣನವರ ಕನಸು ನುಚ್ಚುನೂರಾಯಿತು. ಅದಕ್ಕಾಗಿಯೇ ಈ ದುಃಖ.

**ಅಕ್ಕನಾಗಮ್ಮ:** ಬಸವನ ಕನಸು ನನಸಾಗುವದರತ್ತ ನಡೆದ ಪ್ರಥಮ ಹೆಜ್ಜೆ ಇದು. ಶರಣರು ಪ್ರತಿಪಾದಿಸಿದ ತತ್ವಗಳನ್ನು ಒರೆಗೆ ಹಚ್ಚುವ ಸಕಾಲ ಇದು. ಈಗಿಲ್ಲದಿದ್ದರೂ ಇನ್ನೊಂದು ದಿನ ಈ ತರಹದ ಘಟನೆಗಳು ನಡೆಯುತ್ತಿದ್ದವು.

**ಗಂಗಾಂಬಿಕೆ** : ಬಂಗಾರವನ್ನು ಸುಂದರ ಆಭರಣಗಳನ್ನಾಗಿ ಮಾಡಬೇಕಾದರೆ ಅದನ್ನು ಬೆಂಕಿಯಲ್ಲಿ ಹಾಕಿ ಪುಟಕ್ಕಿಕ್ಕುವದು ಅನಿವಾರ್ಯ. ಬಂಗಾರ ಬೆಂಕಿಯಲ್ಲಿ ಹಾಕಿದಾಗ ಅದು ನೋವಿನಿಂದ ಕರಗುವದೆಂದು ಅಭರಣ ಮಾಡುವದನ್ನು ನಿಲ್ಲಿಸಲಾಗುತ್ತದೆಯೇ?. ತತ್ವಗಳನ್ನು ವಚನಗಳಲ್ಲಿ ಪ್ರತಿಪಾದಿಸಿದರೆ ಸಾಕೇ? ಅವು ಕಾಲಕ್ರಮೇಣ ಮರೆತುಹೋಗುತ್ತವೆ.
ಅದಕ್ಕಾಗಿಯೇ ಅವುಗಳನ್ನು ಒರೆಗೆ ಹಚ್ಚಲೇಬೇಕು. ಆಗ ಸಂಗರ್ಷ ಏರ್ಪಡುವದು ಸಹಜ. ಆಗಿನ ನಮ್ಮ ನಡೆ ಮುಂದಿನ ಜನಾಂಗಕ್ಕೆ ದಾರಿದೀಪವಾಗುತ್ತದೆ. ಅವರು ಹೇಳಿದ ಈ ವಚನ ನಮ್ಮ ನಿಮ್ಮ ದುಃಖ ಕಡಿಮೆಮಾಡುವ ಸಾಧನ.

> **ನಾಳೆ ಬಪ್ಪುದು ನಮಗಿಂದೆ ಬರಲಿ ಇಂದು ಬಪ್ಪುದು ನಮಗೀಗಲೆ ಬರಲಿ**
>
> **ಇದಕಾರಂಜುವರು ಇದಕಾರಳುಕುವರು**
>
> **`ಜಾತಸ್ಯ ಮರಣಂ ಧ್ರುವಂ' ಎಂದುದಾಗಿ ನಮ್ಮ ಕೂಡಲಸಂಗಮದೇವರು ಬರೆದ ಬರೆಹವ**
>
> **ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ.**
>
> --— ಅಣ್ಣ ಬಸವಣ್ಣ

**ಅಕ್ಕನಾಗಮ್ಮ:** ಈಗ ಪರೀಕ್ಷೆ ಪ್ರಾರಂಭವಾಗಿದೆ. ನಾವೆಲ್ಲರೂ ಈ ಪರೀಕ್ಷೆಯಲ್ಲಿ ಪಾಸಾದರೆ ಈ ತತ್ವಗಳು ಜಗತ್ತಿನಲ್ಲಿ ಶಾಶ್ವತವಾಗಿ ನೆಲೆಯೂರಿ ಶರಣರು ಕಂಡ ಕನಸು ನನಸಾಗುತ್ತದೆ. ನಾವೆಲ್ಲ ನುಡಿದಂತೆ ನಡೆದು ತೋರಿಸಬೇಕಾಗಿದೆ.

> ನಡೆನುಡಿ ಸಿದ್ಧಾಂತವಾದಲ್ಲಿ, ಕುಲ ಹೊಲೆ ಸೂತಕವಿಲ್ಲ. ನುಡಿ ಲೇಸು, ನಡೆಯಧಮವಾದಲ್ಲಿ,
>
> ಅದು ಬಿಡುಗಡೆಯಿಲ್ಲದ ಹೊಲೆ. ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ,
>
> ಕೆಟ್ಟು ನಡೆವುತ್ತ, ಮತ್ತೆ ಕುಲಜರೆಂಬ ಒಡಲವರುಂಟೆ ?
>
> ಆಚಾರವೆ ಕುಲ, ಅನಾಚಾರವೆ ಹೊಲೆ.
>
> ಇಂತೀ ಉಭಯವ ತಿಳಿದರಿಯಬೇಕು.
>
> ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
>
> ಅರಿ ನಿಜಾ[ತ್ಮಾ] ರಾಮ ರಾಮನಾ./1157--- ಮಾದಾರ ಚ್ಚನ್ನಯ್ಯ

ನೀವು ಚಿಂತೆ ಬಿಟ್ಟರೆ ನಮಗೆಲ್ಲ ಸಮಾಧಾನ.

**ಕಲ್ಯಾಣಮ್ಮ** : ಆಗಲಿ ನಿಮ್ಮ ಅಭಿಯಾನದಲ್ಲಿ ನನ್ನದು ಒಂದು ಪಾಲಿದೆ ಎನ್ನುವದೇ ನನಗೆ ಸಿಕ್ಕ ಭಾಗ್ಯ. ಇದರಲ್ಲಿ ನನ್ನ ಬಲಿದಾನವಾದರೆ ನನ್ನ ಬದುಕು ಸಾರ್ಥಕ.

ಚನ್ನಬಸವಣ್ಣವರು ಅಲ್ಲಿಗೆ ಬರದಿದ್ದರೆ ಅವರ ಮಾತು ಇನ್ನು ಮುಂದುವರೆಯುತ್ತಿತ್ತೆನೋ ಗೊತ್ತಿಲ್ಲ.

**ಚನ್ನಬಸವಣ್ಣ:** ಈ ಭಾಗದಲ್ಲಿ ಕಾವಲಿದ್ದ ಯೊಧರೆಲ್ಲ ಮರಳಿ ಕಲ್ಯಾಣಕ್ಕೆ ಹೋಗುತ್ತಿದ್ದಾರೆ. ಇದು ನಾವು ಪ್ರವಾಸ ಮುಂದುವರಿಸಲು ಸಕಾಲ. ಹೊತ್ತು ಮುಳಗುವ ಮುನ್ನವೆ ನಾವು ಪ್ರವಾಸ ಆರಂಭಿಸೋಣ. ಎಲ್ಲರೂ ತಯಾರಾಗಿ. ಮಂದಿರದಲ್ಲಿ ಪೂಜೆ ಆಯಿತು. ಶರಣರೆಲ್ಲ ಪ್ರಸಾದ ಸೇವಿಸಿ ತಮ್ಮ ಪ್ರವಾಸ ಮುಂದುವರೆಸಿದರು.

ಅವರು **ಬದುರ** 12 ಜ್ಯೋತಿರ್ಲಿಂಗ ಮಂದಿರ ತಲುಪಿದಾಗ ಕತ್ತಲೆ ಆವರಿಸಿತ್ತು ಅಲ್ಲಿ ವಿಶ್ರಾಂತಿ ಪಡೆದ ನಂತರ ಅವರು ತಲುಪಿದ್ದು **ಹಾಸೊರಿ** ಮಹಾದೇವ ಮಂದಿರ ಆಗ ಮದ್ಯರಾತ್ರಿ ದಾಟಿತ್ತು. ಎಲ್ಲರಿಗೂ ವಿಶ್ರಾಂತಿಯ ಅವಶ್ಯಕತೆ ಇತ್ತು. ಅಲ್ಲಿ ಸ್ವಲ್ಪ ವಿರಮಿಸಿ ಮುಂದೆ ಸಾಗಿದರು.

ಬೆಳ್ಳಿಚಿಕ್ಕಿ ಮೂಡುವ ಮೊದಲೇ ಅಲ್ಲಿಂದ ಹೊರಟ ಅವರು **ಭೂತಮುಗಳಿ** ಮಹಾದೇವ ಮಂದಿರ ತಲುಪುವಷ್ತರಲ್ಲಿ ಬೆಳ್ಳಿಚಿಕ್ಕಿ ಮೂಡಿಯಾಗಿತ್ತು. ಅಲ್ಲಿ ಸ್ವಲ್ಪ ವಿಶ್ರಾಂತಿ ಪದೆದು ಲಿಂಬಾಲ ಮಹಾದೇವ ಮಂದಿರ ತಲುಪುವಷ್ಟರಲ್ಲಿ ಬೆಳಗಾಗಿ ಎರದು ಜಾವ ಕಳೆದಿತ್ತು.

**ಲಿಂಬಾಲಾ** ಮಹಾದೇವ ಮಂದಿರದ ಸನಿಹದಲ್ಲಿಯ ಹಳ್ಳದಲ್ಲಿಯ ತಂಪಾದ ನೀರಿನಲ್ಲಿ ಸ್ನಾನಮಾಡಿ ತಮ್ಮ ಪೂಜೆಯಲ್ಲಿ ತೊಡಗಿದರು. ಆ ಮಂದಿರದ ಪೂಜೆಯ ನಂತರ ಪ್ರಸಾದ ಸೇವಿಸಿ ವಿಶ್ರಾಂತಿಗೆ ಜಾರಿದರು.

ಕಲ್ಯಾಣ ಕ್ರಾಂತಿಯ ನಂತರದ ದಿನಗಳಲ್ಲಿ ಕಲ್ಯಾಣದ ಪರಸ್ಥಿತಿ ಹೇಗಿತ್ತು? ಎನ್ನುವದನ್ನು ಸಾಹಿತಿಗಳು, ಕವಿಗಳು ತಮ್ಮ ಲೇಖನಗಳಲ್ಲಿ ಮತ್ತು ಕವಿತೆಗಳಲ್ಲಿ ಸವಿವರವಾಗಿ ವಿವರಿಸಿದ್ದಾರೆ.

ಆದರೆ ಅದನ್ನು ವಿವರಿಸುವ ನನಗೆ ಮತ್ತು ಅರ್ಥಮಾಡಿಕೊಳ್ಳ ಬಯಸುವ ನಿಮಗೆ ಆ ತೊಂದರೆ ಇಲ್ಲ.

ಒಂದೇ ಒಂದು ವಾಕ್ಯದಲ್ಲಿ ವಿವರಿಸಬಹುದು.

“ಕೊರನಾ ಮಹಾಮಾರಿ ಪ್ರಾರಂಭವಾದ ನಂತರ ನಮ್ಮ ಮಹಾನಗರಗಳಿಂದ ಕಾಯಕಯೋಗಿಗಳು ತಮ್ಮ ತಮ್ಮ ಊರಿಗೆ ತೆರಳುವಾಗ ಅನುಭವಿಸಿದ ಕಷ್ಟದ ದಿನಗಳ ಪರಸ್ಥಿತಿ ಕಲ್ಯಾಣ ಕ್ರಾಂತಿಯ ನಂತರದ ದಿನಗಳಲ್ಲಿ ಕಲ್ಯಾಣದ ಕಾಯಕಯೋಗಿಗಳು ಅನುಭವಿಸಿದರು”.

ಇಷ್ಟು ಸಾಕಲ್ಲ ನನ್ನ ಹಾಗೇ ದೂರದರ್ಶನದ ಮುಂದೆ ಕುಳಿತು ನೀವು ನೋಡಿದ ದೃಶ್ಯಗಳೆಲ್ಲ ಕಣ್ಣ ಮುಂದೆ ಬರುತ್ತವೆ ಅಲ್ಲಾ. ಪೋಲಿಸರ ಕಣ್ಣು ತಪ್ಪಿಸಿ ಬೇರೆಬೇರೆ ಮಾರ್ಗಗಳ ಮೂಲಕ ಹೋಗುವ ಕಾಯಕಯೋಗಿಗಳು, ಅವರಿಗೆ ತಮ್ಮಿಂದಾದ ಸಹಾಯ ಮಾಡುವ ಉದಾರ ಮನದ ನಾಗರಿಕರು

ಕಣ್ಣ ಮುಂದೆ ಬರುತ್ತಾರೆ. ಅನೇಕ ಬಲಿದಾನಗಳ ನಡುವೆ ಲಕ್ಷಾಂತರ ಕಾಯಕಯೋಗಿಗಳು ದೂರ ದೂರದ ತಮ್ಮ ಊರು ಸೇರಿ ನಿಟ್ಟುಸಿರು ಬಿಟ್ಟ ದೃಶ್ಯಗಳನ್ನು ಮರೆಯಲು ಸಾಧ್ಯವೇ?




ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ.
ನುಡಿಯಲೂ ಬಾರದು, ನಡೆಯಲೂ ಬಾರದು,
ಲಿಂಗದೇವನೆ ದಿಬ್ಯವೊ ಅಯ್ಯಾ.
ಬಡವನ ಕೋಪವು ಅವುಡಿಗೆ ಮೃತ್ಯುವಾದಂತೆ
ಕಡೆಗೆ ದಾಂಟದು ಕಾಣಾ, ಕೂಡಲಸಂಗಮದೇವಾ. / 846--- ಅಣ್ಣ ಬಸವಣ್ಣ

## ನಾಲ್ಕನೇಯ ದಿನದ ಪ್ರಯಾಣ:

ಇದುವರೆಗೆ ತಮ್ಮೊಡನೆ ಎಷ್ಟು ಜನ ಬಂದಿದ್ದಾರೆ ಎನ್ನುವ ಕಲ್ಪನೆ ಯಾರಿಗೂ ಇರಲಿಲ್ಲ.

**ಅಕ್ಕನಾಗಮ್ಮ:** ಮಾಚಣ್ಣ ಇಲ್ಲಿರುವ ಶರಣಸಾಗರ ನೋಡಿದರೆ ಇಡೀ ಕಲ್ಯಾಣವೇ ಇಲ್ಲಿದೆ ಎನಿಸುತ್ತಿದೆ.

**ಮಾಚಣ್ಣ** : ಕಲ್ಯಾಣದ ಎಲ್ಲ ಕಾಯಕಯೋಗಿಗಳು ಊರು ತೊರೆದು ಆ ನಗರ ಬಿಕೊ ಎನ್ನುವದು ನಿಜ. ಬಹಳಷ್ಟು ಜನ ಸಮೀಪದ ತಮ್ಮ ತಮ್ಮ ಊರಿಗೆ ಅಥವಾ ಬೀಗರ, ಗೆಳೆಯರ ಊರು ತಲುಪಿಯಾಗಿದೆ. ಭೀಮಾ ನದಿ ದಾಟಿ ಸಾಗಬೇಕಾದವರು ಬೇರೆ ಬೇರೆ ಮಾರ್ಗಗಳಲ್ಲಿ ಹೊರಟು ಭೀಮಾ ನದಿ ದಡದಲ್ಲಿ ನದಿ ದಾಟಲು ದಾರಿ ಕಾಯುತ್ತಿದ್ದಾರೆ. ಈಗ ನಿಮ್ಮ ಜೊತೆ ಉಳವಿಗೆ ಬರಬೇಕು ತಮ್ಮ ಜೀವನವನ್ನು ವಚನ ರಕ್ಷಣೆಗಾಗಿ ಮುಡುಪಾಗಿಟ್ಟ ಸುಮಾರು ಹನ್ನೊಂದು ಸಾವಿರ ಶರಣರು ಇಲ್ಲಿರಬಹುದು. ಈಗಾಗಲೇ ಉತ್ತರ, ಪೂರ್ವ ಪಶ್ಚಿಮ ದಿಕ್ಕಿಗೆ ಲಕ್ಷಾಂತರ ಶರಣರು ವಚನದ ಕಟ್ಟುಗಳೊಂದಿಗೆ ಹೋಗಿದ್ದಾರೆ ಆ ಪ್ರದೇಶದಲ್ಲಿ ಊರು ತಲುಪಿ ಜನರಲ್ಲಿ ಬೆರೆತಿದ್ದಾರೆ.

**ಚನ್ನಬಸವಣ್ಣ:** ಆ ಎಲ್ಲ ಶರಣರಿಗೆ ಅವರ ಪ್ರವಾಸಕ್ಕೆ ಸಹಾಯ ಹರಿದು ಬರುತ್ತಿದೆ. ಯೋಧರಲ್ಲಿ ಬಹಳ ಜನ ಅವರ ಬಗ್ಗೆ ಸಹಾನುಭೂತಿ ಹೊಂದಿದ್ದು ಅವರನ್ನು ಕಂಡೂ ಕಾಣದಂತಿದ್ದು ಸಹಾಯಮಾಡುತ್ತಿದ್ದಾರೆ. ದಾರಿಯಲ್ಲಿ ಬರುವ ಹಳ್ಳಿಗರು ಅವರ ಊಟದ ಮತ್ತು ತಂಗುವ ವ್ಯವಸ್ಥೆ ಮಾಡುತ್ತಿದ್ದಾರೆ. ಎಲ್ಲ ಕಡೆ ಕಾಯಕಯೋಗಿಗಳ ಅವಶ್ಯಕತೆ ಇದೆ. ಹಾಗಾಗಿ ಅನೇಕರು ಅಲ್ಲಲ್ಲಿಯೇ ನೆಲೆಯಾಗಿ ನಿಲ್ಲುತ್ತಿದ್ದಾರೆ. ಆ ಕಾಯಕಯೋಗಿಗಳಿಂದ ಕಲ್ಯಾಣದಲ್ಲಿ ನಡೆದ ಶರಣರ ಮಾರಣಹೋಮ ಪ್ರತಿ ನಾಗರಿಕನನ್ನು ಕೆರಳಿಸುತ್ತಿದೆ.

**ಮಾಚಣ್ಣ** : ಮಹಾರಾಜ ಸೋಮೇಶ್ವರನಿಗೆ ಶರಣರ ಸಮೂಹ ನಾಶ ಮಾಡುವ ಮನಸ್ಸಿದೆ. ಆದರೆ ಈ ಎಲ್ಲ ಕಾಯಕಯೋಗಿಗಳಲ್ಲಿ ಶರಣರಾರು ಸಾಮಾನ್ಯ ನಾಗರಿಕರಾರು ಎನ್ನುವದನ್ನು ಹೇಗೆ ಕಂಡುಹಿಡಿಯಬೇಕು ಎನ್ನುವದು ಗೊತ್ತಾಗುತ್ತಿಲ್ಲ. ಯೋಧರಲ್ಲಿ ಶರಣರ ಬಗ್ಗೆ ಒಲವಿರುವವರು ಯಾರು? ಮಂತ್ರಿಗಳಲ್ಲಿ ತನಗೆ ನಿಷ್ಟರಾಗಿದ್ದವರಾರು? ಎನ್ನುವದು ತಿಳಿಯದೇ ಮಹಾರಾಜ ಗೊಂದಲದಲ್ಲಿದ್ದಾನೆ. ಅಧಿಕಾರದ ಆಶೆಯಿರುವ ತನ್ನ ಸಂಬಂಧಿಗಳ ಬಗ್ಗೆಯೇ ಅವನಿಕೆ ಅನುಮಾನ. ಶರಣರ ಬೆಂಬಲವಿರುವ ಯಾರಾದರೂ ಸರಿ ತನಗೆ ಎದಿರು ಬಿದ್ದರೆ ತನಗೆ ಸೋಲು ಶತಸಿದ್ದ ಎನ್ನುವದು ಅವನಿಗೆ ಗೊತ್ತಿದೆ.

**ಚನ್ನಬಸವಣ್ಣ:** ಮಾಚಣ್ಣ ಮೊದಲಾದವರ ಮುಂದಾಲೋಚನೆಯಿಂದ ಎಲ್ಲ ಕಡೆ ಅಹಾರ ದಾಸ್ತಾನಿದೆ. ಯಾರು ಯಾವ ಕೆಲಸ ಮಾಡಬೇಕು ಎನ್ನುವದು ಪೂರ್ವನಿರ್ಧಾರಿತವಾಗಿವೆ. ರಾಜ್ಯದ ಎಲ್ಲ ಮಂದಿರಗಳಲ್ಲಿ ದಾಸೋಹ ನಡೆಯುತ್ತಿದೆ. ಪ್ರತಿದಿನ ಸಾವಿರಾರು ಜನ ಅಲ್ಲಿ ಪ್ರಸಾದ ಸೇವಿಸಿ ಮುಂದೆ ಹೋಗುತ್ತಿದ್ದಾರೆ. ಊರಲ್ಲಿಯ ಧನವಂತರು ಬುತ್ತಿ ತಯಾರಿಮಾಡಿ ಪ್ರವಾಸಿಗರಿಗೆ ಹಂಚುತ್ತಿದ್ದಾರೆ. ಮನೆಮನೆಗೆ ಶರಣ ಸಂದೇಶ ಮತ್ತು ವಚನ ಕಟ್ಟುಗಳು ಸೇರುತ್ತಿವೆ.

**ಮಾಚಣ್ಣ** : ಇಂದು ತನ್ನ ಪಟ್ಟಾಭಿಷೇಕ ಕಾರ್ಯಕ್ರಮ ಅದ್ದೂರಿಯಾಗಿ ಏರ್ಪಡಿಸಿಕೊಂಡಿದ್ದಾನೆ. ಬೇರೆ ಬೇರೆ ರಾಜ್ಯದ ಅಧಿಕಾರಿಗಳನ್ನು, ಎಲ್ಲ ಕಡೆ ತನ್ನ ಬಂಧುಗಳನ್ನು ಕರೆಸಿಕೊಂಡಿದ್ದಾನೆ. ಅವನಿಗೆ ಊತ್ಸಾಹದಿಂದ ಜೈಕಾರ ಮಾಡುವ ಜನರೇ ಅಲ್ಲಿಲ್ಲ. ಅದಕ್ಕಾಗಿ ಸುತ್ತಮುತ್ತಲಿನ ತನ್ನ ಎಲ್ಲ ಯೋಧರನ್ನು ಮರಳಿ

ಕಲ್ಯಾಣಕ್ಕೆ ಕರೆಸಿಕೊಂಡಿದ್ದಾನೆ. ಅವರೆಲ್ಲ ಸಾಮಾನ್ಯ ಜನರ ವೇಷ ಭೂಷಣಗಳಲ್ಲಿ ಭಾಗವಹಿಸಿ ಅವನ ಮರ್ಯಾದೆ ಕಾಯಲಿದ್ದಾರೆ. ಅಂತೂ ಸೋಮೇಶ್ವರ ತನ್ನ ನಾಟಕ ಮುಂದುವರೆಸಿದ್ದಾನೆ.

**ಚನ್ನಬಸವಣ್ಣ:** ಸಿಂಹಾಸನ, ಪಟ್ಟದ ಕತ್ತಿ, ಪಟ್ಟದ ಆನೆ, ಕುದುರೆ, ಮಂತ್ರಿಗಳು ಮತ್ತು ಯೊಧರಿದ್ದರೆ ಮಹಾರಾಜನಾಗುತ್ತನೆಯೇ? ಅವನಾರನ್ನು ಆಳಬೇಕು? ಅವನ ಆಡಳಿತ ನಡೆಸುವದು ಯಾರ ಮೆಲೆ?

ಈ ಪ್ರುಶ್ನೆಗೆ ಉತ್ತರ ಸಿಗದೇ ಸೋಮೇಶ್ವರ ಗೊಂದಲಕ್ಕೊಳಗಾಗಿದ್ದಾನೆ. ನಿಜವಾಗಿ ಸೋತವನು ತಾನು ಎನ್ನುವ ಅರಿವಾಗಿದೆ.

**ಮಾಚಣ್ಣ** : ಇನ್ನೆರಡು ದಿನವಾದ ಮೇಲೆ ಬಲವಂತವಾಗಿ ಕಾಯಕಯೋಗಿಗಳನ್ನು ಕಲ್ಯಾಣಕ್ಕೆ ಕರೆತರಲು ಯೋಧರನ್ನು ಕಳಿಸುತ್ತಾನೆ. ಶರಣ ಸಿದ್ಧಾಂತಗಳಿಗೆ ಮಾರುಹೋಗಿ ಲಕ್ಷಾಂತರ ಕಾಯಕಯೋಗಿಗಳು ತಮ್ಮಿಂದ ತಾವಾಗಿ ಕಲ್ಯಾಣಕ್ಕೆ ಬಂದಿದ್ದರು ಅಂದು, ಬಿಚ್ಚುಗತ್ತಿಹಿಡಿದು ಕಾಯಕಯೋಗಿಗಳನ್ನು ಕಲ್ಯಾಣಕ್ಕೆ ಕರೆತರಲು ಯೋಧರನ್ನು ಕಳಿಸಲಾಗುತ್ತಿದೆ ಇಂದು.

**ಚನ್ನಬಸವಣ್ಣ:** ಜನಪ್ರೀಯತೆ ಕಳೆದುಕೊಂಡ ರಾಜಮನೆತನ ಬಹಳದಿನ ಅಧಿಕಾರದಲ್ಲಿ ಇರುವದಿಲ್ಲ ಎನ್ನುವ ಸತ್ಯ ಅವನಿಗೆ ಮತ್ತು ಸಂಪ್ರದಾಯವಾದಿಗಳಿಗೆ ಗೊತ್ತಿದೆ.

**ಗಂಗಾಂಬಿಕೆ** : ಕೆಲವು ಗಿಡಗಳ ಕೊಂಬೆಗಳನ್ನು ಕತ್ತರಿಸಿದ ಮೇಲೆ ಅವು ಹುಲುಸಾಗಿ ಅಂದವಾಗಿ ಬೆಳೆದು ಸುಂದರವಾದ ಹೂ ಬಿಡುತ್ತವೆ. ಸೋಮೇಶ್ವರ ಮಾಡಿದ್ದೂ ಇದೇ ಉಪಕಾರ. ವಚನ ಸಂಸ್ಕೃತಿ ಇನ್ನು ಮುಂದೆ ಬೆಳೆದು ವಿಶಾಲವಾಗಿ ಬೆಳೆದು ಜನಮನದಲ್ಲಿ ನೆನೆಸಿ ಅವರ ಕನಸು ನನಸಾಗುತ್ತದೆ. ಅದನ್ನ ಕಂಡ ಅವರು ಹೆಳಿದ್ದು

> **ಹೊಯಿದವರೆನ್ನ ಹೊರೆದವರೆಂಬೆ, ಬಯಿದವರೆನ್ನ ಬಂಧುಗಳೆಂಬೆ,**
>
> **ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಆಳಿಗೊಂಡವರೆನ್ನ ಆಳ್ದವರೆಂಬೆ,**
>
> **ಜರಿದವರೆನ್ನ ಜನ್ಮಬಂಧುಗಳೆಂಬೆ,**
>
> **ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ ಕೂಡಲಸಂಗಮದೇವಾ.** / 1391
>
> --- ಅಣ್ಣ ಬಸವಣ್ಣ.

**ಅಕ್ಕನಾಗಮ್ಮ:** ಕೆಲವು ಗಿಡಗಳು ದೊಡ್ಡದಾಗಿ ಬೆಳೆದು ಕಾಯಿ ಬಿಡುತ್ತವೆ. ಕಾಯಿ ಬಲಿತು ರುಚಿಕರವಾದ ಹಣ್ಣಾಗುತ್ತವೆ. ಆ ಹಣ್ಣು ತಿನ್ನಲು ದೂರದೂರದಿಂದ ಹಕ್ಕಿಗಳು ಬಂದು ಹಣ್ಣು ತಿಂದು ಖುಷಿಪಟ್ಟು ಕೆಲವು ಬೀಜಗಳೊಂದಿಗೆ ಹಾರಿಹೋಗುತ್ತವೆ. ಹಾರುವಾಗ ಅಲ್ಲಲ್ಲಿ ಬಿದ್ದ ಬೀಜಗಳು ಸರಿಯಾದ ಪರಿಸರ ಸಿಕ್ಕರೆ ಹೊಸ ಮರವಾಗಿ ಬೆಳೆಯುತ್ತವೆ. ಇನ್ನು ಕೆಲವು ಹಣ್ಣುಗಳು ಬಲಿತು ಒಣಗಿ ಬಿಸಿಲಿನ ತಾಪಕ್ಕೆ ಸಿಡಿಯುತ್ತವೆ ಆಗ ಅಲ್ಲಿಂದ ಸಿಡಿದ ಬೀಜಗಳು ಸರಿಯಾದ

ಪರಿಸರ ಸಿಕ್ಕರೆ ಹೊಸ ಮರಗಳಾಗಿ ಬೆಳೆಯುತ್ತವೆ. ಬೆಳೆಯಲು ಮತ್ತು ಪ್ರಸಾರವಾಗಲು ಇರುವ ಪ್ರಕೃತಿ ನಿಯಮ ಇದು. ಈಗ ನಡೆದ ಘಟನೆಗಳು ಮುಂದೆ ಶರಣ ಸಂಸ್ಕೃತಿ ವಿಸ್ತಾರವಾಗಿ ಬೆಳೆಯಲು ಸಹಕಾರಿ.

**ಚನ್ನಬಸವಣ್ಣ:** ನಾವಿನ್ನು ಸ್ನಾನ ಪೂಜೆ ಮಾಡಿ ಮುಂದಿನ ಪ್ರವಾಸಕ್ಕೆ ಅಣಿಯಾಗೋಣ.

**ಲಿಂಬಾಲಾ**ದಿಂದ **ಜಾಯವಾಡಿ** ಕೇವಲ 8 ಕಿ ಮೀ ಆದರೂ ತುಂಬಾ ದಟ್ಟವಾದ ಕಾಡು ಅಲ್ಲದೇ ಕಾಡುಪ್ರಾಣಿಗಳಿರುವ ಕಾಡು. ಕಾರಣ ಯುವಕರು ನೇರವಾದ ದಾರಿಯಲ್ಲಿ ಸಾಗಿದರೆ ಉಳಿದವರು ಸಿಂಧಕೇಢ ಮಹಾದೇವ ಮಂದಿರದಲ್ಲಿ ವಿಶ್ರಾಂತಿ ಪಡೆದು ಜಾಯವಾಡಿ ಕೆರೆಗೆ ಸಾಯಂಕಾಲದ ಹೊತ್ತಿಗೆ ತಲುಪಿದರು. ಅಲ್ಲಿಯ ಕೆರೆಯಲ್ಲಿ ಸ್ನಾನಮಾಡಿ ವಿಶ್ರಾಂತಿ ಪಡೆದು ರಾತ್ರಿ ನಿಲಂಗಾ ಮಹಾದೇವ ಮಂದಿರದಲ್ಲಿ ವಸತಿ ಮಾಡಿದರು.

ದೂರದಿಂದಲೇ ಹಳ್ಳಿಗರ ವೇಷದಲ್ಲಿದ್ದ ಯೋಧರು ಕಾಡುಪ್ರಾಣಿಗಳಿಂದ ರಕ್ಷಣೆ ಮಾಡುತ್ತಿದ್ದರು.

ಶರಣರು ನಿರಾಳರಾಗಿ ಸ್ನಾನ ಮಾಡಿ ಪೂಜೆಮಾಡಲು ತಯಾರಾಗಲು ತೆರಳಿದರು.

**ಐದನೇಯ ದಿನದ ಪ್ರಯಾಣ:**

ಸತತವಾಗಿ ನಾಲ್ಕು ದಿನ ನಡೆದು ದಣಿದ ಶರಣರು ಪ್ರಸಾದ ಸೇವಿಸಿ ತಂಗಾಳಿಯಲ್ಲಿ ನಿದ್ರಿಸಿದರು. ಬೆಳ್ಳಿಚಿಕ್ಕಿ ಮೂಡುವ ಸಮಯದಲ್ಲಿ ದೂರದಿಂದ ಅನೇಕ ಕುದುರೆಗಳು ಬರುವ ಸಪ್ಪಳ ಕೇಳಿಸತೊಡಗಿತು. ಆ ಸಪ್ಪಳಕ್ಕೆ ಎಲ್ಲರಿಗೂ ಎಚ್ಚರವಾಗಿ ಎದ್ದು ಕುಳಿತರು. ಅವರಲ್ಲಿ ಯಾವ ಗೊಂದಲವೂ ಇರಲಿಲ್ಲ. ಆದದ್ದಾಗಲಿ ಎನ್ನುವ ಮನಸ್ಥಿತಿ ಅವರಲ್ಲಿತ್ತು. ಯಾರು ಬಂದಿರಬಹುದು ಎನ್ನುವ ಕುತೂಹಲ ಎಲ್ಲರ ಮನದಲ್ಲಿತ್ತು. ದೂರದಲ್ಲಿ ಕುದುರೆಗಳು ನಿಂತ ಶಬ್ದ ಕೇಳಿಸಿತು. ಆಗ ಅಲ್ಲಿಗೆ ಬಂದ ಇಬ್ಬರು ಗುಡಿಯ ಬಳಿ ಬಂದು ಅಲ್ಲಿದ್ದ ಮಾಚಣ್ಣನವರಿಗೆ ಶರಣು ಶರಣೆಂದರು. ಶರಣು ಬನ್ನಿ ಎಂದು ಅವರನ್ನು ಅಕ್ಕನಾಗಮ್ಮನವರಿದ್ದಲ್ಲಿಗೆ ಕರೆದುಕೊಂಡು ಹೋದರು.

ಉಳಿದ ಶರಣರು ನಿರಾಳರಾಗಿ ಸ್ನಾನ ಮಾಡಿ ಪೂಜೆಮಾಡಲು ತಯಾರಾಗಲು ತೆರಳಿದರು.

ಅಕ್ಕನಾಗಮ್ಮ: ಬನ್ನಿ ವೀರಭದ್ರಪ್ಪ ನೀವು ಬರುವ ದಾರಿಯನ್ನೇ ಕಾಯುತ್ತಿದ್ದೆವು. ಕಲ್ಯಾಣದ ಸಮಾಚಾರವೇನು?

**ವೀರಭದ್ರಪ್ಪ:** ಇಂದು ಸೋಮೇಶ್ವರ ಅವರ ಪಟ್ಟಾಭಿಷೇಕದ ನಾಟಕ ಮುಗಿಯಿತು. ಅಲ್ಲಿ ನೆರೆದವರೆಲ್ಲ ಯೋಧರು ಎನ್ನುವದು ಗೊತ್ತಾಗುತಿತ್ತು. ಒಬ್ಬ ನಾಗರಿಕರೂ ಅಲ್ಲಿರಲಿಲ್ಲ. ಸಮಾರಂಭ ಮುಗಿಯುತ್ತಿಂದಂತೆಯೇ ಎಲ್ಲ ಅಶ್ವ ದಳಗಳಿಗೆ ಎಲ್ಲ ದಿಕ್ಕುಗಳಲ್ಲಿ ಸಾಗಿ ಕಾಯಕಯೋಗಿಗಳನ್ನು ಮನವೊಲಸಿ ಅಥವಾ ಬಲವಂತವಾಗಿ ಕಲ್ಯಾಣಕ್ಕೆ ಕರೆದುಕೊಂಡು ಬರಲು ಆದೇಶಿಸಿದರು. ಆ ಆದೇಶದ ಪ್ರಕಾರವೇ ಒಂದು ತಂಡದ ನಾಯಕನಾದ ನನ್ನನ್ನು ಈ ಕಡೆ ಕಳಿಸಿದ್ದಾರೆ. ನನ್ನ

ತಂಡದಲ್ಲಿದ್ದವರೆಲ್ಲಾ ನನ್ನ ನಂಬಿಗಸ್ತರು. ನಮ್ಮ ಮೇಲ್ವಿಚಾರಣೆಗಾಗಿ ಕೆಲವು ಗುಪ್ತಚಾರರನ್ನು ಕಳಿಸಬಹುದು.
**ಮಾಚಣ್ಣ:** ನೀವು ಕಾಳಜಿ ಮಾಡಬೇಡಿ ವೀರಭದ್ರಪ್ಪ ಸಾಯಂಕಾಲದೊಳಗೆ ಶರಣರೆಲ್ಲ ಸುರಕ್ಷಿತ ಸ್ಥಾನ ಸೇರುತ್ತಾರೆ.
**ವೀರಭದ್ರಪ್ಪ:** ಮಹಾರಾಜರ ಸೇವೆಯಲ್ಲಿರಲು ನನ್ನ ತಂಡದಲ್ಲಿರುವ ಯಾರ ಮನಸ್ಸು ಒಪ್ಪುತ್ತಿಲ್ಲ. ಕಲ್ಯಾಣಕ್ಕೆ ಮರಳುವ ಮನಸ್ಸಿಲ್ಲ. ನನ್ನ ಹಾಗೆಯೇ ಇನ್ನೂ ಸಾವಿರಾರು ಯೋಧರು ಯೋಚಿಸುತ್ತಿದ್ದಾರೆ.
**ಮಾಚಣ್ಣ:** ಇನ್ನೂ ಕೆಲವು ದಿನ ಹೋಗಲಿ ಯೋಚನೆ ಮಾಡೋಣ. ಅವಸರದಲ್ಲಿ ಯಾವ ಕ್ರಮ ಕೈಕೊಳ್ಳಬೇಡಿ.
ಅಲ್ಲಿಯೇ ಮೌನವಾಗಿ ಕುಳಿತಿದ್ದ ಗಂಗಾಂಬಿಕೆಯವರ ಕಣ್ಣಲ್ಲಿ ನೀರಾಡುವದು ಅಕ್ಕನಾಗಮ್ಮನವರ ಗಮನಕ್ಕೆ ಬಂದಿತು.
**ಅಕ್ಕನಾಗಮ್ಮ:** ನೀಲಾಂಬಿಕೆಯವರ ಮತ್ತು ಬಸವನ ಸಮಾಚಾರ ಗೊತ್ತಾಯಿತೇ?
**ವೀರಭದ್ರಪ್ಪ:** ಕಲ್ಯಾಣವನ್ನು ಅಣ್ಣ ಬಸವಣ್ಣನವರು ಮತ್ತು ನೀಲಮ್ಮ ಅವರಿಬ್ಬರೂ ತೊರೆದ ಬಳಿಕ ಅನತಿ ದೂರದಲ್ಲಿ ಅವರನ್ನು ಅವರ ಇಚ್ಛೆಗೆ ವಿರುದ್ಧವಾಗಿ ರಕ್ಷಣಾಪಡೆ ಕೂಡಿಕೊಂಡಿತು. ದಾರಿಯಲ್ಲಿ ಅಡವಿಯ ಸಾಹಸಿ ಯುವಕ ಪಡೆ ಅವರನ್ನು ಸೇರಿಕೊಂಡಿತು.
ಅಣ್ಣನವರು ಸುರಪುರದ ಬೆಟ್ಟ ದಲ್ಲಿ ಸುರಕ್ಷಿತರಾಗಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಬಂದಿದೆ.
ಮುಂದೆ ನಡೆದ ಘಟನೆಗಳ ವಿವರಕ್ಕಾಗಿ ದಾರಿ ಕಾಯುತ್ತಿರುವೆ.
**ಅಕ್ಕನಾಗಮ್ಮ:** ನೀಲಾಂಬಿಕಾದೇವಿಯವರನ್ನು ರಕ್ಷಿಸಿದ ಸಂಗನಬಸವಣ್ಣ ಬಸವನನ್ನೂ ರಕ್ಷಿಸುತ್ತಾನೆ. ಕಾಯುವ ಕೂಡಲಸಂಗಮದೇವನಿದ್ದಾಗ ಬೇರೆಯವರ ರಕ್ಷಣೆ ನನಗ್ಯಾಕೆ ಎನ್ನುವದೇ ಬಸವನ ಹಠ.
ಈಗ ಶರಣರ ರಕ್ಷಣೆ ನಮ್ಮ ಮೊದಲ ಆದ್ಯತೆ.
**ವೀರಭದ್ರಪ್ಪ:** ನೀವು ಖರೋಸಾದ ಸುರಕ್ಷಿತ ತಾಣ ತಲುಪುವವರೆಗೆ ಇದು ಯಾರ ಗಮನಕ್ಕೆ ಬರದಂತೆ ಕಾವಲು ಕಾಯುವ ಜವಾಬ್ದಾರಿ ನಮ್ಮದು.
**ಅಕ್ಕನಾಗಮ್ಮ:** ಸರಿ ನಾವೆಲ್ಲ ಬೇಗ ಹೋಗೋಣ.
ಅವರು ಅಲ್ಲಿಯ ದಟ್ಟ ಕಾಡು ಬೆಟ್ಟ ಏರುತ್ತ ಖರೋಸಾದ ಕಡೆಗೆ ಹೋಗುವದು ತುಂಬಾ ಪ್ರಯಾಸದ ಕೆಲಸವಾಗಿತ್ತು. ಅರ್ಧದಾರಿ ಬಂದ ಮೇಲೆ ಒಂದು ಮಂದಿರವಿತ್ತು ಅಲ್ಲಿಯೇ ಒಂದು ಸುರಂಗವಿತ್ತು ಆ ಸುರಂಗದ ಮೂಲಕ ಅವರೆಲ್ಲ ಸುರಕ್ಷಿತವಾಗಿ ಬೆಟ್ಟ ಏರಿಯಾಯಿತು.
ಎಲ್ಲರೂ ಮೇಲೆ ಬಂದ ಮೇಲೆ ಮಾಚಣ್ಣನವರು ಬರುವದಾಗಿ ತಿಳಿಸಿ ಕೆಳಗಿಳಿದು ಹೋದರು.
ಈಗ ಶರಣರು ಇದ್ದದ್ದು ವಿಶಾಲವಾದ ಗವಿಗಳಲ್ಲಿ. ಒಂದಲ್ಲ ಎರಡಲ್ಲ ಅನೇಕ ವಿಶಾಲ ಕಲ್ಲಿನಲ್ಲಿ ಕೊರೆದ ಗವಿಗಳು. ಅಲ್ಲಿ ಮಂದವಾದ ಪಣತೆಯ ಬೆಳಕಿನಲ್ಲಿ

ಅವರಿಗಾಗಿ ಎಲ್ಲ ವ್ಯವಸ್ಥೆ ಕಲ್ಪಿಸಲಾಗಿತ್ತು. ಗವಿಯ ಮುಂದೆ ದಟ್ಟವಾದ ಗಿಡಗಳು ಬಳ್ಳಿಗಳು ಬೆಳೆದಿದ್ದರಿಂದ ಆ ಗವಿಗಳಿರುವದು ಹೊರಗಿನವರಾರಿಗೂ ಗೊತ್ತಾಗುತ್ತಿರಲಿಲ್ಲ.

ಮೊದಲ ಹಂತದ ಸುರಕ್ಷಿತ ಸ್ಥಳ ಮುಟ್ಟಿದ ಸಮಾಧಾನ ಅವರಲ್ಲಿತ್ತು. ಅವರೆಲ್ಲ ಪೂಜೆ ಮುಗಿಸಿ ಪ್ರಸಾದ ಸೇವಿಸಿ ನಿದ್ರೆಗೆ ಜಾರಿದರು.




ಗಮನಿಸಿ:

ಮನಸ್ಸು ಗಲಿಬಿಲಿಗೊಂಡಾಗ ಪರಸ್ಥಿತಿ ವಿಕೋಪಕ್ಕೆ ಹೋದಾಗ ಶಾಂತವಾಗಿ ಯೋಚಿಸಿ ಸ್ವಲ್ಪ ಸಮಯ ಕಾಯ್ದರೆ ಸರಿಯಾದ ಮಾರ್ಗ ದೊರೆಯುತ್ತದೆ. ಕಲುಕಿದ ನೀರು ತಿಳಿಯಾಗಲು ಸ್ವಲ್ಪ ಸಮಯ ಬೇಕು. ಈ ತತ್ವವನ್ನೇ ಶರಣರು ಅನುಸರಿಸಿದರು. ಕೆಲವು ಕಾಲ ಯಾರ ಗಮನಕ್ಕೆ ಬಾರದಂತೆ ಖರೊಸಾ ಗವಿಗಳಲ್ಲಿ ಇರಲು ಯೋಚಿಸಿದರು. ಮಹಾರಾಜ ಸೋಮೇಶ್ವರನ ಕುತಂತ್ರ ಎಲ್ಲರಿಗೂ ತಿಳಿಯಲು ಸ್ವಲ್ಪ ಕಾಲ ಬೇಕಾಗಿತ್ತು. ಯೋಧರ ಮನ ಸರಿ ತಪ್ಪುಗಳ ಗೊಂದಲಗಳಿಂದ ಹೊರಬರಲು ಸಮಯಾವಕಾಶ ಬೇಕಾಗಿತ್ತು.

ಈ ಉದ್ದೇಶ ಈಡೇರಲು ಸಹಾಯ ಮಾಡಿದ್ದು ಖರೋಸಾ ಗವಿಗಳು. ಬಸವಕಲ್ಯಾಣ ಸುಮಾರು 40 ಕಿ ಮೀ ದೂರದವರೆಗೆ ವ್ಯಾಪಿಸಿತ್ತು. ಆ ಅಂಚಿನಿಂದ ಹತ್ತು ಹದಿನೈದು ಕಿ ಮೀ ಅಂತರದಲ್ಲಿದ್ದ ಗವಿಗಳು ಶತಮಾನಗಳ ಕಾಲ ಯಾರ ಗಮನಕ್ಕೂ ಬಂದಿರಲಿಲ್ಲ.

ಹಲವು ಸಾವಿರಾರು ಜನರೊಡನೆ ಅಲ್ಲಿಗೆ ಯಾರ ಕಣ್ಣಿಗೂ ಬೀಳದೇ ಬಂದು ಸೇರಿದ್ದು ಸಾಹಸ ಗೀತೆ. ಶರಣರ ಜಾಣ್ಮೆಯ ನಿದರ್ಶನ. ಗವಿಗಳ ವಿವರಣೆ ಓದಿದ ಮೇಲೆ ಶರಣರು ಇಲ್ಲಿ ತಂಗಿದ್ದರು ಎನ್ನುವದನ್ನು ನೀವು ಒಪ್ಪುತ್ತೀರಿ.

**ಖರೋಸಾ ಗವಿಗಳು (Kharosa Caves):**

ಖರೋಸಾ ಗವಿಗಳು ಎಲ್ಲಿವೆ?
ಲಾತೂರ್‌ನಿಂದ ಸು. 45 ಕಿ.ಮೀ. ದೂರದಲ್ಲಿ, ಬಸವಕಲ್ಯಾಣದಿಂದ 54 ಕಿ ಮೀ ಮತ್ತು ನಿಲಂಗಾ ಪಟ್ಟಣ ದಿಂದ ಐದಾರು ಕಿ ಮೀ ದೂರದಲ್ಲಿದಲ್ಲಿರುವ ಖರೋಸಾ ಹಳ್ಳಿ ಸಮೀಪ ಈ ಗುಹೆಗಳಿರುವದರಿಂದ ಈ ಗುಹೆಗಳು 'ಖರೋಸಾ ಗುಹೆಗಳು' ಎಂದು ಪ್ರಸಿದ್ಧವಾಗಿವೆ.
ಗುಹೆಗಳನ್ನು ಲ್ಯಾಟರೈಟ್ ಬಂಡೆಯ ಮಧ್ಯದಲ್ಲಿ ಕೆತ್ತಲಾಗಿದೆ.
ಜೇಮ್ಸ್ ಗುರ್ಗೆಸ್ ಎಂಬ ಸ್ಕಾಟಿಷ್ ಅಧಿಕಾರಿಯೊಬ್ಬರು ಈ ಗುಹೆಗಳನ್ನು ಮೊದಲು ವಿದ್ವಾಂಸರ ಗಮನಕ್ಕೆ ತಂದರು. ಮರಾಠಿ ಪುಸ್ತಕ 'ಕಲ್ಪಸಮುಹ್' ನಲ್ಲಿ, ರಸವಿದ್ಯಾ ಅವರಿಗೆ ಪ್ರಯೋಜನಕಾರಿಯಾದ ಸ್ಥಳಗಳಲ್ಲಿ 'ಖರೋಸಾ' ಎಂಬ ಸ್ಥಳವನ್ನು ಉಲ್ಲೇಖಿಸಲಾಗಿದೆ .
ಇಲ್ಲಿ ಗವಿಗಳಿವೆ ಎನ್ನುವದು ಯಾವ ಕಡೆಯಿಂದ ಬಂದರೂ ಗೊತ್ತಾಗುವದಿಲ್ಲ. ಈಗಲೂ ಗಿಡ ಮರಗಳಿಂದ ಆವೃತವಾಗಿರುವ ಈ ಗವಿಗಳಿಗೆ ತಲುಪುವುದು ಕಷ್ಟಕರ. ಇಲ್ಲಿ ಅನೇಕ ತರಹದ ಹಣ್ಣಿನ ಗಿಡಗಳು ಸಾಕಷ್ಟಿದ್ದು ಅನೇಕ ಮಂಗಗಳ ವಾಸಸ್ಥಾನವಾಗಿದೆ.
ಖರೋಸಾ ಗವಿಯ ವಿಶೇಷತೆಗಳೇನು?
ಖರೋಸಾ ಬಳಿಯ ಬೆಟ್ಟದ ದಕ್ಷಿಣ ತುದಿಯಲ್ಲಿ 45 ಅಡಿ ಅಗಲದ ಮುರಿತವಿದೆ. ಅದರ ಸಂಪೂರ್ಣ ಚಾವಣಿ ಮತ್ತು ಮುಂಭಾಗವು ಕುಸಿಯುತ್ತಿದೆ. ಈ ಗುಹೆಯ ಬಳಿ ಮತ್ತೊಂದು ಮುರಿದ ಗುಹೆ ಇದೆ. ಉತ್ತರಕ್ಕೆ ಸಣ್ಣ ಶಿಖರಗಳು ಮತ್ತು 12 x 6 ಅಡಿಗಳಷ್ಟು ಒರಟಾದ ಕೋಣೆಯನ್ನು ಹೊಂದಿರುವ ಏಕಶಿಲೆಯ ದೇವಾಲಯವಿದೆ. ಮುಂದೆ ಮತ್ತೊಂದು ಸಣ್ಣ ಏಕಶಿಲೆಯ ದೇವಾಲಯ ಬರುತ್ತದೆ.
ಈ ಗುಂಪಿನ ಗುಹೆಗಳ ಮುಖ್ಯ ಗುಹೆಗಳನ್ನು ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಕಾಣಬಹುದು.

1. ಈ ಗುಹೆಗಳಲ್ಲಿ ಮೊದಲನೆಯದು (11 ರಿಂದ 15 ಅಡಿ ಅಗಲ ಮತ್ತು 13.2 ರಿಂದ 14.8 ಉದ್ದ) ಒರಟಾಗಿರುತ್ತದೆ ಮತ್ತು ಅದರ ಹಿಂದೆ ದೇವರಿಲ್ಲದ ಗರ್ಭಗೃಹವಿದೆ. ಈ ಗುಹೆಯ ಮೇಲ್ಭಾಗದಲ್ಲಿ ಏಕಶಿಲೆಯ ದೇವಾಲಯವಿದೆ.
2. ಎರಡನೇ ಅತ್ಯಂತ ಒರಟಾದ ಮುಂಭಾಗದಲ್ಲಿ 23 ಅಡಿ ಅಗಲ ಮತ್ತು ಹಿಂಭಾಗದಲ್ಲಿ 25.8 ಅಡಿ ಅಗಲವಿದೆ. ಇದು 16.5 ಅಡಿ ಉದ್ದ ಮತ್ತು ಉತ್ತರದ ಗೋಡೆಯ ಮೇಲೆ ಒರಟು ಕೋಣೆಯನ್ನು ಹೊಂದಿದೆ, ಮತ್ತು ದಕ್ಷಿಣ ಭಾಗದಲ್ಲಿ ಒಂದು ಕೋಣೆಯನ್ನು ಅಗೆಯುವ ಪ್ರಯತ್ನವನ್ನು ಮಾಡಲಾಗಿದೆ. ಹಿಂಭಾಗದ ಮಧ್ಯದಲ್ಲಿ 6.10 ಅಡಿ ಎತ್ತರದ ಗೌತಮ್ ಬುದ್ಧನ ವಿಗ್ರಹವಿದೆ. ಮುರಿದ ಕಾಲಮ್ನ(Column) ಅವಶೇಷಗಳು

ಗುಹೆಯ ಮುಂದೆ ಗೋಚರಿಸುತ್ತವೆ. ಬಂಡೆಯಲ್ಲಿ ಉತ್ಖನನ ಮಾಡಿದ ಇನ್ನೂ ಕೆಲವು ಅವಶೇಷಗಳನ್ನು ಈ ಗುಹೆಯ ನಂತರ ಕಾಣಬಹುದು.

3. ಮುಂದಿನದು 70 ಅಡಿ ಅಗಲ ಮತ್ತು 50 ಅಡಿ ಉದ್ದದ ಎರಡು ಅಂತಸ್ತಿನ ದೊಡ್ಡ ಗುಹೆ. ಈ ಗುಹೆಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಉತ್ತರ ಭಾಗದಲ್ಲಿ ಮುಂದೆ ಎತ್ತರದ ಮುರಿದ ಅಷ್ಟಭುಜಾಕೃತಿಯ ಕಾಲಮ್ (Column) ಇದೆ. ಈ ಸ್ತಂಭದ ಮುಂದೆ, ನೆಲಮಹಡಿಯಲ್ಲಿ 16 ಚದರ ಸ್ತಂಭಗಳನ್ನು ಹೊಂದಿರುವ ಪೆವಿಲಿಯನ್ ಇದೆ, ಮತ್ತು ಅದರ ಹಿಂದೆ, ಆಯತಾಕಾರದ ಕೋಣೆಯಲ್ಲಿ ವಿಷ್ಣು, ಮಹೇಶ್ ಮತ್ತು ಬ್ರಹ್ಮನ ಶಿಲ್ಪಗಳನ್ನು ಕೆತ್ತಲಾಗಿದೆ. ನೆಲಮಹಡಿಯ ದಕ್ಷಿಣ ಭಾಗದಲ್ಲಿ ಡೇರೆ ತಲುಪಲು ಏಳು ಹೆಜ್ಜೆಗಳಿವೆ. ಇದು ಕೆಲವು ಮುರಿದ ಸ್ತಂಭಗಳನ್ನು ಹೊಂದಿದೆ ಮತ್ತು ಬ್ರಹ್ಮ, ವಿಷ್ಣು ಮತ್ತು ಮಹೇಶ್ ಅವರ ಕೆತ್ತನೆಗಳನ್ನು ಬಹುಶಃ ಅದರ ಹಿಂದಿನ ಗರ್ಭಗೃಹದಲ್ಲಿ ಕೆತ್ತಲಾಗಿದೆ.
4. ಮೇಲಕ್ಕೆ ಹೋಗಲು ಉತ್ತರಕ್ಕೆ ಒಂದು ಮೆಟ್ಟಿಲು ಇದೆ. ಮಹಡಿಯು ಆರು ಕಂಬಗಳ ಪೆವಿಲಿಯನ್ ಆಗಿದ್ದು, ಹಿಂಭಾಗದಲ್ಲಿ ಇನ್ನೂ ನಾಲ್ಕು ಸ್ತಂಭಗಳಿವೆ. ಹಿಂಭಾಗದ ಕಂಬಗಳಲ್ಲಿ 4 ಅಡಿ ವ್ಯಾಸದ ಬೃಹತ್ ಶಿವಲಿಂಗ ಇದೆ. ದಕ್ಷಿಣ ಪೆವಿಲಿಯನ್ ಎಂಟು ಸ್ತಂಭಗಳನ್ನು ಹೊಂದಿದ್ದರೆ, 5.5 ಅಡಿ ಎತ್ತರದ ಬ್ರಹ್ಮ, ವಿಷ್ಣು ಮತ್ತು ಮಹೇಶ್ ಅವರನ್ನು ಹಿಂದಿನ ಕಕ್ಷೆಯ ಗರ್ಭಗೃಹದಲ್ಲಿ ಕೆತ್ತಲಾಗಿದೆ. ಕೆಲವು ಶಿಲ್ಪಗಳನ್ನು ಗುಹೆಯ ಉತ್ತರ ಭಾಗದಲ್ಲಿ ಕೆತ್ತಲಾಗಿದೆ.
5. ಮುಂದಿನ ಗುಹೆಯನ್ನು ಅಗೆದು, ಎರಡು ಅಂತಸ್ತಿನ ಗುಹೆಯ ಉತ್ತರಕ್ಕೆ ಅಂಟಿಸಲಾಗಿದೆ. ಇದು ಬೆಟ್ಟದ ಮೇಲಿದ್ದು, ಗರ್ಭಗುಡಿಯೊಂದಿಗೆ ಸಣ್ಣ ಕೊಠಡಿಗಳಿವೆ. ಇವುಗಳಲ್ಲಿ ಗಣೇಶ, ವಿಷ್ಣು, ಶಿವ ಇತ್ಯಾದಿ ಸೇರಿದ್ದಾರೆ. ಶಿಲ್ಪಗಳನ್ನು ಕೆತ್ತಲಾಗಿದೆ. ಈ ಗುಹೆಯ ಮೇಲ್ಭಾಗದಲ್ಲಿ ಕೆಲವು ಉತ್ಖನನಗಳಿವೆ.
6. ಮಹಾದೇವ ಗುಹೆಗಳು: (ಡುಮ್ಮಲಿ ಲೆನಾ), ಸು. 60 ಅಡಿ ಅಗಲ ಮತ್ತು 69 ಅಡಿ ಉದ್ದವಿರುವ 'ಮಹಾದೇವ್' ಎಂಬ ಗುಹೆ ಇದೆ. ಪೆವಿಲಿಯನ್ ಒಟ್ಟು 26 ಸ್ತಂಭಗಳನ್ನು ಹೊಂದಿದ್ದು ನಾಲ್ಕು ಮುಂಭಾಗದ ಸ್ತಂಭಗಳನ್ನು ಹೊಂದಿದೆ. ಗರ್ಭಗುಡಿ ಅತ್ಯಂತ ಶುಭ ಮತ್ತು ಒಳಗೆ ಬಲಿಪೀಠದ ಮೇಲೆ ದೊಡ್ಡ ಶಿವಲಿಂಗ ಇದೆ. ಗರ್ಭಗೃಹದ ಮುಖ್ಯ ದ್ವಾರದಲ್ಲಿ ಇಬ್ಬರು ದ್ವಾರಪಾಲಕರು ಇದ್ದಾರೆ ಮತ್ತು ಪ್ರತಿ ಬದಿಯಲ್ಲಿ ಎರಡು ಹಾವುಗಳನ್ನು ಕೆತ್ತಲಾಗಿದೆ. ಗುಹೆಯ ಎರಡೂ ಗೋಡೆಗಳ ಮೇಲೆ ಅನೇಕ ಪೌರಾಣಿಕ ಶಿಲ್ಪಗಳನ್ನು ಕೆತ್ತಲಾಗಿದೆ, ಆದರೆ ಕಲ್ಲಿನ ದುರ್ಬಲತೆಯಿಂದಾಗಿ ಹೆಚ್ಚಿನ ಶಿಲ್ಪಗಳು ಟೊಳ್ಳಾಗಿ ಕಾಣುತ್ತವೆ. ದಕ್ಷಿಣ ಗೋಡೆಯು ಸಾಮಾನ್ಯವಾಗಿ ವೈಷ್ಣವವಾಗಿದ್ದರೆ, ಉತ್ತರ ಗೋಡೆಯನ್ನು ಶೈವ ಶಿಲ್ಪಗಳಿಂದ

ಕೆತ್ತಲಾಗಿದೆ. ಈ ಶಿಲ್ಪಗಳು ಹಿಂದೆ ಲೇಪಿತ ಗುರುತುಗಳನ್ನು ತೋರಿಸುತ್ತವೆ. ದಕ್ಷಿಣ ಗೋಡೆಯ ಮೇಲೆ, ಮುಖ್ಯವಾಗಿ ನಾಗದೇವತಾ ಮತ್ತು ವಿಷ್ಣು ಅವತಾರಗಳಾದ ವರಾಹ, ವಾಮನ, ನರಸಿಂಹ, ಕೃಷ್ಣ, ರಾಮ ಇತ್ಯಾದಿ. ಅವತಾರಗಳಿವೆ. ಉತ್ತರ ಗೋಡೆಯ ಮೇಲೆ ಶಿವ-ಪಾರ್ವತಿ, ರಾವಣನುಗ್ರಹ ವಿಗ್ರಹವಿದೆ, ಭೈರವ್ ಇತ್ಯಾದಿ. ಶಿಲ್ಪಗಳನ್ನು ಕೆತ್ತಲಾಗಿದೆ. ಇದಲ್ಲದೆ, ಸಮುದ್ರ ಮಂಥನ ಶಿಲ್ಪಗಳು, ಬಹುಶಃ ಕಾರ್ತಿಕೇಯ, ದ್ವಾರಪಾಲ್ ಮತ್ತು ಇತರ ಶಿಲ್ಪಗಳನ್ನು ಗುಹೆಯಲ್ಲಿ ಕೆತ್ತಲಾಗಿದೆ. ಮಹಾದೇವ ಗವಿಯ ಸ್ವಲ್ಪ ಉತ್ತರಕ್ಕೆ ಒಂದು ಕೋಣೆಯನ್ನು ಭಾಗಶಃ ಉತ್ಖನನ ಮಾಡಲಾಗಿದೆ.

7. 'ಲಕೋಲಾ' ಗುಹೆ: ಈ ಗುಹೆಯಲ್ಲಿನ ಮೆಟ್ಟಿಲುಗಳನ್ನು ಹತ್ತಿದ ನಂತರ, ಇದು ನಾಲ್ಕು ಸ್ತಂಭಗಳನ್ನು ತೆಗೆದುಕೊಳ್ಳುತ್ತದೆ. ನಂತರ ಡೇರೆಯಲ್ಲಿ 24 ಸ್ತಂಭಗಳಿವೆ. ಗುಹೆಗಳು 41 ರಿಂದ 49 ಅಡಿ ಅಗಲವಿದೆ. ಇದು 58 ಅಡಿ ಉದ್ದವಾಗಿದೆ. ದಕ್ಷಿಣ ಕೋಣೆಯಲ್ಲಿ, ಹಿಂಭಾಗದಲ್ಲಿ ಗಣಪತಿ ಶಿಲ್ಪ ಅವರೊಂದಿಗೆ ನೃತ್ಯ ಭಂಗಿಗಳಲ್ಲಿ ಪುರುಷರು ಮತ್ತು ಮಹಿಳೆಯರ ಚಿತ್ರಗಳಿವೆ. ಗರ್ಭಗುಡಿಯಲ್ಲಿ ವಿಷ್ಣುವಿನ 6 ಅಡಿ ಎತ್ತರದ ಚತುರ್ಭುಜ ವಿಗ್ರಹವಿದೆ.
8. ಈ ಗುಹೆಯ ಉತ್ತರ ಭಾಗದಿಂದ ಮುಂದಿನ ಗುಹೆಗೆ ಇಳಿಯಬಹುದು. ಇದು ನಾಲ್ಕು ಸ್ತಂಭಗಳು ಮತ್ತು ಅರ್ಧ ಸ್ತಂಭಗಳನ್ನು ಹೊಂದಿದೆ. ಗುಹೆ 21 ಅಡಿ ಅಗಲ ಮತ್ತು 23 ಅಡಿ ಉದ್ದವಿದ್ದು ಗರ್ಭಗುಡಿಯೊಂದಿಗೆ ಹಿಂಭಾಗದಲ್ಲಿದೆ. ಈ ಗುಹೆಯಲ್ಲಿ ಎರಡು ಕೊಠಡಿಗಳನ್ನು ಅಗೆದು ಹಾಕಲಾಗಿದೆ. ಅವುಗಳಲ್ಲಿ ಒಂದು ಗಣೇಶ ಶಿಲ್ಪವಿದೆ.
9. ಇದರ ನಂತರ ಬೃಹತ್ ಆದರೆ ಮುರಿದುಬಿದ್ದ ಗುಹೆ ಇದೆ.
10. ಮೇಲಿನ ಗುಹೆಯ ಉತ್ತರಕ್ಕೆ ಒಂದು ಗುಹೆ ಇದ್ದು, ಪೆವಿಲಿಯನ್‌ನಲ್ಲಿ ಎರಡು ಅಷ್ಟಭುಜಾಕೃತಿಯ ಸ್ತಂಭಗಳು ಗೋಚರಿಸುತ್ತವೆ. ಪೆವಿಲಿಯನ್ 17 ಅಡಿ ಅಗಲ ಮತ್ತು 23 ಅಡಿ ಉದ್ದವಿದೆ. ವಿಷ್ಣುವಿನ ವಿಗ್ರಹವನ್ನು ಗರ್ಭಗೃಹದಲ್ಲಿ ಕೆತ್ತಲಾಗಿದೆ.
11. ನಂತರ ಗರ್ಭಗುಡಿಯೊಂದಿಗೆ ಎರಡು ಸಾಮಾನ್ಯ ಗುಹೆಗಳು ಮತ್ತು ಪ್ರತ್ಯೇಕ ಆದರೆ ಚಿದ್ರಗೊಂಡ ಏಕಶಿಲೆಯ ದೇವಾಲಯವಿದೆ. ಮುಂದಿನದು 25.5 ರಿಂದ 43.5 ಅಡಿ ಅಗಲ, 30.5 ಅಡಿ ಉದ್ದ ಮತ್ತು 8.6 ಅಡಿ ಎತ್ತರದ ಗುಹೆ ಈದೆ. ಉತ್ತರ ಭಾಗದಲ್ಲಿ ಎರಡು ಕೋಣೆಗಳಿದ್ದು, ಇದರಲ್ಲಿ ಗಣೇಶ ಮತ್ತು ಮಹಿಷಾಸುರಮರ್ದಿನಿ ಅವರ ಶಿಲ್ಪಗಳನ್ನು ಕೆತ್ತಲಾಗಿದೆ.

12. ತುಂಬಾ ಮಹತ್ವದ ಸಂಗತಿಯೆಂದರೆ ಬೆಟ್ಟದ ಮೇಲೆ ಸೀತೆಯ ಕೊಳವೆಂಬ ನೀರಿನ ಸಣ್ಣ ಕೊಳವಿದೆ ಇಲ್ಲಿ ನೀರು ನಿರಂತರ ಬರುವದೇ ಅಧ್ಭುತ.










**ಖರೋಸಾ ಗವಿಗಳು - 2**

ಖರೋಸಾ ಗವಿಗೆ ಬಂದ ಶರಣರು ತಮ್ಮ ತಮ್ಮ ಕಾಯಕದಲ್ಲಿ ತೊಡಗಿದರು. ಮುಂಜಾನೆ ಮಂಜು ಮುಸುಕಿದಾಗ ಅಡಿಗೆಯ ಕೆಲಸವಾಗುತ್ತಿತ್ತು. ಅಲ್ಲಿಂದ ಹೊಗೆ ಬರುವದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ವಚನ ರಚನೆ ಮತ್ತು ವಚನ ಪ್ರತಿ ಮಾಡುವ ಕೆಲಸ ನಿರಂತರವಾಗಿ ಗವಿಯೊಳಗಿನ ಪಣತಿಯ ಬೆಳಕಿನಲ್ಲಿ ನಡೆಯುತ್ತಿತ್ತು. ಅಲ್ಲಿದ್ದ ಗುಪ್ತಮಾರ್ಗದಿಂದ ಕಾಯಕಯೋಗಿಗಳನ್ನು ಬೇರೆ ಬೇರೆ ಊರಿಗೆ ಕಳಿಸುವ ಕೆಲಸ ನಿರಂತರವಾಗಿ ನಡೆದಿತ್ತು. ಅದರಲ್ಲಿಯೂ ಕರಕುಶಲಕರ್ಮಿಗಳನ್ನು ಉತ್ತರಕ್ಕೆ ಹೋಗುವ ವ್ಯಾಪಾರಿಗಳ ಜೊತೆ ಕಳಿಸುತ್ತಿದ್ದರು. ಶರಣರ ಕಾಲುಗಳಿಗಾದ ಗಾಯಗಳ ಆರೈಕೆ ನಿರಂತರವಾಗಿ ನಡೆದಿತ್ತು.

ಖರೋಸಾ ಗವಿಗಳನ್ನು ನಿರ್ಮಿಸಿದವರಾರು?

ಜೇಮ್ಸ್ ಫರ್ಗುಸನ್ ಮತ್ತು ಬರ್ಗೆಸ್ ಈ ಗುಹೆ ಅವಧಿಯನ್ನು ಆರನೇ ಶತಮಾನದ ದ್ವಿತೀಯಾರ್ಧವೆಂದು ಪರಿಗಣಿಸಿದ್ದಾರೆ. ಅವರ ಪ್ರಕಾರ, ಒಟ್ಟಾರೆಯಾಗಿ

ಖರೋಸಾದ ಗುಹೆಗಳು ನಿರ್ಮಾಣ ಕೃ ಶ. 500 ರಿಂದ 700 ರ ವರೆಗೆ ನಡೆಯಿತು.
ಏತನ್ಮಧ್ಯೆ, ಬಾದಾಮಿ ಚಾಲುಕ್ಯ ರಾಜವಂಶವು ಈ ಪ್ರದೇಶವನ್ನು ಆಳಿತು.
ಇದು ಶೈವ ಮತ್ತು ವೈಷ್ಣವ ಪಂಥಗಳ ಸಂಯೋಜಿತ ಅಭ್ಯಾಸವನ್ನೂ ತೋರಿಸುತ್ತದೆ.
ಇವುಗಳನ್ನು ಆಗಿನ ಆಡಳಿತಗಾರರಾದ ಚಾಲುಕ್ಯರಿಂದ ನಿರ್ಮಿಸಲಾಗಿತ್ತು.
ಭಾರತದಲ್ಲಿ ಕ್ರಿ.ಶ. 550 ರಿಂದ 750 ಮತ್ತು ಕ್ರಿ.ಶ. 973 ರಿಂದ 1190 ರ ವರೆಗೆ ಚಾಲುಕ್ಯ ರಾಜವಂಶ ಅಸ್ತಿತ್ವದಲ್ಲಿತ್ತು.
ಹಲವಾರು ದೇವಾಲಯಗಳು ಮತ್ತು ಬಾದಾಮಿ ಗುಹೆಗಳ ಅಡಿಪಾಯಗಳು ಪುಲೇಕೇಶಿ I (535 – 566 ಕೃ ಶ) ಅವರ ಪುತ್ರ ಕೀರ್ತಿವರ್ಮನ್ (567 – 598 ಕ್ರಿ.ಶ.) ನಿಂದ ಸ್ಥಾಪಿಸಲ್ಪಟ್ಟವು.
ಮಂಗಳಲೇಶ್ (598 – 610 ಕ್ರಿ.ಶ) ಗುಹೆ ದೇವಾಲಯಗಳ ನಿರ್ಮಾಣ ಪೂರ್ಣಗೊಳಿಸಿದನು.
ವಾಸ್ತುಶಿಲ್ಪ ಮತ್ತು ಕಲೆ ಚಾಲುಕ್ಯ ಸಾಮ್ರಾಜ್ಯದ ಶಾಶ್ವತ ಕೊಡುಗೆಗಳು.
ಬದಾಮಿ (ವಾತಾಪಿ) ಚಾಲುಕ್ಯರ ಒಂದು ಬಾರಿಯ ರಾಜಧಾನಿಯಾಗಿತ್ತು.
ಪಟ್ಟದಕಲ್ಲು (|UNESCO heritage site), ಬಾದಾಮಿ,ಐಹೊಳೆಗಳಲ್ಲಿನ ಬಂಡೆಗಳಲ್ಲಿ ಕಡೆದ ದೇವಾಲಯಗಳು, ಸುಪ್ರಸಿದ್ದ ಶಿಲ್ಪಕೃತಿಗಳು ಮತ್ತು ಭಿತ್ತಿ ಚಿತ್ರಗಳು ಚಾಲುಕ್ಯರ ಕಲಾಭಿರುಚಿಗೆ ಸಾಕ್ಷಿಯಾಗಿವೆ.
ನಿಮಗೆ ಐಹೊಳೆಯಲ್ಲಿ ನಮ್ಮ ದೇಶದ ಅನೇಕ ಸುಪ್ರಸಿದ್ಧ ದೇವಾಲಯಗಳ ಪ್ರತಿಕೃತಿಗಳು ಸಿಗುತ್ತವೆ.ಕಲಾಕಾರರು ಮೊದಲು ಈ ಶಿಲ್ಪಕಲಾಶಾಲೆಯಲ್ಲಿ ಮಂದಿರದ ಪ್ರತಿಕೃತಿ (miniature model) ರಚಿಸಿ ಆಮೇಲೆ ಮುಖ್ಯಮಂದಿರ ರಚಿಸುತ್ತಿದ್ದರು.
ಅದಕ್ಕಾಗಿಯೇ ಇದನ್ನು ಶಿಲ್ಪಕಲೆಗಳ ಪ್ರಯೋಗಾಲಯ ಎನ್ನುತ್ತಿರುವದು.
ಹಾಗಾದರೆ ಬದಾಮಿ ಗುಹೆಗಳನ್ನು (ಮೇಣಬಸ್ತಿ) ರಚಿಸುವಾಗ ಇಂತಹ ಗುಹೆಗಳನ್ನು ಎಲ್ಲಿಯಾದರೂ ಪ್ರಯೋಗಾತ್ಮಕವಾಗಿ ನಿರ್ಮಿಸಿ ಅದರ ಅನುಭವದ ಆಧಾರದಲ್ಲಿ ಬದಾಮಿಯ ಗುಹೆಗಳನ್ನು ನಿರ್ಮಿಸಿದ್ದಾರೆಯೇ?
ಈ ಪ್ರಶ್ನೆಗೆ ನಿಖರವಾದ ಉತ್ತರ ಹೌದು ಎಂದು ಹೇಳಬಹುದು.
ಮೊದಲು ಖರೋಸಾದ ಗುಹೆಗಳನ್ನು ನಿರ್ಮಿಸಿ ಅಲ್ಲಿ ಪಡೆದ ಅನುಭವದ ಆಧಾರದಲ್ಲಿ ಬದಾಮಿಯ ಗುಹೆಗಳನ್ನು ನಿರ್ಮಿಸಿದರು.
ಖರೋಸಾದಲ್ಲಿ ಕಲಾಕಾರರ ಅನನುಭವ ಎದ್ದುಕಾಣುತ್ತದೆ ಆದರೆ ಬದಾಮಿಯಲ್ಲಿ ಅವರ ಪ್ರಾವಿಣ್ಯತೆ ಎದ್ದು ಕಾಣಿಸುತ್ತದೆ.
ಖರೋಸಾ ಅಪೂರ್ಣವೂ ಮತ್ತು ಅಷ್ಟೊಂದು ಆಕರ್ಶಕ ಆಗಿಲ್ಲದ ಕಾರಣ ಜನ ಬರುವದು ಕಡಿಮೆಯಾಗಿ ಮೃಗಗಳ ಆವಾಸಸ್ಥಾನವಾಗಿ ಜನರಿಂದ ಮರೆಯಾಯಿತು.
ಈಗ ಇದು ಯಾತ್ರಾಸ್ಥಳವಾಗಿದೆ.

ನಿರ್ಮಾಣವಾದ ಕೆಲವು ಕಾಲದ ನಂತರ ಅವು ಕಾಡಿನಲ್ಲಿ ಮರೆಯಾಗಿ ಅಲ್ಲಿ ಗವಿಗಳಿದ್ದವೆಂಬ ಸಂಗತಿ ಯಾರ ಗಮನಕ್ಕೂ ಬರದಿರುವದು. ಇಂತಹದೇ ಗವಿಗಳಿಗೆ ಉತ್ತಮ ಉದಾಹರಣೆ ಅಜಂತಾ ಗವಿಗಳು.
ಹೀಗೆಯೇ 5 - 7 ನೇಯ ಶತಮಾನದಲ್ಲಿ ನಿರ್ಮಾಣವಾದ ಖರೋಸಾ ಗವಿಗಳು ಕೆಲವು ಶತಮಾನಗಳಿಂದ 12 ನೇ ಶತಮಾನದ ವರೆಗೆ ಜನರ ಕಣ್ಣಿನಿಂದ ಮರೆಯಾಗಿರಬಹುದು.
ಆ ಕಾಲದಲ್ಲಿದ್ದ ಅತಿ ಕಡಿಮೆ ಜನಸಂಖ್ಯೆ, ದಟ್ಟವಾದ ಕಾಡುಗಳು ಮತ್ತು ಅಲ್ಲಿದ್ದ ಕಾಡುಮೃಗಗಳ ಭಯದಿಂದ (ಅವುಗಳಿಗೆ ಗವಿಗಳು ಉತ್ತಮವಾದ ವಾಸಸ್ಥಾನ ಕಟ್ಟಿ ಕೊಟ್ಟಿದಂತಾಗುತ್ತದೆ) ಅಲ್ಲಿಗೆ ಜನ ಹೋಗದಿದ್ದಾಗ ಅವು ಜನರ ಕಣ್ಣಿನಿಂದ ಮರೆಯಾಗುತ್ತವೆ. ಆ ಗವಿಗಳ ಅಸ್ಥಿತ್ವ ಗೊತ್ತಾಗಿದ್ದು ಹೇಗೆ?
1. ಬಸವಕಲ್ಯಾಣಕ್ಕೆ ಬೇರೆ ಬೇರೆ ಕಡೆಯಿಂದ ಯೋಗಿಗಳು ಬರುವದು ವಾಡಿಕೆ. ಅವರು ಅಲ್ಲಲ್ಲಿ ಕಾಡಿನಲ್ಲಿ ಪ್ರಶಾಂತವಾದ ಜಾಗ ಹುಡುಕಿ ಧ್ಯಾನ ಮಾಡಿ ಮುಂದುವರೆಯುತ್ತಿದ್ದರು. ಅಂತಹ ಯೋಗಿಯೊಬ್ಬನಿಂದ ಇಲ್ಲಿ ಗವಿಗಳಿವೆ ಎಂಬ ಮಾಹಿತಿ ಶರಣರಿಗೆ ಸಿಕ್ಕಿರಬಹುದು.
ಅಥವಾ
2. ಕಾಡುಪ್ರಾಣಿಯನ್ನು ಬೇಟೆಯಾಡುವಾಗ ಅವುಗಳ. ಬೆನ್ನತ್ತಿ ಹೋದಾಗ ಅಡವಿಯಲ್ಲಿರುವ ಅನೇಕ ಗುಪ್ತಸ್ಥಾನಗಳ ಪರಿಚಯ ಬೇಡ ಜನಾಂಗದವರಿಗಿರುತ್ತದೆ ಅಂತಹವರೊಬ್ಬರು ಶರಣರಿಗೆ ಮಾಹಿತಿ ಕೊಟ್ಟಿರಬಹುದು
3. ಚಾಲುಕ್ಯ ಅರಸರಿಂದ ನಿರ್ಮಿಸಲಾದ ಈ ಗುಹೆಗಳ ವಿವರ ಕಡತಗಳಿಂದ ಶಾಂತರಸ ಅಥವಾ ಅರಮನೆಯ ಕಾಯಕದಲ್ಲಿದ್ದ ಶರಣರಿಗೆ ಗೊತ್ತಾಗಿರಬಹುದು. ವಚನಗಳನ್ನು ರಕ್ಷಿಸಲು ರಾಜ್ಯದಲ್ಲಿಯ ಎಲ್ಲ ರಹಸ್ಯ ಅಡಗುದಾಣಗಳ ವಿವರಗಳನ್ನು ಪರಿಶೀಲಿಸುವಾಗ ಅಲ್ಲಿಯ ಶರಣರಿಗೆ ಈ ಸ್ಥಳ ಗೊತ್ತಾಗಿರಬಹುದು.
ಕಲ್ಯಾಣ ಕ್ರಾಂತಿಯ ಅನಂತರದ ಕಾಲದಲ್ಲಿ ಮತ್ತೆ ಮರೆಯಾದ ಈ ಗವಿಗಳು ಈ ಶತಮಾನದಲ್ಲಿ ಮತ್ತೆ ಬೆಳಕಿಗೆ ಬಂದಿವೆ. ಆದರೆ ಶರಣರು ಬಚ್ಚಿಟ್ಟ ವಚನಕಟ್ಟುಗಳು ಅಷ್ಟು ಸುಲಭವಾಗಿ ಸಿಕ್ಕುವದಿಲ್ಲ. ಆದರೆ ಈಗ ಲಭ್ಯವಿರುವ ಆಧುನಿಕ ತಂತ್ರಗಳಿಂದ ಅಲ್ಲಿ ಇರಬಹುದಾದ ವಚನ ಕಟ್ಟುಗಳಿಗಾಗಿ ಶೋಧ ನಡೆಸಬಹುದು.
ಈ ಚಿತ್ರಗಳಲ್ಲಿ ಖರೋಸಾ ಮತ್ತು ಬದಾಮಿ ಗವಿಗಳ ಜೊತೆಯಾದ ಚಿತ್ರಗಳಿದ್ದು ಅವು ಎರಡು ರಚನೆಗಳಲ್ಲಿರುವ ಸಾಮ್ಯತೆ ನಿರೂಪಿಸುತ್ತವೆ.




ಮನದ ಮಾತು:

ಮನಸ್ಸಿಗೆ ಬಹಳ ಬೇಜಾರೆನಿಸಿದರೂ ಬರೆಯಬೇಕಾದ ವಿಷಯ ಬರೆಯಲೇಬೇಕಲ್ಲವೇ? ಪ್ರತಿ ಅಕ್ಷರ ಬರೆಯುವಾಗಲೂ ನೋವಾಗುತ್ತದೆ ಕಣ್ಣು ತುಂಬಿ ಬರುತ್ತವೆ. ಈ ಅನುಭವ ನನಗಷ್ಟೆ ಅಲ್ಲ ಶರಣರ ಬಗೆಗೆ ಬರೆವ ಎಲ್ಲ ಲೇಖಕರಿಗೂ ಆಗಿರಬೇಕು. ನಿಖರವಾದ ಮಾಹಿತಿಯ ಕೊರತೆ ಬರೆಯುವದಕ್ಕೆ ಬಾಧಕವಾಗುತ್ತದೆ. ಇಂತಹದೇ ಈ ಶತಮಾನದ ಒಂದು ಉದಾಹರಣೆ ಸುಭಾಶಚಂದ್ರ ಬೋಸ ಅವರ ಜೀವನ ಚರಿತ್ರೆ ಬರೆಯುವರಿಗೆ ಅವರ ಜೀವಿತಾವಧಿಯ ಅನೇಕ ಘಟನೆಗಳ ವಿವರ ಲಭ್ಯ. ಆದರೆ ಅವರ ಕೊನೆ ದಿನಗಳಲ್ಲಾದ ಘಟನೆಗಳ ಬಗ್ಗೆ ಇನ್ನೂ ಒಮ್ಮತವಿಲ್ಲ. ಅವರು ವಿಮಾನಾಪಘಾತದಲ್ಲಿ ಮರಣ ಹೊಂದಿದರೆಂದು ಕೆಲವರು ವಾದಿಸಿದರೆ, ಅವರು ಬಂಧಕ್ಕೊನಳಗಾಗಿ ಜೈಲಿನಲ್ಲಿದ್ದರು ಎನ್ನುವದು ಕೆಲವರ ವಾದ ಮತ್ತು ಅವರು ಸನ್ಯಾಸ ಧರ್ಮ ಸ್ವೀಕರಿಸಿ ಒಂದು ಆಶ್ರಮದಲ್ಲಿದ್ದರು ಎನ್ನುವದು ಕೆಲವರ ವಾದ. ಹಲವು ಸರಕಾರಗಳು ರಚಿಸಿದ ತಜ್ಞರ ಸಮಿತಿಗಳ

ಅಭಿಪ್ರಾಯಗಳು ಭಿನ್ನವಾಗಿವೆ. ಒಟ್ಟಾರೆಯಾಗಿ ಯಾವದು ಸರಿ ಮತ್ತು ಯಾವದು ತಪ್ಪು ಎನ್ನುವದನ್ನು ಇದುವರೆಗೆ ನಿರ್ಧರಿಸಲಾಗಿಲ್ಲ.

ಇನ್ನು 12 ನೇಯ ಶತಮಾನದಲ್ಲಿಯ ಬಸವಣ್ಣನವರ ಜೀವನದ ಕೆಲವು ವಿವರಗಳು ಲಭ್ಯವಾದರೂ ಅವರ ಅಂತಿಮ ಕ್ಷಣಗಳ ಬಗ್ಗೆ ಊಹಾಪೋಹಗಳಿವೆ. ಈ ಪ್ರಸಂಗದ ಬಗ್ಗೆ ಬರೆಯಬಾರದು ಎಂದು ಹಲವು ಸಲ ನಿರ್ಧರಿಸಿದ್ದೆ. ಆದರೂ ಲೇಖನ ಅಪೂರ್ಣವಾಗಬಹುದೆಂಬ ಕಾರಣದಿಂದ ಕೆಲವು ಸಾಲುಗಳನ್ನು ಊಹೆಗಳ ಆಧಾರದಲ್ಲಿ ಬರೆದಿರುವೆ. ಅದನ್ನು ಓದಿ ಮರೆತುಬಿಡಿ ಯಾಕಂದರೆ ನಾನು ಬರೆದುದನ್ನು ಪ್ರಮಾಣೀಕರಿಸುವ ಯಾವ ಸಾಕ್ಷಿಯೂ ಸದ್ಯಕ್ಕೆ ಇಲ್ಲ.

ಕೆಲವು ದಿನಗಳಲ್ಲಿ ಖರೋಸಾ ಗವಿಯ ವಾತಾವರಣಕ್ಕೆ ಎಲ್ಲ ಶರಣರು ಹೊಂದಿಕೊಂಡು ತಮ್ಮ ತಮ್ಮ ಕಾಯಕದಲ್ಲಿ ತೊಡಗಿದರು. ವಚನ ರಚನೆ ಮತ್ತು ವಚನ ಪ್ರತಿಮಾಡುವ ಕೆಲಸ ಅವ್ಯಾಹತವಾಗಿ ನಡೆದಿತ್ತು. ಆದರೆ ಅಕ್ಕನಾಗಮ್ಮ, ಗಂಗಾಂಬಿಕೆ ಮತ್ತು ಚನ್ನಬಸವಣ್ಣನವರು ಮಾಚಣ್ಣ ಬರುವ ಹಾದಿಯನ್ನು ಕಾತರದಿಂದ ಕಾಯುತ್ತಿದ್ದರು. ಸಾಯಂಕಾಲ ಮಾಚಣ್ಣ ಎರಡು ಜನ ಆಗಂತುಕರೊಡನೆ ಆಗಮಿಸಿ ಅವರೊಡನೆ ಚರ್ಚೆಯಲ್ಲಿ ತೊಡಗಿದರು

**ಮಾಚಣ್ಣ:** ಇವರು ಧರ್ಮಾನಾಯಕ ಶಹಾಪುರ ಸಮೀಪದ ಹಾಡಿಯ ನಾಯಕ ಮತ್ತು ಇವರು ಪ್ರಭು ಕಲ್ಯಾಣದ ಅಶ್ವಪಡೆಯ ಯೋಧ ಎಂದು ಪರಿಚಯಿಸಿದ.

**ಅಕ್ಕನಾಗಮ್ಮ:** ಬಹಳ ದೂರದಿಂದ ದಣಿದು ಬಂದಿದ್ದೀರಿ ಮೊದಲು ಸ್ವಲ್ಪ ವಿಶ್ರಮಿಸಿಕೊಳ್ಳಿ.

ಅವರು ಕೈಕಾಲು ಮುಖ ತೊಳೆದುಕೊಂಡು ಬಂದರು. ಅವರು ಅಲ್ಲಿದ್ದ ಮಂದ ಪಣತಿಯ ಬೆಳಕಿಗೆ ಹೊಂದಿಕೊಂಡರು. ಗಂಗಾಂಬಿಕೆಯವರು ಗಂಜಿಯನ್ನು ಕುಡಿಯಲು ತಂದು ಕೊಟ್ಟರು.

ಆಗಂತುಕರ ಮುಖದಲ್ಲಿ ಗಾಬರಿ ಇರುವದು ಕಾಣಿಸುತ್ತಿತ್ತು. ಗಂಜಿ ಕುಡಿದಾದ ಮೇಲೆ.

**ಅಕ್ಕನಾಗಮ್ಮ:** ಈಗ ಕಲ್ಯಾಣದ ಸಮಾಚಾರ ಹೇಳಿ

**ಪ್ರಭು:** ನಾನು ಅಣ್ಣ ಬಸವಣ್ಣನವರ ಅಂಗರಕ್ಷಕ. ಕಲ್ಯಾಣ ದಾಟಿದ ಮೇಲೆ ಅಣ್ಣನವರು ನಾನು ಮತ್ತು ನೀಲಾಂಬಿಕೆ ಹೋಗುತ್ತಿದ್ದೇವೆ. ಕೂಡಲಸಂಗಮದೇವ ರಕ್ಷಣೆಗಿದ್ದಾಗ ಬೇರೆಯವರ ರಕ್ಷಣೆ ಅವಶ್ಯವಿಲ್ಲ ನೀವೆಲ್ಲ ತೆರಳಿ ಎಂದು ನಮಗೆ ಆಜ್ಞಾಪಿಸಿದರು. ನಮ್ಮ ತಂಡದ ನಾಯಕ ಅವರ ಮಾತಿಗೆ ಒಪ್ಪಿ ನಿಮಗೆ ಕಾಡಿನಲ್ಲಿ ಮಾರ್ಗ ತೋರಿಸಲು ನಾಲ್ಕು ಜನ ಯೋಧರು ಬರುತ್ತಾರೆ ಅಪ್ಪಣೆ ಕೊಡಿ ಸ್ವಾಮಿ ಎಂದ.

ಅಣ್ಣನವರು ಅದಕ್ಕೊಪ್ಪಿದ್ದು ನಮ್ಮ ಭಾಗ್ಯ. ನಾನು ಮತ್ತು ಶಿವ ಮುಂದೆ ಮಧ್ಯದಲ್ಲಿ ಅಣ್ಣನವರು ಮತ್ತು ನೀಲಾಂಬಿಕೆ ಅವರ ಹಿಂದೆ ಇನ್ನಿಬ್ಬರು ಯೋಧರು ಸಾಗಿದೆವು. ಅಣ್ಣನವರ ಸುರಕ್ಷತೆ ಅತ್ಯಮೂಲ್ಯ ಎಂದು ಗೊತ್ತಿದ್ದ

ನಮ್ಮ ತಂಡದ ನಾಯಕ ಹಿಂದೆ ಹಾಗೂ ಆ ಕಾಡಿನ ಯುವಕರ ಪಡೆ ಮುಂದೆ ಸಾಗಿದ್ದು ಅಣ್ಣನವರಿಗೆ ಗೊತ್ತಾಗಲಿಲ್ಲ. ನಾವೆಲ್ಲ ಪ್ರತಿಕ್ಷಣದ ಆಗುಹೋಗುಗಳನ್ನು ನಮ್ಮ ಗುಪ್ತ ಪಕ್ಷಿಗಳ ಸಂಕೇತ ಭಾಷೆಯಲ್ಲಿ ಹಂಚಿಕೊಳ್ಳುತ್ತಿದ್ದೆವು. ದಾರಿಯಲ್ಲಿಯ ಕಾಡು ಹಣ್ಣುಗಳು ನಮ್ಮ ಆಹಾರವಾಯಿತು. ಕುದುರೆಗಳನ್ನು ಬದಲಾಯಿಸುವ ಅನುಕೂಲತೆ ಇಲ್ಲದ್ದರಿಂದ ಮತ್ತು ಕಾಡುಪ್ರಾಣಿಗಳ ಅಲ್ಲಿ ಹೆಚ್ಚಾಗಿದ್ದದ್ದರಿಂದ ನಾವೊಂದು ಕೆರೆಯ ದಂಡೆಯಲ್ಲಿದ್ದ ಗವಿಗಳಲ್ಲಿ ರಾತ್ರಿ ಕಳೆಯಲು ನಿರ್ಧರಿಸಿದೆವು. ರಾತ್ರಿಯೆಲ್ಲ ಅಣ್ಣ ಬಸವಣ್ಣನವರು ಮತ್ತು ನೀಲಕ್ಕನವರು ವಚನಗಳ ಚರ್ಚೆಯಲ್ಲಿ ವೇಳೆ ಕಳೆದರೆ ನಾವು ಗವಿಯ ರಕ್ಷಣೆಯಲ್ಲಿ ತೊಡಗಿದೆವು. ಮುಂಜಾನೆ ಪ್ರವಾಸ ಮುಂದುವರೆಸಿದೆವು.
ಭಿಮಾ ನದಿ ದಾಟಿ ಮುಂದೆ ಬೆಟ್ಟದಲ್ಲಿ ಸಾಗಿದಾಗ ಅಲ್ಲಿ ದಾರಿಯಲ್ಲಿ ಅಣ್ಣನವರ ಪರಿಚಿತ ಧರ್ಮಾನಾಯಕ ತಮ್ಮವರೊಡನೆ ಅಣ್ಣನವರ ದಾರಿ ಕಾಯುತ್ತಿದ್ದ.
**ಧರ್ಮಾನಾಯಕ:** ಅಣ್ಣ ಕಲ್ಯಾಣ ತೊರೆದ ನಂತರದ ಪ್ರತಿಕ್ಷಣದ ವಿವರಗಳು ನನ್ನ ಯೋಧರು ನನಗೆ ತಲುಪಿಸಿದ್ದರು. ಕಲ್ಯಾಣದಿಂದ ಒಂದು ಅಶ್ವಪಡೆ ಅಣ್ಣನವರನ್ನು ಹುಡುಕಲು ಸೋಮೇಶ್ವರನ ಆಜ್ಞೆಯಂತೆ ಬಹು ವೇಗವಾಗಿ ರಾಜಮಾರ್ಗದಲ್ಲಿ ಹೊರಟಿರುವ ಸಮಾಚಾರ ತಲುಪಿತು. ಅದಕ್ಕಾಗಿ ಅಣ್ಣನವರನ್ನು ಮಾರ್ಗದಲ್ಲಿಯೇ ತಡೆದೆವು. ಇಲ್ಲಿಯ ಸಮೀಪದಲ್ಲಿಯ ರಹಸ್ಯ ಸ್ಥಳದಲ್ಲಿ ಕೆಲವು ದಿನ ತಂಗಲು ಪರಿಪರಿಯಾಗಿ ಬೇಡಿಕೊಂಡೆವು. ಅವರು ಒಪ್ಪಲಿಲ್ಲ. ನಾನು ಆದಷ್ಟು ಬೇಗ ಕೂಡಲಸಂಗಮವನ್ನು ಸೇರಬೇಕು ಎನ್ನುವದೇ ಅವರ ಹಠವಾಗಿತ್ತು. ಕಡೆಗೆ ನೀಲಮ್ಮನವರನ್ನು ಕೆಲವು ದಿನ ಬಿಟ್ಟು ಹೋಗಲು ಒಪ್ಪಿದರು. ಕೂಡಲಸಂಗಮ ಸೇರಿದ ಮೇಲೆ ಅಪ್ಪಣ್ಣನನ್ನು ಕರೆಯಲು ಕಳಿಸುವದಾಗಿ ಒಲ್ಲದ ಮನದ ನೀಲಮ್ಮನವರನ್ನು ನಮ್ಮೊಡನೆ ಬಿಟ್ಟು ಪ್ರಭು ಮತ್ತು ಶಿವನೊಡನೆ ಹೊರಟುಬಿಟ್ಟರು.
ನೀಲಾಂಬಿಕೆಯವರನ್ನು ಸಮೀಪದ ಗವಿಯೊಂದರಲ್ಲಿ ಸುರಕ್ಷಿತವಾಗಿಟ್ಟು ನಮ್ಮ ಕಾಡಿನ ಯೋಧರೊಂದಿಗೆ ಕಾವಲಿಗೆ ನಿಂತೆವು. ಕಾಡಿನ ಮತ್ತು ಕಾಡಿನ ಯೋಧರ ಸಾಹಸದ ಪರಿಚಯವಿಲ್ಲದ ಯೋಧರ ತಂಡ ಬೆಳಗಿನ ಜಾವ ದಾಳಿ ಮಾಡಿತು. ನಮ್ಮ ಶೂರರ ಸಾಹಸದ ಪರಿಣಾಮ ಅಲ್ಲಿಗೆ ಬಂದವರೆಲ್ಲ ಹತರಾದರು. ಇಲ್ಲೇನಾಯಿತು ಎನ್ನುವದು ಕಲ್ಯಾಣದವರಿಗೆ ಗೊತ್ತಾಗಲಿಲ್ಲ ಮತ್ತು ನೀಲಾಂಬಿಕೆಯವರ ಗಮನಕ್ಕೂ ಬರಲಿಲ್ಲ. ನೀಲಾಂಬಿಕೆಯವರನ್ನು ಅಲ್ಲಿಂದ ದೂರದ ಗುಡ್ಡದ ಮೇಲಿನ ಸುರಕ್ಷಿತ ಸ್ಥಳಕ್ಕೆ ಕಳಿಸಿದೆವು. ಅಣ್ಣನವರ ಸಮಾಚಾರ ತಿಳಿಯಲು ನಾನು ನನ್ನ ಯೋಧರನೇಕರನ್ನು ಅವರನ್ನು ಹುಡುಕಲು ಕಳಿಸಿದೆ. ಅಕ್ಕ ನೀಲಾಂಬಿಕೆಯವರು ತಾವು ರಚಿಸಿದ ವಚನಗಳ ಪ್ರತಿಗಳನ್ನು ನಮ್ಮ ಹಾಡಿಯಲ್ಲಿ ಬಿಟ್ಟಿದ್ದರು. ಆ ವಚನಗಳಿವು.
ಅವರು ಕೊಟ್ಟ ವಚನಗಳನ್ನು ಚನ್ನಬಸವಣ್ಣ ತೆಗೆದುಕೊಂಡು ಕಣ್ಣಿಗೆ ಒತ್ತಿಕೊಂಡರು.

ಅಷ್ಟರಲ್ಲಿ ಶರಣರೆಲ್ಲ ಅಲ್ಲಿ ನೆರೆದಿದ್ದರು ಪ್ರತಿದಿನದ ವಾಡಿಕೆಯಂತೆ ಅನುಭವ ಮಂಟಪದ ಕಾರ್ಯಕ್ರಮದಲ್ಲಿ ಭಾಗವಹಿಸಲು.
**ಚನ್ನಬಸವಣ್ಣ:** ನೀಲಾಂಬಿಕೆಯವರು ಕ್ಷೇಮವಾಗಿದ್ದಾರೆ ಅವರು ರಚಿಸಿದ ವಚಗಳನ್ನು ಧರ್ಮನಾಯಕ ತಂದುಕೊಟ್ಟಿದ್ದಾರೆ.
**ಅಕ್ಕನಾಗಮ್ಮ:** ಅಣ್ಣ ಬಸವನ ಸಮಾಚಾರ ತಿಳಿಯುವ ಕುತೂಹಲ ಎಲ್ಲರಂತೆ ನನ್ನಲ್ಲಿಯೂ ಇದೆ. ಆ ವಿವರ ತಿಳಿದಮೇಲೆ ವಚನಗಳನ್ನು ಚನ್ನಬಸವ ಓದುತ್ತಾನೆ.

ಮನದ ಮಾತು:

ತನ್ನನ್ನು ತಾನು ರಕ್ಷಿಸಿಕೊಳ್ಳಲು ಆಕ್ರಮಣಕಾರರನ್ನು ಎದುರಿಸುವದು ಅನಿವಾರ್ಯ ಅದು ಪ್ರಕೃತಿ ನಿಯಮ. ನೀಲಾಂಬಿಕೆಯವರಿಗೆ ಮತ್ತು ಅಣ್ಣ ಬಸವಣ್ಣನವರಿಗೆ ಕೊಲ್ಲುವದು ಮಹಾಪರಾಧವೆನಿಸಿದ್ದರೂ ಅನಿವಾರ್ಯವಾಗಿ ಅವರನ್ನು ರಕ್ಷಿಸಲು ಅವರ ಮೇಲೆ ಅಕ್ರಮಣ ಮಾಡಿದವರನ್ನು ಎದುರಿಸಿ ಕಾದಾಡುವದು ಅವರ ಅಂಗರಕ್ಷಕರಿಗೆ ಅನಿವಾರ್ಯವಾಯಿತು. ಅದು ಸರಿಯಾದ ಕ್ರಮವೇ? ಈ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ.

**ಅಕ್ಕನಾಗಮ್ಮ:** ಮುಂದೆ ನಡೆದ ಘಟನೆಗಳನ್ನು ವಿವರಿಸಿ ಪ್ರಭು.
**ಪ್ರಭು:** ನಾನು ಮತ್ತು ಶಿವ ಅಣ್ಣನವರೊಡಗೂಡಿ ಹೊರಟು ದಟ್ಟಡವಿಯಲ್ಲಿ ಸಾಗಿದೆವು.
ಆ ಪ್ರದೇಶದ ಪೂರ್ಣ ಪರಿಚಯವಿದ್ದ ಶಿವ ನಮ್ಮನ್ನು ಸಾಯಂಕಾಲದ ಹೊತ್ತಿಗೆ ಒಂದು ಕೊಳದ ಸಮೀಪದ ಪ್ರಶಾಂತ ಸ್ಥಳಕ್ಕೆ ಕರೆದುಕೊಂಡು ಬಂದಿದ್ದ. ಆ ಕೆರೆಯ ಸುತ್ತಮುತ್ತಲು ಗುಡ್ಡ ಹಸಿರು ಮರಗಳಿಂದ ಆವೃತವಾಗಿತ್ತು. ಬಹಳ ಪ್ರಶಾಂತವಾದ ಸ್ಥಳವಾಗಿತ್ತು.
**ಶಿವ:** ಅಣ್ಣ ಅವರೇ ನಾವೀಗ ಸುರಪುರದ ಕಾಡಿನ ಅಂಚಿಗೆ ಬಂದಿದ್ದೇವೆ. ಇನ್ನು ಕೆಲವು ಸಮಯ ಸಾಗಿದರೆ ಬಯಲು ಪ್ರದೇಶ ಪ್ರಾರಂಭವಾಗುತ್ತದೆ. ಈ ಪ್ರದೇಶದಲ್ಲಿ ಅನೇಕ ಋಷಿ ಮುನಿಗಳು ತಪಸ್ಸು ಮಾಡುತ್ತಿದ್ದರು ಮತ್ತು ಈಗಲೂ ಅನೇಕರು ಸಾಧನೆ ಮಾಡುತ್ತಿದ್ದಾರೆ ಎನ್ನುವ ಮಾತು ಪ್ರಚಲಿತವಿದೆ. ನಾವಿಲ್ಲಿಯ ಒಂದು ಗವಿಯಲ್ಲಿ ವಿಶ್ರಾಂತಿ ಪಡೆದು ನಾಳೆ ಮುಂಜಾನೆ ಪ್ರವಾಸ ಮುಂದುವರೆಸೋಣ.
ಅಣ್ಣನವರಿಗೆ ಈ ಮಾತು ಸರಿ ಎನಿಸಿತು. ಸರಿ ಎಂದು ಒಪ್ಪಿದರು.
ನಾವು ಆ ಗುಡ್ಡದ ಓರೆಯಲ್ಲಿದ್ದ ಒಂದು ಗವಿಯನ್ನು ಪರೀಕ್ಷಿಸಿ ಸ್ವಚ್ಛಮಾಡುವಷ್ಟರಲ್ಲಿ ಅಣ್ಣನವರು
ತಿನ್ನಲು ಏನೂ ಬೇಡ ನೀವು ವಿಶ್ರಾಂತಿ ಪಡೆಯಿರಿ ಎಂದು ಆದೇಶಿಸಿ ಕೊಳದಲ್ಲಿ ಮಿಂದು ಬಂದು ಗವಿಯಲ್ಲಿ ಪೂಜೆಯಲ್ಲಿ ನಿರತರಾದರು.

ಈ ಎಲ್ಲ ವಿಷಯವನ್ನು ಮತ್ತು ನಾವಿರುವ ಸ್ಥಳವನ್ನು ನಮ್ಮ ನಾಯಕನಿಗೆ ತಿಳಿಸಿ ಕುದುರೆಗಳ ಮೈತೊಳೆದು ನೀರು ಕುಡಿಸಿ ಗವಿಯ ಪಕ್ಕದಲ್ಲಿ ಕಟ್ಟಿ ವಿಶ್ರಾಂತಿಗೆ ಜಾರಿದೆವು. ಕೆಲವು ದಿನಗಳ ಅವಿಶ್ರಾಂತ ಪಯಣದ ಪರಿಣಾಮವಾಗಿ ದಣಿದ ನಾವು ನಿದ್ದೆಗೆ ಜಾರಿದ್ದು ನಮ್ಮ ಮಹಾಪರಾಧ. ಪ್ರಭುವಿನ ಕಣ್ಣು ತುಂಬಿ ಬಂದಿತ್ತು.













**ಅಕ್ಕನಾಗಮ್ಮ:**

ನೀವು ತಂಗಿರುವದು ಬಹಳಮಾಡಿ ಶಾಂತಿಕೊಳ್ಳ. ಕೂಡಲಸಂಗಮದಿಂದ ಹೊರಟ ಶರಣರು ಅಲ್ಲಿ ತಂಗಿ ಮುಂದೆ ಸಾಗುವದು ವಾಡಿಕೆ. ಅಲ್ಲಿ ನೂರಾರು ಗವಿಗಳಿವೆ ಎಂದು ಹೇಳುತ್ತಾರೆ. ದಟ್ಟವಾದ ಮರಗಳಿರುವ ಆ ಪ್ರದೇಶ ಸುಂದರವಾಗಿದೆ ಎಂದು ಹೇಳುತ್ತಾರೆ. ಅಧ್ಯಯನ ಮಾಡುತ್ತಿದ್ದಾಗ ಬಸವ ತನ್ನ ಗೆಳೆಯರೊಂದಿಗೆ ಅಲ್ಲಿಗೆ ಹೋಗಿ ಬರುತ್ತಿದ್ದ. ನಾನು ಸಿಟ್ಟಿಗೆ ಬಂದರೆ ಬಸವ ನಾನು ಶಾಂತಿಕೊಳ್ಳಕ್ಕೆ ಹೋಗಿ ಸನ್ಯಾಸಿಯಾಗುತ್ತೇನೆ ಎಂದು ಹೆದರಿಸುತ್ತಿದ್ದ. ಗುರುಗಳು ಅವನನ್ನು ಮಂಗಳವೇಢೆಗೆ ಕಳಿಸಿ ಅವನ ಜೀವನ ಮಾರ್ಗ ತೋರಿಸುವ ತನಕ ಬಸವ ತಾನು ಸನ್ಯಾಸಿಯಾಗಿ ಸಾಧನೆ ಮಾಡಬೇಕು ಎನ್ನುವ ಮನದಾಸೆ ಹೊಂದಿದ್ದ. ಅವನ ಗುರುಗಳನೇಕರು ಈಗಲೂ ಅಲ್ಲಿ ಸಾಧನೆ ಮಾಡುತ್ತಿದ್ದಾರೆ ಎನ್ನುವ ನಂಬಿಕೆ ಇದೆ.




**ಗಂಗಾಂಬಿಕೆ:** ಅವರು ರಚಿಸಿದ ವಚನಗಳ ಪ್ರತಿಗಳನ್ನು ಆ ಕಡೆ ಇದ್ದ ತಮ್ಮ ಗುರುಗಳಿಗೆ ಕಳಿಸುತ್ತಿದ್ದರು. ಈಗ ಮನ ಹದವಾಗಿದೆ ಓದಿ ಎಲ್ಲವನ್ನು ಅರಿಯಲು ಮನ ಬಯಸುತ್ತಿದೆ ಆದರೇನು ಮಾಡುವದು

**ತೇಲಲೀಯದು ಗುಂಡು, ಮುಳುಗಲೀಯದು ಬೆಂಡು**

**ಇಂತಪ್ಪ ಸಂಸಾರಶರಧಿಯ ದಾಂಟಿಸಿ ಕಾಲಾಂತಕನೆ ಕಾಯೋ ಕೂಡಲಸಂಗಯ್ಯಾ**

--- ಅಣ್ಣಾ ಬಸವಣ್ಣಾ

ಜಂಜಾಟದಲ್ಲಿ ಸಿಲುಕಿರುವೆ ಎಂದು ಮೇಲಿನ ವಚನ ಹೇಳುತ್ತಿದ್ದರು..

**ಪ್ರಭು:** ರಾತ್ರಿ ಏನಾಯಿತು ಗೊತ್ತಿಲ್ಲ ನನ್ನ ತಲೆಗೆ ಬಲವಾದ ಪೆಟ್ಟು ತಗುಲಿ ಮೂರ್ಚೆಹೋದೆ. ಎಚ್ಚರವಾದಾಗ ನಮ್ಮ ನಾಯಕ ಮತ್ತು ಯೋಧರು ನನ್ನ ತಲೆಗೆ ಪಟ್ಟಿ ಹಾಕಿ ಉಪಚರಿಸುತ್ತಿದ್ದರು.

**ಪ್ರಭು:** ಏನಾಯಿತು ನನಗೆ ಗೊತ್ತಾಗಲಿಲ್ಲ ದಯಮಾಡಿ ತಿಳಿಸಿ ನನ್ನ ತಲೆಗೆ ಬಲವಾದ ಪೆಟ್ಟು ಬಿದ್ದದ್ದಷ್ಟೇ ನೆನಪು.

**ನಾಯಕ:** ನೀನು ಮೂರ್ಚೆ ಹೋಗುವ ಮೊದಲು ನಮಗೆ ಚೀರಿ ಸಂದೇಶ ಕಳಿಸಿದೆ. ನೀನೇನು ಹೇಳದಿದ್ದರೂ ನಿನ್ನ ಚೀರಾಟ ಅಲ್ಲಿಯ ಪರಿಸ್ಥಿತಿಯ ಅರಿವು ಮಾಡಿಕೊಟ್ಟಿತ್ತು. ನಾವೆಲ್ಲ ಬಂದು ನಿನ್ನ ಉಪಚಾರ ಮಾಡುತ್ತಿರುವೆವು.

**ಪ್ರಭು:** ಅಣ್ಣಾ ಅವರೆಲ್ಲಿ?

**ನಾಯಕ:** ಅವರು ಮತ್ತು ಶಿವ ಇಲ್ಲಿಲ್ಲ ಮತ್ತು ಅವರ ಕುದುರೆಗಳು ಕಾಣುತ್ತಿಲ್ಲ. ಹುಡುಕಲು ಎಲ್ಲ ಯೋಧರು ಮತ್ತು ಅಡವಿಯ ನಾಯಕನ ಭಂಟರು ಹೊಗಿದ್ದಾರೆ.

ನಾನು ಚೇತರಿಸಿಕೊಂಡು ಆ ಗವಿಯೊಳಗೆ ಹುಡುಕಾಡಿದೆ. ಅಲ್ಲಿ ಅಣ್ಣಾನವರ ಹೆಜ್ಜೆಗುರುತು ಬಿಟ್ಟರೆ ಬೇರೆ ಯಾವ ಗುರುತು ಇರಲಿಲ್ಲ. ಒಮ್ಮೆ ಅಣ್ಣಾ ಒಳಗೆ ಹೋದ ಮತ್ತು ಅಲ್ಲಿ ಕುಳಿತ ಮತ್ತು ಮರಳಿ ಹೊರಹೋದ ಕಾಲು ಹೆಜ್ಜೆ ಗುರುತುಗಳು ಮಾತ್ರವಿದ್ದವು.

**ಪ್ರಭು:** ಅಣ್ಣನವರ ಮೇಲೆ ದಾಳಿ ನಡೆದಿಲ್ಲ ಅವರು ನಿಧಾನವಾಗಿ ಹೊರಹೋಗಿದ್ದಾರೆ.
ಒಳಬಂದ ನಾಯಕನೂ ಎಲ್ಲ ಗಮನಿಸಿ
**ನಾಯಕ:** ನೀನು ಹೇಳುವದು ಸರಿ ಎಂದ.
ಆಗ ಬೆಳಕಾಗಿತ್ತು ಅಣ್ಣನ ಕುದುರೆ ಕಟ್ಟಿದ ಸ್ಥಳ ಪರಿಶೀಲನೆ ಮಾಡಿದೆವು.
**ನಾಯಕ:** ಅಣ್ಣನವರೊಬ್ಬರೇ ಇಲ್ಲಿಂದ ಕುದುರೆ ಏರಿ ಹೋಗಿದ್ದಾರೆ. ಇಲ್ಲಿ ಯಾವ ರಕ್ತದ ಕಲೆಗಳಿಲ್ಲ.
ನಿನಗೆ ಮತ್ತು ಶಿವನ ತಲೆಗೆ ಪೆಟ್ಟು ಬಿದ್ದ ಜಾಗೆಯಲ್ಲಿ ರಕ್ತದ ಕಲೆಗಳಿವೆ. ಅಲ್ಲಲ್ಲಿ ಯೊಧರ ಕೆಲವು ಹೆಜ್ಜೆಯ ಗುರುತುಗಳಿವೆ.
**ಪ್ರಭು:** ಅಂದರೆ ನಮ್ಮ ಮೆಲೆ ದಾಳಿಯಾಗುವ ಮೊದಲೇ ಅಣ್ಣನವರು ಇಲ್ಲಿಂದ ಒಂಟಿಯಾಗಿ ಹೊರಟು ಹೋಗಿರಬಹುದೇ?
**ನಾಯಕ:** ಆ ಸಾಧ್ಯತೆಯೂ ಇದೆ. ಪ್ರಥಮ ಕ್ಷಣದಿಂದ ಯಾರೂ ಅವರ ಜೊತೆ ಬರುವದು ಬೇಕಿರಲಿಲ್ಲ. ಅವರ ಸುತ್ತಮುತ್ತಲೂ ನಾವು ಕಾವಲಿಗಿದ್ದೇವೆ ಎನ್ನುವದು ಅವರ ಗಮನಕ್ಕೆ ಬಂದಿರಬೇಕು ಅದಕ್ಕಾಗಿ ಅವರು ಈ ರೀತಿ ಮಾಡಿರಲೂಬಹುದು.
**ಪ್ರಭು:** ಕಲ್ಯಾಣ ಯೊಧರು ಅವರ ಹತ್ಯೆ ಮಾಡಿರಬಹುದೇ?
**ನಾಯಕ:** ಅವರು ನಿಧಾನವಾಗಿ ಹೊರಬಂದು ಕುದುರೆಯೇರಿ ಸಾಗಿದ್ದಾರೆ. ಅಂದರೆ ಇಲ್ಲಿ ಅವರ ಮೇಲೆ ದಾಳಿಯಾಗಿಲ್ಲ. ಆದರೆ ಮುಂದೆ ಎಲ್ಲಾದರೂ ಅವರ ಮೆಲೆ ದಾಳಿಯಾಗಿರಬಹುದು. ನಾವೆಲ್ಲ ಕಡೆ ಹುಡುಕಬೇಕು.
ನನ್ನನ್ನು ನನ್ನ ಕುದುರೆಯ ಮೆಲೆ ಕೂಡ್ರಿಸಿ ತನ್ನ ಕುದುರೆಯೇರಿ ಹೊರಟ ನಾಯಕ ತನ್ನ ಪಡೆಯೊಡನೆ. ನಾನು ಅವರನ್ನು ಹಿಂಬಾಲಿಸಿದೆ.
**ಪ್ರಭು**: ಅಲ್ಲೆಲ್ಲ ಹುಡಕಾಡಿ, ಕೂಡಲಸಂಗಮದವರೆಗೂ ಹೋಗಿ ಬಂದರಾಯಿತು ಎಂದು ಆ ಕಡೆ ಹೊರಟೆವು. ಬೆಟ್ಟ ಇಳಿದು ಬಯಲು ಪ್ರದೇಶಕ್ಕೆ ಬಂದಾಗ ಒಬ್ಬ ಯಜಮಾನ ಸಿಕ್ಕ.
**ನಾಯಕ:** ಇಲ್ಲಿ ಯೊಧರು ಹೋಗಿದ್ದನ್ನು ಕಂಡಿರಾ?
**ಯಜಮಾನ:** ಹೌದು ಮುಂಜಾನೆ ಕುದುರೆಗಳು ಭರದಿಂದ ಬರುವದು ಗೊತ್ತಾಗಿ ನಾನು ಬಂಡೆಗಳ ಮರೆಯಲ್ಲಿ ಅಡಗಿ ಕುಳಿತೆ. ಕೆಲವು ಯೊಧರು ಒಬ್ಬ ಯುವಕನನ್ನು ಕುದರೆಯ ಮೇಲೆ ಎತ್ತಿ ಹಾಕಿಕೊಂಡು ಹೊರಟಿದ್ದರು ಆಗ ಅಲ್ಲಿಗೆ ಬಂದ ಬೇಡರ ಪಡೆ ಮತ್ತು ಅವರ ನಡುವೆ ಕಾದಾಟ ನಡೆಯಿತು. ಯೋಧರ ತಂಡದವರಲ್ಲಿ ಯಾರೂ ಬದುಕುಳಿಯಲಿಲ್ಲ. ಬೇಡರ ಪಡೆಯವರು ಗುಡ್ಡದಲ್ಲಿ ಮಾಯವಾದರು



ನಾನು ಆ ಜಾಗ ತೋರಿಸುತ್ತೇನೆ ಬನ್ನಿ ಎಂದು ನಮ್ಮನ್ನು ಕಲ್ಲು ಬಂಡೆಗಳಿದ್ದ ಜಾಗಕ್ಕೆ ಕರೆದುಕೊಂಡು ಹೋದ. ಅಲ್ಲಿದ್ದ ದೃಶ್ಯ ಘನಘೋರ ಕಾದಾಟದ ದರ್ಶನ ಮಾಡುತ್ತಿತ್ತು. ಅಲ್ಲಿದ್ದ ಅನೇಕ ದೇಹಗಳಲ್ಲಿ ಶಿವನ ದೇಹವೂ ಇತ್ತು. ಅವನ ಪಕ್ಕದಲ್ಲೇ ಅವನ ಕುದುರೆಯೂ ಸತ್ತು ಬಿದ್ದಿತ್ತು.

**ನಾಯಕ:** ಅಣ್ಣನವರನ್ನು ಹುಡುಕಲು ಶಿವನೊಡನೆ ಇಲ್ಲಿಗೆ ಬಂದಾಗ ಕಾಳಗ ನಡೆದಿದೆ.

**ಪ್ರಭು:** ಅಜ್ಜಾ, ಬಂದವರಲ್ಲಿ ಸಾದಾ ಉಡುಪಿನಲ್ಲಿ ಯರನ್ನಾದರೂ ಕಂಡಿರಾ?

**ಯಜಮಾನ:** ಇಲ್ಲ ಯೋಧರ ಉಡುಪಿನಲ್ಲಿ ಎಲ್ಲರೂ ಇದ್ದರು.

**ಧರ್ಮಾನಾಯಕ:** ನನ್ನ ಯೋಧರು ನಡೆದ ಘಟನೆಯ ವಿವರ ಕೊಟ್ಟ ಮೇಲೆ ಪ್ರಭು ಅವರು ನಡೆದ ವಿಷಯ ತಿಳಿಸಿದರು. ನಾನೇ ಆ ಸ್ಥಳಕ್ಕೆ ಬರುವದಾಗಿ ತಿಳಿಸಿದೆ.

ಅಲ್ಲಿ ವಿಧಿವಿಧಾನದಂತೆ ಮಡಿದವರ ಅಂತ್ಯಕ್ರಿಯೆ ಮಾಡಿ ಕೂಡಲಸಂಗಮದವರೆಗೆ ಹೋಗಿ ಬಂದೆವು. ಎಲ್ಲಿಯೂ ಅಣ್ಣ ಬಸವಣ್ಣನವರ ಸಮಾಚಾರ ಸಿಕ್ಕಲಿಲ್ಲ. ಅಲ್ಲಿ ಎಲ್ಲರೂ ಅಣ್ಣನವರು ಬರುವ ದಾರಿ ಕಾಯುತ್ತಿದ್ದಾರೆ. ಅಣ್ಣನವರ ಹುಡುಕಾಟ ಮಾಡಿ ಬಂದು ನೀಲಾಂಬಿಕೆಯವರಿಗೆ ವಿಷಯ ವರದಿ ಮಾಡಿದೆವು. ಸಮಾಧಾನಿಯಾಗಿದ್ದ ಅವರು ನಮ್ಮನ್ನು ಸಂತೈಸಿದರು..

ಅಪ್ಪಣ್ಣವರ ಜೊತೆಗೆ ನೀಲಾಂಬಿಕೆಯವರು ಕೂಡಲಸಂಗಮದ ಕಡೆಗೆ ಹೊರಟು ಹೋದರು. ನನ್ನ ಪಡೆ ಅವರ ಬೆಂಗಾವಲಿಗೆ ಹೋಗಿ ಬಂದಿತು. ಅವರು ಕೂಡಲಸಂಗಮದ ಬದಲು ತಂಗಡಗಿಗೆ ತೆರಳಿ ಅಲ್ಲಿ ಇರಲು ಪ್ರಾರಂಭಿಸಿದ ವಿವರ ತಿಳಿಸಿದರು. ಈ ಎಲ್ಲ ವಿಷಯ ತಿಳಿಸಲು ನಾವು ಇಲ್ಲಿಗೆ ಬಂದೆವು.

ಎಲ್ಲವನ್ನೂ ಆಲಿಸಿದ ಅಲ್ಲಿದ್ದವರೆಲ್ಲ ಮೌನಕ್ಕೆ ಶರಣಾದರು.

ಎಲ್ಲರ ಮನದ ದುಗುಡ ಕಡಿಮೆಯಾಗಲಿಲ್ಲ. ಮನದಲ್ಲಿದ್ದ ಯಾವ ಸಂದೇಹಗಳು ದೂರವಾಗಲಿಲ್ಲ.

**a. ಬಸವಾ ಬಸವಾ ಎಂಬ ಶಬ್ದವಡಗಿತ್ತು. ಬಸವ ಬಸವಾಯೆಂಬ ರೂಪು ನಿರೂಪಾಯಿತ್ತು.**

ಬಸವನ ಕಾಯವಳಿದು ನಿರಾಕುಳವಾಗಲು ಆನು ಬಸವಾ ಬಸವಾ ಬಸವಾಯೆಂದು ಬಯಲಾದೆನಯ್ಯಾ.-- ನೀಲಾಂಬಿಕಾ

b. ಅಯ್ಯಾ ಆರೂ ಇಲ್ಲದ ಅರಣ್ಯದಲ್ಲಿ, ನಾನಡಿಯಿಟ್ಟು ನಡವುತ್ತಿರ್ದೆನಯ್ಯಾ.

ಮುಂದೆ ಬರೆಬರೆ ಮಹಾಸರೋವರವ ಕಂಡೆ.

ಸರೋವರದೊಳಗೊಂದು ಹಿರಿಯ ಮೃಗವ ಕಂಡೆ. ಆ ಮೃಗಕ್ಕೆ ಕೊಂಬುಂಟು ತಲೆಯಿಲ್ಲ, ಬಾಯುಂಟು ಕಣ್ಣಿಲ್ಲ, ಕೈಯುಂಟು ಹಸ್ತವಿಲ್ಲ, ಕಾಲುಂಟು ಹೆಜ್ಜೆಯಿಲ್ಲ, ಒಡಲುಂಟು ಪ್ರಾಣವಿಲ್ಲ. ಇದ ಕಂಡು ನಾ ಹೆದರಿ, ಹವ್ವನೆ ಹಾರಿ, ಬೆದರಿ ಬಿದ್ದೆನಯ್ಯಾ. ಆಗೆನ್ನ ಹೆತ್ತತಾಯಿ ಬಂದು ಎತ್ತಿ ಕುಳ್ಳಿರಿಸಿ, ಚಿತ್ತಮೂಲಾಗ್ನಿಯ ಒತ್ತಿ ಉರುಹಿದರೆ, ಇವೆಲ್ಲವು ಸುಟ್ಟು ಬಟ್ಟಬಯಲಾದವು.

ಆ ಬಟ್ಟಬಯಲೊಳಗೆ ಅಡಿಯಿಟ್ಟು ನಡೆವಾಗ, ಮುಂದೆ ಇಟ್ಟಡಿಯ ಬಾಗಿಲೊಳ(ಗೆ ಮತ್ತೊಂದು ಮೃಗವ ಕಂಡೆ. ಆ ಮೃಗಕ್ಕೆ ತಲೆಯುಂಟು ಕೊಂಬಿಲ್ಲ, ಕಣ್ಣುಂಟು ಬಾಯಿಲ್ಲ, ಹಸ್ತವುಂಟು ಕೈಯಿಲ್ಲ, ಹೆಜ್ಜೆಯುಂಟು ಕಾಲಿಲ್ಲ, ಪ್ರಾಣವುಂಟು ಒಡಲಿಲ್ಲ.ಇದ ಕಂಡು ನಾ ಅಪ್ಪಿಕೊಳಹೋದಡೆ, ಮುಟ್ಟದ ಮುನ್ನವೆ ಎನ್ನನೆ ನುಂಗಿತ್ತು.

ನುಂಗಿದ ಮೃಗ ಮಹಾಲಿಂಗದಲ್ಲಿಯೆ ಅಡಗಿತ್ತು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ--- ಹಡಪದ ಅಪ್ಪಣ್ಣ

(ಈ ಬೆಡಗಿನ ವಚನದಲ್ಲಿ ಯಾವುದೋ ಗೂಢಾರ್ಥವಿದೆ ಅಣ್ಣನವರ ಜೊತೆಗಿದ್ದು ಆದ ಘಟನೆಗಳನ್ನು ಕಣ್ಣಾರೆ ಕಂಡವರು ಇವರೊಬ್ಬರೆ)

**ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ. ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ. ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ.** -- ಅಕ್ಕನಾಗಮ್ಮ

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗಲ್ಲಾ ಪಸರಿಸಿತ್ತಲ್ಲಾ !
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು ?
ಅಣ್ಣಾ, ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು
ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ.
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ.

**ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ.**

**ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ.**

**ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ ಪ್ರಾಣಲಿಂಗವಾಗಿ ಹೋದೆಯ ಸಂಗನಬಸವಣ್ಣಾ ?**/10

--ಅಕ್ಕನಾಗಮ್ಮ

ಪೇಠ ಅಮ್ಮಾಪುರ ಇದು ಯಾದಗಿರ ಜಿಲ್ಲೆಯ ಸುರಪುರ ಪಟ್ಟಣದಿಂದ 12 ಕಿ ಮೀ ದೂರದಲ್ಲಿರುವ ಗ್ರಾಮ. ಇಲ್ಲಿಂದ ತುಸು ದೂರದಲ್ಲಿ ಬೇನಾಲ ಪಕ್ಷಿಧಾಮವಿದ್ದು ಅದು ಕರ್ನಾಟಕದಲ್ಲಿಯ ದೊಡ್ಡ ಪಕ್ಷಿಧಾಮಗಳಲ್ಲಿ ಒಂದು ಮತ್ತು ಅದು ಪ್ರವಾಸಿಗರ ಆಕರ್ಷಣೆಯ ಸ್ಥಳವಾಗಿದೆ.

**ಬೊನಾಳ ಪಕ್ಷಿಧಾಮ:**

| | |
|---|---|
|  |  |
|  |  |
|  |  |

| | |
|---|---|
|  |  |

**ಖರೋಸಾ ಗವಿಯಿಂದ ಭೀಮಾ ನದಿ ತೀರದವರೆಗೆ ಶರಣರ ಪ್ರಯಾಣ:**

ಗಮನಿಸಿ:

ನಾವು ಒಂದು ಮುಖ್ಯವಾದ ಪ್ರಶ್ನೆಗೆ ಉತ್ತರಿಸಬೇಕಾಗಿದೆ.

ಶರಣರು ಕಲ್ಯಾಣ ತೊರೆಯುವ ಪ್ರಕ್ರಿಯೆ ಪ್ರಾರಂಭವಾದದ್ದು ಎಂದು?

ಯಾವ ಯಾವ ಕಡೆ ಶರಣರು ಪ್ರಯಾಣ ಬೆಳೆಸಿದರು?

ನಾನು ಈ ವಿವರಗಳ ಜೊತೆಗೆ ಅವುಗಳನ್ನು ಧೃಡಪಡಿಸುವ ಚಿತ್ರಗಳನ್ನು ಕೊಡುತ್ತಿರುವೆ.

ಚಿತ್ರಗಳಲ್ಲಿ ಬಹಳಷ್ಟು ವಿವರಗಳನ್ನು ಒದಗಿಸಲು ಸಾಧ್ಯವಿಲ್ಲವಾದರೂ ಚಿತ್ರ ನೋಡಿದಾಗ ನಾನು ಪ್ರಸ್ತುತ ಪಡಿಸಿದ ವಿಚಾರಗಳು ಸರಿ ಎಂದೆನಿಸುವವು.

**ಕಲ್ಯಾಣ ಕ್ರಾಂತಿಗೆ ಮೊದಲು:**

ನಮ್ಮ ದೇಶದಲ್ಲಿ ಕೆಲವು ಪರಂಪರೆಗಳು ಅನಾದಿ ಕಾಲದಿಂದ ನಡೆದುಕೊಂಡು ಬಂದಿವೆ. ಅದರಲ್ಲಿ ಕ್ಷೆತ್ರಸ್ಥಳಗಳಿಗೆ ಯಾತ್ರೆ ಮಾಡುವದು ಒಂದು. ಅದು ಸರಿಯಲ್ಲ ಎಂದು ಶರಣರು ಅನೇಕ ವಚನಗಳ ಮೂಲಕ ತಿಳಿಹೇಳಿದ್ದಾರೆ. ಒಂದು ವಚನ ಇಲ್ಲಿದೆ.

ಪುಣ್ಯಕ್ಷೇತ್ರಯಾತ್ರೆ ಪುಣ್ಯತೀರ್ಥಸ್ನಾನವ ಮಾಡಬೇಕೆಂಬಿರಿ.
ಮರ್ತ್ಯಲೋಕದ ಮಹಾಗಣಂಗಳು ನೀವು ಬಲ್ಲಾದರೆ ಪೇಳಿ, ಅರಿಯದಿದ್ದರೆ ಕೇಳಿರಯ್ಯ.
ಶ್ರೀಗುರುಕಾರುಣ್ಯವ ಹಡದು ಲಿಂಗಾಂಗಸಂಬಂಧಿಯಾಗಿ ಸರ್ವಾಂಗಲಿಂಗಮಯವಾದ
ಒಬ್ಬ ಶಿವಭಕ್ತನ ದರ್ಶನವಾದವರಿಗೆ ಅನಂತಕೋಟಿ ಪುಣ್ಯ ಫಲದೊರಕೊಂಬುವದು.
ಅದೆಂತೆಂದೊಡೆ : ಆತನ ಮಂದಿರವೇ ಶಿವಲೋಕ. ಆತನ ಕಾಯವೇ ಸತ್ಯಲೋಕ.
ಆತನ ಅಂಗದ ಮೇಲೆ ಇರುವ ಲಿಂಗವೇ ಅನಾದಿಪರಶಿವಲಿಂಗ, ಆತನ ಅಂಗಳವೇ ವಾರಣಾಸಿ.
ಅಲ್ಲಿ ಮುನ್ನೂರಾ ಅರುವತ್ತುಕೋಟಿ ಕ್ಷೇತ್ರಂಗಳಿರುವವು. ಆತನ ಬಚ್ಚಲವೇ ಗಂಗಾತೀರ.
ಅಲ್ಲಿ ಮುನ್ನೂರರುವತ್ತುಕೋಟಿ ತೀರ್ಥಂಗಳಿರ್ಪವು. ಇಂತಪ್ಪ ನಿರ್ಣಯವನು

ಸ್ವಾನುಭಾವಗುರುಮುಖದಿಂ ತಿಳಿದು,

ವಿಚಾರಿಸಿ ಕೊಳ್ಳಲರಿಯದೆ ತೀರ್ಥಕ್ಷೇತ್ರವೆಂದು ತಿರುಗುವ ವ್ರತಭ್ರಷ್ಟ ಅನಾಚಾರಿ

ಮೂಳಹೊಲೆಯರಿಗೆ ನಾನೇನೆಂಬೆನಯ್ಯ ಕಾಡನೊಳಗಾದ ಶಂಕರಪ್ರಿಯ

ಚನ್ನಕದಂಬಲಿಂಗ ನಿರ್ಮಾಯಪ್ರಭುವೆ. / 282

--- ಕಾಡಸಿದ್ಧೇಶ್ವರ.

"ಒಬ್ಬ ಶಿವಭಕ್ತನ ದರ್ಶನವಾದವರಿಗೆ ಅನಂತಕೋಟಿ ಪುಣ್ಯ ಫಲ ದೊರಕೊಂಬುದು" ಎನ್ನುವದನ್ನು ಒಪ್ಪಿಕೊಂಡ ಹಲವರು ಕಲ್ಯಾಣಕ್ಕೆ ಬರುವ ಯಾತ್ರಿಗಳಿಗಾಗಿ ಅಲ್ಲಲ್ಲಿ ಮಾರ್ಗಮಧ್ಯದಲ್ಲಿ ವಸತಿ ನಿರ್ಮಿಸಿ ಅಲ್ಲಿ ದಾಸೋಹ ವ್ಯವಸ್ಥೆ ಮಾಡಿದರು. ಪ್ರತಿ ಸೋಮವಾರ ಮತ್ತು ಹಬ್ಬದ ದಿನಗಳಲ್ಲಿ ಧಾರ್ಮಿಕ ಆಚರಣೆಗಳ ಜೊತೆಗೆ ವಚನ ಅಧ್ಯಯನ ಮತ್ತು ಪ್ರಚಾರ ನಡೆಯಲಾರಂಭಿಸಿತು ಕೆಲವು ಕಡೆ ಶರಣರು ಅಲ್ಲಿಯೇ ನೆಲೆಯಾಗಿ ನಿಂತು ಅಲ್ಲಿ ಶರಣ ಸಂಸ್ಕೃತಿ ನೆಲೆಯಾಗುವಂತೆ ಮಾಡಿದರು ಕಲ್ಯಾಣವೂ ಒಂದು ಕ್ಷೇತ್ರಸ್ಥಳವಾಗಿ ಪ್ರಸಿದ್ಧಿಯಾಯಿತು

ಇಂದಿಗೂ ಶ್ರೀಶೈಲ್, ಉಳವಿ, ಸೌದತ್ತಿ ಮೊದಲಾದ ಸ್ಥಳಗಳಿಗೆ ಗುಂಪುಗುಂಪುಗಳಲ್ಲಿ ಯಾತ್ರೆ ಮಾಡುವವರಿಗಾಗಿ ದಾರಿಯಲ್ಲಿ ಉಳಿಯುವ ಮತ್ತು ಪ್ರಸಾದದ ವ್ಯವಸ್ಥೆ ಇರುವದು ನಮಗೆಲ್ಲ ಗೊತ್ತಿದೆ.

ಆಧ್ಯಾತ್ಮಿಕ ಕಾರಣವಲ್ಲದೆ ಕಾಯಕ ಅರಸಿಕೊಂಡು ಮತ್ತು ಪ್ರವಾಸ ಮಾಡಿ ಶರಣರ ದರ್ಶನ ಪಡೆದು ಧನ್ಯರಾಗಲು ದೇಶದ ಎಲ್ಲ ಭಾಗದಿಂದ ಜನ ಬರುತ್ತಿದ್ದರು. ಅಣ್ಣ ಬಸವಣ್ಣ ಮತ್ತು ಶರಣರನ್ನು ಭೆಟ್ಟಿಯಾಗಿ ಕೆಲವರು ಅವರ ಶಿಷ್ಯರಾಗಿ ಕಾಯಕದಲ್ಲಿ ನಿರತರಾಗುತ್ತಿದ್ದರೆ ಉಳಿದವರು ಮರಳಿ ಹೋಗುತ್ತಿದ್ದರು.

ಶರಣರು ಕಲ್ಯಾಣದಲ್ಲಿ ನಡೆಯುತ್ತಿದ್ದ ರಾಜಕೀಯ ಬದಲಾವಣೆಗಳ ಪೂರ್ಣ ಅರಿವುಳ್ಳವರಾಗಿದ್ದರು. ಸಂಕಟದ ಪರಿಸ್ಥಿತಿ ತಲೆದೋರಬಹುದೆಂಬ ಸಂಶಯ ಬಂದ ತಕ್ಷಣ ಶರಣರಿಗೆ ಮರಳಲು ಸೂಚಿಸಿದರು.

ಅದು ಸಾಮಾನ್ಯವಾಗಿ ಪ್ರವಾಸ ಕಾಲವಾದದ್ದರಿಂದ ಈ ವಿಷಯ ಯಾರ ಗಮನಕ್ಕೂ ಬರಲಿಲ್ಲ.

ಚಿತ್ರ ಗಮನಿಸಿದಾಗ ಬಸವಕಲ್ಯಾಣದ ಶಿವಪುರದಿಂದ ವಿವಿಧ ದಿಕ್ಕುಗಳಲ್ಲಿ ಬೇರೆ ಬೇರೆ ಕಡೆ ಶರಣರು ಸಾಗಿದ ದಾರಿಗಳ ಸ್ಪಷ್ಟ ವಿವರ ಸಿಗುತ್ತದೆ




ಅಕ್ಕನಾಗಮ್ಮನವರ ನೇತೃತ್ವದಲ್ಲಿ ಉಳವಿಗೆ ಹೊರಡುವದಿಕ್ಕಿಂತಲೂ ಮೊದಲು ಅನಂತ ಸಹಸ್ರ ಕಾಯಕಯೋಗಿಗಳು ಕಲ್ಯಾಣ ತೊರೆದು ತಮ್ಮ ಸ್ಥಾನವನ್ನು ವಚನಗಳ ಜೊತೆಗೆ ಸುರಕ್ಷಿತವಾಗಿ ತಲುಪಿದರು ಎಂದು ಹೇಳಬಹುದು. ಕಲ್ಯಾಣದಿಂದ ಅನೇಕ ಶರಣರು ದೇಶದ ವಿವಿಧ ಕಡೆ ತಮ್ಮ ಪಯಣ ಕೈಕೊಂಡರು ಎನ್ನುವದನ್ನು ಈ ಚಿತ್ರ ವಿವರಿಸುತ್ತದೆ.

ಇಲ್ಲಿಂದ ಅವರು ಮಹಾರಾಷ್ಟ್ರದ ಮಧ್ಯಭಾಗ, ತೆಲಂಗಾಣ, ಗುಜರಾತ ಮತ್ತು ಮಧ್ಯಪ್ರದೇಶದ ಕಡೆ ಗುಂಪಿನಲ್ಲಿ ಪಯಣಿಸಿದರು.

ಇಲ್ಲಿಯೂ ಸಹ ಸುಮಾರು ಇಪ್ಪತ್ತು ಕಿ ಮೀ ಗಳ ಅಂತರದಲ್ಲಿ ಮೂರ್ನಾಲ್ಕು ಮಹದೇವ ಮಂದಿರಗಳು ಕೆರೆಯ ಸನಿಹದಲ್ಲಿದ್ದು ಅವು ಶರಣರು, ಯೋಧರು ಮತ್ತು ಭಕ್ತರು ವಾಸ ಮಾಡಿದ ಸ್ಮರಣೆಯ ಕುರುಹುಗಳು ಎನ್ನುವದನ್ನು ಗಮನಿಸಬಹುದು.




ಇದು ಶರಣ ಪ್ರಮುಖರ ದೂರದೃಷ್ಟಿ ಮತ್ತು ರಾಜಕೀಯ ಚತುರತೆಯ ನಿದರ್ಶನ.

ಹೋ ಹೋ ಗುರುವೆ ನಿಮ್ಮ ಚಮ್ಮಾವುಗೆಯ ಬಂಟ ನಾನಾಗಿರಲು ಅಂಜುವರೆ ?
ಅಳುಕುವರೆ ?
ಸಂಗಮನಾಥ ಬಂದು, ನಿಮ್ಮ ಮನವ ನೋಡಲೆಂದು ತಮ್ಮ ಮನವನಡ್ಡಲಿಕ್ಕಿದನೊಂದು ಲೀಲೆಯಿಂದ.
ಅದು ನಿಮಗೆ ಸಹಜವಾಗಬಲ್ಲುದೆ ?
ಮಂಜಿನ ಮೋಹರ, ರವಿಯ ಕಿರಣವ ಕೆಡಿಸಲಾಪುದೆ ?
ನಿಮ್ಮ ನೆನೆವರಿಗೆ ಸಂಸಾರವಿಲ್ಲೆಂದು ಶ್ರುತಿಗಳು ಹೊಗಳುತ್ತಿರಲು ನಿಮ್ಮ ಅರುಹಿಂಗೆ ಕೇಡುಂಟೆ ?
ಕೂಡಲಚೆನ್ನಸಂಗನ ಶರಣರ ಕರೆವಡೆ ಎನ್ನ ಮನವೆಂಬ ಚಮ್ಮಾವುಗೆಯ ಮೆಟ್ಟಿ ನಡೆಯಾ ಸಂಗನಬಸವಣ್ಣ / 1730

--- ಚನ್ನಬಸವಣ್ಣ

ಶರಣರು ಯಾವ ನಿರ್ಧಾರಗಳನ್ನೂ ಅವಸರವಾಗಿ ತೆಗೆದುಕೊಳ್ಳಲಿಲ್ಲ. ಸಾಧ್ಯವಾದಷ್ಟು ಜೀವಹಾನಿಯಾಗದಂತೆ ಕ್ರಮ ಕೈಕೊಂಡರು. ಆದರೂ ಸಂಪ್ರದಾಯವಾದಿಗಳ ಕುತಂತ್ರ ಮತ್ತು ಮಹಾರಾಜ ಸೋಮೇಶ್ವರನ ನಿರ್ಧಾರ ನಿರಪರಾಧಿ ಸಾಮಾನ್ಯ ಕಾಯಕಯೋಗಿಗಳ ಮಾರಣಹೊಮಕ್ಕೆ ಕಾರಣವಾಯಿತು. ಪರಸ್ಥಿತಿ ತಿಳಿಗೊಳ್ಳುವವರೆಗೆ
ನಮಗೆ ಎರಡು ವಿಚಾರಗಳು ಸ್ಪಷ್ಟವಾಗುತ್ತವೆ

1. ಶರಣರ ಜನಪ್ರೀಯತೆ ಶರಣರನ್ನು ಕಾಪಾಡಿತು. ಅನೇಕ ಕಾಯಕಯೋಗಿಗಳು ಅಲ್ಲಲ್ಲಿ ನೆಲೆ ಕಂಡುಕೊಂಡರು.
2. ಶರಣರು ಪಲಾಯನ ಮಾಡಲಿಲ್ಲ ಬದಲಾಗಿ ಶರಣ ಸಂಸ್ಕೃತಿ ರಕ್ಷಣೆ ಮತ್ತು ಪ್ರಸಾರ ಮಾಡಿದರು.

ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,

ವಿಶ್ವಾಸವೆಂಬ ಬತ್ತ ಒಲಿದು ಉಂಡು

ಸುಖಿಯಾಗಿರಬೇಕೆಂದ ಕಾಮಬಿಮ ಜೀವಧನದೊಡೆಯ./1733

--- ಒಕ್ಕಲಿಗ ಮುದ್ದಣ್ಣ

ಶರಣರು ವಚನಗಳನ್ನು ಉಳಿಸಲು ಬೆಳೆಸಲು ತೆಗೆದುಕೊಂಡ ಕ್ರಮಗಳನ್ನು ಅಧ್ಯಯನ ಮಾಡುತ್ತಿರುವಾಗ ಯಾಕೋ ನನಗೆ ಜಪಾನಿನ ಕೃಷಿ ವಿಜ್ಞಾನಿ "ಫುಕುವೊಕ" ಮತ್ತು ಅವರ ಪುಸ್ತಕ "ಒಂದು ಹುಲ್ಲಿನ ಕ್ರಾಂತಿ" ನೆನಪಿಗೆ ಬಂತು.

ಪ್ರಾರಂಭದಲ್ಲಿ ಇವೆರಡು ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳೆನಿಸಿದರೂ ಇವುಗಳು ಯಾವದೋ ಒಂದು ಸಾಮಾನ್ಯ (Common) ವಿಷಯವನ್ನು ಪ್ರತಿಪಾದಿಸುತ್ತವೆ ಎನಿಸಿತು




ಸಾಮಾನ್ಯವಾಗಿ ಭತ್ತವನ್ನು ಸಸಿ ಮಾಡಿ ತಯಾರಿಸಿ ಬಿತ್ತನೆ ಮಾಡಿ ಅದು ಪೈರಾಗಿ ಬೆಳೆಯುತ್ತಿದ್ದಂತೆಯೇ ಕಿತ್ತು ಗದ್ದೆಯಲ್ಲಿ ನಾಟಿ ಮಾಡುವುದು ಹಿಂದಿನಿಂದಲೂ ನಡೆದು ಬಂದ ಸಾಂಪ್ರದಾಯಿಕ ಕೃಷಿ ವಿಧಾನ (ಚಿತ್ರ ನೋಡಿ). ಇದಕ್ಕಾಗಿ ಸಮಯ ಬೇಕು ಮತ್ತು ಜನ ಬೇಕು.
ಪರಿಶುದ್ಧ ಬೀಜಗಳನ್ನು ಫಲವತ್ತಾದ ಭೂಮಿಯಲ್ಲಿ ಚಲ್ಲಿದರೆ ಸಾಕು ಅವು ತಾವಾಗಿ ಬೆಳೆದು ಫಲ ಕೊಡುತ್ತವೆ ಎಂದು "ಫುಕುವೊಕ" ಪ್ರತಿಪಾದಿಸಿದ್ದು ಈ ಶತಮಾನದಲ್ಲಿ.
ಹನ್ನೆರಡನೆಯ ಶತಮಾನದಲ್ಲಿ ಶರಣರು ವಚನ ಪ್ರಸಾರ ಹಾಗೂ ರಕ್ಷಣೆಗೆ ಅನುಸರಿಸಿದ್ದೂ ಇದೇ ಪದ್ಧತಿ. ಕಲ್ಯಾಣದ ಅನುಭವಮಂಟಪದಲ್ಲಿ ವಿಮರ್ಶೆಗಳೊಳಪಟ್ಟ ತತ್ವಗಳನ್ನು ಒಳಗೊಂಡ ವಚನಗಳನ್ನು ದೇಶದ ಎಲ್ಲಾ ಭಾಗದಲ್ಲಿ ತಲುಪಿಸುವ (ಚಲ್ಲುವ) ಕೆಲಸವನ್ನು ಕಲ್ಯಾಣದಿಂದ ಹೊರಟ ಶರಣರು ಸಮರ್ಪಕವಾಗಿ ಮಾಡಿದರು.
ಅಲ್ಲಲ್ಲಿ ತಲುಪಿದ ತತ್ವಗಳು ಕೆಲವು ಕಾಲ ಕಾಲಗರ್ಭದಲ್ಲಿ ಮರೆಯಾಗಿದ್ದರೂ ಆಮೇಲೆ ಮೊಳೆತು ಗಿಡವಾಗಿ ಬೆಳೆದು ಫಲ ಕೊಡಲು ಪ್ರಾರಂಭಿಸಿದವು. ಅದಕ್ಕೆ ಅನೇಕ ಶತಮಾನಗಳ ವರೆಗೆ ಕಾಯಬೇಕಾದರೂ. ಅಂದು ಶರಣರು ಕಂಡ ಕನಸು ನನಸಾಗಲು ಇನ್ನೂ ಕೆಲವು ಕಾಲ ಕಾಯಬೇಕು ಅಷ್ಟೇ.
ನಾನು ಶರಣರು ಸಂಚರಿಸಿದ ಪ್ರದೇಶದಲ್ಲಿರುವ ಕೆಲವು ಮಹಾದೇವ ಮಂದಿರಗಳಿರುವ ಸ್ಥಾನಗಳನ್ನು Google map" ಮೂಲಕ ಗುರುತಿಸಿರುವೆ. ಅದು ರಾತ್ರಿ ಆಕಾಶದಲ್ಲಿ ಗೋಚರಿಸುವ ನಕ್ಷತ್ರಗಳಂತೆ ಗೋಚರಿಸುತ್ತವೆ. ನಕ್ಷತ್ರಗಳಲ್ಲಿ ಕೆಲವು ಆಕಾರಗಳು ಕಾಣುವಂತೆ ಇಲ್ಲಿ ಕೆಲವು ದಾರಿಗಳು ಕಾಣಲಾರಂಭಿಸಿದವು.

ಕಲ್ಯಾಣದಿಂದ ಉಳವಿಗೆ ಹೋಗಿ ನೆಲಸುವದಷ್ಟೇ ಶರಣರ ಉದ್ದೇಶವಾಗಿರಲಿಲ್ಲ
ಅವರ ಪ್ರವಾಸದ ಉದ್ದೇಶ

1. ಶರಣ ಕಾಯಕಯೋಗಿಗಳನ್ನು ಅವರು ಸಾಗುವ ದಾರಿಯಲ್ಲಿ ಮತ್ತು ಅನತಿ ದೂರದಲ್ಲಿಯ ಗ್ರಾಮಗಳಲ್ಲಿ ಅಲ್ಲಿಯ ಅವಶ್ಯಕತೆಗೆ ತಕ್ಕಂತೆ ನೆಲೆಸುವಂತೆ ಮಾಡುವದು. ಅವರಿಗೆ ಆಶ್ರಯ ಒದಗಿಸಿದ್ದಲ್ಲದೇ ಅಲ್ಲಿ ಶರಣ ತತ್ವ ಪ್ರಚಾರ ಆಗುವಂತೆ ಮಾಡುವದು.
2. ಅಲ್ಲಿಯ ಯಾವುದೇ ಊರಿಗೆ ಹೋಗಿ ಅಲ್ಲಿ ಎಲ್ಲ ತರಹದ ಕಾಯಕಯೋಗಿಗಳು ತಮ್ಮ ಹಣೆಯ ಮೇಲೆ ವಿಭೂತಿ ಧರಿಸಿ ತಮ್ಮ ಕಾಯಕದಲ್ಲಿ ನಿರತನಾಗಿರುವದು ಕಂಡುಬರುತ್ತದೆ.
3. ಗಳಿಗೆಗೊಮ್ಮೆ "ಬಸವ, ಬಸವಾ" ಎನ್ನುವ ಬಸವನಾಮ ಉಸಿರಾಗಿರುವ ಜನ ಹೆಜ್ಜೆಗೊಮ್ಮೆ ಸಿಗುತ್ತಾರೆ.
4. ಅಲ್ಲಲ್ಲಿ ನೆಲೆಸಿ ಶರಣ ತತ್ವ ಪ್ರಚಾರಮಾಡಿದ ಕಾಯಕಯೋಗಿಗಳ ಹೆಸರಿನಲ್ಲಿ ಅನೇಕ ಗುಡಿಗಳು ಮತ್ತು ಮಠಗಳು ಎಲ್ಲ ಕಡೆ ಕಂಡುಬರುತ್ತವೆ. ಆ ಭಾಗದಲ್ಲಿ ನಡೆಯುವ ಯಾವುದೇ ಶರಣರ ಕಾರ್ಯಕ್ರಮಗಳಿಗೆ ಸಾವಿರಾರು ಭಕ್ತರು ಸೇರುವದು ಸಹಜವಾಗಿದೆ.
5. ಜನಮನದಲ್ಲಿ ಶರಣರ ಬಗ್ಗೆ ಮಹಾರಾಜ ಮೂಡಿಸಿದ ತಪ್ಪು ಅಭಿಪ್ರಾಯ ನಿವಾರಿಸುವದು.
6. ಈಗಾಗಲೇ ಅಲ್ಲಲ್ಲಿ ಕಳಿಸಿಟ್ಟಿದ್ದ ವಚನಗಳ ಕಟ್ಟುಗಳಲ್ಲಿಯ ವಚನಗಳ ಪಠಣ ಮಾಡಿ ಅವು ಜನಮನದಲ್ಲಿ ನೆಲೆಸುವಂತೆ ಮಾಡುವದು.

ಹೀಗೆ ಇದೊಂದು ಶರಣ ಸಂಸ್ಕೃತಿಯ ಪ್ರಚಾರ ಕಾರ್ಯಕ್ರಮವಾಗಿತ್ತು. ಈಗ ಅವರು ಸಂಚರಿಸುತ್ತಿದ್ದ ಪ್ರದೇಶದಲ್ಲಿಯ ಜನ ಬಸವಣ್ಣನವರ ಆಡಳಿತವನ್ನು ಶರಣರ ಜೀವನವನ್ನು ಬಹಳ ಹತ್ತಿರದಿಂದ ಕಂಡಿದ್ದರು. ಯೋಧರು ಮತ್ತು ಆಡಳಿತಗಾರರು ಅವರ ಅಪಾರ ಅಭಿಮಾನಿಗಳಾಗಿದ್ದರಿಂದ ಅವರು ಹೋದಲ್ಲೆಲ್ಲ ಜನಮನ್ನಣೆ ಮತ್ತು ಸಹಾಯ ಸಿಗುತ್ತಿತ್ತು.
ಕಲ್ಯಾಣದಿಂದ ಬಂದ ಯೋಧರ ತಂಡವು ಸಹಾ ಮಹಾರಾಜನ ಕಣ್ಣೊರೆಸುವ ತಂತ್ರಕ್ಕೆ ಮೊರೆಹೋಗಿದ್ದರು. ಇಲ್ಲಿ ನಡೆದ ಯಾವ ಚಟವಟಿಕೆಗಳ ವಿವರ ಕಲ್ಯಾಣದವರೆಗೆ ತಲುಪುತ್ತಿರಲಿಲ್ಲ.
ಅಲ್ಲಿ ಮುಟ್ಟಿದ್ದು ಶರಣರನ್ನು ಅಟ್ಟಿಸಿಕೊಂಡು ಹೋದ ಕಲ್ಯಾಣ ಯೋಧರ ಕಾಲ್ಪನಿಕ ಸಾಹಸ ಕಥೆಗಳು. ಆ ವಿವರಗಳನ್ನೇ ಇತಿಹಾಸಕಾರರು ಮತ್ತು ಅನೇಕ ಸಾಹಿತಿಗಳು ವಿವರಿಸಿದ್ದಾರೆ. ಅದನ್ನೇ ನಾವು ನಂಬಿ ಮುಂದಿನ ಜನಾಂಗಕ್ಕೆ ತಲುಪಿಸುತ್ತಿದ್ದೇವೆ.
ಶರಣರು ಪ್ರವಾಸ ಮಾಡಿದ ಈ ಭಾಗದ (ಕಲ್ಯಾಣದಿಂದ ಕೃಷ್ಣಾ ನದಿಯವರೆಗೆ ಹರಡಿದ ವಿಶಾಲವಾದ ಭೂಪ್ರದೇಶ. (ಈಗಿನ ಮಾಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಬಹು ಭಾಗ) ಸುತ್ತ ಮುತ್ತ ಹತ್ತು ಯೋಜನದವರೆಗಿನ ಎಲ್ಲ ನಗರ

ಮತ್ತು ಗ್ರಾಮಗಳಲ್ಲಿ ಶರಣರು ನೆಲೆಯೂರಲು ಸಹಕಾರಿಯಾಯಿತು. ಶರಣ ಪರಂಪರೆ ನಾಶವಾಗದೇ ನೆಲೆಯೂರುವಂತೆ ಮಾಡಿದ್ದೇ ಈ ಪ್ರವಾಸ. ಈ ಭಾಗದಲ್ಲಿ ಈಗ ನೂರಕ್ಕೆ ಹತ್ತಕ್ಕಿಂತ ಹೆಚ್ಚು ಜನ ಲಿಂಗಾಯತ ಜನಸಮುದಾಯ ಅಲ್ಲಿರುವದು ಶರಣರ ಆ ಪ್ರಯತ್ನದ ಫಲ. ಈ ಶರಣರ ಪರಿಶ್ರಮ ಹಲವು ಶತಮಾನಗಳ ನಂತರವೂ ಶರಣ ತತ್ವಗಳು ನೆಲೆಯೂರಲು ಸಹಕಾರಿಯಾಯಿತು. ಈ ಭಾಗದ ಯಾವುದೇ ಹಳ್ಳಿಗೆ ಹೋಗಿ ಅವರ ಮಾತೃಭಾಷೆ ಯಾವುದೇ ಆಗಿರಲಿ ಕೆಲವರು ನೂರಾರು ವಚನಗಳನ್ನು ಹೇಳುತ್ತಾರೆ. ಅಲ್ಲಿರುವ ಅನೇಕ ವಚನಗಳು ಜನಮಾನಸದಲ್ಲಿ ನೆಲೆಸಿದ್ದು ನಮಗೆಲ್ಲ ಗೊತ್ತಾಗುತ್ತದೆ.
ಕೃಷ್ಣಾ ನದಿ ದಾಟುವವರೆಗೆ ಈ ಸಾಂಸ್ಕೃತಿಕ ಯಾತ್ರೆ ಅವ್ಯಾಹತವಾಗಿ ಸಾಗಿತ್ತು. ಹೀಗೆ ಶರಣರು ಪಲಾಯನ ಮಾಡಲಿಲ್ಲ ಬದಲಾಗಿ ಎಲ್ಲ ಕಡೆಗೆ ವಚನಗಳನ್ನು ತಲುಪಿಸಿ ಎಲ್ಲ ಕಾಯಕಯೋಗಿಗಳಿಗೆ ನೆಲೆ ಒದಗಿಸುವ ಕಾರ್ಯ ಮಾಡಿದರು. ಬರಿ ವಚನಗಳನ್ನಷ್ಟೇ ಅಲ್ಲ ಒಂದು ಲಕ್ಷ ತೊಂಬತ್ತಾರು ಸಾವಿರ ಕಾಯಕಯೋಗಿಗಳಿಗೆ ರಕ್ಷಣೆಕೊಡುವ ಮತ್ತು ನೆಲೆ ಒದಗಿಸುವ ಮಹಾನ್ ಕಾರ್ಯ ನಿರ್ವಹಿಸಿದ ರೋಚಕ ಕಥೆ ನಾವು ಬರೆಯಬೇಕಾಗಿದೆ.
ಕಲ್ಯಾಣದಿಂದ ಹೊರಟ ಶರಣರು ಸುರಕ್ಷಿತವಾಗಿ ಬೀಮಾ ನದಿ ದಾಟಿ ಮೊದಲ ಹಂತದ ಪ್ರಯಾಣ ಸರಳವಾಗಿ ಸಂಕ್ಷಿಪ್ತವಾಗಿ ವಿವರಣೆ ಮಾಡಲು ನನಗೆ 100 ದಿನ 100 ಲೇಖನ ಬರೆಯಬೇಕಾಯಿತು. ಅದರೂ ಬರಿ ಊರುಗಳ ವಿವರಣೆ ಕೊಡಲು ಮಾತ್ರ ಸಾಧ್ಯವಾಯಿತು ಹೆಚ್ಚಿನ ವಿವರಣೆ ಕೊಡಲಾಗಲಿಲ್ಲ.
ಇಲ್ಲವನ್ನು ವಿವರಿಸುವ ವ್ಯವಧಾನವಾಗಲೀ ಮತ್ತು ಮನಸ್ಸಾಗಲೀ ಇಲ್ಲದ ಇತಿಹಾಸಕಾರರು ಒಂದೇ ವಾಕ್ಯದಲ್ಲಿ ಕೊಟ್ಟ ಮತ್ತು ನಾವೆಲ್ಲ ಎಂಟು ನೂರು ವರ್ಷಗಳವರೆಗೆ ಒಪ್ಪಿಕೊಂಡು ಸಮಾಧಾನ ಪಟ್ಟ ವಿವರಣೆ ಇಲ್ಲಿದೆ.
"**ಶರಣರು ತಲೆಯ ಮೆಲೆ ವಚನ ಕಟ್ಟುಗಳನ್ನು ಇಟ್ಟುಕೊಂಡು ಕುದುರೆಯ ಮೇಲೆ ಬೆನ್ನಟ್ಟಿ ಬರುವ ಯೋಧರಿಂದ ಬಹಳಷ್ಟು ಶರಣರ ಬಲಿದಾನವಾಗಿ ಕೆಲವು ಶರಣರು ಮಾತ್ರ ಅವರೊಡನೆ ಕಾದಾಡಿ ಪಾರಾಗಿ ಕೆಲವು ವಚನಗಳೊಂದಿಗೆ ಉಳವಿ ತಲುಪಿದರು. ಬೀಮಾನದಿತೀರದಲ್ಲಿ ನಡೆದ ಭೀಕರ ಕಾಳಗದಲ್ಲಿಅನಿರೀಕ್ಷಿತವಾಗಿ ಬಂದ ಸಹಾಯದಿಂದ ಶರಣರಿಗೆ ಜಯವಾಯಿತು**." ನಾನೊಬ್ಬ ಸಾಮಾನ್ಯ ವಚನಗಳ ಅಧ್ಯಯನ ಸರಿಯಾಗಿ ಮಾಡಿಲ್ಲ ಮತ್ತು ಶರಣರ ಜೀವನ ವಿಧಾನ ಮತ್ತು ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವಾದರೂ ನನಗೆ ಮೇಲಿನ ವಿವರಣೆಯನ್ನು ಒಪ್ಪಿಕೊಳ್ಳುವದು ಸಾಧ್ಯವಿಲ್ಲ ಎನಿಸಿತು.
ಎಂಬತ್ತು ಕೋಟಿಗಳಿಗಿಂತಲೂ ಅಧಿಕ ವಚನಗಳನ್ನು ತಲೆಯ ಮೇಲೆ ಹೊತ್ತುಕೊಂಡು ಕುದುರೆಯ ಮೇಲೆ ಹತ್ತಿ ಬೆನ್ನತ್ತಿದ ಬಿಚ್ಚುಗತ್ತಿ ಕುದುರೆ ಸವಾರಿಂದ ತಪ್ಪಿಸಿಕೊಂಡರೆಂಬ ಮಾತನ್ನು ನಂಬಲು ಸಾಧ್ಯವೇ?

ಶರಣರು ಹೇಡಿಗಳಲ್ಲ ಓಡಿ ಹೋಗುವದು ಅವರ ಸ್ವಭಾವದಲ್ಲಿಲ್ಲ. ಅವರು ರಾಜಕಾರಣ ಪರಿಣಿತರು. ಅವರು ಮುಂದೆ ಬರಬಹುದಾದ ತೊಂದರೆಗಳನ್ನು ಮೊದಲೇ ಊಹಿಸಬಲ್ಲವರಾಗಿದ್ದರು. ಅವರ ಜನಪ್ರಿಯತೆ ಪರಾಕಾಷ್ಟತೆಯಲ್ಲಿದ್ದ ಕಾಲವದು. ಅವರ ಒಂದು ಮಾತಿಗೆ ಇಡೀ ರಾಜಕೀಯ ಬದಲಾವಣೆಯಾಗುವಷ್ಟು ಪ್ರಭಾವಶಾಲಿಗಳು.
ಒಂದು ವೇಳೆ ಶರಣರ ಜೊತೆಗೆ ವಚನ ಸಾಹಿತ್ಯ ಮತ್ತು ಸಂಸ್ಕೃತಿ ನಾಶವಾಗಿದ್ದರೆ ಈಗ ಲಕ್ಷಾಂತರ ವಚನಗಳು ಮತ್ತು ಶರಣ ಸಂಸ್ಕಾರವಂತ ಕೋಟ್ಯಾಂತರ ಜನ ಎಲ್ಲಿಂದ ಬಂದರು?
ಹಾಗಾದರೆ ಏನು ನಡೆದಿರಬಹುದು?
ಮನದಲ್ಲಿ ಕೊರೆಯುವ ಪ್ರಶ್ನೆಗೆ ಉತ್ತರ ಕೊಡುವ ಪ್ರಯತ್ನ ನನ್ನದು.
ಒಂದು ಸಂಗತಿ ಮಾತ್ರ ನಿಜ ನಮಗೆ ದೊರೆತಿರುವ ಐತಿಹಾಸಿಕ ಘಟನೆಗಳು ತಪ್ಪಾಗಿ ನಮೂದಿಸಲ್ಪಟ್ಟಿವೆ.
ಅವೆಲ್ಲಾ ಸಾರಾಸಗಟಾಗಿ ತಪ್ಪೆನ್ನಲು ಆಧಾರಗಳಿಲ್ಲ.
ತಾರ್ಕಿಕವಾಗಿ ವಿಚಾರಿಸಿ ಸರಿಯಾದ ಘಟನೆಗಳ ಪರಿಶೀಲನೆಯ ಅಗತ್ಯವಿದೆ.
ನನ್ನ ಮನದಲ್ಲಿ ಹೊಳೆದ ಉತ್ತರವನ್ನು ನಿಮ್ಮ ಮುಂದೆ ಇಟ್ಟಿರುವೆ. ಇದೂ ಒಂದು ಸಾಧ್ಯತೆ ಪರಿಣಿತರು ಅದನ್ನು ಪರಾಮರ್ಶಿಸಲಿ ಎನ್ನುವದಷ್ಟೇ ನನ್ನ ಕೋರಿಕೆ.




ಯಾವುದೇ ನಗರ ಅಥವಾ ರಾಜ್ಯದ ಪ್ರಗತಿಗೆ ಕಾರಣ ಅಲ್ಲಿ ನೆಲಸಿರುವ ಕಾಯಕಯೋಗಿಗಳು. ಈಗಲೂ ರಾಷ್ಟ್ರಗಳು ಮುಂದುವರೆಯಲು ಅಲ್ಲಿಯ ಕಾಯಕಯೋಗಿಗಳ ಪರಿಶ್ರಮವೇ ಕಾರಣ ಎನ್ನುವದು ಸರ್ವವಿದಿತ. ಜಪಾನ ದೇಶದ ಪ್ರಗತಿ ಅದಕ್ಕೊಂದು ನಿದರ್ಶನ.
ಈ ವರ್ಷ ಕೊರೂನಾ ರೋಗ ಹರಡುವ ಭೀತಿಯಲ್ಲಿ ಕಾಯಕಯೋಗಿಗಳೆಲ್ಲ ಪಟ್ಟಣ ತೊರೆದಾಗ ಆದ ಪರಸ್ಥಿತಿ ನೋಡಿದ್ದೇವೆ ಮತ್ತು ಅವರಿಲ್ಲದ ಪಟ್ಟಣ ನರಕಸದೃಶವಾಗುತ್ತದೆ ಎನ್ನುವ ಅನುಭವ ಸಿಕ್ಕಿದೆ.

ಕಲ್ಯಾಣ ಪಟ್ಟಣವನ್ನು ಕಾಯಕಯೋಗಿಗಳೆಲ್ಲ ತೊರೆದ ಮೇಲೆ ಅಲ್ಲಿಯ ಪರಸ್ಥಿತಿ ಊಹಿಸುವದು ಕಷ್ಟ. ಶರಣರು ಮತ್ತು ಕಾಯಕಯೋಗಿಗಳ ನಡುವಿನ ವ್ಯತ್ಯಾಸ ಯೋಧರಿಗೆ ತಿಳಿಯದ ಕಾರಣ ಕಾಯಕಯೋಗಿಗಳ ಹತ್ಯೆಯಾದದ್ದು ಕಲ್ಯಾಣ ಚಾಲುಕ್ಯರ ಅವನತಿಗೆ ಕಾರಣವಾಯಿತು.

ಈ ರೀತಿ ವರ್ಣಿಸಲ್ಪಟ್ಟ ಕಲ್ಯಾಣದ ರಾಜಕೀಯ ಮತ್ತು ಸಾಮಾಜಿಕ ಪರಸ್ಥಿತಿ ಬದಲಾಗಿತ್ತು.

ತುಂಬಾ ಸುವ್ಯವಸ್ಥಿತವಾದ ರಾಜ್ಯದ ಪರಸ್ಥಿತಿ ಕೆಲವು ದಿನಗಳಲ್ಲಿ ಹದಗೆಟ್ಟಿದ್ದು ಸೋಮೇಶ್ವರನ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿತ್ತು. ಕಲ್ಯಾಣ ಚಾಲುಕ್ಯರ ಆಡಳಿತದ ಅಂತ್ಯ ದೂರವಿಲ್ಲ ಎನ್ನುವ ಸಂಕೇತ ಸಿಗಹತ್ತಿತ್ತು.

ಸೋಮೇಶ್ವರನ ಕುಟಿಲತನ ಎಲ್ಲರಿಗೂ ಅರ್ಥವಾಗಿತ್ತು. ಬಿಜ್ಜಳನ ಜಾಣಾಕ್ಷತನದ ಮತ್ತು ಅಣ್ಣ ಬಸವಣ್ಣನವರ ಸತ್ಯ ಶುದ್ದ ಆಡಳಿತ ಕೊನೆಯಾಯಿತ್ತು.

ಪ್ರಾಮಾಣಿಕ ವ್ಯಾಪಾರಿಗಳೆಲ್ಲ ಊರು ತೊರೆದಾಗಿತ್ತು. ಕಾಯಕಯೋಗಿಗಳು ಊರು ತೊರೆದದ್ದರಿಂದ ಎಲ್ಲ ನಗರದ ಕೆಲಸಕಾರ್ಯಗಳು ಸ್ಥಗಿತಗೊಂಡಿದ್ದವು. ಬಿಜ್ಜಳನ ಬಿಗಿ ಹಿಡಿತ ಕಮ್ಮಿ ಆದ ಆಡಳಿತಗಾರರು ಸ್ವತಂತ್ರರಾಗುವ ಕನಸು ಕಾಣಹತ್ತಿದ್ದರು. ಕಲ್ಯಾಣದಿಂದ ಬಂದ ರಾಜಾಜ್ಞೆಗಳಿಗೆ ಕಿಮ್ಮತ್ತಿಲ್ಲದಂತಾಗಿತ್ತು. ಸುವ್ಯವಸ್ಥಿತವಾದ ಆಡಳಿತ ವ್ಯವಸ್ಥೆ ಇಷ್ಟು ಸ್ವಲ್ಪ ಅವಧಿಯಲ್ಲಿ ಇಷ್ಟೊಂದು ಹದಗೆಡುತ್ತದೆ ಎಂದು ಯಾರೂ ಊಹಿಸಿರಲಿಲ್ಲ.

ಶರಣರ ತತ್ವದ ಒಲವಿದ್ದ ಯೋಧರೆಲ್ಲ ಕಲ್ಯಾಣ ತೊರೆದು ಮಾಚಣ್ಣನವರ ಆಶ್ರಯ ಅರಸಿ ಬಂದಿದ್ದರು. ಮಾಚಣ್ಣನವರು ಶರಣಾಭಿಮಾನಿ ಆಡಳಿತಗಾರರ ಸೇವೆಗೆ ಕೆಲವರನ್ನು ಕಳಿಸಿಕೊಟ್ಟಿದ್ದರು ಮತ್ತು ಕೆಲವರನ್ನು ಶರಣರ ರಕ್ಷಣೆಗಾಗಿ ನಿಯೋಜಿತರಾದರು.. ದಾರಿಯಲ್ಲಿ ಕಳ್ಳ ಕಾಕರ, ಬಂಡುಕೊರರ ಹಾಗೂ ಸೋಮೇಶ್ವರ ಕಳಿಸಿದ ಯೋಧರ ತಂಡದಿಂದ ಶರಣರನ್ನು ರಕ್ಷಿಸಬೇಕಾಗಿತ್ತು. ಅದಕ್ಕಾಗಿ ಶರಣರು ನೆಲೆಸಿದ ಜಾಗದಿಂದ ಸ್ವಲ್ಪ ದೂರದಲ್ಲಿಯೇ ಯೋಧರು ಇದ್ದು ಸದಾ ಕಾವಲು ಕಾಯುತ್ತಿದ್ದರು.

ಶರಣ ನೆಲೆಸಿದ ಜಾಗವಷ್ಟೆ ಅಲ್ಲ ಯೋಧರು ನೆಲೆಸಿದ ಜಾಗವೂ ಪವಿತ್ರ ಸ್ಥಳಗಳಾಗಿ ಪರಿಗಣಿಸ್ಪಟ್ಟವು. ಆಮೇಲೆ ಅಲ್ಲಿ ಮಂದಿರಗಳನ್ನು ಕಟ್ಟಿ ಇಂದಿಗೂ ಅಲ್ಲಿ ನಿತ್ಯ ಪೂಜೆ ನಡೆಯುತ್ತಿದೆ.

ಸ್ವಲ್ಪ ಅಂತರದಲ್ಲಿ ಎರಡೆರಡು ಮಹಾದೇವ ದೇವಾಲಯಗಳು ಅಲ್ಲದೇ ದೇವಾಲಯಗಳ ಸಮೀಪದಲ್ಲಿ ಕೆರೆಗಳಿರುವದು ಶರಣರು ಸಾಗಿದ ದಾರಿ ಕಂಡು ಹಿಡಿಯುವ ಪ್ರಯತ್ನದಲ್ಲಿ ಬಹಳ ಸಹಕಾರಿ.

ಅವರು ಎಲ್ಲೆಲ್ಲಿ ವಸತಿ ಮಾಡಿದರು ಎನ್ನುವದನ್ನು ಚಿತ್ರದ ಸಹಾಯದಿಂದ ವಿವರಿಸುವ ಪ್ರಯತ್ನ ಮಾಡಿರುವೆ.

ಶರಣರು ಹಲವು ದಿನ ಖರೋಸಾ ಗವಿಯಲ್ಲಿಯೇ ವಾಸಮಾಡಿ ಅಲ್ಲಿಯ ಕತ್ತಲೆಯ ವಾತಾವರಣಕ್ಕೆ ಹೊಂದಿಕೊಂಡಿದ್ದರು. ಆ ವಾತಾವರಣದಿಂದ ಹೊರಬಂದು

ಹೊರಗಿನ ವಾತಾವರಣಕ್ಕೆ ಹೊಂದಿಕೊಳ್ಳಲು ಕೆಲವು ದಿನಗಳೇ ಬೇಕಾಗಿತ್ತು. ಅದಕ್ಕಾಗಿ ಅವರು ಆರಿಸಿಕೊಂಡ ಸಮಯ ಮತ್ತು ಜಾಗ ಶರಣರ ಜಾಣತನಕ್ಕೇ ಸಾಕ್ಷಿ.
ಖರೊಸಾ ಗವಿಗಳು U ಆಕಾರದ ಬೆಟ್ಟದ ಮೇಲಿದ್ದು ಅದರ ಇಳಿಜಾರಿನ ಆಚೆಗೆ ಕಾಡು ಇತ್ತು. ಕಲ್ಯಾಣಕಡೆಯ ಯೊಧರಿಗೆ ಇಲ್ಲಿ ನಡೆದ ಘಟನೆಗಳಾವವು ಗಮನಕ್ಕೆ ಬರುತ್ತಿರಲಿಲ್ಲ. ಅಲ್ಲಿ ಅನೇಕ ಹಳ್ಳಿಗಳು ಇದ್ದವು. ಅವರೆಲ್ಲ ಶರಣ ತತ್ವ ಅಭಿಮಾನಿಗಳಾಗಿದ್ದರು. ಅವರಿಂದ ಶರಣರ ರಕ್ಷಣೆ ಆಗುತ್ತಿತ್ತು.




**1.** **ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿಂಬುದ ಮಾಬುದೆ ?**
**ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ ?**
**ಕಾಲಗಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಬುದೆ ?-**
**ಇಂತೀ ಮೃತ್ಯುವಿನ ಬಾಯ ತುತ್ತಾದ, ವೇಷಡಂಬಕರ ನಾನೇನೆಂಬೆ ಗುಹೇಶ್ವರಾ.** / 617
– ಅಲ್ಲಮಪ್ರಭು

**2.** **ಮಹಾಮಲೆಯ ವ್ಯಾಘ್ರನ ನೀರ ನಕ್ರ ಕಚ್ಚಿ, ನಕ್ರನ ಹಂದಿ ಕಚ್ಚಿ, ಹಂದಿಯ ನಾಯಿ ಕಚ್ಚಿ,**
**ನಾಯಿಯ ಕಾಳೋರಗ ಕಚ್ಚಿ ಹೆಡೆಯೆತ್ತಿ ಆಡಲಾಗಿ, ಆಕಾಶದ ಹದ್ದು ಕಂಡು ಎರಗಲಾಗಿ,**
**ಹೆಡೆಯುಡಿಗಿ ಸುನಿಗಳು ಬಿಟ್ಟು, ಹಂದಿ ಸತ್ತು, ನಕ್ರ ಬಿದ್ದು, ವ್ಯಾಘ್ರ ಪಲಾಯನವಾಗಿ,**
**ಹಾವ ಹದ್ದು ಕಚ್ಚಿ, ಹದ್ದು ಹಾವ ಕಚ್ಚಿ, ಹದ್ದಳಿದು ಹಾವು ಉಳಿದ ಭೇದವ**
**ತಾನೆ ಬಲ್ಲನಲ್ಲದೆ ಈ ಲೋಕದ ಜಡಜೀವಿಗಳೆತ್ತ ಬಲ್ಲರಯ್ಯ**
**ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ.** / 349 ----
ಕಾಡಸಿದ್ದೇಶ್ವರ

ಗಮನಿಸಿ:

ವರ್ಷಕ್ಕೊಮ್ಮೆ ಬರುವ ಸಂಗಮೇಶ್ವರ ಜಾತ್ರೆಯ ದಾರಿ ಕಾಯುವದು ನನಗೆ ಬಾಲ್ಯದಲ್ಲಿ ತುಂಬಾ ಕಾತರದ ವಿಷಯವಾಗಿತ್ತು. ಅಕ್ಕ ತಂಗಿಯರಿಯರು ರಿಬ್ಬನ್, ಬಳಿ,ಕಾಡಿಗೆ, ಕುಂಕುಮ ಡಬ್ಬಿ ಬೇಕು, ನಾನು ಆಟದ ಸಮಾನು ಬೇಕು, ಅಜ್ಜ ನಾಶಿ ಡಬ್ಬಿಬೇಕು, ಅಜ್ಜಿ ಅಡಕಿ ಕುಟ್ಟಣಗಿ, ಚಿಕ್ಕಮ್ಮ ಹೊಸ ಲಟ್ಟಣಗೆ, ಕೊಮ್ಮಣಗೆ ಬೇಕು ಅವ್ವನಿಗೆ ಸೂಜಿ ದಾರ ಬೇಕು ಎನ್ನುವ ಎಲ್ಲ ಬೇಡಿಕೆಗಳಿಗೆ ಅವ್ವ ಕೊಡುತ್ತಿದ್ದ ಒಂದೇ ಉತ್ತರ "ಸಂಗಮೇಶ್ವರ ಜಾತ್ರೆ ಬರಲಿ ಎಲ್ಲ ತೊಗಾಳಾಕ ಬರತೈತಿ". ಹೌದು ಜಾತ್ರೆಯೊಂದೇ ನಮಗೆಲ್ಲ ಬೇಕಾದ ಸಮಾನುಗಳನ್ನು ಕೊಳ್ಳಲು ಅವಕಾಶ ಒದಗಿಸುತ್ತಿದ್ದ ಜಾಗ. ಹೆಣ್ಣುಮಕ್ಕಳು ತಮಗಿಷ್ಟವಾದ ಸಾಮಾನುಗಳನ್ನು ಸ್ವತಂತ್ರವಾಗಿ ಖರೀದಿಸಲು ಸಿಗುತ್ತಿದ್ದ ಅವಕಾಶ ಅದೊಂದೆ.

ತೇರಿಗೆ ಉತ್ತತ್ತಿ ಒಗೆದು ಹಾಳುಮಾಡಬಾರದೆಂದು ತಿಂದು ಬೇರೆಯವರು ಹಾರಿಸಿದ ಉತ್ತತ್ತಿ ಹುಡುಕಿ ತಿಂದ ಸಂಭ್ರಮ ಪಾರಿತೋಷಕ ಸಿಕ್ಕಷ್ಟೇ ಸಂತೋಷ ಕೊಡುತ್ತಿತ್ತು. ಬೀಗರ ಮನೆಗೆ ಕಳಿಸಲು ಬೆಂಡು ಬೆತ್ತಾಸ, ಬಾಳಿಹಣ್ಣು ಎಲ್ಲ ಖರೀದಿ ಮಾಡಿ ಬಂಡಿಯಲ್ಲಿ ಹೇರಿಕೊಂಡು ಬರುವಾಗ ವಜ್ರ ವೈಢುರ್ಯ ತಂದ ಹೆಮ್ಮೆ ಇರುತ್ತಿತ್ತು. ಅಕ್ಕ ತಂಗಿಯರಂತೂ ಹೊಸ ಬಳೆ ಸದ್ದು ಮಾಡುತ್ತ ಮನೆತುಂಬ ಓಡಾಡುತ್ತಿದ್ದ ನೋಟ ಅಪೂರ್ವ.

ಅಂತೂ ಜಾತ್ರೆಯ ಉದ್ದೇಶ ಅಥವಾ ಧಾರ್ಮಿಕ ವಿಧಿ ವಿಧಾನಗಳು ಅರ್ಥವಾಗದಿದ್ದರೂ ನಮಗೆಲ್ಲ ಅವಶ್ಯಕ ಸಾಮಾನುಗಳನ್ನು ಖರೀದಿಸಿದ ಮತ್ತು ಸಾವಿರಾರು ಜನರ ಮಧ್ಯದಲ್ಲಿ ಸಂಭ್ರಮದಿಂದ ಓಡಾಡಿದ ಆ ನೆನಪುಗಳಿಂದೂ ಹಸಿರಾಗಿವೆ.

ಈ ರೀತಿಯ ಜಾತ್ರೆಯ ಪರಿಸರವನ್ನು ಶರಣರು ತಮ್ಮ ತತ್ವ ಪ್ರಚಾರಕ್ಕಾಗಿ, ವಚನ ಉಳಿಸಲು ಮತ್ತು ಶರಣರ ರಕ್ಷಣೆಗೆ ಬಳಸಿಕೊಂಡ ಘಟನೆಗಳ ವಿವರ ಇಲ್ಲಿದೆ.

ಶರಣರು ಸಮಾಜದಲ್ಲಿದ್ದ ಅನೇಕ ಆಚರಣೆಗಳು ಸರಿ ಇಲ್ಲ ಎನಿಸಿದಾಗ ಅವುಗಳನ್ನು ಕಟುವಾಗಿ ಟೀಕಿಸಿದ್ದಾರೆ. ಅವರು ಬರಿ ಟೀಕಿಸಿ ಸುಮ್ಮನಾಗಲಿಲ್ಲ ಅವು ಹೇಗಿರಬೇಕು ಎನ್ನುವದನ್ನು ವಿವರಿಸಿದ್ದಾರಲ್ಲದೆ ಅವುಗಳನ್ನು ತಿದ್ದಿ ತಾವು ಅನುಸರಿಸಿ ಉಳಿದವರೂ ಆಚರಿಸುವಂತೆ ಮಾರ್ಗದರ್ಶನ ಮಾಡುತ್ತಿದ್ದರು. ಅದಕ್ಕೊಂದು ಉದಾಹರಣೆ ಜಾತ್ರೆಯ ಆಚರಣೆಗಳು. ಅದರ ವಿವರ ಇಲ್ಲಿದೆ. ಜಾತ್ರೆಗಳು ನಮ್ಮ ದೇಶದಲ್ಲಿ ಅನಾದಿ ಕಾಲದಿಂದ ಇಂದಿನವರೆಗೆ ನಡೆದು ಬಂದ ಪರಂಪರೆ ಲಕ್ಷಾಂತರ ಜನರು ಒಂದು ಕಡೆ ಆಚರಿಸುತ್ತ ಬಂದಿರುವ ವಿಧಿ ವಿಧಾನಗಳು.

ಮಡಿವಾಳ ಮಾಚಿದೇವರು ಜಾತ್ರೆಯಲ್ಲಿ ನಡೆಯುವ ವಿಧಿ ವಿಧಾನಗಳನ್ನು ಟೀಕಿಸಿ ಅವು ಗುರು ಉಪದೇಶ ಕೇಳುವ ಮಾರ್ಗವಾಗಬೇಕು ಮತ್ತು ಧರ್ಮ ನೆಲೆಗೊಳ್ಳುವಲ್ಲಿ ನೆರವಾಗಬೇಕೆಂದು ತಮ್ಮ ವಚನದಲ್ಲಿ ಸೂಚಿಸಿದ್ದಾರೆ.

**ಕಳ್ಳಬುದ್ಧಿಯಿಡೆಗೊಂಡು ಕರ್ಮಗೇಡಿಯಾಗಿ ಹೋಗಬೇಡವೆಂದು ಷೋಡಶೋಪಚಾರದಿಂದ**

**ಶ್ರೀಗುರು ಭಕ್ತಿಯ ತೋರಿ,**

**ಸತ್ಯ ಸದಾಚಾರ ಧರ್ಮ ನೆಲೆಗೊಳ್ಳಬೇಕೆಂದು, ಸಾಹಿತ್ಯ ಸಂಬಂಧವ ಕೊಟ್ಟು,**

**ಶ್ರೀಗುರು ಉಪದೇಶವ ಹೇಳಿದ ಮಾರ್ಗದಿ ನಡೆಯಲೊಲ್ಲದೆ, ನಾಯಿಜಾತಿಗಳು**

**ಕೀಳುಜಾತಿಗಳು ದೈವದ ಜಾತ್ರೆಗೆ ಹೋಗಿ,**

**ಬೆನ್ನಸಿಡಿಯನೇರಿಸಿಕೊಂಡು, ಅಂಗ ಲಿಂಗಕ್ಕೆರವಾಗಿ, ತಾಳಿ ತಗಡಿ ಮಾಡಿ,**

**ಮನೆದೈವವೆಂದು ಕೊರಳಿಗೆ ಕಟ್ಟಿಕೊಂಡು**

**ಮರಳಿ ಉಣಲಿಕ್ಕಿಲ್ಲದಿರ್ದಡೆ, ಮಾರಿಕೊಂಡು ತಿಂಬ ಕೀಳುಜಾತಿಗೆ ಏಳೇಳುಜನ್ಮದಲ್ಲಿ ಕಾಗೆ**

**ಬಾಯಲಿ ತಿಂಬ ನರಕ ತಪ್ಪದೆಂದ,**

**ಕಲಿದೇವರದೇವ. / 119**– ಮಡಿವಾಳ ಮಾಚಿದೇವ.

ಈ ವಚನದಲ್ಲಿ ವಿವರಿಸಿದಂತೆ ಈ ಅವಕಾಶವನ್ನು ಧರ್ಮ ನೆಲೆಗೊಳ್ಳಲು ಹೇಗೆ ಉಪಯೋಗಿಸಿಕೊಂಡರು ಎನ್ನುವ ವಿವರಣೆ ಇಲ್ಲಿದೆ.

ನಮ್ಮ ದೇಶದಲ್ಲಿ ಅನೇಕಾನೇಕ ಜಾತ್ರೆಗಳು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ನಡೆಯುದನ್ನು ಕಾಣುತ್ತೇವೆ. ನಾನಿಲ್ಲಿ ಶ್ರೀಶೈಲ ಜಾತ್ರೆ ಉದಾಹರಣೆಗಾಗಿ ತೆಗೆದುಕೊಂಡಿರುವೆ.

ಚಂದ್ರಮಾನ ಯುಗಾದಿಯ ದಿನ ಶ್ರೀಶೈಲದಲ್ಲಿ ಜರುಗುವ ರಥೋತ್ಸವದಲ್ಲಿ ಹತ್ತು ಲಕ್ಷಕ್ಕೂ ಅಧಿಕ ಜನ ಪಾಲ್ಗೊಳ್ಳುತ್ತಾರೆ.

ಶ್ರಿಶೈಲ ಮಲ್ಲಿಕಾಜುನ ದೇವಾಲಯವಿರುವದು ದುರ್ಗಮ ಬೆಟ್ಟದ ಮೇಲೆ. ಈಗ ಅಲ್ಲಿಗೆ ಸಾರಿಗೆ ವ್ಯವಸ್ಥೆ ಇದೆಯಾದರೂ ಭಕ್ತರು ಅಲ್ಲಿಗೆ ಹೊಗಿ ಬರುವದು ಕಾಲ್ನಡಿಗೆಯಿಂದ. ಕೈಯಲ್ಲೊಂದು ಕೋಲು, ಬೆನ್ನಿಗೊಂದು ಚೀಲ, ಮಲ್ಲಯ್ಯನ ಭಜನೆ ಮಾಡುತ್ತ ನೆತ್ತಿ ಸುಡುವಂಥ ಬಿಸಿಲಿನಲ್ಲಿ ಬರಿಗಾಲಲ್ಲಿ ಲಕ್ಷಾಂತರ ಜನರು ಅನೇಕ ಗುಂಪುಗಳಲ್ಲಿ ಅಲ್ಲಿಯ ದುರ್ಗಮ ಮಾರ್ಗದಲ್ಲಿ ಬೆಟ್ಟ ಹತ್ತಿ ಹೋಗಿ ಬರುತ್ತಾರೆ. ಅವರು ಹೋಗುವ ಮಾರ್ಗ ಮಧ್ಯದಲ್ಲಿ ಅವರಿಗಾಗಿ ದಾಸೋಹ ವ್ಯವಸ್ಥೆಯನ್ನು ಭಕ್ತರು ಮಾಡಿರುತ್ತಾರೆ. ಅದು ಅವರ ಶ್ರದ್ದೆಯ ಸಂಕೇತ.

ಮಹಾರಾಷ್ಟ್ರ, ಕರ್ನಾಟಕ , ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಎಲ್ಲ ಊರುಗಳಿಂದ ಭಕ್ತರು ಅಲ್ಲಿಗೆ ಕಾಲ್ನಡಿಗೆಯಿಂದ ಬರುತ್ತಾರೆ. ಅಲ್ಲಿಂದ ಮರಳಿಬಂದ ಯಾತ್ರಿಕರನ್ನು ಊರವರು ಮನೆಗೆ ಕರೆದು ಅವರಿಗೆ ಸಿಹಿ ತಿಂಡಿ

ತಿನಿಸಿ ಅವರ ಅನುಭವಗಳನ್ನು ಹಂಚಿಕೊಳ್ಳುವದು ಈಗ “ಕಂಬಿ ಮಾಡುವದು” ಎನ್ನುವ ಸಂಪ್ರದಾಯವಾಗಿ ಬೆಳೆದಿದೆ.

ಇಲ್ಲಿ ಗಮನಿಸಬೇಕಾದ ಎರಡು ಅಂಶಗಳಿವೆ

1. ಎಷ್ಟೇ ಕಠಿಣ ಮಾರ್ಗವಿದ್ದರೂ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಜನ ಹೋಗುತ್ತಾರೆ
2. ಅವರು ಮರಳಿದ ಮೇಲೆ ಅವರ ಅನುಭವಗಳನ್ನು ಹಂಚಿಕೊಳ್ಳಲು ಅವರ ಊರಲ್ಲಿ ಜನ ಕಾತರರಾಗಿರುತ್ತಾರೆ.

ಈ ತರಹದ ಶ್ರದ್ಧೆ ಭಕ್ತಿಯಿಂದ ಹೆಚ್ಚು ಕಡಿಮೆ ಎಲ್ಲ ಮಹಾದೇವ ಮಂದಿರಗಳಲ್ಲಿ ಜಾತ್ರೆ ನಡೆಯುತ್ತವೆ.

ಮಡಿವಾಳ ಮಾಚಣ್ಣನವರು ಮತ್ತು ಶರಣರು ಈ ರೀತಿಯ ಜಾತ್ರೆಗಳನ್ನು ವಚನಗಳ ರಕ್ಷಣೆ ಮತ್ತು ಶರಣ ಸುರಕ್ಷತೆಗಾಗಿ ಉಪಯೋಗಿಸಲು ಯೋಚಿಸಿದರು. ಅದರ ವಿವರ ಇಲ್ಲಿದೆ.

ಖರೊಸಾ ಗವಿಗಳಿಂದ ಸ್ವಲ್ಪ ದೂರದಲ್ಲಿದ್ದ ಕನಿನವಾರೆ (Kaninawre) ಗ್ರಾಮದ ಮಹಾದೇವ ಜಾತ್ರೆಗೆ ಎಲ್ಲ ಕಡೆಯಿಂದ ಭಕ್ತರು ಆಗಮಿಸುತ್ತಿದ್ದರು. ಜಾತ್ರೆಗೆ ಕೆಲವು ದಿನ ಮೊದಲೇ ಅಲ್ಲಿ ವ್ಯಾಪಾರಿಗಳು ಬಂದು ಅಂಗಡಿ ಪ್ರಾರಂಬಿಸುತ್ತಿದ್ದರು. ಅದರ ಸದುಪಯೋಗ ಪಡೆದ ಕೆಲವು ಶರಣರು ಗವಿಗಳಿಂದ ಹೊರಬಂದು ತಮ್ಮ ಕರಕುಶಲ ವಸ್ತುಗಳ ಅಂಗಡಿ ತೆಗೆದರು. ಐದು ದಿನ ಜಾತ್ರೆಯ ಸಂದರ್ಭದಲ್ಲಿ ಶರಣರೆಲ್ಲ ಹೊರಬಂದು ಜನರಲ್ಲಿ ಬೆರೆತರು. ಇದು ಯಾರ ಗಮನಕ್ಕೂ ಬರಲಿಲ್ಲ. ಈ ಸಲದ ಜಾತ್ರೆಯ ಕಾರ್ಯಕ್ರಮಗಳಲ್ಲಿ ವಚನ ಹಾಡುವದು ಮತ್ತು ಶರಣ ಸಂದೇಶ ಸಾರುವ ಪ್ರವಚನಗಳು ಬಂದ ಭಕ್ತರನ್ನು ಐದು ದಿನಗಳ ಕಾಲ ರಂಜಿಸಿದವು. ಶರಣ ಪ್ರಮುಖರು ಅಲ್ಲಿಗೆ ಬಂದ ಪರಿಚಿತರ ಜೊತೆ ಅನೇಕ ಕಾಯಕಯೋಗಿ ಶರಣರನ್ನು ವಚನಗಳ ಸಹಿತ ಕಳಿಸಿಕೊಟ್ಟರು. ಒಟ್ಟಾರೆಯಾಗಿ ಅಲ್ಲಿಗೆ ಬಂದಿದ್ದ ಭಕ್ತರ ಜೊತೆಗೆ ಶರಣರು ವಚನಗಳೊಂದಿಗೆ ಬೇರೆ ಬೇರೆ ಊರಿಗೆ ಸುರಕ್ಷಿತವಾಗಿ ತಲುಪಿದರು. ಅಲ್ಲಿಗೆ ತಲುಪಿದ ಶರಣರು ಅಲ್ಲಿ ನೆಲೆಯಾಗಿ ನಿಂತು ಶರಣ ಪರಂಪರೆ ಉಳಿಸಿ ಬೆಳೆಸಿದರು.

ಇದುವೇ ಮಹಾರಾಜ ಸೊಮೇಶ್ವರನ ನಿಜವಾದ ಸೋಲು.

ಉಳಿದ ಶರಣರು ಜಾತ್ರೆ ಮುಗಿದ ನಂತರ ತಮ್ಮ ಸಾಮಾನು ಸರಂಜಾಮುಗಳ ಜೊತೆ ಪ್ರವಾಸ ಬೆಳೆಸಿದರು ಅದೂ ಮತ್ತೊಂದು ಮಹಾದೇವ ಗುಡಿಯ ಕಡೆಗೆ.

(ಬೀಜ ಹಾಕಿ ಗಿಡ ಬೆಳೆದು ಹೂ ಪಡೆಯಲು ಬಹಳ ಸಮಯ ಕಾಯಬೇಕು. ಆದರೆ ಬೆಳೆದ ಗಿಡದ ಬೇಡಾದ ಕೊಂಬೆ ಕತ್ತರಿಸಿ ಅದಕ್ಕೇ ಬೇಕಾದ ಹೂಗಳ ಕೊಂಬೆ ಅಂಟಿಸಿ ನಮಗೆ ಬೇಕಾದ ಬಣ್ಣದ ಹೂ ಪಡೆಯಲು ಬಹಳ ಸಮಯ ಬೇಕಾಗಿಲ್ಲ).

ಅಂದು ಪರಿವರ್ತನೆಯಾದ ಜಾತ್ರೆಯ ಆಚರಣೆ ಇಂದಿನ ಅನೇಕ ಜಾತ್ರೆಗಳಲ್ಲಿ ಕಂಡುಬರುತ್ತದೆ. ಅಲ್ಲದೇ ಅದು ಹಳೆಯ ಸಂಪ್ರದಾಯದೊಂದಿಗೆ ಶರಣ ಸಂಸ್ಕೃತಿ ಉಳಿಸಿ ಬೆಳೆಸುವ ಸಾಧನವೂ ಆಗಿದೆ.

ಇದಕ್ಕೊಂದು ಉದಾಹರಣೆ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಎಂದು ಹೇಳಬಹುದು. ಅಲ್ಲಿಗೂ ಲಕ್ಷಾಂತರ ಭಕ್ತರು ಬರುತ್ತಾರೆ. ಶ್ರದ್ದೆಯಿಂದ ದಾಸೋಹ ಮಾಡುತ್ತಾರೆ ಸಾಂಪ್ರದಾಯಕ ರಥೋತ್ಸವದ ಜೊತೆಗೆ ವಚನ ಗಾಯನ ಮತ್ತು ಪರಿಣಿತರ ಪ್ರವಚನ ಕೇಳಿ ಮರಳುತ್ತಾರೆ. ಹೊಗುವಾಗ ಬರುವಾಗ ವಚನ ಭಜನೆ ಮಾಡುತ್ತಾರೆ ಅದು ವಚನ ಉಳಿಸುವ ಸುಲಭ ಮಾರ್ಗವಲ್ಲವೇ?. ಇದು ನಿಜವಾಗಿ ವಚನ ಸಂಸ್ಕಾರ ಕೊಡುವ ಮತ್ತು ಉಳಿಸುವ ಕೆಲಸವಲ್ಲವೇ?
ಇಲ್ಲಿರುವ ಚಿತ್ರ ಗವಿಗಳು ಹಾಗೂ ಜಾತ್ರೆ ನಡೆದ ಸ್ಥಳ ತೋರಿಸುತ್ತದೆ. ಇಲ್ಲಿ ಶರಣರು ಶರಣರ ರಕ್ಷಣೆ ಮತ್ತು ವಚನಗಳ ರಕ್ಷಣೆಗಳನ್ನು ಮಾಡುವ ಹೊಸ ಪ್ರಯೋಗ ಮಾಡಿ ಯಶಸ್ವಿಯಾದರು.
ಶರಣರು ಯೋಧರಿಗೆ ಪ್ರತಿರೋಧ ಒಡ್ಡಲಿಲ್ಲ ಎನ್ನುವದು ನಿಜವಾದರೂ ಎಲ್ಲ ಶರಣರು ಕಲ್ಯಾಣದಿಂದ ತಲೆಯ ಮೇಲೆ ವಚನದ ಕಟ್ಟುಗಳನ್ನು ಇಟ್ಟುಕೊಂಡು ಪಲಾಯನ ಮಾಡಿ ಅವರಿಂದಾದಷ್ಟು ವಚನ ರಕ್ಷಿಸಿದರು ಮತ್ತು ಕೆಲವು ಜನ ಉಳವಿ ಸೇರಿದರು ಎನ್ನುವ ವಾದ ಒಪ್ಪಲಿಕ್ಕಾಗುವದಿಲ್ಲ. ಅದರೆ ಸಾವಿರಾರು ಶರಣರು ಹಾಗೆ ಮಾಡಲು ಹೋಗಿ ಪ್ರಾಣ ತೆತ್ತದ್ದಂತೂ ನಿಜ.
ಒಂದುವೇಳೆ ಎಲ್ಲ ಶರಣರು ಹಾಗೆ ಮಾಡಿದ್ದರೆ ಕರ್ನಾಟಕದಲ್ಲಿ 20% ಮತ್ತು ಮಹಾರಾಷ್ಟ್ರದಲ್ಲಿ 10% ಉಳಿದ ಭಾರತದ ಭಾಗದಲ್ಲಿ 5% ಜನ ಶರಣ ಪರಂಪರೆಯವರಾಗುತ್ತಿರಲಿಲ್ಲ. ಈಗ ದೊರೆತಿರುವ ವಚನಗಳಲ್ಲದೇ ನಮ್ಮ ದೇಶವಷ್ಟೇ ಅಲ್ಲ ಕೆಲವು ದೇಶಗಳಲ್ಲಿ ಕೋಟಿಗಟ್ಟಲೇ ವಚನಗಳಿರುವ ಲಕ್ಷಣ ದೊರೆಯುತ್ತಿವೆ.
ಕೆಲವರಷ್ಟೇ ಉಳವಿ ಸೇರಿದರು, ಹಲವರು ದಾರಿಯಲ್ಲಿ ಹತ್ಯೆಯಾದರು ಮತ್ತು ಅನೇಕರು "ಹೆಣಕೊಳ್ಳ" ಸೇರಿದರು ಎನ್ನುವದು ನಿಜವಾದರೂ ಉಳಿದ 90% ಜನ ಕಾಯಕಯೋಗಿಗಳಾಗಿ ಜನರಲ್ಲಿ ಒಂದಾಗಿ ಬಾಳಿ ವಚನಗಳು ಜನಮನದಲ್ಲಿ ಉಳಿಸಿ ಶರಣ ಸಂಸ್ಕೃತಿ ಜೀವನ ಮಾರ್ಗವಾಗುವಂತೆ ಮಾಡಿದರು ಎನ್ನುವದೇ ಸತ್ಯ. ಅಕ್ಕನಾಗಮ್ಮ, ಚನ್ನಬಸವಣ್ಣ, ಮಾಚಣ್ಣನವರ ಸತತ ಪರಿಶ್ರಮದ ಪರಿಣಾಮ ಈಗ ಗೋಚರಿಸುತ್ತಿದೆ.
ಈಗ ಜಗತ್ತಿಗೆಲ್ಲ ವಚನಗಳು ಮಾರ್ಗದರ್ಶಕ ಸೂತ್ರಗಳಾಗುವ ಹಂತದಲ್ಲಿವೆ.

**ಊರೊಂದೆಸೆ, ಕಾಡೊಂದೆಸೆ.**

**ನರರೊಂದೆಸೆ, ಸುರರೊಂದೆಸೆ,**

**ಹಗಲೊಂದೆಸೆ, ಇರುಳೊಂದೆಸೆ.**

**ಪುಣ್ಯವೊಂದೆಸೆ, ಪಾಪವೊಂದೆಸೆ.**

**ಜ್ಞಾನವೊಂದೆಸೆ, ಅಜ್ಞಾನವೊಂದೆಸೆ.**

**ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,**

**ನಿಮ್ಮಶರಣರೊಂದೆಸೆ, ಲೋಕವೊಂದೆಸೆ.** / 102 -- ಸ್ವತಂತ್ರ ಸಿದ್ಧಲಿಂಗ

ಕನಿನವಾರೆ ಜಾತ್ರೆ ಮುಗಿದ ಮೇಲೆ ಶರಣರು ಅಲ್ಲಿಂದ ಸಮೀಪದ ಆರು ಜಾಗಗಳಿಗೆ ತಮ್ಮ ವಸತಿಯನ್ನು ಬದಲಿಸಿದರು. ಅವರ ಸ್ಮರಣಾರ್ಥ ಅಲ್ಲಿ ಮಹಾದೇವ ಮಂದಿರಗಳಿವೆ. (ಅವುಗಳು ಆಗ ಇದ್ದವೋ ಇಲ್ಲವೋ ಪರಶೀಲಿಸಬೇಕು) ಈಗ ಅವು ಪವಿತ್ರ ಸ್ಥಳಗಳಾಗಿದ್ದು. ಜನರ ಯಾತ್ರಾ ಸ್ಥಳಗಳಾಗಿವೆ.
ಶರಣರು ಗವಿಗಳಿಂದ ಹೊರಬಂದ ಮೇಲೆ ವಾಸಿಸಿದ ಕುರುಹಾಗಿ ಎರಡು ಮಹಾದೇವ ಮಂದಿರಗಳ ನಿರ್ಮಾಣವಾಯಿತೋ ಅಥವಾ ಮೊದಲೇ ಅಲ್ಲಿ ಪ್ರಾಚೀನ ಗವಿಗಳಿದ್ದವೋ ಗೊತ್ತಿಲ್ಲ. ಅಲ್ಲಿ ಚಿತ್ರದಲ್ಲಿ ತೋರಿಸಿದಂತೆ ಬೆಟ್ಟದಿಂದ 4 ಕಿ ಮೀ ದೂರದಲ್ಲಿರುವ ಕನಿನವಾರೆ ಎಂಬ ಹಳ್ಳಿಯ ಹತ್ತಿರ ಸುಮಾರು ಎರಡು ಕಿ ಮೀ ಅಂತರದೊಳಗೆ ಎರಡು ಮಹಾದೇವ ಮಂದಿರಗಳಿವೆ ಮತ್ತು ಸನಿಹದಲ್ಲಿ ಒಂದು ನೀರಿನ ಕೊಳವಿದೆ. ಗಮನಿಸಬೇಕಾದ ಅಂಶವೆಂದರೆ ಶರಣರು ತಮ್ಮ ಪ್ರಯಾಣದುದ್ದಕ್ಕೂ ನೆಲೆಸಿದ (ವಸ್ತಿ ಮಾಡಿದ) ಸ್ಥಳಗಳೆಲ್ಲ ಇದೇ ರೀತಿಯಾಗಿವೆ.









ಈ ರೀತಿಯಾಗಿ ಒಂದರ ಸಮಿಪ ಒಂದು ಮಹಾದೇವ ಮಂದಿರಗಳಿರುವದು ಮತ್ತು ಅವು ಕೆರೆಯ ಪಕ್ಕದಲ್ಲಿರುವದು ಶರಣರು ಇಲ್ಲಿ ವಸತಿ ಮಾಡಿರಬಹುದು ಎನ್ನುವದನ್ನು ಹೇಳುತ್ತವೆ.
ಅವುಗಳಿರುವ ದಿಕ್ಕುಗಳನ್ನು ಗಮನಿಸಿದಾಗ ಬೇರೆ ಬೇರೆ ಕಡೆ ಹೋಗುವ ಶರಣರಿಗೆ ಬೇರೆ ಬೇರೆಯಾಗಿ ಅವರು ಹೋಗುವ ಜಾಗೆ ಮತ್ತು ಅಲ್ಲಿಯ ಸಂಪ್ರದಾಯಗಳ ಪರಿಚಯ ಮಾಡಿಕೊಟ್ಟಿರಬೇಕು. ಅಂತೂ ತುಂಬ ವ್ಯವಸ್ಥಿತವಾಗಿ ಅವರಿಗೆಲ್ಲ ತರಬೇತಿ ಕೊಟ್ಟು ಕಳಿಸಿರಬೇಕು. ಅಂದರೆ ಶರಣರ ಪ್ರಯಾಣ ಉದ್ದೇಶರಹಿತವಾಗಿರಲಿಲ್ಲ. ಅವರಿಗೆ ಒಂದು ನಿಶ್ಚಿತವಾದ ಗುರಿ ಇತ್ತು.
ಜೆ ಪಿ ಮಹಾದೇವ ಮಂದಿರ ಚಿಂಚೋಳಿ ತಾಪ್ಸೆ ಯಿಂದ ತಮ್ಮ ವಸತಿಯನ್ನು ಮಕಣಿ (Makani, ಮಾಕಣಿ)) ಕೆರೆಯ ದಂಡೆಯ ಮೇಲೆ ಇರುವ ಮಹಾದೇವ ಮಂದಿರಕ್ಕೆ ಬದಲಿಸಿದರು.
ಮಾಕಣಿ ಇದು (ಈಗಿನ ಮಹಾರಾಷ್ಟ್ರ ರಾಜ್ಯದ) ಲೊಹರಾ ತಾಲೂಕಿನಲ್ಲಿಯ ಒಂದು ಗ್ರಾಮ ಮತ್ತು ಚಿಂಚೋಳಿ ತಾಪ್ಸೆಯಿಂದ ಸುಮಾರು 18 ಕಿ ದೂರದಲ್ಲಿದೆ. ಈ ಊರ ಸಮೀದಲ್ಲಿಯ ಕೆರೆ ತುಂಬಾ ವಿಶಾಲವಾಗಿದೆ.
ಮಾಕಣಿ ಕೆರೆಯ ಸಮೀಪದಲ್ಲಿ ನಾಲ್ಕು ಮಹದೇವ ಮಂದಿರಗಳಿವೆ.
ಇವುಗಳನ್ನು ಗಮನಿಸಿದಾಗ ಇಲ್ಲಿ ಶರಣರು ಮತ್ತು ಅವರ ರಕ್ಷಣೆ ಜವಾಬ್ದಾರಿ ಹೊತ್ತಿದ್ದ ಯೋಧರು ಇಲ್ಲಿ ಕೆಲವು ದಿನ ತಂಗಿದ್ದರು ಎನ್ನುವದು ಗೊತ್ತಾಗುತ್ತದೆ. ಇದು ಸೊನ್ನಲಾಪುರದ ಶಿದ್ದೇಶ್ವರ ಶಿವಯೋಗಿಗಳವರ ಪ್ರಭಾವವಿದ್ದ ಪ್ರದೇಶ. ಇಲ್ಲಿಗೆ ಶರಣರನ್ನು ಭೆಟ್ಟಿಯಾಗಲು ಶಿದ್ದೇಶ್ವರ ಶಿವಯೋಗಿಗಳವರು ಬಂದಿರಬಹುದು ಎನ್ನಲು ಒಂದು ಕಾರಣವಿದೆ. ಕೆರೆಯ ಮಗ್ಗಲು ಇರುವ ಔಸಾ ಮಕಣಿ ರಸ್ತೆಯಲ್ಲಿಯ ಮಹಾದೇವ ಮಂದಿರದ ಪಕ್ಕದಲ್ಲಿ
ಶ್ರೀ ಶಿದ್ದೇಶ್ವರ ಮಂದಿರವಿದೆ.
ಮಕಣಿಯ ಸಮೀಪದಲ್ಲಿ ಅನೇಕ ಹಳ್ಳಿಗಳಿದ್ದು ಇಲ್ಲಿ ಶರಣರು ಸಂಚರಿಸಿ ಪ್ರವಚನ ಕೊಟ್ಟಿರಬಹುದು ಎಂದು ನನ್ನ ಅನಿಸಿಕೆ.

ಶರಣರು ಅದರಲ್ಲೂ ಶಿದ್ದೇಶ್ವರ ಶಿವಯೋಗಿಗಳ ಪ್ರಭಾವ ಎಷ್ಟಿತ್ತೆಂದರೆ ಅವರ ಬೆಂಬಲ ಸಿಕ್ಕವರು ಕಲ್ಯಾಣದ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ ಎನ್ನುವ ನಂಬಿಕೆ ಇತ್ತು. ಬಿಜ್ಜಳ ಮಹಾರಾಜನ ಸಹೋದರ ಅವರ ಸಹಾಯ ಯಾಚಿಸಿದರೂ ಅವರು ಯಾರ ಪರವಾಗಿ ನಿಲ್ಲಲಿಲ್ಲ ಎನ್ನುವದು ಸರ್ವವಿದಿತ. ಗೂಗಲ್ ಮ್ಯಾಪನಲ್ಲಿ ಖರೊಸಾದಿಂದ ಮಕಣಿ ಗ್ರಾಮದವರೆಗಿನ ಮಹಾದೇವ ಮಂದಿರಗಳಿರುವ ಜಾಗಗಳ ಗುರುತು ಮಾಡಿದರೆ ಒಂದು ಮಾರ್ಗ ಗೋಚರಿಸುತ್ತದೆ (ಚಿತ್ರ ನೋಡಿ) ಅದುವೇ ಶರಣರು ಸಾಗಿದ ಮಾರ್ಗವೆಂದು ವಿವರಿಸುವ ಅಗತ್ಯವೇ ಇಲ್ಲ ಎನಿಸುತ್ತದೆ.

ಇನ್ನು ಮುಂದೆ ಮಹಾದೇವ ಮಂದಿರಗಳ ಜೊತೆಗೆ ಜೊತೆಗೆ ಶಿವ ಮಂದಿರಗಳು, ಮಲ್ಲಿಕಾರ್ಜುನ ಮಂದಿರಗಳು, ಶಿದ್ದೇಶ್ವರ ಮಂದಿರಗಳೂ ಸಹ ಶರಣರು ಸಾಗಿದ ಮಾರ್ಗನಿರ್ದೇಶನ ಮಾಡುತ್ತವೆ.

ತುಲಜಾಪುರ ತಾಲೂಕಿನಲ್ಲಿಯ ನಲದುರ್ಗ ಕೋಟೆ ಮಹಾರಾಷ್ಟ್ರದಲ್ಲಿರುವ ಒಂದು ಸುಂದರವಾದ ಭದ್ರವಾದ ಕೋಟೆ. ಇದು ಅತ್ಯಂತ ಪ್ರೇಕ್ಷಣೀಯ ಸ್ಥಳವೂ ಹೌದು. ಪೌರಾಣಿಕವಾದ ವಾದದಂತೆ ನಳಮಹಾರಾಜ ಕಟ್ಟಿಸಿದ ಕೋಟೆ ಇದು ಎನ್ನುವ ಪ್ರತೀತಿ ಇದೆ. ಕಲ್ಯಾಣ ಚಾಲುಕ್ಯರ ಅರಸರ ಆಡಳಿತಕ್ಕೊಳಪಟ್ಟ ಈ ಕೋಟೆಯನ್ನು ಇನ್ನಷ್ಟು ಭದ್ರಗೊಳಿಸಲು ಬಸವಣ್ಣನವರ ನಿರ್ದೇಶನದಂತೆ ಕೆಲಸ ಪ್ರಾರಂಭಿಸಲಾಯಿತು. ಇದು ಬಸವಕಲ್ಯಾಣಕ್ಕಿಂತಲೂ ಆಡಳಿತಾತ್ಮಕವಾಗಿ ಒಳ್ಳೆಯ ಕೋಟೆ ಎನ್ನುವ ಅಭಿಪ್ರಾಯವಿತ್ತು. ಇಲ್ಲಿ ಕಲ್ಯಾಣದ ಬಲಿಷ್ಟವಾದ ಯೋಧ ಪಡೆ ಇತ್ತು. ಇಲ್ಲಿಯ ಆಡಳಿತಗಾರ ಮಹಾರಾಜ ಸೋಮೇಶ್ವರನ ಆತ್ಮೀಯ ಗೆಳೆಯನಾಗಿದ್ದರೂ ಶಿದ್ದೇಶ್ವರ ಶಿವಯೋಗಿಗಳ ಪ್ರಭಾವದ ಅರಿವಿದ್ದ ಅವನು ಡೋಲಾಯಮಾನ ಸ್ಥಿತಿಯಲ್ಲಿದ್ದ. ಅವನು ಹೇಗೆ ಪ್ರತಿಕ್ರಿಯಿಸಬಹುದೆಂಬ ಕಲ್ಪನೆ ಶರಣರಿಗೆ ಇರಲಿಲ್ಲ.

ಅದಕ್ಕಾಗಿಯೇ ಸುಮಾರು ಮಾಕಣಿಯಿಂದ 60 ಕಿ ಮೀ ದೂರದ ಸೊನ್ನಲಾಪುರಕ್ಕೆ ನಲದುರ್ಗದೊಳಗೆ ಹೋಗದೆ ಅದನ್ನು ಸುತ್ತಿಬಳಸಿ ಹೋಗಲು ನಿರ್ಧರಿಸುತ್ತಾರೆ ಮತ್ತು ಅಲ್ಲಿ ಹೆಚ್ಚು ದಿನ ಉಳಿಯದೇ ಪ್ರವಾಸ ಮುಂದುವರೆಸುತ್ತಾರೆ.

ಮಾಕಣಿಯಲ್ಲಿಂದ ಎರಡು ಗುಂಪುಗಳಲ್ಲಿ ಹೊರಟ ಶರಣರು ಎಅರಡು ಬೇರೆ ಬೇರೆ ದಾರಿಗಳಲ್ಲಿ ಸಾಗುತ್ತರೆ. ಅವರು ಸಾಗಿದ ದಾರಿಯನ್ನು ಚಿತ್ರ ವಿವರಿಸುತ್ತದೆ.




**ಮಾರ್ಗ 1:** ಮಾಕಣಿಯಿಂದ ಸುಮಾರು 15 ಕಿ ಮೀ ದೂರದಲ್ಲಿರುವ

1. ಮಹಾದೇವ ಮಂದಿರ, ಸಲಗರ ದಿವ್ತಿ
2. ಮಹಾದೇವ ಮಂದಿರ, ಚಂದೋರಾ

ಮಂದಿರಗಲ್ಲಿ ಇದ್ದು ಮುಂದೆ ಸೊನ್ನಲಾಪುರದ ಕಡೆಗೆ ಸಾಗಿದರು.

**ಮಾರ್ಗ 2:** ಮಾಕಣಿಯಿಂದ ಮಹಾದೇವ ಮಂದಿರ, ಜವಾಲಿ ಮೂಲಕ ಸಾಗಿ

1. ಮಹಾದೇವ ಮಂದಿರ, ಹಂಗರ್ಗಾ
2. ಮಹಾದೇವ ಮಂದಿರ, ವಾಗ್ದರಿ
3. ಮಹಾದೇವ ಮಂದಿರ, ಆಡೂರ

ಮಂದಿರಗಳಲ್ಲಿ ತಂಗಿ ಮುಂದೆ ಸೊನ್ನಲಾಪುರದ ಕಡೆಗೆ ಸಾಗಿದರು
ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವು ನಲದುರ್ಗದಿಂದ ದೂರದಲ್ಲಿವೆ. ನಲದುರ್ಗದಲ್ಲಿ ಅನೇಕ ಹಿಂದೂ ದೇವಾಲಯಗಳಿದ್ದು ಅವುಗಳಲ್ಲಿ ಒಂದು ಮಹಾದೇವ ಮಂದಿರವಿದೆ.




ಮಹಾದೇವ ಮಂದಿರ, ಸಲಗರ ದಿವ್ತಿ ಯಿಂದ ಹೊರಟ ಶರಣರ ಒಂದು ತಂಡ ಮಹಾದೇವ ಮಂದಿರ, ಚಂದೋರಾ ಮೇಲಿಂದ ಸೊನ್ನಲಾಪುರದ ಸಮೀಪದ

ಏಕೃಕ ಕೆರೆಯ ದಂಡೆಯ ಮೇಲಿನ ಮಹಾದೇವ ಮಂದಿರ, ಬನೆಗಾಂವ ದಲ್ಲಿರುವ ಎರಡು ಮಹಾದೇವ ಮಂದಿರಗಳಲ್ಲಿ ತಂಗಿದರು.
ಅವರು ಅಲ್ಲಿ ಕೆಲವು ಕಾಲ ತಂಗಿ ಉಳವಿಗೆ ಹೊರಟರು.
ಮಹಾದೇವ ಮಂದಿರ, ಜವಾಲಿಯಲ್ಲಿ ತಂಗಿದ್ದ ಇನ್ನೊಂದು ಶರಣರ ಗುಂಪು ಮಹಾದೇವ ಮಂದಿರ, ವಾಗ್ದರಿಯ ಮೇಲಿಂದ ಸೊನ್ನಲಾಪುರದ ಸಮೀಪದ ಕೆ ಏಕೃಕ ಕೆರೆಯ ದಂಡೆಯ ಮೇಲಿನ ಮಹಾದೇವ ಮಂದಿರ, ಹಗ್ಲು ದಲ್ಲಿ ತಂಗಿದರು.
ಸೊನ್ನಲಾಪುರದಲ್ಲಿ ಹಲವಾರು ಮಹಾದೇವ ಮಂದಿರಗಳಿದ್ದು ಅಲ್ಲಿ ಕೆಲವು ಶರಣರು ನೆಲೆಸಿ ಶರಣ ಸಂಸ್ಕೃತಿ ಉಳಿಸಿ ಬೆಳೆಸಿದರು.
ಕೆಲವು ಶರಣರು ಅಲ್ಲಿ ಕೆಲವು ದಿನ ನೆಲೆಸಿ ಸೊನ್ನಲಾಪುರದ ಸಿದ್ದೇಶ್ವರ ಶಿವಯೋಗಿಗಳ ನೇತೃತ್ವದಲ್ಲಿ ಹೊರಟರು. ಅವರು ಮೊದಲಿಗೆ ಬೀಮಾನದಿದಂಡೆಗುಂಟ ಹೊರಟು ಅಲ್ಲಿ ಬರುವ ಎಲ್ಲ ಹಳ್ಳಿಗಳಲ್ಲಿ ಶರಣ ಸಂಸ್ಕೃತಿ ನೆಲೆಗೊಳ್ಳುವಂತೆ ಮಾಡಿದರು. ಅಲ್ಲಿ ಶರಣರಿಗೆ ಆಶ್ರಯ ಸಿಗುವಂತೆ ಮಾಡಿದರು. ಆನಂತರ ಇತರ ಶರಣರು ಕೃಷ್ಣಾ ನದಿ ದಂಡೆ ಗುಂಟ ಶ್ರೀಶೈಲದ ವರೆಗೆ ಸಾಗಿದರು. ಹೀಗಾಗಿ ಆ ಎಲ್ಲ ಭಾಗದಲ್ಲಿ ಶರಣ ಸಂಸ್ಕೃತಿ ನೆಲೆಯಾಗಿ ನಿಂತಿದೆ.
ಮೊದಲಿಗೆ ಉಳವಿಗೆ ಸಾಗಿದ ಶರಣರ ಪ್ರವಾಸದ ವಿವರ ಅರಿಯೋಣ.
ಸೊನ್ನಲಾಪುರದಲ್ಲಿ ಕೆಲವು ದಿನ ಕಳೆದ ಮೇಲೆ ಶರಣರು ತಮ್ಮ ಪ್ರವಾಸ ಮುಂದುವರೆಸಿದರು. ಈಗ ಅವರಿಗೆ ಮುಖ್ಯವಾದ ತೊಂದರೆ ಇದ್ದದ್ದೇ ಭೀಮಾನದಿಯನ್ನು ದಾಟುವದು.
ಭೀಮಾನದಿ ದಾಟಲು ಎರಡು ಮಾರ್ಗಗಳಿದ್ದವು ಒಂದು ಪಂಢರಪುರದ ಹತ್ತಿರ ಮತ್ತು ಇನ್ನೊಂದು ಮಾಚ್ನೂರ ಹತ್ತಿರ. ಆದರೆ ಅಲ್ಲಿ ಯೋಧರ ಕಣ್ಗಾವಲು ಬಲವಾಗಿತ್ತು. ಅಲ್ಲಿ ಸಾಗುವದು ಅಪಾಯವಾಗಿತ್ತು.
ದೋಣಿಗಳ ಮೂಲಕ ನದಿ ದಾಟುವದೊಂದೇ ಅವರಿಗಿರುವ ಒಂದೇ ದಾರಿ ಅದೂ ಯೋಧರ ಕಣ್ಣುತಪ್ಪಿಸಿ. ಅದಕ್ಕಾಗಿ ಅವರು ಕಾಡಿನಿಂದ ಆವೃತವಾದ ಹಲವು ಜಾಗಗಳನ್ನು ಆರಿಸಿಕೊಂಡರು. ಎಲ್ಲರೂ ನದಿದಾಟಲು ಹಲವು ದಿನಗಳೇ ಬೇಕಾಗಿತ್ತು.
ಸೊನ್ನಲಾಪುರದಿಂದ ಅವರು ನಾಲ್ಕು ಬೇರೆ ಬೇರೆ ಮಾರ್ಗವಾಗಿ ಹೊರಟು ಭೀಮಾ ನದಿ ತಲುಪಿದರು.

**ಮೊದಲ ಮಾರ್ಗ:**












ಮಹಾದೇವ ಮಂದಿರ, (Banegaon) ಬನೆಗಾವದಿಂದ ಹೊರಟ ಅವರು

**ಮೊದಲನೇಯ ಮಾರ್ಗ:**

1. ಮಹಾದೇವ ಮಂದಿರ, ರಾನ್ಮ್ಯಾಸ್ತೆ (Ranmaste)
2. ಮಹಾದೇವ ಮಂದಿರ, ಆಸ್ತೆ (Ashte)
3. ಮಹಾದೇವ ಮಂದಿರ, ಪೊಕರ್ಪುರ (Pokarapur)
4. ಮಹಾದೇವ ಮಂದಿರ, ಸುಸ್ತೆ (Suste)

ಮೂಲಕ ಹಾಯ್ದು ಅವರು ಭೀಮಾ ನದಿ ದಂಡೆಯ ಮೇಲಿನ ಮಹಾದೇವ ಮಂದಿರ, ದೆಗಾವ (Degaon) ತಲುಪಿದರು.

ಮಹಾದೇವ ಮಂದಿರ, (Banegaon) ಬನೆಗಾವದಿಂದ ಹೊರಟ ಅವರು

**ಎರಡನೆಯ ಮಾರ್ಗ:**

1. ಮಹಾದೇವ ಮಂದಿರ, ಧೋಕ ಬಾಬುಲಗಾವ (Babhulgaon))
2. ಮಹಾದೇವ ಮಂದಿರ, ತಂಬಾಲೆ (taMbole)

ಮೂಲಕ ಹಾಯ್ದು ಭೀಮಾ ನದಿ ದಂಡೆಯ ಮೇಲಿನ ಮಹಾದೇವ ಮಂದಿರ, ಪೊಹರಗಾವ (Pohargaon) ತಲುಪಿದರು

ಮಹಾದೇವ ಮಂದಿರ, (Banegaon) ಬನೆಗಾವದಿಂದ ಹೊರಟ ಅವರು

**ಮೂರನೆಯ ಮಾರ್ಗ:**

1. ಮಹಾದೇವ ಮಂದಿರ, ಪಾಕನಿ (Pakani)
2. ಮಹಾದೇವ ಮಂದಿರ, ಕುರುಲ (Kurul)
3. ಮಹಾದೇವ ಮಂದಿರ, ಕೊಥಾಲೆ (Kothale)

ಮೂಲಕ ಹಾಯ್ದು ಭೀಮಾ ನದಿ ದಂಡೆಯ ಮೇಲಿನ ಮಹಾದೇವ ಮಂದಿರ, ಘೊಡೇಶ್ವರ (Ghodeshvara) ತಲುಪಿದರು

ಮಹಾದೇವ ಮಂದಿರ, (Banegaon) ಬನೆಗಾವದಿಂದ ಹೊರಟ ಅವರು

**ನಾಲ್ಕನೇಯ ಮಾರ್ಗ:**

1. ಮಹಾದೇವ ಮಂದಿರ, ಶಿಂಘೊಲ (Shingola)
2. ಮಹಾದೇವ ಮಂದಿರ, ಗುಂಜೆಗಾವ (Gunjegaon)
3. ಮಹಾದೇವ ಮಂದಿರ, ಜಾಮಗಾವ (Jamgaon) ಮೂಲಕ ಹಾಯ್ದು

ಭೀಮಾ ನದಿ ದಂಡೆಯ ಮೇಲಿನ ಮಹಾದೇವ ಮಂದಿರ, ಶಿದ್ಧಾಪುರ (Shiddhapur) ತಲುಪಿದರು

ಮಹಾದೇವ ಮಂದಿರ, ಪೊಹರಗಾವ (Pohargaon, ಮಹಾದೇವ ಮಂದಿರ, ಫುಲಚಿಂಚೋಳಿ

ಮತ್ತು ಮಹಾದೇವ ಮಂದಿರ, ಸುಶ್ತೆ ನಡುವಿನ ಪ್ರದೇಶದಲ್ಲಿ ಇವರು ವಾಸ್ತವ್ಯ ಹೂಡಿ ಭೀಮಾ ನದಿ ದಾಟಿದರು.




ನಾನಿಲ್ಲಿ ಒಂದು ವೈಜ್ಞಾನಿಕ ಸಾಕ್ಷಿ ಕೊಟ್ಟಿರುವೆ. Google map ದಲ್ಲಿ ಮಹಾದೇವ ಮಂದಿರಗಳು ಎಲ್ಲಿವೆ ಎಂದು ಗುರುತಿಸಿದಾಗ ಅಲ್ಲಿ ಒಂದು ದಾರಿ ಸಿಕ್ಕಿತು ಅದೂ

ಬಸವಕಲ್ಯಾಣದಿಂದ ಕುಡಚಿಯವರೆಗೆ ಸ್ಪಷ್ಟವಾಗಿ ಆನಂತರ ಉಳವಿಯವರೆಗೆ ಚದುರಿದ ದಾರಿ ಕಾಣಿಸಿತು ಅವುಗಳ ವಿವರಣೆ ಕೊಡುತ್ತಾ ಬಂದಿರುವೆ.
ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪ್ರತಿ ಹದಿನೈದು ಇಪ್ಪತ್ತು ಕಿ ಮೀ ಅಂತರದಲ್ಲಿ ಸ್ವಲ್ಪ ಅಂತರದಲ್ಲಿ ಮೂರ್ನಾಲ್ಕು ಮಹಾದೇವ ಮಂದಿರಗಳು ಮತ್ತು ಸನಿಹದಲ್ಲಿ ಹೊಂಡ ಅಥವಾ ಕೆರೆಗಳಿರುವದು.
ಅವು ಮೊದಲು ಅಲ್ಲಿದ್ದವೋ ಇಲ್ಲವೋ ಎನ್ನುವದನ್ನು ನಿರ್ಧರಿಸಬೇಕಾಗಿದೆ. ಆದರೆ ಒಂದು ಕಡೆ ಶರಣರು, ಇನ್ನೊಂದು ಕಡೆ ಯೋಧರು ಮತ್ತೊಂದು ಕಡೆ ಸಾರ್ವಜನಿಕರು ಕೆಲವು ದಿನ ತಂಗಿದ್ದರು. ಅದರ ಸಂಕೇತವಾಗಿ ಅಲ್ಲಿ ಮಹಾದೇವ ಮಂದಿರವನ್ನು ನಿರ್ಮಿಸಿದರು ಎನ್ನುವದು ನಿರ್ವಿವಾದ.
ಅಲ್ಲದೇ ಈ ಮಂದಿರಗಳ ಹತ್ತಿರ ವಿಶಾಲವಾದ ಬಯಲಿತ್ತು ಎನ್ನುವದನ್ನೂ ಗುರುತಿಸಬಹುದಾಗಿದೆ. ಅಂದರೆ ಶರಣರು ಇಲ್ಲಿ ತಂಗಿ ಬಂದ ಭಕ್ತರಿಗೆ ಪ್ರವಚನ ಕೊಟ್ಟು ಅವರ ಜೊತೆಗೆ ಕಾಯಕಯೋಗಿಗಳನ್ನು ಕಳಿಸಿ ಅವರಿಗೆ ನೆಲೆಯೊದಗಿಸುವ ಪ್ರಯತ್ನ ನಡೆಯಿತು.
ಈಗಲೂ ಪ್ರತಿ ಸೋಮವಾರ ಎಲ್ಲ ಕಾಯಕಯೋಗಿಗಳು ಕಾಯಕಕ್ಕೆ ರಜೆ ಕೊಟ್ಟು ಎಡೆ ತೆಗೆದುಕೊಂಡು ಮಂದಿರಕ್ಕೆ ಬಂದು ಅಲ್ಲಿರುವ ಶರಣರ ಪ್ರವಚನ ಕೇಳುವ ಪದ್ಧತಿ ಇನ್ನೂ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಅವರೆಲ್ಲ ತಂದ ಎಡೆ ಉಪಯೋಗಿಸಿ ಅಲ್ಲಿ ದಾಸೋಹ ನಡೆದುಕೊಂಡು ಬಂದಿದೆ.
ಹೀಗೆ ಶರಣರು ಪಲಾಯನ ಮಾಡಲಿಲ್ಲ ಬದಲಾಗಿ ಎಲ್ಲ ಕಡೆಗೆ ವಚನಗಳನ್ನು ತಲುಪಿಸಿ ಎಲ್ಲ ಕಾಯಕಯೋಗಿಗಳಿಗೆ ನೆಲೆ ಒದಗಿಸುವ ಕಾರ್ಯ ಮಾಡಿದರು.
ಶರಣರು ಭೀಮಾನದಿಯನ್ನೆಲ್ಲಿ ದಾಟಿದರು ಎನ್ನುವದಕ್ಕೆ ನಿಖರವಾದ ಉತ್ತರ ಕೆಳಗಿನ ಚಿತ್ರ ಕೊಡುತ್ತದೆ. ಪವನಗಂಗಾ ಎನ್ನುವದು ಪಂಢರಪುರ ಮತ್ತು ಮಂಗಳವೆಢೆಯ ಮಧ್ಯ ಭೀಮಾನದಿ ಸೇರುವ ಒಂದು ನದಿ. ಈ ಎರಡೂ ನದಿಗಳು ಸೇರುವ ಸಂಗಮ ಸ್ಥಳ ಇಂದಿಗೂ ಪವಿತ್ರ ಸ್ಥಾನ. ಇಲ್ಲಿ ನದಿ ಊ ಆಕಾರದಲ್ಲಿ ಹರಿಯುತ್ತಿದ್ದು ಇಲ್ಲಿ ನದಿ ದಾಟುವದು ಸುಲಭ. ನದಿ ದಾಟಿದ ಮೇಲೆ ಪವನಗಂಗಾ ನದಿ ದಂಡೆಗುಂಟ ಸರಳವಾಗಿ ಸುಮಾರು 40 ಕಿ ಮೀ ವರೆಗೆ ಯಾರ ಗಮನಕ್ಕೆ ಬಾರದಂತೆ ಸಾಗಿದರು ಎನ್ನುವದಕ್ಕೆ ಅಲ್ಲಿರುವ ಮಹಾದೇವ ಮಂದಿರಗಳು ಸಾಕ್ಷಿ




ಭೀಮಾ ನದಿಯ ದಂಡೆಯ ಮೇಲೆ ಕಾಳಗ ನಡೆದದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಶರಣರು ಕಾದಾಟದಲ್ಲಿ ಅನಿರೀಕ್ಷಿತವಾಗಿ ಸಿಕ್ಕ ಸಹಾಯದಿಂದ ಜಯಗಳಿಸಿ ನದಿ ದಾಟಿದರು ಎನ್ನುವದನ್ನು ವಿವರಿಸುತ್ತಾರೆ. ಕಾಳಗ ನಡೆದದ್ದು ನಿಜ. ಆದರೆ ಅದು ಶರಣರ ಬಗ್ಗೆ ಅನುಕಂಪವುಳ್ಳ ಯೋಧರ ಮತ್ತು ಸಂಪ್ರದಾಯಾವಾದಿಗಳ ಮತ್ತು ರಾಜನ ಪ್ರೇರಣೆ ಮತ್ತು ಆಮಿಶಗಳಿಂದ ಶರಣರ ಕೊಲೆ ಮಾಡುತ್ತಿದ್ದ ಯೊಧರ ನಡುವೆ ನಡೆದ ಕಾಳಗ. ಇಲ್ಲಿ ಜಯಗಳಿಸಿದ ಶರಣರ ಅಭಿಮಾನಿ ಯೋಧರ ಪಡೆ ನದಿ ದಾಟಿ ಬಂದು ಶರಣರ ಬೆಂಗಾವಲಾಗಿ ನಿಂತರು.
ಶರಣರು ವಾಸ್ತವ್ಯ ಮಾಡಿದ ಸ್ಥಳದ ಅನತಿ ದೂರದಲ್ಲಿಅವರು ವಸತಿ ಮಾಡಿ ಶರಣರ ರಕ್ಷಣೆಯೇ ಅವರ ಪರಮ ಗುರಿಯಾಗಿತ್ತು. ಮಾಚಣ್ಣ ಮತ್ತು ಚನ್ನಬಸವಣ್ಣನವರ ಮಾರ್ಗದರ್ಶನದಲ್ಲಿ ಅವರು ವಚನಗಳನ್ನು ಅರ್ಥ ಮಾಡಿಕೊಂಡು ಅನುಸರಿಸಲು ಪ್ರಾರಂಭಿಸಿದರು.
ಕೆಲವರು ಮೊದಲೇ ಅಸ್ತಿತ್ವದಲ್ಲಿದ್ದ ಶ್ರೀ ವೀರಭದ್ರೇಶ್ವರ ಪೂಜಾವಿಧಾನದಲ್ಲಿದ್ದ "ಗುಗ್ಗಳ ಪೂಜಾ ವಿಧಾನ" ದಲ್ಲಿ ವಚನಗಳನ್ನು ಅಳವಡಿಸಿಕೊಂಡು ತಮ್ಮ ಸಮವಸ್ತ್ರವನ್ನು ಸ್ವಲ್ಪ ಮಾರ್ಪಡಿಸಿಕೊಂಡು ಪುರಾಣಿಕರ ಸಹಾಯಕರಾಗಿ ಊರೂರು ಸುತ್ತುತ್ತ ವಚನ ಜನಮನದಲ್ಲಿ ನೆಲೆಸುವಂತೆ ಮಾಡಿದರು. ಈಗಲೂ ಈ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ.
ಹಾಗಾದರೆ ಈ ಕಾಳಗ ನಡೆದದ್ದೆಲ್ಲಿ ಎನ್ನುವ ಪ್ರಶ್ನೆಗೆ ನಿಖರವಾದ ಉತ್ತರ ಇನ್ನೊಂದು ಚಿತ್ರ ಕೊಡುತ್ತದೆ. ಈಗ ಇಲ್ಲಿ ರಾಜಮಾರ್ಗ ಮತ್ತು ಸೇತುವೆ ಇದ್ದು

ಇದು ಅನೇಕ ಮಂದಿರಗಳಿರುವ ಧಾರ್ಮಿಕ ಕೇಂದ್ರುವಾಗಿದೆ. ಇದುವೇ "ಮಾಚನೂರ" ಪಟ್ಟಣ.

ಇಂದೂ ಸಹ ಅದು ಧಾರ್ಮಿಕ ಕ್ಷೇತ್ರ.

ಅಲ್ಲಿಂದ ಮುಂದೆ ಸಾಗಿ ಅವರು ಶರಣರನ್ನು ಸೇರಿಕೊಂಡ ಸ್ಥಳ ಸಿದ್ದವಾಡಿ




ಮಾಚನೂರ ಪಟ್ಟಣದಲ್ಲಿರುವ ಮಂದಿರಗಳು:

| | |
|---|---|
|  |  |









## ಭೀಮಾ ನದಿ ಮತ್ತು ಕೃಷ್ಣಾ ನದಿ ನಡುವಿನ ಪ್ರದೇಶದಲ್ಲಿ ಶರಣರ ಪಯಣ:






ಕಲ್ಯಾಣದ ಮೊದಲ ರಾಜಧಾನಿ ಮಂಗಳವೇಢೆ. ಬಸವಣ್ಣನವರು ಕೂಡಲಸಂಗಮದಲ್ಲಿ ವಿಧ್ಯಾಭ್ಯಾಸ ಮುಗಿಸಿ ತಮ್ಮ ಪ್ರಾವಿಣ್ಯತೆಯಿಂದ ಕರಣಿಕ ಹುದ್ದೆಯಿಂದ ಮಂತ್ರಿಗಳಾದದ್ದು ಇಲ್ಲಿಯೇ. ಅಣ್ಣ ಬಸವಣ್ಣನವರ ಉತ್ತಮ ಆಡಳಿತದ ಪರಿಣಾಮವಾಗಿ ಪ್ರಗತಿ ಸಾಧಿಸಿದ ಪ್ರದೇಶ ಇದು. ಅಣ್ಣನವರ ಅಭಿಮಾನಿಗಳಾದ ಆಡಳಿತಗಾರರು ಮತ್ತು ಜನಸಾಮಾನ್ಯರು ಇರುವ ನಾಡು ಇದು.

ಹಾಗಾಗಿ ಈ ಭಾಗದಲ್ಲಿ ಶರಣರ ಪ್ರಯಾಣ ನಿರಂತರವಾಗಿ ಸಾಗಿತು. ಈ ಭಾಗದ ಹೆಚ್ಚು ಕಡಿಮೆ ಎಲ್ಲ ಗ್ರಾಮಗಳಲ್ಲಿ ಕಾಯಕಯೋಗಿಗಳು ಆಶ್ರಯ ಪಡೆದರು. ಹಾಗಾಗಿಯೇ ಇಂದಿನವರೆಗೆ ಇಲ್ಲಿಯ ಎಲ್ಲ ಗ್ರಾಮಗಳು ಪ್ರಗತಿ ಪಥದಲ್ಲಿವೆ. ಶರಣರು ಸಾಗಿದ ಮಾರ್ಗದ ಚಿತ್ರಗಳು ಇಲ್ಲಿವೆ.

## ಭೀಮಾನದಿಯಿಂದ ಸಂಗೋಲಾ:

ಭೀಮಾನದಿಯಿಂದ ಸಂಗೋಲಾ:

1. ಮಹಾದೇವ ಮಂದಿರ ಚಾಲೆ
2. ಮಹಾದೇವ ಮಂದಿರ ರಾಜನಿ
3. ಮಹಾದೇವ ಮಂದಿರ ಸಿದ್ದೇವಾಡಿ
4. ಮಹಾದೇವ ಮಂದಿರ ವಾಢೇಗಾವ

ಮಹಾದೇವ ಮಂದಿರ ಸಂಗೋಲಾ




## ಸಂಗೋಲಾದಿಂದ ಬಸಪ್ಪನವಾಡಿ:

ಸಂಗೋಲಾದಿಂದ ಬಸಪ್ಪನವಾಡಿ:

1. ಮಹಾದೇವ ಮಂದಿರ ಸಂಗೋಲಾ
2. ಮಹಾದೇವ ಮಂದಿರ ಖಂಢೇರವಾಡಿ
3. ಮಹಾದೇವ ಮಂದಿರ ರೇವ್ನಾಲ

ಮಹಾದೇವ ಮಂದಿರ ಬಸಪ್ಪವಾಡಿ




## ಬಸಪ್ಪನವಾಡಿ ಯಿಂದ ಕೃಷ್ಣಾ ನದಿ:

## ಒಂದನೇಯ ದಾರಿ

1. ಮಹಾದೇವ ಮಂದಿರ ಬಸಪ್ಪನವಾಡಿ
2. ಮಹಾದೇವ ಮಂದಿರ ಸಾಂಗ್ಲಿ
3. ಮಹಾದೇವ ಮಂದಿರ ಲಿಂಗನೂರ
4. ಮಹಾದೇವ ಮಂದಿರ ಉಗಾರ

## ಎರಡನೆಯ ದಾರಿ

1. ಮಹಾದೇವ ಮಂದಿರ ಬಸಪ್ಪನವಾಡಿ
2. ಮಹಾದೇವ ಮಂದಿರ ನರೆವಡಿ
3. ಮಹಾದೇವ ಮಂದಿರ ರಾಜಾಪುರ

ಮಹಾದೇವ ಮಂದಿರ ಯಡೂರ




ಮಂಗಸುಳಿಯಿಂದ ಪೂರ್ವಕ್ಕೆ ನಾರ್ವಾಡದವರೆಗೆ ಸಾಗಿ ನಾಲ್ಕು ವಿವಿಧ ದಾರಿಯಲ್ಲಿ ಸಾಗಿ ನದಿ ದಂಡೆಯಲ್ಲಿ ತಂಗಿದರು. ಎಲ್ಲರೂ ನದಿ ದಾಟಿದ ಮೇಲೆ ಅಲ್ಲಿಂದ ಬೇರೆ ಬೇರೆ ಮಾರ್ಗಗಳಲ್ಲಿ ಸಾಗಿದರು. ಸಾಧ್ಯವಾದಷ್ಟು ಶರಣರು ಮಾರ್ಗಮಧ್ಯದಲ್ಲಿ ತಮ್ಮ ಕಾಯಕ ಕೈಕೊಂಡು ಅಲ್ಲಿಯೇ ನೆಲೆಸಿದರು. ಸಶಕ್ತರಾದ ಕಾಡು ಗುಡ್ಡ ಸಾಗುವ ಶಕ್ತಿಯಿದ್ದವರು ಮುಂದೆ ಸಾಗಿದರು.

1. ಧವಳಿಯ ಸಮೀಪ ತಂಗಿ ಅಲ್ಲಿಂದ ನದಿ ದಾಟಿ ಘಾಲ್ವಾಡದಲ್ಲಿ ನೆಲೆಸಿದರು. ಅಲ್ಲಿಂದ ಸಾಗಿದ ಅವರು
2. ಚಂಡೂರ ಸಮೀಪ ಪಂಚಗಂಗಾ ನದಿ ದಂಡೆಯ ಮೇಲೆ ವಸತಿ ಮಾಡಿ ನದಿ ದಾಟಿದರು. ಕೋಗಿಲ ಸಮೀಪ ಧೂಧಗಂಗಾ ನದಿ ದಾಟಿದರು.
3. ಆಮೇಲೆ ವಡಾಗೋಳ ಮೂಲಕ ಸಾಗಿ ಬಸರೆವಾಡಿ, ನಿಲ್ಪನ್ ಮತ್ತು ಪಾಚೆವಾಡಿ ಸಮೀಪದ ಕೊಳ್ಳ ಪ್ರದೇಶದಲ್ಲಿ ತಂಗಿದರು.

4. ಶೇಡ್ಬಾಲದ ಸಮೀಪ ತಂಗಿ ಅಲ್ಲಿಂದ ನದಿ ದಾಟಿ ಕುರುಂದ್ವಾಡಿ ಸಮೀಪ ನೆಲೆಸಿದರು. ಅಲ್ಲಿಂದ ಸಾಗಿದ ಅವರು
5. ಸದಲ್ಗಾ, ಬಸ್ತವಾಡ ಮತ್ತು ಭೋಜವಾದ ಸಮೀಪ ವೇದಗಂಗಾ ನದಿ ದಾಟಿದರು.
6. ಆಮೇಲೆ ಬಸರೆವಾಡಿ, ನಿಲ್ಪನ್ ಮತ್ತು ಪಾಚೆವಾಡಿ ಸಮೀಪದ ಕೊಳ್ಳ ಪ್ರದೇಶದಲ್ಲಿ ತಂಗಿದರು.
7. ಮಂಗಾವತಿ ದ ಸಮೀಪ ತಂಗಿ ಅಲ್ಲಿಂದ ನದಿ ದಾಟಿ ರಾಜಾಪುರ ಸಮೀಪ ನೆಲೆಸಿದರು
   ಮತ್ತು ಯಡೂರ ಸಮೀಪ ತಂಗಿ ಅಲ್ಲಿಂದ ನದಿ ದಾಟಿ
   ಅ. ಕಲ್ಲೊಲ್ಲಿ ಸಮೀಪ ನೆಲೆಸಿದರು
   ಆ. ಬಾವನ ಸೌಂದತ್ತಿ ಸಮಿಪ ನೆಲೆಸಿದರು.






ಮೊದಲ ಹಂತದಲ್ಲಿ 70 ಕಿ ಮೀ ದೂರ ಸಾಗಿ ಬಸರೆವಾಡಿ, ನಿಲ್ಪನ್ ಮತ್ತು ಪಾಚೆವಾಡಿ ಸಮೀಪದ ಕೊಳ್ಳ ಪ್ರದೇಶದಲ್ಲಿ ತಂಗಿದರು. ಅವರು ಸಾಗಿದ ದಾರಿ ಮತ್ತು




ತಂಗಿದ ಪ್ರದೇಶಗಳನ್ನು ಚಿತ್ರಗಳು ತೋರಿಸುತ್ತವೆ.









ಅಲ್ಲಿಂದ ಯುವಕರಾದ ಸಶಕ್ತರಾದ, ಬೆಟ್ಟ ಗುಡ್ಡಗಳಲ್ಲಿ ಸಂಚರಿಸಲು ಶಕ್ತರಾದ ಶರಣರು ಮುಂದೆ ಹೋಗಲು ತಯಾರಾದರು ಉಳಿದವರೆಲ್ಲ ಅಲ್ಲಿಯ ಸುತ್ತಮುತ್ತಲ ತಮಗೆ ಅನುಕೂಲವಾದ ಸ್ಥಳಗಳಲ್ಲಿ ತಮ್ಮ ಕಾಯಕ ಕೈಕೊಂಡು ನೆಲೆಸಿದರು.

ಅವರು ಮುಂದೆ ಸಾಗಿದ್ದು ದಟ್ಟ ಕಾಡುಗಳಲ್ಲಿ ಈಗಲೂ ಅಲ್ಲಿ ದುಸ್ತರವಾದ ದುರ್ಗಮವಾದ ದಾರಿಗಳಿದ್ದು ಅಲ್ಲಿ ವನ್ಯಜಿವಿಗಳು ಈಗಲೂ ಇವೆ. ಕಠಿಣವಾದ ಆ ದಾರಿಯಲ್ಲಿ ಬರುವ ಎಲ್ಲ ಕಷ್ಟಕಾರ್ಪಣ್ಯಗಳನ್ನು ಎದುರಿಸಬಲ್ಲ ಶರಣರು ಸಾಗಿರಬಹುದಾದ ದಾರಿ ತೋರಿಸುವ ಚಿತ್ರ ಇಲ್ಲಿದೆ. ಇಲ್ಲಿ ಜನವಸತಿ ಅತೀ ಕಡಿಮೆ ಮತ್ತು ಕಾಡಿನ ಜನರಿಗೆ ಶರಣರ ಬಗ್ಗೆ ಗೊತ್ತಿರುವದು ಅಸಾಧ್ಯ ಹೀಗಾಗಿ ಅಲ್ಲಿ ಶರಣರ ನೆನಪಿಗಾಗಿ ಕಟ್ಟಿದ ಮಹಾದೇವ ಮಂದಿರಗಳು ಕಡಿಮೆ. ಆದರೆ ಅಲ್ಲಿ ಪುರಾತನ ಕಾಲದ ದೇವಾಲಯಗಳು ಮತ್ತು ಶರಣರ ಹೆಸರಿನಮೇಲೆ ಆಮೇಲೆ ನಿರ್ಮಿಸಿದ ದೇವಾಲಯಗಳಿವೆ.

ಇಲ್ಲಿಂದ ಹೊರಟವರೆಷ್ಟು? ದಾರಿಯಲ್ಲಿ ಕಾಡು ಪ್ರಾಣಿಗಳ ಅಥವಾ ಕಾಡುಜನರಿಂದ ಹತರಾದವರು ಎಷ್ಟು ಗೊತ್ತಿಲ್ಲ. ಆದರೆ ಕೆಲವರಾದರೂ ಅಲ್ಲಿ ತಲುಪಿ ಅಲ್ಲಿಗೆ ಬರುವ ಶರಣರ ಬರುವಿಗಾಗಿ ತಯಾರಿ ಮಾಡಿದರು ಎನ್ನುವದು ಸತ್ಯ.

ಪ್ರಥಮ ಹಂತದಲ್ಲಿ ಶರಣರು ಸಾಗಿದ ದಾರಿಯಲ್ಲಿ ಬರುವ ಕೆಲವು ಊರುಗಳು. ಇಲ್ಲಿಯ ಜನರ ಆಚಾರ ವಿಚಾರ ಪರಂಪರೆ ಮತ್ತು ಸಂಸ್ಕೃತಿ ಇಲ್ಲಿ ಕಾಯಕಯೋಗಿಗಳು ಬಂದು ನೆಲೆಸಿದ್ದರು ಎನ್ನುವದನ್ನು ಧೃಢಪಡಿಸುತ್ತವೆ.




## ಕೃಷ್ಣಾ ನದಿ ಮತ್ತು ಮಲಪ್ರಭಾ ನದಿ ನಡುವಿನ ಪ್ರದೇಶದಲ್ಲಿ ಶರಣರ ಪಯಣ:

ಇದುವರೆಗೆ ಕುಡಚಿಯ ಪಶ್ಚಿಮಕ್ಕೆ ಕೃಷ್ಣಾ ನದಿ ದಂಡೆಗುಂಟ ಹೊರಟು ಅನುಕೂಲವಾದಲ್ಲಿ ನದಿ ದಾಟಿ ಉಳವಿಯ ಕಡೆ ಹೊರಟ ಶರಣರ ಪಯಣದ ವಿವರ ತಿಳಿದಿದ್ದೇವೆ.

ಈಗ ಕುಡಚಿಯ ಪೂರ್ವಕ್ಕೆ ಹೊರಟ ಶರಣರ ಪಯಣದ ವಿವರ ಅರಿಯುವ ಪ್ರಯತ್ನ ಮಾಡುವಾ.

ಇದುವರೆಗೆ ಶರಣರೆಲ್ಲಿ ಹೋದರು ಎನ್ನುವದನ್ನು ಅಲ್ಲಿರುವ ಮಹಾದೇವ ಮಂದಿರಗಳ ಆಧಾರದಿಂದ ಅರಿತಿದ್ದೇವೆ. ಆದರೆ ಈಗ ಆ ಪದ್ಧತಿ ಇಲ್ಲಿ ಅನ್ವಯಿಸುವದಿಲ್ಲ.

ಬಸವನ ಬಾಗೇವಾಡಿಯಿಂದ ಕೇವಲ 60 ಕಿ ಮೀ ದೂರವಿರುವ ಈ ಪ್ರದೇಶದ ಜನ ಅಣ್ಣ ಬಸವಣ್ಣ ಮತ್ತು ಶರಣರನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ಹಾಗಾಗಿ ಈ ಭಾಗದಲ್ಲಿ ಅಣ್ಣ ಬಸವಣ್ಣನ ಮತ್ತು ಶರಣರ ಹೆಸರಿನ ಮಂದಿರಗಳನ್ನು ಹುಡುಕಬೇಕು ಮತ್ತು ಶರಣರ ಚರಿತ್ರೆಗಳಲ್ಲಿ ಹೆಸರಿಸಿರುವ ಕೆಲವು ಊರುಗಳನ್ನು ಆಧಾರವಾಗಿ ತೆಗೆದುಕೊಳ್ಳಬೇಕಾಗುವದು.

ಮೊದಲಿಗೆ ಕುಡಚಿಯಿಂದ ಅತೀ ದೂರ ಸಾಗಿ ಅಲ್ಲಿ ಕೃಷ್ಣಾ ನದಿದಾಟಿದ ವಿವರ ಕೊಡುವೆ.

**ಕೃಷ್ಣಾ ನದಿ ದಾಟಿದ ಸ್ಥಳಗಳು - 1:**

ಲಗಲಿ ಕುಡಚಿಯಿಂದ ಪೂರ್ವಕ್ಕೆ ಸುಮಾರು 70 ಕಿ ಮೀ ದೂರದಲ್ಲಿ ಮತ್ತು ಕೂಡಲಸಂಗಮದಿಂದಲೂ ಅಷ್ಟೇ ದೂರವಿರುವ ಗ್ರಾಮ. ಇಲ್ಲಿ ಕೃಷ್ಣಾ ನದಿ ಅಂಕು ಡೊಂಕಾಗಿ ಹರಿಯುತ್ತದೆ. ಇವರು ಕೃಷ್ಣಾನದಿಯನ್ನು ಹನಮಸಾಗರ, ಬಿದರಿ, ಚಿಕ್ಕ ಗಲಗಲಿ, ಸುತಗುಂಡಿ ಮುಂತಾದ ಸ್ಥಳಗಳಲ್ಲಿ ದಾಟಿರಬಹುದು. ಇಲ್ಲಿಂದ ಸ್ವಲ್ಪ ದೂರದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಅವರ ಎರಡು

ಮಂದಿರಗಳಿದ್ದು ಇಲ್ಲಿ ಅವರು ವಾಸವಾಗಿರಬಹುದಾದ ಸಾಧ್ಯತೆಇದೆ ಅಲ್ಲದೆ ಶರಣರು ಕೃಷ್ಣಾ ಹಾಗೂ ಘಟಪ್ರಭಾ ನದಿ ದಾಟಲು ಅವರು ಸಾಕಷ್ಟು ಶ್ರಮಿಸಿರುವ ಸಾಧ್ಯತೆ ಇದೆ.




ಅಲ್ಲಿ ಸನಿಹದಲ್ಲಿ ಇರುವ ಬಸವೇಶ್ವರ ಮಂದಿರಗಳು ಇಲ್ಲಿ ಶರಣರು ವಾಸಿಸಬಹುದು. ಇಲ್ಲಿಯ ಮೂರು ವೀರಭದ್ರೇಶ್ವರ ಮಂದಿರಗಳು ಶರಣ ಕಾವಲಿಗಾಗಿ ಯೋಧರ ಪಡೆ ಇಲ್ಲಿತ್ತು ಎನ್ನುವದರ ಸಂಕೇತ. ಮಾಚಣ್ಣನವರು ಅವರ ಜೊತೆಗಿದ್ದ ಬಗ್ಗೆ ಹೇಳುವದು ಕಷ್ಟ. ಆದರೆ ಅವರ ರಕ್ಷಣೆಯಲ್ಲಿ ಶರಣರ ಪಯಣ ಸಾಗಿತು ಎನ್ನುವದು ಸ್ಪಷ್ಟ.

**ಘಟಪ್ರಭಾ ನದಿ ದಾಟಿದ ಸ್ಥಳಗಳು:**

ಇನ್ನು ಮುಧೊಳ, ರೂಗಿ, ಗುಳಗಾ ಜಂಬಗಿ ಮುಂತಾದ ಊರುಗಳ ಸನಿಹ ಘಟಪ್ರಭಾ ನದಿ ದಾಟಿರಬಹುದು ಎನ್ನುವದನ್ನು ಹೇಳಲು ಅಲ್ಲಿ ಸನಿಹದಲ್ಲಿಯ ಮಂದಿರಗಳು ಸಾಕ್ಷಿ.

ಕಾಲಕ್ರಮದಲ್ಲಿ ಊರುಗಳ ಹೆಸರುಗಳು ಬದಲಾಗಿವೆ ಮತ್ತು ಆಣೆಕಟ್ಟು ಕಟ್ಟಿದ ನಂತರ ನದಿಯ ಪಾತ್ರದಲ್ಲಿ ಬದಲಾವಣೆ ಆಗಿದೆ.

ಆದರೆ ಆ ಪ್ರದೇಶದಲ್ಲಿಯ ಜನರ ಜೀವನಕ್ರಮ ನೋಡಿದಾಗ ಇವರೆಲ್ಲರಲ್ಲಿ ಶರಣ ಸಂಸ್ಕಾರ ಹಾಸುಹೊಕ್ಕಾಗಿದೆ. ಇವರ ಕಾಯಕ ಆಚಾರ ವಿಚಾರ ವಚನ ಸಾಹಿತ್ಯ ಪ್ರೇಮ ಇಲ್ಲಿ ಶರಣರ ಶ್ರಮ ಸಾರ್ಥಕವಾಗಿದೆ ಎನ್ನುವದನ್ನು ಧೃಡಪಡಿಸುತ್ತದೆ. ಘಟಪ್ರಭಾ ನದಿ ದಾಟಿದ ನಂತರ ಅವರು ಮಲಪ್ರಭಾ ದಂಡೆಯವರೆಗೆ ಸುಮಾರು 80 ಕಿಮೀ ಸಂಚರಿಸಿ ಮಲಪ್ರಭಾ ನದಿ ದಂಡೆ ಸೇರಿದರು.




ಮಾರ್ಗಮಧ್ಯದಲ್ಲಿ ಗೊಡಚಿಯಲ್ಲಿ ಹಲವು ಶರಣರು ಉಳಿದುಕೊಂಡಿದ್ದಾರೆ. ಈಗ ಸೌದತ್ತಿ ಸಮೀಪ ರೇಣುಕಾ ಸಾಗರ ಜಲಾಶಯ ನಿರ್ಮಾಣವಾಗಿದ್ದು 12 ನೇಯ ಶತಮಾನದಲ್ಲಿದ್ದ ವಾಸ್ತವಿಕ ಚಿತ್ರ ಕಲ್ಪಿಸಿಕೊಳ್ಳುವದು ಅನಿವಾರ್ಯವಾಗಿದೆ.

ಮುಧೊಳ, ಯಾದವಾಡ,

ಕುನ್ನುರ, ಗೊಡಚಿ,

ಇಟ್ನಾಳ, ಕೊರಕೊಪ್ಪ,

ತೋರಣಗಟ್ಟಿ,. ಚುಂಚನೂರ

ಮುಂತಾದ ಗ್ರಾಮಗಳಲ್ಲಿ ಕೆಲವು ಗ್ರಾಮಗಳಲ್ಲಿ ತಂಗಿ ಅಲ್ಲಿಯ ಸುತ್ತಮುತ್ತಲ ಗ್ರಾಮಗಳಲ್ಲಿ ಕಾಯಕಯೋಗಿಗಳಿಗೆ ಆಶ್ರಯ ಒದಗಿಸಿ ಶರಣ ತತ್ವ ಪ್ರಚಾರ ಮಾಡಿದರು. ಅಲ್ಲಿರುವ ಶರಣರ ಹೆಸರಿನ ಮಂದಿರಗಳು ಇಂದಿಗೂ ವಚನ ಸಹಿತ್ಯ ಪ್ರಚಾರ ಮಡುವ ಕೇಂದ್ರಗಳಾಗಿವೆ.



ರಭಸವಾಗಿ ಹರಿಯುವ ನದಿ ದಾಟಲು ಹಲವು ದಿನ ಕಾಯಬೇಕಾಗಿತ್ತು. ಅದಕ್ಕಾಗಿ ಮಲಪ್ರಭಾ ನದಿ ದಂಡೆಯ ಹಲವು ಗ್ರಾಮಗಳಲ್ಲಿ ಮತ್ತು ಕಾಡಿನಲ್ಲಿ ವಸತಿ ಮಾಡಿದರು.












ಅಕ್ಕನಾಗಮ್ಮ, ಗಂಗಾಂಬಿಕೆ ಮುಂತಾದ ಹಿರಿಯ ಶರಣರು ಮಂಗಸುಳಿಯ ಗ್ರಾಮದ ಸುತ್ತಲಿನ ಅರಣ್ಯದಲ್ಲಿ ಎಲ್ಲ ಶರಣರು ಕೃಷ್ಣಾ ನದಿ ದಾಟುವವರೆಗೆ ವಾಸವಿದ್ದರು. ಚನ್ನಬಸವಣ್ಣನವರ ನೇತೃತ್ವದಲ್ಲಿ ಅಲ್ಲಿ ಉಳಿದ ಶರಣರೆಲ್ಲ ಹೊರಟು ಐನಾಪುರ ಸಮೀಪದ ಅರಣ್ಯದಲ್ಲಿ ಬಂದು ನೆಲೆಸಿದರು. U ಆಕಾರದಲ್ಲಿ ಹರಿಯುತ್ತಿದ್ದ ಕೃಷ್ಣಾ ನದಿ ಅವರಿಗೆ ಕಲ್ಯಾಣ ಯೋಧರಿಂದ ಮರೆಮಾಡಿ ನೈಸರ್ಗಿಕ ರಕ್ಷಣೆ ಒದಗಿಸಿತು. ಇಲ್ಲಿ ಕೃಷ್ಣಾ ನದಿ ದಾಟಿ ಸಿದ್ದಾಪುರ ಗ್ರಾಮದ ಸಮೀಪ ನೆಲೆಸಿ ಮಾಚಣ್ಣನವರ ಸಂದೇಶಕ್ಕಾಗಿ ಕಾಯತೊಡಗಿದರು.
ಉಳಿದ ಶರಣರೆಲ್ಲ ಮಲಪ್ರಭಾ ದಂಡೆ ತಲುಪಿದ ಮೇಲೆ (ಮುರ್ಗೋಡ) ಮುರಗೋಡದಿಂದ ವಿವಿಧ ಸ್ಥಾನಗಳಲ್ಲಿ ಈ ಎಲ್ಲ ಶರಣರಿಗಾಗಿ ಉಳಿಯಲು ಮತ್ತು ಪ್ರವಾಸ ಮಾಡುವ ವ್ಯವಸ್ಥೆ ಮಾಡಿ ಮಾಚಣ್ಣನವರು ತಮ್ಮ ಯೋಧರೊಡನೆ ಬಂದು ಇವರನ್ನು ಸೇರಿಕೊಂಡರು.
ಈ ಶರಣರ ಗುಂಪಿನಲ್ಲಿ ಹಿರಿಯ ಶರಣರಿದ್ದುದರಿಂದ ದಿನಾಲೂ ಕೆಲವೇ ಅಂತರ ಕ್ರಮಿಸುತ್ತಿದ್ದರು. ಇವರು ಸಾಗಿದ ದಾರಿಯಲ್ಲಿದ್ದ ಗ್ರಾಮದ ಜನರೆಲ್ಲ ಇವರ ದರ್ಶನ ಪಡೆದು ಧನ್ಯರಾದರು. ಇವರು ಸಾಗಿದ ಪ್ರದೇಶದಲ್ಲಿ ಇಂದಿಗೂ ಶರಣ ಸಂಸ್ಕೃತಿ ಎಲ್ಲರಲ್ಲಿ ಅಳವಟ್ಟಿದ್ದು ಎಲ್ಲ ಗ್ರಾಮಗಳಲ್ಲಿ ಕಾಯಕಯೋಗಿಗಳಿದ್ದು ತಮ್ಮ ಪರಂಪರೆಯನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಉಳಿಸಿಕೊಂಡು ಬಂದಿದ್ದಾರೆ.
ಈಗ ಈ ಪ್ರದೇಶದಲ್ಲಿ ಬಸವಣ್ಣ ಮಂದಿರಗಳು, ವೀರಭದ್ರೇಶ್ವರ ಮಂದಿರಗಳು ಮತ್ತು ಶರಣರ ಹೆಸರಿನಲ್ಲಿ ಅನೇಕ ಭವ್ಯ ಮಂದಿರಗಳೂ ಅಲ್ಲದೆ ಶರಣ ಪರಂಪರೆ ಉಳವಿಗಾಗಿ ಪರಿಶ್ರಮಿಸುತ್ತಿರುವ ಅನೇಕ ಮಠಗಳೂ ಇಲ್ಲಿವೆ.
ಅವರು ಸಾಗಿದ ದಾರಿಯಲ್ಲಿರುವ ಪ್ರಮುಖ ಗ್ರಾಮಗಳು:

1. ಸಿದ್ದಾಪೂರ
2. ಶಂಕರಟ್ಟಿ
3. ಖೇಮಲಾಪೂರ
4. ಕೋಳಿಗುಡ್ಡ
5. ಹಾರೂಗೇರಿ
6. ಸಸಾಲಟ್ಟಿ
7. ಮುಗಳಖೋಡ
8. ಇಟ್ನಾಳ
9. ಮೂಡಲಗಿ
10. ನಾಗನೂರ
11. ಮಸಗುಪ್ಪಿ
12. ಬೆಟಗೂರ
14. ಸತ್ತಿಗೇರಿ
15. ಕೊರಕೊಪ್ಪ
16. ಯರಗಟ್ಟಿ
17. ಮುರಗೋಡ

**ಮುರಗೋಡ:**

ಮುರಗೋಡ ಸವದತ್ತಿಯ ವಾಯವ್ಯಕ್ಕೆ ಸು. 24 ಕಿಮೀ ದೂರದಲ್ಲಿದೆ. ಇದಕ್ಕೆ ಹಿಂದೆ ತ್ರಿಶಂಗಪುರವೆಂದು ಕರೆಯುತ್ತಿದ್ದರಂತೆ. ಒಂದು ಹಳೆಯ ಕೋಟೆಯಿದ್ದು 1565ರಲ್ಲಿ ನವಲಗುಂದ ವಿಠಲಗೌಡ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ. 1680ರಲ್ಲಿ ಶಿವಾಜಿ ಮರಣಹೊಂದುವ ಕಾಲಕ್ಕೆ ಇದು ಅವರ ವಶದಲ್ಲಿತ್ತು. ಇದು ಮಲಪ್ರಭಾ ನದಿಯಿಂದ ಸುಮಾರು 11 ಕಿ ಮೀ ದೂರದಲ್ಲಿದ್ದು ಸಮೀಪದಲ್ಲಿ ಸೊಲಗ, ಕಾರಿಮಣಿ ಮತ್ತು ಕರಲಕಟ್ಟಿ ಗ್ರಾಮಗಳಿವೆ.

ಇಲ್ಲಿಯ ಸನಿಹದಲ್ಲಿರುವ ಸಿದ್ದನಗವಿ (ಗವಿಲಿಂಗೇಶ್ವರ ಗವಿ) ತುಂಬಾ ಪ್ರಸಿದ್ದವಾದ ಗವಿ ಇದೆ. ಈ ಗವಿ ಸುಮಾರು 12 ಕಿ ಮೀ ವರೆಗೆ ಇರುವದು ಎಂದು ಹೇಳಲಾಗುತ್ತಿದೆ. ಈ ಗವಿಯಲ್ಲಿ ನೀರಿನ ಸಂಗ್ರಹಗಳಿದ್ದು ಶರಣರು ಇಲ್ಲಿ ಆಶ್ರಯ ಪಡೆದಿದ್ದರು ಎಂದು ಹೇಳಲಾಗುತ್ತದೆ. ಮುರಗೋಡ ಕೀಲಿಗಳೆಂದು ಹೆಸರಾದ ಕೀಲಿಗಳು ಇಲ್ಲಿ ತಯಾರಾಗುತ್ತಿದ್ದವು. ಅಂದರೆ ಉತ್ತರಭಾರತದಿಂದ ಬಂದು ಕಲ್ಯಾಣದಲ್ಲಿ ನೆಲೆಸಿದ್ದ ಕೆಲವು ಕಾಯಕಯೋಗಿಗಳು ಶರಣರ ಜೊತೆ ಬಂದು ಇಲ್ಲಿ ನೆಲೆಸಿದರು.




ಇಲ್ಲಿ ಗಮನಿಸಬೇಕಾದ ಅಂಶಗಳು

1. ಇಲ್ಲಿಂದ ನದಿ ಸುಮಾರು 11 ಕಿಮೀ ಅಂತರದಲ್ಲಿದೆ.
2. ಸಿದ್ದನಗವಿಯಲ್ಲಿ ಸುಮಾರು 12 ಕಿ ಮೀ ಸಾಗಿ ಅದರ ಇನ್ನೊಂದು ಬಾಗಿಲ ಮೂಲಕ ಹೊರಬರಬಹುದು ಎನ್ನುವ ಪ್ರತೀತಿ ಇದೆ,
3. ಜಾನಪದ ಕಥೆಯ ಪ್ರಕಾರ ಸವದತ್ತಿಯ ರೇಣುಕಾದೇವಿಯ ತವರುಮನೆ ಮುರಗೋಡ. ಶ್ರೀ ವೀರಭದ್ರೇಶ್ವರರ ತನ್ನ ಅಕ್ಕ ರೇಣುಕಾದೇವಿ ಎಲ್ಲ ಕಾಲದಲ್ಲಿಯೂ ತವರುಮನೆಗೆ ಸುಲಭವಾಗಿ ಬರಲು ದಾರಿ ಮಾಡಿಕೊಟ್ಟಿದ್ದ.

ಈ ಮೂರು ಸಂಗತಿಗಳು ನಮಗೆ ಸಿದ್ದನಗವಿ ತುಂಬಾವಿಶಾಲವಾಗಿದ್ದು ಅದರ ಇನ್ನೊಂದು ಬಾಗಿಲೂ ಮಲಪ್ರಭಾ ನದಿ ಆಚೆಗಿದೆ. ಇದೊಂದು ಮಲಪ್ರಭಾನದಿ ದಾಟಲು ಇರುವ ಸ್ವಾಭಾವಿಕವಾಗಿ ಕಲ್ಲಿನಲ್ಲಿ ನಿರ್ಮಾಣವಾದ ನೆಲಮಾರ್ಗ.

**ಸೊಗಲ ಕ್ಷೇತ್ರ:**

ಮುರುಗೋಡದಿಂದ 5 ಕಿ ಮೀ ದೂರದಲ್ಲಿರುವ ದಕ್ಷಿಣ ಕಾಶಿ ಎಂದು ಹೆಸರು ವಾಸಿಯಾದ ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಶ್ರೀ ಕ್ಷೇತ್ರ ಸೊಗಲ.

ಶ್ರೀ ಕ್ಷೇತ್ರದ ಸೋಮೇಶ್ವರ ಮಂದಿರದ ಸಮೀಪ ಇರುವ ದೊಡ್ಡ ಜಲಪಾತ (125 ಪೂಟ ಎತ್ತರ) ಮತ್ತು ಎರಡು ಸಣ್ಣ ಜಲಪಾತಗಳು (40 ಪೂಟ ಎತ್ತರ) ಒಳಗೊಂಡ ಉದ್ಯಾನ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ಸೋಮೇಶ್ವರ ದೇವಾಲಯವು ರಾಷ್ಟ್ರಕೂಟರ ಕೊನೆಗೆ ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಅದಿಭಾಗದಲ್ಲಿ ರಚಿಸಲಾದ ಕಟ್ಟಡ
ಇಲ್ಲಿ ಎರಡು ಕಲ್ಯಾಣಿ ಚಾಲುಕ್ಯರ ಶಾಸನಗಳು ದೊರತಿವೆ. ಮೊದಲನೆಯದು ದೇವಾಲಯದ ದಕ್ಷಿಣದ್ವಾರದ ಪಕ್ಕಕ್ಕಿದೆ. ಇದರ ಕಾಲ ಕ್ರಿ.ಶ.978, ಇಮ್ಮಡಿ ತೈಲಪನದು. ಇನ್ನೊಂದು ಹೊಸದಾಗಿ ರಚಿಸಿದ ಕಲ್ಯಾಣ ಮಂಟಪದ ಹಿಂದಿನ ಕೋಣೆಯಲ್ಲಿದೆ.
ಇಲ್ಲಿ ಶರಣರು ಕೆಲವು ದಿನ ವಾಸ ಮಾಡಿದ್ದರು ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಕಾಯಕಯೋಗಿಗಳು ನೆಲೆಸಿದರು ಮತ್ತು ಅವರ ಸಂಪ್ರದಾಯವನ್ನು ಇಂದಿಗೂ ಅಲ್ಲಿ ಕಾಣಸಿಗುತ್ತದೆ. ಈ ಒಂದು ಸಂಪ್ರದಾಯ ಕಾಯಕಯೋಗಿಗಳಿಗೆ ಇರುವ ಮಹತ್ವ ತಿಳಿಸುತ್ತದೆ.




ಶಿವ ಪಾರ್ವತಿಯರ ಲಗ್ನ: ಶ್ರೀ ಸೋಮಲಿಂಗನ ಜಾತ್ರೆ ಹೋಳಿ ಹುಣ್ಣಿಮೆಯ ಹಿಂದಿನ ಸೋಮವಾರ ಜರುಗುತ್ತದೆ. ತೇರು ಬಾಬಿನವರ ಸಮ್ಮುಖದಲ್ಲಿ ತೇರು ಎಳೆಯುವ ಕಾರ್ಯಕ್ರಮ ನೆರವೇರುತ್ತದೆ.
ಅವರೆಂದರೆ ಮಲ್ಲೂರ ಗ್ರಾಮದ ಕಮತಗಿ ಮನೆತನದವರು, ಹೊಸೂರ ಗ್ರಾಮದ ಕರೀಕಟ್ಟಿ, ಹಡಪದ, ಪತ್ತಾರ ಮನೆತನದವರು ಕಾರಿಮನೆಯ ಯಾಬನ್ನವರ ಮನೆತನದವರು ಇದೇ ಕಾಲಕ್ಕೆ ನಂದಿಕೋಲನ್ನು ಹೊಸೂರ ಬಾಳೆಕುಂದರಗಿ ಮನೆತನದವರು ನಂದಿಕೋಲುಗಳ ಮುಖಾಂತರ ದೇವರುಗಳನ್ನು ತರುತ್ತಾರೆ. ಪ್ರತಿ ವರ್ಷ ದೇವರುಗಳನ್ನು ತಂದ ನಂತರ ಹಾಗೂ ಹೊಸೂರ ಗ್ರಾಮದಿಂದ ಬಾಸಿಂಗ ತಂದ ನಂತರ ಅಕ್ಷತಾ ರೋಪಣ ಜರುಗುವದು.

ಹಿಮಾಲಯಕ್ಕೆ ಹೋಗುವ ಬದಲು ಇಲ್ಲಿಯೇ ಋಷಿಗಳು ತಪವನ್ನು ಮಾಡುತ್ತಿದ್ದರು ಎನ್ನುವ ಪ್ರತೀತಿ ಇದೆ ಹಾಗಾಗಿ ಇಲ್ಲಿ ದಟ್ಟವಾದ ಕಾಡುಗಳು ಮತ್ತು ಅನೇಕ ಗವಿಗಳಿರಬಹುದು.
ಎಂಟು ನೂರು ವರ್ಷಗಳಲ್ಲಿ ಅವೆಲ್ಲ ಕಣ್ಮರೆಯಾಗಿವೆ.
ಮುರಗೋಡ ಮತ್ತು ಸೊಗಲದಲ್ಲಿ ಕೆಲವು ಶರಣರು ಉಳಿದರು ಮಲಪ್ರಭಾ ನದಿದಂಡೆಯ. ಕಾರಿಮನಿ, ಕಾರಲಕಟ್ಟಿ, ಮಲ್ಲೂರ, ಹೊಸೂರ ವಕ್ಕುಂದ ---ಹಳ್ಳಿಗಳಲ್ಲಿ ನದಿ ದಾಟಲು ಕಾಯಹತ್ತಿದರು




ಶರಣರು ಬಸವಕಲ್ಯಾಣದಿಂದ ಹೊರಟು ಸುಮಾರು 300 ಕಿ ಮೀ ಅಂತರ ಕಾಲ್ನಡಿಗೆಯಲ್ಲಿ ಸಂಚರಿಸಿ ಮಲಪ್ರಭಾ ನದಿ ದಂಡೆಯಲ್ಲಿ ವಾಸ್ತವ್ಯ ಹೂಡಿ ನದಿ ದಾಟಲು ತಮ್ಮ ಸರದಿಗಾಗಿ ಕಾಯಹತ್ತಿದರು. ಇದುವರೆಗೆ ಭೀಮಾ, ಕೃಷ್ಣಾ ಮತ್ತು ಘಟಪ್ರಭಾ ನದಿಗಳನ್ನು ದಾಟಿ ಸುರಕ್ಷಿತವಾಗಿ ಕಾಯಕಯೋಗಿಗಳಿಗೆ ಅಲ್ಲಲ್ಲಿ ಆಶ್ರಯತಾಣ ಒದಗಿಸುತ್ತ ಶರಣ ತತ್ವಗಳ ಪ್ರಸಾರ ಮಾಡುತ್ತ ಇಲ್ಲಿಗೆ ತಲುಪಿದ್ದರು.
ಮಲಪ್ರಭಾ ನದಿ ದಾಟಿದರೆ ಸಾಕು ಸುಮಾರು 100 ಕಿ ಮೀ ದೂರದ ಪ್ರಯಾಣ ಬಾಕಿ ಇತ್ತು. ಅಲ್ಲಿಯ ಆಡಳಿತಗಾರರು ಮತ್ತು ಕದಂಬ ರಾಜರ ಆಶ್ರಯ ಕೊಡುವ ಭರವಸೆ ಇದ್ದುದರಿಂದ ನದಿ ದಾಟಿದರೆ ಸಾಕು ಉಳವಿಗೆ ತಲುಪುವದು ಸರಳ ಎನ್ನುವ ಭಾವನೆ ಎಲ್ಲರಲ್ಲಿತ್ತು. ನದಿ ದಾಟಿದ ಶರಣರು ಮಾಚಣ್ಣನವರ ಸಂದೇಶಕ್ಕಾಗಿ ಕಾಯುತ್ತ ನದಿಯ ದಂಡೆಯಲ್ಲಿ ವಾಸ್ತವ್ಯ ಹೂಡಿದರು.
ಮುಂದಿನ ಪ್ರಯಾಣದ ವಿವರಣೆ ಕೊಡುವದಕ್ಕಿಂತ ಮೊದಲು ಮಲಪ್ರಭಾ ನದಿ ದಂಡೆಯಲ್ಲಿದ್ದ ಗ್ರಾಮಗಳಾವವು ಎನ್ನುವ ವಿವರ ಅರಿಯುವ ಪ್ರಯತ್ನ ಮಾಡುವಾ.
ಈಗ ಅಲ್ಲಿ ಆಣೆಕಟ್ಟು ನಿರ್ಮಾಣವಾಗಿದ್ದು 12 ನೇಯ ಶತಮಾನದಲ್ಲಿದ್ದ ಅನೇಕ ಗ್ರಾಮಗಳು ಮತ್ತು ಮಂದಿರಗಳು ಮುಳುಗಡೆಯಾಗಿವೆ. ಆದರೂ ಈಗ ಲಭ್ಯವಿರುವ

ಮಾಹಿತಿ ಆಧಾರದಲ್ಲಿ ನಡೆದ ಘಟನೆಗಳ ವಿವರ ಅರಿಯುವದು ಅನಿವಾರ್ಯ.
ಚಿತ್ರಗಳ ಸಹಾಯದಿಂದ ಅಲ್ಲಿದ್ದ ಪರಸ್ಥಿತಿ ಅರಿಯೋಣ.
ಮಲಪ್ರಭಾ ನದಿ ದಂಡೆಯಲ್ಲಿ ಇರುವ ಜನರಿಗೆ ತುಂಬಿ ಹರಿಯುವ ನದಿ ದಾಟುವದೆಷ್ಟು ಕಠಿಣ ಎನ್ನುವದು ಗೊತ್ತಿದೆ. ದೂರದಿಂದಲೇ ಸುಂಯಿಟ್ಟುವ ನದಿಯ ಶಬ್ದ ಕೇಳಿಸುತ್ತದೆ.
ಅನುಭವಿ ಅಂಬಿಗರು ಮಾತ್ರ "ನಾವಿನಲ್ಲಿ" ಅಥವಾ "ಹರಗೋಲಿನಲ್ಲಿ" ನದಿ ದಾಟಿಸಲು ಸಾಧ್ಯ.
ಈ ನದಿ ದಂಡೆಯ ಪ್ರತಿ ಊರಿನಲ್ಲಿ ಅಂಬಿಗರು ಇದ್ದು ಅವರು ಶರಣ ಸಂಪ್ರದಾಯವನ್ನು ಇಂದಿಗೂ ಪಾಲಿಸುತ್ತಾರೆ.







ನದಿ ದಂಡೆಯಲ್ಲಿ ಇಂದು ನಮಗೆ ಜಾಲಿಗಿಡ ಅಥವಾ ಕುರುಚಲಗಿಡ ಕಾಣಸಿಗುತ್ತವೆ. ಆದರೆ ಅಂದು ಅಲ್ಲಿ ದಟ್ಟವಾದ ಕಾಡಿತ್ತು. ಕಾಡಮಧ್ಯದಲ್ಲಿ ಸಣ್ಣ ಸಣ್ಣ ಹಳ್ಳಿಗಳಿದ್ದವು. ಇಂದು ಅವೆಲ್ಲ ದೊಡ್ಡ ಗ್ರಾಮಗಳಾಗಿವೆ ಮತ್ತು ಕೆಲವು ಪಟ್ಟಣಗಳಾಗಿ ಅಭಿವೃದ್ದಿ ಹೊಂದಿವೆ. ಚಿತ್ರಗಳು ಮುರಗೊಡದಿಂದ ಎಡಕ್ಕೆ ಮತ್ತು ಬಲಕ್ಕೆ ಇರುವ ಇಪ್ಪತ್ತು ಕಿ ಮೀ ದೂರ ನದಿಗುಂಟ ಊರುಗಳನ್ನು ತೋರಿಸುತ್ತವೆ.
ಶರಣರ ಮುಂದಿನ ಪಯಣದ ವಿವರ ಅರಿಯುವದಕ್ಕಿಂತ ಮೊದಲು ಕೆಳಗಿನ ಕೆಲವು ಸ್ಥಳಗಳ ಮಾಹಿತಿ ತಿಳಿದುಕೊಂಡರೆ ಮುಂದೆ ನಡೆಯುವ ಘಟನೆಗಳ ಬಗ್ಗೆ ಪೂರ್ಣವಾಗಿ ಗೊತ್ತಾಗುತ್ತದೆ.

**ಗೊಡಚಿ:**

ಗೊಡಚಿ ಎಂಬ ಹೆಸರು ಬರಲು ಕಾರಣ ಇಲ್ಲಿ ಕೊಡಚಿ ಕಂಟೆಗಳಿದ್ದವು, ಇದರ ಹಣ್ಣಿನ ರುಚಿ ಒಗರು,ಇಂಥ ಕಂಟೆಗಳು ದಟ್ಟವಾಗಿ ಬೆಳೆದಿದ್ದರಿಂದ ತಲೆಮರೆಸಿಕೊಳ್ಳುವವರಿಗೆ ಇದು ಹೇಳಿ ಮಾಡಿಸಿದ ಸ್ಥಳವಾಗಿತ್ತಂತೆ. ಕೊಡಚಿಯೇ ಗೊಡಚಿಯಾಗಿದೆ ಎಂದು ಹೇಳುವರು.

ಶಿವಶರಣರು ಇದೇ ಮಾರ್ಗವಾಗಿ ಉಳುವಿ ಕ್ಷೇತ್ರದತ್ತ ಪಯಣ ಬೆಳೆಸಿರುವುದನ್ನು ಇತಿಹಾಸ ದೃಢಪಡಿಸಿದೆ. ಈ ಸ್ಥಳದಲ್ಲಿ ವೀರಭದ್ರ ದೇವಾಲಯವು ಪ್ರಸಿದ್ಧಿ ಪಡೆದಿದೆ




ಗರ್ಭಗುಡಿಯಲ್ಲಿರುವ ವೀರಭದ್ರ ವಿಗ್ರಹವು ಚತುರ್ಭುಜವನ್ನು ಹೊಂದಿದ್ದು ಬಲ ಮುಂಗೈಯಲ್ಲಿ ಖಡ್ಗ, ಎಡ ಮುಂಗೈಯಲ್ಲಿ ವೃತ್ತಾಕಾರದ ಗುರಾಣಿ, ಬಲ ಹಿಂಗೈಯಲ್ಲಿ ತ್ರಿಶೂಲ, ಎಡ ಹಿಂಗೈಯಲ್ಲಿ ನಾಗರ ಹೆಡೆ ಹಿಡಿದು ಹಸ್ತನಾಗರ ರೂಪದ ಮೂರ್ತಿಯು ಸುಮಾರು ನಾಲ್ಕು ಅಡಿ ಎತ್ತರದ ರುಂಡಮಾಲಧಾರಿಯಾಗಿದೆ.

ಈ ದೇವಾಲಯದ ಪೂರ್ವಕ್ಕೆ ದಿಗಂಬರೇಶ್ವರ ಮುನಿಯ ಗದ್ದುಗೆ ಇದೆ. ದಕ್ಷಿಣಕ್ಕೆ ವಿಭೂತಿಮಠ ಎಂಬ ಗವಿಯೂ ಇದೆ. ಈ ಗವಿಯ ಬಗ್ಗೆ ವಿವರ ಲಭ್ಯವಿಲ್ಲ.

ಈ ಗವಿಯಲ್ಲಿ ಮತ್ತು ಮುರಗೋಡ ಸಿದ್ದನಗವಿಯಲ್ಲಿ ವಚನಗಳನ್ನು ರಕ್ಷಿಸಿ ಇಟ್ಟಿದ್ದಾರೆ ಎನ್ನುವ ಮಾತು ಪ್ರಚಲಿತವಾಗಿದೆ. ಈಶಾನ್ಯ ದಿಕ್ಕಿಗೆ ಹನ್ನೆರಡನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರಿಗೂ ಮತ್ತು ಶಿವಶರಣರಿಗೂ ನಡೆದ ಯುದ್ದದ ಸ್ಥಳ "ರಣಭಾಜಿ"ಇದೆ. ಅಂದರೆ ಕಲ್ಯಾಣ ಕ್ರಾಂತಿಯ ನಂತರ ಚನ್ನಬಸವಣ್ಣನ ನೇತೃತ್ವದಲ್ಲಿ ಮಡಿವಾಳ ಮಾಚಿದೇವ, ಸಕಲೇಶ ಮಾದರಸ, ಅಕ್ಕ ನಾಗಮ್ಮ, ಬೊಮ್ಮಯ್ಯ ಮೊದಲಾದ ಶರಣರು ಗೊಡಚಿ ಕ್ಷೇತ್ರಕ್ಕೆ ಬಂದು ತಂಗಿದ್ದು. ಬಿಜ್ಜಳನ ಸೈನ್ಯವು ಈ ಸ್ಥಳಕ್ಕೆ ಬಂದಾಗ ಘೋರ ಯುದ್ದ ಘಟಿಸಿತು. ಆ ಸ್ಥಳ ರಣಭಾಜಿ. ಈ ಮೂರು ದಿಕ್ಕುಗಳಲ್ಲಿಯೂ ಮೂರು ಕೂಗುಬಸವಣ್ಣನ ಮಾಲಗಂಭಗಳಿವೆ.

ಅಗ್ನಿ ಕುಂಡ ರಥೋತ್ಸವದ ವಿಶೇಷ. ಬೆಳಗಾವಿಯಿಂದ ಆರಂಭವಾಗುವ ಕಟ್ಟಿಗೆ ಮೆರವಣಿಗೆ ಬೈಲಹೊಂಗಲ, ಹೊಸೂರ ರಥೋತ್ಸವದ ಹಿಂದಿನ ದಿನ ಗೊಡಚಿ ತಲುಪುತ್ತದೆ. ಅಂದು ಪುರವಂತರ ಸಮಾವೇಶ ಮತ್ತು ಅಗ್ನಿಕುಂಡ ಉತ್ಸವ.

ರಥೋತ್ಸವದಂದು ಬೆಳಗ್ಗೆ ಶಾಸ್ತ್ರೋಕ್ತವಾಗಿ ಅಗ್ನಿ ಹೊತ್ತಿಸಿ, ದೇವರ ಮೂರ್ತಿಗೆ ಅಲಂಕಾರಿಕ ಪೂಜೆ, ಮಧ್ಯಾಹ್ನ 3 ಕ್ಕೆ ಪುರವಂತರಿಂದ ಅಗ್ನಿ ಪ್ರವೇಶ, ಸಂಜೆ ರಥೋತ್ಸವ ಜರುಗುವುದು.

**ಮನೋಳಿ:**

ಸವದತ್ತಿಯ ಉತ್ತರಕ್ಕೆ 11 ಕಿಮೀ ದೂರದಲ್ಲಿರುವ ಮನೋಳಿ ಮಲಪ್ರಭಾನದಿಯ ಎಡದಂಡೆಯ ಮೇಲಿದೆ. ಇದಕ್ಕೆ ಪ್ರಾಚೀನದಲ್ಲಿ ಮುನಿಪುರ ಅಥವಾ ಮುನಿವಳ್ಳಿ ಎಂಬ ಹೆಸರಿತ್ತು. ಇಲ್ಲಿನ ನದೀ ತೀರದಲ್ಲೇ ಏಳೆಂಟು ಸಣ್ಣದೊಡ್ಡ ಸುಂದರವಾದ ಪಂಚಲಿಂಗದೇವರ ಮಂದಿರಗಳಿವೆ. ಇಲ್ಲಿ 7ನೆಯ ಯಾದವ ಕೃಷ್ಣನ (1246-60) ಕಾಲದ ಶಿಲಾಶಾಸನಗಳಿವೆ.

ಊರ ಬದಿಯಲ್ಲಿ ಭದ್ರವಾದ ಹಳೆಯ ಕೋಟೆಯಿದೆ.




ಇಲ್ಲಿ ಶರಣರ ಜೊತೆಗೆ ಕಾಯಕಯೋಗಿಗಳು ಬಂದು ಇಲ್ಲಿ ನೆಲೆಸಿದರು ಎನ್ನುವದನ್ನುಮತ್ತು ಈ ಗ್ರಾಮ ಬಟ್ಟೆಗಳಿಗೆ ಬಣ್ಣಹಾಕುವ ಉದ್ಯಮಕ್ಕೆ ಹೆಸರಾಗಿತ್ತು ಎನ್ನುವ ಸಂಗತಿ ದೃಡಪಡಿಸುತ್ತದೆ.

**ಹೂಲಿ:**

ಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮವನ್ನು ಕರ್ನಾಟಕದ ವಾಸ್ತುಶಿಲ್ಪ ಪ್ರದರ್ಶಿಸುವ ತಾಣ ಎಂದು ಕರೆಯುತ್ತಾರೆ. ಇದು ಒಂಬತ್ತು ದೇವಾಲಯಗಳಿವೆ. ಅದರಲ್ಲಿ ಪಂಚಲಿಂಗೇಶ್ವರ ತನ್ನ ವಿಶಿಷ್ಟತೆಯಿಂದ ಗಮನ ಸೆಳೆಯುತ್ತದೆ. ಇದು ಕಲ್ಯಾಣ ಚಾಲುಕ್ಯ ಕಾಲದಲ್ಲಿ ನಿರ್ಮಾಣಗೊಂಡಿದೆ. ಸವದತ್ತಿಯಿಂದ 9 ಕಿ.ಮೀ ದೂರವಿರುವ ಈ ಗ್ರಾಮದಲ್ಲಿರುವ ದೇವಾಲಯಗಳು ವಿಶಿಷ್ಟ ಶಿಲ್ಪಕಲೆ, ವಾಸ್ತುಶಿಲ್ಪ ಪರಿಚಯಿಸುತ್ತವೆ.




ಹಾಗೆಯೇ, ಆ ದೇವಾಲಯಗಳಿಗೆ ಬೇಕಾದ ಸಾಕ್ಷ್ಯಗಳನ್ನು ನುಡಿಯುವ ಶಾಸನಗಳೂ ಇವೆ. ಇಲ್ಲಿ ಸರ್ವಧರ್ಮ ಸಮನ್ವಯತೆ ಸಾಧಿಸಿದ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿದ ಆ ಕಾಲದ ವಾಸ್ತುಶಿಲ್ಪಗಳು ಇಲ್ಲಿವೆ. ಈ ಗ್ರಾಮದಲ್ಲಿ ಮಧನೇಶ್ವರ, ಅಂಧಕೇಶ್ವರ, ತಾರಕೇಶ್ವರ, ಬನಶಂಕರಿ, ರಾಮೇಶ್ವರ, ನಾರಾಯಣ, ವೀರಭದ್ರ, ಕಲ್ಮೇಶ್ವರ, ಕರಿಸಿದ್ದೇಶ್ವರ, ಪಂಚಲಿಂಗೇಶ್ವರ ಸೇರಿದಂತೆ ವಾಸ್ತುಶಿಲ್ಪಗಳಿಂದ ಕೂಡಿದ ಹಲವಾರು ಪ್ರಾಚೀನ ದೇವಾಲಯಗಳಿವೆ. ಇಲ್ಲಿನ ಶಾಸನಗಳು ಬಿಜ್ಜಳನ ಮಗ ಅಹವ ಮಲ್ಲದೇವ, ತ್ರಿಭುವನ ಮಲ್ಲದೇವನ ಕುರಿತದ್ದಾಗಿವೆ.

ಕಲ್ಲಿನ ಕೋಟೆ: ಗ್ರಾಮದ ಉತ್ತರ ದಿಕ್ಕಿನಲ್ಲಿ ಗುಡ್ಡದ ಮೇಲೆ ಒಂದು ಚಿಕ್ಕದಾದ ಕಲ್ಲಿನ ಕೋಟೆ ಇದೆ.

ಇದು ಕಲ್ಯಾಣ ಚಾಲುಕ್ಯರದೆಂದು ಹೇಳಲಾಗುತ್ತಿದೆ. ಕೋಟೆಯೊಳಗಿರುವ ಮದ್ದು, ಶಸ್ತ್ರಸಂಗ್ರಹದ ಹೊಂಡ ಈಗಲೂ ಸುಸ್ಥಿತಿಯಲ್ಲಿವೆ..

**ಸವದತ್ತಿ:**

ಸವದತ್ತಿ ಪುರಾತನವಾದ ಕ್ಷೇತ್ರ. ಅಲ್ಲಿಗೆ ಹೋಗಲು ಈಗ ಉತ್ತಮ ರಸ್ತೆ ಇದ್ದು ಮಲಪ್ರಭಾ ನದಿ ದಾಟಲು ಸೇತುವೆ ಇದ್ದು ಲಕ್ಷಾಂತರ ಜನ ಅಲ್ಲಿಗೆ ಹೋಗಿ ಬರುತ್ತಿದ್ದಾರೆ.

ಅದರೆ ಮೊದಲು ಬಂಡಿ ಅಥವಾ ಕಾಲ್ನಡಿಗೆಯಲ್ಲಿ ಮಲಪ್ರಭಾ ನದಿ ತಲುಪಿ ಅಲ್ಲಿ ನಾವುಗಳ ಮತ್ತು ಹರಿಗೋಲ ಸಹಾಯದಿಂದ ನದಿ ದಾಟಿ ತುಂಬಾ ಕಡಿದಾದ ಗುಡ್ಡ ಹತ್ತಿ ಕೊಳ್ಳದಲ್ಲಿ ಇಳಿದು ದೇವಿಯ ದರ್ಶನ ಪಡೆದ ಸಾಹಸದ ಕಥೆಯನ್ನು ನಮ್ಮ ಹಿರಿಯರು ಹೇಳುವದನ್ನು ಕೇಳಿದ್ದೇವೆ.

ಇನ್ನು 12 ನೇಯ ಶತಮಾನದ ಪರಿಸ್ಥಿತಿ ನಿಮ್ಮ ಕಲ್ಪನೆಗೆ ಸಿಗಬಹುದು.

ಸವದತ್ತಿ ಈ ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ.

ಹಿಂದೆ ಇದನ್ನು ಸುಗಂಧವರ್ತಿ, ಸಂವಧವರ್ತಿ, ಸವಧವರ್ತಿ ಎಂದು ಕರೆಯುತ್ತಿದ್ದರೆಂದು ತಿಳಿದುಬರುವುದು. ಇಲ್ಲಿನ ಗುಡ್ಡದ ಮೇಲೆ ಈಗಲೂ ರಟ್ಟರ ಕಾಲದ ಕೋಟೆಯ ಅವಶೇಷವಿದೆ.

ಈ ಪಟ್ಟಣ 10 -13ನೆಯ ಶತಮಾನದ ವರೆಗೆ ಸವದತ್ತಿಯ ರಟ್ಟರ ರಾಜಧಾನಿಯಾಗಿತ್ತು ಅದಕ್ಕೂ ಮೊದಲು ಬದಾಮಿಯ ಚಾಲುಕ್ಯರ ಆಡಳಿತಕ್ಕೊಳಪಟ್ಟಿತ್ತು.




ಬದಾಮಿಯ ಚಾಲುಕ್ಯರು ಸವದತ್ತಿಯ ಈ ಭಾಗದಲ್ಲಿ ಅನೇಕ ಕೋಟೆಗಳನ್ನು ನಿರ್ಮಿಸಿದ್ದರು ಮತ್ತು ಕಲ್ಯಾಣಿ ಚಾಲುಕ್ಯರು ಇಲ್ಲಿ ಆಡಳಿತ ನಡೆಸುತ್ತಿದ್ದರು ಮತ್ತು ಅನೇಕ ಮಂದಿರಗಳನ್ನು ಕಟ್ಟಿಸಿದ್ದರು ಎನ್ನುವದನ್ನು ಕೆಳಗಿನ ವಿವರಗಳು ನೀಡುತ್ತವೆ.

**ಎಲ್ಲಮ್ಮನ ಗುಡ್ಡ:**

ಈ ತಾಲ್ಲೂಕಿನ ಎಲ್ಲಮ್ಮನ ಗುಡ್ಡ ಒಂದು ಯಾತ್ರಾಸ್ಥಳ.
ಸವದತ್ತಿಯ ಆಗ್ನೇಯದಲ್ಲಿ ಸು. 8 ಕಿಮೀ ದೂರದಲ್ಲಿರುವ ಸಿದ್ದನಕೊಳ್ಳ, ಸಂಗನಕೊಳ್ಳಗಳಾಗಿ ಐದು ಕೊಳ್ಳಗಳಿಂದೊಡಗೂಡಿದ ಎತ್ತರವಾದ ಗುಡ್ಡದಲ್ಲಿ ಹರಿದುಬರುವ ಸರಸ್ವತೀ ತಟಾಕದ ತಡಿಯಲ್ಲಿ ರೇಣುಕಾಂಬೆಯ ದೇವಸ್ಥಾನವಿದೆ. ಇಲ್ಲಿನ ಮಂದಿರ ಎರಡು ಸಾವಿರ ವರ್ಷದಷ್ಟು ಹಿಂದಿನದೆಂದು ಪ್ರತೀತಿ. ರಚನೆಯ ದೃಷ್ಟಿಯಿಂದ ಇದು 7 ಅಥವಾ 8ನೆಯ ಶತಮಾನಕ್ಕೆ ಸೇರಬಹುದೆಂದು ನಂಬುಗೆ. ಅದು ಬಾದಾಮಿ ಚಾಲುಕ್ಯರು ಅಲ್ಲಿಯ ರಾಜರಾಗಿದ್ದ ಕಾಲ ಹಾಗಾಗಿ ಈ

ಮಂದಿರದ ಪುನರ್ನಿರ್ಮಾಣ ಬದಾಮಿ ಚಾಲುಕ್ಯರು ಮಾಡಿದರು ಎನ್ನುವದು ಪರಿಣಿತರ ಅಭಿಪ್ರಾಯ.
ಪ್ರತಿಹುಣ್ಣಿಮೆಯಲ್ಲೂ ಜಾತ್ರೆ ನಡೆಯುತ್ತದೆ. ವಿಶೇಷವಾಗಿ ಬನದ ಹುಣ್ಣಿಮೆ, ಭಾರತ ಹುಣ್ಣಿಮೆಗಳಲ್ಲಿ ಲಕ್ಷಾಂತರ ಜನರು ಇಲ್ಲಿಗೆ ಆಗಮಿಸುತ್ತಾರೆ. ಅನೇಕ ಶತಮಾನಗಳಿಂದ ಈ ಸಂಪ್ರದಾಯ ನಡೆದು ಬಂದಿದೆ.
ಈ ಕ್ಷೇತ್ರಕ್ಕೆ ಪ್ರತಿ ಹುಣ್ಣಿಮೆ ಜಾತ್ರೆಗೆ ಹಲವು ಭಕ್ತರು ರಾಜ್ಯದ ಎಲ್ಲ ಕಡೆಯಿಂದ ಬಂಡಿಗಳಲ್ಲಿ ಅಥವಾ ಕಾಲ್ನಡಿಗೆಯೀಂದ ಬರುತ್ತಾರೆ..
ಮಲಪ್ರಭಾ ನದಿ ದಾಟಿ ವಸತಿ ಮಾಡಿದ್ದ ಶರಣರು ಈ ಸಂದರ್ಭದಲ್ಲಿ ಬೇರೆ ಬೇರೆ ಕಡೆ ಪ್ರಯಾಣ ಮಾಡಲು ನಿರ್ಧರಿಸಿದರು.
ಉಳವಿಗೆ ಹೋಗದ ಕಾಯಕಯೋಗಿಗಳೆಲ್ಲ ಹುಣ್ಣಿಮೆಯ ಹಿಂದಿನ ದಿನವೇ ಯಾತ್ರಿಕರ ಗುಂಪಿನಲ್ಲಿ ಮಂದಿರದ ಸಮೀಪ ಬಂದು ವಸತಿ ಮಾಡಿದರು.
ಅಂದಿನ ಜಾತ್ರೆಯಲ್ಲಿ ಕಾಯಕಯೊಗಿಗಳು ತಯಾರು ಮಾಡಿದ ಕಲಾತ್ಮಕ ಸುಂದರ ವಸ್ತುಗಳು ಮಾರಾಟವಾದವು. ಆಗ ಕೆಲವರಿಗೆ ಪರಿಚಿತರು ಮತ್ತು ಸಂಭಂದಿಗಳು ಸಿಕ್ಕರೆ, ಕೆಲವರಿಗೆ ಅವರ ಕಾಯಕದಲ್ಲಿನ ಪ್ರಾವಿಣ್ಯತೆ ನೋಡಿ ಅಲ್ಲಿಗೆ ಬಂದ ಯಾತ್ರಿಕರು ತಮ್ಮೂರಿಗೆ ಬರಲು ಆವ್ಹಾನಿಸಿದರು.
ಅದರಲ್ಲಿ ಕೆಲವರು ಕದಂಬ ಆಡಳಿತವಿದ್ದ ಹಾವೇರಿ ಸುತ್ತಮುತ್ತಲಿನ ಪ್ರದೇಶದಲ್ಲಿ ಶರಣ ತತ್ವ ಪ್ರಚಾರ ಮಾಡಲು ತೆರಳಿದರು.
ಒಟ್ಟಾರೆಯಾಗಿ ಉಳವಿಗೆ ಹೋಗಲೇಬೇಕೆಂಬ ವಿಚಾರವುಳ್ಳ ಶರಣರನ್ನು ಹೊರತುಪಡಿಸಿ ಎಲ್ಲ ಶರಣರು ಸುರಕ್ಷಿತ ಸ್ಥಾನ ತಲುಪಿದರು. ಸಾವಿರಾರು ಶರಣರು ಹುಬ್ಬಳ್ಳಿ ಸೇರಿದರು.
ಮಲಪ್ರಭಾ ನದಿ ದಾಟಿದ ಬಳಿಕ ಅವರು ಕೆಳಗಿನ ಹಳ್ಳಿಗಳ ಮೂಲಕ ಹಾಯ್ದು ಹೋಗಿರಬಹುದು ಮತ್ತು ಅಲ್ಲಿಯ ಸುತ್ತಮುತ್ತಲ ಗ್ರಮಗಳಲ್ಲಿ ನೆಲೆಸಿರಬೇಕು ಎಂದು ನನ್ನ ಊಹೆ ಅದಕ್ಕೆ ಕಾರಣ ಅಲ್ಲಿ ಬಸವಣ್ಣನವರ ಅಥವಾ ಶರಣರ ಹೆಸರಿನಲ್ಲಿ ನಿರ್ಮಾಣವಾದ ಮಂದಿರಗಳಿರುವದು ಮತ್ತು ಈಗ ಶರಣ ಪರಂಪರೆಯನ್ನು ಅಲ್ಲಿ ಉಳಿಸಿಕೊಂಡು ಬಂದಿರುವದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದುವರೆಗೆ ನೋಡಿದಂತೆ ಹತ್ತಿರ ಹತ್ತಿರ ಮಂದಿರಗಳಿಲ್ಲದಿರುವದು ಮತ್ತು ಈ ಮಂದಿರಗಳು ಇತ್ತೀಚೆಗೆ ನಿರ್ಮಾಣವಾಗಿರುವದು. ಈ ಭಾಗದಲ್ಲಿ ಕದಂಬರ ಆಡಳಿತವಿದ್ದುದರಿಂದ ಇವರ ಜೊತೆ ಯೋಧರಾರೂ ಬರಲಿಲ್ಲ ಮತ್ತು ಹಿರಿಯ ಶರಣರೆಲ್ಲ ಚನ್ನಬಸವಣ್ಣ ಮತ್ತು ಮಾಚಣ್ಣನವರ ಜೊತೆ ಬೇರೆ ಮಾರ್ಗದಲ್ಲಿ ಉಳವಿಗೆ ಹೋದರು. ಇವರು ಸಾಗಿದ ದಾರಿಯಲ್ಲಿ ಬರುವ ಹಳ್ಳಿಗಳ ಹೆಸರು ಇಲ್ಲಿವೆ.
ಇಲ್ಲಿಂದ ಹುಬ್ಬಳ್ಳಿಗೆ ಇಂಗಲಹಳ್ಳಿಯ, ಕುಸುಗಲ್ ಮೂಲಕ ಸಾವಿರಾರು ಶರಣರು ಹುಬ್ಬಳ್ಳಿಯ ಉಣಕಲಗೆ ಬಂದು ತಲುಪಿದರು.

1. ಕಾಡಿಹಳ್ಳಿ
2. ಸವದತ್ತಿ
3. ಯಡ್ರಾವಿ
4. ಬೆಟಸೂರ
5. ಹಂಚಿನಾಳ
6. ಶಿರಕೋಳ
7. ಕುರಹಟ್ಟಿ
8. ಕಿರೇಸೂರ

ಇಲ್ಲಿ ಎಲ್ಲ ಕಡೆಗೆ ಶರಣರು ನೆಲೆಸಿ ಸಾಗಿದ ನೆನಪಿಗಾಗಿ ಮಂದಿರಗಳ ನಿರ್ಮಾಣವಾಗಿವೆ




ಉಳಿದವರು ಮುಂದೆ ಸಾಗಿದರು ಅವರು ವಾಸಮಾಡಿದ ಹಳ್ಳಿಗಳು

1. ಶಿರಗುಪ್ಪಿ
2. ಕುಂದಗೋಳ
3. ಸಂಶಿ
4. ಹಿರೆಹರಕುಣಿ
5. ಇಂಗಳಗಿ
6. ಧುಂಡಸಿ
7. ಯತ್ತಿನಹಳ್ಳಿ
8. ಹಾನಗಲ

ಇಲ್ಲಿ ಎಲ್ಲ ಕಡೆಗೆ ಶರಣರು ನೆಲೆಸಿ ಸಾಗಿದ ನೆನಪಿಗಾಗಿ ಮಂದಿರಗಳ ನಿರ್ಮಾಣವಾಗಿವೆ




ಹಾನಗಲ್ಲಿನಲ್ಲಿ ಕೆಲವು ಶರಣರು ವಾಸಮಾಡಲು ಪ್ರಾರಂಭಿಸಿದರೆ ಕೆಲವರು ಕೆಳಗೆ ಹೆಸರಿಸಿದ ಹಳ್ಳಿಗಳ ಮೂಲಕ ಉಳವಿ ಸೇರಿದರು.




1. ಗುರುವಳ್ಳಿ
2. ಜೋಗಳೆಪಾಲ
3. ನಂದೊಳ್ಳಿ
4. ಕೋಡಿಹಳ್ಳಿ
5. ಹೆಬ್ಬಾಳ

6. ಉಳವಿ

ಇಲ್ಲಿ ಎಲ್ಲ ಕಡೆಗೆ ಶರಣರು ನೆಲೆಸಿ ಸಾಗಿದ ನೆನಪಿಗಾಗಿ ಮಂದಿರಗಳ ನಿರ್ಮಾಣವಾಗಿವೆ
ಇಲ್ಲಿ ಹೆಸರಿಸಿರುವ ಊರುಗಳ ಸುತ್ತಮುತ್ತಲ ಗ್ರಾಮಗಳಲ್ಲಿರುವ ಕಾಯಕಯೋಗಿಗಳ ಸಂಖ್ಯೆಯನ್ನು ಗಮನಿಸಿದರೆ ಅಲ್ಲಿ ಶರಣ ತತ್ವ ನೆಲೆಯಾಗಿ ನಿಲ್ಲಲು ಕಲ್ಯಾಣದಿಂದ ಶರಣರು ಬಂದು ನೆಲೆಸಿದ್ದುದೇ ಕಾರಣ.
ಈಗ ಮಲಪ್ರಭಾ ನದಿ ದಂಡೆಯಲ್ಲಿ ಉಳಿದ ಶರಣರು ಕೆಲವರಾದರೆ ಶರಣ ತತ್ವ ಪ್ರಚಾರಮಾಡಲು ತೆರಳಿದ ಶರಣರು ಮತ್ತು ಶರಣರ ರಕ್ಷಣೆಗಾಗಿ ಮಾಚಣ್ಣನವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದ ಯೋಧರು ಅಲ್ಲಿದ್ದರು.
ಮುಂದೆ ನಡೆದ ಘಟನೆಗಳ ವಿವರ ಅರಿಯುವ ಮೊದಲು ತಿಗಡಿಯಿಂದ ಕಿತ್ತೂರಿನವರೆಗಿನ ಕೆಳವು ಗ್ರಾಮಗಳ ಮತ್ತು ರಾಜಕೀಯ ಪರಸ್ಥಿತಿಯನ್ನು ಅರಿಯುವ ಪ್ರಯತ್ನ ಇಲ್ಲಿದೆ.

**ಸಂಪಗಾವ:**

ಸವದತ್ತಿಯಂತೆಯೇ ಸಂಪಗಾವ ಸಹ ಐತಿಹಾಸಿಕ ಮಹತ್ವ ಪಡೆದ ಗ್ರಾಮ.
ಐತಿಹಾಸಿಕ ದಾಖಲೆಯ ಪ್ರಕಾರ ಬಿಜಾಪುರ ಅದಿಲ್ ಶಾಹಿ ದೊರೆ ಹಿರೆಮಲ್ಲಶೆಟ್ಟಿ ಮತ್ತು ಮತ್ತು ಚಿಕ್ಕಮಲ್ಲಶೆಟ್ಟಿ ಅವರ ಸಾಹಸ ಮೆಚ್ಚಿ

1. ರಾಯರ ಹುಬ್ಬಳ್ಳಿ (ಈಗ ಮುಗುಟ ಖಾನ ಹುಬ್ಬಳ್ಳಿ or M K Hubballi)
2. ಸಂಪಗಾವ
3. ಇಟಗಿ
4. ಹುಣಸಿಕಟ್ಟಿ
5. ಕಾದರವಳ್ಳಿ
6. ಹಿರೆಬಾಗೇವಾಡಿ

ಗ್ರಾಮಗಳನ್ನು ಜಹಾಗೀರು ಕೊಟ್ಟ ಸರದೇಶಮುಖಿಯನ್ನಾಗಿ ಮಾಡಿದನು.
ಇವರು ಹೊಂಗಲ ಕಾಡನ್ನು ಕಡಿದು ಬಯಲುಮಾಡಿ ನಗರ ನಿರ್ಮಾಣ ಮಾಡಿದ ಊರೇ ಬಯಲುಹೊಂಗಲ (ಬೈಲಹೊಂಗಲ) ಆಯಿತು.
ಸಂಪಗಾವ/ಬಯಲುಹೊಂಗಲ ರಾಜಧಾನಿಯನ್ನು ಗೀಜಗನಗೂಡಿಗೆ (1585) ಸ್ಥಳಂತರಿಸಲಾಯಿತು. ಈ ಹೊಸ ರಾಜಧಾನಿ (ಕಿತ್ತ- ಊರು) ಕಿತ್ತೂರ ಎಂಬ ಪಟ್ಟಣವಾಯಿತು.
ಇಲ್ಲಿ ಹೆಸರಿಸಲಾದ ಊರುಗಳಲ್ಲದೇ ಕಿತ್ತೂರಿನಿಂದ 15 ಕೀ ದೂರದಲ್ಲಿರುವ ಕಕ್ಕೇರಿ ಮತ್ತು ಅಲ್ಲಿಂದ 15 ಕಿ ಮೀ ದೂರದಲ್ಲಿರುವ ಹಲಸಿ ಇನ್ನೆರಡು ಗ್ರಾಮಗಳು ಶರಣರ ಪ್ರವಾಸ ಕಾಲದಲ್ಲಿ ಮಹತ್ವದ ಘಟನೆಗಳು ನಡೆದ ಸ್ಥಳಗಳು.

**ಹಲಸಿ:**
ಹಲಸಿ ಗೋವಾ ಕದಂಬರ ಎರಡನೇಯ ರಾಜಧಾನಿಯಾಗಿತ್ತು. ಇವರು ಕಲ್ಯಾಣ ಚಾಲುಕ್ಯರ ಹತ್ತಿರದ ಬಂಧುಗಳಾಗಿದ್ದರೂ ಅವರ ಬದ್ಧ ವೈರಿಗಳಾಗಿದ್ದರು. ಕಲ್ಯಾಣದಿಂದ ಶರಣರು ಹೊರಡುವಾಗ ಅವರಿಗೆ ಆಶ್ರಯ ನೀಡಲು ಮತ್ತು ಉಳವಿಯಲ್ಲಿ ಆಶ್ರಯ ಒದಗಿಸುವ ಭರವಸೆ ನೀಡಿದ್ದರು.
ಕಕ್ಕೇರಿ ಮತ್ತು ಹಲಸಿ ನಡುವೆ ಎರಡು ಸಾಮ್ರಾಜ್ಯಗಳ ಗಡಿಯಲ್ಲಿ ಕದಂಬರು ಮತ್ತು ಕಲ್ಯಾಣ ಚಾಲುಕ್ಯರು ಅಪಾರ ಸೈನ್ಯ ಜಮಾವಣೆ ಮಾಡಿದ್ದರು. ಆಗಿಂದಾಗ್ಗೆ ಅಲ್ಲಿ ಸಣ್ಣ ಪುಟ್ಟ ಕದನಗಳಾಗುತ್ತಿದ್ದವು.
ಈಗ ಈ ಗ್ರಾಮಗಳ ವಿಶೇಷತೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಇಲ್ಲಿದೆ.
ಸುಮಾರು 1500 ವರ್ಷಗಳ ಹಿಂದೆ ನಿರ್ಮಾಣಗೊಂಡ ಹಲಸಿ ಪಟ್ಟಣ ಮತ್ತು ಅಲ್ಲಿನ ವಾಸ್ತು ವಿನ್ಯಾಸದ ಕಟ್ಟಡ, ದೇಗುಲಗಳು ನಮ್ಮ ಪರಂಪರೆಯನ್ನು ನೆನಪಿಸುವ, ಅಭಿಮಾನ ಹುಟ್ಟಿಸುವ ನಿರ್ಮಿತಿಗಳು.

ಕದಂಬ ರಾಜರ ರಾಜಧಾನಿಯಾಗಿದ್ದ ಹಲಸಿಗೆ ಭೇಟಿ ಎಂದರೆ ಇತಿಹಾಸದಲ್ಲಿ ಒಂದು ಸುತ್ತು ಹಾಕಿ ಬಂದ ಅನುಭವ. ಬೆಳಗಾವಿಯಿಂದ 41 ಕಿ.ಮೀ., ಖಾನಾಪುರದಿಂದ 14 ಕಿ.ಮಿ. ಮತ್ತು ಕಿತ್ತೂರಿನಿಂದ 25 ಕಿ.ಮೀ. ದೂರದಲ್ಲಿದೆ. ಕರ್ನಾಟಕದಲ್ಲಿ ಮೊಟ್ಟ ಮೊದಲ ಕನ್ನಡ ಸಾಮ್ರಾಜ್ಯವನ್ನು ಕಟ್ಟಿದವರು ಬನವಾಸಿಯ ಕದಂಬರು (ಕ್ರಿಸ್ತ ಶಕ ನಾಲ್ಕನೆಯ ಶತಮಾನ). ಸುಮಾರು 250 ವರ್ಷಗಳ ಕಾಲ ಕರ್ನಾಟಕವನ್ನು ಮತ್ತು ಗೋವಾದ ಭಾಗಗಳನ್ನು ಸಹ ಆಳಿ, ನಮ್ಮ ನಾಡಿನ ಸಂಸ್ಕೃತಿಗೆ, ಇಲ್ಲಿನ ವಾಸ್ತುಶೈಲಿಗೆ ತಮ್ಮದೇ ಆದ ಕೊಡುಗೆಯನ್ನು ಕದಂಬರು ನೀಡಿದ್ದಾರೆ.
ಕದಂಬರು ಕರ್ನಾಟಕದಲ್ಲಿ ಹಲವು ಕೋಟೆ, ಅರಮನೆ ಮತ್ತು ದೇವಾಲಯಗಳನ್ನು ಕಟ್ಟಿಸಿ, ವಾಸ್ತು ಶೈಲಿಗೆ ನಾಂದಿ ಹಾಡಿದರು. ಅವರ ಮುಖ್ಯ ಪಟ್ಟಣಗಳು ಬನವಾಸಿ ಮತ್ತು ಹಲಸಿ. ಕದಂಬರ ಎರಡನೆಯ ರಾಜಧಾನಿ ಯಾಗಿ ಹೆಸರು ಗಳಿಸಿದ ಹಲಸಿಯು, ಅಪರೂಪದ ಶಿಲ್ಪಕಲೆಯ ಬೀಡು. ಅಂದು ರಾಜಧಾನಿ ಎನಿಸಿದ್ದ ಈ ಪಟ್ಟಣವು ಇಂದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಪುಟ್ಟ ಊರು.




ಕದಂಬರು (ಕ್ರಿ.ಶ.೩೪೫-೫೨೫) ಇಂದಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಿಂದ ಆಳುತ್ತಿದ್ದ ಕರ್ನಾಟಕದ ಒಂದು ಪುರಾತನ ರಾಜವಂಶ. ಮುಂದೆ ಚಾಲುಕ್ಯ ಮತ್ತು ರಾಷ್ಟ್ರಕೂಟ ಸಾಮ್ರಾಜ್ಯಗಳ ಸಾಮಂತರಾಗಿ ಆಳ್ವಿಕೆ ಮುಂದುವರಿಸಿದ ಕದಂಬರ ರಾಜ್ಯ ಗೋವಾ ಮತ್ತುಹಾನಗಲ್ ಗಳಲ್ಲಿ ಶಾಖೆಗಳನ್ನು ಹೊಂದಿತು.

**ಕಕ್ಕೇರಿ:**

ಕಕ್ಕೇರಿಯು ಧಾರವಾಡದಿಂದ ಪಶ್ಚಿಮಕ್ಕೆ ೪೦ ಕಿ.ಮೀ. ಬೆಳಗಾವಿಯಿಂದ ದಕ್ಷಿಣಕ್ಕೆ ೫೮ ಕಿ.ಮೀ. ಕಿತ್ತೂರಿಂದ ಪಶ್ಚಿಮಕ್ಕೆ ೩೦ ಕಿ.ಮೀ. ಅಂತರದಲ್ಲಿ ಇದೆ.
ಪ್ರಸಿದ್ಧ ಬಿಷ್ಟಾದೇವಿ, ಕಕ್ಕಯ್ಯ, ಮೂಕಮ್ಮ, ವೀರಭದ್ರ, ಅಡಿವೆಪ್ಪ ಮುಂತಾದ ಮಂದಿರಗಳು ಇಲ್ಲಿವೆ.




ಡೋಹರ ಕಕ್ಕಯ್ಯ ಹಾಗೂ ಬಿಷ್ಟಮ್ಮ ಹಲವಾರು ಶರಣರೊಂದಿಗೆ ಖಾನಾಪುರ ತಾಲೂಕಿನ ಕಕ್ಕೇರಿ ಸನಿಹದಲ್ಲಿ ಬಹಳ ವರ್ಷಗಳ ವರೆಗೆ ತಂಗಿದ್ದರು ಎಂಬ ಪ್ರತೀತಿ ಇದೆ

ಎತ್ತರದ ಮಡ್ಡಿಯ ಮೇಲೆ ವಾಸವಾಗಿದ್ದರೆಂದೂ ಅದನ್ನು “ಕಕ್ಕಯ್ಯನ ಮಡ್ಡಿ” ಎಂದು ಕರೆಯುತ್ತಾರೆ. ಈಗಲೂ ಇಲ್ಲಿ ಕಕ್ಕಯ್ಯನ ಸಮಾಧಿ, ವೀರಕಲ್ಲುಗಳು, ಅವರ ವಾಸದ ಮನೆ, ಸಮೀಪದಲ್ಲಿಯೇ ದೊಡ್ಡ ಕೆರೆ ಇವೆ. ಇಂದಿಗೂ ಕಕ್ಕಯ್ಯನ ಹೆಸರಿನ ಕೆರೆ ದೊಡ್ಡ ಪ್ರಮಾಣದ ಜಮೀನುಗಳಿಗೆ ನೀರುಣಿಸುತ್ತದೆ.
ಕಾದ್ರೊಳ್ಳಿ ಯುದ್ಧದಲ್ಲಿ ಗಾಯಗೊಂಡು ಅಸ್ವಸ್ಥರಾದ ಕಕ್ಕಯ್ಯನವರ ದೇಹಾಂತ ಕಕ್ಕೇರಿಯಲ್ಲಿಯೇ ಆಗುತ್ತದೆ. ಈ “ಕಕ್ಕಯ್ಯನ ಕೇರಿ”ಯೇ ಮುಂದೆ ಈಗಿನ “ಕಕ್ಕೇರಿ” ಎಂದು ಕರೆಯಲಾಗುತ್ತಿದೆ. ಊರ ಹೊರಗಿನ ಮಡ್ಡಿಯಲ್ಲಿ ಕಕ್ಕಯ್ಯನ ಸಮಾಧಿ, ವಾಸಿಸುತ್ತಿದ್ದ ಮನೆ ಇವೆ. ಹಳೆ ಗುಡಿಯನ್ನು ಜೀರ್ಣೋದ್ಧಾರ ಮಾಡಲಾಗಿದೆ. ಸುಂದರವಾದ ಪುಣ್ಯಸ್ಥಳವಾಗಿದೆ. ಕಕ್ಕೇರಿ ಗ್ರಾಮದ ಮಧ್ಯದಲ್ಲಿ ೧೨ನೇ ಶತಮಾನದ ಗುಡಿಗುಮ್ಮಟಗಳಿದ್ದು, ಅದರಲ್ಲಿ ಬಿಷ್ಟಮ್ಮನ ಗುಮ್ಮಟವೂ ಇದೆ. ಇಲ್ಲಿ ಬಿಷ್ಟಮ್ಮನ ದೇಹಾಂತವಾಗಿದೆ ಎಂದು ಪ್ರತೀತಿ.
ಶತಮಾನಗಳಿಂದಲೂ ತನ್ನನ್ನೂ ನಂಬಿ ಬಂದ ಭಕ್ತರನ್ನು ಸಲಹುವ ಈ ಬಿಷ್ಟಾದೇವಿಗೆ ಈಗಲೂ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ ಸಾವಿರಾರು ಭಕ್ತರಿದ್ದಾರೆ.
ಹೀಗಾಗಿ ಈಗಲೂ ಸಹ ನಂಬಿ ಬರುವ ಭಕ್ತಾಧಿಗಳ ಇಷ್ಟಾರ್ಥಗಳನ್ನು ಶ್ರೀ ಬಿಷ್ಟಾದೇವಿಯು ನೆರವೇರಿಸುತ್ತಾಳೆ ಎನ್ನುವ ನಂಬಿಕೆ ಇದೆ. ಅಲ್ಲಿಯೂ ವೀರಗಲ್ಲುಗಳು ಕಾಣಸಿಗುತ್ತವೆ.

**ಕಿತ್ತೂರ:**

ಕಿತ್ತೂರು ಬೆಳಗಾವಿ ಜಿಲ್ಲೆಯ ಒಂದು ಊರು.ಇಂದು ಇದು ಸಣ್ಣ ಗ್ರಾಮವಾಗಿದ್ದರೂ ಹಿಂದೆ ಕನ್ನಡನಾಡಿನ ಮಹಾನಗರಗಳಲ್ಲೊಂದಾಗಿತ್ತು. 12ನೆಯ ಶತಮಾನದಿಂದ ಕಿತ್ತೂರು ಎಂಬ ಹೆಸರು ಬಳಕೆಯಲ್ಲಿದೆ ಬೈಲಹೊಂಗಲದಿಂದ ೨೬ ಕಿಮೀ ದೂರದಲ್ಲಿ ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಧಾರವಾಡ-ಬೆಳಗಾವಿ ನಡುವೆ ಇದೆ. ೧೨ನೆಯ ಶತಮಾನದ ಹೊತ್ತಿಗೇ ಈ ಊರು ಇದ್ದುದು ಇಲ್ಲಿನ ಬಸವೇಶ್ವರ ದೇವಾಲಯದ ಶಾಸನವೊಂದರಿಂದ ತಿಳಿದುಬರುತ್ತದೆ.
ಗೋವೆಯ ಕದಂಬರ ವೀರ ಜಯಕೇಶಿಯ ೧೫ನೆಯ ಆಳ್ವಿಕೆಯ ವರ್ಷಕ್ಕೆ ಸೇರಿದ ಈ ಶಾಸನದಲ್ಲಿ ಕಿತ್ತೂರನ್ನು ಹೆಸರಿಸಿದೆ. ಆಗ ಇಲ್ಲಿ ಭವ್ಯವಾದ ದೇವಾಲಯವನ್ನು ಕಟ್ಟಿಸಿ, ಅದಕ್ಕೆ ದತ್ತಿ ಬಿಟ್ಟ ವಿಷಯವನ್ನು ಆ ಶಾಸನ ತಿಳಿಸುತ್ತದೆ.
ಈಗ ಕಿತ್ತೂರಿನಲ್ಲಿ ಉಳಿದು ಬಂದಿರುವ ಪ್ರಾಚೀನ ಅವಶೇಷಗಳಲ್ಲಿ ಮುಖ್ಯವಾದುದು ಹೊಂಡದ ಗುಂಡಿ ಎಂದು ಕರೆಯುವ ಈಶ್ವರ ದೇವಾಲಯ. ೧೨ನೆಯ ಶತಮಾನದ ಚಾಳುಕ್ಯ ರೀತಿಯಲ್ಲಿ ನಿರ್ಮಿತವಾಗಿದ್ದ ಈ ದೇವಾಲಯ ಈಗ ಪೂರ್ತಿಯಾಗಿ ಪುನರ್ನಿರ್ಮಾಣಗೊಂಡಿದೆ. ಇಲ್ಲಿಯ ನವರಂಗದ ಕಂಬಗಳು,

ನಂದಿ, ಗಣೇಶ, ಮಹಿಷಾಸುರಮರ್ದಿನಿ ಮೊದಲಾದ ಮೂರ್ತಿಗಳು ದೇವಾಲಯದ ತಳಹದಿಯ ಅಷ್ಟಪಟ್ಟಿಕೆಗಳು ಚಾಳುಕ್ಯ ರೀತಿಯ ಉತ್ತಮ ಮಾದರಿಯಾಗಿವೆ. ಉನ್ನತವಾದ ದಿಬ್ಬವೊಂದರ ಮೇಲೆ ದೇಸಾಯರು ಕಟ್ಟಿಸಿದ್ದ ಕೋಟೆ ಈಗ ಪಾಳು ಬಿದ್ದಿದೆ. ಎತ್ತರವಾದ ಇದರ ಮಣ್ಣಿನ ಗೋಡೆಗಳಲ್ಲಿ ಅಲ್ಲಲ್ಲಿ ಕಿರುಗಲ್ಲಿನ ಮುಖವರಿಸೆಗಳು ಉಳಿದುಬಂದಿವೆ. ಗುಂಡಾದ ಈ ಕೋಟೆಯ ಸುತ್ತಲೂ ಆಳವೂ ಅಗಲವೂ ಆದ ಕಂದಕವಿದ್ದು ಗೋಡೆಗೆ ಅಲ್ಲಲ್ಲಿ ಬುರುಜಗಳಿದ್ದ ಗುರುತುಗಳಿವೆ. ಕೋಟೆಯೊಳಗೆ ಈಶಾನ್ಯಭಾಗದಲ್ಲಿ ದೇಸಾಯರ ಭವ್ಯವಾದ ಸೌಧವಿತ್ತು. ಅದರ ಬಹು ಭಾಗ ಪಾಳು ಬಿದ್ದು ಈಗ ಕೆಲವು ಗೋಡೆಗಳು ಮಾತ್ರ ನಿಂತಿವೆ. ಈ ಕಟ್ಟಡದ ಭಗ್ನಾವಶೇಷಗಳನ್ನು ಇತ್ತೀಚೆಗೆ ಬಿಡಿಸಿದ್ದು ಅದರ ತಳವಿನ್ಯಾಸ ಬೆಳಕಿಗೆ ಬಂದಿರುವುದಲ್ಲದೆ ಅದರಲ್ಲಿನ ಕೋಣೆಗಳು, ಪಾಕಶಾಲೆಗಳು, ಸ್ನಾನಗೃಹಗಳು, ಬಾವಿಗಳು, ಪ್ರತಿ ಕೋಣೆಗೂ ಗೋಡೆಯೊಳಗೇ ಸಾಗುತ್ತಿದ್ದ ನೀರಿನ ಕೊಳಾಯಿಗಳು, ಹೊಗೆಯ ಗೂಡುಗಳು, ಇವೆಲ್ಲಕ್ಕಿಂತ ಮಿಗಿಲಾಗಿ ಧ್ರುವ ನಕ್ಷತ್ರವನ್ನು ಒಳಗಿನಿಂದಲೇ ಕಾಣಬಹುದಾದ ವೀಕ್ಷಣಾಕಿಂಡಿ - ಇವುಗಳನ್ನು ಈಗಲೂ ಗುರುತಿಸಬಹುದು.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರು ಮತ್ತು ರಾಣಿ ಚನ್ನಮ್ಮನವರ ಹೆಸರು ಅಜರಾಮರವಾಗಿದೆ.

12 ನೇಯ ಶತಮಾನದಲ್ಲಿ ವಚನ ಮತ್ತು ಶರಣರ ರಕ್ಷಣೆಯಲ್ಲಿ ಕಿತ್ತೂರ ಜನರ ಕೆಚ್ಚದೆಯ ಹೊರಾಟ ಬಹಳ ಪ್ರಮುಖ ಪಾತ್ರ ವಹಿಸಿದೆ.




## ಸಂಸಾರಿ, ಸಂಕಲ್ಪಿ, ವಿಷಯಲಂಪಟ, ಜೂಜುಪೇಂಟೆ ಕದನಕರ್ಕಶ ಸೋಮೆಶ್ವರ ಕೈಕೊಂಡ ಕ್ರಮ:

ಮಹಾರಾಜ ಸೋಮೇಶ್ವರ ಆರಂಭಿಕ ಆಘಾತದಿಂದ ಚೇತರಿಸಿಕೊಂಡು ಆಡಳಿತದಲ್ಲಿ ಸ್ವಲ್ಪ ಹಿಡಿತ ಕಂಡುಕೊಂಡ. ಅವನ ಯೋಜನೆಯಂತೆ ಅಣ್ಣಾ ಬಸವಣ್ಣ ಇಲ್ಲದೇ ಶರಣರು ಅಸಾಯಕರಾಗುತ್ತಾರೆ ವಚನ ತತ್ವಗಳು ಮಾಯವಾಗುತ್ತವೆ ಎಂದುಕೊಂಡಿದ್ದ. ಆದರೆ ಕಲ್ಯಾಣದಲ್ಲಿ ಪ್ರಚಲಿತವಿದ್ದ ವಚನಗಳು ರಾಜ್ಯದ ಜನಸಾಮಾನ್ಯರ ಮನದಲ್ಲಿ ಮನೆಮಾಡಿ ಅವುಗಳ ಅನುಷ್ಠಾನವಾಗಿ ಶರಣ ಸಂಸ್ಕೃತಿ ಹಳ್ಳಿ ಹಳ್ಳಿಗಳಲ್ಲಿ ಹಬ್ಬುವ ವಿವರ ಅವನಿಗೆ ಸಿಕ್ಕಿತು. ಶರಣರು ಕಲ್ಯಾಣ ರಾಜ್ಯದ ಸರಹದ್ದು ದಾಟುವ ಮೊದಲೇ ಅವರ ನಾಶ ಮಾಡಬೇಕು ಎನ್ನುವ ಅವನ ವಿಚಾರಗಳಿಗೆ ಆಗಲೇ ಅಸ್ತಿತ್ವ ಕಳೆದುಕೊಳ್ಳುವ ಭೀತಿಯಲ್ಲಿದ್ದ ಸಂಪ್ರದಾಯವಾದಿಗಳು ಬೆಂಬಲಿಸಿದರು.
ಅದಕ್ಕಾಗಿಯೇ ಒಂದು ಹೊಸ ಯೋಜನೆ ರೂಪಿಸಿದ ಅದರ ಪ್ರಕಾರ

1. ಮಲಪ್ರಭಾ ನದಿ ದಡದಲ್ಲಿರುವ ಶರಣರನ್ನು ಎಲ್ಲ ಕಡೆಯಿಂದ ಏಕಕಾಲದಲ್ಲಿ ಸುತ್ತುವರೆದು ಹತ್ಯೆಮಾಡುವದು.
2. ಮಲಪ್ರಭಾ ನದಿ ಯೋಧರಿಗೆ ಹಾಗೂ ಶರಣರಿಗೆ ದಾಟುವದು ಸುಲಭದ ಮಾತಲ್ಲ.
3. ಬಲದಂಡೆಯ ಆ ಕಡೆಯ ಹಲಸಿಯ ಸಮೀಪ ಕದಂಬರನ್ನು ಸದೆಬಡಿಯಲು ಕಳಿಸಿದ ಸೈನ್ಯವನ್ನು ಅಲ್ಲಿಯ ಕದನ ನಿಲ್ಲಿಸಿ ಸೌದತ್ತಿಯಿಂದ ಹುಣಸಿಕಟ್ಟೆಯವರೆಗಿನ ಎಲ್ಲ ಪ್ರದೇಶದಲ್ಲಿ ಒಮ್ಮೆಲೆ ದಾಳಿಮಾಡುವದು.
4. ಕಲ್ಯಾಣದಲ್ಲಿರುವ ಸೇನಾಪಡೆಯನ್ನು ಹಾದಿಯಲ್ಲಿ ಬರುವ ಅನೇಕ ಆಡಳಿತಗಾರರ ಯೊಧರೊಂದಿಗೆ ಹೋಗಿ ಮಲಪ್ರಭಾ ನದಿ ದಂಡೆಯ ಗೊಡಚಿಯಿಂದ ಸಂಪಗಾವಿಯವರೆಗೆ ವಸತಿ ಮಾಡಿದ ಶರಣರ ಹತ್ಯೆ ಮಾಡುವದು.
5. ಯೋಧರ ಸಣ್ಣ ಸಣ್ಣ ತುಕಡಿಗಳು ಎಲ್ಲ ಕಡೆ ಒಮ್ಮೆಲೆ ದಾಳಿಮಾಡುವ ದಿನ ಮತ್ತು ಸಮಯ ನಿಗದಿಗೊಳಿಸಲಾಗಿತ್ತು. ಹೆಚ್ಚುಕಡಿಮೆ ಅವರು ಶರಣರ ತತ್ವದ ಪ್ರಭಾವವಿಲ್ಲದ ಉತ್ಸಾಹಿ ಯುವಕ ಯೋಧರನ್ನು ಆಯ್ಕೆ ಮಾಡಲಾಗಿತ್ತು ಮತ್ತು ಅವರ ಮನದಲ್ಲಿ ಶರಣರ ವಿರುದ್ಧ ರೊಷದ ಕಿಚ್ಚು ಹಚ್ಚಲಾಗಿತ್ತು.

ಈ ಯೋಜನೆ ಜಾರಿಯಾಗುವಂತೆ ನೋಡಿಕೊಳ್ಳಲು ತನಗೆ ನಿಷ್ಠರಾದ ಮತ್ತು ಅನುಭವವುಳ್ಳ ಮತ್ತು ಆ ಎಲ್ಲ ಪ್ರದೇಶಗಳ ಪರಿಚಯವಿರುವ ಯೋಧರನ್ನು ನಾಯಕರನ್ನಾಗಿ ನೇಮಿಸಿ ಕಲ್ಯಾಣದಿಂದ ದೊಡ್ಡ ಸೈನ್ಯವನ್ನು ಕದಂಬರ ಮೇಲೆ ಯುದ್ಧ ಸಾರುವ ನೆಪ ಹೇಳಿ ಬಿಳ್ಕೊಟ್ಟ.
ಕೆಲವು ಯೋಧ ಪ್ರಮುಖರು ಹಲಸಿಗೆ ಪ್ರಯಾಣ ಬೆಳೆಸಿದರು. ಈ ಯೋಜನೆ ಪೂರ್ಣವಾಗಿ ನಿರ್ವಹಿಸುವ ಜವಾಬ್ದಾರಿಯನ್ನು ಶರಣವಿರೋಧಿ ಸಂಪ್ರದಾಯವಾದಿ ಯೋಧರಿಗೆ ವಹಿಸಿದ.

ಈ ಅವಕಾಶವನ್ನು ತನ್ನ ವಿರೋಧಿ ಆಡಳಿತಗಾರರನ್ನು ಮಣಿಸಲು ಮತ್ತು ಬದಲಾವಣೆ ಮಾಡುಲು ಮತ್ತು ಕದಂಬರನ್ನ ಬಗ್ಗುಬಡಿಯಲು ಉಪಯೋಗಿಸಲು ಯೋಚಿಸಿದ. ತಾನು ಕಲ್ಯಾಣದಲ್ಲಿದ್ದುಕೊಂಡೇ ಈ ಯೋಜನೆ ಜಾರಿಗೊಳಿಸುವ ನಿರ್ಣಯ ಮಾಡಿದ.

ಮಾಚಣ್ಣ ಮತ್ತು ಅವರ ಜೊತೆ ಬಂದ ಯೋಧರ ಅನೇಕ ಗೆಳೆಯರು ಈ ಯೋಜನೆಯ ಯೋಧ ಪ್ರಮುಖರಿದ್ದರು. ಅವರ ಮುಲಕ ಮಹಾರಾಜ ಸೋಮೇಶ್ವರನ ದಾಳಿಯ ಯೋಜನೆ ಶರಣರಿಗೆ ಸಿಕ್ಕಿತು. ಅಷ್ಟೇ ಅಲ್ಲ ಈ ಯೋಜನೆಯ ಸುಳಿವು ಎಲ್ಲ ಆಡಳಿತಗಾರರಿಗೆ ಅವರ ಗೂಢಚಾರರ ಮೂಲಕ ಸಿಕ್ಕಿತು.

**ಕದನ ಭಾಗ – 1:**

ಸೌದತ್ತಿಯಿಂದ ಹುಣಸಿಕಟ್ಟೆಯವರೆಗಿನ ಎಲ್ಲ ಪ್ರದೇಶದಲ್ಲಿ ಏಕಕಾಲಕ್ಕೆ ದಾಳಿ ಮಾಡುವದು:

ಕಲ್ಯಾಣದ ಕಡೆಯಿಂದ ಬಂದ ಯೊಧರು ನದಿ ದಾಟುವದು ಅಸಾಧ್ಯ ಹಾಗಾಗಿ ಅವರಿಂದ ಈ ಭಾಗದಲ್ಲಿ ದಾಳಿ ಮಾಡಲು ಸಾಧ್ಯವಿರಲಿಲ್ಲ.

ಆದರೆ ಹಲಸಿಯ ಹತ್ತಿರ ಕದಂಬರ ಜೊತೆ ಕಾದಾಟ ನಡೆಸುತ್ತಿದ್ದ ಕಲ್ಯಾಣ ಪಡೆ ತುಂಬಾ ಬಲಿಷ್ಟವಾಗಿತ್ತು. ಆ ಪಡೆಯನ್ನು ಎದುರಿಸುವ ತಾಕತ್ತು ಅಲ್ಲಿ ಸುತ್ತಮುತ್ತಲಿನ ಆಡಳಿತಗಾರರಲ್ಲಿ ಇರಲಿಲ್ಲ. ಇನ್ನು ಶರಣರ ಜೊತೆ ಬಂದ ಯೋಧರ ಪಡೆ ಮತ್ತು ಶರಣರಿಗೆ ಆಶ್ರಯ ಕೊಟ್ಟ ಕಾಡು ಜನಾಂಗ ಜೊತೆಗೂಡಿದರೂ ಆ ಬಲಿಷ್ಟಪಡೆ ಎದುರಿಸುವದು ಅಸಾಧ್ಯದ ಮಾತಾಗಿತ್ತು. ಅದುವರೆಗೆ ನಡೆದ ಅನೇಕ ಕದನಗಳಲ್ಲಿ ಈ ವಿಷಯ ದೃಢಪಟ್ಟಿತ್ತು.

ಮಾಚಣ್ಣನವರು ಮಲಪ್ರಭಾ ನದಿಯ ಎಡಭಾಗದ ರಕ್ಷಣೆಯ ಜವಾಬ್ದಾರಿ ಮತ್ತು ಗಂಗಾಂಬಿಕೆ ಮೊದಲಾದ ಹಿರಿಯರು ಶರಣರಿಗೆ ಮಾನಸಿಕ ಧೈರ್ಯ ತುಂಬುವ ಜವಾಬ್ದಾರಿ ತೆಗೆದುಕೊಂಡರು.

ಮಲಪ್ರಭಾ ನದಿಯ ಬಲಭಾಗದ ರಕ್ಷಣೆಯ ಜವಾಬ್ದಾರಿಯನ್ನು ಚನ್ನಬಸವಣ್ಣನವರು ವಹಿಸಿಕೊಂಡರು. ಅಕ್ಕ ನಾಗಮ್ಮ ಮುಂತಾದ ಹಿರಿಯ ಶರಣರು ಶರಣರಲ್ಲಿ ಮಾನಸಿಕ ದೈರ್ಯ ತುಂಬುವ ಜವಾಬ್ದಾರಿ ತೆಗೆದುಕೊಂಡರು.

ಅಕ್ಕ ನಾಗಮ್ಮ ಮತ್ತು ಚನ್ನಬಸವಣ್ಣನವರು ಹುಣಸಿಕಟ್ಟೆಗೆ ಬಂದು ಅಲ್ಲಿ ನೆಲೆಸಿದ್ದ ರುದ್ರಸ್ವಾಮಿಯವರ ಸಲಹೆ ಪಡೆಯಲು ಹುಣಸಿಕಟ್ಟೆಗೆ ಬಂದರು. ರುದ್ರಸ್ವಾಮಿ ತನ್ನ ಹಲವು ಶಿಷ್ಯರೊಡನೆ ಕಲ್ಯಾಣದಿಂದ ಬಂದು ಅಲ್ಲಿ ನೆಲಸಿ ಎಲ್ಲ ಕಾಡುಜನಾಂಗದ ಪ್ರೀತಿಯ ಗುರುಗಳಾಗಿದ್ದರು. ಅವರನ್ನು ಸುತ್ತಮುತ್ತಲಿನ ಆಡಳಿತಗಾರರು ಗೌರವಿಸುತ್ತಿದ್ದರು ಮತ್ತು ಅವರ ಸಲಹೆ ಪಡೆಯುತ್ತಿದ್ದರು. ಅವರಿಂದಾಗಿಯೇ ಆ ಭಾಗದಲ್ಲಿ ಶರಣರ ಬಗ್ಗೆ ಅಪಾರ ಗೌರವ ಮತ್ತು ಅಭಿಮಾನ ಹೊಂದಿದ್ದರು.

ಈಗಾಗಲೆ ಶರಣರು ಪೂಜೆ ಮಾಡುತ್ತ ಪ್ರಾಣ ಕೊಡುತ್ತಾರೆಯೇ ಹೊರತು ಕೊಲ್ಲುವ ಕೆಲಸ ಮಾಡುವದಿಲ್ಲಎನ್ನುವ ಮಾತು ಅನುಭವಕ್ಕೆ ಬಂದಿತ್ತು.
ಆಗ ಅವರಿಗೆ ರುದ್ರಸ್ವಾಮಿಯವರ ಶಿಷ್ಯನೊಬ್ಬ ಬಂದು ಕದಂಬ ಯುವರಾಜನ ನೆತೃದಲ್ಲಿಯ ಕದಂಬ ಪಡೆ ಬಂದು ಕಿತ್ತೂರಿನಲ್ಲಿ ನೆಲೆಸಿರುವ ಸಮಾಚಾರ ತಿಳಿಸಿದ.
ಹುಣಸಿಕಟ್ಟೆಯ ಆಶ್ರಮಕ್ಕೆ ಅಕ್ಕ ನಾಗಮ್ಮ ಮತ್ತು ಚನ್ನಬಸವಣ್ಣನವರು ಬಂದ ಸಮಾಚಾರ ತಮ್ಮ ಗೂಢಚಾರರ ಮೂಲಕ ತಿಳಿದ ಸುತ್ತಮುತ್ತಲಿನ ಆಡಳಿತಗಾರರು ಅವರನ್ನು ಭೆಟ್ಟಿಯಾಗಲು ಬಂದರು.
ಆದರೆ ಅವರೆಲ್ಲ ಒಂದೇ ಕಾಲಕ್ಕೆ ಅಲ್ಲಿಗೆ ಬಂದದ್ದು ಆಕಸ್ಮಿಕ.
ಅವರಿಗೆಲ್ಲ ಕಲ್ಯಾಣ ಮಹಾರಾಜ ಬಿಜ್ಜಳನಿಂದ ಮೋಸಕ್ಕೊಳಗಾದವರು ಮತ್ತು ಮಹಾರಾಜ ಸೋಮೇಶ್ವರನ ಕುಟಿಲ ಸಂಚಿನ ಅರಿವಿದ್ದವರು. ಅಷ್ಟೇ ಅಲ್ಲ ಅಲ್ಲಿನ ಜಯಗಳಿಸಿದ ನಂತರ ಶರಣರಿಗೆ ಆಶ್ರಯ ಒದಗಿಸಿದ ಆಡಳಿತಗಾರರ ಬದಲಾವಣೆ ಮಾಡುವ ಕುತಂತ್ರದ ಅರಿವೂ ಅವರಿಗಾಗಿತ್ತು.
ಈಗ ನಡೆಯುವ ಕದನ ಅವರೆಲ್ಲರ ಅಳಿವು ಉಳವಿನ ಪ್ರಶ್ನೆ ಎನ್ನುವದು ಅವರಿಗೆ ಗೊತ್ತಾಗಿತ್ತು.
ಅವರೆಲ್ಲ ಒಂದಾಗಿ ಹೋರಾಡಲು ನಿರ್ಧರಿಸಿದರು. ಅವರೆಲ್ಲ ಒಂದಾದರೂ ಕಲ್ಯಾಣದ ಪಡೆ ಎದುರಿಸುವದು ಕಷ್ಟ ಎನ್ನುವ ಅರಿವು ಅವರಿಗಿತ್ತು.
ಆಗ ಅಕ್ಕನಾಗಮ್ಮ ಕಿತ್ತೂರ ಸಮೀಪ ಇರುವ ಕದಂಬ ಯುವರಾಜ ಹಲಸಿಗೆ ಹೋಗಿ ಕಲ್ಯಾಣ ಸೈನಿಕರನ್ನು ಎದುರಿಸುವ ಬದಲು ಇಲ್ಲಿಗೆ ಬಂದರೆ ಇಲ್ಲಿಗೆ ದಾಳಿ ಮಾಡಲು ಬರಲಿರುವ ಕಲ್ಯಾಣ ಸೈನ್ಯ ಎದುರಿಸಲು ಎಲ್ಲ ಆಡಳಿತಗಾರರ ಜೊತೆಗೂಡಿ ಸಹಾಯ ಮಾಡುವ ಸಂದೇಶ ಕಳಿಸಲು ಆಡಳಿತಗಾರರ ಅಭಿಪ್ರಾಯ ಕೇಳಿದರು. ಈ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು. ಆಗಲೇ ಆಡಳಿತಗಾರರು ತಮ್ಮ ಒಬ್ಬೊಬ್ಬ ಪ್ರತಿನಿಧಿಯನ್ನು ರುದ್ರಸ್ವಾಮಿಯವರ ಶಿಶ್ಯರ ಜೊತೆ ಕಳುಹಿಸಿಕೊಟ್ಟರು. ಕದನ ತಯಾರಿ ಮಾಡಲು ಹೊರಟರು. ಕಲ್ಯಾಣ ಬಿಜ್ಜಳ ಮಾಡಿದ ದ್ರೋಹಗಳಿಗೆ ತಿರುಗೇಟು ಕೊಡುವದಕ್ಕಾಗಿ ಅವರು ಕಾಯುತ್ತಿದ್ದ ಕಾಲ ಕೂಡಿ ಬಂದಿತ್ತು.




ಅಕ್ಕನಾಗಮ್ಮ ಮತ್ತು ಚನ್ನಬಸವಣ್ಣನವರ ಮೇಲಿದ್ದ ಅಭಿಮಾನ ಮತ್ತು ವಿಶ್ವಾಸ ಅಲ್ಲಿಯ ಎಲ್ಲ ಆಡಳಿತಗಾರರು ಒಂದಾಗುವಂತೆ ಮಾಡಿತು. ಯುವಕ ಉತ್ಸಾಹಿ ಕದಂಬ ಯುವರಾಜ ಚನ್ನಬಸವಣ್ಣನವರ ಸಂದೇಶ ಬಂದಕೂಡಲೇ ಮಾರುವೇಷದಲ್ಲಿ ತನ್ನ ಸೇನಾಪತಿಯೊಡನೆ ಹುಣಸಿಕಟ್ಟೆಗೆ ಬಂದ.
ಯುವಕರಿಬ್ಬರ ಸಮಾಗಮ ಹೊಸ ಇತಿಹಾಸ ಸೃಷ್ಟಿಗೆ ನಾಂದಿಯಾಯಿತು.
ಕಲ್ಯಾಣ ಚಾಲುಕ್ಯರ ಆಡಳಿತ ಕೊನೆಗೊಳ್ಳುವ ಕೆಲಸ ಪ್ರಾರಂಭವಾಯಿತು. ವಚನ ರಚಿಸುವದರಲ್ಲಿ ಚನ್ನಬಸವಣ್ಣನವರು ಪರಿಣಿತರು ಎನ್ನುವದಷ್ಟೇ ಗೊತ್ತಿದ್ದ ಕದಂಬ ಯುವರಾಜನಿಗೆ ಅವರು ಯುದ್ಧವ್ಯೂಹ ರಚನಾ ಪಾರಂಗತರೂ ಮತ್ತು ಯೋಧ ಪ್ರಮುಖರು ಎನ್ನುವದನ್ನು ಅರಿತು ಸಂತೋಷವಾಯಿತು.
ಮುಂದೆ ಕದನ ನಡೆಯುವ ಸ್ಥಳಗಳನ್ನು ಚಿತ್ರ ತೋರಿಸುತ್ತದೆ.
ಅಲ್ಲಿ ನೆರೆದಿದ್ದ ಸೇನಾಪತಿಗಳು ಕದನದ ಸ್ವರೂಪ ನಿರ್ಧರಿಸಿದರು. ಆದಷ್ಟು ಕಡಿಮೆ ಜೀವಹಾನಿಯಾಗಿ ಜಯಗಳಿಸುವ ಮಾರ್ಗೋಪಾಯ ಕಂಡುಹಿಡಿದರು.
ಹುನಸಿಕಟ್ಟೆಯ ಸಮೀಪದ ಈಗ ಕದ್ರೋಳಿ (ಕಾದರಹಳ್ಳಿ, ಕಾದವರ ಹಳ್ಳಿ) ಬಯಲು ಪ್ರದೇಶದಲ್ಲಿ ಯುದ್ಧ ಮಾಡಲು ನಿರ್ಧರಿಸಿದರು. ಕಲ್ಯಾಣ ಯೋಧರನ್ನು ನದಿ ಸಮೀಪದವರೆಗೆ ಹೋಗಲು ಬಿಟ್ಟು ಅವರ ಮೆಲೆ ಎಲ್ಲ ಕಡೆಯಿಂದ ದಾಳಿ ಮಾಡುವ ಯೋಜನೆ ರೂಪಿಸಿದರು.
ಶರಣರೆಲ್ಲ ಮೂಗುಬಸವ ಗ್ರಾಮದಿಂದ ಹಿಡಿದು ಸವದತ್ತಿಯವರೆಗೆ ವಿವಿಧ ಸ್ಥಾನಗಳಲ್ಲಿ ಮಲಪ್ರಭಾ ನದಿಯ ದಂಡೆಯಲ್ಲಿರಲು ನಿರ್ಣಯಿಸಲಾಯಿತು.
ಅವರ ರಕ್ಷಣೆಯ ಜವಾಬ್ದರಿಯನ್ನು ಅವರ ಜೊತೆ ಕಲ್ಯಾಣದಿಂದ ಬಂದ ಯೋಧರು ಮತ್ತು ಅಲ್ಲಿಯ ಕಾಡು ಜನಾಂಗದ ವೀರರು ವಹಿಸಿಕೊಂಡರು.
ಚನ್ನಬಸವಣ್ಣ, ಅಕ್ಕನಾಗಮ್ಮ , ರುದ್ರಸ್ವಾಮಿ ಮತ್ತು ಶಿಷ್ಯರು ಗಾಯಾಳುಗಳ ಆರೈಕೆ ಮಾಡುವ ಕ್ರಮಗಳ ಬಗ್ಗೆ ಯೋಜನೆ ರೂಪಿಸಿದರು. ಕಾಡಿನ ವೈದ್ಯರನ್ನು ಮತ್ತು ಔಷಧಿಗಳ ಜೊತೆ ಬರುವಂತೆ ವಿನಂತಿಸಿದರು.

ಹಲಸಿಯ ಸಮೀಪದ ಯುದ್ಧ ಭೂಮಿಯಲ್ಲಿ ಕೆಲವು ಯೋಧರನ್ನು ಬಿಟ್ಟು ಉಳಿದ ಹಲವು ಸಹಸ್ರ ಕಲ್ಯಾಣ ಯೊಧರೆಲ್ಲ ಮೊದಲೇ ನಿರ್ಣಯಿಸಿದಂತೆ ಸಾಯಂಕಾಲದ ಹೊತ್ತಿಗೆ ಮಲಪ್ರಭಾ ನದಿ ದಂಡೆಯ ಬಯಲಿನಲ್ಲಿ ಬಂದು ಒಂದೇ ಕಡೆ ಬಿಡಾರ ಹೂಡಿದರು (ಅದುವೇ ಈಗ ಕದ್ರೋಳಿ ಹಳ್ಳಿಯಾಗಿದೆ).
ಬರುವಾಗ ದಾರಿಯಲ್ಲಿ ಅವರಿಗೆ ಯಾವ ಪ್ರತಿರೋಧವಾಗಲೀ ಅಥವಾ ಯೋಧರಿರುವ ಕುರುಹಾಗಲೀ ಇರಲಿಲ್ಲ. ತಮ್ಮ ಶಕ್ತಿಯ ಬಗ್ಗೆ ಮತ್ತು ಮಹಾರಾಜ ರೂಪಿಸಿ ಕಳಿಸಿದ ಯೋಜನೆಯ ಬಗ್ಗೆ ಅಪಾರ ವಿಶ್ವಾಸವಿದ್ದ ಅವರು ಅಲ್ಲಿ ಮರುದಿನ ದಾಳಿ ಪ್ರಾರಂಭಿಸುವ ವಿಚಾರದೊಂದಿಗೆ ನಿಶ್ಚಿಂತರಾಗಿ ಮಲಗಿದರು.
ಮಧ್ಯರಾತ್ರಿ ಕಳೆದು ಒಂದು ಜಾವವಾಗಿರಬೇಕು ಅವರ ಬಿಡಾರದ ಸುತ್ತಮುತ್ತ ಇರುವ ಗಿಡಗಳ ಮೇಲಿನಿಂದ ಬೆಂಕಿಯ ಉಂಡೆಗಳು ಬಂದು ಬೀಳತೊಡಗಿದವು.
ಆ ಗಿಡಗಳ ಮೇಲೆ ಅಡಗಿ ಕುಳಿತಿದ್ದ ಯೊಧರ ಬಾಣಗಳ ತುದಿಗೆ ಪಂಜು ಕಟ್ಟಿ ಬಿಟ್ಟ ಬೆಂಕಿಯ ಚಂಡುಗಳು ಬಿಡಾರಗಳಿಗೆ ಅಷ್ಟೇ ಅಲ್ಲ ಅಲ್ಲಿದ್ದ ಕುರುಚಲು ಗಿಡಗಳಿಗೆ (ಕೊಡಚಿಕಂಟಿ) ಬೆಂಕಿ ತಗುಲಿಸಿದ್ದವು. ಬೇಸಿಗೆಯ ಕಾಲ ಒಣಗಿದ ಕಂಟಿಗಳಿರುವ ಜಾಗ, ಏನಾಗುತ್ತದೆ ಎನ್ನುವಷ್ಟರಲ್ಲಿ ಎಲ್ಲ ಕಡೆ ಬೆಂಕಿ ಆವರಿಸಿ ಹಾಹಾಕಾರ ಆವರಿಸಿತು. ನಿದ್ದೆಗಣ್ಣಲ್ಲಿ ಕತ್ತಿ ಎತ್ತಿಕೊಂಡು ಬೆಂಕಿಯಿಂದ ಪಾರಾಗಲು ಸಿಕ್ಕ ಸಿಕ್ಕ ಕಡೆ ಓಡತೊಡಗಿದರು.
ಬಹಳಷ್ಟು ಜನ ನದಿಯಕಡೆ ಓಡಿಹೋದರು ಉಳಿದವರು ಸಿಕ್ಕ ಸಿಕ್ಕ ಕಡೆ ಓಡಿದರು.
ಅಂತೂ ಬೆಂಕಿಯಿಂದ ಪಾರಾಗಿ ಬಂದೆವು ಎಂದು ನಿಟ್ಟುಸಿರು ಬಿಡುವಷ್ಟರಲ್ಲಿ ಅವರಮೇಲೆ ಕದಂಬ ಯೋಧರ ಆಕ್ರಮಣ ನಡೆಯಿತು. ಅನಿವಾರ್ಯವಾಗಿ ಅಲ್ಲಿ ಎರಡೂ ಕಡೆ ಯೋಧರ ತಲೆಗಳು ನೆಲಕ್ಕೆ ಉರುಳಿದವು. ಕೆಲವು ಕಾಲ ಅಲ್ಲಿ ಘನಘೋರ ಕಾಳಗ ನಡೆಯಿತು. ದಿಕ್ಕು ತಿಳಿಯದೇ ಕತ್ತಿ ಕೆಳಗೆ ಹಾಕಿ ನೆಲಕ್ಕೆ ಮಂಡಿಯೂರಿ ಸೆರೆಯಾಗುವದನ್ನು ಬಿಟ್ಟು ಕಲ್ಯಾಣ ಯೊಧರಿಗೆ ಬೇರೆ ಮಾರ್ಗವಿರಲಿಲ್ಲ. ಬೆಳಗಾಗುವವರೆಗೆ ಅಲ್ಲಿ ಕಾದಾಟ ನಡೆದು ಹೊಯಿತು.
ಕಲ್ಯಾಣ ಸೈನಿಕರ ಹೋರಾಟ ಪೂರ್ಣವಾಗಿ ನಿಂತಿತು.
ಅಂತೂ ಬೆಳಗಾಗುವಷ್ಟರಲ್ಲಿ ಕಲ್ಯಾಣದ ಕೆಲವು ಸೈನಿಕರು ಮರಣಹೊಂದಿದರು, ಕೆಲವರು ಸೆರೆ ಸಿಕ್ಕರು ಉಳಿದವರು ನದಿ ದಡದಲ್ಲಿ ಜಮಾವಣೆ ಆಗಿ ಮುಂದೇನು ಮಾಡಬೇಕು ಎನ್ನುವ ಗೊಂದಲದಲ್ಲಿದ್ದರು.
ಅನೇಕರು ಸುಟ್ಟ ಗಾಯಗಳಿಂದ ಒದ್ದಾಡಿ ನೋವಿನಿಂದ ಚೀರಾಡುತ್ತಿದ್ದರು.
ಆಗ ಅಲ್ಲಿಗೆ ಬಂದ ಅಕ್ಕನಾಗಮ್ಮ ಮತ್ತು ಅನೇಕ ಶರಣರು ಅಲ್ಲಿ ಸುಟ್ಟ ಗಾಯಗಳಿಂದ ಒದ್ದಾಡುತ್ತಿದ್ದ ಯೊಧರನ್ನು ಹುಣಸಿಕಟ್ಟೆಗೆ ಯೋಧರ ಸಹಾಯದಿಂದ ಕರೆದುಕೊಂಡು ಹೋಗಿ ಕಾಡು ವೈದ್ಯರ ಸಹಾಯದಿಂದ ಔಷಧ ಹಾಕಿ ಉಪಚರಿಸಹತ್ತಿದರು.

ತಮ್ಮನ್ನು ಕೊಲ್ಲಲು ಬಂದ ಯೋಧರ ಸೇವೆ ಮಾಡುತ್ತಿದ್ದ ಆ ಮಹಾಮಾತೆಯರನ್ನು ಕಂಡ ಎಲ್ಲರೂ ಧನ್ಯರಾದರು. ಬಂದಿತ ಯೋಧರೊಡನೆ ಎಲ್ಲ ಯೋಧರು ತಮ್ಮ ತಮ್ಮ ಬಿಡಾರಗಳಿಗೆ ಹೋದರು.
ಅಲ್ಲಿ ಮಡಿದ ಯೋಧರೆಲ್ಲರ ಸನ್ಮಾನಪೂರ್ವಕವಾಗಿ ಅಂತ್ಯಕ್ರಿಯೆ ಮಾಡಲು ಕೆಲವು ಯೋಧರು ತೊಡಗಿದರು.
ನದಿ ದಂಡೆಯ ಕಡೆ ಓಡಿಹೋದ ಯೋಧರನ್ನು ಹುಡುಕಿ ಹುಡುಕಿ ಹತ್ಯೆ ಮಾಡುವ ಯೋಚನೆಯನ್ನು ಹಿರಿಯರು ತಳ್ಳಿಹಾಕಿದರು.
ಅವರಿಗೆಲ್ಲ ಸುಧಾರಿಸಿಕೊಳ್ಳುಲು ಅವಕಾಶ ಕೊಡುವದಕ್ಕಾಗಿ ಶರಣರ ಪರ ಯೋಧರೆಲ್ಲ ತಮ್ಮ ಸಿಬಿರಗಳಿಗೆ ಹೊರಟುಬಿಟ್ಟರು.
ಪೂರ್ಣ ಬೆಳಗಾಯಿತ್ತು. ಹೊಳೆದಂಡೆಯಲ್ಲಿ ಜಮಾವಣೆಗೊಂಡ ಕಲ್ಯಾಣಯೋಧರು ಚೇತರಿಸಿಕೊಂಡು ಶರಣಾಗತರಾಗಬಹುದು ಎನ್ನುವ ಊಹೆ ಹುಸಿಯಾಯಿತು.
ಈಗ ನಿಜವಾಗಿ ಚಿಂತೆಗೀಡಾದವರು ಅಕ್ಕನಾಗಮ್ಮನವರು ಮತ್ತು ಚನ್ನಬಸವಣ್ಣನವರು.
ಈಗ ಪಾಪ ಸಾವಿರಾರು ಯೋಧರು ಸುಟ್ಟುಕೊಂಡು ಕಷ್ಟಪಡುತ್ತಿದ್ದರೆ ಇನ್ನು ಕದನವಾದರೆ ರಕ್ತಪಾತವಾಗುವದು ಅನಿವಾರ್ಯ. ಇದನ್ನು ತಪ್ಪಿಸುವ ಮಾರ್ಗವಿದೆಯೇ?
ಕಲ್ಯಾಣ ಯೊಧರೆಲ್ಲ ಚೇತರಿಸಿಕೊಂಡು ಒಟ್ಟಾಗಿ ಸೇರಿದರು, ಸಿಬಿರದಲ್ಲಿ ಸುಡದೆ ಉಳಿದ ಸಾಮಾನುಗಳನ್ನು ಸಂಗ್ರಹಿಸಿಕೊಂಡರು. ಅಲ್ಲಿ ಯೋಧರ ಶವಗಳಾಗಲೀ ಅಥವಾ ಸುಟ್ಟ ತಮ್ಮ ಯೋಧರಾಗಲೀ ಅಲ್ಲಿ ಇಲ್ಲದ್ದನ್ನು ಕಂಡು ಚಕಿತರಾದರು. ಶರಣರ ಪರ ಕದನ ಮಾಡುವ ಯೋಧರ ಸಂಖ್ಯೆ ಬಹಳ ಕಡಿಮೆ ಹಾಗಾಗಿಯೇ ತಮ್ಮನ್ನು ಹುಡುಕಿ ಕದನಕ್ಕೆ ಬರಲಿಲ್ಲ ತಮಗೆ ಅಂಜಿ ಪಲಾಯನಮಾಡಿದ್ದಾರೆ ಎಂದು ಭಾವಿಸಿ ಯುದ್ಧ ಮುಂದುವರೆಸಲು ನಿರ್ಣಯಿಸಿದರು. ಅವರು ಒಂದೋ ಹೋರಾಡುತ್ತ ಕದನದಲ್ಲಿ ಮಡಿಯಬೇಕು ಇಲ್ಲವೇ ಸೋತು ಮರಳಿ ಮಹಾರಾಜ ಸೋಮೇಶ್ವರನಿಂದ ಮರಣದಂಡನೆಗೊಳಗಾಗಬೇಕಿತ್ತು.
ಅವರೆಲ್ಲ ಕದನ ಕಾಯುತ್ತ ಮಡಿಯುವದೋ ಅಥವಾ ಶರಣರೆಲ್ಲರ ಕೊಲೆ ಮಾಡುವದೋ ಎನ್ನುವ ಗೊಂದಲಲ್ಲಿದ್ದಾಗ ಕದಂಬ ಸೈನಿಕರು ಮತ್ತು ಬೇರೆ ಬೇರೆ ಆಡಳಿತಗಾರರ ಸಹಸ್ರ ಸಹಸ್ರ ಯೋಧರು ಎಲ್ಲ ದಿಕ್ಕುಗಳಿಂದ ಅವರನ್ನು ಸುತ್ತುವರೆದಿದ್ದರು.
ಇಷ್ಟೆಲ್ಲ ಸೈನಿಕರು ಎಲ್ಲಿಂದ ಬಂದರು ಎನ್ನುವದು ಅರಿವಾಗದೇ ಭಯ ಮೂಡಿತು ಅವರೆಲ್ಲರ ಮನದಲ್ಲಿ. ಅನಿವಾರ್ಯ ಇನ್ನೇನು ಕದನ ಪ್ರಾರಂಭವಾಗಬೇಕು ಎನ್ನುವಷ್ಟರಲ್ಲಿ ಅಕ್ಕನಾಗಮ್ಮ, ಚನ್ನಬಸವಣ್ಣ ಮತ್ತು ರುದ್ರಸ್ವಾಮಿಗಳ ಜಯಘೋಷ ಎರಡೂ ಕಡೆ ಯೋಧರಿಂದ ಮೊಳಗತೊಡಗಿತು.

ಯುದ್ಧಮಾಡಲು ಎತ್ತಿದ ಕೈಯಲ್ಲಿಯ ಕತ್ತಿಗಳೆಲ್ಲ ನೆಲಕ್ಕುರುಳಿದವು. ಅಲ್ಲಿ ಗಗನ ಮುಟ್ಟುವವರೆಗೆ ಮೊಳಗಿದ್ದು ಶರಣರ ಜಯಘೋಷ. ಕಲ್ಯಾಣ ಯೋಧರ ಆರಾಧ್ಯ ದೈವಗಳು ಅವರ ಮುಂದೆ ನಡೆದು ಬರುತ್ತಿದ್ದರು.
ಕಲ್ಯಾಣ ಯೋಧರಪಡೆಯ ಯೋಧರು ಬಾಗಿ ನಮಸ್ಕರಿಸಿದರು ಮತ್ತು ನಾಯಕರೆಲ್ಲ ಮುಂದೆ ಬಂದು ಅವರ ಪಾದಕ್ಕೆರಗಿದರು ಅವರಿಗರಿವಿಲ್ಲದೆ. ಅವರ ಮನದಲ್ಲಿದ್ದ ರೋಷ ಆವೇಶ ಮಾಯವಾಗಿತ್ತು.
ಅವರನ್ನೆಲ್ಲ ಹಿಡಿದೆತ್ತಿ ಆಶೀರ್ವದಿಸಿದ ರುದ್ರಸ್ವಾಮಿಗಳು ನೀವೆಲ್ಲ ನನ್ನ ಜೊತೆ ಬನ್ನಿ ಕುಳಿತು ಆಡಳಿತಗಾರರ ಜೊತೆ ಮಾತನಾಡುವ ಉಳಿದವರು ವಿಶ್ರಾಂತಿ ಪಡೆಯಲು ತೆರಳಲಿ ಎಂದು ಹೇಳಿ ತಮ್ಮ ಆಶ್ರಮದ ಕಡೆ ನಡೆದರು.

**ಖೇಚರರಾಗಲಿ, ಭೂಚರರಾಗಿಲಿ,ಪುರಹರರಾಗಲಿ, ಮಧ್ಯಸ್ಥರಾಗಲಿ,ಪವನನುಂಡುಂಡು ದಣಿಯದವರಾಗಲಿ,**

**ಅಗ್ನಿ ಪರಿಹರರಾಗಲಿ,ಖೇಚರರೊಳು ಬಸವಾಜ್ಞೆ, ಭೂಚರರೊಳು ಬಸವಾಜ್ಞೆ.**

**ಪುರಹರರೊಳು ಬಸವನ ಮಹಾರತಿ.**

**ಮಧ್ಯಸ್ಥರೊಳು ಬಸವನೇಕಾಂತವಾಸಿ.**

**ಪವನದೊಳು ಬಸವ ಹೇಳಿತ್ತ ಕೇಳುವೆ.**

**ಅಗ್ನಿಯೊಳು ಬಸವಂಗೆ ದಾಸೋಹವ ಮಾಡುವೆ.**

**ಎನ್ನನೀ ಪರಿಯಲ್ಲಿ ಸಲಹಿದಾತ ಬಸವಣ್ಣ ಕಾಣಾಕಲಿದೇವರದೇವಯ್ಯಾ.** / 134

– ಮಡಿವಾಳ ಮಾಚಿದೇವ.




ರುದ್ರಸ್ವಾಮಿ, ಅಕ್ಕ ನಾಗಮ್ಮ ಮತ್ತು ಚನ್ನಬಸವಣ್ಣನವರ ಹಿಂದೆ ಕಲ್ಯಾಣ ಯೋಧ ನಾಯಕ ಮತ್ತು ಕದಂಬ ಮತ್ತು ಇತರ ಆಡಳಿತಗಾರರ

ಯೋಧಪ್ರಮುಖರು ಮಲಪ್ರಭಾ ನದಿ ದಂಡೆಗೆ ನಡೆದು ಬಂದರು. ಅಲ್ಲಿ ಕಟ್ಟಿಗೆಯನ್ನು ಒಟ್ಟಿದ ದೊಡ್ಡ ಕಟ್ಟೆ ಮತ್ತು ಅದರ ಮುಂದೆ ಕದನದಲ್ಲಿ ಮಡಿದ ಯೋಧರ ಶವಗಳನ್ನು ಸಾಲಾಗಿ ಇಡಲಾಗಿತ್ತು. ಅವರನ್ನೆಲ್ಲಾ ನೊಡಿದ ಯೋಧ ನಾಯಕರೆಲ್ಲ ದುಃಖತಪ್ತರಾದರು. ಅವರೆಲ್ಲರಿಗೆ ಸೈನಿಕ ಗೌರವ ಸಲ್ಲಿಸಿದ ಮೇಲೆ ಅಗ್ನಿ ಸ್ಪರ್ಶ ಮಾಡಲಾಯಿತು. ಅಗಲಿದ ತಮ್ಮ ಸಹಯೋಗಿಗಳಿಗೆ ವೈರಿ ಯೋಧರು ಸಲ್ಲಿಸಿದ ಗೌರವ ಯೋಧ ನಾಯಕರ ಮನದಲ್ಲಿದ್ದ ರೋಷ ದ್ವೇಷವನ್ನೆಲ್ಲ ಮಾಯಮಾಡಿತ್ತು.

ಅಲ್ಲಿಯ ನದಿಯಲ್ಲಿ ಮಿಂದು ಎಲ್ಲರೂ ಕುಣಸಿಕಟ್ಟೆಯ ಕಡೆ ನಡೆದರು. ಊರು ಸಮೀಪಿಸುತ್ತಿರುವಾಗ ಅಲ್ಲಿಯ (ಹುಣಸೆ?) ಮರಗಳ ನೆರಳಿನಲ್ಲಿ ಅನೇಕ ಯೋಧರು ಮಲಗಿರುವದು ಕಂಡುಬಂದಿತು. ಅಲ್ಲಿ ಹೋಗಿ ನೋಡಿದಾಗ ಸುಟ್ಟ ಗಾಯಗಳಿಂದ ಮತ್ತು ಕತ್ತಿಯೇಟಿನಿಂದ ಗಾಯಗೊಂಡ ಯೋಧರ ಗಾಯಗಳಿಗೆ ಅನೇಕರು ಆರೈಕೆ ಮಾಡುವ ದೃಶ್ಯ ಕಂಡು ಬಂದಿತು. ಅಕ್ಕನಾಗಮ್ಮನವರನ್ನು ಕಂಡಕೂಡಲೇ ಅಲ್ಲಿದ್ದ ಯೋಧರೆಲ್ಲ ಕೈಮುಗಿದು ಜಯಘೋಷ ಮಾಡಿದರು. ಅಕ್ಕನಾಗಮ್ಮನವರು ಅವರ ಯೋಗಕ್ಷೇಮ ವಿಚಾರಿಸಿದರು. ಆ ಮಮತೆಯ ಮೂರ್ತಿಗೆ ಅವರ ಜೊತೆ ಬಂದ ಯೋಧ ನಾಯಕರೆಲ್ಲ ತಲೆಬಾಗಿ ನಮಿಸಿದರು. ಆ ದಯಾಮೂರ್ತಿ ದೇವಿಯ ಅವತಾರದಂತೆ ಕಂಡರು ಅವರಿಗೆಲ್ಲ, ಆಗ ಅಲ್ಲಿ ಔಷಧೋಪಚಾರದಲ್ಲಿ ತೊಡಗಿದ್ದ ಶರಣರನ್ನು ತೋರಿಸಿ

"ಇವರೇ ಮಹಾರಾಜ ಸೋಮೇಶ್ವರ ಕೊಲೆಮಾಡಲು ಬಯಸಿದ ಶರಣರು, ನಾವೂ ಅವರಲ್ಲೊಬ್ಬಳು" ಎಂದರು ಅಕ್ಕನಾಗಮ್ಮ. ಯೊಧ ನಾಯಕರೆಲ್ಲ ತಲೆತಗ್ಗಿಸಿನಿಂತರು.

"ಇದರಲ್ಲಿ ನಿಮ್ಮ ತಪ್ಪೇನು ಇಲ್ಲ ರಾಜನ ಆಜ್ಞೆ ಪಾಲಿಸುವದಷ್ಟೇ ಯೋಧರ ಕೆಲಸ. ಈಗ ನೀವು ಸ್ವತಂತ್ರರು ನಿಮಗೆ ಸರಿ ಎನಿಸಿದ ಕ್ರಮ ಕೈಕೊಳ್ಳಿ" ಎಂದ ಚನ್ನಬಸವಣ್ಣನವರ ಮಾತು ಯೋಧರೆಲ್ಲರ ಮನ ಕಲುಕಿತು. ಅವರ ಪರ ಜಯಘೋಷ ಮೊಳಗಿತು.

ಕಲ್ಯಾಣ ಯೋಧನಾಯಕರ ಅಣ್ಣಂಚಿನಲ್ಲಿ ಕಂಬನಿ ಕಂಡಿತು ತಾವು ಮುಂದೇನು ಮಾಡಬೇಕು ಎನ್ನುವದು ಗೋಚರಿಸಿತು. ಅಲ್ಲಿಯ ಯೋಧರ ಯೊಗ ಕ್ಷೇಮ ವಿಚಾರಿಸಿ ಅವರೆಲ್ಲ ರುದ್ರಸ್ವಾಮಿ ಆಶ್ರಮಕ್ಕೆ ಬಂದರು.

ಆಗಲೇ ಅಲ್ಲಿ ಕದಂಬ ಯುವರಾಜ ಮತ್ತು ಆಡಳಿತಗಾರರು ಬಂದಿದ್ದರು. ಅವರೆಲ್ಲ ಕಲ್ಯಾಣ ಯೋಧ ನಾಯಕರನ್ನೆಲ್ಲ ಆತ್ಮೀಯವಾಗಿ ಬರಮಾಡಿಕೊಂಡರು.

ರುದ್ರಸ್ವಾಮಿಯವರು "ಪೂಜೆ ಮತ್ತು ಪ್ರಸಾದ ಆದಮೇಲೆ ಮಾತು ಮುಂದುವರಿಸೋಣ" ಎಂದರು.. ಎಲ್ಲರೂ ಸಹಭೋಜನವಾದ ಮೇಲೆ ಒಂದು ಗಿಡದ ಕೆಳಗೆ ಸೇರಿದರು.

ಎಲ್ಲರ ಪರವಾಗಿ ಚನ್ನಬಸವಣ್ಣನವರು

"ಇಲ್ಲಿ ಯಾರಿಗೂ ಜಯವಾಗಲಿ ಅಥವಾ ಸೋಲಾಗಲಿ ಆಗಿಲ್ಲ. ಆಗಬಹುದಾದ ಜೀವಹಾನಿ ತಪ್ಪಿದೆ. ನೀವೆಲ್ಲ ನಿಮ್ಮ ನಿಮ್ಮ ನಿರ್ಧಾರ ತೆಗೆದುಕೊಳ್ಳಲು ಸ್ವತಂತ್ರರು."

ಆಡಳಿತಗಾರರ ಪರವಾಗಿ ಕದಂಬ ಯುವರಾಜ " ಕಲ್ಯಾಣ ಯೊಧರೆಲ್ಲ ಸ್ವತಂತ್ರರು ಗಾಯಾಳುಗಳ ಆರೈಕೆ ಮುಗಿದ ಮೇಲೆ ನೀವು ಪುನಃ ನಿಮ್ಮ ನಿಮ್ಮ ಪಡೆ ಸೇರಿಕೊಳ್ಳಬಹುದು ಅಥವಾ ಬಯಸಿದರೆ ನಿಮ್ಮ ಸೇವೆಯನ್ನು ನೀವು ಬಯಸಿದ ಆಡಳಿತಗಾರ ಪಡೆ ಅಥವಾ ಕದಂಬ ಯೋಧ ಪಡೆ ಸೇರಬಹುದು".

ಎಲ್ಲರ ಮಾತು ಕೇಳಿದ ರುದ್ರಸ್ವಾಮಿಯವರು " ನಿಧಾನವಾಗಿ ಯೊಚಿಸಿ ನಿರ್ಧಾರ ತೆಗೆದುಕೊಳ್ಳಿ. ಅವಸರವಿಲ್ಲ. ಆದರೆ ಯಾವುದೇ ಕಾರಣಕ್ಕೂ ಜೀವಹಾನಿಯಾಗಬಾರದು ಮತ್ತು ನಿಮಗೆ ಸರಿ ಎನಿಸಿದ ನಿರ್ಧಾರ ತೆಗೆದುಕೊಳ್ಳಿ."

ಕಲ್ಯಾಣ ಯೋಧರ ನಾಯಕ " ನಾವು ಮರಳಿ ಕಲ್ಯಾಣಕ್ಕೆ ಹೋಗಿ ಚಾಲುಕ್ಯ ರಾಜರ ಸೇವೆ ಮಾಡುವ ದಾರಿ ಮುಚ್ಚಿದೆ. ಇನ್ನು ನಮ್ಮಲ್ಲಿ ಕೆಲವರು ಸ್ವತಂತ್ರವಾಗಿ ತಮ್ಮ ಊರಿಗೆ ಹೊಗಬಹುದು, ಕೆಲವರು ನಿಮ್ಮಲ್ಲಿ ಆಶ್ರಯ ಪಡೆಯಬಹುದು. ನಾವು ವಿಚಾರ ಮಾಡಿ ತಿಳಿಸುತ್ತೇವೆ. ನಿಮ್ಮ ಪ್ರೀತಿ ವಿಶ್ವಾಸಕ್ಕೆ ಧನ್ಯವಾದಗಳು"

ಅಂತೂ ಆ ಸಭೆ ಸಫಲವಾಗಿತ್ತು. ಶಾಂತಿಪೂರ್ವಕವಾಗಿ ಸಮಸ್ಯೆಗಳ ಇತ್ಯರ್ಥವಾಗಿತ್ತು.

ಒಂದೆರಡು ದಿನಗಳೊಳಗಾಗಿ ಇಲ್ಲಿಂದ ನಮ್ಮ ಪ್ರಯಾಣ ಮುಂದುವರೆಯುವದು ಎನ್ನುವ ನಿರ್ಧಾರವನ್ನು ಚನ್ನಬಸವಣ್ಣನವರು ಪ್ರಕಟಿಸಿದರು.

ಶರಣರ ತತ್ವಗಳು ಮಾನವೀಯತೆ ಕಾಯುವ ಸೂತ್ರಗಳು ಎನ್ನುವದನ್ನು ಶರಣರು ಪ್ರಾಯೋಗಿಕವಾಗಿ ಸಾಧಿಸಿ ತೋರಿಸಿದ್ದರು. ಮಮತೆಯಿಂದ ಮಾತ್ರ ಮಾನವನ ಮನ ಪರಿವರ್ತನೆ ಸಾದ್ಯ ಎನ್ನುವ ಸತ್ಯದ ಅರಿವಾಗಿತ್ತು.

ಅಲ್ಲಲ್ಲಿ ನೆಲೆಸಿರುವ ಎಲ್ಲ ಶರಣರನ್ನು ಇಲ್ಲಿಗೆ ಕರೆತರಲು ಯೋಧರು ಹೋದರು. ಅಕ್ಕನಾಗಮ್ಮನವರಿಗೆ ಮತ್ತು ಶರಣರಿಗೆ ಮಲಪ್ರಭಾ ನದಿಯ ಆ ದಂಡೆಯಲ್ಲಿ ಏನೂ ನಡೆದಿರಬಹುದು ಎಂಬ ಯೋಚನೆ ಕಾಡತೊಡಗಿತು. ಅಲ್ಲಿಂದ ಬರುವ ಸಮಾಚಾರಕ್ಕಾಗಿ ಕಾತರದಿಂದ ಕಾಯತೊಡಗಿದರು.

**ಕದನ ಭಾಗ – 2:**

ಮಲಪ್ರಭಾ ನದಿಯ ಎಡದಂಡೆಯ ಎಲ್ಲ ಪ್ರದೇಶದಲ್ಲಿ ಏಕಕಾಲಕ್ಕೆ ದಾಳಿ ಮಾಡಿ ಶರಣರ ನಾಶ ಮಾಡುವ **ಯೋಜನೆ: ಭಾಗ (1)**

ಮಲಪ್ರಭಾ ನದಿಗೆ ನವಿಲುತೀರ್ಥ ಆಣೆಕಟ್ಟು ಕಟ್ಟಿದ ಮೇಲೆ ಆ ನದಿಯ ದಂಡೆಯಲ್ಲಿದ್ದ ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಿಹೋಗಿವೆ. ಈಗ 12 ನೇಯ ಶತಮಾನದಲ್ಲಿ ಆ ನದಿ ದಂಡೆಯಲ್ಲಿದ್ದ ಊರುಗಳ ಮತ್ತು ಅಲ್ಲಿಯ ಪರಿಸರದ ವಿವರಣೆ ಈಗ ಅಲಭ್ಯ. ಆದರೂ ಈಗ ಅಲ್ಲಿರುವ ಊರುಗಳು ಮತ್ತು ಮಂದಿರಗಳ ಆಧಾರದಲ್ಲಿ ಅಲ್ಲಿ ನಡೆದ ಕದನದ ವಿವರ ಕೊಡುವ ಪ್ರಯತ್ನ ಇಲ್ಲಿದೆ.

ಈಗ ಮಲಪ್ರಭಾ ನದಿಯ ಎಡದಂಡೆಯಲ್ಲಿ ನದಿಯಿಂದ ಒಂದೆರಡು ಕಿ ಮೀ ಅಂತರದಲ್ಲಿರುವ ಊರುಗಳು ಮತ್ತು ಮಂದಿರಗಳು
ಶ್ರೀ ಗುರು ಕುಮಾರೇಶ್ವರ ಸುಕ್ಷೇತ್ರ ನವಿಲುತೀರ್ಥದಿಂದ ರಾಯರ ಹುಬ್ಬಳ್ಳಿಯ (M K Hubli) ವರೆಗಿನ ಸುಮಾರು 40 ಕಿ ಮೀ ವರೆಗೆ ಇರುವ ಪ್ರದೇಶದಲ್ಲಿ ಇರುವ ಗ್ರಾಮಗಳು.
ಕತ್ರಾಲ ತಾಂಡ -ಕತ್ರಾಲ – ಗಾಣಿಯಲ್ – ಬಾಡ್ಲಿ – ಯಕ್ಕುಂಡಿ –ದುಪ್ದಾಲ – ಕರಲಕಟ್ಟಿ ತಾಂಡಾ – ಚಕ್ರಗೇರಿ – ಮಲ್ಲೂರ – ಮಾಟೋಲಿ – ಇಂಗಳಗಿ -- ಕೋರ್ವಿಕೋವಾ – ವಕ್ಕುಂದ – ಹಿರೆಮುಲಕುರ – ಚಿಕ್ಕಮುಲಕುರ – ಬೇವಿನಕೊಪ್ಪಾ –ಕೆಸರುಕೊಪ್ಪ – ಕುರಕುಂದ –ಹೊಳಿಹೊಸುರ – ರಾಯರ ಹುಬ್ಬಳ್ಳಿ (M K Hubli).ಇನ್ನೂ ಹೆಸರಿಸದ ಅನೇಕ ಊರುಗಳು ತಾಂಡಾಗಳಿವೆ.




ಈಗಲೂ ಅಲ್ಲಲ್ಲಿ ಕೆಲವೇ ಗುಡಿಸಲು ಇರುವ ಅನೇಕ ಕಾಡು ಜನರ ವಸತಿಗಳಿವೆ. ಅಲ್ಲಿ ದಟ್ಟವಾದ ಕಾಡಿತ್ತು ಎನ್ನುವದಕ್ಕೆ ಕಾಡು ಕಡಿದು ನಿರ್ಮಿಸಿದ ಊರ ಹೆಸರು "ಬಯಲು ಹೊಂಗಲ" ಅಥವಾ "ಬೈಲಹೊಂಗಲ".
ಭೀಮಾ ನದಿ ತೀರದಲ್ಲಾದ ಸೋಲಿನ ಸೇಡು ತೀರಿಸಿಕೊಳ್ಳಲು ಮಹಾರಾಜ ಸೋಮೇಶ್ವರ ಒಂದು ಹೊಸ ಪಡೆ ರಚಿಸಿ ಅವರಿಗೆ ತರಬೇತಿ ಕೊಡಲು ಆಜ್ಞಾಪಿಸಿದ.
ಶರಣರು ಮಲಪ್ರಭಾ ನದಿ ದಡದಲ್ಲಿ ಆಶ್ರಯ ಪಡೆಯುತ್ತಾರೆ ಮತ್ತು ಆ ಪ್ರದೇಶದ ಆಡಳಿತಗಾರರು ಅವರಿಗೆ ಸಹಾಯ ಮಾಡುತ್ತಾರೆ ಎನ್ನುವದು ಅವನಿಗೆ ಗೊತ್ತಿತ್ತು . ಸಾಮಾನ್ಯ ಜನರು ಮತ್ತು ಶರಣರನ್ನು ಬೇರೆಬೇರೆಯಾಗಿ ಗುರುತಿಸುವದು ಅಸಾಧ್ಯ ಅದಕ್ಕಾಗಿ ನದಿ ತಟದ ಎಲ್ಲ ಹಳ್ಳಿಗಳನ್ನು ನಾಶ ಮಾಡುವ ಉದ್ದೇಶದಿಂದಲೇ ಆ ಪಡೆಗೆ ತರಬೇತಿ ನೀಡಲಾಯಿತು. ಅಡವಿಯಲ್ಲಿ ಕಾಡು ಜನರಮೇಲೆ ದಾಳಿ ಮಾಡುವ ಕಲೆ ಅವರಿಗೆ ಕಲಿಸಲಾಯಿತು. ಅವರಿಗೆ ಯಾವ ವಸ್ತ್ರವೂ ಇಲ್ಲದೇ ಹಸಿರು ಎಲೆಗಳಿಂದ ಮರೆಮಾಡಿಕೊಂಡು ಯಾರಿಗೂ ಕಾಣದಂತೆ ಹಳ್ಳಿಗೆ ದಾಳಿ ಮಾಡುವ ಕ್ರಮ ಕಲಿಸಲಾಗಿತ್ತು. ಯಾರು ಯಾವ ಯಾವ ಊರಿನ ಮೇಲೆ ದಾಳಿ

ಮಾಡಬೇಕು ಎನ್ನುವದನ್ನು ನಿರ್ಧರಿಸಲಾಗಿತ್ತು. ಅಲ್ಲಿಯ ಪರಿಸರದ ಪರಿಚಯ ಅವರಿಗೆ ಕೊಡಲಾಗಿತ್ತು. ಯಾವ ಆಡಳಿತಗಾರನ ಸಹಾಯವಿಲ್ಲದೇ ನಿರ್ಧರಿಸಲಾದ ಎಲ್ಲ ಹಳ್ಳಿಗಳಿಗೆ ಏಕಕಾಲದಲ್ಲಿ ದಾಳಿ ನಡೆಸಿ ಎಲ್ಲ ನಾಶ ಮಾಡಿ ರಾಯರ ಹುಬ್ಬಳ್ಳಿ, ಮುಗೋ೯ಡ ಮತ್ತು ಗೋಡಚಿಗೆ ಮರಳಿ ಅಲ್ಲಿ ನಾಶಮಾಡಿ ಅಲ್ಲಿಯೇ ನೆಲೆಯೂರಬೇಕು ಎನ್ನುವ ಯೋಜನೆ ರೂಪಿಸಲಾಗಿತ್ತು. ದಾಳಿ ಮಾಡುವ ದಿನ ಮತ್ತು ವೇಳೆ ನಿರ್ಧರಿಸಲಾಗಿತ್ತು ಮತ್ತು ಅದರ ವಿವರ ಮಾಚಣ್ಣನವರಿಗೆ ಸಿಕ್ಕಿತ್ತು. ಇದುವರೆಗೆ ನಡೆದ ವೈರಿಗಳ ಮೇಲೆ ನಡೆದ ಯಾವ ದಾಳಿಗೂ ಈ ರೀತಿಯ ತಯಾರಿ ಮಾಡಿರಲಿಲ್ಲ. ತನ್ನ ರಾಜ್ಯದ ಒಂದು ಪ್ರದೇಶದ ಸಂಪೂರ್ಣ ವಿನಾಶ ಮಾಡುವ ಯೋಜನೆ ರೂಪಿಸುವಷ್ಟು ಕ್ರೂರ ಮಾನಸಿಕ ಸ್ಥಿತಿಯ ಅರಸನ ಯೋಜನೆಯ ಅರಿವು ಗೆಳೆಯರ ಮೂಲಕ ಮಾಚಣ್ಣನವರಿಗೆ ದೊರಕಿತ್ತು.

ಆಗಲೇ ಬಹಳ ಶರಣರು ನದಿ ದಾಟಿಯಾಗಿತ್ತು ಅವರ ಜೊತೆ ಬಹಳ ಯೋಧರು ಆ ದಡ ಸೇರಿಯಾಗಿತ್ತು. ಪ್ರಯತ್ನ ಪಟ್ಟರೆ ಎಲ್ಲ ಶರಣರನ್ನು ಆ ಕಡೆ ಸೇರಿಸಿ ಪಾರಾಗಬಹುದಾಗಿತ್ತು.

ಆದರೆ ಶರಣರಿಗೆ ತಮ್ಮ ರಕ್ಷಣೆಗಿಂತ ಅಲ್ಲಿಯ ಮುಗ್ಧ ಜನರ ಪ್ರಾಣ ರಕ್ಷಣೆ ಮಾಡುವದು ಮುಖ್ಯವಾಗಿತ್ತು. ಮಾಚಣ್ನನವರು ಮತ್ತು ಯುದ್ಧಶಾಸ್ತ್ರ ಪ್ರವೀಣೆಯಾದ ಗಂಗಾಂಬಿಕೆಯವರು ಕೆಲವು ಯೋಧರ ಮತ್ತು ಅಲ್ಲಿಯ ಜನರ ಸಹಕಾರದಿಂದ ಆ ಕೆಲಸವನ್ನು ವಹಿಸಿಕೊಂಡರು. ಯೋಧರ ಸಂಖ್ಯೆ ಹೆಚ್ಚಿಸದೇ ಯುದ್ಧ ಸಾಮಗ್ರಿಗಳಿಲ್ಲದೇ ಅಪಾರ ತರಬೇತಿ ಹೊಂದಿದ ಶರಣರ ಬಗ್ಗೆ ದ್ವೇಷ ಬಿತ್ತಿ ಬೆಳೆಸಿ ಅವರನ್ನು ನಾಶಮಾಡಲೇಬೇಕು ಎಂದು ಹೊರಟ ಯುವಪಡೆಯನ್ನು ಸೋಲಿಸುವ ಜವಾಬ್ದಾರಿ ತೆಗೆದುಕೊಂಡ ಮಾಚಣ್ಣ ಗಂಗಾಂಬಿಕೆಯವರ ಧೈರ್ಯ ಸಾಹಸ ಅಪೂರ್ವ. ಅವರು ಹಾಕಿಕೊಂಡ ಯೋಜನೆ ಯಾರಿಗೂ ಕಾರ್ಯಗತವಾಗುವವರೆಗೆ ಅರ್ಥವಾಗಲಿಲ್ಲ.

ಗಮನಿಸಿ:

12 ನೇಯ ಶತಮಾದಲ್ಲಿ ನದಿ ಪಾತ್ರದ ಪ್ರದೇಶ ಆ ಸುಡು ಬೇಸಿಗೆಯಲ್ಲಿ ಹೇಗಿರಬಹುದು?

ನಾನು 1955 – 60 ರ ಅವಧಿಯಲ್ಲಿ ನಮ್ಮೂರು ಗಂಜೀಹಾಳ ಮುಂದೆ ಇದ್ದ ಮಲಪ್ರಭಾ ನದಿಯ (ಇನ್ನೂ ಆಣೆಕಟ್ಟು ನಿರ್ಮಾಣವಾಗಿರಲಿಲ್ಲ) ನಾ ಕಂಡ ಪರಿಸರ ವಿವರಿಸುವೆ ಅದು 12 ನೇಯ ಶತಮಾನದ ವಿವರಣೆಗೆ ಹತ್ತಿರವಾಗಬಹುದು.

ನಾವೆಲ್ಲ ಕುಡಿಯಲು ನೀರು ತರಲು ಹೊಳೆಗೆ ಹೋಗಬೇಕು. ಮೊದಲು ಕುರುಚಲು ಗಿಡ ಆಮೇಲೆ ಮುಳ್ಳು ಕಂಟಿಗಳು ಆನಂತರ ಉಸುಕಿನಲ್ಲಿ ನಡೆದು ನೀರು ಹರಿಯುವ ಜಾಗ ಸೇರಬೇಕು. ಅಲ್ಲಿ

ಸಾಕಷ್ಟು ನೀರು ಹರಿಯುತ್ತಿದ್ದರೂ ಕುಡಿಯಲು ಅಯೋಗ್ಯ ಅದಕ್ಕಾಗಿ ಉಸುಕಿನಲ್ಲಿ ವರತೆ ತೋಡಬೇಕು ಅಲ್ಲಿ ಸ್ವಲ್ಪ ಸ್ವಲ್ಪ ಒಸರುವ ನೀರನ್ನು ಬಟ್ಟಲಿನಿಂದ ಕೊಡಕ್ಕೆ ತುಂಬಿಕೊಳ್ಳಬೇಕು. ಬಿಸಿಲಿನಿಂದ ಪಾರಾಗಲು ಬಟ್ಟೆ ಸಹಿತ ನೀರಿನಲ್ಲಿ ಮುಳಿಗೆದ್ದು ಕೊಡ ಹೊತ್ತು ನಡೆಯಬೇಕು ಮನೆ ಮುಟ್ಟುವಷ್ಟರಲ್ಲಿಬಟ್ಟೆ ಒಣಗಿ ಕಟಗುಟ್ಟುತ್ತಿತ್ತು. ಚಪ್ಪಲಿ ಹಾಕಿಕೊಂಡು ಉಸುಕಿನಲ್ಲಿ ನಡೆಯುವದು ಅಸಾಧ್ಯ ಅದಕ್ಕಾಗಿ ಬರಿಗಾಲಿನಲ್ಲಿ ಆ ಸುಡುವ ಉಸುಕಿನಲ್ಲಿ ನಡೆಯುವ ಅನುಭವ ಅನುಭಸಿದವನೇ ಬಲ್ಲರು. ಇನ್ನು ಉಸುಕು ದಾಟಿ ಬಂದರೆ ಕಾಲಿಗೆ ಮುಳ್ಳು ಚುಚ್ಚುವ ಭಯ. ಎಷ್ಟೇ ಜಾಗರುಕತೆವಹಿಸಿದರೂ ಮುಳ್ಳು ನೆಡುವದು ಅನಿವಾರ್ಯ ಆಗ ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದೆವು ಒಂಟಿಗಾಲಲ್ಲಿ ತುಂಬಿದ ಕೊಡ ಹೊತ್ತುಕೊಂಡು ಮುಳ್ಳು ತೆಗೆಸಿಕೊಂಡ ಅನುಭವ ಅಪರೂಪ. ಮುಳ್ಳು ಮುರಿದರೆ ಅಜ್ಜ ಅಜ್ಜಿಯರು ಸೂಜಿಯಿಂದ ಮುಳ್ಳು ತೆಗೆಯುವ ಕೆಲಸ ಮಾಡುತ್ತಿದ್ದರೂ ಒಮ್ಮೊಮ್ಮೆ ಮುಳ್ಳು ಹೊರಬರದೇ ಆನೆ ಬೆಳೆಯುವದು ಸಾಮಾನ್ಯ. ನನ್ನ ಗೆಳೆಯನೊಬ್ಬ ತನ್ನ ಕಾಲಲ್ಲಿ ಬಹಳ ಆನೆಗಳಿವೆ ಎಂದು ಹೆಮ್ಮೆಪಡುತ್ತಿದ್ದ.

ಆ ನಾಲ್ಕು ಯೊಜನ ನದಿ ಪಾತ್ರ ಹೀಗಿಯೇ ಇರಬಹುದು. ಉಸುಕು ಆದಮೆಲೆ ದಟ್ಟವಾಗಿ ಬೆಳೆದ ಕಾಡು ಆನಂತರ ಕುರುಚಲು ಗಿಡಗಳು ಮತ್ತು ಆ ಕುರುಚಲು ಗಿಡಗಳ ನಡುವೆ ಕೆಲವು ಮನೆಗಳುಳ್ಳ ಹಳ್ಳಿಗಳು. ಇಲ್ಲಿ ಗಮನಿಸಬೆಕಾದ ಒಂದು ಅಂಶವಿದೆ ಆಗ ಅಲ್ಲಿ ಕೊಡಚಿಕಂಟಿ ಎಲ್ಲ ಕಡೆ ಹೇರಳವಾಗಿ ಬೆಳೆದಿತ್ತು ಅದಕ್ಕಾಗಿಯೇ ಗೊಡಚಿ ಎಂಬ ಹೆಸರು ಬಂದಿತ್ತು. ಎದೆಯತ್ತರಕ್ಕೆ ಬೆಳೆದ ಈ ಕಂಟಿ ಬೇಸಿಗೆಯಲ್ಲಿ ಒಣಗಿ ಒಣ ಹುಲ್ಲಿನ ಗುಂಪಿನಂತಾಗುತ್ತಿತ್ತು ಮತ್ತು ಇಲ್ಲಿ ತಲೆಮರೆಸಿಕೊಂಡು ಓಡಾಡಬಹುದಿತ್ತು.

ಗಂಗಾಂಬಿಕೆಯವರು ಹಲವು ಶರಣರೊಡನೆ ಪ್ರತಿ ಊರಿಗೆ ಹೋಗಿ ಅಲ್ಲಿಯವರೇನು ಮಾಡಬೇಕು ಎನ್ನುವದನ್ನು ತಿಳಿಸಿ ಅಲ್ಲಿ ಕೆಲವು ಶರಣರನ್ನು ಅವರಿಗೆ ಮಾರ್ಗದರ್ಶನ ಮಾಡಲು ಬಿಟ್ಟು ರಾಯರ ಹುಬ್ಬಳ್ಳಿ ಸೇರಿದರು. ಒಂದೆರಡು ದಿನದ ನಂತರ ಮಾಚಣ್ಣನವರು ಅಲ್ಲಿಗೆ ಹೋಗಿ ಅವರು ಹೇಳಿದ ಕೆಲಸವಾಗಿರುವದನ್ನು ಗಮನಿಸಿ
ಅಲ್ಲಿ ಒಂದಿಬ್ಬರು ಕಾಡು ವೈದ್ಯರನ್ನು ಔಷಧಿ ಸಹಿತ ಬಿಟ್ಟು ಹೋದರು. ಅವರು ಎಲ್ಲ ಕಡೆ ತಿರುಗಿ ಅವರ ಅಪೇಕ್ಷೆಯಂತೆ ಸುರಕ್ಷಿತ ಕ್ರಮಗಳು ಆಗಿವೆ ಎನ್ನುವದನ್ನು ನೋಡಿ ಗೊಡಚಿಯ ಸಮೀಪದ ಕಾರಿಮನೆಗೆ ಬಂದು ಕಲ್ಯಾಣದ ಯೋಧರ ಬರುವಿಗಾಗಿ ಕಾಯಹತ್ತಿದರು.

ಮಾಚಣ್ಣ ಹಾಗೂ ಗಂಗಾಂಬಿಕೆಯರು ಕೈಕೊಂಡ ಕದನ ತಯಾರಿ ಯಾರಿಗೂ ಅರ್ಥವಾಗಲಿಲ್ಲ. ಆದರೂ ಅವರ ಮೇಲಿನ ನಂಬಿಕೆಯಿಂದ ಅವರ ಮೇಲೆ ಭರವಸೆ ಇಟ್ಟು ಅವರ ಆದೇಶದಂತೆ ನಡೆಯಲು ಎಲ್ಲರೂ ನಿರ್ಧರಿಸಿದರು. ಹಾಗಾದರೆ ಅವರು ಕೈಕೊಂಡ ಕ್ರಮಗಳೇನು?.

**ಕದನ ಭಾಗ – 2:**
ಮಲಪ್ರಭಾ ನದಿಯ ಎಡದಂಡೆಯ ಎಲ್ಲ ಪ್ರದೇಶದಲ್ಲಿ ಏಕಕಾಲಕ್ಕೆ ದಾಳಿ ಮಾಡಿ ಶರಣರ ನಾಶ ಮಾಡುವ **ಯೋಜನೆ: ಭಾಗ (2)**
ಮಾಚಣ್ಣನವರ ಮಾರ್ಗದರ್ಶನದಲ್ಲಿ ವಚನ ಉಳಿಸಲು ಮತ್ತು ಶರಣರನ್ನು ರಕ್ಷಣೆ ಮಾಡುವ ಕಾರ್ಯ ಇದುವರೆಗೆ ನಡೆದಿತ್ತು.
ಆದರೆ ಈಗ ಮುಗ್ಧ ಜನರ ರಕ್ಷಣೆ ಮಾಡುವ ಜವಾಬ್ದಾರಿಯನ್ನು ಗಂಗಾಂಬಿಕೆ,ಮಾಚಣ್ಣ ಮತ್ತು ಅಲ್ಲಿ ಉಳಿದ ಶರಣರು ತೆಗೆದುಕೊಂಡಿದ್ದರು. ಕದನಕ್ಕೆ ತಯಾರಿಯೆಂದರೆ ಮಾಡುವ ತಯಾರಿಗಳು, ಕತ್ತಿ ಬಲ್ಲೆಗಳನ್ನು ಹೊರತೆಗೆದು ಮಸಿಯಬೇಕು. ಕಾದುವ ಯೋಧರಿಗೆ ಗುರುಗಳಿಂದ ಅವ್ಯಾಹತವಾಗಿ ತರಬೇತಿ ನಡೆಯಬೇಕು ವಿವಿಧ ರೀತಿಯ ಪಟ್ಟುಗಳನ್ನವರಿಗೆ ಕಲಿಸಬೇಕು. ಅವರ ತಾಕತ್ತು ಹೆಚ್ಚಿಸಲು ಊರಲ್ಲಿಯ ಕೋಳಿ ಕುರಿಗಳೆಲ್ಲ ಬಲಿಯಾಗಬೇಕು. ಅವರ ಯಶಸ್ಸಿಗಾಗಿ ಊರ ಎಲ್ಲ ದೇವರ ಗುಡಿಯಲ್ಲಿ ಪೂಜೆ ನಡೆಯಬೇಕು ಇತ್ಯಾದಿ ಇತ್ಯಾದಿ...
ಆದರೆ ಇಲ್ಲಿ ನಡೆಯಬಹುದಾದ ಘನಘೋರ ಕದನದಲ್ಲಿ ಸಹಸ್ರ ಸಹಸ್ರ ಪರಿಣಿತ ಯೋಧರನ್ನು ಕದನದಲ್ಲಿ ಸೋಲಿಸಲು ತೆಗೆದುಕೊಂಡ ಕ್ರಮಗಳೇ ವಿಚಿತ್ರ ಅವುಗಳಲ್ಲಿ ಕೆಲವು

1. ಎಲ್ಲರೂ ಮನೆ ಮಠ ತೊರೆದು ತಮ್ಮ ಸಾಕುಪ್ರಾಣಿಗಳೊಡನೆ ನದಿ ದಡದ ಉಸುಕಿನಲ್ಲಿ ವಾಸಿಸಬೇಕು.
2. ಹೋಗುವಾಗ ಹಳೆ ಬಟ್ಟೆ ತೆಗೆದುಕೊಂಡು ಹೋಗಬೇಕು ಮತ್ತು ಅವುಗಳಿಂದ ಪಂಜು ತಯಾರಿಸಬೇಕು. ಸಾಕುಪ್ರಾಣಿಗಳ ಕೊಂಬಿಗೆಲ್ಲ ಪಂಜು ಕಟ್ಟಿ ಗಂಟೆ ಶಂಖ ಮೊಳಗಿದಾಗ ಅವುಗಳ ಕೊಂಬಿಗೆ ಪಂಜಿಗೆ ದೀಪ ತಾಗಿಸಿ ಆ ದನಗಳನ್ನು ಊರ ಕಡೆ ಓಡಿಸಬೇಕು.
3. ಊರ ಸುತ್ತ ಒಂದು ಬಂಡಿಯಳತೆಯ ಜಾಗವನ್ನು ಸ್ವಚವಾಗಿಡಬೇಕು ಅಲ್ಲಿ ಒಂದು ಹುಲ್ಲುಕಡ್ಡಿಯೂ ಇರಬಾರದು.
4. ಕಂಟಿ ಮುಗಿದು ಕಾಡು ಪ್ರಾರಂಭವಾಗುವದಕ್ಕಿಂತ ಮೊದಲು ಎರಡು ಬಂಡಿಯಗಲದ ಜಾಗ ಒಂದು ಹುಲ್ಲುಕಡ್ಡಿ ಇರದಂತೆ ಸ್ವಚ್ಚ ಮಾಡಬೇಕು.
5. ಪ್ರತಿ ಇಬ್ಬರು ಯುವಕರ ಹತ್ತಿರ ಒಂದು ಕಂಬಳಿ, ಹಗ್ಗಗಳು, ದೊಡ್ಡ ಬಡಿಗೆ ಅಲ್ಲದೇ ವೈದ್ಯರು ಕೊಡುವ ಔಷಧಿಯ ಡಬ್ಬಿ ಇರಬೇಕು. ಅವರೇನು ಮಾಡಬೇಕು ಎನ್ನುವದನ್ನು ವೈದ್ಯರು ಹೇಳುತ್ತಾರೆ.
6. ಹೆಣ್ಣುಮಕ್ಕಳು ಈಗ ಮಾಡುವ ಆಹಾರದ ಹಲವು ಪಟ್ಟು ಆಹಾರ ತಯಾರಿಸಿಡಬೇಕು..
7. ಸಣ್ಣಮಕ್ಕಳು ಮುದುಕರು ನದಿಯ ಉಸುಕನ್ನು ದಾಟಿ ಹೊರಗೆ ಬರಬಾರದು.

ಯಾರಿಗೂ ಈ ತಯಾರಿಯ ತಳ ಬುಡ ಅರ್ಥವಾಗಲಿಲ್ಲ. ಆದರೂ ನಂಬಿಕೆಯಿಂದ ಎಲ್ಲ ಕೆಲಸ ಪೂರೈಸಿದರು.
ನಾಳೆ ರಾತ್ರಿ ಕದನ ಪ್ರಾರಂಭವಾಗುತ್ತದೆ ಎನ್ನುವಷ್ಟರಲ್ಲಿ ರಾಯರ ಹುಬ್ಬಳ್ಳಿಯ (M K Hubli) ವರೆಗಿನ ಸುಮಾರು 40 ಕಿ ಮೀ ನದಿಯ ಕಾಡಿನ ಮತ್ತು ಕುರುಚಲು ಗಿಡಗಳ ನಡುವೆ ಹುಲ್ಲುಕಡ್ಡಿಯಿಲ್ಲದ ಬಯಲು ದಾರಿ ನಿರ್ಮಾಣವಾಗಿತ್ತು. ಪ್ರತಿ ಊರಿನ ಸುತ್ತಲೂ ಬಯಲು ದಾರಿ ನಿರ್ಮಾಣವಾಗಿತ್ತು. ಯಾವ ಊರಲ್ಲಿಯೂ ನಾಯಿ ಮೊದಲುಮಾಡಿ ಸಾಕು ಪ್ರಾಣಿಗಳಾಗಲೀ ಅಥವಾ ಮಾನವರಾಗಲೀ ಇರಲಿಲ್ಲ.
ಕದನ ಪ್ರಾರಭವಾಗುವ ಸಾಯಂಕಾಲ ಪ್ರತಿ ಊರಿನ ಮಂದಿರಗಳ ಮೇಲೆ ಜಾಗಟೆ, ಗಂಟೆ ಮತ್ತು ಶಂಖ ಹಿಡಿದ ಶರಣರು ಕುಳಿತರು. ಮಧ್ಯರಾತ್ರಿ ಸಮೀಪಿಸುವ ಮೊದಲೇ ದನಕರುಗಳ ಕೊಂಬುಗಳಿಗೆ ಪಂಜು ಕಟ್ಟಿ ಅಲ್ಲಿಯ ವೃದ್ದರು ಮತ್ತು ಮಹಿಳೆಯರು ಕೈಯಲ್ಲಿ ಪಂಜು ಹಿಡಿದು ನಿಂತಿದ್ದರು.
ಪ್ರತಿ ಯುವಕರು ಕೈಯಲ್ಲಿ ದೊಡ್ಡ ಕೋಲು ಹಿಡಿದು ಔಷಧದ ಡಬ್ಬಿ ಮತ್ತು ಕಂಬಳಿಯೊಡನೆ ನಿಂತಿದ್ದರು, ಅವರಿಗೆ ಎರಡನೆಯ ಸಲ ಗಂಟೆ ಶಂಖ ಮೊಳಗಿದಾಗ ಕಂಟಿ ಒಳಗೆ ಹೋಗಿ ಗಾಯಗೊಂಡವರು ಯಾರೇ ಇರಲಿ ಅವರನ್ನು ಕೈಕಾಲು ಕಟ್ಟಿ ಕಂಬಳಿಯಲ್ಲಿ ಹೊತ್ತುಕೊಂಡು ಬಂದು ಊರಗುಡಿಯಲ್ಲಿ ಮಲಗಿಸಿ ಔಷಧ ಹಚ್ಚಲು ಹೇಳಲಾಗಿತ್ತು.
ವೇಳೆಯ ಅಭಾವದಿಂದ ನದಿಯಿಂದ ದೂರವಿರುವ ಹಳ್ಳಿಗಳಿಗೆ ಶರಣರ ಸಂದೇಶ ತಲುಪಲಿಲ್ಲ.
ತಮ್ಮ ಬಲ ಮತ್ತು ಪರಾಕ್ರಮದ ಬಗ್ಗೆ ಬಹಳ ನಂಬಿಕೆಯಿದ್ದ ಕಲ್ಯಾಣ ಯೋಧ ಪ್ರಮುಖರು ಈ ಎಲ್ಲ ತಯಾರಿಯನ್ನು ಗಮನಿಸಲಿಲ್ಲ. ಅವರು ನಿಶ್ಚಿತ ವೇಳೆಯಲ್ಲಿ ಅವರಿಗೆ ಗೊತ್ತುಪಡಿಸಿದ ಗ್ರಾಮಕ್ಕೆ ಲಗ್ಗೆ ಇಟ್ಟು ನಾಶ ಮಾಡುವದಷ್ಟೇ ಅವರ ಗಮನದಲ್ಲಿತ್ತು.
ಅಂತೂ ಎಲ್ಲರೂ ಕಾಯುತ್ತಿದ್ದ ಸಮಯ ಬಂದಿತು ಕಲ್ಯಾಣ ಯೋಧರು ಹಸಿರೆಲೆಯಲ್ಲಿ ದೇಹ ಮರೆಮಾಡಿಕೊಂಡು ಊರನ್ನು ಹೊಕ್ಕರು. ಅವರಿಗೆ ಆಶ್ಚರ್ಯ ಕಾದಿತ್ತು. ಒಂದು ನಾಯಿಯೂ ಬೊಗಳಲಿಲ್ಲ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ. ಅವರಿಗೆ ಎಲ್ಲರೂ ಹೊಳೆದಂಡೆಯಲ್ಲಿ ತಲೆಮರೆಸಿಕೊಂಡಿದ್ದಾರೆ, ಅವರನ್ನು ಹುಡುಕಿ ಕೊಲ್ಲುವ ಉತ್ಸಾಹದಲ್ಲಿ ನದಿಯ ಕಡೆ ಕುಡಚಿಕಂಟಿ ಸವರಿಕೊಂಡು ಮುಂದೆ ನಡೆದರು. ಅವರು ಅರ್ಧ ದಾರಿ ಸಾಗಿರಬಹುದು. ಆಗ ಎಲ್ಲ ಮಂದಿರಗಳಿಂದ ಜಾಗಟೆ, ಗಂಟೆ ಮತ್ತು ಶಂಖದ ನಾದ ಹೊರಟಿತು. ಇದನ್ನೇ ಕಾಯುತ್ತಿದ್ದ ಜನ ಅಲ್ಲಿದ್ದ ದನಕರುಗಳ ಕೊಂಬಿಗೆ ಪಂಜು ತಾಗಿಸಿ ದನಗಳನ್ನು ಊರಕಡೆ ಓಡಿಸಿದರು ಮತ್ತು ಜೋರಾಗಿ ಕೂಗಹತ್ತಿದರು. ನದಿಯ ಕಡೆಯಿಂದ ನೂರಾರು ಜನ ಪಂಜು ಹಿಡಿದು ಬರುತ್ತಿದ್ದಾರೆ ಎಂದು ತಿಳಿದು ಅವರೊಡನೆ ಕಾದಾಡಲು ತಯಾರಾದ ಕಲ್ಯಾಣ ಯೋಧರಿಗೆ ಆಘಾತ ಕಾದಿತ್ತು.

ಓಡುತ್ತ ಬಂದ ಆ ದನಗಳ ಕೊಂಬಿನ ಪಂಜು ಒಣಗಿದ ಆಳೆತ್ತರದ ಸೊಪ್ಪಿಗೆ ತಾಗಿ ಎಲ್ಲಿನೋಡಿದಲ್ಲಿ ಬೆಂಕಿ ಆವರಿಸಿತು. ಪಂಜು ಹಿದಿದವರು ಮಾನವರಲ್ಲ ಎಂದು ತಿಳಿಯುವಷ್ಟರಲ್ಲಿ ಬೆದರಿದ ದನಗಳು ಇವರನ್ನು ನೆಲಕ್ಕೆ ಕೆಡವಿ ಊರಕಡೆ ಓಡಿ ಹೋದವು.




ದಿಕ್ಕು ತಿಳಿಯದೇ ಅತ್ತ ಇತ್ತ ಸಿಕ್ಕತ್ತ ಓಡಿದ ಕಲ್ಯಾಣ ಸೈನಿಕರ ಕೈ ಕಾಲು ಸುಟ್ಟುಹೋಗಿಯಾಗಿತ್ತು. ಆ ಒಣ ಹುಲ್ಲು ಬಹಳಹೊತ್ತು ಉರಿಯುವದಿಲ್ಲ ಕಲ್ಯಾಣ ಯೋಧರೆಲ್ಲ ಹಸಿ ತಪ್ಪಲು ಹೊದ್ದಿದ್ದರಿಂದ ಮೈ ಸುಟ್ಟಿರಲಿಲ್ಲ. ಕೈ ಸುಟ್ಟು ಕತ್ತಿಗಳೆಲ್ಲ ನೆಲಕ್ಕುರುಳಿದವು. ಕಾಲು ಸುಟ್ಟಿದ್ದರಿಂದ ಮುಂದೆ ನಡೆಯಲಾಗದೆ ಅಲ್ಲಿಯೇ ನೆಲಕ್ಕುರುಳಿದರು.
ಬೂದಿಯ ರಾಸಿ ಮಧ್ಯದಲ್ಲಿ ಗಾಯಗೊಂಡ ಕಲ್ಯಾಣ ಯೋಧರು ಸಿಲುಕಿ ಒದ್ದಾಡಹತ್ತಿದರು. ಆಗ ಆಗಮನವಾದದ್ದೇ ಕೈಯಲ್ಲಿ ಕೋಲು ಹಿಡಿದ ಯುವಕರು. ತಮ್ಮ ಸಾವು ಖಚಿತ ಎಂದುಕೊಂಡ ಕಲ್ಯಾಣ ಯೋಧರಿಗೆ ಚಕಿತ ಕಾದಿತ್ತು. ಬಂದ ಯುವಕರು ಅವರನ್ನು ಹಗ್ಗದಿಂದ ಕಟ್ಟಿ ಹಾಕಿ ಕಂಬಳಿ ಅಥವಾ ಗುಡಾರದಲ್ಲಿ ಜೋಳಿಗೆ ಮಾಡಿ ಅವರನ್ನದರಲ್ಲಿ ಹಾಕಿ ಹೊತ್ತುಕೊಂಡು ನಡೆದರು ಊರಕಡೆ. ಅವರ ಕೈಯಲ್ಲಿಯ ಕೋಲಿನಿಂದ ಅವರನ್ನು ಬಡಿಯದೆ ಅಲ್ಲಿರಬಹುದಾದ ಬೆಂಕಿಯನ್ನು ದೂರ ಸರಿಸಿ ಮುಂದೆ ಸಾಗುತ್ತಿದ್ದರು.
ಬೆಳಗಾಗುವಷ್ಟರಲ್ಲಿ ಊರ ಗುಡಿಗಳೆಲ್ಲ ಗಾಯಗೊಂಡ ಯೋಧರಿಂದ ತುಂಬಿದ್ದವು. ಅವರನ್ನು ಕಟ್ಟಿಹಾಕಿ ಯುವಕರು ತಮ್ಮ ಹತ್ತಿರವಿದ್ದ ಡಬ್ಬದಿಂದ ಔಷಧ ಲೇಪಿಸಿದರು.

ಊರ ಯುವಕರೆಲ್ಲ ತಮ್ಮ ತಮ್ಮ ಮನೆ ಸೇರಿದ್ದ ದನಕರುಗಳಿಗೆ ನೀರು ಕುಡಿಸಿ ಮೇವು ಹಾಕಿದರು. ದನಗಳು ವೇಗವಾಗಿ ಓಡುತ್ತ ಬಂದಿದ್ದರಿಂದ ಅವುಗಳಿಗೆ ಸುಟ್ಟ ಗಾಯಗಳಾಗಿರಲಿಲ್ಲ.
ಮಂದಿರಕ್ಕೆ ಯುವಕರು ಮರಳಿ ಬಂದರು. ಅಷ್ಟರಲ್ಲಿ ಅಲ್ಲಿಗೆ ಹಿರಿಯರು ಪ್ರಸಾದ ಸಹಿತ ಬಂದು ಅಲ್ಲಿಯ ಮಂದಿರದಲ್ಲಿ ಪೂಜೆ ಮುಗಿಸಿದರು. ಕೈಸುಟ್ಟುಕೊಂಡ ಕಲ್ಯಾಣ ಯೋಧರಿಗೆ ಯುವಕರು ತುತ್ತು ಮಾಡಿ ಉಣಿಸಹತ್ತಿದರು ಆಗ ಆ ಯೋಧರ ಕಣ್ಣಲ್ಲಿ ನೀರು ಬಂದಿತು. ಇವರನ್ನು ಹತ್ಯೆ ಮಾಡಿ ಅದೆಂತಹ ಪಾಪ ಮಾಡುತ್ತಿದ್ದೆವು ಎನ್ನುವ ಅರಿವು ಅವರಿಗಾಗಿತ್ತು. ಪ್ರಸಾದ ಮುಗಿದ ಮೇಲೆ ಹಿರಿಯರು ಮತ್ತು ಯುವಕರು ಭಜನೆ ಮಾಡುತ್ತ ಕುಳಿತರು ಗುಡಿಯಲ್ಲಿದ್ದ ಕಲ್ಯಾಣ ಯೋಧರೂ ಅವರ ಜೊತೆಗೂಡಿದರು. ಮರಣಮೃದಂಗದ ಸದ್ದು ಕೇಳಬೇಕಾದ ಹಳ್ಳಿಯಲ್ಲಿ ವಚನ ಸಂಗೀತ ಮಾಧುರ್ಯ ತುಂಬಿತ್ತು.

**ಕಾಳೆಗದಲ್ಲಿ ಹೋಗದಿರಯ್ಯ,ಕೋಲು ಬಂದು ನಿಮ್ಮ ತಾಗುಗು.**

**ಆರು ದರುಶನಕ್ಕೆ ತೋರದಿರಿ,ಸೂರೆಗೊಂಡಹವು ನಿಮ್ಮುವ.**

**ನಾಲ್ಕು ವೇದ ಹದಿನಾರು ಶಾಸ್ತ್ರವೆಂಬರ ಬೆನ್ನುಹತ್ತದಿರು,**

**ಬೇರೆ ತೀರ್ಥ ಜಾತ್ರೆಯೆಂಬವರ ಕೊಂ[ಡು]ಅರಡಿತನ ಬೇಡ,**

**ಪುಣ್ಯಪಾಪವೆಂಬೆರಡು ಭಂಡವ ಬೆನ್ನಿಲಿಕ್ಕಿಕೊಂಡು ಬಾರದಿರು.**

**ನಿನ್ನಾತ್ಮನ ನೀ ತಿಳಿ, ಜಗ ನಿನ್ನೊಳಗೆಂದನಂಬಿಗ ಚೌಡಯ್ಯ.** / 104

– ಅಂಬಿಗರ ಚೌಡಯ್ಯ




**ಯೋಜನೆ: ಭಾಗ (3)**

ಬೆಳಕು ಮೂಡುತ್ತಿರುವಂತೆಯೇ ಮಾಚಣ್ಣನವರು ತಮ್ಮ ಸಹಯೋಗಿಗಳೊಡನೆ ರಾತ್ರಿ ನಡೆದ ಘಟನೆಗಳನ್ನು ಪರಿಶೀಲಿಸಲು ನಡೆದರು. ಅವರು ಭೆಟ್ಟಿಕೊಟ್ಟ ಹಳ್ಳಿಗಳಲ್ಲೆಲ್ಲ ಒಂದು ಹನಿ ರಕ್ತ ಹರಿಯದೇ ಜಯಗಳಿಸಿದ ಊರ ಜನರ ಜಯಘೋಷ ಮುಗಿಲುಮುಟ್ಟುತ್ತಿತ್ತು. ಬಂಧಿತ ಯೋಧರೂ ಸಹ ಗಂಗಾಂಬಿಕೆ ಮತ್ತು ಮಾಚಣ್ಣನವರ ಜಯಘೋಷ ಮಾಡುತ್ತಿದ್ದರು. ಪ್ರಸಾದದ ನಂತರ ಎಲ್ಲ ಬಂಧಿತ ಯೋಧರನ್ನು ಮುರಗೋಡಕ್ಕೆ ಬಂಡಿಯಲ್ಲಿ ಅಥವಾ ಲಭ್ಯವಿರುವ ಸಾಧನಗಳನ್ನು ಉಪಯೊಗಿಸಿ ಮರ್ಯಾದೆಯಿಂದ ಕರೆದುಕೊಂಡು ಬರಲು ತಿಳಿಸಲಾಯಿತು.

ಆದರೆ ಎಲ್ಲಕ್ಕಿಂತ ಮುಖ್ಯ ಕೆಲಸ ಬಂದಿತ ಯೋಧರ ಉಪಚಾರ ಮತ್ತು ಅವರನ್ನೆಲ್ಲ ಒಂದು ಕಡೆ ಸೇರಿಸುವದಾಗಿತ್ತು. ಅದಕ್ಕಾಗಿ ಅವರು ಆರಿಸಿಕೊಂಡಿದ್ದು ಮುರಗೋಡದ ಸನಿಹದ ವಿಶಾಲವಾದ ಗವಿ.

ಆದರೆ ಅಲ್ಲಲ್ಲಿ ಕೆಲವು ಸಣ್ಣ ಸಣ್ಣ ಹಳ್ಳಿಗಳ ಮೇಲೆ ಕಲ್ಯಾಣ ಯೋಧರು ದಾಳಿ ಮಾಡಿ ಸರ್ವನಾಶಮಾಡಿ ಕಾಡು ಸೇರಿದ್ದರು ಅಲ್ಲಿ ರಕ್ತದ ಕೋಡಿ ಹರಿದಿತ್ತು. ಅಲ್ಲಿ ಯೋಧರಿಗೆ ಗಾಯಗಳಾದ ಯೋಧರಿಗೆ ಆರೈಕೆ ಮಾಡುತ್ತಿದ್ದ ಗಂಗಾಂಬಿಕೆಯವರನ್ನು ರಾಯರ ಹುಬ್ಬಳ್ಳಿಯ ಸನಿಹದ ಒಂದು ಹಳ್ಳಿಯಲ್ಲಿ ಮಾಚಿದೇವರು ಭೆಟ್ಟಿಯಾದರು. ಗಂಗಾಂಬಿಕೆಯವರು ಅವರ ಜೊತೆ ಬರದೇ ಮರುದಿನ ಬರುವದಾಗಿ ತಿಳಿಸಿದರು.

ಎಲ್ಲ ಕಡೆ ವೀಕ್ಷಣೆ ಮಾಡಿ ಕಾರಿಮನಿಯ ಸಮೀಪದ ಹಳ್ಳಿಗೆ ಬರುವಷ್ಟರಲ್ಲಿ ಅರ್ಧರಾತ್ರಿಯಾಗಿತ್ತು. ಅಲ್ಲಿಯ ಮಂದಿರದಲ್ಲಿ ಪ್ರಸಾದ ಸೇವಿಸಿ ಹಳ್ಳಿಗರ ಒತ್ತಾಯದ ಮೇಲೆ ಅಲ್ಲಿಯೇ ವಿಶ್ರಾಂತಿ ಪಡೆಯಲು ನಿರ್ಧರಿಸಿದರು.

ಗಾಯವಾಗದೇ ಅಡವಿಯ ಪಾಲಾಗಿದ್ದ ಕಲ್ಯಾಣದ ಯೋಧರು ಮುಗ್ಧ ಹಳ್ಳಿಗರ ವೇಷದಲ್ಲಿ ಇವರ ಚಲನವಲನ ಗಮನಿಸುತ್ತಿದ್ದಾರೆ ಎನ್ನುವದು ಯಾರ ಗಮನಕ್ಕೂ ಬರಲಿಲ್ಲ. ದಣಿದ ಮಾಚಣ್ಣನವರು ಸುಖ ನಿದ್ರೆಯಲ್ಲಿ ಮುಳಗಿದರು. ಆಗ ಕಲ್ಯಾಣ ಯೊಧ ಪ್ರಮುಖರು ಕೆಲವು ಸಶಕ್ತ ಯೊಧರ ಸಹಿತ ಘಾತಕ ದಾಳಿ ನಡೆಸಿದರು. ಅಲ್ಲಿ ಮಾಚಣ್ಣನವರನ್ನು ಕಾಯುತ್ತಿದ್ದ ಯೋಧರಿಗೂ ದಾಳಿ ಮಾಡಿದ ಕಲ್ಯಾಣ ಯೋಧರಿಗೆ ಘನಘೊರ ಕದನ ನಡೆಯಿತು. ಎಚ್ಚರಗೊಂಡ ಮಾಚಣ್ಣವರ ಮತ್ತು ಸಹಯೊಗಿಗಳ ಮಾರಕ ದಾಳಿಗೆ ದಾಳಿಕೋರರೆಲ್ಲ ಹತರಾದರು ಆದರೆ ಆ ಕದನದಲ್ಲಿ ಮಾಚಣ್ಣವರಿಗೆ ಗಂಭೀರ ಗಾಯವಾಯಿತು. ಅವರಿಗೆ ತುರ್ತು ಚಿಕಿತ್ಸೆ ಕೊಡಲಾಯಿತು. ಮಾಚಣ್ಣನವರು ತುರ್ತಾಗಿ ತಮ್ಮನ್ನು ಮುರಗೋಡಕ್ಕೆ ಕರೆದುಕೊಂಡು ಹೋಗಲು ಹೇಳಿದರು. ಅವರು ಗವಿಗೆ ಬಂದಾಗ ಬೆಳಗಾಯಿತ್ತು. ಕಂಬಳಿ ಹೊದ್ದ ಅವರಿಗೆ ಗಾಯವಾಗಿದೆ ಎನ್ನುವದು ಯಾರಿಗೂ ಗೊತ್ತಾಗಲಿಲ್ಲ. ಕಲ್ಯಾಣ ಬಂಧಿತ ಯೋಧರಿಗೆಲ್ಲ ಒಂದು ಗವಿಯಲ್ಲಿ ಉಪಚಾರ ಮಾಡಲಾಗುತ್ತಿತ್ತು.

ಬಂದಿತ ಕಲ್ಯಾಣ ಸೇನಾಪ್ರಮುಖರನ್ನು ಕರೆದು "ಸಾಯಂಕಾಲದೊಳಗೆ ಅಡವಿಯಲ್ಲಿ ತಲೆಮರೆಸಿಕೊಂಡ ಕಲ್ಯಾಣದ ಯೋಧರು ಮತ್ತು ಯೋಧನಾಯಕರು ಇಲ್ಲಿರಬೇಕು ಇಲ್ಲದಿದ್ದರೆ ಗವಿಯೊಳಗೆ ಹೊಗೆ ಹಾಕಿ ಬಂಧಿತರಾದ ಎಲ್ಲರನ್ನು ಕೊಲ್ಲಲಾಗುವದು ಎನ್ನುವ ಎಚ್ಚರಿಕೆ ಕೊಡಿ" ಎಂದರು. ಮಾಚಣ್ಣನವರು ನುಡಿದಂತೆ ನಡೆಯುತ್ತಾರೆ ಎನ್ನುವ ಅರಿವಿದ್ದ ಆ ಯೊಧ ಪ್ರಮುಖರು ತಮ್ಮ ಸಂಕೇತಗಳ ಮೂಲಕ ಈ ವಿಷಯವನ್ನು ಎಲ್ಲರಿಗೂ ತಿಳಿಸಿದರು.

"ಸಾಯಂಕಾಲದ ಹೊತ್ತಿಗೆ ಕಲ್ಯಾಣದಿಂದ ದಾಳಿ ನಡೆಸಲು ಬಂದ ಯೊಧರೆಲ್ಲ ಗವಿಯಲ್ಲಿ ಬಂದು ಸೇರಬೇಕು ಅಷ್ಟೇ ಅಲ್ಲ ಅಡಳಿತಗಾರರು ಮತ್ತು ಕಲ್ಯಾಣ ಯೊಧನಾಯಕರು ಒಂದೆಡೆ ಸೇರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬನ್ನಿ. ಇಲ್ಲಿಯ ಗ್ರಾಮದ ಯಾವ ನಾಗರಿಕರಿಗೂ ತೊಂದರೆಯಾಗಬಾರದು. ಯಾವುದೇ ನಿರ್ಣಯ ತೆಗೆದುಕೊಳ್ಳಲು ನೀವು ಸ್ವತಂತ್ರರು. ನಾವೆಲ್ಲರೂ ಮಲಪ್ರಭಾ ನದಿ ದಾಟಿ ಹೊಗುತ್ತೇವೆ"

ಎಂದು ಹೇಳಿ ಶರಣರ ಜೊತೆ ಹೊರಟೇ ಬಿಟ್ಟರು. ಅವರ ಜೈಕಾರ ದೂರ ಸಾಗುವವರೆಗೆ ಕೇಳುತ್ತಲೇ ಇತ್ತು.

ತುಸು ದೂರ ಸಾಗಿದ ಮೇಲೆ ಒಬ್ಬ ಶರಣ ಕುದುರೆ ಸವಾರ ಬಂದು ಮಾಚಣ್ಣನವರ ಕಿವಿಯಲ್ಲಿ ಉಸುರಿದ "ನಿನ್ನೆ ರಾತ್ರಿಯಿಂದ ಗಂಗಾಂಬಿಕೆ ಮತ್ತು ಅಲ್ಲಿದ್ದ ಶರಣರು ಕಾಣುತ್ತಿಲ್ಲ. ಅವರಿಗಾಗಿ ಎಲ್ಲರೂ ಹುಡುಕುತ್ತಿದ್ದಾರೆ."

ಮಾಚಣ್ಣನವರು "ನಾನು ಸ್ವಲ್ಪ ಹೊತ್ತು ಸಮೀಪದ ಅಡವಿಯಲ್ಲಿ ಧ್ಯಾನ ಮಾಡಿ ಬಂದು ನಿಮ್ಮನ್ನು ಸೇರಿಕೊಳ್ಳುವೆ ನೀವು ಎಲ್ಲ ಶರಣರೊದನೆ ನದಿ ದಾಟಿ ಅಕ್ಕ ನಾಗಮ್ಮನವರನ್ನು ಸೇರಿಕೊಳ್ಳಿ" ಎಂದವರೇ ಒಬ್ಬರೇ ಆ ದಟ್ಟ ಕಾಡಿನಲ್ಲಿ ತಮ್ಮ ಕುದುರೆಹತ್ತಿ ಮರೆಯಾದರು.

ಈ ದಡದಲ್ಲಿದ್ದ ಶರಣರೆಲ್ಲ ನದಿ ದಾಟಿ ಅಕ್ಕ ನಾಗಮ್ಮ ಮತ್ತು ಇತರ ಶರಣರನ್ನು ಕೂಡಿಕೊಂಡರು. ಆನಂತರ ಗಂಗಾಂಬಿಕೆಯರಾಗಲೀ ಮಾಚಣ್ಣನವರಾಗಲೀ ಯಾರ ಕಣ್ಣಿಗೂ ಬೀಳಲಿಲ್ಲ.

ಇವೆಲ್ಲ ಸಮಾಚಾರ ಅಕ್ಕನಾಗಮ್ಮ ಮತ್ತು ಚನ್ನಬಸವಣ್ಣನವರಿಗೆ ಗೊತ್ತಾಯಿತು. ಅವರು ತಮ್ಮೊಂದಿಗೆ ಇದ್ದ ಶರಣರೊಂದಿಗೆ ಹಲವು ಗುಂಪುಗಳಲ್ಲಿ ಉಳವಿಯ ಕಡೆ ಪ್ರಯಾಣ ಬೆಳೆಸಿದರು. ಅಷ್ಟರೊಳಗಾಗಿ ಅವರ ಅನುಯಾಯಿಗಳು ವಚನಗಳನ್ನು ಉಳವಿಗೆ ಮುಟ್ಟಿಸಿಯಾಗಿತ್ತು. ಹುಬ್ಬಳ್ಳಿಯಲ್ಲಿ ಬಂದು ತಂಗಿದ್ದ ಮೂರು ಸಾವಿರ ಶರಣರು ವಚನಗಳೊಂದಿಗೆ ಬೇರೆ ಬೇರೆ ಹಳ್ಳಿಗಳಿಗೆ ಹೋಗಿ ನೆಲೆಸಿಯಾಗಿತ್ತು. ಉಳವಿಯ ಕಾಡಿನಿಂದ ಸಾಗವಾನಿ ಕಟ್ಟಿಗೆ ತೆಗೆದುಕೊಂಡು ಧಾರವಾಡಕ್ಕೆ ಬರುವ ಬಂಡಿಗಳು ಮರಳಿ ಹೋಗುವಾಗ ವಚನದ ಕಟ್ಟುಗಳನ್ನು ಮೇವಿನ ಕೆಳಗೆ ಇಟ್ಟುಕೊಂಡು ಉಳವಿಯ ಸಮೀಪದ ಕಾಡಿನಂಚಿಗೆ ತಲುಪಿಸುತ್ತಿದ್ದವು. ಅಲ್ಲಿಂದ ಕಾಲ್ನಡಿಗೆಯಲ್ಲಿ ಬೆನ್ನ ಮೇಲೆ ವಚನದ

ಕಟ್ಟುಗಳನ್ನು ಹೊತ್ತುಕೊಂಡು ಶರಣರು ಉಳವಿಯ ಗವಿಗಳಿಗೆ ಸಾಗಿಸುತ್ತಿದ್ದರು. ಅಂತೂ ಕಠಿನ ಪರಿಶ್ರಮದ ಫಲವಾಗಿ ವಚನಗಳು ಉಳವಿಯ ಗವಿಗಳಲ್ಲಿ ಭದ್ರವಾಗಿ ಸಂರಕ್ಷಿಸಲ್ಪಟ್ಟವು.




ಧಾರವಾಡದಿಂದ ಉಳವಿಗೆ ಶರಣರು ಸಾಗಿರಬಹುದಾದ ಮಾರ್ಗ




ಧಾರವಾಡದಿಂದ ಉಳವಿಗೆ ಶರಣರು ಸಾಗಿರಬಹುದಾದ ಮಾರ್ಗ

ಅವುಗಳನ್ನು ಹುಡುಕಿ ತಗೆದು ಅಧ್ಯಯನ ಮಾಡುವ ಕೆಲಸವಾದಾಗ ಮಾತ್ರ ಶರಣರ ಬಲಿದಾನ ಸಾರ್ಥಕವಾಗುತ್ತದೆ.

## ಚನ್ನಬಸವಣ್ಣನವರ ಸಾಧನೆ:

ಚನ್ನಬಸವಣ್ಣ ಎಲ್ಲ ಶರಣರ ಪ್ರೀತಿಪಾತ್ರ ವ್ಯಕ್ತಿಯಾಗಿದ್ದ. ಅಷ್ಟು ಸಣ್ಣ ವಯಸ್ಸಿನಲ್ಲಿ ಅಪಾರ ಜ್ಞಾನಿಯಾಗಿದ್ದ ಅವರು ಅನುಭವ ಮಂಟಪ ನಿರ್ವಹಿಸುವ ಮಹತ್ವದ ಕಾರ್ಯ ನಿರ್ವಹಿಸುತ್ತಿದ್ದ. ಅಲ್ಲಮಪ್ರಭು ಅವರು ಕಲ್ಯಾಣ ತೊರೆದ ಮೇಲೆ ಅನುಭವಮಂಟಪದ ಜವಾಬ್ದಾರಿ ತೆಗೆದುಕೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಶರಣರನ್ನು ಉಳವಿಗೆ ಸುರಕ್ಷಿತವಾಗಿ ಕರೆದುಕೊಂಡು ಹೊಗುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು.
ಅವರು ಉಳವಿ ತಲುಪಿದ ವಿವರ ಕೆಳಗಿನ ವಚನದಲ್ಲಿ ಕಾಣಬಹುದು

1. **ಬಂದಿತ್ತು ದಿನ ಬಸವಣ್ಣ ಕಲ್ಲಿಗೆ**
   **ಚನ್ನಬಸವಣ್ಣ ಉಳುವೆಯಲ್ಲಿಗೆ**
   **ಪ್ರಭು ಅಕ್ಕ ಕದಳಿದ್ವಾರಕ್ಕೆ**
   **ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ ್ಯಯಕ್ಕೆ**
   **ನಾ ತುರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ**
   **ಅಡಗಿಹರೆಲ್ಲರು ಅಡಗಿದುದ ಕೇಳಿ ನಾ**
   **ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೆ ಉಡುಗುವೆನು** / 39

   --- ತುರುಗಾಹಿ ರಾಮಣ್ಣ
2. **ಊರು ಕೆಟ್ಟು ಸೂರೆಯಾಡುವಲ್ಲಿ ಆರಿಗಾರೂ ಇಲ್ಲ. ಬಸವಣ್ಣ ಸಂಗಮಕ್ಕೆ, ಚನ್ನಬಸವಣ್ಣ ಉಳುವೆಗೆ, ಪ್ರಭು ಕದಳಿಗೆ, ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷಭಾವಕ್ಕೆ ಮುಕ್ತಿಯನೆಯ್ದಿಹರು. ನನಗೊಂದು ಬಟ್ಟೆಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ**.

   —ಮೋಳಿಗೆ ಮಾರಯ್ಯಾ

   (156, https://lingayatreligion.com/K/Vachanagalu/Moligeya-Marayya.htm)

ತಂದೆ ಶಿವದೇವ ಸೋದರಮಾವ ಅಣ್ಣ ಬಸವಣ್ಣನವರನ್ನು ರಕ್ಷಿಸುತ್ತ ಪಡೆದ ಸದ್ಗತಿ, ಶರಣರನ್ನು ಕೊಲ್ಲಲು ಬಂದ ಕಲ್ಯಾಣಯೋಧರ ಆರೈಕೆ ಮಾಡುತ್ತ ಮಾಡುತ್ತ ಮರೆಯಾದ ಗಂಗಾಂಬಿಕೆ, ಶರಣ ಸಮೂಹವನ್ನು ಮತ್ತು ನಾಡ ಜನರನ್ನು "ಕೊಲಬೇಡ" ಎನ್ನುವ ಮಂತ್ರ ಜಪಿಸಿ ಕಾಳಗದಲ್ಲಿ ಜಯಗಳಿಸಿ ಕಾಡಿನಲ್ಲಿ ಮರೆಯಾದ ಮಡಿವಾಳ ಮಾಚಿದೇವರು ಮತ್ತು ಶರಣರ ತತ್ವಪಾಲನೆಮಾಡುತ್ತ ಕತ್ತಿಗೆ ಕೊರಳೊಡ್ಡಿದ ಅನೇಕ ಕಾಯಕಯೋಗಿಗಳ ಬಲಿದಾನದಿಂದ ವಿಚಲಿತರಾಗದೇ ಸತತವಾಗಿ ಪರಿಶ್ರಮಿಸಿ ಗುರಿ ತಲುಪಿದ ಮಹಾನುಭಾವ ಚನ್ನಬಸವಣ್ಣ.

ಶರಣರಿಗೆ ಆತ್ಮಸ್ಥೈರ್ಯ ತುಂಬಿ ಮಾರ್ಗದರ್ಶನ ಮಾಡಿದವರು ಮಹಾತಾಯಿ ಅಕ್ಕನಾಗಮ್ಮ.
ಉಳವಿ ತಲುಪಿದ ಮೇಲೆ ಮತ್ತೆ ಪರಿಶ್ರಮವಹಿಸಿ ಕಾಡಿನಲ್ಲಿಯೇ ಅನುಭವ ಮಂಟಪ ಮರುಸ್ಥಾಪಿಸಿ ಕಲ್ಯಾಣದಲ್ಲಿ ನಡೆಯುತ್ತಿದ್ದ ಎಲ್ಲ ಕಾರ್ಯಕ್ರಮಗಳು ಮತ್ತೆ ನಡೆಯುವಂತೆ ಮಾಡಿ ನಾಡಿನ ಎಲ್ಲಡೆಯಿಂದ ಬಂದ ಸಹಸ್ರ ಸಹಸ್ರ ಶರಣರಿಗೆ ಜ್ಞಾನದಾಸೋಹ ಮಾಡಿದ ಮಹಾದಾಸೋಹಿ ಚನ್ನಬಸವಣ್ಣ.
ಕೆಲವೇ ದಿನಗಳಲ್ಲಿ ಉಳವಿ ಯಾತ್ರಾಸ್ಥಳವಾಗಿ ಪರಿವರ್ತನೆಯಾಗಿ ಎರಡನೆಯ ಕಲ್ಯಾಣವೆನಿಸಿತು.
“ಚನ್ನಬಸವಣ್ಣ” ನವರನ್ನು 29 ವಚನಕಾರರು 219 ವಚನಗಳಲ್ಲಿ ಕೊಂಡಾಡಿದ್ದಾರೆ.
ಕೆಲವು ಉದಾಹರಣೆಗಳು ಇಲ್ಲಿವೆ. ಬಸವಣ್ಣ, ಅಲ್ಲಮಪ್ರಭುದೇವರು, ಅಕ್ಕಮಹಾದೇವಿ ಮೊದಲಾದ ಅಗ್ರಮಾನ್ಯ ವಚನಕಾರರಲ್ಲಿ ಚನ್ನಬಸವಣ್ಣನವರು ಒಬ್ಬರು ಎನ್ನುವದನ್ನು ವಿವರಿಸುವ ಕೆಲವು ವಚನಗಳು ಇಲ್ಲಿವೆ.

a. **ಸಾಕಾರಸ್ವರೂಪಿ ಸಂಗನಬಸವಣ್ಣ ನೋಡಾ.**
   **ನಿರಾಕಾರಸ್ವರೂಪಿ ಚನ್ನಬಸವಣ್ಣ ನೋಡಾ.**
   **ನಿರ್ವಯಲ ಪರವಸ್ತುಸ್ವರೂಪಿ ಪ್ರಭುದೇವರು ನೋಡಾ.**
   **ಇಂತೀ ಮೂವರ ಕಾರುಣ್ಯಪ್ರಸಾದವ ಕೊಂಡು ಮೀರಿದ ಘನವಾದೆನು**
   **ಸಿಮ್ಮಲಿಗೆಯಚೆನ್ನರಾಮನಲ್ಲಿ./144**
   --- ಚಂದಿಮರಸ
b. **ಎನ್ನನೆತ್ತಿಕೊಂಡನಯ್ಯಾ ಸಂಗನಬಸವಣ್ಣನು. ಎನ್ನ ಮುದ್ದಾಡಿಸಿದನಯ್ಯಾ ಚನ್ನಬಸವಣ್ಣನು. ಎನಗೆ ಪ್ರಸಾದವನುಣಕಲಿಸಿದನಯ್ಯಾ ಮರುಳಶಂಕರದೇವರು. ಎನ್ನ ಸಲಹಿದನಯ್ಯಾ ಪ್ರಭುದೇವರು. ಎನಗೆ ಅರುಹಕೊಟ್ಟನಯ್ಯಾ ಸಿದ್ಧರಾಮಯ್ಯನು. ಇಂತೀ ಐವರ ಕಾರುಣ್ಯಪ್ರಸಾದವ ಕೊಂಡು ಬದುಕಿದೆನಯ್ಯಾ, ಏಕಾಂತವೀರ ಸೊಡ್ಡಳಾ. /15**
   ---ಸೊಡ್ಡಳ ಬಾಚರಸ
c. **ಹೊರಗಿದ್ದಾನೆಂಬೆನೆ ಒಳಗು ತಾನೆ ನೋಡಾ.**
   **ಒಳಗಿದ್ದಾನೆಂಬೆನೆ ಹೊರಗು ತಾನೆ ನೋಡಾ.**
   **ಒಳಹೊರಗು ಸರ್ವಾಂಗ ಸನ್ನಹಿತವಾಗಿದ್ದ ಸಮರಸದ ಮಹಿಮನನು ತಿಳಿದು ನೋಡಾ.**

**ಅಗಲಲಿಲ್ಲದ ಘನವ ಅಗಲಿದೆನೆಂಬ ಮಾತು, ಶಿವಶರಣರ ಮನಕೆ ಬಹುದೆ ?**

**ಮರಣವಿಲ್ಲದ ಮಹಿಮನ ನಿಲವ ತನ್ನಲ್ಲಿ ನೋಡಿ ಶರಣೆಂಬುದಲ್ಲದೆ**

**ಮರೆಯಬಹುದೆ ?**

**ತೆರಹಿಲ್ಲದ ನಿಲವು.**

**ಕಲಿದೇವರದೇವನು ಕರಸ್ಥಲದೊಳಗೆ ಅಯಿದಾನೆ ಕಾಣಾ, ಚನ್ನಬಸವಣ್ಣ.**/144

---- ಮಡಿವಾಳ ಮಾಚಿದೇವ

ಕಲ್ಯಾಣದಿಂದ ಸುಮಾರು 500 ಕಿ ಮೀ ಕಾಡಿನಲ್ಲಿ ಸಂಚರಿಸಿ ಅನೇಕ ಸಂಕಟಗಳನ್ನೆದುರಿಸಿ ಉಳವಿ ತಲುಪಿದ ಶರಣರಲ್ಲಿ ಮಾನಸಿಕ ಧೈರ್ಯ ತುಂಬುವ ಕೆಲಸವನ್ನು ಮೊದಲು ಚನ್ನಬಸವಣ್ಣನವರು ಮಾಡಿದರು. ಹಗಲು ಇರಳು ತನ್ನ ತಾಯಿ ಅಕ್ಕನಾಗಮ್ಮನವರೊಡಗೂಡಿ ಅವರೆಲ್ಲರ ಆರೈಕೆ ಮಾಡಿದರು. ಚನ್ನಬಸವಣ್ಣ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಅನುಭವಮಂಟಪದ ಚರ್ಚೆಯಲ್ಲಿ ಭಾಗವಹಿಸಿ ಎಲ್ಲ ಶರಣರಿಂದ ಸೈ ಎನಿಸಿಕೊಂಡರು. ಅವರು ರಚಿಸಿದ 1174 ವಚನಗಳು ಲಭ್ಯವಾಗಿವೆ. ಗಹನವಾದ ವಿಷಯಗಳನ್ನು ಸರಳವಾಗಿ ಮನಮುಟ್ಟುವಂತೆ ತಮ್ಮ ವಚನಗಳಲ್ಲಿ ಅಳವಡಿಸಿದ್ದಾರೆ. ವಚನ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ.




ಇಂದು ಅವರ ಕೆಲವು ವಚನಗಳನ್ನು ಗಮನಿಸುವಾ

1. **ಅಯ್ಯಾ, ಸಜ್ಜನ ಸದ್ಭಾವಿಗಳ ಸಂಗದಿಂದ ಮಹಾನುಭಾವಿಗಳ ಕಾಣಬಹುದು,**

   **ಮಹಾನುಭಾವಿಗಳ ಸಂಗದಿಂದ ಶ್ರೀಗುರುವ ಕಾಣಬಹುದು,**

   **ಶ್ರೀಗುರುವಿನ ಸಂಗದಿಂದ ಲಿಂಗವ ಕಾಣಬಹುದು,**

   **ಲಿಂಗಸಂಗದಿಂದ ಜಂಗಮವ ಕಾಣಬಹುದು.**

   **ಜಂಗಮಸಂಗದಿಂದ ಪ್ರಸಾದವ ಕಾಣಬಹುದು,**

ಪ್ರಸಾದದಿಂದ ಆಚಾರವ ಕಾಣಬಹುದಯ್ಯಾ.

ಆಚಾರದಿಂದ ತನ್ನ ಕಾಣಬಹುದಯ್ಯಾ

ಇದು ಕಾರಣ ಕೂಡಲಚೆನ್ನಸಂಗಮದೇವಾ,

ನಿಮ್ಮ ಸಜ್ಜನ ಸದ್ಭಾವಿಗಳ ಸಂಗವನೆ ಕರುಣಿಸಯ್ಯಾ ನಿಮ್ಮ ಧರ್ಮ./163

-- ಚನ್ನಬಸವಣ್ಣ

2. ಅತನು ನಿಮ್ಮನಪ್ಪಿ ಮಹಾತನುವಾದ ಬಳಿಕ ತನುವೆಂಬುದು ಮತ್ತೆಲ್ಲಿಯದೊ ?

ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೊ ?

ಭಾವ ನಿಮ್ಮನಪ್ಪಿ ನಿರ್ಭಾವವಾದ ಬಳಿಕ ಭಾವವೆಂಬುದು ಮತ್ತೆಲ್ಲಿಯದೊ ?

ಇಂತೀ ತ್ರಿವಿಧವು ಲಿಂಗದಲ್ಲಿ ನಿಲರ್ ಿಪವಾಗಿ ಮೈದೋರದಿರವ, ಕೂಡಲಚೆನ್ನಸಂಗಯ್ಯ

ತಾನೆ ಬಲ್ಲ.

3. ಬೆಲ್ಲದ ನೀರೆರೆದಡೇನು, ಬೇವು ಸಿಹಿಯಪ್ಪುದೆ ಕತ್ತುರಿಯ ಲೇಪನವಿತ್ತಡೇನು, ನೀರುಳ್ಳಿಯ

ದುರ್ಗಂಧ ದೂರಪ್ಪುದೆ ?

ಕಸುಗಾಯ ಹಿಸುಕಿದಡೇನು, ಹಣ್ಣಿಗೆ ಹವಣಪ್ಪುದೆ ?

ಕಿರಿಯ ಮನದ ಮಾನವಂಗೆ ಬಹಿರಂಗದ ಬರಿಯ ಸಂಸ್ಕಾರವಾದಡೇನು,

ಭವಿಯಾಗಿಪ್ಪನಲ್ಲದೆ ಭಕ್ತನಪ್ಪನೆ ಕೂಡಲಚೆನ್ನಸಂಗಮದೇವಾ/1070

-- -- ಚನ್ನಬಸವಣ್ಣ

4. ಮನೆಯೊಳಗಣ ಕಿಚ್ಚು ಕಾನನವ ಸುಟ್ಟಿತ್ತು,

ಕಾನನ ಬೆಂದಲ್ಲಿ ಮನೆ ಉರಿಯಹತ್ತಿತ್ತು, ಮನೆ ಬೆಂದು ಕಂಬ ಉಳಿಯಿತ್ತು.

ಆ ಕಂಬದ ಮೇಲೆ ರತ್ನವಿದ್ದುದ ಕಂಡೆ.

ಅದರ ಬೆಳಗು ಮೂರು ಲೋಕವ ತುಂಬಿತ್ತಲ್ಲಾ ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ

ಪ್ರಭುದೇವರ ನಿಲವಿಂಗೆ ನಾನು ಶರಣೆನುತಿರ್ದೆನು/1206 -- ಚನ್ನಬಸವಣ್ಣ

## ಮರುನಿರ್ಮಾಣ ಮಾಡಿದ ಅನುಭವ ಮಂಟಪ ನಾಶಮಾಡಲು ಮಹಾರಾಜ ಸೋಮೇಶ್ವರ ಹಾಕಿದ ಯೋಜನೆಯ ವಿವರ:

ಕುರುಡ, ಕುಂಟ, ಅಧಮರು ಹಾಕಿದ ಗಾಳಕ್ಕೆ ಬಿದ್ದ ಮತ್ಸ್ಯವು ಸತ್ತಿರ್ಪವು.

ಅರಸು, ಪ್ರಧಾನಿ, ಮಹಾವೀರರು ಹಾಕಿದ ಗಾಳಕ್ಕೆ ಬಿದ್ದ ಮತ್ಸ್ಯವು ಸಾಯದೆ ಇರ್ಪವು

ನೋಡೆಂದನಯ್ಯಾ ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ

ನಿರ್ಮಾಯಪ್ರಭುವೆ./182– ಕಾಡಸಿದ್ಧೇಶ್ವರ

ಆ ದಟ್ಟಡವಿಯಲ್ಲಿ ಅನುಭವಮಂಟಪ ಮರುಹುಟ್ಟುಹಾಕಿದ ಚನ್ನಬಸವಣ್ಣನವರಿಗಾಗ ಇಪ್ಪತ್ತೈದು ವರ್ಷಕ್ಕಿಂತ ಕಡಿಮೆ ಎಂದು ಹೇಳಿದರೆ ನಂಬಲಾಗುತ್ತದೆಯೇ?
ಆದರೆ ಅದು ನಿಜ ಎಂದು ಹೇಳುವ ಅನೇಕ ಪುರಾವೆಗಳು ಸಿಗುತ್ತವೆ. ಸಿಂಗಿರಾಜ ಪುರಾಣದಲ್ಲಿ ಉಲ್ಲೇಖವಾದ ವಿಷಯವನ್ನು ಉದಾಹರಿಸಬಹುದು. ಕಾಲಜ್ಞಾನ ವಚನಗಳಲ್ಲಿರುವಂತೆ ಚನ್ನಬಸವಣ್ಣನ ಜನನವು ಕ್ರಿಶ್ತ ಶಕ 1144 ರಲ್ಲಿ ನಡೆಯಿತೆಂದೂ, ಅವರು ಕ್ರಿಸ್ತ ಶಕ 1168 ರಲ್ಲಿ ಲಿಂಗೈಕ್ಯರಾದರೆಂದೂ ವಿಶ್ಲೇಷಣೆ ಮಾಡಲಾಗಿದೆ.
ಹೀಗಾಗಿ ಅವರು ಬದುಕಿದ್ದು 24 ವರ್ಷಗಳು ಮಾತ್ರ ಎಂದು ನಂಬುವದು ಕಷ್ಟ ಅಲ್ಲವೇ?
ವಯಸ್ಸನ್ನು ನಿಖರವಾಗಿ ಹೇಳಲಿಕ್ಕೆ ಆಗದಿದ್ದರೂ ಅವರು ಅಪೂರ್ವ ಸಾಧನೆ ಮಾಡಿ ಅತೀ ಚಿಕ್ಕ ವಯಸ್ಸಿನಲ್ಲಿ ಎಲ್ಲರನ್ನೂ ಅಗಲಿದರು ಎನ್ನುವದು ಎಲ್ಲರೂ ಒಪ್ಪಿಕೊಂಡ ಸತ್ಯ.
ಇಂದಿನವರೆಗೂ ಬಸವಣ್ಣ, ಗಂಗಾಂಬಿಕೆ, ಚನ್ನಬಸವಣ್ಣ ಮೊದಲಾದ ಶರಣರ ಜೀವನದ ಅಂತ್ಯದ ಬಗ್ಗೆ ಯಾವ ಶರಣರೂ ಎಲ್ಲಿಯೂ ಉಲ್ಲೇಖಿಸಿಲ್ಲ. ಅದರೂ ಆಗ ನಡೆದ ಘಟನೆಗಳ ಆಧಾರದಲ್ಲಿ ಕೆಲವೊಂದು ವಿಷಯಗಳನ್ನು ತಮ್ಮ ಸಾಹಿತ್ಯದಲ್ಲಿ, ಕವನಗಳಲ್ಲಿ, ಜನಪದಗಳಲ್ಲಿ ಮತ್ತು ಕಥೆಗಳಲ್ಲಿ ತಾರ್ಕಿಕವಾಗಿ ವಿಚಾರಿಸಿ ಊಹಿಸಿ ಬರೆದಿದ್ದಾರೆ. ಅದೆಲ್ಲ ಸರಿಯೋ ತಪ್ಪೊ ನಿರ್ಧರಿಸುವದು ಸಾಧ್ಯವಾಗುವದಿಲ್ಲ. ಅದನ್ನು ಓದಿ ಅಲ್ಲಿಗೇ ಕೈಬಿಡುವದನ್ನು ಮಾಡುತ್ತ ಬಂದಿದ್ದೇವೆ.
ಈಗಲೂ ಅಂತಹದೇ ಒಂದು ವಿಚಾರವನ್ನು ನಾನು ಊಹಿಸಿ ಬರೆದಿರುವೆ ಅದೂ 500 ಕ್ಕಿಂತ ಹೆಚ್ಚಿನ ಲೇಖನಗಳನ್ನು ಬರೆಯುತ್ತಾ ಹೋದಹಾಗೆ ಮನದಲ್ಲಿ ಮೂಡಿದ ಅನಿಸಿಕೆಗಳ ಆಧಾರದಲ್ಲಿ.
ತುಂಬಾ ಉತ್ಸಾಹಿ ಆರೋಗ್ಯವಂತ ಯುವಕ ತನ್ನ ಹರೆಯದಲ್ಲಿ ಇಲ್ಲವಾದರೆ ಯಾಕೆ ಎನ್ನುವ ಪ್ರಶ್ನೆ ಮೂಡುವದು ಸಹಜ ಅಲ್ಲವೇ?
ಉಳವಿಯಲ್ಲಿ ಅನುಭವ ಮಂಟಪ ಮರುಸ್ಥಾಪಿಸಿ ಪವಾಡ ಮೆರೆದ ಉತ್ಸಾಹ ತೋರಿಸಿದ ಯುವಕ ಚನ್ನಬಸವಣ್ಣನವರು ಇಪ್ಪತ್ತೈದು ವರ್ಷದಲ್ಲಿ ಈ ಎಲ್ಲ ಕೆಲಸ ಮಾಡಿದರು ಎನ್ನುವದನ್ನು ಓದಿದಾಗ ಅವರು ಆರೋಗ್ಯವಂತರಾಗಿದ್ದರು ಮತ್ತು ಯೋಗಿಯಾಗಿದ್ದರು ಎನ್ನುವದು ಗೊತ್ತಾಗುತ್ತದೆ. ಅದು ಹೇಗೆ ಆರೋಗ್ಯವಂತ ಯೋಗಿಯ ಜೀವನ ಅಲ್ಪ ವಯಸ್ಸಿನಲ್ಲಿ ಅಂತ್ಯವಾಯಿತು ಎನ್ನುವ ಪ್ರಶ್ನೆ ಸಹಜವಾಗಿ ಮನದಲ್ಲಿ ಮೂಡುತ್ತದೆ. ನನ್ನ ಅಲ್ಪ ಅನುಭವ ಮತ್ತು ಅರೆಬರೆ ಹುಡುಕಾಟದಲ್ಲಿ ಈ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ನಿಮಗೆ ಸಿಕ್ಕಿದ್ದರೆ ತಿಳಿಸಿ.

ಯಾವ ಘಟನೆಗಳಿಗೆ ಪುರಾವೆ ಸಿಕ್ಕಲ್ಲವೋ ಅಲ್ಲಿ ಕಲ್ಪನೆ ಗರಿಗೆದರುತ್ತದೆ. ಮನಕ್ಕೆ ಯಾವುದೋ ಉತ್ತರ ಹೊಳೆಯುತ್ತದೆ. ಆ ಉತ್ತರಕ್ಕೆ ನೆಲೆ ಬೆಲೆ ಎರಡೂ ಇರಲ್ಲ. ಆದರೆ ಬರೆದವರ ಮನಕ್ಕೇ ನೆಮ್ಮದಿ ಸಿಗುತ್ತದೆ ಅಷ್ಟೇ.

ನಾನೀಗ ಕೊಡುವ ವಿವರಣೆ ನನ್ನ ನೆಮ್ಮದಿಗಾಗಿ ಮಾತ್ರ ಇಲ್ಲದಿದ್ದರೆ ಬರವಣಿಗೆ ಅಪೂರ್ಣವಾಯಿತಲ್ಲ ಎನ್ನುವ ಅಸಮಾಧಾನವಾಗುತ್ತದೆ.

ಸಹಜವಾಗಿ ಎರಡು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ

1. ಚನ್ನಬಸವಣ್ಣನವರ ಜೀವನದ ಕೊನೆ ಹೇಗೆ ಆಯಿತು?
2. ಅಕ್ಕನಾಗಮ್ಮನವರು ಉಳವಿ ತೊರೆದು ಹೋದದ್ದೇಕೆ?

ನನಗನಿಸಿದ ಉತ್ತರ ಈಗ ಇದು ಕಲ್ಪನೆ ಮಾತ್ರ (ಆಧಾರ ಹುಡುಕುವ ಪ್ರಯತ್ನದಲ್ಲಿದ್ದೇನೆ):

ಸರ್ವಜ್ಞ ತನ್ನ ವಚನದಲ್ಲಿ

**“ಮೂರ್ಖನಿಗೆ ಬುದ್ಧಿಯನು ನೂರ್ಕಾಲ ಪೆಳಿದರು**

**ಗೋರ್ಕಲ್ಲ ಮೇಲ್ ಮಳೆ ಗರೆದರೆ ಆ ಕಲ್ಲು ನೀರುಕುಡಿವುದೆ ಸರ್ವಜ್ಞ”**

ಎಂದು ಹೇಳಿದ ಮಾತು ಮಹಾರಾಜ ಸೋಮೇಶ್ವರನಿಗೆ ಅನ್ವಯಿಸುತ್ತದೆ. ಅಣ್ಣ ಬಸವಣ್ಣನವರ ಸ್ನೇಹವಾದ ನಂತರ ಬಿಜ್ಜಳ ಮಹಾರಾಜನ ಮನ ಪರಿವರ್ತನೆಯಾಗಿ ಕಲ್ಯಾಣದ ಮತ್ತು ರಾಜ್ಯದ ಜನತೆಯ ಉದ್ಧಾರ ಮಾಡಲು ತೊಡಗಿ ಶಾಂತಿ ಕಂಡುಕೊಂಡ.

ಅಣ್ಣನ ದರ್ಶನ ಮಾತ್ರದಿಂದ ಮನಪರಿವರ್ತೆಯಾದ ಅನೇಕ ಜನರ ಉದಾಹರಣೆಗಳು ಇವೆ.

ಬಾಲ್ಯದಿಂದಲೂ ಸೋಮೇಶ್ವರನಿಗೆ ಅವರಪ್ಪ ಬಿಜ್ಜಳನಿಂದ ದೊರೆತ ಸಂಸ್ಕಾರ ಮತ್ತು ಕಲ್ಯಾಣದ ಶರಣರಿಂದ ದೊರೆತ ಉಪದೇಶ ಅವನ ಮನಸ್ಥಿತಿಯ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ ಬದಲಾಗಿ ಅವರ ಬಗ್ಗೆ ದ್ವೇಷ ಬೆಳೆಸಿಕೊಂಡ.

ಶರಣ ಕಾಡಸಿದ್ಧೇಶ್ವರ ಅವರ ವಚನವೊಂದು ನೆನಪಿಗೆ ಬರುತ್ತಿದೆ

**“ಬೇವಿನಮರಕ್ಕೆ ಬೆಲ್ಲದ ಕಟ್ಟೆಯ ಕಟ್ಟಿ, ಚಿನ್ನಿ ಸಕ್ಕರೆಯ ಖಾತವ ಹಾಕಿ,**

**ಜೇನುತುಪ್ಪ ನೊರೆವಾಲೆಂಬ ನೀರೆರೆದರೆ,ಬೇವಿನಮರವಳಿದು ಬೆಲ್ಲದ ಮರವಾಗಬಲ್ಲುದೆ ?**

**ಮಾವಿನಮರಕ್ಕೆ ವಿಷದ ಕಟ್ಟೆಯ ಕಟ್ಟಿ, ಉಪ್ಪಿನ ಖಾತವ ಹಾಕಿ, ಬೇವಿನ ಈಚಲ ತಾಡಿನ**

**ಹಣ್ಣು ಮೊದಲಾದ ತ್ರಿವಿಧ ಹಣ್ಣಿನ ರಸವೆಂಬ ನೀರೆರೆದರೆ ಮಾವಿನಮರವಳಿದು ಬೇವು**

**ಈಚಲ ತಾಡ ಮೊದಲಾದ ತ್ರಿವಿಧ ವೃಕ್ಷವಾಗುವುದೆ ?------”/312---** ಕಾಡಸಿದ್ಧೇಶ್ವರ

ಒಟ್ಟಾರೆಯಾಗಿ ಲಕ್ಷಾಂತರ ಶರಣರ ಪ್ರಭಾವ ಅಲ್ಲಿಯ ಕೆಲವು ಯುವಕರ ಮೇಲಾಗಲಿಲ್ಲ ಎನ್ನುವದು ಸತ್ಯ ಸಂಗತಿ. ಅಲ್ಲದೇ ಸಂಪ್ರದಾಯವಾದಿಗಳು ಜನಮನದಲ್ಲಿ ಶರಣರ ಬಗ್ಗೆ ಅಪಪ್ರಚಾರಮಾಡಿ ದ್ವೇಷ ಹುಟ್ಟಿಸಿದರು.

ಅವಕಾಶವಾದಿ ಯುವಕ ಸೋಮೇಶ್ವರ ಮಹಾರಾಜ ಸೋಲಿನ ಮೇಲೆ ಸೋಲು ಅನುಭವಿಸಿದ ಮೇಲೆ ಶರಣರನ್ನು ಮತ್ತು ವಚನಗಳನ್ನು ನಾಶ ಮಾಡುವ ಹಠ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ.

ಅವನು ಕೈಕೊಂಡ ಕೆಲವು ಪ್ರತಿಫಲ ಕೊಡದ ಕ್ರಮಗಳು.

1. ಯುದ್ಧಭೂಮಿಯಿಂದ ಮರಳಿದ ಕ್ರೂರ ಸೈನಿಕರು ರಾತ್ರಿಯೆಲ್ಲ ಶರಣರಿಗಿಂತ ಹೆಚ್ಚಾಗಿ ನಿರಪರಾಧಿ ಕಾಯಕಯೋಗಿಗಳನ್ನು ಹತ್ಯೆ ಮಾಡಿ ಕಲ್ಯಾಣದ ಜನರನ್ನೆಲ್ಲಾ ರೊಚ್ಚಿಗೆಬ್ಬಿಸಿದ್ದ ಘಟನೆ.
2. ಹಲವು ಸಹಸ್ರ ಸಹಸ್ರ ನುರಿತ ಯೋಧರನ್ನು ಶರಣರನ್ನು ಹುಡುಕಿ ಕೊಂದು ವಚನಗಳ ಕಟ್ಟಿಗೆ ಬೆಂಕಿ ಹಚ್ಚಲು ಖರೊಸಾ ಗವಿಯ ಸಮೀಪದ ಕಾಡಿಗೆ ಕಳಿಸಿದ. ಆದರೆ ಕೆರೆಯ ದಂಡೆಯಲ್ಲಿದ್ದ ಜೇನುಹುಳಗಳನ್ನು ಕೆರಳಿಸಿ ಅವರೆಲ್ಲ ಬಲಿಕೆರೆಯಲ್ಲಿ ಜೇನುಹುಳಗಳಿಗೆ ಬಲಿಯಾದರು. ಅದರಿಂದ ಪಾಠ ಕಲಿಯದೇ ಅವನ ರೋಷ ಇನ್ನೂ ಹೆಚ್ಚಾಯಿತು. ಆ ಹತ್ಯೆಗಳಿಗೆ ಶರಣರೇ ಕಾರಣ ಎಂಬ ಸುಳ್ಳು ಸುದ್ದಿ ಹಬ್ಬಿಸಿ ಸುಮ್ಮನಾದ.
3. ಭೀಮಾ ನದೀ ತೀರದಲ್ಲಿ ಇರಬಹುದಾದ ಶರಣರ ನಾಶ ಮಾಡಿ ಕಾಯಕಯೋಗಿಗಳನ್ನು ಬಲಪ್ರಯೋಗಮಾಡಿ ಮರಳಿ ಕಲ್ಯಾಣಕ್ಕೆ ಕರೆತರಲು ದೊಡ್ಡ ಯೋಧ ಪಡೆಯನ್ನು ಕಳುಹಿಸಿದ. ಕಳಿಸಿದ ಯೋಧರ ಮನೆಯವರು ಮತ್ತು ಬಂಧುಗಳೇ ಅಲ್ಲಿ ಹೆಚ್ಚಾಗಿದ್ದಾರೆ ಎನ್ನುವದನ್ನು ಗಮನಿಸಲಿಲ್ಲ. ಅಲ್ಲಿ ಶರಣರ ಪರ ಮತ್ತು ವಿರೋಧಿ ಯೋಧರ ನಡುವಿನ ಹೋರಾಟದಲ್ಲಿ ಅರ್ದಕ್ಕರ್ಧ ಯೋಧರನ್ನು ಕಳೆದುಕೊಂಡ. ಉಳಿದವರೆಲ್ಲಾ ಸೋತು ಕಲ್ಯಾಣಕ್ಕೆ ಮರಳದೇ ಪಲಾಯನ ಮಾಡಿದರು.
4. ಮಲಪ್ರಭಾ ನದಿದಡದಲ್ಲಿ ಎಲ್ಲ ಹಳ್ಳಿಗರ ಸಮೇತ ಶರಣರನ್ನು ಕೊಂದು ಅಲ್ಲಿಯ ಪ್ರದೇಶವನ್ನೆಲ್ಲ ನಾಶಮಾಡಲು ಮತ್ತೆ ಯೋಧರನ್ನು ಕಳಿಸಿದ. ಆ ಎಲ್ಲ ಯೋಧರು ಮಡಿವಾಳ ಮಾಚಿದೇವರ ಯೋಜನೆಯಿಂದ ಸೋಲನ್ನನುಭವಿಸಿ ಅವರ ಅನುಯಾಯಿಗಳಾದಾಗಲೂ ಪಾಠ ಕಲಿಯಲಿಲ್ಲ.
5. ಶರಣರೆಲ್ಲರನ್ನು ಹೆಣಕೊಳ್ಳಕ್ಕೆ ನೂಕಿ ಬಂದಿರುವೆವು ಎಂದು ಹೇಳಿದ ಯೋಧರ ಮಾತನ್ನು ನಂಬಿ ಹೆಮ್ಮೆಯಿಂದ ಬೀಗಹತ್ತಿದ ಮಹಾರಾಜ ಸೋಮೇಶ್ವರನ ಮುಖ ಮಣ್ಣಾದದ್ದುಉಳವಿಯಲ್ಲಿ ಅನುಭವಮಂಟಪ ಮರು ಸ್ಥಾಪನೆಯಾಗಿ ಚನ್ನಬಸವಣ್ಣನ ಕೀರ್ತಿ ರಾಜ್ಯದ ತುಂಬ ಹರಡಿದಾಗ.

ಮಹಾರಾಜ ಸೋಮೇಶ್ವರ ಸುಮ್ಮನಿರಲು ಸಾಧ್ಯವೇ?

ಶರಣ ತತ್ವಗಳು ತಮ್ಮ ಕಂದಾಚಾರಗಳನ್ನು ಅಲ್ಲದೇ ಆದಾಯ ಮೂಲಗಳನ್ನು ಬೇರು ಸಹಿತ ಕಿತ್ತುಹಾಕಬಲ್ಲವು ಎಂಬ ಅರಿವಿದ್ದ ಸಂಪ್ರದಾಯವಾದಿಗಳು ಸುಮ್ಮನಿರಲು ಸಾಧ್ಯವೇ?

ಶರಣರನ್ನು ಯೋಧರ ಸಹಾಯದಿಂದ ದಮನ ಮಾಡಲು ಸಾಧ್ಯವಿಲ್ಲ ಎನ್ನುವದು ಆಗಲೇ ಗೊತ್ತಾಗಿತ್ತು. ಅಲ್ಲದೇ ಶರಣರಿಗೆ ತನ್ನ ರಾಜಕೀಯ ವೈರಿಗಳ ಬೆಂಬಲವಿರುವದೂ ಮಹಾರಾಜ ಸೋಮೇಶ್ವರನಿಗೆ ಗೊತ್ತಿತ್ತು ಮತ್ತು ತಾನು ಬಲಹೀನನಾಗಿರುವ ಅರಿವೂ ಅವನಿಗಾಗಿತ್ತು.

ಈ ಸಂದರ್ಭದಲ್ಲಿ ಅಳಿದುಳಿದ ವಚನಗಳನ್ನು ಮತ್ತು ಶರಣರ ಸಮೂಹ ನಾಶ ಮಾಡಲು ಅವನು ಹಾಕಿಕೊಂಡ ಯೋಜನೆಯ ವಿವರ ಗಮನಿಸೋಣ.

> **“ವಾದ್ಯವೊಂದರಲ್ಲಿ ಬಹುಸಂಚುಗಳ ಮುಟ್ಟಿ ತೋರುವುದು ಒಂದೋ, ಹಲವೋ ?**
>
> **ವೇಣು ಮುಹುರಿಗಳಲ್ಲಿ ಮೂವತ್ತೆರಡು ರಾಗಮಿಶ್ರಂಗಳ ಅರುವತ್ತುನಾಲ್ಕರಲ್ಲಿ ಕೂಡಿ**
>
> **ನುಡಿವುದು ಒಂದೋ, ಎರಡೋ ?**
>
> **ಅದರಂತೆ ಪರಿ ಭಿನ್ನವಾಗಿ, ಸ್ವಸ್ಥಾನಂಗಳಲ್ಲಿ ಮುಟ್ಟಿ, ವೇಧಿಸಿಕೊಂಬ ವಸ್ತು ಒಂದಾದಲ್ಲಿ,**
>
> **ಅದು ಖಂಡನೆಯ ಪತ್ರದ ಚಂಡಿಕಾ ಕಿರಣದಂತೆ. ಸಂಗವನರಿದಲ್ಲಿ, ನಿಃಕಳಂಕ**
>
> **ಮಲ್ಲಿಕಾರ್ಜುನಲಿಂಗ ಭಿನ್ನರೂಪನಲ್ಲ”/703**– ಮೋಳಿಗೆ ಮಾರಯ್ಯ

ಚತುರೋಪಾಯಗಳು ಎಂದರೆ ಕಾರ್ಯಸಿದ್ದಿಗಾಗಿ ಅನುಸರಿಸಬೇಕಾದ ನಾಲ್ಕು ಉಪಾಯಗಳು, ಅನುಕ್ರಮವಾಗಿ

1 ಸಾಮ, 2 ದಾನ, 3 ಭೇದ ಮತ್ತು 4. ದಂಡ.

ಕೌಟಿಲ್ಯನ ಅರ್ಥಶಾಸ್ತ್ರ, ಮನುಧರ್ಮಶಾಸ್ತ ಮುಂತಾದ ಶಾಸ್ತ್ರಗ್ರಂಥಗಳಲ್ಲಿ ಮಾತ್ರವಲ್ಲ ಮಹಾಭಾರತದ ಶಾಂತಿಪರ್ವದಲ್ಲಿ ಬರುವ ರಾಜಧರ್ಮ.

1 ಸಾಮ, 2 ದಾನ, 3 ಭೇದ ಈ ಮೂರಕ್ಕೂ ಬಗ್ಗದ ವೈರಿಯನ್ನು ದಾರಿಗೆ ತರಲು ನಾಲ್ಕನೆಯದಾದ ದಂಡೋಪಾಯವೇ ಗತಿ. ದಂಡ ಎಂದರೆ ದಂಡನೆ ಎಂದರ್ಥ, ಅರ್ಥಹರಣ, ಪರಿಪರಿಯ ಕ್ಲೇಶವನ್ನು ತಂದೊಡ್ಡುವುದು, ಯುದ್ಧದಲ್ಲಿ ಸೋಲಿಸುವುದು, ಕೊಲೆ-ಇವೆಲ್ಲ ದಂಡದ ಪ್ರಕಾರಗಳು.

ಮಹಾರಾಜ ಸೋಮೇಶ್ವರನಿಗೆ ಒಮ್ಮೆಲೇ ದಂಡ ಪ್ರಯೋಗಿಸಿ ತಪ್ಪು ಮಾಡಿರುವ ಅರಿವು ಮಾಡಿಕೊಟ್ಟವರು ಸಾವಿರಾರು ವರ್ಷಗಳಿಂದ ನಡೆದು ಬಂದ ಸಂಪ್ರದಾಯ ಮತ್ತು ಸಂಸ್ಕೃತಿ ಉಳಿವಿಗಾಗಿ ದೇಶದ ತುಂಬ ಸಂಚಾರಮಾಡುತ್ತ ಕಲ್ಯಾಣಕ್ಕೆ ಬಂದ ಪಂಡಿತರೊಬ್ಬರು.

ವಚನಗಳ ನಾಶ ಮತ್ತು ಅಳಿದುಳಿದ ಶರಣರ ಸರ್ವನಾಶಕ್ಕೆ ಮೊದಲಿನ ಮೂರು 1 ಸಾಮ, 2 ದಾನ, 3 ಭೇದ ಪ್ರಯೋಗ ಮಾಡಿ ಎಂದು ಉಪದೇಶಿಸಿ ಕೆಲವು ಸಲಹೆ ಕೊಟ್ಟು ಆ ಪಂಡಿತ ಮುಂದಿನೂರಿಗೆ ಹೋದ.

ಅದೇ ರೀತಿ ಕಾರ್ಯಪ್ರವೃತ್ತನಾದ. ಅವನು ಕೈಕೊಂಡ ಕ್ರಮಗಳ ವಿವರ ಇಲ್ಲಿದೆ

1. ಕಾಯಕಯೋಗಿಗಳಿಗೆ ಸಹಾಯ ಮತ್ತು ಸಂದೇಶ ತಲುಪಿಸಲು ಕಲ್ಯಾಣದಿಂದ ಪಂಡಿತರನ್ನು ಪ್ರತಿ ಊರಿಗೆ ಕಳಿಸಿದ ಅವರು ಕಾಯಕಯೋಗಿಗಳಿಗೆ ಮುಟ್ಟಿಸಿದ ಸಂದೇಶದ ಸಾರ

• ಕಾಯಕಯೋಗಿಗಳ ಪರಿಶ್ರಮದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ. ಅದಕ್ಕಾಗಿ ಕಾಯಕಗಳಿಗೆ ಬೇಕಾದ ಸಲಕರಣೆ ಮತ್ತು ಅನುಕೂಲತೆಗಳನ್ನು ಕಲ್ಪಿಸಲು ಮಹಾರಾಜ ಹಣ ಸಹಾಯ ಕಳಿಸಿದ್ದಾನೆ ಎಂದು ತಿಳಿಸಿ ಎಲ್ಲ ಬೇರೆ ಬೇರೆ ತರಹದ ಕಾಯಕಗಳಿಗೆ ಬೇರೆ ಬೇರೆಯಾಗಿ ಹಣ ಸಂದಾಯ ಮಾಡಿದರು.

• ಕಾಯಕಯೋಗಿಗಳು ತಮ್ಮ ಸಾವಿರಾರು ವರ್ಷದ ಪರಂಪರೆ, ಸಂಪ್ರದಾಯ ಮತ್ತು ಧಾರ್ಮಿಕ ವಿಧಿ ವಿಧಾನಗಳನ್ನು ಉಳಿಸಿಕೊಳ್ಳಲು ತಮ್ಮ ತಮ್ಮ ದೇವರ ಮಂದಿರ ಕಟ್ಟಿಕೊಳ್ಳಲು ಭೂಮಿ ಮತ್ತು ಹಣ ಸಹಾಯ ಮಹಾರಾಜ ಕಳಿಸಿದ್ದಾನೆ. ಆದಷ್ಟು ಬೇಗ ಆ ಕೆಲಸವಾಗಬೇಕು. ಅಲ್ಲಿ ಪೂಜೆ ಮಾಡಿ ನಿಮ್ಮ ನಿಮ್ಮ ದೇವರು ಸಂತೃಪ್ತರಾದರೆ ದೇಶ ಸುಭಿಕ್ಷವಾಗುತ್ತದೆ. ಆ ಮಂದಿರಗಳಲ್ಲಿ ನಿರಂತರ ಪೂಜಾ ವಿಧಿ ವಿಧಾನಗಳು ನಡೆಯಲು ಪ್ರತಿ ಮಂದಿರಕ್ಕೆ ಫಲವತ್ತಾದ ಭೂಮಿ ದಾನವಾಗಿ ಕೊಟ್ಟಿದ್ದಾನೆ.

ನಿಮಗೆ ಅನುಕೂಲವಾದ ಜಾಗ ಮತ್ತು ಭೂಮಿ ಈಗಲೇ ಆರಿಸಿಕೊಳ್ಳಲು ಹೇಳಿದರು ಮತ್ತು ಅದನ್ನು ನೀಡಲು ಆಡಳಿತಗಾರರಿಗೆ ರಾಜಾಜ್ಞೆ ಕೊಟ್ಟರು ಮತ್ತು ಹಣಸಹಾಯ ಮಾಡಿಸಿದರು.

ಪರಿಣಾಮವಾಗಿ ಪ್ರತಿ ಊರಲ್ಲಿ ಕಾಯಕಯೋಗಿಗಳು ತಮ್ಮ ತಮ್ಮ ದೇವರ ಮಂದಿರಗಳನ್ನು ತಾವೂ ಸ್ವಲ್ಪ ಹಣ ಸೇರಿಸಿ ಸುಂದರವಾದ ಮಂದಿರ ಕಟ್ಟಿಸಲು ಆರಂಭಿಸಿಯೇ ಬಿಟ್ಟರು ಅದೂ ಆಡಳಿತಗಾರನ ಸಮ್ಮುಖದಲ್ಲಿ.

ಕೆಲವು ದಿನಗಳಲ್ಲಿ ಆ ಕೆಲಸ ಪೂರೈಸಲ್ಪಟ್ಟು ಆ ಮಂದಿರಗಳ ಪೂಜೆ ಮಾಡುವ ಮತ್ತು ಭಕ್ತರಿಗೆ ಧರ್ಮೋಪದೇಶಮಾಡುವ ಕೆಲಸವನ್ನು ಸಂಪ್ರದಾಯವಾದಿ ಪಂಡಿತರು ಪ್ರಾರಂಭಿಸಿ ಆದಾಯದ ಮೂಲ ಕಂಡುಕೊಂಡರು.

ಎಲ್ಲ ಕಾಯಕಯೋಗಿಗಳು ಒಂದು ಕಡೆ ಸೇರಿ ವಚನ ಪಠಿಸುವ ಮತ್ತು ಅರ್ಥಮಾಡಿಕೊಳ್ಳುವ ಸಂಪ್ರದಾಯ ಮಾಯವಾಗಿ ಅವರು ತಮ್ಮ ತಮ್ಮ ದೇವರ ಗುಡಿಗೆ ಹೋಗಿ ಪೂಜಿಸುವ ಪರಿಪಾಠ ರೂಢಿಸಿಕೊಂಡರು.

a. ಪ್ರತಿಯೊಂದು ಕಾಯಕಕ್ಕೆ ಪ್ರೋತ್ಸಾಹ ಕೊಡಲು ಕಲ್ಯಾಣದಲ್ಲಿ ಆಗಳೇ ಇದ್ದ ಕಾಯಕಮಠಕ್ಕೆ (ರಾಜನಿಗೆ ನಿಷ್ಠಾವಂತ) ಹೊಸ ಮಠಾದೀಶನನ್ನು ನೇಮಿಸಿ ಪ್ರತಿ ಕಾಯಕಯೋಗಿಯನ್ನು ಸಂಪರ್ಕಿಸಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ಮಾಡಲಾಯಿತು. ಚಿತ್ರದಲ್ಲಿ ಕಾಯಕಮಠಗಳ ಹೆಸರುಗಳಿವೆ. ಈ ಮಠಾದೀಶರೆಲ್ಲ ಮಹಾರಾಜನ ಆಪ್ತರೂ ಮತ್ತು ಸಾಂಪ್ರಾದಾಯಕ ವಿಧಿವಿಧಾನಗಳನ್ನು ಆಕರ್ಷಕವಾಗಿ ನಡೆಸಬಲ್ಲವರಾಗಿದ್ದರು ಅಲ್ಲದೇ ಬಸವಣ್ಣನವರ ಕಟ್ಟಾ ವಿರೋಧಿಗಳಾಗಿದ್ದರು.

b. ಈ ಕೆಲಸ ಪೂರೈಸಲು ಸಾಕಷ್ಟು ಹಣ ವ್ಯಯಮಾಡಿದ. ಅವನು ಸಾಮ, ದಾನ, ಭೇಧ ಪ್ರಯೋಗದಲ್ಲಿ ಯಶಸ್ವಿಯಾದ.

c. ಹೊಸದಾಗಿ ನೇಮಿಸಲ್ಪಟ್ಟ ಬೆರೆ ಬೇರೆ ಕಾಯಕದ ಮಠಾದೀಶರು ವೈಭವಯುತವಾಗಿ ಎಲ್ಲ ಕಡೆ ಪ್ರವಾಸ ಮಾಡಿ ಉಪದೇಶ ಮಾಡುವ ಕಾರ್ಯ ಕೈಕೊಂಡರು. ತುಂಬಾ ಜಾಣರು ಮತ್ತು ವಿದ್ವಾನವಾಗಿದ್ದ ಅವರು ತಮ್ಮ ಉಪದೇಶದಲ್ಲಿ ವಚನಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ತಮ್ಮ ಸಂಪ್ರದಾಯ ವಿವರಿಸುವ ಸಾಧನವನ್ನಾಗಿಸಿಕೊಂಡರು. ಅವರು ಹೊಸದಾಗಿ ಸ್ಥಾಪಿಸಿದ ಮಠ ಮಂದಿರಗಳಲ್ಲಿ ಆಯಾ ಕಾಯಕ ಮಾಡಿದ ಶರಣರ ಕಾಲ್ಪನಿಕ ಚಿತ್ರಗಳನ್ನು ಮತ್ತು ಮೂರ್ತಿಗಳನ್ನು ಅಭಿಮಾನಿಗಳು ಸ್ಥಾಪಿಸಿದರು. ಅಂತೂ ಒಂದಾಗಿದ್ದ ಕಾಯಕಯೋಗಿಗಳು ನೂರು ಬಣಗಳಲ್ಲಿ ಹಂಚಿಹೋದರು.

d. ಅಂದು ಹಾಕಿದ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ.

ಕೆಲ ಸಮಯದಲ್ಲಿ ವಚನಗಳ ಕಟ್ಟುಗಳು ಜಗಲಿ ಸೇರಿದವು ಮತ್ತು ಮಠ ಮಂದಿರಗಳಿಗೆ ಹೋಗುವ ಮೊದಲಿನ ಪದ್ಧತಿ ಮರಳಿ ಬಂದಿತು.

ಇಷ್ಟೆಲ್ಲ ಆದರೂ ಮಹಾರಾಜ ಸೋಮೇಶ್ವರನಿಗೆ ಸಮಾಧಾನವಾಗಲಿಲ್ಲ. ತನ್ನನ್ನು ಧಿಕ್ಕರಿಸಿ ಉಳವಿಗೆ ಹೋಗಿ ಅನುಭವ ಮಂಟಪ ಸ್ಥಾಪಿಸಿದ ಶರಣರ ನಾಶ ಮಾಡುವ ಅವನ ಇಚ್ಛೆ ಪ್ರಭಲವಾಯಿತು. ಅದಕ್ಕಾಗಿ ತನ್ನ ಸಂಪ್ರದಾಯವಾದಿ ಹಿತೈಸಿಗಳ ಜೊತೆ ಕ್ರಮ ಕೈಕೊಳ್ಳುವ ಬಗ್ಗೆ ವಿವರವಾಗಿ ಯೋಜನೆ ರೂಪಿಸಿದ. ಆ ವಿವರ ಕೊಡುವ ಪ್ರಯತ್ನ ಇಲ್ಲಿದೆ.




**"ಕೆಚ್ಚೆಲ್ಲದ ಮರನ ಕ್ರಿಮಿ ಇಂಬುಗೊಂಬಂತೆ, ಒಡೆಯನಿಲ್ಲದ ಮನೆಯ ಶುನಕ ಸಂಚುಗೊಂಬಂತೆ, ನೃಪತಿಯಿಲ್ಲದ ದೇಶವ ಮನ್ನೆಯರಿಂಬುಗೊಂಬಂತೆ, ನಿಮ್ಮ ನೆನಹಿಲ್ಲದ ಶರೀರವ ಭೂತ ಪ್ರೇತ ಪಿಶಾಚಿಗಳಿಂಬುಗೊಂಬಂತೆ ಚೆನ್ನಮಲ್ಲಿಕಾರ್ಜುನಾ." /171**

---- ಅಕ್ಕಮಹಾದೇವಿ

ಕಲ್ಯಾಣದ ಯೋಧರಿಗೆ ಶರಣರೆಂದರೆ ಸಾಕು ಅವರಿಗೆ ಭಯ. ಶರಣರೆಲ್ಲ ದೇವತಾ ಪುರುಷರು ಅವರನ್ನು ದೇವರು ಅವರೊಡನೆ ಇದ್ದು ಕಾಪಾಡುತ್ತಾನೆ ಎನ್ನುವ ಮಾತು ಪ್ರಚಲಿತವಾಗಿತ್ತು. ಅವರ ಭಯಕ್ಕೆ ಕಾರಣವಾದ ಕೆಲವು ಘಟನೆಗಳು

1. ಖರೋಸಾ ಕಾಡಿನಲ್ಲಿ ಶರಣರನ್ನು ಕೊಲ್ಲಲು ಹೋದಾಗ ಜೇನುಹುಳಗಳು ಬಂದು ಕಾಯ್ದದ್ದು.
2. ಭೀಮಾ ನದಿತೀರದಲ್ಲಿ ಅರ್ಧ ಯೋಧರಿಗೆ ದೇವರು ಮೈಮೇಲೆ ಬಂದು ತಮ್ಮವರನ್ನೇ ಇರಿದು ಕೊಂದದ್ದು.
3. ಮಲಪ್ರಭಾ ನದಿ ದಂಡೆಯ ಮೇಲೆ ಕೊಲ್ಲಲು ಹೋದಾಗ ಇಡಿ ಕಾನನಕ್ಕೆ ಬೆಂಕಿ ತಗುಲಿ ಶರಣರು ಪಾರಾದದ್ದು.
4. ಕೊಂದು ಕೊಳ್ಳಕ್ಕೆ ಬೀಸಾಡಿದ ಮೇಲೆಯೂ ಶರಣರು ಮರುಜೀವ ಪಡೆದು ಬಂದರು ಎನ್ನುವ ವದಂತಿ.

ಈ ರೀತಿಯ ಮನಸ್ಥಿತಿಯ ಯೋಧರು ಶರಣರನ್ನು ಕೊಲ್ಲುವದು ಸಾಧ್ಯವಿಲ್ಲ. ಅದಕ್ಕಾಗಿ ಬೇರಾರೂ ಉಹಿಸದ ಯೋಜನೆಯನ್ನು ತನ್ನ ಗೆಳೆಯರೊಡಗೂಡಿ ಮಹಾರಾಜ ಸೋಮೇಶ್ವರ ರೂಪಿಸಿದ. ಶರಣರು “ಕೊಲಬೇಡ” ಎನ್ನುವ ತತ್ವಕ್ಕೆ ಕಟ್ಟುಬಿದ್ದು ಜೀವಹಾನಿಯನ್ನು ಮಾಡಲಿಲ್ಲ.

ಮಹಾರಾಜ ಸೋಮೇಶ್ವರನ ದುಡುಕಿನ ನಿರ್ಧಾರದಿಂದ ಅನೇಕ ನಾಗರಿಕರು ಮತ್ತು ಯೋಧರು ಹತರಾದರು. ಅವರೆಲ್ಲರನ್ನು ಕೊಂದವರು ಶರಣರೇ ಎನ್ನುವ ಸುಳ್ಳು ವದಂತಿ ಹಬ್ಬಿಸಿದ ಮತ್ತು ಅದೇ ರೀತಿ ಪ್ರಚಾರ ಮಾಡಿದ. ಮಡಿದವರಿಗೆ ಆಡಳಿತಗಾರಿಂದ ಹಣ ಮತ್ತು ಭೂಮಿ ಕೊಡಿಸಿ ಸಹಾನುಭೂತಿ ಗಳಿಸಿಕೊಂಡ. ಅವನ ಮಾತನ್ನು ಬಹಳ ಜನ ನಂಬದಿದ್ದರೂ ತಮ್ಮ ತಂದೆ, ಅಣ್ಣ, ತಮ್ಮ ಬಂಧುಗಳನ್ನು ಕಳೆದುಕೊಂಡ ಪರಿಜನರು ಅವನು ಮಾಡಿದ ಸಹಾಯ ನೋಡಿ ಅವನ ಮಾತನ್ನು ನಂಬಿದರು. ಆ ಮನೆಯಲ್ಲಿಯ ಯುವಕರು ಶರಣರ ಮೇಲೆ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದರು. ಆ ಯುವಶಕ್ತಿಯನ್ನು ಒಗ್ಗೂಡಿಸುವ ಪ್ರಯತ್ನ ನಡೆಯಿತು. ಆ ಯುವಕರ ಮನದಲ್ಲಿದ್ದ ಬೆಂಕಿಗೆ ತುಪ್ಪ ಸುರಿಯುವ ಪ್ರಯತ್ನ ನಡೆಯಿತು.

ಹಳ್ಳಿ ಹಳ್ಳಿಯ ಆ ರೀತಿಯ ಮನಸ್ಥಿತಿಯುಳ್ಳ ಯುವಕರನ್ನು ಗುರುತಿಸಿ ಕಲ್ಯಾಣಕ್ಕೆ ಮಡಿದವರಿಗೆ ಸಂತಾಪ ಸೂಚಿಸುವ ನೆಪದಲ್ಲಿ ಕರೆಸಿಕೊಂಡ. ಅಲ್ಲಿಗೆ ಬಂದ ಅವರಿಗೆ ಯುದ್ಧ ಕೌಶಲ್ಯದ ಜೊತೆಗೆ ಶರಣ ತತ್ವಗಳು ಮತ್ತು ಶರಣರ ಆಚಾರ ವಿಚಾರಗಳನ್ನು ಕೊಡಿಸಿದ. ಕೆಲವು ದಿನಗಳ ತರುವಾಯ ಅವರೆಲ್ಲ ಶರಣರಂತೆ ಆಚರಣೆ ಮಾಡುತ್ತ ವಿವಿಧಕಾಯಕಗಳಲ್ಲಿ ಪರಿಣತಿ ಪಡೆದರು.

ಮಹಾರಾಜ ಸೋಮೇಶ್ವರನ ಯೋಜನೆಯಂತೆ ಅವರು ಬೇರೆ ಬೇರೆಯಾಗಿ ಉಳವಿಗೆ ಬಂದು ಸೇರಿಕೊಂಡರು.

ಅವರ ಆಚಾರ ವಿಚಾರಗಳಿಂದ ಉಳವಿಯಲ್ಲಿಯ ಶರಣರಿಗೆ ಪ್ರೀತಿ ಪಾತ್ರರಾಗಿ ಅಲ್ಲಿಯೇ ವಿವಿಧ ಕಾಯಕಗಳಲ್ಲಿ ನಿರತರಾದರು. ಕೆಲವು ದಿನಗಳಲ್ಲಿ ಆ ಯುವಕರು ಅನುಭವ ಮಂಟಪದ ಮತ್ತು ದಾಸೋಹದ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರೀಯರಾದರು. ಚನ್ನಬಸವಣ್ಣನವರ ಆತ್ಮೀಯರೂ ಆದರು. ಇವರ ಮನದಲ್ಲಿದ್ದ ಕಪಟ ಯಾರ ಗಮನಕ್ಕೂ ಬರಲಿಲ್ಲ.

ಒಂದು ದಿನ ಅಡವಿಯಲ್ಲಿ ಪರ್ಯಟನಕ್ಕೆ ಹೋದ ಚನ್ನಬಸವಣ್ಣನವರು ಮರಳಿ ಬರಲಿಲ್ಲ. ಅಂದು ರಾತ್ರಿ ಕೆಲವು ಕೊಲೆಯಾಗಿ ಕೊಳ್ಳಸೇರಿದರು. ಆಗ ನಡೆದ ಘಟನೆಯಲ್ಲಿ ಭಯಭೀತರಾದ ಅನೇಕರು ಕಾಡಿನಲ್ಲಿ ಓಡಿ ಮರೆಯಾದರು. ವಚನಸಂಗ್ರಹಾಲಯಕ್ಕೆ, ದಾಸೊಹಕ್ಕೆ ಮತ್ತು ಅನುಭವ ಮಂಟಪಕ್ಕೆ ಕೊಳ್ಳಿಯಿಡಲಾಯಿತು. ಶರಣರೇ ಶರಣರನ್ನು ಕೊಲ್ಲುತ್ತಿರುವ ಆ ಘಟನೆಯು ಯಾರಿಗೂ ಅರ್ಥವಾಗಲಿಲ್ಲ. ದಿಕ್ಕು ತಿಳಿಯದೆ ಭಕ್ತರು ಅಲ್ಲಿಂದ ದೂರ ಪಲಾಯನಮಾಡಿದರು. ಮೊದಲೇ ಸಿದ್ಧಪಡಿಸಿದ ಯೋಜನೆಯಂತೆ ಇದು ಶರಣರ ನಡುವಿನ ಭಿನ್ನಾಭಿಪ್ರಾಯದ ಫಲ ಎನ್ನುವ ಸುದ್ದಿಯನ್ನು ಎಲ್ಲ ಕಡೆ ಹರಡಲಾಯಿತು. ಅಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಯುವಕರಿಂದ ನಡೆದ ಪ್ರತಿಭಟನೆ ಎನ್ನುವ ಸುಳ್ಳು ಸುದ್ದಿಯನ್ನು ಪ್ರಚುರಪಡಿಸಲಾಯಿತು. ಶರಣ ವೇಷದ ಯುವಕರು ದಾರಿಯುದ್ದಕ್ಕೂ ಶರಣ ಶರಣರ ನಡುವೆ ನಡೆದ ಬೀಕರ ಕದನದ ವಿವರಕೊಡುತ್ತ ಶರಣರ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡುತ್ತ ತಮ್ಮ ತಮ್ಮ ಊರು ಸೇರಿದರು. ಆಗಲೇ ಅವರಿಗೆ ತಲುಪಬೇಕಾಗಿದ್ದ ಹಣ ತಲುಪಿಯಾಗಿತ್ತು.

ಅಂತೂ ಮಹಾರಾಜ ಸೋಮೇಶ್ವರನ ಮನದಿಚ್ಚೆ ಪೂರ್ಣವಾಗಿತ್ತು ಮತ್ತು ಯುವಕರಿಗೆ ತಮ್ಮವರ ಹತ್ಯೆಯ ಸೇಡು ತೀರಿಸಿಕೊಂಡ ತೃಪ್ತಿಯಾಗಿತ್ತು.

ಚನ್ನಬಸವಣ್ಣನವರ ಪರಿಶ್ರಮವೆಲ್ಲ ಮಣ್ಣು ಪಾಲಾಗಿತ್ತು. ಈ ಘಟನೆ ರೆಕ್ಕೆ ಪುಕ್ಕ ಕಟ್ಟಿಕೊಂಡು ವಿಚಿತ್ರ ರೂಪದಲ್ಲಿ ಎಲ್ಲ ಕಡೆ ಪ್ರಚಾರ ಪಡೆಯಿತು. ಮಹಾರಾಜ ಸೋಮೇಶ್ವರನು ಹಬ್ಬಿಸಿದ ಸುಳ್ಳುಗಳನ್ನು ಜನ ನಂಬುವಂತಾಯಿತು.

ಆದರೆ ಮಹಾರಾಜ ಸೋಮೇಶ್ವರನ ಈ ಸಂತೋಷ ಬಹಳ ದಿನ ಉಳಿಯಲಿಲ್ಲ ಮಹಾರಾಜ ಸೋಮೇಶ್ವರನ ಪತನವಾಗಿತ್ತು ಕಲ್ಯಾಣ ಚಾಲುಕ್ಯರ ಆಡಳಿತ ಕೊನೆಗೊಂಡಿತ್ತು.

## ಅಕ್ಕನಾಗಮ್ಮ

ತಮ್ಮನ ಏಳ್ಗೆಗಾಗಿ ತನ್ನ ಗಂಡ ಮತ್ತು ಮಗನ ಜೊತೆ ಮನೆ, ಮಠ ಮತ್ತು ಧರ್ಮ ತೊರೆದು ಸತತ ಪ್ರಯತ್ನ ಮಾಡಿದ ಜಗತ್ತಿನ ಮಹಿಳೆಯರಲ್ಲಿ ಅಕ್ಕ ನಾಗಮ್ಮ ಮೊದಲ ಸ್ಥಾನದಲ್ಲಿ ನಿಲ್ಲುತ್ತಾರೆ.

ಜಗತ್ತಿಗೆ ಹೊಸ ತತ್ವವನ್ನು ಒದಗಿಸುವ ಮಟ್ಟಕ್ಕೆ ಅಣ್ಣ ಬಸವಣ್ಣನವರು ಬೆಳೆಯಲು ಆಸರೆಯಾಗಿ ನಿಂತವರು ಅಕ್ಕನಾಗಮ್ಮ. ಬಾಲ್ಯದಲ್ಲಿ ಅಣ್ಣ ಬಸವಣ್ಣ ಸಮಾಜವನ್ನು ಎದುರಿಸಿದಾಗ ಅವನಿಗೆ ಆಸರೆಯಾಗಿ ನಿಂತವಳು ಅಕ್ಕನಾಗಮ್ಮ.

ಕೂಡಲಸಂಗಮದಲ್ಲಿ ಅಧ್ಯಯನ ಮಾಡುವಾಗ ಮತ್ತು ಮುಗಿಸಿ ಮಂಗಳವೇಢೆಗೆ ಬಂದಾಗ ತನ್ನ ಗಂಡನ ಜೊತೆ ಅಣ್ಣನವರಿಗೆ ನೆರಳಾಗಿ ನಿಂತವರು ಅಕ್ಕನಾಗಮ್ಮ. ಹಲವು ವರ್ಷಗಳ ಕಾಲ ಲಕ್ಷಾಂತರ ಜನರಿಗೆ ದಾಸೋಹದಲ್ಲಿ ಪ್ರಸಾದ ತಯಾರಿಸುವ ಮಹಾಕಾರ್ಯದಲ್ಲಿ ಮುಂಚೂಣಿಯಲ್ಲಿದ್ದವರು ಅಕ್ಕನಾಗಮ್ಮ. ತನ್ನ ಮಗ ಅಲ್ಪ ವಯಸ್ಸಿನಲ್ಲಿಯೇ ಅವಿರಳ ಜ್ಞಾನಿಯಾಗುವಂತೆ ಅವನಿಗೆ ಗುರುವಾದವಳು ಅಕ್ಕನಾಗಮ್ಮ.

'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬುದು ಇವರ ಅಂಕಿತ. ಸದ್ಯ ೧೫ ವಚನಗಳು ದೊರೆತಿವೆ. ಅವುಗಳಲ್ಲಿ ಬಸವಣ್ಣನವರ ಸ್ತುತಿಪರವಾದವುಗಳೇ ಅಧಿಕ. ಜೊತೆಗೆ ಇತರ ಶರಣರ ಪ್ರಸ್ತಾಪವೂ ಇದೆ. ಉದಾಹರಣೆಗೆ

1. **ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು.**

   **ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು.**

   **ಎನ್ನ ಪ್ರಾಣ ಅಲ್ಲಮಪ್ರಭುದೇವರ ಅರಿವ ಬೆರಸಿತ್ತು.**

   **ಇಂತೀ ಮೂವರು ಒಂದೊಂದ ಹಂಚಿಕೊಂಡ ಕಾರಣ, ಎನಗೇನೂ ಇಲ್ಲದೆ, ಬಸವಣ್ಣಪ್ರಿಯ**

   **ಚೆನ್ನಸಂಗಯ್ಯನ ಹೃದಯಕಮಲದಲ್ಲಿ ನಿಜನಿವಾಸಿಯಾಗಿದ್ದೆನು/6.**—ಅಕ್ಕನಾಗಮ್ಮ

2. **ಗುರುಸಂಬಂದಿ ಗುರುಭಕ್ತಯ್ಯನು. ಲಿಂಗಸಂಬಂದಿ ಪ್ರಭುದೇವರು.**

   **ಜಂಗಮಸಂಬಂಧಿ ಸಿದ್ಧರಾಮನು. ಪ್ರಸಾದಸಂಬಂಧಿ ಮರುಳಶಂಕರದೇವರು.**

   **ಪ್ರಾಣಲಿಂಗಸಂಬಂಧಿ ಅನಿಮಿಷದೇವರು. ಶರಣಸಂಬಂಧಿ ಘಟ್ಟಿವಾಳಯ್ಯನು.**

   **ಐಕ್ಯಸಂಬಂದಿ ಅಜಗಣ್ಣಯ್ಯನು. ಸರ್ವಾಚಾರಸಂಬಂದಿ ಚೆನ್ನಬಸವಣ್ಣನು.**

   **ಇಂತಿವರಸಂಬಂಧ ಎನ್ನ ಸರ್ವಾಂಗದಲ್ಲಿ ನಿಂದು ಬಸವಣ್ಣಪ್ರಿಯ ಚೆನ್ನಸಂಗಯ್ಯನ**

   **ಹೃದಯಕಮಲದಲ್ಲಿ ನಿಜನಿವಾಸಿಯಾಗಿದ್ದೆನು.**/8 .—ಅಕ್ಕನಾಗಮ್ಮ

3. **ಮನದೊಡೆಯ ಮಹಾದೇವ ಮನವ ನೋಡಿಹೆನೆಂದು ಮನುಜರ ಕೈಯಿಂದ ಒಂದೊಂದ**

   **ನುಡಿಸುವನು.**

   **ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ, ನಿಜವ ಮರೆಯದಿರು ಕಂಡಾ,**

   **ನಿಶ್ಚಿಂತನಾಗಿರು ಮನವೆ.**

   **ಬಸವಣ್ಣದಿಪ್ರಿಯ ಚೆನ್ನಸಂಗಯ್ಯನು ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ**

   **ತೊಡೆವನು./13**—ಅಕ್ಕನಾಗಮ್ಮ.

ನೀಲಾಂಬಿಕೆಯರು ತಮ್ಮ ವಚನದಲ್ಲಿ ಅಕ್ಕನಾಗಮ್ಮನವರನ್ನು ಬಸವನ ಗುರುತಾಯೆ ಎಂದು ವರ್ಣಿಸಿದ್ದಾರೆ.

ಕಲ್ಯಾಣಕ್ಕೆ ಬಂದ ಎಲ್ಲ ಶರಣರಿಗೆ ಮಾರ್ಗದರ್ಶನ ಮಾಡಿದ ಮಹಾತಾಯಿ ಅಕ್ಕನಾಗಮ್ಮ. ಕಲ್ಯಾಣ ಕ್ರಾಂತಿಯ ನಂತರ ಅಣ್ಣ ಬಸವಣ್ಣನವರ ಅನುಪಸ್ಥಿತಿಯಲ್ಲಿ ಚನ್ನಬಸವಣ್ಣ, ಮಡಿವಾಳ ಮಾಚಿದೇವರು ಮತ್ತು ಹಿರಿಯ ಶರಣರ ಸಹಾಯದಿಂದ ಶರಣರನ್ನು ಅಪಾಯದಿಂದ ಕಾಪಾಡಿ ಉಳವಿಗೆ ಕರೆದುಕೊಂಡು ಹೋದ ವೀರ ಮಹಿಳೆ ಈಕೆ. ಯಾವ ಸಂಕಟ ಬಂದರೂ ಎದೆಗುಂದದೇ ವಚನಗಳ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದ ತಾಯಿ ಈಕೆ. ಶರಣರು ತಮ್ಮ ವಚನಗಳಲ್ಲಿ ಆ ತಾಯಿಯನ್ನು ಮನಸಾರೆ ಹೊಗಳಿದ್ದಾರೆ. ಕೆಲವು ವಚನಗಳು ಇಲ್ಲಿವೆ.

1. **ಮಾಯಾಕೋಳಾಹಳನೆಂಬ ಬಿರುದ ಸೂರೆಗೊಂಡರು ಪ್ರಭುದೇವರು.**

   **ಯೋಗಾಂಗವ ಸೂರೆಗೊಂಡರು ಸಿದ್ಧರಾಮೇಶ್ವರದೇವರು.**

   **ಭಕ್ತಿಸ್ಥಲವ ಸೂರೆಗೊಂಡು, ನಿತ್ಯಪವಾಡವ ಗೆದ್ದರು ಬಸವೇಶ್ವರದೇವರು.**

   **ಷಟ್‌ಸ್ಥಲವ ಸೂರೆಗೊಂಡರು ಚನ್ನಬಸವೇಶ್ವರದೇವರು.**

   ---------

   **ಪ್ರಸಾದಕ್ಕೆ ಸತಿಯಾದರು ಅಕ್ಕನಾಗಮ್ಮನವರು.**

   --------

   **ಇಂತಿವರು ಮುಖ್ಯವಾದ ಏಳುನೂರೆಪ್ಪತ್ತು ಅಮರ ಗಣಂಗಳ ಶ್ರೀಪಾದವ ಅಹೋರಾತ್ರಿಯಲ್ಲಿ**

   **ನೆನೆನೆದು ಬದುಕಿದೆನಯ್ಯಾ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ /67**

   --- ಸಂಗಮೇಶ್ವರದ ಅಪ್ಪಣ್ಣ

2. **ನೀವು ಮಹಿಮರು; ನಿಮ್ಮ ಮಹಿಮೆ ತಿಳಿಯದು ನೋಡಯ್ಯಾ.**

   **ನಿಮ್ಮ ಸತ್ವವೆ ಬಸವಣ್ಣನು, ನಿಮ್ಮ ಜ್ಞಾನವೆ ಚೆನ್ನಬಸವಣ್ಣನು, ನಿಮ್ಮ ರಾಣಿಯರೆ**

   **ಅಕ್ಕನಾಗಮ್ಮನು, ನಿಮ್ಮ ಮಹತ್ವವೆ ಪ್ರಭುದೇವರು ನೋಡಯ್ಯಾ,**

   **ಕಪಿಲಸಿದ್ಧಮಲ್ಲಿಕಾರ್ಜುನಾ./1179**---- ಸಿದ್ದರಾಮೇಶ್ವರ

3. **ಎನಗುಣಲಿಕ್ಕಿದರಯ್ಯ ಸಿರಿಯಾಳ-ಚೆಂಗಳೆಯರು.**

   **ಎನಗುಡ ಕೊಟ್ಟರಯ್ಯಾ ದಾಸ- ದುಗ್ಗಳೆಯವರು.**

   **ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು.**

   **ಎನ್ನ ಸಲಹಿದರಯ್ಯಾ ಅಮ್ಮವ್ವೆ ಕೊಡಗೂಸು ಚೋಳಿಯಕ್ಕ ನಿಂಬವ್ವೆ ನೀಲಮ್ಮ ಮಹಾದೇವಿ**

   **ಮುಕ್ತಾಯಕ್ಕಗಳು.**

**ಇಂತಿವರ ಒಕ್ಕುಮಿಕ್ಕ ತಾಂಬೂಲ ಪ್ರಸಾದವ ಕೊಂಡು ಬದುಕಿದೆನಯ್ಯಾ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ/20**. --- ಕೋಲ ಶಾಂತಯ್ಯ

ವಚನಗಳನ್ನು ರಕ್ಷಿಸುವದರ ಜೊತೆಗೇ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಜನರಿಗೆ ವಿವರಿಸಬಲ್ಲ ಪರಿಣಿತರನ್ನು ಗುರುತಿಸಿ ಅವರನ್ನು ವಚನ ಪ್ರವಚನ ಮಾಡುವ ಕಾಯಕ ಮಾಡುವಂತೆ ಮನಒಲಿಸಿದ ತಾಯಿ ಅಕ್ಕನಾಗಮ್ಮ. ಬಸವಕಲ್ಯಾಣದಿಂದ ಉಳವಿಯವರೆಗೆ ಮಾರ್ಗದ ಸಮೀಪದ ಗ್ರಾಮದಲ್ಲಿರುವ ಪರಿಣಿತರನ್ನು ಬೆಟ್ಟಿಯಾಗಿ ವಚನ ಪ್ರಚಾರ ಮಾಡುವ ಕಾಯಕ ಕೈಕೊಳ್ಳುವಂತೆ ವಚನಗಳು ಜನಮನದಲ್ಲಿ ನೆಲೆಯೂರುವಂತೆ ಮಾಡಿದವರು ಅಕ್ಕನಾಗಮ್ಮನವರು. ಎಲ್ಲ ಕಷ್ಟಗಳನ್ನು ಎದುರಿಸಿ ಶರಣರಿಗೆಲ್ಲ ಧೈರ್ಯ ತುಂಬಿ ಅವರನ್ನು ಕಾಪಾಡಿದರು.

ತಮ್ಮ ಅಣ್ಣ ಬಸವಣ್ಣನವರು ಮತ್ತು ತಮ್ಮ ಯಜಮಾನ ರಹಸ್ಯವಾಗಿ ಕಣ್ಮರೆಯಾದ ಕಹಿಯನ್ನು ನುಂಗಿಕೊಂಡು ಶರಣರಿಗೆ ವಚನದ ಮೂಲಕ ಆ ಘಟನೆಯನ್ನು ವಿವರಿಸಿದ ಪರಿ ಇಲ್ಲಿದೆ.

1. **ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ ಭಕ್ತಿಯ ಬೆಳವಿಗೆ ದೆಸೆದೆಸೆಗಲ್ಲಾ ಪಸರಿಸಿತ್ತಲ್ಲಾ !**
   **ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು ?**
   **ಅಣ್ಣಾ, ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ.**
   **ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ. ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ.**
   **ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ. ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ ಪ್ರಾಣಲಿಂಗವಾಗಿ ಹೋದೆಯ ಸಂಗನಬಸವಣ್ಣಾ ?/10**
   ---ಅಕ್ಕನಾಗಮ್ಮ
2. **ಭಕ್ತಿಯ ತವನಿದಿಯೆ, ಮುಕ್ತಿಯ ಮೂರುತಿಯೆ, ಲಿಂಗಜಂಗಮದ ಚೈತನ್ಯವೆ ನಿಮ್ಮನಗಲಿ ಎಂತು ಸೈರಿಸುವೆನು ?**
   **ಎಲೆ ಅಯ್ಯಾ ಪರಮಗುರುವೆ, ಆಹಾ ಎನ್ನ ಅಂತರಂಗದ ಜ್ಯೋತಿಯೆ,ನಿಮ್ಮ ಒಕ್ಕ ಶೇಷಪ್ರಸಾದವನಿಕ್ಕಿ ಎನ್ನ ಪಾವನವಮಾಡಿ ಉಳುಹಿದೆಯಯ್ಯಾ. ಲಿಂಗವೆ ಎನಗಿನ್ನಾರು ಹೇಳಯ್ಯಾ ನೀವಲ್ಲದೆ ?**

ಬಸವಣ್ಣಪ್ರಿಯ ಚೆನ್ನಸಂಗಯ್ಯಾ, ನೀವಗಲಿದಡೆ ಎನ್ನ ಪ್ರಾಣ ನಿಮ್ಮೊಳಗಲ್ಲದೆ ಅಗಲಬಲ್ಲುದೆ ?/12

—ಅಕ್ಕನಾಗಮ್ಮ

3. ಲಿಂಗ ಜಂಗಮ, ಜಂಗಮ ಲಿಂಗವೆಂಬುದ ತೋರಿ, ನಿಜೈಕ್ಯನಾದೆಯಲ್ಲಾ ನಿಜಗುರು ಬಸವಣ್ಣಾ !
ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ, ಎನ್ನನಾಗು ಮಾಡಿ ಮುಂದುವರಿದೆಯಲ್ಲಾ ಬಸವಣ್ಣಾ !
ಲಿಂಗ ಪ್ರಾಣ, ಪ್ರಾಣ ಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಾಪ್ಯವ ಮಾಡಿ ಎನ್ನ ನಿನ್ನಂತೆ ಮಾಡಿ ನಿಜಲಿಂಗದೊಳಗೆ ನಿರವಯವಾದೆಯಲ್ಲಾ ಬಸವಣ್ಣಾ !
ಎನ್ನ ಮನವ ಮಹಾಸ್ಥಲದಲ್ಲಿ ಲಯವ ಮಾಡಿ, ನಿರ್ವಯಲಾಗಿ ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ !
ನಿನ್ನ ಒಕ್ಕುಮಿಕ್ಕ ಶೇಷವನಿಕ್ಕಿ ಆಗು ಮಾಡಿ ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯ ಇಂಬುಗೊಂಡಡೆ,
ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯಾ, ಸಂಗನಬಸವಣ್ಣಾ !
ಕೂಡಲಚೆನ್ನಸಂಗಯ್ಯಂಗೆ ಸುಜ್ಞಾನವಾಹನವಾಗಬೇಕೆಂದು ನಿರವಯವಾದೆಯಲ್ಲಾ ಸಂಗನಬಸವಣ್ಣಾ !/1308 —ಚನ್ನಬಸವಣ್ಣ

ನೀಲಾಂಬಿಕೆಯವರು ಆ ಕಹಿಘಟನೆಯನ್ನು ವಿವರಿಸಿದ ಬಗೆ ಇಲ್ಲಿದೆ.

4. ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು.
ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು. ಉಭಯದ ಹಂಗಹರಿದು ಉಪಮಾತೀತನಾದ ನಮ್ಮ ಬಸವಯ್ಯನು.
ಸಂಗಯ್ಯನಲ್ಲಿ ಕೂಡಿ ನಿರಾಳ ಪ್ರಸನ್ನಮೂರ್ತಿಯಾದ ನಮ್ಮ ಬಸವಯ್ಯನು/2 —ನೀಲಾಂಬಿಕಾ

5. ಅಂಡಜವಳಿದ ಬಸವಾ; ಪಿಂಡಜವಳಿದ ಬಸವಾ;
ಆಕಾರವಳಿದ ಬಸವಾದ ನಿರಾಕಾರವಳಿದ ಬಸವಾ;
ಸಂಗವಳಿದ ಬಸವಾದ ನಿಸ್ಸಂಗವಳಿದ ಬಸವಾ;
ಸಂಗಯ್ಯನಲ್ಲಿ ಸ್ವಯಲಿಂಗವಾದ ಬಸವಾ/8 – ನೀಲಾಂಬಿಕಾ

ಹೀಗೆ ಅಣ್ಣ ಬಸವಣ್ಣನವರ ಅನುಪಸ್ಥಿತಿಯಲ್ಲಿ ಶರಣರಿಗೆ ಆಸರೆಯಾಗಿ ನಿಂತ ಅಕ್ಕನಾಗಮ್ಮನವರು ಇತಿಹಾಸದಲ್ಲಿ ಅಜರಾಮರಾಗಿ ಉಳಿದಿದ್ದಾರೆ.
ಅಕ್ಕನಾಗಮ್ಮ ಮತ್ತು ಅನೇಕ ಶರಣರು ಕದಂಬರ ಪ್ರಭಾವವಿರುವ ಎಲ್ಲ ಹಳ್ಳಿಗಳಲ್ಲಿ ಪ್ರವಾಸಮಾಡಿ ಅಲ್ಲಿಯ ಪರಿಣಿತರನ್ನು ಮತ್ತು ವಚನ ಸಾಹಿತ್ಯ ಆಸಕ್ತಿಯುಳ್ಳ ಜನರನ್ನು ಹುಡುಕಿ ಅವರು ವಚನ ಮತ್ತು ಶರಣ ಸಂಸ್ಕಾರ ಉಳಿಸುವ ಕಾಯಕ ಕೈಕೊಳ್ಳುವಂತೆ ಮಾಡಿದರು.
ಪ್ರತಿ ಊರಿನಲ್ಲಿಯೂ ಒಂದು ಅನುಭವಮಂಟಪದ ಪ್ರತಿರೂಪದಂತಹ ಮಾಹಾಮನೆ ಸ್ಥಾಪಿಸಿ ಆ ಕೆಲಸ ನಿರಂತರವಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಅಲ್ಲಿಯ ಪರಿಣಿತರೊಬ್ಬರಿಗೆ ವಹಿಸಿ ಬರುತ್ತಿದ್ದರು.
ಅದಕ್ಕಾಗಿಯೇ ಈಗಲೂ ಆ ಭಾಗ ಶರಣ ಪರಂಪರೆ ನೆಲೆಯಾಗಿದೆ. ಅವುಗಳೇ ಈಗಿನ ಮಠಗಳ ಪೂರ್ವ ರೂಪವೆಂದು ನನ್ನ ಅನಿಸಿಕೆ.
ಅವುಗಳ ವಿವರ ಅರಿಯುವ ಮೊದಲು ಕದಂಬರ ಬಗ್ಗೆ ಮಾಹಿತಿ ಅರಿಯುವ ಪ್ರಯತ್ನ ಇಲ್ಲಿದೆ.
ಸಾರ್ವಭೌಮ ಕದಂಬರಲ್ಲಿ ಜಾತೀಯತೆ ಮತೀಯತೆಗಳ ಪುರ್ವಾಗ್ರಹಗಳಿರಲಿಲ್ಲ. ಅವರ ಶಾಸನಗಳಲ್ಲಿ ತಮ್ಮ ವರ್ಣ, ಜಾತಿ, ಮತಗಳಿಗೆ ಸೇರದವರ ಮತಧಾರ್ಮಿಕ ಸಂಸ್ಥೆಗಳಿಗೆ ದತ್ತಿದಾನಗಳನ್ನು ಕೊಟ್ಟ ಉಲ್ಲೇಖವಿದೆ. ಹಾಗಾಗಿ ಅವರ ಆಡಳಿತವಿರಲಿ ಇಲ್ಲದಿರಲಿ ಅವರ ಮತ್ತು ಅವರ ಗೆಳೆಯರಿಗೆ ಜನರಿಂದ ಪೂರ್ಣ ಸಹಕಾರ ಮತ್ತು ಸಹಾಯ ಸಿಗುತ್ತಿತ್ತು.
ಬಸವಕಲ್ಯಾಣದಿಂದ ಉಳವಿಗೆ ಶರಣರು ವಲಸೆ ಹೋಗುವ ಮುಖ್ಯಕಾರಣಗಳಲ್ಲಿ ಶರಣರಿಗೆ ಕದಂಬ ರಾಜಮನೆತನದವರ ಸಹಾಯಹಸ್ತ ದೊರೆಯುವ ಭರವಸೆಯೂ ಒಂದು. ಆ ಸಂಗತಿ ಆ ಭಾಗದ ಎಲ್ಲರಿಗೂ ಗೊತ್ತಿತ್ತು. ಈ ಸಹಾನೂಭೂತಿಯನ್ನು ಸರಿಯಾಗಿ ಉಪಯೋಗಿಸಿಕೊಂಡವರು ಅಕ್ಕನಾಗಮ್ಮನವರು ಮತ್ತು ಸಂಗಡಿಗರು.
ಉಳವಿ ಮುಟ್ಟುವದಕ್ಕೇ ಮೊದಲು ಈಗಿನ ಬೆಳಗಾಂವ ಮತ್ತು ಧಾರವಾಡ ಜಿಲ್ಲೆಗಳ ಹೆಚ್ಚು ಕಡಿಮೆ ಎಲ್ಲ ಹಳ್ಳಿಗಳಲ್ಲಿ ಶರಣರು ಸಂಚರಿಸಿರುವ ಸಾಧ್ಯತೆ ಇದೆ.
ಉಳವಿಯಲ್ಲಿ ಚನ್ನಬಸವಣ್ಣನವರು ಅನುಭವಮಂಟಪದ ಪುನರ್ ನಿರ್ಮಾಣವಾಗುವ ಕೆಲಸದಲ್ಲಿ ನಿರತವಾಗಿದ್ದರೆ ಅಕ್ಕ ನಾಗಮ್ಮನವರು ಹಳ್ಳಿ ಹಳ್ಳಿಗಳಿಗೆ ತೆರಳಿ ಅಲ್ಲಿಯ ಪರಿಣಿತರನ್ನು ಹುಡುಕಿ ಅವರು ವಚನ ಅಧ್ಯಯನ ಮತ್ತು ಶರಣ ಸಂಸ್ಕಾರ ಪ್ರಚಾರದಲ್ಲಿ ತೊಡಗಿಕೊಳ್ಳುವಂತೆ ಮಾಡಿದರು. ಈ ರೀತಿ ಹಳ್ಳಿ ಹಳ್ಳಿಗಳಲ್ಲಿ ಆಗ ಪ್ರಾರಂಭವಾದ ಸ್ಥಳಗಳು ವಚನ ಅಧ್ಯಯನ ಕೇಂದ್ರಗಳಾಗಿ ಬೆಳೆದು ಬಂದು ಮಠಗಳ ಸ್ವರೂಪ ಪಡೆದುಕೊಂಡಿರಬೇಕೆಂದು ನನ್ನ ಅನಿಸಿಕೆ.
ಅಕ್ಕನಾಗಮ್ಮನವರ ಕಾರ್ಯಕ್ಷೇತ್ರ ಗುರುತಿಸುವದಕ್ಕಿಂತ ಮೊದಲು ಕದಂಬರ ಪ್ರಭಾವವಿರುವ ಸ್ಥಳಗಳ ಪರಿಚಯ ಮಾಡಿಕೊಳ್ಳುವದು ಅವಶ್ಯಕ.

ಕೆಲವು ಸಂಕ್ಷಿಪ್ತ ವಿವರಗಳು ಇಲ್ಲಿವೆ

**ಕದಂಬರು:**

1. ಕದಂಬರು ಪಶ್ಚಿಮ ಕರ್ನಾಟಕದಲ್ಲಿ ಕೃ.ಶ. 4-7 ನೇಯ ಶತಮಾನದವರೆಗೆ ಸ್ವತಂತ್ರರಾಗಿಯೂ 10-13 ನೇಯ ಶತಮಾನದವರೆಗೆ ಹಾನುಗಲ್ಲು, ಗೋವ ಮುಂತಾದ ಕಡೆಗಳಲ್ಲಿ ಬಹುತೇಕ ಸಾಮಂತರು ಅಥವಾ ಮಾಂಡಲಿಕರಾಗಿಯೂ ಆಳಿದ ಒಂದು ರಾಜಮನೆತನ.
2. ಕಲ್ಯಾಣದ ಚಾಳುಕ್ಯರ ಎರಡನೆಯ ತೈಲಪನಿಗೆ ಅವರು ಸಾಮಂತರಾಗಬೇಕಾಯಿತು. ಅವರ ಸಾರ್ವಭೌಮತ್ವ 1163ರ ವರೆಗೆ ನಡೆಯಿತು.
3. ಆಮೇಲೆ ಕಳಚೂರ್ಯ ಬಿಜ್ಜಳ ಮತ್ತು ಅವನ ವಂಶಜರೂ ಬಳಿಕ 1181 ರಿಂದ 1200 ರವರೆಗೆ ಪುನಃ ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರನೂ ಸಾರ್ವಭೌಮರಾದರು.
4. ಮೃಗೇಶನ ಕಾಲದಲ್ಲಿ ಕದಂಬ ರಾಜ್ಯ ಇನ್ನೂ ವಿಸ್ತರಿಸಿತು. ಬನವಾಸಿಯ ಜೊತೆಗೆ ಪಲಾಶಿಕಾ ಎಂಬುದು (ಈಗಿನ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿರುವ ಹಳ್ಳಿ) ಎರಡನೆಯ ರಾಜಧಾನಿಯಾಯಿತು.
5. ಹಾನುಗಲ್ಲಿಂದ ಆಳುತ್ತಿದ್ದ ಬನವಾಸಿಯ ಕದಂಬರಿಗೆ
   - ಬನವಾಸಿ ಮಂಡಲದ 12,000,
   - ಹಾನುಗಲ್ಲಿನ 500
   - ಮತ್ತು ಹೈವದ 500 ಗ್ರಾಮಗಳು ಸೇರಿದ್ದುವು.
6. ಗೋವೆಯ ಕದಂಬರಿಗೆ 13,050 ಗ್ರಾಮಗಳ ರಾಜ್ಯವಿತ್ತು.
   1,400 ಗ್ರಾಮಗಳ ಉತ್ತರ ಕೊಂಕಣದ ಮೇಲೂ ಅವರ ಪ್ರಭಾವ ಬಹಳ ಕಾಲ ಇತ್ತು. ಈಗ ಬನವಾಸಿ ಊರು ಉತ್ತರ ಕನ್ನಡ ಜಿಲ್ಲೆಯಲ್ಲಿದೆ; ಹಾನುಗಲ್ಲು ಹಾವೇರಿ ಜಿಲ್ಲೆಯಲ್ಲಿದೆ.
7. ಹಲಸಿ 1200 ವನ್ನು ಒಳಗೊಂಡಿದ್ದ ಗೋವೆಯ ಕದಂಬ ರಾಜ್ಯಕ್ಕೆ ಇಂದಿನ ಬೆಳಗಾವಿ ಜಿಲ್ಲೆಯ ಬಹುಭಾಗ ಸೇರಿತ್ತು.
8. ಇಂದಿನ ಮೈಸೂರು ಜಿಲ್ಲೆಯ ಪ್ರದೇಶ ಅಂದು ಬಯಲುನಾಡು 5300 ಅಥವಾ ಪುನ್ನಾಡು (ಪುನ್ನಾಟ) ಆಗಿತ್ತು. ಹೆಗ್ಗಡದೇವನಕೋಟೆ ತಾಲ್ಲೂಕಿನ ಕೀರ್ತಿಪುರ (ಕಿತ್ತೂರು) ಪುನ್ನಾಡ ಕದಂಬ ಶಾಖೆಯ ರಾಜಧಾನಿಯಾಗಿತ್ತು.
9. ಬಂಕಾಪುರ, ಉಚ್ಚಂಗಿ, ನಾಗರಖಂಡ, ರಾಯಚೂರು, ನೂರುಂಬಾಡ, ಚಂದಾವರಗಳಲ್ಲಲ್ಲದೆ ಕಳಿಂಗದ ಗಂಗರಸರ ಸಾಮಂತಿಕೆಯಲ್ಲಿ ಕೂಡ ಕದಂಬ ಉಪಮನೆತನಗಳು ರಾಜ್ಯಭಾರ ಮಾಡುತ್ತಿದ್ದವು.







ಹುಬ್ಬಳ್ಳಿಯಿಂದ 3000 ಶರಣರು ಕದಂಬರ ಪ್ರಭಾವವಿರುವ ಈ ಹಳ್ಳಿಗಳಲ್ಲಿ ತೆರಳಿ ಅಲ್ಲಿ ಮಠಗಳನ್ನು ಸ್ಥಾಪಿಸಿದರು. ಅಕ್ಕನಾಗಮ್ಮನವರು ಹಲವಾರು ಶರಣರೊಡನೆ ಹಳ್ಳಿಗಳಿಗೆ ಪ್ರವಾಸ ಮಾಡಿ ಅಲ್ಲಿ ಶರಣ ಸಂಸ್ಕೃತಿ ನೆಲೆಗೊಳ್ಳುವಂತೆ ಮಾಡಿದ ಪರಿಣಾಮವಾಗಿಯೇ ಈಗಿನ ಹಾವೇರಿ, ಡಾವಣಗೆರೆ, ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಅನೇಕ ಗ್ರಾಮಗಳಲ್ಲಿ ಅನೇಕಾನೇಕ ಮಠಗಳು ಇಂದಿಗೂ ಸಾಂಸ್ಕೃತಿಕ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಹಲವು ಶರಣರೊಡಗೂಡಿ ಅವರು ಉಳವಿಯಿಂದ ತುಸು ದೂರದ ಹಳ್ಳಿಯಲ್ಲಿ ವಾಸವಾಗಿದ್ದ ಸಮಯದಲ್ಲಿಯೇ ಉಳವಿಯಲ್ಲಿ ನಡೆದ ಅನಾಹುತದ ಸುದ್ದಿಯನ್ನು ನುಲಿಯ ಚಂದಯ್ಯನವರು ಹಲವು ಶರಣರೊಡಗೂಡಿ ಬಂದು ತಿಳಿಸಿದರು.

ಮುದ್ದಿನ ಮಗ ಚನ್ನಬಸವಣ್ಣ ಇನ್ನಿಲ್ಲವೆಂದು ಗೊತ್ತಾದರೂ ಅಕ್ಕನಾಗಮ್ಮನವರು ತಮಗಾದ ದುಃಖವನ್ನು ನುಂಗಿಕೊಂಡು ಎಲ್ಲ ಶರಣ ಶರಣೆಯರಿಗೆ ಸಮಾಧಾನ ಮಾಡಿದರು. ಆಗ ಅವರ ಮನದಾಳದಿಂದ ಮೂಡಿಬಂದ ವಚನ

1. **ಅಯ್ಯಾ, ನಾನಧವೆ, ಅಯ್ಯಯ್ಯ ಕೈಯ ಕೋಲಕೊಂಬರೆ ?**

   **ಅಯ್ಯಾ, ಎಳೆಗರುವಿನ ಎಳಗಂತಿಯನೆಳೆದೊಯ್ವರೆ ಭಕ್ತರು ?**

   **ಅಯ್ಯೋ ಅಯ್ಯೋ ಎನಲೊಯ್ವರೆ, ಬಸವಣ್ಣಪ್ರಿಯ**

   **ಚೆನ್ನಸಂಗಯ್ಯಾ** /2 --- ಅಕ್ಕನಾಗಮ್ಮ

ಆಗ ಒಬ್ಬ ಶರಣ ಹಾಡಿದ ಸಿದ್ಧರಾಮೇಶ್ವರ ವಚನ

2. **ಅಡವಿಯಲ್ಲಿ ತಡೆಗಡಿದ ಪಶುವಿನಂತಾದೆವಾವೆಲ್ಲ ಅಯ್ಯಾ! ಅಕ್ಕಟಾ, ಒಡೆಯರಿಲ್ಲದ ಅನಾಥರಾದೆವಾವೆಲ್ಲ ಅಯ್ಯಾ!**

   **ಅಕ್ಕಟಾ, ನಮಗಿನ್ನು ದಿಕ್ಕಾರು, ದೆಸೆಯಾರು? ಅಕ್ಕಟಾ, ನಮಗಿನ್ನು ಒಡೆಯರಾರು? ಹೇಳಾ ತಂದೆ!**

   **ಅಯ್ಯಾ, ಶ್ರೀಮಲ್ಲಿನಾಥಂಗಾ, ಅವಧರಿಸು ಎನ್ನ ಬಿನ್ನಹವ ಗಣಾಚಾರಕ್ಕೆ ಬುಧ್ಧಿಗಲಿಸುವುದೆನ್ನ ತಂದೆ!/70**---ಸಿದ್ಧರಾಮೇಶ್ವರ

ನುಲಿಯ ಚಂದಯ್ಯನವರ ಸಲಹೆಯಂತೆ ಅಕ್ಕನಾಗಮ್ಮನವರು ಮರಳಿ ಉಳವಿಗೆ ಹೋಗದೇ ಹಾನಗಲ್ಲಿನ ಕಡೆಗೆ ಪ್ರಯಾಣ ಬೆಳೆಸಿದರು.

## ಅಕ್ಕನಾಗಮ್ಮನವರ ಸಾಧನೆ:

ಬಸವಕಲ್ಯಾಣದಿಂದ ಹೊರಟ ಶರಣರು ಮತ್ತು ಅವರ ಅನೇಕಾನೇಕ ಅನುಯಾಯಿಗಳು ಕೆಲವು ಹಂತಗಳಲ್ಲಿ ತಮ್ಮ ತಮ್ಮ ನೆಲೆಕಂಡುಕೊಂಡು ಅಲ್ಲಿ ತಮ್ಮ ಕಾಯಕ ಸರಳ ನಡತೆಯಿಂದ ಜನಪ್ರಿಯರಾದರು. ಅವರು ಹೇಳುವ ಶರಣ ತತ್ವಗಳು ಮತ್ತು ವಚನಗಳು ಜನರ ಮನ ತಲುಪಿದವು. ಸರಳ ಕನ್ನಡದಲ್ಲಿ ಸುಲಭವಾಗಿ ರಾಗಬದ್ಧವಾಗಿ ಹಾಡಿದಾಗ ಮನಕ್ಕೆ ನೆಮ್ಮದಿ ಮೂಡಿಸಿ ಅನೇಕ ಗಹನ ವಿಚಾರಗಳು ಮನನ ಮಾಡಿಕೊಡಬಲ್ಲ ವಚನಗಳು ಎಲ್ಲರ ಮನದಲ್ಲಿ ನೆಲೆಯೂರಿದವು.




ಗಿಡದ ಬೇರು ನೆಲದಲ್ಲಿಯ ನೀರು ಮತ್ತು ಪೋಷಕಾಂಶಗಳನ್ನು ಹೀರಿಕೊಂಡು ಕಾಂಡದ ಮೂಲಕ ಎಲೆಗೆ ತಲುಪಿಸುತ್ತದೆ. ಆನಂತರ ಎಲೆಯಲ್ಲಿಯ ತಂತು ಜಾಲದ (ಚಿತ್ರ ನೋಡಿ) ಮೂಲಕ ಎಲೆಯ ಎಲ್ಲ ಭಾಗಕ್ಕೆ ತಲುಪುತ್ತದೆ. ಅದೇ ರೀತಿಯಾಗಿ ಕಲ್ಯಾಣದಲ್ಲಿ ಪ್ರಸ್ತುತಪಡಿಸಿದ ಶರಣ ತತ್ವಗಳು ಎಲ್ಲಕಡೆ ಶರಣರು ಸಾಗಿ ಜನರಿಗೆ ತಲುಪಿಸಿದರು.

**ಮೊದಲ ಹಂತ:**




ಬಸವಕಲ್ಯಾಣದಿಂದ ಭೀಮಾ ನದಿ ತೀರದವರೆಗಿನ ಪ್ರದೇಶದಲ್ಲಿ ಶರಣರೆಲ್ಲರ ಲಕ್ಷ ತಮ್ಮ ರಕ್ಷಣೆ ಮಾಡಿಕೊಳ್ಳುವದಾಗಿದ್ದರೂ ಅವರು ಹಳ್ಳಿ ಹಳ್ಳಿ ಸಂಚರಿಸಿ ಅಲ್ಲಿಯ ಪರಿಣಿತರಿಂದ ವಚನ ತತ್ವ ಪ್ರಸಾರವಾಗುವಂತೆ ನೋಡಿಕೊಂಡರು. ಸಾಧ್ಯವಾದ ಕಡೆ ನೆಲೆಸಿದರು.

ಅಲ್ಲಿಯ ಹಳ್ಳಿಯ ಜನರು ನೂರಾರು ವಚನಗಳನ್ನು ಹೇಳುತ್ತಾರೆ.

ಸಾಯಂಕಾಲ ಭಜನೆ ಮಾಡುತ್ತ ವಚನಗಾಯನ ಮಾಡುವ ಸದ್ದು ನಿಮಗೆ ಪ್ರತಿಯೊಂದು ಹಳ್ಳಿಗಳಲ್ಲಿ ಕಾಣಸಿಗುತ್ತದೆ. ಪ್ರತಿ ಊರಲ್ಲಿ ಭಜನಾಮಂಡಳಿಗಳಿದ್ದು ಅವು ವಚನ ಜನಮನದಲ್ಲಿ ನೆಲೆಗೊಳ್ಳುವ ಕೆಲಸದಲ್ಲಿ ಇಂದಿಗೂ ನಿರತವಾಗಿವೆ. ಅಲ್ಲಿಯ ಜನರ ಆಚಾರ ಮತ್ತು ವಿಚಾರಗಳಲ್ಲಿ ಶರಣ ಸಂಸ್ಕೃತಿ ಅಳವಟ್ಟಿರುವದು ಗಮನಿಸಿಬೇಕಾದ ಸಂಗತಿ. ಯಾವುದೇ ಸಮಾವೇಶ ನಡೆದರೂ ಲಕ್ಷಾಂತರ ಜನ ಒಂದುಗೂಡುವದು ಇದಕ್ಕೆ ನಿದರ್ಶನ. ಇಲ್ಲಿ ಕಲ್ಯಾಣ ಸೈನ್ಯ ತ್ಯಜಿಸಿ ಬಂದ ಅನೇಕ ಯೋಧರು ನೆಲೆಸಿದರು. ಅವರ ಸಂತತಿಯವರು ಶಿವಾಜಿ ಮಹಾರಾಜರ ಸೈನ್ಯದಲ್ಲಿ ತಮ್ಮ ಪರಾಕ್ರಮ ಮೆರೆದರು ಮತ್ತು ಧರ್ಮ ರಕ್ಷಿಸುವ ಮಹಾಕಾರ್ಯದಲ್ಲಿ ಭಾಗವಹಿಸಿದರು.

**ಎರಡನೆಯ ಹಂತ:**




ಭೀಮಾ ನದಿ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶದಲ್ಲಿ ಯೋಧರು ಮತ್ತು ಕಾಯಕಯೋಗಿಗಳು ಮತ್ತು ಅವರ ಮನೆಮಂದಿ ತಮ್ಮ ನೆಲೆಕಂಡುಕೊಂಡರು. ಇಲ್ಲಿಯ ಜನರ ದಿನನಿತ್ಯದ ವ್ಯವಹಾರದಲ್ಲಿ ಶರಣ ಸಂಸ್ಕಾರ ಎದ್ದು ಕಾಣುತ್ತದೆ. ಶಿವಾಜಿ ಮಹಾರಾಜರ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ ಯೋಧರು ಈ ಭಾಗದವರಾಗಿದ್ದಾರೆ. ಇದು ಕೃಷಿಪ್ರಧಾನ ಪ್ರದೇಶವಾಗಿದೆ.

ಭೀಮಾ ನದಿ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶದಲ್ಲಿ ಯೋಧರು ಮತ್ತು ಕಾಯಕಯೋಗಿಗಳು ಮತ್ತು ಅವರ ಮನೆಮಂದಿ ತಮ್ಮ ನೆಲೆ ಕಂಡುಕೊಂಡರು. ಇಲ್ಲಿಯ ಜನರ ದಿನನಿತ್ಯದ ವ್ಯವಹಾರದಲ್ಲಿ ಶರಣ ಸಂಸ್ಕಾರ ಎದ್ದು ಕಾಣುತ್ತದೆ. ಶಿವಾಜಿ ಮಹಾರಾಜರ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ ಯೋಧರು ಈ ಭಾಗದವರಾಗಿದ್ದಾರೆ.

**ಮೂರನೆಯ ಹಂತ:**




ಕೃಷ್ಣಾ ನದಿ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದಲ್ಲಿ ಹಲವು ಕಾಯಕಯೋಗಿಗಳು ಮತ್ತು ಅವರ ಮನೆಮಂದಿ ನೆಲೆಯಾಗಿ ನಿಂತರು.. ಅವರನ್ನು ನೋಡಿದಾಗಲೇ ಅವರು ಶರಣರ ಬಗ್ಗೆ ಹೊಂದಿದ ಅಭಿಮಾನ ಮತ್ತು ಆಚರಣೆಯಲ್ಲಿ ಶರಣ ತತ್ವ ಅಳವಡಿಸಿಕೊಂಡಿರುವದು ಗೊತ್ತಾಗುತ್ತದೆ. ಇಲ್ಲಿ ಕೆಲವೊಂದು ಪಟ್ಟಣಗಳಲ್ಲಿ ಒಂದೇ ತರಹ (ನೇಕಾರಿಕೆ, ಕಮ್ಮಾರಿಕೆ,....) ಕಾಯಕ ಮಾಡುವ ಜನರ ವಸತಿ ಪ್ರದೇಶವವಾಗಿರುವದು ವಿಶೇಷ.

**ನಾಲ್ಕನೇಯ ಹಂತ:**




ಮಲಪ್ರಭಾ ನದಿ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿ ಉಳಿದೆಲ್ಲ ಕಾಯಕಯೋಗಿಗಳು ನೆಲೆ ಕಂಡುಕೊಂಡರು. ಅಲ್ಲದೆ ಅನೇಕ ಗ್ರಾಮಗಳಲ್ಲಿ ಶರಣರು ಮಠ ಸ್ಥಾಪಿಸಿ ವಚನ ತತ್ವ ಪ್ರಸಾರದಲ್ಲಿ ತೊಡಗಿಕೊಂಡರು. ಶರಣರು ಅಲ್ಲಲ್ಲಿ ನೆಲೆಸಿ ಜನರಿಗೆ ಶರಣ ಸಂಸ್ಕಾರ ಮತ್ತು ಶಿಕ್ಷಣಕೊಡುವ ಮಠ

ಸ್ಥಾಪಿಸಿದರು. ಹಾಗಾಗಿ ಈ ಪ್ರದೇಶದಲ್ಲಿ ಇಂದಿಗೂ ಪ್ರತಿ ಊರಲ್ಲಿ ಹಲವಾರು ಮಠಗಳು ಸಕ್ರೀಯವಾಗಿವೆ.

**ಐದನೆಯ ಹಂತ:**

ತುಂಗಭದ್ರಾ ಮತ್ತು ಕಾವೇರಿ ನದಿಗಳ ನಡುವಿನ ಪ್ರದೇಶದಲ್ಲಿ ಇನ್ನುಳಿದ ಯೋಗಿಗಳು, ಸಾಧಕರು. ಜ್ಞಾನಿಗಳು ಮತ್ತು ವಚನಕಾರರು ಅನೇಕ ಹಳ್ಳಿಗಳಲ್ಲಿ ನೆಲೆಸಿ ಮಠ ಸ್ಥಾಪಿಸಿ ವಚನ ತತ್ವ ಪ್ರಚಾರದಲ್ಲಿ ತೊಡಗಿಕೊಂಡರು. ಅದರ ಫಲಶೃತಿಯಾಗಿಯೇ ಹದಿನಾರನೇಯ ಶತಮಾನದಲ್ಲಿ ಇಲ್ಲಿ ಅನೇಕ ಶರಣರು ವಚನಗಳನ್ನು ರಚಿಸಿ ಶರಣ ತತ್ವಗಳಿಗೆ ಮೆರಗು ಕೊಟ್ಟರು. ಅಕ್ಕನಾಗಮ್ಮನವರು ಮತ್ತು ಶರಣ ಶ್ರಮದ ಪ್ರತಿಫಲ ಕಾಣುವದು ಈ ಪ್ರದೇಶದಲ್ಲಿ. 13ನೇಯ ಶತಮಾನದಿಂದ ಇಂದಿನವರೆಗೆ ವಚನ ರಕ್ಷಿಸುವ, ಸಂಪಾದಿಸುವ ಮತ್ತು ರಚಿಸುವ ಪ್ರಕ್ರಿಯೆ ಇಲ್ಲಿ ನಡೆದು ವಚನಸಾಹಿತ್ಯ ಉಳಿದದ್ದು ಮತ್ತು ಬೆಳೆದದ್ದು ಈ ನಾಡಿನ ಶರಣರಿಂದ.




**ಹೆದರದಿರು ಮನವೆ, ಹಿಮ್ಮೆಟ್ಟದಿರು ಮನವೆ, ಹಿಡಿದ ಛಲವ ಬಿಡದಿರು ಮನವೆ.**

**ಜರಿದರೆಂದು ಝುಂಕಿಸಿದರೆಂದು ಶಸ್ತ್ರ ಸಮಾದಿ ನೀರು ನೇಣು ವಿಷ ಔಷಧದಲ್ಲಿ ಘಟವ ಬಿಡದೆ**

**ಗುರುವಾದಡು ಲಿಂಗವಾದಡು ಜಂಗಮವಾದಡು ನೊಸಲಲ್ಲಿ ಕಣ್ಣುಳ್ಳ ಪಶುಪತಿಯಾದಡು**

**ತೆತ್ತಿಗರು ಕಂಡು ಒತ್ತಿ ನುಡಿದರೆಂದು ಘಟವ ಬಿಡುವ ಘಟಕರ್ಮಿಗಳು**

**ಏಳೇಳು ಜನ್ಮದಲ್ಲಿ ಸೂಕರನ ಹೊಟ್ಟೆಯಲ್ಲಿ ಹುಟ್ಟಿ,**

**ನೂರೊಂದು ಕುಲ ಹದಿನೆಂಟು ಜಾತಿಯ ಅಮೇಧ್ಯವ ತಿಂದು**

**ಹೊಲೆಯರ ಮನೆಯ ಹೊಸ್ತಿಲ ಕಾಯ್ದುಕೊಂಡಿಪ್ಪರಯ್ಯಾ :**

**ಅಮುಗೇಶ್ವರಲಿಂಗವೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ."/114**

– ಅಮುಗೆ ರಾಯಮ್ಮ

## ಮನದಲ್ಲಿ ಮೂಡಿದ ಪ್ರಶ್ನೆ

ಹೊಯ್ಸಳ ಆಡಳಿತ ಪ್ರದೇಶದಲ್ಲಿ ಶರಣರ ನೆನಪಿಗಾಗಿ ನಿರ್ಮಾಣವಾದ ಮಂದಿರಗಳನ್ನು "ಬಸವೇಶ್ವರ ಮಂದಿರ" ಅಥವಾ "ಅಕ್ಕ ನಾಗಮ್ಮ ಮಂದಿರ" ಗಳೆಂದು ಕರೆಯದೇ "ವೀರಭಧ್ರೇಶ್ವರ ಮಂದಿರ" ಎಂದು ಕರೆದಿದ್ದೇಕೆ?

ಈ ಪ್ರಶ್ನೆಗೆ ಉತ್ತರಿಸಲು ಆ ಕಾಲದ ರಾಜಕೀಯ ವ್ಯವಸ್ಥೆ ಮತ್ತು ಪದ್ಧತಿಗಳನ್ನು ಅರಿಯುವದು ಅವಶ್ಯಕ.

ಆದರೆ ನಾನೊಬ್ಬ ಗಣಿತ ವಿದ್ಯಾರ್ಥಿ. ಇತಿಹಾಸದ ಕೆಲವು ಪಾಠಗಳನ್ನು ಓದಿ ಮರೆತಿದ್ದೇನೆ. ಆದರೂ ಕೆಲವು ಗ್ರಂಥಗಳಲ್ಲಿಯ ವಿವರಗಳನ್ನು ಸತ್ಯವೆಂದು ನಂಬಿ ಅವುಗಳನ್ನು ಜೋಡಿಸಿ ನನ್ನ ಕಲ್ಪನೆಯಿಂದ ತಾರ್ಕಿಕವಾಗಿ ಜೋಡಿಸಿ ಬಂದ ಉತ್ತರವನ್ನು ನಿಮ್ಮ ಮುಂದಿಡುವದು ಎಂದು ನಿರ್ಧರಿಸಿ ಬರೆಯಲು ಕುಳಿತೆ.

"Google" ನನಗೆ ಬೇಕಾದ ಅಂಕಿ ಅಂಶ ಮತ್ತು ಮಾಹಿತಿ ಸಿಗುವದು ಎಂಬ ನಂಬಿಕೆ ಇತ್ತು.

(ಇದರಲ್ಲಿರುವ ತಪ್ಪುಗಳನ್ನು ತಿದ್ದಿ ನಿಮಗೆ ಗೊತ್ತಿರಬಹುದಾದ ವಿವರಗಳನ್ನು ಕೊಟ್ಟು ಸಹಕರಿಸಿ. )

ಮೊದಲಿಗೆ ಅಣ್ಣ ಬಸವಣ್ಣನವರ ಜೀವನದ ಪ್ರಮುಖ ಘಟನೆಗಳ ವಿವರಗಳನ್ನು ಅರಿಯಬೇಕೆನಿಸಿತು.

ಆಗ ನನಗೆ ಸಿಕ್ಕ ಕೆಲವು ವಿವರಗಳು

1. Limgayat Religion. Com.
(https://lingayatreligion.com/.../Basava_Life_Times.htm)

ಅಲ್ಲಿ ನನಗೆ "ವಿಶ್ವಗುರು ಬಸವಣ್ಣನವರ ಜೀವನದ ಪ್ರಮುಖ ಘಟನೆಗಳು 1.134-1196" ಎಂಬ ಬರಹದಡಿಯ ಒಂದು ಪಟ್ಟಿಯಲ್ಲಿ ನನಗೆ ಸಿಕ್ಕ ಮಾಹಿತಿಗಳು.

- ಬಸವಣ್ಣನವರ ಜನನ – ಕೃ ಶ 1134
- ಸಂಗಮಕ್ಕೆ ಆಗಮನ ಮತ್ತು ಅದ್ಯಯನ – ಕೃ ಶ 1142 ರಿಂದ ಕೃ ಶ 1155
- ಮಂಗಳವೇಡೆಯಲ್ಲಿ ವಾಸ್ತವ್ಯ – ಕೃ ಶ 1155 ರಿಂದ ಕೃ ಶ 1160
- ಅನುಭವ ಮಂಟಪ ಸ್ಥಾಪನೆ – ಕೃ ಶ 1169
  - **ಕಲ್ಯಾಣ ಕ್ರಾಂತಿ -- ಕೃ ಶ 1196**

2. (https://kn.wikipedia.org/.../%E0%B2%87%E0%B2%AE%E0%B3%8D...)
ವಿಕಿಪಿಡಿಯ ದಲ್ಲಿ ಸಿಕ್ಕ ಮಾಹಿತಿ

   1. ಇಮ್ಮಡಿ ಬಿಜ್ಜಳ ತರಿಕಾಡ ಬಿಜ್ಜಳ ಕಲಚೂರಿ ಸಾಮ್ರಾಜ್ಯದ ರಾಜ ಮತ್ತು ಚಾಳುಕ್ಯ ಸಾಮಂತನಾಗಿದ್ದ.

2. ಮಹಾ ಮಂಡಲೇಶ್ವರ ಪೆರ್ಮಾಡಿ ಇವನ ತಂದೆ.
3. ಮೊದಲು ಚಾಳುಕ್ಯ 6ನೆಯ ವಿಕ್ರಮಾದಿತ್ಯ, ಅನಂತರ ಭೂಲೋಕಮಲ್ಲ ಇಮ್ಮಡಿ ಜಗದೇಕಮಲ್ಲ ಮತ್ತು ಮುಮ್ಮಡಿ ತೈಲರ ಸಾಮಂತನಾಗಿದ್ದ. ಈತ ಕೊನೆಗೆ ಸ್ವತಂತ್ರನಾದ.
4. 1127: ತನ್ನ ತಂದೆಯ ಜೀವಿತ ಕಾಲದಲ್ಲೇ ಇವನು ವಿಕ್ರಮಾದಿತ್ಯನ ಅಧೀನದಲ್ಲಿ ಅಧಿಕಾರಿಯಾಗಿದ್ದ.
5. 1136: ಮಹಾಮಂಡಲೇಶ್ವರ ಪದವಿ ಗಳಿಸಿದ್ದ.
6. 1142: ಕರಹಾಡ 4000 ಪ್ರಾಂತ್ಯದ ಅಧಿಪತಿಯಾಗಿದ್ದ.
7. 1147: ಭೂಲೋಕಮಲ್ಲನ ಸೋದರಳಿಯನಾದ ಈತ ಚಾಳುಕ್ಯ ರಾಜಕುಮಾರರಂತೆ ಮಹಾಮಂಡಲೇಶ್ವರ ಕುಮಾರ ಬಿಜ್ಜಳ ದೇವರಸ ಎಂದು ಒಂದು ಶಾಸನದಲ್ಲಿ ಕರೆದುಕೊಂಡಿದ್ದ.
8. ಆಗ ತರ್ದವಾಡಿ 1000 ಪ್ರಾಂತ್ಯವೂ ಇವನ ಅಧೀನದಲ್ಲಿತ್ತು.
9. 1149: ಚಾಳುಕ್ಯ ಸಾಮ್ರಾಟ ಜಗದೇಕಮಲ್ಲ ಮೃತನಾಗಿ ಮುಮ್ಮಡಿ ತೈಲ ಪಟ್ಟಕ್ಕೆ ಬಂದಿದ್ದ. ಈ ವೇಳೆಗಾಗಲೇ ಬಲಿಷ್ಠನಾಗಿದ್ದ ಬಿಜ್ಜಳ ಸ್ವತಂತ್ರನಾಗುವ ಪ್ರಯತ್ನ ನಡೆಸಿದ. ಮೊದಲು ಚಕ್ರವರ್ತಿಗೂ ಇವನಿಗೂ ನೇರ ಘರ್ಷಣೆಯೇನೂ ನಡೆಯಲಿಲ್ಲ. ಆದರೆ ಬಿಜ್ಜಳ ಸಾಮಂತತ್ವದ ಸೂಚಕವಾದ ಮಹಾಮಂಡಲೇಶ್ವರ ಪದವನ್ನು ತನ್ನ ಪ್ರಶಸ್ತಿಯಿಂದ ಕೈಬಿಟ್ಟ. ಕ್ರಮೇಣ ಸಾಮ್ರಾಟತ್ವವನ್ನು ಮೆರೆಯುವ ಭುಜಬಲಮಲ್ಲ, ತ್ರಿಭುವನಮಲ್ಲ, ಭುವನೈಕವೀರ, ಭುಜಬಲ ಚಕ್ರವರ್ತಿ ಎಂಬ ಬಿರುದುಗಳನ್ನು ಧರಿಸಿದ. ಅನಂತರ ತನ್ನ ರಾಜಕೀಯ ದಾಖಲೆಗಳಲ್ಲಿ ತನ್ನ ಆಳ್ವಿಕೆಯ ಸಂವತ್ಸರಗಳನ್ನೇ ಕಾಲಸೂಚಕವಾಗಿ ಬಳಸಲಾರಂಭಿಸಿದ.
10. 1153: ಮುಮ್ಮಡಿ ತೈಲ ಚಾಳುಕ್ಯ ಸಾಮ್ರಾಟನಾಗಿದ್ದರೂ ಬಿಜ್ಜಳ ಸ್ವತಂತ್ರನಾಗಿದ್ದ.
11. 1162: ಚಾಳುಕ್ಯ ಸಾಮ್ರಾಜ್ಯದ ಬಹುಭಾಗ ಇವರ ಅಧೀನಕ್ಕೆ ಬಂತು. ಹಲವು ತಂತ್ರಗಳಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರೂ ಇವನ ಆಳ್ವಿಕೆ ಸುಗಮವಾಗಿರಲ್ಲಿಲ್ಲ. ಅದು ಕೇವಲ ಆರು ವರ್ಷಗಳಷ್ಟು ಶೈಶವವಾಗಿತ್ತು. ಸಾಮ್ರಾಟತ್ವದ ಕಾಲದಲ್ಲಿ ಅಧಿಕಾರ ಕಳೆದುಕೊಂಡು ಹಲವು ಚಾಳುಕ್ಯ ವಂಶೀಯರು ಮತ್ತು ಸಾಮಂತರು ತಮ್ಮ ಬಲವರ್ಧನೆಯಲ್ಲಿ ತೊಡಗಿದರು. ಇದೇ ಕಾಲದಲ್ಲಿ ಬಸವಣ್ಣನವರ ಪ್ರಭಾವವೂ ಬೆಳೆಯಿತು. ಹಲವು ಕಾರಣಗಳಿಂದ ಬಿಜ್ಜಳನಿಗೂ ಬಸವಣ್ಣನವರ ಅಸಂಖ್ಯ ಅನುಯಾಯಿಗಳಿಗೂ ವಿರಸ ಉಂಟಾಗಿ ಬಿಜ್ಜಳ ಇಕ್ಕಟ್ಟಿನ ಸ್ಥಿತಿಗೆ ಸಿಕ್ಕಿದ್ದ.

12. 1167: ರಾಜ್ಯಾಧಿಕಾರವನ್ನು ತನ್ನ ಮಗ ರಾಯಮುರಾರಿ ಸೋವಿದೇವನಿಗೆ ವಹಿಸಿದ.
13. **1168: ಇಮ್ಮಡಿ ಬಿಜ್ಜಳ ಮೃತನಾದನೆಂದು ತೋರುತ್ತದೆ**. (?)

(ರಾಯಮುರಾರಿ ಕೃಪಾಪೋಷಿತ ನಾಟಕ ಮಂಡಳಿ ಸಂಚು ರೂಪಿಸಿ ಘಟನೆಗಳನ್ನು ತಿರುಚಿ ಬಿಂಬಿಸಿ ಇತಿಹಾಸಕಾರರ ಕಣ್ಣಿಗೆ ಮಣ್ಣೆರೆಚಲು ಮಾಡಿದ ಸತತ ಪ್ರಯತ್ನ ಈಗಾಗಲೇ ವಿವರಿಸಿರುವೆ. ಹಾಗಾಗಿಯೇ ಈ ಗೊಂದಲ ಗೋಜಲು. ಆದರೆ ಆ ಸಿಕ್ಕು ಬಿಡಿಸುವ ಒಮ್ಮತದ ಪ್ರಯತ್ನ ಇನ್ನೂ ಸಫಲವಾಗದಿರುವದು ಖೇದದ ಸಂಗತಿ. ಬರುವ ಸಮಯದಲ್ಲಿ ಸಂಶೋಧಕರು ಈ ದಿಕ್ಕಿನಲ್ಲಿ ಸಾಗಿ ನೈಜ ಘಟನೆಗಳ ಅನಾವರಣ ಮಾಡಲಿ ಎಂದು ಆಶಿಸುವೆ)

ಎರಡೂ ವಿವರಗಳಲ್ಲಿದ್ದ ಅಜಗಜಾಂತರ ವ್ಯತ್ಯಾಸ ಮನದಲ್ಲಿ ಗೊಂದಲ ಮೂಡಿಸಿತು.

ಅದೂ ಕಲ್ಯಾಣ ಕ್ರಾಂತಿ ನಡೆದ ವಿಚಾರದಲ್ಲಿ 28 ವರ್ಷಗಳ ವ್ಯತ್ಯಾಸ.

ಬರಯುವದನ್ನು ನಿಲ್ಲಿಸಿ ಶ್ರೀ ರುದ್ರೇಶ ಕಿತ್ತೂರ ಅವರಿಗೆ ಫೋನ ಮಾಡಿ ನನ್ನ ಮನದಲ್ಲಿಯ ಗೊಂದಲ ಬಗೆಹರಿಸಲು ಕೋರಿದೆ.

ಅವರು ಅನೇಕ ವಿವರಗಳನ್ನು ಒದಗಿಸಿ ಸಮಸ್ಯೆ ನಾನೇ ಬಗೆಹರಿಸಿಕೊಳ್ಳಲು ಸೂಚಿಸಿದರು. ಆ ವಿವರಗಳನ್ನುನಿಮ್ಮ ಮುಂದೆ ಚಿತ್ರ ರೂಪದಲ್ಲಿ ಇಡುವೆ.

ಸರಿ ಅಥವಾ ತಪ್ಪು ಎಂದು ಹೇಳುವಷ್ಟು ಪರಿಣಿತ ನಾನಲ್ಲ ಆ ನಿರ್ಧಾರ ನಿಮಗೆ ಬಿಡುವೆ.






ಸಂದೇಹಾತೀತ ಪ್ರಮಾಣವನ್ನು ಆಧರಿಸಿ ಬಿಜ್ಜಲನ ಮರಣ ಘಟನೆಯನ್ನು ಈ ದಿನಾಂಕಕ್ಕಿಂತ ಕೆಲಕಾಲ ನಂತರದಲ್ಲಿ, ಸುಮಾರು ಕ್ರಿ.ಶ. ೧೧೬೮ರ ಮಾರ್ಚ್ ಕೊನೆಗೆ, ಇಲ್ಲವೆ ಏಪ್ರಿಲ್ ಆರಂಭಕ್ಕೆ ನಿಗದಿಪಡಿಸಬೇಕಾಗುತ್ತದೆ. ಇದರಲ್ಲಿ ಅಲ್ಪ ವ್ಯತ್ಯಾಸಕ್ಕೆ ಆಸ್ಪದ ಕೊಡಬಹುದು.

ಬಿಜ್ಜಲನಿಗಿಂತ ಬಸವೇಶ್ವರ ಮೂರೂವರೆ ತಿಂಗಳು ಮೊದಲು ಕಾಲವಾದನೆಂದು ಇಟ್ಟುಕೊಂಡರೆ ಬಸವೇಶ್ವರನ ಕೊನೆಯ ದಿನಾಂಕವನ್ನು ಕ್ರಿ.ಶ. ೧೧೬೭ರ ಕೊನೆಯಲ್ಲಿ, ಸುಮಾರು ಡಿಸೆಂಬರ್ ತಿಂಗಳಲ್ಲಿ, ಎಂದು ತಾತ್ಕಾಲಿಕವಾಗಿ ನಿಗದಿಪಡಿಸಬಹುದು.

### ೧. ಸಿದ್ಧತೆಯ ಆರಂಭಿಕ ಜೀವನ

(ಕ್ರಿ.ಶ. ೧೧೦೫–೧೧೩೨, ಆಚೀಚೆ ಕೆಲವು ವರ್ಷಗಳ ವ್ಯತ್ಯಾಸದೊಂದಿಗೆ)

೧. ಬಾಗೇವಾಡಿಯಲ್ಲಿ ಜನನ ವರ್ಷ. ಕ್ರಿ.ಶ. ೧೧೦೫

೨. ಸಾಹಿತ್ಯ ಕೃತಿಗಳಲ್ಲಿ ಸೂಚಿತವಾಗಿರುವಂತೆ ಉಪನಯನ. ಕ್ರಿ.ಶ. ೧೧೧೩

೩. ತಂದೆ ತಾಯಿಗಳ ನಿಧನ: ಹರಿಹರ, ಭೀಮಕವಿ ಮತ್ತಿತರ ಕಥಾನಕಗಳಲ್ಲಿ ಸೂಚಿತಗೊಂಡಿರುವಂತೆ. ಕ್ರಿ.ಶ. ೧೧೧೪

೪. ಬಾಗೇವಾಡಿಯಲ್ಲಿ ಅಜ್ಜಿಯೊಂದಿಗೆ ವಾಸ: ಹರಿಹರನ ಕಥಾನಕದಲ್ಲಿ ಸೂಚಿತಗೊಂಡಿರುವಂತೆ. ಕ್ರಿ.ಶ. ೧೧೧೪–೧೧೨೦

೫. ಹರಿಹರ ಸೂಚಿಸಿದಂತೆ ಕೂಡಲಸಂಗಮಕ್ಕೆ ನಿರ್ಗಮನ. ಕ್ರಿ.ಶ. ೧೧೨೧

೬. ಕೂಡಲಸಂಗಮದಲ್ಲಿ ವಾಸ್ತವ್ಯ: ಸಾಹಿತ್ಯ ಮೂಲಗಳಲ್ಲಿ ಸೂಚಿತಗೊಂಡಿರುವಂತೆ. ಕ್ರಿ.ಶ. ೧೧೨೧–೧೧೩೨

### ೨. ವೃತ್ತಿಜೀವನ : ಮಂಗಳವಾಡದಿಂದ ಕಲ್ಯಾಣದ ವರೆಗೆ

(ಕ್ರಿ.ಶ. ೧೧೩೨–೧೧೫೩)

೭. ಸಾಹಿತ್ಯಿಕ ಮತ್ತು ಶಾಸನ ಪ್ರಮಾಣ ಸೂಚಿಸುವಂತೆ, ಕೂಡಲಸಂಗಮದಿಂದ ಕಲಚುರಿ ಮಹಾಮಂಡಲೇಶ್ವರ ಬಿಜ್ಜಲನ ರಾಜಧಾನಿಯಾಗಿದ್ದ ಮಂಗಳವಾಡಕ್ಕೆ ನಿರ್ಗಮನ. ಕ್ರಿ.ಶ. ೧೧೩೨

೮. ೧೦೧ ಹೊನ್ನು ಪಡೆದು ಬಿಜ್ಜಲನ ಪ್ರಧಾನ ಭಾಂಡಾರಿ ಸಿದ್ಧ ದಂಡಾಧಿಪನ ಕೈಕೆಳಗೆ ಕಿರಿಯ ಲೆಕ್ಕಿಗನ ಹುದ್ದೆ ಸ್ವೀಕಾರ: ಹರಿಹರ ಮತ್ತು ಸಿಂಗಿರಾಜ ಸೂಚಿಸುವಂತೆ. ಕ್ರಿ.ಶ. ೧೧೩೨

೯. ಸಿದ್ಧ ದಂಡಾಧಿಪನ ಮರಣ: ಬಿಜ್ಜಲನ ಪ್ರಧಾನ ಭಾಂಡಾರಿಯಾಗಿ ಉನ್ನತ ಹುದ್ದೆಗೆ ಬಡ್ತಿ, ಹರಿಹರ ಮತ್ತು ಅನುಭವ ಮಂಟಪ ಸಂಸ್ಥೆ ಕುರಿತ ಸಾಹಿತ್ಯಿಕ ವರ್ಣನೆಗಳು ಸೂಚಿಸುವಂತೆ . ಕ್ರಿ.ಶ. ೧೧೩೨–೧೧೪೧

೧೦. ಬಿಜ್ಜಲನಲ್ಲಿ ಪ್ರಧಾನ ಭಾಂಡಾರಿಯಾಗಿ ಸೇವೆ: ಮೇಲ್ಕಂಡ ಪ್ರಮಾಣ ಮತ್ತು ಶಾಸನಾಧಾರಗಳು ಸೂಚಿಸುವಂತೆ. ಕ್ರಿ.ಶ. ೧೧೪೧–೧೧೫೩

೧೧. ಬಿಜ್ಜಲನೊಂದಿಗೆ ರಾಜಕೀಯ ಮತ್ತು ಧಾರ್ಮಿಕ ಮತಭೇದಗಳಿಂದಾಗಿ ಮಂಗಳವಾಡ ಬಿಟ್ಟು ಕಲ್ಯಾಣಕ್ಕೆ ತೆರಳುವಿಕೆ: ಸಾಹಿತ್ಯಕ ಮತ್ತು ಶಾಸನಾಧಾರಗಳು ಸೂಚಿಸುವಂತೆ. ಕ್ರಿ.ಶ. ೧೧೫೩

### ೩. ಧಾರ್ಮಿಕ ಜೀವನ: ಕೂಡಲಸಂಗಮ, ಮಂಗಳವಾಡ ಮತ್ತು ಕಲ್ಯಾಣಗಳಲ್ಲಿ

(ಕ್ರಿ.ಶ. ೧೧೨೧–೧೧೬೭)

೧೨. ಸಂಗಮೇಶ್ವರನ ಪರಮ ಭಕ್ತನಾಗಲು ಸಿದ್ಧತೆ ಮತ್ತು ಕೂಡಲಸಂಗಮದಲ್ಲಿ ಸಮಾಜೋ-ಧಾರ್ಮಿಕ ಸುಧಾರಣೆಗಳು: ಇದಕ್ಕೆ ಸಾಹಿತ್ಯ ಮತ್ತುಶಾಸನಾಧಾರವಿದೆ. ಕ್ರಿ.ಶ. ೧೧೨೧–೧೧೩೨

೧೩. ಭಾವೀ ಧಾರ್ಮಿಕ ಚಟುವಟಿಕೆಗಳಿಗೆ ನೆಲೆಯಾಗಿ ಜಾತಿರಹಿತ ಜೀವನಾರಂಭ: ಸಾಹಿತ್ಯ ಮತ್ತು ಶಾಸನಗಳ ಆಧಾರವಿದೆ. ಕ್ರಿ.ಶ. ೧೧೩೨

೧೪. ಅನುಭವ ಮಂಟಪಕ್ಕೆ ಸಂಬಂಧಿಸಿದ ಸಾಹಿತ್ಯಿಕ ನಂಬಿಕೆಗಳು ಸೂಚಿಸುವಂತೆ ಸಮಾಜೋ-ಧಾರ್ಮಿಕ ಸುಧಾರಣೆಯ ನವ ಆಂದೋಲನದ ಆರಂಭ. ಕ್ರಿ.ಶ. ೧೧೪೧

೧೫. ನವ ಆಂದೋಲನಕ್ಕೆ ಜನಸಾಮಾನ್ಯರಿಂದ ಜನಪ್ರಿಯತೆ ಮತ್ತು ಬೆಂಬಲ ಪ್ರಾಪ್ತಿ. ಜಂಗಮ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಆಂದೋಲನದಲ್ಲಿ ಸೇರುವುದು; ಅಂದಿನ ದೊಡ್ಡ ಧಾರ್ಮಿಕ ನಾಯಕರ ಮನ್ನಣೆ ಮತ್ತು ಅನುಮೋದನೆ ಪಡೆಯುವ ಪ್ರಯತ್ನಗಳು. ಇದನ್ನು ಹರಿಹರ ಮತ್ತು ಅನುಭವ ಮಂಟಪ ಕುರಿತು ಸಾಹಿತ್ಯ ಮೂಲಗಳು ಸೂಚಿಸುತ್ತವೆ. ಕ್ರಿ.ಶ. ೧೧೪೧–೧೧೫೩

೧೬. ಕಲ್ಯಾಣಕ್ಕೆ ನಿರ್ಗಮನ: ಮೇಲೆ ನಂ. ೧೧ ನೋಡಿ. ಕ್ರಿ.ಶ. ೧೧೫೩ ೧೭. ಆಂದೋಲನವನ್ನು ಪೂರ್ಣತಃ ಸಮರ್ಥಿಸಿ, ಆಶೀರ್ವದಿಸಲು ಅಲ್ಲಮಪ್ರಭು ಕಲ್ಯಾಣಕ್ಕೆ ಆಗಮಿಸುವುದು: ಸಾಹಿತ್ಯದ ಆಧಾರವಿದೆ. ಕ್ರಿ.ಶ. ೧೧೫೩

೧೮. ಸಾಹಿತ್ಯಿಕ ಮತ್ತು ಶಾಸನಾಧಾರಗಳು ಸೂಚಿಸುವಂತೆ, ನವ ಧರ್ಮದ ಬೋಧನೆ ಮತ್ತು ಯಶಸ್ಸು ಕ್ರಿ.ಶ. ೧೧೫೩–೧೧೬೭

೧೯. ಸಾಹಿತ್ಯಕ ಆಧಾರ ಸೂಚಿಸುವಂತೆ, ಭಕ್ತರಾದ ಹರಳಯ್ಯ ಮತ್ತು ಮಧುವಯ್ಯರನ್ನು ಬಿಜ್ಜಲನು ಕ್ರೂರವಾಗಿ ಶಿಕ್ಷೆಗೊಳಪಡಿಸಿದುದು. ಕ್ರಿ.ಶ. ೧೧೬೭

೨೦. ಗೋಜಲಿನ ವಾತಾವರಣ, ಅನುಯಾಯಿಗಳಲ್ಲಿ ಭಿನ್ನಾಭಿಪ್ರಾಯಗಳು, ಬಿಜ್ಜಲನ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಕೆ, ಆಂದೋಲನ ನಿಯಂತ್ರಣ ತಪ್ಪಿದುದು, ಕೂಡಲಸಂಗಮಕ್ಕೆ ತೆರಳುವಿಕೆ ಮತ್ತು ಸಂಗಮೇಶ್ವರನಲ್ಲಿ ಐಕ್ಯ. ಇದಕ್ಕೆ ಸಾಹಿತ್ಯ ಮತ್ತು ಶಾಸನಗಳಲ್ಲಿ ಆಧಾರವಿದೆ. ಡಿಸೆಂಬರ್ ಕ್ರಿ.ಶ. ೧೧೬೭

**ಪರಿಸಮಾಪ್ತಿ**

ಇಂತು, ಬಸವೇಶ್ವರನು ಸುಮಾರು ಅರವತ್ತು ವರ್ಷಗಳ ಸಕ್ರಿಯ ಜೀವನವನ್ನು ಸಾಗಿಸಿದಂತಿದೆ.

ಮೂವತ್ತಾರು ವರ್ಷಗಳು / ೨೬೯




ಬಾಗೇವಾಡಿಯನ್ನು ಬಿಟ್ಟು ಹೊರಟಾಗ ಅವನ ಜೊತೆಗೆ ಅವನ ತಂಗಿ ನಾಗಲಾಂಬೆಯೂ ಹೊರಟಳು. ಅರ್ಜುನವಾಡದ ಶಿಲಾಶಾಸನದ ಪ್ರಕಾರ ಬಸವನಿಗೆ ದೇವರಾಜ ಎಂಬ ಹೆಸರಿನ ಒಬ್ಬ ಅಣ್ಣನಿದ್ದಂತೆ ತಿಳಿದುಬರುತ್ತದೆ. ಇವನ ವಿಷಯದಲ್ಲಿ ನಮಗೆ ಹೆಚ್ಚಿನ ವಿವರ ತಿಳಿಯವು. ಈ ದೇವರಾಜನ ಹೆಸರು ಯಾವ ವಚನದಲ್ಲೂ ಕಾವ್ಯದಲ್ಲೂ ಕಂಡುಬರುವುದಿಲ್ಲ. (ಅವನು ಮಾದರಸನ ಬಹುಶಃ ಹಿರಿಯ ಹೆಂಡತಿಯ ಮಗನಿರಬಹುದೆಂಬ ಸಕಾರಣ ಊಹೆಗೆ ಆಸ್ಪದವಿದೆ). ಆದರೆ ನಾಗಲಾಂಬಿಕೆ ಅಥವಾ ಅಕ್ಕನಾಗಮ್ಮ ಬಸವನ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದಳು.

ರಾಜ್ಯಾಪಹಾರದಲ್ಲಿ ಅವನಿಗೆ ಬನವಾಸಿ ನಾಡಿನಲ್ಲಿ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ರಾಜಧಾನಿಯಿಂದ ಚಾಲುಕ್ಯರ ಪರವಾಗಿ ಆಳುತ್ತಿದ್ದ ಕಸಪಯ್ಯ ನಾಯಕನಂತಹ ವ್ಯಕ್ತಿಗಳ ಸಹಾಯವೂ ದೊರೆಯಿತು. ಸು. 1155-56ರಿಂದಲೇ ಅವನು ಸ್ವತಂತ್ರನಾಗಲು ಪ್ರಯತ್ನಪಟ್ಟಿದ್ದರೂ ಅವನ ಪ್ರಯತ್ನಗಳು ಸಫಲವಾದದ್ದು ಕ್ರಿ.ಶ. 1162ರಲ್ಲಿ. ಆ ವರ್ಷ ಅವನು ತೈಲಪನನ್ನು ಪಟ್ಟದಿಂದ ಇಳಿಸಿ ತಾನು ಚಾಲುಕ್ಯ ಸಾಮ್ರಾಜ್ಯದ ಅಧಿಪತಿಯೆಂದು ಚಕ್ರವರ್ತಿಯೆಂದು ಘೋಷಿಸಿಕೊಂಡ.

ಹಿನ್ನೆಲೆ - ರಾಜಕೀಯ 7

ಇತಿಹಾಸಕಾರರಿರಗೆ ಮತ್ತು ಸಾಹಿತಿಗಳಿಗೆ ಇರುವ ಗೊಂದಲ ಬದಿಗಿಟ್ಟು, ಇದುವರೆಗೆ ನಾನು ವಿವರಿಸುವ ಘಟನೆಗಳಿಗೆ ಸರಿಹೊಂದುವ ದಿನಗಳ ವಿವರ ಆರಿಸಿಕೊಂಡು ನನ್ನ ಬರವಣಿಗೆ ಮುಂದುವರೆಸುವೆ.
ಅಣ್ಣನವರ ಕಾರ್ಯದ ಬಗ್ಗೆ ಇಷ್ಟು ಗೊಂದಲವಾಗಿರುವಾಗ ಇನ್ನು ಅಕ್ಕನಾಗಮ್ಮನವರ ಕಾಯಕದ ವಿವರಣೆಗೆ ಐತಿಹಾಸಿಕ ಕುರುಹುಗಳು ಸಿಗಲು ಸಾಧ್ಯವೇ? ಆದರೂ ಪ್ರಯತ್ನ ಮುಂದುವರೆಸುವದರಲ್ಲಿ ತಪ್ಪೇನಿದೆ?
ಇದುವರೆಗೆ ಲಭ್ಯವಾದ ಎಲ್ಲ ವಿವರಗಳನ್ನು ಗಮನಿಸಿ ಮತ್ತು ನನಗೆ ಇದುವರೆಗೆ ಬರೆದ 500 face book post ಲೇಖನ ಬರೆಯುವಾಗ ಸಿಕ್ಕ ಅನುಭವದ ಆಧಾರದಲ್ಲಿ ನನ್ನ ಅಭಿಪ್ರಾಯಗಳನ್ನು ಮಂಡಿಸಿರುವೆ. ಇಲ್ಲಿ ಕಲ್ಪನೆಯಿಂದ ಮೂಡಿಬಂದ ಸಂಗತಿಗಳಿಗೆ ಆಧಾರ ಒದಗಿಸುವ ಕೆಲಸವಾಗಬೇಕಾಗಿದೆ.
ತರಿಕೇರಿಗೆ ಅಕ್ಕನಾಗಮ್ಮನವರು ಬಂದು ತರಿಕೇರಿಯ ಸನಿಹದ ಕಲ್ಲತ್ತಗಿರಿಯಲ್ಲಿ ಮೂರನೆಯ ಬಾರಿಗೆ ಅನುಭವ ಮಂಟಪ ಸ್ಥಾಪಿಸಿ ಕಾರ್ಯ ಮುಂದುವರಿಸಿಕೊಂಡು ಹೋಗುವಾಗ ಅವರಿಗೆ ವಯಸ್ಸೆಷ್ಟಾಗಿತ್ತು? ಎನ್ನುವದು ಮನದಲ್ಲಿ ಹೊಳೆಯುವ ಪ್ರಶ್ನೆ. ಇಲ್ಲಿ ಅವರ ಜೀವನದಲ್ಲಿ ನಡೆದ ಪ್ರಮುಖ ಘಟನೆಗಳು ನಡೆದ ದಿನಗಳನ್ನು ಗುರುತಿಸುವ ಪ್ರಯತ್ನ ಮಾಡುವೆ.
ಅಲ್ಲಲ್ಲಿ ನನಗೆ ದೊರೆತ ಆಧಾರಗಳನ್ನು ಕೊಡುವ ಪ್ರಯತ್ನ ಮಾಡುವೆ.

1. ಕೃ ಶ 1129: ಅಕ್ಕನಾಗಮ್ಮಗಮ್ಮನವರ ಜನನ
2. ತಂದೆ-ಮಾದರಸ, ತಾಯಿ ಮಾದಲಾಂಬಿಕೆ. ಜನ್ಮ ಸ್ಥಳ -ಇಂಗಳೇಶ್ವರ ಬಾಗೇವಾಡಿ
3. ಕೃ ಶ 1131: ಬಸವಣ್ಣನವರ ಅಣ್ಣನ ಜನನ.

ಈ ಮಾತನ್ನು ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. ಅವನು ತಂದೆ ತಾಯಿಯ ಮುದ್ದಿನ ಮಗನಾಗಿ ಅವರಿಗೆ ನೆರವಾಗಿರುವ ಸಾಧ್ಯತೆ ಇದೆ. ತಮ್ಮ ವಿಶ್ವವಿಖ್ಯಾತನಾದಾಗ ಅವನನ್ನು ಇತಿಹಾಸಕಾರರು ಮರೆತಿರಬೇಕು.

4. ಕೃ ಶ 1134: ಅಣ್ಣ ಬಸವಣ್ಣನವರ ಜನನ.
ಬಸವಣ್ಣನವರಿಗೆ ಒಬ್ಬ ಅಣ್ಣನಿದ್ದ ಎನ್ನುವ ವಾದವನ್ನು ನಂಬಿದರೆ ಅಕ್ಕನಾಗಮ್ಮ ಅಣ್ಣನವರಿಗಿಂತ ಸುಮಾರು ಐದು ವರ್ಷ ದೊಡ್ಡವಳು ಎಂದು ಭಾವಿಸಬಹುದು. ಅದು ಗೊಂಬೆಯಂತೆ ಮಗುವನ್ನು ಆಡಿಸುವ ವಯಸ್ಸು.
ಈಗಲೂ ಮೊದಲ ಗಂಡುಮಗನಿಗೆ ತಂದೆತಾಯಿಯರ ಪ್ರೀತಿ ಮೀಸಲಾಗಿರುತ್ತದೆ. ಹಾಗಾಗಿ ಅಮೇಲೆ ಹುಟ್ಟುವ ಗಂಡುಮಗುವಿಗೆ ಅಕ್ಕನ ಪ್ರೀತಿ ಧಾರಾಳವಾಗಿ ಸಿಗುವದು ಎನ್ನುವದನ್ನು ಕಂಡಿದ್ದೇವೆ.
ಇದೇ ರೀತಿ ಅಣ್ಣ ಬಸವಣ್ಣನವರ ಅಣ್ಣನಿಗೆ ತಂದೆ ತಾಯಿಯ ವಾತ್ಸಲ್ಯ ಮೀಸಲಾದಾಗ ಐದು ವರ್ಷದ ಪುಟ್ಟ ಬಾಲಕಿ ಅಕ್ಕನಾಗಮ್ಮ ತನ್ನ ತೊಡೆಯಮೇಲೆ ಅಣ್ಣ ಬಸವಣ್ಣನನ್ನು ಮಲಗಿಸಿಕೊಂಡು ಹಾಲು ಕುಡಿಸಿ, ಅಳುವಾಗ ಹೆಗಲ ಮೇಲೆ ಜೊಗುಳ ಹಾಡುತ್ತ ಮಲಗಿಸಿ, ತನಗೆ ಬರುವ ಹಾಡುಗಳನ್ನು ಮತ್ತು ಕಥೆಗಳನ್ನು ಹೇಳಿ ಮಲಗಿಸಿ, ತನ್ನೆಲ್ಲಾ ಪ್ರೀತಿಧಾರೆಯೆರದು ಬೆಳೆಸಿದ್ದು ಅಕ್ಕನಾಗಮ್ಮ. ಅಂಬೆಗಾಲಿಕ್ಕುವಾಗ ಚಪ್ಪಾಳೆ ತಟ್ಟಿ, ತಪ್ಪು ಹೆಜ್ಜೆಯಿಕ್ಕುವಾಗ ಕೈಯಾಸರೆನೀಡಿ, ಉಸುಕಿನಲ್ಲಿ ಮುದ್ದಾದ ಕನ್ನಡ ಅಕ್ಷರ ಕಲಿಸಿ, ಹಠ ಹಿಡಿದಾಗ ಗದರಿಸಿ ಮುದ್ದು ಮಾಡಿ ಬೆಳೆಸಿದಾಕೆ ಅಕ್ಕನಾಗಮ್ಮ.
ಈ ರೀತಿ ಅಕ್ಕನ ಪಾಲನೆಯಲ್ಲಿ ಬೆಳೆದವರು ಅನೇಕ ಜನ ಸಿಕ್ಕುತ್ತಾರೆ. ಅವರು ತಾಯಿಗಿಂತಲೂ ಅಕ್ಕನನ್ನು ಹೆಚ್ಚು ಪ್ರೀತಿಸುವದನ್ನು ಮತ್ತು ತಮ್ಮ ಮನದ ಮಾತುಗಳನ್ನು ಅಕ್ಕನೊಂದಿಗೇ ಹಂಚಿಕೊಳ್ಳುವದನ್ನು ಕಾಣುತ್ತೇವೆ. ನಮ್ಮೂರಲ್ಲಿ ನೌಕರಿ ಮಾಡುವ ಅನೇಕರಿಗೆ ಅಕ್ಕ ಮತ್ತು ಅಕ್ಕನ ಗಂಡ ಮನೆಯ ಎಲ್ಲ ಜವಾಬ್ದಾರಿ ಹೊತ್ತುಕೊಂಡು ತಮ್ಮನಿಗೆ ಆಸರೆಯಾದದ್ದನ್ನು ಕಾಣಬಹುದು.
ಸಾಮಾನ್ಯವಾಗಿ ಅಕ್ಕನ ಮುದ್ದಿನ ತಮ್ಮಂದಿರು ಹಟಮಾರಿಗಳು ಮತ್ತು ಅವರ ಹಟಗಳಿಗೆ ಅಕ್ಕ ಆಸರೆಯಾಗಿ ನಿಲ್ಲುವದನ್ನು ನಾವೀಗಲೂ ಕಾಣುತ್ತೇವೆ.
ಅಕ್ಕನಾಗಮ್ಮ ಹಾಗೂ ಅಣ್ಣ ಬಸವಣ್ಣನವರ ರೀತಿಯೂ ಅದೇ ಅಗಿರುವದೂ ಸಹಜ.

5. ಕೃ ಶ 1140: ಅಕ್ಕನಾಗಮ್ಮನವರ ಮದುವೆ
12ನೇಯ ಶತಮಾನದಲ್ಲಿ ಸಂಪ್ರದಾಯವಾದಿ ಮನೆತನಗಳಲ್ಲಿ ಹೆಣ್ಣುಮಕ್ಕಳ ಮದುವೆಯನ್ನು 12 ನೇಯ ವಯಸ್ಸಿನೊಳಗಾಗಿ ಮಾಡುವ

ಸಂಪ್ರದಾಯವಿತ್ತು. ಅಕ್ಕ ನಾಗಮ್ಮನವರ ಮದುವೆಯೂ ಆ ಸಂಪ್ರದಾಯದ ಪ್ರಕಾರವೇ ನಡೆದಿರುವದು ಸಹಜ.
ಈಗಲೂ ಅನೇಕ ಪ್ರತಿಬಂಧಗಳ ನಡುವೆಯೂ ಬಾಲವಿವಾಹ ಆಗುವ ಮತ್ತು ಮೂರು ಹರದಾರಿಗಿಂತ ದೂರದ ಊರಿಗೆ ಮಗಳನ್ನು ಕೊಡದಿರುವ, ತಮ್ಮ ಹತ್ತಿರದ ಸಂಬಂಧಿಗಳಲ್ಲೇ ಸ್ಥಿತಿವಂತರಾದ ವರನನ್ನು ಹುಡುಕಿ ಮಗಳ ಮದುವೆ ಮಾಡುವ ಸಂಪ್ರದಾಯ ಈಗಲೂ ಅಲ್ಲಿದೆ.
ಕೂಡಲಸಂಗಮದ ಸಂಪ್ರದಾಯಸ್ಥ ಮನೆತನದ ಮುಗ್ಧ ಯುವಕ ಶಿವದೇವನ (ಸುಮಾರು 18 ವರ್ಷವಿರಬೇಕು) ಜೊತೆ ಸಂಪ್ರದಾಯಭದ್ದವಾಗಿ ಅಕ್ಕನಾಗಮ್ಮನ ಮದುವೆ ನಡೆಯಿತು. ಆ ಅದ್ದೂರಿ ಸಂಪ್ರದಾಯಬದ್ಧ ಮದುವೆಯಲ್ಲಿ ಆರು ವರ್ಷದ ಬಾಲಕ ಅಣ್ಣ ಬಸವಣ್ಣ ಸಡಗರದಿಂದ ಓಡಾಡಿದ.
ಶಿವದೇವನ ತಂದೆ ತಾಯಿಯರ ಬಗ್ಗೆ ಎಲ್ಲಿಯೂ ವಿವರಗಳಿಲ್ಲ. ಅಲ್ಲದೇ ಅಕ್ಕನಾಗಮ್ಮ ಮತ್ತು ಶಿವದೇವ ಅಣ್ಣ ಬಸವಣ್ಣನವರ ಜೊತೆಯಾಗಿ ಹೋದದ್ದನ್ನು ನೋಡಿದರೆ ಶಿವದೇವ ಬಸವಣ್ಣನವರ ತಂದೆ ತಾಯಿಯ ಆಸರೆಯಲ್ಲಿಯೇ ಬೆಳೆದಿರಬೇಕು ಎನಿಸುತ್ತದೆ.
ಈಗ ಸಂಗಮ ಊರು ಮುಳುಗಡೆಯಾಗಿದೆ ಆದರೆ ನಾನು ಕೃ ಶ 1960 ರ ಸುಮಾರು ನೋಡಿದ ಸಂಗಮದಲ್ಲಿ “ಸಂಗಮ” ಎನ್ನುವ ಅಡ್ಡ ಹೆಸರುಳ್ಳ “ಧನಿ” ಎಂದು ಕರೆಸಿಕೊಳ್ಳುವ ನಾಲ್ಕೈದು ಕಟ್ಟಾ ಸಂಪ್ರದಾಯದ ಮನೆತನಗಳಿದ್ದವು. ಒಂದೆರಡು ಎಕರೆ ಆಕ್ರಮಿಸುವ ಅವರ ಮನೆಗಳು ಯಾವ ವಾಡೆಗಿಂತ ಕಡಿಮೆಯಿರಲಿಲ್ಲ.
ಶಿವದೇವನದು ಅಂತಹದೇ ಒಂದು ದೊಡ್ಡ ಮನೆಯಿರಬೇಕು ಒಬ್ಬಂಟಿಯಾದಮೇಲೆ ಬಾಗೇವಾಡಿಯಲ್ಲಿ ಹೋಗಿ ನೆಲಸಿರಬೇಕು.
ಮದುವೆಯಾದಮೇಲೆ ಬೀಗರ ಮನೆಯಲ್ಲಿರುವದು ಸರಿಯಲ್ಲ ಎನ್ನುವ ಭಾವನೆ ಹಳ್ಳಿಗಳಲ್ಲಿ ಈಗಲೂ ಇದೆ.
ಹಾಗಾಗಿ ಮದುವೆಯಾದಮೇಲೆ ಅಕ್ಕನಾಗಮ್ಮನೊಡನೆ ಶಿವದೇವ ಸಂಗಮಕ್ಕೆ ಬಂದು ನೆಲೆಸಿದ್ದು ಸಹಜ.
ಅಂತಹ ದೊಡ್ಡಮನೆಯಲ್ಲಿ ಪುಟ್ಟ ಬಾಲಕಿ ಒಬ್ಬಂಟಿಯಾಗಿರಲು ಸಾಧ್ಯವೇ?
ಆಕೆ ಅದಕ್ಕಾಗಿ ಪುಟ್ಟ ಸೋದರ ಅಣ್ಣ ಬಸವಣ್ಣನನ್ನು ಜೊತೆಗೆ ಕರೆದುಕೊಂಡು ಬಂದಿರುವ ಸಾಧ್ಯತೆ ಇದೆ. ತಮ್ಮನನ್ನು ಅಗಲಿರುವ ಪ್ರಸಂಗ ಬರಲಿಲ್ಲ.




ಚೂಟಿಯಾದ ಹುಡುಗ ಮನೆಯಲ್ಲಿ ಸುಮ್ಮನಿರಲು ಸಾಧ್ಯವೇ? ಆಗ ಅವನು ತನ್ನ ವೇಳೆ ಕಳೆಯಲು ಹೊದದ್ದೇ ಮನೆಯ ನನಿಹದಲ್ಲಿದ್ದ ಕೂಡಲಸಂಗಮ ಮಂದಿರಕ್ಕೆ. ಅದು ಬರಿ ಮಂದಿರವಾಗಿರಲಿಲ್ಲ ಅದೊಂದು ಪ್ರಶಿದ್ದ ಪ್ರತಿಭಾವಂತ ಗುರುಗಳಿದ್ದ ಗುರುಕುಲವಾಗಿತ್ತು. ಮುದ್ದು ಚೂಟಿ ಬಾಲಕ ಅವರೆಲ್ಲರ ಗಮನ ಸೆಳೆದದ್ದು ಸ್ವಾಭಾವಿಕ. ಅಂತೂ ಆ ಎರಡು ವರ್ಷಗಳಲ್ಲಿ ಗುರುಗಳ ಮುದ್ದು ಬಾಲಕನಾಗಿ ಅನೇಕ ವಿಚಾರಗಳನ್ನು ಅರ್ಥಮಾಡಿಕೊಂಡ ಅಣ್ಣ ಬಸವಣ್ಣ ಅಲ್ಲಿಯ ವಿದ್ಯಾರ್ಥಿಗಳ ಗೆಳೆಯನಾಗಿ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಹೋದ.

ಅಕ್ಕ ಮಾವನ ಜೊತೆಗೂಡಿ ತಂದೆ ತಾಯಿಯನ್ನು ಬೆಟ್ಟಿಯಾಗಲು ಬಾಗೇವಾಡಿಗೆ ಹೋಗುತ್ತಿದ್ದರೂ ಅವನನ್ನು ಕೂಡಲಸಂಗಮ ಎಳೆದು ತರುತ್ತಿತ್ತು ಅಲ್ಲಿ ಅವನಿಗಾಗಿ ಜ್ಞಾನಭಂಡಾರದ ಬಾಗಿಲು ತೆಗೆದಿತ್ತು.

6. ಕೃ ಶ 1142: ಕೂಡಲ ಸಂಗಮಕ್ಕೆ ವಿದ್ಯಾಭ್ಯಾಸಕ್ಕಾಗಿ ಅಣ್ಣ ಬಸವಣ್ಣನವರನ್ನು ಕರೆದುಕೊಂಡು ಬಂದ ಅಕ್ಕನಾಗಮ್ಮ. ಹದಿಮೂರು ವರ್ಷದ ಅಕ್ಕನಾಗಮ್ಮ ತನ್ನ ಎಂಟು ವರ್ಷದ ತಮ್ಮನೊಡನೆ ತವರುಮನೆಗೆ ಹೋದಾಗ ಉಪನಯನ ಮಾಡುವ ಕಾರ್ಯಕ್ರಮ (ಅಥವಾ ಯಾವುದೋ ಅದ್ದೂರಿ ಧಾರ್ಮಿಕ ಕಾರ್ಯಕ್ರಮ) ಹಮ್ಮಿಕೊಳ್ಳಲಾಯಿತು. ಅಣ್ಣಬಸವಣ್ಣನವರು ಸಾಂಪ್ರದಾಯಕ ವಿಧಿ ವಿಧಾನಗಳು ಬೇಡವೆಂದು ತಂದೆ ತಾಯಂದಿರಿಗೆ ಪರಿಪರಿಯಾಗಿ ತಿಳಿಹೇಳಲು ಪ್ರಯತ್ನಿಸಿದರು. ಅಕ್ಕ ಅವನಿಗೆ ನೆರವಾಗಿ ನಿಂತಳು. ಬಾಲಕ ಅಣ್ಣಬಸವಣ್ಣವರು ಸಕಾರಣವಾಗಿ ವಿವರಿಸಿದರೂ ಬಲವಂತ ಮಾಡತೊಡಗಿದಾಗ ಅನಿವಾರ್ಯವಾಗಿ ಬಾಗೇವಾಡಿ ತೊರೆದು ಅಕ್ಕನೊಂದಿಗೆ ಕೂಡಲಸಂಗಮಕ್ಕೆ ಹೊರಟು ಬಂದರು. (ಮನ ಒಪ್ಪದಿದ್ದಾಗ ಸ್ಥಳ ತೊರೆಯುವದು ಅಣ್ಣನವರ ಸ್ವಭಾವ ಎನಿಸುತ್ತದೆ

ಇದೇ ರೀತಿಯ ನಡತೆಯನ್ನು ಬಸವ ಕಲ್ಯಾಣ ತೊರೆಯುವಾಗಲೂ ತೋರಿದರು.) ಆಮೇಲೆ ತಾಯಿ ತಂದೆಯವರ ಸಂಪರ್ಕಕ್ಕೆ ಅಣ್ಣ ಬಸವಣ್ಣನವರು ಬಂದ ಬಗ್ಗೆ ಯಾವ ಮಾಹಿತಿ ಸಿಗುವದಿಲ್ಲ. ಕೂಡಲಸಂಗಮದ ಗುರುಕುಲದಲ್ಲಿ ಅವರ ಜ್ಞಾನಾರ್ಜನೆ ನಿರಾತಂಕವಾಗಿ ನಡೆಯಿತು.

7. ಕೃ ಶ 1154: ಚೆನ್ನಬಸವಣ್ಣನವರರ ಜನನ
ಅಣ್ಣಬಸವಣ್ಣನವರ ವಿದ್ಯಾಭ್ಯಾಸ ಮುಗಿಯುವ ಸಂದರ್ಭದಲ್ಲಿ ನಡೆದ ತುಂಬಾ ಹರ್ಷದಾಯಕ ವಿಚಾರವೇ ಅಕ್ಕನಾಗಮ್ಮನವರು ತನ್ನ ಇಪ್ಪತ್ತೈದು ವಯಸ್ಸಿನಲ್ಲಿ ಗಂಡುಮಗುವಿನ ತಾಯಿಯಾದದ್ದು. ಆ ಮಗುವಿಗೆ ಚನ್ನಬಸವಣ್ಣ ಎನ್ನುವ ಹೆಸರಿಟ್ಟು ತಮ್ಮ ತಮ್ಮನ ಹೆಸರನ್ನು ಮಗನ ಹೆಸರಿಗೆ ಜೋಡಿಸಿ ಆನಂದಪಾಟ್ಟರು ಅಕ್ಕನಾಗಮ್ಮ. ಆ ಮಗುವಿನೊಂದಿಗೆ ಆಟವಾಡುತ್ತ ತಾವು ಮಗುವಾಗುತ್ತಿದ್ದರು ಅಣ್ಣ ಬಸವಣ್ಣ.

8. ಕೃ ಶ 1155: ಮಂಗಳವೇಢೆಗೆ ಆಗಮನ
ಕಲಚೂರಿ ಚಾಲುಕ್ಯರ ಆಡಳಿತಕ್ಕೊಳಪಟ್ಟ ಕೂಡಲಸಂಗಮದ ಗುರುಕುಲ ಆಗ ತುಂಬಾ ಪ್ರಶಿದ್ದವಾದ ಗುರುಕುಲ ಮತ್ತು ಅಲ್ಲಿಯ ಎಲ್ಲ ಕಾರ್ಯಕ್ರಮಗಳು ಸಂಪ್ರದಾಯಬದ್ದವಾಗಿ ನಡೆಯುತ್ತಿದ್ದವು. ಅದರಲ್ಲೂ ಅಧ್ಯಯನ ಮುಗಿಸಿ ಹೊರಡುವ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಕಾರ್ಯಕ್ರಮ ಆವ್ಹಾನಿತ ಅತಿಥಿಗಳ ಸಮ್ಮುಖದಲ್ಲಿ ಬಹಳ ಅದ್ದೂರಿಯಾಗಿ ನಡೆಯುತ್ತಿತ್ತು.
ಕೃ ಶ 1153 ರಲ್ಲಿ ಮುಮ್ಮಡಿ ತೈಲ ಚಾಳುಕ್ಯ ಸಾಮ್ರಾಟನಾಗಿದ್ದರೂ ಬಿಜ್ಜಳ ಸ್ವತಂತ್ರನಾಗಿದ್ದ. ಅವನು ಮಂಗಳವೆಢೆಯಿಂದ ಆಡಳಿತ ನಡೆಸುತ್ತಿದ್ದ. ಅವನ ರಾಜ್ಯದಲ್ಲಿ ಬಲದೇವ ಮಂತ್ರಿಯಾಗಿದ್ದರೆ ಅವನ ತಮ್ಮ ಸಿದ್ದರಸ ಅವರು ದಂಡನಾಯಕರಾಗಿದ್ದರು. ಈ ಸಲದ ಅತಿಥಿಗಳಾಗಿ ಅವರು ಕುಟುಂಬ ಸಮೇತ ಆಗಮಿಸುತ್ತಿರುವದು ಅಕ್ಕನಾಗಮ್ಮನವರಿಗೆ ತುಂಬಾ ಸಂತೋಷದ ವಿಷಯವಾಗಿತ್ತು ಕಾರಣ ಅವರು ಆಕೆಯ ಸೋದರಮಾವಂದಿರು. (ತಾಯಿಯ ಅಣ್ಣ ತಮ್ಮಂದಿರು).
ಅಂದಿನ ಕಾರ್ಕ್ರಮದ ಮುಖ್ಯ ಆಕರ್ಷಣೆಯೇ ಅಣ್ಣ ಬಸವಣ್ಣನವರು. 21 ವರ್ಷದ ಸೌಜನ್ಯಮೂರ್ತಿ ಲವಲವಕೆಯ ಜ್ಞಾನಿ ತಮ್ಮ ಸೋದರಳಿಯ ಎನ್ನುವ ವಿಷಯ ಬಲದೇವ ಮತ್ತು ಸಿದ್ದರಸರಿಗೆ ಹೆಮ್ಮೆ ತಂದಿತ್ತು. ತಮ್ಮ ಮಗಳು ಗಂಗಾಂಬಿಕೆಗೆ ಇವನಿಗಿಂತ ಸ್ಪುರದ್ರೂಪಿ ಜಾಣ ವರ ಸಿಗುವದಿಲ್ಲ ಎನಿಸಿದ ಅವರು ಅಕ್ಕನಾಗಮ್ಮ ಮತ್ತು ಅಣ್ಣ ಬಸವಣ್ಣವರ ಗುರುಗಳ ಮುಂದೆ ಈ ವಿಷಯ ಪ್ರಸ್ತಾಪಿಸಿದರು.

ಗುರುಗಳು ಅಣ್ಣ ಬಸವಣ್ಣನವರ ಮನವೊಲಿಸಿದರು. ಅಕ್ಕನಾಗಮ್ಮನವರ ಆಶೆ ಮತ್ತು ಗುರುಗಳ ಆದೇಶದಂತೆ ಒಪ್ಪಿದ ಅವರು ಎರಡು ಶರತ್ತುಗಳನ್ನು ಹಾಕಿದರು. ಅವು

A. ಕಾಯಕ ಮಾಡುತ್ತ ಸ್ವತಂತ್ರವಾಗಿ ಬದುಕಲು ಅವಕಾಶ ಕೊಡಬೇಕು.

B. ಅಕ್ಕನಾಗಮ್ಮ, ಶಿವದೇವ ಮತ್ತು ಚನ್ನಬಸವಣ್ಣನವರು ತಮ್ಮ ಜೊತೆ ಬರಬೇಕು.

ಈ ಎರಡು ಶರತ್ತುಗಳನ್ನು ಒಪ್ಪಿಕೊಂಡ ಮೇಲೆ ಮಂಗಳವೇಢೆಗೆ ಅಕ್ಕ, ಶಿವದೇವ ಮತ್ತು ಚನ್ನಬಸವಣ್ಣನವರ ಜೊತೆ ಬಂದು ಒಂದು ಮನೆ ಮಾಡಿ “ಕರಣಿಕ” ವೃತ್ತಿ ಕೈಕೊಂಡರು. ಆಮೇಲೆ ಬಲದೇವ ಮಂತ್ರಿಯ ಮಗಳಾದ ಗಂಗಾಂಬಿಕೆಯನ್ನು ಮದುವೆಯಾಗಿ ಗೃಹಸ್ಥ ಜೀವನವನ್ನು ನಡೆಸಿದರು.




ಮನೆಯ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಂಡವರು ಅಕ್ಕನಾಗಮನ್ನವರು. ಮುದ್ದಿನ ಕೂಸು ಚನ್ನಬಸವಣ್ಣನವರ ಪ್ರೀತಿಯಲ್ಲಿ ಮತ್ತು ಅವನಿಗೆ ಜ್ಞಾನಧಾರೆ ಎರೆಯುವದರಲ್ಲಿ ಗಂಗಾಂಬಿಕೆಯವರು ಮಗ್ನರಾದರು.

ಇಪ್ಪತ್ತೊಂದು ವರ್ಷದ ಯುವ ಅಣ್ಣ ಬಸವಣ್ಣನವರು ತಮ್ಮ ಪ್ರತಿಭೆಯಿಂದ ಕಾರಣಿಕ ಹುದ್ದೆಯಿಂದ ಮಂತ್ರಿಯಾದರು. ಮಹಾರಾಜ ಬಿಜ್ಜಳನ ಆಗ್ರಹಕ್ಕೆ ಮಣಿದು ಅವನ ಸಾಕುತಂಗಿ ಜ್ಞಾನನಿಧಿ ನೀಲಾಂಬಿಕೆಯವರನ್ನು ಅಣ್ಣ ಬಸವಣ್ಣ ಮದುವೆಯಾದರು. ನೀಲಾಂಬಿಕೆಯವರು ತಮ್ಮಲ್ಲಿರುವ ಜ್ಞಾನವನ್ನು ಚನ್ನಬಸವಣ್ಣನವರಿಗೆ ಧಾರೆ ಎರೆದರು. ಮನೆಯೇ ಬಾಲಕ ಚನ್ನಬಸವಣ್ಣನವರಿಗೆ ಗುರುಕುಲವಾಯಿತು.

9. ಕೃ ಶ 1160: ಬಸವಕಲ್ಯಾಣಕ್ಕೆ ಆಗಮನ

ರಾಜಕೀಯ ಕುಶಾಗ್ರಮತಿಯಾದ ಅಣ್ಣ ಬಸವಣ್ಣನವರು ತಮ್ಮ ಜನಪರ ಕಾಳಜಿಯಿಂದ ಸಾಮಾನ್ಯ ಜನರೆಲ್ಲರ ಪ್ರೀತಿಗಳಿಸಿದರು ಮತ್ತು ಮಹಾರಾಜ ಬಿಜ್ಜಳನ ಸ್ನೇಹದ ಫಲವಾಗಿ ತಮ್ಮ ಇಪ್ಪಾತ್ತರನೆಯ ವಯಸ್ಸಿನಲ್ಲಿ ಪ್ರಧಾನಮಂತ್ರಿಗಳಾದರು.
ಮಂಗಲವೇಡೆಯಿಂದ ಕಲ್ಯಾಣಕ್ಕೆ ರಾಜಧಾನಿ ಬದಲಿಸಿದಾಗ ಅಣ್ಣ ಕಲ್ಯಾಣಕ್ಕೆ ತನ್ನ ಸಂಸಾರದೊಂದಿಗೆ ಬಂದು ನೆಲೆಸಿದರು.




ಬಸವಣ್ಣನವರು ಸಾಮಾಜಿಕವಾಗಿ ಕ್ರಾಂತಿಕಾರಕ ಬದಲಾವಣೆ ತಂದು 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ಅನುಭವ ಮಂಟಪ ೧೨ನೇ ಶತಮಾನದಲ್ಲಿ ಎಲ್ಲಾ ಧರ್ಮದ ಶರಣರು, ಕವಿಗಳು ಮತ್ತು ತತ್ವಜ್ಞಾನಿಗಳು ಸೇರುತ್ತಿದ್ದ ಒಂದು ಸಾಮಾಜಿಕ-ಧಾರ್ಮಿಕ ಸಂಸತ್ತು. ಇದರಲ್ಲಿ ಎಲ್ಲಾ ಜಾತಿಯ ಎಲ್ಲಾ ವೃತ್ತಿಯ ಸಾಮಾನ್ಯ ಜನರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು ಹಾಗೂ ತಮ್ಮ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದರು.
ಅಣ್ಣ ಬಸವಣ್ಣನವರು ತಮ್ಮ ಕಾಯಕದಲ್ಲಿ ತಲ್ಲೀನರಾಗಿದ್ದರೆ ಬಾಲಕ ಚನ್ನಬಸವಣ್ಣ ತನ್ನ ಅತ್ತೆ ನೀಲಾಂಬಿಕೆಯರೊಡನೆ ಅನುಭವ ಮಂಟಪದ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು.
ಇನ್ನು ಅಕ್ಕನಾಗಮ್ಮನವರು, ಶಿವದೇವ ಮತ್ತು ಗಂಗಾಂಬಿಕೆಯರು ದಾಸೋಹದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಮಡಿವಾಳ ಮಾಚಿದೇವರು ಅನುಭವ ಮಂಟಕ್ಕೆ ಬರುವವರಿಗೆ ಆದರ ಸತ್ಕಾರ ಮಾಡುತ್ತಿದ್ದರು. ಹೀಗಾಗಿ ಮಡಿವಾಳ ಮಾಚಿದೇವರಿಗೆ ಕಲ್ಯಾಣಕ್ಕೆ ಬಂದ ಎಲ್ಲ ಕಾಯಕಯೋಗಿಗಳ ಜೊತೆ ಸ್ನೇಹವಿತ್ತು. ಕಾಯಕಯೋಗಿಗಳು ಅಕ್ಕನಾಗಮ್ಮನವರಲ್ಲಿ ತಾಯಿಯ ಮಮತೆ ಕಾಣುತ್ತಿದ್ದರು.
ಅಣ್ಣನವರ ಮನೆ ಮಹಾಮನೆಯಾಯಿತು. ದೇಶದ ಎಲ್ಲ ಭಾಗದ ಕಾಯಕಯೋಗಿಗಳು ಕಲ್ಯಾಣದೆಡೆಗೆ ಬರತೊಡಗಿದರು.

10. ಕೃ ಶ 1166: ಅನುಭವಮಂಟಪಕ್ಕೆ ಅಲ್ಲಮಪ್ರಭು ಅಧ್ಯಕ್ಷರಾದದ್ದು
ಅನುಭವ ಮಂಟಪದ ಪ್ರಥಮ ಅಧ್ಯಕ್ಷರಾಗಲು ಅಲ್ಲಮ ಪ್ರಭುಗಳು ಒಪ್ಪಿಕೊಂಡದ್ದು ಅನುಭವಮಂಟಪದ ಕಾರ್ಯಕ್ರಮಗಳಿಗೆ ಹೊಸ ರೂಪ ಮತ್ತು ಕಳೆ ತಂದಿತು.
ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಅಲ್ಲಮ ಪ್ರಭು ಅವಳ ಜೊತೆ ಸಂವಾದ ನಡೆಸಿದರು, ಮೊಳಿಗೆ ಮಾರಯ್ಯ ಕಾಶ್ಮೀರದ ಮಹಾರಾಜ ಅವರು ಕಲ್ಯಾಣದ ಅನುಭವ ಮಂಟಪದ ಸಮಾನತೆ ಮತ್ತು ಧಾರ್ಮಿಕ ಆಚರಣೆಗಳನ್ನು ಕಂಡು ಮನಸೋತು ಕಲ್ಯಾಣದಲ್ಲಿಯೇ ಕಟ್ಟಿಗೆ ಮಾರುವ ಕಾಯಕ ಕೈಗೊಂಡರು. ಬಸವಕಲ್ಯಾಣ ಲಕ್ಷದ ತೊಂಬತ್ತಾರು ಶರಣರ ನೆಲೆಯಾಯಿತು.
ವಿವಿಧ ಜಾತಿ, ಕಾಯಕದವರು ಅನುಭವ ಮಂಟಪದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಆಗ ಹನ್ನೆರಡು ವರ್ಷದ ಬಾಲಕ ಚನ್ನಬಸವಣ್ಣ ವಚನ ರಚಿಸಿ ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸುವಷ್ಟು ಮತ್ತು ಅನುಭವಗೋಷ್ಟಿ ನಡೆಸುವಷ್ಟು ಜ್ಞಾನಿಯಾಗಿದ್ದ.
ಶಿವಯೋಗಿ ಸಿದ್ದರಾಮೇಶ್ವರರಿಗೆ ದೀಕ್ಷೆ ನೀಡಿ ಅವರ ಗುರುವಾದ.
ಚನ್ನಬಸವಣ್ಣವರ ಬಗ್ಗೆ ಅಲ್ಲಮಪ್ರಭು ಹೇಳಿದ ಈ ಒಂದು ವಚನ ಗಮನಿಸಿ

> **"ಸದ್ಯೋಜಾತ ಬದ್ಧಜ್ಞಾನಿ, ವಾಮದೇವ ಆತುರಜ್ಞಾನಿ, ಅಘೋರ ಕೋಪಜ್ಞಾನಿ,**
>
> **ತತ್ಪುರುಷ ಕ್ಷಣಿಕಜ್ಞಾನಿ, ಈಶಾನ್ಯ ಅತೀತಜ್ಞಾನಿ_[ಇದು] ಪರಿಯಲ್ಲ ನೋಡಾ.**
>
> **ಗುಹೇಶ್ವರಲಿಂಗದಲ್ಲಿ ಅವಿರಳಜ್ಞಾನಿ ಚನ್ನಬಸವಣ್ಣ, [ಆತನ] ಶ್ರೀಪಾದಕ್ಕೆ**
>
> **ನಮೋನಮೋ ಎಂಬೆನು"** --- ಅಲ್ಲಮಪ್ರಭು

ಹಾಗಾಗಿಯೇ ಅಲ್ಲಮಪ್ರಭು ನಿರ್ಗಮನದ ನಂತರ ಚನ್ನಬಸವಣ್ಣನವರೇ ಅನುಭವ ಮಂಟದ ಪೂರ್ಣ ಜವಾಬ್ದಾರಿ ಹೊತ್ತು ಅದನ್ನು ಸುಸೂತ್ರವಾಗಿ ನಡೆಸಿಕೊಂಡು ಹೋದರು.
ಈ ಅವಧಿಯಲ್ಲಿ ಹೊಯ್ಸಳ ಸಾಮ್ರಾಜ್ಯದ ಮೇಲೆ ಚಾಲುಕ್ಯ ಆಧಿಪತ್ಯ ಸ್ಥಾಪನೆಯಾಗುವದರಲ್ಲಿ
ಅಣ್ಣ ಬಸವಣ್ಣನವರ ಆಡಳಿತ ವ್ಯವಸ್ಥೆಯೂ ಕಾರಣ.

11. ಕೃ ಶ 1176: ಕಲ್ಯಾಣ ಕ್ರಾಂತಿ
ಸಂಪ್ರದಾಯವಾದಿಗಳ ಅಸೂಯೆ, ಬಿಜ್ಜಳನ ಮಕ್ಕಳ ಅಧಿಕಾರದಾಸೆ ಮತ್ತು ಬಿಜ್ಜಳನ ದ್ವಂದ ನೀತಿ ಕಲ್ಯಾಣ ಕ್ರಾಂತಿಗೆ ಹೇಗೆ ಕಾರಣವಾಯಿತು ಎನ್ನುವದನ್ನು ವಿವರವಾಗಿ ಅರಿತಿದ್ದೇವೆ.

ನಾಲ್ವಂತ್ತೆಂಟು ವರ್ಷಗಳಲ್ಲಿ ಒಂದು ಕ್ಷಣ ಅಣ್ಣ ಬಸವಣ್ಣವರನ್ನು ಅಗಲದಿದ್ದ ಅಕ್ಕನಾಗಮ್ಮನವರು ಬಸವಕಲ್ಯಾಣ ಅಣ್ಣ ತೊರೆದಾಗ ಅವರ ಜೊತೆ ತನ್ನ ಗಂಡ ಶಿವದೇವನನ್ನು ಕಳುಸಿದರು.
ಕಲ್ಯಾಣದಲ್ಲಿದ್ದ ಎಲ್ಲ ಶರಣರನ್ನು ಸುರಕ್ಷಿತವಾಗಿ ಕಲ್ಯಾಣದಿಂದ ಉಳವಿಗೆ ಕರೆದುಕೊಂಡು ಹೋಗುವ ಕಾಯಕ ಕೈಕೊಂಡು ಅದರಲ್ಲಿ ಯಶಸ್ವಿಯಾದರು..
ತನ್ನ ಗಂಡನ ಜೊತೆಗೆ ಹೋಗದೇ ಶರಣರ ಮತ್ತು ವಚನಗಳ ರಕ್ಷಣೆಗೆ ನಿಂತು ಬಲಿಯಾದ ಗಂಗಾಂಬಿಕೆಯರ ತ್ಯಾಗ ಸ್ಮರಣೀಯ. ತನ್ನ ಮುದ್ದಿನ ತಮ್ಮನಿಗಿಂತ ಶರಣರ ರಕ್ಷಣೆಗೆ ನಿಂತು ಮಡಿವಾಳ ಮಾಚಿದೇವರ ಮತ್ತು ಅನೇಕ ಶರಣರ ಜೊತೆಗೂಡಿ ವಚನಗಳನ್ನು ರಕ್ಷಿಸಿದ ಅಕ್ಕನಾಗಮ್ಮನವರು ಎಲ್ಲರಿಗೂ ತಾಯಿಯಾದರು ಮತ್ತು ಪೂಜನೀಯರೂ ಆದರು. ಇದೇ ಕೆಲಸದಲ್ಲಿ ತೊಡಗಿದ ಮಡಿವಾಳ ಮಾಚಿದೇವರು, ಮಗ ಚನ್ನಬಸವಣ್ಣನವರು ಬಲಿಯಾದರೂ ತಮ್ಮ ಕಾಯಕ ನಿಲ್ಲಿಸದೇ ಕೊನೆಯ ಉಸಿರಿರುವ ತನಕ ವಚನ ರಕ್ಷಣೆ ಮತ್ತು ಶರಣ ಸಂಸ್ಕೃತಿ ಪ್ರಸಾರ ಮಾಡಿದರು. ಈ ರೀತಿ ತ್ಯಾಗಮೂರ್ತಿಗಳು ಇತಿಹಾಸದಲ್ಲಿ ಸಿಗುವದು ಅಪರೂಪ.

12. ಕೃ ಶ 1176 – ಕೃಶ1177: ಬಸವಕಲ್ಯಾಣದಿಂದ ಉಳವಿಯ ವರೆಗೆ ಪ್ರಯಾಣ.
ಮಹಾರಾಜ ಸೋಮೇಶ್ವರನ ಬಲಶಾಲಿ ಯೋಧರ ಪ್ರತಿರೋಧದ ನಡುವೆ ಕೋಟ್ಯಂತರ ವಚನಗಳನ್ನು ರಕ್ಷಿಸಿ ಲಕ್ಷಾಂತರ ಕಾಯಕಯೋಗಿಗಳಿಗೆ ಆಶ್ರಯ ಒದಗಿಸಿ ಸುಮಾರು 500 ಕಿಮೀ ದೂರದ ಉಳವಿಯವರೆಗೆ ಶರಣ ಸಂಸ್ಕೃತಿ ಪಸರಿಸಿದ ಘಟನೆ ಈ ಜಗತ್ತಿನಲ್ಲಿ ನಡೆದ ಅಪರೂಪದ ಘಟನೆ. ಆದರೆ ಇತಿಹಾಸಕಾರರ ಪಕ್ಷಪಾತಿ ಧೋರಣೆ ಮತ್ತು ಮಹಾರಾಜ ಮತ್ತು ಸಂಪ್ರದಾಯವಾದಿಗಳ ಸಂಚು ಮತ್ತು ಸುಳ್ಳು ಸುದ್ದಿ ಪ್ರಚಾರ ಮಾಡಿದ ಫಲವಾಗಿ ಈ ಘಟನೆ ಇತಿಹಾಸದ ಪುಟಗಳಿಂದ ಮರೆಯಾಗುತ್ತಿದೆ.
ಈ ಘಟನೆಗಳನ್ನು ಈಗಾಗಲೇ ವಿವರಿಸಿರುವೆ ಆದರೂ ಬೇರೆ ಬೇರೆ ದೃಷ್ಟಿಕೋನದಿಂದ ಅರಿಯುವ ಪ್ರಯತ್ನ ಮಾಡೋಣ.

13. ಕೃ ಶ 1177: ಚನ್ನಬಸವಣ್ಣನವರಿಂದ ಉಳವಿಯಲ್ಲಿ ಅನುಭವ ಮಂಟಪ ಮರುಸ್ಥಾಪನೆ.
ಊಳವಿ ತಲುಪಿದ ಮೇಲೆ ಆ ದಟ್ಟ ಕಾಡಿನ ಪರಿಸರದಲ್ಲಿ ವಚನ ರಕ್ಷಿಸಿ ಅಲ್ಲಿಗೆ ಬಂದ ಶರಣರಿಗೆ ದಾಸೋಹ ಕಲ್ಪಿಸುವಲ್ಲಿ ಅಕ್ಕನಾಗಮ್ಮ ನಿರತರಾದರೆ ಚನ್ನಬಸವಣ್ಣನವರು ಅನುಭವಮಂಟಪ ಮರುಸ್ಥಾಪಿಸಿ ಅಣ್ಣ ಬಸವಣ್ಣನವರ ಕನಸು ನನಸಾಗಿಸಲು ಪ್ರಯತ್ನಿಸಿದರು.

ಅಕ್ಕನಾಗಮ್ಮನವರು ಸನಿಹದ ಹಳ್ಳಿಗಳಿಗೆ ತೆರಳಿ ಶರಣ ಸಂಸ್ಕೃತಿ ಪ್ರಸಾರದಲ್ಲಿ ನಿರತರಾದರು.
ಸಂಚಿನ ಫಲವಾಗಿ ಚನ್ನಬಸವಣ್ಣ ಮತ್ತು ಅವರ ಪರಿಶ್ರಮದ ಫಲವಾಗಿ ರೂಪಗೊಂಡ ಉಳವಿಯ ಕಾರ್ಯಕ್ಷೇತ್ರ ಇಲ್ಲವಾದದ್ದು ಮತ್ತು ಶರಣರು ಚೆಲ್ಲಾಪಿಲ್ಲಿಯಾಗಿ ಚದುರಿಹೋದ ಸಮಾಚಾರ ನುಲಿಯ ಚಂದಯ್ಯನವರು ಅಕ್ಕನಾಗಮ್ಮನವರಿಗೆ ಮುಟ್ಟಿಸಿದರು.
ಆ ಆಘಾತಕರ ಘಟನೆಯ ಆಘಾತ ಸಹಿಸಿಕೊಂಡು ಶರಣರ ಅಭಿಪ್ರಾಯದಂತೆ ತರಿಕೇರೆಗೆ ಪ್ರಯಾಣ ಮಾಡಿ ತಮ್ಮ ಕಾಯಕ ಮುಂದುವರೆಸಿದ ಅಕ್ಕನಾಗಮ್ಮನವರು ಚಿರಸ್ಮರಣೀಯರು.

14. ಕೃ ಶ1179: ತರಿಕೇರಿಗೆ ಅಕ್ಕನಾಗಮ್ಮನವರ ಆಗಮನ ಅರವತ್ತು ವರ್ಷದ ಆ ಇಳಿವಯಸ್ಸಿನಲ್ಲಿ ತರಿಕೇರಿಯಿಂದ ತುಸು ದೂರದಲ್ಲಿಯ ಕಲ್ಲತ್ತಗಿರಿಯ ರುದ್ರರಮಣೀಯ ಸ್ಥಳದಲ್ಲಿದ್ದ ಗವಿಗಳಲ್ಲಿ ವಾಸಿಸತೋಡಗಿದರು. ಅಲ್ಲಲ್ಲಿ ಚದುರಿಹೋಗಿದ್ದ ಶರಣರೆಲ್ಲರೂ ಅಲ್ಲಿಗೇ ಬರತೊಡಗಿದರು. ಅವರೆಲ್ಲರ ಸಹಕಾರದಿಂದ ಅನುಭವಮಂಟಪ ಮರುಸ್ಥಾಪಿಸಿ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡರು ಹೋದರು ಅಕ್ಕನಾಗಮ್ಮ.
15. ಕೃ ಶ 1180 ರಿಂದ --?---: ಅಕ್ಕನಾಗಮ್ಮ ಪರ್ಯಟನೆ
ಸಾಮಾನ್ಯವಾಗಿ ಎಂಬತ್ತು ವರ್ಷದ ಹೆಣ್ಣುಮಕ್ಕಳು ಆರೋಗ್ಯವಾಗಿದ್ದು ಒಕ್ಕುಲುತನ ಮೇಲ್ವಿಚಾರಣೆ ಮಾಡುವವರು ಹಳ್ಳಿಗಳಲ್ಲಿ ಸಾಕಷ್ಟು ಜನ ಸಿಗುತ್ತಾರೆ. ಅವರ ಆ ಆರೋಗ್ಯಕ್ಕೆ ಕಾರಣವೇ ಸತತ ಪರಿಶ್ರಮ ಮತ್ತು ನಿಯಮಿತ ಜೀವನ ಪದ್ಧತಿ. ಅಕ್ಕನಾಗಮ್ಮನವರು ಸುಮಾರು ಎಂಬತ್ತು ವರ್ಷದ ವರೆಗೆ ಸಂಚರಿಸಿರಬಹುದು ಎಂದು ಅಂದಾಜಿಸಬಹುದು. ಆದರೆ ಅದಕ್ಕೆ ಎಲ್ಲಿಯೂ ಪುರಾವೆಗಳಿಲ್ಲ.
ತರಿಕೇರಿಯಲ್ಲಿ ಅವರ ಐಕ್ಯ ಮಂಟಪವಿರುವದರಿಂದ ಅವರು ಅಂತಿಮ ದಿನಗಳನ್ನು ಆ ಊರ ಸನಿಹದಲ್ಲಿ ಕಳೆದಿರಬಹುದು ಎಂದು ಹೇಳಬಹುದು.




16. ನುಲಿಯ ಚಂದಯ್ಯನವರು ಕೊನೆಯವರೆಗೆ ಅಕ್ಕನಾಗಮ್ಮನರ ಜೊತೆಗಿದ್ದು ಆನಂತರ ಸಮೀಪದ (ಈಗಿನ ನುಲೆನೂರು) ಪದ್ಮಾವತಿ ಎಂಬ ಊರಿಗೆ ಬರುತ್ತಾರೆ. ದುಮ್ಮಿರಾಯನ ಹೆಂಡತಿಯಾದ ಪದ್ಮಾವತಿ ಚಂದಯ್ಯನವರಿಂದ ಧರ್ಮೋಪದೇಶವನ್ನ ಪಡೆದು ಅವರ ಅಪ್ಪಣೆಯ ಪ್ರಕಾರ ಒಂದು ಕೆರೆಯನ್ನು ಕಟ್ಟಿಸುತ್ತಾರೆ ಆ ಕೆರೆಗೆ ಇಂದಿಗೂ ಪದ್ಮಾವತಿ ಅಂತಾನೆ ಸರಕಾರಿ ದಾಖಲೆಗಳುಂಟು. ಕೆರೆ ಸಿದ್ದವಾದ ಮೇಲೆ ಕೆರೆಯ ಏರಿಯ ಮೇಲೊಂದು ಚಂದಯ್ಯನವರಿಗೊಸ್ಕರ ಮಠವೊಂದನ್ನ ಕಟ್ಟಿಸಿಕೊಡುತ್ತಾರೆ ,ಆ ಮಠದಲ್ಲಿ ಚಂದಯ್ಯ ಶರಣರು ಕೊನೆಯವರೆಗೂ ಅನುಭಾವ ಗೋಷ್ಠಿ ನಡೆಸುತ್ತಿದ್ದರು ಅನ್ನುವುದು ತಿಳಿದು ಬರುತ್ತದೆ, ಕೆಲವು ವರ್ಷಗಳ ನಂತರ ಚಂದಯ್ಯನವರು ಲಿಂಗೈಕ್ಯರಾಗಲು ಅವರ ಕ್ರಿಯಾ ಸಮಾಧಿಯನ್ನು ಅವರ ಮಠದಲ್ಲೇ ಮಾಡಲಾಗಿತ್ತು ಅಂತ ತಿಳಿದು ಬರುತ್ತದೆ ಇವರ ಲಿಂಗೈಕ್ಯದ ನಂತರ ಪದ್ಮಾವತಿ ಊರು ಚಂದಯ್ಯನವರ ಕಾಯಕ ಸೂಚಿಸುವ "ನುಲೆನೂರು" ಎಂದಾಗಿ ಕರೆಸಿಕೊಳ್ಳುತಿದೆ.



“ಧನಮಿಲ್ಲದೊಡೇನು, ಧಾನ್ಯಮಿಲ್ಲದೊಡೇನು?
ಮನೆಯಿಲ್ಲದೊಡೇನು, ಏನುಮಿಲ್ಲದೊಡೇನು?
ತನುವಿರ್ದಪುದು ತನುವಿನೊಳಗರ್ಥವಿತ್ತಪೆಂ;
ಮನವಿರ್ದಪುದು ಮನದೊಳರ್ಥಮಂ ಇತ್ತಪೆಂ
ಹರಣವಿದೆ, ಹರಣದೊಳಗರ್ಥಮಂ ಕೊಟ್ಟಪೆಂ;
ಎರಡು ಕಣ್ಣಿವೆ, ಎರಡರೊಳೊಂದಂ ಕೊಟ್ಟಪೆಂ”----ಹರಿಹರ

**ಅಕ್ಕ ನಾಗಮ್ಮನವರ ಉಳವಿಯಿಂದ ತರಿಕೇರಿಯವರೆಗಿನ ಪಯಣ:**

ಅಕ್ಕನಾಗಮ್ಮನವರು ಸಾಗಿದ ಮಾರ್ಗವನ್ನು ವಿವರಿಸುವ ಯಾವ ವಿವರಗಳು ಲಭ್ಯವಿಲ್ಲ.

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಕಲ್ಲು ಮಂಟಪ ಇದೆ ಅದರಲ್ಲಿ ನುಲಿಯ ಚಂದಯ್ಯನವರ, ಅಗ್ಗವಣಿಯ ಹೊನ್ನಯ್ಯ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣಾ, ಜೇಡರ ದಾಸಿಮಯ್ಯ, ಆಯ್ದಕಿ ಮಾರಯ್ಯಾಯ, ಹಾಳಿನ ಹಂಪಣ್ಣ, ಬ್ರುಹ್ಮಯ್ಯಾಗಳ ಮೂರ್ತಿಗಳನ್ನ ಅವರವರ ಅಂಕಿತ ನಾಮದೊಡನೆ ಕೆತ್ತಿದ್ದನ್ನು ನೋಡಿದರೆ ಆ ಶರಣರು ಬನವಾಸಿಗೆ ಬಂದಿರುವದು ಗೊತ್ತಾಗುತ್ತದೆ. ಆದರೆ ಅವರ ಜೊತೆ ಅಕ್ಕನಾಗಮ್ಮನವರಿದ್ದ ಪ್ರಸ್ತಾಪವಿಲ್ಲ.

ಸಾಹಿತ್ಯದಲ್ಲಿ ನಮಗೆ ಸಿಗುವ ಮಾಹಿತಿ

1. ಅಕ್ಕನಾಗಮ್ಮ ಕಲ್ಯಾಣದ ಮಹಾಮನೆ, ಅನುಭವ ಮಂಟಪಗಳಲ್ಲಿ ಅನನ್ಯ ಕಾರ್ಯಕ್ಷಮತೆಯನ್ನು ತೋರುತ್ತಾಳೆ.
2. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣ ಬಳಗದ ನೇತೃತ್ವ ವಹಿಸಿ ಉಳುವಿಗೆ ಬರುತ್ತಾಳೆ.
3. ಚೆನ್ನಬಸವಣ್ಣನ ಐಕ್ಯದ ನಂತರ ಚಿಕ್ಕಮಗಳೂರು ಜಿಲ್ಲೆ ಎಣ್ಣೆಹೊಳೆ ತೀರದ ತರೀಕೆರೆಯಲ್ಲಿ ಬಯಲಾಗುತ್ತಾಳೆ.

ಕಲ್ಯಾಣದಿಂದ ಭೀಮಾ ನದಿವರೆಗೆ ಶರಣರು ಸಾಗಿದ ಹಾದಿ ಗುರುತಿಸಲು ಮಹಾದೇವ ಮಂದಿರಗಳು ಸಹಾಯಕವಾಗಿದ್ದವು. ಭೀಮಾನದಿದಂಡೆಯಿಂದ ಉಳವಿಯವರೆಗೆ ಶರಣರು ಸಾಗಿದ ಮಾರ್ಗ ಗುರುತಿಸಲು ವೀರಭದ್ರೇಶ್ವರ ಮತ್ತು ಶರಣರ ಹೆಸರಿನ ಮಂದಿರಗಳು ನೆರವಾಗಿದ್ದವು.

ಮಲಪ್ರಭಾ ನದಿಯ ದಡದಲ್ಲಿ ಘಟನೆಗಳ ನಂತರ ಮಡಿವಾಳ ಮಾಚಿದೇವರು ವೀರಭದ್ರೇಶ್ವರರ ಅವತಾರ ಎನ್ನುವ ಮಾತು ಜನಮನದಲ್ಲಿ ಬೇರುಬಿಟ್ಟಿತ್ತು. ಅವರಿಗೆ ಮಾರ್ಗದರ್ಶನ ಮಾಡಿದ ಚನ್ನಬಸವಣ್ಣ ಮತ್ತು ಅಕ್ಕನಾಗಮ್ಮ ಜನರಿಗೆಲ್ಲ ದೇವತಾ ಸ್ವರೂಪರಾಗಿದ್ದರು ಅವರು ನಡೆದಾಡಿದ ಮತ್ತು ವಾಸಿಸುವ ಭಾಗದಲ್ಲಿ ಅವರ ಸ್ಮರಣಾರ್ಥ ಮಂದಿರಗಳು ನಿರ್ಮಾಣವಾದದ್ದು ಖಂಡಿತ.

ನಮ್ಮಲ್ಲಿ ಸ್ವರ್ಗಸ್ಥರಾದವರ ಹೆಸರಿನಲ್ಲಿ ಮಂದಿರ ನಿರ್ಮಾಣವಾಗುವದು ರೂಢಿಯಲ್ಲಿರುವದರಿಂದ ಮಡಿವಾಳ ಮಾಚಿದೇವರ (ವೀರಭದ್ರೇಶ್ವರ) ಹೆಸರಿನಲ್ಲಿ ಮಂದಿರಗಳ ನಿರ್ಮಾಣ ಆಗಿರಬೇಕು ಎನಿಸುತ್ತಿದೆ.
ಅದಕ್ಕಾಗಿ ಅಕ್ಕನಾಗಮ್ಮನವರು ಮತ್ತು ನುಲಿಯ ಚಂದಯ್ಯನವರು ಸಾಗಿದ ಮಾರ್ಗ ಗುರುತಿಸಲು Google map ನಲ್ಲಿ ಉಳವಿಯಿಂದ ಅನೇಕ ಗ್ರಾಮಗಳಲ್ಲಿರುವ ವೀರಭದ್ರೇಶ್ವರ ಮಂದಿರಗಳನ್ನು ಗುರುತಿಸಿದೆ. ನೂರಾರು ಗ್ರಾಮಗಳಲ್ಲಿ ವೀರಭದ್ರ ಮಂದಿರಗಳಿರುವದು ಗೊತ್ತಾಯಿತು. ಅವುಗಳ ನಿರ್ಮಾಣ ಆದ ಕಾಲ ಗೊತ್ತಿಲ್ಲ. ಆ ಗ್ರಾಮಗಳಲ್ಲಿ ಕೆಲವೊಂದು ಗ್ರಾಮಗಳನ್ನು ಇಲ್ಲಿ ಉಲ್ಲೇಖಿಸುತ್ತಿರುವೆ.
ಉಳವಿ (Ulavi)
–>55 ಕಿಮೀ ತೊಗ್ರಳ್ಳಿ (Togralli)
–> 18 ಕಿಮೀ ಹಾನಗಲ್ (Hanagallu) ಕದಂಬರ ಒಂದು ಕಾಲದ ರಾಜಧಾನಿ. ಉಳವಿಯಿಂದ 55 ಕಿಮೀ ದೂರ
–>70 ಕಿಮೀ ಕ್ಯಾಸನೂರ (Kyasanur)
–>65 ಕಿಮೀ ರಟ್ಟಿಹಳ್ಳಿ Rattihalli ತುಂಬಾ ಪುರಾತನವಾದ ವೀರಭದ್ರೇಶ್ವರ ಮಂದಿರವಿದೆ.
–> 8 ಕಿಮೀ ಕೋಟೆಮಲ್ಲೂರ Kotemallur–>25 ಕಿಮೀ ಹೊನ್ನಾಳಿ Honnali
–> 15 ಕಿಮೀ ನ್ಯಾಮತಿ Nyamati –> 5 ಕಿಮೀ ದೊಡ್ಡೆಥಿನಹಳ್ಳಿ Doddethinahalli
–> 7 ಕಿಮೀ ಮದನಭಾವಿ Madanabhavi –>40 ಕಿಮೀ ಹೊಸಹಳ್ಳಿ Hosahalli
–> 30 ಕಿಮೀ ಚಿಳೂರ Chilur–>
–> 40 ಕಿಮೀ ಹೊಲೆಹೊನ್ನೂರ Holehonnur–>
–> 10 ಕಿಮೀ ಹೊಸುಡಿ Hosudi –> 16 ಕಿಮೀ ಭದ್ರಾವತಿ Bhadravati–>
–> 45 ಕಿಮೀ ಮಲೆನಹಳ್ಳಿ Malenahalli
–>19 ಕಿಮೀ ಮುದಗುಂದಿ Mudugundi –> 43 ಕಿಮೀ ಅನಿವಾಳ Anival
–>50 ಕಿಮೀ ಗುಂಡೆರಿ Gunderi
ಈ ವೀರಭದ್ರೇಶ್ವರ ಮಂದಿರಗಳನ್ನು ಗುರುತಿಸಿದಾಗ ನನಗೊಂದು ಆಶ್ಚರ್ಯ ಕಾದಿತ್ತು.
ತರಿಕೇರೆ ಮತ್ತು ನುಲೇನೂರ ಊರುಗಳ ಮೂಲಕ ಹೋಗುವ ಒಂದು ದಾರಿ ಗೋಚರಿಸಿತು. ತರಿಕೇರಿಯಲ್ಲಿ ಅಕ್ಕನಾಗಮ್ಮನವರ ಐಕ್ಯ ಮಂಟಪ ಮತ್ತು ನುಲೇನೂರಿನಲ್ಲಿ ನುಲಿಯ ಚಂದಯ್ಯನವರ ಮಂದಿರವಿರುವದು ಗೊತ್ತಾಗುತ್ತದೆ.


Ulavi
Haveri
Hanagal Veerabhadra Ancient Temple
Veerabhadreshwara Temple,Wasan
Veerabhadreshwara Temple - Akki Alur
Ranebennur
Uchchangi
Shree Veerabhadreshwara temple malagunda
Virabadreswara Temple -Kyasnur
Davangere
Veerabhadreshwara Temple -Neralige
Shree Veerabhadreshwara Shivamogga,
Shree Veerabhadreshwara Temple - Chikkadagodu,
Puttanahalli
Veerabhadreshwara Temple -Shankrikoppa
The Ancient Rattihalli Shree Veerabhadreshwara Temple
Chitradurga
Veerabhadreshwara temple - Hindu templeMasu
Veerabhadreshwara Temple Hallur -Kamalapur
Sri Veerabhadreshwara Temple - Kotemalluru,
Veerabhadra temple - Honnali
Shree Veerabhadreshwara Temple - Madanabhavi,
sri veerabhadreshwara temple -Hosahalli
Kumta
Chandaavara
Sri Veerabhadra Swami - Hindu templeChilur
R.Nulenur
Sri Veerabhadreshwara Swami Temple - Hindu templeGoolihatti
Sagar
Veerabhadreshwara temple - Marishettyhalli,
Honnavar
Sri Veerabhadreshwara Swamy Temple Hole Hanasavadi,
Veerabhadreshwara Gudi - Kodihalli,
Sri veerabhadreshwara temple - KAgekoDamagge,
Veerabhadra Temple -Hosudi
Veerabhadreshwara Swamy Temple - Garagadahalli,
Veerabhadreshwara Temple - Hindu templeKuntinamadu,
Veerabhadreshwara Temple -Mudugundi,
SRI VEERABHADRA TEMPL
Bhatkal
Tarikere
Google Earth
Imagery Date: 12/14/2015


Ulavi
Haveri
Hanagal Veerabhadra Ancient Temple
Veerabhadreshwara Temple,Wasan
Veerabhadreshwara Temple - Akki Alur
Ranebennur
Uchchangi
Shree Veerabhadreshwara temple malagunda
Virabadreswara Temple -Kyasnur
Davangere
Veerabhadreshwara Temple -Neralige
Shree Veerabhadreshwara Shivamogga,
Shree Veerabhadreshwara Temple - Chikkadagodu,
Puttanahalli
Ankola
Veerabhadreshwara Temple -Shankrikoppa
The Ancient Rattihalli Shree Veerabhadreshwara Temple
Veerabhadreshwara temple - Hindu templeMasu
Veerabhadreshwara Temple Hallur -Kamalapur
Sri Veerabhadreshwara Temple - Kotemalluru,
Veerabhadra temple - Honnali
Shree Veerabhadreshwara Temple - Madanabhavi,
sri veerabhadreshwara temple -Hosahalli
Kumta
Chandaavara
Sri Veerabhadra Swami - Hindu templeChilur
R.Nulenur
Sri Veerabhadreshwara Swami Temple - Hindu templeGoolihatti
Sagar
Veerabhadreshwara temple - Marishettyhalli,
Honnavar
Sri Veerabhadreshwara Swamy Temple Hole Hanasavadi,
Veerabhadreshwara Gudi - Kodihalli,
Sri veerabhadreshwara temple - KAgekoDamagge,
Veerabhadra Temple -Hosudi
Veerabhadreshwara Swamy Temple - Garagadahalli,
Veerabhadreshwara Temple - Hindu templeKuntinamadu,
Veerabhadreshwara Temple -Mudugundi,
Bhatkal
Tarikere
Google Earth
Imagery Date: 12/14/2015

ನನಗೆ ಅಕ್ಕನಾಗಮ್ಮನವರು ಸಾಗಿದ ದಾರಿ ಇದುವೇ ಎಂದು ನಿರ್ಧರಿಸುವದು ಸುಲಭವಾಯಿತು.
ಚಿಕ್ಕಮಂಗಳೂರ ಜಿಲ್ಲೆಯಲ್ಲಿಯ ಒಂದು ಊರು ತರೀಕೆರೆ. ಘಟ್ಟದ ಮಗ್ಗಲು ಸುಂದರವಾದ ಪರಿಸರದಲ್ಲಿರುವ ಊರು. ಊರ ಸುತ್ತಲೂ ಸಣ್ಣ ದೊಡ್ಡ ಕೆರೆಗಳಿವೆ. ಊರ ನಡುವೆಯೂ ಒಂದು ಸಣ್ಣ ಕೆರೆಯಿದೆ.
ಅಲ್ಲಿ ಅಕ್ಕನಾಗಮ್ಮ ಐಕ್ಯ ಸ್ಥಳ ಇದೆ. ಅಕ್ಕನಾಗಮ್ಮನವರ ಐಕ್ಯ ಸ್ಥಳ ಒಂದು ಸಣ್ಣ ಪುರಾತನವಾದ ಮಂದಿರವಾಗಿದ್ದು ಒಳಗೆ ಶಿವಲಿಂಗವಿದೆ. ಯಾವ ರೀತಿಯ ದುರಸ್ತಿ ಕಾಣದ ಸ್ಥಿತಿಯಲ್ಲಿರುವ ಈ ಮಂದಿರದಲ್ಲಿ ಭಕ್ತರು ಪೂಜೆ ಮಾಡುತ್ತಾರೆ.
ಅಕ್ಕನಾಅಗಮ್ಮನವರು ಇಲ್ಲಿ ಐಕ್ಯವಾಗಿದ್ದಾರೆ ಹಾಗಾದರೆ ಅವರು ವಾಸವಿದ್ದದ್ದೆಲ್ಲಿ? ಎನ್ನುವ ಪ್ರಶ್ನೆಗೆ ಸಿಗುವ ಉತ್ತರ “ಎಣ್ಣೆಹೊಳೆ” ದಡದಲ್ಲಿ.
ಆದರೆ ನನಗಿನ್ನೂ ಬಗೆಹರಿಯದ ವಿವರಗಳಲ್ಲಿ ಸಿಗುವ “ಎಣ್ಣೆಹೊಳೆ” ಎಲ್ಲಿದೆ ಎನ್ನುವದು. ಅದಕ್ಕಾಗಿ Google map ನಲ್ಲಿ ಹುಡುಕಾಡಿದಾಗ ನನಗೆ ಮೂರು ಪ್ರದೇಶಗಳ ವಿವರ ದೊರೆತವು. ದೊರೆತ ಮಾಹಿತಿಗಳು.

1. ಎಣ್ಣೆಹೊಳೆ ನದಿ.
   “ಎಣ್ಣೆಹೊಳೆ” ಎನ್ನುವ ಗ್ರಾಮವೂ ಮತ್ತು ನದಿ ಸಿಕ್ಕರೂ ಅವೆರಡು ಇರುವದು ತರಿಕೆರೆಯಿಂದ ಸುಮಾರು ನೂರು ಕಿ ಮೀ ದೂರದಲ್ಲಿ ಮಂಗಳೂರಿನಿಂದ 75 ಕಿಮೀ ದೂರದಲ್ಲಿ.
   ಜಗತ್ತಿನಲ್ಲಿಯೇ ಈ “ಎಣ್ಣೆಹೊಳೆ” ತುಂಬ ವಿಶಿಷ್ಟವಾದದ್ದು. ಇದು ಎರಡು ಭಾಗಗಳಾಗಿ ಒಂದು ನದಿ ಅರಬೀಸಮುದ್ರಕ್ಕೂ ಇನ್ನೊಂದು ಹೇಮಾವತಿ ನದಿಕೂಡಿ ಬಂಗಾಲ ಉಪಸಾಗರಕ್ಕೂ ಕೂಡುತ್ತದೆ. ಎರಡು ದಿಕ್ಕುಗಳಲ್ಲಿ ಹರಿದು ಎರಡು ಸಾಗರ ಸೇರುವ ನದಿ ಇದು.
2. ಎಣ್ಣೆಹೊಳೆ ಕೆರೆ:
   ಈ ಕೆರೆ “ಎಣ್ಣೆಹೊಳೆ ಕೆರೆ” ಮೈಸೂರು ಸನಿಹದಲ್ಲಿದೆ. ಈ ಭಾಗದಲ್ಲಿಯೂ ಶರಣ ಸಂಪ್ರದಾಯ ಮುಂದುವರೆದುಕೊಂಡು ಬಂದಿರುವದನ್ನು ನೋಡಿದರೆ ಇಲ್ಲಿಯವರೆಗೆ ಅಕ್ಕನಾಗಮ್ಮನವರು ಬಂದುಹೋಗಿರಬೇಕು ಎನ್ನಿಸುತ್ತಿದೆ.
3. ಎಣ್ಣೆಹೊಳೆ ಕೊಪ್ಪಲು:
   “ಎಣ್ಣೆಹೊಳೆ ಕೊಪ್ಪಲು” ಕಾವೇರಿ ನದಿ ದಡದಲ್ಲಿದೆ. ತುಂಬಾ ಸುಂದರ ಪರಿಸರದಲ್ಲಿರುವ ಈ ಸ್ಥಳದಲ್ಲಿ ಅನೇಕ ಮಂದಿರಗಳಿವೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಲೂಕಿನಲ್ಲಿರುವ ಗ್ರಾಮ. ಈ ಭಾಗದಲ್ಲಿಯೂ ಶರಣ ಸಂಪ್ರದಾಯ ಮುಂದುವರೆದುಕೊಂಡು ಬಂದಿರುವದನ್ನು ನೋಡಿದರೆ ಇಲ್ಲಿಯವರೆಗೆ ಅಕ್ಕನಾಗಮ್ಮನವರು ಬಂದುಹೋಗಿರಬೇಕು ಎನ್ನಿಸುತ್ತಿದೆ.

ಆದರೆ ಈ ಯಾವ ಜಾಗದಲ್ಲಿಯೂ ಅಕ್ಕನಾಗಮ್ಮನವರಿಗೆ ಸಂಬಂದಿಸಿದ ಯಾವ ವಿವರಗಳು ಸಿಗುವದಿಲ್ಲ.
ಹಾಗಾದರೆ “ಎಣ್ಣೆಹೊಳೆ” ಎಲ್ಲಿದೆ? Google map ನಲ್ಲಿ ಉತ್ತರ ಸಿಗದ ಮನದ ಪ್ರಶ್ನೆಗೆ ಉತ್ತರ
ಶ್ರೀ ಮನಸುಳಿ ಮೋಹನ್ ತರಿಕೇರಿ ಅವರಿಂದ ಸಿಕ್ಕಿತು.
(ಗೆಳೆಯ ಭೀಮನಗೌಡರ ಇವರ ವಿವರ ಕಳಿಸಿದ್ದರು).
ಅವರೊಡನೆ ನಡೆದ facebook chat ಇಲ್ಲಿದೆ
**ಗುರು** : ತರಿಕೇರಿಗೂ ಎಣ್ಣೆಹೊಳೆಗೂ ಇರುವ ದೂರ ತಿಳಿಸುವಿರಾ ದಯವಿಟ್ಟು
**ಮೋಹನ್:** ಎರಡು ಕೂಡ ತರೀಕೆರೆ ನಗರದೊಳಗೆ ಇರುವುದು.... ಎಣ್ಣೆಹೊಳೆ ದಂಡೆಯಲ್ಲೇ ಅಕ್ಕನ ಗದ್ದುಗೆ ಇರುವುದು ಶರಣು ಶರಣಾರ್ಥಿ
**ಗುರು** : ಧನ್ಯವಾದಗಳು. ನನಗೆ Google map ನಲ್ಲಿ ಐಕ್ಯಮಂಟಪ ಸಿಕ್ಕಿದೆ ಆದರೆ ಎಣ್ಣೆಹೊಳೆ ಸಿಗುತ್ತಿಲ್ಲ. ನನ್ನ ಕಳೆದ ಕೆಲವು ದಿನಗಳ Facebook post ಓದಿ ಅಭಿಪ್ರಾಯ ತಿಳಿಸಿ. ಭೀಮನಗೌಡರು ನಿಮ್ಮನ್ನು ಸಂಪರ್ಕಿಸಲು ತಿಳಿಸಿದ್ದು ಅನುಕೂಲವಾಯಿತು.
**ಮೋಹನ್** : ಸರ್ ಬನ್ನಿ ತರೀಕೆರೆಗೆ ನಾನು ನಿಮ್ಮನ್ನು ಗೌರವದಿಂದ ಕಂಡು, ಅಕ್ಕನ ಗದ್ದುಗೆ, ಎಣ್ಣೆಹೊಳೆ ಎರಡು ಕಿ.ಮೀ ದೂರದಲ್ಲಿರುವ ನುಲಿಯ ಚಂದಯ್ಯನ ಗದ್ದುಗೆ. ತರೀಕೆರೆಯಿಂದ 15ಕಿ ಮೀ ದೂರ ಇರುವ ಕಲ್ಲತ್ತಿಫಾಲ್ಸ್, ಕೆಮ್ಮಣ್ಣುಗುಂಡಿ ಹೆಬ್ಬೆ ಫಾಲ್ಸ್ ಭದ್ರಾ ಡ್ಯಾಂ, ವೈಲ್ಡ್ ಲೈಫ್ ಸಫಾರಿ ಎಲ್ಲದನ್ನು ತೋರಿಸುವೆ. ಮುಳ್ಳಯ್ಯನ ಗಿರಿ ಸೀತಾಳಯ್ಯನ ಗಿರಿ ಬಾಬಾ ಬುಡನ್ ಗಿರಿ ಎಲ್ಲವೂ ಹತ್ತಿರ. ಕುಟುಂಬ ಸಮೇತರಾಗಿ ಬನ್ನಿ ಕರೋನ ಮುಗಿದ ಮೇಲೆ ಎಲ್ಲಾ ಸೌಕರ್ಯಗಳನ್ನು ಏರ್ಪಡಿಸುವೆ ಸರ್
**ಗುರು** : ಧನ್ಯವಾದಗಳು. ಪರಿಸ್ಥಿತಿ ತಿಳಿಯಾಗಲಿ.
**ಮೋಹನ್**: ಆಗಲಿ ಶರಣರೇ... ಈಗ ಆರೋಗ್ಯ ಕಾಪಾಡಿಕೊಳ್ಳುವ ಸಮಯ.... ನಂತರ ಬನ್ನಿ.. ಸಂಕೋಚ ಬೇಡ.------
ಅಪರಿಚಿತನಾದ ನನ್ನ ಜೊತೆಯ ಅವರ ಸಂಭಾಷಣೆ ಅವರ ಸೌಜನ್ಯ, ವಿನಯ ಮತ್ತು ಅವರಿಗಿರುವ ಕಾಳಜಿಯ ದ್ಯೋತಕವಾಗಿತ್ತು. ಧನ್ಯವಾದಗಳು ಭೀಮನಗೌಡರೇ ನಿಮ್ಮಿಂದ ಮೋಹನ ಅವರಂತಂತಹ ನಿಜ ಶರಣರ ಪರಿಚಯವಾಯಿತು ಮತ್ತು ಮನದ ಸಂದೇಹ ಪರಿಹಾರವಾಯಿತು.
ಚಿತ್ರಗಳಲ್ಲಿ ಈ ವಿವರ ಕೊಟ್ಟಿರುವೆ.




ಅಕ್ಕನಾಗಮ್ಮನವರ ಐಕ್ಯಸ್ಥಳವನ್ನು ಗುರುತಿಸಲಾಗಿದೆ.

1. ಅಕ್ಕನಾಗಮ್ಮನವರು ತರೀಕೇರಿಗೆ ಬಂದ ಮೇಲೆ ಎಲ್ಲಿ ವಾಸವಾಗಿದ್ದರು?
2. ಇಲ್ಲಿ ಎಷ್ಟು ವರ್ಷ ವಾಸಿಸಿದ್ದರು?
3. ಅವರು ಕೈಕೊಂಡ ಕಾಯಕವಾವುದು?
4. ಅವರ ಕಾರ್ಯಕ್ಷೇತ್ರವಾವುದು?

ಮುಂತಾದ ಅನೇಕ ಪ್ರಶ್ನೆಗಳು ಮನದಲ್ಲಿ ಹುಟ್ಟಿಕೊಳ್ಳುತ್ತವೆ. ಅವುಗಳಿಗೆ ಸಮರ್ಪಕವಾದ ಉತ್ತರ ಸಿಕ್ಕುವದಿಲ್ಲ. ಆದರೆ ಈಗಿರುವ ಶರಣ ಸಂಸ್ಕೃತಿ ಆವರಿಸಿರುವ ಪ್ರದೇಶಗಳ ಆಧಾರದಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಇಲ್ಲಿದೆ. ಅನಿವಾರ್ಯವಾಗಿ ಸಧ್ಯ ಲಭ್ಯವಿರುವ ಆಧಾರಗಳ ಜೊತೆಗೆ

ಊಹೆಗಳನ್ನು ಜೋಡಿಸಿ ಇಲ್ಲಿ ವಾಸ್ತವಿಕಕ್ಕೆ ಸನಿಹವಾದ ಉತ್ತರ ಕೊಡುವ ಪ್ರಯತ್ನ ಮಾಡುತ್ತಿರುವೆ. ನಿಮಗೆ ಸರಿಯಾದ ಮಾಹಿತಿಗಳಿದ್ದರೆ ತಿಳಿಸಿ ಅವನ್ನಳವಡಿಸಿಕೊಂಡು ಇನ್ನಷ್ಟು ವಾಸ್ತವಿಕ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿರುವೆ.

ಅಕ್ಕನಾಗಮ್ಮನವರು ತರೀಕೇರಿಗೆ ಬಂದ ಮೇಲೆ ಎಲ್ಲಿ ವಾಸವಾಗಿದ್ದರು?

ಮೊದಲು ಅಕ್ಕನಾಗಮ್ಮನವರು ವಾಸಮಾಡಲು ಆರಿಸಿಕೊಂಡಿದ್ದ ಸ್ಥಳಗಳನ್ನು ಗಮನಿಸೋಣ.

1. ಬಸವಕಲ್ಯಾಣದಲ್ಲಿ ಅಕ್ಕನಾಗಮ್ಮನವರಿದ್ದ ಸ್ಥಳವನ್ನು "ಅಕ್ಕನಾಗಮ್ಮ ಗವಿ" ಎಂದೇ ಗುರುತಿಸಲಾಗುತ್ತದೆ.
   ಈಗಲೂ ಅದು ಸುಸ್ತಿತಿಯಲ್ಲಿದ್ದು ಅದು ಪ್ರವಾಸಿಗಳ ಆಕರ್ಷಣೆಯ ಪ್ರೇಕ್ಷಣೀಯ ಸ್ಥಳವಾಗಿದೆ.
   ಇದು ಗುಡ್ಡದಲ್ಲಿ ಮಾನವನಿರ್ಮಿತ ಕಲ್ಲಿನಲ್ಲಿ ಕೊರೆದ ಗವಿಗಳನ್ನು ಹೊಂದಿದ್ದು. ಅಧ್ಯಯನ ಮಾಡಲು ಮತ್ತು ಯೋಗ ಮಾಡಲು ಚಿಕ್ಕ ಚಿಕ್ಕ ಜಾಗಗಳು ಮತ್ತು ಒಳಗೆ ಹೋಗಲು ಇಕ್ಕಟ್ಟಾದ ಜಾಗ ಹೊಂದಿದೆ.
2. ಬಸವಕಲ್ಯಾಣದಿಂದ ಉಳವಿಯವರೆಗೆ ಅನೇಕ ಗವಿಗಳಲ್ಲಿ ಅವರು ವಾಸವಾಗಿದ್ದರು ಅದರಲ್ಲಿ ಖರೋಸ ಗವಿಯೂ ಒಂದು.
3. ಉಳವಿಯಲ್ಲಿ ಅವರು ವಾಸವಾಗಿದ್ದ ಗವಿಗೆ "ಅಕ್ಕನ ಗವಿ" ಎಂದು ಕರೆಯಲಾಗುತ್ತದೆ. ಇವು ಸ್ವಾಭಾವಿಕವಾಗಿ ನಿರ್ಮಾಣವಾದ ಸುಂದರ ಪರಿಸರದಲ್ಲಿ ನೀರಿನ ಜರಿಗಳ ಮಧ್ಯದಲ್ಲಿದ್ದ ಗವಿ. ಅಲ್ಲಿಗೆ ಮುಟ್ಟಲು ಇಕ್ಕಟ್ಟಾದ ದಾರಿ ಇದೆ.






ಹಾಗದರೆ ತರಿಕೇರಿಯ ವಾಸಿಸಲು ಇದೇ ತರಹದ ಸ್ಥಳವನ್ನವರು ಆರಿಸಿರಬಹುದು. ತರೀಕೇರಿಯ ಸುತ್ತಮುತ್ತಲೂ ಉಳವಿಯ ಪರಿಸರದಂತೆಯೇ ಇರುವ ಸ್ಥಳ "ಕಲ್ಲತ್ತಗಿರಿ". ಆ ಸ್ಥಳದ ವಿವರ ಇಲ್ಲಿದೆ. ಇಲ್ಲಿಯೇ ಅಕ್ಕನಾಗಮ್ಮನವರು ವಾಶಿಸಿದ್ದರು ಎಂದು ನನ್ನ ಅಭಿಪ್ರಾಯ.

**ಕಲ್ಲತ್ತಗಿರಿ:**

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಒಂದು ಪರ್ವತ. ತರೀಕೆರೆಯಿಂದ ದಕ್ಷಿಣಕ್ಕೆ ೨೦ಕಿಮೀ ದೂರದಲ್ಲಿದೆ. ಗಿರಿಪರ್ವತ ಶ್ರೇಣಿಗೆ ಸೇರಿದ ಈ ಪರ್ವತ ಸಮುದ್ರ ಮಟ್ಟದಿಂದ 1876 ಮೀ ಎತ್ತರವಾಗಿದೆ. ಮನಮೋಹಕ ಪ್ರಕೃತಿ ಸೌಂದರ್ಯದಿಂದಲೂ ಆಹ್ಲಾದಮಯ ಹವಾಗುಣದಿಂದಲೂ ಕೂಡಿರುವ ಗಿರಿಯ ನೆತ್ತಿಯ ಮೇಲೆ ಈಗ ಕಟ್ಟಿದ ಚೌಡೇಶ್ವರಿ ಎಂದು ಕರೆಯಲಾಗುವ ದೇವಾಲಯವೊಂದಿದೆ.
ಕಲ್ಲತ್ತಗಿರಿಯ ಸಮೀಪದಲ್ಲಿಯೇ ಕಲ್ಲತ್ತಿಪುರ ಎಂಬ ಊರಿದೆ.
ಇದು ಕೆಮ್ಮಣ್ಣುಗುಂಡಿಯಿಂದ ೧೦ ಕಿಮೀ ದೂರದಲ್ಲಿದ್ದು ನಿಸರ್ಗ ರಮಣೀಯತೆಯಿಂದ ಕೂಡಿದೆ.
ಈ ಪ್ರದೇಶದಲ್ಲಿರುವ "ಕಲ್ಲತ್ತ" ಜಲಪಾತ ಸುಂದರ ಜಲಪಾತಗಳಲ್ಲಿ ಒಂದು. ಇದು ಸು.130 ಮೀಟರ್ (ಸು.400 ಅಡಿ) ಆಳಕ್ಕೆ ಧುಮುಕುತ್ತಿದ್ದು ತನ್ನ ಪ್ರಕೃತಿ ಸಹಜ ದೃಶ್ಯದಿಂದ ನೋಡುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.
ಪೂರ್ವದಲ್ಲಿ ಕಲ್ಲತ್ತಗಿರಿ ಪ್ರದೇಶ ಅಗಸ್ತ್ಯ ಋಷಿಯ ಆಶ್ರಮಗಳಲ್ಲಿ ಒಂದಾಗಿತ್ತೆಂದು ಪ್ರತೀತಿ.
ಇಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿ ಎಂದರೆ.ಎರಡು ಬಂಡೆಗಳ ನಡುವೆ ವೀರಭದ್ರನ ದೇವಾಲಯವಿದೆ.
ಅಕ್ಕನಾಗಮ್ಮನವರು ವಾಸಮಾಡಿದ ಸ್ಥಳಗಳಲ್ಲಿ ವೀರಭದ್ರೇಶ್ವರ ಮಂದಿರಗಳು ಇದ್ದದ್ದನ್ನು ಗಮನಿಸಿದ್ದೇವೆ.

ಇದನ್ನು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿದುಬರುತ್ತದೆ. ಅದಕ್ಕೂ ಮೊದಲು ಇವು ಸ್ವಾಭಾವಿಕ ಗವಿಗಳಿದ್ದವು ಎನ್ನುವದು ನಿರ್ವಿವಾದ.
ಹೊರಗಿನಿಂದ ಇದೊಂದು ಗುಹಾದೇವಾಲಯದಂತಿದ್ದು ಇದರ ಮುಂಭಾಗದಲ್ಲಿ ಕಲ್ಲಿನಲ್ಲಿ ಕೆತ್ತಿದ ಮೂರು ಆನೆಗಳ ಚಿತ್ರಗಳಿವೆ. ಇವುಗಳ ನೆತ್ತಿಯ ಮೇಲಿನಿಂದ ಜಲಪಾತದ ನೀರು ಕೆಳಕ್ಕೆ ಧುಮ್ಮಿಕ್ಕುತ್ತದೆ. ಭಕ್ತಾದಿಗಳು ಈ ನೀರಿನಲ್ಲಿ ಮಿಂದು ದೇವರ ದರ್ಶನ ಮಾಡುತ್ತಾರೆ. ಇಲ್ಲಿ ಪ್ರತಿ ವರ್ಷ ಏಪ್ರಿಲ್ - ಮೇ ತಿಂಗಳಿನಲ್ಲಿ ಮೂರು ದಿನಗಳ ಕಾಲ ವೀರಭದ್ರನ ಜಾತ್ರೆ ನಡೆಯುತ್ತದೆ.
ಇಲ್ಲಿಂದ ಸುಮಾರು ಒಂದು ಕಿಮೀ ದೂರದಲ್ಲಿ ಜಕ್ಕೆರುಪುದಿ ಎಂಬ ಸ್ಥಳವಿದೆ. ಅಲ್ಲಿ ಗಂಗಾತೀರ್ಥ ಎಂಬ ಹೆಸರಿನ ಒಂದು ಕೊಳವಿದೆ. ಅದರ ಸುತ್ತಲೂ ಜೇನುಗೂಡುಗಳಿರುವುದೊಂದು ವಿಶೇಷ.
ಈ ಸ್ಥಳದಲ್ಲಿ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕುಕಾರ್ಖಾನೆಗೆ ಸೇರಿದ ಒಂದು ಪ್ರವಾಸಿ ಮಂದಿರವಿದೆ.
ಇದನ್ನು ನೋಡಿದಾಗ ಉಳವಿಯನ್ನು ನೋಡಿದ ಹಾಗಾಗುತ್ತದೆ.
ಇಲ್ಲಿ ಅಕ್ಕನಾಗಮ್ಮನವರು ಅನೇಕ ಶರಣರೊಂದಿಗೆ ನೆಲೆಸಿದ್ದರು ಎನ್ನುವದನ್ನು ಊಹಿಸಬಹುದು.

**"ಆದಂತೆ ಆಗಲಿ, ಮಾದಂತೆ ಮಾಣಲಿ ಎನಲಾಗದು,**

**ನೇಮದಾತಂಗೆ ಛಲ ಬೇಕು, ಛಲ ಬೇಕು. ಹಿಡಿದುದ ಬಿಡಲಾಗದಯ್ಯಾ.**

**ಹುಲಿಗೆರೆಯ ವರದ ಸೋಮನಾಥನು**

**ಮನಮುಟ್ಟಿದ ಧೀರಂಗಲ್ಲದೆ ಸೋಲುವನಲ್ಲ"/294** – ಆಗ್ಘವಣಿ ಹೊನ್ನಯ್ಯ




ಅಕ್ಕನಾಗಮ್ಮನವರು ನುಲಿಯ ಚಂದಯ್ಯನವರು ಮೊದಲಾದ ಶರಣರೊಡನೆ ತರಿಕೇರಿಗೆ ಬಂದು ತಲುಪಿ ನೆಲೆಸಿದ ಕೆಲವು ದಿನಗಳಲ್ಲಿ ಕಲ್ಯಾಣದಿಂದ ಉಳವಿಗೆ ಬೇರೆ ಬೇರೆ ಗುಂಪುಗಳಲ್ಲಿ ಹೊರಟ ಶರಣರು ದಾರಿ ಬದಲಾಯಿಸಿ ತರಿಕೇರಿಗೆ ಬಂದು ತಲುಪಿದರು. ಅವರಲ್ಲಿದ್ದ ಅನೇಕ ಕಾಯಕಯೋಗಿಗಳು ಆಗಲೇ ಬೇರೆ ಬೇರೆ ಊರುಗಳಲ್ಲಿ ಆಶ್ರಯ ಪಡೆದಿದ್ದರು. ಈಗ ಉಳಿದವರಲ್ಲಿ ಹೆಚ್ಚು ಕಡಿಮೆ ಜ್ಞಾನಿಗಳು, ಯೋಗಿಗಳು ಮತ್ತು ಸಾಧಕರು ಆಗಿದ್ದರು.
ಅವರಿಗೆ ಅಕ್ಕನಾಗಮ್ಮನವರು ಇದ್ದ ಮನಮೋಹಕ ಪ್ರಕೃತಿ ಸೌಂದರ್ಯದಿಂದಲೂ ಆಹ್ಲಾದಮಯ ಹವಾಗುಣದಿಂದಲೂ ಕೂಡಿರುವ ಕಲ್ಲತ್ತಗಿರಿ ಅವರ ಸಾಧನೆಗೆ ನೆರವಾಯಿತು. ಅಲ್ಲಿಯೇ ಮತ್ತೆ ಅನುಭವಮಂಟಪದ ಮರುಸ್ಥಾಪನೆಯಾಯಿತು.
ಇಲ್ಲಿಂದ ಶರಣರು ಅಕ್ಕನಾಗಮ್ಮನವರ ನೇತೃತ್ವದಲ್ಲಿ ಬೇರೆ ಬೇರೆ ಕಡೆ ಹೊರಟು ಸುತ್ತ ಮುತ್ತಲ ಪ್ರದೇಶದಲ್ಲಿ ವಚನ ಸಾಹಿತ್ಯ ಮತ್ತು ಸಂಸ್ಕೃತಿ ನೆಲೆಸುವಂತೆ ಮಾಡಿದರು. ಆಗ ಮನದಲ್ಲಿ ಮೂಡುವ ಪ್ರಶ್ನೆಗಳು

1. ಅಕ್ಕನಾಗಮ್ಮನವರು ಸಂಚರಿಸಿದ ಗ್ರಾಮಗಳಾವವು?
2. ಆ ಪ್ರದೇಶದ ರಾಜರುಗಳ ಅನುಮತಿ ಸಹಕಾರ ಈ ಕೆಲಸಕ್ಕೆ ಸಿಕ್ಕಿತೇ?

ಮೊದಲ ಪ್ರಶ್ನೆಗೆ ಉತ್ತರ ಇಲ್ಲಿದೆ.
ಈಗಾಗಲೇ ಶರಣರ ಮತ್ತು ಅಕ್ಕನಾಗಮ್ಮನವರ ಬಗ್ಗೆ ಎಲ್ಲರಿಗೂ ಗೊತ್ತಾಗಿತ್ತು. ಅವರ ಆಗಮನವಾದಾಗ ಅಸಕ್ತಿಯುಳ್ಳ ಬಹಳ ಜನ ಸೇರುತ್ತಿದ್ದರು. ಅಕ್ಕನಾಗಮ್ಮನವರು ಮತ್ತು ಶರಣರು ತಮ್ಮ ಪ್ರವಚನಗಳಲ್ಲಿ ಮಡಿವಾಳ ಮಾಚಿದೇವರ ವೀರಗಾಥೆಯನ್ನು ಜನರ ಮನ ಮುಟ್ಟುವಂತೆ ವಿವರಿಸುತ್ತಿದ್ದರು.

ಆಗಲೇ ಜನರ ಮನದಲ್ಲಿ ಮಡಿವಾಳ ಮಾಚಿದೇವರು ವೀರಭದ್ರೇಶ್ವರನ ಅವತಾರ ಎನ್ನುವ ಭಾವನೆ ಮನೆಮಾಡಿಯಾಗಿತ್ತು ಹೀಗಾಗಿ ಶರಣರು ಬಂದು ಹೋದ ಸ್ಥಳದಲ್ಲಿ ವೀರಭದ್ರೇಶ್ವರನ ಮಂದಿರ ನಿರ್ಮಾಣಗಳಾಗಿವೆ ಎನ್ನುವದು ನನ್ನ ಅಭಿಮತ.

ನಾನು Google map ನಲ್ಲಿ ತರಿಕೇರಿಯಿಂದ ಆರಂಭಿಸಿ ದಕ್ಷಿಣಕ್ಕೆ ಇರುವ ವೀರಭದ್ರೇಶ್ವರ ಮಂದಿರಗಳನ್ನು ಗುರುತು ಮಾಡಿದೆ. ಚಿತ್ರ ನೋಡಿದರೆ ನಿಮಗೆ ಎರಡು ಮಹತ್ವದ ಸಂಗತಿಗಳು ಗೋಚರಿಸುತ್ತವೆ.

1. ತರಿಕೇರಿಯಿಂದ ಚಾಮರಾಜನಗರದ ವರೆಗೆ ಒಂದು ಪಥದಲ್ಲಿ ಈ ಮಂದಿರಗಳು ಇರುವದು ಗೋಚರಿಸುತ್ತವೆ.
2. ಚಾಮರಾಜನಗರ ಕದಂಬರ ಆಡಳಿತಕ್ಕೊಳಪಟ್ಟ ಹೆಗ್ಗಡದೇವನಕೋಟೆಗೆ ಸಮೀಪದಲ್ಲಿದೆ ಎನ್ನುವದನ್ನು ಗಮನಿಸಿ.
3. ಚಾಮರಾಜನಗರದಿಂದ ಮರಳಿ ತುಮಕುರು ಮಾರ್ಗವಾಗಿ ತರಿಕೇರಿಯ ವರೆಗಿನ ಪಥದಲ್ಲಿ ಮಂದಿರಗಳಿರುವದು ಗೋಚರಿಸುತ್ತದೆ.

**ಮೊದಲ ಭಾಗ:**

ತರಿಕೇರಿಯಿಂದ ಚಾಮರಾಜನಗರದವರೆಗೆ ಇರುವ ವೀರಭದ್ರೇಶ್ವರ ಮಂದಿರಗಳಿರುವ ಊರುಗಳು:

ಕೆಳಗಿನ ಊರುಗಳಲ್ಲಿ ವೀರಭದ್ರೇಶ್ವರ ಮಂದಿರಗಳಿರುವವು. ಇವುಗಳಲ್ಲಿ ಕೆಲವು 12 ನೇ ಶತಮಾನಕ್ಕಿಂತ ಪುರಾತನವಾದ ಮಂದಿರಗಳು ಅದರೆ ಬಹಳಷ್ಟು ಮಂದಿರಗಳು ಶರಣರ ನೆನಹಿಗಾಗಿ ಆಮೇಲೆ ನಿರ್ಮಾಣವಾಗಿವೆ.

ಕೆಳಗಿನ ಚಿತ್ರಗಳು ಈ ವಿಷಯವನ್ನು ದೃಢಿಕರಿಸುವವು.


ತರಿಕೇರಿಯಿಂದ ಚಾಮರಾಜನಗರದವರೆಗೆ ಇರುವ ಕೆಲವು ವೀರಭದ್ರೇಶ್ವರ ಮಂದಿರಗಳು
Chitradurga
R.Nulenur
Veera Bhadreshwara temple - Hosadurga
Shri Veerabhadra Swamy Temple
Sri Veerabhadreshwara Temple -Doddagula
Sri Veerabhadra Swammy Temple -Budhihal
Veerabhadreshwara Temple - rKadur
Jakkirepudi Veerabhadra Swamy Temple - kallathigiri
Veerabhadra Swamy Temple -Devalapura
Veerabhadra Swamy Temple Kestu
Veerabhadreshwara temple -Nagenahalli
veerabhadreshwara temple - Tumakuru
Shree Veerabhadreshwara Temple - Devanurkaval
Udupi
Sri Veerabhadreshwara Annindadike
Uddaana Veerabadra Swamy Temple
Veerabhadra Swamy Temple,kalmatta,guluru
Veerabhadreshwara Temple - Yamasandhi
Veerabhadreshwara Temple - rBel
Veerabhadra swamy Temple Mathighatta
Sree Veerabhadra Swamy Temple -Chandrashekarpura
Sree Veerabhadreshwara Swami Temple VEERANNANAGUDI
Sri Veerabhadreshwara temple - Doddakanagal
Shree Veerabhadreshwara Swamy Temple - Doddapura
Sri Veerabhadreshwara Temple -pYaliyur
Veerabhadra Swamy Temple - Machohalli
Mangaluru
Sri Veerabhadreshwara Swamy Temple -Appanahalli
Shree Veerabhadreshwara Temple Mallenahalli
Veerabhadreshwara Temple -Malagur
Sri Veerabhadraswamy Temple - Devara Hosa Halli
Purada veerabhadreshwara swamy - Hosahalli
Sri Veerabhadreshwara Swamy Temple, Byrapura - Byrapura
Sri Veerabhadreshwara temple - Santhemogenahalli
Veerabhadra Swamya Temple -Banaghatta
Veerabhadreshwara Temple, Honnalagere
Sri veerabhadreshwara swamy temple ) - Srirangapatna
Kanhangad
Sri Veerabhadreshwara Swamy Temple - Hindu templeD Bhanumaiah Road, D BhanMysuru
Sri Veerabhadra Temple -Mysuru
Shri Veerabhadreshwara Temple - Chamarajanagar
Heggadadevankote
Google Earth
Virabhadreshwara Temple - Hindu templeAmachavadi Chamarajanagar
Kannur


ತರಿಕೇರಿಯಿಂದ ಚಾಮರಾಜನಗರದವರೆಗೆ ವೀರಭದ್ರೇಶ್ವರ ಮಂದಿರಗಳು ನಿರ್ಧರಿಸಿದ ಶರಣರು ಸಾಗಿದ ದಾರಿ
ಮಂದಿರಗಳಿರುವ ಗ್ರಾಮಗಳು
• ಕಲ್ಲತ್ತಗಿರಿ
• ಬಳ್ಳಿಗಾನೂರ
• ಕಡೂರು
• ಚಟ್ಟನಹಳ್ಳಿ
• ದೇವನೂರಕವಾ
• ನಾಗೇನಹಳ್ಳಿ
• ಪಿಲ್ಲೇನಹಳ್ಳಿ
• ಗುಡ್ಡೇನಹಳ್ಳಿ
• ಚಿಕ್ಕಮಗಳೂರು
• ಅಂಬೆ
• ಶೆಟ್ಟಿಹಳ್ಳಿ
• ಯಮನಸಂಧಿ
• ಬೇಲೂರು
• ಪುಷ್ಪಗಿರಿ
• ಜನಗರ
• ದೊಡ್ಡಣ್ಣ ಗಾಲಿ
• ಹುಣಸವಟ್ಟಿ
• ಹಾಸನ
• ದೊಡ್ಡಪುರ
• ಯಲಿಯೂರ
• ಮಲ್ಲೇನಹಳ್ಳಿ
• ಗೋವಿಂದನಹಳ್ಳಿ
• ಕಳ್ಳನಕೆರೆ
• ಬೈರಾಪುರ
• ಹೊಸಹಳ್ಳಿ
• ಬಾನಘಟ್ಟ
• ಶ್ರೀರಂಗಪಟ್ಟಣ
• ಮೈಸೂರು
• ಹೆಜ್ಜಿಗೆ
ಚಾಮರಾಜನಗರ
Shree Veerabhadreshwara Swamy Temple
Sri Veerabhadreshwara Temple -Doddagula
Sri Veerabhadra Swammy Temple -Budhihal
Veerabhadreshwara Temple - rKadur
Shree Veerabhadreshwara Devastana, Chattanahalli
Shree Veerabhadreshwara Temple - Devanurkaval
Veerabhadreshwara temple -Nagenahalli
Veerabhadreshwara Temple - Guddenahally
Sri Veerabhadreshwara Annindadike
Sri Veerabhadreshwara Temple Pushpagiri
Sree Veerabhadra Swamy Temple -Chandrashekarpura
Sree Veerabhadra Swamy temple kadasuru
shree veerabhadreshwara temple -Hirisav
Sri Veerabhadreshwara Temple -pYaliyur
Mangaluru
Sri veerabhadreshwara temple - Govindanahally
Veerabhadreshwara swamy temple -Kallanake
Purada veerabhadreshwara swamy
Shri Veerabhadra swamy temple - Odubasa
Kanhangad
Sri Veerabhadreshwara Swamy Temple - Hindu templeD
Heggadadevankote

ಮನದಾಳದ ಮಾತು: ಉತ್ತಮ ಬೆಳೆ ಬೆಳೆಯಲು ನನ್ನ ಗೆಳೆಯನೊಬ್ಬ ಕೊಟ್ಟ ಕಾರಣಗಳು

1. ಉತ್ತಮ ಭೂಮಿ
2. ಉತ್ತಮ ಬೀಜ
3. ಉತ್ತಮ ಉತ್ತುವ ಕೆಲಸ
4. ಉತ್ತಮವಾದ ವಾತಾವರಣ.

ಸಾವಿರಾರು ವರ್ಷಗಳಿಂದ ಪರಂಪರಾಗತವಾಗಿ ಉತ್ತಮ ನಡವಳಿಕೆಯನ್ನು ಮೈಗೂಡಿಸಿಕೊಂಡ ಮುಗ್ಧ ಜನರಿದ್ದ ಹಳ್ಳಿಗಳು.
ಸರಳವಾಗಿ ಕನ್ನಡದಲ್ಲಿ ಮನತಲುಪುವ ಉದಾಹರಣೆಗಳನ್ನು ಒಳಗೊಂಡು ಶರಣ ತತ್ವವನ್ನೊಳಗೊಂಡ ವಚನಗಳನ್ನು ಅಣ್ಣ ಬಸವಣ್ಣ ಮತ್ತು ಅನೇಕ ಶರಣರು ಅನುಭವಮಂಟಪದಲ್ಲಿ ವಿಮರ್ಶೆಗೊಳಪಡಿಸಿ ಜನಕ್ಕೆ ನೀಡಿದರು.
ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಮನೆ ಮನೆಗಳಿಗೆ ತೆರಳಿ ಪ್ರತಿಯೊಬ್ಬರಿಗೂ ಅರ್ಥವಾಗುವಂತೆ ಆಡಂಬರಗಳಿಲ್ಲದ ಮೂಢನಂಬಿಕೆಗಳಿಲ್ಲದ ತಮ್ಮ ಕಾಯಕದ ಜೊತೆಗೆ ಯಾರ ತಾವೇ ಆಚರಿಸಬಹುದಾದ ಸರಳ ವಿಧಿ ವಿಧಾನಗಳನ್ನು ಕಲಿಸಿಕೊಟ್ಟ ಚನ್ನಬಸವಣ್ಣ, ಅಕ್ಕನಾಗಮ್ಮ ಮತ್ತು ಅನೇಕಾನೇಕ ಶರಣರ ಪರಿಶ್ರಮ.
ಕಠಿಣ ವ್ರತ ನಿಯಮ, ಆಡಂಬರ, ಟೊಳ್ಳು ಆಚಾರ ವಿಚಾರ ಜನರಲ್ಲಿ ಬೇಧಭಾವ ಮೂಡಿಸಿ, ಸುಳ್ಳು ನಂಬಿಕೆಗಳನ್ನು ಹುಟ್ಟು ಹಾಕಿ ಧನದಾಹಿ ಸಂಪ್ರದಾಯವಾದಿಗಳ ದಬ್ಬಾಳಿಕೆಗೆ ಬೇಸತ್ತಿದ್ದ ಜನ, ಅವರಿಗೆ ಬೆಂಬಲವಾಗಿ ನಿಂತು ಶೋಷಣೆಗೆ ಸಹಕಾರ ನೀಡುತ್ತಿದ್ದ ರಾಜರುಗಳು.
ಈ ತರಹದ ವಾತಾವರಣದಲ್ಲಿ ಹೊಸತಾಗಿ ಸರಳವಾಗಿ ಕಂಡ ಶರಣ ತತ್ವಗಳು ಜನಮನದಲ್ಲಿ ನೆಲೆಕಂಡುಕೊಂಡವು.

**ಎರಡನೆಯ ಭಾಗ:**

ಚಾಮರಾಜನಗರದಿಂದ ಮರಳಿ ತರಿಕೇರಿಯವರೆಗೆ ಇರುವ ವೀರಭದ್ರೇಶ್ವರ ದೇವಾಲಯಗಳನ್ನು ಗುರುತು ಮಾಡಿದಾಗ ಮರಳುವ ಇನ್ನೊಂದು ಮಾರ್ಗ ಗೋಚರಿಸುತ್ತದೆ. ಚಿತ್ರ ಗಮನಿಸಿ
(Google map ನಲ್ಲಿರುವ ಇಂಗ್ಲೀಷ ಹೆಸರುಗಳನ್ನು ಕನ್ನಡದಲ್ಲಿ ಬರೆಯುವಾಗ ಕೆಲವು ತಪ್ಪುಗಳಿರಬಹುದು ತಿದ್ದಿಕೊಳ್ಳಲು ಸಹಕರಿಸಿ. ಇಲ್ಲಿ ಹೆಸರಿಸದ ಅನೇಕ ಊರುಗಳಿವೆ)
ಕೆಳಗಿನ ಚಿತ್ರಗಳು ಈ ವಿಷಯವನ್ನು ದೃಢಿಕರಿಸುವವು.

**ಮಂದಿರಗಳಿರುವ ಗ್ರಾಮಗಳು**

- ಚಾಮರಾಜನಗರ
- ಚನ್ನಪಟ್ಟಣಪುರ
- ವಡಗೆರೆ
- ಹೆಡ್ತಿ
- ಒಡುಬಸಪ್ಪನದೊಡ್ಡಿ
- ಹೊನ್ನಲಗೆರೆ
- ಸಂತೆಮೊಗೆನಹಳ್ಳಿ
- ದೇವರ ಹೊಸಹಳ್ಳಿ
- ಹಂಚಿಕುಪ್ಪೆ
- ಮಾಚೋಹಳ್ಳಿ ಬೆಂಗಳೂರು
- ಗೂಳೂರ
- ತುಮಕೂರು
- ದೇವಲಾಪುರ
- ಕೆಸ್ತು
- ದಾಸಲುಕುಂಟೆ
- ದೊಡ್ಡಗುಣ
- ಬೂದಿಹಾಳ
- ಹೊಸದುರ್ಗ
- ದೇವಪುರ
- ಥನಿಗೆಕಲ
- ಗೂಳಿಹಟ್ಟ
- ಗುಂಡೇರಿ
- ಹೊಳಲ್ಕೆರೆ
- ನುಲೇನೂರು
- N G ಹಳ್ಳಿ
- ಅನಿವಾಲ
- ಮುದಗುಂದಿ
- ತರಿಕೇರಿ
- ಕಲ್ಲತ್ತಗಿರಿ

**ಚಾಮರಾಜನಗರದಿಂದ ತರಿಕೇರಿವರೆಗೆ ವೀರಭದ್ರೇಶ್ವರ ಮಂದಿರಗಳು ನಿರ್ಧರಿಸಿದ ಶರಣರು ಸಾಗಿದ ದಾರಿ**




**ಶರಣರು ಸಂಚರಿಸಿದ ಮಾರ್ಗ ವಿವರಿಸುವ ವೀರಭದ್ರೇಶ್ವರ ಮಂದಿರಗಳು**









**ಅಕ್ಕನಾಗಮ್ಮ ಮತ್ತು ಸಾವಿರಾರು ಶರಣರ ಪರಿಶ್ರಮದಿಂದ ಸಿಕ್ಕ ಫಲ.**

ಅಕ್ಕನಾಗಮ್ಮ ಮತ್ತು ಸಾವಿರಾರು ಶರಣರ ಪರಿಶ್ರಮದಿಂದ ಸಿಕ್ಕ ಫಲವೇನು? ಎನ್ನುವ ಪ್ರಶ್ನೆ ಮನದಲ್ಲಿ ಮೂಡುವದು ಸಹಜ. ಅದನ್ನುತ್ತರಿಸುವ ಪ್ರಯತ್ನ ಇಲ್ಲಿದೆ.

ಅಕ್ಕನಾಗಮ್ಮ ಮತ್ತು ಸಹಸ್ರಾರು ಶರಣರು ತುಂಗಭದ್ರಾ ನದಿ ಮತ್ತು ಕಾವೇರಿ ನದಿಗಳ ನಡುವಿನ ಪ್ರದೇಶದಲ್ಲಿ ಪ್ರತಿ ಹಳ್ಳಿ ಹಳ್ಳಿಗೂ ಸಂಚರಿಸಿದರು. ಅಂದರೆ ಈಗಿನ ಶಿವಮೊಗ್ಗ, ಚಿಕ್ಕಮಂಗಳೂರು, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಹಾಸನ, ಮಂಡ್ಯ, ಬೆಂಗಳೂರು, ಮೈಸೂರು ಮತ್ತು

ಚಾಮರಾಜನಗರ ಮುಂತಾದ ಜಿಲ್ಲೆಗಳಲ್ಲಿಯ ಗ್ರಾಮಗಳು ಇವರ ಕಾರ್ಯಕ್ಷೇತ್ರಗಳಾಗಿದ್ದವು.




ಶ್ರಿಶೈಲದ ಕಡೆ ಹೋಗಿದ್ದ ಅನೇಕ ಶರಣರು ಆಂಧ್ರಪ್ರದೇಶದ ಹಲವು ಊರುಗಳನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಆ ಭಾಗದಲ್ಲಿ ನೆಲೆಸಿ ತೆಲುಗಿನಲ್ಲಿ ವಚನಗಳನ್ನು ರಚಿಸಿದರು.

ಐತಿಹಾಸಿಕ ಸಂಗತಿಗಳನ್ನು ಗಮನಿಸುವದಾದರೆ 11ನೆಯ ಶತಮಾನದ ಆದಿಭಾಗದಿಂದ 14ನೆಯ ಶತಮಾನದ ಮಧ್ಯಭಾಗದ ವರೆಗೆ, ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಸುತ್ತಲಿನ ಭಾಗಗಳನ್ನು "ಹೊಯ್ಸಳ" ರಾಜಮನೆತನದ ಆಡಳಿತದಲ್ಲಿತ್ತು.

ಅಕ್ಕನಾಗಮ್ಮ ಮತ್ತು ಮಡಿವಾಳ ಮಾಚಿದೇವರ ಕಲ್ಯಾಣ ಚಾಲುಕ್ಯರ ವಿರುದ್ಧದ ಹೋರಾಟಕ್ಕೆ ಹೊಯ್ಸಳ ಅರಸರು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಸಹಾಯ ದೊರಕಿತ್ತು.

ಶರಣರಿಗೆ ಆದ ಅನ್ಯಾಯ ಪ್ರತಿಭಟಿಸಿ ಕಲ್ಯಾಣ ತೊರೆದ ಯೋಧರು ಹೊಯ್ಸಳರ ಸೈನ್ಯಪಡೆ ಸೇರಿದರು. ಕಲ್ಯಾಣ ಚಾಲುಕ್ಯರ ಯೋಧರಲ್ಲಿ ಶರಣರಿಗಾದ ಅನ್ಯಾಯದಿಂದ ಮನನೊಂದ ಅನೇಕಾನೇಕ ದಂಡನಾಯಕರಿದ್ದರು ಶರಣರಿಗೆ ಹೊಯ್ಸಳರ ಸಹಾಯ ಮಾಡಿದ ಪರಿಣಾಮ ಮುಂದೆ ನಡೆದ ಕಾಳಗಗಳಲ್ಲಿ ಅವರೆಲ್ಲ ತಟಸ್ಥರಾಗಿ ಉಳಿದರು. ಮಹಾರಾಜ ಸೋಮೇಶ್ವರ ದಿನದಿಂದ ದಿನಕ್ಕೆ ಆಡಳಿತದ ಮೇಲಿನ ಹಿಡಿತ ಕಳೆದುಕೊಂಡು ದುರ್ಬಲನಾಗತೊಡಗಿದ.

1. ಹೊಯ್ಸಳ ರಾಜ ಎರಡನೆಯ ಬಲ್ಲಾಳ (1173-1220) ತನ್ನ ತಂದೆಯ ವಿರುದ್ಧ ದಂಗೆಯೆದ್ದು 1173ರಲ್ಲಿ ತಾನೇ ಸಿಂಹಾಸನವನ್ನೇರಿದ. ಶರಣರಿಗೆ ಆಶ್ರಯ ಒದಗಿಸಿದ ಪರಿಣಾಮವೇ ಶರಣರು ತರಿಕೇರೆ ಆಸುಪಾಸಿನಲ್ಲಿ ನೆಲೆಸಲು ಕಾರಣ ಎಂದು ಊಹಿಸಬಹುದು.
2. ಕೃ ಶ 1177: ಉಚ್ಚಂಗಿಯನ್ನು ಮುತ್ತಿ ಪಾಂಡ್ಯ ಕಾಮದೇವನನ್ನು ಸೋಲಿಸಿದ.

3. ಕೃ ಶ 1178: ಕಳಚುಚೂರಿಗಳ ಮೇಲೆ ಯುದ್ಧಮಾಡಿ ತುಂಗಭದ್ರಾನದಿಯ ಪ್ರದೇಶಗಳನ್ನು ವಶಪಡಿಸಿಕೊಂಡ. ಸಿಂಧ ರಾಜನನ್ನೂ ಸಾಂತರರನ್ನೂ ಹಾನುಗಲ್ಲಿನ ಕದಂಬರನ್ನೂ ತುಳು ರಾಜನನ್ನೂ ಸೋಲಿಸಿದ
4. ಕೃ ಶ 1189: ಕಲ್ಯಾಣಿಯ ವರೆಗೂ ದಂಡೆತ್ತಿಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಹ್ಮದಂಡೇಶನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣಭಾಗದ ಮೇಲೆ ತನ್ನ ಆಳಿಕೆಯನ್ನು ಸ್ಥಾಪಿಸಿ ಕರ್ನಾಟಕ ಚಕ್ರವರ್ತಿಯೆಂಬ ಬಿರುದು ಧರಿಸಿದ.

ಈ ಯುದ್ಧಗಳಲ್ಲಿ ಶರಣರ ಅಭಿಮಾನಿಗಳು ಮತ್ತು ಅವರಿಗಾಗಿ ಕಲ್ಯಾಣ ತೊರೆದ ಯೋಧರ ಸಹಾಯ ಸಹಕಾರ ಬಹಳ ಮುಖ್ಯ ಪಾತ್ರವಹಿಸಿತು ಪರಿಣಾಮ ಉತ್ತರ ಕರ್ನಾಟಕದ ರಾಜಕೀಯ ಶಕ್ತಿಗಳಾಗಿದ್ದ ಕಳಚೂರಿಗಳು ಮತ್ತು ಚಾಳುಕ್ಯರು ಇತಿಹಾಸದಿಂದ ಮರೆಯಾದರು.

ಆ ಕಾಲದಲ್ಲಿ ಜೈನ ಮತ್ತು ವೈಷ್ಣವ ಧರ್ಮದ ಅನುಯಾಯಿಗಳು ಅದ್ದೂರಿಯಾಗಿ ಧಾರ್ಮಿಕ ಆಚರಣೆ ಮಾಡುತ್ತ ಅಲ್ಲಲ್ಲಿ ಮಂದಿರಗಳನ್ನು ನಿರ್ಮಿಸಿ ಶ್ರೀಮಂತರ ಮನ ಸೆಳೆದು ಧರ್ಮ ಪ್ರಸಾರದಲ್ಲಿ ತೊಡಗಿದ್ದರು. ಅವರೆಲ್ಲ ಸಾಮಾನ್ಯರಿಂದ ಅಂತರ ಕಾಯ್ದುಕೊಂಡು ಮೂಢನಂಬಿಕೆ ಹುಟ್ಟಿಸಿ ಭಯದಿಂದ ಕಷ್ಟದಿಂದ ಗಳಿಸಿದ ಹಣವನ್ನು ಪೂಜೆ ಮಾಡಲು ವ್ಯಯಿಸುವಂತೆ ಮಾಡುತ್ತಿದ್ದರು. ಅವರ ಆಚರಣೆಗಳು ಶ್ರೀಮಂತರ ಪರವಾಗಿದ್ದು ಜನಮನವನ್ನು ಸೆಳೆಯುವದರಲ್ಲಿ ವಿಫಲವಾದವು. ಆದರೆ ಮಹಾರಾಜನ ಬಲ ಹೆಚ್ಚಿಸುವದರಲ್ಲಿ ನಿರತವಾಗಿದ್ದವು. ಆದರೆ ಅಕ್ಕನಾಗಮ್ಮ ಮತ್ತು ಇತರ ಶರಣರು ಪ್ರತಿ ಹಳ್ಳಿಗಳಿಗೆ ತೆರಳಿ ಅಲ್ಲಿಯ ಕಾಯಕಯೋಗಿಗಳ ಮನೆಗಳಲ್ಲಿ ವಾಸ್ತವ್ಯ ಮಾಡಿ ಅವರಿಗೆ ಉತ್ತಮ ಜೀವನಕ್ರಮ, ಅಕ್ಷರಾಭ್ಯಾಸ ಮತ್ತು ವಚನಗಳನ್ನು ಕಲಿಸಿದರು ಅಷ್ಟೇ ಅಲ್ಲ ಅವರ ಕಾಯಕದಲ್ಲಿ ಪರಿಪೂರ್ಣರಾಗುವಂತೆ ಸಹಕರಿಸಿದ್ದರು. ಸರಳವಾಗಿ ಕನ್ನಡದಲ್ಲಿ ರಚನೆಯಾದ ವಚನಗಳು ಸುಲಭವಾಗಿ ಅವರಿಗೆ ಅರ್ಥವಾಗುತ್ತಿದ್ದವು ಮತ್ತು ಜನಮನದಲ್ಲಿ ನೆಲೆಯಾದವು. ಶರಣರು ಹೇಳುವ ಪೂಜಾವಿಧಿವಿಧಾನಗಳು ಸರಳವಾಗಿದ್ದು ತಾವೇ ಮಾಡಿಕೊಳ್ಳುವ ವೆಚ್ಚವಿಲ್ಲದ ಆಚರಣೆಗಳಾಗಿದ್ದವು. ಕಾಯಕಯೋಗಿಗಳಾಗಿದ್ದ ಶರಣರು ಜನ ಕೈಕೊಂಡ ಕಾಯಕದಲ್ಲಿ ತಾವೂ ಭಾಗಿಯಾಗಿ ಸುಧಾರಿಸುವ ಕ್ರಮ ಕಲಿಸಿದರು. ಕೆಲವು ಶರಣರು ಅಲ್ಲೇ ಉಳಿದು ಕಾಯಕನಿರತರಾಗಿ ಶ್ರಮಿಸಿದರೆ ಉಳಿದವರು ಮುಂದೆ ಸಾಗುತ್ತಿದ್ದರು.




ಪರಿಣಾಮ ಅಲ್ಲಿಯ ಹಳ್ಳಿಗಳ ಜನರೆಲ್ಲ ಕಾಲಕ್ರಮೇಣ ಸುಶಿಕ್ಷಿತರಾಗಿ ಶರಣ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಅಲ್ಲಲ್ಲಿ ನೆಲೆಸಿದ ಶರಣರ ಮನೆಗಳು ಧಾರ್ಮಿಕ ಕೇಂದ್ರಗಳಾಗಿ ವಚನ ಸಾಹಿತ್ಯ ಪ್ರಸಾರ ಕೇಂದ್ರಗಳಾದವು. ಅವು ಇಂದಿಗೂ ಕಾರ್ಯನಿರ್ವಹಿಸುತ್ತಿರುವದನ್ನು ಗಮನಿಸಬಹುದು.

ಅಂದಿನಿಂದ ಇಂದಿನವರೆಗೆ ಅಲ್ಲಿ ಅನೇಕ ಶರಣರು ವಚನ ಸಾಹಿತ್ಯ ಶ್ರೀಮಂತಗೊಳಿಸಿ ಮತ್ತೆ ಅನುಭವ ಮಂಟಪದ ಕಾರ್ಯಕ್ರಮಗಳು ಗ್ರಾಮಗ್ರಾಮಗಳಲ್ಲಿ ಮುಂದುವರೆಯುವಂತೆ ಮಾಡಿದರು ಎನ್ನುವದು ಗೊತ್ತಾಗುತ್ತದೆ.

ಅಂದು ಅಕ್ಕನಾಗಮ್ಮನವರು ಪಟ್ಟ ಪರಿಶ್ರಮದ ಫಲ ಇಂದು ಗೋಚರಿಸುತ್ತಿದೆ. ಆ ವಿವರಗಳನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡುವಾ.

**ಎನೆ ಕೇಳ್ದು ನಸುನಗುತ ನುಡಿದನಾ ಸಂಗಂಗೆ ಮನಸಿಜಹರಂಗೆ ಗಿರಿಶಂಗೆ ಗಿರಿಜೇಶಂಗೆ**

**ಸಂಗಯ್ಯ ಬಾ ಎಂದು ಕರೆವೆ ನೀನೆನ್ನುವಂ ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ**

**ಶರಣರೊಕ್ಕುದಱ ಸವಿ ಕೈಲಾಸದೊಳಗುಂಟೆ**

**ಶರಣ ಸಂಗದ ಸುಖಂ ಕೈಲಾಸದೊಳಗುಂಟೆ ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆ ಲೇಸು --**

- ಹರಿಹರ

http://pvnarayana42.blogspot.com/2015/01/blog-post.html

ಅಕ್ಕನಾಗಮ್ಮ ಮತ್ತು ಅವರ ಸಂಗಡಿಗ ಶರಣರ ಪ್ರಯತ್ನದ ಫಲವಾಗಿ ಶರಣರ ಜೀವನ ಮತ್ತು ಸಾಧನೆ ಜನರ ಮನದಲ್ಲಿ ಅಚ್ಚಳಿಯದೇ ಉಳಿಯಿತು.
"ಎನಗಿಂತ ಕಿರಿಯರಿಲ್ಲ" ಎಂದು ಜನಸಾಮಾನ್ಯರೊಡನೆ ಸಾಮಾನ್ಯರಾಗಿ ಬಾಳಿ ಬದುಕಿದ ಶರಣರು ಮುಂದಿನ ಜನಾಂಗದ ಸಾಹಿತಿಗಳಿಗೆ ಶರಣರ ಜೀವನ ಸಾಧನೆಗಳನ್ನು ಹಸ್ತಾಂತರಿಸಿದರು.
ಈಗ ಅಷ್ಟೇ ಅಲ್ಲ ಆ ಕಾಲದಲ್ಲಿ ಶರಣರನ್ನು ದೇವತಾಪುರುಷರಾಗಿ ಕಾಣುತ್ತಿರುವದಕ್ಕೆ ಉತ್ತಮ ಉದಾಹರಣೆ ಹರಿಹರ ಮತ್ತು ಅವನ ಸೋದರಳಿಯ ವಿದ್ಯಾರ್ಥಿ ರಾಘವಾಂಕ ರ ನಡುವೆ ನಡೆದ ಒಂದು ಘಟನೆಯನ್ನು ಗಮನಿಸಬಹುದು.
"ರಾಘವಾಂಕ **ಹರಿಶ್ಚಂದ್ರಕಾವ್ಯ**ವನ್ನು ರಚಿಸಿ ಪಂಪಾಪುರದ ದೇವರಾಜನ ಸಭೆಯಲ್ಲಿ ಓದಿ ವಿದ್ವಾಂಸರನ್ನು ಮತ್ತು ರಾಜನನ್ನೂ ಮೆಚ್ಚಿಸಿದ್ದ. ರಾಜ ಇವನಿಗೆ 'ಕವಿಶರಭಭೇರುಂಡ' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದ. ರಾಜಸಭೆಯಲ್ಲಿ ಹೀಗೆ ಮೆಚ್ಚುಗೊಂಡ ಹರಿಶ್ಚಂದ್ರಕಾವ್ಯವನ್ನು ರಾಘವಾಂಕ ಹೊನ್ನ ಹರಿವಾಣದಲ್ಲಿರಿಸಿ ತಂದು ತನ್ನ ಗುರುವು ಮಾವನೂ ಆದ ಹರಿಹರನ ಮುಂದಿರಿಸಿ ಅವನ ಆಶೀರ್ವಾದಗಳನ್ನು ಬೇಡಿದಾಗ , ಆತ ಮೆಚ್ಚಲೊಲ್ಲದೆ , ನರಸ್ತುತಿ ಮಾಡಿದ ತಪ್ಪಿಗಾಗಿ ರಾಘವಾಂಕನ ಹಲ್ಲುಗಳನ್ನು ಮುರಿದ. ಅನಂತರ **ಶೈವಕೃತಿಪಂಚಕ**ಗಳನ್ನು (1. ಸಿದ್ಧರಾಮ ಪುರಾಣ 2. ಸೋಮನಾಥ ಚರಿತೆ, 3. ವೀರೇಶ ಚರಿತೆ, 4. ಶರಭ ಚರಿತೆ 5. ಹರಿಹರ ಮಹತ್ವ ) ರಚಿಸಿ ಮರಳಿ ತನ್ನ ಹಲ್ಲುಗಳನ್ನು ರಾಘವಾಂಕ ಪಡೆದ."
ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಹರಿಹರನ ಅಭಿಪ್ರಾಯದಲ್ಲಿ ಹರಿಶ್ಚಂದ್ರ ಮಾನವನಾದರೆ ಸಿದ್ಧರಾಮ, ಸೋಮನಾಥ..... ಮೊದಲಾದ ಶರಣರು ದೇವತಾ ಪುರುಷರು.
ಒಟ್ಟಾರೆಯಾಗಿ ಒಂದು ಶತಮಾನದ ಒಳಗಾಗಿ ಶರಣರೆಲ್ಲಾ ದೇವತಾಪುರುಷರಾಗಿದ್ದರು ಆ ಭಾವನೆ ಇಂದಿಗೂ ಮುಂದುವರೆದಿದೆ.
ಈಗಲೂ ಶರಣರೆಲ್ಲ ನಮ್ಮ ನಿಮ್ಮಂತೆ ಸಾಮಾನ್ಯ ಮಾನವರಾಗಿದ್ದರೆಂದು ಯಾರಾದರೂ ವಿವರಿಸಿದರೆ ಹಲ್ಲು ಕಳೆದುಕೊಳ್ಳುವ ಸಂಭವವಿದೆ.
ತುಂಗಭದ್ರಾ ನದಿಯಿಂದ ಕಾವೇರಿ ನದಿವರೆಗಿನ ವಿಶಾಲ ಪ್ರದೇಶದಲ್ಲಿ ಅಕ್ಕನಾಗಮ್ಮನವರು ಮತ್ತು ಸಂಗಡಿಗ ಶರಣರು ವಚನ ಸಂಸ್ಕಾರ ಪ್ರಚುರಪಡಿಸಿದ ಪರಿಣಾಮವಾಗಿ ಇಂದಿನವರೆಗೆ ಆ ಭಾಗದಲ್ಲಿ ಅನೇಕ ಶರಣರು ವಚನಕಾರರು ತಮ್ಮ ಕೃತಿಗಳಿಂದ ವಚನ ಸಾಹಿತ್ಯ ಉಳಿಸಿ ಬೆಳೆಸಿದ್ದಾರೆ. ಅವರ ಸಂಕ್ಷಿಪ್ತ ಪರಿಚಯ ಇಲ್ಲಿದೆ.

**ಹರಿಹರ:**

ಹರಿಹರನು ಕೆಲವು ಕಾಲ ದೋರಸಮುದ್ರದಲ್ಲಿ ಹೊಯ್ಸಳ ರಾಜನಾದ ನರಸಿಂಹ ಬಲ್ಲಾಳ ರಾಜನಲ್ಲಿ ಕರಣಿಕನಾಗಿದ್ದ. ಇಲ್ಲಿಯೇ ಇವನ ಮೇಲೆ ಅಕ್ಕನಾಗಮ್ಮನವರ

ಸಂಗಡಿಗರ ಪ್ರವಚನಗಳ ಪ್ರಭಾವವಾಗಿರಬೇಕು. ಬಸವಕಲ್ಯಾಣಕ್ಕೆ ಹರಿಹರ ಹೋಗಿರುವ ಬಗ್ಗೆ ಪ್ರಮಾಣಗಳಿಲ್ಲವಾದರೂ ಅವನ ಮನದಲ್ಲಿ ಶರಣರ ಮೇಲಿನ ಅಭಿಮಾನ ಮೂಡಲು ಕಾರಣ ಕಲ್ಯಾಣದಿಂದ ಬಂದ ಶರಣರ ಪ್ರಭಾವವೇ ಕಾರಣವಾಗಿರಬೇಕು.

ಹರಿಹರನ ರಗಳೆಗಳಂತೂ ಆತನ ಹೆಸರನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರಗೊಳಿಸಿರುವ ಅಮರ ಕೃತಿಗಳು. ಅವನ ರಗಳೆಗಳ ಸಂಖ್ಯೆಗಳ ಬಗ್ಗೆ ಗೊಂದಲವಿದೆಯಾದರೂ, ಅವುಗಳ ಸಂಖ್ಯೆಯು ೧೦೬ ಎಂದು ಬಹುತೇಕರ ಅಭಿಪ್ರಾಯವಾಗಿದೆ. ವಿವಿಧ ಗಾತ್ರದ, ಬೇರೆ ಬೇರೆ ಶಿವಶರಣರ ಕಥೆಗಳನ್ನು ಈ ರಗಳೆಗಳಲ್ಲಿ ಹೇಳಲಾಗಿದೆ. ಮುಖ್ಯವಾಗಿ ೬೩ ಪುರಾತನರ, ಅಂದರೆ ತಮಿಳಿನ 'ಪೆರಿಯ ಪುರಾಣ'ದಲ್ಲಿ ಹೇಳಲಾಗಿರುವ 63 ಶಿವಭಕ್ತರ ಕಥೆಗಳು ಇಲ್ಲಿವೆ.




ಹರಿಹರನ ಪ್ರಮುಖ ರಗಳೆಗಳು.

1. 'ಬಸವರಾಜದೇವರ ರಗಳೆ'
2. 'ತಿರುನೀಲಕಂಠದೇವರ ರಗಳೆ'
3. 'ನಂಬಿಯಣ್ಣನ ರಗಳೆ'
4. 'ಮಹಾದೇವಿಯಕ್ಕನ ರಗಳೆ'
5. 'ಪ್ರಭುದೇವರ ರಗಳೆ'
6. 'ಕುಂಬಾರ ಗುಂಡಯ್ಯನ ರಗಳೆ'
7. 'ಮಾದಾರ ಚೆನ್ನಯ್ಯ'ನ ರಗಳೆ

'ಇಳೆಯಾಂಡ ಗುಡಿಮಾರ'ನ ರಗಳೆ ಮತ್ತು 'ರೇವಣಸಿದ್ದೇಶ್ವರ ರಗಳೆಗಳು' ತಮ್ಮ ಕಥನಾಯಕರನ್ನು ನೂರಕ್ಕೆ ನೂರರಷ್ಟು ದೈವೀಕರಿಸಿದ ಅವನ ಉತ್ತರಾಧಿಕಾರಿಗಳಿಗೆ ಹೋಲಿಸಿದಾಗ ಅವನ ಮಹತ್ವವು ನಿಚ್ಚಳವಾಗುತ್ತದೆ. ಹರಿಹರನು ಗದ್ಯ ಮತ್ತು ಪದ್ಯಗಳೆರಡರ ಬಳಕೆಯಲ್ಲಿಯೂ ಸಮರ್ಥನಾಗಿದ್ದನು. ಬಸವಣ್ಣ ಮತ್ತು ನಂಬಿಯಣ್ಣರನ್ನು ಕುರಿತ ರಗಳೆಗಳಲ್ಲಿ ಅವನು ಬೇರೆ ಬೇರೆ ಅಧ್ಯಾಯಗಳಲ್ಲಿ ಗದ್ಯ ಪದ್ಯಗಳನ್ನು ಬಳಸುತ್ತಾನೆ.

ಇದರಿಂದಲೇ ಆಗಿನ ಕಾಲದಲ್ಲಿ ಶರಣ ಪ್ರಭಾವ ಜನಜೀವನದ ಮೇಲೆ ಎಷ್ಟಾಗಿತ್ತು ಎನ್ನುವದು ಗೊತ್ತಾಗುತ್ತದೆ.
ಇದೆಲ್ಲ ಅಕ್ಕನಾಗಮ್ಮ ಮತ್ತು ಶರಣರ ಪ್ರಚಾರದ ಪರಿಣಾಮ ಅಲ್ಲವೇ?

**ರಾಘವಾಂಕ :**

ಕನ್ನಡ ಸಾಹಿತ್ಯದಲ್ಲಿ ಷಟ್ಪದೀ ಪ್ರಕಾರವನ್ನು ಪ್ರವರ್ತನಗೊಳಿಸಿದ ಕೀರ್ತಿ ರಾಘವಾಂಕನಿಗೆ ಸಲ್ಲುತ್ತದೆ. ಕನ್ನಡದ ಅತ್ಯಂತ ಸ್ವತಂತ್ರ ಮನೋಧರ್ಮದ ಪ್ರಯೋಗಶೀಲನಾದ ಕವಿ. ಗೌರವ ತಂದ ರಾಘವಾಂಕನ ಕಾವ್ಯಗಳು ಆರು.

1. ಹರಿಶ್ಚಂದ್ರ ಕಾವ್ಯ
2. ಸಿದ್ಧರಾಮ ಪುರಾಣ
3. ಸೋಮನಾಥ ಚರಿತೆ
4. ವೀರೇಶ ಚರಿತೆ: ವೀರೇಶ ಚರಿತೆ ಹಾಗೂ ಶರಭ ಚಾರಿತ್ರ ಶಿವಪುರಾಣದ ಕಥೆಗಳು.
5. ಶರಭ ಚರಿತೆ: (ಶಿವಪುರಾಣದ ಕಥೆ.)
6. ಹರಿಹರ ಮಹತ್ವ

ಶರಭ ಚಾರಿತ್ರ ಹಾಗೂ ಹರಿಹರ ಮಹತ್ವ ಇನ್ನೂ ದೊರೆತಿಲ್ಲ.ಇದೂ ಅಲ್ಲದೆ "ದೇವಾಂಗ ದಾರಿಮಯ್ಯನ ಪುರಾಣ"ಎಂಬ ಸಾಹಿತ್ಯ ಗ್ರಂಥವೊಂದು ದೊರಕಿದೆ . ಅನಂತರ ಹಂಪೆಗೆ ಬಂದು ಹರಿಹರನ ಆಜ್ಞಾನುಸಾರವಾಗಿ ಬೇಲೂರಿಗೆ ಹೋಗಿ ಅಲ್ಲಿ ಬಯಲಾದ.

**ಚಾಮರಸ:**

ಇವರ "ಪ್ರಭುಲಿಂಗ ಲೀಲೆಯು" ಭಾಮಿನಿ ಷಟ್ಪದಿಯಲ್ಲಿರುವ ಈತನ ಪ್ರಸಿದ್ಧ ಕಾವ್ಯ. ಇಮ್ಮಡಿ ಪ್ರೌಢದೇವರಾಯರ ರಾಜಾಶ್ರಯದಲ್ಲಿದ್ದರು . ಈತನ ಸ್ಥಳ ಗದಗು ಇಲ್ಲವೆ ನಾಗಣಾಪುರ ಎಂದು ಹೇಳಲಾಗಿದೆ.
14 ನೇಯ ಶತಮಾನದ ವರೆಗೂ ಅಕ್ಕನಾಗಮ್ಮನವರ ಪರಿಶ್ರಮದ ಫಲವಾಗಿ ಶರಣ ತತ್ವಗಳು ದಕ್ಷಿಣ ಭಾರತದ ಎಲ್ಲ ಜನಮನದಲ್ಲಿ ನೆಲೆಯೂರಿದ್ದವು ಎನ್ನುವದಕ್ಕೆ ಇವೆಲ್ಲಾ ಜೀವಂತ ಸಾಕ್ಷಿ.

**ಪಾಲ್ಕುರಿಕೆ ಸೋಮನಾಥ:**




12 ಮತ್ತು 13 ನೇ ಶತಮಾನದ ಅತ್ಯಂತ ಪ್ರಸಿದ್ಧ ತೆಲುಗು ಭಾಷೆ ಬರಹಗಾರರಲ್ಲಿಒಬ್ಬರು.
ಈತ ಕನ್ನಡದಲ್ಲಿ ಸಹಸ್ರಗಣನಾಮ, ಸದ್ಗುರು ರಗಳೆ, ಶೀಲಸಂಪಾದನೆ, ಚನ್ನಬಸವ ಸ್ತೋತ್ರದ ರಗಳೆ, ಶರಣು ಬಸವ ರಗಳೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವೆಲ್ಲ ವೀರಶೈವ ಮತ ತತ್ತ್ವಪ್ರಚಾರಕ್ಕೆ ಮೀಸಲಾದಂಥವು. ಈತನ ಬಸವಪುರಾಣ ಈಗ ಲಭಿಸಿರುವ ಬಸವೇಶ್ವರ ಕಥೆಗಳಲ್ಲಿ ಎರಡನೆಯದು. ಆದರೆ ಅದು ಅಪೂರ್ಣ ಕೃತಿ.
ಈ `ಕವಿ ಬಸವೇಶ್ವರನನ್ನು ಪ್ರತ್ಯಕ್ಷವಾಗಿ ಕಂಡವನಲ್ಲ: ಅವನ ಸಮಕಾಲೀನನೂ ಆಗಿರಲಾರ.
ನಾಡಿನಲ್ಲಿ ವಿಶೇಷ ಸ್ತೋತ್ರಪಾತ್ರನಾಗಿದ್ದ ಬಸವನ ಚರಿತ್ರೆಯನ್ನು ಭಕ್ತರಿಂದ ಕೇಳಿದ ರೀತಿಯಲ್ಲಿ ಯಥಾಶಕ್ತಿ ಹೇಳಿದೆ ಎಂದಿರುವುದರಿಂದ ಬಸವಣ್ಣನ ಪ್ರತ್ಯಕ್ಷದರ್ಶಿಗಳು, ಶಿಷ್ಯರು ಹೇಳಿದ ಅನೇಕ ಕಥೆಗಳನ್ನು ಶ್ರದ್ಧಾಭಕ್ತಿಗಳಿಂದ ಕೇಳಿ ಅವನ ಹಿರಿಮೆಯನ್ನು ಮನಗಂಡು, ಮೆಚ್ಚಿ ಭಕ್ತಿಪ್ರೇರಿತನಾಗಿ ಅವನ ಚರಿತ್ರೆಯನ್ನು ಲೋಕಾಹಿತಾರ್ಥವಾಗಿ ಜನಪದ ಕಾವ್ಯದ ಧಾಟಿಯಲ್ಲಿ ಹೇಳಿ ಪ್ರಚಾರಮಾಡಿದ ಕೀರ್ತಿ ಈತನದು. ಈ ತೆಲುಗು ಪುರಾಣವನ್ನು ಮೊದಲು 1863 ರಲ್ಲಿ ದಕ್ಷಿಣ ಭಾರತದ ವಸಾಹತುಶಾಹಿ ಬ್ರಿಟಿಷ್ ಆಡಳಿತಗಾರ ಸಿ.ಪಿ. ಬ್ರೌನ್ ರಿಂದ ಆಂಗ್ಲ ಭಾಷೆಗೆ ಭಾಷಾಂತರಿಸಲಾಯಿತು.

**ಭೀಮಕವಿ:**

ಸುಮಾರು 14ನೆಯ ಶತಮಾನದ ಉತ್ತರಾರ್ಧ. ಬಸವಪುರಾಣ ಕಾವ್ಯದ ಕರ್ತೃ. ಇನ್ನೊಂದು ಕೃತಿ ಭೀಮಕವೀಶ್ವರ ರಗಳೆ. ಇವನ ಭೃಂಗಿದಂಡಕ ಈ ಕೃತಿ ಉಪಲಬ್ಧವಿಲ್ಲ. ಪೂರ್ವಕವಿಗಳಲ್ಲಿ ಹರಿಹರ ರಾಘವಾಂಕರನ್ನು ಸ್ತುತಿಸಿದ್ದಾನೆ ಬಸವಪುರಾಣ ಬಸವಣ್ಣನವರನ್ನು ಕುರಿತ ಪ್ರಪ್ರಥಮ ಪುರಾಣಕಾವ್ಯ. ಭಾಮಿನಿ ಷಟ್ಪದಿಯಲ್ಲಿ ಬರೆದ ಮೊತ್ತಮೊದಲ ಅತಿದೊಡ್ಡ ಗ್ರಂಥ. ಇದರಲ್ಲಿ 8

ಕಾಂಡಗಳೂ 63 ಸಂಧಿಗಳೂ 3,568 ಪದ್ಯಗಳೂ ಇವೆ. ಈತ ತನ್ನ ಗ್ರಂಥದಲ್ಲಿ ಕವಿಸೋಮನಾಥಂ ರಸವೊಸರೆ ಮುನ್ನುಸಿರ್ದುದನೆ ಕನ್ನಡಿಸಿ ಪೇಳ್ವೆಂ ಎಂದು ಹೇಳಿಕೊಂಡಿರುವುದರಿಂದ ಇದು ಹದಿಮೂರನೆಯ ಶತಮಾನದ ಪ್ರಸಿದ್ಧ ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು ಎಂಬ ತೆಲುಗು ಗ್ರಂಥದ ಅನುವಾದವೆಂದು ತಿಳಿಯುತ್ತದೆ.

ಭೀಮ ಕವಿ ಅವರ ಸ್ಫೂರ್ತಿಯಿಂದ ಹಲವಾರು ಕನ್ನಡ ಮತ್ತು ಸಂಸ್ಕೃತ ಲಿಂಗಾಯತ ಪುರಾಣಗಳಿವೆ.

ಅಲ್ಲಲ್ಲಿ ಚದುರಿಹೋದ ವಚನಗಳನ್ನು ಸಂಗ್ರಹಿಸಿ ಸಂಪಾದಿಸುವ ಮಹತ್ವದ ಕೆಲಸ ನಡೆಯಿತು.

**ನಾಲ್ಕು ಶೂನ್ಯ ಸಂಪಾದನೆಗಳು**.

1. ಕೃ ಶ 1420: ಶಿವಗಣಪ್ರಸಾದಿ ಮಹದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆ
2. ಕೃ ಶ 1439: ಗುಮ್ಮಳಾಪುರದ ಸಿದ್ದಲಿಂಗ ಯತಿಯ ಶೂನ್ಯ ಸಂಪಾದನೆ
3. ಕೃ ಶ 1543: ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆ.
4. ಕೃ ಶ 1599: ಹಲಗೆಯಾರ್ಯನ ಶೂನ್ಯ ಸಂಪಾದನೆ

ಆದರೆ ಇಲ್ಲಿಯೂ ಕಾಯಕಯೋಗಿಗಳನ್ನು ಒಗ್ಗೂಡಿಸುವ ಶರಣರ ಸಾಮಾನ್ಯರ ಪರ ಕಾಳಜಿಗಿಂತ ದಾರ್ಮಿಕ ವಿಚಾರಗಳಿಗೆ ಒತ್ತುಕೊಡುವ ಕಾರ್ಯ ನಡೆಯಿತು.

**ಧರೆಯ ಮೇಲೆ ಬಿದ್ದ ಬೀಜ, ಧರೆಯಲ್ಲಿಯೆ ಅಳಿದು, ಆಕಾಶದಲ್ಲಿ ಫಲವಾಯಿತ್ತು.**

**ಆ ಫಲವ ಬಯಲ ಕಣದಲ್ಲಿ ಒಕ್ಕಿ, ಮನದ ಹಗಹದಲ್ಲಿ ತುಂಬಿ,ಬಾಯ ಹಗಹದಲ್ಲಿ ತೆಗೆದು,**

**ಕಣ್ಣಿನ ಕೊಳಗದಲ್ಲಿ ಅಳೆವುತ್ತಿರಲಾಗಿ, ಖಂಡುಗವೆಂಬುದಕ್ಕೆ ಮೊದಲೆ ಕೊರಳಡಗಿತ್ತು,**

**ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥನರಿಕೆಯಾಗಿ**"/1209.

-- ಶರಣ ಹೊಡೆಹುಲ್ಲ ಬಂಕಣ್ಣ

ಅಕ್ಕನಾಗಮ್ಮನವರ ಶ್ರಮ ಸಾರ್ಥಕವಾಗಿ ಹಲವು ಶತಮಾನಗಳಲ್ಲಿ ಶರಣ ಸಂಸ್ಕಾರ ಪಡೆದು ವಚನ ರಚಿಸಿದ ಕವಿಗಳನ್ನು ಪರಿಚಯ ಮಾಡಿಕೊಳ್ಳುವ ಪ್ರಯತ್ನ ಇಲ್ಲಿದೆ. ಈ ವಚನಕಾರರ ಬಗ್ಗೆ ಬಹಳಷ್ಟು ಮಾಹಿತಿಗಳು ಲಭ್ಯವಿಲ್ಲ ಆದರೆ ಅವರ ಕೊಡುಗೆ ಅಪಾರ.

**ಕರಸ್ಥಲದ ಮಲ್ಲಿಕಾರ್ಜುನ ದೇವ/ಕರಸ್ಥಲದ ಮಲ್ಲಿಕಾರ್ಜುನೊಡೆಯ**

ಕಾಲ: ಕೃ ಶ ೧೪೮೦-೧೪೪೭. 'ಬ್ರಹ್ಮಾದ್ವೈತ ಸಿದ್ಧಾಂತ ಷಟ್ ಸ್ಥಲಾಭರಣ" ಎಂಬ ಕೃತಿಯನ್ನು ಸಂಕಲಿಸಿದ 'ಪರಮಗುರು ಶಾಂತೇಶ' ಅಂಕಿತದಲ್ಲಿ ನಾಲ್ಕು, ವಚನಗಳು ದೊರೆತಿವೆ. ಅವುಗಳಲ್ಲಿ ಇಷ್ಟಲಿಂಗದಲ್ಲಿ ನಿಷ್ಟೆಯಿಲ್ಲದವರ ಟೀಕೆ, ಸಂಸಾರದಲ್ಲಿ ಮೈಮರೆತವರ ರೀತಿ, ಅಂತರಂಗದಲ್ಲಿ ಅರಿವಿಲ್ಲದ ಬಹಿರಂಗದ ಕ್ರೀವಂತರ ವಿಮರ್ಶೆ, ಪರಶಿವಯೋಗಿಯ ಸ್ವರೂಪ ವರ್ಣನೆ ಮಾಡಲಾಗಿದೆ.

**ಕಾಡಸಿದ್ದೇಶ್ವರ:**

'ವೀರಶೈವ ಷಟ್ ಸ್ಥಲ' ಕಾಡಸಿದ್ದೇಶ್ವರನ ಕೃತಿಯ ಹೆಸರು. ಇದರಲ್ಲಿ ೫೦೦ ವಚನಗಳನ್ನು ಷಟ್ ಸ್ಥಲಾನುಗುಣವಾಗಿ ಜೋಡಿಸಲಾಗಿದೆ. ಹೆಚ್ಚಾಗಿ ಎಲ್ಲ ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ. ಈ ಕೃತಿಯಲ್ಲಿ ಎದ್ದು ಕಾಣುವ ವಿಶೇಷತೆಯೆಂದರೆ ಮಧ್ಯ ಮಧ್ಯ ಬೇರೆ ಬೇರೆ ಶರಣರ ಹೆಸರುಗಳಡಿಯಲ್ಲಿ ಅವರವರ ಕಾಯಕದ ಪರಿಭಾಷೆ ಬಳಸಿ ವಚನಗಳನ್ನು ಹೆಣೆದಿರುವುದು..




**ಜಕ್ಕಣ್ಣಯ್ಯ:**
ಕಾಲ: ಸು.೧೮೦೦ ಅಂಕಿತ: ಝೇಂಕಾರ ನಿಜಲಿಂಗ ಪ್ರಭುವೆ
೭೭೮ ವಚನಗಳು ದೊರೆತಿವೆ. ಇವುಗಳನ್ನು ೧೮ ಸ್ಥಲಗಳ ಅಡಿಯಲ್ಲಿ ಸಂಕಲಿಸಲಾಗಿದ್ದು, ಈ ಕೃತಿಗೆ 'ನಿರಾಳ ಮಂತ್ರಗೋಪ್ಯ' ಎಂದು ಕರೆಯಲಾಗಿದೆ. ಯೋಗ ರಹಸ್ಯವನ್ನು ಬೆಡಗಿನ ನುಡಿಗಳಲ್ಲಿ ಹೇಳುವುದು ಈ ವಚನಗಳ ಉದ್ದೇಶವಾಗಿದೆ.

**ದೇಶಿಕೇಂದ್ರ ಸಂಗನಬಸವಯ್ಯ:**
ಕಾಲ: 17 ನೇಯ ಶತಮಾನ. ಸದ್ಯ ೧೨೪೨ ವಚನಗಳು ದೊರೆತಿವೆ. 'ಷಟ್ ಸ್ಥಲ ವಚನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವುಗಳನ್ನು ಸಂಕಲಿಸಲಾಗಿದೆ. ಒಟ್ಟು ೫೩ ಸ್ಥಲಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಕೆಲವು ಇದುವರೆಗೆ ಹೆಸರಿಸದೇ ಇರುವ ನೂತನ ಸ್ಥಲಗಳಾಗಿರುವುದು ವಿಶೇಷವೆನಿಸಿದೆ.

**ನಿರಾಲಂಬ ಪ್ರಭುದೇವ:**
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ' ಎಂಬ ಅಂಕಿತದಲ್ಲಿ ೧೪ ವಚನಗಳನ್ನು ಬಿಟ್ಟರೆ ಈತನ ಬಗೆಗೆ ಮತ್ತಾವ ಸಂಗತಿಗಳೂ ದೊರೆಯುವುದಿಲ್ಲ. 'ಶಿವಭಕ್ತಿ ಪಂಚಾಂಗ ವಚನ' ಎಂದು ಕರೆಯಲಾದ ಈ ವಚನಗಳಲ್ಲಿ ಶಿವಾಚಾರ ಪಥವನರಿಯದೆ ಪಂಚಾಂಗ ಕೇಳುವವರನ್ನು ಇತರ ಕಂದಾಚಾರಗಳನ್ನು ಕಟುವಾಗಿ ಟೀಕಿಸಲಾಗಿದೆ.

**ಪರಂಜ್ಯೋತಿ:**

ಕಾಲ: ೧೭ನೇಯ ಶತಮಾನ.
'ಪರಂಜ್ಯೋತಿಯರ ವಚನಗಳು' ಎಂಬ ತಲೆ ಬರಹದಡಿಯಲ್ಲಿ ವಚನಗಳು ದೊರಕುವುದರಿಂದ 'ಪರಂಜ್ಯೋತಿ' ಎಂಬುದು ಈತನ ಹೆಸರಾಗಿರಬೇಕೆಂದು ಊಹಿಸಲಾಗಿದೆ. ೧೩ ವಚನಗಳು ದೊರೆತಿವೆ.

**ಹೇಮಗಲ್ಲ ಹಂಪ:**

ಕಾಲ: ೧೭ನೇಯ ಶತಮಾನ. ಬಹುಶ: ಹಂಪೆಯ ಪರಿಸರಕ್ಕೆ ಸೇರಿದವನಾದ ಈತನ ಸ್ಥಳ ಹೇಮಗಲ್ಲು. ಕಾಲ 17ನೇ ಶತಮಾನ. ಲಿಂಗಾಯತ ಸಂಪ್ರದಾಯದಲ್ಲಿ ಮುಖ್ಯವಾದ 'ಪಡುವಿಡಿ' ಬಗೆಗೆ ಸೇರಿದವನು. ರಾಜೇಶ್ವರ ಈತನ ಗುರು. ಅಂಕಿತ- ಸಿದ್ದಮಲ್ಲಿನಾಥ.

**ತೋಂಟದ ಸಿದ್ದಲಿಂಗ ಶಿವಯೋಗಿಗಳು ಮತ್ತು ಅವರ ಶಿಷ್ಯರು:**

ಅಕ್ಕನಾಗಮ್ಮ ಚಾಮರಾಜನಗರದ ವರೆಗೆ ಸಂಚರಿಸಿ ಶರಣ ಸಂಸ್ಕೃತಿ ಅಲ್ಲಿ ನೆಲೆಸಲು ಕಾರಣವಾಯಿತು ಎನ್ನುವದನ್ನು ಅರಿತಿದ್ದೇವೆ. ಇವರ ಕಾಯಕವನ್ನು ಅವರ ರೀತಿಯಲ್ಲಿಯೇ ಮುಂದುವರೆಸಿಕೊಂಡು ಹೋದವರು ತೋಂಟದ ಸಿದ್ದಲಿಂಗ ಸಿವಯೋಗಿಗಳು ಮತ್ತು ಅವರ ಶಿಷ್ಯಂದಿರು. ಅವರು ಅನುಭವ ಮಟಪ ಮರುನಿರ್ಮಾಣ ಮಾಡಿದರು ಎಂದರೂ ತಪ್ಪಿಲ್ಲ. ತೋಂಟದ ಸಿದ್ದಲಿಂಗ ಶಿವಯೋಗಿಗಳನ್ನು ಅಲ್ಲಮಪ್ರಭುವಿನ ಅವತಾರವೆಂದು ಎಲ್ಲರೂ ನಂಬಿದ್ದಾರೆ. ಆಗ ಜನಮನದಲ್ಲಿದ್ದ ಶರಣರ ಬಗ್ಗೆ ಯಾವ ಭಾವ ಇತ್ತು ಎನ್ನುವದನ್ನು ತೋಂಟದ ಸಿದ್ದಲಿಂಗ ಶಿವಯೋಗಿಗಳು ತಮ್ಮ ವಚನದಲ್ಲಿ ವಿವರಿಸಿದ ಪರಿ ಇಲ್ಲಿದೆ.

> **"ಬಸವಣ್ಣನ ಪ್ರಸಾದದಿಂದ ಭಕ್ತಿಜ್ಞಾನ ವೈರಾಗ್ಯಸಂಪನ್ನನಾದೆನಯ್ಯ.**
> **ಚೆನ್ನಬಸವಣ್ಣನ ಪ್ರಸಾದದಿಂದ ಷಟ್ಸ್ಥಲಜ್ಞಾನಸಂಪನ್ನನಾದೆನಯ್ಯ.**
> **ಪ್ರಭುದೇವರ ಪ್ರಸಾದದಿಂದ ಪರಶಿವತತ್ವಸ್ವರೂಪವೇ ಎನ್ನ ಸ್ವರೂಪವೆಂದರಿದು ಸಮಸ್ತ ಸಂಸಾರಪ್ರಪಂಚ ಕೊಡಹಿದೆನು ನೋಡಾ.**
> **ನೀಲಲೋಚನೆಯಮ್ಮನ ಪ್ರಸಾದದಿಂದ ನಿಜಲಿಂಗೈಕ್ಯನಾದೆನಯ್ಯ.**
> **ಮಹಾದೇವಿಯಕ್ಕಗಳ ಪ್ರಸಾದದಿಂದ ಸುತ್ತಿದ ಮಾಯಾಪಾಶವ ಹರಿದು**
> **ನಿರ್ಮಾಯನಾಗಿ ನಿರ್ವಾಣಪದದಲ್ಲಿ ನಿಂದೆನಯ್ಯ.**
> **ಸಿದ್ಧರಾಮಯ್ಯನ ಪ್ರಸಾದದಿಂದ ಶುದ್ಧ ಶಿವತತ್ವವ ಹಡೆದೆನಯ್ಯ.**
> **ಮೋಳಿಗೆಯ ಮಾರಿತಂದೆಗಳ ಪ್ರಸಾದದಿಂದ ಕಾಯದ ಕಳವಳನಳಿದು**
> **ಕರ್ಮನಿರ್ಮಲನಾಗಿ ವೀರಮಾಹೇಶ್ವರನಾದೆನು ನೋಡಾ.**
> **ಇವರು ಮುಖ್ಯವಾದ ಏಳುನೂರೆಪ್ಪತ್ತುಮರಗಣಂಗಳ ಪರಮಪ್ರಸಾದದಿಂದ**

**ಎನ್ನ ಕರಣಂಗಳೆಲ್ಲವು ಲಿಂಗಕರಣಂಗಳಾಗಿ ಕರಣೇಂದ್ರಿಯಂಗಳ ಕಳೆದುಳಿದು**

**ಇಂದ್ರಿಯಂಗಳಿಗೆ ನಿಲುಕದ ಸ್ಥಾನದಲ್ಲಿರ್ದು ಪರಮಾನಂದ ಪ್ರಭಾಮಯನಾಗಿರ್ದೆನು**

**ನೋಡಾ.**

**ನಿಮ್ಮ ಶರಣರ ಪ್ರಸಾದದಿಂದ ನಾನು ಪ್ರಸಾದಿಯಾಗಿರ್ದೆನು ನೋಡಾ, ಮಹಾಲಿಂಗಗುರು**

**ಶಿವಸಿದ್ಧೇಶ್ವರಪ್ರಭುವೇ."/472**

-- ತೋಂಟದ ಶಿದ್ದಲಿಂಗ ಶಿವಯೊಗಿಗಳು

ಇಷ್ಟೊಂದು ಪ್ರಭಾವ ಮನದ ಮೇಲೆ ಆಗಬೇಕಾದರೆ ಅವರಿಗೆ ಸಿಕ್ಕ ಶಿಕ್ಷಣ ಮತ್ತು ಪರಿಸರದಲ್ಲಿ ಶರಣರ ಪ್ರಭಾವವಿರಲೇ ಬೇಕು. ಕಲ್ಯಾಣಕ್ರಾಂತಿಯಾದ ಮೂರುನೂರು ವರ್ಷಗಳ ಅನಂತರವೂ ಚಾಮರಾಜನಗರದ ಪರಿಸರದಲ್ಲಿ ಶರಣರ ನೆನಪು ಇನ್ನೂ ಹಚ್ಚು ಹಸರಾಗಿತ್ತು. ಅದಕ್ಕೆಲ್ಲ ಕಾರಣ ಅಕ್ಕನಾಗಮ್ಮನ ಜೊತೆಗೆ ಬಂದಿದ್ದ ಶರಣರೆಲ್ಲ ತುಂಗಭದ್ರಾ ನದಿ ಮತ್ತು ಕಾವೇರಿ ನದಿಗಳ ನಡುವಿನ ಪ್ರದೇಶದಲ್ಲಿ ಅಲ್ಲಲ್ಲಿ ನೆಲೆಸಿ ಗುರುಕುಲ ಸ್ಥಾಪಿಸಿ ಶರಣ ತತ್ವ ಬೊಧನೆ ಮಾಡಿದ್ದು ಮತ್ತು ಅದನ್ನು ಶಿಕ್ಷಣಕ್ರಮದಲ್ಲಿ ಅಳವಡಿಸಿಕೊಂಡಿದ್ದು. ಆ ಜ್ಞಾನಜ್ಯೋತಿ ಇನ್ನಷ್ಟು ಪ್ರಜ್ವಲಿಸುಂತೆ ಮಾಡಿದ್ದು ತೋಂಟದ ಸಿದ್ದಲಿಂಗ ಶಿವಯೋಗಿಗಳು ಮತ್ತು ಅವರ ಶಿಷ್ಯರು.

ಆ ವಿವರ ಅರಿಯುವ ಪ್ರಯತ್ನ ಇಲ್ಲಿದೆ.

ಕಾಲ: ೧೬ನೇಯ ಶತಮಾನ ಅಂಕಿತ: 'ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೆ' ಸಂಪ್ರದಾಯದ ಶೂನ್ಯಪೀಠವನ್ನು ಆರೋಹಣ ಮಾಡಿ, ಬಸವಾದಿಗಳು ರೂಪಿಸಿದ ಷಟ್ ಸ್ಥಲ ಸಿದ್ಧಾಂತಗಳನ್ನು ವ್ಯಾಪಕವಾಗಿ ಪ್ರಸಾರಮಾಡಿ, ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಸಂಸ್ಕೃತಿಯನ್ನು ಪುನರ್ ಸ್ಥಾಪಿಸಿದ ಮಹಾಪುರುಷ.




ಸಿದ್ದಲಿಂಗರ ಜೀವನ ಸಾಧನೆ ಸಿದ್ಧಿಗಳು ವಚನ, ಕಾವ್ಯ, ಶಾಸನಗಳಲ್ಲಿ ಎರಕಗೊಂಡಿದೆ. ನಾಡಿನ ಉದ್ದಗಲಕ್ಕೂ ಎದ್ದು ನಿಂತ ಇವರ ಹೆಸರಿನ ಗದ್ದುಗೆ, ಮಠ ಮಂದಿರಗಳು ಇವರ ಪ್ರಭಾವವನ್ನು ಸಾರಿ ಹೇಳುತ್ತವೆ.
ಚಾಮರಾಜನಗರ ಜಿಲ್ಲೆಯ ಹರದನಹಳ್ಳಿ ಇವರ ಜನ್ಮ ಸ್ಥಳ. ತಂದೆ ಮಲ್ಲಿಕಾರ್ಜುನ, ತಾಯಿ ಜ್ಞಾನಾಂಬೆ. ಮನೆತನದ ವೃತ್ತಿ ವ್ಯಾಪಾರ. ಗೋಸಲ ಚೆನ್ನಬಸವೇಶ್ವರ ದೀಕ್ಷಾಗುರು, ಕಗ್ಗೆರೆಯ ತೋಟದಲ್ಲಿ ಆರು ತಿಂಗಳ ಕಾಲ ಅನುಷ್ಠಾನಗೈದ ಕಾರಣ 'ತೋಂಟದ ಸಿದ್ದಲಿಂಗ' ಎಂದು ಹೆಸರು ಬಂದಿತು. ಸಿದ್ದಗಂಗೆ ಮೊದಲಾದ ಕ್ಷೇತ್ರದರ್ಶನ ಪಡೆದು, ಕೊನೆಗೆ ನಾಗಿಣೀನದಿ ತೀರದ ಎಡೆಯೂರಿಗೆ ಬಂದು,
ಬಸವಾದಿ ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸುವ-ಸಂಕಲಿಸುವ-ಸಂಪಾದಿಸುವ ಕಾರ್ಯವನ್ನು ತಮ್ಮ ಶಿಷ್ಯರು ಕೈಕೊಳ್ಳುವಂತೆ ಮಾಡಿದ್ದು, ತಾವು ಸ್ವತ: ವಚನಗಳನ್ನು ರಚಿಸಿ ವಚನಸಾಹಿತ್ಯ ಪರಂಪರೆಯನ್ನು ಮುಂದುವರಿಸಿದ್ದು ಇವರ ಮುಖ್ಯ ಕೊಡುಗೆಗಳೆನಿಸಿವೆ.
ಸಿದ್ದಲಿಂಗರು ರಚಿಸಿದ 701 ವಚನಗಳು 'ಷಟ್ ಸ್ಥಲ ಜ್ಞಾನಸಾರಾಮೃತ' ಹೆಸರಿನ ಸ್ಥಲಕಟ್ಟಿನ ಕೃತಿಯಲ್ಲಿ ಸಂಕಲನಗೊಂಡಿವೆ.
ವಚನ ಸಾಹಿತ್ಯದಲ್ಲಿ ತೋಂಟದ ಸಿದ್ದಲಿಂಗರ ಹೆಸರು- ಹಲವಾರು ಶತಮಾನಗಳ ಅನಂತರ- ಇಂದಿಗೂ ಜನರ ನೆನಪಿನಲ್ಲಿ ಹಚ್ಚಹಸುರಾಗಿ ಉಳಿದು ಬಂದಿದೆ.
ಸಿದ್ದಲಿಂಗರು ಭಾರತ ದೇಶವನ್ನೆಲ್ಲಾ ಸಂಚರಿಸಿರುವರೆಂಬುದಕ್ಕೆ ಸಾಕ್ಷಿಯಾಗಿ ಹಲವಾರೆಡೆ ಇವರ ಹೆಸರಿನ `ಗದ್ದುಗೆ'ಗಳು ನಿರ್ಮಾಣಗೊಂಡವು.

ಇವರ ಸಂಚಾರದಲ್ಲಿ 700 ವಿರಕ್ತರು ಭಾಗವಹಿಸುತ್ತಿದ್ದರೆಂದು ಪರಂಪರೆಯ ಹೇಳಿಕೆ ಇದೆ. ಇವರ ಪ್ರಭಾವ ವ್ಯಾಪಕವಾದ್ದು ಕೆಲವು ಕೃತಿಗಳು ಸಂಪೂರ್ಣವಾಗಿ ಇವರ ಜೀವನ ಚರಿತ್ರೆ / ಪವಾಡ ಕಥನಗಳಿಗೆ ಮೀಸಲಾಗಿವೆ.
ಇವರ ಶಿಷ್ಯ ಸಮೂಹದಲ್ಲಿ ಬೋಳಬಸವರು, ಘನಲಿಂಗಿಗಳು, ಗುಮ್ಮಳಾಪುರದ ಸಿದ್ದಲಿಂಗರು, ಜಿಗುನಿ ಮರುಳಾಚಾರ್ಯರು, ಹಿರಣ್ಯದೇವ ಮೊದಲಾದವರಿದ್ದಾರೆ.
ಮೇಲಿನ ಎಲ್ಲ ವಿವರವಾದ ಸಾಹಿತ್ಯಕೃತಿಗಳು ಮತ್ತು ಪರಂಪರೆಗೆ ಅಡಿಗಲ್ಲದದ್ದು ಅಕ್ಕನಾಗಮ್ಮನವರು ಪ್ರತಿ ಹಳ್ಳಿಗಳಲ್ಲಿ ಶರಣ ಸಂಸ್ಕೃತಿ ಪ್ರಸಾರ ಮಾಡಿದ್ದೇ ಕಾರಣ ಎನ್ನುವದು ನಿಜ.

**"ಅಡವಿಯ ಹುಲ್ಲ ಮೇದ ಪಶು ಮಡುವಿನಗ್ಘವಣಿಯ ಕುಡಿದ ನಡುಬೀದಿಯಲ್ಲಿ ಬರುತ್ತಿರಲು,**

**ಕಡೆಯಲಿರ್ದ ಹುಲಿ ಬಂದು ಹಿಡಿಯಲು,**

**ನಿನ್ನೊಡವೆಯನೇನ ಬಳಸಿಕೊಂಡೆನೋ ಎಂದು ತನ್ನೊಡೆಯನ ಕರೆಯಲು**

**ಹಿಡಿದ ಹುಲಿ ಬಿಟ್ಟೋಡಿತು ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ!** /38

-- ತೋಂಟದ ಶಿದ್ದಲಿಂಗ ಶಿವಯೊಗಿಗಳು




ತೋಂಟದ ಸಿದ್ದಲಿಂಗೇಶ್ವರ ಅವರ ಶಿಷ್ಯರಾದ ಅನೇಕರು ವಚನಗಳನ್ನು ರಚಿಸುವ, ಸಂಗ್ರಹಿಸುವ ಮತ್ತು ಸಂಪಾದಿಸುವ ಕೆಲಸ ಮಾಡಿದರು. ಅದರ ಫಲವಾಗಿ ಇಂದಿನವರೆಗೆ ವಚನ ಸಾಹಿತ್ಯ ಬೆಳೆದು ಇಂದಿನ ಸ್ಥಿತಿಗೆ ತಲುಪಿದೆ. ಅವರಲ್ಲಿ ಕೆಲವರ ಪರಿಚಯ ಇಲ್ಲಿದೆ.

**ಗುರುಸಿದ್ದ ದೇವ:**

ಕಾಲ: 17 ನೇಯ ಶತಮಾನ. ಅಂಕಿತ: ಸಂಗನಬಸವೇಶ್ವರ ಕಾಯಕ: ಗುರು, ಸಿಂಹಾಸನದ ಅಧಿಪತಿ

'ಚಿದೈಶ್ವರ್ಯ ಚಿದಾಭರಣ' ಎಂಬ ವಚನ ಸಂಕಲನ ಕೃತಿಯ ಕರ್ತೃವಾದ ಈತ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ಶಾಂತಮಲ್ಲ ಸ್ವಾಮಿಯ ಶಿಷ್ಯ; ಬಸವಲಿಂಗದೇವನ ಗುರು.

'ಚಿದೈಶ್ವರ್ಯ ಚಿದಾಭರಣ' ಸಂಕಲನದಲ್ಲಿ ಇತರ ಶರಣರ ವಚನಗಳ ಜೊತೆಗೆ ಸ್ವತಃ ಗುರುಸಿದ್ಧದೇವ ತಾನೂ ಬರೆದ ೧೦೧ ವಚನಗಳನ್ನೂ ಅಳವಡಿಸಿದ್ದಾನೆ. 'ಸಂಗನಬಸವೇಶ್ವರ' ಎಂಬುದು ಇವುಗಳ ಅಂಕಿತ. ತತ್ವ ನಿರೂಪಣೆಯೇ ಮುಖ್ಯವಾಗಿರುವ ಇವುಗಳನ್ನು ಶಿಷ್ಯನಿಗೆ ಭೋಧಿಸಲಾಗಿದೆ.

**ಘನಲಿಂಗಿದೇವ:**

ಅಂಕಿತ: ಘನಲಿಂಗಿಯ ಮೋಹದ ಮಲ್ಲಿಕಾರ್ಜುನ ಕಾಯಕ: ಸುತ್ತೂರು ವೀರಸಿಂಹಾಸನದ ಅಧ್ಯಕ್ಷ

ಈತ ತೋಂಟದ ಸಿದ್ಧಲಿಂಗರ ಶಿಷ್ಯ. ಸುತ್ತೂರು ಮಠಾಧೀಶ ಕಾಲ ೧೬ ನೇಯ ಶತಮಾನ ಕಗ್ಗೆರೆಯಲ್ಲಿ ಐಕ್ಯ. 'ಘನಲಿಂಗಿಯ ಮೋಹದ ಮಲ್ಲಿಕಾರ್ಜುನ" ಅಂಕಿತದಲ್ಲಿ ೬೬ ವಚನಗಳು ದೊರೆತಿವೆ. ಇವುಗಳಲ್ಲಿ ಸತಿಪತಿ ಭಾವದ ನಿರೂಪಣೆಯಿದೆ.

**ಸ್ವತಂತ್ರ ಸಿದ್ಧಲಿಂಗೇಶ್ವರ:**

ಅಂಕಿತ: ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ಮತ್ತೊಬ್ಬ ವಚನಕಾರ. ಕಾಲ ೧೬ನೇಯ ಶತಮಾನದ ಉತ್ತರಾರ್ಧ. ಸ್ಥಳ -ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲೂಕಿನ ಕಾಪನಹಳ್ಳಿ. 'ಗಜರಾಜಗಿರಿ' ಈತನ ಶಿವಯೋಗ ಸಾಧನೆಯ ಸ್ಥಾನ. ಅಲ್ಲಿಯೇ ಐಕ್ಯ. ಸದ್ಯ ಈತನ 430 ವಚನಗಳು ದೊರೆತಿವೆ. ಜಂಗಮರಗಳೆ, ಮುಕ್ತ್ಯಾಂಗನಾ ಕಂಠಮಾಲೆ ಎಂಬ ಕೃತಿಗಳನ್ನು ರಚಿಸಿದ್ದಾನೆ.

**ಬಸವಲಿಂಗದೇವ:**

ಅಂಕಿತ: ಹರಹರ ಶಿವಶಿವ ಜಯಜಯ ಕರುಣಾಕರ ಮತ್ಪ್ರಾಣನಾಥ ಮಹಾಶ್ರೀ ಗುರು ಸಿದ್ಧಲಿಂಗೇಶ್ವರ

ಕಾಯಕ: ವಿರಕ್ತ ಪರಂಪರೆಗೆ ಸೇರಿದವನು

ಈತ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಗುರುಸಿದ್ಧದೇವರ ಶಿಷ್ಯ. ಸ್ಥಳ-ಹರದನಹಳ್ಳಿ, ಕಾಲ ೧೭೦೦. ೩೬ ವಚನಗಳು ದೊರೆತಿವೆ. ಇವು ಗುರುಸಿದ್ಧದೇವರು ಸಂಕಲಿಸಿದ 'ಚಿದೈಶ್ವರ್ಯ ಚಿದಾಭರಣ' ಕೃತಿಯ 'ಮಹಾಜ್ಞಾನಿಯ ಸರ್ವಪರಿತ್ಯಾಗ ಸ್ಥಲ' ಎಂಬ ಸ್ಥಲದ ಅಡಿಯಲ್ಲಿ ಒಂದೇ ಕಡೆಗೆ ಜೋಡಿಸಲ್ಪಟ್ಟಿವೆ. ಎಲ್ಲವೂ ಗುರುವಿನಲ್ಲಿ ಬಿನ್ನಹ ಮಾಡಿಕೊಂಡ ರೀತಿಯಲ್ಲಿವೆ. ಆತ್ಮ ನಿವೇದನೆ, ಆತ್ಮ ವಿಶ್ಲೇಷಣೆ ಬಸವಲಿಂಗದೇವನ ವಚನಗಳಲ್ಲಿನ ವಿಶೇಷ, ಪವಿತ್ರ ಕ್ಷೇತ್ರಗಳ ಪರ್ಯಟನದಿಂದ ವೃಥಾ ಆಯಾಸವಾಯಿತು ಎನ್ನುವ ಆತ "ಸದ್ಭಕ್ತ ಹರಳಯ್ಯಗಳ ಮನೆಯ ಬಾಗಿಲ ಕಾಯವಂತೆ ಮಾಡಯ್ಯ" ಎಂದಿರುವನು. "ಕಾಮವಿಕಾರದಿಂದ ಉಚ್ಚೆಯ ಬಚ್ಚಲಿಗೆ ಹೊಡೆದಾಡಿ ಸತ್ತಿತಯ್ಯ

ಎನ್ನಗುಹ್ಯೇಂದ್ರಿಯವು, ಇಂತೀ ಗುಹ್ಯಲಂಪಟಕ್ಕೆ ದೂರವಾದ ಮಹಾಘನ ಸದ್ಭಕ್ತ ಶಿವಶರಣ ಶಂಕರದಾಸಿಮಯ್ಯನ- ದಾಸಿಯ ದಾಸನ ಮಾಡಿ ಸಲಹಯ್ಯ" ಎಂದು ತನ್ನ ಇಷ್ಟ ದೈವದಲ್ಲಿ ಮೊರೆ ಇಡುವನು. ಹೀಗೆ ತನ್ನಲ್ಲಿನ ಅನಂತ ದೌರ್ಬಲ್ಯಗಳನ್ನು ಹೇಳುತ್ತ ಶಿವಶರಣರ ನಾಮ ಸ್ಮರಣೆ ಮಾಡುತ್ತಾ ಅವರ ಗುಣಗಳು ತನ್ನಲ್ಲಿ ಮೈಗೂಡುವಂತೆ ಪ್ರಾರ್ಥಿಸುವನು.

**ಮುಮ್ಮಡಿ ಕಾರ್ಯೇಂದ್ರ /ಮುಮ್ಮಡಿ ಕಾರ್ಯ ಕ್ಷಿತೀಂದ್ರ:**

ಅಂಕಿತ: ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ ಕಾಯಕ: ಅರಸ ಮಾಸ್ತಿ ವಂಶಕ್ಕೆ ಸೇರಿದ ಇಮ್ಮಡಿ ಕಾರ್ಯೇಂದ್ರ ಈತನ ತಂದೆ. ತಾಯಿ ಕುಪ್ಪಮಾಂಬೆ, ಗುರು-ದೊಡ್ಡದೇಶಿಕಾರ್ಯ. ಕಾಲ-1700. 'ಮುಮ್ಮಡಿ ಕಾರ್ಯಕ್ಷಿತೀಂದ್ರ' ಎಂದು ತನ್ನನ್ನು ಕರೆದುಕೊಂಡಿರುವುದರಿಂದ ಈತ ಅರಸನಾಗಿರಬೇಕು. ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ 'ಕಾರ್ಯ' ಗ್ರಾಮದಲ್ಲಿ ದೊರೆಯಾಗಿದ್ದಿರಬೇಕೆಂದು ಊಹಿಸಲಾಗಿದೆ.

'ವೇದ ಸಂಜೀವಿನಿ' ಎಂಬುದು ಕಾರ್ಯೇಂದ್ರ ರಚಿಸಿದ ಕೃತಿ. ಇದರಲ್ಲಿ 11 ಅಧ್ಯಾಯ, 125 ವಚನಗಳಿವೆ. 'ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ' ಎಂಬುದು ಅಂಕಿತ. ಗುರು ಕನಸಿನಲ್ಲಿ ಬಂದು 'ಜೀವರ ಪಾಪಮಂ ನೀಗುವಂತು ಪರತತ್ವ ವಚನಮಂ ರಚಿಸೆಂದು ನಿರೂಪಿಸಲು' ತಾನು ಹೇಳಿದುದಾಗಿ ತಿಳಿಸುತ್ತಾನೆ.

ಇದು ಶುದ್ಧ ತಾತ್ವಿಕ ಕೃತಿ. ಲಿಂಗಾಯತ ತತ್ವ ವೇದಕ್ಕಿಂತಲೂ ಮಿಗಿಲಾದುದು, ವೇದಕ್ಕೆ ಸಂಜೀವಿನ ರೀತಿಯಲ್ಲಿ ಎಂದು ಸಾರಿ ಹೇಳುವುದೇ ಇದರ ಮೂಲ ಉದ್ದೇಶ.

ಇವರಲ್ಲದೆ ಬೋಳಬಸವರು, ಗುಮ್ಮಳಾಪುರದ ಸಿದ್ದಲಿಂಗರು, ಜಿಗುನಿ ಮರುಳಾಚಾರ್ಯರು, ಹಿರಣ್ಯದೇವಮೊದಲಾದ ಅನೇಕ ಶಿಷ್ಯರು ವಚನ ರಚಿಸಿ ಶರಣ ಇಂದಿನವರೆಗೂ ನೆಲೆಯುರುವಂತೆ ಮಾಡಿದ್ದಾರೆ.

ವಚನ ಸಾಹಿತ್ಯ ಅಧ್ಯಯನ ಮಾಡದ ನನ್ನಂತಹ ಸಾಮಾನ್ಯರಿಗೆ vachana.sanchaya.net ಮತ್ತು lingaayatareligion.com ಇವೆರಡು ವಚನಗಳನ್ನು ಆರಿಸುವದರಲ್ಲಿ ಮತ್ತು ಶರಣರ ಬಗ್ಗೆ ಅರಿಯುವದರಲ್ಲಿ ತುಂಬಾ ಸಹಾಯಕ. ತುಂಬಾ ಪರಿಶ್ರಮವಹಿಸಿ ಈ ರೀತಿಯ ಕೆಲಸ ಮಾಡಿ ಸಹಾಯ ಮಾಡಿದವರಿಗೆಲ್ಲ ಧ್ವನ್ಯವಾದಗಳು.

ಅಂತೂ ಅಕ್ಕನಾಗಮ್ಮ ಮತ್ತು ಅನೇಕ ಶರಣರ ಕನಸು ನನಸಾಗುವ ಲಕ್ಷಣಗಳು ಕಾಣತೊಡಗಿವೆ.